ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ

# ಹೈದ್ರಾಬಾದ ಕರ್ನಾಟಕ ರಂಗಭೂಮಿ

## (ಸಂಪುಟ-೧)

# ವೃತ್ತಿ ರಂಗಭೂಮಿ ನಾಟಕಗಳು

ಸಂಪಾದಕರು
ಡಾ. ವಿಜಯಶ್ರೀ ಸಬರದ

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ – ೫೮೫ ೧೦೬

# ಹೈದ್ರಾಬಾದ ಕರ್ನಾಟಕ ರಂಗಭೂಮಿ

ಸಂಪುಟ–೧

# ವೃತ್ತಿ ರಂಗಭೂಮಿ ನಾಟಕಗಳು

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

# ಹೈದ್ರಾಬಾದ ಕರ್ನಾಟಕ ರಂಗಭೂಮಿ

## ಸಂಪುಟ–೧

# ವೃತ್ತಿ ರಂಗಭೂಮಿ ನಾಟಕಗಳು

ಪ್ರಧಾನ ಸಂಪಾದಕರು

ಡಾ. ಬಸವರಾಜ ಸಬರದ

ಸಂಪಾದಕರು

ಡಾ. ವಿಜಯಶ್ರೀ ಸಬರದ

ಕನ್ನಡ ಅಧ್ಯಯನ ಸಂಸ್ಥೆ,

ಗುಲಬರ್ಗಾ ವಿಶ್ವವಿದ್ಯಾಲಯ

ಗುಲಬರ್ಗಾ – ೫೮೫ ೧೦೬

# VRUTTI RANGABHOOMI NATAKAGALU

Editor: Dr. **VIJAYASHREE SABARAD**

Chief Editor : Dr. Basavaraj Sabarad, professor of Kannada, Gulbarga University, Gulbarga. Funded by: Government of Karnataka Published by: Institute of Kannada Studies Gulbarga University, Gulbarga

ISBN : 978-81-923128-1-1

© Institute of Kannada Studies

First Impression : 2012

Total Pages : xxx + 862

Paper Used : 80 G. S.M.Maplitho

Price : Rs. 400.00

Cover Design by :

**ಹೈದ್ರಾಬಾದ ಕರ್ನಾಟಕ ರಂಗಭೂಮಿ**

**ಸಂಪುಟ–೧ ವೃತ್ತಿ ರಂಗಭೂಮಿ ನಾಟಕಗಳು**

ಪ್ರಧಾನ ಸಂಪಾದಕರು **ಡಾ. ಬಸವರಾಜ ಸಬರದ** ಪ್ರಾಧ್ಯಾಪಕರು

ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ,

ಸಂಪಾದಕರು **ಡಾ. ವಿಜಯಶ್ರೀ ಸಬರದ**

ಕೃತಿ ಸ್ವಾಮ್ಯ ಹಕ್ಕುಗಳು : ಕನ್ನಡ ಅಧ್ಯಯನ ಸಂಸ್ಥೆ

ಪ್ರಕಾಶಕರು : ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಪ್ರಥಮ ಮುದ್ರಣ : ೨೦೧೨

ಪುಟಗಳು: xxx +862

ಬಳಸಿದ ಕಾಗದ : ೮೦ ಜಿ.ಎಸ್. ಎಮ್. ಮ್ಯಾಪಲಿಥೊ

ಬೆಲೆ : ರೂ. ೪೦೦.೦೦

ಕೃತಿ ದೊರೆಯುವ ಸ್ಥಳ : ಕನ್ನಡ ಅಧ್ಯಯನ ಸಂಸ್ಥೆ ಗು.ವಿ.ಗು

ಮುದ್ರಕರು :

**ಪ್ರಿಂಟ್ ಪಾರ್ಕ್**

ಕ್ವಾಲಿಟಿ ಆಫ್ ಸೆಟ್ ಪ್ರಿಂಟರ್ಸ್

೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ

ಶ್ರೀರಾಂಪುರಂ ಅಂಚೆ,

ಬೆಂಗಳೂರು – ೫೬೦ ೦೨೧.

# ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

## ಕನ್ನಡ ಭಾಷಾಭಿವೃದ್ಧಿ ಯೋಜನಾ ಸಮಿತಿ

| | | |
|---|---|---|
| ಪ್ರೊ. ಈ.ಟಿ. ಪುಟ್ಟಯ್ಯ | ಕುಲಪತಿಗಳು | ಅಧ್ಯಕ್ಷರು |
| ಪ್ರೊ. ಎಸ್.ಎಲ್. ಹಿರೇಮಠ | ಕುಲಸಚಿವರು | ಉಪಾಧ್ಯಕ್ಷರು |
| ಪ್ರೊ. ನಾಗಾಬಾಯಿ ಬುಳ್ಳಾ | ಮುಖ್ಯಸ್ಥರು | ಸಂಚಾಲಕರು |
| ಡಾ. ಪಿ.ಕೆ.ಖಂಡೋಬಾ | ಪ್ರಾಧ್ಯಾಪಕರು | ಸದಸ್ಯರು |
| ಡಾ. ಡಿ.ಬಿ.ನಾಯಕ | ಪ್ರಾಧ್ಯಾಪಕರು | ಸದಸ್ಯರು |
| ಡಾ. ವ್ಹಿ.ಜಿ.ಪೂಜಾರ | ಪ್ರಾಧ್ಯಾಪಕರು | ಸದಸ್ಯರು |
| ಡಾ. ಬಸವರಾಜ ಸಬರದ | ಪ್ರಾಧ್ಯಾಪಕರು | ಸದಸ್ಯರು |
| ಡಾ. ವೀರಣ್ಣ ದಂಡೆ | ಪ್ರಾಧ್ಯಾಪಕರು | ಸದಸ್ಯರು |
| ಡಾ. ಬಿ.ಎಸ್. ಪೋಲಿಸಪಾಟೀಲ | ಪ್ರಾಧ್ಯಾಪಕರು | ಸದಸ್ಯರು |
| ಡಾ. ಎಚ್.ಟಿ.ಪೋತೆ | ಪ್ರಾಧ್ಯಾಪಕರು | ಸದಸ್ಯರು |
| ಡಾ. ಎಸ್.ಎಂ. ಹಿರೇಮಠ | ಪ್ರಾಧ್ಯಾಪಕರು | ಸದಸ್ಯರು |
| ಡಾ. ಜಯಶ್ರೀ ದಂಡೆ | ಪ್ರಾಧ್ಯಾಪಕರು | ಸದಸ್ಯರು |

ಡಿ.ವಿ.ಸದಾನಂದಗೌಡ
ಮುಖ್ಯಮಂತ್ರಿ
ಸಿಎಂ/ಪಿಎಸ್/57/11

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು-560 001
ದಿ: 02.11.2011

# ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ, ತತ್ತ್ವಪದ ಸಾಹಿತ್ಯ, ದಲಿತ-ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿವೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳ ಅಡಿಯಲ್ಲಿ ಈಗ ಸಿದ್ಧಪಡಿಸಿರುವ ಈ ಸಂಪುಟವು ಹೈದ್ರಾಬಾದ ಕರ್ನಾಟಕ ರಂಗಭೂಮಿಗೆ ಸೇರಿದ್ದಾಗಿದೆ. ಈ ಸಂಪುಟವನ್ನು ಪ್ರಕಟಿಸಲು ಶ್ರಮಿಸಿದ ಪ್ರಧಾನ ಸಂಪಾದಕರನ್ನು ಹಾಗೂ ಸಂಪಾದಕರನ್ನು

ಅಭಿನಂದಿಸುತ್ತೇನೆ. ಈ ಕೃತಿಗಳು ನಾಡಿನ ಸಹೃದಯರ ಮನಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

**ಡಿ.ವಿ. ಸದಾನಂದಗೌಡ**
ಮುಖ್ಯಮಂತ್ರಿಗಳು

ಗೋವಿಂದ. ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. 330, 3ನೇ ಮಹಡಿ
ವಿಧಾನಸೌಧ
ಬೆಂಗಳೂರು- 560 001
ದಿ: 16.11.2011

# ಶುಭಹಾರೈಕೆ

ಕನ್ನಡ ನಾಡು-ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯು ಅಂತಹ ಹಲವು ಯೋಜನೆಗಳ ಅಡಿಯಲ್ಲಿ ಒಂದು. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಕೆಲವು ಸಂಶೋಧನಾ ಯೋಜನೆಗಳನ್ನು ಕೈಕೊಂಡಿದ್ದು ಅದರಲ್ಲಿ ಹೈದ್ರಾಬಾದ ಕರ್ನಾಟಕ ರಂಗಭೂಮಿಯೋಜನೆ ಕೂಡಾ ಸೇರಿದೆ. ಈ ಯೋಜನೆಯ ಪ್ರಧಾನ ಸಂಪಾದಕರನ್ನು ಸಂಪಾದಕರನ್ನು ಕನ್ನಡ ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮ.ನು. ಬಳಿಗಾರ ಅವರನ್ನೂ ಅಭಿನಂದಿಸುತ್ತೇನೆ.

**ಗೋವಿಂದ. ಎಂ. ಕಾರಜೋಳ**

**ಸಚಿವರು**

10

ಬಿ. ಬಸವರಾಜು ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

# ೨, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು– ೫೬೦ ೦೦೧
೨೨೨೦೫೭೮೧ಮ ೨೨೦೩೪೦೦
ಫ್ಯಾಕ್ಸ್: ೨೨೩೫೩೧೦೫
ಇ-ಮೇಲ್: secy-kc@karnataka. Gov.in
ದಿ: ೨೪.೧೦.೨೦೧೧

# ಶುಭಹಾರೈಕೆ

ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುವುದಕ್ಕಾಗಿ. ೨೦೦೮ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡಿದ್ದು ಅದರಡಿಯಲ್ಲಿ ಹೈದ್ರಾಬಾದ ಕರ್ನಾಟಕ ರಂಗಭೂಮಿ ಯೋಜನೆ ಕೂಡಾ ಮುಖ್ಯವಾಗಿದೆ. ಈ ಯೋಜನೆಯ ಪ್ರಧಾನ ಸಂಪಾದಕರನ್ನು, ಸಂಪಾದಕರನ್ನೂ ಅಭಿನಂದಿಸುತ್ತೇನೆ.

ಬಿ. ಬಸವರಾಜು
ಕಾರ್ಯದರ್ಶಿ

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: ೨೫.೧೦.೨೦೧೧

13

# ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. ೧೯೭೦-೭೧ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ ೧೯೮೦ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟಣೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟಣೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಮಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟಣೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ರಂಗಭೂಮಿ ಹಾಗೂ ನಾಟಕ ಸಾಹಿತ್ಯ, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟಣೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು

ಸಂಪುಟಗಳನ್ನು ಸಿದ್ಧಪಡಿಸಿದ್ದಾರೆ. ಹೈದ್ರಾಬಾದ ಕರ್ನಾಟಕ ರಂಗಭೂಮಿ ಯೋಜನೆಯ ಪ್ರಧಾನ ಸಂಪಾದಕರಾಗಿರುವ ಪ್ರೊ. ಬಸವರಾಜ ಸಬರದ ಅವರು ಈ ಪ್ರದೇಶದ ರಂಗಭೂಮಿ ಹಾಗೂ ನಾಟಕ ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಯೋಜನೆಯಲ್ಲಿ ವೃತ್ತಿರಂಗಭೂಮಿ – ಗ್ರಾಮೀಣ ರಂಗಭೂಮಿ – ಜನಪದ ರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿಗೆ ಸಂಬಂಧಿಸಿದ ಸಂಪುಟಗಳು ಪ್ರಕಟವಾಗುತ್ತಲಿವೆ. ಈ ಸಂಪುಟಗಳ ಸಂಪಾದಕರುಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ಬಿ.ಬಸವರಾಜು ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಿಗೆ ಅವರಿಗೆ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

**ಪ್ರೊ. ಈ.ಟಿ. ಪುಟ್ಟಯ್ಯ**
ಕುಲಪತಿಗಳು

# ಪ್ರಧಾನ ಸಂಪಾದಕರ ನುಡಿ

15

ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಭಾಷಾಭಿವೃದ್ಧಿ ಯೋಜನೆಯಲ್ಲಿ "ಹೈದ್ರಾಬಾದ ಕರ್ನಾಟಕ ರಂಗಭೂಮಿ" ಯೋಜನೆ ಕೂಡಾ ಮಹತ್ವದ್ದಾಗಿದೆ. ನಾನು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷನಾಗಿದ್ದಾಗ ಈ ಯೋಜನೆಗಳು ಪ್ರಾರಂಭವಾದವು. ಅವುಗಳಲ್ಲಿ ಹೈದ್ರಾಬಾದ ಕರ್ನಾಟಕ ರಂಗಭೂಮಿ ಯೋಜನೆಗೆ ನಾನು ಪ್ರಧಾನ ಸಂಶೋಧಕನಾಗಿ ಕಾರ್ಯನಿರ್ವಹಿಸಿದೆ.

ಕರ್ನಾಟಕ ರಂಗಭೂಮಿ ಕುರಿತು ಈಗಾಗಲೇ ಅನೇಕ ಸಂಶೋಧನಾ ಕೃತಿಗಳು ಪ್ರಕಟವಾಗಿವೆ. ಆದರೆ ಹೈದ್ರಾಬಾದ ಕರ್ನಾಟಕ ಪ್ರದೇಶದ ಬೀದರ, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಯಾದಗಿರಿ ಜಿಲ್ಲೆಗಳ ರಂಗಭೂಮಿ ಕುರಿತು ಹೆಚ್ಚಿನ ಸಂಶೋಧನೆಗಳು ನಡೆಯಬೇಕಾಗಿದೆ. ಇಂತಹ ಪ್ರಥಮ ಪ್ರಯತ್ನವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಈ ಯೋಜನೆಯಲ್ಲಿ ಎರಡು ಭಾಗಗಳಿವೆ. ಮೊದಲು ಈ ಪ್ರದೇಶದ ಪ್ರಾತಿನಿಧಿಕ ನಾಟಕಗಳ ಸಂಕಲನಗಳು ಪ್ರಕಟವಾಗುತ್ತಿವೆ. ಮೊದಲನೇ ಭಾಗದಲ್ಲಿ ಆರು ಸಂಪುಟಗಳು ಪ್ರಕಟಣೆಗೆ ಸಿದ್ಧವಾಗಿವೆ.

೧. ವೃತ್ತಿ ರಂಗಭೂಮಿ ನಾಟಕಗಳು

೨. ಗ್ರಾಮೀಣ ರಂಗಭೂಮಿ ನಾಟಕಗಳು

೩. ಹವ್ಯಾಸಿ ರಂಗಭೂಮಿ ನಾಟಕಗಳು

೪. ಗೀತನಾಟಕ–ಬೀದಿನಾಟಕ–ಏಕಾಂಕ ನಾಟಕಗಳು

೫. ಜನಪದ ರಂಗಭೂಮಿ – ದೊಡ್ಡಾಟಗಳು

೬. ಜನಪದ ರಂಗಭೂಮಿ – ಸಣ್ಣಾಟಗಳು

ಈ ಆರು ಸಂಪುಟಗಳನ್ನು ಬೇರೆ ಬೇರೆ ವಿದ್ವಾಂಸರು ಸಂಪಾದಿಸಿ ಕೊಟ್ಟಿದ್ದಾರೆ.

ಈ ಆರೂ ಸಂಪುಟಗಳು ಈ ಪ್ರದೇಶದ ರಂಗಭೂಮಿಯ ಪ್ರಾತಿನಿಧಿಕ ಮಹತ್ವದ ನಾಟಕಗಳಾಗಿವೆ. ವೃತ್ತಿ ರಂಗಭೂಮಿಯಲ್ಲಿಯೇ ಈ ಪ್ರದೇಶದ ನೂರಾರು ನಾಟಕಗಳಿವೆ. ಅವುಗಳಲ್ಲಿ ಪ್ರಾತಿನಿಧಿಕವಾಗಿ ಕೆಲವು ಪ್ರಮುಖ ನಾಟಕಗಳನ್ನು ಮಾತ್ರ ಈ ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಪ್ರತಿಯೊಂದು ಸಂಪುಟದ ಸಂಪಾದಕರು ಆಯಾ ಸಂಪುಟದ ಪ್ರಾಮುಖ್ಯತೆಯನ್ನು ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ. ಈ ಸಂಪುಟಗಳಲ್ಲಿ ಪ್ರಕಟವಾಗಿರುವ ನಾಟಕಗಳು, ತುಂಬ ಪ್ರಮುಖವಾಗಿದ್ದು, ಪ್ರಶಸ್ತಿ–ಪುರಸ್ಕಾರಗಳನ್ನು ಪಡೆದುಕೊಂಡಿವೆ. ಅನೇಕ ರಂಗಪ್ರಯೋಗಗಳನ್ನು ಕಂಡಿವೆ. ಇಂದು ಈ ನಾಟಕಗಳನ್ನು ಪ್ರಯೋಗಿಸಬೇಕೆಂದರೆ ಈ ನಾಟಕ ಕೃತಿಗಳು ಲಭ್ಯವಿಲ್ಲದಂತಾಗಿದೆ. ಇವು ಹತ್ತೊಂಬತ್ತು–ಇಪ್ಪತ್ತನೇ ಶತಮಾನದಲ್ಲಿ ರಚಿತವಾದ ನಾಟಕಗಳಾಗಿವೆ. ಹೀಗಾಗಿ ಈ ಸಂಪುಟಗಳ ಪ್ರಕಟಣಾ ಕಾರ್ಯ, ಪುನರಾವರ್ತನೆಯದಾಗಿರದೆ, ಇಂದಿನ ಯುವ ಪೀಳಿಗೆಗೆ ಹಾಗೂ ರಂಗಕರ್ಮಿಗಳಿಗೆ ಅತ್ಯಂತ ಪ್ರಮುಖವಾದ ಯೋಜನೆಯಾಗಿದೆ. ಈ ಸಂಪುಟಗಳಲ್ಲಿನ ಅನೇಕ ನಾಟಕಕಾರರು ಈಗ ದಿವಂಗತರಾಗಿದ್ದು, ಆ ನಾಟಕಗಳನ್ನು ಮರುಮುದ್ರಿಸುವವರಿಲ್ಲ ದಂತಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ನಾಟಕಗಳ ಸಂಪುಟಗಳಲ್ಲಿ (ಸುವರ್ಣ ಸಾಹಿತ್ಯ ಮಾಲೆ) ಹಾಗೂ ವಿಶ್ವ ಕನ್ನಡ ಸಮ್ಮೇಳನದ ಸವಿನೆನಪಿಗಾಗಿ ಪ್ರಕಟವಾಧ ಗ್ರಂಥಗಳಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಲೇಖಕರಿಗೆ ಅನ್ಯಾಯವಾಗಿದೆ. ಈ ಪ್ರದೇಶದ ಐದು ಜಿಲ್ಲೆಗಳಲ್ಲಿ ನೂರಾರು ಪ್ರಮುಖ ಲೇಖಕರಿದ್ದಾರೆ. ಅವರ ಕೃತಿಗಳು ಈ ಮಾಲೆಗಳಲ್ಲಿ ಪ್ರಕಟವಾಗಿಲ್ಲ. ಒಂದಿಬ್ಬರು ಲೇಖಕರ ಕೃತಿಗಳನ್ನು ಹೊರತು ಪಡಿಸಿದರೆ ಉಳಿದವರಿಗೆ ಅಲ್ಲಿ ಸ್ಥಾನವೇ ಇಲ್ಲ. ಈ ಕಾರಣಕ್ಕಾಗಿಯೇ ಈ ಪ್ರದೇಶದ ಹಿರಿಯ ಸಾಹಿತಿ ಶ್ರೀ ಶಾಂತರಸರು ಬೆನ್ನ ಹಿಂದಿನ ಬೆಳಕು ಕೃತಿ ಪ್ರಕಟಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಕರ್ನಾಟಕ ಸರಕಾರ ಮೊದಲಿನಿಂದಲೂ ಈ ಪ್ರದೇಶವನ್ನೂ ಹಾಗೂ ಇಲ್ಲಿಯ ಲೇಖಕರನ್ನು ಕಡೆಗಣಿಸುತ್ತ ಬಂದಿದೆ.

ಈ ಕಾರಣಕ್ಕಾಗಿಯೇ ನಾನು ಮುಖ್ಯಸ್ಥನಾಗಿದ್ದಾಗ ಉದ್ದೇಶಪೂರ್ವಕವಾಗಿ ಈ ಪ್ರದೇಶದ ಸಾಹಿತ್ಯ–ಸಂಸ್ಕೃತಿಗಳತ್ತ ಬೆಳಕು ಚೆಲ್ಲುವ ಯೋಜನೆಗಳನ್ನು ರೂಪಿಸಿದೆ. ನಮ್ಮ ಯೋಜನೆಗಳಲ್ಲಿ ಈ ಪ್ರದೇಶದ ಶರಣರ–ದಾಸರ–ತತ್ವಪದಕಾರರ ಸ್ಮಾರಕಗಳ ಸಂಶೋಧನೆಗೆ ಪ್ರಾಮುಖ್ಯತೆ ನೀಡಲಾಗಿದೆ. ಈ ಪ್ರದೇಶದ ಸಾಂಸ್ಕೃತಿಕ ಪದಕೋಶಗಳನ್ನು ಸಿದ್ಧಪಡಿಸಲಾಗಿದೆ. ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಹಸ್ತಪ್ರತಿ ಸಂಗ್ರಹಾಲಯದಿಂದ ಕೆಲವು ಮಹತ್ವದ ಕೃತಿಗಳ ಪ್ರಕಟಣಾ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ನಮ್ಮ ಚರಿತ್ರೆಯನ್ನು ಬೇರೆಯವರು ಬಂದು ಕಟ್ಟುಬೇಕು, ನಮ್ಮ ಸಾಹಿತ್ಯ ಕೃತಿಗಳನ್ನು ಬೇರೆಯವರು ಪ್ರಕಟಿಸಬೇಕೆಂದು

ಬಯಸಿ ನಿರಾಶರಾಗುವುದಕ್ಕಿಂತ ಸಿಕ್ಕ ಅವಕಾಶಗಳನ್ನುಪಯೋಗಿಸಿಕೊಂಡು ನಮ್ಮ ಸಾಹಿತ್ಯ ಚರಿತ್ರೆಗಳನ್ನು ನಾವೇ ಕಟ್ಟಿಕೊಳ್ಳುವ, ನಮ್ಮ ರಂಗಭೂಮಿಯನ್ನು ನಾವೇ ರೂಪಿಸಿಕೊಳ್ಳುವ ಸಂಶೋಧನಾ ಕಾರ್ಯಕ್ಕೆ ಕೈಹಾಕಿದ್ದೇವೆ.

ಸಾಹಿತ್ಯ ಚರಿತ್ರೆಗಳು–ಸಂಸ್ಕೃತಿ ಸಂಪುಟಗಳು ಆಯಾ ಪ್ರದೇಶಗಳ ಮೂಲಕ ಬೆಳೆದು ಬರಬೇಕೆಂಬುದು ನಮ್ಮ ಆಶಯವಾಗಿದೆ. ಕನ್ನಡಕ್ಕೆ ಒಂದೇ ಸಾಹಿತ್ಯ ಚರಿತ್ರೆ ಇರಬೇಕೆಂಬುದು ಕೇಂದ್ರಿಕೃತವಾದ ಆಲೋಚನೆಯಾಗುತ್ತದೆ. ಇದರಿಂದ ರಾಜಧಾನಿಯಿಂದ ದೂರವಿರುವ ಮಹತ್ವದ ಲೇಖಕರು ಅಂತಹ ಚರಿತ್ರೆಗಳಲ್ಲಿ ಕಾಣಿಸಿಕೊಳ್ಳುವುದೇ ಇಲ್ಲ. ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಮುಂಬೈ ಕರ್ನಾಟಕದ ಸಾಹಿತ್ಯ ಚರಿತ್ರೆ, ಕರಾವಳಿ ಕರ್ನಾಟಕದ ಸಾಹಿತ್ಯ ಚರಿತ್ರೆ, ದಕ್ಷಿಣ ಕರ್ನಾಟಕದ ಸಾಹಿತ್ಯ ಚರಿತ್ರೆ ಹೀಗೆ ಹತ್ತು ಹಲವು ಸಾಹಿತ್ಯ ಚರಿತ್ರೆಗಳು–ಸಂಸ್ಕೃತಿ ಸಂಪುಟಗಳು ಪ್ರಕಟವಾದಾಗ ಪ್ರಾದೇಶಿಕ ಸಂಸ್ಕೃತಿಯ ಹಿರಿಮೆ–ಗರಿಮೆಗಳು ಗೊತ್ತಾಗುತ್ತವೆ.

ಅಂತಹ ಪ್ರಯತ್ನದ ಫಲವಾಗಿಯೇ ಈ ಯೋಜನೆ ರೂಪಗೊಂಡಿದೆ. ಈ ಯೋಜನೆಯ ಮೊದಲ ಭಾಗವು ಪ್ರಾತಿನಿಧಿಕ ನಾಟಕ ಪ್ರಕಟಣೆಗೆ ಪ್ರಾಮುಖ್ಯತೆ ನೀಡಿದೆ. ಎರಡನೇ ಭಾಗವು ರಂಗಭೂಮಿಯ ಸಂಶೋಧನೆ–ವಿಮರ್ಶೆಗೆ ಒತ್ತು ನೀಡುತ್ತದೆ. ಈ ಭಾಗದಲ್ಲಿ ಮಹತ್ವದ ಸಂಶೋಧನಾ ಸಂಪುಟಗಳು ಪ್ರಕಟವಾಗಲಿವೆ. ಈ ಸಂಪುಟಗಳು ಹೈದ್ರಾಬಾದ ಕರ್ನಾಟಕದ ಸಮಗ್ರ ರಂಗಭೂಮಿಯ ಬೆಳವಣಿಗೆಯನ್ನು ಕುರಿತು ಚರ್ಚಿಸಲಿವೆ. ಈ ಪ್ರದೇಶದ ವಿವಿಧೆಡೆ ಕ್ಷೇತ್ರಕಾರ್ಯ ಮಾಡಿ ಕಲಾವಿದರ–ನಾಟಕಕಾರರ–ನಾಟಕ ಕಂಪನಿಗಳ ವಿವರಗಳನ್ನು ಸಂಗ್ರಹಿಸಿಕೊಂಡು ಸ್ವತಂತ್ರವಾಗಿ ಈ ಸಂಪುಟಗಳನ್ನು ರಚಿಸಲಾಗಿದೆ.

ಹೀಗೆ ಹೈದ್ರಾಬಾದ ಕರ್ನಾಟಕ ರಂಗಭೂಮಿ ಯೋಜನೆಯಲ್ಲಿ ಆರು ಸಂಪುಟಗಳು ಪ್ರಾತಿನಿಧಿಕ ನಾಟಕಗಳನ್ನು ಕೂಡಿಸಿಕೊಟ್ಟರೆ, ಉಳಿದ ಸಂಪುಟಗಳು ಈ ಪ್ರದೇಶದ ರಂಗಭೂಮಿ ಚರಿತ್ರೆಯನ್ನು ಕಟ್ಟಿಕೊಡುತ್ತವೆ. ಇಂತಹ ಅವಕಾಶವನ್ನು ನೀಡಿದ ಕರ್ನಾಟಕ ಸರಕಾರಕ್ಕೆ, ಸಹಕಾರ ನೀಡಿದ ನಮ್ಮ ವಿಶ್ವವಿದ್ಯಾಲಯದ ಕುಲಪತಿ–ಕುಲಸಚಿವರುಗಳಿಗೆ ಕೃತಜ್ಞತೆಗಳು ಸಲ್ಲುತ್ತವೆ. ಪ್ರಾತಿನಿಧಿಕ ನಾಟಕಗಳ ಆರು ಸಂಪುಟಗಳ ಸಂಪಾದಕರುಗಳಿಗೆ, ತಮ್ಮ ನಾಟಕಗಳನ್ನು ಈ ಸಂಪುಟಗಳಲ್ಲಿ ಪ್ರಕಟಿಸಲು ಅನುಮತಿ ನೀಡಿದ ನಾಟಕಕಾರರಿಗೆ ಧನ್ಯವಾದಗಳು.

**ಡಾ. ಬಸವರಾಜ ಸಬರದ**
ಪ್ರಧಾನ ಸಂಪಾದಕರು

# ಸಂಪಾದಕರ ನುಡಿ

ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿಯಲ್ಲಿ ಹೈದ್ರಾಬಾದ ಕರ್ನಾಟಕ ರಂಗಭೂಮಿಗೆ ಸಂಬಂಧಿಸಿದ ಈ ಸಂಪುಟವನ್ನು ಸಂಪಾದಿಸಿಕೊಡಲು ಸಂತೋಷವೆನಿಸುತ್ತದೆ. ನಾನು ಎರಡು ನಾಟಕಗಳನ್ನು ರಚಿಸಿದ್ದೆ, ಆದರೆ ರಂಗಭೂಮಿಯ ಬಗೆಗೆ ನನಗೆ ಅಂತಹ ಅನುಭವ ಇರಲಿಲ್ಲ. ಆದರೆ ಈ ಸಂಪುಟಗಳನ್ನು ಸಿದ್ಧಪಡಿಸುವಾಗ ನಾನು ಅನೇಕ ರಂಗಕೃತಿಗಳನ್ನು ಓದಬೇಕಾಯಿತು. ನಾಟಕ ಕಂಪನಿಗಳಿಗೆ ಭೇಟಿ ಕೊಡಬೇಕಾಯಿತು. ಇಂತಹ ಒಂದು ಅವಕಾಶವನ್ನು ಕಲ್ಪಿಸಿದ ಕನ್ನಡ ಭಾಷಾಭಿವೃದ್ಧಿ ಯೋಜನೆಯ ಅಧ್ಯಕ್ಷರಾದ ಕುಲಪತಿಗಳಿಗೆ ಹಾಗೂ ಎಲ್ಲ ಗೌರವಾನ್ವಿತ ಸದಸ್ಯರುಗಳಿಗೆ ಕೃತಜ್ಞತೆಗಳು.

ಈ ಸಂಪುಟದ ಏಳು ನಾಟಕಗಳ ಹಸ್ತಪ್ರತಿ ಒದಗಿಸುವಲ್ಲಿ, ಪುಸ್ತಕಗಳನ್ನು ಬೆರಳಚ್ಚು ಮಾಡಿ ಕಳಿಸುವಲ್ಲಿ ಅನೇಕರು ಸಹಕರಿದ್ದಾರೆ. ಅವರುಗಳಲ್ಲಿ ಕೊಪ್ಪಳದ ಶ್ರೀ ಎಚ್.ಎಸ್.ಪಾಟೀಲ, ವಿಠ್ಠಪ್ಪ ಗೋರಂಟ್ಲಿ, ಎಸ್.ಎಂ.ಕಂಬಾಳಿಮಠ, ಮಾನ್ವಿಯ ಡಾ. ಬಸವಪ್ರಭು ಬೆಟ್ಟದೂರ ಹಾಗೂ ಮಳ್ಳಿಯ ಶ್ರೀ ಡಿ.ಎನ್.ಅಕ್ಕಿ ಇವರಿಗೆ ಧನ್ಯವಾದಗಳು. ಈ ಸಂಪುಟದ ಪ್ರಕಾಶಕರಿಗೆ, ನಾಟಕಕಾರರಿಗೆ ಅಭಿನಂದನೆಗಳು.

**ಡಾ. ವಿಜಯಶ್ರೀ ಸಬರದ**
ಸಂಪಾದಕರು

# ಪ್ರಸ್ತಾವನೆ

ಪ್ರಾತಿನಿಧಿಕ ನಾಟಕಗಳ ಸಂಪುಟಗಳಲ್ಲಿ ಇದು ಮೊದಲನೆಯ ಸಂಪುಟವಾಗಿದೆ. ಈ ಸಂಪುಟದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ವೃತ್ತಿ ರಂಗಭೂಮಿಗೆ ಸಂಬಂಧಿಸಿದ ಏಳು ನಾಟಕಗಳಿವೆ. ಈ ಪ್ರದೇಶದಲ್ಲಿ ವೃತ್ತಿರಂಗಭೂಮಿಗೆ ಸಂಬಂಧಿಸಿದ ಅನೇಕ ನಾಟಕಕಾರರಿದ್ದಾರೆ ನೂರಾರು ನಾಟಕಗಳಿವೆ. ನಾನು ಈ ಸಂಪಾದನೆಯ ಕಾರ್ಯವನ್ನು ಒಪ್ಪಿಕೊಂಡ ಮೇಲೆ ಅನೇಕ ವೃತ್ತಿ ನಾಟಕಗಳನ್ನು ಸಂಗ್ರಹಿಸಿದೆ. ಸಂಗ್ರಹಿಸಿದ ಹಲವು ನಾಟಕಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು, ಯಾವುದನ್ನು ಬಿಡಬೇಕು ಎಂಬಂತಹ ಗೊಂದಲ ಪ್ರಾರಂಭವಾಯಿತು. ಆಗ ಕೆಲವು ಮಾನದಂಡಗಳನ್ನು ನಾನೇ ರೂಪಿಸಿಕೊಂಡೆ. ಹಿರಿಯ ನಾಟಕಕಾರರ ನಾಟಕಗಳಾಗಿರಬೇಕು, ಅವು ಹೆಚ್ಚು ಸಂಖ್ಯೆಯ ಪ್ರಯೋಗಗಳನ್ನು ಕಂಡಿರಬೇಕು, ಆಯ್ಕೆಯಲ್ಲಿ ವಸ್ತು ವೈವಿಧ್ಯತೆ ಇರಬೇಕು ಹೀಗೆ ಈ ಮೂರು ಮಾನದಂಡಗಳನ್ನಿಟ್ಟುಕೊಂಡಾಗ ನನಗೆ ಆಯ್ಕೆ ಸುಲಭವಾಯಿತು. ಏಳು ಮಹತ್ವದ ನಾಟಕಗಳನ್ನು ಆಯ್ಕೆ ಮಾಡಿ, ಈ ಸಂಪುಟದಲ್ಲಿ ಪ್ರಕಟಿಸಲಾಗಿದೆ.

ಹೈದ್ರಾಬಾದ ಕರ್ನಾಟಕ ವೃತ್ತಿ ರಂಗಭೂಮಿ ಕುರಿತಂತೆ, ಈ ಯೋಜನೆಯಡಿಯಲ್ಲಿ ಒಂದು ಸಂಶೋಧನಾ ಸಂಪುಟವೇ ಪ್ರಕಟವಾಗುವುದರಿಂದ, ಅದರ ಬಗೆಗೆ ಇಲ್ಲಿ ಹೆಚ್ಚು ಹೇಳಲಾರೆ. ಆದರೆ ಒಂದು ಮಾತನ್ನು ಹೇಳುವುದಾದರೆ ಕರ್ನಾಟಕ ವೃತ್ತಿರಂಗಭೂಮಿಗೆ, ಹೈದ್ರಾಬಾದ ಕರ್ನಾಟಕದ ವೃತ್ತಿ ನಾಟಕಕಾರರ ಕೊಡುಗೆ ತುಂಬ ವಿಶಿಷ್ಟವಾದುದಾಗಿದೆ.

ವೃತ್ತಿರಂಗಭೂಮಿಗೆ ಕೊಪ್ಪಳ ಜಿಲ್ಲೆಯ ಕೊಡುಗೆ ಗಮನಾರ್ಹವಾದುದಾಗಿದೆ. ವೃತ್ತಿ ರಂಗಭೂಮಿಯ ಜನಕ ಶಾಂತಕವಿಗಳು ಗದುಗಿನವರು. ಗದುಗಿನ ಪಕ್ಕದಲ್ಲಿಯೇ ಕೊಪ್ಪಳ ಜಿಲ್ಲೆ ಇರುವುದರಿಂದ ಸಹಜವಾಗಿಯೇ ಗದುಗಿನ ವೃತ್ತಿ ರಂಗಭೂಮಿ ಪ್ರಭಾವ ಈ ಜಿಲ್ಲೆಯ ಮೇಲಾಗಿದೆ. ೧೯೦೩ರಲ್ಲಿ ಶಿರಹಟ್ಟಿ ವೆಂಕೋಬರಾಯರು ಶ್ರೀ ಮಹಾಲಕ್ಷ್ಮಿ ನಾಟ್ಯ ಸಂಘವನ್ನು ಕೊಪ್ಪಳದಲ್ಲಿ ಕಟ್ಟಿದರು. ಇದು ಪ್ರಾಚೀನವಾದ ನಾಟಕ ಕಂಪನಿಯಾಗಿದೆ. ಶಿರಹಟ್ಟಿ ವೆಂಕೋಬರಾಯರ ಮಗ ಹೂಲಗೇರಿ

ತಮ್ಮಯ್ಯನವರು ರಚಿಸಿದ "ವೀರ ಅಭಿಮನ್ಯು" ನಾಟಕ ಈ ಪ್ರದೇಶದ ಮೊದಲ ವೃತ್ತಿ ನಾಟಕವಾಗಿದೆಯೆಂದು ಹೇಳಲಾಗುತ್ತದೆ. ಈ ನಾಟಕ ೧೯೦೩ರ ಸಂದರ್ಭದಲ್ಲಿಯೇ ರಚನೆಯಾಗಿರಬಹುದಾಗಿದೆ. ಆದರೆ ಈ ನಾಟಕದ ಹಸ್ತಪ್ರತಿ ದೊರೆಯಲಿಲ್ಲ; ಎಷ್ಟೇ ಪ್ರಯತ್ನಪಟ್ಟರೂ ಅದು ಸಾಧ್ಯವಾಗಲಿಲ್ಲ.

ಕೊಪ್ಪಳ ಜಿಲ್ಲೆಯವರಾದ ಗರುಡ ಸದಾಶಿವರಾಯರು ೧೯೨೦ರ ಸಂದರ್ಭದಲ್ಲಿ ಗುಲ್ಬರ್ಗಾಕ್ಕೆ ಬಂದು, ಬ್ರಹ್ಮಪುರದ ಕೀಲಿಯವರ ಮನೆಯಲ್ಲಿ ನೆಲಸಿ ಮೊದಲ ಬಾರಿಗೆ "ಶ್ರೀ ಶರಣ ಬಸವೇಶ್ವರ ನಾಟಕ" ರಚಿಸಿದರು. ಇದು ಗರುಡರ ಪ್ರಥಮ ನಾಟಕವಾಗಿದೆ.

ಈ ಸಂಪುಟ ಗರುಡ ಸದಾಶಿವರಾಯರ "ಯಚ್ಚಮ ನಾಯಕ"ದಿಂದ ಪ್ರಾರಂಭವಾಗುತ್ತದೆ. ಅಧಿಕ ಸಂಖ್ಯೆಯ ಪ್ರಯೋಗಗಳನ್ನು ಕಂಡು ಜನಮನದಲ್ಲಿ ಇಂದಿಗೂ ಈ ನಾಟಕ ಹಸಿರಾಗಿ ಉಳಿದಿದೆ. ಐವತ್ತಕ್ಕೂ ಹೆಚ್ಚು ನಾಟಕಗಳನ್ನು ರಚಿಸಿರುವ ಹಿರಿಯ ನಾಟಕಕಾರ ಗರುಡ ಸದಾಶಿವರಾಯರ ಕೊಡುಗೆ ಗಮನಾರ್ಹವಾದುದಾಗಿದೆ.

"ಯಚ್ಚಮ ನಾಯಕ" ಪ್ರಸಿದ್ಧ ಐತಿಹಾಸಿಕ ನಾಟಕವಾಗಿದೆ. ಈ ಸಂಪುಟದ ಕೊನೆಯ ನಾಟಕ ಮೋಹನಚಂದ ಕಿರಣಗಿಯವರ "ಅಣ್ಣ ತಂಗಿ" ಎಂಬ ಸಾಮಾಜಿಕ ನಾಟಕವಾಗಿದೆ. ಯಚ್ಚಮ ನಾಯಕದಿಂದ ಅಣ್ಣ ತಂಗಿ ನಾಟಕದ ವರೆಗಿನ ವಿಸ್ತಾರದಲ್ಲಿ ಐತಿಹಾಸಿಕದಿಂದ ಸಾಮಾಜಿಕದ ಕಡೆಗೆ ಹೊರಳುವ ಪರಂಪರೆಯನ್ನು ಈ ಸಂಪುಟದ ನಾಟಕಗಳು ಕಟ್ಟಿಕೊಡುತ್ತವೆ. ಈ ಸಂಪುಟದಲ್ಲಿರುವ ಏಳು ನಾಟಕಗಳ ಕಥಾವಸ್ತು, ಅವುಗಳ ವಿಮರ್ಶೆ ಈ ಪ್ರಸ್ತಾವನೆಯ ಉದ್ದೇಶವಲ್ಲ. ಈ ಕಾರ್ಯವನ್ನು ಈ ಯೋಜನೆಯ ವೃತ್ತಿ ರಂಗಭೂಮಿ ಸಂಶೋಧನಾ ಸಂಪುಟದಲ್ಲಿ ಮಾಡಲಾಗಿದೆ.

೧೯೩೦ರ ಸಂದರ್ಭದಲ್ಲಿ "ಯಚ್ಚಮ ನಾಯಕ" ರಚನೆಯಾಗಿದ್ದರೆ, ೧೯೬೩ರಲ್ಲಿ "ಅಣ್ಣತಂಗಿ" ನಾಟಕ ಪ್ರಕಟಗೊಂಡಿದೆ. ೧೯೫೦ರಲ್ಲಿ "ಉಷಾರಾಣಿ" ನಾಟಕ ಪ್ರಟಕವಾದರೆ, ೧೯೮೦ರ ದಶಕದಲ್ಲಿ "ಸಂಪತ್ತಿಗೆ ಸವಾಲ್", "ಮಾರ್ಗತೋರಿದ ಮಡದಿ" ಹಾಗೂ "ಶ್ರೀಗವಿಸಿದ್ಧೇಶ್ವರ ಮಹಾತ್ಮೆ" ನಾಟಕಗಳು ಪ್ರಕಟವಾದವು. ೧೯೯೧ರಲ್ಲಿ "ಸ್ತ್ರೀರತ್ನ" ನಾಟಕ ಪ್ರಕಟವಾಯಿತು. ನಾಟಕಗಳು ಪ್ರಕಟಗೊಂಡ ವರ್ಷದ ಪ್ರಕಾರ ಈ ನಾಟಕಗಳನ್ನು ಜೋಡಿಸಿಲ್ಲ. ನಾಟಕಕಾರರ ವಯಸ್ಸನ್ನು ಗಮನಿಸಿ, ವಯಸ್ಸಿನ ಹಿರಿತನದ ಮೇಲೆ ಇಲ್ಲಿಯ ನಾಟಕಗಳನ್ನು ಜೋಡಿಸಲಾಗಿದೆ. ಇಲ್ಲಿ ಆಯ್ದುಕೊಂಡಿರುವ ನಾಟಕವು, ನಾಟಕಕಾರರ ಮೊದಲ

ನಾಟಕವಾಗಿರಬಹುದು ಅಥವಾ ಕೊನೆಯ ನಾಟಕವಾಗಿರಬಹುದು. ನಾಟಕದ ಪ್ರಕಟಣೆಯ ವರ್ಷವನ್ನು ಮಾತ್ರ ಪರಿಗಣಿಸಿದರೆ ಜೇಷ್ಠತೆಯ ಕ್ರಮಕ್ಕೆ ತೊಂದರೆಯಾಗುತ್ತದೆಂದು, ನಾಟಕಕಾರರ (ಸಿನಿಯಾರಿಟಿ) ಜೇಷ್ಠತೆ ಪ್ರಕಾರ ಇಲ್ಲಿಯ ನಾಟಕಗಳನ್ನು ಜೋಡಿಸಲಾಗಿದೆ.

ಗರುಡ ಸದಾಶಿವರಾಯರ "ಯಚ್ಚಮ ನಾಯಕ" ಕರ್ನಾಟಕದಲ್ಲಿ ನೂರಾರು ಪ್ರಯೋಗಗಳನ್ನು ಕಂಡ ಪ್ರಸಿದ್ಧ ಐತಿಹಾಸಿಕ ನಾಟಕ. ಯಚ್ಚಮ ನಾಯಕ ನಾಟಕ ಇಂದಿಗೂ ಕೂಡ ಪ್ರಯೋಗಗೊಳ್ಳುತ್ತಲೇ ಇದೆ. ಪ್ರಸಿದ್ಧ ನಟ ಎಂ.ಪಿ.ಶಂಕರ್ ಯಚ್ಚಮ ನಾಯಕನ ಪಾತ್ರದಲ್ಲಿ ರಂಗದ ಮೇಲೆ ಬಂದಾಗ ಆಗುವ ಅನುಭವ ರೋಮಾಂಚನಕಾರಿಯಾದುದು. ಇಂದು ಗರಡ ಸದಾಶಿವರಾಯರಿಲ್ಲ, ಎಂ.ಪಿ.ಶಂಕರ್ ಇಲ್ಲ ಆದರೆ ಯಚ್ಚಮ ನಾಯಕನಿದ್ದಾನೆ. ಆ ಪರಂಪರೆಯನ್ನು ಮುಂದುವರಿಸುವ ಯುವ ಕಲಾವಿದರಿದ್ದಾರೆ. ಇಂತಹ ನಾಟಕಗಳನ್ನು ಮತ್ತೆ-ಮತ್ತೆ ಪ್ರಕಟಿಸುವ ಮೂಲಕ, ಪ್ರಯೋಗಿಸುವ ಮೂಲಕ ನಮ್ಮ ರಂಗಭೂಮಿಯ ಪರಂಪರೆಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ.

ಶಂಕರಪ್ಪ ಮಾಸ್ತರ ಕಲ್ಮಾಲಿಯವರ "ಉಷಾರಾಣಿ" ನಾಟಕ ತುಂಬ ವಿಶಿಷ್ಟವಾಗಿದೆ. ಇದು ಪೌರಾಣಿಕ ಕಥಾವಸ್ತುವನ್ನೊಳಗೊಂಡಿದೆ. ಪುರಾಣಕಾಲದ ದೇವ-ದಾನವರ ಪ್ರಸ್ತಾಪದ ಮೂಲಕ ಆರ್ಯ-ದ್ರಾವಿಡ ಸಂಸ್ಕೃತಿಯ ಸಂಘರ್ಷವನ್ನು ಹೇಳುವುದು ಇಲ್ಲಿಯ ಉದ್ದೇಶವಾಗಿದೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಕಲ್ಮಲಾದಂತಹ ಗ್ರಾಮದಲ್ಲಿ ಜನಿಸಿದ ಶಂಕರಪ್ಪ ಮಾಸ್ತರರು ೧೯೫೦ರಲ್ಲಿ ಈ ನಾಟಕ ಪ್ರಕಟಿಸಿದ್ದಾರೆ. ಆ ಕಾಲದಲ್ಲಿ ಈ ನಾಟಕ ಅನೇಕ ಪ್ರಯೋಗಗಳನ್ನು ಕಂಡಿದೆ.

ಮೋಹನಕುಮಾರ ಕಿರಣಗಿಯವರ "ಅಣ್ಣ ತಂಗಿ" ೧೯೬೩ರಲ್ಲಿ ಪ್ರಕಟವಾದ ಕೌಟುಂಬಿಕ ನಾಟಕ. ಕರ್ನಾಟಕದ ಶೇಕ್ಸಪೀಯರ್ ಎಂದು ಹೆಸರಾಗಿದ್ದ ಹನಮಂತರಾವ ಕಂದಗಲ್ಲ ಅವರು ಈ ನಾಟಕದ ಪ್ರಥಮ ಮುದ್ರಣಕ್ಕೆ ಮುನ್ನುಡಿ ಬರೆದಿದ್ದಾರೆ. ೧೯೭೨ರಲ್ಲಿ ಈ ನಾಟಕ ದ್ವಿತೀಯ ಮುದ್ರಣ ಕಂಡಿದೆ. ಅಣ್ಣ ತಂಗಿಯ ನಡುವಿನ ವಾತ್ಸಲ್ಯ, ಕರುಳಿನ ಸಂಬಂಧ ಅಗಾಧವಾದುದು, ಅದು ತುಂಬ ಭಾವನಾತ್ಮಕವಾದುದು. ಇಂದಿಗೂ ಕೂಡ ಅಣ್ಣ ತಂಗಿ ಕುರಿತಂತೆ ಚಲನಚಿತ್ರಗಳು ಬಂದಿವೆ. ಆದರೆ ಕಿರಣಗಿಯವರ ಅಣ್ಣ-ತಂಗಿ ತುಂಬ ಗಮನಾರ್ಹವಾದ ನಾಟಕ. ಅರವತ್ತರ ದಶಕದಲ್ಲಿ ಅತ್ಯಂತ ಜನಪ್ರಿಯವಾಗಿದ್ದ ನಾಟಕ ಇದಾಗಿದೆ.

ಪಿ.ಬಿ.ಧುತ್ತರಗಿಯವರ "ಸಂಪತ್ತಿಗೆ ಸವಾಲು" ಅತ್ಯಂತ ಜನಪ್ರಿಯವಾದ ಸಾಮಾಜಿಕ ನಾಟಕ. ಇದು ಚಲನಚಿತ್ರವಾಗಿ, ಡಾ. ರಾಜಕುಮಾರ ನಾಯಕನಾಗಿ ಬೆಳ್ಳಿತೆರೆಯ ಮೇಲೆ ಬಂದಾಗ ಇದು ಇಡೀ ಕರ್ನಾಟಕದ ಜನತೆಯನ್ನೇ ತಲುಪಿತು. ಎಮ್ಮೆ ನಿನಗೆ ಸಾಟಿಯಿಲ್ಲ ಎಂಬಂತಹ ಹಾಡಂತೂ, ಹುಡುಗರ ನಾಲಗೆಯ ಮೇಲೆ ಹಾಗೇ ಉಳಿದುಕೊಂಡು ಬಂದಿವೆ. ತನ್ನೂರ ಶ್ರೀಮಂತನ ಅನ್ಯಾಯದ ವಿರುದ್ಧ ಎದ್ದೇಳುವ ಬಡಯುವಕನ ಸಂಘರ್ಷವನ್ನು ಇಲ್ಲಿ ಕಾಣಬಹುದಾಗಿದೆ. ಅಂದಿನ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರ ಗರೀಬಿ ಹಟಾವೊ ಯೋಜನೆ ಈ ನಾಟಕಕ್ಕೆ ಪ್ರೇರಣೆಯಾಗಿರಬಹುದಾಗಿದೆ. ಧುತ್ತರಗಿಯವರು ಪ್ರತಿಭಾವಂತ ನಾಟಕಕಾರರು. ಊಳಿಗಮಾನ್ಯ ವ್ಯವಸ್ಥೆಗೆ ಒಗ್ಗಿ ಹೋಗಿದ್ದ ಈ ಪ್ರದೇಶದ ಜನತೆಯನ್ನು ಬಡಿದೆಬ್ಬಿಸಿದ ನಾಟಕ ಇದಾಗಿದೆ. ಯುವಕರು ಸ್ವಾಭಿಮಾನದಿಂದ ಬದುಕಬೇಕೆಂಬ ಸಂದೇಶವನ್ನು ಈ ನಾಟಕ ಕೊಡುತ್ತದೆ.

೧೯೭೦ರಲ್ಲಿ ಪ್ರಕಟವಾಗಿರುವ ಶಿವಲಿಂಗಪ್ಪಯ್ಯ ಹಿರೇಮಠ ಅವರ "ಮಾರ್ಗತೋರಿದ ಮಡದಿ" ಮತ್ತೊಂದು ಮಹತ್ವದ ನಾಟಕವಾಗಿದೆ. ಇದೂ ಕೂಡ ಕೌಟುಂಬಿಕ ನಾಟಕವಾಗಿದೆ. ಕೊಪ್ಪಳ ತಾಲೂಕಿನ ಗೊಂಡಬಾಳದವರಾದ ಶಿವಲಿಂಗಪ್ಪಯ್ಯನವರು ಅತ್ಯಂತ ಸರಳ ಗ್ರಾಮೀಣ ಭಾಷೆಯಲ್ಲಿ ಈ ನಾಟಕವನ್ನು ರಚಿಸಿದ್ದಾರೆ. ನಿಜಾಮನ ಆಡಳಿತಕ್ಕೊಳಪಟ್ಟ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಊಳಿಗಮಾನ್ಯ ವ್ಯವಸ್ಥೆ ಹಾಗೂ ನಿಜಾಮಶಾಹಿ ಸಂಸ್ಕೃತಿ ದೊಡ್ಡ ಶಾಪಗಳಾಗಿದ್ದವು. ನಿಜಾಮಶಾಹಿ ಸಂಸ್ಕೃತಿಯನ್ನೇ ಮುಖ್ಯವಾಗಿರಿಸಿಕೊಂಡ ಇಲ್ಲಿಯ ಪುರುಷರು ಮೂರು-ನಾಲ್ಕು ಪತ್ನಿಯರನ್ನು ಹೊಂದುವುದು ಆಗ ಸರ್ವೆ ಸಾಮಾನ್ಯವಾಗಿತ್ತು. ಕರ್ನಾಟಕದ ಬೇರೆ ಪ್ರದೇಶಗಳ ಮಹಿಳೆಯರು ಒಂದು ರೀತಿಯ ಶೋಷಣೆಗೊಳಗಾಗಿದ್ದರೆ, ಹೈದ್ರಾಬಾದ ಕರ್ನಾಟಕ ಪ್ರದೇಶದ ಮಹಿಳೆಯರು ಈ ಬಹು ಪತ್ನಿತ್ವದ ಪರಂಪರೆಯಿಂದ ಹೆಚ್ಚು ಯಾತನೆಯನ್ನನುಭವಿಸಿರುವುದು ಚಾರಿತ್ರಿಕ ಸತ್ಯವಾಗಿದೆ. ಅಂತಹ ಸಂದರ್ಭದಲ್ಲಿ ಶಿವಲಿಂಗಪ್ಪಯ್ಯನವರಂತಹ ನಾಟಕಕಾರರು ಮಹಿಳೆಗೆ ಮಹತ್ವ ನೀಡಿದ್ದು ಗಮನಾರ್ಹ ಸಂಗತಿಯಾಗುತ್ತದೆ. ಇಲ್ಲಿ ಮಾರ್ಗ ತೋರುವವಳು ಹೆಂಡತಿಯಾಗುತ್ತಾಳೆಯೇ ಹೊರತು ಗಂಡನಲ್ಲ. ಈ ಕಾರಣದಿಂದ ಈ ನಾಟಕದ ಹೊಸ ಓದನ್ನು ಇಂದು ಪ್ರಾರಂಭಿಸಬೇಕಾಗಿದೆ. ಇದೇ ವಿಷಯವನ್ನೊಳಗೊಂಡಿರುವ ಮಾರುತೇಶ ಮಾಂತ್ರೆಯವರ ಸ್ತ್ರೀರತ್ನ ನಾಟಕವನ್ನು ಕೂಡ ಇಲ್ಲಿಯೇ ಹೆಸರಿಸಬಹುದಾಗಿದೆ. ಈ ನಾಟಕ ೧೯೯೧ರಲ್ಲಿ ಪ್ರಕಟವಾದರೂ ಅದಕ್ಕೂ ಮೊದಲೇ ಅನೇಕ ಪ್ರಯೋಗಗಳನ್ನು ಕಂಡಿತ್ತು. ಸ್ತ್ರೀಯೆಂಬುದು ಮಾಯೆ, ಮೋಹ, ಅಸಹ್ಯ, ಅನಾಹುತವೆಂದು ತಿಳಿದುಕೊಂಡಿದ್ದ ಕಾಲದಲ್ಲಿ ಸ್ತ್ರೀ ಒಂದು

ರತ್ನವೆಂದು ಹೇಳುವ ಈ ನಾಟಕಕಾರನ ಆಶಯ ಸ್ತ್ರೀವಾದಿ ಅಧ್ಯಯನದ ಈ ಸಂದರ್ಭದಲ್ಲಿ ಬಹು ಮುಖ್ಯವೆನಿಸುತ್ತದೆ.

೧೯೭೪ರಲ್ಲಿ ಪ್ರಕಟವಾದ "ಶ್ರೀ ಗವಿಸಿದ್ಧೇಶ್ವರ ಮಹಾತ್ಮೆ" ನಾಟಕ, ಕೊಪ್ಪಳ ಗವಿಮಠದ ಶ್ರೀ ಗವಿಸಿದ್ಧೇಶ್ವರರ ಮಹಿಮೆಯನ್ನು ಹೇಳುತ್ತದೆ. ಗವಿಮಠದ ಭಕ್ತರಾಗಿದ್ದ ಶ್ರೀ ಶಿವರುದ್ರಪ್ಪ ನಿಟ್ಟಾಲಿಯವರು ಈ ನಾಟಕವನ್ನು ರಚಿಸಿದ್ದಾರೆ. ಈ ಪ್ರದೇಶದ ಜನತೆಗೆ ಕಲಬುರ್ಗಿ ಶ್ರೀ ಶರಣಬಸವೇಶ್ವರ ಹಾಗೂ ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಇವರಿಬ್ಬರೂ ಪುಣ್ಯಪುರುಷರಾಗಿ ಕಾಣಿಸಿಕೊಂಡಿದ್ದಾರೆ. ಶ್ರೀ ಶರಣ ಬಸವೇಶ್ವರರು ದಾಸೋಹಕ್ಕೆ ಪ್ರಸಿದ್ಧರಾದರೆ, ಶ್ರೀ ಗವಿಸಿದ್ಧೇಶ್ವರರು ಆಧ್ಯಾತ್ಮಕ್ಕೆ ಹೆಸರಾಗಿದ್ದಾರೆ. ಈ ಇಬ್ಬರು ಮಹಾಪುರುಷರ ಜಾತ್ರೆ ಪ್ರತಿವರ್ಷ ನಡೆಯುತ್ತವೆ. ಲಕ್ಷಗಟ್ಟಲೆ ಜನ ಜಾತ್ರೆಯಲ್ಲಿ ಸೇರಿರುತ್ತಾರೆ. ಅಂತಹ ಶ್ರೀ ಗವಿಸಿದ್ಧೇಶ್ವರರನ್ನು ಕುರಿತಾದ ಈ ನಾಟಕವನ್ನು ಲೇಖಕರು ಇಲ್ಲಿ ಆಡುಭಾಷೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ನಾಟಕವೂ ಕೂಡ ಕೊಪ್ಪಳ ಜಾತ್ರೆಯಲ್ಲಿ ಅನೇಕ ಪ್ರಯೋಗಗಳನ್ನು ಕಂಡಿದೆ. ಹಲವು ವೃತ್ತಿ ಕಂಪನಿಗಳು ಈ ನಾಟಕವನ್ನು ಪ್ರಯೋಗಿಸಿವೆ.

ಹೀಗೆ ಇಲ್ಲಿಯ ಏಳು ನಾಟಕಗಳು ವಿಷಯದ ದೃಷ್ಟಿಯಿಂದ ವೈವಿಧ್ಯತೆಯನ್ನೊಳಗೊಂಡಿವೆ. ಐತಿಹಾಸಿಕ, ಪೌರಾಣಿಕ, ಸಾಮಾಜಿಕ, ಕೌಟುಂಬಿಕ, ಆಧ್ಯಾತ್ಮಿಕ ಕ್ಷೇತ್ರದ ಬೆಳವಣಿಗೆಯನ್ನಿಲ್ಲಿ ಗಮನಿಸಬಹುದಾಗಿದೆ. ಈ ಪ್ರದೇಶ ವೃತ್ತಿ ನಾಟಕಗಳ ಸಂಶೋಧನೆ, ವಿಮರ್ಶೆಗೆ ಸಂಬಂಧಿಸಿದಂತೆ ಡಾ. ಬಸವರಾಜ ಸಬರದವರ ಪ್ರತ್ಯೇಕ ಸಂಪುಟವಿರುವುದರಿಂದ ನಾನಿಲ್ಲಿಯ ನಾಟಕಗಳ ಬಗೆಗೆ ನಾಟಕಕಾರರ ಬಗೆಗೆ ಹೆಚ್ಚು ಬರೆಯಲು ಹೋಗದೆ, ಈ ಸಂಪುಟದ ಉದ್ದೇಶವನ್ನು ಅದರ ಅಗತ್ಯವನ್ನು ಮಾತ್ರ ತಿಳಿಸಬಯಸಿದ್ದೇನೆ. ಈ ಸಂಪುಟದ ನಾಟಕಗಳು ಮತ್ತೆ ಹೊಸ ಪ್ರಯೋಗಗಳಿಗೆ ನಾಂದಿಯಾಗಲೆಂದು ಆಶಿಸುತ್ತೇನೆ.

**ಡಾ. ವಿಜಯಶ್ರೀ ಸಬರದ**

ಸಂಪಾದಕರು

26

# ಪರಿವಿಡಿ

# ಯಚ್ಚಮ ನಾಯಕ
ಅಥವಾ
# ಕನ್ನಡ ಕಡುಗಲಿ

• ಗರುಡ ಸದಾಶಿವರಾಯ

# ಗರುಡ ಸದಾಶಿವರಾಯ

ಹೈದ್ರಾಬದ ಕರ್ನಾಟಕದ ವೃತ್ತಿರಂಗಭೂಮಿ ನಾಟಕಕಾರರಲ್ಲಿ ಗರುಡ ಸದಾಶಿವರಾಯರು ಮೊದಲಿಗರು. ಮರಾಠಿ ರಂಗಭೂಮಿಗೆ ಪರ್ಯಾಯವಾಗಿ ಕನ್ನಡ ವೃತ್ತಿ ರಂಗಭೂಮಿಯನ್ನು ಬೆಳೆಸಿದ ಕೀರ್ತಿ ಗದುಗಿನ ಶಾಂತಕವಿಗಳಿಗೆ ಸಲ್ಲುತ್ತದೆ. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ವೃತ್ತಿ ರಂಗಭೂಮಿಗೆ ದೊಡ್ಡ ಕೊಡುಗೆಯನ್ನು ನೀಡಿದರು. ಇವರು ಕೇವಲ ನಾಟಕಕಾರರಷ್ಟೇ ಆಗಿರದೆ ನಟರಾಗಿದ್ದರು, ನಿರ್ದೇಶಕರೂ, ಆಗಿದ್ದರು. ಸ್ವಂತ ನಾಟಕ ಕಂಪನಿಗಳನ್ನು ಕಟ್ಟಿಕೊಂಡು ವೃತ್ತಿರಂಗಭೂಮಿಗೆ ಭದ್ರ ಬುನಾದಿ ಹಾಕಿದರು.

ಸದಾಶಿವರಾಯರು ಕೊಪ್ಪಳ ತಾಲೂಕಿನ ಕವಲೂರು ಗ್ರಾಮದಲ್ಲಿ ೧೮–೦೮–೧೮೮೨ರಂದು ಜನಿಸಿದರು. ಗುರುನಾಥ ಶಾಸ್ತ್ರಿ ಮತ್ತು ಸುಭದ್ರಾಬಾಯಿ ಇವರ ತಂದೆ – ತಾಯಿಗಳು. ಗುರುನಾಥಶಾಸ್ತ್ರಿಗಳು ವೈದ್ಯವೃತ್ತಿ ಮಾಡುತ್ತಿದ್ದರು. ಸದಾಶಿವರಾಯರ ಪ್ರಾಥಮಿಕ ಶಿಕ್ಷಣ ಕವಲೂರಿನಲ್ಲಿ ಪ್ರಾರಂಭವಾಯಿತು. ಮುಂದಿನ ಶಿಕ್ಷಣಕ್ಕಾಗಿ ಇವರು ರಾಯಚೂರಿಗೆ ಹೋದರು, ನಂತರದಲ್ಲಿ ಕಲಬುರ್ಗಿಗೆ ಹೋದರು. ಕಲಬುರ್ಗಿಯಲ್ಲಿ ಮರಾಠಿ ಭಾಷೆಯ ನಾಟಕಗಳ ಹಾವಳಿಯನ್ನು ಗಮನಿಸಿದ ಗರುಡರು ಕನ್ನಡದಲ್ಲೇಕೆ ನಾಟಕಗಳನ್ನು ಬರೆಯಬಾರದೆಂದು ಭಾವಿಸಿ ಕಲಬುರ್ಗಿಯಲ್ಲಿಯೇ ಮೊದಲನೇ ನಾಟಕ ಬರೆದರು. ಕಲಬುರ್ಗಿಯ ಶರಣಬಸವೇಶ್ವರರ ಬಗೆಗೆ ಬರೆದ ನಾಟಕವೇ ಮೊದಲನೇ ನಾಟಕವಾಗಿತ್ತು.

ಗರುಡರು ಐವತ್ತಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾರೆ. ಪೌರಾಣಿಕ – ಐತಿಹಾಸಿಕ – ಭಕ್ತಿಪ್ರಧಾನ ಹಾಗೂ ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ಇವರು ನಾಟಕಗಳನ್ನು ರಚಿಸಿದ್ದಾರೆ. ಇವರ ನಾಟಕಗಳು ಹೈದ್ರಾಬಾದ ಕರ್ನಾಟಕದಿಂದ, ಮುಂಬೈಕರ್ನಾಟಕಕ್ಕೆ ಹಾಗೂ ಕರಾವಳಿ ಕರ್ನಾಟಕಕ್ಕೆ ಪ್ರಯಾಣ ಬೆಳೆಸಿದವು. ನಾಡಿನಾದ್ಯಂತ ನೂರಾರು ಪ್ರಯೋಗಗಳನ್ನು ಕಂಡವು. ಅವರ ಪ್ರಸಿದ್ಧ ನಾಟಕ "ಯಚ್ಚಮ ನಾಯಕ"ನನ್ನು ಇಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ.

## –: ಪಾತ್ರ ಪರಿಚಯ:–

ಜಗದೇವರಾಯ

ಬಾಯಮ್ಮ

ರಾಜಗೋಪಾಲಕೃಷ್ಣ

ಲಕ್ಷ್ಮಣ ನಾಯಕ (ಯಚ್ಚಮ ನಾಯಕ)

ವೆಂಕಟಾದ್ರಿ

ಗುರು

ಚಿಕ್ಕರಾಯ

ದುರ್ಗಾಸಿಂಗ್

ಸಂಜೀವಿ

ಹನುಮಾ

ಕರಿಯಾ

ಶ್ರೀರಂಗರಾಯ

ಕೊತವಾಲ

ಸೇನಾಪತಿ

ಡಂಗುರದವ

## ಪ್ರಥಮಾಂಕವು

### ೧ನೇ ಪ್ರವೇಶ

(ಅರಮನೆಯೊಳಗಿನ ಒಂದು ದಿವಾಣಖಾನೆ)

**ಜಗದೇವರಾಯ :** ಲಕ್ಷ್ಮಣನಾಯಕನಿಗೆ ಹುಚ್ಚು ಹಿಡಿದಿದೆ ! ಅಂತೇ ಅವನು ಹಾಗೆ ಕೂಗುತ್ತಿರುವನು, ಚಿಕ್ಕರಾಯನು ಕರ್ನಾಟಕದ ಪಟ್ಟಕ್ಕೆ ಬಾದ್ಯನಲ್ಲವೆ? ಶ್ರೀಮದ್ ವೆಂಕಟಪತಿರಾಯರ ಹೊಟ್ಟೆಯಿಂದ ಚಿಕ್ಕರಾಯನು ಪಟ್ಟಬಾಧ್ಯನಾಗದಿದ್ದರೆ ಮತ್ತಾರಾಗಬೇಕು?

**ಬಾಯಮ್ಮ :** ಅಪ್ಪಾ ಚಿಕ್ಕರಾಯನ ವಿಷಯಕವಾದ ಗೂಢವೇನಾದರೂ ಆ ಕ್ರೂರ ಲಕ್ಷ್ಮಣನಾಯಕನಿಗೆ ಗೊತ್ತಾಗಿರಬಹುದೇನು?

**ಜಗ :** ವೆಂಕಟಪತಿರಾಯನಾಗಲಿ ನೀನಾಗಲಿ ! ಅಥವಾ ನಾನಾಗಲಿ ! ಮೂವರಲ್ಲಿ ಯಾರಾದರೂ ಹೇಳದೇ ಹೇಗೆ ಗೊತ್ತಾಗಬೇಕು?

**ಬಾಯ :** ಚಿಕ್ಕರಾಯನ ಸಲುವಾಗಿ ಈಚೀಚೆಗೆ ಅವರು ತೋರಿಸಿದ ಮಾನಸಿಕತೆಯನ್ನಾಲೋಚಿಸಿದರೆ ಅವರೇ ಲಕ್ಷ್ಮಣನಾಯಕನಿಗೆ ಆ ಗೂಢವನ್ನು ಹೇಳಿ ಹಾಗೆ ಆಜ್ಞಾಪತ್ರವನ್ನು ಕೊಟ್ಟಿರಲಿಕ್ಕೆ ಸಾಕು.

**ನಂ. ೧ ರಾಗ – ಯಮನ, ತಾಳ – ದೃತ ಯಕ್ಕಾ ॥**

ಪದ ॥ ಮಗುವನು ಮೃದುಮಾತಿನಿಂದ। ಮಾತಾಡಿಸದಾದರಯ್ಯ।
ಮಮತೆಯದು ಮಾಯವಾಯ್ತು। ಮಾಡಲಾರದೊಂದು ಹಿತವ॥ಪ॥
ಕರುಣೆಯಿಂದ ಓಲಗಕೆ। ಕರೆದುಕೊಂಡು ಹೋಗದಿರುವ॥
ವರಕುವರನ ಈಚೀಚೆಗೆ। ಆ ರೀತಿಯ ಸ್ಮರಣೆಯಾಯ್ತು ॥ ೧ ॥

**ಜಗ :** ಮರಣಕಾಲಕ್ಕೆ ವೆಂಕಟಪತಿರಾಯನು ಲಕ್ಷ್ಮಣನಾಯಕನನ್ನು ಕರೆಯಿಸಿ ಕೊಂಡಿದ್ದನೇನು?

**ಬಾಯ :** ಅಹುದು! ಕರೆಯಿಸಿಕೊಂಡು ಏನೇನೋ? ಏಕಾಂತವಾಡಿದರಂತೆ.

**ಜಗ :** ಆ ಸಮಯದಲ್ಲಿ ನೀನೇನು ಮಾಡುತ್ತಿದ್ದೆ?

ಬಾಯ : ಊಟಕ್ಕೆ ಕುಳಿತಿದ್ದೆನು?

ಜಗ : ಊಟವನ್ನು ಬಿಟ್ಟು ಹೋಗಿಯಾದರೂ ಅವರ ಏಕಾಂತಕ್ಕೆ ಭಂಗವನ್ನುಂಟು ಮಾಡಬಹುದಾಗಿತ್ತಲ್ಲವೆ?

ಬಾಯ : ದಾಸಿಯು, ಮಾತು ಮಿಂಚಿ ಹೋದಮೇಲೆ ನನಗಾಸುದ್ದಿಯನ್ನು ಹೇಳಿದಳು !

ಜಗ : ಆದಾವ ದಾಸೀ, ಕರೆಹಿಸು ಅವಳನ್ನು

ಬಾಯ : ಯಾರಲ್ಲಿ?

ಸಂಜೀವಿ : ಅಮ್ಮಾಜಿ ನಾನಿದ್ದೇನೆ? ಸಂಜೀವಿ

ಬಾಯ : ಇದೋ ಇವಳೇ !

ಜಗ : ಸಂಜೀವಿ ಮೊದಲು ಕದವಿಕ್ಕಿಕೊಂಡು ಬಾ? (ಹಾಗೆ ಮಾಡುವಳು) ಸಂಜೀವೀ? ಶ್ರೀ ವೆಂಕಟಪತಿರಾಯರು ಪ್ರಾಣವನ್ನು ಬಿಡುವದಕ್ಕಿಂತ ಎಷ್ಟು ಸಮಯಕ್ಕೆ ಮೊದಲು ಲಕ್ಷ್ಮಣನಾಯಕನನ್ನು ಕರೆಹಿಸಿಕೊಂಡಿದ್ದರು?

ಸಂಜಿ : ದೇವರೂ ಲಕ್ಷ್ಮಣನಾಯಕರೆನ್ನುವವರು ಯಾರೂ ಬಂದಿದ್ದಿಲ್ಲಾ –ಮಾತ್ರ ಯಚ್ಚಮನಾಯಕರೊಬ್ಬರೆ ಬಂದು ಮಹಾಸ್ವಾಮಿಯವರ ಸಂಗಡ ಏನೇನೋ ಏಕಾಂತವಾಡಿದರು.

ಜಗ : ಆ ಏಕಾಂತವು ಎಷ್ಟು ಸಮಯ ನಡೆದಿತ್ತು?

ಸಂಜಿ : ಎಲ್ಲಿ ಬರಬೇಕು ಬುದ್ಧಿ ! ಒಂದರ್ಧತಾಸಿಗಿಂತಲೂ ಕಡಿಮೆಯಾಗಿರಬಹುದು.

ಜಗ : ಏನಾಡಿದರೆಂಬುದನ್ನು ನೀನು ಸ್ವಲ್ಪಾದರೂ ಕೇಳಿಕೊಳ್ಳಲಿಲ್ಲವೇ?

ಸಂಜಿ : ದೇವರು ! ಕದವಿಕ್ಕಿತ್ತು, ಅದರಲ್ಲಿ ಹಾಸಿಗೆ ಹಿಡಿದು ಮುಂದೆ ವಂದೆರಡು ತಾಸಿನಲ್ಲಿ ಸಾಯತಕ್ಕ ಮಹಾರಾಜರ ಮಾತುಗಳು ಹೊರಗಿದ್ದವಳಿಗೆ ಹೇಗೆ ಕೇಳಿಸ್ಯಾವು.

ಜಗ : ಹೋಗಲಿ! ಲಕ್ಷ್ಮಣನಾಯಕನ ಮಾತುಗಳಾದರೂ ನಿನಗೆ ಕೇಳಿಸಲಿಲ್ಲವೇ?

ಸಂಜಿ : ದೇವರು? ಲಕ್ಷ್ಮಣನಾಯಕನೆಂದರೆ ನನಗೆ ಬಹು ದಿಗಿಲಾಗುವದಿಲ್ಲಾ

ಜಗ : ಆಗಲಿ! ಯಚ್ಚಮನಾಯಕನೇನೆಂದನು?

ಸಂಜಿ : ಅದಾದರೂ ಸರಿಯಾಗಿ ಕೇಳುತ್ತಿದ್ದಿಲ್ಲ. ಆದರೂ ಮಧ್ಯ ಮಧ್ಯ ಸ್ವಲ್ಪು ಗಟ್ಟಿಯಾಗಿ, ಪ್ರಾಣವಿರುವತನಕ ಕರ್ನಾಟಕ ಸಿಂಹಾಸನದ ಮರ್ಯಾದೆಯನ್ನು ಕಾಪಾಡುವೆನೆಂದು ಹೇಳಿದರು! ಅದಾವ ಕಾರಣದಿಂದಲೋ ನಾನು ತಿಳಿಯೆ.

ಜಗ : ಆಗಲಿ ನೀನು ನಡೆ! ಬಾಗಿಲನ್ನು ಮುಂದಕ್ಕೆ ಮಾಡಿಕೊಂಡು ಹೋಗು! ಮಗೂ ಬಾಯಮ್ಮ? ನಿಸ್ಸಂದೇಹವಾಗಿ ನಿನ್ನ ಗಂಡನು ನಿನ್ನನ್ನು ವಂಚಿಸಿದ್ದಾನೆ! ತಾನು ಸಾಯುವುದಲ್ಲದೇ ನಿನ್ನ ಕುತ್ತಿಗೆಯನ್ನು ಸಹ ಕೊಯ್ದು ಬಿಟ್ಟಿದ್ದಾನೆ! ಧೂರ್ತನು, ಕೊನೆಯವರೆಗೂ ತನ್ನ ಆಲೋಚನೆಯನ್ನು ತಿಳಿಯಗೊಡಲಿಲ್ಲವಲ್ಲಾ!

**ನಂ.೨ ರಾಗ – ದುಗಾ, ತಾಳ – ತ್ರಿಪಟ**

ಪದ ॥ ಖಲನವನುಗ್ಯೆದ ಘನ ಮೋಸ। ಸುಲಭದಿತಾ ನಿನಗೆ ಸುಕುಮಾರೆ॥
ಸಲೆ ಮಾಯಾ ತೋರಿ ಕೊನಗೆ ತಾನು ಘನಮೋಸ ॥ ಪಲ್ಲ ॥
ಗರಲ ಹೃದಯ ತಾ ಸುರಿಸುತೆ ಸವಿನುಡಿ
ಕೊರಳನ್ನು ಕೊಯ್ದು ಕೊನೆಗೆ ಭೋ ತಾಯೇ ॥ ೧ ॥

ಬಾಯ : ಸರೆ! ಚಿಕ್ಕರಾಯನ ಲಗ್ನದ ವಿಚಾರವನ್ನು ಮುಂದಕ್ಕೆ ಹಾಕುತ್ತ ಹೋದುದರ ಇಂಗಿತವು ಈಗ್ಗೆ ಬೈಲಾಯಿತು!

ಜಗ : ಚಿಕ್ಕರಾಯನ ಲಗ್ನದ ವಿಚಾರವನ್ನು ಸಹ ಮಾಡಿದ್ದೇನೆ?

ಬಾಯ : ಅಹುದು. ಅವನ ಸಲುವಾಗಿ ತಮ್ಮ ಸೋದರ ಸೊಸೆ, ಓಬಳರಾಯನ ಮಗಳನ್ನು ತೆಗೆದಿದ್ದರು.

ಜಗ : ಅಹಹ ಯಂತಹ ಮೋಸಗಾರನು! ನಿನ್ನ ಮುಖದ ಮೇಲೆ ಕೈ ಎಳೆಯುವದಕ್ಕಾಗಿ ಎಷ್ಟು ಸವಿ ಸವಿ ಮಾತುಗಳನ್ನಾಡಿರುವನು!

ಡಂಗುರದವ : (ತೆರೆ) ಪೌರವರೆ! ಕೇಳಿ ಕೇಳಿ! ಕರ್ನಾಟಕ ಸಿಂಹಾಸನಾಧಿಕಾರಿಗಳು ದಿವಂಗತ ಶ್ರೀ ಮದ್ ವೆಂಕಟಪತಿರಾಯರ ಬಂಧುಗಳು ಕುಮಾರರಾದ ಶ್ರೀ ರಂಗರಾಯರೂ! ಚಿಕ್ಕರಾಯರಲ್ಲವೆಂದು ರಾಜಶಾಸನವೂ!

| | |
|---|---|
| **ಬಾಯ :** | ಏನು ಪಟ್ಟಬಾಧ್ಯನು ಚಿಕ್ಕರಾಯನಲ್ಲಾ! ಶ್ರೀ ರಂಗರಾಯನೇ |
| **ಜಗ :** | ಯಾರಲ್ಲಿ? |
| **ದೂತ :** | ಬುದ್ಧೀ ಎನಪ್ಪಣೆ? |
| **ಜಗ :** | ಆ ಡಂಗುರದವನ ಕಿವಿಗಳನ್ನು ಹಿಡಿದೆಳಿದು ತನ್ನಿ! (ಹೋಗುವ) ಎಲೇ? ಲಕ್ಷ್ಮಣನಾಯಕ? ಈಗಾಗಲೇ ನೀನು ನಿನ್ನಾಟವನ್ನು ಹೂಡಿದಿಯೇನು? ಬಾಯಮ್ಮ ಚಿಕ್ಕರಾಯರಿಗೆ ಯಾರೂ ದಿಕ್ಕಿಲ್ಲವೆಂದು ತಿಳಿದಿರುವೆಯಾ? ಅವರಿಗೆ ಈ ಜಗದೇಕವೀರನಾದ ಜಗದೇವ ರಾಯನ ಬೆಂಬಲವಿದ್ದದ್ದು ನಿನಗೆ ಗೊತ್ತಾಗಲಿಲ್ಲವೇ? ಮಡ್ಡು ತಲೆಯುವನೇ ! ಚಿಕ್ಕರಾಯನ ಬಾಧ್ಯತೆಯನ್ನು ಅಲ್ಲಗಳಿಯುವಿಯಾ? ಹಾಗಾಗಬೇಕಾದರೆ ಅದು ನಿನ್ನ ತಲೆಯ ಸಂಚಕಾರವನ್ನು ತೆಗೆದುಕೊಳ್ಳದೇ ಬಿಡುವುದೇ? |
| **ದೂತ :** | ಜೀಯಾ? ಇದೋ ಇವನೇ ಆ ಡಂಗುರದವನು! |
| **ಜಗ :** | ಚೋರಾ! |
| **ಡಂಗು :** | ಬುದ್ಧೀ ನಾನು ಬಡವನು. ನಿರಪರಾಧಿಯು!! |
| **ಬಾಯ :** | (ಅಣಕಿಸಿ) ಬುದ್ಧಿ ! ಬಡವನು ನಿರಪರಾಧಿಯು!! ಇವನ ಕಣ್ಣುಗಳನ್ನು ಕೀಳಿ!! |
| **ಡಂಗು :** | ದೇವರು? ನಿಮ್ಮ ಕಾಲಿಗೆರಗುವೆನು ! ನಾನು ನಿರಪರಾಧಿಯು ! |
| **ಜಗ :** | ಎನೆಂದು ಡಂಗರವನ್ನು ಸಾರಿದೆ? ಚೋರಾ! ಹೇಳು ! ಹೇಳು ! ಎನೆಂದು ಡಂಗುವನು ಸಾರಿದೆ? |
| **ಡಂಗು :** | ಬುದ್ಧಿ ! ನಾನು ಬಡವನು. ನನ್ನನ್ನು ಕಾಪಾಡಬೇಕು ! ನಾನು ನಿರಪರಾಧಿಯು! |
| **ಬಾಯ :** | ಯಲೋ! ರಾಜದ್ರೋಹಿ! |
| **ಡಂಗು :** | ಬುದ್ಧೀ! ನಾನು ರಾಜದ್ರೋಹಿಯಲ್ಲಾ. ಇದ್ದರೆ ಆ ಯಚ್ಚಮನಾಯಕ ಸರ್ದಾರರಿರಬಹುದು! |
| **ಜಗ :** | ಹೀಗೆ ಡಂಗುರವನ್ನು ಹೊಡೆಸುವುದಕ್ಕೆ ಅವನಿಗೇನಧಿಕಾರವೋ? |

**ಡಂಗು :** ಅದಾರಿಗೆ ಗೊತ್ತು ದೇವರು? ಅವರನ್ನೇ ಕರೆಯಿಸಿ ಕೇಳಿದರೆ ಪರಿಷ್ಕಾರವಾಗುವುದು.

**ಬಾಯ :** ಆಡಬಾರದ ಮಾತುಗಳನ್ನಾಡಿದ ತಪ್ಪಿಗಾಗಿ ಇವನ ಮುಖಕೆ ಸುಣ್ಣ ಜಾಜವನ್ನು ಬಳೆದು ಬಿಡಿ! ಹೂಂ! ಈಗಿಂದೀಗಲೇ!

**ಜಗ :** ಸ್ವಲ್ಪು ತಾಳು ಬಾಯಮ್ಮ! ಹೇಗಾದರೂ ಇವನು ನಿರಪರಾಧಿಯು!!

**ಬಾಯ :** ಅದೇನಿಲ್ಲಾ, ಬಳಿಯಿರಿ ಸುಣ್ಣ ಜಾಜವನ್ನು! ಹೋಗಿ ತೋರಿಸಲಿ, ಹಾಗೆ ಡಂಗುರವನ್ನು ಸಾರಲಿಕ್ಕೆ ಅಪ್ಪಣೆಯನ್ನು ಕೊಟ್ಟವರಿಗೆ ! (ಸೇವಕರು ಬರುವರು. ಅವನ ಮುಖಕ್ಕೆ ಸುಣ್ಣ ಜಾಜವನ್ನು ಬಳಿಯುವರು)

**ನಂ. ೩ ರಾಗ – ಬಹಾರತರಾನ ತಾಳ – ತ್ರಿವಟ**

ಪದ ॥ ಸುರಿದಿಹುದಲನ ಜಠರದೆ ! ದುರುಳನ ನುಡಿಯಾ। ಕೇಳುತಲೆ।
ಪಿತನೆ। ದೇಹಾದಂತ್ಯ ದಹಿಸಿ। ಪರವಶವಾದುದು ಮತಿಮಮ।
ಧರೆಯೊಳು ತಿಮಿರವು। ಮುಸುಕಿದುದರರೆ। ಸಹಿಸೆ ಸಹಿಸೆ ॥ ಪ ॥
ನಂಪತಿ ಕುಮನ ಪಟ್ಟ ಬಾಧ್ಯತೆ। ನಿರಭಯತನದಲಿ ನಿರಾಕ
ರಿಸುವ। ನರಾಧಮರ ಚರ್ಮವ ಸುಲಿದನಲದೆ ತಿರುಹಿ ತಿರುಹಿ।
ಸುಡಿಸಲು ಬೇಕೀ ತಕ್ಷಣ ॥ ೧ ॥

**ಬಾಯ :** ಹೋಗು! ನಿನಗೆ ಅಪ್ಪಣೆಯನ್ನಿತ್ತವರ ಯದುರು ಹೀಗೆಯೇ ಹೋಗಿ ನಿಲ್ಲು! ಮಧ್ಯದಲ್ಲಿ ಅಳಿಸಿಕೊಂಡು ಹೋದಿಯಾದರೆ ಶೂಲಕ್ಕೇರ ಲ್ಪಟ್ಟೀಯಾ ಭದ್ರಾ!! ನಡೆ ಹೊರಡು.

**ಜಗ :** ಬಾಯವ್ವಾ, ಮಸ್ತಕವನ್ನು ಸ್ವಲ್ಪ ಶಾಂತವಾಗಿರಿಸು; ಇದು ಅಗಾಧವಾದ ರಾಜಕಾರಣದಾಟವಾಗಿದೆ; ಮನಬಲ್ಲಂತೆ ವರ್ತಿಸಿದರೆ ಕಾರ್ಯಹಾನಿ ಯಾದೀತು!

**ಬಾಯ :** ಅಪ್ಪಾ, ಲಕ್ಷ್ಮಣನಾಯಕನು ಯುವರಾಜ ಚಿಕ್ಕರಾಯನ ವಿಷಯದಲ್ಲಿ ಇಷ್ಟು ಔದ್ಧತ್ಯದಿಂದ ನಡೆಯಬಹುದೇ? ತಾನಂದರೇನು, ಯಃಕಶ್ಚಿತ ಸರದಾರನು! ಭಾವೀಮಹಾರಾಜರ ವಿಷಯದಲ್ಲಿ ದ್ರೋಹವೇ?

**ಜಗ :** ಅವನ ವರ್ತನವು ನಿನಗಿಂತಲೂ ನೂರ್ಮಡಿ ನನ್ನಲ್ಲಿ ಕೋಪವನ್ನುಂಟು

ಮಾಡಿದೆ ಬಲ್ಲಿಯಾ? ಆದರೆ ಅದನ್ನೀಗ ಹೊರ ಕೆಡಹುದು ಜಾಣತನವಲ್ಲಾ. ಯಾಕಂದರೆ ನೀನು ಭಾವಿಸಿದಂತೆ ಲಕ್ಷ್ಮಣನಾಯಕನು ಯಃಕಶ್ಚಿತ ಸರದಾರನಲ್ಲಾ. ವೀರಾಧಿವೀರನು ಮಹಾರಾಜಕಾರಣ ಪಟು! ಅಲ್ಲದೇ, ಕರ್ನಾಟಕ ಸಿಂಹಾಸನದ ಏಕ ನಿಷ್ಠ ಸೇವಕನು! ಅಂಥವನಗೂಡ ಪ್ರಕಾಶದಾದ ವೈರವು ತರವಲ್ಲ. ಉಪಾಯದಿಂದ ಅವನನ್ನು ನಮ್ಮವನ್ನಾಗಿ ಮಾಡಿಕೊಳ್ಳುವದೇ ಜಾಣತನವು. ಶಿಟ್ಟಿನ ಭರದಲ್ಲಿ ಈಗ್ಗೆ ನೀನು ಆ ಬಡಪಾಯಿಯಾದ ಡಂಗುರದವನಿಗೆ ವಿಧಿಸಿದ ಶಿಕ್ಷೆಯು ಕೂಡಾ ನನಗೆ ಸಮ್ಮತವಾಗಲಿಲ್ಲಾ. ಇರಲಿ; ಆದದ್ದಾಗಿದೆಃ ಕಾರ್ಯವು ಕೈಗೂಡುವ ತನಕ ಸೈರಣೆಯಿರಲಿ; ಒಂದು ಸಮಯ ಲಕ್ಷ್ಮಣನಾಯಕನು ಸ್ವಪಕ್ಷ ಮಂಡನಕ್ಕೆ, ಆವೇಶದ ಭರದಲ್ಲಿ ಸ್ವಲ್ಪು ಹೆಚ್ಚುಕಡಿಮೆಯಾಡಿದರೆ ಸಹಿಸಬೇಕು ಮತ್ತೊಂದು ಸೂಚನೆ,

ಚಿಕ್ಕರಾಯನನ್ನು ಯಾರ ಜೊತೆಯಲ್ಲಿಯೂ ಎಲ್ಲಿಯೂ ಕಳುಹಿಸ ಬೇಡಾ; ಒಂದು ಸಮಯ ನಾನಿಲ್ಲದಾಗ್ಗೆ ಯಾವ ಸರದಾರರಾಗಲೀ ಅಥವಾ ಮಾಂಡಲೀಕ ರಾಜರಾರಾದರೂ ಆತನನ್ನು ಕಾಣಲು ಬಂದರೆ ಏನಾದರೊಂದು ನೆವ ಹೇಳಿ ಕಳುಹಿಸು. ಅವರ ಭೆಟ್ಟಿಯಾಗ ಗೊಡಬೇಡಾ; ಇದೋ ಮತ್ತೊಂದು ಸೂಚನೆ !ತುಂಗಭದ್ರೆಯ ತಟಾಕದಲ್ಲಿ ಅಲೆಯುವದೆಂದರೆ ಅವನಿಗೆ ಬಹೂ ಪ್ರೇಮ, ಆ ಸಮಯದಲ್ಲಿ ವಿಚಕ್ಷಣೆಯರಾದ ಕೆಲ ಜನ ದಾಸದಾಸಿಯರು ಅವನ ಜತೆಯಲ್ಲಿರಲಿ, ಈ ವಿಷಯದಲ್ಲಿ ನೀನು ಸಹ ಯಾರಲ್ಲಿಯೂ ಹೆಚ್ಚಿನ ಮಾತುಗಳನ್ನಾಡಬೇಡಾ? ಇರಲಿ, ನನಗೆ ಬಹೂ ವಿಚಾರಮಾಡ ತಕ್ಕದ್ದಿದೆ! ನೀನು ಹೋಗು ನಿಶ್ಚಿಂತಳಾಗಿರು, ಮಗೂ! ನನ್ನ ಜೀವ ಮಾನವಿರುವತನಕ ನಿನಗೇನು ಬಂದಿದೆ? ಹೋಗು. ನಾನು ಓಲಗಕ್ಕೆ ಹೋಗುವೆನು!!

**ನಂ. ೪ ರಾಗ – ದೇಸಕಾರ ತಾಳ – ತ್ರಿವಟ**

ಪದ ॥ ಮದದಿಂದರೇ। ವಿನಶೀಲೆ॥ ಮೊದಲ ಪತಿ ವಿಯೋಗದಿ ಬಳಲಿ
ದವಳು। ನೀ ತನಯೇ ॥ ಪಲ್ಲ ॥
ಆರಭಯವು ಕುವರಿಯೆ ನಿನಗ
ಹುದೇ! ಭೂಮಿಯೊಳ್ ನಾ ಜೀವಿಸಿರುವಾಗಲೇ!
ತವಜನಕನು ವಿಮಲೇ ॥ ೧ ॥

(ಹೋಗುವರು) ಬಿದಿ–

**ಗುರು :** ಇದೇನು! ವಿಚಿತ್ರವಾದ ಡಂಗುರವು ! ಕರ್ನಾಟಕ ಸಿಂಹಾಸನಕ್ಕೆ ಪಟ್ಟಭಾದ್ಯನು ಶ್ರೀರಂಗರಾಯನು ಹೇಗಾಗುವನು ? ದಿವಂಗತ ಶ್ರೀಮದ್ ವೆಂಕಟಪತಿ ಮಹಾರಾಜರವರ ಕುಮಾರನಾದ ಚಿಕ್ಕರಾಯ ನಲ್ಲವೇ? ಆತನೇ ಪಟ್ಟಕ್ಕೆ ಭಾದ್ಯನಲ್ಲವೇ? ಹೀಗಿರಲು ರಾಜಶಾಸನ ವೆಂದು ಮೃತಮಹಾಜರ ತಮ್ಮನ ಮಗನಾದ ಶ್ರೀರಂಗರಾಯನ ಹೆಸರಿನಲ್ಲಿ ಹೇಗೆ ಡಂಗುರಿಸಲ್ಪಡುತ್ತಿರುವದು! ಇದೇನೋ ಉತ್ಪಾತ ಲಕ್ಷಣವಿದೆ. ರಾಜ್ಯಕಾರಭಾರದಲ್ಲಿ ಇಂತಹ ಅನಾಹುತ ಕ್ರಾಂತಿಯ ಸೂಚನೆಯು ರಾಜಗುರುಗಳಾದ ನಮಗೆ ಸಹ ತಿಳಿಯ ಬಾರದೋ? ನಾವೇನು ರಾಜರಿಗೆ ಸಂಬಂಧಪಟ್ಟವರೆಲ್ಲವೋ ? ಮಹಾರಾಜರು ಸ್ವರ್ಗವಾಸಿಗಳಾದರೇನಾಯಿತು ! ಕೇವಲ ಅನಾಯಕತ್ವವೇ ಪ್ರಾರಂಭವಾಗಬೇಕೇನು? ಯಾರದು? ರಾಜ ಗೋಪಾಲಕೃಷ್ಣಾ ಆ ಡಂಗುರದವನು ಸಿಕ್ಕನೆ?

**ರಾಜಗೊ :** ಮಹಾಸ್ವಾಮಿ ಆತನು ಬಹೂ ದೂರ ಹೋಗಿದ್ದನು. ಆದರೂ ತಾವು ಅವನನ್ನು ಹಿಡಿದುಕೊಂಡು ಬರಲೇಬೇಕೆಂದು ಆಜ್ಞಾಪಿಸಿದ್ದಿರಿ. ಅದಕ್ಕಾಗಿ ನಾನವನನ್ನು ಹಿಂಬಾಲಿಸಿದೆನು. ಮಹಾರಾಣಿಯರ ಮಂದಿರದ ಎಡಬಲದಲ್ಲಿ ಗುಪ್ತನಾದನು. ಆಗ್ಗೆ ನಾನು ಭ್ರಾಂತನಾಗಿ ಹುಡುಕಾಡುವಷ್ಟರಲ್ಲಿ ಆವಸ್ಥಾಂತರವನ್ನು ಹೊಂದಿ ಎದುರು ಬಂದನು. ಹಾಗೇ ಅವನನ್ನು ಕರತಂದಿದ್ದೇನೆ ಚಿತ್ತೈಸಬೇಕು. ಎಲೋ ಬಾರೋ? ಬಾರೋ ಹೀಗೆ !

**ಡಂಗು :** (ಅಳುವ ಸ್ವರದಿಂದ ನಡಗುತ್ತ) ಮಹಾಸ್ವಾಮಿ! ನಾನು ನಿರಪರಾಧಿಯು

**ಗುರು :** ಇದೇನು! ಇವನು ಹೋಳಿ ಹಬ್ಬದ ವೇಷದಲ್ಲಿ ಹೊರಟುಬಿಟ್ಟಿದ್ದಾನೆ! ಎಲೋ? ಇದೇನೋ?

**ಡಂಗು :** ಮಹಾಸ್ವಾಮೀ? ಪಾದಕ್ಕೆರಗುವನು. ನಾನು ನಿರಪರಾಧಿಯು.

**ಗುರು :** ಇದ್ದಿರಬಹುದು ನಿರಪರಾಧಿಯು. ಅದಿರಲಿ ಈ ವೇಷವೇನೋ? ಏನೆಂದು ಡಂಗುರವನ್ನು ಸಾರಿದೆ?

**ಡಂಗು :** ಹಾಗೆ ಹೇಳಿದ್ದಕ್ಕಾಗಿಯೇ ಈ ಅವಸ್ಥೆಯಾಗಿದೆ ದೇವರು!

**ಗುರು :** ಪರಿಷ್ಕಾರವಾಗಿ ಹೇಳು! ಭಯಪಡಬೇಡಾ!

**ಡಂಗು :** ದೇವರು ಯಚ್ಚಮನಾಯಕರ ಹೇಳಿಕಿಪ್ರಕಾರ!

**ಗುರು :** ಆದಾರು ಯಚ್ಚಮನಾಯಕರು?

**ಡಂಗು :** ಅವರು ಹಿರೇ ಸರ್ದಾರರು, ಕದನ ಕಂಠೀರವರು!

**ಗುರು :** ಓಹೋ! ಕದನ ಕಂಠೀರವರಾದ ಲಕ್ಷ್ಮಣನಾಯಕರಿಗೆ ಯಚ್ಚಮ ನಾಯ್ಕರೆಂದು ಹೇಳುವಿಯಾ?

**ಡಂಗು :** ನಾನು ಒಬ್ಬನೇ ಏಕೆ ಬುದ್ದಿ? ದೇಶದ ಮೋಟು ಮಂದಿಯೆಲ್ಲಾ ಹೀಗೆ ಹೇಳುವರು ! ಅವರು ನಮ್ಮ ಮೇಲಿನವರಾದ ನಗರ ಕೊತವಾಲರ ಎದುರಿನಲ್ಲಿದ್ದಾಗಲೇ ಹೀಗೆ ಡಂಗುರವನ್ನು ಈಗಿಂದೀಗಲೇ ಸಾರಿಬಾರೆಂದು ಆಜ್ಞಾಪಿಸಿದರು ! ಅದರಲ್ಲಿ ನಾನು ಮಾಡಿದ ತಪ್ಪೇನು ಬುದ್ಧಿ?

**ಗುರು :** ಅದಿರಲಿ, ಡಂಗುರದ ವಾಕ್ಯವೇನು?

**ಡಂಗು :** ಅದನ್ನು ಹೇಳುದಕ್ಕೆ ಭಯವಾಗುವುದು ದೇವರೆ?

**ಗುರು :** ಅಭಯವಿದೆ. ಹೇಳೋ?

**ಡಂಗು :** ಯಚ್ಚಮನಾಯಕರು "ಕರ್ನಾಟಕ ಸಿಂಹಾಸನಾಧಿಕಾರಿಗಳು ಚಿಕ್ಕರಾಯರಲ್ಲಾ ಶ್ರೀರಂಗರಾಯರೇ ಹೀಗೆ ರಾಜಶಾಸನವಿದೆ" ಯೆಂದು ಡಂಗುರವನ್ನು ಸಾರುವುದಕ್ಕೆ ಆಜ್ಞಾಪಿಸಿದರು. ಅದರಂತೇ ನಾನು ಪಟ್ಟಣದ ಬೀದಿಯಲ್ಲಿ ಹೇಳುತ್ತಿರುವಾಗ್ಗೆ ಹಿರೇ ಮಹಾರಾಜರ ಮಾವಂದಿರಾದ ಜಗ್ಗರಾಯರು ನನ್ನನ್ನು ಎಳೆತರಿಸಿದರು ಹಾಗೆ ಡಂಗುರವನ್ನು ಹೇಳಿದಕ್ಕಾಗಿ ಮಹಾರಾಣಿಯವರಾದ ಬಾಯಮ್ಮ ದೇವಿಯವರು ನನ್ನ ಮುಖಕ್ಕೆ ಸುಣ್ಣ ಜಾಜವನ್ನು ಬಳಸಿ ಯಚ್ಚಮ ನಾಯ್ಕರಿಗೆ ತೋರಿಸುವುದಕ್ಕಾಗಿ ಆಜ್ಞಾಪಿಸಿದ್ದಾರೆ!

**ಗುರು :** ಇರಬಹುದು! ಇದೇನು ಸಾಮಾನ್ಯ ಅಪರಾಧವೇ?

**ಡಂಗು :** ಇದರಲ್ಲಿ ನಾನು ಮಾಡಿದ ತಪ್ಪೇನು ಬುದ್ಧಿ?

**ಗುರು :** ಎಲೋ ನೀನು ತಪ್ಪುಗಾರನೂ ಅಲ್ಲ ಮತ್ತೂ ನಿನಗೆ ಶಿಕ್ಷೆಯಾದರೂ ಆಗಿಲ್ಲ. ನೀನು ನಿಮಿತ್ಯ ಮಾತ್ರನು ಆದರೆ ಯಾರು ನಿನಗೆ ಹಾಗೆ ಆಜ್ಞೆಯನ್ನಿತ್ತಿರುವರೋ ಆ ಲಕ್ಷ್ಮಣ ನಾಯಕರ ಮೋರೆಗೇನೇ ಸುಣ್ಣ ಜಾಜವನ್ನು ಬಳೆದಿದ್ದಾರೆ ಹೋಗು. ಹೋಗು ಹೀಗೆಯೇ

ಅವನ ಮುಂದೆ ಹೋಗಿ ನಿಲ್ಲು ನಡೆ (ಹೋಗುವ) ರಾಜಗೋಪಾಲಕೃಷ್ಣಾ ತೀವ್ರ ಸ್ನಾನದ ಸಿದ್ಧತೆಯನ್ನು ಮಾಡು. ಬಹುಶಃ ತೀವ್ರವೇ ನನಗೆ ರಾಜಸಭೆಯನ್ನು ಸೇರಬೇಕಾದೀತು. ಪಟ್ಟಬಾಧ್ಯನಾದ ಚಿಕ್ಕರಾಯನ ಬಾಧ್ಯತೆಗೆ ಬಾದಕವನ್ನು ತರುವ ಅದಾವ ರಾಜಶಾಸನವನ್ನು ಲಕ್ಷ್ಮಣ ನಾಯಕನು ಪಡೆದಿರುವನು! ಇದೇನೋ ಒಂದು ಗೂಢವಾದ ತಂತ್ರವಾಗಿದೆ! ಚಿಕ್ಕರಾಯನ ಬಾಧ್ಯತೆಯನ್ನು ಅಲ್ಲಗಳೆಯಬೇಕಾದರೆ ಈ ವಿಜಯನಗರವೇ ರಣಮಂಡಲವಾದೀತು ರಕ್ತದ ಕಾವಲಿಗಳು ಹರಿದಾವು! ತುಂಗಭದ್ರಾ ಒಲವು ಸಮುದ್ರವನ್ನು ಸೇರುವತನಕ ರಕ್ತ ರಕ್ತಮಯವಾಗಿ ಹೋದಿತು!

**ನಂ. ೫ ರಾಗ – ಬಿಹಾಗ, ತಾಳ – ಯಕ್ಕಾ**

ಪದ ॥ ಏನಿರುವದೋ ವಿರಿಂಚಿಯ ವಿಚಾರ।
ಅದೇನೇನೂ ಗೋಚರಿಸದು॥
ಮಾನವಗೆ ಮನಧಿ ಜನಿಸತಿಹುದು ಭಯವು ಘನತರದೇ ॥ ಪಲ್ಲ॥
ಮೃತಕ್ಷಿತಿಪತಿಸುತನಿಗಲ್ಲದೇ॥ ಮತ್ತಾರಿಗರಸೊತ್ತಿಗೆ ಶಿಗುವುದು॥
ವಿಹಿತವೇ ಅತಿ ಅನುಚಿತವೆನಿಸುವದದು. ॥ ೧ ॥

**ರಾಜಗೊ :** ಬುದ್ಧೀ! ಸ್ನಾನಕ್ಕೆ ದಯಮಾಡಿಸಬೇಕು।

**ಗುರು :** ಹಾಗಾದರೆ ನಡೆ! ತೀವ್ರ!!

**ಪ್ರವೇಶ :** ಲಕ್ಷ್ಮಣನಾಯಕಾ । ಬೀದಿ

**ಲಕ್ಷ್ಮ :** ಇದೇ ಖಡ್ಗ! ರಾಜಶಾಸನಕ್ಕೆ ಭಂಗವನ್ನುಂಟು ಮಾಡುವ ಆ ಜಗದೇವನ ರುಂಡವನ್ನು ಹಾರಿಸುವದು ಇದೇ ಖಡ್ಗ! ಪವಿತ್ರವಾದ ಕರ್ನಾಟಕ ಸಿಂಹಾಸನದ ಅಪಮಾನವನ್ನು ಮಾಡಲುದ್ಯುಕ್ತನಾದ ಜಗದೇವ ಮತ್ತು ಆತನ ಅನುಯಾಯಿಗಳ ರಕ್ತವನ್ನು ಗಟಾಗಟಾ ಕುಡಿದು ಢೇಕರಿಸುವದಿದೇ ಖಡ್ಗ ! ಕರ್ನಾಟಕ ಭೂಮಾತೆಯ ಹಿತವನ್ನು ಹಾಳು ಮಾಡಬೇಕೆನ್ನುವ ಸ್ವಾರ್ಥಿಗಳ ಹೊಟ್ಟೆಯನ್ನು ಹರಿದುಬಡಿಯುವದಿದೇ ಖಡ್ಗ! ಸ್ವರ್ಗಸ್ಥ ಮಾಹಾರಾಜರ ಕೋರಿಕೆಯನ್ನು ನೆರವೇರಿಸಿ ಅವರ ಆತ್ಮಕ್ಕೆ ಶಾಂತಿಯನ್ನೀಯುವದಿದೇ ಖಡ್ಗ! ವಟ್ಟಿನಲ್ಲಿ ಈ ಖಡ್ಗದೇವಿಯಿಂದ ಮುಂದೆ ಅನೇಕಾನೇಕ ಕಾರ್ಯಗಳಾಗತಕ್ಕವಿವೆ ದೇವಿ!

**ನಂ. ೬ ದಕ್ಷಿಣಾದಿ ಮಟ್ಟು. ರಾಗ – ಕಾಂಬೋದಿ ತಾಳ – ದೀಪಚಂದಿ**

ಪದ ॥ ಯನಗೇ ಅನುದಿನದಿ ನೆರವಾಗೆ। ಘನದುರಿತಗೈಯುವ ಗನು॥
ಜಗುಣದಘ ಕರ್ಮರತ। ಮಾನವರನಳಿಯುವ ಕಾರ್ಯದಲಿ ॥ಪ॥
ಸಾಧುಜನ ಸಂರಕ್ಷಣೆಗೆ ಜಗದಿ। ಮೆರದಿ। ಯೋಧರಾಕರದಲ್ಲಿ॥
ಕುಜನರ ವಧೆಗೆಸಂತತ ಖಡ್ಗಳೇ ॥ ೧
॥ಕವನದಲ್ಲಿ ಕಡು॥
ಗಲಿಯ ತರೆದಿರುವಾ ಆಸಿಯೇ। ಅಥಮ ವೀರರ ಎದೆಯ ॥
ಬಿರಿಸುವ। ಚದುರೆ ನಮಿಸುವೆ। ಶತಸಹಾ ॥ ೨ ॥

**ವೆಂಕಟಾದ್ರಿ :** ಇದೇನು ಲಕ್ಷ್ಮಣನಾಯಕಾ? ನಿನ್ನ ಖಡ್ಗವು ವರೆಯಿಂದ ಹೊರ ಬಿದ್ದಿದೆ!

**ಲಕ್ಷ್ಮ :** ಯಾರು? ವೆಂಕಟಾದ್ರಿ?

**ವೆಂಕ :** ಅಹುದು, ನಾನೇ. ಇದೇನು? ನಿನ್ನ ಖಡ್ಗವು ವರೆಯಿಂದ ಹೊರಬಿದ್ದಿದೆ!

**ಲಕ್ಷ್ಮ :** ಅಹುದು, ಅದಕ್ಕಂತಹ ಪ್ರಸಂಗವೇ ಬಂದಿದೆ. ನನ್ನೊಬ್ಬನ ಖಡ್ಗವೇಕೆ? ಕರ್ನಾಟಕ ಸಿಂಹಾಸನ ಪಾವಿತ್ರ್ಯವನ್ನು ಕಾಪಾಡಲ ಪೇಕ್ಷಿಸುವ ಸಕಲ ವೀರಾನಾಯಕರ ಖಡ್ಗಗಳಿಗೂ ಇದೇ ಪ್ರಸಂಗವಿದೆ.

**ವೆಂಕ :** ಹಾಗಾಂದರೆ?

**ಲಕ್ಷ್ಮ :** ಕರ್ನಾಟಕ ಸಿಂಹಾಸನದ–ಪಾವಿತ್ರ್ಯವನ್ನು–ಕಾಪಾಡಲಪೇಕ್ಷಿಸುವ ಸಕಲ ವೀರನಾಯಕರ ಖಡ್ಗಳಿಗೂ ಇದೇ ಪ್ರಸಂಗವಿದೆ!

**ವೆಂಕ :** ಅಂತಹ ಪ್ರಸಂಗವೇನು ನಾಯಕ?

**ಲಕ್ಷ್ಮ :** ರಾಜಶಾಸನದ ಡಂಗುರವನ್ನು ನೀನು ಕೇಳಿದೆಯಷ್ಟೇ?

**ವೆಂಕ :** ಕೇಳಿದೆನು. ನಿನ್ನಾಜ್ಞೆಯಿಂದಲೇ ಆ ಡಂಗುರವನು ಹಾಗೆ ಸಾರುತ್ತಿರುವೆನೆಂದು ಹೇಳಿದನು. ಅಂತಹ ವಿಪರೀತ ವಾರ್ತೆಯ ಡಂಗುರವನ್ನು ಸಾರಿಸುವುದಕ್ಕೆ ನಿನಗೆ ಆಧಾರವೇನು?

**ಲಕ್ಷ್ಮ :** ಮಿತ್ರಾ? ವೆಂಕಟಾದ್ರಿ ಇದೊ ನೋಡು! ಇದಕ್ಕೂ ಹೆಚ್ಚಿನ ಆಧಾರವೇನು ಬೇಕು!

(ರಾಜಾಜ್ಞೆಯನ್ನು ಕೊಡುವನು! ಆತನು ಓದುವನು।

**ವೆಂಕ :** ಬಲವಾದ ಆಧಾರವು! ಆದರೆ–

**ಲಕ್ಷ್ಮ :** ಆದರೆ ಗೀದರೆ ಮೊದಲಾದ ವಿಚಾರಗಳು ಬೇಡಾ. ಆಧಾರವು ಅಹುದೋ? ಅಲ್ಲೋ? ಹೇಳು!

**ವೆಂಕ :** ನಿಃಸಂದೇಹವಾದ ಆದಾರವು!

**ಲಕ್ಷ್ಮ :** ಸಾಕು! ಅದಕ್ಕಾಗಿಯೇ ನಾನು ಹಾಗೆ ಡಂಗುರವನ್ನು ಸಾರುವದಕೆ ಆಜ್ಞಾಪಿಸಿದೆನು!

**ವೆಂಕ :** ಆದಾಯ್ತು. ಈಗ್ಗೆ ನೀನು ಇಷ್ಟು ಉತ್ತೇಜಿತನಾದುದೇಕೆ?

**ಲಕ್ಷ್ಮ :** ಇದೋ ಜಗದೇವ ಮತ್ತು ಬಾಯಮ್ಮ ಮಹಾರಾಣಿಯವರು ಸೇರಿ ರಾಜಶಾಸನವನ್ನು ಬೀರುವ ಆ ಡಂಗುರದವನ ಮುಖಕ್ಕೆ ಸುಣ್ಣ ಜಾಜವನ್ನು ಬಳಿದು ನನಗೆ ತೋರೆಸುವದಕ್ಕಾಗಿ ಹೇಳಿ ಕಳುಹಿಸಿದ್ದಾರೆ! ಹಾಗೆ ರಾಜದ್ರೋಹ ಮಾಡಿದವರನ್ನು ಎದುರಿಸುವವಕ್ಕಾಗಿಯೇ ಹೀಗೆ ಖಡ್ಗವು ವರೆಯಿಂದಾ ಹೊರಬಿದ್ದಿದೆ!

**ವೆಂಕ :** ಲಕ್ಷ್ಮಣನಾಯಕಾ, ನೀನು ಬರೆ ಸಮರ ಕಲಾವಟುವಾಗಿದ್ದರೆ ಹಾಗೆ ಮಾಡುವುದು ಸರಿಯಾಗುತ್ತಿತ್ತು. ಆದರೆ ಮಹಾ ರಾಜಕಾರಣಪಟು! ಅದೂ ಅಲ್ಲದೇ ಕರ್ನಾಟಕ ಸಿಂಹಾಸನದ ಏಕನಿಷ್ಟ ಸೇವಕನು ! ಇಂತಹ ನೀನು ಕ್ರೋಧವಶಗಾಗಿ ಮಹತ್ಕಾರ್ಯಗಳಲ್ಲಿ ತೊಂದರೆಗಳ ನ್ನುಂಟುಮಾಡಿಕೊಳ್ಳಬಹುದೇ!

**ಲಕ್ಷ್ಮ :** ಹಾಗಾದರೆ ನಾನೇನು ಮಾಡಲಿ!

**ವೆಂಕ :** ಯದ್ಯಪೀ ಮಹಾರಾಜರು ಸ್ವರ್ಗವಾಸಿಗಳಾಗಿದ್ದರೂ ಅವರ ಶಾಸನ ವನ್ನು ನಡೆಸುವಷ್ಟು ಪ್ರಧಾನಮಂಡಲವಿಲ್ಲವೇ? ನಿನ್ನ ಹತ್ತಿರವಿದ್ದದ್ದು ನಿಃಸಂದೇಹವಾಗಿ ರಾಜಶಾಸನವು ಅದನ್ನು ಸಕಲರ ಮುಂದಿರಿಸಿ ಆ ಮೇಲೆ ಪ್ರಜಾವರ್ಗಕ್ಕೆ ಶೃತಗೊಳಿಸಿದ್ದರೆ ಈ ಅನರ್ಥವಾಗುತ್ತಿತ್ತೆ? ಸ್ವಲ್ಪು ಸ್ಥಿರಚಿತ್ತನಾಗಿ ವಿಚಾರಮಾಡು..! ಪ್ರತ್ಯಕ್ಷ ಶ್ರೀಮದ್ ವೆಂಕಟಪತಿ ರಾಯರಮಕ್ಕಳಾದ ಚಿಕ್ಕರಾಯರು ಪಟ್ಟಬಾಧ್ಯರಿರುವಾಗ್ಗೆ ಮಹಾರಾಜರು ತಮ್ಮ ತಮ್ಮನ ಮಕ್ಕಳಾದ ಶ್ರೀರಂಗರಾಯರಿಗೆ ಪಟ್ಟವಾಗಬೇಕೆಂದು

ಜ್ಞಾಪಿಸಿದ ಗುಟ್ಟು ಹೊರಬೀಳಬೇಕಲ್ಲವೇ? ಯಾವದೂ ಇಲ್ಲದೆ ಸಾರಿದ ಡಂಗುರವನ್ನು ಕೇಳಿ ಮಹಾರಾಣಿಯವರು ಕ್ರೋಧಪರವಶ ರಾಗಿ ಹಾಗೆ ಡಂಗುರದವನಿಗೆ ಸುಣ್ಣಜಾಜವನ್ನು ಬಳಸಿದ್ದೇನು ದೊಡ್ಡ ತಪ್ಪಾಗಲಿಲ್ಲ ನೋಡು! ನಾನು ಹೇಳುವದು ಸಟಿಯೋ? ದಿಟವೋ?

**ಲಕ್ಷ್ಮ :** ಈ ರಾಜಶಾಸನವು ನೆರವೇರಲೇ ಬೇಕು! ಇದನ್ನು ನೆರವೇರಿಸುವದಕ್ಕೆ ನಾನು ಭುವನೇಶ್ವರಿಯ ಶಪಥವನ್ನು ಹಾಕಿಕೊಂಡಿದ್ದೇನೆ.

**ವೆಂಕ :** ರಾಜನಿಷ್ಠನಾದ ನೀನು ಹಾಗೆ ಮಾಡಿದ್ದು ಸರಿಯೆ. ಆದರೆ ಕ್ರಮವನ್ನು ತಪ್ಪಿ ನಡೆಯುಬಾರದು ನಾಯಕಾ! ಸಾಮ ಸಾಮದಾವಮಾದಿಗಳಿಂದಲ್ಲದೇ–ದಂಡಭೇದಾದಿಗಳಿಂದ ಕಾರ್ಯಾರಂಭವನ್ನು ಮಾಡಿದರೆ ತಿಳಿದವರು ನಿನಗೇನಾಂದರು ? ಲಕ್ಷ್ಮಣನಾಯಕನೇ ವೀರಾಧಿವೀರನಿದ್ದರೂ ಅದರೊಡನೆ ಬಹೂ ಕ್ರೂರನಿದ್ದಾನೆ! ಹಿಂಸ್ರ ಪಶುಗಳಂತೆ ರಕ್ತವನ್ನು ಹರಿಸುವದರಲ್ಲಿ ಅವನಿಗೆ ಬಹೂ ಪ್ರೀತಿ! ವಾಣಿಯಿಂದಾಗುವ ಕೆಲಸಕ್ಕೆ ಬಾಣಪ್ರಯೋಗವನ್ನು ಮಾಡುತ್ತಾನೆ ಹಾಗೆ ಹೀಗೆ ಎಂದಾಡಿಕೊಳ್ಳಲಿಕ್ಕಿಲ್ಲವೇ? ಜಾಣನಾದ ನೀನು ಹೀಗೆ ಅಂದಾಡಿಕೊಳ್ಳುವುದು ಅವಕಾಶವನ್ನು ಕೊಡಬಹುದೇ ? ನಮ್ಮೆಲ್ಲರ ಮುಂದಾಳುವು ಕರ್ನಾಟಕ ವೀರಲಲಾಮನು, ವಿಜಯನಗರದ ಸಿಂಹಾಸನದ– ಆಧಾರಸ್ತಂಭನಾದ ನಿನ್ನ ವಿಷಯದಲ್ಲಿ ಜನತೆಯ ದುರಾಭಿಪ್ರಾಯ ವಾಗಬಾರದೆಂದು ನಿನ್ನ ಸಂಗಡಿಗನಾದ ನಾನು ಹಂಬಲಿಸುವುದು ತಪ್ಪಾಗಲಿಕ್ಕಿಲ್ಲವಂತೇ ಹೀಗೆ ಹೇಳುತ್ತಿರುವೆನು!!

**ಲಕ್ಷ್ಮ :** ಮಿತ್ರಾ ವೆಂಕಟಾದ್ರಿ, ಸಾಯುವಕಾಲದಲ್ಲಿ ಈ ಶಾಸನವನ್ನು ಒಪ್ಪಿಸುವಾಗ್ಗೆ ಮಹಾರಾಜರು ನನ್ನಲ್ಲಿರಿಸಿದ ಆಶಾಪೂರ್ಣವಾದ ನೋಟವು ಕಣ್ಣುಮುಂದೆ ಕಟ್ಟಿದ್ದಕ್ಕೆ ಸ್ವಲ್ಪ ದುಡಿಕಿದೆನೇ! ಇರಲಿ! ಆದ ಮಾತಿಗೆ ಉಪಾಯವಿಲ್ಲ! ನಡೆ ದರ್ಬಾರಕ್ಕೆ ಸಕಲ ಸಚಿವ ಸಾಮಂತ ಸರ್ದಾರರು ಕೋವಿದರಾದ ರಾಜಗುರುಗಳು ಮತ್ತು ಇತರ ರಾಜಬಳಗದವರು ಕಲೆತಿರಬಹುದು! ಅವರ

ಎದುರಿನಲ್ಲಿಯೇ ಈ ರಾಜಶಾಸನದ ನಿಷ್ಕರ್ಷೆಯನ್ನು ಮಾಡಿಕೊಳ್ಳುವಾ! ನಡೆ!

ಪ್ರವೇಶ ದರ್ಬಾರ ಸಿಂಹಾಸನ!

ಜಗ : ಕರ್ನಾಟಕ ಸಿಂಹಾಸನದ ಕ್ಷೇಮಚಿಂತನೆಯನ್ನು ಮಾಡುವ ಪರಮ ಪೂಜ್ಯ ಗುರುಗಳೇ! ಕರ್ನಾಟಕ ಸಿಂಹಾಸನದ ಭದ್ರತೆಯನ್ನು ಕಾಪಾಡುವದಕ್ಕಾಗಿಯೂ ಅದರ ಯಶೋದುಂದುಭಿಯ ನಾದವನ್ನು ಆಸೇತು ಹಿಮಾಚಲ ಪರ್ಯಂತರ ತುಂಬಿಸಿದ ವೀರ ನಾಯಕರೇ, ಕರ್ನಾಟಕ ಸಿಂಹಾಸನಾಧೀಶ್ವರ ರಾಜಾಧಿ ರಾಜ ಶ್ರೀಮನ್ ವೆಂಕಟಪತಿ ರಾಯರು ಕೈಲಾಸವಾಸಿಗಳಾದದ್ದಕ್ಕೆ ಸಲಕರಿಗೆ ದುಃಖವಾಗಿದೆ ಎಂದು ಬೇರೆ ಹೇಳಬೇಕಾದ ಸಂದರ್ಭವಿಲ್ಲ, ಆದರೂ ಕಾಲಚಕ್ರದ ಗತಿಯನ್ನು ಲಕ್ಷಿಸಿ ಸಮಾಧಾನವನ್ನು ತಾಳಿಕೊಳ್ಳದೆ ವಿಧಿಯಿಲ್ಲ! ಪ್ರಸ್ತುತ ರಾಜಕಾರಣ ದಲ್ಲುಂಟಾದ ತೊಡಕು ತಮ್ಮೆಲ್ಲರಿಗೂ ವೇದವಾಗಿದೆ ಆದರೂ ಸಭೆಯ ಶಿಷ್ಟಾಚಾರಕ್ಕನುಸರಿಸಿ ವಿಶಾದಪಡಿಸುವೆನು. ಶ್ರೀಮದ್ ರಾಜಾಧಿರಾಜ ದಿವಂಗತ ವೆಂಕಟಪತಿರಾಯರ ಮಕ್ಕಳು ಯುವರಾಜ ಚಿಕ್ಕರಾಯರು ಮಹಾರಾಜರ ಪಶ್ಚಾತ್ ಅವರೇ ಪಟ್ಟಬಾಧ್ಯರೆಂಬ ಅಂಶವನ್ನುಒಂದು ಹಸುಮಗೂ, ಒಂದು ಹಸುಮಗುವಾದರೂ ಹೇಳಬಹುದು. ತಮ್ಮಂಥ ಕೋವಿದರು ತಮ್ಮ ವಿರುದ್ಧವಾಗಿ ಎಂದೂ ಹೇಳಲಿಕ್ಕಿಲ್ಲ ವೆನ್ನುವದು ನಿಶ್ಚಯವಾದ ಸಂಗತಿಯು ! ಆದರೆ ! ನಮ್ಮ ವೀರಾಧಿ ವೀರರೂ ಕದನಕಂಠೀರವರೂ ಪರಮರಾಜನಿಷ್ಠರಾದ ಲಕ್ಷ್ಮಣ ನಾಯ್ಕರಿಗೆ ಆದಾವುದೋ ಒಂದು ರಾಜಶಾಸನವು ಸಿಕ್ಕಿದೆಯಂತೆ ! ಅದರ ಆಧಾರದಿಂದ ಕರ್ನಾಟಕ ಸಿಂಹಾಸನಕ್ಕೆ ಸರ್ವಥೈವಬಾಧ್ಯರಲ್ಲದ ಮೃತ ಮಹಾರಾಜರ ತಮ್ಮಂದಿರ ಮಕ್ಕಳಾದ ಶ್ರೀರಂಗರಾಯರೇ ಪಟ್ಟಬಾಧ್ಯರೆಂದೂ, ಮತ್ತು ಅವರಿಗೇನೇ ಪಟ್ಟಗಟ್ಟಬೇಕೆಂದೂ ನಿಶ್ಚಯಿಸಿ ತದನುಸಾರ ಡಂಗುರವನ್ನು ಸಹಾ ಹೊಡಿಸಿಬಿಟ್ಟಿದ್ದಾರೆ ! ಕೇವಲ ಸಾರಾಸಾರ ವಿಚಾರವುಳ್ಳ ಕರ್ನಾಟಕ ಸಿಂಹಾಸನಾಭಿಮಾನಿಗಳು ಹೀಗೆ ಪೂರ್ವಾಪರ ವಿಚಾರವನ್ನು ಮಾಡದೇ ಅನ್ಯಾಯವನ್ನು ಮಾಡುವದು ಕೇವಲ ವಿಷಾದದ ಸಂಗತಿಯು ! ಅವರ ಆಲೋಚನೆಯಿಂದಾ ಮೊದಲೇ ವಿಯೋಗ ದಿಂದ ದುಖಿತರಾದ ಶ್ರೀ ಬಾಯಮ್ಮ ಮಹಾರಾಣಿಯವರಿಗಾದ

ದುಃಖವು ಹೇಳಲಸಾಧ್ಯವು! ಆದಕಾರಣ ಸಕಲರೂ ಸೇರಿ ಹಿತವಾದ ಆಲೋಚನೆಯನ್ನು ಮಾಡಬೇಕೆಂದು ವಿನಯಪೂರ್ವ ಸೂಚನೆಗಳು!!

ಲಕ್ಷ್ಮ : ಪರಮಪೂಜ್ಯ ಗುರುಗಳೇ, ವೀರನಾಯಕರೇ, ಯುವರಾಜ ಚಿಕ್ಕ ರಾಯರ ಬಾಧ್ಯತಗೆ ಭಂಗವನ್ನುಂಟುಮಾಡಬೇಕೆಂದು ನಾನಾವ ಕಾಲಕ್ಕೂ ಅಪೇಕ್ಷಿಸಿದವನಲ್ಲ! ಆದರೆ ರಾಜಾಜ್ಞೆಗೆ ಉಪಾಯವಿಲ್ಲಾ ನನ್ನ ಸ್ಥಳದಲ್ಲಿ ಮತ್ತಾವ ಸರ್ದಾರಿರುತ್ತಿದ್ದರೋ ಅವರು ಕೂಡಾ ನನ್ನ ಮಾರ್ಗವನ್ನೇ ಅನುಸರಿಸುತ್ತಿದ್ದರು!

ಜಗ : ಎಲ್ಲಿ? ನೋಡುವಾ? ತನ್ನಿ ಆ ನಿಮ್ಮ ರಾಜಶಾಸನವೇನಿದೆ?

ಲಕ್ಷ್ಮ : ಪ್ರತಿವಾದಿಯ ಪಕ್ಷದವರಾದ ತಮ್ಮ ವಶದಲ್ಲಿ ಅದನ್ನು ಕೊಡಲಿಕ್ಕೆ ಬರುವಂತಿಲ್ಲ. ತ್ರಯಸ್ಥರಲ್ಲಿ ಮುಖ್ಯರಾದ ರಾಜಗುರುಗಳಿದ್ದಾರೆ ! ಅವರ ಸ್ವಾಧೀನ ಪಡಿಸುವೆನು ! ಸ್ವಾಮಿ ಇದೋ ಚಿತ್ತೈಸಿ !!

ಗುರು : (ಓದಿ) ನಿಸ್ಸಂದೇಹವಾಗಿ ಇದು ವೈಕುಂಠವಾಸಿಗಳಾದ ಶ್ರೀಮಾನ್ ಮಹಾರಾಜರವರ ಆಜ್ಞಾಪತ್ರವು ಕೇಳಿ! ಏನು ಹೇಳುತ್ತಾರೆ! "ಕರ್ನಾಟಕ ಸಿಂಹಾಸನಕ್ಕೆ ಬಾಧ್ಯನು ಚಿಕ್ಕರಾಯನಲ್ಲಾ ಶ್ರೀರಂಗರಾಯನು" ಜಗದೇವರಾಯನೇ ಕೇಳಿದಿಯಷ್ಟೇ ರಾಜಶಾಸನವನ್ನು!! (ಯಚ್ಚಮ ನಾಯಕನ ಕೈಯಲ್ಲಿ ಕೊಡುವರು)

ಲಕ್ಷ್ಮ : ಇದೋ ಇದನ್ನು ಸಿಂಹಾಸನದಲ್ಲಿರುಸುವೆನು ! ಸಕಲರೂ ಓದಿ ಮನದಟ್ಟು ಮಾಡಿಕೊಳ್ಳಬಹುದು. (ಸಕಲರೂ ನೋಡುವರು) ಜಗದೇವರಾಯರೇ! ತಾವು ಸಹ ನೋಡಿಕೊಳ್ಳಬಹುದು!

**ನಂ. ೭ ರಾಗ – ಭೀಂಪಲಾಸ ತಾಳ – ತ್ರಿವಟ**

ಜಗ : ಸೋಜಿಗವಿದು ಜಗದಿ। ನಿಜದಿ। ಸುಜನಾವಳಿ ಸಮ್ಮತಿಸಲಾರದ॥
ಸೌರಸಮಗನಿಗೆ। ನೀಡದೇ ಪರಗೆ। ಯಾರು ತಾನೆ ನೀಡುವರೈ ಸ್ವತ್ತವ ॥೧॥

ಲಕ್ಷ್ಮ : ಹೂಂ! ಸಕಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ನಿರ್ದಾಕ್ಷಿಣ್ಯವಾಗಿ ಹೇಳಲಿಕ್ಕೆ ಬಾಧಕವೇನು?

ಸಕಲರೂ : (ನೀವೇ ಕೇಳಿ ಎಂದು ಸಂಕೋಚಪಡುವರು)

ಲಕ್ಷ್ಮ : ಹೀಗೆ ಸಂಕೋಚ ಪಡುವದೇಕೆ? ಗುರುಗಳೇ! ತಾವೇ ಮೊದಲು ಮಾಡಬೇಕೆಂದು ಬೇಡಿಕೊಳ್ಳುವನು!

ಗುರು : ಅಯ್ಯಾ ! ಮೊದಲು ಅಷ್ಟಪ್ರಧಾನರಾದರೂ ಮುಖ್ಯ ಮುಖ್ಯ ನಾಯಕರ ಅಭಿಪ್ರಾಯತಕ್ಕೊಳ್ಳಿ ! ಕೊನೆಗೆ ನಾನು ಇದ್ದೇ ಇದ್ದೇನೆ !

ಲಕ್ಷ್ಮ : ಹೂಂ! ಹೇಳಿ ನಿರ್ದಾಕ್ಷಿಣ್ಯವಾಗಿ ಹೇಳಿ! ಪಟ್ಟ ಬಾಧ್ಯರಾರು?

ಗುರು : ಲಕ್ಷ್ಮಣನಾಯಕರೇ ಈ ವಿಚಾರದಲ್ಲಿ ಅಭಿಪ್ರಾಯಿಸುವದು ಉಭಯ ಸಂಕಟ. ಯಾರು ಏನೆಂದು ಹೇಳಬೇಕು? ಪ್ರತ್ಯಕ್ಷ ಮಹಾರಾಜರ ಹೊಟ್ಟೆಯಿಂದ ಹುಟ್ಟಿಬಂದ ಚಿಕ್ಕರಾಯರು ಪಟ್ಟಕ್ಕೆ ಭಾದ್ಯರಲ್ಲವೆಂದು ಹೇಳುವದೂ ಕಷ್ಟ ! ಶ್ರೀರಂಗರಾಯರಿಗೆ ಪಟ್ಟವಾಗಬಾರದೆಂದು ಹೇಳಿದರೆ ರಾಜಾಜ್ಞೆಗೆ ಭಂಗವಾಗುವುದು. ಅದೂ ಕಷ್ಟ! ಅಂತೂ ಇಂತೂ ಇದೊಂದು ಪರೀಕ್ಷಾಸಮಯವೆ ಸರಿ!

ಜಗ : ಲಕ್ಷ್ಮಣನಾಯಕರೆ! ಮಹಾರಾಜರು ಈ ಶಾಸನವನ್ನು ಯಾವ ಸಮಯದಲ್ಲಿ ಬರೆದು ಕೊಟ್ಟರು?

ಲಕ್ಷ್ಮ : ಮರಣಕ್ಕಿಂತಲೂ ಮುಂಚಿತವಾಗಿ ನಾಲ್ಕಾರು ಗಳಿಗೆಗಳ ಮೊದಲು!

ಗುರು : ಅಷ್ಟೇ!

ಲಕ್ಷ್ಮ : ಅಹುದು!

ಗುರು : ನಾವೆಣಿಸಿದ್ದು ನಾಲ್ಕಾರು ದಿನಗಳ ಮೊದಲಾಗಿರಬಹುದೆಂದು!

ಲಕ್ಷ್ಮ : ಛೇ! ಅದೇನಿಲ್ಲ ಗುರುಗಳೇ ನಾಲ್ಕಾರು ಗಳಿಗೆಗಳ ಮೊದಲು!

ಗುರು : ವಿಚಾರಶೀಲರಾದ ಲಕ್ಷ್ಮಣನಾಯಕರೇ ಪ್ರಾಣವು ಪಂಚತ್ವವನ್ನೈದುವದಕ್ಕಿಂತ ನಾಲ್ಕಾರು ಘಳಿಗೆಗಳ ಮೊದಲು ಪ್ರಜ್ಞೆಯಲ್ಲಾದರೂ ಇರುವನೇ? ಕೇವಲ ಹೀನನಾಗಿರುತ್ತಾನೆ ಒಂದು ಸಮಯ ಇದ್ದರೂ ಆತನಿಂದ ಕೇವಲ ವಿಚಾರ ಪುರಿಪ್ಲುತವಾದ ಕಾರ್ಯವಾಗುವದು ಅಸಂಭವ. ತಸ್ಮಾತ್ ಶ್ರೀಮಾನ್ ಮಹಾರಾಜರವರ ಈ ಶಾಸನವು ಅಸಂಗತವಾಗಿರುವ ಮೂಲಕ ಇದವರ ನಿಜಾಭಿಪ್ರಾಯವೆಂದು ಸಾಧಿಸುವದು ಸರ್ವಥಾ ಸಮಂಜಸವಾಗದು! (ಸಭಿಕರು ಅಹುದು ಅಹುದೆಂದು

ತಲೆಹಾಕುವರು) ಬಹುದಿನಗಳಲ್ಲಿ ಮೃತ ಮಹಾರಾಜರಿಗೆ ಮಕ್ಕಳಾಗಿದ್ದಿಲ್ಲ! ಆಗ್ಗೆ ಒಂದೆರಡು ಸಲ ಶ್ರೀರಂಗರಾಯರೇ– ತಮ್ಮ ತರುವಾಯದಲ್ಲಿ ಪಟ್ಟ ಬಾಧ್ಯರೆಂದು ಹೇಳಿದ್ದು ಚನ್ನಾಗಿ ಜ್ಞಾಪಕದಲ್ಲಿದೆ! ಆದರೆ ಅವರಸ ಪುತ್ರನಾದ ಚಿಕ್ಕರಾಯನು ಹುಟ್ಟಿ ಬಂದ ಬಳಿಕ ಆ ಮಾತು ಹೇಗೆ ಉಳಿಯುವದು? ಒಂದು ಪಕ್ಷಕ್ಕೆ ಉಳಿದರೂ ಹೇಗೆ ನ್ಯಾಯ ಸಮ್ಮತವಾಗುವದು? ಆದರೆ ಬಹು ಜನಗಳ ಎದುರಿನಲ್ಲಿ ತಾವು ಶ್ರೀರಂಗರಾಯನ ವಿಷಯವಾಗಿ ಹೇಳಿದ್ದರಿಂದ ಅದೇ ವಿಚಾರವು ತಮ್ಮ ಪಶ್ಚಾತ್ ಸ್ಥಿರವಾದೀತೆಂಬ ಸಂಶಯದಿಂದಾ ಈ ಶಾಸನವನ್ನು ಬರೆಯಲಿಕ್ಕೆ ಪ್ರವೃತ್ತರಾಗಿದ್ದಾರೆ! ಆದರೆ ಬೋಧೆಯ ಕಡಿಮೆಯಾದ ಪರಿಸ್ಥಿತಿಯಲ್ಲಿ ಅದನ್ನು ಬರೆದ ಮೂಲಕ ಹೆಸರುಗಳು ಹಿಂದು ಮುಂದಾಗಿರುವವೆಂದು ನನ್ನ ದೃಢವಾದ ತರ್ಕವು!

**ಲಕ್ಷ್ಮ :** ಮಹಾಸ್ವಾಮೀ! ಪಟ್ಟ ಬಾಧ್ಯನು ಚಿಕ್ಕರಾಯನಲ್ಲವೆನ್ನುವಾಗ್ಗೆ ಅವರ ಮುದ್ರೆಯಲ್ಲಿ ತಿರಸ್ಕಾರವೂ ಶ್ರೀರಂಗರಾಯರ ಹೆಸರು ಹೇಳುವಾಗ್ಗೆ ಅವರಲ್ಲಿ ತೋರಿದ ಆನಂದವೂ ನನ್ನ ಕಣ್ಣು ಮುಂದೆ ಚನ್ನಾಗಿ ಕಟ್ಟಿದೆ.

**ಗುರು :** ಇದ್ದಿರಬಹುದು ! ಅದೇ ನಾವು ಹೇಳಿದೆವಲ್ಲವೆ ? ಹೆಸರು ಹಿಂದು ಮುಂದಾಗಿ ಹೇಳಿದ್ದಾರೆ ! ಜಿವ್ಹೆಯೂ ಕೂಡಾ ಅವರ ಸ್ವಾಧೀನದಲ್ಲಿರಲಿಕ್ಕಿಲ್ಲ ! ಕರ್ನಾಟಕ ಸಿಂಹಾಸನಾಧಿಕಾರಿಯು ಶ್ರೀರಂಗರಾಯನಲ್ಲಾ ಚಿಕ್ಕರಾಯನೆಂದು ಹೇಳತಕ್ಕವರು ಹಾಗೆ ಹಿಂದು ಮುಂದಾಗಿ ಹೇಳಿದ್ದಾರೆ!

**ಜಗ :** ಇದೇ ಸಾಧುವಾದ ವಿಚಾರವು॥

**ವೆಂಕಟಾದ್ರಿ :** ಮಿತ್ರಾ ಲಕ್ಷ್ಮಣನಾಯಕಾ, ಈಗಿನ ಶ್ರೀಗುರುಗಳವರ ನಿರ್ಣಯದಿಂದ ನಿನ್ನಲ್ಲಿ ವಿಚಾರಗಳ ಕೋಲಾಹಲವೇಳಬಹುದು! ಆದರೆ ಗುರುಗಳ ನಿರ್ಣಯದಂತೆ ನಡೆದುಕೊಳ್ಳುವದೇ ನಮ್ಮ ಧರ್ಮವು, ಅವರಾದರೂ ನ್ಯಾಯಸಮ್ಮತವಾದ ನಿರ್ಣಯವನ್ನೇ ಮಾಡಿದ್ದಾರೆ ಅದೆಲ್ಲಕ್ಕೂ ಅವರೇ ಹೊಣೆಗಾರರು!!

**ಲಕ್ಷ್ಮ :** ಆದಾಗ್ಯೂ ಮಹಾಸ್ವಾಮಿ! ನನ್ನದೊಂದು ಬೇಡಿಕೆ!

**ಗುರು :** ಅದೇನು ಅಗತ್ಯವಾಗಿ ತಿಳಿಹಿಸಿ।

**ಲಕ್ಷ್ಮ :** ಯದ್ಯಪಿ ಸಕಲರ ಅಭಿಪ್ರಾಯದಂತೆ ಚಿಕ್ಕರಾಯನು ಪಟ್ಟ

ಬಾಧ್ಯನೆಂದು ನಿಷ್ಕರ್ಷೆಯಾಗಿದ್ದರೂ ಈಗಲೇ ಪಟ್ಟಾಭಿಷೇಕ ಮಹೋತ್ಸವವನ್ನು ಜರುಗಿಸಬಾರದು! ಸ್ವಲ್ಪ ಅವಧಿಯನ್ನಿಡಬೇಕು!

**ಗುರು :** ಹೇಗೂ ಈಗ್ಗೆ ಅಸ್ತವಿದೆ! ಶುಭಕಾರ್ಯಗಳು ವರ್ಜ ಈ ಮಾಸ ಮುಗಿದ ಮೇಲೆ ಪಟ್ಟಾಭಿಷೇಕ ಮಹೋತ್ಸವ ಜರುಗಿಸಬೇಕು! ಅವರೆಗೂ ಅನಾಯಾಸವಾಗಿ ಅವಧಿಯು ಸಿಕ್ಕಿರುವದಲ್ಲವೇ!

**ಲಕ್ಷ್ಮ :** ಆಗಲಿ! ಒಪ್ಪಿಗೆ!!

**ಗುರು :** ಹಾಗಾದರೇನು! ಈ ದಿನದ ಪರಿಷತ್ಕಾರ್ಯವು ಮುಗಿದಂತಾಯಿತು! ಇನ್ನು ಸಭಾವಿಸರ್ಜನೆಯನ್ನು ಮಾಡಲಿಕ್ಕೆ ಅಡ್ಡಿಯೇನು?

**ಸಭಿಕರು :** ಏನೂ ಅಡ್ಡೀಯಿಲ್ಲಾ!

**ಗುರು :** ಮತ್ತಾರಿಗೇನಾದರೂ ಹೇಳತಕ್ಕದ್ದಿದೆಯೋ (ಎಲ್ಲರೂ ಸ್ತಬ್ಧ) ಹಾಗಾದರೆ ಈ ದಿನದ ಸಭಾಕಾರ್ಯಕ್ಕೆ ಮುಕ್ತಾಯವು. ಸಕಲರೂ ಸ್ವಸ್ಥಾನಕ್ಕೆ ಗಮನ ಮಾಡಬಹುದು.

**ನಂ. ೮ ರಾಗ – ಶಂಕರ ತಾಳ – ತ್ರಿವಟ**

ಪದ ॥ ನೋಡಿ ಸರ್ವರು ಶಾಂತಭಾವದೇ। ಮಾಡಿರಿ ವಿಹಿತವಿಚಾರ।
ಈ ರಾಜ್ಯದವಿಹಯ ॥ ಪ ॥
ಕೋವಿದರೂ ನೀವೆಲ್ಲರೂ। ಬಲವಂತರು
ಧೀರರು! ನಿರಾತಂಕವಾಗಿ ॥ ೧ ॥

**ಪ್ರವೇಶ :** (ಅರಮನೆಯ ಮುಂಭಾಗದಲ್ಲಿ ಚಿಕ್ಕರಾಯ, ಸಂಜೀವಿ।

**ಚಿಕ್ಕ :** (ಇವನು ತೊದಲ, ರಕಾರ ಉಚ್ಚಾರವಿಲ್ಲ ಇವನಲ್ಲಿ) ಸಂಜೀವಿ, ಮತ್ತೆ ಇದನ್ನು ಜಗ್ಗಜ್ಜ ತಿರುವಲೋ! (ಗಿರಿಗಿರಿಯನ್ನುವ ಹುಡುಗಾಟದವಸ್ತು ತಿರುಹುವನು)

**ಸಂಜಿ :** ಆಗಲಿ ದೇವರ!

**ಚಿಕ್ಕ :** (ಬಾಯಿಂದಾ ಗಿರಿ ಗಿರಿ ಅನ್ನುತ್ತಾ) ಗಿರೀಗಿರೀ ಹೇಗೆ ಸಪ್ಪಳವಾಯ್ತು!

**ಸಂಜಿ :** ಬಹೂ ಚನ್ನಾಗಿ ಸಪ್ಪಳವಾಯ್ತು ದೇವರು!

**ಚಿಕ್ಕ :** ಇದೋ ನೋಡು ಪುಂಗಿ ಜಗ್ಗಜ್ಜ ತಂದು ಕೊಟ್ಟಿದ್ದಾನೆ! ಬಾರಿಸಲೋ!

**ಸಂಜಿ :** ಆಗಲಿ ದೇವರೂ (ಸ್ವ) ಇವರಿಗೆ ಕೊಡುವುದಕ್ಕಾಗಿ ಜಗದೇವ

ಮಹಾರಾಜರಿಗೆ ಧನುರ್ಬಾಣಗಳು ಸಿಕ್ಕಲಿಲ್ಲವಾಗಿ ಕಾಣುತ್ತೆ!

**ಚಿಕ್ಕ :** (ಪುಂಗಿಯನ್ನೂದಿ) ಸಂಜೀವಿ! ಈ ಪುಂಗಿಯು ಹೇಗೆ ಪೂಂ। ಪೂಂ। ಎಂದು ಬಾರಿಸಿತು?

**ಸಂಜಿ :** ದೇವರು ಬಹು ಚನ್ನಾಗಿ ಬಾರಿಸಿತು! (ಸ್ವಗತ) ಈ ಪೋರನಲ್ಲಿ ಕ್ಷತ್ರಿಯ ಬಾಲಕರ ತಕ್ಕ ಆಟಗಳೇ ಇಲ್ಲ, ನಮ್ಮ ಬಾಯಮ್ಮ ಶ್ರೀಮದ್ ವೆಂಕಟಪತಿರಾಯರ ಹೊಟ್ಟೆಯಿಂದ ಇದೆಂಥ ಹೇಡಿ ಮಗು ಹುಟ್ಟಿ ಬಂದಿತು?

**ಚಿಕ್ಕ :** (ಬೊಕ್ಕಣದಿಂದ ಆಣೆಕಲ್ಲುಗಳನ್ನು ತೆಗೆದು) (ಆಣೆಕಲ್ಲ–ಹೆಣ್ಣು ಹುಡುಗೆಯರ ಆಟದ ಚಿಕ್ಕ ಕಲ್ಲು ಗುಂಡುಗಳು) ಸಂಜೀವಿ ಇದೋ ನೋಡು, ಆಡೋಣ ಬಾ!

**ಸಂಜಿ :** ಅಯ್ಯೋ! ಇವು ಆಣೆಕಲ್ಲುಗಳು, ಇವುಗಳನ್ನು ಗಂಡುಮಕ್ಕಳು ಆಡ ಬಾರದು ದೇವರು!

**ಚಿಕ್ಕ :** ನಾನದೆಲ್ಲ ಕೇಳುದಿಲ್ಲಾ. ನಾವಾಡುವವರೇ! (ಆಡುವನು)

**ಬಾಯ :** (ಶಿಟ್ಟಿನಿಂದ) ಎಲೇ ಸಂಜೀವಿ ಚಿಕ್ಕರಾಯನಿಗೆ ಒಳ್ಳೇ ಆಟವಾಡಲು ಹಚ್ಚಿರುವಿಯೇ! ಹುಚ್ಚು ಮುಂಡೆ, ಗಂಡು ಮಗುವಿಗೆ ಆಣೇಕಲ್ಲಿನ ಆಟವೆ!

**ಸಂಜಿ :** ದೇವಿಯವರೇ? ನಾನು ಬೇಡವೆಂದರೂ ಚಿಕ್ಕಧೊರೆಗಳು ಹಾಗೆ ಹಟದಿಂದ ಆಡಲಿಕ್ಕೆ ಹತ್ತಿದ್ದಾರೆ.

**ಚಿಕ್ಕ :** (ಅಚ್ಚೆಯ ಸ್ವರದಲ್ಲಿ) ಅಮ್ಮಾ? ಇವಳು ಆಡಬೇಡವೆಂದು ಹೇಳಲಿಲ್ಲಾ ಉಂ. ಸುಳ್ಳು ಹೇಳುವಳು.

**ಸಂಜಿ :** ದೇವಿಯವರೇ?

**ಬಾಯ :** ಸುಮ್ಮನಿರು ಇಲ್ಲಿಲ್ಲದ ದರಿದ್ರ ಆಟವನ್ನು ಮಗುವಿಗೆ ಆಡಗೊಡುವಿಯಾ?

**ಚಿಕ್ಕ :** ನೋಡ, ಸಂಜೀವಿ ಅಲ್ಲಿಯದುರು ದೂರ ಕುಳಿತಕೋ ! ಹೂಂ ಬಾ! ಆಶೀ ಬೀಶಿ, ಅಕ್ಕಿರಾಶಿ, ರಾಗೀ ರಾಸೀ (ಆಶಿಬೀಸಿ–ಇದೊಂದು ಹೆಣ್ಣು ಹುಡಿಗೆಯರ ಆಟ)

**ಬಾಯ :** ಛೀ ಮಗು ಚಿಕ್ಕಯ್ಯಾ, ಇಂತಹ ಆಟಗಳನಾಡಬಾರದಪ್ಪ ನೀನು ಮಹಾರಾಜ ಪಟ್ಟಕ್ಕೆ ಕುಳಿತಕೊಳ್ಳತಕ್ಕವನು.

**ಚಿಕ್ಕ :** ಅಮ್ಮಾ? ಪಟ್ಟಕ್ಕೆ ಕುಳಿತಮೇಲೆ ಈ ಪುಂಗಿಯನ್ನೂದಲೊ?

**ಸಂಜಿ :** ನೋಡಿ ನೋಡಿ ದೇವಿಯವರೇ? (ನಗುವಳು)

**ಬಾಯ :** ಆದರೇನಾಯಿತು? ಶ್ರೀಕೃಷ್ಣನು ಕೊಳಲು ಬಾರಿಸುತ್ತಿದ್ದನಂತೆ, ಅದರಂತೆ ನನ್ನ ಕೂಸು ಪುಂಗಿಯನ್ನುದುವದು ಅದರಲ್ಲಿ ತಪ್ಪೇನು? ಹಲ್ಲೇನು ಕಿರಿಯುವಿಯೇ?

**ನಂ. ೯ ರಾಗ – ತೇಲಂಗ ತಾಳ – ತ್ರಿವಟ**

ಪದ ॥ ಮೊಹದ ಮಗುವಿನ ಸುಲೀಲೆಯಾ । ಸಹಿಸಲಾರದೆ ನಗುವಿಯಾ ।
ಇದರ ಪರಮನ್ಯಾಯಾ ॥ಪಲ್ಲ॥ ಅರಗಿಳಿಯು ನುಡಿದಾಡುವಾ ।
ತೆರದಲೀ ಮಧುರ ನುಡಿವಾ । ಯಾರಿಗಾದರೂ ಮೋಹವಾ । ನೀಡುವ
ಮಗುವಿನ ಮುದ್ದು ಮಾತುಗಳ । ಗಾಡಿಕಾರ್ತಿಯೇ ಲಾಲಿಸೆ ॥ ೧ ॥

**ಚಿಕ್ಕ :** ಅಹುದು ಮತ್ತೇ, ಈಗೇನು ಹೇಳುವಿ ಎಲೆ ಸಂಜೀವಿ.

**ಸಂಜಿ :** (ತೆರೆನೋಡಿ) ದೇವಿಯವರೇ, ಶಸ್ತ್ರಾಸ್ತ್ರ ವಿದ್ಯೆಯನ್ನು ಕಲಿಸುವ ದುರ್ಗಾಸಿಂಗನು ಬಂದಿದ್ದಾನೆ.

**ಬಾಯ :** ಬರಮಾಡು ಅವನನ್ನು

**ದುರ್ಗಾಸಿಂಗ :** (ಇವನು ಉತ್ತರದೇಶದವ ಕನ್ನಡ ಮಾತುಗಳು ಸರಿಯಾಗಿ ಬರುವದಿಲ್ಲ) ರಾಮ್ ರಾಮ್ ಮಾತಾಜಿ ಛೋಟೇ ಧನಿಸಾಹೇಬಾಗೆ ತರವಾರದೂ ತಾಲೀಮು ಷುರುಮಾಡುಂಗಾ ಮಗರ್ ಮಾತಾಜೀ ಆಪ ಸಾಮನೆ ಇದ್ದರೆ ಅವರ ಸೀಖನಾ ನಹೀ ಹೋಗಾ!

**ಬಾಯ :** ಹಾಗಂದರೆ

**ಸಂಜಿ :** ಅಮ್ಮನವರು ಎದುರಿನಲ್ಲಿದ್ದರೆ ಅವರ ಅಭ್ಯಾಸವು ಚನ್ನಾಗಿ ಆಗುವದಿಲ್ಲವೆಂದು ಹೇಳುವನು.

**ಬಾಯ :** ಅದೇಕೆ

**ದುರ್ಗಾ :** ಮಾಫ್ ಮಾಡು ಅಮ್ಮಾಜೀ ಶಿಖಾಸೋ ವಖ್ತಿದಾಗ, ಜರಾ

ಸಮರು ಸ್ತಾವ, ದಟಾಸ್ತಾವ, ಕಮ್ ಜಾದಾ ಕೈ ಸಾಭೀ ಚಲಾಸಾ, ಇರತಾವ್ ಆಪ ಸಾವ್ನೆ ಇರೇಂಗೇತೋ ಮಹಾರಾಜ ವಮ್ಮಾತ್ ನಹೀ ಕೇಳೆಂಗೆ.

**ಚಿಕ್ಕ :** ಅಮ್ಮಾ, ಇರೇಂಗೇ ಇರೇಂಗೆಯೆನ್ನುವವನು ನನ್ನನ್ನು ಎತ್ತಿನಂತೆ ಇರಿಯುವನೇನೇ.

**ಸಂಜಿ :** ದೇವರ ಹಾಗೆ ಮಾಡಲಿಕೆ ಅವನಿಗೆ ಕೋಡುಗಳೆಲ್ಲಿವೆ.

**ಚಿಕ್ಕ :** ಎಲ್ಲಿ ದುರ್ಗಾಸಿಂಗಾ ಮುಂಡಾಸವನ್ನು ತೆಗೆದು ತಲೆಯನ್ನು ತೋರಿಸು ತೋರಿಸೋ ನಿನ್ನ ತಲೆಯನ್ನು.

**ಬಾಯ :** ಇರಲಿ ಬಿಡು ಚಿಕ್ಕಂಯ್ಯಾ, ಮನುಷ್ಯರಿಗೆಲ್ಲಾದರೂ ಕೋಡುಗಳಿರುವವೇನೋ.

**ದುರ್ಗಾ :** ಕ್ಯಾಪಗಡೀ ತಗಿಸಬೇಕಂತಾವ್.

**ಸಂಜಿ :** ಅಹುದು ಹಾಗೆ ಹಟಮಾಡುವರು.

**ದುಗಾ :** ಅಮ್ಮಾಜೀ ಆಫ್ ಮಹಾಲ್ದಾಗಜಾನ ತೋ ಆಭೀ ಭೋಟೀ ಸರ್ಕಾರಕೂ ಭೆಲೋ ಯರಡ ಕೈ ತೋರಿಸಿ ಬಿಡತಾಹೂಂ.

**ಚಿಕ್ಕ :** ಅಮ್ಮಾ, ಇವನು ಮುಂಡಾಸವನ್ನು ತೆಗೆದು ತಲೆಯನ್ನೇಕೆ ತೋರಿಸುವದಿಲ್ಲಾ.

**ಬಾಯ :** ಚಿಕ್ಕಯ್ಯಾ ವಿದ್ಯೆಯನ್ನು ಕಲಿಸುವ ಗುರುಗಳ ಅಪಮಾನವನ್ನು ಹೀಗೆ ಮಾಡಬಾರದು. ಮುಂಡಾಸವನ್ನು ತೆಗೆಸುವದು ಅವಮಾನವಲ್ಲವೆ.

**ಚಿಕ್ಕ :** ಇವನ ಹೆಸರೂ ದುರ್ಗಾಶಿಂಗಾ ಶಿಂಗಾ ಎಂದರೆ ಕೋಡು ಅಲ್ಲವೇನೊ ಸಿಂಗಾ ಕೋಡೊ, ಸಿಂಗಾ ಅಂದರ ಕೋಡೂ.

**ದುರ್ಗಾ :** ಸರ್ಕಾರ ತಮ್ಮದೂ ಬೋಲೀ ನಮಗೆ ಬರಾಬರ ನಹೀ ಸಮರ್ಝ್ತಾ

**ಚಿಕ್ಕ :** ಸಿಂಗಾ ಅಂದರೆ ಕೋಡೋ! ನಿನ್ನ ತಲೆಯ ಮೇಲಿನ ಕೋಡುಗಳನ್ನು ನಾವು ನೋಡತಕ್ಕವರೇ ತನೆಗೆ ಮುಂಡಾಸ. ಇಲ್ಲದಿದ್ದರೆ ದಂಡ ಹೂಂ! ತೆಗೆ ಮುಂಡಾಸ ಇಲ್ಲದಿದ್ದರೆ ದಂಡ

**ಬಾಯಿ :** ದುರ್ಗಾಸಿಂಗನೇ ನಿನಗಾದರೂ ಅಷ್ಟೊಂದು ಹಟವೇಕೆ. ರಾಜಪುತ್ರರನ್ನು ಯಾವಾಗಲೂ ಸಂತೋಷದಲ್ಲಿಟ್ಟು ವಿದ್ಯೆಯನ್ನು ಕಲಿಸುತ್ತಿರಬೇಕು. ಸಾಮಾನ್ಯರ ಮಕ್ಕಳಂತೆ ಇವರನ್ನು ನಡಿಸಿಕೊಂಡರೆ ಹೇಗಾದೀತು.

**ಚಿಕ್ಕ :** ಅಂತೇ ಹೇಳುವೇನೊ ತೆಗೆ ಮುಂಡಾಸಾ ಇಲ್ಲವಾದರೆ ದಂಡಾ!

**ಸಂಜಿ :** ಹೌದು ಹೌದು!

**ದುರ್ಗಾ :** (ಅಣಕಿಸಿ) ಹೌದೌದಕ್ಕಾ, ಪಾನಿಭರನೇಕಾ ಹೋತಾ ಹೈ ಹೌದ್.

**ಚಿಕ್ಕ :** ಏನಾದರೂ ಮುಂಡಾಸವನ್ನು ತೆಗೆಸಿ ನಾನು ನಿನ್ನ ಕೋಡುಗಳನ್ನು ನೋಡತಕ್ಕವನೇ, ತೆಗಿ ಮುಂಡಾಸಾ!

**ಬಾಯ :** ದುರ್ಗಾಸಿಂಗಾ ಸಣ್ಣ ಮಹಾರಾಜರು ಹಟಕ್ಕೆ ಬಿದ್ದರು. ತೋರಿಸಲೊಲ್ಲೆ ಯೇಕೆ, ಮುಂಡಾಸವನ್ನು ತೆಗೆದು ಅವರ ಸಮಾಧಾನಕ್ಕಾಗಿ ತಲೆಯನ್ನು!

**ದುರ್ಗಾ :** ಅರೇ! ಏ ಕ್ಯಾ ಮಲಾಮತ್ (ತಲೆಯನ್ನು ತೋರಿಸಿ) ಅಚ್ಛಾ ಸರಕಾರ ಯೆ ದೇಖೋ ಸರ್ (ಸ್ವಗತ) ಪೇಟೆ ಬಡಾ ನಾದಾನ ಹೈ.

**ಚಿಕ್ಕ :** (ಅವನ ತಲೆಯ ಮೇಲೆ ಕೈಯಾಡಿಸಿ ನಕ್ಕು) ಇವನಿಗೆ ಕೋಡುಗಳಿಲ್ಲಾ. ಬರೇ ದುರ್ಗಾ. ಸಿಂಗವಿಲ್ಲದ ದುರ್ಗಾ.

**ದುರ್ಗಾ :** ನಹೀ ಸರಕಾರ ಮೈ ದುರ್ಗಾಸೀಂಘ ಹುಂ.

**ಚಿಕ್ಕ :** ಅಲ್ಲಲ್ಲಾ ಬರೇ ದುರ್ಗಾ, ಸಿಂಗವಿಲ್ಲದ ದುರ್ಗಾ!

**ದುರ್ಗಾ :** ಠೀಕ ಹೈ ರಾಜಾಸಾಬ ತಲವಾರ ಲೆ ವೆ (ಖಡ್ಗ ಕೊಡುವನು) ಮಾಸಾಬ ಆಪ ಅಂದರ ಜಾನಾ

**ಚಿಕ್ಕ :** (ನಡುಗುತ್ತ ಕೈಯಲ್ಲಿ ಖಡ್ಗವನ್ನು ಹಿಡಿದು) ಅಮ್ಮಾ ನೀನು ಇಲ್ಲೇ ಇರೆ.
ಕಲಿಸುವಾಗ್ಗೆ ಇವನು ತುಟಿಹಲ್ಲುಗಳನ್ನು ಕಚ್ಚಿ ಕಣ್ಣುಗಳನ್ನು ತೆಗೆಯುವನು, ಅದನ್ನು ನೋಡಿ ನನ್ನ ಎದೆಯು ಡವಾ ಡವಾ ಬಡಿದುಕೊಳ್ಳುವದು ನೀನು ಹೋಗಲೇ ಬೇಡ! ಇಲ್ಲೇ ಇರು

**ದುರ್ಗಾ :** ಸರ್ಕಾರ ಕ್ಯಾ ಕಹತೇ ಹೈಂ.

**ಬಾಯ :** ಏನು ಇಲ್ಲ ಸಾಗಲಿ

ದುರ್ಗಾ : ಹಾಂ! ಜೀ ಸರ್ಕಾರ ತಯ್ಯಾರ್ (ಖಡ್ಗ ಹಿರಿಯುವವನು ಚಿಕ್ಕರಾಯನು ನಡುಗಿ ಕೈ ಖಡ್ಗವನ್ನು ಒಗೆಯುವನು) ಅರೇ ಅರೇ ಯಹತೋ ಛತ್ರೀ ಅವಲಿಯಾದ ಹೈ ಯ್ಯೀ ನಹೀ. ಕಾಂಹಾಕಾ ಕಮ್ಮಸ್ಸಲ್ ಅಮ್ಮಾಜಾನ್, ಆಪ -ಅಂದರ ಚಲಿಯೇ (ಬಾಯಮ್ಮ ಹೋಗುವಳು; ಸಂಜೀವಿಗೆ ಗದರಿಸುವ) ಅರೀ ತೂ ಕೆಂವ್ ಖಡೀ ಚಲ್ ಜಾ ಮಹರಾಜ ಡರನಾ ನಹೀ ಆಪ ಬೀರ ಛತ್ರಿಯಹೋ!

ಚಿಕ್ಕ : ಹಾಗಾದರೆ ನೀನೇಕೆ ಅಂಜಿಸಿದಿ ಹೇಳು ? ಹೇಳೋ, ನೀನೇಕೆ ಅಂಜಿಸಿದಿ.

ದುರ್ಗಾ : ಅಬ್ ನಹೀ ಆಂಜುಸೂಂಗಾ ಠೀಕ ಹೈ ಸರ್ಕಾರ್ ಮೈ ಅಬ್ ಷೇರ ಬನ್‌ತಾಹೂಂ!

ಚಿಕ್ಕ : ಹಾಗಂದರೆ!

ದುರ್ಗಾ : ಮೈ ಅಬ್ ಹುಡೀ ಹುಲೀ ಬನ್‌ತಾಹೂಂ ! ಹುಡೀ ಹುಲೀ

ಚಿಕ್ಕ : (ಅಂಜಿ ಕೂಗಿ) ಅಮ್ಮಾ ಇಲ್ಲಿ ಬಾರೆ ಇವನು ಹುಲಿಯಾಗಿ ನನ್ನನ್ನು ನುಂಗಲಿಕ್ಕೆ ಬರುವನಂತೇ.

ದುರ್ಗಾ : ನಹೀ ಸರಕಾರ ಮೈ ಹುಲೀ ಆಗತಾಹೂಂ ! ಆಪ ಮೇರೆಪರ್ ತಲವಾರ್ ಚಲಾವ್.

ಬಾಯ : (ತೀವ್ರ ಬಂದು) ಏನು ದುರ್ಗಾಸಿಂಗ? ಮತ್ತೇನು ಮಾಡಿದೇ?

ದುರ್ಗಾ : ಕುಚ್ ನಹೀ ಸರಕಾರ ಐಸಾ ಲೋಲಾ ಮೈ ಹುಡೀ ಆಗ ತಾಹೂಂ ಆಪ್ ಮೇರೆಪರ್ ತಲವಾರ್ ಚಲಾವ್ ಕರಕೇ ಬೋಲಾ!

ಬಾಯ : ಮಗೂ, ಅಷ್ಟು ಅಂಜಬಾರದು ಅವನು ಹುಲಿಯಾಗುವನಂತೆ ನೀನವನ ಮೇಲೆ ಖಡ್ಗವನ್ನು ನಡಿಸು;

ಚಿಕ್ಕ : ಅದರಿಂದೇನಾಗುವದು?

ಸಂಜಿ : ದೇವರೂ ಮುಂದೆ ತಾವು ಎಂದಾದರೂ ವನದಲ್ಲಿ ಬೇಟೆಯನ್ನಾಡಲಿಕ್ಕೆ ಹೋದಾಗ್ಗೆ ನಿಜವಾದ ಹುಲಿಯು ಮೈ ಮೇಲೆ ಬಂದರೆ ಅದನ್ನು ಹೇಗೆ ಕೊಲ್ಲಬೇಕೆಂಬುದನ್ನು ಅವನ ತಮ್ಮ ಕಲಿಸಿಕೊಡುವನಂತೆ,

ಚಿಕ್ಕ : ನಾವು ಬೇಟೆಯಾಡಲಿಕ್ಕೆ ವನಕ್ಕೆ ಹೋಗುವದೇ ಇಲ್ಲಾ. ಊರಲ್ಲಿಯೇ ಬೇಟೆಯಾಡುವೆವು, ಊರಬೇಟೀ.

ಬಾಯ: ಆದಾಗ್ಲೂ ನೀನು ಕ್ಷತ್ರಿಯಮಗನಪ್ಪಾ ಶಸ್ತ್ರಾಸ್ತ್ರ ವಿದ್ಯೆಯನ್ನುಕಲಿಯಬೇಕು!

**ಪದ ನಂ. ೧೦ ರಾಗ – ಆನಂದಭೈರವಿ ತಾಳ – ತ್ರಿವಟ**

ರಣಧೀರರ ಸುಕುಮಾರ ನೀನು ರಣವಿದ್ಯೆಯ ಸಾಧಿಸಲುಬೇಕು ॥ಪ॥
ರಣರಂಗದೇ। ರಿಪುಗಳ ಸಮೂಹ। ಮಣಿಸುವ ಮಹಾಕಲಿಯಾಗಬೇಕು ॥೧॥
ಹೂಂ ದುರ್ಗಾಸಿಂಗಾ ಕಲುಹಿಸು। (ಬಾಯಮ್ಮ ಸಂಜೀವ ಮರೆಯಾಗುಹರು)

ದುರ್ಗಾ : (ಹುಲಿಹಾರಿಕೆಯ ಪೂರ್ವಾಭಿನಯದಿಂದ) ಸರಕಾರ ಏ ದೇಖೊ ಷೇರ್ ಬಿಲ್ಕುಲ್ ಅಪಕೇ ಸರ್ ಪರ್ ಫಲಾಂಗ ಮಾರದೀಯಾ ಹೂಂ! ಚಲಾವ್ ತಲವಾರ್. (ಚಿಕ್ಕರಾಯನ ಮೇಲೆ ಹಾರುವನು. ಚಿಕ್ಕರಾಯನು ಬೀಳುವನು)

ಚಿಕ್ಕ : (ಅಳುತ್ತ) ಅಮ್ಮಾ ಮೈಯಲ್ಲಿ ನನಗೆ ಚಳೀ ತುಂಬಿತು. ಹೊದ್ದು ಕೊಂಡು ಮಲಗಿ ಬಿಡುವೆನು. ನೋಡಿದಿಂಯಾ? ಈ ದುರ್ಗಾಸಿಂಗನು ಹುಲಿಯಾಗಿ ನನ್ನನ್ನು ನುಂಗಿಬಿಡುತ್ತಿದ್ದನು. ನೀನು ಬಂದಿಯಂತೇ ಬಿಟ್ಟುಕೊಟ್ಟನು. ನಡೆ ಹೋಗುವಾ ! ಇವನನ್ನು ನೋಡಿ ನನಗೆ ಅಂಜಿಕೆಯಾಗುವದು. ಬೇಗ ನೀ ನಡೆ!

ಬಾಯ : ಆಗಲಿ ದುರ್ಗಾ ಶಿಂಗಾ? ನಾಳಿನಿಂದ ಅಭ್ಯಾಸ ಮಾಡಿಸುವಿಯಂತೆ, ಇಂದು ಬೇಡಾ!

ಚಿಕ್ಕ : ನಾಲಿಯೂ ಬೇಡಾ! ನಾಡದೂ ಬೇಡಾ ಆಚೀ ನಾಡದೂ ಬೇಡಾ ಕಡೆತನಕ ಬೇಡವೇ ಬೇಡಾ. ಏ ದುರ್ಗಾಸಿಂಗಾ ? ನೀನು ನಿನ್ನ ಊರಿಗೆ ಹೋಗಿಬಿಡಪ್ಪಾ! ನನಗೆ ಈ ಕತ್ತೀ ತಿರೆವೊ ಆಟ ಬೇಕಾಗಿಲ್ಲ ಹೋಗು ಬೇಕಾದರೆ ಒಂದು ರೂಪಾಯಿ ಕೊಡುತ್ತೇನೆ ಹೋಗಪ್ಪಾ.

ದುರ್ಗಾ : ಸರ್ಕಾರ್ ಕ್ಯಾ ಕಹತೇ ಹೈ

ಬಾಯ : ಏನೂ ಇಲ್ಲಾ ಸಧ್ಯಕ್ಕೆ ನೀನು ಹೋಗು!

ಚಿಕ್ಕ : ಅಮ್ಮಾ ಮೈಯಲ್ಲಿ ಚಳಿಚಳಿಯಾಗುತ್ತೆ ! ಇದೋ ನಡುಗುಹುಟ್ಟಿದೆ ಬೇಗನೇ ನನ್ನನ್ನು ಹೊದ್ದಿಸಿ ಮಲಗಿಸಿಬಿಡು.

**ಬಾಯ :** ನಡೆ ಹೋಗುವಾ ! ಎಲೆ ಸಂಜೀವಿ ! ತೀವ್ರ ಹೋಗಿ ಹಂಸತೂಲಿ ಕಾತಲ್ಪವನ್ನು ಸಿದ್ಧಪಡಿಸು ಚಿಕ್ಕಯ್ಯನು ಮಲಗಿ ಕೊಳ್ಳಲಿ (ಹೋಗುವರು)

**ದುರ್ಗಾ :** ತೆವಬ್ಬಾತೋಬ್ಬಾ, ತೋಬ್ಬಾಯೇ ಕಂಹಾಕಾ ಛತ್ರೀ ಅವಲಿಯಾದ ! ಮೈ ಸವ ಜತಾಹೂಂಕೆ ಮಹಾರಾಣೀ ಸಾಹೇಬಾನೇ ಯಿಸ್ಕೂ ಕಿಸೀಭಿಕಾರಿಸೇ ವೌಲಲೀಂಯೆಹೋಂಗೆ ಮಹಾರಾಜಾ ಶಿರಿಬಂಕಟಪತೀ ಮಹಾರಾಜಜಿಕಾ ತುಮಾರ ಐಸಾ ಡರಮುಕ್ ಸಿಂಘಕೇ ಪೇಟಸೇ ಕಹೀಂ ಕೊಲ್ಹಾ ಪೈದಾ ಹೋಗಾ? ಹರ್ಗೀಜ ನಹಿ. ಮಹಾರಾಜಾ ಶಿರಿಬಂಕಟಪತೀ ಮಹಾರಾಜಾಜೀ ಕೈಸೆ ಲಡವಯ್ಯೇ ಕ್ಯಾ ಉನ್ಕಿ ಹಿಮ್ಮತ ಕೈಸೀ ಉನ್ಕೀ ಬಹದ್ದರೀ? ದೋ ತೀನಬಾರ್ ಲಢಾಯೀಮೇ ಮೈಖುದ್ ಅಪ್ನೆ ಆಂಖಸೇ ದೇಖಾ ಹೂಂ ಜೈಸಾಕೆ ಸೀಂಘ ಹಿರನ್‌ಕೆ ಮಂದೇಮೇ ನಾಚರಹಾ ಹೈ. ಠೀಕ ಹೈ ಹಮ್ಕು ಇಸ್ ನಾದಾನ ಬಚ್ಚೇಸೇ ಕ್ಯಾ ಮತಲಬ್ ತನಕಾ ಏಕ ವಖ್ತುಪರ ಮಿಲ್ತಾ ಹೈ ಬಸ್ ಹೈ ಘರ ಛೋಡನಿಕಲೇ ಕಿಸ್ ವಾಸ್ತೆ? ಪೈಸೇಕೆ ವಾಸ್ತೆ! ಪೈಸಾ ಜಬ್ತಲಗ ಮಿಲತಾ ಹೈ ತಬತಲಗ ರಹೆ, ಜಬ್ ಬಂದ ಹೋತಾ ಹೈತೋ ದೇಶಕಾ ರಾಸ್ತಾ ಚಲ್‌ಧೆರೆ ಫೀರ್ ಕ್ಯಾ? ಬೋಲ್ ಚಾಲಕೇ ಹಮ್ ಪರದೇಶಿಗರ ಭಯ್ಯಾ ಕೇವ್ ಹೈ ನಹೀ ಸೀಧೀ ಭಾತ. ಬೋಲೋ ಕೆಂವ್ ಹೈ ನಹೀಂ?

.....೧ನೇ ಅಂಕ ಸಮಾಪ್ತ.....

===*****=====*****====

# ದ್ವಿತೀಯಾಂಕವು
## ೨ನೇ ಅಂಕು.

**ಜಗ :** ಎಲೋ ಲಕ್ಷ್ಮಣನಾಯಕಾ, ಚಿಕ್ಕರಾಯನ ಜನನದ ವಿಷಯಕವಾದ ಶೋಧವನ್ನು ನಡಿಸುವಿಯಾ ? ಅವನ ಜನನ ಶೋಧವಾಗುವಷ್ಟರಲ್ಲಿಯೇ ನಿನ್ನ ಮರಣವಾದರಾಯಿತೋ ಇಲ್ಲವೊ ಅವನ ಸಾಮದ್ರಿಕಾದಿಗಳನ್ನು ಪರೀಕ್ಷಿಸುತ್ತಿರುವಿಯಾ? ಆಗಲಾಗಲಿ ಪರೀಕ್ಷಿಸು ಆದರಿಂದೇನಾಗಬೇಕಾಗಿದೆ?

**ಬಾಯ :** ಅಪ್ಪಾ ಚಿಕ್ಕರಾಯನ ದರ್ಶನವಾಗಗೊಡಬಾರದೆಂದು ನಾವೇನಾಲೋಚನೆಯನ್ನು ಮಾಡಿದರೂ ಆ ಕ್ರೂರನು ಹೇಗಾದರೂ ಮಾಡಿ ಅವನನ್ನು ಕಾಣುವನಲ್ಲಾ ಹೇಗೆ ಮಾಡುವದು ? ಅಂತಃಪುರದಿಂದಾ ಚಿಕ್ಕರಾಯನು ಹೊರಬಿದ್ದ ಸುದ್ದಿಯು ಅವನಿಗೆ ಹೇಗೆ ಗೊತ್ತಾಗುವದೊ ಏನೋ ಹದ್ದಿನಂತೆ ಅವನಿದ್ದೆಡೆಗೆ ಎರಗಿರುತ್ತಾನೆ ! ಮತ್ತು ಅವನ ನಡೆ, ನುಡಿ ಲಕ್ಷಣಾದಿಗಳನ್ನು ಚಿಕಿತ್ಸಕ ದೃಷ್ಟಿಯಿಂದ ಪರೀಕ್ಷಿಸುತ್ತಾನೆ. ಬೇಡವೆಂದರೂ ಕಷ್ಟ ಸುಮ್ಮನೆ ಬಿಟ್ಟರೂ ಕಷ್ಟ !

**ಜಗ :** ಇವನು ಮಂದಿರದಿಂದ ಹೊರಬೀಳುವ ಸುದ್ದಿಯನ್ನು ಆ ಸಂಜೀವಿಯೇನಾದರೂ ತಿಳಿಸುತ್ತಿರಬಹುದೇನು?

**ಬಾಯ :** ಛಿ! ಛಿ! ಅವಳು ಹಾಗೆ ಮಾಡತಕ್ಕವಳಲ್ಲಾ ಲಕ್ಷ್ಮಣನಾಯಕನು ಯುವರಾಜರ ಹತ್ತಿರಕ್ಕೆ ಬಂದು ಇಲ್ಲ ಸಲ್ಲದ ಪ್ರಶ್ನೆಗಳನ್ನು ಕೇಳಲಾರಂಭಿಸುತ್ತಲೇ ತಕ್ಷಣವೇ ನನಗೆ ಬಂದು ತಿಳುಹಿಸುತ್ತಾಳೆ.

**ಸಂಜಿ :** (ಅವಸರದಿಂದ ಬಂದು), ದೇವರು? ಪುನಃ ರಕ್ಕಸನಾದ ಯಚ್ಚಮನಾಯಕನು ಯುವರಾಜರನ್ನು ಉದ್ಯಾನವನದ ಮಾರ್ಗದಲ್ಲಿ ತಡೆದು ತಮ್ಮ ನಿತ್ಯಕ್ರಮವನ್ನು ನಡಿಸಿದ್ದಾರೆ ಯುವರಾಜರ ಪಾಲಿಗೆ ಅವರೊಂದು ಶನಿಶ್ವರರೆ!

ಜಗ : ಹಾಗಾದರೆ ನಡೆ! ಅವನ ಆಲೋಚನೆಯನ್ನು ತಿಳಿದುಕೊಳ್ಳುವಾ ಇದೇನು ಹುಡುಗಾಟವೋ?

ಚಿಕ್ಕ : ಯಚ್ಚಮನಾಯಕಾ?

ಲಕ್ಷ್ಮ : ರಾಂಯರೆ ವೋಟು ಜನಗಳಂತೆ ತಾವು ನನಗೆ ಯಚ್ಚಮನಾಯಕನೆಂದು
ಹೇಳುವಿರಲ್ಲಾ? ಲಕ್ಷ್ಮಣನಾಯಕನೆಂದು ಹೇಳಿ.

ಚಿಕ್ಕ : ನನಗೆ ಹಾಗೆ ಹೇಳಲಿಕ್ಕೆ ಬರುವದಿಲ್ಲಾ ಹೋಗು, ನಾನು ಯಚ್ಚಮನಾಯಕನೆಂದು ಹೇಳುವೆನು.

ಲಕ್ಷ್ಮ : ಆಗಲಿ ತಮ್ಮಿಷ್ಟ ರಾಯರೇ? ಮುಂದೆ ತಾವು ಪಟ್ಟವೇರತಕ್ಕವರು ನಡೆನುಡಿಗಳು ಪರಿಶುದ್ಧವಾಗಿರಬೇಕು

ಚಿಕ್ಕ : ಯಚ್ಚಮನಾಯಕಾ ನಿನ್ನ ಮಾತುಗಳೇ ನನಗೆ ತಿಳಯುವದಿಲ್ಲವಪ್ಪಾ ಪಟ್ಟವೆಂದು ಹೇಳದಿಯಲ್ಲಾ ಅದು ಅಟ್ಟಕ್ಕಿಂತಲೂ ಎತ್ತರವಿರುವದೇನೋ ನಾಯಕಾ?

ಲಕ್ಷ್ಮ : ರಾಯರೇ ಪಟ್ಟವೆಂದರೆ ಹಿರೇ ಮಹಾರಾಜರು ಕುಳಿತುಕೊಳ್ಳತಕ್ಕ ಸಿಂಹಾಸನವು ಅದರ ಮೇಲೆ ಕುಳಿತುಕೊಳ್ಳುವದು.

ಚಿಕ್ಕ : ನಾಂಯಕಾ? ಆ ಸಿಂಹಾಸನವನ್ನು ನೋಡಿ ನನಗೆ ಅಂಜಿಕೆಯಾಗುದದಪ್ಪಾ. ಅದರಲ್ಲೀ ಆ ತಲೆಯ ಮೇಲಿನ ಸಿಂಹವು ಆಂ ಎಂದು ಬಾಯಿ ತೆರೆದಿದೆ. ಒಂದು ದಿನ ಜಗ್ಗಜ್ಜನು ಅದರ ಹತ್ತಿರ ನನ್ನನ್ನು ಕರೆದುಕೊಂಡು ಹೋಗಿದ್ದನು. ನಾನು ಅದನ್ನು ನೋಡಿದವನೇ ಪಿದಗೂ (ಪಿದಗೂ–ಓಡಿಹೋದೆ)

ಜಗ : ಏನು ಲಕ್ಷ್ಮಣನಾಯಕರೇ? ಏನು ನಡೆದಿದೆ?

ಲಕ್ಷ್ಮ : ಏನೂ ಇಲ್ಲಾ ರಾಯರಗೂಡ ಹೀಗೇ ವಿನೋದದ ಮಾತುಕಥೆಗಳು ನಡೆದಿದ್ದವು.

ಚಿಕ್ಕ : ಅಜ್ಜಂಯ್ಯಾ? ಆ ಸಿಂಹಾಸನದ ಹತ್ತಿರಕ್ಕೆ ನೀನು ಅಂದು ಕರೆದೊಯ್ಯಲಿಲ್ಲವೆ? ಆಗ್ಗೆ ನಿನ್ನ ಕೈಯಿಂದಾ ಕೊಸರಿಕೊಂಡು ನಾನು ಹೇಗೆ ಗಚ್ಚಾ ಹೊಡೆದನು? ತಿರುಗಿ ಎಷ್ಟು ಹುಡುಕಿದರೂ ನಾನು ನಿನ್ನ ಕೈಗೆ ಸಿಕ್ಕೆನೇ?

ಬಾಯ : ಮಗು ಚಿಕ್ಕರಾಯಾ? ನಡೆ ಸಾಯಂಕಾಲವಾಗುತ್ತಾ ಬಂತು. ಅಪ್ಪಾ?
ಚಿಕ್ಕರಾಯನನ್ನು ಕರೆದುಕೊಂಡು ಬಾ (ಹೋಗುವಳು)

ಜಗ : ನಾಯಕರೇ ರಾಯರು ಇನ್ನು ಮಂದಿರವನ್ನು ಸೇರುವರು. ನೀವಿನ್ನು
ಹೋಗಬಹುದಲ್ಲವೇ?

ಚಿಕ್ಕ : ನಾಯಕಾ, ನಾಳೆ ಬರುವಾಗ್ಗೆ ನೀನು ನನ್ನ ಸಲುವಾಗಿ ಒಂದು ಪೀಪಿಯನ್ನು ತೆಗೆದುಕೊಂಡು ಬಾ (ಪೀಪಿ ಹುಡುಗರ ಮುಖದಿಂದ ಬಾರಿಸುವ ವಸ್ತು!)

ಲಕ್ಷ್ಮ : ರಾಯರೇ, ಪೀಪಿಯನ್ನೇನು ಮಾಡುವಿರಿ? (ಖಡ್ಗವನ್ನು ತೋರಿಸಿ) ಇಂತಹದೊಂದು ಖಡ್ಗವನ್ನು ತಂದುಕೊಡುವೆನು!

ಚಿಕ್ಕ : ವಲ್ಲೆಪ್ಪಾ ಅದರ ಮನೆ ಹಾಳಾಗಾ?

ಜಗ : ನಡೆ, ಚಿಕ್ಕಯ್ಯಾ

ಚಿಕ್ಕ : (ಹೋಗುತ್ತಾ) ನಾಯುಕಾ ಮುರೆಯುಬಾರದು ಪೀಪೀ. ಹೋಗುವರು)

ಲಕ್ಷ್ಮ : ಇದು ರಾಜತೇಜ ? ಯಾವದೋವಂದು ಹೇಡಿಯು! ಇಂತಹ ಹೇಡಿ ಮಗು ಶ್ರೀಮದ್ ವೆಂಕಟಪತಿರಾಯರ ಹೊಟ್ಟೆಯಿಂದ ಹೇಗೆ ಹುಟ್ಟಿ ಬಂದಿತ್ತು? ಗುಣರೂಪಾದಿಗಳಲ್ಲಿ ಒಂದಾದರೂ ಅವರ ಹೋಲಿಕೆಯು ಈ ಪೋರನಲ್ಲಿ ಹೇಗೆ ಬರಲಿಲ್ಲಾ? ಮಾತ್ರ ಮುಖಿಯನ್ನಬೇಕೆ? ಅದೂ ಕಲೆಯುವದಿಲ್ಲಾ. ಅವರು ಕೆಂಪು ಇದು ಕಪ್ಪು, ಅವರು ಸ್ಫುರದ್ರೂಪಿಗಳು ಇದು ಕುರೂಪಿ. ಈ ವಿಷಯದಲ್ಲಿ ವಿಚಾರಮಾಡುತ್ತ ಹೋದಹಾಗೆಲ್ಲಾ ಮಸ್ತಕವು ಮತ್ತಿಷ್ಟು ಕಾಯ್ದು ಹೋಗುತ್ತಲಿದೆ. ನಿಜವಾಗಿಯೂ ಇದು ಶ್ರೀಮದ್ ವೆಂಕಟಪತಿ ಮಹಾರಾಜರ ಮಗುವೇ ಅಲ್ಲಾ ಯಾರಿಂದಲೋ ಮಾರಲಿಕ್ಕೆ ತೆಗೆದುಕೊಂಡಿದ್ದಾಗಿದೆ. ಹಾಗಿದ್ದರೆ ಆ ಗೂಢವು ಅಷ್ಟು ದೀರ್ಘ ಕಾಲದವರೆಗೂ ಹೇಗೆ ಗುಪ್ತವಾಗಿ ನಿಂತಿತು?

(ಒಂದು) ಪುರುಷ ವ್ಯಕ್ತಿಯ ನಾಯಕನಿಗೆ ಸಂಕೇತಮಾಡಿ ಹೋಗುವದು) ಇವನಾರು? ನನ್ನನ್ನು ಕರೆದು ಮುಂದಕ್ಕೆ ಹೋದನು! ಓಹೋ ಇವಳು ಪುರುಷವೇಷದಲ್ಲಿನ ಸಂಜೀವಿಯ! ಅಹಹ! ಕೇವಲ ದಾಸಿಯಾಗಿದ್ದರೂ ಎಂತಹ ಚತುರು? ಈಗಿನ ಮಹಾತ್ಕಾರ್ಯದಲ್ಲಿ ನನಗೆ ಎಷ್ಟು ನೆರವಾಗುತ್ತಿರುವಳು? ನೋಡುವಾಗ! ಈ ದಿನದ ವರ್ತಮಾನವನ್ನೇನು ತಂದಿರುವಳೋ (ಹೋಗುವಾ)

**ಪ್ರವೇಶ! ಲಕ್ಷ್ಮಣನಾಯಕನ ವನದಲ್ಲಿ ಸಂಜೀವಿ ಹನುಮ**

ಸಂಜಿ : ಹನುಮಾ ನೀನು ಈ ಲಕ್ಷ್ಮಣನಾಯಕರ ಸೇವೆಯಲ್ಲಿ ಎಷ್ಟು ದಿನಗಳಿಂದಾ ಇರುವೆ?

ಹನುಮಾ : ದೇವರೂ! ಲಕ್ಷ್ಮಣನಾಯಕಾ! ಲಕ್ಷ್ಮಣನಾಯಕಾ! ಎಂದು ಕರೆಯಬೇಡಿ ನಮ್ಮ ಒಡೆಯನಿಗೆ ಆ ಹೆಸರು ಚಂದ ಕಾಣುವದಿಲ್ಲಾ ಯಚ್ಚಮನಾಯಕಾ! ಎಂದು ಹೇಳಿ ದೇವರೂ ಲಕ್ಷ್ಮಣನಾಯಕಾ? ಲಕ್ಷ್ಮಣನಾಯಕಾ? ಎನ್ನುವಾಗ್ಗೆ ನಾಲಿಗೆಯು ಹೇಗೆ ಗಂಟಲಿನಲ್ಲಿ ತೊಡಕಾಡುವದು, ಹಾಗಾದರೆ ವಳಿತೇ ಯಚ್ಚಮನಾಯಕಾ! ಯಚ್ಚಮನಾಯಕಾ! ಹೇಗಿದೆ? ಬೆಲ್ಲದಚ್ಚಿನಂತೆ ರುಚಿಕಟ್ಟಾಗಿ ಬೆಣ್ಣೆಯೊಳಗಿನ ಕೂದಲು ಹೆರಿದು ಬರುವಂತೆ ನಾಲಿಗೆಯಿಂದ ಹೇಗೆ ಸಹಜವಾಗಿ ಬರುವದು ನೋಡಿ? ದಾಕ್ಷಿಣ್ಯವಿಲ್ಲದೇ ಹೇಳಿ!

ಸಂಜಿ : ಹನುಮಾ ನೀನು ಹೆಸರಿನ ನಿಷ್ಕರ್ಷೆಯಲ್ಲಿಯೇ ತೊಡಗಿದಿ ನನ್ನ ಪ್ರಶ್ನೆಗೆ ಉತ್ತರಿಸಲೇ ಇಲ್ಲಾ.

**ಹನುಮಾ :** ಉಂಟೇ? ಯಚ್ಚಮದಣಿಯ ಚಾಕರಿಯಲ್ಲಿ ಎಂದಿನಿಂದಿರುವೀಯೆಂದು ಕೇಳಿದಿರಲ್ಲವೇ?

ಸಂಜಿ : ಅಹುದು

ಹನು : ನೋಡಿ ದೇವರೂ? ಆ ಕಥೆಯು ಬಹು ಸೋಜಿಗವಾಗಿದೆ.

ಸಂಜಿ : ಅದೇನದು

**ಹನು :** ನೋಡಿ ದೇವರೂ ನಮ್ಮ ದಣಿಯ ಜಹಗೀರ ಹಳ್ಳಿಯಲ್ಲಿ ನನ್ನವ್ವ ಭರಮವ್ವ ಬಸೀವೀಯ್ಯನ್ನುವವಳಿದ್ದಳು ಹೂ ಅನ್ನಿ ಆಕೆಗೆ ಇಬ್ಬರು ಮಕ್ಕಳು ಹೂಂ ಅನ್ನಿ, ನಾನು ಮತ್ತೂ ನಮ್ಮಕ್ಯಾ ಅಕ್ಕನೆಂದು ಹೇಳಿಕೊಳ್ಳುವದಷ್ಟೆ ಆಗಿದೆ. ಆದರೆ ಅವಳ ಮುಖವನ್ನ ಕಾಣೆ.

**ಸಂಜಿ :** ಅದೇಗೆ?

**ಹನು :** ಹಾಗೇ ಕೇಳುತ್ತಹೋಗಿ, ಸ್ವಲ್ಪದರಲ್ಲಿಯೇ ಹೇಳುವೆನು. ಆಕೆ ಬಹು ಚೆಲುವೆ ಯಾರು? (ಸಂಜೀವಿನಿಮ್ಮನೆಂದು ಹೇಳುವಳು) ಹಂ! ನಮ್ಮಕ್ಕ ರಂಗಮ್ಮ ಬಹೂ ಚಲುವೆಯೆಂದು ಅವಳನ್ನು ಬಸಿವೆ ಬಿಟ್ಟಿದ್ದರು. ಅವಳು ಪ್ರಾಯಕ್ಕೆ ಬರುವಷ್ಟರಲ್ಲಿಯೇ ನಮ್ಮ ತಾಯಿಯು ತೀರಿಹೋದರು. ಮುಂದೆ ಅವಳನ್ನು (ಮೆಲ್ಲಿಗೆ) ಯಾರಿಗೂ ಹೇಳಬೇಡಿ! ಗುಟ್ಟು ಹೊಟ್ಟೆಯಲ್ಲಿಯೇ ಇರಲಿ ಅವಳನ್ನು ಮೊನ್ನೆ ತೀರಿಕೊಂಡರಲ್ಲವೆ ವೆಂಕಟಪತಿ ಮಹಾರಾಜರು ಅವರು ಮೆಚ್ಚಿ ಕರೆದೊಯ್ದರು. ಆಗ್ಗೆ ನಾನು ಬಹು ಚಿಕ್ಕವ, ಮೂರು ವರ್ಷದವ. ನಮ್ಮಕ್ಕ ಹದಿನೈದು ವರ್ಷದವಳು. ಆಕೆಯ ಮೇಲೆ ನಾಲ್ಕಾರು ಮಕ್ಕಳುಗಳು ಹುಟ್ಟಿ ಹುಟ್ಟಿ ಸತ್ತು ಕೊನೆಗೆ ಹುಟ್ಟಿದ ನಾನೊಬ್ಬನೇ ಉಳಿದುಕೊಂಡೆನು. ದಿಕ್ಕಿಲ್ಲದ ಪರದೇಶಿಯಾಗಿ ಅದೇ ಹಳ್ಳಿಯಲ್ಲಿ ತಿರುಗುತ್ತಿದ್ದೆನು. ನಮ್ಮೊಡೆಯ ಯಚ್ಚಮನಾಯಕರು ಕನಿಕರದಿಂದ ನನ್ನನ್ನು ತಮ್ಮ ವಶಕ್ಕೆ ಕೊಂಡು ಹೊಟ್ಟೆಯ ಮಗನಂತೆ ಕಾಪಾಡಿ ದೊಡ್ಡವನನ್ನಾಗಿ ಮಾಡಿದರು ಇಷ್ಟೇ ನೋಡಿ ನನ್ನ ಕಥೆ!

**ಸಂಜಿ :** ಆದಿರಲಿ ಹನುಮಾ ಮಹಾರಾಜರು ನಿಮ್ಮಕ್ಕ ರಂಗಮ್ಮನನ್ನು ಕರೆದು ಕೊಂಡು ಹೋದಮೇಲೆ......

**ಹನು :** ಹಂ! ಘಟ್ಟಿಯಾಗಿ ಹೇಳಬೇಡಿ ಗುಟ್ಟುರಟ್ಟಾದೀತು!

**ಸಂಜಿ :** ಭಯವೇನೋ! ಇಲ್ಯಾರಿರುವರು ಆಗಲಿ ಮೆಲ್ಲಿಗೆ ಹೇಳುವೆನು! ಮಹಾರಾಜರು ನಿಮ್ಮಕ್ಕ ರಂಗಮ್ಮನನ್ನು ಕರೆದುಕೊಂಡು ಹೋದ ಮೇಲೆ ತಿರುಗಿ ನಿಮ್ಮಕ್ಕನ ಭೆಟ್ಟಿಯು ನಿನಗಾಗಲಿಲ್ಲವೇನು?

**ಹನು :** ಹೇಗಾದೀತು ತೋಳ ಎಳದೊಯ್ದು ಕುರಿಯನ್ನಾದರೂ ಕಾಣಬಹುದು ಅರಸರ ವಶವಾದ ಹೆಣ್ಣಿನ ಮುಖವನ್ನು ಕಾಣವುದು ಸಾಧ್ಯವೇ? ಆದರೆ ನಮ್ಮಕ್ಕ ರಂಗಮ್ಮ ಮುಂದೆ ವಂದೆರಡು

ವರ್ಷಗಳಲ್ಲಿ ಒಂದು ಹೆಣ್ಣುಮಗುವನ್ನು ಹಡೆದು ಸತ್ತಳೆಂದು ಸುದ್ದಿಯನ್ನು ಮಾತ್ರ ಕೇಳಿದನು.

ಸಂಜೀ : ಆ ಹುಟ್ಟಿದ ಹೆಣ್ಣು ಕೂಸು ಆಕೆಯ ಜೊತೆಯಲ್ಲಿಯೇ ಸತ್ತಿತೇನೂ?

ಹನು : ಇಲ್ಲ. ಆದಿರುವದಂತೆ.

ಸಂಜೀ : ಈಗ್ಗೆ ಅದೆಲ್ಲಿರುವದು?

ಹನು ಅಲ್ಲೇ ಯಲ್ಲಾದರೂ ಇರಬಹುದು ಅರಮನೆಯೊಳಗಿನ ಕಸಮುಸುರೆಯ ಕೆಲಸಗಳನ್ನು ಮಾಡುತ್ತ! ಅದಿರಲಿ ಸ್ವಾಮಿ ನಮ್ಮ ವರ್ತಮಾನವೆಲ್ಲಾ ಕೇಳಿಕೊಂಡ್ರಿ, ನಿಮ್ಮ ಸುದ್ದಿಯನ್ನು ತಿಳಸಿ ನೋಡುವಾ

ಸಂಜೀ : ಅದನ್ನು ಕೇಳಿ ನೀನು ಮಾಡುವದೇನು?

ಹನು : ಏನೂ ಇಲ್ಲಾ ಸುಮ್ಮನೆ ಕೇಳಿದೆ ಸ್ವಾಮೀ. ನಿಮ್ಮ ಮುಖವು ತದ್ರೂಪ ವೆಂಕಟಪತಿರಾಯರಂತಿರುವದು. ಅವರ ನಿಮ್ಮ ಸಂಮ್ಮಂಧವೇನಾದರೂ ಇದೆಯೊ?

ಸಂಜೀ : ಅಹುದು, ಬಹೂ ದೂರಿನ ಸಂಮಂಧ

ಹನು : ಹೀಗೋ? ಇರಬಾರದಿತ್ತೆ ನಮ್ಮ ಮಹಾರಾಜರಿಗೆ ನಿಮ್ಮಂತಹದೊಂದು ಗಂಡು ಮಗವು

ಸಂಜೀ : ಈಗಿರುವರಲ್ಲೋ ಒಬ್ಬರು.

ಹನು : ಏನಿದೆ? ಅದು ವೆಂಕಟಪತಿ ಮಹಾರಾಜರ ಮಗುವೇ? ಯಾರಾದರೂ ನಕ್ಕಾರು? ಗರುಡನ ಹೊಟ್ಟೆಯಲ್ಲಿ ಗೂಗೆ ಹುಟ್ಟಬಹುದೇ?

ಸಂಜೀ : ಅದೇನು? ಹೀಗೆ ಹೇಳುವಿ? ಅವರು ನಿಜವಾಗಿಯೂ ಹಿರೇ ಮಹಾರಾಜರ ಮಕ್ಕಳೋ!

ಹನು : ಛಿ ಹೋಗ್ರಿ ಬಾಯಮ್ಮ, ಮಹಾರಾಣಿಯವರು ಆ ಮಗುವನ್ನು ಯಾರಿಂದಲಾದರೂ ಮಾರಲಿಕ್ಕೆ ತೆಗೆದುಕೊಂಡಿರಬಹುದು ಅಥವಾ....... ಬಿಡ್ರೆಪಾ ನಮಗೇಕೆಬೇಕು. ಹಾಳು ಉಸಾಬರೀ? ಬರಲಿಲ್ಲಾ ಬಾರಿಸಲಿಲ್ಲಾ. ನೀವು ಅರಸರ ಹತ್ತಿ ಹೊಂದಿದವರು. ಸಾಗಲಿ

| | |
|---|---|
| ಸಂಜೆ : | ಆದರೆ? ಏನದು ಪೂರ್ಣ ಹೇಳೋ? |
| ಹನು : | ಏನು ಹೇಳುವದು, ಹುಲಿಯು ನಾಯಿಯ ಕುನ್ನಿಯನ್ನೀದರೆ ನಾಚಿಕೆ ಇಲ್ಲದ ಹೆಣ್ಣು ಹುಲಿಯು ನಾಯಿಯ ಸಹವಾಸವನ್ನು ಮಾಡಿದಂತಾಗಲಿಲ್ಲವೇ? |
| ಸಂಜೆ: | ಅಂದರೇ ಮಹಾರಾಣಿಯವರ ಮೇಲೆ ನೀನು ಇದೊಂದು ದೊಡ್ಡದಾದ ದುರುಪವಾದವನೇ ಹೊರಿಸಿದೀ? |
| ಹನು : | ಸ್ವಾಮೀ ಇದು ನನ್ನೊಬ್ಬನ ಮಾತಲ್ಲ ಲೋಕವೇ ಅಂದಾಡುವದನ್ನು ನಾನಾಡಿದೆನು! ಹೀಗೇನಾದರೂ ಇದ್ದಿರಬಹುದಂತೆಯೇ ವೆಂಕಟಪತಿ ಮಹಾರಾಜರು ತಮ್ಮ ಬೆನ್ನ ಹಿಂದೆ ಶ್ರೀರಂಗರಾಯರಿಗೆ ಪಟ್ಟವಾಗಬೇಕೆಂದು ನಮ್ಮೊಡೆಯರ ಹೆಸರಿನಲ್ಲಿ ಆಜ್ಞಾಪತ್ರವನು ಕೊಟ್ಟಿದ್ದಾರೆ. ಇದರ ಮೇಲಿಂದಾ ಏನರ್ಥವಾಗುವದು ನೀವೇ ಹೇಳಿ! |
| ಸಂಜೆ : | ಹಾಗೆ ಆಜ್ಞಾಪತ್ರವಿದ್ದ ಮಾತ್ರಕ್ಕೇನಾಯಿತು. ಚಿಕ್ಕರಾಯನಿಗಲ್ಲದೆ ಶ್ರೀರಂಗರಾಯನಿಗೆ ಪಟ್ಟವಾಗುವದೇ |
| ಹನು : | ನಮ್ಮೊಡೆಯರು, ಯಚ್ಚಮನಾಯಕರು ಕದನಕಂಠೀರವರು ಅಷ್ಟು ಮಾಡದೇ ಬಿಡುವರೇ. |
| ಸಂಜೆ : | ಹಾಗಾಗುವದಕ್ಕೆ ರಕ್ತದ ಕಾಲುವೆಗಳು ಹರಿದಾವು. |
| ಹನು : | ಹರಿದರೇ ಅದರಲ್ಲಿ ಈಸಾಡಲಿಕ್ಕೆ ನಮ್ಮೊಡೆಯರು ಗಟ್ಟಿಗರಿದ್ದಾರೆ! |
| ಸಂಜೆ : | ಶ್ರೀರಂಗರಾಯರ ಪಟ್ಟದಾಲೋಚನೆಯಿಂದ ಬೇರೆ ಏನೂ ಆಗದಿದ್ದರೂ ನಿಮ್ಮ ನಾಯಕರು ತಮ್ಮ ಜೀವನವನ್ನು ಸಂಕಟದಲ್ಲಿ ಕೆಡವಿಕೊಳ್ಳುವರು. ಅವರು ಈ ಹವ್ಯಾಸವನ್ನು ಬಿಟ್ಟು ಕೊಡುವದೇ ವಿಹಿತವೋ! |
| ಹನು : | ಹಿಡಿದ ಹಟವನ್ನು ನಮ್ಮೊಡೆಯರು ಎಂದಾದರೂ ಬಿಡುವರೆ! ಮೊಸಳೆಯಾದರೂ ಒಂದು ಸಮಯ ತನ್ನ ಹಿಡಿತವನ್ನು ಬಿಟ್ಟೀತು ಆದರೆ ನಮ್ಮೊಡೆಯರು ಮಾತ್ರ ಯಾವ ಕಾಲಕ್ಕೂ ಹಿಡಿದ ಹಟವನ್ನು ಮಾತ್ರ ಎಂದೂ ಬಿಡಲಾರರು. |
| ಸಂಜೆ : | ಪ್ರತ್ಯಕ್ಷವಾಗಿ ಅವರ ವಿರುದ್ಧ ಯಾರೂ ಹೋಗದಿದ್ದರೂ ಗುಪ್ತವಾಗಿ |

ಅವರ ವಿನಾಶದಾಲೋಚನೆಯನ್ನು ಮಾಡಿದರೆ ನಿಮ್ಮ ನಾಯಕರ ಮನದ ಮಂಡಗಿಯು ಮನಸ್ಸಿನಲ್ಲಿಯೇ ಉಳಿಯುವದಲ್ಲೋ?

**ಹನು :** ಏನು ನಮ್ಮ ನಾಯಕರನ್ನು ಗುಪ್ತವಾಗಿ ನಾಶಮಾಡುವರೇ! ಹೀಗೇನು ಹೇಳುವಿರಿ ಈ ವಿಚಾರವನ್ನು ಮಾಡುವಾಗ್ಗೆ ಯಮದೇವರು ಸಹ ನಡುಗಬಹುದು. ಬರಲಿ ನೋಡುವಾ ಈ ಕರ್ನಾಟಕದಲ್ಲಿ ಅದಾವ ವೀರನಿದ್ದಾನೆ ನಮ್ಮ ಧನಿಯ ಮೇಲೆ ಕೈ ಮಾಡುವವನು. ಒಡೆಯನ ಜತೆಯಲ್ಲಿ ನಾನೊಬ್ಬನಿದ್ದರಂತೂ ರಾಜಧಾನಿಯನ್ನೇ ಹಾಳುಮಾಡಿ ಬಿಟ್ಟಾರು.

**ಸಂಜಿ :** ಬರೇ ಬಾಯಿ ಮಾತಲ್ಲವೋ. ರಾಜಧಾನಿಯನ್ನು ಹಾಳು ಮಾಡುವದೂ, ಬರೀ ಬಾಯಿಮಾತಲ್ಲ.

**ಹನು :** ಬಾಯಿ ಮಾತೇಕೆ ಕೈ ಮಾತನ್ನು ತೋರಿಸಲೋ ಹಿರಿಯಲೇನು ನಮ್ಮ ಕಾಲಿಯನ್ನು ಹೇಳಿ! ಹಿರಿಯಲೋ (ಖಡ್ಗ ಹಿರಿಯುವ)

**ಲಕ್ಷ್ಮ :** ಏನು ಹನುಮಾ. ಈಗಾಗಲೇ ಖಡ್ಗಕ್ಕೆ ಕೈಯಕ್ಕಿದೆ? ತಡೆ ಇನ್ನೂ ಆ ಪ್ರಸಂಗವು ಬಂದಿಲ್ಲ.

**ಹನು:** ಅದೇನಿಲ್ಲ ದೇವರೂ! ಈ ಯಜಮಾನರು ಅಂತಹ ಮಾತು ಗಳನ್ನಾಡಿದರೆಂದು ಸಹಜವಾಗಿ ಕತ್ತಿಯಮೇಲೆ ಕೈ ಹೋಗಿತು ತಮ್ಮ ಮೇಲೆ ಯಾರೋ ಗುಪ್ತವಾಗಿ ಕೈ ಮಾಡುವರಂತೆ.

**ಲಕ್ಷ್ಮ :** ಇದ್ದರೂ ಇರಬಹುದು. ಕರ್ನಾಟಕ ಮಾತೆಯ ನಿಸ್ಸೀಮ ಭಕ್ತರ ಮೇಲೆ ಹೆಜ್ಜೆಜ್ಜೆಗೂ ಆ ಪ್ರಸಂಗವಿದ್ದದ್ದೇ.

**ಹನು :** ಅಂಥವ ರೇತಕ್ಕೆ ಇದ್ದಾರು ಬುದ್ಧಿ! ಸ್ವಲ್ಪಾದರೂ ಸ್ವಾರ್ಥವಿಲ್ಲದೆ ಈ ಕರ್ನಾಟಕ ಸಿಂಹಾಸನದ ಮರ್ಯಾದೆಯನ್ನು ಕಾಯಲಿಕ್ಕೆ ಟೊಂಕಕಟ್ಟಿದ ತಮ್ಮಂಥವರ ಮೇಲೆ ಯಾರಾದರೂ ಕೈ ಮಾಡುವರೇ!

**ಸಂಜಿ :** ಹನುಮಾ! ನೀನು ಸರಳ ವೃತ್ತಿಯವನು. ನಿನಗಂತಹ ಕೀಳು ಜನರ ಕಲ್ಪನೆಯಾಗದು. ಎಲೋ ಕೇವಲ ಸ್ವಾರ್ಥಕ್ಕಾಗಿ ಕರ್ನಾಟಕ ಸಿಂಹಾಸನದ ಪಾವಿತ್ರ್ಯವನ್ನು ಮಲಿನಮಾಡುವ ಎಷ್ಟೋ ಶ್ವಾನವೃತ್ತಿಯ ಕೀಳು ಪ್ರಾಣಿಗಳು ಈ ನಮ್ಮ ಪಟ್ಟಣದಲ್ಲಿವೆ. ಪಟ್ಟಣದಲ್ಲಿ ಅಷ್ಟೇ ಏಕೆ, ಈ ನಮ್ಮ ಕನ್ನಡ ದರ್ಬಾರದಲ್ಲಿಯೇ ಇವೆ.

ಹನು : ಅಂಥವರಾರು ಬುದ್ಧೀ.

ಸಂಜಿ : ನಾನೇ!

ಹನು : ನೀನೇ.

ಸಂಜಿ : ಅಹುದು! ಯಾರೇನಾದರೂ ಸ್ವಲ್ಪು ಆಶೆಯನ್ನು ತೋರಿಸಿದರೆ ನಾನೇ ದೇಶದ್ರೋಹಿಯಾಗಿ ನಿಲ್ಲುತ್ತೇನೆ!

ಹನು : ಹಾಗಾದರೆ ನಿಮ್ಮಂಥ ಮನೆಮುರುಕರನ್ನು ಉಳಿಯಗೊಡಬಹುದೇ ಹೂಂ! ಸಿದ್ಧರಾಗಿರಿ ನೋಡುವಿರೇನು ಒಂದೇಟಿನಲ್ಲಿ ಎರಡು ತುಂಡು ಮಾಡಿ ಬಿಡುವೆನು! (ಖಡ್ಗವನ್ನು ಹಿರಿದು ಸಂಜೀವಿಯ ಮೇಲೆ ನುಗ್ಗುವನು!)

ಲಕ್ಷ್ಮ : ಹನುಮಾ ಇದೇನಾವೇಶವು? ಎಲೋ ಅವರು ಉದಾಹರಣೆಯನ್ನು ಹೇಳಿದರು. ಅವರಂತಹ ಜನಗಳಲ್ಲಾ ಪರಮರಾಜ ಭಕ್ತರು, ಮೇಲಾಗಿ ಪ್ರಜಾಸೇವಕರು. ಅಲ್ಲದೆ ನನ್ನ ಪರಮ ಮಿತ್ರರು!

ಹನು : ಹೀಗ್ರೇ! ಹಾಗಾದರೆ ರಾಯರೇ?

**ಪದ – (ನಂ. ೧೧) ರಾಗ – ಕಾಂಬೋದಿ ತಾಳ – ಕೇರವಾ**

॥ ಮಣಿಯುವೆ ನಿಮಗೆ ಗುಣಗಣ ಸೀಲರೇ । ವಿನಯ ಹೀನಗಾಗಿ ॥
॥ ನಾನು ಮಾಡಿದ ಘನಪರಾಧ ಮನ್ನಿಸಿರಿ ರಾಯರೇ ॥ ಪಲ್ಲ ॥
॥ ನೋಡಿ ಸವಿಸುತಿರುವಾ । ಕನ್ನಡನಾಡಿಗಾಗಿ ತನುವಾ । ರೂಢಿಯಲ್ಲಿ ॥
॥ ಧನ್ಯರಾದ ಪುರುಷರೆ । ಗಾಡಬಾರದಾಡಿದೆನು ಮೂಢನೊ ॥ ೧ ॥
॥ ಕೇಳಿ ನಿಮ್ಮ ನುಡಿಯಾ । ಭಾವವ ತಿಳಿಯದಾದೆರಾಯಾ ತಾಳಿಕೀಳ ॥
॥ ರೋಷವನ್ನು ಖಡ್ಗವ । ಝಳಿಪಿಸಿದೇನು ನಿಮಗಾಗಿ ಪಾಪಿಯೊ ॥ ೨ ॥

(ಸಂಜೀವಿಯ ಪಾದಕ್ಕೆರಗುವನು)

ಸಂಜಿ : (ಅವರನ್ನು ತಡೆದು) (ಕಂಬನಿಗಳನ್ನೊರಿಸಿಕೊಳ್ಳುತ್ತಾ) ಅಹಹ ! ನಾಯಕರೇ ಈ ನಿರ್ಮಲವಾದ ನಾಡಭಕ್ತಿಯನ್ನು ನೋಡಿ ಅಂತಃಕರುಣವು ತುಂಬಿ ಬಂದಿತು.

ಲಕ್ಷ್ಮ : ಹನುಮಾ? ನೀನು ತಲೆಬಾಗಿಲಲ್ಲಿರು! ಅಪ್ಪಣೆಯಿಲ್ಲದೇ ಒಳಗೆ ಯಾರನ್ನೂ ಬಿಡಬೇಡ (ಹನುಮನು ಹೋಗುವನು)

ಸಂಜೆ : ದೇವರೂ ಬರ ಬರುತ್ತಾ ಕಾರ್ಯವು ಬಹು ಕಠಿಣವಾಗ ತೊಡಗಿದೆ ಬಾಯಮ್ಮ ಜಗ್ಗರಾಯರು ಅನೇಕ ಜನ ಸರ್ದಾರರನ್ನು ತಮ್ಮ ಪಕ್ಷದಲ್ಲಿ ತೆಗೆದುಕೊಂಡಿದ್ದಾರೆ. ಇದೂ ಅಲ್ಲದೆ ತಮ್ಮ ವಿನಾಶದಾಲೋಚನೆಯು ಕೂಡಾ ನಡೆದಿರಬಹುದೆಂದು ನನಗೆ ಬಲವಾದ ಸಂಶಯ ಬಂದಿರುವದು!

ಲಕ್ಷ್ಮಿ : ಸಂರಕ್ಷಿಸಲು ಭುವನೇಶ್ವರಿಯು ಸಮರ್ಥಳಿದ್ದಾಳೆ ! ಅದಿರಲಿ, ಚಿಕ್ಕರಾಯನ ವಿಷಯ?

ಸಂಜೆ : ಅದು ಮಾತ್ರ ಯಾವದು ತಿಳಿಯದಾಗಿದೆ. ಬಾಯಮ್ಮಾ ಮಹಾರಾಣಿಯವರು ಬಸುರಾಗದೇ ಆ ಮಗುವನ್ನು ಹಡೆದರೆಂಬ ಸಂಗತಿಯು ಮಾತ್ರ ಸತ್ಯವಾದದ್ದು! ಆದರೆ ಅದನ್ನಾರಿಂದ ಮಾರಲಿಕ್ಕೆ ತೆಗೆದುಕೊಂಡರೆನ್ನುವದು ಗೊತ್ತುಹಚ್ಚುವದು ಪರಮ ಪ್ರಯಾಸವಾಗಿದೆ!

ಲಕ್ಷ್ಮಿ : ಅದು ಜಗದೇವರಾಯನ ಗೂಢತಮ ರಾಜತಂತ್ರವಿದೆ. ಅದಿರಲಿ ಜಗದೇವರಾಯನು ಯಾವಾಗಲೂ ಅರಮನೆಯಲ್ಲಿಯೆ ಇರುತ್ತಾನೇನು!

ಸಂಜೆ : ಯಾವಾಗಲೂ ಇದ್ದಂತೆಯೇ ಇರುತ್ತಾರೆ ! ಆದರೆ ವಾರದಲ್ಲಿ ಒಂದೆರಡು ಸಲ ಎತ್ತಲೋ ಹೋಗಿ ಬರುತ್ತಾರಂತೆ

ಲಕ್ಷ್ಮಿ : ಅವನು ಎಲ್ಲಿಗೆ ಹೋಗುತ್ತಾನೆನ್ನುವದನ್ನು ನೀನು ಸರಿಯಾಗಿ ಶೋಧಿಸು!

ಸಂಜೆ : ಆಗಲಿ! ನಾನು ಬರುವೆನು ಕತ್ತಲಾಯಿತು!

ಲಕ್ಷ್ಮಿ : ಜತೆಯಲ್ಲಿ ಬೇಕಾದರೆ ಹನುಮನನ್ನು ಕರೆದುಕೊಂಡು ಹೋಗು!

ಸಂಜೆ : ಕತ್ತಲಿನಲ್ಲಿ ಭಯವಾಗುವದೆಂದು ಹಾಗೆ ಹೇಳಲಿಲ್ಲ ಮಹಾಬುದ್ಧೀ! ಮಹಾರಾಣಿಯವರ ಸೇವಾಸಮವಾಯಿತೆಂದು ಹಾಗೆ ಹೇಳಿದೆನು! (ಹೋಗುವಳು)

ಲಕ್ಷ್ಮಿ : ಹನುಮಾ! ಹಾಸಿಟ್ಟಿರುವಿಯೇನೋ ನಿದ್ರೆಯು ಬಂದಿದೆ.

ಹನು : ಸಿದ್ಧವಿದೆ ಬುದ್ಧಿ

ಲಕ್ಷ್ಮಿ : ನೀನು ಸಹ ಊಟ ಮಾಡಿ ನಿದ್ರಿಸು ಹೋಗು (ಹನುಮಾ ಹೋಗುವಾ,

ನಾಯಕರು ಮಲಗುವರು)

**ಪ್ರವೇಶ** ಉದ್ಯಾನ ಬಾಯಮ್ಮ ಮತ್ತೂ ಕರಿಯಾ ಜಟ್ಟಿಗಳು ಕಪ್ಪು ವೇಶದಲ್ಲಿ

**ಬಾಯ :** ಕರಿಯಾ ಇಂದು ನಿನ್ನ ಧೈರ್ಯ ಕೌಶಲ್ಯಾದಿಗಳ ಪರೀಕ್ಷೆಯಿದೆ ನೋಡುವಾ. ಹೇಗೆ ಕಾರ್ಯಭಾರವನ್ನು ಕೊನೆಗಾಣಿಸುವಿಯೋ!

**ಕರಿಯಾ :** ದೇವರೂ ಈಗ ನಾನಾಡೋದು ಸಿಂಹನ ಬ್ಯಾಟಿ ಉಳದ್ರ ತಮ್ಮ ಪಾದಾ ಕಾಣತೇನಿ ಇಲ್ಲಿದ್ರ ಅದರಾಗ ಹೋದ್ನೇ ಮಕ್ಕಳು ಮರಿಗಳ ಭಾರ ನಿಮ್ಮ್ಯಾಲೆ!

**ಬಾಯ :** ಅದರ ಆಲೋಚನೆಯೇ ಬೇಡಾ । ಈ ಸಾರೆ ಯಶಸ್ವಿಯಾದರೆ ನಿನ್ನ ಮನೆಯೇ ಬಂಗಾರದ್ದಾಗುವದು.

**ಕರಿ :** ಅದೀತ ದೇವರೂ, ಬಂಗಾರದ್ದೂ, ದೇವರ ಮನಸ್ಸಿಗೆ ಬಂದ್ರ ಏನಾಗಲಿಕ್ಕಿಲ್ಲ, ಆದ್ರ ಯಚ್ಚಮನಾಯಕರ ಮನೀ ಮೇಲ್ ಮಾಳಗೀ ಹತ್ತಿ ಅವರ ಕ್ವಾಣ್ಯಾಗ ಇಳಿಯೋದ ಒಂದು ದೊಡ್ಡ ಕೆಲ್ಸ.

**ಬಾಯ :** ಅದಾದರೂ ಏನು ಅಸಾಧ್ಯವಲ್ಲಾ. ಯಾಕೆಂದರೇ ಅವನಿಗೆ ತನ್ನ ಶೌರ್ಯದ ಅಹಂಕಾರವು ಮಿತಿಮೀರಿದೆ ಅಂತೇ ಮನೆಗೆ ಕಾವಲು ಕಟ್ಟುಗಳನ್ನಿಟ್ಟು ಕೊಂಡಿಲ್ಲಾ.

**ಕರಿ :** ಮನಗೆ ಕಾವಲುಕಟ್ಟುಗಳಿಲ್ರೆ.

**ಬಾಯ :** ಇಲ್ಲವೇ ಇಲ್ಲಾ. ಅವನೊಬ್ಬ ಹನುಮನೆಂಬ ಸೇವಕನು ಮಾತ್ರ ಇರುತ್ತಾನೆ.

**ಕರಿ :** ಹನುಮನೇ? ಬರಮವ್ವ ಬಸವೀ ಮಗಾ । ಅವಂದೇನ ಬಿಸಾತ್ ಬಿಡ್ರಿ ದೇವರೂ, ಹೊತ್ತು ಬಂದ್ರs ಅವನ್ನೂ ಇಕ್ಕರ್ಸಿಬರ್ತೇನಿ.

**ಬಾಯ :** ಅವನ ಮನೆಯ ಹಿಂಭಾಗದ ತೋಟದಲ್ಲಿ ಒಂದು ಹುಣಿಸೇ ಮರವಿದೆಯಂತೆ. ಅದರ ಟೊಂಗೆಗಳು ಅವನ ಮೇಲುಪ್ಪರಿಗೆಯ ಸಮೀಪಕ್ಕೆ ಹಾಯ್ದು ಹೋಗಿವೆಯಂತೆ, ಅವುಗಳ ಆಧಾರದಿಂದಾ ಮೇಲಕ್ಕೇರಿ ಹೋಗು. ತೀವ್ರ ನಡೆ! ಮಧ್ಯರಾತ್ರಿಯಾಯಿತು ವಂದೇ ಹೊಡೆತಕ್ಕೆ ಸತ್ತನೆಂದು ಬಿಡಬೇಡಾ. ನಾಲ್ಕಾರು ಏಟುಗಳನ್ನು ಸರಿಯಾಗಿ ಆಯಕಟ್ಟಿನಲ್ಲಿ ಹಾಕು.

**ಕರಿ :** ಅದು ಚಿಂತೀನ ಬ್ಯಾಡ್ರಿ, ಹಲಸಿನ ಹಣ್ಣು ಕೊಚ್ಚಿದಾಂಗ ಕೊಚ್ಚಿ

ಬರ್‍ತೇನೆ ಬಿಡ್ರಿ.

**ಬಾಯ :** ಇದೋ ಸಧ್ಯಕ್ಕೆ ಈ ಮುತ್ತಿನ ಸರವನ್ನು ತೆಗೆದುಕೋ (ಮುತ್ತಿನಸರ ಕೊಡುವಳು)

**ಕರಿ :** (ನಮಿಸಿ) ಬರ್‍ತೇವ್ರಿ ದೇವರೂ, (ಹೋಗುವನು)

**ಬಾಯ :** ಂಯಲೇ, ಲಕ್ಷ್ಮಣನಾಂಯಕಾ, ಅಹಂಕಾರದ ಕೋಳಿಂಯೇ ಶ್ರೀರಂಗರಾಯನನ್ನು ಕರ್ನಾಟಕ ಪಟ್ಟದಮೇಲೆ ಕುಳ್ಳಿರಿಸುವಿಯಾ? ನಿನ್ನನ್ನೂ, ಕುಳಿತುಕೊಳ್ಳಲುದ್ಯುಕ್ತನಾದ ಶ್ರೀರಂಗರಾಯನನ್ನೂ ಮತ್ತು ಅವನ ಬಂಧು ಬಳಗವನ್ನೂ ದೇವಿಯ ಎದುರಿನಲ್ಲಿ ಕೋಳಿ ಕುರಿಗಳನ್ನು ಕೊಯ್ದು ಚಲ್ಲುವಂತೆ ಕಡಿದು ಕಡಿದು ಚೆಲ್ಲುವೆನು. ಹಾಳು ಹುಚ್ಚನಾಯಿಯಾದ ನಿನಗೆ ಈ ಬಾಯಮ್ಮನ ನೆಲೆಯು ಹೇಗೆ ಗೋತ್ತಾದೀತು. ನನ್ನ ಚಿಕ್ಕನು ಪಟ್ಟಬಾಧ್ಯನಾಗದಿದ್ದರೆ ಈ ಕರ್ನಾಟಕ ಸಿಂಹಾಸನವನ್ನೇ ಸುಡಿಸಿ ಬಿಡುವೆನು. ವಿಜಯನಗರದ ಮೇಲೆ ರಂಟೆಯನ್ನೆಳಿಸಿಬಿಡುವೆನು. ಕರ್ನಾಟಕ ರಾಜ್ಯವು ಇತ್ತೋ ಇಲ್ಲೋ ಎನಿಸಿಬಿಡುವೆನು.

**ನಂ. ೧೨ ರಾಗ – ಕಾನಡಾ ತಾಳ – ಜಲ್ದಯಕ್ಕಾ**

ಪದ ॥ ಸಾಹಸಿಯ ವಿಚಾರದಿಂದ ॥ ಸಹನಾತೀತ ರೋಷವನಿಗಾ ॥
॥ ತಾಳಿತು ಮನವು ॥ ಪ ॥ ಅವನ ಜೀವವನ್ನು ಹೀರದಿರೆ ಪರಿ ॥
॥ ಪರಿ ಕಾಡಿ ಕಾಡಿ । ಅವನಿಪ ಸತಿಯಲ್ಲ ನಾನು ॥೧॥

**ಪ್ರವೇಶ**

(ಲಕ್ಷ್ಮಣನಾಯಕನ ಮನೆ ಹಿಂಬದಿಯ ತೋಟದಲ್ಲಿ ಕರಿಯಾ ಜಟ್ಟಿ)

**ಕರಿ :** ಯಚ್ಚಮನಾಯಕರ ಧೈರ್ಯದ ಮುಂದೆ ಧೈರ್ಯಾನ ಇಲ್ಲಾ ತಮಗೆಲ್ಲಾ. ಪಟ್ಟಾನೂ ವೈರಿಯಾಗಿ ನಿಂತದ. ಯಾವ್ವಾಳ್ಯಾಕ ಏನಾದೀತೆಂಬೊ ನಂಬಗೀನ ಇಲ್ಲಾ. ಹಿಂತಾದ್ರಾಗ ಹೀಗ ಅರುವುಗೆಟ್ಟರೋದ! ಇನ್ನೊಬ್ಬರಾಗಿದ್ರ ಮನೀ ಸುತ್ತಮುತ್ತ ವಂದ್ಧತ್ತಿಪ್ಪತ್ತಾಳು ಬಿಚ್ಚಗತ್ತಿ ಕಾವಲಾ ಇಡಸತಿದ್ರು! ಅವರೂ ಹೀಗ ಅರುವುಗೆಟ್ಟರೋದ್ ನಮಗೂ ಲಾಭಾನ ಅದ ಅಂತಾ ಅನ್ರಿ. (ಗಂಟೆ ಬಾರಿಸುವದು) ಆಲಲಲ! ಯೇಳು ತಾಸು ರಾತ್ರಿಯಾಯಿತು. ಲೋಕೆಲ್ಲಾ ಸ್ತಬ್ಧ

ಮಲಗಿ ಬಿಟ್ಟಿದ. ಹಿಂತಾದ್ರಾಗ ಯಚ್ಚರಿಕೆಂದ್ರ ನಮ್ಮಂಥಾ ಕಳ್ಳ ವ್ಯಾಪಾರ ಮಾಡೋರಿಗೆ, ಮತ್ತೊಂದು ಗೊಗ್ಗೆ ಅನ್ನೋರು ಅನ್‌ವಲ್ರ್ಯಾಕ ನಮ್ಮ ಜನ್ಮಾ ಅದರ ಜನ್ಮಾವಂದ ಅಂತ ಅದರ ರೊಕ್ಕ ಯಾರಮನಿದೋ ಯಣ್ಣಾ! ವಂದಸಾರೆ ಹಿಂತಾ ಕೆಲ್ಸಾ ಮಾಡಿ ಬಿಟ್ರೆ ಮೊಮ್ಮಕ್ಕಳು ಮರಿಮಕ್ಕಳತನ್ಕಾ ಹೊಟ್ಟೇಬಟ್ಟೀ ಚಿಂತೀನಯಿಲ್ಲಾ. ಪರಪಂಚದಾಗ ವಮ್ಮೆಲೇ ದೊಡ್ಡ ಮನಸೇರಾಗೋದು, ಹೀಗೇನಾರ ಮಾಡಿದಾಗನs ! ಅಂತೂ ಯಿಚಾರಮಾಡಿದ್ರ, ಅರಸರೂ ನಾವೂ ವಂದ. ನಾವು ವಂದ್ಯಾಡ್ಡು ಜೀವಾ ತಕ್ಕೋತೇವಿ. ಅವರು ಕೋಟ್ಯಾನಕೋಟಿ ಜೀವಾ ತಕ್ಕೊಂತಾರ ನಮಗೆ ತಕ್ಕಾಂಗ ನಮಗ ಸಿಗತದ ಅವರಿಗೆ ತಕ್ಕಾಂಗ ಅವರಿಗೆ ಸಿಗತದ. ಅಂತೂ ಸಿಗೋದೇನೋ ನಿಜ. ಎಲೆ ನಿನ್ನಾಪ್ಪ ಕರಿಯಾ! ಗಾಂಜೀ ಮಬ್ಬಿನ್ಯಾಗ ಸುಮಾಕ ಯಿಚಾರ ಮಾಡಿಕೊಂತ ನಿಂತೆಲ್ಲಲೇ ನನಮಗನ ॥ ಯಾರಾರ ನೋಡಿದ್ರ ಯೇನಾದೀತು! ನೀ ಯಚ್ಚಮನಾಯಕನ ಕೊಚ್ಚೋದರ ಬದಲಾಗಿ ನಿನ್ನ ಯಾರಾದರೂ ಕೊಚ್ಚಿ ಕೋಳೀ ಕಾಣಿಸಿಬಿಟ್ಟಾರು ಹೂಂ ಗಡಾನ ತಯಾರಾಗು. (ಅತ್ತಿತ್ತ ನೋಡಿ) ಹಾಂ ಈ ಹುಣಸೀಮರದ ಟೊಂಗಿ ನಾಯಕರ ಮೇಲಮಾಳಿಗೆ ಸಮೀಪಕ್ಕೆ ಹಾಯ್ದು ಹೋಗೇದ ಅದನ್ನ ಹಿಡಕೊಂಡೇರಿ ಅವರ ಮಲಗೋ ಜಾಗಾದಾಗ ಇಳಿಯೋಣ (ಹೋಗುವನು) ಲಕ್ಷ್ಮಣನಾಯ್ಕನ ಕನಸು. ಕರಿಯಾ ಮಂಚದ ಬುಡಕ್ಕೆ ಅವಿತುಕೊಳ್ಳುವನು)

**ವೆಂಕಟಪತಿರಾಯ : ಪದ – (ನಂ. ೧೩) ರಾಗ – ಭೈರವಿ ತಾಳ – ಝಂಪಾ**

॥ ವಾಸನಾಮಯವಾದ । ಹೇಸಿದೇಹವನಾಂತು । ಏಳುದಿನ ಕಳಿಯಲೀ ॥
॥ ಭೋ ವಾಸುದೇವಾ ॥ಪ॥ ಇಹವಿಲ್ಲ ಪರವಿಲ್ಲ । ಎರವಾದೆನೆರಡಕೆ ॥
॥ ಸಹಿಸ ನಾನೀ । ಸ್ಮಶಾನಾ ವಾಸವನ್ನೂ ॥೧॥

**ಲಕ್ಷ್ಮ :** ಮಹಾಸ್ವಾಮೀ? ನನ್ನದೇನಪರಾಧವು?

**ಕರಿ :** (ಗಾಬರಿಯಿಂದ) ಏನಪ್ಪಾ ! ಎಚ್ಚರಿಕೆ ಲೇ ಅದಾರಲ್ಲೋ? ಯಾರಗೂಡಾ ಮಾತಾಡ್ತಾರು?

**ವೆಂಕ :** ನನ್ನ ಶಾಸನವನ್ನು ನೆರವೇರಿಸಲೇಯಿಲ್ಲವಲ್ಲಾ! ಕಡೆಗೆ ಆ ಅಪವಿತ್ರ

ಚಿಕ್ಕನನ್ನೆ ನಾಳಿಗೆ ಪಟ್ಟಗಟ್ಟುವರು ಮುಂದೆನು ಗತಿ ಕರ್ನಾಟಕ ಸಿಂಹಾಸನಕ್ಕೆ ಮೈಲಿಗೆಯಾಗುವದು.

ಲಕ್ಷ್ಮ : ಮಹಾಸ್ವಾಮೀ! ಚಿಕ್ಕರಾಯನು ತಮ್ಮ ಚಿರಂಜೀವನೆಂದು ಅವನಿಗೇನೇ ಪಟ್ಟವಾಗಬೇಕೆಂದು ಧರ್ಮಮೂರ್ತಿಗಳಾದ ರಾಜಗುರುಗಳು ಮೊದಲುಗೊಂಡು ನಿರ್ಣಯವನ್ನು ಮಾಡಿದ್ದಾರೆ.

ಕರಿ : ಅಲಲ! ಇವರಿಗೆ ಕನಸು ಬಿದ್ದಿದೆ ಕನಸು ಕನಸಿನ್ಯಾಗ ಮಾರಾಜರು ಬಂದಾರು, ಮಾರಾಜರು ಬಂದಾರೋ ಏನ ಅವರ ದೆವ್ವಾ ಗಿವ್ವಾ ಬಂದದೊ! ನೋಡೆರ ನೋಡ್ಲ್ಯಾ? (ನೋಡಿ) ಏನೂ ಇಲ್ಲ ಬರೇ ಕನಸಿನ್ಯಾಗ ಬಡಬಡಸತಾರು

ವೆಂಕಟಪತಿ : ಲಕ್ಷ್ಮಣನಾಯಕಾ? ವಿದ್ಯಮಾನ ಸಂಗತಿಗಳಿಂದ ಗುರುಗಳು ಹಾಗೆ ನಿರ್ಣಯಿಸಿದ್ದಾದರೂ ಸರಿಯೇ ಆದರೆ ಅವನು ನನ್ನ ಕುಮಾರನೇ ಅಲ್ಲ

ಲಕ್ಷ್ಮ : ಹಾಗಾದರೆ ಆ ಚಿಕ್ಕರಾಯನು ಯಾರ ಮಗನು.

ಕರಿ : ಅದು ಒಂದು ನನಗ್ಗೊತ್ತು ಮತ್ತೊಂದು ಜಗ್ಗರಾಯರಿಗ್ಗೊತ್ತು ಉಳಿದವರಿಗದರ ಸುದ್ದೇ?

ವೆಂಕಟಪತಿ : ಅದೇನೋ ತಿಳಿಯದು ಆ ಜಗ್ಗನು ತಾನೇ ವಿಜಯನಗರದ ಅರಸನಾಗಬೇಕೆಂದು ಎಲ್ಲಿಯದೋ ಒಂದು ಕುನ್ನಿಯನ್ನು ತಂದು ನನ್ನ ಮಗನನ್ನಾಗಿ ಮಾಡಿದ್ದಾನೆ. ಬಾಯಿಯು ಬಸುರಾಗದೇ ಹೇಗೆ ಹಡೆದಳು?

ಲಕ್ಷ್ಮ : ಮಹಾಸ್ವಾಮೀ ಮಹಾರಾಣಿಯವರು ಬಸುರಾಗಲಿಲ್ಲವೆಂಬ ಸಂಗತಿಯು ಸಂಜೀವಿಯಿಂದಾ ನನಗೆ ತಿಳಿದಿದೆ.

ಕರಿ : ಬಸರಾಗದೇ ಮಗನ್ನಡದವರಂದ್ರ ಈ ಲೋಕದಾಗ ನಮ್ಮ ಬಾಯಮ್ಮ ರಾಣೇರ, ಆದಾತೂ ಆ ಸಂಜೀವಿ ಯಾರು? ಹಾಂ! ದಾಸಿ ಮಾಲ್ನಾಗಿರೋ ದಾಸಿ. ಪಿತೂರಿ ಮಾಡ್ಯಾಳಲ್ಲ ಪಿತೂರಿ! ಎಲೇ ಸಂಜೀವಿ, ನಾಳಿಗದ ಬಾ ನಿನ್ನಾಟ ಕತ್ತಿಬಾಯಾಗ.

ವೆಂಕಟಪತಿ : ಅವನು ನನ್ನ ಮಗನಲ್ಲವೆನ್ನುವದು ನಿನಗೆ ಗೊತ್ತಿದ್ದರೂ ಈ

ಸಮಯದಲ್ಲಿ ಸುಮ್ಮನೇ ಕುಳಿತಿರುವಿಯಾ! ಲಕ್ಷ್ಮಣನಾಯಕಾ, ಇದೋ ಏನೋ ನಿನ್ನ ರಾಜಭಕ್ತಿ? ಪರಮ ಪವಿತ್ರನಾದ ಶ್ರೀ ಭುವನೇಶ್ವರೀ ಕೃಪೆಯಿಂದ ಪರಮಪೂಜ್ಯ ಕರ್ನಾಟಕ ಸಿಂಹಾಸನಸ್ಥಾಪನನಾಚಾರ್ಯರಾದ ವಿದ್ಯಾರಣ್ಯದ ಮಹಾಸ್ವಾಮಿಯವರಿಂದ ಸ್ಥಾಪಿಸಲ್ಪಟ್ಟ ಪವಿತ್ರ ಸಿಂಹಾಸನದಲ್ಲಿ ಅಪವಿತ್ರ ಪ್ರಾಣಿಯು ಕುಳಿತುಕೊಳ್ಳುವದು ನಿನಗೆ ಸಮ್ಮತವೋ? ಆಗಲಿ ನಮ್ಮ ಪ್ರಾರಬ್ಧ ದಿವಂಗತರಾದ ನಮ್ಮಿಂದೇನಾಗತಕ್ಕದ್ದಿದೆ! ಮನೋವಾಂಛಿತವು ಕೊನೆಗಾಣದಿರುವಲ್ಲಿ ವಾಸನಾಮಯವಾದ ಪಿಶಾಚ ಯೋನಿಯಲ್ಲಿ ಕೊಳೆಯುತ್ತ ಹೀಗೆಯೇ ಕಾಲಹರಣ ಮಾಡುವಾ. ಲಕ್ಷ್ಮಣನಾಯಕಾ, ನಮ್ಮ ದೌರ್ಭಾಗ್ಯಕ್ಕೆ ನೀನೇನ ಮಾಡೀ! (ಕಣ್ಣೀರು ಸುರಿಸುವನು)

**ಲಕ್ಷ್ಮ :** ಮಹಾರಾಜ, ಕಣ್ಣೀರು ಸುರಿಸಬೇಡಿ ನಿಮ್ಮ ಪಾದದಾಣೆಯಾಗಿಯೂ ಮಾಡಿದ ಪ್ರತಿಜ್ಞೆಯನ್ನು ಪೂರ್ಣಮಾಡುವೆನು.

**ಕರಿ :** ಪ್ರತಿಜ್ಞಾ ಪೂರ್ಣಾ ಮಾಡತಾರಂತ ಪರಿತಿಜ್ಞಾ! ಈ ಕರಿಯಾ ಜಟ್ಟೀ ಕಠ್ಯಾರಿ ಹೊಡೆತದಾಗ ಉಳಿದರ ಹೌದಲ್ಲೋ ಪರಿತಿಜ್ಞಾ ಗಿರತಿಜ್ಞಾ.(ಎಂದು ಕಠಾರಿಯಿಂದಾ ಹೊಡೆಯುವಷ್ಟರಲ್ಲಿ ಹನುಮನು ಹಿಡಿಯುವನು)

**ಹನು :** ನಿಲ್ಲು ಕಳ್ಳಾ.

**ಲಕ್ಷ್ಮ :** (ಎಚ್ಚತ್ತು) ಯಾರದು?

**ಹನು :** ಬುದ್ಧಿ ಇದಾವನೋ ಕೊಲೆಗಡಕನು ತಮ್ಮನ್ನು ಘಾತಿಸುವ ವಿಚಾರದಿಂದಾ ಇಲ್ಲಿಗೆ ಬಂದಿದ್ದನು.

**ಲಕ್ಷ್ಮ :** ಬಿಡವನ ಕೈಯನ್ನು.

**ಹನು :** (ಕಠಾರಿಯನ್ನು ಕಸಿದುಕೊಳ್ಳುವನು)

**ಲಕ್ಷ್ಮ :** ಅದನ್ನೇಕೆ ಕಸಿದುಕೊಂಡೇ? ಅದು ಅವನ ವಾಂಛಿತವನ್ನು ನೇರವೇರಿಸುವ ಸಾಧನವಾಗಿದೆ, ಕೊಡು. ಅವನದವನಿಗೆ, ಅಯ್ಯಾ ಬಂಧುವೇ ನೀನಾರು? ಏತಕ್ಕೆ ನನ್ನನ್ನು ಕೊಲ್ಲಲು ಬಂದೆ! ಈ ವಿಜಯನಗರದ ಉಪ್ಪುಂಡ ನಾನು ಮಾಡಬಯಿಸುವ ಕರ್ನಾಟಕ ಸಿಂಹಾಸನದ ಸೇವೆಯು ಮನಸ್ಸಿಗೆ ಬಾರದ್ದಕ್ಕೆ ನೀನು ಹೀಗೆ

ಮಾಡಲುದ್ಯುಕ್ತನಾದೆಯಾ? ಅಥವಾ ನನ್ನನ್ನು ವಧಿಸಿದರೆ ನಿನಗಾರಾದರೂ ವಿಪುಲ ಸಂಪತ್ತಿಯನ್ನು ಕೊಡಲೊಪ್ಪಿರುವರೋ! ನಾಡಬಂಧುವೇ ನನ್ನನ್ನು ಸಂಹರಿಸಲಿಕ್ಕೆ ಏಕಾಂಗಿಯಾಗಿ ಬಂದ ನೀನು ನಿಸ್ಸಂದೇಹವಾಗಿ ಶೂರನು, ಆದರೆ ನಿನ್ನ ಶೂರತ್ವವು ಮರೆಯಲ್ಲಿ ಕುಳಿತ ಯಾವ ಹೇಡಿಗಳ ಸಲುವಾಗಿಯೋ ದುರುಪಯೋಗವಾಗುತ್ತ ನಡೆದಿದೆ. ಹೇಳು ಹೇಳು ನೀನಿಂತಹ ಸಾಹಸಕ್ಕೆ ಉದ್ಯುಕ್ತನಾದ ಕಾರಣವೇನು!

**(ನಂ. ೧೪) ರಾಗ – ದಕ್ಷಿಣಾದಿ ಭೈರವಿ ತಾಳ – ದಾದರಾ**

ಪದ ॥ ರಾಮಾಯಣ ಕಾಲದ ಹನುಮನಂತೆ ಸ್ವಾಮೀಸೇವೆಯ ನೀನು ॥
॥ ಮಾಡಿದಿಯ್ಯೆ । ನೀನು ॥ ಪಲ್ಲ ॥ ಮೃತ್ಯುವು ಯತ್ತಿತುತ್ತಾಗಿ ॥
॥ ಮಾಡುವ ಸಮಯದೇ । ಹತ್ತರಕ್ಕೆ ಬಂದು ಕರವನಿತ್ತು ಕಾಯ್ದಿ ॥
॥ ಕರುಣೆಯಿಂದ ॥ ೧ ॥ ರಸನೆಯು ಸಾಲದು ನಿನ್ನಯ ಅಸಮ ॥
ವಾದ ಸೇವೆಯನ್ನು । ಹಸುಳನೆ ಬಣ್ಣಿಸೆದೀರ್ಘಾ । ಯುಷಿಯಾ ॥
॥ ಗೈ ಈಶದಯದಿ ॥ ೨ ॥ ಧನ್ಯಳೊ ನಿನಗೆ ಜನ್ಮ । ವನ್ನು ಕೋಟ್ಟು ॥
॥ ಸಲುಹಿದ । ವನಿತಾಮಣೀ ॥ ನಿನ್ನಂಥ ಪುಣ್ಯಪುರುಷರು ಮಾನ್ಯ ॥
॥ ರಯ್ಯ ಇಹಪರದಲಿ ॥ ೩ ॥

**ಹನು :** (ಕಣ್ಣೀರು ಸುರಿಸುವನು)

**ಲಕ್ಷ್ಮ :** ಹನುಮಾ ಕಣ್ಣೀರು ಸುರಿಸಬೇಡಾ ನನ್ನ ಗಂಡಾಂತರವು ದೂರಾಯಿತಲ್ಲವೇ!

**ಹನು :** ಸ್ವಾಮಿ ! ತಾವು ಸತ್ತು ಹೋಗಿದ್ದರೇ।

**ಲಕ್ಷ್ಮ :** ಹೋಗಿದ್ದರೆ, ಈಗಂತೂ ಹೋಗಲಿಲ್ಲವಲ್ಲಾ! ಹೇಳು ಹೇಳು ಈ ಚಮತ್ಕಾರವು ಹೇಗಾಯಿತು!

**ಹನು :** ದೇವರೂ! ತಾವು ಮಲಗಿದೊಡನೆಯೇ ನಾನಾದರೂ ಹೊರಗೆ ಬಂಕದಲ್ಲಿ ಮಲಗಿದೆನು. ಆದರೆ ನಿದ್ರೆಯು ಹತ್ತಲಿಲ್ಲ. ಅಷ್ಟರಲ್ಲಿ ಹಿಂಭಾಗದ ತೋಟದ ಬೇಡಿಯ ಹತ್ತರ ನಾಯಿಗಳು ಬೊಗಳಿದವು. ಮೆಲ್ಲಗೆ ಹೋಗಿ ಸೂಕ್ಷ್ಮವಾಗಿ ನೋಡುವಷ್ಟರಲ್ಲಿ ಯಾರೋ ಹುಣಸಿಗಿಡದ ಮೇಲಿಂದಾ ತಾವು ಮಲಗುವ ಮಾಲಾಲ್ಲಿ ಇಳಿದಂತಾಯಿತು ಏನೋ ಮೋಸವಿದೆಯೆಂದು ತೀವ್ರ ಒಳಗೆ ಬಂದು ಅಟ್ಟವನ್ನೇರಿ ತಮ್ಮ ಕೋಣೆಯ ಬಾಗಿಲನ್ನು ದಬ್ಬಿ

ನೋಡಿದೆನು. ಒಳ ಚಿಲಕವಿತ್ತು. ಕೂಡಲೇ ಇವನು ಯಾವ ಮಾರ್ಗವಾಗಿ ಬಂದನೋ ಅದೇ ಮಾರ್ಗವಾಗಿ ಬಂದು ನೋಡುವಷ್ಟರಲ್ಲಿ ಈ ಪ್ರಕಾರ ಕಣ್ಣಗಳಿಗೆ ಬಿತ್ತು. ಮುಂದಿನ ಸಂಗತಿಯಂತೂ ದೇವರಿಗೆ ಗೊತ್ತೇ ಇರುವದು.

ಲಕ್ಷ್ಮ : ಯಲೋ ನೀನಾರೋ!

ಕರಿ : ದೇವರೂ! ಯಾರಂಬೋದನ್ನೇನ ಮಾಡತೀರಿ? ವಬ್ಬ ಪಾಪಿಷ್ಟ ಮುಂಡೇಮಗಾ ಇದ್ದೇನಿ. ಗಡಾನ ರುಂಡಾ ಹಾರಿಸಿಬಿಡ್ರಿ ಹೋಗತೇನಿ ಮಾಡಿದ ಪಾಪಾ ಭೋಗಿಸಲಿಕ್ಕೆ ನರಕದಾಗ!

ಲಕ್ಷ್ಮ : ಯಲೋ? ಎರಡನೇಯವರ ಸಲುವಾಗಿ ನೀನು ಇಂತಹ ಆಚರಣೆಯನ್ನು ಮಾಡಿದ್ದರೆ ನಿಶ್ಚಯವಾಗಿ ವಧ್ಯೆನನಸುತ್ತಿದ್ದೆ. ಆದರೆ ನನ್ನ ಸಲುವಾಗಿ ಇಂತಹ ಸಾಹಸಕ್ಕೆ ಸಿದ್ಧನಾದ ನೀನು ಎದೆಗಾರನು. ನಿನ್ನನ್ನು ವಧಿಸುವದಕ್ಕಿಂತಲೂ ಹಾಗೇ ಬಿಟ್ಟರೆ ಮುಂದೆ ನಿನ್ನಿಂದಾ ದೊಡ್ಡವಾದ ಕಾರ್ಯಗಳಾಗಬಹುದು!

ಕರಿ : ದೇವರು ಈ ಹೇಸೀಕಡಿಂದಾ ಮತ್ತ್ಯಾವ ದೊಡ್ಡ ಕಾರ್ಯ ಆಗೋದು ಆದರೆ ಹಿಂತವಲ್ರೆ? ತಮ್ಮಂಥಾ ಸಾವಿರಾರು ಮಂದಿನ ಸಾಕೋ ಮಾರಾಯರ ಮಲಗಿದಾಗ ಕೊಲ್ಲೋದು.

ಲಕ್ಷ್ಮ : ಏನಿದ್ದರೂ ನಿನ್ನನ್ನು ಕ್ಷಮಿಸುವದಕ್ಕಾಗಿ ಭುವನೇಶ್ವರಿಯು ನನಗೆ ಪ್ರೇರಣೆಯನ್ನು ಮಾಡುತಲಿದ್ದಾಳೆ. ಎಲೋ! ನನ್ನ ಸಾವಿನಲ್ಲಿ ಈ ಪವಿತ್ರ ಕರ್ನಾಟಕ ಸಿಂಹಾಸನದ ಘನವಾದ ಸೇವೆಯು ಅಡಕವಾಗಿದ್ದರೆ ಅಗತ್ಯವಾಗಿ ಹೇಳು. ಕಠಾರಿಯಿಂದಾ ಈಗಲಾದರೂ ತಿವಿದು ಹಾಕು ಪರಮಾನಂದಿಂದ ಸಾಯುವೆನು.

ಕರಿ : ಆಳುವು ಬರತದಾರೀ. ದೇವರು ತಮ್ಮಾತು ಕೇಳಿ ಮಾತಾಡ್ಲಾಕ ಬಾರದಂಗ ಅಳುವು ಬರತದರೀ ನೀವು ಮನಸೇರು ಅಲ್ಲವೇ ಅಲ್ಲಾ ಪರತ್ಯಕ್ಷ ಹಂಪೀವಿರೂಪಾಕ್ಷದೇವರು (ತನಗೆ) ಎಲೇ ಕರಿಯಾ ಇಂಥವರ್ನ ಕೊಲ್ಲುತಿದ್ದೆಲ್ಲವೇ ನಿನ್ನೊಬ್ಬನ ಹಿತಕ್ಕ. ನಮ್ಮ ದೇಶನ ಬಂಟನ್ನ ಕೊಲ್ಲತಿದ್ದೆಲ್ಲಲೇ ಥೂ ನಿನ್ನಾವ್ನ ನಾಯೀ ಬಾಳ್ವಿಯವನೇ ನಿನ್ನಂಥಾ ನಾಯಿ ಬದುಕಬೇಕಲೇ? ಸಾಯಿ ನನಮಗನ ಸಾಯಿ (ಬಾಕಿನಿಂದ ಇರಿದುಕೊಳ್ಳುವನು. ಹನುಮನು

ಕೈಹಿಡಿಯುವನು) ಬಿಡು ನನ್ನ ತಂದೆ ನಿನ್ನ ಕಾಲಬೀಳ್ತೇನಿ ಕೈ ಬಿಡು!

ಲಕ್ಷ್ಮ : ಎಲೋ ಹಾಗೆ ಮಾಡಬೇಡಾ. ಅಜ್ಞಾನ ವಶನಾಗಿ ನೀನು ಪಾಪಕಾರ್ಯವನ್ನು ಮಾಡಲುದ್ಯುಕ್ತನಾಗಿರುವಿ, ಈಗ್ಗೆ ನಿನಗೆ ಪಶ್ಚಾತ್ತಾಪವಾಗಿದೆ. ಇನ್ನು ಮೇಲೆ ಸತ್ಕಾರ್ಯಗಳನ್ನು ಮಾಡಿ ಆ ಪಶ್ಚಾತ್ತಾಪಗಳನ್ನು ಕಳೆದುಕೊಳ್ಳಬಹುದಲ್ಲವೇ?

ಕರಿ : ಏನ ಸತ್ಕಾರಾ ಮಾಡಲಿ ದೇವರೂ? ಹೇಳ್ಯಾರ ಹೇಳ್ರಿ, ಇಂಥಾ ಕೆಲ್ಸಾ ಹೇಳ್ರೀ ಒಮ್ಮೆಲೆ ನನ್ನ ಪಾಪಾಸುಟ್ಟು ಹೋಗಿರಬೇಕು ವಂದು ಇಲ್ಲವೇ ಅದರಾಗ ಸತ್ತೋಗಿರಬೇಕು ವಂದು. ಅಂಥಾ ಕೆಲ್ಸಾ ಹೇಳ್ರಿ.

ಲಕ್ಷ್ಮ : ಅದಿರಲೀ, ಮೊದಲು ನೀನಾರು! ನಿನ್ನ ಹೇಸರೇನು! ಈ ಕಾರ್ಯಕ್ಕೆ ಉದ್ಯುಕ್ತನಾದ ಕಾರಣವೇನು! ಇತ್ಯಾದಿಗಳನ್ನು ಸ್ವಲ್ಪದರಲ್ಲಿಯೇ ಹೇಳು ನೋಡುವಾ.

ಕರಿ : ದೇವರೂ ನನ್ನ ಹೆಸರು ಕರಿಯಾ ಜಟ್ಟಿ. ವೀರಜಟ್ಟಿಯ ಮಗನ್ರಿ

ಲಕ್ಷ್ಮ : ಸೊಂಡಿಲವನ್ನು ತಿರುವಿ ಆನೆಯನ್ನು ನೆಲಕ್ಕುರುಳಿಸುವ ಶ್ರೀಮದ್ ವೆಂಕಟಪತಿ ಮಹಾರಾಜರ ಪರಮ ಪ್ರೀತಿಯ ವೀರ ಜಟ್ಟಿಯ ಮಗನೇ ನೀನು?

ಕರಿ : ಅಹುದು ದೇವರೂ. ಸಿಂಹದ ಹೊಟ್ಯಾಗ ನರಿ ಹುಟ್ಟಿ ಬಂದಾಂಗ ಬಂದೇನಿ.

ಲಕ್ಷ್ಮ : ಹಾಗಲ್ಲ ನೀನು ಸಿಂಹಾನೇ ಮಾತ್ರ ನಿನಗೆ ಹೇಡಿಗಳಾರೋ ನರಿಯ ಕೆಲಸವನ್ನು ಹೇಳಿದ್ದಾರೆ ಇರಲಿ ಮುಂದೆ?

ಕರಿ : ಆ ವೀರಜಟ್ಟಿ ಮಗನ್ರೇ! ಬಾಯಮ್ಮಮಹಾರಾಣಿಯವರೂ ಅವರ ತಂದಿ ಜಗ್ಗಪ್ಪರಾಯರೂ ಕೂಡಿ ನನಗೊಂದು ಆಶೆಹಚ್ಚಿ ತಮ್ಮನ್ನ ಕೊಲ್ಲಾಕ ಕಳಿಸ್ಯಾರ್ರಿ ಈಟ ನನಸುದ್ದಿ.

ಲಕ್ಷ್ಮ : ಅವರ ಬೋಧದಿಂದ ಕೊಲ್ಲಲುದ್ಯುಕ್ತನಾಗಿದ್ದು ಇದೇ ಮೊದಲೋ ಅಥವಾ ಈ ಮುಂಚಿತವಾಗಿ ಮತ್ತಾವ ಕೊಲೆಗಳಾದರೂ ಆಗಿವೆಯೋ!

ಕರಿ : ಆಗತಿದ್ದಿವ್ರಿ ಅದರ ಹಿರೇರ ಪುಣ್ಯದಿಂದ ಆಗಲಿಲ್ರಿ.

ಲಕ್ಷ್ಮಿ : ಎಂದು ಯಾರ ಕೊಲೆಯನ್ನು ಯಾರ ಅಪ್ಪಣೆಯಿಂದಾ ಮಾಡಲುದ್ಯುಕ್ತನಾಗಿದ್ದೆ!

ಕರಿ : ಹೇಳಕಾ ನಿಂತೇನಿಯಲ್ಲಾ ಹೇಳಬಿಡತೇನಿ ಕೇಳ್ರಿ. ನಮ್ಮ ತಂದಿ ಸತ್ತಮ್ಯಾಗ ನಾ ಜಗ್ಗಪ್ಪರಾಯರಂಥಾಹೊಡ್ಯಾಕನಿಂತೆ, ಬರಬರತಾ ನನ್ನ ಮ್ಯಾಗ ಅವರ ವಿಶ್ವಾಸಾ ಬಾಳಾ ಇತ್ತು, ಹೀಗೆ ಇರತಾವಂದಿನಾ ರಾತ್ರಿ ಆರತಾಸಿನ್ಯಾಗ ತಮ್ಮನ್ಯಾಗ ಇಬ್ಬರನ್ನ ಕರತಂದ್ರು ಅವರ್ನ ರಥದಾಗ ಕುಂಡ್ರಿಸಿಕೊಂಡು ರಾಮನಮಲಿಗುಡ್ಡಕ್ಕ ಕರ್ನಕೊಂಡ್ಹೋಗಿ ಕೊಂದಾಕಿ ಬಾ ಅಂತಾ ಹೇಳಿದ್ರು!

ಲಕ್ಷ್ಮಿ : ಅಯ್ಯೋ ಕೊಲೆಪಾತಕಿ ಜಗ್ಗಾ! ಇರಲಿ ಮುಂದೆ!

ಕರಿ : ಅವರ ಕರಕೊಂಡ್ಹೋದೆ

ಲಕ್ಷ್ಮಿ : ಅವರು ನಿನ್ನ ಗೂಡ ಸುಮ್ಮನೇ ಬಂದರೇನೋ?

ಕರಿ : ಅವರಿಗೆ ತಮ್ಮನ್ನ ಕೊಲ್ಲತಾರಂತ ಗೊತ್ತಿದ್ದಿಲ್ರೀ ಮಾತ್ರ ಅದರಾಗ ಆ ಬಾಣಂತೀ

ಲಕ್ಷ್ಮಿ : ಅವರೀರ್ವರಲ್ಲಿ ಬಾಣಂತಿಯೊಬ್ಬಳಿದ್ದಳೇ?

ಕರಿ : ಅವಳೂ ಅವಳ ಗಂಡಾ ಇಬ್ಬರೂ ಇದ್ದರೂ ಆ ಬಾಣಂತೀ ಅಯ್ಯೋ ನನಕೂಸ! ಅಯ್ಯೋ ನನ ಕೂಸ! ಅಂತ ಸ್ವಲ್ಪ ಅಳತಿದ್ದಳ್ರಿ ಆಕೀ ಗಂಡಾ "ಬಿಡಬಾರದೆ ಯಾಕ ಅಳತೀದಿ ಮಗಾ ಏನಸತ್ನ ಚೊಕ್ಕ ಸುಖದಾಗ ಇರತಾನು ನಾವೂ ಸುಖದಾಗ ಇರತೇವಿ. ನಮ್ಮನ್ಯಾಗಿದ್ದರೇನು? ಅದ ಮಂದೀ ಬಟ್ಟೆ ವಗದು ಹೊಟ್ಟೇ ತುಂಬಿಕೊಳ್ಳೋದಲ್ಲ ಅಂತಾ ಸಮಾಧಾನ ಹೇಳತಿದ್ದಾ.

ಲಕ್ಷ್ಮಿ : ಅವರು ಅಗಸ ದಂಪತಿಗಳೇನೋ

ಕರಿ : ಅವರು ಬಟ್ಟಿ ವಗೆಯೋ ಮುದಿ ಮಡಿವಾಳ ಮಗಾ ಮತ್ತು ಸೊಸಿ.

ಲಕ್ಷ್ಮಿ : ಇರಲಿ ಮುಂದೆ?

ಕರಿ : ಮುಂದೇನ್ರಿ ಕರಕೊಂಡ್ಹೋದೆ, ಸೊಂಡೂ ಕಡೀ ಕೊರಕಲದಾಗ

ಇಳಿಸಿದ್ದೇ ಇಳಿಸಿದ್ದು ಕತ್ತೀ ಹಿರಿದು ಕೊಲ್ಲಾಕನಿಂತೇ, ಅಷ್ಟ್ರಾಗ ಆ ಬಾಣಂತಿ ಹಸೀ ಬಾಣಂತ್ರೀ। ಗಪ್ಪನ ನನಕಾಲು ಹಿಡಿದುಕೊಂಡ ಯಪ್ಪಾ? ನಾ ನಿನಮಗಳೋ ಕೊಲ್ಲಬ್ಯಾಡೋ ಯನತಂದೇ! ಮಗನ್ನ ಕೊಟ್ಟ ಇನಾಮು ಕೊಡತೇನಂತಾ ಹೇಳಿ ಕರಕೊಂಡು ಬಂದ ಜಗದೇವಪ್ಪನವರು ನನ್ನ ಜೀವಾ ತಗಿದುಕೊಳ್ಳಾಕ ನಿಂತ್ರಿ ಮಗನ್ನೂ ಕಸಕೊಂಡ್ರಿ. ಮ್ಯಾಲೆ ಪ್ರಾಣಾ ತಗೋಳಾಕೂ ನಿಂತ್ರಲ್ಲೊಪ್ಪಾ! ಅಂತ ಅಳಾಕ ಹತ್ತಿದ್ಲು. ನಾ ಅಂತೂ ಮನಿಸ್ಯಾ, ನನ್ನ ಮನಸ್ಸ ಕರಗೋದೇನ ದೊಡ್ಡ ಮಾತ್ರಿ! ನುಂಗಾಕ ನಿಂತ ಹುಲಿಯಿದ್ರ ಸಹಿತ ಅದರ ಮನಸೂ ಕರಗಿ ಹೋಗತಿತ್ತು.

ಲಕ್ಷ್ಮ : ಇರಲಿ ಅವರಿಂದಾ ಆ ಮಗುವನ್ನೇಕೆ ಕೊಂಡರೋ?

ಕರಿ : ಈಗಿನ ಚಿಕ್ಕರಾಯನ್ನ ಮಾಡಲಾಕ್ರೀ!

ಲಕ್ಷ್ಮ : ಚಿಕ್ಕರಾಯನು ಅಗಸರ ಮಗನೇ?

ಕರಿ : ನೋಡಿ, ಗೊತ್ತಾಗೋದಿಲ್ರೇ?

ಲಕ್ಷ್ಮ : ಆದಿರಲಿ ಕರಿಯಾ ಜಟ್ಟೀ! ಕೊಲ್ಲಲಿಕ್ಕೆ ಬಂದವನಾದ ನೀನು ನನಗೆ ಅಮೃತವನ್ನುಣ್ಣಿಸಿದೆ. ಚಿಕ್ಕರಾಯನ ಜನ್ಮವೃತ್ತಾಂತವೇ ನನಗೆ ಬೇಕಾಗಿದ್ದ ವಿಷಯ ಅದಕ್ಕಾಗಿಯೇ ಅಹೋರಾತ್ರಿ ತಳಮಳಿಸುತ್ತಿದ್ದೆನು ಅಸ್ತು ಆ ಮೇಲೆ

ಕರಿ : ಯದರಮ್ಯಾಲ್ರೀ?

ಲಕ್ಷ್ಮ : ಆ ಅಗಸ ದಂಪತಿಗಳನ್ನು ಕೊಲ್ಲದೇ ಬಿಟ್ಟೆ ಆಮೇಲೆ ಅವರು ಎತ್ತ ಹೋದರು?

ಕರಿ : ಈ ದೇಶದಾಗ ಬದುಕಿದ್ದಾಂತ ಗೊತ್ತಾದ್ರ ತಮ್ಮ ಪ್ರಾಣಾ ತಗೀದಾಯಿರಲಿಕ್ಕಿಲ್ಲಾ ಅಂತ ಪಾಪ! ಯಲ್ಲಿಯೋ ದೇಶಾಂತರಕ್ಕೆ ಹೋಗಬಿಟ್ಟಾಪ್ರಿ.

ಲಕ್ಷ್ಮ : ಎತ್ತ ಹೋಗಿರಬಹುದೋ!

ಕರಿ : ತಂಜಾವರ ಸೀಮೀ ಸೇರ್ಯಾವಂತ ಕೇಳೇನ್ರಿ.

ಲಕ್ಷ್ಮ : ಅವರ ಮುಖಲಕ್ಷಣಗಳು ಹೇಗಿವೆ! ಸ್ವಲ್ಪ ಹೇಳು ನೋಡುವಾ?

ಕರಿ : ಅವಾ ಅಗಸರವ ಇದ್ದಾನ್ರಿ ಕಪ್ಪಾಳು, ಅದರ ಆ ಹೆಣ್ಣುಮಗಳು

ಮಾರೀ ಮಾತ್ರ ಸುದ್ದ ಚಿಕ್ಕರಾಯನ ಮಾರೀನ ನೋಡ್ರಿ ಈಗಪನವರು ಚಿಕ್ಕರಾಯರು ಯಾವಾಗರ ಅರಮನ್ಯಾಗ ಭೆಟ್ಟಿಯಾಗ ತಾರ್ರಿ. ಆದರ ಅದೇ ಹೆಣಮಗಳು ಬಂದಳೇನೋ ಅಂತಾ ಎಷ್ಟೋ ಸಾರೆ ಮೆಟ್ಟಿ ಬಿದ್ದೇನ್ರಿ. ಮಾರೀ ಕಣ್ಣೂ ಮೂಗೂ ಧನಿಯಲ್ಲಾ ಥದ್ರೂಪವಂದ ಅಳೋಕಾಲಕ್ಕಂತೂ ಅವತ್ತಕೊಲ್ಲೋ ಕಾಲಕ್ಕ ಕತ್ತೀ ಹಿರಿದಾಗ ಆ ಹೆಣಮಗಳು ಹ್ಯಾಗ ಮುಖಾ ಮಾಡಿದ್ಲೊಲ ಹಾಗ ಮಾಡತಾರ!

**ಲಕ್ಷ್ಮ :** ಕರಿಯಾ ಜಟ್ಟೀ!

**ಕರಿ :** ದೇವರೂ! ಅಷ್ಟು ಮರ್ಯಾದೀ ಕೊಡಬ್ಯಾಡ್ರಿ. ನಾನು ನಿಮ್ಮ ಕಾಲಾಗಿನ ಮೆಟ್ಟು. ಬರೇ ಕರಿಯಾ ಅಂತ ಅಂದ ಬಿಡ್ರಿ ಸಾಕು. ಈ ನಮ್ಮ ಬರಮವ್ವ ಬಸವೀ ಮಗಾ ಹನುಮಣ್ಣನ್ನ ಹ್ಯಾಗ ಕರೂತೀರೀ ಹಾಗ ಕರೀರಿ.

**ಲಕ್ಷ್ಮ :** ಆಗಲಿ ಕರಿಯಾ, ನಾನು ಕೈಕೊಂಡ ಕಾರ್ಯದಲ್ಲಿ ನೀನು ನನಗೆ ನೆರವಾಗಬೇಕು.

**ಕರಿ :** ಯಪ್ಪಾ ಜೀವಾ ತಗೋಳಾಕ ಬಂದ ನನ್ನ ಮ್ಯಾಲೆ ನಿಮ್ಮ ವಿಶ್ವಾಸಾ ಕುತ್ರ್ಯೇ!

**ಲಕ್ಷ್ಮ :** ಆ ಸುದ್ದಿಯನ್ನೇ ತೆಗೆಯಬೇಡಾ! ನನಗೆ ಹೇಗೆ ಹನುಮನೋ ಹಾಗೆ ನೀನು.

**ಕರಿ :** ಅಯ್ಯಯ್ಯೋ ಯಪ್ಪಾ! ಯಂಥ ದೊಡ್ಡ ಮನಸೋ ಮಾರಾಯ ನಿಂದೂ! ನೀ ಹಂಪೀ ವಿರೂಪಾಕ್ಷದೇವರು. ಸಾಯುತನಕ ನಿನ್ನ ಕಾಲು ಬಿಟ್ಟು ಕದಲೋದಿಲ್ಲಾ. ಇನ್ನು ನನಗೆ ಮನೀ ಅಂದ್ರೂ ನೀನು! ದೇವರೆಂದ್ರೂ ನೀನ! ತಂದೆ ಅಂದ್ರೂ ನೀನ! ತಾಯಿ ಅಂದ್ರೂ ನೀನ.

**ಲಕ್ಷ್ಮ :** ಇರಲಿ. ನನ್ನ ಕೊಲೆಗಾಗಿ ನಿನ್ನನ್ನು ಕಳುಹಿಸಿದ ಆ ಜಗ್ಗನು ನಾಳಿಗೆ ನಿನ್ನ ವಿಚಾರವನ್ನು ತಕ್ಕೊಳ್ಳುವನು. ಆಗ್ಗೆ ನನ್ನನ್ನು ಕೊಲ್ಲಲಿಕ್ಕೆ ಬಂದ ಸಮಯದಲ್ಲಿ ನಾನೇ ನಿನ್ನನ್ನು ಹೊಡೆದು ಹೊಳೆಗಾಣಿಸಿದೆನೆಂದು ಸುದ್ದಿಯನ್ನು ಹಬ್ಬಿಸಿಬಿಡುವೆನು ಮಾತ್ರ

ನಿನಗೆ ಒಂದು ಪತ್ರವನ್ನು ಬರೆದು ಕೊಡುವೆನು. ಅದನ್ನು ತೆಗೆದುಕೊಂಡು ತಂಜಾವರದಸನಾದ ರಘುಪತಿರಾಜನ ಕಡೆಗೆ ಮುಟ್ಟಿಸಿ ; ಅಲ್ಲಿಯೇ ಆ ಅಗಸ ದಂಪತಿಗಳಿಗೆ ಶೋಧವನ್ನು ನಡಿಸು, ಹನುಮಾ, ನೀವೀರ್ವರೂ ಹೋಗಿ ಮಲಗಿ ನಿದ್ಧಿಸಿರಿ. ಈ ಕರಿಯನುಯನ್ನು ನಿನ್ನ ಹಿರಿಯ ಅಣ್ಣನೆಂದು ತಿಳಿ. ಅರ್ಧ ತಾಸಿನಲ್ಲಿ ಪತ್ರವನ್ನು ಬರೆದು ಕೊಡುವೆನು. ಬೆಳಗಾಗುವದ ರೊಳಗಾಗಿಯೇ ವೇಷಾಂತರವನ್ನು ಮಾಡಿಕೊಂಡು ಕರಿಯನನ್ನು ತಂಜಾವರ ನಾಡಿಗೆ ಹೊರಡಲಿ.

**ಕರಿ :** ಆಗಲಿ ದೇವ್ರು.

**ಲಕ್ಷ್ಮ :** ನೀವೀರ್ವರೂ ಹೋಗಿ ನಿದ್ರಿಸಿರಿ. (ಹೋಗುವರು) ಅಹಹಾ!

**(ನಂ. ೧೫) ಪದ ರಾಗ – ದಕ್ಷಿಣಾದಿ ಅರಬೀ ತಾಳ – ದೀಪಚಂದಿ**

॥ ಕಾಪಾಡಿದ ಪಂಪಾನಿಲಯಾ । ತಾನೆಂದಿಗೆ ॥ ಈ ಪಾಮರನಾ ಪಾವನಾ
॥ ಶ್ರೀ ಪಾರ್ವತಿಯ ಸುಂದರಾ ॥ಪ॥ ವೈರಿಯು ತಾನಾದನು । ಕಾರುಣ್ಯಾ
॥ ದಿ ಸನ್ಮಿತ್ರನು । ಕೋರಿಕೆಯು ತೀವ್ರ ನೆರವೇರೂವದು । ಮನ್ಮಾನಸ ॥೧॥

ದ್ವಿತಿಯ ಅಂಕ ಸಮಾಪ್ತಿ

===***====***===

## ೩ನೇ ಅಂಕು.

## ಪ್ರವೇಶ–ಬೀದಿ, ಡಂಗುರದವ

**ಡಂಗು :** ಇದು ಮಹಾರಾಣಿಯವರ ಮಂದಿರವು ಮೊದಲೊಂದು ಸಾರೆ ಡಂಗುರವನ್ನು ಕೇಳಿ ಮುಖಕ್ಕೆ ಸುಣ್ಣ ಜಾಜವನ್ನು ಬಳಿಸಿದ್ದರು. ಈಗಿನ ಡಂಗುರವನ್ನು ಕೇಳಿ ಪಾರಿತೋಷಕವನ್ನೇನಾದರೂ ಕೊಡುವರೋ ಹೇಗೊ ನೋಡುವಾ ನಮಗೇನು! ಹಾಗಾದರೇ ಹಾಗೇ ಸೈ ಹೀಗಾದರೆ ಹೀಗೆ ಸೈ! ಪೌರವರೇ ಕೇಳಿ ಕೇಳಿ! ಶ್ರೀಮದ್ ರಾಜಾಧಿರಾಜ ಚಿಕ್ಕರಾಜರು ಕರ್ನಾಟಕ ಸಿಂಹಾಸನಾಧೀಶ್ವರರು. ಇನ್ನು ಮೇಲೆ ಅವರ ಅಧಿಪತ್ಯಕ್ಕೆ ಬಾಧೆಯುಂಟಾಗುವಂತೆ ಯಾರಾದರೂ ವರ್ತಿಸಿದರೆ ದೇಹಾಂತ ಪ್ರಾಯಶ್ಚಿತ್ತವಾದೀತು ಭದ್ರ! (ಎಂದು ಡಂಗುರ ಹೊಡೆಯುವನು) ಆಂ! ಮಹಾರಾಣಿಯವರಿಗೆ ನಾನು ಹೇಳಿದ ಡಂಗುರವು ಕೇಳಿಸಿರಲಿಕ್ಕಿಲ್ಲವೇ! ಆಗಲಿ ಇನ್ನೂ ಸ್ವಲ್ಪು ಗಟ್ಟಿಯಾಗಿ ಹೇಳುವಾ (ಪೂರ್ವೋಕ್ತ ಹೇಳುವನು)

**ಸಂಜಿ :** ಎಲೋ ಡಂಗುರದವನೇ ಹೀಗೆ ಬಾ. ಬಾಯಮ್ಮಾ ರಾಣಿಯವರು ನಿನ್ನನ್ನು ತೀವ್ರ ಕರೆದುಕೊಂಡು ಬಾ ಎಂದು ಹೇಳಿದ್ದಾರೆ!

**ಡಂಗು :** ಇದೇ! ನಮಗೆ ಲಾಭದ ಯೋಗವಿದೆ! ನಡೇ ತಾಯೀ ಹೋಗುವಾ.

**ಪ್ರವೇಶ** (ಬಾಯಮ್ಮನ ಮಂದಿರ)

(ಜಗದೇವ ಮತ್ತು ಬಾಯಮ್ಮರೀರ್ವರೂ ಕುಳಿತಿರುವರು)

**ಬಾಯ :** ಅಪ್ಪಾ, ಲಕ್ಷ್ಮಣನಾಯ್ಕರಿಗೆ ಚಿಕ್ಕರಾಯನ ಅಧಿಪತ್ಯವನ್ನು ಒಪ್ಪಿಕೊಳ್ಳದಿದ್ದರೆ ಇದೇ ಕ್ಷಣವೇ ಅವನಿಗೆ ದೇಶತ್ಯಾಗದ ಶಿಕ್ಷೆಯನ್ನು ವಿಧಿಸಬೇಕು.

**ಜಗ :** ಅದೆಂತೂ ಆಗೇ ಆಗುವದು. ಅಲ್ಲದೇ ಸತಿ–ಪುತ್ರ ಸಮೇತನಾದ

ಶ್ರೀರಂಗರಾಯನಿಗೆ ಅಮರಣ ಕಾರಾಗ್ರಹವಾಸವು ವಿಧಿಸಲ್ಪಟ್ಟಿದೆ.

ಬಾಯ : ಅದೂ ಒಳಿತೇ। ಅವನು ಚಿಕ್ಕರಾಯನ ಪ್ರತಿವಾದಿಯು, ಅವನನ್ನು ಬೈಲಿಗೆ ಬಿಡುವದುಂಟೇ! ಈಗ್ಗೆ ಶ್ರೀರಂಗರಾಯನನ್ನು ಕಾರಾಗ್ರಹದಲ್ಲಿ ತಂದಿರಿಸಿದರೇನು?

ಜಗ : ಓಹೋ ! ನನ್ನ ಆಜ್ಞೆಯಾದ ಕೂಡಲೇ ವಿಳಂಬವಾಗುವದೇ? ಅವನನ್ನೂ ಅವನ ಹೆಂಡತಿ–ಮಕ್ಕಳು ಬಂಧು ಬಳಗ ಸಮೇತನಾಗಿ ಗಿರಿದುರ್ಗದಲ್ಲಿ ತಂದಿರಿಸಿ ಭದ್ರವಾದ ಕಾವಲನ್ನಿಟ್ಟಿದ್ದಾರೆ. ನಮ್ಮ ಕೋರಿಕೆಗಳೆಲ್ಲವೂ ನೆರವೇರಿದವು. (ಡಂಗುರದವನು ಬರುವನು)

ಜಗ : (ಡಂಗುರದವನನ್ನು ನೋಡಿ) ಬಾಯಮ್ಮ, ಈಗ್ಗೆ ಇವನಿಗಾವ ಶಿಕ್ಷೆಯನ್ನು ಕೊಡುವೆ?

ಡಂಗು : ದೇವರೂ ಈಗ್ಗೆ ಹೇಳುವದೂ ಅಪರಾಧದ ನುಡಿಯೋ?

ಜಗ : ಸ್ವಲ್ಪ ತಾಳೋ!

ಬಾಯ: ಎಲೋ ಇದೋ ತೆಗೆದುಕೋ. ಚಿನ್ನಾಭರಣಗಳನ್ನು (ಹಾರ ಕೊಡುವಳು)

ಡಂಗು : ದೇವರ ಪಾದಕ್ಕೆ ಬಿದ್ದೆ.

ಬಾಯ : ಎಲೋ, ಹಾಕಿಕೋ ಅವುಗಳನ್ನು (ಹಾಕಿಕೊಳ್ಳುವನು) ಎಲೋ ಹೀಗೆಯೇ ಚಿನ್ನಾಭರಣಗಳಿಂದ ಮಂಡಿತನಾದ ನೀನು ಆ ಲಕ್ಷ್ಮಣನಾಯ್ಕನ ಮನೆಯ ಮುಂದೆ ನಿಂತು ಚನ್ನಾಗಿ ಕೂಗಿ ಕೂಗಿ ಎರಡೆರಡು ಸಾರೆ ಡಂಗುರವನ್ನು ಸಾರು.

ಡಂಗು : ಬುದ್ಧೀ ಇನ್ನು ಬಿಡುವೆನೇ ಮನೆಯ ಹೊರಗೆ ಬಂದು ಯಾರಾದರೂ ಕೇಳದಿದ್ದರೆ ಅವರ ಮನೆಯ ಒಳಗೆ ಹೊಕ್ಕು ಯಚ್ಚಮನಾಯ್ಕರ ಕಿವಿಯಲ್ಲಿ ಡಂಗುರವನ್ನು ಹೊಡೆದು ಬರುವೆನು ಬಿಡಿ ಬುದ್ಧೀ ಇನ್ನೇತರ ಭಯಾ!

ಬಾಯ : ಹೋಗು ನೀನು (ಹೋಗುವನು) ಸಂಜೀವಿ, ಒಳಗೆ ಯಾರನ್ನೂ ಬಿಡಬೇಡಾ ಬಾಗಿಲದಲ್ಲಿರು. ಅಪ್ಪಾ, ಕರಿಯನ ವರ್ತಮಾನವು ಗೊತ್ತಾಗಲಿಲ್ಲವಲ್ಲಾ!

ಜಗ : ಅದರ ನಿರ್ಣಯವಾಗಿದೆ

**ಬಾಯ :** ಅದೇನು?

**ಜಗ :** ಕರಿಯನು ಲಕ್ಷ್ಮಣನಾಯಕರನ್ನು ಇರಿದು ಕೊಲ್ಲುವಷ್ಟರಲ್ಲಿ ಅವನ ಸೇವಕನಾದ ಹನುಮನು ಅವನನ್ನು ಗುಂಡುಹಾಕಿ ಕೊಂದನಂತೆ! ಹಾಗೆ ಅವನು ಸಾಯುತ್ತಲೆ ಹೊಳೆಯನ್ನು ಕಾಣಿಸಿಬಿಟ್ಟರಂತೆ.

**ಬಾಯ :** ಈ ಸಂಗತಿಯು ನಿನಗೆ ಹೇಗೆ ಗೊತ್ತಾಯಿತು?

**ಜಗ :** ಲಕ್ಷ್ಮಣನಾಯ್ಕನು ತನ್ನ ಮಿತ್ರನಾದ ವೆಂಕಟಾದ್ರಿಗೆ ಇವೆಲ್ಲಾ ಸಮಾಚಾರಗಳನ್ನು ಹೇಳಿದ್ದನಂತೆ, ಆ ವೆಂಕಟಾದ್ರಿಯು ನನ್ನ ಮುಂದೆ ಹೇಳಿದನು.

**ಬಾಯ :** ಪಾಪ! ಕರಿಯನ ಮನೆಯವರಿಗೇನಾದರೂ ಜೀವನಾರ್ಥ ಹಾಕಿ ಕೊಡಿಸಿರಿ. ಅದಿರಲಿ, ಲಕ್ಷ್ಮಣನಾಯಕ್ನ ಸಮಾಚಾರಾ?

**ಜಗ :** ಒಂದು ತಾಸಿಗೆ ಮುಂಚಿತವಾಗಿ ಅವನನ್ನು ಕರೆತರುವುದಕ್ಕೆ ದೂತನೋರ್ವನು ಹೋಗಿದ್ದನು. ಅವನಿನ್ನೂ ಏತಕ್ಕೆ ಬರಲಿಲ್ಲವೋ ಏನೋ?

**ಸಂಜಿ :** ದೇವರೂ, ಒಬ್ಬ ದೂತನು ದೇವರನ್ನು ಕಾಣಲು ಬಂದಿದ್ದಾನೆ.

**ಜಗ :** ಅವನನ್ನು ಹೀಗೆ ಕರೆ. (ದೂತನು ಬರುವನು) ಏನು ಸಮಾಚಾರ?

**ದೂತ :** ದೇವರೂ, ಯಚ್ಚಮನಾಯ್ಕರಿಗೆ ತಮ್ಮ ಹುಕುಮನ್ನು ತಿಳಿಸಿದೆನು.

**ಜಗ :** ಅಮೇಲೇನಾಯಿತು?

**ದೂತ :** ಒಂದು ಕಪಾಳ ಮೋಕ್ಷವು ಮಾತ್ರ ದೊರೆಯಿತು.

**ಬಾಯ :** ಯಾರಿಗೆ?

**ದೂತ :** ನನಗೆ ದೇವರೂ! ಇದೋ ಕೆನ್ನೆಯು ಕೆಂಪಾಗಿದೆ.

**ಜಗ :** ಹೀಗೋ! ಆಮೇಲೇನು ಹೇಳಿದನು? ಅನುಮಾನಿಸಬೇಡ ಹೇಳು?

**ದೂತ :** ದೇವರೂ! ಅದನ್ನುಸುರಲಿಕ್ಕೆ ಭಯವಾಗುವದು ದೇವರೂ!

**ಬಾಯ :** ಹೇಳಲೇಬೇಕು. ಅವನೇನಂದನೋ ಅದನ್ನೆ ಹೇಳು!

ದೂತ : ಬುದ್ಧೀ ಸಿಟ್ಟಾಗಬಾರದು. ತಮ್ಮ ಹುಕುಮನ್ನು ತಿಳಿಸುತ್ತಲೇ ನನಗೆ ಜೋರಾಗಿ ಪೆಟ್ಟು ಕೊಟ್ಟು ಎಲೇ ಕತ್ತಿಯಮಗನೇ ಆ ಜಗ್ಗನ ಹುಕುಮನ್ನು ಪಾಲಿಸಲೋ ಅವನಾರು? ಬುದ್ಧೀ ಇನ್ನೂ ಮುಂದೆ ಹೋಗಿ ಬಹು ಕೆಟ್ಟ ಮಾತುಗಳನ್ನಾಡಿದರು.

ಬಾಯ : ಹೇಳು ಕೇಳಲಿಕ್ಕೆ ಸಿದ್ಧರಿದ್ದೇವೆ.

ದೂತ : ಅವನಂದರಾರು? ಯಾವನೋ ಒಂದು ಕುಲಗೇಡಿಗೆ ಪಟ್ಟ ಗಟ್ಟಿ ಪರ್ಯಾಯದಿಂದ ಕರ್ನಾಟಕ ರಾಜ್ಯವನ್ನಾಳ ಬಯಸುವ ಆ ನರೀ ಬಾಳ್ವೆಯ ಜಗ್ಗನ ಆಜ್ಞೆಯನ್ನು ಪಾಲಿಸಲೋ? ಹಾಗಾಗಬೇಕಾದರೆ ಪ್ರಪಂಚವು ಕೆಳಗೆ ಮೇಲಾದೀತೆಂದು ಹೇಳಿ ತಳ್ಳಿಬಿಟ್ಟರು.

ಬಾಯ : ಇದೆ ಕ್ಷಣವೇ ಅವನಿಗೆ ದೇಹಾಂತ ಶಿಕ್ಷೆಯಾಗಬೇಕು ನಿರ್ವಾಹವಿಲ್ಲಾ, ದೇಹಾಂತ ಶಿಕ್ಷೆಯಾಗಲೇಬೇಕು.

ದೂತ : ಎಲೋ ಹೀಗೆಯೇ ಹೋಗಿ ಸೇನಾಪತಿಯಾದ ವೆಂಕಟಾದ್ರಿಗೆ (ಪತ್ರವನ್ನು ಬರೆದು ರಾಜಮುದ್ರಿಕೆಯನ್ನಿಕ್ಕಿ) ಇದೋ ಈ ಆಜ್ಞಾಪತ್ರವನ್ನು ಒಯ್ದು ಕೊಡುಹೋಗು ತೀವ್ರ। ಲಕ್ಷ್ಮಣನಾಯಕನ ರುಂಡವನ್ನು ಚೆಂಡಾಡಿದ ಮೇಲೆಯೇ ಇವತ್ತಿನ ಭೋಜನ.

ಸಂಜಿ : (ಆತುರದಿಂದ ಬಂದು) ಬುದ್ಧಿ! ಇದೋ ಒಬ್ಬ ದೂತನು ಮಹಾದ್ವಾರದಲ್ಲಿದ್ದ ನನ್ನ ಕೈಯಲ್ಲಿ ಈ ಪತ್ರವನ್ನು ಕೊಟ್ಟು ಬುದ್ಧಿಂಯವರಿಗೆ ಕೊಡುವದಕ್ಕಾಗಿ ಹೇಳಿದವನೇ ಕುದುರೆಯನ್ನೋಡಿಸುತ್ತ ಹೋಗಿಬಿಟ್ಟನು.

ಜಗ : (ಸಂಜೀವಿಗೆ ಹೋಗಲು ಸಂಕೇತಮಾಡುವನು)

ಬಾಯ : ಏನದು ಅಪ್ಪಾ! ತೀವ್ರ ಓದು.

ಜಗ : (ಪತ್ರ) ಮಾನವರೂಪಿ ಪಿಶಾಚ್ಯಾ ಜಗ್ಗಾ, ಸ್ವಲ್ಪಕಾಲದಲ್ಲಿಯೇ ನಿನಗೆ ನಿನ್ನ ಪಾಪದ ಪ್ರಾಯಶ್ಚಿತ್ತವಾಗುವದು, ಇದನ್ನು ಸೆರಗಿನಲ್ಲಿ ಗಂಟು ಕಟ್ಟಿಕೋ! ಲಕ್ಷ್ಮಣನಾಯಕಾ.

ಬಾಯ : (ನಕ್ಕು) ಅಪ್ಪಾ ಆ ಹೇಡಿಯಾದ ಲಕ್ಷ್ಮಣನಾಯಕನು ನಿನಗೆ ಪ್ರಾಯಶ್ಚಿತ್ತವನ್ನು ಕೊಡುವನೇ?

ಜಗ : ಅದನ್ನೇ ಯೋಚಿಸುತ್ತಲಿದ್ದೇನೆ.

ಬಾಯ : ಅವನು ಹೆಣಗಾಡುವದಾದರೂ ಶ್ರೀರಂಗರಾಯನನ್ನು ಪಟ್ಟಗಟ್ಟಿಸು ವುದಕ್ಕಾಗಿಯಲ್ಲವೇ? ಅವನನ್ನೇ ಕೊಂದು ಹಾಕಿಸಿಬಿಟ್ಟರಾಯಿತು.

ಜಗ : ಅದಕ್ಕೇನಾದರೊಂದು ನೆವಬೇಕು ಸುಮ್ಮನೆ ಕೊಲ್ಲಿಸಲಿಕ್ಕೆ ಬರುವಂತಿಲ್ಲ ಇರಲಿಬಿಡು. ಅವೆಲ್ಲ ಚಿಂತೆಗಳು ನಿನಗೇಕೆ? ನೀನು ಸುಖವಾಗಿರು ನಾನೆಲ್ಲ ಯೋಚಿಸುವೆನು (ಹೋಗುವ)

ಬಾಯ : ಸಂಜೀವಿ... ಲಕ್ಷ್ಮಣನಾಯಕನ ಹೊಟ್ಟೆಯೊಳಗಿನ ವಿಷವು ಬೆಳೆಯುತ್ತಲೇ ನಡೆದಿದೆ.

**ಪದ – (ನಂ. ೧೬) ರಾಗ – ಭೀಮಪಲಾಸ ತಾಳ – ತ್ರಿವಟ**

॥ ಏಕೇ ವೈರವಾ ಸಾಧಿಸುವ ಮಿತಿಮೀರಿ । ಆ ಕೀಳಾತ್ಮಾ ॥ಪ॥
॥ ಅವನದಾವ ಅಹಿತವನ್ನು ನಾವು । ಜವದಿಪೇಳೆ ತಿಳಿದು ಗೈದಿಹೆವು ॥
॥ ಸತತ ಪಿಡಿವ ವಿಷ ಮನದಲಿತಾ ॥೧॥

ಸಂಜಿ : ಸುಮ್ಮನೇ ಶ್ರೀರಂಗರಾಯನ ನೆವವನ್ನು ಮಾಡಿದ್ದಾನೆ. ತಾನೇ ವಿಜಯನಗರದ ಅರಸನಾಗಬೇಕೆಂದು ಅವನ ಹವಣಿಕೆ ಇದ್ದಂತೆ ಕಾಣುತ್ತದೆ. ದೇವಿಯವರೇ ಅವನಿಗೆ ತನ್ನ ಪರಾಕ್ರಮದ ಗರ್ವವು ಮಿತಿ ಮೀರಿದೆ. ಜಗದೇವ ಮಹಾರಾಜರ ಮೇಲಂತೂ ವಿಷವನ್ನೇ ಕಾರುವನು.

ಬಾಯ : ಕಾರಲಿ ಎಷ್ಟು ದಿವಸ ಕಾರುವನೋ ಕಾರಲಿ ಒಂದು ದಿನ ಈ ವಿಜಯನಗರದ ಸೀಮೆಯಲ್ಲಿ ಸಿಕ್ಕರೆ ಅವನನ್ನು ಹಿಡಿತರಿಸಿ ಅಗಸಿಯಲ್ಲಿ ಅಡ್ಡಗೆಡಹಿ ಕಡಿದು ಕಡಿದು ಚಲ್ಲಿಸುವೆನು ತಾಳು.

ಚಿಕ್ಕ : ಸಂಜೀವೀ ಬಂದೇ ನೆಲಾ ಮುಟ್ಟಿ ಮುಜರಾ ಮಾಡು.

ಸಂಜಿ : (ಹಾಗೇ ಮಾಡುವಳು)

ಚಿಕ್ಕ : ಎಲೇ ಮೂರು ಸಾರೇ ಮೂಜರಾ ಮಾಡೇ ನಾನು ಮಹಾರಾಜನಲ್ಲವೇನೇ?

ಸಂಜಿ : ಸಂದೇಹವೇನು ಮಹಾರಾಜರೇ ಇದೋ (ಮೂರು ಸಾರೆ ನಮಿಸುವಳು)

ಬಾಯ : ಚಿಕ್ಕಯ್ಯಾ....

ಚಿಕ್ಕ : ಅಮ್ಮಾ? ನೀನೇಕೆ ನನಗೆ ಮಹಾರಾಜನೆಂದು ಕರೆಯುವದಿಲ್ಲಾ?

ಬಾಯ : ಮಗೂ ದೇಶಕ್ಕೆ ರಾಜನಾದರೂ ತಾಯಿಗೆ ಮಗನೇ ಅಲ್ಲವೇ?

**ಚಿಕ್ಕ :** ನಾನು ನಿನ್ನ ಮಗನಾದರೆ ನಿನ್ನಂತೆ ನಾನೇಕೆಯಿಲ್ಲಾ? ಹೇಳು ನಿನ್ನಂತೆ ನಾನೇಕಿಲ್ಲಾ? ಯಾಕೆ ಸಂಜೀವೀ ಹೂಂ ಅನ್ನು.

**ಸಂಜೀ :** ಮಹಾರಾಜರ ಪ್ರಶ್ನೆಯೇ ವಿಚಿತ್ರವಾದದ್ದು.

**ಬಾಯ :** ಅದಿರಲಿ ಚಿಕ್ಕಯ್ಯಾ ಈ ದಿವಸ ದರ್ಬಾರದಲ್ಲೇನೇನು ಮಾಡಿದೆ?

**ಚಿಕ್ಕ :** ಹೋದೆ ಸಿಂಹಾಸನದಲ್ಲಿ ಕುಳಿತೆ ಎಲ್ಲಾ ಮಂತ್ರಿಗಳೂ ಸೇನಾಪತಿಗಳೂ ಸರ್ದಾರರೂ ನಾಯಕರೂ ಏನೇನೋ ಸಿಕ್ಕಾಪಟ್ಟೇ ಹರಟೀ ಕೊಚ್ಚಿದರು. ನನಗೊಂದೂ ತಿಳಿಯಲಿಲ್ಲಾ ಬೇಜಾರಾಯಿತು ಎದ್ದು ಬಂದೆ.

**ಬಾಯ :** ಮಗೂ, ಹಾಗೆ ದರ್ಬಾರವು ನಡೆದಾಗ್ಗೆ ಮಧ್ಯದಲ್ಲಿ ಎದ್ದು ಬರಬಾರದು.

**ಚಿಕ್ಕ :** ಮತ್ತೇನು ಮಾಡಲಿ, ತೂಕಡಿಕೆ ಬಂದ್ರ ಅಲ್ಲಿ ಮಲಗಬಾರದೆಂದು ಜಗ್ಗಜ್ಜನು ಹೇಳಿದ್ದಾನೆ. ಅದಕ್ಕೆ ತೂಕಡಿಕೆ ಬಂತು ಎದ್ದು ಬಂದೆ ಅಮ್ಮಾ ದಿನಾ ದಿನಾ ದರ್ಬಾರಕ್ಕೆ ಹೋಗಬೇಕೇನೇ?

**ಬಾಯ :** ಅಹುದು ಚಿಕ್ಕಾ!

**ಚಿಕ್ಕ :** ಅದೊಂದು ಬೇಸರಿಕೆ.

**ಸಂಜೀ :** ಮಹಾರಾಜರೇ, ಮಹಾರಾಜರಾದ ಮೇಲೆ ದರ್ಬಾರಕ್ಕೆ ಹೋಗುವದು ಹೇಗೆ ಬಿಟ್ಟೀತು. ರಾಜ್ಯಕಾರಭಾರವನ್ನಾರು ನಡಿಸಬೇಕು?

**ಚಿಕ್ಕ :** ಜಗ್ಗಜ್ಜಾ! ನಾನು ಸಿಂಹಾಸನದಲ್ಲಿ ಕುಳಿತುಕೊಳ್ಳತಕ್ಕವ. ಯಾಕೇ ಅಮ್ಮಾ?

**ಬಾಯ :** ಆದರೂ ರಾಜಕಾರಭಾರದ ಜ್ಞಾನವಾಗಬೇಕಲ್ಲವೇ?

**ಚಿಕ್ಕ :** ಈಗಾಗಿಲ್ಲವೇನು? ಬಟ್ಟೆಬರೆಗಳನ್ನು ಹಾಕಿಕೊಳ್ಳುವದೂ ಗೊತ್ತಾಗಿದೆ ಕಿರಿಟಾ ಇಟ್ಟುಕೊಳ್ಳುವದೂ ಗೊತ್ತಾಗಿದೆ. ಸಿಂಹಾಸನದ ಮೇಲೆ ಕುಳಿತುಕೊಳ್ಳುವದೂ ಗೊತ್ತಾಗಿದೆ. ಮತ್ತ ಮತ್ತ ನವರಾತ್ರಿ ದೀಪಾವಳಿಯಂಥ ಹಬ್ಬ ಬಂದರೆ ಆನೆಯ ಮೇಲೆ ಅಂಬಾರಿಯಲ್ಲಿ ಕಾಮಣ್ಣ ಕುಳಿತಂತೆ ಕುಳಿತುಕೊಳ್ಳುವದೂ ಗೊತ್ತಾಗಿದೆ ಮತ್ತೇನು ಬೇಕು ಹೇಳು.

**ಸಂಜೀ :** ಮಹಾಸ್ವಾಮೀ!

**ಚಿಕ್ಕ :** ಅಮ್ಮಾ ನೋಡೇ ಈ ಸಂಜೀವಿಯು ನನ್ನ ಸ್ವಾಮಿಯನ್ನುವಳು. ಸ್ವಾಮಿಯನ್ನಲಿಕ್ಕೆ ನಾನೇನು ಸನ್ಯಾಸಿಯೇ? ಏ ಸಂಜೀವೀ ಇನ್ನು ಮೇಲೆ ಸ್ವಾಮಿ ಗೀಮಿ ಎಂದು ಹೇಳಿದರೆ ನಿನ್ನನ್ನು ಬಾಯಿಗೆ ಬಂದಂತೆ ಬಯ್ದು ಚಿವುಟಿ ಚೂರಿಕೊಳ್ಳುವೆನು ನೋಡು! ಮಹಾರಾಜರೆಂದರೆ ನಿನ್ನಜ್ಜನ ಗಂಟು ವೆಚ್ಚವಾಗುವದೇನೇ ಕಳ್ಳಿ?

**ಬಾಯ :** ಎಲೇ ಸಂಜೀವಿ ಇನ್ನು ಮೇಲೆ ಚಿಕ್ಕಯ್ಯನಿಗೆ ಮಹಾರಾಜರೆನ್ನದ ವಿನಃ ಬಾಯಿ ತೆರೆಯಬೇಡಾ ತಿಳಿಯಿತೇ?

**ಸಂಜಿ :** ಆಗಲಿ ದೇವಿಯವರೇ. ಮಹಾರಾಜರೇ ದಯಪಾಲಿಸಬೇಕು. ದರ್ಬಾರದ ಉಡುಪುಗಳನ್ನಿಳಿಸುವೆನು.

**ಚಿಕ್ಕ :** ಆಗಲಿ ಮೂರು ಸಾರೆ ಮುಜರಾ ಮಾಡಿ ಮುಂದಾಗು (ಹಾಗೆ ಮಾಡುವಳು ಚಿಕ್ಕಯ್ಯನು ಹೋಗುತ್ತಾ) ಎಲೇ ಸಂಜೀವಿ ಮೆಲ್ಲಗೆ ನಡಿಯೇ ನಾನು ಮಹಾರಾಜನಲ್ಲವೇ? ಗೌರವವಾಗಿ ನಡೆ (ಹೋಗುವರು)

**ರಸ್ತಾ ಪ್ರವೇಶ** (ದಾಸಯ್ಯನ ವೇಶದಲ್ಲಿ ಕರಿಯನು ಬರುತ್ತಾನೆ).

**ಕರಿ :** ಹೊರಟಯಾಳ್ಯಾ ಬಲೂಚಲೋದು, ಇಲದಿದ್ರ ತಂಜಾವರನಾಡೆಲ್ಲ ಹುಡಿಕ್ಯಾಡಿ ಆ ಮಡಿವಾಳೀ ಮಗಾ ಮತ್ತೂ ಸೊಸಿನ್ನ ಕರಕೊಂಡು ಬರಬೇಕಾದ್ರ ಎಷ್ಟು ದಿವಸಗಳು ಬೇಕಾಗತಿದ್ವೋ ಏನೋ? ಇಲ್ಲೆ ಹತ್ತರದ ಮೊಗಲಾಯಿ ಹಳ್ಯಾಗ ಸಿಕ್ಕ ಬಿಟ್ರು. ಅದಾತು ಯಚ್ಚಮ ನಾಯಕರೆಲ್ಲಿಗೆ ಹೋಗಿದ್ದಾರಾಯಿತಪ್ಪಾ? ಮನೀಗೆ ಬೀಗಾ ಜಡದಾರು ಅವರ ಹಕೀಕತ್ತು ಯಾರಿಂದ ತಿಳಿಕೋಬೇಕು? ಸಿಕ್ಕವರ್ನ ಕೇಳಾಣಾ? ರಾಜ್ಯದಾಗೆಲ್ಲಾ ಜಗಪ್ಪನೋರ ಕಾರಭಾರನ ಅಗೇದಂತ ಎಲ್ಲಿ ನೋಡಿದಲ್ಲೆ ಗುಟ್ಟಾಳುಗಳನ್ನಿಟ್ಟಿದ್ದಾರಾದೀತು! ಯಚ್ಚಮ ನಾಯಕರು ತಮ್ಮ ಪ್ರತಿಪಾದಿಯಂತೆ ಹಿಡಿದು ಯಾವದರವಂದು ಜೇಲಿನ್ಯಾಗ ಇಟ್ಟಿದ್ದರಾದೀತು? ಹ್ಯಾಗ ಗೊತ್ತ ಹಚ್ಚಲಿ? ಹನುಮಣ್ಣೀನಾದರ ಕಣ್ಣಿಗೆ ಬಿದ್ದಾನಂದ್ರ ಅವನೂ ಕಾಣವಲ್ಲಾ! ತಿರ ತಿರುಗಿ ಯಚ್ಚಮನಾಯಕರ ಓಣ್ಯಾಗ ತಿರಿಗ್ಯಾಡೋದೂ ಪಾಡಲ್ಲಾ ಜನರಿಗನುಮಾನ ಬರಲಿಕ್ಕೆ ಹತ್ತೆದ! ಬಲೇ ಪೀಕಲಾಟ ಬಂತು! ಅವ ಯಾರಪಾ? ಕಳ್ಳಗಣ್ಣೀಲೆ ನೋಡಾಕಹತ್ಯಾನು! ಯಲಾ ಯಿವನ! ಹತ್ತಹತ್ತರ ಬರಾಕ ಹತ್ತಿದನಾಲ್ಲಾ! ಗಡಾನs ಯಾವದಾರ ಒಂದು

ಬೀದಿ ಸೇರೋಣಾ (ಹೋಗುವಾ)

ಹನು : (ಫಕೀರನ ವೇಷದಲ್ಲಿ) ನಿಶ್ಚಯವಾಗಿಯೂ ಇವನು ಕರಿಯಣ್ಣನೇ ಗುಪ್ತವೇಷದಲ್ಲಿ ಹೊರಟುಬಿಟ್ಟಿದ್ದಾನೆ. ಆ ಅಗಸ ದಂಪತಿಗಳು ಸಿಕ್ಕಿರಬಹುದಾಗಿ ಕಾಣುತ್ತದೆ. ಅದೇನು? ಬಹು ಆತುರದಿಂದ ದೂರ ದೂರ ಹೋಗುತ್ತಿರುವನು. ನನ್ನ ಗುರುತು ಅವನಿಗೆ ಹತ್ತಲಿಲ್ಲವೆಂದು ಕಾಣುತ್ತದೆ ಹೇಗೆ ಹತ್ತಬೇಕು? ಯಚ್ಚಮಧಣೇರ ಕೈಯ್ಯಾಗ ನುರಿತವನು ನಾನು. ಅವೆಲ್ಲೋ ಅಡ್ನಾಡೀ ಜಗದೇವರಾಯನ ಕೈಯ್ಯಾಗ ನುರಿತವನು. ಇರಲಿ, ಅವನನ್ನು ಕಂಡು ವಿಶೇಷ ಸಮಾಚಾರಗಳನ್ನು ತಿಳಿದುಕೊಳ್ಳುವಾ. (ಹೋಗುವಾ).

ಕರಿ : (ಮತ್ತೊಂದು ಬೀದಿಯಲ್ಲಿ) ಯಲಾ ಇವನಾಪ್ನ ಮತ್ತ ಬಂದನಲ್ಲೋ? ಈ ಊರಾಗ ನಿಲ್ಲೋದು ಬ್ಯಾಡಾ ಊರ ಹೊರಬೀಳಾಣಾ (ಹೋಗುವ)

ಹನು : (ಬೆನ್ನಟ್ಟಿ ಇದೇನು ಬಹು ಅವಸರದಿಂದ ಹೊರಟನು! ನನ್ನನ್ನು ಗುಪ್ತಚಾರನೆಂದು ತಿಳಿದುಕೊಂಡನೋ ಏನೋ! ಆಯಿತು ಹೇಗಾದರೂ ಊರ ಹೊರಕ್ಕೆ ಹೊರಟ್ಟಿದ್ದಾನೆ. ಅದಾದರೂ ಅನುಕೂಲವೇ (ಹೋಗುವನು)

(ಊರ ಹೊರಭಾಗ. ಜಂಗಲ್ ರಸ್ತಾ)

ಕರಿ : ಯಲಾ ಇವನ ಬೆನ್ನು ಹತ್ತಿದ ಬಿಡಪ್ಪಾ! ಅವನೇನು ನನ್ನ ಬೆನ್ನು ಬಿಡೋದಿಲ್ಲಾ ಅನ್ನುವಂಗ ಕಾಣತದ. ಆಗಲಿ ಇನ್ನೊಂದೀಟ ಮುಂದಕ ಆಡಿವ್ಯಾಗ ಕರಕೊಂಡ್ಹೋಗಿ ಇಕ್ಕರಿಸಿ ಬಿಡೋಣು ಮಗನ್ನ ಬೆನ್ನು ಹತ್ಯಾನಲ್ಲ ಬೆನ್ನು! (ಹೋಗುವನು)

ಹನು : ಇದೇನು ಇವನು ಸಾಧಾರಣವಾಗಿ ಓಡಲಾರಂಭಿಸಿದನು ; ಕೈಗೆ ಸಿಗದಂತೆ ಹೋಗಿಬಿಟ್ಟಾನು; ನಾವಾದರೂ ಓಡಿಹೋಗಿ ಅವನನ್ನು ಕಲೆತುಕೊಳ್ಳುವಾ. ಈ ಮುಕ್ಕಟ್ಟು ಮಾರ್ಗದಿಂದ ಅವನನ್ನು ತಡೆಯುವದುತ್ತಮ. (ಓಡಿಹೋಗುವ)

ಕರಿ : ಬರಲಿಂದ್ರು, ವಂದ ಹೊಡತಕ್ಕ ಯರಡು ತುಂಡು (ಕಲ್ಲುಮರೆಗೆ ಜಪ್ಪಿಸಿ ಕುಳಿತುಕೊಳ್ಳುವಾ) ಜಗದೇವರಾಯಾ ಏನ ಪಕ್ಯಾಯಿದ್ದಾನೋ ಯಣ್ಣಾ! ಯಲ್ಲಿನೋಡಿದಲ್ಲಿ ಗುಪ್ತವಾಗಿ ಜನ ಇಟ್ಟಬಿಟ್ಟಾನು! ಈಗ

ಬೆನ್ನು ಹತ್ತಿರುವವ ಮಾತ್ರ ಫಕೀರ ಅಲ್ಲ ಅಲ್ಲಾ ನನ್ನ ಹಿಡಿಲಾಕ ಹೊಂಟ ಗುಪ್ತದೂತನ! ಅಲ್ಲಾ! ನಾನಿಂತಾ ಪರೀಗೀರಿಕಾಣದ ದಾಸಯ್ಯಾಗೇನೀ ಈ ವೇಷದಾಗ ನನ್ನ ಗುರ್ತಾ ಹಿಡಿದಾಂವಾ ಅವನೂ ಮಗಾ ಕಂಬೀರ! ಆದ್ರ ಈ ಕರಿಯಾನ ಜಟ್ಟೀ ಕಾಯಕಾ ಅವಗ ಹಾಂಗ ತಿಳಿದಾವ್ ! ಕಾಲ ಸಪ್ಪಳಾಗಾಕ ಹತ್ತೇತಿ ಒಂದ ಏಟಿನ್ಯಾಗ ಕಣ್ಣು ಮುಚ್ಚಿ ಕಣ್ಣು ತೆರೆಯೋದರಾಗ ಉಳ್ಳಿಸಿ ಬಿಡೋಣ ಮಗನ್ನ! ಚೂರಿ ಹಿಡಿದುಕೊಂಡು ಕೂಡ್ರುವನು.

**ಹನು :** (ಅವನ ಹಿಂದೆ ಬಂದು) ಅಲಲ! ಯದುರು ಬಾರದ್ದೊಂದು ವಳಿತಾಯಿತು. ಅಣ್ಣನು ಗುರ್ತನ್ನು ಕೊಡುವದಕ್ಕಿಂತ ಮುಂಚಿತವಾಗಿ ನನ್ನನ್ನು ಕೈಲಾಸಕ್ಕೆ ಕಳಿಸುತ್ತಿದ್ದನಲ್ಲಾ ಕೈಲಾಸಕ್ಕೆ, ಒಳಿತಾಗಿ ಉಳಿದುಕೊಂಡೆ! ಅಬ್ಬಾ ಇಲಿಯ ಸಲುವಾಗಿ ಬೆಕ್ಕು ಹೊಂಚು ಹಾಕಿಕೊಂಡು ಕುಳಿತಿರುವಂತೆ ಹೇಗೆ ಕುಳಿತಿದ್ದಾನೆ. (ಗಪ್ಪನೇ ಅವನ ಕೈ ಹಿಡಿಯುವನು) ಕರಿಯಣ್ಣಾ ಈ ಹನುಮನಾಯಕನ ಯದುರಿಗೆ ನಿನ್ನಾಟ ಹ್ಯಾಗ ನಡದಿತೋ?

**ಕರಿ :** (ಬೆಪ್ಪಾಗಿ ನಿಂತು) ಯಾರು ಹನುಮಣ್ಣನೇನು? ಏನು ವೇಷಾ ಹಾಕಿದ್ದೆಪಾ! ಸುದ್ದ ಸಂತೀ ಫಕೀರ ಆಗಿಬಿಟ್ಟಿಯಲ್ಲೋ? ಅಲ್ಲಪಾ ಈ ದಾಸಯ್ಯನ ವೇಷದಾಗ ನನ್ನ ಗುರ್ತಾ ಹಿಡಿದಿ ಹ್ಯಾಗ?

**ಹನು :** ಎಲೇ ಕರಿಯಣ್ಣಾ ಯಚ್ಚಮಧಣೇರ ಕೈಯಾಗ ತಯಾರಾದಾವಾ ನಾನು ; ನೀಯಲ್ಲೋ ಆ ಅಡ್ನಾಡಿ ಜಗದೇವರಾಯನ ಕೈಯಾಗ ತಯ್ಯಾರಾದಾವಾ ಸ್ವರದ ಮೇಲಿಂದಲೇ ನಿನ್ನ ಗುರ್ತು ಹಿಡಿದು ಬಿಟ್ಟಿದ್ದೇನೆ ನೋಡು! ಅದಿರಲಿ ಆ ಅಗಸ ದಂಪತಿಗಳ ವಿಷಯ

**ಕರಿ :** ಎಲೇ ತಮ್ಮಾ ಹನುಮಣ್ಣಾ ಯಚ್ಚಮಧಣೇರ ಆಳಾದ ಮ್ಯಾಗ ಬಲಾಚಾರಾನ ತಿರುಗಿ ಬಿಟ್ಟಿದ ನೋಡೋ! ಇನ್ನು ವಂದವಾರ ತಿರಿಗಿಲ್ಲಾ ಅಟರಾಗ ಪತ್ತೇ ಹಚ್ಚಿಬಿಟ್ಟಿದ್ದೇನೆ ನೋಡೋ ಬಂಟಾ. ಯಿರಲಿ ನಡೆ ಯಚ್ಚಮಧಣೇರ ಕಾಣಾಣಾ ಮದ್ಲ, ಹೋಗಾಗ ಎಲ್ಲಾ ಹಕೀಕತ್ತ ಹೇಳತೀನಿ ಬಾ.

**ಹನು :** ಅಹುದು ನಡೆ. ಅವರು ನಮ್ಮಿಬ್ಬರ ಹಾದಿಯನ್ನು ನೋಡುತ್ತಿರಬಹುದು.

**ಕರಿ :** ನಿನ್ಹಾದೀ ನೋಡತಿದ್ದಾರು, ನನ್ನ ಹಾದೀ ಯಾಕ ನೋಡತಾರ?

ಹನು : ನನಗಿಂತಲೂ ನಿನ್ನ ಹಾದಿಯನ್ನೇ ಮೊದಲು ನೋಡುತ್ತಿರಬಹುದು ಕರಿಯಣ್ಣಾ. ನಿನ್ನನ್ನು ನನಗೆ ತೋರಿಸಿಕೊಟ್ಟವರು ಅವರೇ!

ಕರಿ : ನನ್ನ ಗುರ್ತ ಮದ್ಲ ಹಿಡಿದವರು ಅವರೇ! ಇಂಥ ಚಿತ್ರಗುಪ್ತ ಮುಂದೆ ಅಣ್ಣ ಜಗ್ಗಣ್ಣನ ಆಟ ಹ್ಯಾಗ ನಡದೀತಪಾ! ನಡೆ ಗಡಾ ಧಣೇರ್ನ ಕಾಣೋಣಾ. ಅಲ್ಲೋ ಗುಡದಾಗ ನಡೆದಿಯಲ್ಲೋ?

ಹನು : ಮತ್ತೆಲ್ಲಿಗೆ ಹೋಗೋದು?

ಕರಿ : ಏನು ಯಚ್ಚಮಧಣೇರು ಅಡವೀ ಸೇರಿಬಿಟ್ಟರೇನು?

ಹನು : ಅಂಥ ಪ್ರಸಂಗವೇ ಬಂದಿತು, ನೀನು ಹೋದ ಮರುದಿವಸವೇ ಚಿಕ್ಕರಾಯನಿಗೆ ಪಟ್ಟಗಟ್ಟಿದರು.

ಕರಿ : ಏನೋ; ಅಗಸರವನ್ನು ಅರಸನ್ನು ಮಾಡಿಬಿಟ್ರ ! ಥೂ ಥೂ ಎಂತವನಲೇ ಆ ಜಗರಾಯ! ಎಂಥೆಂಥಾ ದೊಡ್ಡ ದೊಡ್ಡ ಮಹಾರಾಜರು ಕುಳಿತ ಸಿಂಹಾಸನದಲ್ಲಿ ಅಗಸನನ್ನು ಕೂಡಿಸಿ ಹೊಲಸು ಮಾಡಿಬಿಟ್ಟಿರಲ್ಲ.

ಹನು : ಅದಕ್ಕೇನು ಮಾಡುವದು? ಕುಳಿತವನ ಸುದೈವ ಮತ್ತೂ ಸಿಂಹಾಸನದ ದುರ್ದೈವ ಮುಂದೆ ಕೇಳು; ಹಾಗೆ ಚಿಕ್ಕರಾಯನಿಗೆ ಪಟ್ಟಗಟ್ಟುತ್ತಲೇ.

ಕರಿ : ಬಿಡನಿನ್ನ ಚಿಕ್ಕರಾಯಾ ಚಿಕ್ಕರಾಯಾ ಅಂತಾ ಏನ ಹೇಳತಿದ್ಯೋ? ಆ ಅಗಸರ ಚಿಕ್ಯಾಅಂತಾ ಹೇಳಬಾರದಾ! ಇನ್ನೊಮ್ಮೆ ಚಿಕ್ಕರಾಯಾ ಪಕ್ಕರಾಯಾ ಅಂತ ಹೇಳಿದರ ಪಾಡಾಗಾಕಿಲ್ಲ ನೋಡು.

ಹನು : ಕರಿಯಣ್ಣಾ ಸಿಂಹಾಸನದಲ್ಲಿ ಕುಳಿತಿರುವ ತನಕ ಹಾಗೆ ಕರಿಯುವದು ನಮ್ಮ ಧರ್ಮ. ಮುಂದೆ ಕುಳಿತುಕೊಳ್ಳತಕ್ಕವರು ಕುಳಿತು ಅವನು ಪದಚ್ಯುತನಾದನೆಂದರೆ ಅಗತ್ಯವಾಗಿ ನಾವವನಿಂದಲೇ ನಮ್ಮ ಬಟ್ಟೆಬರೆಗಳನ್ನು ಒಗಿಸಿಕೊಳ್ಳುವಾ. ಆ ವರೆಗೂ ಸೈರಣೆಯಿರಲಿ ಮುಂದೆ ಕೇಳು ಹಾಗೆ ಅವರನ್ನು ಪಟ್ಟಗಟ್ಟುತ್ತಲೇ ಜಗದೇವರಾಯನು ಶ್ರೀರಂಗರಾಯರನ್ನೂ ಅವರ ಬಳಗದವರನ್ನೂ ಹಿಡಿತರಿಸಿ ಗಿರಿದುರ್ಗದ ಕಾರಾಗೃಹದಲ್ಲಿಟ್ಟಿದ್ದಾನೆ.

ಕರಿ : ಎಲೇ ಹನುಮಣ್ಣಾ, ಸಾಕಬಿಡೋ ನನ್ನಿಂದಾ ಕೇಳೂದು ಆಗವಲ್ದು ಅಂಥಾ ಕೆಲ್ಸವನ್ನು ಮಾಡುವ ಆ ಕವಡಕಂಬಿಕ ಜಗ್ಗಣ್ಣನ್ನ ಅದೇ ಸಿಂಹಾಸನದ ಮುಂದೆ ಉಳ್ಳಸಿ ಬರ್ತೇನಿ ಬಿಡು. ಪರಪಂಚದಾಗ

ಇಂಥಾ ಕೆಟ್ಟ ಹುಳಾ ಇರಬಾರದು. (ಹೋಗುವಂತೆ ನಟನೆ)

**ಹನು :** (ತಡೆದು) ಕರಿಯಣ್ಣಾ, ಅಲ್ಲೋ ಆ ಪ್ರಸಂಗವು ಬಂದೇ ಬರುವದು. ಇಷ್ಟೇಕೆ ಆತುರ? ಮುಂದೆ ಕೇಳು ಅವರನ್ನು ಕಾರಾಗೃಹದಲ್ಲಿ ತಂದಿರಿಸುತ್ತಲೇ ಆ ಜಗದೇವರಾಯನ ದೃಷ್ಟಿಯು ನಮ್ಮ ಧಣೇರ ಅಡಿಗೆ ಹೊರಳಿತು. ಇವರನ್ನು ಹಿಡಿದು ಮುಂದೆ ಕೊಲ್ಲಿಸಬೇಕೆಂದಿದ್ದನು. ಅದಕ್ಕೆ ನಮ್ಮ ಧಣೇರು ರಾಜಧಾನಿಯಲ್ಲಿರುವದು ಹಾನಿಕರವೆಂದು ತಿಳಿದು ಈ ಗುಡ್ಡದೊಳಗಿನ ಗುಪ್ತ ಸ್ಥಳದ ಏರ್ಪಾಟ ಮಾಡಿಸಿದ್ದಾರೆ.

**ಕರಿ :** ಅವರಿರೋ ಜಾಗಾ ಇನ್ನೂ ಏಟ ದೂರೈತೀ?

**ಹನು :** ಇಲ್ಲೇ ! ನಾವು ನಿಂತಲ್ಲೇ ! (ಚಪ್ಪಳಿಯಿಕ್ಕುವನು, ಬಾಯಿಗಲ್ಲು ಸರಿದು ಗವಿಯಾಗುವದು)

**ಯಚ್ಚ :** ಏನು ಹನುಮಾ? ಕರಿಯನು ಬಂದನೇ?

**ಕರಿ :** ಬಂದೇನ್ರಿ ದೇವರೂ, ಮಜುರಾ ಮಾಡ್ತೇನಿ.

**ಯಚ್ಚ :** ನೀನು ಹೋದ ಕಾರ್ಯವು ಗಂಡೋ ಹೆಣ್ಣೋ?

**ಕರಿ :** ತಮ್ಮ ಪಾದದಂತಃಕರುಣದಿಂದಾ ಹೆಣ್ಣಾಗಾಣ್ತೇ? ಆ ಅಗಸ ಮಂದೀ ಇಲ್ಲೇ ನಮ್ಮ ಸರಹದ್ದಿನ ಮೊಗಲಾಯೀ ಹಳ್ಯಾಗ ಸಿಕ್ಕ ಬಿಟ್ರು ಮುಂದ ತಂಜಾವರಕ ಹೋಗುವ ಕಾರಣಾನ ಬೀಳಲಿಲ್ಲಾ

**ಯಚ್ಚ :** ಅವರನ್ನು ಕರೆದು ತರಲಿಲ್ಲವೇಕೆ?

**ಕರಿ :** ನನ್ನ ನೋಡಿದ್ರ ಅಂಜಿಕೊಂಡು ಮತ್ತ ಯತ್ತಾರ ಹೋಗಿ ಬಿಟ್ಟಾವೆಂದು ತಿಳಿದು ಅವರಿಗೆ ಕಾಣಿಸಿಕೊಳ್ದಹಾಂಗ ತಿರುಗಿಬಂದೆನ್ರಿ

**ಯಚ್ಚ :** ಹಾಗೂ ಆಗುವ ಸಂಭವವಿತ್ತು ಆದರೆ ಹೇಗಾದರೂ ಮಾಡಿ ಅವರನ್ನು ಕರೆದು ಕೊಂಡು ಬರಲೇಬೇಕಲ್ಲವೋ

**ಹನು :** ಆ ಮುದಿಮಡಿವಾಳಿಯನ್ನು ಕರಿಯಣ್ಣನ ಜತೆಯಲ್ಲಿ ಕರೆತರುವದಕ್ಕಾಗಿ ಕಳುಹಿಸಬೇಕು.

**ಕರಿ :** ಹೌದ್ನೋಡ್ರಿ ದೇವರೂ ! ಆಮುದಿಮಡಿವಾಳಿ ಬಂದ್ರ ಅವರಿಗೆ ನಂಬಿಗ್ಯಾಗತದ; ಆಮ್ಯಾಲೆ ಕರಕೊಂಡು ಬರೋದಕ್ಕೂ ಪಾಡಾಗತದ

(ತೆರೆ ಸಂಜೀವಿ ಸಂಕೇತ ಮಾಡುವಳು)

ಯಚ್ಚ : ಸಂಜೀವಿಯು ಬಂದಳೆಂದು ಕಾಣುತ್ತೆ ಹನುಮಾ? ತೆರೆಹೋಗು ಗವಿಯ ಬಾಗಿಲವನ್ನು. (ಹನುಮನು ಹೋಗುವ)

ಕರಿ : ಸಂಜೀವ್ರೆ? ಅವಳೂ ತಮ್ ಗುಟ್ರ್ವ್ಳ.

ಯಚ್ಚ : ಆ ಸಂಗತಿಯು ನಿನಗೆ ಹೇಗೆ ಗೊತ್ತಾಯಿತೋ?

ಕರಿ : ದೇವರು? ಅಂದ ನಾ ತಮ್ಮನ್ನ ಕೊಲ್ಲಾಕ ಬಂದಾಗ ಮಂಚ ಬುಡಕ ಅಡಗಿದ್ದೆ ತಾವು ಸಂಜೀವಿ ಹೆಸರು ತಕ್ಕೊಂಡಿದ್ರಿ ; ದೇವ್ರೂ? ಅಂದ ತಮ್ಮ ಕನಸಿನ್ಯಾಗ ಯಂಕಟಪತಿ ಮಾರಾಜ್ರು ಬಂದಿದ್ರಲ್ವೆ?

ಯಚ್ಚ : ಅಷ್ಟೆಲ್ಲವನ್ನು ನಾನು ಕನಸಿನಲ್ಲಿ ಹೇಳಿದನೆ? (ಹೌದ್ರಿ) ಅದೊಂದು ನನ್ನಲ್ಲಿರುವ ದೋಷವೇ ಸರಿ (ಸಂಜೀವಿಯು ಬರುವಳು. ಕರಿಯ ಹನುಮರನ್ನು ನೋಡಿ ಗಾಬರಿಯಾಗುವಳು, ಯಚ್ಚಮನಾಯಕರು ಅವರ ಗುರ್ತು ಹೇಳುವರು) ಏನು? ಸಂಜೀವೀ ಮತ್ತೇನು ಸಮಾಚಾರಾ?

ಸಂಜಿ : "ಯಚ್ಚಮನಾಯಕರ ರುಂಡವನ್ನು ಚೆಂಡಾಡಿದ ಮೇಲೆಯೇ ಇವತ್ತಿನ ಭೋಜನವೆಂದು" ಹನುಮನಾಕನ ಕಡಿಂದಾ ಕಳುಹಿಸಿದ ಸಂದೇಶವನ್ನು ನೋಡಿ ಜಗದೇವರಾಯರು ಪ್ರತಿಜ್ಞೆಯನ್ನು ಮಾಡಿದ್ದಾರೆ.

ಯಚ್ಚ : ನನ್ನ ರುಂಡವನ್ನು ಚಂಡಾಡದಿದ್ದರೆ ಕೊನೆಯವರೆಗೂ ಅವನ ಪಾಲಿಗೆ ಏಕಾದಶಿಯೇ!

ಸಂಜಿ : ಇದಲ್ಲದೆ ಶ್ರೀರಂಗರಾಯರ ಸಂದೇಶವಿರುದು. (ಕೊಡುವಳು)

ಯಚ್ಚ : (ಓದುವ) "ನಾಳಿನ ಸೂರ್ಯಾಸ್ತದೊಳಗಾಗಿ ಮಗುವಾದ ರಾಮರಾಜನನ್ನು ಹೇಗಾದರೂ ಮಾಡಿಕಾರಾಗ್ರಹದಿಂದಾ ಕರೆದುಕೊಂಡು ಹೋಗಲಿಕ್ಕೇಬೇಕು ಹಾಗೆ ವಿರೂಪಾಕ್ಷ ಸ್ವಾಮೀಯ ಅಪ್ಪಣೆಯಾಗಿದೆ. ಏತಕ್ಕೆ ಹೀಗೆ ಸ್ವಾಮಿಯು ದೃಷ್ಟಾಂತವನ್ನಿತ್ತಿರಬಹುದು! ಆಗಲಿ ಸಂಜೀವಿ? ಅಪ್ಪಣೆಯಂತೆ ನಡೆದುಕೊಳ್ಳುವೆನೆಂದು ಮಹಾರಾಜರಲ್ಲಿ ಅರಿಕೆಮಾಡಿಕೋ, (ಸಂಜೀವಿಯು ಹೋಗುವಳು) ನಡೆ ಕರಿಯಾ? ನಿನ್ನಗೂಡ ಆ ಮುದಿಮಡಿವಾಳಿಯನ್ನು ಕಳುಹುವೆನು. ಇಂದಿನಿಂದ

ಒಂದು ತಿಂಗಳಿಗೆ ಸರಿಯಾಗಿ ಇದೇ ಸ್ಥಳದಲ್ಲಿ ಆ ರಜಕ ದಂಪತಿಗಳೊಡನೇ ನನ್ನನ್ನು ಕಾಣು.

**ಕರಿ :** ಯದಕಬೇಕು ದೇವರೂ ಒಂದು ತಿಂಗಳಾ ! ನಾಕ ದಿಂದಾಗ ಕರಕೊಂಡು ಬರ್ತೇನ್ರಿ ಬಿಡ್ರಿ.

**ಲಕ್ಷ್ಮ :** ಹಾಗೆ ಬೇಡಾ. ಬೇರೆ ಕೆಲಸಗಳಿವೆ, ಇಂದಿನಿಂದಾ ಮೂವತ್ತನೇ ದಿವಸ ಸಾಯಂಕಾಲವಾದ ಬಳಿಕ ಇದೇ ಸ್ಥಳದಲ್ಲಿ ನನ್ನನ್ನು ಕಾಣು ಹನುಮಾ? ಶ್ರೀರಂಗರಾಯರ ಮುಕ್ತತೆಗಾಗಿ ನೀನು ಕೈಕೊಂಡ ಸುರಂಗದ ಕಾರ್ಯವನ್ನು ಅಖಂಡವಾಗಿನಡಿಸು ಹನುಮಾ? ನೀನು ನಿನ್ನ ಕಾರ್ಯಕ್ಕೆ ಉದ್ಯುಕ್ತನಾಗು! ಕರಿಯಾ? ನಡೆ ಆ ಅಗಸರ ಮುದಿಮಡಿವಾಳಿಯನ್ನು ನಿನ್ನ ಜೊತೆಯಲ್ಲಿ ಕಳುಹಿಸುವೆನು.

**ಪ್ರವೇಶ ರಾಸ್ತಾ!**

(ಸೇನಾಪತಿಯಾದ ವೆಂಕಟಾದ್ರಿ ಮತ್ತು ತಿಮ್ಮನಾಯಕನು ಬರುವರು)

**ವೆಂಕಟಾದ್ರಿ :** ಕೊತವಾಲರಾದ ತಿಮ್ಮನಾಯಕರೇ ಇದೋ ಈ ಆಜ್ಞಾಪತ್ರವನ್ನು ತಕ್ಕೊಳ್ಳಿ, ಮತ್ತು ಇದರೊಳಗಿದ್ದ ಸಕಲ ಕಾರ್ಯ ಭಾಗವನ್ನು ಕೊನೆಗಾಣಿಸಿ.

**ಕೊತ :** (ಓದಿ) ಏನು? "ಯಚ್ಚಮನಾಯಕರನ್ನು ಹಿಡಿದು ತರಬೇಕು ಅದು ಸಾಧಿಸದಿದ್ದರೆ ಗುಂಡಿಕ್ಕಿ ಕೊಲ್ಲಬೇಕು" ಏನು ಸ್ವಾಮೀ ಸೇನಾಪತಿಗಳೇ ಇದು ಸಾಧ್ಯವಾದೀತೆ?

**ವೆಂಕ :** ಸಾಧ್ಯಾಸಾಧ್ಯಗಳ ವಿಚಾರವೇಕೆ? ಪ್ರಯತ್ನವಂತೂ ಮಾಡಲೇಬೇಕಲ್ಲವೇ!

**ತಿಮ್ಮ :** ಪ್ರಸಂಗಾನುಸಾರ ಗುಂಡಿಕ್ಕಿ ಕೊಲ್ಲಬೇಕೆಂದು ಅಪ್ಪಣೆಯಾಗಿದೆ. ಯಚ್ಚಮನಾಯಕರು ಮಾಡಿದ ಅಂತಹ ಅಪರಾಧವೇನು?

**ವೆಂಕ :** ಈ ಆಜ್ಞಾಪತ್ರವನ್ನು ನೋಡಿ ಮೊದಲು ನನಗಾದರೂ ಆಶ್ಚರ್ಯವಾಯಿತು. ಪ್ರತ್ಯಕ್ಷ ಜಗದೇವರಾಯರನ್ನು ಕಂಡ ಮೇಲೆ ಇದರ ಪರಿಷ್ಕಾರವಾಯಿತು.

**ತಿಮ್ಮ :** ಏನು? ಯಚ್ಚಮನಾಯಕರು ಅಂತಹ ಘೋರ ಅಪರಾಧವನ್ನು ಮಾಡಿದ್ದು ಪರಿಷ್ಕಾರವಾಯಿತು.

**ವೆಂಕ :** ಅಹುದು ಚಿಕ್ಕರಾಜ ಮಹಾರಾಜರ ಅಧಿಪತ್ಯವನ್ನೊಪ್ಪಿಕೊಳ್ಳುವದಕ್ಕಾಗಿ

ಬುದ್ಧಿವಾದವನ್ನು ಮಾಡಬೇಕೆಂದು ಜಗದೇವರಾಯರು ಅವರನ್ನು ಕರೆ ಕಳುಹಿಸಿದರಂತೆ! ಯಚ್ಚಮನಾಯಕರು ಆ ಕರಿಯಲಿಕ್ಕೆ ಹೋದವನ ಕೆನ್ನೆಗೆ ಕೊಟ್ಟು ಮನಬಲ್ಲಂತೆ ಜಗದೇವರಾಯರ ನಿರ್ಭರ್ತ್ಸನೆಯನ್ನು ಮಾಡಿದರಂತೆ! ಅದೂ ಸಾಲದೇ ಒಂದು ಸಂತಾಪ ಜನಕವಾದ ಪತ್ರವನ್ನು ಸಹ ಬರೆದಿದ್ದಾರೆ.

**ತಿಮ್ಮ :** ಅಂತಹದೇನು ಮಹಾಸ್ವಾಮೀ?

**ವೆಂಕ :** ನಾನದನ್ನು ಕಣ್ಣಿಟ್ಟು ಓದಿ ನೋಡಿಕೊಂಡಿದ್ದೇನೆ. ಅದರಲ್ಲಿ ಹೀಗಿದೆ "ಮಾನವರೂಪಿ ಪಿಶಾಚಿ ಜಗ್ಗಾ! ಸ್ವಲ್ಪ ಕಾಲದಲ್ಲಿಯೆ ನಿನಗೆ ನಿನ್ನ ಪಾಪಗಳ ಪ್ರಾಯಶ್ಚಿತ್ತವಾಗುವದು" ಕೆಳಗೆ ಲಕ್ಷ್ಮಣ ನಾಯಕಾ ಎಂದು ಸಹಿಯನ್ನು ಕೂಡಾ ಮಾಡಿದ್ದಾರೆ.

**ತಿಮ್ಮ :** ಹೀಗೆ ಬರೆದರೆ ಸ್ವಾಮೀ ಯಾರಿಗೇ ತಾನೇ ಕೋಪವು ಬರಲಿಕ್ಕಿಲ್ಲಾ?

**ವೆಂಕ :** ಪ್ರತ್ಯಕ್ಷ ಅನಭಿಷಿಕ್ತ ಮಹಾರಾಜರೇ ಅವರು. ಅಂಥವರೊಡನೆ ಈ ಪ್ರಕಾರದ ವರ್ತನವು ಯಾವಕಾಲಕ್ಕೂ ಸಲ್ಲದು. ಯದ್ಯಪೀ ಚಿಕ್ಕರಾಜ ಮಹಾರಾಜರು ಶ್ರೀಮದ್ ವೆಂಕಟಪತಿ ಮಹಾರಾಜರ ತಕ್ಕ ಮಕ್ಕಳಲ್ಲದಿದ್ದರೂ ಅವರ ಹೊಟ್ಟೆಯಿಂದ ಹುಟ್ಟಿಬಂದುದು. ಸುಳ್ಳಾಗಬಹುದೇ? ಎಲ್ಲ ವೀರನಾಯಕರಂತೆ ಸಿಂಹಾಸನಕ್ಕೆ ವಿಧೇಯುರಾಗುವದನ್ನು ಬಿಟ್ಟು ಸುಮ್ಮನೆ ಏನೋ ಒಂದು ಉಪದ್ವ್ಯಾಪವನ್ನು ಹೂಡಿಬಿಟ್ಟಿದ್ದಾನೆ.

**ತಿಮ್ಮ :** ಅದರಿಂದ ಫಲವೇನು?

**ವೆಂಕ :** ಫಲವೇನು? ಜೀವಕ್ಕೆ ಸಂಚಗಾರವನ್ನು ತಂದುಕೊಳ್ಳುವದು ! ಇದೇ ತಕ್ಕ ಫಲವು ಅದೇನು? ಜಗದೇವರಾಯರು ಅಕಸ್ಮಾತ್ತಾಗಿ ಬಂದುಬಿಟ್ಟರು?

**ಜಗ :** ಸೇನಾಪತಿಗಳೇ ! ಸದ್ಯಕ್ಕೆ ಆ ಯಚ್ಚಮನ ಪಾರುತ್ಯದ ಕೆಲಸ ವತ್ತಟ್ಟಿಗಿರಲಿ ಈ ದಸರೆಯ ಮಹೋತ್ಸವವು ಮುಗಿದ ಮೇಲೆ ಆ ವಿಷಯಕ್ಕೆ ಗಮನ ಕೊಡಿ. ಯಾಕೆಂದರೆ ನೂತನವಾಗಿ ಚಿಕ್ಕರಾಜ ಮಹಾರಾಜರಿಗೆ ಪಟ್ಟವಾಗಿದೆ. ಇದು ಮೊದಲನೆಯ ನಾಡಹಬ್ಬದ ಮಹೋತ್ಸವವು. ಪ್ರಯುಕ್ತ ಸಕಲರೂ ಮಿಕ್ಕ ಸಂತಾಪಜನಕ ವಿಚಾರಗಳನ್ನು ಬಿಟ್ಟು ಈ ಮಹೋತ್ಸವವನ್ನು ನೇರವೆರಿಸುವಾ

**ತಿಮ್ಮ :** ಅಹುದು ಬುದ್ಧೀ!

**ವೆಂಕ :** ಇಂದೇ ಅವರನ್ನು ಹಿಡಿದು ತಂದು ನಿರ್ಬಂಧದಲ್ಲಿರಿಸಬೇಕೆಂದಿದ್ದೆನು. ಆದರೆ ಅವರೆತ್ತಲೋ ಹೋಗಿಬಿಟ್ಟಿದ್ದಾರೆ.

**ಜಗ :** ಅದನ್ನೆಂದೋ ಗೊತ್ತು ಹಚ್ಚಿಬಿಟ್ಟಿದ್ದೇನೆ.

**ತಿಮ್ಮ :** ಅವರು ಹೋಗುವದೆಲ್ಲಿ. ಅದೇ ತಂಜಾವರದರಸನಾದ ರಘುಪತಿರಾಜನ ಕಡೆಗಲ್ಲವೇ?

**ಜಗ :** ದಸರೇ ಹಬ್ಬವಾಗಲಿ, ಆ ತಂಜಾವರದರಸನಾದ ರಘುಪತಿರಾಜನಿಗೆ ಆ ರಾಜದ್ರೋಹಿಯನ್ನು ನಮ್ಮ ಸ್ವಾದೀನ ಪಡಿಸುವದಕ್ಕಾಗಿ ಬರೆಯುವೆನು. ನಮ್ಮ ಅಪ್ಪಣೆಯಂತೆ ನಡೆದುಕೊಳ್ಳದಿದ್ದರೆ ಅವನಿಗೂ ಸಹ ತಕ್ಕ ಪ್ರಾಯಶ್ಚಿತ್ತವನ್ನು ವಿಧಿಸುವಾ. ಸಧ್ಯಕ್ಕೆ ನಾಳಿನ ವಿಜೃಂಭಣೆಯ ಮೆರವಣಿಗೆಯ ಸಿದ್ಧತೆಯನ್ನು ಮಾಡಿ ಬಹು ಸಮಾರಂಭದ ಶಿಮೋಲ್ಲಂಘನವಾಗಬೇಕು! ಹೋಗಿರಿ. (ಹೋಗುವರು)

**ಪ್ರವೇಶ ರಾಸ್ತಾ**

**(ಜಂಗಲ್ ಮಾರ್ಗ. ಕರಿಯಾ ಮಡಿವಾಳಿ ಬರುವರು)**

**ಕರಿ :** ಏ ಯಜ್ಜಾ ಮಡವಾಳಿ? ಆ ಮನೀ ತಗೊಂಡೇನು ಮಾಡತೀದೀ ಮುಂದ ನಮ್ಮ ಶ್ರೀರಂಗಮಹಾರಾಜರು ಪಟ್ಟದಮ್ಯಾಗ ಕುಂತರಂದ್ರ ನಮ್ಮ ಯಚ್ಚಮಧಣೇರ ನಿನಗೆ ವಚನಕೊಟ್ಟಂತೆ ಎರಡಂತಸ್ತಿನ ಮನಿ ಕೊಡಸ್ತಾರ. ಅಂತೂ ನಿನ್ನ ಬಡತನ ದೂರಾಗತ್ತ.

**ಮಡಿವಾಳ :** ಕರಿಯಣ್ಣಾ, ಮಗಾ ಮತ್ತು ಸೊಸಿ ಇಷ್ಟದಿಂದಾಗ ಒಮ್ಮೆರ ಬಂದು ಈ ಮುದುಕನ ಮಾತಾಡಿಸಿ ಹೋಗಬೇಕಾಗಿತ್ತು. ಅಂಥಾದ್ದು ಹ್ಯಾಗೆ ನಿಂತಿದ್ದಾರಪಾ? ಅವರಿಗೆ ತಂದೆಂಬೋ ಪಿರೂತಿ ಇರಾಕಿಲ್ಲ?

**ಕರಿ :** ಮಡಿವಾಳಜ್ಜಾ, ಆ ಪಿರೂತಿ ಎಲ್ಲಿ ಹೋದೀತು! ಆದರ ಎಲ್ಲಾ ಪಿರೂತಿಕಿಂತಾ ಜೀವದ ಮ್ಯಾಗಿನ ಪಿರೂತಿ ಬಲು ಹೆಚ್ಚಿನದು. ಅದರ ಮುಂದ ಯಾವದು ಅಲ್ಲಾ. ಇಲ್ಲಿಗವರು ಬಂದಿದ್ರ ಜಗದೇವರಾಯನ ಆಳುಗಳು ಅವರ್ನ ಬಿಡತಿದ್ರ? ಇಕ್ಕರಿಸಿಬಿಡುತ್ತಿದ್ರು.

**ಮಡ :** ಅಹುದು ನೋಡು ಕರಿಯಣ್ಣಾ ನೀನು ಹೇಳೋ ಮಾತು ನಿಜ ಜೀವದ ಮುಂದ ತಂದಿಲ್ಲಾ ತಾಯಿಲ್ಲಾ ಮಕ್ಕಳೂ ಇಲ್ಲಾ ಯಾರೂ ಇಲ್ಲಾ.

ಕರಿ : ಹೂಂ! ಗಡಾಗಡಾ ನಡಿ ಎರಡುಮೂರು ದಿಂದಾಗ ಮಗಾ ಸೊಸಿ ಮಕಾ ಕಾಣುವಿಯಂತೆ.

ಮಡ : ಕತ್ತೀನರs ತರತಿದ್ನಿಯಲ್ಲೊ ! ಕಾಲ ಸೋತಾಗ ತಾಲಾಗೀಟು ಹತಿಗೊಂಡು ಹೋಗಾಕ ಬರತಿತ್ತು!

ಕರಿ : ಈ ಯಚ್ಚಮಧಣೇರಿಗೆ ಬೇಡವೇನೋ?

ಮಡ : ಅದನ್ನೇನ ಮಾಡ್ಯಾರಪಾ ಅವರು.

ಕರಿ : ಯಜ್ಜಾ ಮಡಿವಾಳೀ ನೀನುಳಿಸಿ ಬಂದೀದೆಲ್ಲಾ ಜೇಲಿನಾಗಿರೋ ಶ್ರೀರಂಗಮಾರಾಜರ ಗಂಜಿಬಟ್ಟೇನ. ಅವನ್ನ ಕೊಟ್ಟುಬರಾಕ! ಹೊತಗೊಂಡು ಹೋಗಾಕ ಕತ್ತಿ ಬ್ಯಾಡೇನಪಾ?

ಮಡ : ಅಯ್ಯಯ್ಯೋ ! ಅವನ್ನ ಕೊಟ್ಟುಬರಾಕ ಯಚ್ಚಮ ಧಣೇರ ಹೊಕ್ಕಾರ ಬ್ಯಾಡಂತಾ ಹೇಳಿಬರ್ತೇನಿ ನಿಲ್ಲು, ಜಗದೇವರಾಯನ ಜನಾ ಒಂದಸವನ ಅವರ್ನ ಹುಡುಕ್ಯಾಡುತಾರು ಅವರ ಕಣ್ಣಿಗೆಬಿದ್ರ ಇವರ ಗತಿ ಏನಾದಿತು.

ಕರಿ : ಅವರು ಯಚ್ಚಮಧಣೇರಾಗಿ ಅವರ ಕಣ್ಣಿಗೆ ಬಿದ್ದರೆ ಹೌದಲ್ಲೊ?

ಮಡ : ಎಲೋ ಇವನ ಎಂಥಾ ಮಾತಾಡದ್ಯೋ ಬಟ್ಟೀ ಕೊಟ್ಟುಬರಾಕ ಅವರ ಹೊಕ್ಕಾರೂ ಅಂತ ಹೇಳತೀನಿ

ಕರಿ : ಹೋದರ ! ಅವರು ಯಚ್ಚಮಧಣೇರಾಗಿ ಎಲ್ಲಿ ಹೋಗತಾರ? ಅಗಸರ ಮುದಿ ಮಡಿವಾಳ ಆಗಿ ಹೋಗತಾರು. ಯಜ್ಜಾ? ನಿನ ಮನಿಗೆ ಬುಡ ಬುಡುಕೇರಾಗಿಬಂದಾಗ ನೀನವರ ಗುರ್ತಾ ಹಿಡಿದ್ಯಾ?

ಮಡ : ಯಲ್ಲಿಬರಬೇಕೋ ನಿನ ಮಂಜಾಳ ಹೋಗಲಿ ಒಂದಸವನ ಸಕಣಾ ಕೇಳೇ ಕೇಳಿದೆ ನಿನಾರ ಎಲ್ಲಿ ಗುರ್ತಾ ಹಿಡಿದೆ? ಕರಪೇತಿ ದಾಸಯ್ಯ ಅಂತ ಬೆದರಿಸಿ ಬಿಡಲಿಲ್ಲ? ಕರಿಯಣ್ಣಾ ಉಳಿದ ಗಂಜೀ ಬಟ್ಟೇನ ಗಿರಿದುರ್ಗದ ಕೈದೀಕಾರನಿಗೆ ಕೊಟ್ಟು ಬರಬೇಕೆಂದ್ರ ಬಲೂ ಅವಸರಾ ಮಾಡಿದೆಪಾ.

ಕರಿ : ಆ ಬಟ್ಟೀ ಉಳಿಸಿ ಕೊಳ್ಳೋದ ಅವನಿಗೆ ಬೇಕಾಗಿತ್ತು, ಮಡಿವಾಳಜ್ಜಾ, ಬಟ್ಟಿಕೊಡೋ ನೆವಾವಾಡಿಕೊಂಡು ಹೋಗಿ ಅಲ್ಲಿರೊ ಶ್ರೀರಂಗಮಹಾರಾಜರ ಕಂಡು ತಿರುಗಿ ಬರೋಕಾಲಕ್ಕ ಅವರ ಮಗಾ

ರಾಮರಾಜನ್ನ ಆ ಮಾಸಿದ ಬಟ್ಯಾಗ ಸುತ್ತಿಕೊಂಡು ಬರತಕ್ಕವರಿದ್ದಾರೆ.

ಮಡ : ಅಯ್ಯಯ್ಯೋ ! ಇಂದು ದಸರೇ ಹಬ್ಬವಲ್ಲವೇನೋ ! ಇಂಥಾ ಹಬ್ಬದಾಗ ಅರಸರ ಮಗನ್ನ ಕತ್ತಿಮ್ಯಾಲ ಕುಂಡ್ರಿಸಬೇಕು?

ಕರಿ : ಅರಸರಮಗಾ ಆನಿಮ್ಯಾಲ ಕುಂತ್ರ ಅಗಸರಮಗಾ ಕತ್ತೀಮ್ಯಾಲ ಕೂಡೋದಿಲ್ಲೇನು? ನಡಿ ಕಣ್ಣು ಕತ್ಲಾಗೋದರಾಗ ಒಂದೆರಡು ಹರದಾರಿ ಹೋಗೋಣ.

(ಅಗಸರವನು ಮುದಿಮಡಿವಾಳಿಯ ವೇಷದಲ್ಲಿ)

ಲಕ್ಷ್ಮ : ಕುದಿಯುತ್ತಲಿದೆ ಕರ್ನಾಟಕ. ಸಿಂಹಾಸನದ ಅವಮಾನವಾಗುತ್ತಿರುವದನ್ನು ನೋಡಿ ರಕ್ತವು ಸಳಮಳಾ ಕುದಿಯುತ್ತಲಿದೆ. ನರಾದಮಾ ಜಗ್ಗಾ? ಮೂರ್ತಿಮಂತ ಸ್ವಾರ್ಥದ ಪಿಶಾಚಿ! ಮಾಡು ಮಾಡು ಮನಬಂದಂತೆ ನರ್ತನವನ್ನು ಮಾಡು. ಈ ಲಕ್ಷ್ಮಣನ ಕಾಲಿಯು ನಿನ್ನ ಕುತ್ತಿಗೆಯನ್ನು ಚಂಡಾಡುವತನಕ ನರ್ತನವನ್ನು ಮಾಡು. ಎಲೋ ಕಳ್ಳಾ? ರಣದುರಂಧರರಾದ ಕನ್ನಡನಾಯಕರು ಪಟಪಟನೇ ಅಗಸರ ಕರುವಿಗೆ ಶಿರಬಾಗುವದನ್ನು ನೋಡುವೆ, ನಿನ್ನ ರಕ್ತವು ಕ್ಷತ್ರಿಯನದೇ? ಅಲ್ಲಲ್ಲಾ ಖಂಡಿತವಾಗಿಯೂ ಅಲ್ಲಾ. ಅದಾವದೋ ಒಂದು ಕುಲಗೇಡಿಯಾದ ಜಾರಪುರುಷನದಾಗಿದೆ. ಅದೇನು? ಸವಾರಿಯು! ಯಾರದು? ಪಟ್ಟದಾನೆಯ ಮೇಲೆ ಹೊರಟಿದೆ! ಶ್ವೇತಛತ್ರಗಳಿವೆ. ಕರ್ನಾಟಕ ಅರಸೊತ್ತಿಗೆಯ ಸಕಲ ಮಹಾಮರ್ಯಾದಿಗಳಿವೆ. ಆನೆಯ ಮೇಲಿನ ಮುತ್ತಿನ ಅಂಬಾರಿಯಲ್ಲವೆ! (ಆತಿರೇಕ ಸಿಟ್ಟು) ಹಾಯ್! ಅದೇ ರಜಕರ ಪಿಳ್ಳೆ! ಹಿಂದೆ ಸ್ಮಶಾನದ ಪಿಶಾಚಿಯಂತೆ ಹಲ್ಲುಕಿರಿದು ಕುಳಿತವನು ಜಗ್ಗನಲ್ಲವೆ?! (ಭಟ್ಟಂಗಿ ಕರ್ನಾಟಕ ಸಿಂಹಾಸನಾಧೀಶ್ವರ ಶ್ರೀಮದ್ ರಾಜಾಧಿರಾಜ ನರಪತಿ ಚಿಕ್ಕ ರಾಜೇಂದ್ರ ಬಹುಪರಾಕ! ವೈತಾಲಿಕನ ನಾಲಿಗೆಯನ್ನು ಹಿರಿದು ಬೀಸಾಟುವೆನು. ಆದರೆ ಅವನದೇನಪರಾಧವು? ಆ ಅಂಬಾರಿಯಲ್ಲಿ ಹಿಂದೆ ಕುಳಿತುಕೊಂಡ ಮುದಿಗೂಬಿಯೇ ಸರ್ವಾಪರಾಧಿಯು. ಅದಕ್ಕೇನೆ ತಕ್ಕ ಶಾಸನವನ್ನು ವಿಧಿಸುವಾ ಇದೇನು? ಎಷ್ಟು ಉತ್ತೇಜಿತನಾಗಿರುವನು! ಸಕಲ ವಿಜಯನಗರವು ಈ ದಸರೆಯ ಮೆರವಣಿಗೆಯ ಸಮಾರಂಭದಲ್ಲಿ ತೊಡಗಿಬಿಟ್ಟಿದೆ. ಇದೇ ಸಮಯದಲ್ಲಿ ನಾವು ನಮ್ಮ ಕಾರ್ಯವನ್ನು

ಸಾಧಿಸುವಾ (ಕತ್ತೆಗೆ ಜ್ಯಾಜ್ಯಾ ಎಂದು ಹೊಡೆದು) ಅಗಸರ ಮಡಿವಾಳಯ್ಯ ಕತ್ತಿಯ ಭಾಗ್ಯವೇ ಭಾಗ್ಯವು. ವಿಜಯದಶಮಿಯಂಥ ದೊಡ್ಡದಾದ ನಾಡಹಬ್ಬದ ಇವತ್ತಿನ ಶುಭದಿವಸದಲ್ಲಿ ಶೀಮೋಲ್ಲಂಘನ ಕಾಲಕ್ಕೆ ಭಾವೀ ನರಪತಿಯನ್ನು ಹೊರುತ್ತಿರುವದು ಇದೇ ಸಮಯಕ್ಕೆ ನರಪತಿಗಳನ್ನು ಮುತ್ತಿನ ಅಂಬಾರಿಯಲ್ಲಿ ಹೊತ್ತುಕೊಂಡು ಗರ್ವದಿಂದ ಮೆರೆಯುವ ಆ ಪಟ್ಟದಾನೆಯು ಅಗಸರ ಘೋರನನ್ನು ಹೊತ್ತುಕೊಂಡು ಶೀಮೋಲ್ಲಂಘನ ಮಾಡುತ್ತಿರುವದು ಇದೆಂಥ ದೈವಲೀಲೆಯು! ಅರಸರ ಪಾಪಕ್ಕೆ ಆನೆಗೇಕೆ ಪ್ರಾಯಶ್ಚಿತ್ತವು? ದೈವೀ ವಿಚಿತ್ರಾಗತಿಃ (ಹೋಗುವ)

**ಪ್ರವೇಶ** – (ಗಿರಿದುರ್ಗದ ಕಾರಾಗ್ರಹದಲ್ಲಿ ಜಮಾದಾರರು, ನಾಲ್ಕು ಜನ ಶಿಪಾಯರು)

**೧ನೇ ಶಿಪಾಯಿ :** ಜಮಾದಾರ ಸಾಹೇಬರೇ, ಬನ್ನಿ ಮುಡಿಯುವದಕ್ಕಾಗಿ ದಸರೆಯ ಸವಾರಿಯು ಹೊರಟಿದೆ. ನೋಡಿ ಬರುವದಕ್ಕೆ ಅಪ್ಪಣೆಯಾಗಲಿ. (ಇವನು ಓತ್ತರ್ಝನು ಸರಿಯಾದ ಕನ್ನಡ ಮಾತಾಡಲೂ ಬಾರದವನು)

**ಜಮಾದಾರ :** ಇಲ್ಲಿ ಪಹರೆ ಯಾರ ಮಾಡಬೇಕು ನಿಮದು ಅಪಾ, ಯಾ ನಹಿತೋ ನಿಮದೂ ಅಪಾ

**೨ನೇ ಶಿಪಾಯಿ :** ನಾವು ಬರುವತನಕ ಹೇಗಾದರೂ ಮಾಡಿ ನೀವೇ ಸಂಬಾಳಿಸಿಕೊಳ್ಳಿ ಯಾಕಂದರ ಇಂದು ನಮ್ಮ ಹಿಂದೂ ಜನರ ದೊಡ್ಡ ಹಬ್ಬ, ಅದಕ್ಕಾಗಿ

**ಜಮಾದಾರ :** ಫಿರ್ ಮೈ ಕೋನಹುಂ? ನಹೀನಹೀ ಓ ಬಾತ ನಹೀ ಹೋತಾ ಸಬ್ ಕೇ ಸಬ್ ಯಹಂ ರಹನಾ ಚಾಹಿಯೇ

**೧ನೇ ಶಿಪಾಯಿ :** ಹಾಗೆಂದರೆ ಹೇಗಾದೀತು ಜಮಾದಾರ ಸಾಹೇಬರೇ? ಬನ್ನಿ ಮುಡಿದು ತಕ್ಷಣವೇ ಬರುವೆವು.

**ಜಮಾ :** ಅರೇ? ನಾಳೆ ಬನ್ನೀ ಮುಡೀತೋ ನಹೀ ಹೋತಾ?

**೨ನೇ ಶಿಪಾಯಿ :** ಹಾಗೆಂದರೆ ಹೇಗೆ? ಜಮಾದಾರ ಸಾಹೇಬರೆ ಇಂದೇ ಹಬ್ಬ ಇಂದೇ ಬನ್ನಿ ಮುಡಿಯ ಬೇಕಲ್ಲವೇ

**ಜಮಾ :** ಯೆ ದೇಖೋ ಚಿರಾಗ ಲಗನೇಕೇ ಅಂದರ್ ಸಬ್ ಕೇ ಸಬ್ ಯಹ ಅಂಜಾನಾ ನಹೀತೊ.....

ಇಬ್ಬರು : ಬನ್ನೀ ಮುಡಿದು ಸವಾರಿಯು ಹಿಂತಿರುಗಿದ ತಕ್ಷಣವೇ ಬಂದಿರುವೆವು.

ಜಮಾ : ಅಚ್ಛಾ ! ಜಾವ್ (ಹೋಗುವರು) ಸಂಧ್ಯಾ ಸಮಯ ಹೂವಾ ಜರಾ ಅನೂಷ್ಠಾನ್ ಕರಲೆಂವೆ (ತೆರೆಯಾಗುವನು)

ಲಕ್ಷ್ಮ : ದೇವರೂ! ಶ್ರೀರಂಗರಾಯರ ಗಂಜೀ ಬಟ್ಟೇತಂದೇನ್ರಿ.

ಜಮಾ : ಹುಂ.

ಲಕ್ಷ್ಮ : ಏನು ಮಾಡಲಿ?

ಜಮಾ : ಹುಂ ಹುಂ, ಹುಂ,

ಲಕ್ಷ್ಮ : ಇಂದು ದಸರೇ ಹಬ್ಬ. ದೊಡ್ಡವರು ಯರಾದರೂ ಬನ್ನಿ ಕೊಡಾಕ ಬಂದ್ರ ಅವರ ಮೈಮೇಲೆ ಮಾಸಿದ ಬಟ್ಟೆಯಿರಬಾರದ ದೇವರೂ?

ಜಮಾದಾರ : ಹೂಃ, ಹುಂ ಹುಂ ಹುಂ, ಹುಂ ಹುಂ

ಲಕ್ಷ್ಮ : ಅಂದ್ರ ಕೊಟ್ಟ ಬರಲ್ಯಾ?

ಜಮಾ : ಹುಂ ಹುಂ ಹುಂ ಹುಂ

ಲಕ್ಷ್ಮ : ಬಾಗಿಲಿಗೆ ಬೀಗಾ ಹಾಕೇತಲ್ರೀ?

ಜಮಾ : ಬೀಗಾ ತೋರಿಸಿ ತೆಗೆದು ತಿರು ತರುವಂತೆ ಸಂಕೇತ ಹುಂ ಹುಂ ಹುಂ

ಲಕ್ಷ್ಮ : ಒಳೇ ಯಾಳೆದಾಗ ಬಂದೆ ಬರೇ ಹುಂ ಹುಂ ನಡದೈತಿ (ಬೀಗ ತೆಗೆದು ಒಳಗೆ ಹೋಗುವನು)

ಜಮಾ : ಯೇ ಧೋಭೀಕಾ ಗದ್ದಾ ಕೈಸೇ ಬೇ ಮೋಕಾಪರ ಆಗಯಾ? ಬಿಲ್ಕುಲ್ ಆರಾಮಕೆ ವಖ್ತಮೆ ದಿಲ್ಮೆ ಆಗಯಾಧಕೆ ಉಟಕೇ ದೋತಮಾಚಾದೂಂ! ಮಗರ್ ನಾಯಿಲಾಜ ಅನುತ್ಥಾನ ಕರ್ರಾಹಾಥಾ ಅಬೇ ಏ ಮಡವಾಳೀ? ಕಪಡಾ ಲೇಲಾ ದೇನಾ ತುಮಾಮ ಹುವಾಯಾ ನಹೀ?

ಲಕ್ಷ್ಮ : ಗಂಜೀವು ಕೊಟ್ಟೇನಿ. ಮಾಸಿದ ಬಟ್ಟೇ ತಗೋಳಾಕ್ಹತ್ತೇನಿ

ಜಮಾ : ಜಲ್ದ ನಿಕಲ್

ಲಕ್ಷ್ಮ : ಇದೋ ಬಂದೆ

ಜಮಾ : ಅರೇ ಬಂದೀಕೆ ಜಲ್ದ ಬಾಹೆರ ಆ ಜಾ

ಲಕ್ಷ್ಮ : ಬಂದೆ, ಬಂದೇ ದೇವರೂ, (ಬರುತ್ತ) ಎಣಿಸಿ ತಗೊಳಾಕ ಸ್ವಲ್ಪರ

ಯಾಳ್ಳೇವು ಬ್ಯಾಡ್ರೇ? ಇದೋ ತೆಗೆದುಕೊಳ್ರಿ ಬೀಗದ ಕೈಗೊಂಚಲಾ (ಕೀಲೀಗೊಂಚಲ ಕೊಡುವ)

**ಜಮಾ :** ಅರೇ? ಅಚ್ಛೇ ಜೋರಸೆ ಕಿಲೀ ಲಗಯಾ ನಹೀ?

**ಲಕ್ಷ್ಮ :** ಬೇಕಾದರ ಜಗ್ಗಿ ನೋಡ್ರಿ ದೇವರೂ ಪಸಂದ ಜಡ್ದಬಂದೇನಿ.

**ಜಮಾ :** ಅರೇ? ಕಪಡೂಂಕಾ ಕಿತನಾ ಭಾರೀ ಮೋಟಲಾಯಾಬೆ ? ಸಬ್ ಗದೇಪರ ಲಾದದೀಯಾ ! ಉಸ್ಕಾ ಕಮ್ಮರ ತುಟನೇಕಾ ನಹೀಂ

**ಲಕ್ಷ್ಮ :** ಈಟ ಬಟ್ಟೆಯಿಂದಾ ನನ್ನ ಕತ್ತೀ ಟೊಂಕ ಮುರಿಯೂದಿಲ್ಲ. ಇನೂ ನದೀ ಮಟಾ ಇದರ ಮ್ಯಾಗ ನಾಬ್ಯಾರೆ ಕುಂತಗೊಂಡು ಹೊಗತೇನಿ ಷಲ್ಮಾ ದೇವರೂ (ಹೋಗುವ)

**ಸಂಜಿ :** (ಒಂದು ಬದಿಯಿಂದಾ) ಸಂಕೇತದಂತೆ ಯಚ್ಚಮನಾಯಕರು ಅಗಸನ ವೇಷದಿಂದಾ ಕಾರಾಗ್ರಹವನ್ನು ಸೇರಿ ಪರಮ ಪ್ರಯಾಸದಿಂದ ಶ್ರೀರಾಮರಾಜರನ್ನು ತಕೊಂಡು ಹೋದರು. ಅಂತೂ ಕರ್ನಾಟಕ ರಾಜತೇಜವು ಬಂದವರ ಸ್ವಾಧೀನವಾಯಿತು. ಇನ್ನು ಶ್ರೀರಂಗರಾಯರು ನೆಲಮಾರ್ಗದಿಂದಾ ಗುಪ್ತವಾದ ಸಂಗತಿಯನ್ನು ನಾನೇ ಹೊರಗೆಡಹಿ ಬಾಯಮ್ಮ ಜಗ್ಗರಾಯರ ಹೆಚ್ಚಿನ ವಿಶ್ವಾಸವನ್ನು ಪಡೆಯುವೆನು ಮತ್ತು ನನಗೆ ಜನ್ಮವನ್ನಿತ್ತ ಶ್ರೀಮದ್ ವೆಂಕಟಪತಿರಾಯರ ಆಸೆಯನ್ನು ಪೂರ್ಣ ಮಾಡುವದರಲ್ಲಿ ನೆರವಾಗಿ ಪಿತೃರುಣದಿಂದಾ ಮುಕ್ತಳಾಗುವೆನು. ಈಗ್ಗೆ ಶ್ರೀರಂಗರಾಯರಿಗೆ ದಸರೆಯ ಬನ್ನಿಯನ್ನು ಕೊಟ್ಟು ಮುಂದಿನ ಆಲೋಚನೆಗಳನ್ನು ತಿಳಿದುಕೊಳ್ಳುವಾ.
(ಹೋಗುವಳು)

(ಕಾರಾಗ್ರಹ ಮುಂಭಾಗ)

**ಜಮಾ :** ಯಹ್ ಶಿಫಾಯಿ ಯಾಂ ಕಿತನೇ ಬೇಫಾಮಹೈ? ದಸರೇ ಕೇ ಬನ್ನಿ ಮುಳಕರ್ ಜಲ್ದ ಅನಾಕರಕೆ ಹುಕುಂ ದೀಯಾಥಾ ಮಗರ್ ಅಭೀತಕ್ ಏಕೆ ಕಾಭಿ ಪತಾನಹೀ ಠೀಕ ಹೈ ಆನೋದೊ ಹರೇಕ ಗಧೂಂಕು ದೋ ದೋ ಆನೇಕಾ ಜುಲ್ಮಾನಾ ಠೋಕ ದೋತಾಹೂಂ! ಧೋೀ ಧೋ ಆನೇಕಾ!

**ಸಂಜಿ :** ಆಹಹ ಒಳ್ಳೇ ಜಮಾದಾರರು, ಚನ್ನಾಗಿ ಕಾವಲುವನ್ನು ಮಾಡುವಿರಿ.

ಜಮಾ : ಕೆಂವ್ ಕೆಂವ್ ! ಜಬಾನ ಬಹುತ ಢೀಲೀ ಹೋಡುವೀ

ಸಂಜಿ : ಏನ್ ಕೆಂವ್ ಕೆಂವ್ಹೋ ಮೈಮೇಲೆ ಯಚ್ಚರವಿದೆಯೋ ಯಿಲ್ಲವೊ? ಶೆರೆಯನ್ನೇನಾದರೂ ಕುಡಿದುಬಂದಿಯೋ?

ಜಮಾ : ಬಸ್ ಖಾಮೊಷ ಪರಭಯ್ಯಾಂ ಕಹೀಂ ಷರಾಬ ಪೀತೇಹೈ ಜ್ಯಾದಾ ಬುಕ್ವಾ ಮತ್ಕರ್.

ಸಂಜಿ : ಶ್ರೀರಂಗರಾಯರ ಮಕ್ಕಳಾದ ಶ್ರೀರಾಮಜರೆಲ್ಲಿ?

ಜಮಾ : ಕೋನ್ ವಹ ಭೋಕರಾ ಶಿರಿರಾಮರಾವ?

ಸಂಜಿ : ಹು, ಹಂ ಅದೇ ಶಿರಿರಾಮರಾವ.

ಜಮಾ : ಓಪಕಾಹಾಂ ಜಾತಾ ಹೋಗಾವಹೀಂ ಕಹೀಂ.

ಸಂಜಿ : ಏನದು ಕಂಹೀಂ? ತೋರಿಸುವಾ ಲಂಚವನ್ನು ತಿಂದು ಅವನನ್ನು ಫರಾರೀ ಮಾಡಿಸಿರುವಿ.

ಜಮಾ : ಲಂಚಾ? ರುಷವತ್ ಔರ ಮೈ!!

ಸಂಜಿ : ಅಹುದಹುದು. ಲಂಚವನ್ನು ತಿಂದು ಅವರನ್ನು ಫರಾರೀ ಮಾಡಿಸಿರುವಿ.

ಜಮಾ : ಅರೇ? ಯಹ್ ಕ್ಯಾ ಬುಕ್‌ವಾಚಲಾಯಿ? ಚಲ್ ಬತಾ.

ಸಂಜಿ : ಇದೆ ಬಾ! ಜಗ್ಗ ರಾಯರಿಗೆ ತಿಳಿದ ಮೇಲೆ ನಿನ್ನಾಟಾ (ಒಳಗೆ ಹೋಗುವರು)

ಜಗ : (ಬಂದು) ಇದೊಳ್ಳೇ ವಿಚಿತ್ರವು ! ಕಾವಲುಗಾರರೂ ಇಲ್ಲಾ–ಈ ದಸರೆಯ ಮೆರವಣಿಗೆಯ ಗಲಾಟೆಯಲ್ಲಿ ಸಕಲ ನಗರವೂ ತೊಡಗಿರುವಾಗ್ಗೆ ಲಕ್ಷ್ಮಣನಾಯಕನು ಏನಾದರೂ ಮೋಸಮಾಡಿರಬಹುದೆಂಬ ನನ್ನ ತರ್ಕವು ನಿಜವಾಗಿರಬಹುದೋ ಏನೋ! ಅದೇನು ಒಳಗೆ ಕೂಗಾಟವು?

ಸಂಜಿ : ತೋರಿಸು ಎಲ್ಲಿರುವರು ಶ್ರೀರಾಮರಾಯರು?

ಜಮಾ : ಅರೇ, ಅಭೀ ಯಹೀಂ ರಹೇಸೋ ಬಚ್ಚಾ, ಕಿದರಗಯಾ ಹೋಗಾ.....?

| | |
|---|---|
| **ಜಗ :** | ನಿಜವಾಗಿಯೂ ಆ ಕುಮಾರನು ಕಾಣೆಯಾಗಿದ್ದಾನೆ. |
| **ಸಂಜಿ :** | ನಡೆ ಈ ಕ್ಷಣವೇ ಜಗದೇವರಾಯರಿಗೆ ಈ ಸಮಾಚಾರವನ್ನು ತಿಳಿಸಿ, ನಿನ್ನ ಮದುವೆಯನ್ನು ಮಾಡಿಸುವೆನು ಲಂಚವನ್ನು ತಿಂದು |
| **ಜಮಾ :** | ಲಂಚಾಕೆ ಬಾತ್ ನಿಕಾಲಿತೋ ಮುಹ್ ತೊಡ್ಡಡಾಲೂಂಗಾ |
| **ಜಗ :** | ಎಲೋ ಹೀಗೆ ಬನ್ನಿ ತೀವ್ರ. |
| **ಜಮಾ :** | ಅರೆ ಬಾಪರೆ ! ಮೌತ ಆಗಯಿ ! ಕಾಹಿಕತಮತ್ ಲಾಢವು? |
| **ಸಂಜಿ :** | ದೇವಾ ! ಇದೋ ನೋಡಿ, ಶ್ರೀರಂಗರಾಯರ ಮಕ್ಕಳಾದ ಶ್ರೀರಾಮರಾಜರು ಗುಪ್ತವಾಗಿ ಬಿಟ್ಟಿದ್ದಾರೆ. |
| **ಜಗ :** | ಏನೋ ಅವನೆಲ್ಲಿ? |
| **ಜಮಾ :** | ಹುಜೂರ್ ಒಹ್ ದುಬಲಾ ಪತಲಾ ಬಚ್ಚಾ ಜೇಲ್ ಕೋತ ಡಿಯೋಂ ಕೂಲಗಾಯೇಸೋ ಗಜಕೇ ಬಾಹೇರ ರೋಜ ಆತಾ ಜಾತಾಥಾ |
| **ಜಗ :** | ಈಗ್ಗೆ ಅವನೆಲ್ಲಿ? |
| **ಜಮಾ :** | ತಾಜಬ್ ಕೀ ಬಾತ್ ಮ್ಯೆ ಭೀ ವಹೀ ಸೋಚರಹಾ ಹುಂ. ಬಚ್ಚಾ ಮಾಬಾಂಪೊಂಕೊ ಛೋಡಕರ್ ಯೇಕ್ ಲಹೇಜಾಭೀ ನಹೀ ರಹತಾಥಾ! |
| **ಜಗ :** | ಇದಕ್ಕೆ ಶ್ರೀರಂಗರಾಯನು ಏನು ಹೇಳುವನು? |
| **ಸಂಜಿ :** | ಅವರೇನೆ ಹೇಳಲೊಲ್ಲರು. |
| **ಜಗ :** | ಈ ಕಳ್ಳನು ಲಂಚವನ್ನು ತಿಂದು! |
| **ಜಮಾ :** | ಸರ್ಕಾರ್ ಲಂಚಾಕಿತೊಹಮತ್ ನಹಿಲೇನಾ. |
| **ಜಗ :** | ಸುಮ್ಮನಿರು ಚೋರಾ (ಕಾಲು ಅಪ್ಪಳಿಸುವನು. ನೆಲ ಕುಸಿಯುವನು) ಇದೇನೋ? ನೆಲವು ಪೊಳ್ಳಾಗಿದೆ. |
| **ಜಮಾ :** | ಸರ್ಕಾರ್ ಯಹಾಂ ಘುಸಿಯಾ ಬಹುತ್ ಹೈಂ ಘುಸಿಯಾ |
| **ಸಂಜಿ :** | ದೇವಾ ಇದು ಹೆಗ್ಗಣದ ಜಾಗಾ–ಬಾವಿಗೀವಿ, ಏನಾದರೂ ಇರುವದೇನೊ ನೋಡಿ. |
| **ಜಗ :** | ಕರೆ, ಯಾರನ್ನಾದರೂ ಮೋರೆಯನ್ನೇನು. ನೋಡುವೆಯೋ? |

ಈಗಲೇ ಇದರ ಪರಿಷ್ಕಾರವಾಗಲಿಕ್ಕೇಬೇಕು.

**ಜಮಾ :** ಅರೇ ಆಜಾವ್ರೇ ಗಧೇ ? ತೋಬ್ಬಾಕ್ಯಾ ಮುಸಿಬತ್ ಆಗಂಯ (ಶಿಪಾಯಿಗಳು ಬರುವರು) ಸರ್ಕಾರ್ ಯಹ್ ದೇಖೆ ಗಾಲಫ್ ಥೋರಾಂ ಬನ್ನೀ ಮುಳಕರ್, ಜಲ್ದ ಅನೇಕೂ ಹುಕುಂದೀಯಾಥಾ ಅಬ್ ಅಪಯೇ.

**ಜಗ :** ಸುಮ್ಮನಿರು ಮರಾಣವನ್ನು ಬಿಚ್ಚಬೇಡಾ.

**ಜಮಾ :** ಜೀ ಹುಕ್ಮಂ. ಖಾಮುಷ ರಹತಾಹುಂ ಮುರ್ಝೀ ಕ್ಯಾ?

**ಜಗ :** ಇಳಿದು ನೋಡಿ ತೀವ್ರ! ಇದು ನೆಲ ಮಾರ್ಗವಾಗಿ ಕಾಣುವದು! (ಒಬ್ಬನು ಇಳಿಯುವನು ಅಯ್ಯೋ ಸತ್ತೆನು ಸತ್ತೆನು ಎಂದು ಕೂಗುವನು)

**ಜಗ :** ಘನವಾದ ಮೋಸವಿದೆ. ಇದು ನೋಡಿರಿ ಮತ್ತೊಂದು ನಾಲ್ಕಾರು ಜನರು ತೀವ್ರ!

**ಜಮಾ :** ಉತ್‌ರೋರೇ ಜಲ್ದ!

**ಜಗ :** ನೀನೇನು ಮಾಡುವಿ?

**ಜಮಾ :** ಮೈ ಭೀ ಉತರ್‌ತಾಹುಂ ಸರ್ಕಾರ್. (ನಾಲ್ಕಾರು ಜನರು ಒಳಗೆ ಇಳಿದು ಜಮಾದಾರ ತಿರುಗಿ ಬಂದು) ಖದಾವಂದ್! ಮಾಲುಮ್ ನಹೀ ಪಡತಾಕೆ ಕೋನಹೈಂ! ಹಮಾರೇ ಶಿಘಾಯಿ ಯೊರ್‌ಪರ ತಲ್‌ವಾರ್ ಚಲರಹೇ ಹೈಂ.

**ಜಗ :** ಕರೆ, ಮತ್ತೂ ಕೆಲವು ಜನರನ್ನು ಅದಾರು ಹಿಡಿದು ತರಲೇಬೇಕು

**ಜಮಾ :** ಅರೇ ದಗಾಹೈ ಸಬ್‌ಕೇ ಸಬ್ ಆಜಾವ

**ಜಗ :** ಕೂಗೇನು ಕರೆಯುವೀ. ಭೈಸೂಚಕ ಕೊಂಬನ್ನೂದು (ಒಳಗಿನ ಜನರಿಗೆ) ಎಲೋ ಸಹಾಯಕ್ಕೆ ಜನರು ಬರುವದು ಧೈರ್ಯವನ್ನು ತಾಳಿ. ಸಂಜೀವೀ? ಅದೋ ಆ ದೀವಟಿಗೆಯನ್ನು ಹಚ್ಚು.

**ಸಂಜಿ :** (ಸ್ವ) ಅಯ್ಯೋ! ಶ್ರೀರಂಗರಾಯರು ಸಿಕ್ಕುಬಿಟ್ಟರು. ಇನ್ನೇನು ಗತಿ, ಆದರೂ ಈ ಸಮಯಕ್ಕೆ ದೀವಟಿಗೆಯನ್ನು ಹಚ್ಚಬಾರದು (ಪ್ರಕಾಶಾ) ದೇವರೂ? ಇದರಲ್ಲಿ ಎಣ್ಣೆಯಿಲ್ಲಾ (ಶಿಪಾಯರು

ಬರುವರು)

ಜಗ : ಎಲೋ. ಈ ನೆಲಮಾರ್ಗದ ಹೊರಭಾಗಕ್ಕೆ ಯಾರನ್ನೂ ಬಿಡದೇ ಆ ಶ್ರೀರಂಗರಾಯ ಲಕ್ಷ್ಮಣನಾಯಕರದೇ ತಂತ್ರವು

ಎಲೋ ನೋಡುವಾ, ಕಾರಾಗ್ರಹದ ಕೋಣೆಯಲ್ಲಿ ಶ್ರೀರಂಗರಾಯ ನಿರುವನೋ ಇಲ್ಲವೋ (ಒಳಗೆ ಹೋಗುವರು)

ಸಂಜಿ : ದೇವಾ ವಿರೂಪಾಕ್ಷ, ಶ್ರೀರಂಗರಾಯರನ್ನು ಎಂತಹ ಸಂಕಟದಲ್ಲಿ ನೂಕಿದೆ! ಆ ಪಾಪಿಯಾದ ಜಗದೇವರು ಅವರನ್ನು ಕೊಲ್ಲಿಸುವದೇ ಖಂಡಿತ ಯಚ್ಚಮನಾಯಕರಿಗೆ ಈ ಸಂಗತಿಯನು ಯಾರ ಮುಖದಿಂದಾ ತಿಳುಹಿಸಲಿ! ಈಗ್ಗೆ ಅವರೆಲ್ಲಿರುವರೋ, ಏನೋ! ಭೋ ಪಂಪಾವತೇ, ಈ ಕರ್ನಾಟಕ ಸಿಂಹಾಸನದ ಮರ್ಯಾದೆಯನ್ನು ಕಾಪಾಡುವ ಭಾರವು ನಿನ್ನನ್ನೇ ಕೂಡಿರುವದು.

ಜಗ : ಹಿಡಿಯಿರಿ ಬಿಡಬೇಡಿರಿ, ಶ್ರೀರಂಗರಾಯನು. ನೆಲಮಾರ್ಗದಿಂದ ಓಡಿ ಹೋಗುತ್ತಲಿದ್ದಾನೆ. ಸಮಯ ಬಂದರೆ ಕತ್ತಿರಿಸಿ ಬಿಡಿ.

(ಒಳಗಿನಿಂದ) ಸ್ವಾಮೀ, ಸತ್ತೆವು ಸತ್ತೆವು

ಜಗ : ಏನಾಗುತ್ತಿರುವದು?

(ಒಳಗಿನಿಂಗ) ಕೊಲೆಯ ಉತ್ಪಾತ ನಡೆದಿದೆ.

ಜಗ : ಹೊಡೆಯಿರಿ ರಣಕಾಳಿಯನ್ನು.

(ಒಳಗಿಂದ) ವೈರಿಗಳು ಬಹು ಜನಗಳಿದ್ದಾರೆ.

ಜಗ : ಭಯಪಡಬೇಡಿರಿ. ಸಹಾಯವು ಬರುವದು. (ಜನರ ಹೊಡೆದಾಟ ಸುರಂಗಾದಿಂದಾ ಕೋಟೆ)

(ಶ್ರೀರಂಗರಾಯನು ಸಿಕ್ಕುಬಿಡುವನು. ಹನುಮನು ಜಾರುವನು)

ತೃತೀಯಾ ಅಂಕ ಸಮಾಪ್ತಿ!

===***=====***===

# ೪ನೇ ಅಂಕು

## (ಅರಮನೆಯ ಒಂದು ಭಾಗ)

**ಪದ – (ನಂ. ೧೭) ರಾಗ – ಬಾಪೇಶ್ರೀ ತಾಳ – ತ್ರಿವಟ**

॥ ವ್ಯಾಪಿಸಿತು ಮನದೇ । ಮಹಾಭಯ । ಕಪಟತಂತ್ರಗಳಿಗಾಗಿ ॥ಪಲ್ಲ॥
॥ ಮುಗಹವೀಗಾ । ದಶದಿಶಂಗಳೋ । ವಿಷಮಯ ವಾಲ್ಯದ ॥
॥ ಉಸುರಿನಿನದಲಮಮಾ ॥ ೧ ॥

**ಸಂಜಿ :** ಏನು ಮಾಡಲಿ? ಯಾವದೂ ಹೊಳೆಯದಂತಾಗಿದೆ. ನಿನ್ನಿನ ಉತ್ಪಾತದಿಂದ ಜಗದೇವ ಬಾಯಮ್ಮರಾಣಿಯರು ರೇಗಿಬಿಟ್ಟಿದ್ದಾರೆ ಮತ್ತು ಶ್ರೀರಂಗರಾಯರನ್ನೂ ಅವರ ಬಂದು–ಬಳಗವನ್ನೂ ಕೊಲ್ಲಿಸಿ ಬಿಡುವ ನಿರ್ಧಾರವನ್ನು ಸಹ ಮಾಡಿದ್ದಾರೆ. ಈ ಸಂಗತಿಯನು ಯಚ್ಚಮನಾಯಕರಿಗೆ ಯಾರ ಪರಿಮುಖದಿಂದ ತಿಳುಹಿಸಲಿ? ಶ್ರೀರಂಗರಾಯರನ್ನು ನೆಲಮಾರ್ಗದಿಂದ ಗುಪ್ತಮಾಡುವ ನಿನ್ನಿನ ಗಲಭೆಯಲ್ಲಿ ಹನುಮನಾಯಕನು ಸಹ ಕೊಲ್ಲಲ್ಪಟ್ಟಿರಬಹುದು. ಈಗ್ಗೆ ಶ್ರೀರಂಗರಾಯರ ವಿಚಾರಣೆಯ ಆಟವನ್ನಾಡಿ ಅವರಿಗೆ ಬಳಗ ಸಮೇತ ದೇಹಾಂತ ಪ್ರಾಯಶ್ಚಿತ್ತವನ್ನು ಕೊಡತಕ್ಕವರಿದ್ದಾರೆ. (ನೋಡ್ರಿ) ಅಯ್ಯೋ! ದೈವವೇ? ಅದೋ ಶ್ರೀರಂಗರಾಯರನ್ನು ಬಂಧುಬಳಗ ಸಮೇತ ವಿಚಾರಣೆಗಾಗಿ ವಯ್ಯುತ್ತಲಿರುವರು. ಈ ದೆವ್ವಗಳ ಆಟವನ್ನು ಹೇಗೆ ನೋಡಲಿ! ಅವರಿಗೆ ಮರಣ ದಂಡನೆಯುನ್ನು ವಿಧಿಸಲಿಕ್ಕೆ ಸಿದ್ಧರಾದ ಆ ಜಗದೇವ ಬಾಯಮ್ಮನವರನ್ನು ತಿವಿದುಕೊಲ್ಲಲೋ ಹಾಗೆ ಮಾಡುವದರಿಂದ ಶ್ರೀರಂಗರಾಯರನ್ನು ಉಳಿಸಿಕೊಂಡಂತಾಗವದಿಲ್ಲವಲ್ಲಾ, ವಿರೂಪಾಕ್ಷಾ ಈ ರಾಜಮನೆತನದವರ ಹಣೇಬರಹದಲ್ಲಿ ಏನು ಬರೆದಿರುವೇ? (ಶ್ರೀರಂಗರಾಯರನ್ನು ಎಳೆದೊಯ್ಯುವರು) ಶಿವ ಶಿವಾ! ಯಾವಾತನು ಈ ಕರ್ನಾಟಕ ಸಿಂಹಾಸನದಲ್ಲಿ ಕುಳಿತು ವಿರಾಜಿಸತಕ್ಕವನು

ಅಂಥಾತನು ಅದೇ ಕರ್ನಾಟಕ ಸಿಂಹಾಸನದ ಸೇವಕರಿಂದ ಬಂಧಿಸಲ್ಪಟ್ಟಿರುವನಲ್ಲವೇ! ಯಾರಾದರೂ ಈ ರಾಜಬಳಗದವರನ್ನು ಕೊಲ್ಲಿಸದಂತೆ ಜಗದೇವ ಬಾಯಮ್ಮ ರಾಣಿಯವರಿಗೆ ಬುದ್ಧಿವಾದವನ್ನು ಮಾಡ್ಯಾರೇನು? ಈ ಸಮಯಕ್ಕೆ ಪೂಜ್ಯರಾದ ರಾಜಗುರುಗಳಿರುತ್ತಿದ್ದರೆ ನಿಃಸಂದೇಹವಾಗಿ ಅವರು ಬಾಯಮ್ಮ ಜಗ್ಗರಾಯರ ಅತ್ಯಾಚಾರವನ್ನು ತಡೆಯುವದಕ್ಕೆ ಯತ್ನಮಾಡುತ್ತಿದ್ದರು. ಆದರೆ ಚಿಕ್ಕರಾಯನು ಪಟ್ಟಕ್ಕೆ ಕುಳಿತಾಗಿನಿಂದ ಯಾವ ಕಾರಣದಿಂದಲೋ ಏನೋ ಅವರು ಓಲಗಕ್ಕೇ ಬರುವದನ್ನು ಬಿಟ್ಟು ಕೊಟ್ಟು ತಮ್ಮ ಆಶ್ರಮದ ಏಕಾಂತವಾಸಿಗಳಾಗಿದ್ದಾರೆ. ಶಿವ ಶಿವಾ! ಅದೋ ಬಳಗದವರನ್ನೆಲ್ಲಾ ಹೊರಗೆ ನಿಲ್ಲಿಸಿ ಶ್ರೀರಂಗರಾಯರೋರ್ವರನ್ನೇ ಒಳಗೆ ಒಯ್ದರು. ವಿರೂಪಾಕ್ಷಾ ಭಕ್ತರ ಅಭಿಮಾನವು ನಿನಗಿಲ್ಲದಾಯಿತೇ? (ಹೋಗುವಳು)

**ಪ್ರವೇಶ**

(ಚಿಕ್ಕರಾಯನ ದರ್ಬಾರ. ಶ್ರೀರಂಗರಾಯನ ವಿಚಾರಣೆಯ ನಾಟಕ)

**ಶ್ರೀರಂಗರಾಯ :** (ಸರಪಳಿಯಿಂದ ಬಿಗಿಯಲ್ಪಟ್ಟ) ಇದೇನು ದೃಶ್ಯವು? ಕರ್ನಾಟಕ ಸಿಂಹಾಸನದಲ್ಲಿ ಏನು ಕುಳಿತುರುವದು? ಇದು ರಾಜತೇಜವೇ! ನಮ್ಮ ವಂಶದಲ್ಲಿ ಇಂತಹ ಹೇಡಿಯು ಹುಟ್ಟುವದು ಸಾಧ್ಯವೇ!

**ಚಿಕ್ಕ :** ಜಗ್ಗಜ್ಜಾ ಇವರಾರು? ನನಗೆ ಮುಜುರೆಯನ್ನು ಮಾಡಲೇ ಇಲ್ಲವಲ್ಲಾ!

**ಚೋಪದಾರ :** ನೆಲಾ ಮುಟ್ಟಿ ಸಿಂಹಾಸನಕ್ಕೆ ವಂದನೆಗಳನ್ನು ಸಲ್ಲಿಸಿ.......

**ಜಗ :** ಎಲೋ, ಉದ್ದಟಾ ಶ್ರೀರಂಗರಾಯಾ? ಚೋಪದಾರನ ಸೂಚನೆಯು ಕಿವಿಯಲ್ಲಿ ಸೇರಲಿಲ್ಲವೇ? ಸಿರಬಾಗು ಸಿಂಹಾಸನಕ್ಕೆ

**ಶ್ರೀರಂಗ :** ಮೇಲೆ ಕುಳಿತಿರುವ ಆ ಹೇಡಿಯು ಕೆಳಗಿಳಿಯಲಿ. ಆ ಮೇಲೆ ನೂರು ಸಾರೆ ಶಿರಬಾಗಿ ಸಿಂಹಾಸನಕ್ಕೆ ನಮಸ್ಕರಿಸುವೆನು. ಶ್ರೀಮತ್ ಪರಮ ಪೂಜ್ಯ ವಿದ್ಯಾರಣ್ಯ ಮಹಾಸ್ವಾಮಿಗಳವರಿಂದ ಸ್ಥಾಪಿಸಲ್ಪಟ್ಟ ಪವಿತ್ರ ಸಿಂಹಾಸನಕ್ಕೆ ಶಿರಬಾಗದವರಾರು! ಭುವನೇಶ್ವರೀ ಕೃಪೆಯ ಮೂರ್ತ ಸ್ವರೂಪಕ್ಕೆ ಶಿರಬಾಗದವರಾರು! ಜಗದ್ವಿಖ್ಯಾತ ಶ್ರೀಕೃಷ್ಣ ಮಹಾರಾಜರು ಕುಳಿತು ವಿರಾಜಿಸಿದ ಪವಿತ್ರ ಸಿಂಹಾಸನಕ್ಕೆ

ಶಿರಬಾಗದವರಾರು! ಆದರೆ ಅದರ ಮೇಲೆ ಅನಧಿಕಾರಿಯಾದ ಪ್ರಾಣಿಯು ಕುಳಿತಿರುವತನಕ ಅದು ಪವಿತ್ರ ಸಿಂಹಾಸನವೆನಿಸಲಾರದು.

**ವೆಂಕಟಾದ್ರಿ :** ಶ್ರೀರಂಗರಾಯರೇ ಈಗ ತಾವೆಲ್ಲಿರುವಿರಿ ಮತ್ತು ಏನು ಮಾಡುತ್ತಿರುವಿರೆಂಬುದನ್ನು ಬಲ್ಲಿರೋ?

**ಶ್ರೀರಂಗ :** ಚನ್ನಾಗಿ ಬಲ್ಲೆನು. ನಿಮ್ಮ ಬಯಕೆಗಳನ್ನು ಪೂರ್ಣ ಮಾಡಿ ಕೊಳ್ಳುವದಕ್ಕಾಗಿ ನಿರ್ಮಿಸಿಕೊಂಡ ಒಂದು ನಾಟಕದೊಳಗಿನ ದರ್ಬಾರದಲ್ಲಿ ನಿಂತಿರುವೆನು.

**ಚಿಕ್ಕ :** ಏ ಅಜ್ಜಯ್ಯಾ, ಅವರಿಂದಾ ಮುಜುರಾ ಮಾಡಿಸೋ, ಮಾಡಿಸೋ ಮುಜುರಾ.

**ಜಗ :** ಎಲೋ ರಾಜದ್ರೋಹೀ ಮಹಾರಾಜರ ಇಚ್ಛೆಯಂತೆ ನಡೆದುಕೊಳ್ಳದಿದ್ದರೆ ಈ ಕ್ಷಣವೇ ನಿನ್ನ ಮರಣವು ಸಮೀಪಿಸಿತೆಂದು ತಿಳಿದುಕೊ.

**ಶ್ರೀರಂಗ :** ನನ್ನ ಮರಣವು ಸಮೀಪಿಸಿದ ಸಂಗತಿಯನ್ನು ನಾನು ಚನ್ನಾಗಿ ಬಲ್ಲೆನು ಆದರೆ ನನ್ನ ಕುಲಶೀಲಾದಿಗಳಿಗೆ ಸಲ್ಲದ ವರ್ತನೆಯನು ನಾನಾವ ಕಾಲಕ್ಕೂ ಮಾಡೆನು.

**ಚಿಕ್ಕ :** ಎ ಮುಜುರಾ ಮಾಡೋ!

**ಶ್ರೀರಂಗ :** ಸುಮ್ಮನಿರು.

**ಚಿಕ್ಕ :** ಅಂಜಿಸುವನು ನೋಡೋ

**ವೆಂಕ :** ಶ್ರೀರಂಗರಾಯರೇ, ಏನಿದು ಹುಡುಗಾಟವು ! ಸಿಂಹಾಸನದ ಅಪಮಾನವನ್ನು ಮಾಡುವಿರಾ?

**ಶ್ರೀರಂಗ :** ನಾನು ಮಾಡುವದು ಹುಡುಗಾಟವೂ ಅಲ್ಲಾ, ಮತ್ತೂ ಸಿಂಹಾಸನದ ಅಪಮಾನವೂ ಅಲ್ಲಾ, ನೀವೆಲ್ಲರೂ ಮೃತ ಮಹಾರಾಜರ ಶಾಸನವನ್ನು ಹಾರಿಸಿ ಒಗೆದು ಮನಬಲ್ಲಂತೆ ಹೂಡಿದುದು ಇದು ಮಾತ್ರ ಹುಡುಗಾಟವು ಸೇನಾಪತಿಗಳೇ? ನನಗೆ ಪಟ್ಟವಾಗಲಿಲ್ಲವೆಂಬ ಮಾತ್ಸರ್ಯದಿಂದ ನಾನೀ ಮಾತುಗಳನ್ನಾಡುವದಿಲ್ಲಾ ಆದರೆ ರಾಜ ಶಾಸನವು ತಿರಸ್ಕರಿಸಲ್ಪಟ್ಟಿದ್ದಕ್ಕೆ ವಿಷಾದವಾಗಿದೆ. ಈ ಪ್ರಾಣಿಯು

ಶ್ರೀಮದ್ ವೆಂಕಟಪತಿ ಮಹಾರಾಜರ ಮಗುವಾಗಿದ್ದರೆ ಅವರು ಶ್ರೀರಂಗರಾಯರಿಗೆ ಪಟ್ಟವಾಗಬೇಕೆಂದು ಎಂದಿಗೂ ಆಜ್ಞಾಪತ್ರವನ್ನು ಕೊಡುತ್ತಿದ್ದಿಲ್ಲಾ.

ಜಗ : ಚಿಕ್ಕರಾಯ ಮಹಾರಾಜರಿಗೆ ಶ್ರೀಮದ್ ವೆಂಕಟಪತಿ ಮಹಾರಾಜರ ಮಕ್ಕಳಲ್ಲವೆನ್ನುವ ಅವನ ಮೋರೆಯ ಮೇಲೆ ಬಡಿಯಿರಿ. (ಹಾಗೆ ಮಾಡುವರು)

ಶ್ರೀರಂಗ : ಪಿಶ್ಯಚ್ಚಾ? ಏತಕ್ಕೆ ಹೀಗೆ ಅವಮಾನವನ್ನು ಮಾಡಿಸುವೆ? ವಿಷವಿದ್ದರೆ ಪ್ರಾಣವನ್ನು ತೆಗೆದುಕೋ ರಾಕ್ಷಸೀ ಮಹತ್ವಾಕಾಂಕ್ಷೆಯಾದ ನೀನು ನಿನ್ನ ದೃಷ್ಟಿಯಿಂದ ಅಪರಾಧಿಯಾದವನ ವ್ಯಕ್ತಿ ಸ್ವಾತಂತ್ರ್ಯವನ್ನು ಸಹ ಹರಣಮಾಡುವೆಯಾ? ಬಾಲಿಶಾ, ಕೈಕಟ್ಟನ್ನು ಬಿಚ್ಚಿಸಿ ನೋಡಬಾರದೇ ಈ ಕರ್ನಾಟಕ ಸಿಂಹಾಸನದಲ್ಲಿ ಕುಳಿತುಕೊಳ್ಳತಕ್ಕ ಚೈತನ್ಯಗಳ ಪ್ರತಾಪವನ್ನು! ಚಿಕ್ಕರಾಯನಿಗೆ) ಎಲೋ, ಏ ವೇಷ ಪಾತ್ರ? ಕೆಳಗಿಳೀ ಇಳೀ ಕೆಳಗೆ ನನ್ನೆದುರು ಸಿಂಹಾಸನದಲ್ಲಿ ಕುಳಿತುಕೊಳ್ಳುವಿಯಾ (ಇಳೀ).

ಚಿಕ್ಕ : ಇಳಿಯುವೆನು, ಅಜ್ಜಯ್ಯಾ ಇವನನ್ನು ನೋಡಿ ಅಂಜಿಕೆ ಬರುವದಪ್ಪಾ.

ಜಗ : ಕುಳಿತುಕೊಳ್ಳಿ ಮಹಾರಾಜರೇ, ಏಳಬೇಡಿ.

ಶ್ರೀರಂಗ : ಮಹಾರಾಜರನ್ನು ಮಾಡುವದಕ್ಕಾಗಿ ಮಾತು ಮಾತಿಗೆ ಮಹಾರಾಜರೇ ಮಹಾರಾಜರೇ ಎಂದು ದಿನಕ್ಕೆ ಸಾವಿರ ಸಾರೆ ಲಾಗ ಒಗೆದರೂ ಅದು ಮಹಾರಾಜನಾಗಬಲ್ಲದೇ! ಕತ್ತೆಯನ್ನು ಹತ್ತು ಸಾವಿರ ಸಾರಿ ತಿಕ್ಕಿ ತೊಳೆದರೂ ಅದು ಕುದುರೆಯಾಗಬಲ್ಲದೇ! (ಚಿಕ್ಕ ಇಳಿಯುವನು)

ಜಗ : ಛೀ ಛೀ, ಮಹಾರಾಜರೇ ಈಗಾಗಲೇ ಸಿಂಹಾಸನದಿಂದ ಕೆಳಗಿಳಿಯಬಾರದು ಈ ರಾಜದ್ರೋಹಿಯ ವಿಚಾರಣೆಯಾಗಬೇಕು.

ಶ್ರೀರಂಗ : ಕರ್ನಾಟಕರಾಜ್ಯಕಾರಭಾರವನ್ನು ಕೈಯಲ್ಲಿರಿಸಿಕೊಳ್ಳುವದಕ್ಕಾಗಿ ಎಲೋ ದ್ರೋಹಿ? ಈ ನಾಟಕವನ್ನಾಡುವಿಯಾ!

ಜಗ : (ಹೋಗುವ ಚಿಕ್ಕನನು ತಡೆದು)

ಈ ರಾಜದ್ರೋಹಿಯ ವಿಚಾರಣೆಯಾಗುವತನಕ ಸಿಂಹಾಸನದಲ್ಲಿ ಕುಳಿತುಕೊಳ್ಳಬೇಕು.

**ಶ್ರೀರಂಗ :** ಎಲೋ ಮಹಾರಾಜರೇ ಎಂದು ಹೇಳುವದನ್ನು ಈ ಮಾತಿನಲ್ಲಿ ಮರೆತೇ ಬಿಟ್ಟೆಯಲ್ಲಾ! ಅಥವಾ ನನ್ನ ವಿಚಾರಣೆಯ ನಾಟಕವು ಮುಗಿಯುವತನಕ ಅದನ್ನು ಸಿಂಹಾಸನದಲ್ಲಿ ಒಂದು ಹಗ್ಗದಿಂದಲಾದರೂ ಬಿಗಿದುಬಿಡು. ಏ ಪೋರಾ? ನನ್ನೆದುರು ಸಿಂಹಾಸನದಲ್ಲಿ ಕುಳಿತಿಯಾದರೆ ನೋಡು!!

**ಚಿಕ್ಕ :** ಕೂಡುವದಿಲ್ಲವಪ್ಪಾ ಬೇಕಾದರೆ ನೀನೇ ಕುಳಿತುಕೋ.

**ಶ್ರೀರಂಗ :** ಸರಿಯಾಗಿ ಹೇಳಿದೆ.

**ಜಗ :** ಅವನ ಮಾತುಗಳನ್ನೇನು ಕೇಳುವಿರಿ? ವಿಚಾರಣೆಯು ಪೂರ್ಣವಾಗುವತನಕ ಬುದ್ಧಿಯವರು ಹೋಗಬಾರದೆಂದು ವಿಜ್ಞಾಪನೆ.

**ಶ್ರೀರಂಗ :** ವಿಚಾರಣೆ ಅಪರಾಧಿ ಬುದ್ಧಿ ವಿಜ್ಞಾಪನೇ ಇವೆಲ್ಲಾ ಶಬ್ದಗಳ ಜ್ಞಾನವಾದರೂ ಈ ಪೋರನಿಗಿರುವದೇ? ಏತಕ್ಕೆ ಅದನ್ನು ತೊಂದರೆ ಪಡಿಸುವೆ?

**ಚಿಕ್ಕ :** ಅಹುದರಿ ರಾಯರೇ. ನೀವು ಸರಿಯಾಗಿ ಹೇಳಿದಿರಿ. ನನಗೊಂದು ಗೊತ್ತಾಗುವದಿಲ್ಲಾ. ಸುಮ್ಮನೇ ಜಗ್ಗಜ್ಜನು ನನಗೆ ತೊಂದರೆ ಕೊಡುವನು. ದರ್ಬಾರ ನಡೆಸುವದಕ್ಕಾಗಿ ಕರೆದುಕೊಂಡು ಬಂದು ಸುಮ್ಮನೇ ಏನೋ ಗಲಾಟೆ ಹೂಡಿಬಿಟ್ಟಿದ್ದಾನೆ ! ಒಂದು ಪಾತರದವರ ನಾಚಿಲ್ಲಾ! ಹಾಡೋದಿಲ್ಲಾ! ಬಾರಿಸೋದಿಲ್ಲಾ ! ನನಗೆ ಇಂಥಾ ದರ್ಬಾರ ಬೇಕಾಗಿಲ್ಲಾ ಹೋಗು. ನಾನು ಅಮ್ಮನ ಹತ್ತಿರವೇ ಹೋಗಿ ದರ್ಬಾರ ಮಾಡುವೆನು.

**ಶ್ರೀರಂಗ :** ಏನೀ ಕರ್ನಾಟಕ ಸಿಂಹಾಸನದ ವಿಟಂಬನೆಯು! ತಾಳೀಕೋಟೆಯ ಮಹಾಯುದ್ಧದಿಂದಲೇ ಇದರ ಆಳಿಕೆಯು ಮುಗಿದು ಹೋಗಿತ್ತು. ಏತಕ್ಕೆ ಪುನಃ ಇದನ್ನು ಸ್ಥಾಪಿಸಿದಿರಿ? ರಾಜರು ಮಹಾರಾಜರೂ ಸಚಿವರೂ ಸೇನಾಪತಿಗಳೆಂದೆನಿಸಿಕೊಳ್ಳುವದಕ್ಕೂ ಮತ್ತು ರಾಜಕೀಯ ಭಾಷೆಯನ್ನು ಬಳಸುವ ನಿಮ್ಮ ಚಟವನ್ನು ಪೂರ್ಣಮಾಡಿಕೊಳ್ಳುವದಕ್ಕೂ ಇಷ್ಟೊಂದು ಉಪದ್ವ್ಯಾಪವು ಏತಕ್ಕೆ ಬೇಕಾಗಿತ್ತು? ಒಂದು ಇಂದ್ರ ಸಭೆಯ ಬೈಲಾಟವನ್ನು ಕಲಿತು

ಊರೂರಿಗೆ ಕುಣಿಯುತ್ತ ಆಡುತ್ತ ಹೋಗಿದ್ದರೆ ನಿಮ್ಮ ಅಪೇಕ್ಷಗಳು ಸುಲಭವಾಗಿ ಪೂರ್ಣವಾಗುತ್ತಿರಲಿಲ್ಲವೇ? ನಿಮ್ಮಗಳ ಮುಖ್ಯನಾದ ಈ ಜಗದೇವನು ಇಂದ್ರನ ವೇಷವನ್ನು ಧರಿಸದಿದ್ದರೆ ಈತನಿಗೆ ಎಷ್ಟೋ ಸಾರೆ ಇಂದ್ರಾ ದೇವೇಂದ್ರ ಸುರಲೋಕಪಾಲಾ– ಸುರಸಾರ್ವಭೌಮಾ ಇವೇ ಮೊದಲಾದ ಹೆಸರುಗಳಿಂದಾ ಸಂಬೋಧಿಸಿಕೊಳ್ಳುವ ಸುಪ್ರಸಂಗವಿರುತ್ತಿತ್ತು. ಮತ್ತೂ ನಿಮ್ಮೆಲ್ಲರಿಗೂ ಅಗ್ನಿ, ಯಮ, ಕುಬೇರ, ಈಶಾನ್ಯಾದಿ ಉತ್ತಮೋತ್ತಮ ನಾಮಗಳು ಸಿಗುತ್ತಿದ್ದವು ಹಾಗೆ ಸುಲಭವಾಗಿ ನಿಮ್ಮ ಕೋರಿಕೆಗಳು ನೆರವೇರುವುದಕ್ಕೆ ಅನುವಿರುವಾಗ್ಗೆ ಇದೊಂದು ಹಾಸ್ಯಸ್ಪದ ಕರ್ನಾಟಕ ದರ್ಬಾರದ ಗೊಂಬೆಯಾಟವನ್ನೇಕೆ ಹೂಡಿದಿರಿ? ಜಗದೇವಾ? ವಿಜಯನಗರದ ಸಾಮ್ರಾಜ್ಯವು ಹಾಳಾದ ದುಃಖಕ್ಕಿಂತಲೂ ಈ ಕರ್ನಾಟಕ ಸಿಂಹಾಸನದ ಅಪಮಾನವನ್ನು ನೋಡಿ ನನಗತೀವ ದುಃಖವಾಗಿದೆ. ನಿಜವಾಗಿ ಹೇಳೋ, ಇದು ನಮ್ಮ ದೊಡ್ಡಪ್ಪಗಳಾದ ಶ್ರೀಮದ್ ವೆಂಕಟಪತಿರಾಯರ ಮಗುವೇ.

ಜಗ : ಅಂದರೆ ಇದರರ್ಥವೇನು?

ಶ್ರೀರಂಗ : ಅಂದರೆ ಅರಸೊತ್ತಿಗೆಯ ಭೋಗಗಳನ್ನು ಭೋಗಿಸುವದಕ್ಕಾಗಿ ನೀವು ಶ್ರೀಮದ್ ವೆಂಕಟಪತಿರಾಯರ ಮಗುವೆಂದು ನಾಮಕಾರ್ಥ ಪಟ್ಟದ ಮೇಲೆ ಕುಳ್ಳಿರಿಸಿದ ಈ ಪ್ರಾಣಿಯು ನಿಜವಾಗಿಯೂ ಅವರ ಮಗುವೇ

ಜಗ : ಏನು ? ಚಿಕ್ಕರಾಯರನ್ನು ಶ್ರೀಮದ್ ವೆಂಕಟಪತಿರಾಯರ ಮಕ್ಕಳಲ್ಲವೆಂದು, ಸಾಧಿಸುವೆಯಾ

ಶ್ರೀರಂಗ : ಅಹುದು ಸಾಧಿಸುವೆನು

ಜಗ : ಯಾವ ಆಧಾರದಿಂದಾ?

ಶ್ರೀರಂಗ : ರಮಲ, ಜ್ಯೋತಿಷ್ಯ, ಸಾಮುದೀಕ, ಸಂತಾನಶಾಸ್ತ್ರಗಳ ಆಧಾರದಿಂದ. ಜಗದೇವಾ ನೀನು ನಿನ್ನ ಕಾರಸ್ಥಾನದ ಬುನಾದಿಯನ್ನು ಹಾಕುವದರಲ್ಲಿಯೇ ಸ್ವಲ್ಪು ತಪ್ಪಿರುವಿ, ಒಂದು ಸಲಕ್ಷಣವಾದ ಮಗುವನ್ನು ನಿನ್ನ ಮಗಳಾದ ಬಾಯಮ್ಮನಿಗೆ ತಂದುಕೊಟ್ಟಿದ್ದರೆ ಕೊನೆಯವರೆಗೂ ಬಬ್ಬಾಟವಿಲ್ಲದೇ ಸಾಗಿ ಹೋಗುತ್ತಿತ್ತು.

ಉತ್ತಮವಾದ ಮಗುವು ಸಕಾಲಕ್ಕೆ ಸಿಗದ್ದಕ್ಕೆ ಎಲ್ಲಿಯದೋ ! ಯಾರದೋ ! ಯಾತರದೋ! ಒಂದು ಮರಿಯನ್ನು ತಂದು ಅವಳ ಉಡಿಯನ್ನು ತುಂಬಿರುವೆ! ಮಹಾನುಭಾವಳು ಈ ದಿವ್ಯ ಚಿಂತಾಮಣಿಯನ್ನು ಹೇಗೆ ಎತ್ತಿದಳೋ! ಹೇಗೆ ಮುದ್ದಿಕ್ಕಿದಳೋ ! ಹೇಗೆ ಆಡಿಸಿದಳೋ ರಾಜ್ಯ ಲೋಭದ ಸಲುವಾಗಿ ತಿನ್ನಬಾರದ್ದನ್ನು ತಿನ್ನಲಿಕ್ಕೆ ಸಿದ್ಧರಾದ ನಿಮ್ಮಂಥಾ ಪಿಶಾಚಿಗಳು.......

ಜಗ : ತಲೆಯಲ್ಲಾ ಹರಟುವ ಅವನ ಹಲ್ಲುಗಳನ್ನುದರಿಸಿರಿ (ಹತ್ತರ ಹೋಗಿ) ಎಲೋ ಕಳ್ಳಾ, ನೆಲಮಾರ್ಗದಿಂದೋಡಿಹೋಗಿ ಕರ್ನಾಟಕ ಸಿಂಹಾಸನವನ್ನು ಡಬ್ಬು ಕೆಡುವುಬೇಕೆಂದು ಮಾಡಿದ್ದಿಯಲ್ಲವೇ ?

ಶ್ರೀರಂಗ : ನಾನು ಕಳ್ಳನೇ ನಿರ್ಲಜ್ಜಾ?

ಜಗದೇವ : (ಹೊಡೆದು) ಸುಮ್ಮನಿರು ತುಳಿದು ಬಿಟ್ಟೇನು.

ಶ್ರೀರಂಗ : ಥೂ ! ಥೂ ! ನರಪಿಶ್ಯಾಚ್ಯಾ? ಬಲೆಯಲ್ಲಿ ಬಿದ್ದು ಪರವಶವಾದ ಸಿಂಹವನ್ನು ಕಚ್ಚಿಕೊಳ್ಳುವ ಶ್ವಾನಾ! ನೀನು ಕ್ಷತ್ರಿಯನೇ! ಅಲ್ಲಲ್ಲಾ, ಸರ್ವಥಾ ಅಲ್ಲಾ! ಯಾವ ಹೀನ ಮಾನವನ ಜತೆಯಲ್ಲಿಯೋ ವ್ಯಭಿಚಾರವನ್ನು ಮಾಡಿ ನಿನ್ನ ಜನನಿಯು ನಿನ್ನನ್ನು ಪೆತ್ತಿರುವದೇ ಖಂಡಿತ.

ಬಾಯಮ್ಮ: (ಕಿಡಿಕಿಯೊಳಗಿಂದ) ಅಪ್ಪಾ ? ಏನಿದು ಅವನಿಗಿಷ್ಟೊಂದು ಕೂಗಿಕೊಳ್ಳುವದಕ್ಕೆ ಅವಕಾಶವನ್ನು ಹೇಗೆ ಕೊಡುತ್ತಿರುವಿ? ಹುಚ್ಚನಾಯಿಗಳನ್ನು ಎಳೆದೊಯ್ಯುವಂತೆ ಎಳೆದೊಯ್ದು ಶೂಲಕ್ಕೇರಿಸುವದಕ್ಕೆ ಹೇಳಬಾರದೇ! ಇದೋ ಬೀಜಕ್ಕೆ ಸಹ ಅವನ ವಂಶ ಉಳಿಯಬಾರದು.

ಜಗ : ಸಭಿಕರೇ, ಕೇಳಿದಿರಾ ಮಹಾರಾಣಿಯವರ ಆಜ್ಞೆಯನ್ನು! (ಆಜ್ಞೆ ಪತ್ರ ಬರೆಯುವನು)

ಶ್ರೀರಂಗ : ಸಭೆಯಲ್ಲಿದೆ! ಪಿಶ್ಯಾಚ್ಚಾ ನಿನಗೆ ಸಭೆಯೆಲ್ಲಿದೆ! ಶಿಷ್ಟಾಚಾರವೆಲ್ಲಿದೆ! ಅದರ ನ್ಯಾಯನೀತಿಗಳೆಲ್ಲಿವೆ? ಈ ಸ್ಥಳವು ಜಗದೇವ ಬಾಯಮ್ಮರೆಂಬ ನರಪಿಶ್ಯಾಚಿಗಳು ಮನಬಲ್ಲಂತೆ ವರ್ತನಮಾಡುವ ಸ್ಮಶಾನವು. ನಿಮ್ಮ ಸಭಿಕರೆಂದರೆ ಇದೋ ನಿಸ್ತೇಜ ಕಣ್ಣೀರುಗಳನ್ನು ಪಿಳಿ ಪಿಳಿ ಬಿಡುತ್ತ

ನಿಂತ ಈ ನರಪೇತಲಗಳು ಹಾಯ್! ದಿವಂಗತನ ನರಪತಿಯಾದ ಶ್ರೀಮದ್ ವೆಂಕಟಪತಿರಾಯನೇ ಭೋಗಕ್ಕೆ ಪ್ರಾಧಾನ್ಯವನ್ನು ಕೊಟ್ಟು ನಿನ್ನ ಸಪ್ತ ಕುಲವನ್ನು ನರಕದಲ್ಲಿ ನೂಕುವದಕ್ಕಾಗಿ ಎಂತಹ ಹಾಳು ರಾಕ್ಷಸಿಯನ್ನು ಮನೆಯಲ್ಲಿ ಸೇರಿಸಿಕೊಂಡೆ! ನೋಡು ನೋಡು! ಅದು ರಾಜಬಳಗವನ್ನೆಲ್ಲಾ ನುಂಗಿಹಾಕುವುದಕ್ಕೆ ಹೇಗೆ ಹಾತೊರೆಯುತ್ತಿರುವದು. (ತೆರೆಯಿಂದಾ)

**ಬಾಯ :** ಅಪ್ಪಾ, ಆಜ್ಞಾಪತ್ರವನ್ನು ಬರದಿಯಾ? ಅದೋ ಅಲ್ಲಿಯೇ ಮಹಾರಾಜರಿದ್ದಾರೆ. ಮುದ್ರೆಯನ್ನು ಮಾಡಿಸಿ ತಬ್ಬಿಹಾಕು, ಮತ್ತೂ ಅವನ ಗುಪ್ತವಾದ ಮಗನನ್ನು ಹುಡುಕಿಸಿ ತರಿಸು ಅದಕ್ಕೆ ಸಹ ಇದೇ ಶಿಕ್ಷೆಯು

**ಶ್ರೀರಂಗ :** ಎಲೇ ಮಾರೀ, ಹುಡುಕಿಸುವ ಶ್ರಮವೇಕೆ? ಆ ಮಗುವು ಕನ್ನಡ ಸಿಂಹಾಸನಾಭಿಮಾನದ ಸ್ವಾಧೀನವಿದೆ. ಕನ್ನಡ ನಾಡ ಭಕ್ತಿಯ ಹೃದಯದಲ್ಲಿದೆ. ಕನ್ನಡ ಕಡುಗಲಿಯ ಕಾವಲಿನಲ್ಲಿದೆ ವಿಶೇಷವೇನು! ನರಪತಿಗಳ ಅಭಿಮಾನಿಯಾದ ಯಚ್ಚಮನಾಯ್ಕರೂಪೀ ಶ್ರೀ ಪಂಪಾವಿರೂಪಾಕ್ಷನ ವಶದಲ್ಲಿದೆ. ಅಲ್ಲಿ ಅದಕ್ಕೆ ನನ್ನ ಅಂತಃಕರುಣದ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿರಸ್ತುಯನ್ನುವ ಆಶೀರ್ವಾದದ ಕವಚವಿದೆ.

**ಜಗ :** ಮಹಾರಾಜರೇ? ಇದಕ್ಕೆ ರಾಜಮುದ್ರಿಯನ್ನಿಕ್ಕಿ (ಕಾಗದ ಎದುರು ಮಾಡುವನು)

**ಚಿಕ್ಕ :** ಅಯ್ಯಯ್ಯೋ, ಕೈ ಥರಾ ಥರ ನಡಗುವುದಪ್ಪಾ ! ಮುದ್ರಿಯನ್ನಿಕ್ಕುವದು ನನ್ನಿಂದಾಗದು. ಬೇಕಾದರೆ ನೀನೇ ವತ್ತಿಕೋ ! (ಉಂಗುರ ಕೊಡುವನು) (ಜಗದೇವನು) ಮುದ್ರಿಯನ್ನಿಕ್ಕಿಕೊಳ್ಳುವನು) (ಸಿಂಹಾಸನದಿಂದ ಇಳಿದು) ಥೂ ಇದರ ಮನೆ ಹಾಳಾಗಾ ಏನ ದರ್ಬಾರವಪ್ಪಾ ಇವತ್ತಿನ ದರ್ಬಾರಾ! ಧಗಾ ಧಗಾ ಉರಿಯತಿದೆ. ಅಜ್ಜಯ್ಯಾ, ಸಾಕಾಯಿತು ಎಲ್ಲಾರೂ ಮುಜುರಾ ಮಾಡಿರಿ. ಹೋಗತೇವಿ (ಸಕಲರೂ ನಮಿಸುವರು ತಾನು ಹೋಗುವಾಗ್ಗೆ) ಅಜ್ಜಯ್ಯಾ ಇವರಿನ್ನೇನು ಮಾಡುವರೋ?

**ಜಗ :** ತಮ್ಮ ಅಪ್ಪಣೆಯಂತೆ ಮಾಡುವರು ಮಹಾರಾಜರೇ. ಹೂಂ,

ಕೊತವಾಲರೇ, ಎಳೆದುಕೊಂಡು ಹೋಗಿ ಸಕಲರನ್ನೂ ಸ್ಮಶಾನಕ್ಕೆ. ಮತ್ತೂ ತೀವ್ರ ರಾಜಾಜ್ಞೆಯನ್ನು ನೆರವೇರಿಸಿರಿ.

**ಚಿಕ್ಕ :** ಏನು ರಾಜಾಜ್ಞೆಯಪ್ಪಾ ! ಎಲ್ಲಾ ಮಾಡುವ – ಮುಟ್ಟುವ ತಾನೇ ! ರಾಜಾಜ್ಞೆಯಂತೆ ರಾಜಾಜ್ಞೆ ! ಏನೋ ಗಲಾಟೆ ಹೂಡಿಬಿಟ್ಟಿದ್ದಾನೆ ಎಲ್ಲಾರೂ ಮುಜುರಾ ಮಾಡಿದರೇನ್ರೆಪಾ? (ಶ್ರೀರಂಗರಾಯನಿಗೆ) ಇವರಂತೂ ಮುಜುರಾ ಮಾಡುವದಿಲ್ಲವೆಂದು ಮೊದಲೇ ಹೇಳಿಬಿಟ್ಟಿದ್ದಾರೆ. ಇಲ್ಲದಿದ್ದರಿಲ್ಲಾ! ನಾವೇ ಒಂದು ಮುಜುರಾ ಮಾಡಿಬಿಡುವಾ.

**ಚೋಪ :** ಹೀಗೆ ದಯಪಾಲಿಸಬೇಕು, ಮಹಾಪ್ರಭೋ, (ಹಾದಿಯನ್ನು ತೋರಿಸುವಾ)

**ಚಿಕ್ಕ :** ಇವರ ಹೆಸರೇನೋ?

**ಚೋಪ :** ಶ್ರೀರಂಗರಾಯರು.

**ಚಿಕ್ಕ :** ಅಯ್ಯೋ, ಏನು ಕಸರಾಮುರಾ ಹೆಸರೋ ! ಆಗಲಿ ಏನ್ರಿ ಶ್ರೀರಂಗರಾಯರೆ, ಮುಜುರಾ ತಕ್ಕೊಳ್ಳಿ (ಶ್ರೀರಂಗರಾಯನಿಗೆ ನಮೀಸಿ ಹೋಗುವನು) (ಸಕಲರು ಹೋಗುವರು)

**ಪ್ರವೇಶ ಬೀದಿ ಡಂಗುರ**

**ಡಂಗುರ :** ಪೌರವರೇ ಕೇಳಿ ಕೇಳಿ! ಕಾರಾಗ್ರಹದಲ್ಲಿಡಲ್ಪಟ್ಟ ಶ್ರೀರಂಗರಾಯನು ರಾಜದ್ರೋಹಿಯೆಂದು ಪರಿಷ್ಕಾರವಾಗಿದೆ ಪ್ರಯುಕ್ತ ಆತನಿಗೆ ಈಗಲೇ ದೇಹಾಂತ ಪ್ರಾಯಶ್ಚಿತ್ತವಾಗಬೇಕೆಂದು ರಾಜಾಜ್ಞೆಯಾಗಿದೆ ನೋಡಲಪೇಕ್ಷಿಸುವವರು ನೋಡಬಹುದು!

(ಹೋಗುವನು)

**ಸಂಜಿ :** ಅಯ್ಯೋ, ಶ್ರೀರಂಗರಾಯರ ಅವಸ್ಥೆಯು ಹೀಗಾಗಬೇಕೇ! ತಾಯಿ ಭುವನೇಶ್ವರೀ, ಏತಕ್ಕೆ ನೀನು ನಮ್ಮ ಮೇಲೆ ದಯಾಹಿತಳಾದೆ?

**ಪದ – (ನಂ. ೧೮) ರಾಗ – ಮಾಂಡ ತಾಳ – ದಾದರಾ**

॥ ನರನಾಯಕನಾ ಬಂಧುಗಳಾ । ದೈನ್ಯವಿದೇನೂ ಅವಲೋಕಿಸದೆ ॥
॥ ನಾನೂ ॥ ಪಲ್ಲ ॥ ಖಲರೊಯ್ಯುವರೂ । ನದರಯರಾಗೆಲ್ಲ ಜನರನೊ ॥
॥ ಮಾಡಿಸಲು ವಧೆಯನೂ ॥ ೧ ॥

**ಗುರು :** ಸಂಜೀವಿ ಎಲೆ ಸಂಜೀವಿ ಮಹಾರಾಣಿಯವರೂ ಜಗದೇವರಾಯರೂ ಅಂತಃಪುರದಲ್ಲಿರುವರೇ?

**ಸಂಜಿ :** ಇರುವರು ದಯಪಾಲಿಸಿ

**ಗುರು :** ಅದಿರಲಿ. ನೀನು ಖಿನ್ನವದನೆಯಾದ ಕಾರಣವೇನು ? ಇದೇನು ನೇತ್ರಗಳಲ್ಲಿ ಅಶ್ರುಗಳು ತುಂಬಿ ಬಂದಿವೆ.

**ಸಂಜಿ :** ಗುರು ಮಹಾರಾಯರೇ, ಈಗ್ಗೆ ಡಂಗುರದವನು ಹೇಳಿದ್ದನ್ನು ಕೇಳಿ ನನ್ನದೀ ಅವಸ್ಥೆಯಾಗಿದೆ.

**ಗುರು :** ನಡೆ ಮಹಾರಾಣಿಯವರೇ, ಮತ್ತೂ ಜಗದೇವರಾಯರಿದ್ದೆಡೆಗೆ ನನ್ನನ್ನು ಕರೆದುಕೊಂಡು ತೀವ್ರ.

**ಸಂಜಿ :** ಹೀಗೆ ದಯಪಾಲಿಸಬೇಕು. (ಹೋಗುವರು)

**ಪ್ರವೇಶ**

(ಬಾಯಮ್ಮನ ಮಹಾಲು)

**ಪದ – (ನಂ. ೧೯) ರಾಗ – ಭಾಗೇಸರಿ ತಾಳ – ತರಿವಟ**

**ಬಾಯ :**

॥ ಹಿತಕರಿವೆನಿಸುವದ್ಯೆ ಪಿತನೆ ಬಹೂ । ಭೀತಿಯನು ತಾನಾದುದು ॥
॥ ನಾಶಾ ॥ ಪಲ್ಲ ॥ ಅಪ್ರತಿವಾಗಳಾ ವಂಶಾ ಆಗುತಿಹುದು ಸಹ ಮೂಲ ॥
॥ ನಾಶಾ ॥ ೧ ॥

**ಗುರು :** ಮಹಾರಾಣಿಯವರೇ ಮತ್ತು ಜಗದೇವರಾಯರೇ–

ಅದೇನು ಶ್ರೀರಂಗರಾಯರ ಹೆಸರಿನಲ್ಲಿ ಉತ್ಪಾತವಾದ ಡಂಗುರವು ಸಾರಲ್ಪಡತ್ತಿರುವದಲ್ಲವೇ ! ನೀತಿಯಲ್ಲಿ ಉಚ್ಚತಮ ಸಿಖರಕ್ಕೆ ಹೋದ ಕರ್ನಾಟಕ ಸಿಂಹಾಸನಕ್ಕೆ ಅದು ಭೂಷಣವೇ? ಪ್ರಯುಕ್ತ

**ಪದ – (ನಂ. ೨೦) ರಾಗ – ಮುಲ್ತಾನಿ ತಾಳ – ಯಕ್ಕಾ**

॥ ಬೇಡಲು ಬಂದಿರುವೆ ನಾನು । ನೀಡುದಯದಿ ಜನನೀ । ಮಾಡು ದಯದ
॥ ದಾನವನ್ನು ಬಡವನಿಗೆ ಮಹಾರಾಣೀ ॥ಪಲ್ಲ॥
॥ ತರಿಯಲು ನೀನಿತ್ತ ಘೋರ । ಧರುಣೇಶನ ಬಳಗವೆಲ್ಲ । ಮರಣ ದಂಡನೆ
॥ ಯು ನಿಲ್ಲಿಸು । ತ್ವರಿತ ಸುಗುಣ ಶ್ರೇಣೀ ॥೧॥

**ಬಾಯ :** ಗುರುಗಳೇ ಅದಾಗದ ಮಾತು ಕೃಷ್ಣ ಸರ್ಪವನ್ನು ಕೆಣಕಿ ಹಾಗೆ ಬಿಡಲಿಕ್ಕೆ ನಾವೇನಷ್ಟು ಮೂರ್ಖರಲ್ಲಾ ಬರೇ ಶ್ರೀರಂಗ ರಾಯನನ್ನೇಕೆ ಅವನ ಬಂಧುಬಳಗವನ್ನು ಸಹ ಹುರಿದು ಬಿಡಬೇಕಾಗಿದೆ. ಅದೂ ಸಹ ಅವನ ಶಿರಶ್ಚೇದನಾವಾದ ತಕ್ಷಣವೇ.

**ಗುರು :** ಶ್ರೀಮದ್ ವಾಸುದೇವಾ, ಮಹಾರಾಣಿಯವರೇ? ತಾವು ಇಚ್ಚಿಸಿದರೆ ಏನಾಗಲರಿಯದು, ಸ್ವಲ್ಪು ಸಮಾಧಾನ ಚಿತ್ತರಾಗಿ ನಮ್ಮ ಮಾತುಗಳನ್ನು ಲಾಲಿಸಿರಿ ಏನು ಜಗದೇವರಾಯರೆ?

**ಜಗದ :** ಈ ಮುಂಚಿತವಾಗಿ ಬಹುವಾಗಿ ನಾನು ಹೇಳಿದ್ದೇನೆ ಆದರೆ ಹಿಡಿದ ಹಟ ಬಿಡುವ ಅವರ ವಿಚಾರವಿಲ್ಲಾ.

**ಗುರು :** ಈಗಂದಂತೆ ಬಂಧುಬಳಗಗಳ ಸಮೇತ ಶ್ರೀರಂಗರಾಯರನ್ನು ಕೊಲ್ಲಿಸಬೇಕೆನ್ನುವಿರೋ?

**ಬಾಯ :** ಅಹುದಹುದು, ಹಾಗೆ ಪ್ರತಿಜ್ಞೆಯನ್ನು ಮಾಡಿದ್ದೇನೆ ಮಾಡಿದ ಪ್ರತಿಜ್ಞೆಯು ಪೂರ್ಣವಾಗಲಿಕ್ಕೇಬೇಕು.

**ಗುರು :** ಈ ವಿಷಯದಲ್ಲಿ ಪೂರ್ಣ ವಿಚಾರ ಮಾಡಿರುವಿರಾ?

**ಬಾಯ :** ಯಃಕಶ್ಚಿತ ರಾಜದ್ರೋಹಿಗಳನ್ನು ದಂಡಿಸುವದಕ್ಕೆ ಪೂರ್ವಾಪರ ವಿಚಾರಗಳ ಅಗತ್ಯವಿಲ್ಲಾ. ಅಲ್ಲದೇ ಈಗಿನ ರಾಜಕೀಯ ವಿಚಾರಗಳಲ್ಲಿ ತಾವು ಬೀಳುಬಾರದೆಂದು ನನ್ನ ಅಭಿಪ್ರಾಯ.

**ಗುರು :** ಮಹಾರಾಣಿಯವರೆ? ವಿವೇಕವು ಜಾಗ್ರತವಿರುವತನಕ ಯಾವ ವಿಚಾರಗಳಲ್ಲಾದರೇನು, ಸತ್ಯಾಭಿಪ್ರಾಯವನ್ನು ಕೊಡುವದು ನಮ್ಮ ಧರ್ಮವು, ತದನುಸಾರವಾಗಿ ವರ್ತಿಸುತ್ತಿರುವೆವು.

**ಜಗ :** ಅದು ನಿಜ, ಆದೇಶ ಪ್ರಕ್ಷುಬ್ಧವಾದ ಈಗಿನ ವಾತಾವರಣದಲ್ಲಿ ತಾವು ಯಾವ ಭಾಗವನ್ನು ಕೊಳ್ಳದಿರುವದೇ ವಿಹಿತವು.

**ಗುರು :** ಅಂದರೆ ಮಹಾರಾಣಿಯವರ ಅಭಿಪ್ರಾಯವನ್ನು ಪರ್ಯಾಯದಿಂದ ತಾವು ಅನುಮೋದಿಸಿದಂತಾಯಿತು.

**ಜಗ :** ನಮ್ಮ ವೈಯಕ್ತಿಕ ಅಭಿಪ್ರಾಯಗಳೇನೇ ಇರಲಿ. ಸಿಂಹಾಸನದ ಅಪೇಕ್ಷೆಯಂತೆ ವರ್ತಿಸಲು ನಾವೆಲ್ಲರೂ ಬದ್ಧರಲ್ಲವೇ?

**ಗುರು :** ಸಮಯಾನುಸಾರ ಸಿಂಹಾಸನದಿಂದನುಚಿತವಾದ ಕಾರ್ಯವಾಗುತ್ತಿದ್ದರೆ;

ಹಾಗಾಗಗೊಡದಂತೆ ಯತ್ನಿಸುವದು ಆ ಸಿಂಹಾಸನದ ನಿಜಸೇವಕರ ಕರ್ತವ್ಯವಲ್ಲವೇ?

ಬಾಯ : ಗುರುಗಳೇ ವಣ ರಗಳೆಯಿಂದ ಪ್ರಯೋಜನವೇನು! ರಾಜದ್ರೋಹಿಗಳಿಗೆ ದೇಹಾಂತ ಪ್ರಾಯಶ್ಚಿತವಾಗಲೇಬೇಕು.

ಗುರು : ದೇಹಾಂತ ಪ್ರಾಯಶ್ಚಿತ್ತವನ್ನು ಹೊಂದುವ ರಾಜದ್ರೋಹವು ಶ್ರೀರಂಗರಾಯನಿಂದಾಗಿರುವದೆಂದು ಯಾರೂ ಹೇಳರು.

ಬಾಯ : ಹೇಳದಿದ್ದರೆ ಬಿಡಲಿ ವಿಧಿಸಿದ ಶಿಕ್ಷೆಯನ್ನು ಬಂಧುಗಳ ಬಳಗ ಸಮೇತನಾಗಿ ಶ್ರೀರಂಗರಾಯನು ಭೋಗಿಸಲಿಕ್ಕೇಬೇಕು.

ಗುರು : ಈ ದುರಾಗ್ರಹವು ಮುಂದೆ ತಮ್ಮನ್ನು ಪಶ್ಚಾತ್ತಾಪಕ್ಕೆ ಗುರಿ ಮಾಡೀತು.

ಜಗ : ಏಕೆ ಗುರುಗಳೇ, ಪರ್ಯಾಯದಿಂದ ನೀವು ನಮ್ಮನ್ನು ಬೆದರಿಸುತ್ತಿರುವಿರಿ. ಇದು ಸರಿಯಲ್ಲಾ ಸದ್ಯದ ತಮ್ಮ ಆಚರಣೆಯು ತಮ್ಮನ್ನು ಸಹ ರಾಜದ್ರೋಹಿಗಳ ಪಕ್ಷದವರೆಂದು ಸಾಕ್ಷಿಯನ್ನು ಕೊಡುತ್ತಿರುವದಲ್ಲವೇ! ನೋಡಿ ವಿಚಾರ ಮಾಡಿ!

ಗುರು : ಸತ್ಯವನ್ನು ಸ್ಮರಿಸಿ ನಡೆಯುವಾಗ್ಗೆ ಆದಾವ ಪಕ್ಷಕ್ಕಾದರೂ ಹೊಂದಿಕೊಳ್ಳಲಿ ನನಗದರ ಭಯವಿಲ್ಲಾ.

ಬಾಯ : ಹಾಗಾದರೆ ಉಪಾಯಗಾಣದೆ ತಮ್ಮನ್ನು ಸಹ ರಾಜದ್ರೋಹಿಗಳ ಪಂಕ್ತಿಯಲ್ಲಿ ಗಣಿಸಬೇಕಾಗುವದು.

ಗುರು : ಹೇಗಾದರೂ ಮಾಡಬಹುದು. ಆಗಲಿ ನಾನು ಬರುವೆನು.

ಜಗ : ನಿಲ್ಲಿ ಸ್ವಾಮೀ ಹೋಗುವದೆಲ್ಲಿ? ಶ್ರೀರಂಗರಾಯನ ಇತ್ಯರ್ಥವಾಗುವತನಕ ತಮಗೆ ನಿರ್ಭಂಧವಿದೆ.

ಗುರು : ಅಯ್ಯಾ ಜಗದೇವರಾಯಾ, ನೀನಾಡುವದು ಹುಡುಗಾಟಿಕೆ ಮಾತು. ಭವಬಂಧನದಲ್ಲಿ ಸಹ ಬದ್ಧರಾದ ನಾವು ನಿನ್ನ ನಿರ್ಭಂಧಕ್ಕೊಳಗಾಗ ತಕ್ಕವರೇ? ಇದೋ ಹೊರಟೆವು, ನೋಡುವಾ? ಆ ನಿಮ್ಮ ನಿರ್ಭಂಧವು ನಮ್ಮನ್ನು ಹೇಗೆ ತಡೆಯುವದೋ ನೋಡುವಾ (ಹೋಗುವರು)

ಬಾಯ : ಯಾರಲ್ಲಿ? ಬೇಗನೆ ಬನ್ನಿ ಈಗಿಂದೀಗಲೇ ಈ ರಾಜದ್ರೋಹಿಯನ್ನು ನಿರ್ಭಂಧದಲ್ಲಿರಿಸಿ..

ಗುರು : ಸಮಾಪ್ತಿಯ ಕಾಲಕ್ಕೆ ಕಂಸನಿಗೆ ಎತ್ತ ನೋಡಿದತ್ತ ಶ್ರೀಮದ್ ವಾಸುದೇವನು ಕಾಣುವಂತೆ ನಿಮಗೆ ಸಕಲ ದಿಕ್ಕುಗಳಲ್ಲಿಯೂ ರಾಜದ್ರೋಹವೇ ಕಾಣುತ್ತಿರುವದು.

ಜಗ : ಯಾರಲ್ಲಿ? (ದೂತರು ಬರುವರು) ಮಹಾರಾಣಿಯವರ ಮುಖದಿಂದ ಹೊರಟ ಆಜ್ಞೆಯು ನಿಮಗೆ ಕೇಳಿಸಲಿಲ್ಲವೇ?

ದೂತರೂ : ಕೇಳಿಸಿತು ಮಹಾಪ್ರಭೋ ಆದರೆ.

ಬಾಯ : ಆದರೆ ಎಂದು ಏನು ಹೇಳಿವಿರಿ? ಈ ರಾಜದ್ರೋಹಿಯನ್ನು ಈಗಲೇ ನಿರ್ಭಂದದಲ್ಲಿರಿಸಿ.

ದೂತರೂ : ಅಯ್ಯೋಯ್ಯೋ ರಾಜಗುರುಗಳನ್ನೇ!

ಜಗ : ಅಹುದಹುದು. ಅವರನ್ನೇ.

ದೂತರೂ : ಮಹಾರಾಜರೇ ಈ ಸಿಂಹಾಸನದ ಸೇವೆಯು ಸಾಕು. (ಖಡ್ಗವನ್ನು ಕೆಳಗಿಟ್ಟು ಹೋಗುವರು)

ಬಾಯ : ನೀನೋ?

ದೂತ : ನಾನು ಸಹ ಹಾಗೆಯೇ (ಅವನೂ ಹೋಗುವನು)

ಜಗ : ಕೊನೆಗೆ ನೀನೋ? (ದೂತ) ನಾನು ಕೂಡಾ ಅವನಂತೆಯೇ (ಹೋಗುವರು)

ಗುರು : ಇದೇನು! ನಿಮ್ಮಾಜ್ಞೆಯುನ್ನು ಯಾರೂ ಪಾಲೆಸಲಿಲ್ಲವಲ್ಲ ಮಹಾರಾಣಿಯವರೇ, ಮತ್ತು ಜಗದೇವರಾಯರೇ, ಕಿಂಚಿನ್ನ ಮಾತ್ರ ಅನುಭವಕ್ಕೆ ಬಂದ ಈ ವಿಷಯುದಿಂದ ನೀವುಗಳು ಜಾಗ್ರತರಾಗುವದುತ್ತಮ (ಹೋಗಲುದ್ಯುಕ್ತರಾಗುವರು)

ಬಾಯ : ನಿಲ್ಲಿ ಹೋಗುವದೆತ್ತ? ಪದ (ಅಡ್ಡಾಗುವಳು)

**ಪದ – (ನಂ. ೨೨) ರಾಗ – ಸೋಹನಿ ತಾಳ – ತ್ರಿವಟ**

॥ ಯಾರ ವೈರವನೂ ನೀವು ಸಂಪಾದಿಸುವಿರೀ । ಭರದಿ ಯೋಚಿಸಿರಿ ॥
॥ ಯಚ್ಚರಿಕೆಯನ್ನೀವೆನಾ ನಿಮಗೆ ॥ಪಲ್ಲ॥ ಖಲಜನರೊಳು ಸಂಮ್ಮಿಲತ ॥
॥ ರಾಗಲೀಗಲೆ ನಿಮಗೆ ಸಹ ಮರಣದಂಡನೇ ॥೧॥

**ಗುರು :** ಅಯ್ಯೋ ಹೆಣ್ಣು ಮಗಳೇ! ಕೂಪಮಂಡೂಕ ವೃತ್ತಿಯವಳಾದ ನಿನ್ನದೆಷ್ಟು ಗರ್ವವೇ! ಬ್ರಹ್ಮಾಂಡ ಪ್ರಮಾಣದಿಂದ ಈ ಭೂಮಿಯೊಂದು ಅಣುಪ್ರಮಾಣವು. ಅದರೊಳಗಿನ ಭರತಖಂಡವು, ಅದರೊಳಗಿಹುದು ಕರ್ನಾಟಕವು. ಆ ಅಣುವಿನ ಶತಾಂಶವೋ ಸಹಸ್ರಾಂಶವೋ ಯಾವದೋ ಒಂದಾಗುವದು ಅಂತಹ ಕಃಪದಾರ್ಥದರಿಸಿಯಾದ ನೀನು ಅಂತಹ ಕೋಟಿ ಬ್ರಾಹ್ಮಾಂಡದಾಯಕನ ಸೇವಕರನ್ನು ಶಿಕ್ಷಿಸಬಲ್ಲಿಯಾ? ಈ ನಿನ್ನ ಚೇಷ್ಟೆಯು ಕೇವಲ ಹಾಸ್ಯಾಸ್ಪದವಾದದ್ದು ನಾಮುಕಾರ್ಥ ಮಾನವರಾದ ನಿಮಗೆ ಏನು ಹೇಳಿದರೂ ಅದು ಹಾವಿಗೆ ಹಾಲೆರದಂತಾಗುವದು ಜಗದೇವರಾಯಾ? ತೋರಿ ಕೈಯಲ್ಲಿ ನಿಮ್ಮ ಕೃತಿಯು ನ್ಯಾಯವಾಗಿ ಕಾಣುತ್ತಿದ್ದರೂ ಅದಾವದೋ ಒಂದು ಗೂಢತಮವಾದ ಅನ್ಯಾಯವನ್ನು ಮೊರೆ ಮಾಡುವದೆಂಬ ನಮ್ಮ ತರ್ಕ ನಿಮ್ಮಗಳ ಧರ್ಪವೂ ಕೋಪವೋ ರಾಜಾಜ್ಞೆಗಳನ್ನು ಬೀರುವ ಗಾಂಭೀರ್ಯವು ಸಕಲವೂ ಕಡತಂದ ಅವಸಾನದ್ದಾಗಿ ಭಾಸವಾಗುತ್ತಲಿದೆ ಅದೇನಿರುವದೋ ಶ್ರೀಮದ್ ವಾಸುದೇವನ ಇಚ್ಛೆಯಿದ್ದರೆ ತಾನೇ ಪರಿಷ್ಕಾರವಾದೀತು ಸಾಕು. ಸಾಕು, ಇಂಥ ಕ್ರೂರಶ್ವಾಪದಗಳ ಗುರುತ್ವಕ್ಕಿಂತಲೂ ಗಿರಿಕಂದರಗಳ ವಾಸವೇ ಲೇಸು, (ಜಗದೇವ ತಡೆಯುವ. ಅವನನ್ನು ದಬ್ಬಿ ಹೋಗುವರು)

**ಪದ – (ನಂ. ೨೨) ರಾಗ – ಮಾಲಕಂಸ ತಾಳ – ತ್ರಿವಟ**

॥ ಮದಾಂಧ ಮೊದಲು ಸರಿದು ಬಿಡು ಮಾರ್ಗವಾ ॥ ಅಧಮನಂ ॥
॥ ಖಲಾ । ಹೃದಯದಿ ಗರಲವ ಪಿಡಿದ ಪಿಶಾಚ್ಚಾ । ಪಲ್ಲ ॥ ಇದೇನು ॥
॥ ಶತನೇ ಸಾಹಸಾ ಹರಿಯನಂಜಿಸುವ ನರಿಯ ತೆರಿದೆ ಛೀ ॥೧॥

**ಬಾಯ :** ಹೋಗು ಹೋಗು ಮುದಿಗೂಬಿಯೇ ತನ್ನ ಗುರುತ್ವದ ಜಂಬವನ್ನು ತೋರಿಸಲಿಕ್ಕೆ ಹೊರಟಿದೆ–ಜಂಬವನ್ನು (ಕೊತವಾಲನು ಬರುವನು) ಏನು ಕೊತವಾಲರೇ ರಾಜಾಜ್ಞೆಯು ನೆರವೇರಿತೇ?

**ಕೊತ :** ಆಗಲೇ ನೆರವೇರಿತು.

**ಸಂಚಿ :** ಶ್ರೀರಂಗರಾಯರೊಡನೆ ಅವನ ಬಂಧು–ಬಳಗದವರೆನ್ನೆಲ್ಲಾ ಶೂಲಕ್ಕೇರಿಸುವಾಗ್ಗೆ ನೋಡಲಿಕ್ಕೆ ಬಂದ ಪ್ರಜಾ ಜನರ ವರ್ತನವು ಹೇಗಿತ್ತು? ಸಂಕೋಚವೇಕೆ? ಪರಿಷ್ಕಾರವಾಗಿ ಹೇಳಿ.

ಕೊತ : ಆ ಸಮಯಕ್ಕೆ ಒಂದು ವಿಚಿತ್ರವಾದ ಸಂಘಧ್ವನಿಯು ಗಗನ ಮಂಡಲವನ್ನು ಭೇದಿಸುವಷ್ಟು ಪ್ರಚಂಡವಾಗಿ ಎದ್ದಿತು.

ಬಾಯ : ಅದೇನು?

ಕೊತ : ಸಂಘಧ್ವನಿಯೇ ಅದು ಅದರರ್ಥವು ಹೇಗಾಗಬೇಕು. ಆದರೂ ಅದರಲ್ಲಿ "ಪರಮನ್ಯಾಯ, ಪರಮನ್ಯಾಯ"ವೆಂಬ ಅಭಿಪ್ರಾಯಗಳೇ ವಿಶೇಷವಾಗಿದ್ದವು.

ಬಾಯ : ಹೂಂ ಹೀಗೋ ಹಾಗಾದರೆ ಯಾರಲ್ಲಾದರೂ ರಾಜದ್ರೋಹದ ಸಂಶಯವು ಸ್ವಲ್ಪಾದರೂ ಕಂಡುಬಂದಲ್ಲಿ ಅವರಿಗೆ ಮರಣದಂಡನೆಯನ್ನೇ ವಿಧಿಸಬೇಕು. ರಾಜನಿಷ್ಠರೆಲ್ಲರಿಗೂ ಈ ಸ್ವಾತಂತ್ರ್ಯವಿರುವಂತೆ ತೀವ್ರವೇ ಆಜ್ಞಾಪತ್ರವನ್ನು ಹೊರಡಿಸು ಯಾರ್‍ಯಾರ ಜಂಬವು ಎಷ್ಟೆಷ್ಟಿರುವದೋ ನೋಡುವಾ.

ಜಗ : ಅಹುದಹುದು, ಕ್ರಾಂತಿಕಾರರ ಸಲುವಾಗಿ ಅದೇ ಬ್ರಹ್ಮಾಸ್ತ್ರವು. ಇದೋ ಈಗಲೇ ಆ ಮಾದರಿಯ ರಾಜಾಜ್ಞೆಯನ್ನು ಹೊರಡಿಸುವೆನು.

ಬಾಯ : ಅಪ್ಪಾ, ಲಕ್ಷ್ಮಣನಾಯಕನ ಮೊದಲಾದ ರಾಜದ್ರೋಹಿಗಳ ನಿರ್ಮೂಲವಾಗುವತನಕ ನಾವು ಸುಖದ ದಿವಸಗಳನ್ನು ಕಾಣೆವು.

ಜಗ : (ಆಜ್ಞಾಪತ್ರವನ್ನು ಕೊಟ್ಟು) ಅದು ನಿಜ ಕೊತವಾಲರೆ, ನೀವು ಒಂದು ಕೆಲಸ ಮಾಡಿ ಅದೇನಂದರೆ, ವೇಷಾಂತರವನ್ನು ಮಾಡಿ ಆ ವಧಸ್ಥಾನದ ಹತ್ತಿರದಲ್ಲಿರಿ ಯಾರ್‍ಯಾರು ಬರುವರು, ಮತ್ತೂ ಏನೇನು ಮಾಡುವರು? ಇವೇ ಮೊದಲಾದ ಸಂಗತಿಗಳನ್ನು ಸೂಕ್ಷ್ಮವಾಗಿ ತಿಳಿದು ನೋಡಿ ನಮಗೆ ತಿಳುಹಿಸಿ ಹೋಗಿ, ಈ ಕಾರ್ಯದಲ್ಲಿ ಈಗಲೇ ತೊಡಗಿ (ಸಕಲರೂ ಹೋಗುವರು)

### ಪ್ರವೇಶ

(ಲಕ್ಷ್ಮಣನಾಯಕನು ಬರುವನು. ಜಂಗಲ್)

ಲಕ್ಷ್ಮ : ಸರಿಯಾಗಿ ಮೂವತ್ತನೇ ದಿವಸ ಏತಕ್ಕೆ ಕರಿಯಾ ಜಟ್ಟಿಗ ತಡವಾಗಿರಬಹುದೂ! ಇಷ್ಟರಲ್ಲಿಯೇ ಅವನು ಬರಬಹುದಾಗಿತ್ತು! ಶ್ರೀರಂಗರಾಯರನ್ನು ನೆಲಮಾರ್ಗದಿಂದ ಕರತರುವದಕ್ಕಾಗಿ ಹೋದ ಹನುಮನ ಸುದ್ದಿಯೇ ಇಲ್ಲಾ. ರಾಜಧಾನಿಯ ಸಾಧಾರಣ

ಸಮಾಚಾರವನ್ನರಿಯಬೇಕೆಂದರೇ ಈ ಮಾರ್ಗವಾಗಿ ಯಾರೂ ಬರಲೊಲ್ಲರು. ಅದರಲ್ಲಿ ಈ ದಿನದ ದುಃಶಕುನಗಳಂತೂ ತನ್ನ ಹೃದಯವನ್ನು ವಿದಾರಿಸಿಬಿಟ್ಟಿವೆ ಅಬ್ಬಾ! ಆಗಲೇ ಸೂರ್ಯಾಸ್ತ ಸಮಯದಲ್ಲಿ ಕಳಚಿ ಬಿದ್ದದ್ದೇನು ನಕ್ಷತ್ರವು! ಅದರ ಪ್ರಕಾಶವೇನು! ಗತಿಯ ಚಮತ್ಕಾರವೇನು? ಯಾರನ್ನೋ ಶೋಧಿಸುತ್ತ ನಡೆದಂತೆ ಸರ್ರನೇ ತಂಜಾವರ ದಿಕ್ಕಿನಲ್ಲಿ ಸಾಗಿ ಗುಪ್ತವಾಯಿತು. ಅದೇ ಸಮಯಕ್ಕೆ ರಾಜಧಾನಿಯುತ್ತ ಏನೋ ಒಂದು ಕೋಲಾಹಲವಿದ್ದಂತೆ ಭಾಸವಾಯಿತು. ಅದಾದರೂ ಏನಿರಬಹುದು? ಆಗಲಿ, ರಾಜಧಾನಿಯ ತನಕ ಹೋಗದೇ ವಿಧಿಯಿಲ್ಲಾ. (ಹೋಗಲುದ್ಯುಕ್ತ)

(ರಾಜಗುರುಗಳು ದಿಗ್ಭ್ರಾಂತರಾಗಿ ಬರುವರು)

ಲಕ್ಷ್ಮ : ಅಯ್ಯಾ ನೀವಾರು ಎಲ್ಲಿಗೆ ಹೋಗುವಿರಿ?

ಗುರು : ಎಲ್ಲಿಂದ ಬಂದೆವೋ ಅಲ್ಲಿಗೇನೇ ಹೋಗುತ್ತಿರುವೆವು.

ಲಕ್ಷ್ಮ : ಪರಿಷ್ಕಾರವಾಗಿ ಹೇಳಿ ನೋಡುವಾ?

ಗುರು : ಅದನ್ನು ಕೊಂಡೇನುಮಾಡಿವಿ?

ಲಕ್ಷ್ಮ : ಇವರು ನಮ್ಮ ರಾಜರುಗಳಾಗಿ ಕಾಣುವರು! ಮಹಾಸ್ವಾಮೀ ತಾವು ನಮ್ಮ ರಾಜಗುರುಗಳಾಗಿ ಕಾಣುವಿರಿ, ಅಹುದೇನು?

ಗುರು : ಯಾರು ಲಕ್ಷ್ಮಣನಾಯಕ–(ಶೋಕಪೂರ್ಣ)

ಲಕ್ಷ್ಮ : ಅಹುದು ಬುದ್ಧಿ, ನಾನು ಲಕ್ಷ್ಮಣನಾಯಕನೇ, ಮಹಾಬುದ್ಧಿ. ಪರಿವಾರವಿಲ್ಲದೆ ರಾಜಗುರುಗಳು ಕಾಡಿನಲ್ಲಿ ತಿರುಗಾಡುವದು. ಏನೋ ಒಂದು ಉತ್ಪಾತದ ಲಕ್ಷಣವಿದೆ.

ಗುರು : ನಾಯಕಾ? ಏನು ಹೇಳಲಿ?

ಲಕ್ಷ್ಮ : ಬುದ್ಧೀ ಕೇವಲ ವಿರಕ್ತರಾದ ತಮ್ಮ ಕಣ್ಣೊಳಗಿಂದುದುರುವ ದುಃಖಾಶ್ರುಗಳು ನನ್ನಲ್ಲಿ ಅತಿಶಯವಾಗಿ ಕಳವಳವನ್ನುಂಟು ಮಾಡಿವೆ. ದಯಮಾಡಿ ಸಮಾಧಾನವನ್ನು ತಾಳಿ, ತಮ್ಮ ದುಃಖದ ಕಾರಣವನ್ನು ನಿವಾರಿಸುವ ಯತ್ನವನ್ನು ಮಾಡುವೆನು.

ಗುರು : ನಾಯಕಾ, ಏನು ಹೇಳಲಿ? ಆ ಕಾರ್ಯದ ಸುದ್ದಿಯನ್ನು ಯಾವ ಶಬ್ದಗಳಿಂದ ಹೇಳಲಿ? ಅದೇನು ವಿಜಯನಗರವೋ ಅಥವಾ

ಕ್ರೂರ ಪಿಶಾಚಿಗಳ ವಿಹಾರವೋ ತಿಳಿಯದು.

**ಲಕ್ಷ್ಮ :** ಬುದ್ಧೀ, ವಿಜಯನಗರಕ್ಕೆ ತಾವು ಕೊಟ್ಟ ವಿಶೇಷಣವು ಕನ್ನಡಿಗರಭಿಮಾನ ಕೇಂದ್ರದ ಅಪಮಾನವಲ್ಲವೇ?

**ಗುರು :** ಸದ್ಯಕ್ಕೆ ಹಾಗಿರುವದು, ಉಪಾಯವಿಲ್ಲಾ.

**ಲಕ್ಷ್ಮ :** ಬುದ್ಧೀ, ತಮ್ಮ ಸಂದಿಗ್ಧ ಹೇಳಿಕೆಯಿಂದ ನಾನು ಬಹು ಭ್ರಾಂತನಾದೆನು, ದಯವಿಟ್ಟು ಪರಿಷ್ಕಾರವನ್ನು ಮಾಡಿ

**ಗುರು :** ಲಕ್ಷ್ಮಣನಾಯಕಾ, ನಿನಗೇನು ಹೇಳಲಿ, ಕವ್ರೆರತನು ಪಿಶಾಚಿಗಳಾದ ಜಗದೇವ ಬಾಯಮ್ಮರು; ಅಯ್ಯೋ ಶ್ರೀಮದ್ ವಾಸುದೇವಾ ಮುಂದಿನ ಶಬ್ದಗಳನ್ನು ಹೇಳಲಾರೆ ನಡೆ ಆ ಕಾರಣವು ಇಲ್ಲೇ ಹತ್ತಿರದಲ್ಲಿದೆ, ತೋರಿಸುವೆನು ಬಾ. (ಅವನ ಕೈಹಿಡಿದು ಕರೆದೊಯ್ಯುವರು)

**ಪ್ರವೇಶ**

(ಸ್ಮಶಾನದಲ್ಲಿ ಹೆಣಗಳ ನೇತಾಟ)

**ಗುರು :** ಲಕ್ಷ್ಮಣನಾಯಕಾ ನೋಡು! ಅದಾವ ದೃಶ್ಯವು!!

**ಲಕ್ಷ್ಮ :** ಮಹಾಸ್ವಾಮಿ ಅದು ಸಾಲಾಗಿ ಶೂಲಕ್ಕೆರಿಸಲ್ಪಟ್ಟ ಮಾನವೀ ದೇಹಗಳು! ಅಬ್ಬಾ ! ಒಂದೇ ಬಾರಿಗೆ ಎಷ್ಟು ಜನಗಳಿಗೆ ನೇಣುಹಾಕಿಸಿದ್ದಾರೆ!

**ಗುರು :** ನಾಯಕಾ, ಅವರಾರೆಂದು ತಿಳಿದುಕೊಂಡಿ?

**ಲಕ್ಷ್ಮ :** ಬುದ್ಧೀ, ಅದು ನನಗೆ ಹೇಗೆ ಗೊತ್ತಾಗಬೇಕು, ಸಂಧ್ಯಾಸಮಯವಾಗಿದೆ ಹೇಳಿ, ಬುದ್ಧೀ? ಅವಾರ ಹೆಣಗಳು?

**ಗುರು :** ಹೇಳಬೇಕೆಂದರೆ ನಾಲಿಗೆಯು ಒಳನುಗ್ಗುತ್ತಿರುವದು. ಅಯ್ಯೋ ಕಂಠವು ಬಿಗಿಯಿತು. ತಲೆಯು ಜಡವಾಯಿತು ಸಾಧ್ಯವಿಲ್ಲಾ ನೀನೇ ಹತ್ತಿರಕ್ಕೆ ಹೋಗಿ ನೋಡಿಕೋ. (ಕುಳಿತು ಬಿಡುವರು)

**ಲಕ್ಷ್ಮ :** ಏನು ಗೊತ್ತಾಗದು. ಈ ದೇಹಗಳು ರಾಜಪುರಷರವಾಗಿವೆ. ಸ್ವಾಮೀ, ದಯಮಾಡಿ ಬೇಗನೇ ಹೇಳಿ ಇದೇನು?

**ಗುರು :** ನಾಯಕಾ, ಜಗದೇವ ಬಾಯಮ್ಮರಿಂದ ಕೊಲ್ಲಿಸಲ್ಪಟ್ಟ ಅವು ಬಳಗ ಸಮೇತವನಾದ ಶ್ರೀರಂಗರಾಯನ ದೇಹವು.

ಲಕ್ಷ್ಮ : ಹಾಯ್ ವಿರೂಪಾಕ್ಷಾ (ಎಂದು ಬೀಳುವನು)

ಗುರು : ನಾಯಕಾ ತಾಳು ತಾಳು ಅಯ್ಯೋ ಇದೇನು ಪ್ರಮಾದವು!

**ಪದ – (ನಂ. ೨೩) ರಾಗ – ಜೋಗಿಕಾಲಂಗಡಾ ತಾಳ – ಧೂಮಾಳಿ**

॥ ಶ್ರೀರಮಣಾ ದಯಮಾಡೋ । ಈ ನರಶಾರ್ದೂಲನ ಕಾಪಾಡೋ ॥
॥ ಕರುಣದಿ ನೋಡೋ । ಕಲಿಮಲದಹನಾ ॥ ಪಲ್ಲ ॥ ಏನಾಯಿತು ಈ ಪರಿ ॥
॥ ಪ್ರಮಾದಾ । ಕರುಣದಿ ನೋಡೋ ಕಲಿಮಲದಹನಾ ॥ ೧ ॥

ಪರವಿಲ್ಲಾ ಶ್ವಾಸೋಚ್ಛ್ವಾಸವು ಪ್ರಾರಂಭವಾಯಿತು. ಇದೋ ಕಣ್ಣುಗಳನ್ನು ತೆರೆದಿದಿದ್ದಾನೆ, ಅವುಗಳಲ್ಲಿ ತಾರಕಾ ಪ್ರತಿಬಿಂಬವು ಕಾಣುತ್ತಲಿದೆ ಇನ್ನೂ ಉಪಚಾರಿಸುವಾ.

ಲಕ್ಷ್ಮ : (ವಿಭ್ರಮ) ಸ್ವಾಮೀ ತಮ್ಮ ಪಾದಸೇವಕನಾದ ನಾನು ಹೇಡಿಯಲ್ಲಾ. ಇದೋ ಈಗಲೇ ಈ ಜಗ್ಗನನ್ನು ತಮ್ಮೆದುರಿನಲ್ಲಿ ತಂದು, ಅವನ ರುಂಡವನ್ನು ಕತ್ತರಿಸಿ, ಅವನ ತಲೆ ಬುರಡಿಯಲ್ಲಿಯೇ ಅವನ ರಕ್ತವನ್ನು ಹಿಡಿದು ಗಟಗಟಾ ಕುಡಿದು ಮಾಡಿದ ಪ್ರತಿಜ್ಞೆಯನ್ನು ಪೂರ್ಣ ಮಾಡುವೆನು ಸ್ವಾಮೀ, ಶೋಕಿಸಬೇಡಿ. ನಾಳೆ ಬೇಕಾದರೆ ತಾವು ಸೂರ್ಯನಾರಾಯಣನ ಜತೆಯಲ್ಲಿ ಆತನ ರಥದಲ್ಲಿ ಕುಳಿತುಕೊಂಡು ಬಂದು ನೋಡಿ, ಶ್ರೀರಂಗರಾಯನು ಕರ್ನಾಟಕ ಸಿಂಹಾಸನದಲ್ಲಿ ವಿರಾಜಮಾನನಾಗಿರುವನೋ ಇಲ್ಲವೋ॥ಎಂಬುದನ್ನು!

ಗುರು : ನಾಯಕಾ, ಅಧಮಾಧಮ ಜಗದೇವರಾಯನ ಕ್ರೂರಶಾಸನಕ್ಕೆ ಆಹುತಿಯಾದ ಶ್ರೀರಂಗರಾಯನು ಭೂಲೋಕಕ್ಕೆ ಬರುವದೆಂತು?

ಲಕ್ಷ್ಮ : ಸಂಶಯವೇನು ಮಹಾಸ್ವಾಮೀ? ಗಿರಿದುರ್ಗದ ಕಾರಾಗೃಹದಲ್ಲಿರುವವರನ್ನು ಬರಮಾಡಿಕೊಳ್ಳುವದು? ಅಸಾಧ್ಯವಾದೀತೇ?

ಗುರು : ಅಯ್ಯೋ ವೀರಪುರುಷಾ, ಹೀಗೇನು ಹೇಳುವೆ? ಅದೋ ಪ್ರಾಣ ಹೋದ ಶ್ರೀರಂಗರಾಯನ ಮೃತ ದೇಹವು ಎದುರಿನಲ್ಲಿ ನೇತಾಡುವದು ನಿನಗೆ ಕಾಣುವದಿಲ್ಲವೋ?

ಲಕ್ಷ್ಮ : ಶ್ರೀರಂಗರಾಯನ ಮೃತ ದೇಹವು ! ಕರ್ನಾಟಕ ಸಿಂಹಾಸನದ ಪಟ್ಟಬಾಧ್ಯನ ಮೃತ ದೇಹವು ಅದೆಲ್ಲಿ?

ಗುರು : ಅದೋ ನೋಡು, ಆಗಲೇ ಹೇಳಿದೆನಲ್ಲವೇ ಬಾಯಮ್ಮ ಜಗ್ಗರ ದೌರ್ಜನ್ಯವನ್ನು!

ಲಕ್ಷ್ಮ : ಜಗ್ಗಾ ಶ್ರೀರಂಗರಾಯರ ಅಮಾನುಷ ಕೊಲೆಯನ್ನು ಮಾಡಿದ ಜಗ್ಗಾ, ನಿನ್ನನ್ನು ಬರೇ ನಖಗಳಿಂದ ಹರಿದು ಕರುಳುಗಳನ್ನು ತೆಗೆಯುವೆನು, ತಾಳು. (ಹೋಗಲುದ್ಯುಕ್ತ)

ಗುರು : ಹಾಂ ವೀರಾಗ್ರಣೀ ಸೈರಿಸು (ತಡೆಯುವ)

ಲಕ್ಷ್ಮ : ಸೈರಣೆಯು ಹಿಂದಾಯಿತು (ಖಡ್ಗ ಹಿರಿದು) ಇದೋ ಈ ಮಹಾಕಾಲಿಯು ಮುಂದಾಯಿತು. ಅ ಯಮನೆಯಲ್ಲಿ ಸೇರಿಕೊಂಡು ಆ ಜಗ್ಗನೆಂಬ ಗೂಬೆಯ ಮರಣವು ಬಂತು.

ಎಲೋ ಜಗ್ಗಾ, ನೋಡುವಾ ಈ ಕರ್ನಾಟಕ ಸಿಂಹಾಸನದ ಸೇವಕನ ಕೈಯಿಂದಾ ನಿನ್ನನ್ನಾರು ಉಳಿಸಿಕೊಳ್ಳುವರೋ ನೋಡುವಾ ಇದೋ ಬಂತು ನೋಡು ಶಿಡಿಲು, ಭುವನೇಶ್ವರಿಯ ಕೆಂಗಣ್ಣಿನಿಂದ ಹೊರಟ ಶಿಡಿಲೂ (ಹೋಗುವನು)

ಗುರು : ಅಹಹ ! ಕ್ರೋಧವಶನಾದ ಲಕ್ಷ್ಮಣನಾಯಕದು ಅವಿಚಾರದಿಂದ ತಾನಾಗಿಯೇ ಸಂಕಟಕ್ಕೆ ಗುರಿಯಾಗುತ್ತಿರುವನಲ್ಲಾ ! ಅವನನ್ನು ಹೇಗೆ ತಡೆಯಲೀ ಲಕ್ಷ್ಮಣನಾಯಕಾ ! ಓ ಲಕ್ಷ್ಮಣ ನಾಯಕಾ, (ಹೋಗುವರು)

ಕೊತವಾಲ : ನಿಜವಾಗಿಯೂ ಅವನು ಲಕ್ಷ್ಮಣನಾಯಕನು ಮತ್ತು ಅವರು ರಾಜಗುರುಗಳು. ಎರಡೂ ಹೆಚ್ಚಿನ ಘಾಟಗಳೇ ಅವರೀರ್ವರಲ್ಲಿ ಯಾರನ್ನೂ ಹಿಡಿಯಲಿಕ್ಕೆ ಸಾಧ್ಯವಿಲ್ಲಾ. ಆಗಲಿ ಜನ ಸಹಾಯವನ್ನಾದರೂ ತರಿಸಿಕೊಳ್ಳುವಾ (ಕೊಂಬು ಊದಿ) ಥೀ, ಥಿ, ಇದು ಮತ್ತೂ ಪ್ರಮಾದವು ಈ ಕೊಂಬಿನ ಸಂಕೇತದಿಂದ ಲಕ್ಷ್ಮಣ ನಾಯಕನು ಎಚ್ಚರಿಯುವನೋ ಏನೇ ಆದರೂ ಪ್ರಯತ್ನಪಟ್ಟು ಮುಂದೆ ಒಯ್ದು ನಿಲ್ಲಿದೆಸಿನೆಂದರೇ ಏನು ಹೇಳಲೀ! ಆದರೆ ಅದು ಹೇಗಾಗುವದು? ಅದಾರು ಮಿತ್ರರೋ ಶತ್ರುಗಳೋ? ಅದೊಂದು ಸ್ತ್ರೀವ್ಯಕ್ತಿಯಾಗಿದೆ. ಇಂತಹ ಕತ್ತಲಲ್ಲಿ ಸಾಲು ಸಾಲಾಗಿ ಹೆಣಗಳು ನೇತಾಡುವ ಈ ಸ್ಮಶಾನ ಭೂಮಿಯಲ್ಲಿ ಬರುವದು ಮಾನವನ ಧೈರ್ಯವೇ? ಇದು ಪಿಶಾಚಿಯಾಗಿರಲಿಕ್ಕೇ ಸಾಕು ಸ್ವಲ್ಪ ಸಮಯ ಎಚ್ಚರದಿಂದಿರುವಾ.

ಸಂಜಿ : (ಬರುತ್ತ ನಿಶ್ಚಯವಾಗಿಯೂ ಅವರು ಲಕ್ಷ್ಮಣನಾಯಕರು) (ತಗ್ಗ ಸ್ವರದಿಂದ) ಸ್ವಾಮೀ ಲಕ್ಷ್ಮಣನಾಯಕರೇ?

| | |
|---|---|
| **ಕೊತ :** | ಇವಳು ಮಹಾರಾಣಿಯವರ ದಾಶಿಯಾದ ಸಂಜೀವಿಯು ಏನು ಲಕ್ಷ್ಮಣನಾಯಕರ ಕಡೆಗೆ ನಡೆದಿರುವಳೆ! ಇದೇನೋ ಗೂಢವಿದೆ ಹೇಗಾದರೂ ರೂಪಾಂತರವನ್ನು ಮಾಡಿದ್ದೇನೆ. ಗೂಢವನ್ನು ಪ್ರಕಾಶ ಪಡಿಸಲಿಕ್ಕೆ ಸ್ವಲ್ಪ ಸಮಯ ಲಕ್ಷ್ಮಣನಾಯಕನಂತೆ ನಟಿಸುವಾ ಯಾರದು ಸಂಜೀವಿ? |
| **ಸಂಜಿ :** | ಅಹುದು ಸ್ವಾಮೀ ನಾನು ಸಂಜೀವಿಯು |
| **ಕೊತ :** | ವಿಶೇಷವೇನು ಬೇಗ ಹೇಳು? |
| **ಸಂಜಿ :** | ಮಹಾಸ್ವಾಮೀ, ತಾವು ಇಲ್ಲಿ ನಿಲ್ಲಬೇಡಿ. ಯಾಕೆಂದರೆ ಇಲ್ಲಿ ಯ್ಯಾರ್‍ಯಾರು ಬಂದು ಏನೇನ ಮಾಡುವರೆಂಬುದನ್ನು ನೋಡವದಕ್ಕಾಗಿಯೂ ಸಂಶಯಂಬದಲ್ಲಿ ತಕ್ಷಣವೇ ಹಿಡಿಯುವದಕ್ಕಾಗಿ ಈಗಾಗಲೇ ಕೊತವಾಲರಿಗೆ ರಾಜಾಜ್ಞೆಯಾಗಿದೆ ಕಾರಣ ಈ ಸ್ಥಳವನ್ನು ಬಿಡುವದೇ ವಿಹಿತವಾದೀತಲ್ಲವೇ? ಅದರಲ್ಲಿ ತಮ್ಮನ್ನು ಹಿಡಿದುಕೊಟ್ಟವರಿಗಂತೂ ಅನೇಕ ಜಾಹಗೀರುಗಳನ್ನು ಕೊಡುವೆವೆಂದು ಆಶೆ ಹಚ್ಚಿದ್ದಾರೆ ಪ್ರಯುಕ್ತ ತಾವು ಇಲ್ಲಿ ನಿಲ್ಲಬೇಡಿ. |
| **ಕೊತ :** | ಹೂ ನನಗಿದರ ಭಯವಿಲ್ಲಾ. |
| **ಸಂಜಿ :** | ಹಾಗೆಂದರೇನು ಮಹಾಸ್ವಾಮೀ? ಈ ಕರ್ನಾಟಕ ಸಿಂಹಾಸನದಸೋಜ್ವಲ ಅಭಿಮಾನಿಗಳೆಂದರೆ ತಾವೊಬ್ಬರೇ, ತಾವು ಸಹ ಜಗದೇವನ ಕುಟಿಲ ತಂತ್ರಕ್ಕೆ ತುತ್ತಾದರೆ ಕೊನೆಯವರೆಗೂ ಆ ಅಗಸರ ಕರುವೇ ಸಿಂಹಾಸನದಲ್ಲಿ ಮೆರೆದೀತಲ್ಲವೇ? |
| **ಕೊತ :** | ಅಗಸರ ಕರೂ? ಕರ್ನಾಟಕ ಸಿಂಹಾಸನದಲ್ಲಿ ಕುಳಿತುರವದು ಅಗಸರ ಕರೂ? |
| **ಸಂಜಿ :** | ಆಲೋಚಿಸುತ್ತ ಹೆಚ್ಚು ಸಮಯ ನಿಲ್ಲುವದು ಸಹ ಕೇವಲ ಘಾತಕವು |
| **ಕೊತ :** | ಇನ್ನೂ ಹೆಚ್ಚಿನ ಪರಿಷ್ಕಾರವು ಬೇಕು! (ಸ್ವಗತ) |
| **ಸಂಜಿ :** | ಮಹಾಸ್ವಾಮೀ ನಗರದತ್ತ ದೂರದಲ್ಲೇನೋ ಸದ್ದಾಗುತ್ತದೆ ಅಲ್ಲದೇ ಅಸ್ಪಷ್ಟವಾಗಿ ಕುದುರೆಗಳ ಖರ ಪುಟನಾದವು ಸಹ ಕೇಳಬರುತ್ತಲಿದೆ ಅಲ್ಲದೇ ಆಗಲೇ ಯಾರೋ ಸ್ವಲ್ಪು ಕೊಂಬಿನ ಸಂಕೇತ ಮಾಡಿದರು ಇವೆಲ್ಲಾ ಸದ್ಯದಲ್ಲಿಯೇ ಉಂಟಾಗಬಹುದಾದ ಮೋಸದ ಚಿನ್ಹೆಗಳಲ್ಲವೇ |

ಕೊತ : ಉಂ, ಅವುಗಳಿಂದೇನಾಗುವದು?

ಸಂಜಿ : ಅದು ನಿಜ ಆದರೆ ಮಹಾಸ್ವಾಮಿ ಸಮರಾಂಗಣದಲ್ಲಿ ಗಂಡುಗಲಿಗಳಾದ ತಾವು ಮೋಸಗಾರರ ಮೋಸಕ್ಕೆ ತುತ್ತಾದರೆ ಶ್ರೀಮದ್ ವೆಂಕಟಪ್ಪರಾಯರ ಆಸೆಯನ್ನು ಹೇಗೆ ಪೂರ್ಣ ಮಾಡುವಿರಿ? ಅಗಸರ ಪಿಳ್ಳೆಯನ್ನು ತಮ್ಮದಾಗಿ ಮಾಡಿಕೊಂಡು ಪತಿಯನ್ನು ವಂಚಿಸಿ, ಕೊನೆಗೆ ಅದಕ್ಕೆ ಪಟ್ಟಗಟ್ಟಿ, ಸಾಲದ್ದಕ್ಕೆ ಸಕಲ ರಾಜಮನೆತನದವರನ್ನು ನೇಣು ಹಾಕಿಸಿ ಕೊಲ್ಲಿಸಿದ ಪಿಶಾಚಿಗಳು ಏನು ಮಾಡುವದಕ್ಕೂ ಹೆಸವು ಅಯ್ಯೋ ! ಆ ಜನಸ್ತೊಮವು ಬಂದೇ ಬಿಟ್ಟಿತು. ಮಹಾಸ್ವಾಮೀ, ನಿಮ್ಮ ಕಾಲುಗಳನ್ನು ಹಿಡಿಯುವೆನು ದಯಮಾಡಿ ತೆರೆಯಾಗಿ.

ಕೊತ : ಅಗಸರ ಕರೂ? ಕರ್ನಾಟಕ ಸಿಂಹಾಸನದಲ್ಲಿ ಕುಳಿತುರವದು ಅಗಸರ ಕರೂ.

ಸಂಜಿ : ಮಹಾಸ್ವಾಮೀ, ಆ ಅಗಸರ ಮಗುವಿನ ಗುಟ್ಟನ್ನು ರಟ್ಟಾಗಿ ಮಾಡಿದವರು. ನೀವೇ. ಹೀಗಿರಲು ಈ ವಿಷಯದಲ್ಲಿ ಇನ್ನೂ ಸಂದೇಹವೇ? ಅಯ್ಯೋ ಆ ಜನಸ್ತೋಮವು ಬಂದೇಬಿಟ್ಟಿತು (ದಂಡಾಳುಗಳು ಬರುವರು) ಹಾಂ ನಿಲ್ಲಿ! ಮುಂದೆ ಒಂದು ಹೆಜ್ಜೆಯನ್ನಿಟ್ಟರೆ. ಖಂಡಿತವಾಗಿ ಪ್ರಾಣಕ್ಕೆರಗಾಗುವಿರಿ, ನೋಡುವೆ, ಯಾವ ವೀರನು ಯಚ್ಚಮನಾಯಕರ ಮೇಲೆ ಕೈಮಾಡುವವನು ಆದಾವನು ಸಮರ್ಥನಿದ್ದಾನೋ, ನೋಡುವೆ.

ದಂಡಾಳು : ಅಮ್ಮಾ, ನೀನಾರನ್ನು ಸಂರಕ್ಷಿಸುವೀ ಎನ್ನುವದನ್ನು ಸ್ವಲ್ಪ ಹಿಂತಿರುಗಿ ನೋಡು.

ಸಂಜಿ : ಅಹಹ ! ಇವರು ನಮ್ಮ ನಗರ ರಕ್ಷಕರಾದ ತಿಮ್ಮನಾಯಕರು. ನನ್ನ ಅಂತರಂಗವನ್ನು ತಿಳಿಯುವದಕ್ಕಾಗಿ ಯಚ್ಚಮನಾಯಕರಂತೆ ನಟಿಸಿ ಮೋಸ ಮಾಡಿದರಲ್ಲವೇ !

ಕೊತ : (ಹೆ ಹೆ ಹೆ ಮುಗುಳು ನಗೆ ನಗುವನು)

ಸಂಜಿ : ಹಾಸ್ಯವನ್ನೇನು ಮಾಡುವಿರಿ? ನಿಮ್ಮ ಹಾಸ್ಯವು ಸ್ಮಶಾನದ ಪಿಶಾಚಿಗಳದಾಗಿದೆ ರಜಕನ ಸೇವೆಯನ್ನು ಮಾಡುವ ನಿಮ್ಮಂಥ

ನಿರ್ಲಜ್ಜ ಕ್ಷತ್ರಿಯರ ಮುಖಗಳಿನ್ನಾದರೂ ನೋಡಬಹುದೆ?

**ಲಕ್ಷ್ಮ :** ಎಲ್ಲಿರುವನು ಆ ಜಗ್ಗಾ? ಯಾರೂ! ತಿಮ್ಮನಾಯಕ? ಥೂಷ ನಿಮ್ಮ ಮುಖಗಳಿಗೆ ಬೆಂಕಿ ಹಾಕಾ ನೀವೇಂಥಾ ಕ್ಷತ್ರಿಯರೋ ಪವಿತ್ರವಾದ ಕರ್ನಾಟಕ ಸಿಂಹಾಸನದಲ್ಲಿ ರಜಕನನ್ನು ತಂದುಕುಳ್ಳಿರಿ! ಅದಕ್ಕೆ ಶಿರಬಾಗುವಿರಾ? ಥೂ! ನಿರ್ಲಜ್ಜರೇ ಮೇಲೆ ನೋಡಿ! ವೀರ ಸ್ವರ್ಗವನ್ನು ಪಡೆದ ನಿಮ್ಮ ಪಿತೃಗಳನ್ನು! ದೇವದೂತರು ಹೇಗೆ ನರಕದಲ್ಲಿ ತಳ್ಳುತ್ತಿರುವರು. ಭಾವೀ ನರಕದ ಯಾತನೆಗಳನ್ನು ನೆನೆನೆನೆದು ಭೋರಾಡಿ ಅಳುವ ಅವರ ಹೃದಯವಿದಾರಕರವಾದ ರೋದನ ಧ್ವನಿಯನ್ನು ಕೇಳಿ,

**ಕೊತ :** (ಮೊಳಕಾಲೂರಿ) ಸ್ವಾಮೀ ಲಕ್ಷ್ಮಣನಾಯಕರೇ? ತಮ್ಮ ಮಾತುಗಳನ್ನು ಕೇಳಿ ಬಹಳ ಸಂದೇಹಕ್ಕೊಳಗಾದೆವು. ದಯಮಾಡಿ ಸ್ವಹೆಚ್ಚು ಪರಿಷ್ಕಾರವನ್ನು ಮಾಡಿಲ್ಪುಟ್ಟಿದ್ದೇನೆ, ಒಳತಾಗುತ್ತಿತ್ತು.

**ಕರಿಯ :** ಇಲ್ಲಿದೇ ನೋಡೀ ಹೆಚ್ಚಿನ ಪರಿಷ್ಕಾರಾ (ರಜಕದಂಪತಿಗಳನ್ನು ತಂದು ನಿಲ್ಲಿಸುವನು)

**ಲಕ್ಷ್ಮ :** ಸೈ! ಸೈ ಕರಿಯಾ ಜಟ್ಟೀ ಸಕಾಲಕ್ಕೆ ಬಂದೆ.

**ಗುರು :** ನಿಮ್ಮ ಸಲುವಾಗಿ ಭಯದಿಂದ ರಾಜಧಾನಿಯ ಕಡೆಗೆ ನಡೆದವರನ್ನು ಇತ್ತ ಕರೆದುಕೊಂಡು ಬಂದೆವು.

**ಕೊತ :** ಏನಯ್ಯಾ ಇವೆಲ್ಲಾ ಗಲಭೆ! ಅಲ್ಲದೇ ಇತ್ತ ನೋಡಿ, ಮಹಾರಾಜರು ಸ್ತ್ರೀ ಭೂಮಿಕೆಯಲ್ಲಿ ಬಂದಿದ್ದಾರೆ.

**ಗುರು :** ಅವರು ಸ್ತ್ರೀಭೂಮಿಕೆಯನ್ನು ಧರಿಸಿದ ನಿಮ್ಮ ಮಹಾರಾಜರಲ್ಲಾ ಅವರ ಮಾತೋಶ್ರೀಗಳು.

**ಮಡಿವಾಳಿ:** ಅಹುದು ಬುದ್ಧೀ ಇವ ನನ್ನ ಮಗಾ ಅವಳು ನನ್ನ ಸೊಸಿ ಈಗ ಪಟ್ಟದಮ್ಯಾಗಿರೋ ಚಿಕ್ಕರಾಯಾ ನನ್ನ ಮೊಮ್ಮಗಾ ಬುದ್ಧೀ.

**ಕೊತ :** ಚೋರಾ, ನೀನು ನಿನ್ನ ಮೊಮ್ಮಗನನ್ನು ಪಟ್ಟದ ಮೇಲೆ ಕುಳ್ಳಿರುವಂತೆ ಮಾಡಿ ಕರ್ನಾಟಕ ಸಿಂಹಾಸವನ್ನು ಭ್ರಷ್ಟಮಾಡಿಸುವದಲ್ಲದೆ ಸಕಲ ವೀರನಾಯಕರ ಅಪಮಾನ ಮಾಡಿದಿಯಾ? ನಿಮ್ಮನು ಸಾಲು

ಸಾಲಾಗಿ ತರಿದು ಬಿಡುವದೇ ಯೋಗ್ಯವು.

**ಲಕ್ಷ್ಮ :** ತಿಮ್ಮನಾಯಕನೇ? ಉತ್ತೇಜಿತನಾಗಬೇಡಾ ಇವರೆಲ್ಲರೂ ನಿರಪರಾಧಿಗಳು ಆ ಅರಮನೆಯಲ್ಲಿ ಸೇರಿಕೊಂಡ ಬಾಯಮ್ಮ, ಜಗದೇವರಾಯರೇ ಸರ್ವಾಪರಾಧಿಗಳು

**ಸಂಜಿ :** ಬುದ್ಧಿ. ನನಗೀಗಲೇ ಅರಮನೆಗೆ ಹೋಗುವದಕ್ಕಾಗಿ ಅಪ್ಪಣೆಯಾಗಲಿ.

**ಲಕ್ಷ್ಮ :** ಅದು ನಿಜ. ತೀವ್ರ ನಡೆ ಅಲ್ಲಿಯ ಸಮಾಚಾರವನ್ನು ತಿಳಿದುಕೊಂಡು ಬಾ.

**ಕೊತ :** ನಾಯಕರೇ. ಇವರು ನಿರಪರಾಧಿಗಳು ಹೇಗೆ? ತನ್ನ ಮೊಮ್ಮಗನನ್ನು ಪಟ್ಟವೇರಗೊಟ್ಟಾ ಈ ಮುದಿಚೋರನು ನಿರಪರಾಧಿಯೆ? ಮಗನಿಂದ ಕರ್ನಾಟಕ ಸಿಂಹಾಸನದಪಮಾನವನ್ನು ಮಾಡಿಸಿದ ಈ ಕೀಳ ರಂಜಕ ದಂಪತಿಗಳು ನಿರಪರಾಧಿಗಳೇ? ಮರಣ ದಂಡನಗೆ ಯೋಗ್ಯರಾದವರು ನಿರಪರಾಧಿಗಳೇ? ಏಲೋ ನೋಡುವಿರೇನು ಕಟ್ಟಿ ಮುಸುಕೆಯನ್ನು!

**ಕರಿ :** ಬುದ್ಧಿ ಪಟ್ಟದಮ್ಮಾಗಿರೋದು ತನ್ನ ಮೊಮ್ಮಗಾ ಎಂಬೋ ಸುದ್ದಿ ಈ ಮಡಿವಾಳಿಗೆ ಗೊತ್ತಾಗಿ ನಾಲ್ಕಾರು ದಿವಸ ಆಯಿತು.

**ಲಕ್ಷ್ಮ :** ಇವೆಲ್ಲ ಸಂಗತಿಗಳ ಪರಿಷ್ಕಾರವು ಆಮೇಲಾಗುವದು ಮೊದಲು ಆ ಸರ್ವಾಪರಾಧಿಗಳಾದ ಜಗದೇವ, ಬಾಯಮ್ಮರನ್ನು ನಿರ್ಬಂಧಿಸುವ ನಡೆಯಿರಿ.

**ಕೂತ :** ರಾಜದ್ರೋಹಿಗಳನ್ನು ಹಿಡಿದು ದಂಡಿಸುವಂತೆ ಒಂದು ಮುದ್ರಿಕೆಯನ್ನು ಹಾಕಿದ ಶಾಸನವನ್ನು ಅವರು ನನ್ನ ಹೆಸರಿನಲ್ಲಿ ಅನಾಯಸವಾಗಿ ಕಳಿಸಿದ್ದಾರೆ ಅದನ್ನು ಅವರ ಸಲುವಾಗಿ ಉಪಯೋಗಿಸದರಾಯಿತು.

**ಲಕ್ಷ್ಮ :** ಹಾಗಾದರೆ ಅರಮನೆಗೆ ಮುತ್ತಿಗೆಯನ್ನು ಹಾಕಿರಿ. ಶ್ರೀಗುರುಗಳು ಮತ್ತ ನಾನು ಪಟ್ಟಣವನ್ನೆಲ್ಲ ತಿರುಗಾಡಿ ಸಕಲ ವೀರನಾಯಕರನ್ನು ಈ ವಿಷಯದಲ್ಲಿ ಎಚ್ಚರಿಸುವೆವು. ಬಾಯಮ್ಮ ಜಗ್ಗರ ಮೇಲೆ ಬಲವಾದ ಕಾವಲವಿರಲಿ. ಕರಿಯಾ? ಈ ಅಗಸ ದಂಪತಿಗಳನ್ನು ಶ್ರೀರಾಮರಾಜದೇವ ಮಹಾರಾಜರಿಗೆ ಪಟ್ಟಾಭಿಷೇಕವಾಗುವ ತನಕ ಕಾಯುವ ಭಾರವು ನಿನ್ನದು.

ಕೂತ : ಶ್ರೀರಾಮರಾಜರು! ಶ್ರೀರಂಗರಾಯರ ಕುಮಾರರೇ?

ಲಕ್ಷ್ಮ : ಅಹುದು.

ಗುರು : ಶ್ರೀರಂಗರಾಯರು ಕಾರಾಗ್ರಹದಲ್ಲಿರುವಾಗಲೇ ಅವರು ಕಳೆದು ಹೋದರೆಂಬ ವಾರ್ತೆಯಿತ್ತಲ್ಲವೇ?

ಲಕ್ಷ್ಮ : ಅವರೇನು ಕಳೆದು ಹೋಗಿಲ್ಲ ಬುದ್ಧೀ! ನಾನೇ ಅವರನ್ನು ಗುಪ್ತವಾಗಿ ಕರೆದೊಯ್ದು, ತಂಜಾವರದರಸನಾದ ರಘುಪತಿರಾಜನ ಸ್ವಾಧೀನದಲ್ಲಿರಿಸಿದ್ದೇನೆ.

ಲಕ್ಷ್ಮ : ಬಹು ದಿವ್ಯ ಭುವನೇಶ್ವರಿಯ ಅನುಗ್ರಹದಿಂದ ಒಂದಾದರೂ ರಾಜತೇಜಾ ಉಳಿದಿದೆ.

ಸಂಜಿ : ದೇವರು ಘಾತವಾಯ್ತು! ಘಾತವಾಯ್ತು! ತಾವು ಗುಪ್ತವಾಗಿ ಇಲ್ಲಿಗೆ ಬಂದಿರುವದು ಮತ್ತು ಕೊತವಾಲರೂ ರಾಜಗುರುಗಳೂ ತಮ್ಮನ್ನು ಸೇರಿಕೊಂಡಿರುವದು ಈಗಾಗಲೇ ಆ ಜಗದೇವರಾಯನಿಗೆ ತಿಳಿದುಬಿಟ್ಟಿದೆ. ಅವನು ಹಲವು ಸೈನ್ಯದೊಂದಿಗೆ ತಮ್ಮನ್ನು ಹಿಡಿಯುವದಕ್ಕಾಗಿ ಹೊರಟ್ಟಿದ್ದಾನೆ ಪ್ರಯುಕ್ತ ಈ ಸ್ಥಳವನ್ನು ಬಿಡುವದೇ ವಿಹಿತವಾಗಲಿಕ್ಕಿಲ್ಲವೇ?

ಗುರು : ಅದೋ, ಏನೋ ಗಲಭೆಯು ಕೇಳಿಸುತ್ತಲಿದೆ.

ಕೂತ : ನಾಯಕರೇ, ನಾವು ಸ್ವಲ್ಪ ಜನಗಳು ! ಅವರನ್ನು ಎದುರಿಸುವದು ಯುಕ್ತಿ, ಯುಕ್ತವಲ್ಲಾ. ತೀವ್ರ ಇಲ್ಲಿಂದ ಹೋಗಿಬಿಡುವಾ ನಡೆಯಿರಿ.

ಸಂಜಿ : ಮಹಸ್ವಾಮೀ ಅದೊ ನಾಲ್ಕೂ ದಿಕ್ಕುಗಳಲ್ಲಿಯೂ ಪಂಜುಗಳು ಕಾಣಿಸುತ್ತಲಿವೆ. ಅವರೇನು ಸೈನಿಕರೋ ಅಥವಾ ಸ್ಮಶಾನದ ಕೊಳ್ಳಿಯ ದೆವ್ವಗಳೋ?

ಲಕ್ಷ್ಮ : ಕ್ರೂರ ಕರ್ಮಿಯಾದ ಜಗ್ಗನಿಗೆ ಯಾವನೋ ಮನೆ ಮುರುಕನು ನಮ್ಮ ವರ್ತಮಾನವನ್ನು ತಿಳಿಸಿದ್ದಾನೆ. ಅಂತೇ ಅವನು ಆಕಸ್ಮಾತ ನಮ್ಮನ್ನು ಮುತ್ತಿದನು.

ಗುರು : ಹಾಗಾದರೆ ಮುಂದಿನ ವಿಚಾರವೇನು?

ಲಕ್ಷ್ಮ : ಕಲಿತನದಿಂದ ಕಾದುವ ವಿಚಾರವು ಮತ್ತೇನು?

ಕೂತ : ಅದರಿಂದ ಪ್ರಯೋಜನವಾದೀತೆ?

ಲಕ್ಷ್ಮ : ಇದು ಪ್ರಯೋಜನಗಳನ್ನು ನಿರ್ಣಯಿಸುವ ಸಮಯವೇ. ನಾವು ಬದುಕಿರುವಾಗಲೇ ಆ ನರಪಿಶಾಚಿಯು ವಶವಾಗುವದು, ಯೋಗ್ಯವೇ? ರಾಜ ಪುರುಷರನ್ನು ಸಾಲುಸಾಲಾಗಿ ಶೂಲಕ್ಕೇರಿಸಿದ ಆ ಚಾಂಡಾಲನು ಚಿತ್ರ ಹಿಂಸೆಯಿಂದ ನಮ್ಮ ಪ್ರಾಣಗಳನ್ನು ಕೊಲ್ಲದೇ ಇರುವನೇ? ಹಾಗೆ ಪ್ರಾಣವನ್ನು ಬಿಡುವದಕ್ಕಿಂತಲೂ ವೀರನಾಯಕರೆ (ಖಡ್ಗ ಹಿರಿದು) ಈ ಮಹಾಕಾಲಿಯಿಂದ ಪ್ರಳಯ ಕಾಲದ ನೃತ್ಯವನ್ನು ಮಾಡಿಸಿ, ಕರ್ನಾಟಕ ಸಿಂಹಾಸನದ ಕೊನೆಯ ಸೇವೆಯನ್ನು ಮಾಡುವಾ. ನಾವು ಸ್ವಲ್ಪ ಜನಗಳೆಂಬ ಸಂಸಯವು ಬೇಡಾ! ಭುವನೇಶ್ವರಿಯು ನಮ್ಮನ್ನು ಸಂರಕ್ಷಿಸುವದಕ್ಕಾಗಿ ಅದೋ ಹೇಗೆ ಅಭಯ ಹಸ್ತವನ್ನೆತ್ತಿ ನಿಂತಿದ್ದಾಳೆ. ಬ್ರಹ್ಮಾಂಡವನ್ನು ಅರಗಳಿಗೆಯಲ್ಲಿ ಸುಟ್ಟು ಸೂರೆ ಮಾಡಿ ಬಿಡುವ ವೀರಗಣವು ಹೇಗೆ ಬೆಂಬಲವಾಗಿ ನಿಂತಿದೆ. ಅದೋ ಅತ್ತ ನೋಡಿ! ಮಹಾರಾಜಾಧಿರಾಜ ಶ್ರೀಕೃಷ್ಣ ದೇವರಾಜರಿಂದಿರುವ ಪರಮಪೂಜ್ಯ ಶ್ರೀವಿದ್ಯಾರಣ್ಯ ಮಹಾಸ್ವಾಮಿಗಳವರು. ಪಾಪೀ ಜನಗಳ ಬಲವನ್ನು ಬಗ್ಗು ಬಡಿಯುವದಕ್ಕಾಗಿ ಪುಣ್ಯ ಪುರುಷರ ಕೆಂಗಣ್ಣುಗಳಿಂದ ಹೇಗೆ ಯೋಗಜ್ವಾಲೆಯು ಹೊರ ಹೊರಡುತ್ತಿದೆ. ಇಷ್ಟೆಲ್ಲ ಸಹಾಯವಿದ್ದ ಬಳಿಕ ನಮಗೇತರ ಭಯ? ಅದೋ ಕುರಿಗಳ ಹಿಂಡು ಬಂದಿತು. ಕರ್ನಾಟಕ ವೀರಸಿಂಹಗಳೇ! ನಿಮಿಷಾರ್ಥದಲ್ಲಿ ಸಕಲರನ್ನೂ ರಣದೇವಿಗೆ ಬಲಿಗೊಡುವಾ ಬನ್ನಿ (ಖಡ್ಗ ಹಿಡಿದು ಹೋಗುವನು. ಸಕಲರೂ ಖಡ್ಗ ತಿರುವುತ್ತ ಹೋಗುವರು)

ಗುರು : ಜೈ ವಾಸುದೇವಾ, ಎಂದು ಅಂತರೀಕ್ಷಕ್ಕೆ ನಿಂತು (ಶತ್ರುಪಕ್ಷಕ್ಕೆ) ವೀರರೇ, ಖಡ್ಗಗಳನ್ನು ಒರೆಗಾಣಿಸಿರಿ. ಚಿಕ್ಕರಾಯನು ಅರಸನಲ್ಲಾ ಅಗಸನು. ಬಟ್ಟೆಗಳನ್ನೊಗೆಯುವ ಅಗಸನು.

ಸೈನಿಕರು : ಚಿಕ್ಕರಾಯನು ಅಗಸನೇ?

ಗುರು : ಅಹುದು ಅಗಸನು.

ಸೈನಿಕರು : ಅದು ಹೇಗೆ?

ಜಗ : ಕಡಿದು ಹಾಕಿ. ಯುದ್ಧ ಮಾಡದೇ ನಿಂತಿರುವ ಈ ಸೈನಿಕರು ಸಹ ಮೋಸಗಾರರೇ, ಇವರನ್ನು ಕೂಡಾ ಕಡಿದು ಹಾಕಿ (ಹೊಡೆದಾಟ)

ಗುರು : ಪಾಪೀ ಜಗದೇವಾ ಏತಕ್ಕೆ ವೃಥಾ ಹೆಣಗಾಡುವೇ! ಬಿಡು ಬಿಡು ನಿನ್ನ ಕ್ರೂರ ಕರ್ಮಗಳೆಲ್ಲವೂ ಪ್ರಕಾಶಕ್ಕೆ ಬಂದಿವೆ. ವೀರ ಕನ್ನಡನಾಯಕರೇ ವಿಚಾರಮಾಡದೇ ಅಧರ್ಮಯುದ್ಧವನ್ನು ಮಾಡುವಿರಾ? (ಒಳಗೆ ರಣಕಹಳೆ ಶಬ್ಧ)

ಲಕ್ಷ್ಮ : ವೀರರೆ, ನಾವು ಸಾಯುವದು ಸಿದ್ಧ. ಬದುಕಿರುವಾಗಲೇ ಆ ಚಂಡಾಲ ಜಗ್ಗನಿಂದಾ ಕೊಲ್ಲಿಸಲ್ಪಟ್ಟ ಅಧೋಗತಿಗೆ ಹೋಗುವದಕ್ಕಿಂತಲೂ ಸತ್ಯದ ಸಲುವಾಗಿ ಹೋರಾಡಿ ಧಾರಾತೀರ್ಥದಲ್ಲಿ ಈ ಜಡದೇಹವನ್ನು ಬಿಟ್ಟು ವೀರಸ್ವರ್ಗವನ್ನು ಸೇರುವಾ, ತರಿಸು ತರಿಸು ಎಲೋ ಕುಲಗೇಡಿ ಜಗ್ಗಾ ! ಇನ್ನೂ ಲಕ್ಷಾವಧೀ ಸೈನ್ಯವನ್ನು ನಮ್ಮ ಮೇಲೆ ಯೋಚಿಸುವದಕ್ಕಾಗಿ ತರಿಸು ! ಇದೊಂದು ಭುವನೇಶ್ವರಿಯ ನಾಟಕವು ರಣರಂಗವೇ ರಂಗಸ್ಥಾನವು ನಾವೆಲ್ಲರೂ ವೇಷಧಾರಿಗಳು. ಧರಿಸಿದ ವೇಷಕ್ಕೆ ತಕ್ಕಂತೆ ನಟನೆಯನ್ನು ಮಾಡದಿದ್ದರೆ ಆ ಜಗತ್ ಸೂತ್ರಧಾರಣಿಯು ಮೆಚ್ಚುವದು ಹೇಗೆ? ಮಾತೇ? ನೋಡು ನೋಡು ನೀನು ವಹಿಸಿಕೊಟ್ಟ ಈ ಯಚ್ಚಮನ ಭೂಮಿಕೆಯನ್ನು ಹೇಗೆ ಯಚ್ಚರದಪ್ಪಿ ನಟಿಸುವೆನು. ನೋಡು ಜೈ ಬುವನೇಶ್ವರೀ (ಖಡ್ಗ ಹಿರಿದು ಯುದ್ಧ)

ಗುರು: ಸೇನಾಪತಿಗಳೇ? ನಿಮ್ಮಂಥ ವೀರಕ್ಷತ್ರಿಯರು ಅಧರ್ಮ ಯುದ್ಧವನ್ನಾಡುವಿರಾ?

ಸೇನಾ : ಗುರುಗಳೇ? ಇದು ಅಧರ್ಮ ಯುದ್ಧವಲ್ಲ, ಧರ್ಮಯುದ್ಧವು.

ಗುರು : ಪಿಶಾಚಿಯಾದ ಜಗದೇವನ ಅಪೇಕ್ಷೆಯಂತೆ ಕುಣಿದಾಡುವ ನಿಮ್ಮನ್ನು ಧರ್ಮವು ಎಂದೋ ಬಿಟ್ಟು ಹೋಗಿದೆ ಕರ್ನಾಟಕ ಸಿಂಹಾಸನದಲ್ಲಿ ಅಗಸರ ಪೋರನು ಸ್ಥಿರವಾಗಿ ಕುಳಿತಿರಲೆಂದು ನೀವಿಷ್ಟು ಸಾಹಸ ಪಡುವಿರಾ?

ಸೇನಾ : ಸಿಂಹಾಸನದಲ್ಲಿರುವವರು ಶ್ರೀಮದ್ ವೆಂಕಟಪತಿರಾಯರ ಮಕ್ಕಳಾದ ಚಿಕ್ಕರಾಯರಲ್ಲವೇ!

ಗುರು : ಅಲ್ಲವಯ್ಯಾ ಅದು ಅಗಸರ ಮಗು! ಮೊದಲು ಯುದ್ಧವನ್ನು ನಿಲ್ಲಿಸಿ! ಆಮೇಲೆ ಅದರ ಪರಿಷ್ಕಾರವನ್ನು ಮಾಡುವೆನು ನಿಲ್ಲಿಸಿ ಯುದ್ದವನ್ನು.

ಸೇನಾ : ಎಲೋ, ಯುದ್ಧವನ್ನು ನಿಲ್ಲಿಸುವುದಕ್ಕೆ ಕಹಳೆಯ ಸಂಕೇತವನ್ನು ಮಾಡು (ಕಹಳೇ ಊದುವವನು) ಅದೋ ನೋಡಿ ಯುದ್ಧವು ನಿಂತಿತು.

ಗುರು : ನಡಿಯಿರಿ. ಮೊದಲು ಲಕ್ಷ್ಮಣನಾಯಕನನ್ನು ಕರೆಯುವಾ.

ಜಗ : ಏತಕ್ಕೆ ಯುದ್ಧವು ನಿಲ್ಲಿಸಲ್ಪಟ್ಟಿತು? ಸೈನಿಕರೇ ಯುದ್ಧವನ್ನು ನಿಲ್ಲಿಸಿದ್ದೇಕೆ? ಆ ಯಚ್ಚಮನಾಯಕನ ರುಂಡವನ್ನು ಚಂಡಾಡುವ ತನಕ ಯುದ್ಧವನ್ನು ನಿಲ್ಲಿಸಲಾಗದು.

ಸೇನಾ : ಹಾಂ! ಜಗದೇವರಾಯರೇ ತಾಳಿ, ಹಾಗೆ ನಾನು ಅಪ್ಪಣೆ ಕೊಟ್ಟಿದ್ದೇನೆ.

ಜಗ : ಯಾರ ಆಜ್ಞೆಯಿಂದಾ?

ಸೇನಾ : ಧರ್ಮಾಜ್ಞೆಯಿಂದಾ.

ಜಗ : ಯಾವ ಧರ್ಮಾ?

ಸೇನಾ : ರಾಜಧರ್ಮಾ.

ಗುರು : ಅಯ್ಯಾ ಜಗದೇವರಾಯಾ?

ಜಗ : ಓಹೋ! ಈ ಮುದಿಹದ್ದಿನ ಹೇಳಿಕೆಯಿಂದಾ ನೀವು ನನ್ನ ಅಪ್ಪಣೆಯನ್ನು ಮೀರುವಿರಾ?

ಸೇನಾ : ರಾಜಗುರುಗಳ ಅಪಮಾನವನ್ನು ಮಾಡಬೇಡಿ, ಅವರ ಹೇಳಿಕೆಯು ಸುಳ್ಳಾದರೆ ಅದೇಕ್ಷಣವೇ ಬೇಕಾದ ಶಾಸನವನ್ನು ವಿಧಿಸಬಹುದು.

ಜಗ : ನೀವೆಲ್ಲರೂ ಮೋಸಗಾರರು.

ಯಚ್ಚ : ಇರಬಹುದು. ಆದರೆ ನಿನ್ನಷ್ಟಾಗಲಿಕ್ಕಿಲ್ಲ.

ಜಗ : ಸುಮ್ಮನಿರು ರಾಜದ್ರೋಹೀ

ಯಚ್ಚ : ನಾನು ರಾಜದ್ರೋಹಿಯಲ್ಲಾ ನಿನ್ನಂಥಾ ರಾಜದ್ರೋಹಿಯ ದ್ರೋಹಿಯಾಗಿದ್ದೇನೆ.

ಜಗ : ಏನು ನಾನು ರಾಜದ್ರೋಹೀಯೇ?

**ಗುರು :** ಇನ್ನು ಮೇಲೆ ತಾನಾಗಿಯೇ ಅದರ ಪರಿಷ್ಕಾರವಾಗುವದು. ಸೇನಾಪತಿಗಳಾದ ವೆಂಕಟಾದ್ರಿಗಳೇ ತಿಮ್ಮನಾಯಕನ ಮತ್ತು ಯಚ್ಚಮನಾಯಕರೇ, ಈ ಜಗದೇವರಾಯನು ಪ್ರಾರಂಭಿಸಿದ ನಾಟಕದ ಕೊನೆಯಂಕಿನಲ್ಲಿ ನಾವು ನಟರಾಗಿದ್ದೇವೆ ನಮ್ಮಿಂದಲೇ ಅದು ಪೂರ್ಣವಾಗತಕ್ಕದ್ದಿದೆ.

**ಜಗ :** ನಿಮ್ಮೆಲ್ಲರದೀ ಔನ್ಮನವು ಜೊತೆಯಲ್ಲಿ ನಡೆದಿರುವದು ಅದನ್ನೇನಾದರೂ ಬಲ್ಲಿರೋ?

**ಯಚ್ಚ :** ಸದ್ಯಕ್ಕೆ ಕರ್ನಾಟಕ ಸಿಂಹಾಸನದಲ್ಲಿ ಕುಳ್ಳಿರಿಸಿದ ನಾಮಧಾರೀ ರಾಜನ ಪ್ರತಿನಿಧಿಯಾದ ಜಗದೇವನು ಗೂಢ!

**ಜಗ :** ಲಕ್ಷ್ಮಣನಾಯಕಾ, ನೀನು ಸಣ್ಣ ಬಾಯಿಂದಾ ದೊಡ್ಡ ತುತ್ತು ನುಂಗುತ್ತಿರುವೆ. ನಿಮ್ಮಂಥಾ ರಾಜದ್ರೋಹಿಗಳ ಪರಿಣಾಮವೇನಾಗುವದೋ ಅದೋ ಅತ್ತ ನೋಡಿಕೋ! (ಶೂಲದ ಹೆಣಗಳನ್ನು ತೋರಿಸುವನು)

**ಯಚ್ಚ :** ಸುಮ್ಮನಿರು ಪಿಶಾಚಾ ! (ಖಡ್ಗ ಹಿರಿದು ಒರೆಗಾಣಿಸಿ) ಬೇಡಾ, ಪವಿತ್ರವಾದ ಕರ್ನಾಟಕ ಸಿಂಹಾಸನದ ಸೇವೆಯನ್ನು ಕೈಕೊಂಡ ಈ ಖಡ್ಗಕ್ಕೆ ಕುಲಗೇಡಿಯಾದ ನಿನ್ನ ಸ್ಪರ್ಶದಿಂದ ಅಪವಿತ್ರ ಮಾಡುವದು ಬೇಡಾ! ನಿನ್ನಂಥ ನರಾಧಮನನ್ನು ಸುಣ್ಣದ ಭಟ್ಟಿಯಲ್ಲಿ ಹಾಕಿಸುಡಿಸಬೇಕು! ನರಿನಾಯಿಗಳಿಂದ ಹರಿಬಡಿಸಬೇಕು ಇಲ್ಲವೇ

**ಜಗ :** ಮನಬಲ್ಲಂತೆ ಹರಟುವದು ನಿನಗೆ ದೇಹಾಂತ ಪ್ರಾಯಶ್ಚಿತ್ತವೇ ಯೋಗ್ಯವಾದದ್ದು (ಹೊಡೆಯಲಿಕ್ಕೆ ಹೋಗುವನು ತಿಮ್ಮ ನಾಯಕನು ಹಿಡಿಯುವನು) ಯಾರು ಕೊತವಾಲನೆ! ತಿಮ್ಮನಾಯಕನೆ? ಯಃಕಶ್ಚಿತನಾದ ನೀನು ನನ್ನ ಕೈಯನ್ನು ಹಿಡಿಯುವಿಯಾ?

**ಲಕ್ಷ್ಮ :** ಬಿಡಯ್ಯಾ ಬಿಡೋ ನೋಡುವಾ. ಇವನೆಂಥ ಯೋಧ ? ಪುರುಷನಿದ್ದಾನೆ ! ರಣ ಹೇಡಿಯೇ ಒಗೆ ಖಡ್ಗವನ್ನು ! ನೀನಾ ಪಾಪಿಯ ಸ್ಪರ್ಶದಿಂದ ಅದಕ್ಕೆ ಮೈಲಿಗೆಯಾಗಿ ಬಿಟ್ಟಿದೆ.

**ಜಗ :** ರಾಜದ್ರೋಹಿಗಳಾದ ನೀವೆಲ್ಲರೂ ಯಾವದೋ ಒಂದು ದುರಾಲೋಚನೆಯಿಂದ ಸಿಂಹಾಸನಕ್ಕೆ ಹಾನಿ ತಟ್ಟಿಸುವ

ಆಲೋಚನೆಯನ್ನು ಮಾಡುವಿರಾ? ಆಗಲಿ, ನೋಡಿಕೊಳ್ಳುವಾ ದೇವರಿದ್ದಾನೆ (ಹೋಗಲುದ್ಯುಕ್ತ)

ಲಕ್ಷ್ಮ : ನಿಲ್ಲು ಹೋಗುವುದೆಲ್ಲಿ? ರಾಜ ಪುರುಷರ ಕೊಲೆ ಮತ್ತು ಕರ್ನಾಟಕ ಸಿಂಹಾಸನದಪಮಾನಾ ಇವುಗಳ ಪ್ರಾಯತವನ್ನು ಭೋಗಿಸದೇ ಹೋಗುವದೆಲ್ಲಿ?

ಜಗ : (ಸ್ವಗತ) ಚಿಕ್ಕರಾಯನ ವೃತ್ತಾಂತವು ಈತನಿಗೆ ಗೊತ್ತಾಗಿರುವದೋ ಏನೋ!

ಸೇನಾ : ಅಹುದು ಜಗದೇವರಾಯರೆ ಈ ಪ್ರಕರಣದ ಪರಿಸಮಾಪ್ತಿಯಾಗುವತನಕ ನಾವು ಲಕ್ಷ್ಮಣನಾಯಕರು ವಿಶೇಷವೇನು, ಕ್ಷಮೆಯಿರಲಿ. ರಾಜರುಗಳೂ ಸಹ ರಾಜ ಕೈದಿಗಳಾಗಿ ನಿರ್ಬಂಧದಲ್ಲಿರಬೇಕು.

ಜಗ : ಅವರನ್ನು ನಿರ್ಭಂಧಿಸಬಹುದು ನಾನು ಅನಿರ್ಭಂಧನು.

ತಿಮ್ಮ : ರಾಜದ್ರೋಹಿಗಳನ್ನು ನಿರ್ಬಂಧಿಸುವದಕ್ಕೆ ಅಪ್ಪಣೆಯಿದೆ.

ಜಗ : ಯಾರಿಂದಾ

ತಿಮ್ಮ : ಸಿಂಹಾಸನದಿಂದ ಇದೋ ನೋಡಿ (ತೋರಿಸುವನು)

ಜಗ : ಅದನ್ನು ನಾನೇ ಬರೆದು ರಾಜಮುದ್ರಿಕೆಯನ್ನಿಕ್ಕಿ ಕೊಟ್ಟಿದ್ದೇನೆ.

ಸೇನಾ : ಅದು ರಾಜದ್ರೋಹಿ ರಾಜ ಪ್ರತಿನಿಧಿಗಳಿಗೆ ಸಹ ಅನ್ವಯಯಿಸುವದು.

ಗುರು : ಸೇನಾಪತಿಗಳೇ ತಡಮಾಡವದೇಕೆ? ಮುಂದಿನ ಕಾರ್ಯಕ್ರಮಗಳು ತೀವ್ರವಾಗಿ ಜರುಗಲಿ.

ಸೇನಾ : ಹೂಂ! ಸಕಲರೂ ನಡಿಯಿರಿ ಅರಮನೆಯ ಕಡೆಗೆ. ತಿಮ್ಮನಾಯಕರೇ, ನೀವು ಮಹಾರಾಣೀ ನಿವಾಸಕ್ಕೆ ಭದ್ರವಾದ ಕಾವಲವನ್ನಿರಿಸಿ, ಈ ಪ್ರಕಣದಲ್ಲಿ ಶ್ರೀಮತಿ ಬಾಯಮ್ಮರಾಣಿಯವರು ಮುಖ್ಯ ಪ್ರತಿವಾದಿಗಳಾಗಿದ್ದಾರೆ ಹೂಂ ಸಕಲರೂ ನಡೆಯಿರಿ.

ಜಗ್ಗ : ಆಗಲಿ, ಎಷ್ಟೆಷ್ಟು ಅಪಮಾನವನ್ನು ಮಾಡುವಿರೋ ಮಾಡಿರಿ.

ಲಕ್ಷ್ಮಿ : ಮಾಡುವದೇನು ಜಗದೇವರಾಯರೇ ! ಬಂದದ್ದೆಲ್ಲಾ ಬರಲಿ ಗೋವಿಂದನ ದಯವೊಂದಿರಲಿ.

(ದೂಡಿಕೊಂಡು ಸಕಲರೂ ಹೋಗುವರು)

ಚತುರ್ಥಾಂಕ ಸಮಾಪ್ತಿ!

===***====***===

## ೫ನೇ ಅಂಕು.

(ಬಾಯಮ್ಮನು ಮಂದಿರ ಮಹಡಿಯ ಮೇಲೆ ಎದ್ದು ಬಂದು ನೋಡಿ)

**ಬಾಯಮ್ಮ :** ಹೀಗೆ ಮಂದಿರದ ಸುತ್ತಲೂ ಈ ಅಪರಾತ್ರಿಯಲ್ಲಿ ಹೆಚ್ಚಾದ ಕಾವಲವು ಯಾರಿಂದ ಇಡಲ್ಪಟ್ಟಿತು ಸಂಜೀವಿ; ಎಲೇ ಸಂಜೀವಿ.

**ಸಂಜಿ :** ಬಂದೆ ಬಂದೆ ಅಮ್ಮನವರೇ, ಇಂದೇಕೊ ನಿದ್ರೆ ಹತ್ತಲಿಲ್ಲಾ ಅಷ್ಟರಲ್ಲಿಯೇ ಅಮ್ಮನವರ ಕರಿಯೋಣವಾಯಿತು, ಓಡಿ ಬಂದೆ.

**ಬಾಯಮ್ಮ :** ತೀವ್ರ ಕೆಳಗೆ ಹೋಗಿ ಈ ಅಪರಾತ್ರಿಯಲ್ಲಿ ನನ್ನ ಮಂದಿರಕ್ಕೆ ಹೆಚ್ಚಾದ ಕಾವಲವೇಕೆ ಬಂತೂ ಮತ್ತು ಯಾರಿಂದ ಬಂತು? ತಿಳಿದುಕೊಂಡುಬಾ ಹೋಗು (ಹೋಗುವಳು) ಲಕ್ಷ್ಮಣನಾಯಕನು ಗುಪ್ತವಾಗಿ ಬಂದಿರುವನೆಂಬ ಸಂಗತಿಯನ್ನು ಕೇಳಿ ಅವನನ್ನು ಹಿಡಿಯುವದಕ್ಕಾಗಿ ಹೋದ ಅಪ್ಪನ ವರ್ತಮಾನವೂ ಗೊತ್ತಾಗಲಿಲ್ಲವಲ್ಲಾ! ಏನಾದರೂ ವಿಪರೀತವಾಗಿರಬಹುದೇನು? ಆ ಕಾಲ ಪುರುಷರಾದ ಲಕ್ಷ್ಮಣನಾಯಕನು ನಮ್ಮ ಪಾಲಿಗೆ ಶನೇಶ್ವರನಾಗಿದ್ದಾನೆ ಏನು ಸಂಜೀವಿ?

**ಸಂಜಿ :** ಅಮ್ಮನವರೇ? ಅದೇನೋ ಮೋಸವಿದೆ. ಅದು ತಮ್ಮ ಸಲುವಾಗಿ ಸೇನಾಪತಿಗಳಿಂದ ಕಾವುಲವಂತೆ.

**ಬಾಯ :** ಕಾರಣ?

**ಸಂಜಿ :** ಅದನ್ನೇ ತಿಳಿದುಕೊಂಡು ಬರುವದಕ್ಕಾಗಿ ಹೋಗ ಬೇಕೆಂದಾಲೋಚಿಸಿದೆನು, ಆದರೆ ಆ ಕಾವಲುಗಾರರು ನನ್ನನು ಹೊರಗೆ ಹೋಗಗೊಡಲಿಲ್ಲಾ.

**ಬಾಯ :** ತೀವ್ರ ಚಿಕ್ಕಂಯ್ಯನನ್ನು ಎಚ್ಚರಿಸಿಕೊಂಡು ಬಾ ಹೋಗು (ಹೋಗುವಳು) ಇದೇನೋ ವಿಪರೀತ ಸಮಯವಿದೆ. ಅಪ್ಪನು ಚಿಕ್ಕರಾಯನ ವಿಷಾಯಕವಾಗಿ ಮಾಡಿದ ತಂತ್ರಗಳೆಲ್ಲವೂ, ಪ್ರಕಾಶಕ್ಕೆ ಬಂದವೋ ಏನೋ! ಛೀ, ಹಾಗೇನೂ ಆಗಿರಲಿಕ್ಕಿಲ್ಲ ಆಗೂಢವು

ನನಗೆ ಕೂಡಾ ಗೊತ್ತಾಗಿಲ್ಲಾ ಹೀಗಿರಲು ಪ್ರಕಾಶಕ್ಕೆ ಬರುವದು. ಹೇಗೆ?

**ಚಿಕ್ಕ :** (ಬರುತ್ತ) ಹುಚ್ಚಮಂಡೆ ಅಮ್ಮಾ!

**ಬಾಯ :** ಹುಚ್ಚು ಮುಂಡೆ ಅಮ್ಮಾ! ಏನು ಮಗು ಚಿಕ್ಕಯ್ಯಾ?

**ಚಿಕ್ಕ :** ಈ ಹುಚ್ಚಮುಂಡೆ ಸಂಜೀವಿ ನನ್ನನ್ನು ನಿದ್ರೆ ಮಾಡಗೊಡವಲ್ಲಳು

**ಬಾಯ :** ನಾನೇ ಎಚ್ಚರಿಸುವದಕ್ಕಾಗಿ ಹೇಳಿದ್ದೇನೆ, ತೀವ್ರ ಹೀಗೆ ಬಾ!

**ಚಿಕ್ಕ :** ಏನು ಕಾಟವಪ್ಪಾ! (ಬಂದು) ಏನದು?

**ಬಾಯ :** ಇದೇ ಅರಮನೆಯ ಸುತ್ತಲೂ ಅಕಸ್ಮಾತ್ತಾಗಿ ರಾತ್ರಿಯಲ್ಲಿ ಹೆಚ್ಚಾದ ಕಾವಲವೇಕೆ ಬಂದಿದೆ. ವಿಚಾರಿಸು?

**ಚಿಕ್ಕ :** ಜಗ್ಗಜ್ಜಾ ಹುಚ್ಚನಾಯಿ,

**ಬಾಯ :** ಜಗ್ಗಜ್ಜ ಹುಚ್ಚನಾಯಿ.

**ಚಿಕ್ಕ :** ಅಹುದು ಜಗ್ಗಜ್ಜಾ ಹುಚ್ಚನಾಯಿ ಕಾಟಾ ಊರಲ್ಲಿ ಹೆಚ್ಚಾಗಿದೆ. ಅವು ಅರಮನೆಯಲ್ಲಿ ನುಗ್ಗಿ ನನ್ನನ್ನೂ ನಿನ್ನನ್ನೂ ಆ ಸಂಜೀವಿಯನ್ನೂ ಕಚ್ಚಾವೆಂದು ಹೀಗೆ ಕಾವಲವನ್ನಿಡಿಸಿದ್ದಾನೆ ಏಕೆ ಸಂಜೀವೀ? ಹೂಂ ಅನ್ನು

**ಸಂಜಿ :** ಛೀ, ಹಾಗೇನಿರಲಿಕ್ಕಿಲ್ಲ.

**ಚಿಕ್ಕ :** ಮಹಾರಾಜರೇ ಅನ್ನುವದನ್ನು ಬಿಟ್ಟಳು ನೋಡಮ್ಮಾ

**ಸಂಜಿ :** ತಪ್ಪಾಯಿತು ಮಹಾರಾಜರೇ ಹಾಗೇನಿರಲಿಕ್ಕಿಲ್ಲಾ.

**ಬಾಯ :** ಚಿಕ್ಕಯ್ಯಾ? ಕಾವಲುಗಾರರನ್ನಾದರೂ ವಿಚಾರಿಸೋ?

**ಚಿಕ್ಕ :** ಎಲೋ ಕಾವಲುಗಾರರೇ?

**ಬಾಯ :** ಇದೇನು ಚಿಕ್ಕಯ್ಯಾ ಇಲ್ಲಿಂದಾ ಕೇಳಿದರೆ ಅವರಿಗೆ ಹೇಗೆ ಕೇಳಿಸೀತೋ! ಕಿಡಕಿಯೊಳಗಿಂದ ಮೋರೆಯನ್ನು ಹೊರಚಾಚಿ ಕೇಳು ನಡೆ

**ಚಿಕ್ಕ :** ಒಲ್ಲಮ್ಮಾ ಹೊರಗೆ ಕಗ್ಗನೆ ಕತ್ತಲೆಯಾಗಿ ಬಿಟ್ಟಿದೆ ದೆವ್ವ ಬಂದ್ರ?

**ಸಂಜಿ :** ಜತೆಯಲ್ಲಿ ನಾನು ಬರುವೆನು ಮಹಾರಾಜರೇ

ಚಿಕ್ಕ : ನೀನು ಬೇಡಾ, ಮೋಸಗಾರ್ತಿ ಕಳ್ಳಿ ಅಮ್ಮಾ ನೀನು ನಡೆ.

ಬಾಯ : ಆಗಲಿ ನಡೆ ತೀವ್ರ, ಕೇಳು ಏತಕ್ಕೆ ಹೀಗೆ ಕಾವಲಾ?

ಚಿಕ್ಕ : (ಕಿಡಿಕಿಯ ಹತ್ತಿರ ಹೋಗಿ) ಅಮ್ಮಾ ಏನೆಂದು ಕೇಳಲಿ?

ಬಾಯ : ಎಲೋ ಯಾರಪ್ಪಣೆಯಿಂದ ಹೆಚ್ಚಾದ ಕಾವಲಾ ಎಂದು ವಿಚಾರಿಸು?

ಚಿಕ್ಕ : ಎಲೋ ಯಾರಪ್ಪಣೆಯಿಂದ ಹೆಚ್ಚಾದ ಕಾವಲಾ ಎಂದು ವಿಚಾರಿಸು?

ದುರ್ಗಾ : ಜ್ಯಾಹುಕುಮ್ ಹುಜೂರ್?

ಚಿಕ್ಕ : ಅಮ್ಮಾ ದುರ್ಗಾಸಿಂಗಾ! ಅಮ್ಮಾ ಇವನು ರಾಕ್ಷಸನು, ಇವನ ಜನತೆಯಲ್ಲಿ ಮಾತುಗಳನ್ನಾಡಲಿಕ್ಕೆ ಹೆದರಿಕೆಯಾಗುತ್ತದೆ.

ಸಂಜಿ : ದುರ್ಗಾಸಿಂಗರೇ ಯಾರಪ್ಪಣೆಯಿಂದಾ ಈ ಹೆಚ್ಚಾದ ಪಹರೇ ಇಟ್ಟಿರುವಿರೆಂದು ಮಹಾರಾಜರು ಕೇಳುತ್ತಾರೆ.

ದುರ್ಗಾ : ಹವಮಾರೇ ಆಪ್ಸರ್ ಸೇನಾಪತಿ ಸಾಹೇಬ್ ಕೇ ಹುಕುಮ್ಸೇ

ಬಾಯ : ಅದೇಕೆ?

ದುರ್ಗಾ : ಓ ಹಮ್ ನಹೀ ಜಾನತೆ ಹುಜೂರ್.

ಬಾಯ : ಏನು ಮಹಾರಾಜರ ಅಪ್ಪಣೆಯನ್ನು ಅಮಾನ್ಯ ಮಾಡುವಿಯಾ ನಿನ್ನ ಕಣ್ಣುಗಳನ್ನು ಕೀಳಿಸಿ ಬಿಟ್ಟಿನು.

ದುರ್ಗಾ : ಗರ್ದನ್ ಕೆಂವ್ ನಹೀ ವುಡಾತೇ! ಮಗರ್ ಪಹರೇ ಪರ್ಸೆ ನಹೀ ಹಿಲನೇಕೆ !

ಸಂಜಿ : ಅರಮನೆಯ ಜನಗಳೇನು ಕೈದಿಗಳೊ?

ದುರ್ಗಾ : ಹಾಂ ! ವೈಸಾ ಸುನನೇಮೇ ಆಗಯಾ ಹುಜೂರ್.

ಬಾಯ : ಇದೇನೋ, ಆ ಪಾಪಿಯಾದ ಲಕ್ಷ್ಮಣನಾಯಕನ ಮೋಸವಾಗಿದೆ. ಬಲ್ಲವಿಲ್ಲದ ಕಾಲದಲ್ಲಿ ನೆಲವೆದ್ದು ಬಡಿಯುವಂತೆ ಈ ಅಧಿಮ ಸೇವಕರು ಉತ್ತರಿಸುತ್ತಾರೆ, ಏ ದುರ್ಗಾಸಿಂಗಾ, ನೀನು ರಾಜಸೇವಕನೋ? ಅಥವಾ ಸೇನಾಪತಿಯ ಸೇವಕನೋ?

ದುರ್ಗಾ : ಶರಕಾರ್ರಮಾಫ್ ಕೀ ಜೆಯೇಗಾ. ಮೈಫಿಲ್ ಹಾಲ್ ಹಮಾರೇ ಅಪ್ಸರ್ ಕೆ ಹುಕುಂಕಾನೌಕರ್ ಹೂಂ ಓ ದೇಖಿಯೇಗಾ ಸೇನಾಪತಿ

ಸಾಹೇಬ್ ಖುದ್ದ್ ಅರಹೇ ಹೈಂ ಉಬ್ದೀಸೇದರಿಯಾಪ್ತ ಕೀ ದೆಯೇಗಾ

ಸೇನಾ : ದುರ್ಗಾಸಿಂಗರೇ, ಬೆಳಗಾಗಲಿಕ್ಕೆ ಸ್ವಲ್ಪು ಸಮಯ ಉಳಿದಿದೆ. ಮುಂಜಾವಿನ ತಂಗಾಳಿಯಿಂದ ತೂಕಡಿಕೆ ಬರತಕ್ಕ ಸಂದರ್ಭ ಹೆಚ್ಚು ಆದಕಾರಣ ಕಾವಲು ಮೇಲಿರುವ ಸಕಲ ದಂಡಾಳು ಎಚ್ಚರಿಕೆಯಿಂದಿರುವದಕ್ಕೆ ಹೇಳಿ.

ದುರ್ಗಾ : ಸರ್ಕಾರ್, ನಿಗಾತೋ ಫರ್ಮಾವೇ! ಸಬ್ ಸಿಫಾಯಿಯಾ ಬಿಲ್ಕುಲ್ ಪತ್ಥರಕ್ಕೆ ಪುತಲಿಯಾಂ ಜೈಷೆ ಖಡೇ ಹೈಂ!

ಸೇನಾ : ಸ್ವಲ್ಪಾದರೂ ಕಣ್ಣು ಮುಚ್ಚಬಾರದು.

ದುರ್ಗಾ : ಆಪ್ಮೊಂಕೀ ಬಾತ್ ದೂರ್ ರಹಗಯೀ ಸಾಸಭೀನಹೀಲೇ ನೆಕೆ ಸಾಂಸ,

ಸೇನಾ : ನೀವಾದರೂ ಆಗಾಗ್ಗೆ ಅರಮನೆಯನ್ನು ಸುತ್ತುತಿರ್ರಿ.

ದುರ್ಗಾ : ಬೇ ಫಿಕರ್ ರಹಜಾಯಿಯೇ, ಘಾನ್ಕೆ ಖುಲ್ಲಗೇಸೇಭೀ ಭಢಕರ್ ಚಕ್ಕರ್ ಲಗಾತಾಹೂಂ.

ಬಾಯ : ಸೇನಾಪತಿಗಳೇ ಇದೇನು ಹುಡುಗಾಟವು ಅರಮನೆಗೆ ಹೆಚ್ಚಾದ ಕಾವಲವೀನು ಕಾರಣ?

ಸೇನಾ : ಅಮ್ಮಾಜಿಯವರೇ, ಅಂತಹ ಪ್ರಸಂಗವೇ ಬಂದದ್ದಕ್ಕೆ ಉಪಾಯವಿಲ್ಲವಾಗಿದೆ.

ಬಾಯ : ಈಗಿಂದೀಗಲೇ ಈ ಕಾವಲನ್ನು ತೆಗೆಸಿರಿ.

ಸೇನಾ : ಹಾಗೆ ಮಾಡಲಿಕ್ಕೆ ಬರುವಂತಿಲ್ಲಾ. ಬೆಳಗಾದ ಮೇಲೆ ಇದು ಪರಿಷ್ಕಾರವಾಗುವದು.

ಬಾಯ : ಚಿಕ್ಕಯ್ಯಾ? ಸೇನಾಪತಿಗಳಿಗೆ ಈಗಿಂದೀಗಲೇ ಕಾವಲನ್ನು ತೆಗೆಸುವದಕ್ಕೆ ಆಜ್ಞಾಪಿಸು.

ಸೇನಾ : ಮಹಾಸ್ವಾಮೀ, ತಾವು ಹಾಗೆ ಅಪ್ಪಣೆಯನ್ನು ಕೊಡಬಾರದು.

ಚಿಕ್ಕ : ನೋಡೋ ಅಪ್ಪಣೆಯನ್ನು ಕೊಡಬಾರದೆಂದು ಹೇಳುವನು.

ಬಾಯ : ಅದೇನಿಲ್ಲಾ ಅಪ್ಪಣೆಯನ್ನು ಬೇಗನೇ ಕೊಡು (ನಾಯಿಗಳು ಬೊಗಳುವವು)

ಚಿಕ್ಕ : ಅದೋ ಅಮ್ಮಾ, ಹುಚ್ಚುನಾಯಿಗಳು ಬಂದವು. ಏ ಸೇನಾಪತೀ, ಹುಚ್ಚುನಾಯಿಗಳು ಬಂದವು. ಕಾವಲನ್ನು ತೆಗಿಸಬೇಡಾ ಜಗ್ಗನನ್ನೂ ಕಾವಲಲ್ಲಿರಿಸು. ಒಬ್ಬತಾನನ್ನು ಹೊರಗೆ ಬಿಡಬೇಡಾ.

ಬಾಯ : ಛೀ! ಏನಿದಸಂಬದ್ಧ ಹೇಳಿಕೆ ಸೇನಾಪತಿಗಳೇ ನೀವು ಕಾವಲವನ್ನು ತೆಗೆಸದಿದ್ದರೆ ಮುಂದಾಗತಕ್ಕ ಉತ್ಪಾದಕದ ಹೊಣೆಗಾರರು ನೀವೇ.

ಸೇನಾ : ಮಹಾರಾಜರಪ್ಪಣೆಯಾದ ಬಳಿಕೆ ಕಾವಲನ್ನು ತೆಗೆಸುವದುಂಟೆ?

ಜಗ್ಗಜ್ಜ : ಮಹಾರಾಜರೇ ತಮ್ಮ ಅಜ್ಜನವರನ್ನು ಸಹ ಭದ್ರವಾದ ಕಾವಲಲ್ಲಿರಿಸಿದ್ದೇನೆ, ಆಗಲಿ ಬರುವೆನು.

ಚಿಕ್ಕಾ : ಏ, ಸೇನಾಪತಿ ಮುಜುರಾಮಾಡದೆ ಹಾಗೇ ಹೊರಟೆಲ್ಲಾ ಕತ್ತಿ ಹಿರಿದು ಮುಜುರಾಮಾಡೋ?

ಸೇನಾ : ಇದೋ (ಕತ್ತಿಯನ್ನು ಹಿರಿದು) ಕರ್ನಾಟಕ ಸಿಂಹಾಸನಕ್ಕೆ ಖಡ್ಗವನ್ನು ತೆಗೆದು ಮುಜುರಾ ಮಾಡುವನು ಅಮ್ಮಾಬೆಯವರೆ ತಮ್ಮ ಮನವನ್ನು ನೋಯಿಸಬಾರದೆಂದು ಆ ದಾಸಿಯಾದ ಸಂಜೀವಿಯೊಬ್ಬಳಿಗೆ ಬರಹೋಗಲಪ್ಪಣೆಯನ್ನು ಕೊಟ್ಟಿದ್ದೇನೆ. ಏ ದುರ್ಗಾಸಿಂಗಾ ಆ ದಾಸಿಯಾದ ಸಂಜೀವಿಯನ್ನು ತಡೆಯಬೇಡಾ.

ದುರ್ಗಾ : ಹುಜುರು ವಹಲೌಂಡಿ ರಗಾದೇಗಿ

ಸೇನಾ : ಬೇಕಾದದ್ದು ಮಾಡಲಿ, ಅವಳಿಗೆ ನಿರ್ಬಂಧವಿಲ್ಲಾ ನಾನು ಬರುವೆನು

ಬಾಯ : ಸಂಜೀವಿ ? ಹಾಗಾದರೆ ತೀವ್ರ ಅಪ್ಪನೆಲ್ಲಿದ್ದಾನೆ. ಬೇಗನೇ ಕರೆದುಕೊಂಡು ಬಾ. (ಹೋಗುವಳು) ದೇವಾ ವಿರುಪಾಕ್ಷಾ, ಈಗಾವ ಸಂಕಟವು ಬಂದಿರುವದೆವ ಅದನ್ನು ನಿವಾರಿಸಿದರೆ ನಿನಗೆ ಕೋಟಿ ಬಿಲ್ಪ ಪೂಜೆಯನ್ನು ಮಾಡಿಸುವೆನು.

ಸಂಜೆ : (ಹೋಗುತ್ತಾ) ಈಗ್ಗೆ ಅಮ್ಮನವರಿಗೆ ವೀರುಪಾಕ್ಷದೇವನು ನೆನಪಾದನು (ಹೋಗುವಳು)

ಬಾಯ : ಚಿಕ್ಕಯ್ಯಾ! ಮಲಗು ಹೋಗು

**ನಂ. ೨೪ ರಾಗ – ಭೈರವಿ ತಾಳ – ಆರ್ದತ್ರಿವಟ**

ಪದ ॥ ಈಶಾಕರುಣೆಸೋ । ಜಗದೀಶಾಕರುಣೆಸೊ । ಅಶುಭವೆಲ್ಲವನಿವನೀನಿ ॥
ನಿವಾರಿಸೊ ॥ಪಲ್ಲ॥ ಭೋವಾಸವಾದಿ । ಸುರವರಸನ್ನುತ । ದೇವ ॥
ದೇವ ಕರುಣಾಲವಾಲನೇ । ಭಾಜಾತಿತ್ವರಿತದಲಿ ಧಾವಿಸೋ ॥೧॥

ಪ್ರವೇಶ (ರಸ್ತಾ ಹನುಮನ ಪ್ರವೇಶಿಸುತ್ತಾನೆ)

ಹನು : ಇದೇನಾಶ್ಚರ್ಯ! ನಮ್ಮೊಡೆಯರಾದ ಯಚ್ಚಮನಾಯಕರ ಅಪ್ಪಣೆಯ ಮೇರೆಗೆ ಕಾರಾಗ್ರಹದಲ್ಲಿಡಲ್ಪಟ್ಟ ಶ್ರೀರಂಗರಾಯರನ್ನು ಬಿಡಿಸಿಕೊಂಡು ಬರಬೇಕೆಂದು ನೆಲಮಾರ್ಗವನ್ನು ಮಾಡಿ ಅವರನ್ನು ಕರಕೊಂಡು ಬರುವಷ್ಟರಲ್ಲಿ ಗುಟ್ಟು ರಟ್ಟಾಯಿತು. ಜಗದೇವರಾಯನ ಜನಗಳು ನೆಲಮಾರ್ಗದಲ್ಲಿಯೇ ನಮ್ಮನ್ನು ತಡೆದರು. ಶ್ರೀರಂಗರಾಯರನ್ನು ಹೊರಗೆ ಕಳಿಸಿ ನಾನವರಸ್ಥಾನಿದಲ್ಲುಳಿದೆನು. ಆದರೆ ಆ ರಾಜಪುರುಷರು ನಮ್ಮನ್ನು ಬಿಡಿಸಿಕೊಂಡು ಹೋಗಬೇಕೆಂದು ಜಗದೇವರಾಯನ ಜನಗಳ ಜೊತೆಯಲ್ಲಿ ಕಲಿತನದಿಂದ ಕಾದಿದರು. ನಾವೇನೋ ಮುಕ್ತರಾದೆವು ಆದರೆ ಅವರು ಮಾತ್ರ ಸಿಕ್ಕುಬಿಟ್ಟರು. ನನ್ನ ಕೆಲ ಜತೆಗಾರರು ಹೋರಾಟದಲ್ಲಿ ಹತರಾದರು. ನಾನೀವರ್ತಮಾನವನ್ನಾ ಒಡೆಯರಿಗೆ ತಿಳಿಸಬೇಕೆಂದು ತಂಜಾವರಕ್ಕೆ ಹೊರಟೆನು ಆದರೆ ಈ ಸಂಗತಿಯು ಮೊದಲೇ ಗೊತ್ತಾಗಿದೆಯನ್ನುವಂತೆ ತಂಜಾವರದರಸನಾದ ರಘುಪತಿ ರಾಜನೊಡನೇ ನಮ್ಮ ಭಾವಿ ಮಹಾರಾಜರಾದ ಶ್ರೀರಾಮರಾಜರು ಹೊರಟುಬಿಟ್ಟಿದ್ದಾರೆ. ಅವರು ನಮ್ಮೊಡೆಯರಾದ ಯಚ್ಚಮನಾಯಕರನ್ನು ಹುಡಿಕಿಕೊಂಡು ಬರುವದಕ್ಕಾಗಿ ನನ್ನನ್ನು ಕಳಿಸಿದರೇನೋ ನಿಜಾ ಆದರೆ ಈಗ್ಗೆ ಅವರೆಲ್ಲಿರಬಹುದು. ಈ ರಾಜಧಾನಿಯಲ್ಲಿ ಪ್ರಕಾಶವಾಗಿ ಶೋಧಿಸುದಂತೂ ಕೇವಲ ಘಾಂಕವು! ಹೇಗೆ ಮಾಡಲಿ ಅದೇನು? ಅರಮನೆಯ ಸುತ್ತಲೂ ಬೇಲಿಯನ್ನು ಹೆಚ್ಚಿದಂತೆ ದಟ್ಟವಾಗಿ ನಿಂತು ಕಾವಲು ಮಾಡುತ್ತಾರೆ. ಇದೇನೋ ಹೊಸದಾಗಿದೆ ಅರಮನೆಯ ಜನಗಳನ್ನು ಹೊರಗೆ ಬಿಡಬಾರದೆಂದೋ? ಅಥವಾ ವೈರಿಗಳಿಂದ ಅರಮನೆಯ ಜನರಿಗೆ ಮೋಸವಾಗ ಬಾರದೆಂದೋ? ಅಥವಾ ವೈರಿಗಳಿಂದ ಅರಸರಿಗೆ ಮೋಸವಾಗಬಾರದೆಂದೋ!

ಸೇನಾ : (ಬೆನ್ನು ಹಿಂದೆ) ಇವನಾರು? ಬಹು ಹೊಂಚುಹಾಕಿ ಅರಮನೆಯನ್ನು ನೋಡುತ್ತಲಿದ್ದಾನೆ!ಜಗದೇವರಾಯನ ಗುಪ್ತಚಾರನಾಗಿರಬಹುದೇನು ನೋಡುವಾ. (ಅವನ ಹಿಂದೆ ಅವಿತುಕೊಳ್ಳುವಾ)

ಹನು : ಈ ಕಾವಲುಗಾರರಿಗೆ ತೋರಿಸಿಕೊಂಡ ನಮ್ಮೊಡೆಯನನ್ನು ಶೋಧ

ಮಾಡಲೇ (ಮುಂದೆಹೋಗಿ) ಇದು ತರವಲ್ಲಾ ಅವರು ಜಗದೇವರಾಯನ ಜನಗಳಿದ್ದರೆ ತಕ್ಷಣವೇ ಹಿಡಿದುಬಿಟ್ಟಾರು ಹಾಗಾದರೇನು ಮಾಡಲಿ ? ಅದೋ ಆ ಅರಮನೆಯಿಂದ ಯಾವಳೋ ಒಬ್ಬ ಸ್ತ್ರೀಯಳು ಹೊರಬಿದ್ದಳು. ಅವಳಿಂದ ಇವೆಲ್ಲಾ ಗಲಭೆಗಳ ನಿರ್ಣಯ ಮಾಡಿಕೊಳ್ಳಲೊ ! ಇದೇನು ಕಾವಲುಗಾರರು ಅವಳನ್ನು ತಡೆಯಲಿಲ್ಲಾ ಅಂದ ಬಳಿಕ ಅದು ಜಗದೇವರಾಯವರಿಂದ ಅರಮನೆ ಜಗಳ ಸಂರಕ್ಷಣಕ್ಕಾಗಿರಿಸಿದ ಕಾವಲವಾಗಿದೆ. ಈ ಜನಗಳಿಗೆ ತೋರಿಸಿಕೊಳ್ಳುವದು ವಳಿತಲ್ಲ. ಹಾಗಾದರೇನು ಮಾಡಲಿ! ಅರಮನೆಯಿಂದ ಹೊರಟ ಆ ಸ್ತ್ರೀಯನ್ನು ನಿರ್ಬಂಧಿಸಿ ಕೇಳುವಾ (ತಡಿಯುವ ಆಲೋಚನೆ)

ಸೇನಾ : ಇವನು ಸಂಜೀವಿಯ ಕಡೆಗೆ ದೃಷ್ಟಿಯನ್ನು ತಿರುವಿದನು ಆ ವೇಳೆಯಲ್ಲಿ ಹೀಗೆ ಅರಮನೆಯ ಹತ್ತಿರ ಹೊಂಚು ಹಾಕಿದ ಇವನು ಜಗದೇವರಾಯನ ಗುಪ್ತಚಾರನಿರಬಹುದು. ಅರಮನೆಯನ್ನು ಸೇರಿ ಬಾಯಮ್ಮ ಮಹಾರಾಣಿಯವರನ್ನು ಕಾಣುವ ಇವನ ಆಲೋಚನೆ ಇರಬಹುದು.

ಹನು : ಅದೋ ದಾಸಿಯು ಹತ್ತಿರಕ್ಕೆ ಬರುತ್ತಿರುವಳು, ಅವಳನ್ನು ನಿರ್ಬಂಥಪಡಿಸಿ ಕೇಳುವಾ, (ಕತ್ತಿಹಿರಿಯುವ)

ಸೇನಾ : ನಿಜವಾಗಿಯೂ ಇವನು ಜಗದೇವರಾಯನ ಗುಪ್ತಚಾರನು! ಲಕ್ಷ್ಮಣನಾಯಕರ ಗುಟ್ಟಿನೊಳಗಿರುವ ಸಂಜೀವಿಯನ್ನು ಕೊಲ್ಲುವ

ಹನು : (ಕತ್ತಿಯನ್ನು ಹಿರಿದು ಸಂಜೀವಿಯ ಎದೆಗೆ ಹಿಡಿದು) ಬಾಯಿಬಿಟ್ಟಿಯಾದರೆ ನಿನ್ನ ಹೆಣವು ಉರುಳಾಡೀತು.

ಸಂಜಿ : ನನ್ನ ಜೊತೆಯಲ್ಲಿ ನಿನ್ನನು ಸಹ! ಅದೋ ಅತ್ತ ನೋಡಿಕೊ.

ಹನು : (ಹಿಂದೆ ನೋಡುವಾ ಸೇನಾಪತಿಯ ಖಡ್ಗವು ಬೆನ್ನಿನಲ್ಲಿ ಕುಳಿತಿದೆ)

ಸೇನಾ : ವರೆಗಾಣಿಸು (ಹಾಗೆ ಮಾಡುವನು) ನೀನಾರು?

ಸಂಜಿ : ಓಹೋ ದೇವರು! ಈತನು ಯಚ್ಚಮನಾಯಕರ ವಿಶ್ವಾಸದ ಹಸಕ್ತನಾದ ಹನುಮನಾಗಿ ತೋರುತ್ತಾನೆ.

ಸೇನಾ : ಯಾರು ಹನುಮನೇ?

ಹನು : ಅಹುದು ಬುದ್ಧೀ

ಸೇನಾ : ಮತ್ತೇನು ಸಮಾಚಾರ?

ಹನು : ಇದ್ದ ಸಮಾಚಾರವನ್ನು ನಮ್ಮೊಡೆಯರ ಹೊರತು ಅನ್ಯರಿಗೆ ಹೇಳಲಿಕ್ಕ ಬರುವಂತಿಲ್ಲಾ.

ಸಂಜಿ : ಹನುಮಾ ಇವರು ಸನ್ತ ಪಕ್ಷಪಾತದವರು.

ಹನು : ಅದು ನಮ್ಮೊಡೆಯರ ಏದುರಿನಲ್ಲಿ ಪರಿಷ್ಕಾರವಾಗಬೇಕು.

ಸೇನಾ : ನಿನ್ನ ಸ್ವಾಮೀ ಭಕ್ತಿಯಲ್ಲಿ ವ್ಯತ್ಯಯವನ್ನು ತರುವದಕ್ಕಾಗಿ ನಾನಿಷ್ಟ ಪಡುವದಿಲ್ಲಾ ನಡೆ ನಿಮ್ಮೊಡೆಯನ ಕಡೆಗೆ ಹೋಗುವಾ (ಹೋಗುವರು)

(ಪ್ರವೇಶ ಸೇನಾಪತಿಗಳ ಮನೆ – ಯಚ್ಚಮನಾಯಕ, ರಾಜಗುರು)

ಲಕ್ಷ್ಮ : ಮಹಾಸ್ವಾಮಿ ! ಶ್ರೀರಂಗರಾಯರ ಅಮಾನುಷ ಕೊಲೆಯು ನನ್ನ ಅಂತಃಕರಣವನ್ನು ಒಂದೇಸವನೆ ಸುಡುತ್ತಲಿದೆ ! ಮುಂದೆ ಅಗತಕ್ಕವರಿಗೆ ಪಟ್ಟವಾದೀತು, ಅಪರಾಧಿಗಳಿಗೆ ಶಿಕ್ಷೆಯಾದರೂ ಆದೀತು ಎಲ್ಲವೂ ಹೇಗೆಬೇಕೋ ಹಾಗಾದೀತು. ಆದರೆ ಆ ಮಗುವಾದ ರಾಮರಾಜನು ಯುಚ್ಚಮಾ ? ನನ್ನ ತಾಯಿತಂದೆಗಳನ್ನಾವಾಗ್ಗೆ ಕರೆದುಕೊಂಡು ಬರುವಿಯೆಂದು ಕೇಳುವದು ಅದಕ್ಕೇನು ಹೇಳಲಿ ? ಗುರುಗಳು ನನ್ನ ಮೇಲೆ ಆ ಮಗುವನದತಿಶಯುವಾದ ವಿಶ್ವಾಸವು. ತಂದೆತಾಯಿ ಬಂದುಬಳಗವನ್ನೆಲ್ಲಾ ಎಚ್ಚಮನು ಇಂದು ಕರೆದುಕೊಂಡು ಬರುವನ್ನು ನಾಳೆ ಕರೆದುಕೊಂಡು ಬರುವೆನೆಂದು ಜಾತಕವು ಮೇಘದ ಹಾದಿಯನ್ನು ನೋಡುವಂತೆ ನೋಡುತ್ತಿರಬಹುದು. ಅಥವಾ ಯಾರು ಬಲ್ಲರು! ಮಗನು ತಂದೆಯ ಆತ್ಮನೆಂದು ಬಲ್ಲವರು ಹೇಳುವರು. ಹಾಗಿದ್ದ ಸಂದರ್ಭದಲ್ಲಿ ಇಲ್ಲಾದ ಮಾತಾಪಿತೃಗಳ ಕೊಲೆಯು ಆ ಮಗುವಿನ ಅಂತಕರಣದಲ್ಲಿ ಯಾತನೆಗಳನ್ನುಂಟು ಮಾಡದೆ ಬಿಡದು! ಹಾಗಾದ ಮೇಲೆ ರಘುಪತಿರಾಜರನ್ನು ಹೊರಡಿಸಿಕೊಂಡು ಇಲ್ಲಿಗೆಲ್ಲಿ ಬರುವದೋ ಎಂದು ಮನವು ಭಯಗೊಂಡಿದೆ.

**ಗುರು :** ನಾಯಕಾ? ಇಂದಿಲ್ಲ ನಾಳೆಗಾದರೂ ಆ ಮಗುವಿಗೆ ಈ ವರ್ತಮಾನವು ತಿಳಿದೇ ತಿಳಿಯುವದು. ಮಾತಾಪಿತೃವಿಹೀನನಾಗಿ ಬಾಳುವದೆ ಆ ಮಗುವಿನ ಹಣೆಬರಹದಲ್ಲಿ ಬರೆದಿದೆ ಅದಕ್ಕಾರೇನು ಮಾಡುವದು.

**ಲಕ್ಷ್ಮ :** ಗುರುಗಳೇ? ನರಪತಿಗಳ ವಂಶವೆಲ್ಲಾ ಅಳಿದು ಅದೊಂದೇ ಮಗವು ಉಳಿದಿದೆ ಆ ಎಳೆ ಮಗುವಿನ ಅವಸ್ಥೆ ಏನಾಗುವದೋ ಏನೋ

**ಸೇನಾ :** ಮಿತ್ರಾ ? ಯಚ್ಚಮನಾಯಕಾ ! ಜಗದೇವ ಬಾಯಮ್ಮಜಿಯವರ ಸಲುವಾಗಿ ತಿಮ್ಮನಾಯಕನು ಬಲವಾದ ಕಾವಲನ್ನಿರಿಸಿದ್ದಾನೆ. ರಾಣಿಯವರನ್ನು ಸಂಜೀವಿಯು ಪ್ರತ್ಯೇಕವಾಗಿ ನೋಡುತ್ತಿರುವಳು. ಅಲ್ಲದೆ ನಿನ್ನ ಪ್ರೀತಿಯ ಸೇವಕನು ತಂದ ಸಂದೇಶವನ್ನು ಕೇಳಿಕೊ

**ಲಕ್ಷ್ಮ :** ಏನು ಹನುಮಾ? ನಮ್ಮ ಬಾಲ ಮಹಾರಾಜರು ಸೌಖ್ಯವಾಗಿರುವರೇ?

**ಹನು :** ಸುಖವಾಗಿದ್ದಾರೆ ಬುದ್ಧೀ ! ಮತ್ತು ದೊಡ್ಡ ಸೈನ್ಯದೊಂದಿಗೆ ರಘುಪತಿರಾಜರನ್ನು ಹೊರಡಿಸಿಕೊಂಡು ತಮ್ಮ ತಂದೆತಾಯಿಗಳನ್ನು ಕಾಣುವ ಆತುರದಿಂದ ಹೊರಟು ಈ ಪಟ್ಟಣದ ಹತ್ತಿರವೇ ಬಂದು ನಿಂತಿದ್ದಾನೆ. ತಮ್ಮೆಲ್ಲರ ಸಮಾಚಾರವನ್ನು ತಿಳಿದುಕೊಂಡು ಬರಲು ನನ್ನನ್ನು ಮುಂದೆ ಕಳಿಸಿದ್ದಾರೆ. (ಲಕ್ಷ್ಮಣನಾಯಕನು ನಡಗುವವನು) ನನ್ನ ಧಣಿಯು ಹೀಗೇಕೆ ನಡುಗುವನು ಬುದ್ಧಿ ಏನಾಯಿತು.

**ಗುರು :** ನಾಯಕಾ ! ಧೈರ್ಯಶಾಲಿಯಾದ ನೀನು ದುಃಖಿತನಾಗಬೇಡಾ

**ಲಕ್ಷ್ಮ :** ಆ ಮಗುವಿನ ಅವಸ್ಥೆಯು ಏನಾಗುವದೋ ಏನೋ? ತಾಯಿ ತಂದೆ ಬಂಧು ಬಳಗದವರ ಕೊಲೆಯಾದ ಸುದ್ದಿಯನ್ನು ಕೇಳಿ ಆ ಕಂದವ್ವನು ಎದೆಯೊಡೆದುಕೊಂಡು ಪ್ರಾಣಬಿಡುವದು. ಅದಕ್ಕೇನು ಮಾಡಲೀ? ಗುರುಗಳೇ ಇದುವರೆಗೂ ಈ ಕಲ್ಪನೆಯೇ ಇದ್ದಿಲ್ಲಾ ಆದರೆ ಈ ವಿಷಯವು ನನ್ನನ್ನು ಸಂಪೂರ್ಣ ಆವರಿಸಿಬಿಟ್ಟಿತು. ನಾನು ಹೇಡಿಯಾದೆನು.

**ಹನು :** ಬುದ್ಧಿ ಶ್ರೀರಂಗರಾಯರ ಕೊಲೆಯಾಯಿತೆ ? ಅವರು ಬಂಧು ಬಳಗದವರ ಸಹ !! ಯಾರು ಮಾಡಿದರು?

**ಸೇನಾ :** ಜಗದೇವ ಬಾಯಮ್ಮನವರು ಮಾಡಿಸಿದರು.

ಹನು : ಅಯ್ಯಯ್ಯೋ! ಅಯ್ಯಯ್ಯೋ ಕೊಲ್ಲಿಸಿಬಿಟ್ಟರೇ! ಬುದ್ಧಿ ಹುಕುಮಾಗಲೆ, ಜಗದೇವ, ಬಾಯಮ್ಮರಾಣಿಯವರದೂ ಅವರ ಹತ್ತಿಹೊಂದಿದವರದೂ, ಆಮೇಲೆ ಅರಮನೆಯಲ್ಲಿ ಆಳು ಹೋಳುಗಳು ರುಂಡಗಳನ್ನು ಸಹ ಕೊಯ್ದು ತಂದು ತಮ್ಮೆದುರಿನಲ್ಲಿ ರಾಶಿಯಾಗಿ ಒಟ್ಟುತ್ತೇನೆ ಈಗ ತಾವು ಹುಕುಮ ಕೊಡದಿದ್ದರೆ ಹಾರುವದು, ನೋಡಿ ನನ್ನ ರುಂಡಾ (ತನ್ನ ರುಂಡವನ್ನು ಕೊಯ್ದುಕೊಳ್ಳಲು ಉದ್ಯುಕ್ತನಾಗುವನು)

ಸೇನಾ : (ಕೈಹಿಡಿದು) ಹನುಮಾ ! ನಿನ್ನದಿರು ವ್ಯರ್ಥಸಾಹಸವು. ಜಗದೇವ, ಬಾಯಮ್ಮ ಮೊದಲಾದ ಅಪರಾಧಿಗಳು ನಿರ್ಬಂಧದಲ್ಲಿರುವರು ಅವರಿಗೆ ಉಗ್ರವಾದ ಶಾಸನವಂತೂ ಆಗೇ ಆಗುವದು.

ಗುರು : ನಾಯಕ ! ವಿಧಿ ಪ್ರಮಾಣದಂತೆ ಹೀಗೆಲ್ಲ ಕಾರ್ಯಗಳಾಗಿರುವವು ಇದು ಅಧೈರ್ಯಪಡುವ ಸಮಯವಲ್ಲ ನಡೆ ! ಅಭಿನವ ಮಹಾರಾಜರನ್ನು ಕರೆದುಕೊಂಡು ಬರುವಾ ಸ್ತ್ರೀವ್ಯಾಮೋಹ ಬದ್ಧರಾಗಿ ಮಾಡಿದ ದಿವಂಗತ ಶ್ರೀಮದ್ ವೆಂಕಟಪತಿ ಮಹಾರಾಜರ ಪಾಪಾಚರಣೆಯೇ ಹಾಗೆ ರಾಜಕುಲಕ್ಷಯವನ್ನು ಮಾಡಿಸಿತು. ಅದಕ್ಕಾರೇನು ಮಾಡುವರು.

ಸೇನಾ : ಹೂಂ ಮಿತ್ರನೇ ನಡೆ ಇದು ಶೋಕಿಸುತ್ತ ಕುಳಿತುಕೊಳ್ಳುವ ಸಮಯವಲ್ಲಾ ಶ್ರೀರಾಮರಾಜರನ್ನು ಕರೆದುಕೊಂಡು ಬರುವಾ.

ಗುರು : ನಾಯಕರೇ ನಡೆಯಿರಿ ಉಪಾಯವಿಲ್ಲಾ.

ಹನು : (ಉಸಿರಿಕ್ಕಿ) ಆಗುವದಾಗಿದೆ ! ದಯಮಾಡಿಸಿ, ಮಹಾರಾಜರು ರಾಜಧಾನಿಯ ಹತ್ತಿರ ತಮ್ಮ ಹಾದಿಯನ್ನು ನೋಡುತ್ತಿರುವರು.

ಲಕ್ಷ್ಮಿ : ಬುದ್ಧಿ ಈ ಕಪ್ಪಾದ ಮುಖವನ್ನು ಈ ಮಗುವಿಗೆ ಹೇಗೆ ತೋರಿಸಲಿ ದಯಮಾಡಿ ನನ್ನೊಬ್ಬನನ್ನು ಬಿಟ್ಟು ಹೋಗಿ ಆ ಕಂದಮ್ಮನ ದುಃಖಾಗ್ನಿಯು ನನ್ನನ್ನು ಸುಟ್ಟು ಬಿಟ್ಟೀತು. ಮಹಾಸ್ವಾಮೀ ಆ ಅಮಾನುಷ ಕೊಲೆಯ ತಮ್ಮಂತೆ ವೈರಾಗ್ಯ ಚಕ್ರವರ್ತಿಗಳನ್ನು ಕೂಡಾ ದುಃಖಾಶ್ರುಗಳನ್ನು ಸುರಿಸುವಂತೆ ಮಾಡದೆ ಬಿಡಲಿಲ್ಲಾ ಅಂತಹುದು ಅದು ಮಗುವ ತಾಯಿತಂದೆಗಳ ಪ್ರೇಮವೇ ಅದರ ಈಗಿನ ಸರ್ವಸ್ವ ಸಾರ್ವಭೌಮ ಪಟ್ಟದ ಮೇಲೆ ಕುಳಿತು ಕೊಳ್ಳುವ ಸಂಭ್ರಮಕ್ಕಿಂತಲೂ ಮಾತಾಪಿತೃಗಳ ತೊಡೆಯ ಮೇಲೆ

ಕುಳಿತುಕೊಳ್ಳುವ ಸಂಭ್ರಮವೇ ಆ ಮಗುವಿಗೆ ಹೆಚ್ಚಿನದು. ಅದು ರಘುಪತಿರಾಜರನ್ನು ಅತ್ಯಾತುರದಿಂದ ಹೊರಡಿಸಿಕೊಂಡು ಬಂದಿದ್ದಾದರೂ ಮಾತಾಪಿತೃಗಳ ದರ್ಶನಕ್ಕಾಗಿ ಯಾರೇನು ಹೇಳಿದರೂ ಕೊನೆಗೆ ನಾಯಕಾ ನನ್ನ ತಂದೆ ಎಲ್ಲಿ? ಮೋಹವಾತ್ಸಲ್ಯದಿಂದ ಮುದ್ದಿಕ್ಕುವ ನನ್ನ ತಾಯಿ ಎಲ್ಲಿ ಎಂದು ಕೇಳಿದರೇನು ಹೇಳಲಿ? ವಿರುಪಾಕ್ಷಾ ನೀನು ಬ್ರಮ್ಮಾಂಡದ ಲಯಕರ್ತನಲ್ಲವೇ ಏತಕ್ಕೆ ನನ್ನನ್ನುಳಿಸಿದೆ!

**ಕೊತ :** ಬುದ್ಧೀ ರಘುಪತಿರಾಜರೊಂದಿಗೆ ನಮ್ಮ ಬಾಲ ಮಹಾರಾಜರು ದಯಪಾಲಿಸಿದರು,

**ಸೇನಾ :** ಎಲ್ಲಿ ?

**ಕೊತ :** ನನ್ನ ಜತೆಯಲ್ಲಿ ಅದೋ ಬಂದರು ಸಹ

**ಲಕ್ಷ್ಮ :** ಪ್ರಾಣವೇ ! ತೀವ್ರ ಏತಕ್ಕೆ ಹೋಗಲೊಲ್ಲಿ? (ಕತ್ತು ಹಿಚುಕಿಕೊಳ್ಳುವನು ಅದನ್ನು ಗುರುಗಳು ಬಿಡಿಸುವರು)

**ರಾಮರಾಜ :** (ಓಡಿ ಬಂದು ನಾಯಕನಿಗೆ ತೆಕ್ಕಿಬಿದ್ದು) ನಾಯಕಾ ಜನನಿ ಜನಕರೆಲ್ಲಿ? ಮೊದಲು ತೋರಿಸೋ ನಾನು ಇಷ್ಟು ದಿವಸ ಕಾಣದ್ದಕ್ಕೆ ಅಮ್ಮನು ಅಳುತ್ತಿರಬಹುದಲ್ಲವೇ? ಅಪ್ಪನು ಉದಾಶೀನನಾಗಿರಬಹುದಲ್ಲವೇ? ಚಿಕ್ಕಪ್ಪಗಳು ವ್ಯಥೆಪಡುತ್ತಿರಬಹುದಲ್ಲವೇ? ಅವರನ್ನು ಕಾಣುವದಕ್ಕಾಗಿ ಬೇಗನೇ ಬರಬೇಕೆಂದರೆ ರಘುಪತಿರಾಜರು ತೀವ್ರ ಹೊರಡಲಿಲ್ಲಾ ಇಂದು ನಾಳೆ ಎಂದು ಕಾಲಹರಣ ಮಾಡಿದರು. ತೀವ್ರ ತೋರಿಸೋ ಅಮ್ಮನೆಲ್ಲಿ? ಅಮ್ಮಾ! ಅಮ್ಮಾ! (ಹೋಗುವನು)

**ಲಕ್ಷ್ಮ :** ಮಹಾಸ್ವಾಮಿ ದಯಮಾಡಿ ಈ ಸಂಕಟದಿಂದ ಪಾರುಮಾಡಿರಿ ನಿಮಗೆ ಅನನ್ಯ ಭಾವದಿಂದ ಶರಣು ಬಂದಿದ್ದೇನೆ. (ಅಳುವನು)

**ರಾಮ :** ಎಲ್ಲ ವಳಗಾದರೂ ಇಲ್ಲಾ ನಾಯಿಕಾ? ಅಳುವಿಯಲ್ಲೊ! ಬೇಡವೊ ಹೀಗೆ ಅಳಬೇಡಾ! ನನ್ನ ತಾತ ಶ್ರೀರಂಗರಾಯನು ನಿನಗೇನಾದರೂ ಅಂದನೆ? ಹಾಗಿದ್ದರೆ ಆತನನ್ನೀಗಲೇ ತೋರಿಸು! ನಮ್ಮ ನಾಯಕನನ್ನು ಏತಕ್ಕೆ ಹೀಗೆ ಅಳುವಂತೆ ಮಾಡಿದಿಯೆಂದು ಕೇಳಿಬಿಡುತ್ತೇನೆ!

| | |
|---|---|
| ಗುರು : | ಆಗಲಿ ಮಹಾರಾಜರೆ ! ಹಾಗೆ ಮಾಡುವಿರಂತೆ ಈಗ್ಗೆ ತಾವು ಸಿಂಹಾಸನವನ್ನೇರಬೇಕು ದಯಮಾಡಿಸಿ. |
| ರಾಮ : | ಅಗಸನು ಕುಳಿತ ಸಿಂಹಾಸನದಲ್ಲಿ ನಾನೇನು ಕುಳಿತುಕೊಳ್ಳುವದಿಲ್ಲಾ |
| ಗುರು : | ಅದನ್ನು ಶುದ್ಧ ಮಾಡಿದ್ದೇವೆ ! |
| ರಾಮ : | ಹಾಗಾದರೆ ಪರವಾ ಇಲ್ಲಾ ಕುಳಿತುಕೊಳ್ಳುವೆನು. |
| ಸೇನಾ : | ಅಂದ ಬಳಿಕ ಆಲಸ್ಯವೇಕೆ! ದಯಮಾಡಿಸಬಹುದಲ್ಲವೇ! |
| ರಾಮ : | ನಾಯಿಕಾ ನಡಿಯೋ ನಾನು ಸಿಂಹಾಸನವನ್ನೇರಬೇಕಂತೆ ಗುರುಗಳೆ. ಸಿಂಹಾಸನವನ್ನೇರುವೆನು, ಆದರೆ ನನಗೆ ಉತ್ತಮವಾದ ಖಡ್ಗವು ಬೇಕು! |
| ಗುರು : | ಸರ್ವೋತ್ಕೃಷ್ಟವಾದ ಖಡ್ಗವಿದೆ ಮಹಾರಾಜರೇ! |
| ರಾಮ : | ನನ್ನ ಸಲುವಾಗಿ ಕುದುರೆ ಹೇಗಿದೆ! |
| ಸೇನಾ : | ಕೇಳುವದೇನು ಮಹಾರಾಜ ? ಇಂದ್ರನ ಉಚ್ಚೈಶ್ರವದಂತೆ ಬಹುದಿವ್ಯವಾಗಿದೆ. |
| ರಾಮ : | ನಾನು ನನ್ನ ಪ್ರಧಾನಿಯುನ್ನು ಲಕ್ಷ್ಮಣನಾಯುಕನನ್ನೇ ಮಾಡಿಕೊಳ್ಳುವೆನು. (ಯಾಕೋ ನಾಯಕಾ? ನೀನು ನನ್ನ ಪ್ರಧಾನಿಯಾಗುವಿಯೋ ಇಲ್ಲವೋ) |
| ಲಕ್ಷ್ಮ : | ಅಗತ್ಯವಾಗಿ ಮಹಾರಾಜರೇ. |
| ರಾಮ : | ಹಾಗಾದರೆ ನನ್ನ ಸೇನಾಪತಿ ಯಾರು? |
| ಸೇನಾ : | ಆ ಸೇವೆಯನ್ನು ಅಪ್ಪಣೆಯಾದರೆ ಈಗಲೂ ಸಹ ನಾನೇ ವಹಿಸಿಕೊಳ್ಳುವೆನು. |
| ರಾಮ : | ಯಾರು ವೆಂಕಟಾದ್ರಿ ! ನೀನು ಬಹು ಪರಾಕ್ರಮಿಯೆಂದು ಅಪ್ಪನು ಹೇಳುತ್ತಿದ್ದನು ನೀನೇ ನನ್ನ ಸೇನಾಪತಿಯು. |
| ಸೇನಾ : | (ಸ್ವಗತ) ನಮ್ಮ ಪರಾಕ್ರಮವು ಮಣ್ಣುಪಾಲಾಯಿತು! |
| ರಾಮ : | ನಾಯುಕಾ ? ನೀವೆಲ್ಲರೂ ದೊಡ್ಡವರಾದಿರಪ್ಪಾ ನಾನು ಬಹು ಸಣ್ಣವನಾದೆನು. ನಿಮ್ಮ ತಕ್ಕ ಮಹಾರಾಜನು ನನ್ನ ತಾತ |

ಶ್ರೀರಂಗರಾಯನೇ ಆಗುವನು. ಆತನನ್ನೇ ಪಟ್ಟದಮೇಲೆ ಕುಳ್ಳಿರಿಸಬೇಕು.

ಗುರು : (ಎಲ್ಲರಿಗೂ ದುಃಖವನ್ನಾವರಿಸುವದಕ್ಕೆ ಸಂಕೇತ ಮಾಡಿ) ಮಹಾರಾಜರೇ ಅವರು ತಮಗೇನು ಪಟ್ಟವೇರುವದಕ್ಕೆ ಕೇಳಿ ಸಕಲ ಪರಿವಾರದವರೊಡನೆ ವೈಕುಂಠ ಯಾತ್ರೆಗೆ ಹೋದರು,

ರಾಮ : ಅಂದು ವೆಂಕಟಪತಿರಾಯಜ್ಜಯ್ಯನು ಹೋದ ಅದೇ ವೈಕುಂಠ ಯಾತ್ರಿಗೇನು?

ಸಕಲರೂ : ಅಹುದು.

ರಾಮ : ಅವರೆಲ್ಲರನ್ನು ಆತನೇ ಕರೆಯಿಸಿಕೊಂಡನೇನು?

ಗುರು : ಅಹುದು ಮಹಾರಾಜರೇ

ರಾಮ : ನನ್ನೊಬ್ಬನನ್ನೇ ಬಿಟ್ಟನಪ್ಪಾ! ನಾನೇನು ತಪ್ಪು ಮಾಡಿದ್ದೆನು.

ಗುರು : (ಮತ್ತೆ ದುಃಖವನ್ನಾವರಿಸುಸದಕ್ಕೆ ಸಂಕೇತ ಮಾಡುವೆ)

ರಾಮ : ನೋಡಿ ಗುರುಗಳೇ, ನನ್ನೊಬ್ಬನನ್ನೇ ಬಿಟ್ಟು ಸಕಲರೂ ವೈಕುಂಠ ಯಾತ್ರೆಗೆ ಹೋಗಿಬಿಟ್ಟಿದ್ದಾರೆ. ಎಂತಹರವರು?

ಗುರು : ಇಲ್ಲಿ ಒಬ್ಬರಾದರೂ ಪಟ್ಟದಲ್ಲಿರಬೇಕೆಂದು ಹಾಗೆ ಮಾಡಿದ್ದಾರೆ.

ಕೊತ : (ನಮಿಸಿ) ಅಪರಾಧಿಗಳನ್ನು ವಿಚಾರಣೆಗಾಗಿ ಸಿದ್ಧಪಿರಿಸಿದ್ದೇವೆ!

ರಾಮ : ಇವರು ನಮ್ಮ ನಗರದ ಕೊತವಾಲರಾದ ತಿಮ್ಮನಾಯಕರು. ಏನು ತಿಮ್ಮನಾಯಕರೇ ಸೌಖ್ಯಮೇತಾನೆ?

ಕೊತ : ಪಾದದ ಆತಂಕರಣ ಮಹಾಬುದ್ಧಿ?

ಗುರು : ಮಹಾರಾಜರೇ, ಅಗಸನಿಗೆ ಪಟ್ಟಗಟ್ಟಿದ ಜಗದೇವರಾಯನ ವಿಚಾರಣೆ ಆಗಬೇಕಾಗಿದೆ ದರಬಾರಕ್ಕೆ ಬರಮಾಡಿಸಬಹುದಲ್ಲವೇ?

ರಾಮ : ಅದೆಲ್ಲವರನ್ನು ಮಾಡತಕ್ಕವರು ನೀವೇ ನನಗೇನು ತಿಳಿಯುವದು ಬುದ್ಧಿ? ಮುಂದೇ ದೊಡ್ಡವನಾದ ಮೇಲೆ ಬೇಕುಬೇಕಾದಂತಹ ಅಪರಾಧಿಗಳ ವಿಚಾರಣೆಯನ್ನು ಮಾಡುವೆನು ಅಲ್ಲಿಯತನಕ ನೀವು ಹೇಗೆ ಹೇಗೆ ವಿಚಾರಣೆ ಮಾಡುವಿರೆಂಬುದನು, ನೋಡುವೆನು,

**ಗುರು :** ಈಗ್ಗೇ ತಾವಷ್ಟೆ ಮಾಡಬೇಕು! ಲೌಕಿಕದಂತೆ ಮುಂದೆ ಪಟ್ಟಾಭಿಷೇಕದ ಮಹೋತ್ಸವವನ್ನು ಜರುಗಿಸದರಾಯಿತು! ಇಂದು ಬಹು ದಿವ್ಯವಾದ ಮುಹೂರ್ತವಿದೆ. ಮೊದಲು ಸಿಂಹಾಸನವನ್ನೇರಬೇಕು ದಯಮಾಡಿಸಿ!

**ರಾಮು :** ಗುರುಗಳೇ ಎಲ್ಲರೂ ಗಳಿಬಿಳಿಯಾಗಿ ಮಾತುಗಳನ್ನಾಡುವಿರಿ. ಆದರೆ ನಮ್ಮ ಲಕ್ಷ್ಮನಾಯಕನು ಒಂದಾದರೂ ಮಾತುಗಳನ್ನಾಡದೆ ಕಣ್ಣೀರು ಸುರಿಸುತ ನಿಂತುಬಿಟ್ಟಿದ್ದಾನೆ. (ಅವನನ್ನಪ್ಪಿ) ಏ ನಾಯಕಾ, ನಾನೇನಾದರೂ ತಪ್ಪು ಮಾಡಿರುವೆನೋ? ಏತಕ್ಕೆ ನೀನು ನಮ್ಮ ಮಾತುಗಳಲ್ಲಿ ಕಲಿಯಲೊಲ್ಲಿ?

**ಲಕ್ಷ್ಮ :** ಇದೋ ತಪ್ಪಾಯಿತು. ಇನ್ನು ಹಾಗೆ ಮಾಡೆನು ದಯಮಾಡಿಸಿ ದರಬಾರವನ್ನು ಸೇರುವಾ. ಆ ಜಗದೇವರಾಯನ ವಿಚಾರಣೆಯಾಗಬೇಕಾಗಿದೆ.

**ರಾಮು :** ನಾಯಕಾ ಬಾಯಮ್ಮಾಜಿಯು ಆ ಅಗಸರವನ್ನೇಕೆ ತನ್ನ ಮಗನನ್ನಾಗಿ ಮಾಡಿಕೊಂಡಳು, ನನ್ನನ್ನು ಮಾಡಿಕೊಳ್ಳಬೇಕಿದ್ದಿತು.

**ಲಕ್ಷ್ಮ :** ಅದನ್ನವರನ್ನೇ ಕೇಳುವಾ ನಡೆಯಿರಿ.

**ರಾಮು :** ಅಹುದು ಆಕೆಯನ್ನೇ ಕೇಳುವಾ. ಗುರುಗಳೇ ದಯಮಾಡಿಸಿ ದರಬಾರಕ್ಕೆ ಹೋಗುವಾ ಕೊತವಾಲರೇ. ಮುಂದಾಗಬಹುದಲ್ಲವೇ ನಾಯಕಾ ಇಷ್ಟು ಹೊತ್ತಿನತನಕಾನಾನೀ ಹನುಮನನ್ನು ಮಾತಾಡಿಸಲಿಲ್ಲವಲ್ಲಾ! ಏ ಹನುಮಾ ಸಿಟ್ಟಾಗಬೇಡಪ್ಪಾ, ನೀನು ನನ್ನ ಅಂಗರಕ್ಷಕನಾಗಿ ನನ್ನ ಸಂಗಡವೇ ಇರು.

**ಹನು :** (ಅವನಿಗೆ ದುಃಖವು ತುಂಬಿಬರುವದು. ಗುರುಗಳು ಸಂಕೇತದಿಂದ ತಡೆಗಟ್ಟಲು ಹೇಳುವರು) ಹಾಗಾದರೆ ಬನ್ನಿ ಬುದ್ಧಿ ಹೆಗಲ ಮೇಲೆ ಕುಳಿತುಕೊಳ್ಳಿರಿ ಎತ್ತಿಕೊಂಡು ಹೋಗುವೆನು, ಅಲ್ಲಿಯತನಕ ನಡೆಯುವದರಿಂದ ತಮ್ಮ ಚರಣಗಳು ನೊಂದಾವು.

**ರಾಮು :** ದರ್ಬಾರವೇನು ದೂರವಿದೆಯೋ? ಅಷ್ಟು ನಾನು ನಡೆಯಲಾರನೆ? ಏಕೆ ಗುರುಗಳೇ ನಾನಷ್ಟು ನಡೆಯಲಾರೆನೇ? ನಡೆಯಿರಿ ಹೋಗುವಾಗ್ಗೆ

**ಜೋಪದಾರ :** ಹೀಗೆ ದಯಮಾಡಿಡಬೇಕು ಮಹಾಪ್ರಭು (ಹೋಗುವರು)

**ಪ್ರವೇಶ**

(ರಸ್ತಾ ಕೈಯಲ್ಲಿ ಜಗದೇವರಾಯನ ರಿಟ್ಟಿಗೆ ಹಗ್ಗ ಹಚ್ಚಿ ತರುವರು)

**ಜಗ :** ಎಲೋ ದೂತರೇ, ಯಾರ ಅಪ್ಪಣೆಯಿಂದ ನೀವು ನನ್ನನ್ನು ನಿರ್ಭಂಧಿಸಿರುವಿರಿ? ಏ ದುರ್ಗಾಶಿಂಗಾ, ಹೇಳುವದಿಲ್ಲವೆ?

**ದುರ್ಗಾ :** ಸೇನಾಪತಿಸಾಹೇಬಾ ಔರ ಬಡೆ ಪ್ರಧಾನಜಿ ಲಚಮನ್ ನಾಯಕ ಜಿಸಾಹೇಬಕೆ ಹುಕುಂಪುಜಿ

**ಜಗಾ :** ನನಗೆ ಬಾಯಮ್ಮ ಮಹಾರಾಣಿಯವರನ್ನು ಕಾಣುವದಿದೆ. (ಹೋಗಲುದ್ಯುಕ್ತ)

**ದುಗಾ :** ನಹೀ ವೈಸಾ ಹುಕಂ ನಹಿ ಸೀಧಾ ದರ್ಬಾರಮೆ ಚಲನಾ

**ಪ್ರವೇಶ ದರ್ಬಾರ**

(ಗುರು, ಯಚ್ಚಮನಾಯಕ, ಹನುಮಾ. ರಾಮರಾಜ ಸಿಂಹಾಸನವನೇರುವರು. ಬ್ರಾಹ್ಮಣರು ಶುದ್ಧೋದಕದಿಂದ ಮಂತ್ರಗಳನ್ನುಚ್ಚರಿಸುತ್ತಾ ಪ್ರೋಕ್ಷಿಸುವರು)

**ಗುರು :** ರಾಮದೇವ ಮಹಾರಾಜರೇ ರಜಕನಸ್ಪರ್ಶದಿಂದ ಅಪವಿತ್ರವಾದ ಸಿಂಹಾಸನ ಕಿರೀಟ, ಮತ್ತು ಕುಂಡಲಿಗಳು, ಮಂತ್ರಗಳಿಂದವಿದ್ಯುಕ್ತವಾಗಿ ಶುದ್ಧೀಕರಿಸಲ್ಪಟ್ಟಿವೆ, ವೈಕುಂಠವಾಸಿಗಳಾದ ಶ್ರೀಮದ್ ವೆಂಕಟಪತಿ ಮಹಾರಾಜರ ಮತ್ತು ಶ್ರೀರಂಗರಾಯರ ಅಪೇಕ್ಷೆಯಂತೆ ಈ ನರಪತಿಗಳ ಸಿಂಹಾಸನವನ್ನು ಇದೇ ಶುಭಮುಹೂರ್ತದಲ್ಲಿ ತಾವು ಸ್ವೀಕರಿಸಬೇಕೆಂದು ನಮ್ಮ ಅಪ್ಪಣೆ.

**ರಾಮ :** ಶ್ರೀಗುರುಗಳವರ ಅಪ್ಪನೆಯು ರೆರಸಾಮಾನ್ಯವಿದೆ.

**ಗುರು :** (ಕಿರೀಟಹಾಕಿ ರಾಜದಂಡ ಕೊಡುವರು ಶ್ರೀರಾಮರಾಜರು ಪಟ್ಟವೇರುವರು)

**ಸಭಿಕರು :** ಜೈ ನರಪತಿ, ರಾಮದೇವ ರಾಜೇಂದ್ರ ಬಹುಪರಾಕ.

**ವೈತಾಲಿಕ:** ಕರ್ನಾಟಕ ಸಿಂಹಾಸನಾಧೀಶ್ವರ ಶ್ರೀಮದ್ ರಾಜಾಧಿರಾಜ ನರಪತಿ ರಾಮದೇವ ರಾಜೇಂದ್ರ ಬಹುಪರಾಕ.

**ಕೊತ :** ಅಪರಾಧಿಗಳನ್ನು ತಂದು ನಿಲ್ಲಿಸಿದ್ದೇವೆ;

**ಲಕ್ಷ್ಮ :** ಸಿಂಹಾಸನದ ಎದುರು ತಂದು ನಿಲ್ಲಿಸಿ, ಬಾಯಮ್ಮಾದೇವಿಯವರನ್ನು ಮಾತ್ರ ಅದೋ ಪ್ರತ್ಯೇಕವಾದ ಸ್ಥಳದಲ್ಲಿ ಕುಳ್ಳಿರಿಸಿ. (ಹಾಗು ಮಾಡುವರು) ಜಗದೇವರಾಯರೆ! ಪವಿತ್ರವಾದ ಕರ್ನಾಟಕ ಸಿಂಹಾಸನದ ವಿಷಯದಲ್ಲಿ ಈವರೆಗೂ ನೀವೇನು ಅಕ್ಷಮ್ಯ ಅಪರಾಧಗಳನ್ನು ಮಾಡಿರುವಿರೋ ಅವೆಲ್ಲವುಗಳಿಗೆ ಪಶ್ಚಾತ್ತಾಪವಾಗಿದ್ದರೇ ಸಿಂಹಾಸನದಲ್ಲಿ ಬಾಲಮಹಾರಾಜರು ಕುಳಿತಿದ್ದಾರೆ. ಅವರ ಸನ್ನಿಧಿಯಲ್ಲಿ ಸ್ವತಃ ನಿಮ್ಮ ಮುಖದಿಂದ ಹೇಳಿ ಬಿಡುವದುತ್ತಮ ಪಕ್ಷ ನಿಷ್ಕಲಂಕಚಿತ್ತರಾದ ಮಹಾಸ್ವಾಮಿಗಳವರಿಂದ ಕದಾಚಿತ್ ಕ್ಷಮೆಯಾದರೂ ಸಿಗಬಹುದು ಹೇಳಿಕೊಳ್ಳಿ.

**ಜಗ :** ಉರಿಯುತ್ತಿದೆ ನೀವೆಲ್ಲರೂ ಸ್ವಾರ್ಥಸಾಧನೆಗಾಗಿ ಮಾಡಿದ ಚೇಷ್ಟೆಯನ್ನು ನೋಡಿ ನನ್ನ ಸರ್ವಾಂಗವು ಉರಿಯುತ್ತಲಿದೆ. ಎಲೋ ಯಚ್ಚಮಾ! ಕೃಷ್ಣ ಸರ್ಪಾ ! ಮರಣ ಕಾಲಕ್ಕೆ ಮಹಾರಾಜರನ್ನು ಗುಪ್ತವಾಗಿ ಕೊಂದು ಅವರ ಪರಮಶಾವಸ್ಥೆಲಾಭವನ್ನು ಪಡೆದು ಆ ಮೋಸದ ರಾಜಾಜ್ಞೆಯನ್ನು ಕುಟ್ಟಿಸಿ ಮೃತ ಮಹಾರಾಜರ ಮಕ್ಕಳಾದ ಚಿಕ್ಕರಾಯರನ್ನು ಸಿಂಹಾಸನದಿಂದ ತಳ್ಳಿದಿಯಾ ? ಎಲೋ ಪಾಪಿಗಳಾದ ನಾಯಕರೇ ನಿಜವಾಗಿ ಹೇಳಿ. ಯಾವ ಆಶೆಯಿಂದ ನೀವೆಲ್ಲರೂ ಈ ಯಚ್ಚಮ ರಾಕ್ಷಸನ ವಶರಾಗಿ ರಾಜದ್ರೋಹವನ್ನು ಮಾಡಿದ್ದಿರಿ? ಭೋನರಪತಿ ಶ್ರೀಮದ್ ವೆಂಕಟಪತಿರಾಯನೇ ನೋಡು ನೋಡು ! ನಿನ್ನ ಪ್ರೀತಿಯ ಯಚ್ಚಮನಾಯಕರೇ ನಿನ್ನ ಹೊಟ್ಟೆಯಿಂದ ಹುಟ್ಟಿಬಂದ ಚಿಕ್ಕರಾಯರನ್ನು ಸಿಂಹಾಸನದಿಂದ ತಳ್ಳಿ ! ಯಚ್ಚಮಾ ! ಮೃತಮಹಾರಾಜರು ನಿನ್ನ ಮೇಲಿರಿಸಿದ ವಿಶ್ವಾಸಕ್ಕೆ ಒಳಿತಾದ ಪ್ರತಿಫಲವನ್ನು ಕೊಟ್ಟೆ.

**ಲಕ್ಷ್ಮ :** ಒಳಿತಾದ ಪ್ರತಿಫಲವನ್ನೇ ಕೊಟ್ಟಿದ್ದೇನೆ.

**ಜಗ :** ಎಲೋ ಸ್ವಾರ್ಥಿ ! ನಿನಗೆ ಮಾತುಗಳನ್ನಾಡುವದಕ್ಕೆ ನಾಚಿಕೆಯಾಗುವದಿಲ್ಲವೇ ? ಮಂತ್ರಿಯಾಗಿ ಮೆರದಾಡುವದಿದ್ದರೆ ಚಿಕ್ಕ ಮಹಾರಾಜರ

**ಲಕ್ಷ್ಮ :** ಸುಮನಿರು ಚಿಕ್ಕಯ್ಯನಿಗೆ ಚಿಕ್ಕ ರಾಜ ಮಹಾರಾಜನೆಂದು ಹೇಳಲಾಗದು.

ಬಾಯ : ಏತಕ್ಕೆ ಹೇಳಲಾಗದು?

ಲಕ್ಷ್ಮ : ಮಾತೇ ! ಕ್ಷಮಿಸು ಆತನು ಮಹಾರಾಜರ ಮಗನಾಗಿದ್ದರೆ ಹಾಗೆ ಹೇಳಲಿಕ್ಕೆ ಬಾದಕವಿದ್ದಿಲ್ಲ.

ಜಗ : ಅಂದರೆ ? ಮಹಾರಾಜರ ತಕ್ಕ ಮಗನಲ್ಲವೆಂದು ನೀನು ಹೀಗೆ ಹೇಳುವ ಸಾಹಸವನ್ನು ಮಾಡಿದಿಯಾ?

ಲಕ್ಷ್ಮ : ನಾನು ಸಾಹಸಿಯಲ್ಲಾ ಕೊನೆಯವರೆಗೂ ಮಾಡಿದ ಅಕ್ಷಮ್ಯ ಅಪರಾಧಗಳನ್ನು ಒಪ್ಪಿಕೊಳ್ಳುವ ನೀನು ಮಾತ್ರ ಸಾಹಸಿಯ ಮಾನವ ಕುಲಕ್ಕೆ ಅದರಲ್ಲಿಯೂ ಕನ್ನಡಿಗರ ಮುಖಕ್ಕೆ ಕಪ್ಪನು ಬಳದೇ! ಪಾಫಿಯಾದ ನಿನ್ನ ಗೂಢ ಮಾತುಗಳನ್ನಾಡುವದರಿಂದ ಪ್ರಯೋಜನವೇನು ಕರಿಯಾ! ಸಕಲರೊಂದಿಗಿ ಹೀಗೆ ಬಾ (ಬರುವನು) ಇದು ಕರಿಯನ ಭೂತವಲ್ಲಾಕರಿಯನೇ! ಇವರಾರು ಗುರ್ತಿಸಿದೆಯೋ!

ಕರಿ : ಹದ್ನಾಕುವರ್ಷದ ಸುದ್ದಿ ಗುರ್ತ ಹತ್ತಿಕ್ಕಿಲ್ಲಾ ಅಪ್ಪೊರಿಗೆ

ಬಾಯ : (ಅಗಸರವನ್ನು ನೋಡಿ) ಚಿಕ್ಕಯ್ಯನಿಗೆ ಸೀರೆಯನ್ನುಡಿದವರಾರು? ಲಕ್ಷ್ಮಣನಾಯಿಕಾ? ಇಷ್ಟೊಂದು ವಿಟಂಬನೆಯನ್ನು ಮಾಡಬಾರದು ಎಲೋ! ಎಲ್ಲರೂ ಸೇರಿ ಅವನನ್ನು ಪದಭ್ರಷ್ಟನನ್ನಾಗಿ ಮಾಡುವದಲ್ಲದೆ ಸೀರೆಯನ್ನುಡಿಸಿ ಕೈಯಲ್ಲಿ ಬಳೆಯನ್ನಿರಿಸಿ ಮಧ್ಯದರಾಬಾರದಲ್ಲಿ ತಂದಿರ! ಚಿಕ್ಕಯ್ಯಾ ಬಿಡು ಆ ಸೀರೆಯನ್ನು ಪ್ರಾಣ ಹೋದರು ಚಿಂತೆಯಿಲ್ಲಾ ಹೀಗೆ ಅಪಮಾನವನ್ನು ಮಾಡಿಸಿಕೊಳ್ಳಬೇಡ.

ಸೊಸೆ : ದೇವರೂ? ಮಜೂರಾಮಾಡ್ತಿನ್ನಿ ನಾನು ಚಿಕ್ಕಯ್ಯಾ ಅಲ್ರೀ ಚಿಕ್ಕಯ್ಯನ ತಾಯೀ,

ಬಾಯ : ಯಾತರವಳೇ ನೀನು

ಸೊಸೆ : ಅಗಸರವಳು ಬುದ್ಧಿ ! ಪಾದಕ್ಕೆ ಬಿದ್ದೆ

ಬಾಯ : ನೀನು ಅಗಸರವಳೇ ? ಮತ್ತು ಚಿಕ್ಕನು ನಿನ್ನ ಮಗನೇ?

ಸೊಸೆ : ಅಹುದು ದೇವರೂ ಪಾದಕ್ಕೆ ಬಿದ್ದೆ.

**ಬಾಯ :** ಅಪ್ಪಾ ? ಚಿಕ್ಕನು ನಮ್ಮ ತಾಯಿಯ ಬಹು ದೂರಿನ ಬಳಗದ ಪೋರನೆಂದು ತಂದು ನನ್ನ ಉಡಿಯಲ್ಲಿ ಹಾಕಿದ್ದೆಯಲ್ಲವೇ?

**ಕರಿಯ :** ಎಲ್ಲಿಯ ತಮ್ಮ ಬಳಗಾ ದೇವರೂ! ಹದ್ನಾಕ ವರ್ಷದ ಆಚೆಗೆ ಜಗಪ್ಪರಾಯರು ಆ ಕೂಸಿನ್ನಾ ಇವರ ಕಡಿಂದಾ ಇಸಿಕೊಂಡು ದೊಡ್ಡ ಇನಾಮು ಕೊಡತೇನೆಂತ ಹೇಳಿ, ರಾತ್ರಿ ಆರ ತಾಸಿನ್ಯಾಗ ಇವರಿಬ್ಬರನ್ನು ಅಡಿವ್ಯಾಗ ಕರೆಕೊಂಡುಹೋಗಿ ಕಡದ್ಹಾಕಿ ಬಾ ಅಂತ ನನ್ನ ಸ್ವಾಧೀನಮಾಡಿದ್ರು ನಾ ಇವರ್ನ ಕಡದ್ಹಾಕಬೇಕಂತ ಅಡಿವಾಗ ಕರಕೊಂಡು ಹೋಗಿ ಕತ್ತಿ ಹಿರಿದು ಯಮ್ಮಂನ್ಹಂಗ ನಿಂತೆ, ಅಷ್ಟರಾಗ ಈ ಹೆಣಮಗಳು ಗುಹಸಿ ಬಾಣಂತಿ ಇದ್ದಳು ಗಪ್ಪನ ನನ್ನ ಕಾಲಹಿಡದ್ಲು ಅಂತಃಕರಣ ಹುಟ್ಟಿತು ಬಿಟ್ಟಬಿಟ್ಟೆ ಈಗೊಂದತಿಂಗಳ ಹಿಂದೆ ಯಚ್ಚಮ ಧಣೇರ ಕೊಂದ್ಹಾಕಿ ಬಾ ಅಂತಾ ಕಳಿಸಿದ್ರೆಲ್ವಾ ಆಗ ಕೊಲ್ಲೊ ಕಾಲಕ್ಕೆ ಹನಮಣ್ಣ ಬಂದು ನನ್ನ ಕೈ ಹಿಡಿದಾಗ ಆಗ ನನ ಗುಟ್ಟೆಲ್ಲಾ ಹೊರಬಿತ್ತು. ಮನಸ್ಸು ಮಾಡಿದ್ರ ಯಚ್ಚಮ ಧಣೇರು ಆಗಿಂದಾಗ ನನ್ನ ಕೊಂದ್ಹಾಕಬೇಕಾಗಿತ್ತು. ದೊಡ್ಡವರು ಹಾಗ್ಯಾಕ ಮಾಡಾಕ ಹೋದಾರು ಎಲೇ ಬಂಟಾ ಓಬ್ಬಂಟಿಗನಾಗಿ ನನ್ನನ್ನು ಕೊಲ್ಲಲಿಕ್ಕೆ ಬಂದ ನೀನು ಬಹದ್ದೂರ ಖರೇ ಅಂತಾ ಕ್ಷಮೆ ಮಾಡಿ ಬಿಟ್ಟು ಮುಂದೆ ಅವರ ಅಪ್ಪಣೆ ಪ್ರಕಾರ ಈ ಮಡಿವಾಳಿ ಮಗಾ, ಮತ್ತು ಸೊಸಿನ್ನ ಕರಕೊಂಡು ಬಂದೀನಿ ನೋಡ್ರಿ ದೇವರು.

**ಜಗ :** ಸ್ವಾಮಿ ದ್ರೋಹಿ.

**ಬಾಯ :** ಮಧ್ಯವೇ ಅವನು ನಿನ್ನಂಥ ಪಿಶ್ಯಾಚ ವೃತ್ತಿಯ ಸ್ವಾಮಿದ್ರೋಹವನ್ನು ಮಾಡಿದ್ದರೂ ಪರಮ ನಿಷ್ಟನಾಗಿದ್ದಾನೆ ಕೊನೆಯುವರೆಗೂ ಪಶ್ಚಾತ್ತಾಪವಾಗದಂಥ ನಿನ್ನಂಥ ಪಾಪಿ ಕ್ಷತ್ರಿಯರಿಗಿಂತಲು ಕೃತಕರ್ಮಗಳ ಪಶ್ಚಾತಾಪದಿಂದ ಪಾವನನಾದ ಪುಣ್ಯವಂತನಿದಾನು ರಾಜಪುರುಷರನ್ನು ಅನ್ಯಾಯವಾಗಿ ಸಾಲು ಸಾಲಾಗಿ ನೇಣು ಹಾಕಿ ಕೊಲ್ಲಿಸಿ ಅವರ ರಕ್ತದಲ್ಲಿ ಮುಣಿಗೇಳುವಂಥ ನಿನ್ನಂಥ ನರಕದೊಳನೇ ಹುಳಕ್ಕಿಂತಲೂ ಕನಿಕರದಿಂದ ಕೊಲೆ ಮಂಥಾ ಹೀನ ಕಾರ್ಯಕ್ಕೆ ಹಿಂಜರಿದ ದಯಾಳು ಇದ್ದಾನೇ ! ಪ್ರತ್ಯಕ್ಷ ಪಿಶಾಚಿಯಾದ ಜಗದೇವರಾಯನೆ ನಿನ್ನ ಹೊಟ್ಟೆಯಿಂದ ಹುಟ್ಟಿ ಬಂದ ತಪ್ಪಿಗಾಗಿ ನನ್ನಿಂದ ಎಂತಹ ಕಠೋರ ಕರ್ಮಗಳನ್ನು

ಮಾಡಿಸಿದೆ ? ಶ್ರೀಮದ್ ಪರಮಪೂಜ್ಯ ವಿದ್ಯಾರಣ್ಯ ಮಹಾಸ್ವಾಮಿಗಳವರಿಂದ ಸ್ಥಾಪಿಸಲ್ಪಟ್ಟ ಪವಿತ್ರ ನರಪತಿಗಳು ಸಿಂಹಾಸನವನ್ನು ರಜಕನಿಂದ ಭ್ರಷ್ಟಮಾಡಿಸುವದಲ್ಲದೇ ತನ್ನ ತಾಮಸೀವ್ರತ್ತಿಯ ಲಾಭವನ್ನು ಪಡೆದು ಸಕಲ ನರಪತಿಗಳ ವಂಶವನ್ನು ಅಳಿದು ಬಿಟ್ಟ ನಿನ್ನಂತಹ ಸ್ವಜನ ದ್ರೋಹಿ ಪ್ರಜಾದ್ರೋಹಿ ಧರ್ಮದ್ರೋಹಿ ಮತ್ತು ಬಂಧು ದ್ರೋಹಿಯಾದ ಮಹಾಪಾತಕರಿಗೆ ತಕ್ಕ ಪ್ರಾಯಶ್ಚಿತ್ತವು ಯಾವ ನಿರ್ಣಯ ಶಿಂಧುವಿನಲ್ಲಿರಬೇಕು ? ಅದಕ್ಕೆ ಹೊಸದಾದ ನಿರ್ಣಯವೆಂದರೆ ಇದೋ ತಂದೆಗೆ ಮಗಳೇ ಮೃತ್ಯು (ಇರಿದು ಕೊಲ್ಲುವಳು) ಮತ್ತು ಇವೆಲ್ಲಾ ಪಾಪಕಾರ್ಯಕ್ಕೆ ತಕ್ಕ ಪ್ರಾಯಶ್ಚಿತ್ತವೆಂದರೆ ಆತ್ಮಹತ್ಯೆ (ತಾನು ಇರಿದುಕೊಂಡು ಸಾಯುವಳು)

**ಲಕ್ಷ್ಮಣ :** ಅಂತೂ ಕೊನೆಗೆ ಶ್ರೀಮತಿ ಬಾಯಮ್ಮ ದೇವಿಯವರು ವೀರಪತ್ನಿಯಾದರು ಎಲೋ ! ತೀವ್ರ ಉಪಚರಿಸಿ ನೋಡಿ ಬದುಕುವ ಸಂದರ್ಭವಿರಬಹುದು.

**ಸಂಜಿ :** ಉಭಯರ ಪ್ರಾಣಗಳು ಹಾರಿಹೋದವು.

**ಲಕ್ಷ್ಮಣ :** ಅದಕ್ಕೆ ಉಪಾಯವಿಲ್ಲಾ ಅಸ್ತು! ಗುರುಗಳೇ ಈಗ ಶ್ರೀರಾಮದೇವರ ಪಟ್ಟಾಭಿಷೇಕದ ಮಹತ್ಕಾರ್ಯದಲ್ಲಿ ಹನುಮಾ ಮತ್ತು ಸಂಜಿವಿಯರೆ, ನಿಮಗೆ ಪಾರಿತೋಷಕದ ವಿವಾಹ ನಿಶ್ಚಯವಾಗಿರುವದು ಪ್ರಯುಕ್ತ ಪಾರಿತೋಷಕ್ಕೆ ಅಪ್ಪಣೆಯಾಗಲಿ.

**ಗುರು :** ಆಗಲಿ.

**ಲಕ್ಷ್ಮಣ :** ಹನುಮಾ ? ಅದೇ ನಿಮ್ಮಕ್ಕ ರಂಗಮ್ಮನ ಮಗಳಾದ ಈ ಸಂಜೀವಿಯನ್ನು ಪಾರಿತೋಷಕವಾಗಿ ಕೊಟ್ಟಿದ್ದೇನೆ ತೆಗೆದುಕೊ ಇಗ್ಗೆ ಈ ಭೂಮಿಯಲ್ಲಿ ರಾಮದೇವ ಮಹಾರಾಜರ ಹತ್ತಿರದ ಆಪ್ತಳೆಂದರೆ ಸಂಜೀವಿಯೊಬ್ಬಳೆ.

**ರಾಮ :** ಹಾಗಾದರೆ ಇವಳು ನನಗೇನಾಗಬೇಕು ನಾಯಕಾ?

**ಲಕ್ಷ್ಮ :** ಬುದ್ಧಿ ! ಶ್ರೀಮದ್ ವೆಂಕಟಪತಿರಾಯರ ಮಗಳಾದಿವಳು ತಮಗೆ ಸೋದರತ್ತೆಯಾಗಲಿಲ್ಲವೇ?

**ರಾಮ :** ಹಾಗಾದರೆ ಇಂದಿನಿಂದ ನಾನು ಇವರಿಗೆ ಅತ್ತಿ, ಅತ್ತಿ; ಎಂದು ಕರೆಯುವೆನು.

**ಗುರು :** ಆದ್ದದ್ದಾಯಿತು ವಿಧಿ ಪ್ರಮಾಣದಂತೆ ಎಲ್ಲ ಕಾರ್ಯಗಳಾಗಿವೆ ಈಶಾನುಗ್ರಹದಿಂದ ಸಂರಕ್ಷಿತವಾದ ಈ ಅಭಿನವ ಮಹಾರಾಜರ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಗಳ ಚಿಂತನೆಯನ್ನು ಮಾಡಿ ಪರಮೇಶ್ವರನಿಗೆ ಮಂಗಲವನ್ನು ಪಾಡುವಾ.

ಸಂಪೂರ್ಣ

===***====***===

# ಉಷಾರಾಣಿ

• ಶಂಕ್ರಪ್ಪ ಮಾಸ್ತರ ಕಲ್ಮಲಾ

# ಶಂಕ್ರಪ್ಪ ಮಾಸ್ತರ, ಕಲ್ಮಲಾ

ರಾಯಚೂರ ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಕಲ್ಮಲಾದ ಶಂಕ್ರಪ್ಪ ಮಾಸ್ತರರು ೦೫.೦೩.೧೯೧೦ ರಂದು ಜನಿಸಿದರು. ಮೂಲತಃ ಕಲಬುರ್ಗಿ ಜಿಲ್ಲೆಯವರು. ಕಲಬುರ್ಗಿ ಜಿಲ್ಲೆಯ ಮನಗನಹಾಳ ಗ್ರಾಮದವರಾಗಿದ್ದ ಇವರು ತಾಯಿ ತವರೂರಾದ ಕಲ್ಮಲಾದಲ್ಲಿಯೇ ನೆಲೆಸಿ ಶಿಕ್ಷಕ ವೃತ್ತಿಯನ್ನಾರಂಭಿಸಿದರು. ರಂಗಭೂಮಿಯ ಕಡೆ ವಾಲಿದ ಶಂಕ್ರಪ್ಪ ಮಾಸ್ತರರು "ಬಸವರಾಜ ನಾಟ್ಯಕಲಾ ಸಂಘವನ್ನು" ಸ್ಥಾಪಿಸಿದರು. ಇಂದಿನ ಚಿತ್ರನಟಿ ಆದವಾನಿ ಲಕ್ಷ್ಮೀದೇವಿ, ರಾಯಚೂರಿನ ತಾರಾದೇವಿ ಹಾಗೂ ಲೀಲಾದೇವಿಯಂತಹ ಪ್ರಮುಖ ರಂಗ ನಟಿಯರು ಇವರದೇ ಕಂಪನಿಯಲ್ಲಿ ರಂಗ ಚಟುವಟಿಕೆಗಳನ್ನು ಪ್ರಾರಂಭಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ರಾಯಚೂರ ಜಿಲ್ಲೆಯ ಬಹುಮಹತ್ವದ ನಾಟಕಕಾರ ಶಂಕ್ರಪ್ಪ ಮಾಸ್ತರ ತಮ್ಮ ಪ್ರಥಮ ನಾಟಕ 'ಉಷಾರಾಣಿ' ಯನ್ನು ೧೯೪೨ರಲ್ಲಿಯೇ ರಚಿಸಿದರು. ರಾಯಚೂರಿನ ಸಂಗಡಿಗ ಸಮಿತಿಯವರು ೧೯೫೦ರಲ್ಲಿ ಈ ನಾಟಕವನ್ನು ಪ್ರಕಟಿಸಿದರು. ಶ್ರೀ ಚೆನ್ನಬಸಪ್ಪ ಬೆಟ್ಟದೂರ, ಅವರು ಈ ಕೃತಿಗೆ ಮುನ್ನುಡಿ ಬರೆದಿದ್ದಾರೆ. ಶ್ರೀ ಶಾಂತರಸರು ಪ್ರಕಾಶಕರ ನುಡಿ ಬರೆದಿದ್ದಾರೆ. ಇದೇ ನಾಟಕವನ್ನು ಇಲ್ಲಿ ಆಯ್ಕೆಮಾಡಿಕೊಳ್ಳಲಾಗಿದೆ.

ಶಂಕ್ರಪ್ಪ ಮಾಸ್ತರರು ಭಕ್ತ ಮಾರ್ಕಂಡೇಯ, ತ್ರಿಪುರ ವಿಜಯ, ಕಲ್ಯಾಣಕ್ರಾಂತಿ ಜ್ಯೋತಿರ್ಲಿಂಗದಂತಹ ಪೌರಾಣಿಕ ನಾಟಕಗಳನ್ನು ಬರೆದಿದ್ದಾರೆ. ಕಲ್ಯಾಣಕ್ರಾಂತಿ ನಾಟಕವು ೧೯೫೨ರಲ್ಲಿ ಬಸವಕಲ್ಯಾಣದಲ್ಲಿ ಪ್ರಯೋಗಗೊಂಡು ಜನಪ್ರಿಯವಾಯಿತು. ಆಗಿನ ಮೈಸೂರು ರಾಜ್ಯದ ರಾಜ್ಯ ಪಾಲರಾಗಿದ್ದ ಜಯಚಾಮರಾಜ್ ಒಡೆಯರ್ ಅವರು ಈ ನಾಟಕ ನೋಡಿ ಮೆಚ್ಚಿ ಶಂಕ್ರಪ್ಪ ಮಾಸ್ತರರಿಗೆ ಮಹಾನ್ ನಾಟಕಕಾರರೆಂಬ ಬಿರುದು ನೀಡಿ ಗೌರವಿಸಿದ್ದನ್ನಿಲ್ಲಿ ಸ್ಮರಿಸಬಹುದಾಗಿದೆ. ३೦–೧೧– ೧೯೬೭ರಲ್ಲಿ ಶಂಕ್ರಪ್ಪ ಮಾಸ್ತರರು ನಿಧನರಾದರು.

## -: ಪಾತ್ರ ಪರಿಚಯ :-

ಬಾಣಾಸುರ

ಚಂದ್ರಕಾಂತ

ಕುಂಬಕ

ರುದ್ರಾಕ್ಷ

ಚನ್ನಿ

ಶಂಕರ

ಪಾರ್ವತಿ

ಅನಿರುದ್ಧ

ಉಷಾ

ಚಿತ್ರಲೇಖಾ

ಸಾತ್ಯಕಿ

ನಾರದ

ಕೃಷ್ಣ

ರುಕ್ಮಿಣಿ

# ಅಂಕ ೧

## ದೃಶ್ಯ ೧–ಒಡ್ಡೋಲಗ

[ಉನ್ನತವಾದ ರತ್ನ ಸಿಂಹಾಸನದ ಮೇಲೆ ಹುಲಿಯ ಮೃದುಚರ್ಮ ಪರಿ ಶೋಭಿಸುತ್ತಿದೆ. ಸಿಂಹಾಸನದ ಬಲಭಾಗದಲ್ಲಿ ಅಗ್ರಪೀಠದ ಮೇಲೆ ಪ್ರಧಾನ ಅಮಾತ್ಯನಾದ ಕುಂಭಕನು ಕುಳಿತಿದ್ದಾನೆ. ಎಡಬದಿಯ ಪೀಠದಲ್ಲಿ ಮಹಾದಂಡ ನಾಯಕನಾದ ಚಂದ್ರಕಾಂತನು ವಿರಾಜಿಸುತ್ತಿರುವನು. ಎರಡು ಬದಿಯಲ್ಲಿ ಸಾಲಾಗಿ ಕಂಗೊಳಿಸುತ್ತಿರುವ ಸುಖಾಸನಗಳ ಮೇಲೆ ಸಾಮಂತ ದೊರೆಗಳು ಅನುಕ್ರಮವಾಗಿ ಕುಳಿತಿರುವರು. ಪರಿಚಾರಕ ಬಾಲೆಯರೀರ್ವರು ಸಿಂಹಾಸನದ ಎರಡು ಬದಿಗಳಲ್ಲಿ ಚಾಮರಗಳನ್ನು ಹಿಡಿದು ನಿಂತಿರುವರು. ಪರಿಚಾರಕರು ಬೆಳ್ಳಿಬೆತ್ತ, ಭಲ್ಲೆ ಮುಂತಾದವುಗಳನ್ನು ಹಿಡಿದುಕೊಂಡು, ಶಿಸ್ತಿನಿಂದ ಟೊಂಕ ಕಟ್ಟಿಕೊಂಡು ನಿಂತಿರುವರು. ಪರಶಿವನನ್ನು ಕುರಿತು, ಮಹಾ ಘೋರ ತಪವನ್ನಾಚರಿಸಿ, ಮಂತ್ರಾನುಷ್ಠಾನದಲ್ಲಿ ಸಿದ್ಧಿ ಪಡೆದು, ಸಿದ್ಧಕಾಯ ದೈತ್ಯಸಾಮ್ರಾಟನಾದ ಬಾಣಾಸುರನು ತನ್ನ ರಾಜಧಾನಿಯಾದ ಶೋಣಿತ ನಗರವನ್ನು ಮರಳಿ ಪ್ರವೇಶಿಸುವ ಶುಭ ಸನ್ನಿವೇಶ. ಮಹಾದ್ವಾರದಲ್ಲಿ ದುಂದುಭಿ, ಕಹಳೆಗಳು ಉನ್ನತ ಸ್ವರದಲ್ಲಿ ಮೊಳಗಿ ಸ್ವಾಗತಿಸುವುವು. ಮಂಗಲವಾದ್ಯ ರವಗಳಿಂದ ಪುಲಕಿತನಾದ ಬಾಣಾಸುರನು ಮಂದಹಾಸದಿಂದ, ಗಂಭೀರತೆಯಿಂದ ಪ್ರವೇಶಿಸುವನು. ಉನ್ನತಕಾಯ, ಜಡೆಗಟ್ಟಿದ ನೀಳವಾದ ಕೇಶರಾಶಿ, ಸ್ಫಟಿಕಮಣಿ, ರುದ್ರಾಕ್ಷಿಗಳಿಂದ ನಿರ್ಮಿತವಾದ ಮೂರು ಮಾಲೆಗಳು, ವಿಶಾಲ ಫಾಲದ ಮೇಲೆ ಶಿರಾಗ್ರಭಾಗವನ್ನು ಸುತ್ತಿವೆ. ಕೇಸರಿ ಬಣ್ಣದ ಪೀತಾಂಬರವನ್ನು ಉಟ್ಟಿದ್ದಾನೆ. ಚಿರತೆಯ ಮೃದು ಚರ್ಮವೊಂದು ಎಡಭುಜದ ಮೇಲಿಂದ ಎದೆಯನ್ನು ಮುಚ್ಚಿಕೊಂಡು ಸೊಂಟದವರೆವಿಗೂ ಬಂದಿದೆ. ನಡುವಿಗೊಂದು ಮಣಿಮಯ ಕಟ್ಟು ಬಿಗಿದಿದೆ. ಕೊರಳಲ್ಲಿ ದೊಡ್ಡ ರುದ್ರಾಕ್ಷಿಗಳ ಮಾಲೆಗಳು ಶೋಭಿಸುತ್ತಿವೆ. ಬಾಹುಗಳೆರಡರಲ್ಲಿಯೂ ದೊಡ್ಡ ರುದ್ರಾಕ್ಷಿ ಸರಗಳು, ಮುಂಗೈಗಳಲ್ಲಿ ರುದ್ರಾಕ್ಷಿ ಸರಗಳು, ಕಿವಿಗಳಲ್ಲಿ ಬಂಗಾರದ ಹೊದಿಕೆಯಿಂದ ನಿರ್ಮಿತವಾದ ಎರಡು ರುದ್ರಾಕ್ಷಿಗಳು ನೇತಾಡುತ್ತಿವೆ. ವಿಶಾಲ ಫಾಲದಲ್ಲಿ ಭಸ್ಮ ತ್ರಿಪುಂಡ್ರವು ಎದ್ದು ಕಾಣುತ್ತಿದೆ. ಸೊಂಟದಲ್ಲಿ ಬಂಗಾರ ವರೆಯುಳ್ಳ ಆಯುಧವು ವಜ್ರ ಕೆಚ್ಚಿದ ಹಿಡಿಯಿಂದ, ಎಡಪಾರ್ಶ್ವದಲ್ಲಿ ನೇತಾಡುತ್ತಿರುವುದು. ಹಿಂಬದಿಯಲ್ಲಿ ಛತ್ರ ಚಾಮರಗಳು, ಮುಂಬದಿಯಲ್ಲಿ ವಂದಿಮಾಗಧರು ಸ್ತೋತ್ರಪಾಠ ಹೇಳುತ್ತಿರುವರು, ಆಶ್ರಮದಿಂದ ಬಂದ ನಟುಗಳು ಮಂಗಲಾಕ್ಷತೆಗಳನ್ನು ತೂರುತ್ತಿರುವರು, ಸುವಾಸಿನಿಯರು ನೀರಾಜನ ಬೆಳಗುವರು. ಮೆಲ್ಲಗೆ ಸಿಂಹಾಸನಾಭಿಮುಖವಾಗಿ ಸಾಗುವಾಗ ಮಂತ್ರಿ, ಮಾಂಡಲಿಕರೆಲ್ಲ ಜಯಘೋಷರವದೊಡನೆ ಪುಷ್ಪ ವೃಷ್ಟಿಗೈಯ್ಯುವರು. ಬಾಣಾಸುರನು ಭದ್ರಾಕಾರನಾಗಿ ಸಿಂಹಾಸನದಲ್ಲಿ

ಮುಹೂರ್ತನಾಗುವನು. ಬಲಬದಿಯಲ್ಲಿ ಉನ್ನತಾಕಾರವಾದ ಗದಾದಂಡವು ಒರಗಿ ನಿಂತಿರುವದು. ಬಾಣಾಸುರನು ಆಸನದಲ್ಲಿ ಮಂಡಿತನಾದ ಮೇಲೆ ಎಲ್ಲರನ್ನೂ ಕೂಡಲು ಸನ್ನೆ ಮಾಡುವನು. ಅವನ ಬಲಬದಿಯಲ್ಲಿ ಅಗಲವಾದ ಬೆಳ್ಳಿಯ ತಬಕದಲ್ಲಿ ರುದ್ರಾಕ್ಷಿ ಮಾಲೆಗಳು, ಪುಷ್ಪಗುಚ್ಛಗಳೂ ಇರುವುವು. ಎಲ್ಲೆಲ್ಲಿಯೂ ಹರ್ಷೋದ್ಗಾರಗಳ ಹೊನಲು ಹರಿಯುತ್ತಿರುವುದು. ವಂದಿನಾಯಕನು ಮುಂದೆ ಬಂದು ಮುಜುರೆಮಾಡಿ, ಹಿಂಬದಿಗೆ ಸರಿದು ನಿಂದು ಪರಾಕ್ರಮವನ್ನು ಹೊಗಳುವನು.]

**ವಂದಿನಾಯಕ** – ದೋರ್ದಂಡ ವೈರಿ ಸಂಕುಳ ದಮನ, ದೈತ್ಯೇಂದ್ರ ಸತತಶಿವಾನಂದ ಭಾವಾಂಬುಧಿಚಂದ್ರ, ಪ್ರಜಾರಂಜನಪರಾಯಣ ಗುಣ ಸಾಂದ್ರ. ದೈತ್ಯಲೋಕ ಸಾಮ್ರಾಟ, ಬಾಣಾಸುರ ಮಹಾರಾಜ ಬಹು ಪರಾಕ್, ಬಹುಪರಾಕ್ !

**ಕುಂಭಕ** – (ಎದ್ದು ತಲೆಬಾಗಿ) ಮಹಾಪ್ರಭುಗಳು ಮರಳಿ ಪ್ರಾಪ್ತರಾದುದನ್ನು ಕಂಡು, ನಂಬಿಗೆಯ ಸೇವಕರಾದ ನಾವೆಲ್ಲರೂ ಆನಂದದಿಂದ ಅಭಿವಂದನೆಗಳನ್ನು ಅರ್ಪಿಸುತ್ತೇವೆ. ಪ್ರಭುಗಳು ದೀರ್ಘಾಯುಗಳಾಗಿ, ಶೋಣಿತ ಸಾಮ್ರಾಜ್ಯವನ್ನು ಚಿರವಾಗಿ ಶಾಸನ ಮಾಡಲೆಂದು ಹಾರೈಸುತ್ತೇನೆ.

**ಬಾಣಾಸುರ** – ಭಗವಾನ್ ಭೋಲಾನಾಥನ ಅನುಗ್ರಹ ಪಡೆದು, ಮರಳುವವರೆಗೂ, ರಾಜ್ಯಭಾರವನ್ನು ಸುಸೂತ್ರವಾಗಿ ನಡಿಸಿಕೊಂಡು ಹೋದ ನಿಮ್ಮೆಲ್ಲರಿಗೂ ನನ್ನ ಧನ್ಯವಾದಗಳಿವೆ. ಇದೆಲ್ಲವೂ ನಿಮ್ಮ ರಾಜಭಕ್ತಿಯನ್ನು ಪ್ರದರ್ಶಿಸುತ್ತದೆ.

**ಚಂದ್ರಕಾಂತ** – (ಎದ್ದುನಿಂತು) ದೊರೆಗಳು ಉಗ್ರ ತಪಸ್ಸಿನ ಶ್ರಮ ವಿಶೇಷದಿಂದ ನಿಕೃಷ್ಟಕಾಯರಾಗಿರುವರು.

**ಬಾಣಾಸುರ** – ಮಂಗಳಾಂಗನಾದ ಶ್ರೀಶಂಕರನ ಸ್ಮರಣೆಯಲ್ಲಿ ಅನಂತ ಯುಗಗಳನ್ನು ಕಳೆದರೂ ನನಗೆ ಆಯಾಸವಿಲ್ಲ. ಚಿನ್ಮಯಾನಂದಸ್ವರೂಪನಾದ ಆ ಜಗನ್ನಿಯಾಮಕನು, ನಮ್ಮೆಲ್ಲರನ್ನು ಶಾಂತಿಯಿಂದ ರಕ್ಷಿಸಲಿ ಇಂದು ನಿಮ್ಮೆಲ್ಲರ ಯಶೋಭಿವೃದ್ಧಿಗಾಗಿ, ಈ ಸಂತೋಷ ಸಮಯದಲ್ಲಿ, ಶಿವಪ್ರಸಾದರೂಪವಾದ ಈ ಅಕ್ಷಮಾಲೆಗಳನ್ನು ಪ್ರದಾನ ಮಾಡುತ್ತೇನೆ. ಎಲ್ಲರೂ ಶಿವಭಕ್ತಿಯಲ್ಲಿ ಆನಂದದಿಂದ ನಲಿಯಿರಿ.

**ಕುಂಭಕ** – (ಅಕ್ಷಮಾಲೆಗಳನ್ನು ವಿನಮ್ರತೆಯಿಂದ ಸ್ವೀಕರಿಸಿ) ಅನುಗ್ರಹೀತರಾದೆವು ಶಿವಪ್ರಸಾದವು ನಮ್ಮನ್ನು ಸಿದ್ಧಕಾಯರನ್ನಾಗಿ ಮಾಡಿತು ಪ್ರಭು!

**ಚಂದ್ರಕಾಂತ** – ಸಿದ್ಧಕಾಯರಾದ ತಮ್ಮ ದಿವ್ಯಸನ್ನಿಧಿಯಲ್ಲಿ ಹರ್ಷೋನ್ಮಾದದಿಂದ ನಮ್ಮ ಬಾಹುಬಲವು ಸ್ಫುರಣೆಗೊಳ್ಳುತ್ತಿರುವದು. ದಿಙ್ಮಂಡಲದ ಮೇಲೆ ಪ್ರಭುಗಳ ದಿಗ್ವಿಜಯವಾಗಬೇಕು.

**ಕುಂಭಕ** – ಮೊದಲು ಕುಲಾಂಗಾರನಾದ ಆ ಕೃಷ್ಣನ ಕಾರಸ್ಥಾನವನ್ನೇ ಮುರಿಯಬೇಕು ಮಹಾರಾಜ.

**ಬಾಣಾಸುರ** – ದಿಙ್ಮಂಡಲದ ಮೇಲೆ ದಿಗ್ವಿಜಯ ! ಕೃಷ್ಣನ ಕಾರಸ್ಥಾನ! ಆಗಲೇ ಬೇಕು.. ಗೊಲ್ಲಕುನ್ನಿಯಾದ ಆ ಕೃಷ್ಣನು ಪಾಂಡವರ ಕ್ರೀತ ದಾಸ. ಜಾರತನದಲ್ಲಿ ನಿಸ್ಸೀಮನಾದ ಮಹಾ ಮೋಸಗಾರ. ಇಂತಹ ಅತ್ಯಾಚಾರಿಯನ್ನು ದೇವರೆಂದು ಬೊಗಳುವ ಭಾವಿಕರಿಗೆ ಬುದ್ಧಿಯಿಲ್ಲ, ಬುದ್ಧಿ! ಇಂತಹ ಮರುಳು ಭಾವಿಕರಿಗೆ ಬುದ್ಧಿಗಲಿಸುವುದಕ್ಕಾಗಿಯೇ ಭೂಮಂಡಲದ ಮೇಲೆ ನಮ್ಮ ದಿಗ್ವಿಜಯ !

**ಕುಂಭಕ** – ದೇವರ ದಂಡಯಾತ್ರೆಯು ಧರಾಮಂಡಲದ ಮೇಲೆ ಜಯ ಭೇರಿಯನ್ನು ಮೊಳಗಿಸುತ್ತ ಸಾಗಲಿ.

**ಚಂದ್ರಕಾಂತ** – ತಂತ್ರಗಾರನಾದ ಆ ಕೃಷ್ಣನು ಮಹಾ ಮೋಸಗಾರ. (ಪದ) ಅವನ ಕುಟಿಲ ತಂತ್ರದಿಂದಲೇ, ಭಾರತ ಯುದ್ಧದಲ್ಲಿ ಪಾಂಡವ ವೀರರಿಗೆ ವಿಜಯವಾಯಿತು.

**ಬಾಣಾಸುರ** – ಹುಂ!..... ಆ ರಣರಂಗವು ಪಾಪದ ಭೀಕರ ಕೂಪ! ನರಕದ ನಾಡು! ವಂಚನೆಯ ಸಂಚಯ! ವೀರತೆಯ ಕಳಂಕ! ಮಾನವತೆಯ ಅಧಃಪತನ! ಅದು ಯುದ್ಧವಲ್ಲ ಕೇವಲ, ಕಟುಕತನದಿಂದ ಮಾಡಿದ ನೀತಿಯ ಕೊಲೆ! ಸ್ವಾಭಿಮಾನಿಗಳ ಉಕ್ಕಿನ ಹೃದಯಕ್ಕೆ ವಜ್ರದ ಶೂಲೆ! ರಣಧುರೀಣರ ಧರ್ಮನೀತಿಯಿಂದ ಬಹಿಷ್ಕೃತವಾದ ಪೈಶಾಚಿಕ ವರ್ತನೆ!

**ಕುಂಭಕ** – ಆದರೂ... ಯುಧೀಷ್ಠರನು ಧರ್ಮದೇವತೆಯೆಂದು ಗಣ್ಯನಾಗಿದ್ದಾನೆ ಪ್ರಭು!

**ಬಾಣಾಸುರ** – ನೀತಿ ನೇಮಗಳಿಲ್ಲದ ಮಂದಮತಿಗಳಲ್ಲಿ – ವಿಜಯವೇ ಧರ್ಮವೆಂದು ಹೇಳುವ ಪಾಮರರಾದ ಪಾಖಂಡಿಗಳಲ್ಲಿ – ಜಯಾಪಜಯಗಳು, ನ್ಯಾಯ ಧರ್ಮಗಳ ನಿಷ್ಕರ್ಷೆಯನ್ನು ಮಾಡಲಾರವು. ಪರಾಜಯವಾದರೂ ಯುದ್ಧಭೂಮಿಯು

ವೀರೋಚಿತ ಧರ್ಮವನ್ನು ಕಾಪಾಡುವವನೇ ವೀರಧರ್ಮಿ. ರಣಕ್ಷೇತ್ರವು ಪವಿತ್ರ ಧರ್ಮಭೂಮಿಯಾಗಿದೆ. ಅದು ವೇಶ್ಯೆಯ ಬಾಜಾರದಂತೆ ಮೋಸದ ಸೀಮೆಯಲ್ಲ... ಕೊಲೆ! ಎಂತಹ ಹೀನ ಕೊಲೆ! ಬೆಂಗೊಟ್ಟು ಓಡುವ ಭೀಷ್ಮನ ಕೊಲೆ! ದ್ರೋಣನಿಗಾದ ಮೋಸದ ಮರಣ! ನಿಸ್ಸಹಾಯಕನಾದ ಕರ್ಣನಪತನ! ಕೌರವನ ಕಟುಕ ವಧೆ!! ಕುರುಕ್ಷೇತ್ರವನ್ನು ಕರಾಳ ಪಾಪಮಯ ಭೀಕರ ಹಿಂಸೆಯ ಕ್ಷೇತ್ರವನ್ನಾಗಿ ಮಾರ್ಪಡಿಸಿದ ಯುಧಿಷ್ಠರನ ಧರ್ಮಪ್ರಭಾವ! ದೇವರೆಂದು ನಟಿಸುವ ಧೂರ್ತ ಕೃಷ್ಣನ ಪಾಶವೀ ಧರ್ಮ! ಇಂತಹ ಅನ್ಯಾಯದ ಜಯಕ್ಕಿಂತಲೂ, ಪರಾಜಯವೇ ಪರಮಧರ್ಮವಾಗಿವೆ.

**ಚಂದ್ರಕಾಂತ** – ಪ್ರಭುಗಳ ಆದರ್ಶ ನಿರ್ಣಯವು ಯೋಗ್ಯವಿದೆ. ನೀತಿಯ ಕೊಲೆಯೇ ಚಾಂಡಾಲ ಕರ್ಮವಾಗಿದೆ.

**ಬಾಣಾಸುರ** – ಚಂಡ ಪರಾಕ್ರಮಿಗಳು ಈ ಚಾಂಡಾಲ ನೀತಿಗೆ ಯಾವಾಗಲೂ ಹೇಸುವರು. ಉಂಡಾಡುವದೇ ಧರ್ಮವೆಂದು ತಿಳಿಯುವ ಭಂಡರಿಗೆ ಮಾತ್ರ ಇದು ಅನುಕೂಲ ಧರ್ಮವಾಗಬಹುದು. ಇಂತಹ ಪುಂಡರನ್ನು ಪಾತಾಳಕ್ಕೆ ಮೆಟ್ಟುವದೇ ದೈತ್ಯವೀರರ ಧರ್ಮವಾಗಿದೆ. ವೀರಯೋಧನಾದ ಜರಾಸಂಧನು, ಹದಿನೇಳು ಬಾರಿ ಈ ಕೃಷ್ಣನ ಮೇಲೆ ದಂಡೆತ್ತಿ ಹೋಗಿ ಅವನನ್ನು ದುರಂತವಾಗಿ ಶಾಸನ ಮಾಡಿದನು. ಆ ಮಹಾವೀರನು ಈ ಕಳ್ಳ ಕೃಷ್ಣನ ಶಕ್ತಿ ಸರ್ವಸ್ವವನ್ನೇ ಶೋಷಣ ಮಾಡಿದನು. ಕಡೆಗೆ ಕಪಟೋಪಾಯದಿಂದ ಹೂಡಿದ ಪಾಂಡವರ ಆಕಸ್ಮಿಕ ಮೋಸದ ಬಲೆಯಲ್ಲಿ ಸಿಕ್ಕು ಹತನಾದನು! ಆ ರಣಕೇಸರಿಯ ಮರಣವು ನಮಗೆ ನಿರಂತರ ಚುಚ್ಚುವ ಶೂಲದ ಮೊನೆಯಾಗಿದೆ. ನೀತಿಯ ಉಚ್ಚಾಟನೆ ಮಾಡುವ ನೀಚರನ್ನು ದಂಡಿಸುವುದೇ ದೈತ್ಯವೀರರ ಧರ್ಮವಾಗಿದೆ.

**ಕುಂಭಕ** – ಹೌದು ಮಹಾಪ್ರಭು, ನೀತಿಚಾಂಡಾಲರನ್ನು ಶಿಕ್ಷಿಸುವುದೇ ನ್ಯಾಯಮೂರ್ತಿಗಳಾದ ತಮ್ಮ ಧರ್ಮವಾಗಿದೆ. ವಂಚಕಿಗಳಾದ ಅವರ ಮೇಲೆ ನಾವು ಲಕ್ಷ್ಯವಿಡುವುದು ನಮ್ಮ ಕರ್ತವ್ಯವಾಗಿದೆ.

**ಬಾಣಾಸುರ** – ಹ ಹ ಹ ಹ ಹ ....! ವಂಚನೆ! ಮೋಸ! ಇವುಗಳಿಗೆ ಬಾಣನಲ್ಲಿ ಸ್ಥಳವೇ ಇಲ್ಲ. ಇವುಗಳ ಮೂಲೋತ್ಪಾಟನವೇ ನಮ್ಮ ಮೂಲ ಉದ್ದೇಶ. ನಮ್ಮ ಈ ಸಾಹಸಮೂಲವಾದ ಶಕ್ತಿಯ ಸಿದ್ಧಿಗಾಗಿಯೇ

ನಾಳೆ ಕೈಲಾಸಕ್ಕೆ ಪ್ರಯಾಣ. ಮಂತ್ರಿಗಳೇ, ಭಗವಾನ್ ಶ್ರೀ ಶಂಕರನ ದರ್ಶನವು ನಮ್ಮ ಎಲ್ಲಾ ಪರಿವಾರಕ್ಕಾಗಲಿ.

**ಕುಂಭಕ –** ಆಗಲಿ ಮಹಾರಾಜ, ಇದೆಲ್ಲ ನಮ್ಮ ಭಾಗ್ಯ ತಮ್ಮ ಆಶೀರ್ವಾದ.

**ಬಾಣಾಸುರ–** ಸಂಗಡ ಮುದ್ದುಪುತ್ಥಳಿಯಾದ ಉಷೆಯೂ ಹೊರಡಲಿ– ಮಹಾಮಾಯೆಯ ಸೇವೆಯಲ್ಲಿ ಕೃತಾರ್ಥಳಾಗಲಿ.

**ಚಂದ್ರಕಾಂತ –** ಮಹದಾನಂದ ಪ್ರಭು. ಅರಮನೆಗೆ ನಿರೋಪವನ್ನು ಕಳುಹಿಸುತ್ತೇನೆ.

**ಕುಂಭಕ –** ಭಗವದ್ಭಕ್ತರಾದ ತಮ್ಮ ಭಕ್ತಿಯು ಲೋಕಪ್ರಖ್ಯಾತವಾಯಿತು ಪ್ರಭು.

**ಬಾಣಾಸುರ –** ಇದೆಲ್ಲಾ ಶ್ರೀ ಶಂಕರನ ಮಹಿಮೆ, ಜಯಮಹಾದೇವ, ಜಯ ಮೃತ್ಯುಂಜಯ.

ಎಲ್ಲರೂ – ಜಯ್ತು ಜಗಜ್ಜೇತ ಬಾಣ ಸಾಮ್ರಾಟ, ಜಯ ಭಕ್ತಶ್ರೇಷ್ಠ.

(ತೆರೆ ಬೀಳುವುದು.)

## ದೃಶ್ಯ ೨ – ರುದ್ರಾಕ್ಷನ ಪ್ರವೇಶ

[ಕಾವಿಯ ನಿಲುವಂಗಿಯನ್ನು ತೊಟ್ಟು, ಕಾವಿಯ ಟೊಪ್ಪಿಗೆಯನ್ನು ಹಾಕಿ ಕೊಂಡು, ಕಣ್ಣು, ಕಿವಿ, ಮುಖಕ್ಕೆಲ್ಲ ಭಸ್ಮವನ್ನು ಬಳಿದುಕೊಂಡು, ಎರಡು ಜಾಂಜುಗಳನ್ನು ಎಡ, ಬಲ ಭುಜಗಳ ಮೇಲೆ ಹಾಕಿಕೊಂಡು ಪ್ರವೇಶಿಸಿ, ಭಜನಿ ಮಾಡುತ್ತ, ಅತ್ತಿಂದಿತ್ತ ತಿರುಗಾಡುವನು.]

**ರುದ್ರಾಕ್ಷ –** ಅದ್ಭುತ ವಿಗ್ರಹ, ಅಮರಾಧೀಶ್ವರ, ಅಗಣಿತ ಗುಣಗಣ, ಅಮೃತ ಶಿವಾ । ಸಾಂಬಸದಾಶಿವ, ಸಾಂಬಸದಾಶಿವ, ಸಾಂಬಶಿವಾ ॥ ೧ ॥ ಆನಂದಾಮೃತ ಆಶ್ರಿತ ರಕ್ಷಕ ಅತ್ಮಾನಂದ ಮಹೇಶ ಶಿವ ॥ ಸಾಂಬಸದಾಶಿವ ॥ ೨ ॥ ಸಾಂಬಜಯಾಜಯನಮಃ ಪಾರ್ವತೇಪತಿ ಹರಹರ ಮಹಾದೇವ, ಭೂಕೈಲಾಸವಾಸ ಭೋಗೇಶ ಪ್ರಭೋ ಹರ, ಹರ, ಹರ !

**ಚನ್ನಿ –** (ಪ್ರವೇಶಿಸಿ, ಆಶ್ಚರ್ಯದಿಂದ) ಅಯ್ಯ ! ಅಯ್ಯ ! ಅಯ್ಯ, ನನ್ನ ದೊರಿಯೆ ! ನಿನಗಾರು ಸರಿಯೆ ! ಇವತ್ತು ಇದೇನು ವೇಷಾ, ಇದೇನು ಭೂಷಾ, ಇದೇನು ಭಜನಿ!

**ರುದ್ರಾಕ್ಷ –** ಏ, ಚನ್ನಿ, ಸುಮ್ಮಗಿರು. ಇವತ್ತು ಅವಗುಣ ಎಲ್ಲಾ ಬಿಟ್ಟು, ಶಿವನ ಗುಣ ಹಿಡಿದೀನಿ. ಇಂದಿನಿಂದ ನಾನು ಶಿವಭಜನಿ ಹಿಡದೀನಿ. ಅದಕೇ ಇವತ್ತು ನಾ ಸಾದರ ವೇಷಾ ಹಾಕೀನಿ, ತಿಳೀತಾ... ಈ ಸಂಸಾರದಾಗ ಏನ ಆದ...! ಈ ಸಂಸಾರ ಎಲ್ಲಾ ಈ ಸುಳ್ಳಿನ ಸಂತೆ... ಎಲ್ಲಾ ಮಾಯಾ ಬಾಜಾರ, ಏನ ಆಟಪ, ಇದು... ಶಿವನಾಟ, ಸಾಂಬಸದಾಶಿವ, ಸಾಂಬಶಿವ!

**ಚನ್ನಿ –** ಏನ್ ಮಾರಾಯಾ, ಈ ಖೋಡಿ ಗುಣ ಎಲ್ಲಿ ಕಟ್ಗೊಂಡು ಬಂದಿ, ಮತ್ತೆ! ಹಾಲ ಸಕ್ರಿ ಆಗಿ ಹರೀವ ಹಳ್ಳದಂತ ಸಂಸಾರದಾಗ, ಯಾರು ಈ ಇಸಾ, ಬೇವಿನ ರಸಾ ಕಲಸಿದರು ಅಂತೀನಿ.. ಅಯ್ಯ! ಇದ್ದ ಒಬ್ಬ ಗಂಡ ಇಂಗ ಅಡ್ಡದಾರಿ ಹಿಡಿದರ ನನ್ನ ಬಾಳೇವು ಯಾಂಗ... ಅ....ಅ...ಅ...! (ಅಳುವಳು.)

**ರುದ್ರಾಕ್ಷ –** ಏ, ಏ, ಏ...ಏ ಚನ್ನೀ.. ಅಂಗ ಅಳಬ್ಯಾಡೇ.... ಅಂಗಾದರ ಎಲ್ಲರಿಗೂ ಮೂರು ನಾಕ ಮಂದಿ ಗಂಡದೋರು ಇರತಾರೇನೆ, ಒಳ್ಳೇ ಚಂದ ಹೇಳ್ತಿ ಬಿಡು... ನಾನೇನು ಸಂಸಾರ ಬಿಟ್ಟು ಹೋಗಂತೇನು... ಶಿವ ಬಜನಿ ಮಾಡೋರೆಲ್ಲ ಸಂಸಾರ ಬಿಡ್ತಾರೇನು. ವಾಹ್ವಾ, ವಾಹ್ವಾ, ಯಾರ ಕಲಿಸಿದ್ರೇ ನಿನಗ ಈ ಕೆಟ್ಟ ಬುದ್ಧೀ...!

**ಚನ್ನಿ –** ನಮಗ್ಯಾಕ ಬೇಕ ಆ ದೊಡ್ಡ ಶಿವನ ಗೊಡವಿ ಅಂತೀನಿ. ಆತ ಬಾಳ, ಭಾಳ ಕೆಟ್ಟ ದೇವರಂತ. ನಮಗೆಲ್ಲಾರಾ ಸಣ್ಣಾ, ಮುಟ್ಟ ದೇವ್ರಾದ್ರ ಸಾಕು. ಕಾಳಯ್ಯ, ದೂಳಯ್ಯ, ಮಾರಯ್ಯ, ಬೀರಯ್ಯ, ದುರಗವ್ವ, ಮಾರೆವ್ವ, ಎಲ್ಲ್ಯಾರ ಕೋಳಿ, ಕುರಿ, ನರಿ, ನಾಯಿ ತಿಂದು ಹರಸೋ ದೇವರ ಇದ್ರ ಸಾಕು. ಆ ದೊಡ್ಡ ದೇವರು, ಈ ದೊಡ್ಡ ಇಬುತ್ತೀ... ಆ ದೊಡ್ಡ ಗಂಟಿ.... ಇವೆಲ್ಲಾ ನಮಗ್ಯಾಕ ಬೇಕ. ನಾವಾತು, ನಮ್ಮ ದೇವ್ರಾತು. ಸುಮ್ಮಗ ಹುಚ್ಚ ಕುರಿಮರಿ ಹಾಂಗ, ಗಾಂಜಿ ಬುಕ್ಕರಾಂಗ ಯಾಕ ಕುಣ್ಯಾಕ ಹತ್ತೀ...

**ರುದ್ರಾಕ್ಷ –** ಏ, ಏ, ಏ ಸುಮ್ಮಕಾ ಬಾಯಿ ಬಿಗಿಹಿಡಿ. ನಿನಗೇನ ತಿಳ್ಯಾದ ಆ ದೊಡ್ಡ ಶಿವನ ಆಟ. ನಿಮ್ಮಂತ ದಡ್ಡು ಎಲ್ಲಾರ ಕೂಡಿ, ಆ ಶಿವನ ಗಾಂಜಿ ಬುಕ್ಕರ ಗುಂಪಿಗೆ ಸೇರಿಸಿ ಬಿಟ್ಟಾರ. ಇನ್ನಮ್ಯಾಲ ನೋಡು, ನಮ ರಾಜೇದಾಗ ನಿನ ಆ ಕಲಬೆರಕಿ ದೇವ್ರ ಆಟ ನಡೋದಿಲ್ಲ ನೋಡು. ನಿನ್ನ ಕರಿಕಾಳ್ಯಾ, ಮರಿಬೀರ್ಯಾನ ಆಟ ನಡೋದಿಲ್ಲ.

ಅವರನೆಲ್ಲ ಗಡೀಪಾರ ಮಾಡಿಬಿಡು. ಇನ್ನಮ್ಯಾಲ ಒಬ್ಬನೇ ದೇವ್ರು– ಆತ ಶಿವ; ಹುಟ್ಸೋತ ಆತ, ಬದಕಸೋತ ಆತ, ಕೊಲ್ಲೋತ ಆತ. ಅಂದಮ್ಯಾಲ ಕುರಿ ಹಿಂಡಿನಾಂಗ ಇರೋ ಈ ಕಳ್ಳ, ಸುಳ್ಳ ದೇವ್ರುಗಳ್ಯಾಕ ಬೇಕು, ನಮಗ! ನೀನೇ ಹೇಳು, ಹೌದಲ್ಲ.

**ಚನ್ನಿ –** ಅಂದ್ರ, ಎಲ್ಲಾ ದೇವ್ರುಗಳು ಸುಳ್ಳ... ಆಂ... ಏನು ಸುಳ್ಳೆ ಸುಳ್ಳ ಮಂದೆಲ್ಲ ಈಸ ದೇವ್ರಗಿ ಆರ್ತಿ ಮಾಡ್ತಾರೇನು?

**ರುದ್ರಾಕ್ಷ –** ಅವೆಲ್ಲಾ ಮಳ್ಳರಿಗಾಗಿ ಮಾಡ್ಯಾರ ಸುಳ್ಳ ಕಂತೀ ಪುರಾಣ! ಚುರುಕ ಬುದ್ದಿ ಮನಸ್ಯಾ ತನ್ನ ಬೊಜ್ಜ ಬೆಳ್ಸಗಳ್ಯಾಕ ಮಾಡ್ಯಾನ ಇವೆಲ್ಲ ಚಾತುರ, ಸುಮಸುಮಗ ಧಡ್ಡ ಮಂದೀಗ ಅಂಜಸೋದು. ಯಾಕಪ... ಇದು ಅಂತ ಕೇಳಿದರಾ, ನಿನಗ ಕಾಳ್ಯಾ ಕಾಡ್ತಾನಾ, ಬೀರ್ಯಾ ಕಾಡ್ತಾನ. ಆ ದೇವ್ರ ಮಾಡು, ಈಸ ಕೊಬರಿ ತಾ, ಆಸು ಟೆಂಗು ತಾ, ಅಂತ ಏನ ಏನೋ ಹೇಳೋದೂ, ಅದಕ ಆ ಬಲಿ ಕೊಡು, ಈಟು ದಕ್ಷಿಣಾ ಕೊಡು ಅಂತ ದಡ್ಡಮಂದಿನ್ನ ಸುಲೇದು, ಇದೊಂದು ಅವರ್ಗಿ, ಬಂಡವಾಳ ಇಲ್ಲದ ಯಾಪಾರ. ನಾವ ದುಡದೂ, ದುಡದೂ, ಸಾಲಾಮಾಡಿ ಸಣ್ಣಾಗೋದು. ಅವರು ದಕ್ಷಿಣಾ ತಿಂದು ತಿಂದು ತಗಣಿ ಉಬ್ಬಿದಾಂಗ ಉಬ್ಬೋದು ಇಂಗ ನೋಡು. ಆ ಕರಿ ತೆಲಿ ಮನಸ್ಯಾ ತನ ಬುದ್ಧಿ ಖರ್ಚು ಮಾಡಿ, ನಮಗ ಈ ದೇವ್ರಗಳ ಉರ್ಲಹಾಕ್ಯಾನ ಅಲ್ಲ.. ದೇವ್ರ ಅಂದ್ರ ಸುಕಾ ಕೊಡಬೇಕಾ, ದುಃಕಾ ಕೊಡಬೇಕ...! ನೀನೆ ತುಸಾ ಇಚಾರ ಮಾಡಿ ನೋಡ, ನಮ್ಮ ಬಡಮನಸೇರ ಕುಲಾ, ಬೇಸ ಬದಕಬೇಕಾರ, ಈ ಹಿಂಡ ದೇವರ ಕುತ್ತಿಗಿ ಹಿಚಕಬೇಕ ನೋಡು, ಈ ದೇವ್ರುಗಳನ್ನು ಮಾಡಿ ದುಡ್ಡು ಸುಲ್ಯೊ ಬುರುಡಿಗಳನ್ನು ಶೂಕ ಹಾಕಬೇಕು! ಅಂಗಾರ ಜನಾ ನಾಕೊಪ್ಪತ್ತು ತಂಣಗನ ಬದಕತಾದ, ಅದಕಂತ... ನಮ್ಮ ಶಿಂವಾ ಅನಲ್ಲ... ಆತನಲ್ಲಿ ಈ ದಳ್ಳಾಳೇರು ಯಾಪಾರೇ ಇಲ್ಲ ನೋಡು. ಅದಕ, ಆತ ವಬ್ಬನೇ ದೇವ್ರು, ಸಾಂಬಸದಾಶಿವ......!

**ಚನ್ನಿ –** ಅಂದರ...! ಪುರಾಣ ಗಿರಾಣ ಯಲ್ಲಾ ಸುಳ್ಳೇ ಏನ ಮತ್ತ...!

**ರುದ್ರಾಕ್ಷ –** ಅಲೆ, ಅಲೆ, ಅಲೆ, ಮತ್ತೆ...! ಪುರಾಣ ಗಿರಾಣ ಅಂತಿ ಮತ್ತೆ. ಪುರಾಣ ಅಂದ್ರ ನನ ಪಿತ್ತ ನೆತ್ತಿಗೇರ್ತೈತೆ, ಪುರಾಣ ಬರದೋರು ಯಾರ ಅಂತ ತಿಳಕೊಂಡಿದ್ದೀ ನೀ? ಅವರೇ ಮಂದಿ ಮನಿ

ಹಾಳಮಾಡೋವ್ರು. ಮಂದೀ ದುಡತದ ಮ್ಯಾಲ ಬಿಳೇ ಕೂಳು ತಿನ್ನಾವ್ರು...ಆಂ... ಈಗರೆ ತಿಳೀತಾ...

ಚನ್ನಿ – ತಿಳೀತ ಬಿಡ, ಅದೆಲ್ಲ ಹಗರಾಣ ಬಾಜಾರ, ಇರಲಿ, ಅದೆಲ್ಲ. ಇವತ್ತ ನೀ ಇಂಗ ಯಾಕ ಆಗಿದ್ದೀ ಅಂತೀನಿ....

ರುದ್ರಾಕ್ಷ – ಯಾಂಗ ಆಗಿನಿ, ಹ್ಯಾಂಗ ಆಗೀನಿ ಹೇಳು. ಕೈಲಾಸಕ ಹೋಗಾರು ಯಾಂಗ ಆಗತಾರೋ, ಅಂಗ ಆಗೀನಿ. ಅದಕ ಇವತ್ತ ಶಿವ ಬಜನಿ ಮಾಡಿಕೋತ ಸಮಾಧಿ ಕುಂತುಬಿಡತೀನಿ, ನಾಳ್ಗೆ ಕೈಲಾಸಕ ಹೋಗಿಬಿಡ್ತೀನಿ.

ಚನ್ನಿ – ಅಯ್ ! ಅಯ್ಯೋ... ನನ್ನ ಹಣಿಬರಾ... (ಹಣಿ ಬಡಿದುಕೊಂಡು ಅಳುತ್ತ) ಈ ಹರೇದ ಅಂಗಾಮದಾಗ ನೀ ಕೈಲಾಸಕ ಹೋದರ ನಾ ಹ್ಯಾಂಗ ಬದಕಲೀ....ೀ....ೀ....ೀ

ರುದ್ರಾಕ್ಷ – ಏ, ಏ, ಏ, ನನ್ನ ಮುದ್ದ ಚಿನ್ನಾ, ಅಳಬೇಡೆ! ಯಾಕ ಅಳ್ತೀ... ರಾಜಾಜ್ಞೆ ಆಗೇದ, ನಾನ ಹೋಗೇಬೇಕ..

ಚನ್ನಿ – ಅಯ್, ಏನ ರಾಜಾಜ್ಞೆ! ನೀ ಏನ ತಪ್ಪ ಮಾಡಿದ್ದೀ, ನಿನ್ನ ಯಾಕ ಶೂಲಕ್ಕ ಆಕ್ತಾರ..ಅ...! (ಅಳುವಳು)

ರುದ್ರಾಕ್ಷ – ಏ! ಹುಚ್ಚೀ... ನನ್ಯಾಕ ಶೂಲಕ್ಕ ಹಾಕ್ತಾರ! ನಮ್ಮ ರಾಜ ನಾಳೆ ದೇವರಲ್ಲಿ ಹೋಗ್ತಾನ! ವರಾ ಪಡಕೊಂಡ ಬರಾಕ, ವರಾ, ತಿಳೀತ! ಆ ಮಾರಾಯನ ಪುಣ್ಯಾದಿಂದ ನಾವು ಈಟು ದೇವರ ಮುಂದ ದಿಂಡುಳ್ಳಿ ಉಳ್ಳಿ ಪಾಪ ಕಳ್ಕೊಂತೀವಿ, ನಮದೂ ಒಂದು ದೊಡ್ಡ ಪುಣ್ಯಾನೇ ಸೈ, ಹೌದಲ್ಲ!

ಚನ್ನಿ – ಈಂಗೇನು, ಅಹಹಹ...! ನನಗೇನು ಗೊತ್ತು. ಈಟೆಲ್ಲ ನಿನ್ನ ಕಂತ್ರಾಟ, ಅಬ್ಬಬ್ಬಾ! ನಮ್ಮ ರಾಜಾ ದೇವ್ರಲ್ಲಿಗೆ ಹೋಗಿ ಬರ್ತಾನೇನು! ಆತನ ತರಾಣ ಏಟು ಅಂತೀನಿ, ಆತನ ಭಗತೀ ಏನ್! ಆಂ...! ಅಂಗಾದರ ಆ ದೊಡ್ಡ ದೇವರ ಜಾಗಕ್ಕ ಹೋದಮ್ಯಾಲ, ನನಗ ಬರೋ ಕಾಲಕ ಏನ ತರ್ತೀ ಹೇಳು.

ರುದ್ರಾಕ್ಷ – ಆ ಶಿವನಲ್ಲಿಗಿ ಹೋಗಿ ನಾ ತರೋ ಸಾಮಾನ ಹೇಳ್ಲೇ! ಅಂಗಾರ ಚಂದಾಗಿ ಕೇಳು. (ಪದ) ಎರಡ ತಲೆ ಬುರಡೆ ಸರ, ಧೊಡ್ಡ ಧೊಡ್ಡ ತಲೀವು ! ಆಂ! ಎರಡು ಮೊಳಕಾಲು ಚಿಪ್ಪು, ಎರಡು

ಮೊಳಕ್ಕೆ ಚಿಪ್ಪು... ಒಂದು ಧೊಡ್ಡ ತಲಿ ಡೋವಿ, ಯಾಕ ತಿಳೀತೂ... ಬಿಕ್ಕೇ ಬೇಡಾಕ...

ಚನ್ನಿ – ಅಯ್ ಇದೇನ ಚೆನ್ನಾಟಾ ಆಡ್ತೀ ಆ ದೊಡ್ಡ ಶಿವನಲ್ಲಿ ಹೋಗಿ ಈ ಸುಡ್ಗಾಡ ಸಾಮಾನ ತರ್ತೀ, ಬಾಳ ಚಲೋ ಸಾಮಾನ ಹೇಳ್ದೀ...!

ರುದ್ರಾಕ್ಷ – ಇನ್ನೂ ಕೆಲವು ಮರ್ತೀನಿ, ಚನ್ನೀ... ಒಂದ ನಾಕೆಂಟು ದೆವ್ವ... ನಾಕ ನಾಗಪ್ಪಾ, ಅಂವು–ಬುಸ, ಬುಸ, ನಾಗಪ್ಪ–ಬುಸ್ಸ್ (ಅಂಜಿಸುವನು, ಆಕೆ ಅಂಜಿ ಹಿಂಜರಿವಳು)

ಚನ್ನಿ – ಅಂತಾ ದೊಡ್ಡ ದೇವರಲ್ಲಿ ಹ್ವಾದಮ್ಯಾಲ ಏನಾರ ದೊಡ್ಡ ದೊಡ್ಡ ಸಾಮಾನ ತರಬೇಕು. ವಂಕಿ, ಸರಗಿ, ಗೀರಬಳೆ... ಅವೆಲ್ಲ ಬಿಟ್ಟ, ಏನೇನ...! ಕೆಟ್ಟ, ಕೆಟ್ಟ ತಲಿಬುರಡಿ, ಹೆಬ್ಬಾವು ಅಂತಾ ಹೇಳ್ತೀ....

ರುದ್ರಾಕ್ಷ – ಶಿಂವಾ ಅಂದರ ಏನ ತಿಳಿದಿದ್ದೀನೀ, ಭಾಳ ಬೋಳಾಶಂಕರ, ಬೇಡಿದೋರಿಗಿ ಬೇಡಿದ್ದೆಲ್ಲಾ ಕೊಟ್ಟು, ತಾನs ಸುಡಗಾಡ ಸಿದ್ದ ಆಗಿ ಕುಂತಾನ... ಬಗತಿ ಇಲ್ಲೋರಿಗೆಲ್ಲ ಇವೇ ಇಟಗೊಂಡು ಕುಂತಾನ ಕೊಡಾಕ, ಹಳೆರಗಟೆ, ತಲೆಪರಟೆ, ಮುರಕಪಲ್ಲು...ಏ, ಬಂಗಾರಗಿಂಗಾರ ಆಸೆ ಮಾಡಮ್ಯಾಡ ನೋಡ! ಆ ದೇವ್ರು–ಬಂಗಾರ ಅಂದ್ರ ಕಾದ ಕೆಂಡಾಗ್ತಾನ.. ತಿಳೀತಾ... ಇನ್ನಮ್ಯಾಲ ನೀ ಆತನಲ್ಲಿ ನಿಜ ಬಗತಿ ಮಾಡು, ಆಮ್ಯಾಲ ಆತ ಬೇಡಿದಾಂಗ ಕೊಡ್ತಾನ... ಈಗ ನೋಡು ನಮ ರಾಜ್ಯಾನ, ಯಾಂಗ ನೆನಸಿದರ ಅಂಗ ಮುಂದಕುಣಕೋತ ನಿಂದ್ರ ತಾನ, ಅಂಗ ಇರಬೇಕ, ನಿಜಬಗತಿ ಅಂದ್ರ... ಅನ್ನು. ಸಾಂಬಸದಾಶಿವ.

(ಹೋಗುವರು)

## ದೃಶ್ಯ ೩

[ಮಹಾರಣ್ಯ ಮಾರ್ಗದಲ್ಲಿ ಬಾಣಾಸುರನು ಕೈಲಸಾಕ್ಕೆ ಶಿವಾನುಗ್ರಹಕ್ಕಾಗಿ ಹೋಗುತ್ತಿರುವನು. ನಿಬಿಡವಾಗಿ ಬೆಳೆದ ಗಿಡಮರಗಳು. ಶೈಲ ಶ್ರೇಣಿಯ ಮುಗಿಲನ್ನು ಮುದ್ದಿಡುವಂತೆ ತೋರುತ್ತಿವೆ. ಬಾಣಾಸುರನು ಗದಾಧಾರಿಯಾಗಿ, ಗಂಭೀರ ಮುಖ ಮುದ್ರೆಯಿಂದ ಪ್ರವೇಶಿಸುವನು. ಅವನ ಹಿಂದೆ ಉಷೆಯು ಸುಂದರ ಉಡುಪಿನಲ್ಲಿ ವಿಕಾಸ ವದನದಿಂದ, ಮಂದಗತಿಯಿಂದ ಬರುತಿರುವಳು. ಸುಂದರವಾದ, ಅತಿ ತೆಳುವಾದ ಗುಲಾಬಿ ಬಣ್ಣದ ಜವನಿಕೆಯೊಂದನ್ನು ಹೊದ್ದಿರುವಳು. ಅವಳ ಹಿಂದೆ

ಮಂತ್ರಿ, ಸೇನಾಪತಿ, ಪರಿಚಾರಕ ವರ್ಗದವರು ಬರುತ್ತಿರುವರು. ನಾರದನು ತೆರೆಯ ಮರೆಯಲ್ಲಿ.}

**ನಾರದ** – (ತೆರೆಯಲ್ಲಿ) ನಾರಾಯಣ, ನಾರಾಯಣ!

**ಬಾಣಾಸುರ** – ಯಾರದು!

**ಕುಂಬಕ** – ಗಗನವಾಣಿಯಂತೆ ಭಾಸವಾಗುತ್ತಿದೆ ಪ್ರಭು.

**ಬಾಣಾಸುರ** – ಗಗನವಾಣಿ! ಗಗನಭಾಂಡವನ್ನೇ ಮುರಿದು ಚಲ್ಲುತ್ತೇನೆ. ಮಿಣುಕುವ ಚಿಕ್ಕ ಸೊಡರುಗಳನ್ನು ಬಾಡಿದ ಸುಮಗಳಂತೆ ಉದುರಿಸುತ್ತೇನೆ. ಬಾಣನ ಶಕ್ತಿದಂಡದ ಪ್ರತೀಕಾರವನ್ನು ಪಂಚ ಭೂತಗಳೂ ಮಾಡಲಾರವು...!

**ಚಂದ್ರಕಾಂತ** – ಅಶರೀರವಾಣಿ ಬುದ್ಧಿ!

**ಬಾಣಾಸುರ** – ಸಾಕು, ಇದರ ಪ್ರತಿರೋಧದಲ್ಲಿ ಗಗನಮಂಡಲಕ್ಕೆ ಬೆಂಕಿ ಹಚ್ಚಿ ದಗ್ಧಗೊಳಿಸುತ್ತೇನೆ. ಬಲ್ಲಿದ ಬಾಣನ ಮುಂದೆ ಈ ಚಲ್ಲಾಟವು ಸಾಗದು. ಎಲ್ಲಿದ್ದರೂ ಮೂಲವನ್ನೇ ಸವರಿ ಸದೆಬಡಿಯುತ್ತೇನೆ.

**ನಾರದ** – (ತೆರೆಯಲ್ಲಿ ಮತ್ತೆ) ನಾರಾಯಣ!

**ಬಾಣಾಸುರ** – ಶಾಸನದಂಡವೇ–ರಕ್ತಸ್ನಾನ ಮಾಡಲು ಸಿದ್ಧಳಾಗು!

**ನಾರದ** – (ಪ್ರಕಟವಾಗಿ ಮುಂದೆ ಬರುತ್ತಿರುವನು)

**ಕುಂಭಕ** – ಮಹಾಪ್ರಭು, ನಾರದರು ಬರುತ್ತಿರುವರು!

**ಬಾಣಾಸುರ** – ನಾರದ ! ನರಕದ ಕೀಟಕ, ನಾರದನೇ ಬರಲಿ, ನಾಕೇಶನೇ ಬರಲಿ–ಆ ಹೇಡಿ ನಾರಾಯಣನೇ ಬರಲಿ, ಗದಾಘಾತಕ್ಕಾಹುತಿ ಯಾಗಲೇ ಬೇಕು.

**ನಾರದ** – (ಪ್ರವೇಶಿಸಿ, ಮುಂದೆ ಬಂದು) ದೈತ್ಯಚಕ್ರವರ್ತಿಯೇ, ಇದೆಂತಹ ಪ್ರಮಾದ!

**ಬಾಣಾಸುರ** – ಪ್ರಮಾದವಲ್ಲ, ಪರಿಸಮಾಪ್ತಿ! ಆ ದುಷ್ಟಸ್ವಾನದ ಸಮೂಲ ಉಚ್ಚಾಟನ!

**ನಾರದ** – ಶಾಂತನಾಗು ಮಹಾವೀರ, ಬರೇ ಶಬ್ದಮುಗ್ಧನಾಗಬೇಡ.

**ಬಾಣಾಸುರ**– ಆ...ಕರ್ಕಶವಾಣಿಯು ನನ್ನ ಸಾಮ್ರಾಜ್ಯದಲ್ಲಿ ಸುಳಿದಾಡಿದರೆ ದುರಂತಮವಾದ ಘೋರ ಶಿಕ್ಷಯಿದೆ ನಾರದರೆ!

**ನಾರದ** – ಇದೇನು! ಅಸುರ ಸಾರ್ವಭೌಮಾ–ತಂದೆಯನ್ನು ವಂದಿಸಿ ತಾಯಿಯನ್ನು ನಿಂದಿಸಿದಂತಾಗಲಿಲ್ಲವೆ?

**ಬಾಣಾಸುರ** – ಅದೇಕೆ, ನಾರದರೆ!

**ನಾರದ** – ಪರಮಾತ್ಮನು ಚೈತನ್ಯಾತ್ಮಕನು, ಪಾರ್ವತೀದೇವಿಯು ಕ್ರಿಯಾತ್ಮಕಳು. ಇವರೀರ್ವರ ಸಮನ್ವಯ ಸಿದ್ಧಾಂತದಿಂದಲೇ ಈ ಸತ್ಯ ಪ್ರಪಂಚದ ಬೆಳಗು. ಈ ಸಮ್ಯಗ್‌ಜ್ಞಾನದಿಂದ ದೂರಾಗಬೇಡ ಪ್ರಭು. ಆದಿಶಕ್ತಿಯಾದ ಪಾರ್ವತೀದೇವಿಗೆ, ನಾರಾಯಣಿ, ವೈಷ್ಣವಿಯೆಂಬ ಮಹಾನಾಮಗಳಿಲ್ಲವೆ? ಆದಿಶಕ್ತಿಯೆಂದರೆ–ಆದಿನಾರಾಯಣ! ಈ ತೆರದ ರೋಷಾವೇಶವು ಭಕ್ತಶ್ರೇಷ್ಠನಾದ ನಿನಗೆ ಸಲ್ಲದು.

**ಬಾಣಾಸುರ** – ಅನಾದಿ ದೈವಸ್ವರೂಪನಾದ ಮೂಲಾತ್ಮದೇವನ ಜ್ಞಾನವನ್ನು ಮರೆದು ಮೋಸಹೋಗಬೇಡಿ, ನಾರದರೆ! ಶಕ್ತಿಯೆಂಬುದು ಪರಮಾತ್ಮನ ಲೀಲಾವಿಲಾಸ. ಮೂಲವನ್ನು ನಂಬಿರಿ. ಶಾಖೋಪ ಶಾಖೆಗೆ ಲಂಘಿಸುವ ಈ ಮರ್ಕಟವೃತ್ತಿಯನ್ನು ತ್ಯಜಿಸಿರಿ.

**ನಾರದ** – ಮಹಾರಾಜ, ಶಾಖೆಯಲ್ಲಿಯೇ ಫಲಪ್ರಾಪ್ತಿಯು!

**ಬಾಣಾಸುರ** – ಈ.... ಕೂಟತಂತ್ರವನ್ನು ಹೂಡಬೇಡಿ, ನಾರದರೆ! ಮೂಲವನ್ನು ಕತ್ತರಿಸಿ, ಶಾಖೆಯಲ್ಲಿ ಫಲವನ್ನರಸುವದು ಜ್ಞಾನಿಗಳ ಲಕ್ಷಣವಲ್ಲ. ಮೂಲವನ್ನು ನಂಬಿರಿ–ಫಲವೆಂಬ ಸ್ವಾನಂದಲೀಲೆಯಲ್ಲಿ ಸಮರಸಾನಂದವನ್ನು ಹೊಂದಿರಿ.

**ನಾರದ** – ಮಹಾರಾಜ, ನಾಮಸೀಮೆಗಳಿಲ್ಲದ ದೇವನನ್ನು ಯಾವ ನಾಮದಿಂದ ಕರೆದರೇನು?

**ಬಾಣಾಸುರ** – ಆದರೂ... ಆ ನಾಮವು ನನಗೆ ರುಚಿಸಲಾರದು.

**ನಾರದ** – ಹಾಗಾದರೆ ಶಿವಸಂಕೀರ್ತನೆಯನ್ನೇ ಮಾಡುತ್ತೇನೆ ಪ್ರಭು.

**ಬಾಣಾಸುರ** – ಹ...ಹ...ಹ..! ಬಹಳ ಸಂಭ್ರಮ. ಹೀಗೆ ಭಜನಾಸಕ್ತರಾಗಿ ಧನ್ಯಕಾಯರಾಗಿರಿ.

(ನಾರದನು ಶಿವಸಂಕೀರ್ತನೆ ಹಾಡುವನು. ಬಾಣಾಸುರನು ಭಕ್ತಿಭಾವೋದ್ರೇಕದಿಂದ ಹಸನ್ಮುಖಿಯಾಗಿ ತಲೆದೂಗುತ್ತಿರುವನು.)

**ಬಾಣಾಸುರ** ನಾರದರೆ ನಿಮಗೆ ಅಭಿವಂದಿಸುತ್ತೇನೆ

ನಾರದ       ಪ್ರಭು, ನಿನಗೆ ಮಂಗಳವಾಗಲಿ

ಬಾಣಾಸುರ – ಮಂಗಳಕ್ಕಾಗಿಯೇ ಸರ್ವಮಂಗಲೆಯ ಪ್ರಿಯನಾದ ಆ ಭಗವಂತನಲ್ಲಿಗೆ ಹೊರಟಿದ್ದೇನೆ.

ನಾರದ – ವಿಸೇಷವೇನು ಮಹಾರಾಜ!

ಬಾಣಾಸುರ – ಕಾಡುಬೇಗೆಯಂತೆ ಹಬ್ಬುತ್ತಿರುವ ಆರ್ಯಸಂಸ್ಕೃತಿಯ ದಾವಾನಲವನ್ನು ಮುಂಗಾರಿಯ ಮೇಘವರ್ಷದಿಂದ ಶಾಂತಪಡಿಸುವದಕ್ಕಾಗಿ! ವರ್ಣಾಶ್ರಮಗಳ ಪ್ರಚಾರದಿಂದ ಮಾನವಜಾತಿಯನ್ನೇ ಪಶುಕೋಟಿಗೆ ಸೇರಿಸಿದ, ಆರ್ಯಜನಾಂಗವನ್ನು ನೆಲಸಮಾಧಿ ಮಾಡುವದಕ್ಕಾಗಿ! ಕಾರುಣ್ಯನಿಧಿಯಾದ, ಭಕ್ತಕಾಮ ಕಲ್ಪದ್ರುಮನಾದ, ದೇವದೇವೇಶನ ವರಪ್ರಸಾದಕ್ಕಾಗಿ! ನಮ್ಮ ಈ ವಿಜಯ ಪ್ರಯಾಣ.

ನಾರದ – ಅಬ್ಬಾ ! ಏನೆಂದು ವರವನ್ನು ಬೇಡಲು ಹೋಗುವೆ?

ಬಾಣಾಸುರ – ಆರ್ಯಾವರ್ತದಲ್ಲಿ ಭಯಂಕರ ಕೋಲಾಹಲವನ್ನೆಬ್ಬಿಸಿ, ಚಕ್ರಾಧಿಪತ್ಯವನ್ನು ಸ್ಥಾಪಿಸುವ ಸಾಮರ್ಥ್ಯವನ್ನು ಕರುಣಿಸೆಂದು, ಶ್ರೀ ಶಂಕರನನ್ನು ಪ್ರಾರ್ಥಿಸುವದಕ್ಕಾಗಿ!

ನಾರದ – (ಸ್ವಗತ) ಅಬ್ಬಬ್ಬಾ, ಎಂತಹ ಭಯಂಕರ ಪ್ರತಿಕ್ರಿಯೆಯಿದು! ಆರ್ಯದ್ರಾವಿಡರಲ್ಲಿ ಭಯಂಕರವಾಗಿ ಹೊತ್ತುತ್ತಿರುವ ಈ ದ್ವೇಷಾಗ್ನಿಯನ್ನು ನೊಂದಿಸುವ ಉಪಾಯವನ್ನೇ ಇವನಿಗೆ ಸೂಚಿಸಬೇಕು.

ಬಾಣಾಸುರ – ಏಕೆ, ನಾರದರೆ–ನಿಮ್ಮ ಕಂಠವು ಕುಂಟಿತವಾಯಿತು? ನಿಮ್ಮ ಉಪಾಯವೇನಿರುವದು?

ಕುಂಭಕ – ನಾರದರ ಸಲಹೆಯು ಈಗ ಸಮಯೋಚಿತವಾಗಲಾರದು ಪ್ರಭು.

ಬಾಣಾಸುರ – ಇರಲಿ, ನಾರದರು ಮಹಾ ಚತುರರು. ಇವರ ಯೋಜನೆಯೇ ಯಶೋದಾಯಕವಾಗಿದೆ.

ಕುಂಭಕ – ಬೇಡ, ಮಹಾರಾಜ. ಇವರ ಬುದ್ಧಿವಾದವೇ ದೈತ್ಯಕುಲವನ್ನು ಧ್ವಂಸಮಾಡಿಬಿಟ್ಟಿದೆ.

ಬಾಣಾಸುರ – ಸಾಕು! ನನ್ನ ನಿರ್ಧಾರದಲ್ಲಿಯೇ ನನ್ನ ನಂಬಿಗೆಯಿದೆ.

ಕುಂಬಕ – ದೇವರು... ದಯವಿಟ್ಟು ಪರಾಮಿರ್ಶಿಸಬೇಕು.

**ಬಾಣಾಸುರ** – ಅಮಾತ್ಯರೇ, ನಿಮ್ಮ ವಿನಂತಿಯು ಇದೀಗ ಅಮಾನ್ಯವಾಗಿದೆ.

**ಕುಂಭಕ** – (ಸ್ವಗತ) ಅಯ್ಯೋ, ಉಪಾಯವಿಲ್ಲ. ಪರಮಾತ್ಮಾ, ನೀನೇ ಮಹಾರಾಜರಿಗೆ ಸುಬುದ್ಧಿಯನ್ನು ಕರುಣಿಸು.

**ಬಾಣಾಸುರ** – ಹುಂ... ನಾರದರೆ, ನೀವಾವ ಸೂಚನೆಯನ್ನು ಸಮರ್ಥಿಸುವಿರಿ, ಬೇಗ ಹೇಳಿ.

**ನಾರದ** – ಮಹಾರಾಜ, ಆರ್ಯಜನಾಂಗವನ್ನು ಆಹುತಿಗೊಳ್ಳುವದು ಕ್ಷೇಮವಲ್ಲ. ಆರ್ಯಜನತೆಯ ಅಧ್ಯಕ್ಷನಾದ, ಆ ಅಜಿಂಕ್ಯ ಕೃಷ್ಣನನ್ನು ತಾವು ಪರಾಭವಗೊಳಿಸಿದರೆ, ಇಡೀ ಆರ್ಯಾವರ್ತವೇ ತಮ್ಮ ಪಾದಾಕ್ರಾಂತ ವಾದಂತಾಗುವದು. ಇದೇ ದೈತ್ಯವೀರರ ರಾಜಧರ್ಮವಾಗಿದೆ.

**ಬಾಣಾಸುರ** – ಅಹಹಹ... ನಿಜ, ಸಾಕು, ಸಿಕ್ಕಿತು; ಬಾಣನ ಭೀಷಣ ಶಕ್ತಿ ಸಂಚಯದ ಶರಪ್ರಯೋಗಕ್ಕೆ ಮೂಲವಾದ ನೆಲೆಗೆ ದಿವ್ಯ ಲಕ್ಷ್ಯವು ಸಿಕ್ಕಿತು. ಹೌದು, ನಿಜ. ಧಗಧಗಿಸುವ ರೋಷಾಗ್ನಿಗೆ ಆಹುತಿಯಾಗುವ ಹವಿರ್ಭಾಗವು ಸಿಕ್ಕಿತು. ಹಿಂದು ದೇವತೆಗಳು ಬಂಡಾಯವೆಬ್ಬಿಸಿದರೆ, ಮಾಂಸಖಂಡಗಳನ್ನೇ ಖಂಡ್ರಿಸಿ, ರಕ್ತವನ್ನೇ ಹಿಂಡುತ್ತೇನೆ. ಗಂಡೆದೆಯ ಈ ಕಂಠೀರವನು, ಎದುರಾಗಿ ಬರುವ ಶುಂಡಾಲಮಂಡಲಿಯ ಮದೋದಕವನ್ನೇ ಬಲಿದಾನ ತೆಗೆದುಕೊಳ್ಳಲು ಸಿದ್ಧನಾಗಿರುವನು ನಾರದರೇ, ನನ್ನ ನಿರ್ಧಾರವೇ ನನಗೆ ನೇಮವಾಗಿದೆ. ನೇಸರನ ನೇರವಾದ ದಿವ್ಯ ರಶ್ಮಿಗಳಂತೆ ನಮ್ಮ ನಿರೋಪವು ಸರ್ವವ್ಯಾಪಕವಾಗಿರುವದು. ನಮ್ಮ ನಿರೋಪದ ನಿರೋಧಕ್ಕೆ–ಇದೋ ಖತಿಗೊಂಡ ಶಸ್ತ್ರ ಬಲವೇ ಅದಕ್ಕೆ ತಕ್ಕ ಉತ್ತರವನ್ನು ಕೊಡಬಲ್ಲದು! ಇದು ನಿಮ್ಮ ಜ್ಞಾಪಕದಲ್ಲಿರಲಿ. ಇದೋ ನಿಮ್ಮಲ್ಲಿ ಪ್ರಣಾಮಗಳು.

**ನಾರದ** – ಕೀರ್ತಿಶಲಿಯಾಗಿ ಬಾಳು, ವೀರವರ.

**ಬಾಣಾಸುರ** – ಜಯಶಂಕರ ! (ನಿರ್ಗಮನ, ಎಲ್ಲರೂ ಹೋದಮೇಲೆ)

**ನಾರದ** – (ಸ್ವಗತ) ರಾಕ್ಷಸರಾಜನಂತೂ ಭೀಷಣ ಪ್ರತಿಜ್ಞೆಯನ್ನೇ ಮಾಡಿಹೋದನು. ಸಮಯಕ್ಕೆ ತಕ್ಕ ಸಂವಿಧಾನವನ್ನು ಕೈಕೊಳ್ಳಲೇ ಬೇಕು. ದೇವಾ, ಇದೆಲ್ಲವೂ ನಿನ್ನ ಲೀಲೆ!

(ಪದವನ್ನು ಹಾಡುತ್ತ ಹೋಗುವನು.)

# ದೃಶ್ಯ ೪

[ಹೇಮಾದ್ರಿಯ ತಪ್ಪಲ ಪ್ರದೇಶ, ಸುತ್ತುಮುತ್ತು ಹಿಮಾಚ್ಛಾದಿತ ಬಂಡೆಗಲ್ಲುಗಳು ಮಹೋನ್ನತಾಕಾರವಾಗಿ ಕಂಗೊಳಿಸುತ್ತಿರುವವು. ಹಿಂಭಾಗದಲ್ಲಿ ಉನ್ನತ ವೃಕ್ಷಗಳ ಸಮುದಾಯ. ಮುಂಭಾಗದಲ್ಲಿ ಅಲ್ಲಲ್ಲಿ ನಾನಾ ಜಾತಿಯ ಪುಷ್ಪಾಚ್ಛಾದಿತ ಪೊದೆಗಳ ಬೃಂದ. ಉತ್ತರಾಯಣದಲ್ಲಿ ಹೊಂಬಣ್ಣದ ಸೂರ್ಯನು ಮೂರನೇ ಪ್ರಹಾರದಲ್ಲಿರುವನು. ಧವಳಾಂಗನಾದ ಶ್ರೀ ಶಂಕರನು ಒಂದು ಉನ್ನತ ಬಂಡೆಗಲ್ಲಿನ ಮೇಲೆ ನಿಂತು, ಮನಂಬುಗವ ಪ್ರಕೃತಿ ಸೌಂದರ್ಯವನ್ನು ನೆಟ್ಟದೃಷ್ಟಿಯಿಂದ ನೋಡುತ್ತಿರುವನು. ತ್ರಿಶೂಲಧಾರಿಯಾದ ಪರಶಿವನು ಅರ್ಧ ನಿರ್ಮಲ ನೇತ್ರ ಯೋಗದಿಂದ ನಿಸರ್ಗದ ರಮಣೀಯ ಕೌತುಕವನ್ನು ನಿರೀಕ್ಷಿಸುತ್ತಿದ್ದ ಹಾಗೆಯೇ ಹರ್ಷಮಯಲಾಸ್ಯದಿಂದ, ಲೀಲಾವಿನೋದವಾಗಿ ಉದ್ಗರಿಸುವನು. ಅಲ್ಲೊಂದು ಉನ್ನತವಾದ ಶಿಲಾಮಯ ಭದ್ರಾಸನವಿದೆ. ಎಡಬದಿಯಲ್ಲಿ ಶುಭ್ರ, ಶೀತಲಮಯವಾದ ಗಂಗಾಪ್ರವಾಹ ಬಂಡೆಗಲ್ಲುಗಳ ಮೇಲಿಂದ ಪುಟಿಪುಟಿದು ಧುಮುಕುತ್ತಿರುವುದು.]

**ಶಂಕರ** – ಗಿರಿಜೆ! ಗಿರಿಜೆ! ಸುಶೋಭಿತಳಾದ ವನವಾಲಿನೀ ರೂಪದಿಂದೊಪ್ಪುವ ಶೈಲಜಾತೆಯೆ, ಬಂದೆಯಾ!

**ಪಾರ್ವತಿ** – (ಪ್ರಕೃತಿದೇವಿಯೇ ಮೈದಾಳಿ, ಸುಂದರ ಸ್ತ್ರೀರೂಪವಾಗಿ ಪ್ರಕಟವಾದಂತೆ) ಧನ್ಯಳಾದೆ ದೇವಾ, ಪಾದಾರವಿಂದಗಳಲ್ಲಿ ವಂದನೆಗಳು.

**ಶಂಕರ** – ನಿನ್ನ ಸಮ್ಮೋಹನ ಸೃಷ್ಟಿಯು ಎಂತು ಸೊಬಗನ್ನು ಸೂಸುತ್ತಿರುವದು ಶರ್ವಾಣಿ!

**ಪಾರ್ವತಿ** – ಸೋಮಶೇಖರಾ – ಇದು ನಿನ್ನ ಸ್ವಾನಂದ ಲೀಲಾಸಾಮ್ರಾಜ್ಯವಲ್ಲವೇ?

**ಶಂಕರ** – ನನ್ನ ಸಾಮ್ರಾಜ್ಯದ ಸ್ಥಿರಸೂತ್ರಧಾರಿಯೆ, ಶುದ್ಧ ಶಕ್ತಿಯ ಸತ್ವ ಶಾಲಿನಿ! ನಿನ್ನ ಸುಂದರ ವಿಲಾಸವನ್ನವಲೋಕಿಸುವ ನಾನು, ಸುಮ್ಮಾನದ ಸುಗ್ಗಿಯನ್ನೇ ಸೂರೆಗೊಂಡಿದ್ದೇನೆ. ನಿನ್ನ ಶಕ್ತಿಪ್ರಭಾವವು ಅಮೋಘವಾದದ್ದು! ಕಾತ್ಯಾಯನಿ. ನೀನು ಕಮಲೆಯೂ ಹೌದು, ವಿಮಲೆಯೂ ಹೌದು. ಹಹಹಹ, ಹೌದಲ್ಲವೇ?

**ಪಾರ್ವತಿ** – ಸ್ವಯಂಭುವೇ–ನಿನ್ನ ಸ್ವಾನಂದಲೀಲೆಯೇ ನಿನಗೆ ಶಕ್ತಿಯಾಗಿದೆ. ಆ ಶಕ್ತಿಯ ವಿಕಾಸವೇ ನಿನಗೆ ವಿಲಾಸವಾಗಿದೆ. ನಿನ್ನ ವಿಲಾಸದಲ್ಲಿ ತೇರ್ಗಡೆ ಹೊಂದುತ್ತಾ, ನಿನ್ನ ಸಾಮೀಪ್ಯವನ್ನು ಸಾಧಿಸುವ ಶಕ್ತಿಯೇ

ಶುದ್ಧ ಭಕ್ತಿಯಾಗಿದೆ. ಈ ಭಕ್ತಿಯ ಭಾವ, ನಿರ್ಭಾವಗಳ ಏಕಮೇವ ನೆಲೆಯ ನಿಲಯವೇ ಸಮರಸಾನಂದಮಯವಾದ ಸೌಖ್ಯದ ಸಾಗರವಾಗಿದೆ. ಶೂಲಪಾಣಿ! ನಿನ್ನ ಶಕ್ತಿಯಲ್ಲಿಯೇ ನಿನಗೆ ಸೋಜಿಗವೆ!

ಶಂಕರ – ಮೋಹಿನಿ, ನಿನ್ನ ಮುದ್ದುಮಾತುಗಳು ನನ್ನನ್ನು ಮಾತಂಗನಂತೆ ಉನ್ಮತ್ತ ಮಾಡುತ್ತಿರುವುವು.

ಪಾರ್ವತಿ – ಸರ್ವಶಕ್ತನೇ, ನಿನ್ನ ಹೊಗಳಿಕೆಯೇ ಜಗಕ್ಕೆ ಭವಪಾಶವಾಗಿರುವದು. ಈ ಪಾಶವು–ಮೃದು ಮಾಲೆಯಂತೆ ಮುಂದೆ ಹೋಗಿ, ಮಂದ ಜೀವಿಗಳನ್ನು ಬೇಡಿಗಳಂತೆ ಬಂಧಿಸುತ್ತಿರುವದು. ಭವಲೋಕದಲ್ಲಿ ಬಂಧಿತವಾಗಿ ಅವು ಉರುಳಾಡುತ್ತಿರುವವು. ನೀನು ಉಲ್ಲಾಸದಲ್ಲಿ ಲೋಲಾಡುವೆ; ನಿನ್ನ ನಟನೆಯೇ ಲೋಕಕ್ಕೆ ನಿಗಳವಾಗಿದೆ. ನಿನಗೆ ಅದು ನಿಜಾನಂದವಾಗಿದೆ.

ಶಂಕರ – ಅಹಹಹ.... ನನ್ನ ಸಹಜಾನಂದ ಸಾಮ್ರಾಜ್ಯಕ್ಕೆ ನೀನೇ ಸಾರ್ವಭೌಮಳು. ದೇವಿ ತೋರು ನಿನ್ನ ಲೀಲಾವಿಲಾಸವನ್ನು! ಚನ್ನೆ ಸ್ವಲ್ಪ ತೋರು, ತೋರುವಿಯಾ? ತೋರು.

ಪಾರ್ವತಿ– ನನ್ನ ಲೀಲೆ! ಅದುವೇ ನಿನ್ನ ಶಕ್ತಿಯು ದೇವಾ! ಮತ್ತೆ ಮತ್ತೆ ಭಕ್ತರ ಮೇಲೆ ನಿಮ್ಮ ಈ ಯುಕ್ತಿಯೇಕೆ?

[ಮುನಿಸುಗೊಂಡು ಓಡುವಳು. ಪ್ರಕೃತಿದೇವಿಯಲ್ಲಿ ತನ್ಮಯಳಾದ ಪಾರ್ವತಿಯ ಪ್ರಕೋಪದಿಂದ ಶಾಂತ ವಾತಾವರಣವು ಕಲಕಿ, ರುದ್ರಗಂಭೀರತೆಯು ತಲೆದೋರುವುದು. ಪ್ರಳಯ ಮೇಘಳಿಂದ ಬರುವ ಅಬ್ಬರದ ಘರ್ಜನೆಯು, ದಿಕ್ತಟಗಳನ್ನು ತಲ್ಲಣಗೊಳಿಸುವಂತೆ ನಡುಗಿಸುವದು. ಬರಸಿಡಿಲು, ಸೆಳೆಮಿಂಚುಗಳ ಕೋಲಾಹಲ! ಭಯಂಕರವಾಗಿ ಪರ್ವತಾವಳಿಗಳನ್ನು ಸೀಳುವ ಜಂಝಾವಾತ! ತರುಮರಾದಿಗಳು ಉರುಳುರುಳಿ ಬೀಳುವ ಭಯಾನಕ ದೃಶ್ಯ. ಸಿಡಿಮದ್ದಿನ ಸ್ಫೋಟದಂತೆ ಶೈಲಗಳ ಶಿಖರದಿಂದ ಜ್ವಾಲಾಮುಖಿಯು ತನಿಗೆಂಡಗಳನ್ನು ಕಾರುತ್ತಿದೆ. ಭೀಕರ ಮಿಂಚು ವೇಗಗಳಿಂದ ಉಲ್ಕಾಪಾತಗಳಾಗುತ್ತಿರುವವು. ಎಲ್ಲೆಲ್ಲಿಯೂ ಪ್ರಳಯಾಕಾರದ ಗಂಭೀರ ಸನ್ನಿವೇಶ. ಶ್ರೀ ಶಂಕರನು ಪ್ರಳಯ ಶಕ್ತಿಯ ಅಣಕವನ್ನು ಗಂಭೀರತೆಯಿಂದ ಈಕ್ಷಿಸಿ, ಮರಳಿ ಸಂವರಿಸಿಕೊಂಡು)

ಶಂಕರ – ಹಾಂ, ಹಾಂ, ದೇವಿ! ನೀನು ಮುಳಿದು ಮುನಿಸಿದರೆ ಈರೇಳು ಲೋಕಗಳು ಕಂಪಿಸುವವು, ಭೈರವಿ! ಎಂತಹ ಕರಾಳ ಸೃಷ್ಟಿಯನ್ನೇ

ಸೃಷ್ಟಿಸಿದೆ! ಅದೋ ನಿನ್ನ ಸುಂದರ ಸೃಷ್ಟಿಯು ವಿನಾಶದ ದವಡೆಯಲ್ಲಿ ಓಡಹತ್ತಿದೆ! ಚಾಮುಂಡಿಯೇ, ಬಾ ! ಎಂತಹ ಚಂಡಿಯೇ, ನೀನು! ಭಾರತ ಯುದ್ಧದಲ್ಲಿ ಕೋಟ್ಯಾವಧಿ ವೀರರ ರಕ್ತವನ್ನು ಆಪೋಶನ ಗೈದರೂ ನಿನ್ನ ದಾಹವು ಶಮನವಾಗಲಿಲ್ಲವೇ? ಕಾಳಿಯೇ ಲೋಕವೆಲ್ಲವೂ ಅಗ್ನಿಯಲ್ಲಿ ದಗ್ಧವಾಗಹತ್ತಿದೆ–ಎಲ್ಲಿ ನೋಡಿದರೂ ಕೋಲಾಹಲ! ಯುದ್ಧ! ಭೂಕಂಪ! ಸರ್ವನಾಶ...!! ಈ ಸನ್ನಿವೇಶವು ಸಾಕು ದೇವಿ.

ಪಾರ್ವತಿ – (ಒಳಗಿನಿಂದ) ಕಾಲರುದ್ರಾ...! ಇದು ನಿನ್ನ ರುದ್ರಲೀಲೆಯ ಅಖಂಡವಿನಾಶ! ಪ್ರಪಂಚದ ಪ್ರಳಯ ! ನಿನ್ನ ಶಕ್ತಿಯನ್ನು ಪರೀಕ್ಷಿಸಿಕೋ...!

ಶಂಕರ – ನನ್ನ ಪರೀಕ್ಷೆಯು ಪರಾವರ್ತನವಾಗಲಿ. ಶಾಂತಳಾಗು ಗೌರಿ. ಈಗ – ನಾನು ಶಂಕರನು!

ಪಾರ್ವತಿ – (ಪ್ರಕಟಳಾಗಿ) ನೀನು ಶಂಕರನಾದರೆ–ಸರ್ವಮಂಗಲೆಯು ನಿನ್ನ ಸೇವೆಯಲ್ಲಿ ಸಿದ್ಧಳಿರುವಳು ದೇವಾ.

ಶಂಕರ – ಬಾ ಅನ್ನಪೂರ್ಣೆ, ಆನಂದದಾಯಿನಿ, ಅನಂತ ಲೋಕಂಗಳ ಆಧಾರಮೂರ್ತಿಯೆ! ನೀನು ಮುಳಿದು ಮುನಿಸಿದರೆ ಮೂರು ಲೋಕಗಳು ನಿಲ್ಲಬಲ್ಲವೇ?

ಪಾರ್ವತಿ – ವಿಶ್ವನಾಟಕ ಸೂತ್ರಧಾರಿಯೆ–ಆರ್ಭಟಿಸುವಾತನೂ ನೀನೆ, ಅಚ್ಚರಿಗೊಳ್ಳುವಾತನೂ ನೀನೆ. ಮರವೆಯನ್ನು ತೊರೆದು, ಅರುವಿನಲ್ಲಿ ಬೆಳಗುವಾತನೂ ನೀನೆ! ಕ್ಷಣಕಾಲ ಆನಂದದಿಂದ ಕುಣಿಯುವೆ, ಕ್ಷಣಕಾಲ ಆಶ್ಚರ್ಯದಿಂದ ನೋಡುವೆ. ನಿನ್ನ ನಟನೆಯಂತೆ ನಾನು ನಾಟ್ಯವಾಡಬೇಕಾಗಿದೆ ದೇವಾ. ನನ್ನನ್ನು ಬದ್ಧಶಕ್ತಿಯನ್ನಾಗಿ ಮಾಡಿ ಭಯಂಕರವಾಗಿ ತೋರುವೆ; ಮರಳಿ ಮಾರ್ಪಡಿಸಿ, ಶುದ್ಧಶಕ್ತಿಯ ಸ್ವಾನಂದದಲ್ಲಿ ತಲ್ಲೀನನಾಗುವೆ. ನಿನ್ನ ನೆನುಹೇ ನಿನಗೆ ಯೋಗವಾಗಿದೆ. ನಿನ್ನ ಬಹಿರಂಗವೇ ಬ್ರಹ್ಮಾಂಡವಾಗಿದೆ, ಅಂತರಂಗವೇ ಜಗದಾತ್ಮವಾಗಿದೆ. ಅನಂತ, ಅಪಾರ, ಅಪ್ರಮೇಯನಾದ ನಿನ್ನನ್ನು ನಾನು ಕೊಂಡಾಡಲು ಶಕ್ತಳೇ ದೇವಾ.

ಶಂಕರ – ಆದಿಬೀಜವೆ, ತತ್ವದ ಖನಿಯೆ! ಶಾಂಭವಿ! ನಿನ್ನ ಸಂಸರ್ಗದಿಂದಲೇ ನನಗೀ ಲೋಕದ ಸಂಭ್ರಮವುಂಟಾಗಿದೆ. ಸತ್ಯಾನ್ವೇಷಣೆಗಾಗಿ ಹೊರಟ

ಜೀವಿಯು–ಮೊದಲು ನಿನಗೆ ಶರಣು ಹೋಗಬೇಕು. ನೀನು ನನ್ನಲ್ಲಿ ಕುಸುಮದಲ್ಲಿಯ ಕಂಪಿನಂತೆ ಭಿನ್ನಭಾವವಿಲ್ಲದೆ ಬೆರೆದಿರುವೆ. ನಾನು ಕಾಲನಾಗಿ ಕುಣಿದರೆ, ನೀನು ಶ್ಯಾಮಲೆಯಾಗಿ ತಣಿಯುವೆ. ನಾನು ವೀಣೆಯಾಗಿ ನುಡಿದರೆ ನೀನು ವಾಣಿಯಾಗಿ ಹಾಡುವೆ. ನಾನು ಸತ್ಯಲೋಕದ ಸಿಂಹಾಸನದಲ್ಲಿ ವಿರಾಜಮಾನನಾದರೆ ನೀನು ಶಾರದೆಯಾಗಿ ರಾರಾಜಿಸುವೆ. ನಾನು ನಾರಾಯಣನಾಗಿ ಪೋಷಿಸಿದರೆ, ನೀನು ನಾರಾಯಣಿಯಾಗಿ ಪಾಲಿಸುವೆ. ನಾನು ಸದಾಶಿವನಾಗಿ ಮೆರೆದರೆ ನೀನು ಸರ್ವಶಕ್ತಿಯಾಗಿ ಪೊರೆಯುವೆ. ನಮ್ಮ ಈ ಸಮರಸಾನಂದಮಯವಾದ ಸಮನ್ವಯ ಸಿದ್ಧಾಂತವೇ ಸೃಷ್ಟಿಯ ಮೂಲವಾಗಿದೆ. ನಿನ್ನ ಈ ಅಖಂಡ ಶಕ್ತಿಯೇ ನನಗೆ ಅಗಾಧವಾದ ಭಕ್ತಿಯಾಗಿದೆ. ನಾನು ಭಕ್ತದೇಹಿಕ ದೇವನಾಗಿದ್ದೇನೆ. ಅಖಂಡ ಸೃಷ್ಟಿಯ ಸಂಪತ್ತನ್ನು ನನಗರ್ಪಿಸಿದರೂ ನಾನು ತೃಪ್ತನಾಗಲಾರೆ. ನಾನು ಕೊಟ್ಟಿದ್ದನ್ನು ನನಗರ್ಪಿಸುವ ನರನನ್ನು ನೋಡಿ ನಾನು ನಂಬುವುದಿಲ್ಲ. ನನ್ನನ್ನು ತಿಳಿದು, ಆಚರಿಸುವ ನಿಜಭಕ್ತನ ಕ್ಷಣಕಾಲದ ವೀರಭಕ್ತಿಯು ಕೂಡಾ ನನ್ನನ್ನು ಬಲವಾದ ಪಾಶದಂತೆ ಬಂಧಿಸುತ್ತಿರುವದು. ಅಂತೆಯೇ ನನಗೆ ಭಕ್ತಾಧೀನನಾದ ಭೋಲಾನಾಥನೆಂಬ ಹೆಸರು ಪ್ರಾಪ್ತವಾಗಿದೆ.

**ಪಾರ್ವತಿ –** ಪ್ರೇಮಮಯ ಪ್ರಭುವೆ, ಭಕ್ತಾಧೀನನಾದ ನಿನ್ನ ಒಲುಮೆಯ ಗೆಲುವನ್ನು ಪಡೆದಿರುವ ಭಕ್ತಯೋಗಿಯೇ ಧನ್ಯನು. ಪರಮಾನಂದ ಮೂರ್ತಿಯೆ, ಅಂತಹ ಭಕ್ತಶ್ರೇಷ್ಠರು ಪ್ರಪಂಚದಲ್ಲಿ ಸಿಗುವದು ಅಪರೂಪ!

**ಶಂಕರ –** ಉಂಟು, ದೇವಿ ಉಂಟು. ಭಕ್ತರಿಲ್ಲದ ಪ್ರಪಂಚವು ಪ್ರಳಯದಲ್ಲಿ ಪರಾವರ್ತನವಾಗುವದು. ಪ್ರಪಂಚಕ್ಕೆ ಭಕ್ತರು ಬೇಕಾದಾಗ ಅವರು ಪ್ರಕಟರಾಗುವರು. ಜನತಾ ಜೀವನಕ್ಕೆ ಅಂಟಿಕೊಂಡು ಬಂದಿರುವ ಮಾಯಾಮಲವನ್ನು ನಿರ್ಮೂಲಗೊಳಿಸಿ, ನಿರ್ಮಲ ಮಾಡುವರು. ಆಗ ಲೋಕವು ಭಕ್ತಿಯಿಂದ ಬೆಳಗುತ್ತದೆ. ನನ್ನ ಭಕ್ತರು ಕುಣಿಸಿದಂತೆ ನಾನು ಕುಣಿಯುತ್ತೇನೆ. ಅವರ ನುಡಿಯಲ್ಲಿಯೇ ನಾನು ಹಾಡುತ್ತೇನೆ. ಅವರು ಬೇಡಿದ್ದನ್ನು ನಾನು ನೀಡುತ್ತೇನೆ. ಅವರ ಬರುವನ್ನೇ ನಾನು ಸದಾ ನಿರೀಕ್ಷಿಸುತ್ತೇನೆ. ಗೌರಿ–ಸ್ವಲ್ಪ ಸಾವಧಾನಳಾಗು. ಈಗಾಗಲೇ ಕೈಲಾಸದ ಸೋಪಾನಗಳಲ್ಲಿ ಒಬ್ಬ ಭಕ್ತಶ್ರೇಷ್ಠನ

ಆಗಮನವಾಗಹತ್ತಿದೆ. ಕ್ಷಿಪ್ರದಲ್ಲಿಯೇ ಅವನ ಸಂದರ್ಶನಲಾಭವನ್ನು ಪಡೆಯುವೆ. ನೀನು ಶಾಂತಿಯಿಂದ ನಿರೀಕ್ಷಿಸು.

**ಪಾರ್ವತಿ –** ತಾವು ಇಷ್ಟು ತವಕದಿಂದ ಲೋಕಿಸುವ ಆ ಆತ್ಮವೀರನಾರು ದೇವಾ?

**ಶಂಕರ –** ನನ್ನ ಭಕ್ತನಾದ ಬಾಣಾಸುರನ ದಾರಿಯನ್ನೇ ನಾನು ಕಾಯುತ್ತಿದ್ದೇನೆ, ಗಿರಿಜೆ!

**ಪಾರ್ವತಿ –** ಆ ಅಸುರನು ಮೋಸಗಾರನಾಗಿರಬಹುದು ಪ್ರಭು, ಅವನ ಭಾವನೆಯನ್ನು ಬಲ್ಲಿರಾ?

**ಶಂಕರ –** ಹುಚ್ಚೀ, ಜಗದಘವನ್ನು ನೀಗುವ ಭಾವಲಿಂಗರೂಪನಾದ ನನಗೆ ಭಕ್ತನ ಭಾವನೆಯು ತಿಳಿಯಲಾರದೇ? ಅವನ ಭಾವನೆಯು ಭಕ್ತಿಯಿಂದ ಭರಿತವಾಗಿದೆ.

**ಪಾರ್ವತಿ –** ದೇವಾ–ತಾಮಸ ಭಕ್ತಿಯಿಂದ ಲೋಕಕ್ಕೆ ಕಲ್ಯಾಣವಾಗಲಾರದು ಪ್ರಭು.

**ಶಂಕರ –** ಕಲ್ಯಾಣಪ್ರದಳಾದ ಕಲ್ಯಾಣಿಯು ಸನ್ನಿಧಿಯಲ್ಲಿರಲು ನಮಗೆ ಬಂದ ಭಯವೇನು ದೇವಿ?

**ಪಾರ್ವತಿ –** ಹೀಗೆ ಮಾತಿನ ಮಾಯಾಜಾಲದಲ್ಲಿ ನನ್ನನ್ನು ಸಿಲುಕಿಸಬೇಡ, ಪ್ರಭು. ಅವನು ನಾರಾಯಣಿನ ದ್ವೇಷಿಯಿರುವನಂತೆ–ಇದು ನಿನಗೆ ಸಮ್ಮತವೋ?

**ಶಂಕರ –** ವರ್ಣಪ್ರಿಯನಾದ ನಾರಾಯಣನನ್ನು ವರ್ಣವಿರೋಧಿಯಾದ ನನ್ನ ಭಕ್ತನು ದ್ವೇಷಿಸುವದು ಸಹಜವಿದೆ. ಆದರೆ, ಮೂಲಕುಂಡಿಲಿನಿಗೆ ಆಧಾರವಾಗಿರುವ ನಾರಾಯಣೀ ಶಕ್ತಿಯನ್ನು ಅವನೆಂದಿಗೂ ವಿರೋಧಿಸಲಾರನು ಪ್ರಿಯೆ.

**ಪಾರ್ವತಿ –** ವರ್ಣಿಗಳೂ, ಅತಿವರ್ಣಿಗಳೂ – ಎಲ್ಲರೂ ನಿಮ್ಮ ಸೃಷ್ಟಿಯ ಒಡಲಲ್ಲಿಯೇ ಬಡಿದಾಡುವರಲ್ಲವೇ ಪ್ರಭು!

**ಶಂಕರ –** ಅಂತೆಯೇ ವಿಕಾಸ, ವಿನಾಶಗಳೆಂಬ ತಾಳಗಳ ಮೇಳದಲ್ಲಿ ಹೊರಡುವ ನಿನಾದದಿಂದಲೇ ನಾನು ನಲಿಯುತ್ತಿದ್ದೇನೆ. ಗಿರಿಜೆ– ಭ'ಕ್ತಿ ಪ್ರಿಂಯುನಾದ ನಾನು ಈ ಬಾಣನ ಬಾಗಿಲು ಗಾವಬಂಟನಾಗಿದ್ದೇನೆ.

**ಪಾರ್ವತಿ –** ಇಂತಹ ಭಕ್ತಶ್ರೇಷ್ಠನ ಭಕ್ತಿಯು ದ್ವೇಷದಲ್ಲಿ ನಾಶವಾಗ ಬಾರದೆಂದೇ ನಾನು ಪ್ರಯತ್ನಿಸುತ್ತಿದ್ದೇನೆ ಪ್ರಭು.

**ಶಂಕರ –** ನಿನ್ನ ಪ್ರಯತ್ನವು ಸಫಲವಾಗಲಿ ಗಿರಿಜೆ–ನಿನ್ನ ಶಾಂತಿಯೇ ನನ್ನ ಸಂತೋಷ. ಇದೋ ದೇವಿ–ನಾದ...! ಕಹಳಾನಾದ! ಬಾಣನು ಬಂದೇಬಿಟ್ಟನು.

**ಪಾರ್ವತಿ –** ನಾದ...! ಚಿನ್ನಾದವೇ ಪ್ರಭು, ಬರಲಿ... ಬಾಣನು ಬರಲಿ...! ತಾವು ವಿರಮಿಸಿರಿ.

**ಶಂಕರ –** ಚಿಚ್ಛಕ್ತಿಯೆ, ವಿರಮಿಸೋಣ ನಡೆ. (ಈರ್ವರೂ ಶಿಲಾಸನದ ಮೇಲೆ ವಿರಮಿಸುವರು, ಬಾಣಾಸುರನು ಬರುವ ಹಾದಿಯ ಕಡೆಗೆ ಹಸನ್ಮುಖದಿಂದ ನೋಡುತ್ತಿರುವರು. ಬಾಣಾಸುರನು ಭಜನಾಸಕ್ತನಾಗಿ ಪದವನ್ನು ಹಾಡುತ್ತ ಪ್ರವೇಶಿಸುವನು) (ಪದ್ಯ)

**ಬಾಣಾಸುರ –** ಜಯತಿ ಸಚ್ಚಿದಾನಂದ ! ಬಗೆಬಗೆಯ ರಂಜನೆಯ ಬಣ್ಣವನ್ನು ಬೀರಿ, ಮಾನವನ ಆತ್ಮವನ್ನು ಹಲವಾರು ಮುಖದಿಂದ ಮುತ್ತಿ, ಅವನನ್ನು ಅಧೋಗತಿಗೊತ್ತುವ ನಾನಾ ರೋಗಗಳಿಗೆ ಅಮೃತರೂಪವಾದ ಈ ಶಿವಪಂಚಾಕ್ಷರೀ ಬೀಜ ಮಂತ್ರವೇ ಏಕಮಾತ್ರ ದಿವ್ಯ ವೈದ್ಯವಾಗಿದೆ. ಪ್ರಕೃತಿಯ ಘೋರ ಶಾಸನಗಳನ್ನು ತಪ್ಪಿಸಿಕೊಳ್ಳಲು ಜೀವಿಗೆ ಇದೊಂದೇ ರಕ್ಷಾಕವಚವಾಗಿದೆ. ಭುವನ ಬ್ರಹ್ಮಾಂಡಗಳನ್ನು ನಿಯಂತ್ರಣಗೊಳಿಸುವ ಪರಶಿವನ ನಿಲವು, ಬೀಜದೊಳಗಣ ವೃಕ್ಷದಂತೆ, ಅಂಬುಧಿಯೊಳಗಣ ಅಗ್ನಿಯಂತೆ ಭಕ್ತನ ಭಾವನೆಯಲ್ಲಿ ನೆಲಸಿದೆ. ಲೋಕಂಗಳನ್ನು ಇಚ್ಛಾಮಾತ್ರದಿಂದ ಕುಣಿಸಬಲ್ಲ ಶಿವನು, ಭಕ್ತನ ಭಾವನಾಮಾತ್ರದಿಂದ ಮಂತ್ರಮುಗ್ಧನಂತೆ ಕುಣಿಯತೊಡಗುತ್ತಾನೆ. ಜೊಳ್ಳನ್ನು ತೂರುವ ಈ ಲೋಕಕ್ಕೆ ಬೀಜದ ಅರಿವಾಗಲೊಲ್ಲದು. ಬೀಜವನ್ನರಿಯಬೇಕಾದರೂ ಈ ಆದಿನಾಥನ ಕೃಪೆಯೇ ಬೇಕು. ಹೇ ಜಗದ್ವ್ಯಾಪಕ, ಜಗದಾತ್ಮ–ಜಗನ್ನಿಯಾಮಕವಾದ ಆದಿಯ ಆಧಾರವೆ, ಜೀವಿಗಳ ಮೂಲವೆ–ಕಾಲ, ಕರ್ಮ, ಮಾಯಗಳಿಗೆ ಅತೀತ, ಅಗಮ್ಯವಾದ ಪರವಸ್ತುವೆ! ಅನಂತಕೋಟಿ ಸೂರ್ಯರಿಗೆ ಪ್ರಕಾಶವನ್ನು ದಯಪಾಲಿಸಿ ಅಖಂಡವಾಗಿ ಬೆಳಗುವ ತೇಜೋಧಾಮವೆ! ಬುದ್ಧಿ ಜ್ಞಾನಗಳಿಗೆ ಅಗೋಚರನಾದ ಅಪ್ರಮೇಯನೆ! ಹರಿಯು ಕಾಣದ ಚರಣ,

ಅಜನು ನೋಡದ ಮುಕುಟ, ದೇವದಾನವರರಿಯದ ತೇಜವನ್ನೊಳಗೊಂಡ ಜ್ಯೋತಿರ್ಲಿಂಗವೆ, ಏನೊಂದೂ ಅರಿಯದ ಮಂದಮತಿಯಾದ ನಿನ್ನ ಕಂದನನ್ನು ಕೃಪೆಯಿಂದ ಕಾಪಾಡು. ನಿನ್ನ ಚರಣ ಸ್ಪರ್ಶ ಮಾತ್ರದಿಂದಲೇ ನನ್ನ ಕುಲಕೋಟಿ ಉದ್ಧಾರವಾಗಿ, ನಾನು ಕೃತಕೃತ್ಯ ಕಾಯನಾದೆನು ಪ್ರಭು! ಎನ್ನಾಳ್ದನಾದ ನೀನು ಆಳಿನ ಅವಗುಣಗಳನ್ನೆಣಿಸದೆ, ಮನ್ನಿಸು ದೇವಾ. ವೇದ ವಾದಗಳು ಕಾಣದ ನಿನ್ನ ಪಾದಗಳನ್ನು, ಆಗಮ ಶಾಸ್ತ್ರಗಳು ತಿಳಿಯದ ನಿನ್ನ ಮಹಿಮೆಯನ್ನು – ಅಜ, ಹರಿ, ಸುರಾದಿಗಳಿಗೆ ನಿಲುಕದ ನಿನ್ನ ನಾಮವನ್ನು, ನಾನು ಕೊಂಡಾಡಲು ಯೋಗ್ಯನೆ? ಅನಂತ ಬ್ರಹ್ಮಾಂಡಗಳನ್ನು ನಿಯತಿಗೊಳಿಸುವ ನಿಯೋಜಕನ ಮುಂದೆ, ನಾನೊಂದು ಕ್ಷುದ್ರ, ನೊರಜು ಕಣ, ದೇವಾ! ನಾನು ಸಾಟಿಯೆ, ನಾನು ಸಮವೆ? ನಿನ್ನ ಅಗಾಧವಾದ ಅತುಲಶಕ್ತಿಯ ಮುಂದೆ ನನ್ನ ಗಣನೆ ಯಾವದು ದೇವಾ? ನಿನ್ನ ಪಾದದ ಧೂಳೀಕಣದ ಸಾಸಿರ ಭಾಗಕ್ಕೂ ನಾನು ಸಮನಲ್ಲ ದೇವಾ, ನಿಮ್ಮ ಕೃಪೆಯ ಕಂದನೆಂದು ಒಮ್ಮೆ ಆಶೀರ್ವದಿಸು! ಒಮ್ಮೆ ನಿನ್ನ ವರದ ಹಸ್ತವನ್ನು ನನ್ನ ಶಿರದ ಮೇಲಿಟ್ಟು ಅಪಾರವಾದ ಆನಂದಾನುಭವವನ್ನು ತೋರು. ನನ್ನ ದೇಹ, ಅಂತಃಕರಣ, ಇಂದ್ರಿಯಂಗಳು, ಪ್ರಾಣಂಗಳೆಲ್ಲವೂ ನೀವೇ ದೇವಾ. ನನ್ನ ನಡೆ ನುಡಿಯೆಲ್ಲವೂ ನೀವೇ ದೇವಾ. ನಿಮ್ಮನುಳಿದು ನನಗೆ ಬೇರೆ ಸ್ವತಂತ್ರವಿಲ್ಲ. ದೇವಾ, ಕರುಣಿಸು, ಕರುಣಿಸು. (ಪದ್ಯ).... ಅಮ್ಮಾ– ಈಶನ ರಾಣಿಯೆ, ಆದಿಯ ಶಕ್ತಿಯೆ, ಲೋಕದ ವಾಣಿಯೆ, ಜೀವಿಗಳಿಗೆ ಸಿಗಲಾರದ ಚೈತನ್ಯಾತ್ಮಕನಾದ ಪ್ರಭುವನ್ನು ಸಗುಣ ಬ್ರಹ್ಮರೂಪದಲ್ಲಿ ತೋರಿಸುವ ಅವಿಚ್ಛಿನ್ನ ಶಕ್ತಿಯೆ, ನಿನ್ನಲ್ಲಿ ಭಕ್ತಿಯನ್ನು ಕರುಣಿಸು. ನೀನಿಲ್ಲದಿದ್ದರೆ ನಿಷ್ಕ್ರಿಯೆನು ನಾನು–ನಿಶ್ಚೇತನನು ನಾನು. ಆಸ್ತಿಕರ ಆಶಯಗಳನ್ನು ಸಂಪೂರ್ಣಗೊಳಿಸುವ ಶುದ್ಧ ಶಕ್ತಿಯೆ– ನಿನ್ನ ಮಗನೆಂದು ಸಂತೈಸಿ ಒಮ್ಮೆ ಕರುಣಿಸಮ್ಮಾ, ಮಾತೆ.

**ಶಂಕರ –** ಭಕ್ತಿಯ ಖಣಿಯಾದ ಬಾಣನೆ, ನಿನ್ನ ಅದ್ಭುತ ಸಾಮರ್ಥ್ಯದಿಂದ ಜಗತೀವಲಯಕ್ಕೆ ನನ್ನನ್ನು ಸೆಳೆದು ತಂದ ಅಸೀಮ ಸಾಹಸಿಯಾದ ಬಲ್ಲಿದ ಬಾಣನೆ, ಬಾ, ಮಗನೆ. ನಿನ್ನಂಥ ಭಕ್ತಶ್ರೇಷ್ಠರ ಬರುವೇ ನನಗೆ ಮಂಗಲ ಮುಹೂರ್ತವಾಗಿದೆ. ನಿನ್ನ ಪರಿವಾರವೆಲ್ಲವೂ ಕ್ಷೇಮವಷ್ಟೆ?

**ಬಾಣಾಸುರ** – ಸನ್ಮಂಗಳ ಮೂರುತಿಯೆ–ಪ್ರಪಂಚಕ್ಕೆ ಮಂಗಳವನ್ನು ನೀಡುವ ಮಹಾದಾನಿ ನೀನಿರುವಲ್ಲಿ ನನ್ನ ಮಂಗಳವೆಲ್ಲವೂ ನಿನ್ನನ್ನೇ ಕೂಡಿರುವದು, ದೇವಾ!

**ಶಂಕರ** – ಗಿರಿಜೆ! ಬಾಣನ ಅಗಾಧವಾದ ಭಕ್ತಿಯನ್ನು ಕಂಡೆಯಾ? ಅವನ ಪ್ರತಿಯೊಂದು ಶಬ್ದವು ಕೂಡಾ ನನ್ನಲ್ಲಿ–ಅಖಂಡ ನಿಷ್ಠಾಭಕ್ತಿಯಲ್ಲಿ, ಸಮರಸವೇದ್ಯವಾಗಿ ಗಮಿಸುತ್ತಿರುವದು. ಬಾಣನ ಭಕ್ತಿಯು ನನ್ನಲ್ಲಿ ಸಮಾವೇಶವಾಗಿ, ಸಂಗಮದಂತೆ ಹರಿಯುತ್ತಾ–ನನಗೆ ಹೃದಯಂಗಮವಾದ, ಅತೀವ ನೂತನ ಆನಂದವನ್ನುಂಟು ಮಾಡುತ್ತಿರುವದು. ಇವನ ಭಕ್ತಿಯು ನನ್ನ ಸರ್ವಾಂಗಗಳಲ್ಲಿ ಪ್ರಚೋದಿತವಾಗಿ, ನನ್ನ ಚೈತನ್ಯ ವಾರಿಧಿಯಲ್ಲಿ ಕ್ರಿಯಾಪ್ರಭಾವದ ತರಂಗಗಳನ್ನೆಬ್ಬಿಸುತ್ತಿರುವುದು. ಇವನ ದಾಸೋಹಂಭಾವವು ಸೂಜಿಯ ಕಲ್ಲಿನಂತೆ ನನ್ನನ್ನು ಅವನತ್ತ ಸೆಳೆಯುತ್ತಿರುವದು! ಚದುರಿದ ನನ್ನ ಶಕ್ತಿಯನ್ನು ಏಕೀಕರಿಸಿ ಸೆಳೆಯಬಲ್ಲದು ಈ ಭಾವಿಕನ ಭಕ್ತಿ! ಪಾರ್ವತಿ! ಇವನ ಸಾನ್ನಿಧ್ಯವು ಎಂತಹ ಆನಂದ ಕರವೆ!

**ಪಾರ್ವತಿ** – ದೇವಾ, ಜಗತ್ತನ್ನು ನೀನು ನಾಟಕವಾಡಿಸುವೆ–ನಿನ್ನನ್ನು ಭಕ್ತರು ನಾಟ್ಯವಾಡಿಸುವರು. ಜಗತ್ತಿಗೆ ನೀನು ಬೇಡಿದ್ದನ್ನು ನೀಡುವೆ, ಭಕ್ತಿಗಾಗಿ ಮಾತ್ರ ನೀನು ನಂಬಿದವರನ್ನು ಕಾಡುವೆ. ನಿನ್ನ ವಿಲಾಸವೇ ನಿನಗೆ ಹರ್ಷವಾಗಿರುವದು ದೇವಾ! ಬಾಣನ ಭಕ್ತಿಯು ನಿನ್ನನ್ನು ಶೂನ್ಯ ಕಾಯನನ್ನಾಗಿ ಮಾಡಿ ಏಕಮುಖವಾಗಿ ಅವನತ್ತ ಸೆಳೆಯುತ್ತಿರುವದು. ಬಾಣನಂಥ ಭಕ್ತರು ಪ್ರಪಂಚದಲ್ಲಿ ದೊರೆಯುವದು ಅಪರೂಪ ದೇವಾ.

**ಶಂಕರ** – ಭಕ್ತರ ಬರುವೇ ನನ್ನ ಬಾಳಿನ ಗುರಿ–ನನ್ನ ಜೀವನದ ಜೀವಾಳ, ದೇವಿ.

**ಬಾಣಾಸುರ** – ದೇವಾ, ಬಂಗಾರದ ಆಯುಧವಾದರೇನು–ಪ್ರಾಣಹರಣ ಮಾಡದೆ ಬಿಡುವದೆ? ಶಂಭೋ ! ದಯಾಳುವಾದ ನೀನು ನನ್ನನ್ನು ಹೀಗೆ ಹೊಗಳಬಹುದೇ ತಂದೆ? ನೀನು ಹೊಗಳುವದಕ್ಕೆ ನಂಬಿಯಂಥ ನಂಬಿಗೆಯಿದೆಯೆ ನನ್ನಲ್ಲಿ! ಅಂಬೆಯಂಥ ಅಪಾರ ಶಕ್ತಿಯಿದೆಯೆ ನನ್ನಲ್ಲಿ! ಕೃಪೆಮಾಡಿ ನೀನು ಈ ಹೊಗಳಿಕೆಯೆಂಬ ಮೋಹವನ್ನು ಮುಂದೂಡಿ ಕಾಡದಿರು ಪ್ರಭುವೆ–ಪ್ರಸನ್ನನಾಗು.

**ಶಂಕರ –** (ಉಷೆಯನ್ನವಲೋಕಿಸಿ, ಚಕಿತ ದೃಷ್ಟಿಯಿಂದ, ಬಾಣನ ತಲೆಯನ್ನು ನೇವರಿಸುತ್ತಾ).... ಬಾಣಾ, ಸೃಷ್ಟಿಯ ಸಾತ್ವಿಕ ತೇಜಸ್ಸೇ ಮೂರ್ತಿಗೊಂಡಂತಿದ್ದ ಈ ದಿವ್ಯ ಮೂರ್ತಿ ಯಾವದು!

**ಬಾಣಾಸುರ –** ಇದು, ನಿನ್ನ ಕೃಪಾಪ್ರಸಾದ, ದೇವಾ! ಮಹಾಮಾತೆಯ ಕರುಣದ ಕಂದಮ್ಮ. ಲೋಕವು ಭ್ರಮೆಗೊಂಡು ಬಾಣನ ಮಗಳೆಂದು ಕರೆಯುತ್ತಿರುವದು. ಎಲ್ಲವೂ ನಿನ್ನ ಕೃಪೆ–ನಿನ್ನ ಮಹಿಮೆ ಪ್ರಭು! ಇವಳಿನ್ನೂ ಕುಮಾರಿ! ಬಾ, ಉಷಾ–ಮಗಳೆ. ಈ ಸುಖಸನ್ನಿಧಿಯನು ವಂದಿಸಿ ಸುಖಿಯಾಗಮ್ಮಾ. ಲೋಕಮಾತೆಗೆ ಅಭಿವಂದಿಸಿ ಧನ್ಯಳಾಗು ಮಗು.

**ಶಂಕರ –** ಉಷಾರಾಣಿ...! ಎಂತಹ ಚನ್ನಾದ ಹೆಸರು. ಸುಪ್ರಭಾತದಲ್ಲರುಳುವ ಕಮಲಿನಿಯಂತೆ ಇವಳ ಬಾಳು ಸುಂದರವಾಗಿ ಸಾಗಲಿ.

**ಪಾರ್ವತಿ –** ಕುಮಾರಾ, ಪ್ರಾಪ್ತವಯಸ್ಕಳಾದ ಇವಳು ಕುಮಾರಿಯಾಗಿಯೇ ಇರುವಳಲ್ಲ ! ಇವಳ ವಿವಾಹವನ್ನು ಇನ್ನೂ ನೆರವೇರಿಸಬಾರದೆ?

**ಬಾಣಾಸುರ –** ಅಲ್ಪನಾದ ನಾನೇನು ಹೇಳಲಿ, ಮಾತೆ. ಮಗಳೆಂಬ ವ್ಯಾಮೋಹವೇ ಇದಕ್ಕೆ ಕಾರಣ ತಾಯಿ–ಸರ್ವಮಂಗಳೆಯಾದ ನಿನ್ನ ಕೃಪೆಯಿಂದ ಇವಳ ಮಂಗಳಕಾರ್ಯವು ಕ್ಷಿಪ್ರದಲ್ಲಿಯೇ ನೆರವೇರಬಹುದು. (ಉಷೆಯು ಗಿರಿಜಾದೇವಿಗೆ ವಂದಿಸುವಳು)

**ಉಷಾ –** (ಪ್ರಾರ್ಥನಾಗೀತ) ಮಾತೆ, ನಿನ್ನ ಆಶೀರ್ವಾದವು ನನ್ನನ್ನು ಹರ್ಷಿತಳನ್ನಾಗಿ ಮಾಡಿತು. ನನ್ನ ಬಾಳು ಗೊತ್ತುಗುರಿಯಿಲ್ಲದೆ ಹೊಯ್ದಾಡುತ್ತಿರುವದು. ಶಾಂತಿಯನ್ನು ನೀಡು, ದೇವಿ!

**ಪಾರ್ವತಿ –** ನೀನೇನು ಬಯಸುವೆ, ಮಗಳೆ?

**ಉಷಾ –** ನಿನ್ನ ಕೃಪೆಯಿಂದ ಎಲ್ಲಾ ವೈಭವವಿದೆ ದೇವಿ–ಆದರೆ ನನ್ನ ಪತಿ ಯಾರೆಂಬುವದನ್ನು ತಿಳುಹಿಸು. ನನ್ನ ಹೃದಯೇಶ್ವರನಾರೆಂಬುದನ್ನು ಅರಿತು ಆನಂದಿಸುತ್ತೇನೆ, ಮಾತೆ.

**ಪಾರ್ವತಿ –** ನಿನ್ನ ಜೀವನವು ಸಮಸ್ಯಾತ್ಮಕವಿದೆ, ಮಗು !

**ಉಷಾ –** ಅಂದರೆ...! ನಾನು ಅಭಾಗ್ಯಳೆ?... ಮಾತಾಮಯಿ!

**ಪಾರ್ವತಿ –** ಬಾಣಕುಮಾರಿಯು ಭಾಗ್ಯಹೀನೆಯಾಗಬಲ್ಲಳೆ!

**ಶಂಕರ –** ನನ್ನ ಬಾಣಕುಮಾರಿಯು ಭಾಗ್ಯಹೀನೆ ಎಂದಿಗೂ ಆಗಲಾರಳು ಅವಳ ಮಂಗಳವು ಸಂಗಮದಂತೆ ಸುಖಗಮ್ಯವಾಗಿರುವದು.

**ಬಾಣಾಸುರ –** (ಆಹ್ಲಾದ)ಹಹಹ! ನಿಮ್ಮ ಕೃಪೆಯಿದ್ದರೆ ಹಾಲಾಹಲವು ಅಮೃತವಾಗುವುದು, ತಾತಾ!

**ಉಷಾ –** ಹೇಳು ಮಾತೆ, ನನ್ನಲ್ಲಿ ವಂಚನೆಯೇ?

**ಪಾರ್ವತಿ –** ಸಂಶಯ ಬೇಡ, ಮಗಳೆ! ನಾಳಿನ ದಿನ ನಿನ್ನ ಸ್ವಪ್ನದಲ್ಲಿ ಕಾಣುವ ಪುರುಷ ಶ್ರೇಷ್ಠನೇ ನಿನ್ನ ಜೀವಿತೇಶನು–ಮಗು ತಿಳಿಯಿತೆ?

**ಉಷಾ –** ನಿಮ್ಮ ಪ್ರಸಾದವಾಣಿಯೇ ನನಗೆ ಮಹಾಭಾಗ್ಯ, ಮಾತೆ.

**ಶಂಕರ –** ಬಾಣಾ! ರಾಜರಾಜೇಶ್ವರನಾದ ನೀನು, ನಮಗೆ ಏನನ್ನು ಕಾಣಿಕೆಯಾಗಿ ಅರ್ಪಿಸಬಲ್ಲೆ?

**ಬಾಣಾಸುರ –** ನೀನು ಕೊಟ್ಟದ್ದನ್ನು ತೆಗೆದುಕೊಳ್ಳಲು ಒಡೆಯನಾದ ನಿನಗೆ ನಾನು ಕೊಡುವದೇನಿದೆ, ದೇವಾ! ಬರೇ ನನ್ನನ್ನು ನಿಮಿತ್ಯಮಾತ್ಯ ನನ್ನಾಗಿ ಮಾಡಿರುವೆ. ದೇವಾಧಿದೇವತೆಗಳೆಲ್ಲರೂ ನಿನ್ನ ಹಂಗಿನಲ್ಲಿಯೇ ಬದುಕುವಾಗ ಈ ಬಡಬಾಣನಿಗೆ ಬೇರೆ ನನ್ನದೆಂಬುವದೇನಿದೆ, ಪ್ರಭು? ನನ್ನದೆಂಬುವದೆಲ್ಲವೂ ನಿನ್ನ ಸರ್ವಸ್ವ ಇಳೆ, ಬೆಳೆಗಳೆಲ್ಲವೂ ನಿಮ್ಮ ದಾನ! ಲೀಲಾವಿನೋದದಿಂದ ಮಾನವಾತ್ಮನನ್ನು ಪರಕಿಸಲೋಸುಗ ಇದೊಂದು ಭಾವಭಂಗಿಯೆ! ಈ ವಿನೋದ ವೈಖರಿಯೊಂದು ನಿನ್ನ ಹಿರಿದಾದ ಕೃಪೆ, ಪ್ರಭು! ನಿನ್ನ ನುಡಿಯಲ್ಲಿಯೇ ನಿನ್ನನ್ನು ಹಾಡುವೆ, ಶಿರವನ್ನು ಸೋರೆಯಮಾಡಿ, ನರವನ್ನು ತಂತಿಯ ಮಾಡಿ, ಅಡಿಗಡಿಗೆ ಶಿವ ಓಂ ಎಂಬ ಅಮರನಾದವನ್ನೇ ನುಡಿಸಿ ಹಾಡುವೆ! ನೀನಿತ್ತ ಭಕ್ತಿಯಿಂದಲೇ ನಿನ್ನ ಅದ್ಭುತ ಶಕ್ತಿಯನ್ನು ಕೊಂಡಾಡುವೆ, ಇಷ್ಟೇ...!

**ಶಂಕರ –** ಭಾಪು, ಬಾಣಾ! ನಿನ್ನ ಭಕ್ತಿಯು ನನ್ನನ್ನು ಹರ್ಷಾಂಬುಧಿಯಲ್ಲಿ ತೇಲುಸುತ್ತಿರುವದು. ಬೇಡು ಮಗನೆ, ನಿನಗೆ ಇಷ್ಟವಾದುದನ್ನು ಬೇಡು.

**ಬಾಣಾಸುರ –** ಹಾಗಾದರೆ ಕೊಡಬಲ್ಲೆಯಾ ಪ್ರಭು! ನನ್ನ ಬೇಡಿಕೆಯನ್ನು ನೀಡದಿದ್ದರೆ ನಾನು ಬಿಡುವವನಲ್ಲ. ನಾನೀಗ ಬೇಡಬಹುದೆ? ತಂದೆ.

ಶಂಕರ – ಸಂಶಯ ಬೇಡ, ಬಾಣಾ. ತ್ರಿವಾರ ಸತ್ಯ! ಬೇಕಾದದ್ದನ್ನು ಬೇಡು– ನೀಡುವೆನು.

ಬಾಣಾಸುರ – ಹಾಗಾದರೆ ನೀಡು ದೇವಾ.... ದೇವರನ್ನು ಹಿಂದೂಡಿ, ದೆವ್ವವು ಮುಂದೆ ಬಂದು ಪೂಜೆಗೊಳ್ಳುತ್ತಿರುವದು. ಎಲ್ಲಿ ನೋಡಿದರೂ ಪ್ರೇಯಸ್ಸಿನ ಭೂತಕ್ಕೆ ಮಾನವ ಜನಾಂಗವು ದಾಸನಂತೆ ವರ್ತಿಸುತ್ತ ಈಶನನ್ನು ಮರೆತಿರುವದು. ಎಲ್ಲಿ ನೋಡಿದರೂ ವೈಷ್ಣವೀ ಶಕ್ತಿಯ ದುರ್ಮಾಯೆ, ದುರ್ಮೋಹಗಳೇ ಮುಂದೆ ಬಂದು ಕಾಡುತ್ತಿರುವವು. ಮಾನವ ಜನಾಂಗವನ್ನೇ ಸಜಾತಿ ಪಂಥಗಳಿಂದ ಕಟ್ಟಿ, ರಸಾತಲದಲ್ಲಿ ಮೆಟ್ಟುತ್ತಿರುವದು. ಇದನ್ನು ನೋಡಿ ನಾನು ಸಹಿಸಲಾರೆ; ಇದರ ಶಾಸನ ಮಾಡುವದಕ್ಕಾಗಿಯೇ ನನಗೆ ಸಾಸಿರ ದೋಳಿನ ಬಲುಮೆಯನ್ನು ನೀಡು. ಇದೇ ನನ್ನ ಬೇಡಿಕೆ. ನೀಡು ದೇವಾ, ನೀಡುವೆಯಾ?

ಶಂಕರ – ಖೂಳಾ, ಧೂರ ಸಾರು – ಇದು ನಿನ್ನ ಅಧಃಪತನ! ಅದು ನನ್ನ ಲೀಲೆ! ನನ್ನ ಮಾಯೆಯನ್ನು ಪರಾಭವಗೊಳಿಸಲೆತ್ನಿಸುವೆಯಾ?

ಬಾಣಾಸುರ – ಬದ್ಧಮಾಯೆಯು ನನಗೆ ಬೇಡ ದೇವಾ – ಶುದ್ಧಮಾಯೆ ಬೇಕು.

ಶಂಕರ – ಇದು ನಿನ್ನ ಅಧೀನವೋ?

ಬಾಣಾಸುರ – ಹೌದು. ದೇವಾ, ಭಕ್ತನ ಭಾವನೆಯಲ್ಲಿ ಬ್ರಹ್ಮಾಂಡವೂ ಇರಬಲ್ಲುದು. ಬ್ರಹ್ಮಾಂಡನಾಯಕನೂ ಇರಬಲ್ಲನು!

ಶಂಕರ – ಪತಿತಾತ್ಮ! ನಿನ್ನ ಅಸುರೀಭಾವವನ್ನು ಬಿಡಲಾರೆ–ನಾನು ಭಕ್ತಾಭಿಮಾನಿಯೆಂಬುದು ನಿಜ. ಆದರೆ ಸಹೋದರರು ಸೌಖ್ಯದಿಂದಿರಲು ನಾನು ಬಯಸುತ್ತೇನೆ. ವಿಷ್ಣುವೂ ನನ್ನ ಭಕ್ತನು, ನೀನೂ ನನ್ನ ಭಕ್ತನು. ನೀವೀರ್ವರೂ ಭಕ್ತಬಂಧುಗಳು. ವೈಷ್ಣವೀ ಶಕ್ತಿಯು ಪಾರ್ವತೀರೂಪವಾಗಿರುವುದು–ಅದು ನನ್ನ ಚಿದಾನಂದಲೀಲೆಯಾಗಿರುವುದು. ಇದೇ ಪ್ರಪಂಚದ ಪ್ರೇಯಸ್ಸಿನ ಮೂಲವಾಗಿರುವದು. ಇದೇ ನಾನು ನನ್ನ ಇಚ್ಛೆಯಿಂದ ಭದ್ರವಾಗಿ ಕಟ್ಟಿರುವ ಭವದ ಬಂಧನ! ಇದರ ವಿರುದ್ಧ ಗಮಿಸುವದೇ ಪ್ರಪಂಚದ ಪ್ರಳಯ!

ಬಾಣಾಸುರ – ಪ್ರಪಂಚದ ಪ್ರಳಯವೇ ಶ್ರೇಯಸ್ಸಿನ ಮೂಲ. ಭವಜೀವಿಗಳನ್ನು ಈ ತೆರ ಕೃತ್ರಿಮ ಜಾಲದಿಂದ ಬಂದಿಸುವುದನ್ನು ನೋಡಿ

ಭಕ್ತನೆಂದಿಗೂ ಸಹಿಸಲಾರನು. ದೆವ್ವದ ಪೂಜೆಯು ಸಮಾಪ್ತವಾಗಲೇ ಬೇಕು. ಸೈತಾನನು ತನ್ನ ಗುಪ್ತಸ್ಥಾನವನ್ನು ಸೇರಲೇಬೇಕು.

**ಶಂಕರ** — ಅಸುರಾಧಮಾ, ನಿನ್ನ ತಾಮಸೀಕಂಕ್ಷೆಯು ಪೂರೈಸಲಾರದು, ದೂರ ತೊಲಗು ದ್ರೋಹಿ. (ಪದ) ನಾನು ನೀಡಲಾರೆ ಹೋಗು... (ಪರಮಾತ್ಮನು ತೆರೆಯಲ್ಲಿ ಮರೆಯಾಗುವನು. ಬಾಣನು ತೆರೆಯ ಕಡೆ ನೋಡಿ ದೀರ್ಘ ವಿಶ್ವಾಸವನ್ನು ಬಿಟ್ಟು)

**ಬಾಣಾಸುರ** — ಹೋಗು ದೇವಾ, ಕೊಲುವೆನೆಂಬುದು ನಿನ್ನ ಭಾಷೆಯಾದರೆ ಗೆಲುವೆನೆಂಬುದೇ ನನ್ನ ಬಿರುದು! ಹೋಗು ಶಂಕರ ! ಚಲದಂಕಮಲ್ಲರು ನಿನ್ನ ಪರೀಕ್ಷೆಗೆ ಬೆದರಲಾರರು. ನಾನು ನಿನ್ನ ವೀರಭಕ್ತನೇ ನಿಜವಾದರೆ (ಪದ)... ಅಸುರರು ಮರಣಕ್ಕಂಜಿ ಶರಣಾಗತರಾಗುವವರಲ್ಲ! ಮರಣ ಹೊಂದಿದರೂ ತತ್ವ ವಿಜಯಕ್ಕಾಗಿಯೇ ಮರಣ ಹೊಂದುವರು. ಲೋಕದ ಜನರು ಅದಕ್ಕೆ ಮರಣವೆಂದು ತಿಳಿಯುವರು. ಆದರೆ ಅಸುರ ವೀರರು ಅದಕ್ಕೆ ದಿವ್ಯರೂಪ ಧರಿಸುವ ರೂಪಾಂತರವೆಂದು ಗ್ರಹಿಸುವರು. ಜಗಕ್ಕೆ ನಿನ್ನ ನಿಜರೂಪವನ್ನು ತೋರಿಸುವದೇ ನನ್ನ ಹೆಗ್ಗುರಿಯಾಗಿದೆ. ಸರ್ವವ್ಯಾಪಿಯಾದ ಭಗವಂತಾ! ನೀನೆಲ್ಲಿಗೆ ಹೋಗುವೆ, ಬಾ ದೇವಾ, ಎಲ್ಲಿಗೆ ಹೋಗುವೆ! ನೀನಿದ್ದಲ್ಲಿಯೇ ನಾನಿರುವೆ. ನನಗೂ ನಿನಗೂ ಪುರಾತನ ಕಾಲದ ಸಂಬಂಧವಿರುವುದು. ಬಾ, ಭಕ್ತರ ಭಾವ ಮಂದಿರಾತ್ಮವಾಸನೆ, ಚಂದ್ರಚೂಡನೆ, ಬೇಗ ಬಾ.. ಜಯ ಶಂಕರ.. (ಬಾಣನು ಭಕ್ತಿಯ ಉದ್ರೇಕಮಯ, ಉನ್ಮಾದಕ ನಗೆ ಬೀರಿ, ಯೋಗಪೂರ್ಣ ದೃಷ್ಟಿಯಿಂದ ಅಚಲಮಾನಸನಾಗಿ ನಿಲ್ಲುವನು. ಪರಮಾತ್ಮನು–ಸೂತ್ರದ ಬೊಂಬೆಯಂತೆ ಮೆಲ್ಲ ಮೆಲ್ಲನೆ, ಅರಳಿದ ಮುಖದಿಂದ ಬಾಣನ ಕಡೆಗೆ ಧಾವಿಸಿ ಬರುತ್ತಿರುವನು.)

**ಶಂಕರ** — ವಿಚಾರಪರನಾಗು, ಬಾಣ! (ಪದ) ವಿವೇಕವು ಜಾಗೃತವಾಗಲಿ! ಅರಳಿದ ನಿನ್ನ ವಿಚಾರಮಲ್ಲಿಗೆಯಿಂದಲೇ ಮಕರಂದವನ್ನು ತೂರು. ನನ್ನ ಲೀಲೆಯನ್ನು ಪ್ರತಿಭಟಿಸುವ ಸಾಹಸ ಮಾಡಬೇಡ. ಈ ನಿನ್ನ ಭಯಂಕರ ಹವ್ಯಾಸದಲ್ಲಿ ಪ್ರಳಯವು ಖಂಡಿತವೆಂದು ನಂಬು. ಕರ್ಮಾಧೀನರಾದ ಜಗಕ್ಕೆ ಅಜ್ಞಾನದಲ್ಲಿಯೇ ಸುಖವಿದೆ. ಸುಖಮೋಹಿಯಾಗಿ ಸುಖವನ್ನು ಕಾಣದ ಈ ಸಂಸಾರಕ್ಕೆ ನನ್ನ

ಕರ್ಮಶಾಸನವೇ ಯೋಗ್ಯವಿದೆ. ನನ್ನ ಕರ್ಮಶಕ್ತಿಗೆ ಕಾಲಚಕ್ರವೆಂಬ ಸುದರ್ಶನವನ್ನು ಕೊಟ್ಟು ಬದ್ಧ ಮಾಯೆಯಿಂದ ಮರ್ತ್ಯರನ್ನು ಕೊಲ್ಲಿಸುತ್ತೇನೆ. ನನ್ನ ನಿಜಾನುಭವದ ಅರಿವೇ ಶುದ್ಧ ಶಕ್ತಿಯಾಗಿದೆ– ಪ್ರವೃತ್ತಿಯನ್ನು ಪಾತಾಳಕ್ಕೊತ್ತುವ ನಿವೃತ್ತಿ ಯೋಜನೆಯೇ ಶ್ರೇಯಸ್ಸಿನ ಮೂಲವಾಗಿದೆ. ಶ್ರೇಯೋಸಾಧನೆಯಲ್ಲಿ ಅಥವಾ ಸತ್ಯಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ತೇಜಸ್ವಿಯೇ ಭಕ್ತಶ್ರೇಷ್ಠನೆನಿಸಿಕೊಳ್ಳುವನು. ಕಾರಣ, ಭಕ್ತನು ಲೋಕದ ಜಂಜಾಟವನ್ನು ನೋಡಿ ಅಂತರ್ಮುಖನಾಗಿ ನಗಬೇಕಲ್ಲದೆ, ಬಹಿರ್ಮುಖನಾಗಿ ಅದರ ನಾಶಕ್ಕಾಗಿ ಹೋರಾಡಬಾರದು. ಹಾಗೆ ಮಾಡಿದ್ದಾದರೆ, ಪ್ರಕೃತಿಯು ನಿನ್ನನ್ನು ಹಲವು ರೂಪಗಳಿಂದೆದ್ದು ಕಾಡುವದು. ಅದೆಲ್ಲವನ್ನೂ ಪರ್ಯಾಲೋಚಿಸಿ ವರಗಳನ್ನು ಬೇಡು.

**ಬಾಣಾಸುರ** – ಬ್ರಹ್ಮಾಂಡವೇ ಭಕ್ತಿಯಿಂದ ಬೆಳಗಬೇಕೆಂಬುದು ನನ್ನ ಹಂಬಲ ಸ್ವಾಮಿ. ಜಗವು–ಕೃತ್ರಿಮ ಶಾಸ್ತ್ರಗಳಿಂದ ಬಂಧಿತವಾಗಿ ಕಂಗೆಟ್ಟು ಹೋಗಿದೆ. ಸಹೋದರತ್ವವೇ ಇಂದು ಭೂಮಿಯಲ್ಲಿ ನಾಶವಾಗಿದೆ. ಸೂರ್ಯ, ಚಂದ್ರ, ಅಗ್ನಿಯೇ ಮುಂತಾದ ಕ್ಷುದ್ರ ಶಕ್ತಿಗಳಿಗೆ ತಲೆಬಾಗಿ, ಜಗವು ಮಾನವತೆಯನ್ನೇ ಕಳೆದುಕೊಂಡಿದೆ. ಲೋಕದಲ್ಲಿ ನಡೆಯುವ ಈ ಅನ್ಯಾಯವನ್ನು ನೋಡಿ ನಾನು ಸಹಿಸಲಾರೆ. ಅನ್ಯಾಯದ ಶಾಸನಕ್ಕಾಗಿ ರೋಷವು ಉಕ್ಕಿ ಉಕ್ಕಿ ಬರುತ್ತಿರುವುದು. ಈ ಘೋರ ಅನ್ಯಾಯಗಳನ್ನು ದಂಡಿಸುವುದಕ್ಕಾಗಿಯೇ ನನಗೆ ಸಾಸಿರದೋಳಿನ ಬಲವನ್ನು ನೀಡು. ದೇವಾ, ಇದೇ ನನ್ನ ಬೇಡಿಕೆ. ನೀಡು ದೇವಾ.

**ಶಂಕರ** – ಲೋಕದ ಡೊಂಕನ್ನು ತಿದ್ದುವದರಲ್ಲಿಯೇ ನಿನ್ನ ಶಕ್ತಿಯು ಶೋಷಣವಾಗದಿರಲಿ ಬಾಣಾ! ಯಾವನು ಯಾವ ತರದ ಆಸೆಯಲ್ಲಿ ತೊಡಗುವನೋ ಅದೇ ಆಸೆಯೇ ಅವನನ್ನು ಘಾಸಿ ಮಾಡುವದು. ನಾನು ಎಷ್ಟು ಹೇಳಿದರೂ ನೀನು ನಿನ್ನ ಹಠವನ್ನೇ ಸಾಧಿಸುತ್ತಿರುವೆ– ಹೋಗು. ನಿನ್ನ ಇಷ್ಟಾರ್ಥಸಿದ್ಧಿಯು ಪೂರೈಸಲಿ; ಆದರೆ ಇದನ್ನು ಮಾತ್ರ ಖಂಡಿತವಾಗಿ ನಂಬು–ಈ ನಿನ್ನ ಸಿದ್ಧಿಯ ಸಾಧನೆಯಲ್ಲಿಯೇ ನೀನು ಸಾಯುಜ್ಯವನ್ನು ಸೇರುವೆ.

**ಬಾಣಾಸುರ** – ಧನ್ಯ! ಧನ್ಯ! ನಾನೇ ಧನ್ಯ, ದೇವಾ! ಸಾಯುಜ್ಯವನ್ನು ಸೇರಿದರೂ ಚಿಂತೆಯಿಲ್ಲ; ನನ್ನ ಸಾಹಸ ಪ್ರದರ್ಶನಕ್ಕೆ ಒಂದು ಸಮರಾಂಗಣವು

ಸಿಕ್ಕಿತೆಂದು ನನಗೆ ಬಹಳ ಸಂತೋಷ. ನನ್ನ ಸಂಸ್ಕೃತಿಯ ಉದ್ಧಾರದಲ್ಲಿ ನನಗೆ ಸಾವು ಕೇವಲ–ಸುಖದ ಸನ್ನಿವೇಶವಾಗಿದೆ. ಈ ನಶ್ವರ ಶರೀರವು ನಾಶವಾದರೂ, ನನ್ನ ತತ್ವವು ಆ ಚಂದ್ರಾರ್ಕವಾಗಿ ತೇಜಃಪುಂಜದಂತೆ ಅಮರವಾಗಿ ಬೆಳಗಲಿ. ಈ ಹೋರಾಟದಲ್ಲಿಯೇ ನನಗೆ ಮುಕ್ತಿಯಿದೆ. ಇನ್ನು ನನಗೆ ಅನುಜ್ಞೆಯನ್ನು ಕೊಡು, ದೇವಾ. ಸತ್ಯದ ಸಂಸ್ಥಾಪನೆಗಾಗಿ ಪ್ರಳಯಕಾಲದ ಧೂಮಕೇತುವಿನಂತೆ ಪ್ರಚಂಡ ಕೋಲಾಹಲವನ್ನೆಬ್ಬಿಸಿ, ನನ್ನ ಅಖಂಡ ತಾಮಸೀ ಬಲದ ಶಕ್ತಿದಂಡವನ್ನು ಪ್ರಯೋಗಿಸಿ ಮರಳಿ ನಿನ್ನ ಸನ್ನಿಧಿಯನ್ನು ಸೇರುತ್ತೇನೆ. ಅಪ್ಪಣೆಯನ್ನು ದಯಪಾಲಿಸು ದೇವಾ. (ಬಾಣನು ವೀರಾಸನನಾಗಿ ವಂದಿಸುವನು. ಪರಮಾತ್ಮನು ವರದ ಹಸ್ತವನ್ನು ಅವನ ಶಿರದ ಮೇಲಿಟ್ಟು ಹರಸುವನು.)

**ಶಂಕರ** — ಕೀರ್ತಿಶಾಲಿಯಾಗು, ಬಾಣಾ–ಹೋಗು. ನನ್ನಿಚ್ಛೆ ನಿನ್ನಿಚ್ಛೆಗಳೆರಡೂ ಏಕರೂಪದಲ್ಲಿ ನೆಲೆಯಾಗಿ ಮೂಡುವ ಸುಯೋಗವು ಪ್ರಾಪ್ತವಾಗಲಿ.

**ಬಾಣಾಸುರ** — ಕೃತಕೃತ್ಯಕಾಯನಾದೆನು ಪ್ರಭು. ಜಯ ಮೃತ್ಯುಂಜಯ! ಜಯ ಮಹಾದೇವ!

(ತೆರೆಯು ಬೀಳುವುದು.)

===**====**===

# ಅಂಕ ೨

## ದೃಶ್ಯ ೧. ರಾಜಬೀದಿ

[ಕೈಲಾಸದಿಂದ ಬಂದ ಉಡುಪಿನಲ್ಲಿ]

**ರುದ್ರಾಕ್ಷ –** ಏ, ಏ ಚನ್ನೀ, ಲಗು ಲಗೂನ ಬಾಗಿಲ ತಗಿಯೇ. ನಾನ ಬಂದಿರೋದೇನು–ನೀನ ಬಾಗಿಲ ಇಕ್ಕೊಂಡು ಕೂತಿರದೇನು! ಇದೇನ ನನಗ ಚಂದ ಕಾಣೋದಿಲ್ಲ ಬಿಡು. ಹೂಂ, ಬಾ, ಬಡಾನ ಬಡಾನ ಬಾಗಿಲ ತಗಿ.

**ಚನ್ನಿ –** ಏ ನನ ಗಂಡದೇವ್ರಾ, ನೀ ಬೇಸಿ ಬಂದಿ ಬಾ, ನಿನ ಚಿಂತ್ಯಾಗ ನಾ ಬಾಗಿಲ ಬಿಕ್ಕೊಂಡು ಸೋತ ಸುಣ್ಣಾಗೀನಿ ಬಾ, ಕೈಲಾಸಕ ಹ್ವಾದೋರು ತಿರ್ಗಿ ಬರ್ತಾರೋ ಇಲ್ಲಂತ ಚಿಂತೀ ಮಾಡೀ ಮಾಡಿ ಬ್ಯಾಸತ್ತಹೋದೆ. ಐ ನನ ಗಿಣಿಮರಿಯೆ, ನನ್ನ ಸಕ್ರೀಗುಟಕೆ–ಯಾವಾಗ ಬಂದಿ! ಬಾ.

**ರುದ್ರಾಕ್ಷ –** ಛೆ, ಛೆ, ಹೋಗ ಬಿಡ ನಿನ್, ಏನ ಕುಸ್ತಿ ಅದು – ಬಲು ಗರ್ದಿ ಕುಸ್ತಿ ಬಿಡು.

**ಚನ್ನಿ –** ಯಾರ ಕುಸ್ತಿ ಅದು, ಯಾನ ಕುಸ್ತೀ… ಎಲ್ಲ್ಯಾರ ಕೈಕಾಲ ಮುರ್ಕೊಂಡು ಬಂದಗಿಂದೀ ಅಂತೀನಿ; ನಮ್ಮ ಬಡ ಸಂಸಾರದ ಹೊಟ್ಟಿಮ್ಯಾಲ ಕಾಲ ಚಾಚೀದಿ ಮತ್ತ–ಯಾತರದ ಕುಸ್ತಿ ಅದು.

**ರುದ್ರಾಕ್ಷ –** ಭಲೆ, ಕುಸ್ತಿ ಬಿಡ ಅದು–ಬಲ ಚಲೋ ಕುಸ್ತಿ. ನಮ್ಮ ನಿಮ್ಮಂತೋರ ಕುಸ್ತಿ ಅಲ್ಲ ಬಿಡು ಅದು. ರಾಜರಾಜೇಂದ್ರದೂ ಅಲ್ಲ–ದೇವರ ಬಗತರದು ! ಅದೊಂದು ವಳ್ಳೇ ಮಜಾ ಕುಸ್ತಿ. ಅಂತಾ ಕುಸ್ತಿ ಯಾರ್ಯಾರಿಗೂ ನೋಡಾಕ ಸಿಗಾಂಗಿಲ್ಲ ಬಿಡು. ಆ ಕುಸ್ತಿ ಅಂದರ ಒಂದು ಚಮತಗಾರ ! ಕೊಡೋದಿಲ್ಲ ನಿನಗಾ ಅಂತ ಆತ, ಪರಾಣ ಹ್ವಾದರೂ ಚಿಂತಿಲ್ಲ ನಿನ್ನ ನಾ ಬಿಡೋದಿಲ್ಲ ಅಂತ ಈತ–ಇಂತಾ ಪಣದ ಕುಸ್ತಿ ಅದು. ಛೆ, ಛೆ, ಬಾಳ ಗಮಾತ ಬಿಡು.

**ಚನ್ನಿ –** ಹೇಳಬಾರದಾ ನನಗೊಂದೀಟು – ಯಾನ ಕುಸ್ತಿ ಅದು. ದೇವ್ರೆ ಕುಂತು ಎಲ್ಲ್ಯಾರಾ ಬಗತರ ಸಂಗಾತ ಕುಸ್ತಿ ಆಡ್ತಾನ? ಏನ ಇಚಿತ್ರ! ಎಲ್ಲ್ಯಾರ ದೇಶದಾಗ ಇಲ್ಲದ ಮಾತ ಇದು–ಬೇಸ ಹೇಳು ಯಾರ ಯಾರ್ಗಿ.

**ರುದ್ರಾಕ್ಷ –** ಎಲ ನಿನ, ನಾ ಹೇಳಲಿಲ್ಲಾ ಆಗಲೆ... ನಮ್ಮ ದೊರೀಗಿ, ಆ ದೇವ್ರಗಿ–ಕುಸ್ತೀನೇ ಕುಸ್ತಿ–ವಳ್ಳೊಳ್ಳೆ ಕಸ್ತಿ ಕುಸ್ತಿ.

**ಚನ್ನಿ –** ಬಗತರ ಮ್ಯಾಲ ಬಾಳ ಪೀರೀತಿ ಅಂತ ಹೇಳತಿ ಮತ್ತ ಕುಸ್ತಿ ಅಂತಿ–ಯಾಕ ಅಂತ ಜಗಳ ಆತು, ಅಂತೀನಿ?

**ರುದ್ರಾಕ್ಷ –** ಅದೇನು ಜಗಳಾನೇನ ಹುಚ್ಚುಬಡ್ಡೀ, ಜಗಳಾ ಅಲ್ಲ. ಅದೊಂದು ನೀಲಾ ಅಂತ. ಭಗತರನ ಆಪರಿ ಆಂಗ ಬೇಡಿ ಕಾಡೋದು ಆತಂದೊಂದು ಯುಗತಿ. ನೀಲಾಂತ–ನಮ್ಮ ರಾಜ್ಯಾನೇನು ಕಡಿಮೆ ಅಲ್ಲ ಬಿಡು, ಅಂಗೇ ಗಟ್ಯಾಗಿ ಪಟ್ಟ ಇಡಕೊಂಡು ಕುಂತ ನೋಡು. ಒಂದ ಮಾತ ಇಡದರ ನಮ್ಮ ರಾಜ್ಯಾ ಬಿಡಂವನೇ ಅಲ್ಲ. ಅಂಗ ಮಾಡಬ್ಯಾಡಪ, ಅದು ಬೇಸಲ್ಲ ನೋಡು, ತುಸು ಇಚಾರ ಮಾಡಿ ಬೇಡು, ಅಂತ ಆತ ಹೇಳ್ದಾ. ಹುಂಹೂಂ, ನಾ ಬೇಡೋದೇ ಇದು. ನಾ ಬೇಡಿದ್ದ ಕೊಡೋವರಿಗೂ ನಿನ್ನ ನಾ ಬಿಡೋದಿಲ್ಲಾ ಅಂತ ಹಟಾ ಮಾಡಿ, ಇಡದ ನೋಡು ಪಟ್ಟ, ಇಂಗೇ ಪಟ್ಟಿ ಇಡದರ ನೀ ಸಾಯಿತಿದ್ದಿ ನೋಡು ಅಂತ ಅಂಜಿಕೀನು ಆಕಿದ ಆತ. ನೀ ಇಂಗ ಅಂಜಿಕಿ ಆಕಬ್ಯಾಡ, ನಾ ಏನ ಮಳ್ಳಲ್ಲ ಮಂದ್ಯಾಂಗ. ನಾ ಸತ್ತರ ಪರವಾ ಇಲ್ಲ. ಶಿರ ಹ್ವಾದರೂ ಚಿಂತಿಲ್ಲ, ನಮ್ಮಂದಿ ಮುಂದಕ ಬರಬೇಕು, ನಾ ಬೇಡೋದೇ ಇದು–ಅಂದ ನಮ್ಮ ದಣಿ. ಹ್ಯಾಂಗ ಮತ್ತೆ? ಬಿತ್ತಲ್ಲ ಜಗಳ – ಇದೇ ಕುಸ್ತಿ ಮತ್ತೆ! ಆತಗ, ಈತಗ.

**ಚನ್ನಿ –** ಅಯ್ಯ ನನ ದೇವ್ರಾ, ಯಾನ ಕುಸ್ತಿ ಇದು – ಕಡಿಗಿ ದೇವ್ರ ಸಿಟ್ಟಿಗೇರಿ ಎಲ್ಯಾರ ಸಾಪಗೀಪ ಕೊಟ್ಟರ ಗತಿ ಯಂಗ ಅಂತೀನಿ–ದೇವ್ರ ಕೂಡ ಅಂತ ಜಗಳಾ ಯಾಕ?

**ರುದ್ರಾಕ್ಷ –** ಮುಂದೆ ಕೇಳಬಾರದ ನಿನ ತಟಗ, ಸಾಪಾ ಯಾನ ಕೊಡ್ತಾನ ಸಾಪ...! ಶಿಂವಾ ಸಿಟ್ಟಾಗಿ ಓಡಿಹ್ವಾದ, ನಾ ನಿನಗ ಇಂತ ವರಾ ಕೊಡೋದಿಲ್ಲ ಅಂತ! ನಾ ಎಂದೆಂದಿಗೂ ನಿನ್ನ ಬಿಡೋದಿಲ್ಲ ಅಂತ, ಜಪ ಮಾಡಿಕೊಂತ, ಕಣ್ಣು ನಿಲಾನೆ ನಿಂದ್ರಿಸಿಬಿಟ್ಟ ನಮ್ಮ

ರಾಜ–ಇದೇನು ಜಗಳಪಾ ಅಂತ ನಾವು, ಕೈ ಬಾಯಿ ಮುಚಿಗೊಂಡು ನಿಂತಿದ್ವಿ, ನೋಡು, ಆಗ ದೇವ್ರು ಮೆತ್ತಗಾಗಿ ಬಂದನಲ್ಲ, ಬಂದದ್ದೇ ಬಂದದ್ದು, ಯಾಕ ನನ ಸಂಗಾತ ಜಗಳ ಮಾಡ್ತ್ಯಪ, ನೀ ಈರಾ ಇದ್ದಿ, ತಗೋಳಪ ನೀ ಬೇಡಿದ್ದ ಕೊಡ್ತೀನಿ, ನನ್ನ ಯಾಕ ಕಾಡ್ತೀ. ನೀ ಮಾಡಿದ್ದ ನೀ ಉಣ್ತೀ, ಅಂದ... ಅಂಗಾದರ ಕೊಡು ನನಗ ಸಾವಿರ ತೋಳ ಅಂದ. ಕೊಟ್ಟೆ ಹೋಗು ಅಂತ ತಲಿಮ್ಯಾಲ ಕೈ ಇಟ್ಟ ನೋಡು! ಆಗ ನಮ್ಮ ಜೀವಾ ಹೋಗಿ ಜೀವಾ ಬಂದಾಂಗಾತು. ಗೆದ್ದಿವಿ ಬಿಡಪ ಅಂದಿವಿ–ತಿಳೀತಾ ಎಲ್ಲ್ಯಾರ ಸಿಟ್ಟಿನ ದೇವ್ರು, ಉರಿಗಣ್ಣು, ಗಿರಿಗಣ್ಣು ಬಿಟ್ಟ ನಂದ್ರ, ಮತ್ತೆಲ್ಲಾ ಎಲ್ಲಿ ಪಜೀತಿ ಅಂತಾ, ನಮ್ಮ ಮನಸಿನ್ಯಾಗ ಪುಕು, ಪುಕು ಅಂತ ಕಂವಳಿ ಕುಟ್ಟಿತ್ತು ನೋಡ–ಹೌಂದಲ್ಲೋ!

**ಚನ್ನಿ –** ಹ್ವಾಂದ ಹ್ವಾಂದ – ನಿಮ್ಮ ಹೀರೇರ ಬಾಳ ಪುಣ್ಯಮಾಡಿ ದಂಗಾತು, ಮಾರಾಯ. ನಮ್ಮ ರಾಜಾ ಸಾವಿರ ತೋಳ ಬೇಡಿಕೊಂಡಾ ಅಂದ್ಯಲ್ಲಾ – ಸಾವಿರ ತೋಳ ಅಂದ್ರಾ...?

**ರುದ್ರಾಕ್ಷ –** ಛೀ ನಿನ ಹುಚ್ಚೀ, ಈಟ ತಿಳೋದಿಲ್ಲ ನಿನಗ. ನಮ್ಮ ರಾಜಾ ಆನಲ್ಲ, ಅಂತಾ ಬಲವಂತರ ಸಾವಿರ ಪಟ್ಟ ಸಗತಿ–ನಮ ರಾಜಾಗ ಬಂದ ಬಿಟ್ಟಿತು! ಆಟು ಸಗತಿ! ಇದ್ದಮ್ಯಾಲ ನಮಗ ಏನ ಬೇಕ ಅದ ಸಿಗ್ತಾದ ಇನ್ನಮ್ಯಾಲ – ಯೇನಾದ ನಮಗ, ಯಾರ ಈಡಾರ, ಯಾರ ಜೋಡಾರ! ಹೌಂದಲ್ಲಾ!

**ಚನ್ನಿ –** ಆಂ...! ಅಂದ್ರ ನಮ್ಮ ದೊರಿ ಬಾಳ ಪುಣ್ಯಾ ಮಾಡಿದಾಂಗ ಆತು. ಇನ್ನೇನಾದ–ದೇಸೇವ ತುಂಬಾ, ನಮದೇ ರಾಜೇವು–ನಮ ರಾಜಾನ ಸಗತೀನೆ ಸಗತಿ!

**ರುದ್ರಾಕ್ಷ –** ಎಲ ನಿನ, ಕೇಳ್ತೇನು ಮತ್ತೆ! ತಗೊ ಈ ಪರಸಾದನ್ನ. ಇಗಾ ಈ ಆದಾರ. ಈಗಾರ ತಿಳೀತಲ್ಲಾ ನಿನಗ ಒಬ್ಬನೇ ದೇವ್ರ ಅಂಬೋದು. ಇನ್ನಮ್ಯಾಲ ಯಾರ್ಯಾರ್ನ ನೆನಸಬ್ಯಾಡ ನೋಡು. ಒಂದೇ ಬಗತಿ ಇರಬೇಕ – ಆ ಶಿವನ ಮ್ಯಾಲ. ಆಂಗಾರ ಶಿಂವಾ ಬೇಡಿದೋರ್ಗಿ ಬೇಡಿದ್ದ ಕೊಡ್ತಾನ ಅಂಬೋದು ಈಗಾರ ತಿಳೀತಲ್ಲ ನಿನಗ....?

**ಚನ್ನಿ –** ಹೌಂದು, ಹೌಂದು – ಬೇಸ ತಿಳೀತು ಬಿಡು ಏನ ಬಗತಿ, ನಮ್ಮ ರಾಜಾಂದು – ಎಂತಾ ಶಿವ ಬಗತಿ!

**ರುದ್ರಾಕ್ಷ –** ಅಂಗಾರ ಬಜನಿ ಮಾಡು. ಅನ್ನು–ಸಾಂಬಸದಾಶಿವ (ಭಜನಿ ಮಾಡುತ್ತ ಒಳಗೆ ಹೋಗುವರು.)

## ದೃಶ್ಯ ೨. ಉಷಾಮಂದಿರ.

[ಶಯ್ಯಾಗಾರ–ಸ್ವರ್ಗೀಯ ಸೌಖ್ಯವನ್ನು ಧಿಃಕರಿಸುವ ವೈಭವಯುಕ್ತ ಮಂದಿರ. ಉಷಾರಾಣಿಯು ಮೃದುತಲ್ಪದ ಮೇಲೆ ಮಲಗಿರುವಳು. ಅಲ್ಲಲ್ಲಿ ಸುಖಾಸನಗಳು, ಕಲಾಮಯ ಪ್ರತಿಮೆಗಳು, ಮಯೂರಾಸನಗಳು, ಪುಷ್ಪ ನಾಟಕಗಳು.]

**ಉಷಾರಾಣಿ** – (ತಲ್ಪದ ಮೇಲೆ ಮಲಗಿದ ಹಾಗೆಯೇ ಸ್ವಪ್ನದಲ್ಲಿ) ಬೇಡ, ಬೇಡ ಮನಮೋಹನ–ಮುಗ್ಧಬಾಲೆಯ ಕರಕಮಲಗಳನ್ನು ಕಠೋರವಾಗಿ ಎಳಿಯಬೇಡ. ಮೋಹದ ಮಾಣಿಕ್ಯವೆ–ನಿನ್ನ ಬಾಹುಬಂಧನದಲ್ಲಿ ಸ್ವರ್ಗೀಯ ಸುಖದ ಅನುಭವವನ್ನು ಕೂಡಾ ಮರಿಯುತ್ತಿದ್ದೇನೆ.... ಹೀಗೆಯೇ, ಎಷ್ಟು ಕಾಲಗಳವರೆಗೆ ಇರಬಲ್ಲೆಯಾ... ಎಂದು ಕೇಳುವಿಯಾ..? ಅಹಹಹ....ಅನಂತಕಾಲದವರೆಗೂ... ಈ ಅಮರ... ಅಪಾರ ಸುಖವನ್ನು... ನಿನ್ನ ತೋಳ್ಪಳ್ಳಿಯ ಮೃದು ತಲ್ಪದ ಮೇಲೆ... ಅಖಂಡ ... ಅವಿನಾಶ.... ಪ್ರೇಮಾನುಭವವನ್ನು ಸವಿಯುತ್ತಾ... ಕನ್ನೆಯಾದ ನಾನು...ಕನ್ನೈದಿಲೆಯಂತೆ...ಇದೋ, ಮಧುವನ್ನು ಸೂಸುವ....ಈ ಮುಖಚಂದ್ರನನ್ನು ನೋಡುತ್ತ, ನೋಡುತ್ತ ನಲಿಯಬಲ್ಲೆನು....ಬೇಡ ಸುಂದರಾ! ನಿನ್ನನ್ನಗಲಿ ಅರಘಳಿಗೆಯು ಕೂಡಾ ಮಸಣದಂತೆ ಭೀಷಣವಾಗಿರುವದು... ಬೇಡ... ಅಯ್ಯೋ, ಬಿಡಲಾರೆ...ಹುಂ, ಹುಂ, ಸರ್ವಥಾ ಬಿಡಲಾರೆ...ಹೌದು... ನನ್ನಾಣೆಯಾಗಿಯೂ ಬಿಡಲಾರೆ...! ಇದೋ, ನಿನ್ನನ್ನೇ ಹಿಂಬಾಲಿಸುವೆ... (ಧಿಗ್ಗನೆದ್ದು ಅರೆ ಹೊದ್ದ ಪೀತಾಂಬರವನ್ನು ಕೊಡವಿಕೊಂಡು)...ಹೌದು, ಹೌದು..... ಆ ಪುಷ್ಪವಾಟಿಕೆಯ ಮುಂದೆ ಜಾರುತ್ತಾ, ಜಾರುತ್ತ.... ಆ ಉಪವನದ ಲತಾಮಂಟಪದ ಹಿಂಭಾಗದಲ್ಲಿಯೇ ಮರೆಯಾದನು.... ನನ್ನ ಸ್ವಪ್ನಸಿಂಹವು ಯಾವ ಅರಣ್ಯದಲ್ಲಿ ಮಾಯವಾಯಿತು...! ನನ್ನ ಹೃತ್ಕಮಲ ಭ್ರಮರವು ಝೇಂಕರಿಸುತ್ತ–ಹೃದಯ ಕರ್ಣಿಕೆಯನ್ನು ಆಳವಾಗಿ...ಅಂತರಾಳದಲ್ಲಿ ಹೊಕ್ಕು... ಯಥೇಚ್ಛವಾಗಿ, ಮನದಣಿಯಾಗಿ ಹೃದಯ ಕುಸುಮದ ಬಂಡನ್ನುಂಡು...ಯಾರ ಉದ್ಯಾನವನದಲ್ಲಿ! ಯಾವ ಪುಷ್ಪದ ಪರಿಮಳವನ್ನು...!...ಯಾರಾಜ್ಞೆಯಿಂದ...!.. ಇಲ್ಲ...! ಚೋರನು...! ನಿಜವಾಗಿಯೂ ಚೋರನು! ಶಿಕ್ಷಿಸಬೇಕೆನ್ನುವದರಲ್ಲಿಯೇ ಸಿಕ್ಕದೆ...ಜಾರಿದನು... ಮಾಯಾವಿ ಕಳ್ಳನು! ಕೋಮಲ ಕಮಲ ದಳವನ್ನು ಹರಿದು...ಭೇದಿಸಿ...ಅಯ್ಯೋ...ಕೋಮಲ ಕಮಲಕ್ಕಾದ

ನೋವನ್ನು ತಿಳಿಯದೆ... ಹಾರಿಹೋಯಿತು–ಕಠಿಣಾತ್ಮತುಂಬಿ...! ತುಂ, ತುಂ, ತುಂ, ಎಂದು ಬಂದ ತುಂಬಿ..ತಲೆಯಲ್ಲಿ ನಾದವನ್ನು ತುಂಬಿ, ಹೃದಯದಲ್ಲಿ ಪ್ರೇಮವನ್ನು ತುಂಬಿ...ಮನದಲ್ಲಿ ವ್ಯಾಕುಲವನ್ನೇ ತುಂಬಿ...ಹಾಂ ಹಾಂ... ಅನ್ನುವದರಲ್ಲಿಯೇ ಹಾರಿ ಹೋಯಿತಲ್ಲಾ ನನ್ನ ಮನೋಲ್ಲಾದ ಪ್ರೇಮದುಂಬಿ!.... ಅ ಹ ಹ ಹ...ತುಂಬಿ ಸಿಕ್ಕಿದ್ದರೆ, ಎಷ್ಟು ಚನ್ನಾಗಿತ್ತು! ಸಿಕ್ಕಿದ್ದರೆ ಹೃದಯ ಕಪಾಟದಲ್ಲಿ ಬಚ್ಚಿಡುತ್ತಿದ್ದೆ. ಮರಳಿ ಹಾರದಂತೆ ರೆಕ್ಕೆಗಳನ್ನೇ ಕುಕ್ಕರಿಸುತ್ತಿದ್ದೆ. ಹೊರಗೆ ಸುಳಿಯದಂತೆ ಬೀಗ ಮುದ್ರೆಯನ್ನು ಜಡಿಯುತ್ತಿದ್ದೆ! ಸಿಡಿಮಿಡಿಗೊಳ್ಳುವಂತೆ ಜಡಿಯುತ್ತಿದ್ದೆ...? ಹ ಹ ಹ ಹ...ಬಂದಿಸುತ್ತಿದ್ದೆ!...ಭಾಸ್ಕರನ ಕಿರಣಗಳಿಗೂ ಪ್ರತಿಬಂಧವನ್ನುಂಟುಮಾಡುತ್ತಿದ್ದೆ....ಭಾಸ್ಕರ!....ಭಾಸ್ಕರ!...ದಿನಕರ!...ಅ ಹ ಹ ಹ...ಆಕಾಶದಲ್ಲಿರುವ ....ಆ ಭಾಸ್ಕರನಿಗೂ, ಭೂತಲದಲ್ಲಿರುವ ಈ ತಾವರೆಗೂ ಯಾವ ಸಂಬಂಥ...ಏನು ಸಂಬಂಧ!... ಪ್ರೇಮಸಂಬಂಧ...ಹೃದಯ ಸಂಬಂಧ!... ಆತ್ಮ ಸಂಬಂಧ...ಅ ಹ ಹ ಹ...ಅಂದರೆ...ಬ್ರಹ್ಮ ಸಂಬಂಧ...! (ನಸುನಾಚಿ, ತನ್ನಲ್ಲೇ ತಾನು) ಅವ್ವಂಯ್ಯಾ, ಬಯಲ ಕನಸನ್ನು ಕಂಡು ನಾನೆಷ್ಟು ಭ್ರಮೆಗೊಂಡಿದ್ದೇನೆ...ಬಯಲೆ? ಅಯ್ಯೋ...ನನ್ನ ಆಸೆಯು ಮಾತ್ರ ಬಯಲಾಗದಿರಲಿ!...ಅಯ್ಯೋ ನಾನಿದುವರೆಗೂ ಕುಮಾರಿಯಾಗಿದ್ದೆ!....ಇವನು ಸುಮ್ಮನೆ ಬಂದು...ನನ್ನ ಕನ್ಯಾಭಂಗವನ್ನೇಕೆ ಮಾಡಿಹೋದನು...ಏನು ಮಾಡಿದನು ಹುಂ, ಹೂಂ ಹೇಳಲಾರೆ...(ಮತ್ತೆ ಲಜ್ಜೆಯಾವರಿಸಿ, ಮೆಲ್ಲಗೆ) ಬಿಗಿಯಾಗಿ ಬಂಧಿಸಿ...ಸುಲಿಪಲ್ಲುಗಳಿಂದ ಅಧರವನ್ನು ಕಚ್ಚಿ... ಹಾಯ...(ನೋಡಿಕೊಂಡು) ಅಹ ಹ ಹ ಏನೂ ಇಲ್ಲ, ಹೋದನು! ಎಲ್ಲಿ ಹೋದನು! ನನ್ನ ಆನಂದವನದ ಇಂದ್ರನು ಎಲ್ಲಿಗೆ ಹೋಧನು! ನನ್ನ ಅಧರದಲ್ಲಿ ಅಮೃತವನ್ನು ತುಂಬಿದ ಚಂದ್ರಮನು ಎಲ್ಲಿಗೆ ಹೋದನು ನನ್ನ ಮಾನಸ ಸರೋವರದ ರಾಜಹಂಸವು ಎಲ್ಲಿಗೆ ಹಾರಿತು! ನನ್ನ ಜೀವನ ತುಂಬಿಯು ಯಾವ ಕಮಲಿನಿಯನ್ನು ಸೇರಿತು! ನನ್ನ ಹೃದಕಮಲ ಭಾಸ್ಕರನ ಬೆಳಗು ಯಾವ ನಿಶಾರಮಣಿಯಲ್ಲಿ ಲೀನವಾಯಿತು ಭಾಸ್ಕರಾ....! ಈ ಉಷಾರಮಣಿಯನ್ನು ತೊರೆದು ನಿಶಾರಮಣಿಯನ್ನು ಸೇರಲು ಹೋದೆಯಾ..! ಎಲ್ಲಿ...ಎಲ್ಲಿ! ಕಾಣುವದೆಲ್ಲಿ....! ಆ ವಿಶಾಲ ನೇತ್ರ,

ಮುಗುಳು ನಗೆಯನ್ನು ಸೂಸುವ ಮುದ್ದು ಮುಖ...! ಮೋಹನ ಮೂರ್ತಿ! ಸೊಬಗಿನ ಕೀರ್ತಿಯನ್ನು ಕಾಣುವದೆಲ್ಲಿ...! ಕಾಣಲಾರೆನೆ... ಆ ಸುಖ ಸಂದರ್ಶನವು ಇನ್ನೊಮ್ಮೆ ಆಗಬಹುದೇ?..... ಇನ್ನೊಮ್ಮೆ ನೋಡುವೆನು... ನಿದ್ರೆಯ ಸೋಗಿನಲ್ಲಿಯೇ ನೋಡುವೆನು ಕನಸಿನಲ್ಲಿ ಕಂಡರೆ ಮಾತ್ರ ಬಿಡಲಾರೆ... ಹುಂ ಹೂಂ, ಎಂದಿಗೂ ಬಿಡಲಾರೆ... ಹೌದು, ಬಿಡಲಾರೆ... (ಮತ್ತೆ ಪರ್ಯಂಕದ ಮೇಲೊರಗಿ ಹುಂ ಹೂಂ ಬಿಡಲಾರೆ. (ಹೊದ್ದುಕೊಂಡು) ಸ್ವಪ್ನ ಪ್ರಪಂಚವೇ ಭೂತಲಕ್ಕೆ ಬೇಗ ಬಾ... ನೀರಸಮಯವಾದ ಈ ಜಾಗೃತ ಪ್ರಪಂಚವು ನನಗೆ ಬೇಡ... ಸುಮನೋರಮ್ಯವಾದ ಸ್ವಪ್ನ ಪ್ರಪಂಚವೇ ನನ್ನ ಸಾಯುವ ತನಕ ಇರಲಿ!... (ಮುಸುಕನ್ನು ತೆಗೆದು ಬಿಸಾಡಿ) ... ಅಯ್ಯೊ ಕಾಣಿಸಲೊಲ್ಲದು! ಹೇಗೆ ಮಾಡಲಿ! ಹೀಗೆಯೇ ಇನ್ನೊಮ್ಮೆ ಯತ್ನಿಸುವೆನು. (ಒಂದು ಬದಿಯ ತೆರೆಯ ಕಡೆಗೆ ಓರೆಯಾಗಿ ನಿಂದು, ತನ್ನ ಕಣ್ಣುಗಳನ್ನು ತಾನೇ ಮುಚ್ಚಿಕೊಂಡು) ... ಬಾ, ಬಾ... ಬಾ... ಇದೊಂದೇ ಮಂತ್ರ! ... ಬಾ, ಬಾ....ಬಾ....ಬಂದೆಯಾ... ಬಂದು ಬಂದು ಹೋದಂತಾಗುವುದು.... ಬಂದರೆ ಮಾತ್ರ ಬಿಡಲಾರೆ... ಹುಂ....ಬಾ...ಬಾ (ಹಿಂಬದಿಯಲ್ಲಿ ಹಸನ್ಮುಖಿಯಾದ ಚಿತ್ರಲೇಖೆಯು ಕಳ್ಳಹೆಜ್ಜೆಗಳಿಂದ ಪ್ರವೇಶಿಸಿ ಉಷೆಯ ಎರಡು ಹಸ್ತಗಳನ್ನು ಗಟ್ಟಿಯಾಗಿ ಹಿಡಿದು ನಿಲ್ಲುವಳು)... ಸಿಕ್ಕನು ಹ ಹ ಹ ಹ... ಸಿಕ್ಕನು.... ಇನ್ನುಮೇಲೆ ಎಂದಿಗೂ ಬಿಡಲಾರೆ...! (ಕಣ್ಣು ತೆರೆದು, ಚಿತ್ರಲೇಖೆಯನ್ನು ದಿಟ್ಟಿಸಿ) ಸಿಕ್ಕ...! ಅಯ್ಯೋ ಚಿತ್ರಲೇಖಾ, ಬಿಡೆ. ಯಾವಾಗ ಬಂದೆ...! (ಕೈ ಕೊಡವಿಕೊಂಡು, ಓಡಿಹೋಗಿ, ಲಜ್ಜಾಭರಿತಳಾಗಿ ಮುಖವನ್ನು ಮುಚ್ಚಿಕೊಂಡು, ತಲ್ಪದ ಮೃದು ದಿಂಬಿನ ಮೇಲೆ ಒರಗಿ).... ಹುಂ ಹುಂ ಹೂಂ... ದೂರ ಹೋಗು...

**ಚಿತ್ರಲೇಖ –** ಸಿಕ್ಕವರನ್ನು ಬಿಟ್ಟರೆ ಬೇಕಾದವರು ಹೇಗೆ ಬರುವರು ಸಖಿ?

**ಉಷಾ –** ಊಹೂಂ... ನನಗೆ ಯಾರೂ ಬೇಡ – ದೂರ ಹೋಗು.

**ಚಿತ್ರಲೇಖ –** ಬೇಕಾದವರು ಬಂದರೆ ಮಾತ್ರ ಪುರಸ್ಕಾರ! ಇಲ್ಲವಾದರೆ...!

**ಉಷಾ –** ಇಲ್ಲವಾದರೆ... ಇಲ್ಲವಾದರೆ... ಏನು?

**ಚಿತ್ರಲೇಖ –** ತಿರಸ್ಕಾರ...!

**ಉಷಾ –** ಯಾವಾಗಲೂ ನಿನ್ನಲ್ಲಿ ಇದೇ ಸಮಾಚಾರ...

**ಚಿತ್ರಲೇಖ** – ಸ್ತ್ರೀ ಬುದ್ಧಿಯು ಪುರುಷರಿಗಗೋಚರವಾದರೂ ಸಖಿಯರಿಗೆ ಮಾತ್ರ ಅದು ಸಹಜಗೋಚರ.

**ಉಷಾ** – ಇದೇನೆ... ನಿನ್ನ ವಿಚಾರ? ನಿನಗೇನು ಗೋಚರವಾಯಿತು ಹೇಳು? ಬೂಟಾಟಿಕೆಯ ಶಾಸ್ತ್ರವನ್ನು ಕಟ್ಟಿ ಆಗಲೆ ಬುರುಡೆಯಂತೆ ಉರುಳಾಡಿಸಹತ್ತಿದೆ.

**ಚಿತ್ರಲೇಖ** – ನಿನಗೆ ಅವನು ಸಿಗದಿದ್ದರೂ ನನಗೆ ಸಿಕ್ಕಿರುವನು...!

**ಉಷಾ** – ಯಾರು...? ಯಾರು ಸಿಕ್ಕದರು ನಿನಗೆ...!

**ಚಿತ್ರಲೇಖ** – ಇಲ್ಲಿ ಬಾ, ಹೇಳುತ್ತೇನೆ.

**ಉಷಾ** – ಹುಂ, ಹೂಂ, ನಾನು ಬರುವುದಿಲ್ಲ.

**ಚಿತ್ರಲೇಖ** – ನಾನು ಹೇಳುವದಿಲ್ಲ...!

**ಉಷಾ** – ಹೇಳುವಿಯಾ ಹಾಗಾದರೆ...!

**ಚಿತ್ರಲೇಖ** – ನಾನು ಹೇಳುವುದೇ ಇಲ್ಲ.

**ಉಷಾ** – ಏಕೆ? ...!

**ಚಿತ್ರಲೇಖ** – ನೀನು ಬರುವುದಿಲ್ಲ–ನಾನು ಹೇಳುವುದಿಲ್ಲ.

**ಉಷಾ** – ಇದೋ ಬಂದೆ, ಹೇಳು ಹಾಗಾದರೆ.

**ಚಿತ್ರಲೇಖ** – (ಕಿವಿಯಲ್ಲಿ) ... ನಿನ್ನ...ಮಾನಸ...ಚೋರ...ಅ ಹ ಹ ಹ ಹೌದಲ್ಲವೇ...?

**ಉಷಾ** – (ನಸುನಾಚಿ, ಓಡುತ್ತ, ನಿಂತು) ಹುಂ, ಹೂಂ ನಾನು ಬರುವದೇ ಇಲ್ಲ.

**ಚಿತ್ರಲೇಖ** – ಬರುವುದಿಲ್ಲವೇ? ...ಹೇಗೆ ಬರುವುದಿಲ್ಲ ನೋಡುತ್ತೇನೆ... (ಕಣ್ಣು ಮುಚ್ಚಿಕೊಂಡು) ಬಾ, ಬಾ...ಬಾ...! (ಉಷೆಯು ನಗುವಳು) ...ಸ್ವಪ್ನಸೃಷ್ಟಿಯೇ, ಭೂತಲಕ್ಕೆ ಬೇಗ ಬಾ, ಬಾ, ಬಾ...

**ಉಷಾ** – (ನಗುತ್ತ ಬಂದು ಕೈ ಕೊಡವಿ)... ಅ ಹ ಹ ಹ ಯಾರನ್ನೇ ನೀನು ಧೇನಿಸುವದು! ...

**ಚಿತ್ರಲೇಖ** – ಉಷಾದೇವಿಯವರ ಮಾನಸಗಳ್ಳನನ್ನು!

ಉಷಾ — (ಹುಸಿ ಮುನಿಸು) ಸಾಕು ಬಿಡೆ, ಈ ಕುತಂತ್ರವನ್ನು! ...

ಚಿತ್ರಲೇಖ — ಇದು ನಿನ್ನ ಮಾನಸ ಮಂತ್ರವಲ್ಲವೆ ಸಖಿ?

ಉಷಾ — ಹುಂ, ಹುಂ ಹೂಂ.... ನಾನು ಮಾತಾಡುವುದೇ ಇಲ್ಲ.. ಹೋಗು...

ಚಿತ್ರಲೇಖ — ನಿನ್ನ ಮಮತೆಗೆ ಪಾತ್ರನಾದ ಪ್ರಿಯನನ್ನು ತೋರುವವರೆಗೂ ನಾನು ಬಿಡಲಾರೆ.

ಉಷಾ — ನಾನು ಶುದ್ಧವಾಗಿ ಹೇಳುವುದಿಲ್ಲ.

ಚಿತ್ರಲೇಖ — ನಾನು ಶುದ್ಧವಾಗಿ ಕೇಳುವವರೆಗೂ ಬಿಡುವುದಿಲ್ಲ.

ಉಷಾ — ಇದೇನು ಸಖಿ–ನಿನ್ನ ಕಾಟ...!

ಚಿತ್ರಲೇಖ — ಇದೊಂದು ಬಗೆಯ ನನ್ನ ಹಟ!

ಉಷಾ — ಹಟಮಾರಿಯಾದ ನಿನಗೆ ಹೇಳುವದೇ ಇಲ್ಲ ಹೋಗು... (ದೂರ ಓಡಿ ಹೋಗಿ) ನಾನು ಹೇಳುವದೇ ಇಲ್ಲ...

ಚಿತ್ರಲೇಖ — ಹಾಗಾದರೆ ಮತ್ತೆ ಸಾಗಲಿ ನನ್ನ ಮಂತ್ರಸಿದ್ಧಿ! (ಕಣ್ಣು ಮುಚ್ಚಿಕೊಂಡು) ಬಾ...ಬಾ...ಬಾ...

ಉಷಾ — (ಓಡಿಬಂದು) ನನ್ನ ಹೃದಯವನ್ನು ಬಾರಿಬಾರಿಗೂ ಹೀಗೆ ಚುಚ್ ಬೇಡ ಸಖೀ...

ಚಿತ್ರಲೇಖ — ನಮ್ಮ ತಪಸ್ಸಿಗೆ ಭಂಗ ಬಂದರೆ ಶಾಪವು ಸಿಕ್ಕೀತು! ...

ಉಷಾ — ಹಾಂ ಹಾಂ, ಏನೆಂದು ದೇವಿಯವರೆ?

ಚಿತ್ರಲೇಖ — ಕಾಮದುರಿಗೆ ಸಂದು...ವಿರಹದುರಿಗೆ ಬೆಂದು...(ಉಷೆಯು ಬಾಯಿ ಮುಚ್ಚುವಳು) ಹಾಗಾದರೆ ಹೇಳು?

ಉಷಾ — ಹಾಗಾದರೆ ಹೇಳುತ್ತೇನೆ ಬಾ (ಕೈ ಹಿಡಿದು ಅವಳನ್ನು ಎಳೆದುಕೊಂಡು, ಶಯ್ಯಾಸ್ಥಾನದೆಡೆಗೆ ಹೋಗಿ).... ಇಂದು, ಇದೋ.... ಹೇಳಲೋ....? ಹು ಹೂಂ ನಾನೊಲ್ಲೆಯೆ, ನೀ ನಗುತ್ತೀ...

ಚಿತ್ರಲೇಖ — ಇಲ್ಲ ಇಲ್ಲ ನಾನು ನಗುವುದಿಲ್ಲ. ಹೇಳು ಸಖೀ.

ಉಷಾ — ನಿಜವಾಗಿಯೂ ನಗುವುದಿಲ್ಲವೆ?

**ಚಿತ್ರಲೇಖ** – ನಿಜವಾಗಿಯೂ ಸಖೀ... (ಶಯ್ಯಾಸ್ಥಾನದ ಸಮೀಪಕ್ಕೆ ಹೋಗಿ)

**ಉಷಾ** – ಎಷ್ಟು ಚನ್ನಾಗಿರುವದೀ ಸುಖ ಶಯ್ಯೆಯು ! ಇದೋ ಸಖಿ, ಎಷ್ಟು ಮೃದುವಾಗಿರುವದು ನೋಡು.

**ಚಿತ್ರಲೇಖ** – ಹೌದು, ದೇವಿ. ಇದು ಹಂಸತೂಲಿಕಾ, ಮೇಲೆ ಮಲ್ಲಿಕಾಸನ, ಹೌದು, ಬಹಳ ಮೃದು.. (ನಗುವನ್ನು ಬಿಗಿಹಿಡಿಯುವಳು)

**ಉಷಾ** – ನೀನು ನಗುವಿಯಮ್ಮಾ–ನಾನು ಹೇಳಲಾರೆ!

**ಚಿತ್ರಲೇಖ** – ಸತ್ಯವಾಗಿಯೂ ನಗುವುದಿಲ್ಲ, ಸಂಶಯ ಬೇಡ ಹೇಳು.

**ಉಷಾ** – ಕೇಳು, ಇಂದು..ನಾನೊರ್ಬ್ಬಳೇ... ಇಲ್ಲಿ ಮಲಗಿದ್ದೆ. ಇದೋ ಈ ಸುಖ ಶಯ್ಯೆಯಲ್ಲಿಯೇ ಪವಡಿಸಿದ್ದೆ. (ಕುಳಿತುಕೊಳ್ಳುವಳು)

**ಚಿತ್ರಲೇಖ** – ಹುಂ.........!

**ಉಷಾ** – ನಾನೊಬ್ಬಳೇ ಮಲಗಿದ್ದೆ....!

**ಚಿತ್ರಲೇಖ** – ಹೂಂ..........!

**ಉಷಾ** – ಇಂಥ ಸುಖಶಯ್ಯೆಯು ಏಕಾಂಗಿನಿಗೆ ಯೋಗ್ಯವಲ್ಲ ಸಖೀ

**ಚಿತ್ರಲೇಖ** – ಅಂದರೆ....!

**ಉಷಾ** – ನೀನು ಸರಿಯಾಗಿ ಕೇಳುವುದಿಲ್ಲ ಹೋಗು.... (ಹುಸಿಮುನಿಸು)

**ಚಿತ್ರಲೇಖ** – ಇಲ್ಲದೇವಿ ! ಶಾಂತಂ ಪಾಪಂ (ಗಲ್ಲಗಳನ್ನು ಬಿಡಿದುಕೊಂಡು ಆಯಿತೇ.....!

**ಉಷಾ** – ಇಲ್ಲಿ ಮಲಗಿರುವಾಗ ಒಂದು ಸುಂದರ ಸ್ವಪ್ನವನ್ನು ಕಂಡೆ....

**ಚಿತ್ರಲೇಖ** – ಸುಂದರ ಸ್ವಪ್ನ!....ಹೂಂ......

**ಉಷಾ** – ಎಂತಹ ಸುಂದರ! ಸುಂದರ ಮತ್ತು ಸುಖಮಯ ಸ್ವಪ್ನ....!

**ಚಿತ್ರಲೇಖ**– ಹೂಂ........

**ಉಷಾ** – ಅದರಲ್ಲಿ ಒಬ್ಬ.........ಸುಂದರ.........ಮೋಹನಾಕಾರದ..... (ಒಮ್ಮಿಂದೊಮ್ಮೆ ಮುಖವನ್ನು ಮುಚ್ಚಿಕೊಂಡು ಲಜ್ಜೆಯಿಂದ)... ಹುಂ ಹುಂ ಹೂಂ...... ನಾನು ಹೇಳಲಾರೆ.

**ಚಿತ್ರಲೇಖ** – ಹೇಳು ಸಖೀ, ನನ್ನ ಮುಂದೆ, ನಿನ್ನ ಪ್ರಾಣಸಖಿಯ ಮುಂದೆ ಹೇಳಲು ನಿನಗಿಷ್ಟು ಸಂಕೋಚವೆ?

**ಉಷಾ** – ಸಂಕೋಚವಲ್ಲ!.... ನಾಚಿಕೆ

**ಚಿತ್ರಲೇಖ** – ಲಜ್ಜೆಯನ್ನು ದೂರಮಾಡು... ಹೂಂ, ಹೇಳು ಗೆಳದಿ.

**ಉಷಾ**– ತಾರುಣ್ಯಮದದಿಂದ ಭರತಿನಾದ, ಅತಿ ಮನೋಹರ ಲಾವಣ್ಯ ನಿಧಿಯಾದ ರಾಜಸಿಂಹನೋರ್ವನು – ನನ್ನನ್ನು ತನ್ನ ಬಾಹುಲತೆಯಲ್ಲಿ ಬಂಧಿಸಿ....

**ಚಿತ್ರಲೇಖ** – (ಭುಜಗಳನ್ನು ಹಿಡಿದು ಅಲ್ಲಾಡಿಸುತ್ತ) ಹೀಗೆ ಬಂದಿಸಿದನೆ? ಅಹಹಹ..........

**ಉಷಾ** – ಛೀ ! ಛೀ ! ದೂರ ಹೋಗು! ನನ್ನನ್ನು ಹೀಯಾಳಿಸುವೆಯಾ!

(ಹುಸಿಮುನಿಸಿನಿಂದ ಹೊಡೆಯಲು ಬೆನ್ನು ಹತ್ತುವಳು)

**ಚಿತ್ರಲೇಖ** – (ಸಮೀಪಕ್ಕೆ ಬಂದು ಕೆಣಕುವ ದನಿಯಲ್ಲಿ) ಇಷ್ಟು ಮುನಿಸಬೇಕೆ? ಹೂಂ ಅವನು ಹೇಗಿದ್ದನು?

**ಉಷಾ** – ನಾನು ಹೇಳುವುದಿಲ್ಲ ಹೋಗು.

**ಚಿತ್ರಲೇಖ** – ಹೇಳುವುದಿಲ್ಲವೆ, ಅವನು ನನಗೆ ಸಿಕ್ಕಿದನು... (ಕಣ್ಣು ಮುಚ್ಚಿಕೊಂಡು) ಬಾ, ಬಾ...ಬಾ.

**ಉಷಾ** – (ಮತ್ತಷ್ಟು ಸಿಟ್ಟಿನಿಂದ) ಛೀ..... ದೂರ ಸಾರು.

**ಚಿತ್ರಲೇಖ** – ಕ್ಷಮಿಸು ದೇವಿ – ಹೂಂ, ಅವನು ಹೇಗಿದ್ದನು.

**ಉಷಾ** – ನಾನು ಇಲ್ಲಿ ಪುರಾಣವನ್ನು ಹೇಳುವದಿಲ್ಲ.

**ಚಿತ್ರಲೇಖ** – ಜಗಜೀವಿಗಳಿಗೆಲ್ಲ ಈ ಪುರಾಣವೇ ಪಠ್ಯಪುಸ್ತಕವಾಗಿದೆ, ದೇವಿ.

**ಉಷಾ** – ಯಾವ ಪುರಾಣ...!

**ಚಿತ್ರಲೇಖ** – ಇದೇ ಈಗ ನೀನು ಪಠಿಸಿದ ಕಾಮ ಪುರಾಣ!

**ಉಷಾ** – ಛೀ, ಛೀ, (ಕಿವಿ ಮುಚ್ಚಿಕೊಂಡು) ದೂರ ಹೋಗು.

**ಚಿತ್ರಲೇಖ** – ಕಂಡದ್ದನ್ನು ಹೇಳಿದರೆ ಕೆಂಡದಂತಹ ಸಿಟ್ಟಮ್ಮಾ

**ಉಷಾ** — ಏನು ಕಂಡಿರುವೆ?

**ಚಿತ್ರಲೇಖ** — ನೀನು, ನೀನು ಕಂಡದ್ದನ್ನು!

**ಉಷಾ** — ಬಹಳ ಚಪಲೆ! ಬುದ್ಧಿಮತಿ, ಹೋಗಾಚೆ

**ಚಿತ್ರಲೇಖ** — ಶಾಂತಳಾಗು ದೇವಿ, ಅವನು ಮನ್ಮಥನ ಹಾಗೆ ಇದ್ದನೇ?

**ಉಷಾ** — ಉಂ ಹೂಂ...

**ಚಿತ್ರಲೇಖ** — ತಾರೆಯು ಮೋಹಿಸಿದ ಚಂದ್ರನಂತಿದ್ದನೆ?

**ಉಷಾ** — ಮುಖವು ಮಾತ್ರ ಹಾಗಿತ್ತು...! ಆದರೆ... ಇನ್ನೂ ತೇಜಸ್ವಿಯಾಗಿಯೇ ಇದ್ದನು.

**ಚಿತ್ರಲೇಖ** — ಮಹೇಂದ್ರನನ್ನು ಹೋಲುತ್ತಿದ್ದನೇ?

**ಉಷಾ** — ಹುಂ ಹೂಂ ಹೂಂ, ಅವನಿಗೆ ಸಹಸ್ರಾಕ್ಷನೆಂಬ ಹೆಸರಿಲ್ಲವೆ?

**ಚಿತ್ರಲೇಖ** — ಅಂದರೆ ಹೇಗಿದ್ದನು ದೇವಿ?

**ಉಷಾ** — ಇವರೆಲ್ಲರ ಸೌಂದರ್ಯವನ್ನು ಒಟ್ಟುಗೂಡಿಸಿದರೂ ನನ್ನ ಹೃದಯೇಶ್ವರನ ಸೌಂದರ್ಯಕ್ಕೆ ಸಾಟಿಯಾಗಲಾರದು! ಅಂತಹ ದಿವ್ಯ ಮೂರ್ತಿಯದು...!

**ಚಿತ್ರಲೇಖ** — ಹಾಗಾದರೆ ನನ್ನ ಸೆರೆಯಲ್ಲಿ ಸಹಸ್ರಾರು ರಾಜಕುಮಾರರು ಸಿಕ್ಕಿರುವರು, ಅವರಲ್ಲಿ ನಿನ್ನ ಪ್ರೀತಿಯ ಪುತ್ಥಳಿಯೂ ಇರಬಹುದು.

**ಉಷಾ** — ಅಬ್ಬಬ್ಬಾ! ದೊಡ್ಡ ಚಕ್ರವರ್ತಿನಿ

**ಚಿತ್ರಲೇಖ** — ನಿಜ, ಸಖೀ, ಮೊನ್ನೆ ಪಿತನು ವರಾನ್ವೇಷಣೆಗಾಗಿ ಹೋಗಿದ್ದನಲ್ಲವೆ? ಎಷ್ಟೋ ಜನ ರಾಜಕುಮಾರರ ಭಾವಚಿತ್ರಗಳನ್ನು ತಂದಿರುವನು. ನೀನು ನೋಡಿಲ್ಲವೆ?

**ಉಷಾ** — ಇಲ್ಲ ಇಲ್ಲ, ಸಖೀ ಬೇಗ ತೋರಿಸು.

**ಚಿತ್ರಲೇಖ** — ಇದೋ ಈಗಲೇ ತರುವೆನು. (ಓಡಿ ಹೋಗಿ ಎಲ್ಲ ಚಿತ್ರಗಳನ್ನು ತಂದು, ಒಂದೊಂದನ್ನೇ ತೋರಿಸುತ್ತ) ದೇವಿ, ಇವನು ಮಗಧ ದೇಶದ ರಾಜಕುಮಾರನು!

**ಉಷಾ** — ಛೆ, ಛೆ, ಇವನ ಬಾತು ಮೋರೆಯು ಭಯ ಸೂಚಿಸುತ್ತಿರುವದು ಬೇಡ. (ಕೊಡುವಳು)

**ಚಿತ್ರಲೇಖ** — ಇವನು ಗಾಂಧಾರ ದೇಶದ ಅರಸುಮಗನು.

**ಉಷಾ** — ಅ ಹ ಹ ಹ ಇವನು ಗರುಡಗಂಬದಂತೆ ಅಳತೆಗೆಟ್ಟು ಬೆಳೆದಿರುವನಮ್ಮಾ–ಹೂಂ, ಬೇಡ.

**ಚಿತ್ರಲೇಖ** — ಇವನು ವಿದರ್ಭದೇಶದ ರಾಜಕುಮಾರನು

**ಉಷಾ** — ಸರ್ವಸಾಧಾರಣ!

**ಚಿತ್ರಲೇಖ** — ಇವನು ಘುರ್ಜರದೇಶಾಧಿಪತಿ!

**ಉಷಾ** — ಹುಂ ಸಾಮಾನ್ಯ

**ಚಿತ್ರಲೇಖ** — ಇವನು ಬ್ರಹ್ಮದೇಶದ ರಾಜಕುಮಾರನು!

**ಉಷಾ** — ಅ ಹ ಹ ಹಾ, ಇವನು ಮಹಿಷಾಸುರನ ಮೊಮ್ಮಗನು, ಎಂತಹ ಕುರೂಪವೇ ಸಖೀ, ದೂರ ಬಿಸಾಡು. ದೂರ...!

**ಚಿತ್ರಲೇಖ** — ಎಲ್ಲರನ್ನೂ ಹೀಗೆಯೇ ತಿರಸ್ಕರಿಸುವೆಯಾ?

**ಉಷಾ** — ಮಾಡಲೇನು ಸಖಿ, ಮನದಾಣ್ಮನು ಸಿಗುವವರೆಗೂ ಹೀಗೆಯೇ ಶೋಧಿಸುವೆನು.

**ಚಿತ್ರಲೇಖ**— ಸ್ವಲ್ಪ ತಾಳು ದೇವಿ... ಇನ್ನೊಂದು ಸುಂದರ ಭಾವಚಿತ್ರವಿದೆ. ಅದನ್ನು ಸ್ವಲ್ಪ ನೋಡುವೆಯಂತೆ!... (ಓಡಿ ಹೋಗಿ, ಮರಳಿ ತಂದು ತೋರಿಸುವಳು)

**ಉಷಾ** — (ಭಾವಚಿತ್ರವನ್ನು ನಟ್ಟ ದೃಷ್ಟಿಯಿಂದ ದಿಟ್ಟಿಸಿ, ಹರ್ಷೋದ್ಗಾರಗಳಿಂದ) ಅ ಹ ಹ ಹ, ಧನ್ಯವಾಯಿತು ಜನ್ಮ! ಸಿಕ್ಕನು, ನನ್ನ ಜೀವಿತೇಶನು! ನಾನಿವನನ್ನು ಬಿಡಲಾರೆ, ನಾನಿನ್ನು ತಡೆಯಲಾರೆ, ನನ್ನನ್ನು ಕನಸಿನಲ್ಲಿ ಕಾಡಿದ ಕಾಂತನು ಇವನೇ, ಅ ಹ ಹ ಹ ಎಂತಹ ಸುಂದರ ವದನವಿದು! ಚಿತ್ರಲೇಖಾ, ಇಲ್ಲಿ ಬಾ, ಇದೋ...ಇದೋ...ಚನ್ನಾಗಿ ಈಕ್ಷಿಸು. ಇಂತಹ ಮೋಹನಮೂರ್ತಿಯನ್ನು ಮೂರು ಲೋಕಗಳಲ್ಲಿಯೂ ಕಾಣಲಾರೆ, ಹುಂ ಹೂಂ ನಾನೆಂದಿಗೂ ಇವನನ್ನು ಬಿಡಲಾರೆ (ಅಪ್ಪಿಕೊಂಡು ಮತ್ತೆ ನೋಡಿ) ಅಮ್ಮಾ ನನ್ನನ್ನೇ ದಿಟ್ಟಿಸುತ್ತಿರುವನು ನೋಡೆ...! ಇದೋ ಸಖಿ, ಇಲ್ಲಿ ಬಾರೆ... ಬಾಲೆಯರನ್ನು ಬಂಧಿಸುವಲ್ಲಿ ಇವನು ಬಹು ಚಪಲನು.... ಎಂತಹ ಪ್ರಫುಲ್ಲಿತ ಪರಿಪೂರ್ಣ ಚಂದ್ರವಿದು! ಇಲ್ಲಿ ನೋಡೆ, ಎಂತಹ

ಸುಮಧುರ ನೋಟ... ಕಾಮನ ಶೃಂಗಾರ, ಕಮಲದ ಮೃದುತ್ವ, ವಸಂತನ ಶಾಂತಿ, ಚಂದ್ರನ ಕಾಂತಿ! ಇಂದ್ರನ ವೈಭವ, ಮಹಾದೇವನ ಗಂಭೀರ, ಮಾಧವನ ಮೋಹನಾಕಾರ – ಎಲ್ಲವನ್ನೂ ದೈವವು ಒಟ್ಟಿಗೂಡಿಸಿ ನನ್ನ ಕೈಯಲ್ಲಿ ಕೊಟ್ಟದೆ–ನಾನು ಭಾಗ್ಯಶಾಲಿನಿ...! ನನ್ನನ್ನು... ಕನಿಸನಲ್ಲಿ ಕದ್ದ ಕಳ್ಳನನ್ನು.... ನನ್ನಲ್ಲಿಯೇ ಸೆರೆಗೈಯುತ್ತೇನೆ. (ಭಾವಚಿತ್ರವನ್ನು ಬಿಗಿಯಾಗಿ ಬಾಹುಪಾಶಗಳಲ್ಲಿ ಬಂಧಿಸಿ) ಇನ್ನೆಲ್ಲಿಗೆ ಹೋಗುವೆ ಪ್ರಿಯಕರ? ನೀನು ನನ್ನನ್ನಗಲಿ ಹೋಗಲಾರೆ! ಸಖೀ, ಈ ಸುರಮ್ಯ ಮೂರ್ತಿಗೆ ಆ ಸುರರು ಸಮರಾಗಬಲ್ಲರೇ? ಛೆ, ಆಗಲಾರರು. (ಪದ)... ಸಖೀ... ಇವನ ಶುಭ ನಾಮವನ್ನೊಮ್ಮೆ ಹೇಳು, ಅದು ನನ್ನ ಜೀವನಮಂತ್ರವಾಗಲಿ, ಹೇಳು.

**ಚಿತ್ರಲೇಖ –** ಸಖೀ, ಈ ಚಾರುವದನನು ದ್ವಾರಕಾವತಿಯ ನಾಥನಾದ ಶ್ರೀಕೃಷ್ಣನ ಪೌತ್ರನು.

**ಉಷಾ –** ಸಂತೋಷ, ಈ ಪುಣ್ಯಾತ್ಮನ ಪಿತೃವಿನ ನಾಮ?

**ಚಿತ್ರಲೇಖ –** ಇವನ ಪಿತೃವು ತ್ರಿಲೋಕವಿಖ್ಯಾತನಾದ ಪ್ರದ್ಯುಮ್ನನು. ಮನ್ಮಥನ ಮಗನು ಮೋಹದ ಮುದ್ದೆಯೇ ಆಗಿರುವನು.

**ಉಷಾ –** ಅ ಹ ಹ ಹ ಆನಂದ, ಮೋಹದ ಮುದ್ದು! ಮಾಧುರ್ಯದ ಮನೆ ! ಮಧುಕರ ಬಿಂಬ!... ಇಲ್ಲಿ ಬಾ, ಒಮ್ಮೆ ಈ ಮಂಗಲ ನಾಮವನ್ನುಸುರು.

**ಚಿತ್ರಲೇಖ –** ಇವನಿಗೆ ರಾಜಕುಮಾರ ಅನಿರುದ್ಧನೆನ್ನುವರು.

**ಉಷಾ –** ಅ ಹ ಹ ಹ...ಅನಿರುದ್ಧ!.... ಅನಿರುದ್ಧ!.... ಲೋಕಪ್ರಸಿದ್ಧ... ಪುಣ್ಯನಾಮ! ಪವಿತ್ರನಾಮ! ಪುನೀತನಾಮ....! ಅ ಹ ಹ ಹ ಅನಿರುದ್ಧ...! ಮಂಗಲ ನಾಮ. (ಪದ)

**ಚಿತ್ರಲೇಖ –** (ಸ್ವಗತ) ರಾಜಕುಮಾರಿಯು ಪ್ರೇಮಾನಂದದಲ್ಲಿ ತಲ್ಲೀನಳಾಗಿ ಹುಚ್ಚಳಾಗುತ್ತಿರುವಳು. (ಪ್ರಕಾಶ) ದೇವಿ, ಇವರು ನಮ್ಮ ಮಹಾರಾಜರ ವಿರೋಧಿಗಳು, ಸ್ವಲ್ಪ ತಾವೇ ಆಲೋಚಿಸಿ ನೋಡಿ.

**ಉಷಾ –** ಈ ಮೂರ್ತಿಯ ಚರಣಾರವಿಂದಗಳಲ್ಲಿ ಹೃದಯಾರ್ಪಣವನ್ನೇ ಮಾಡಿದ್ದೇನೆ ಸಖೀ. ಕುಲಕನ್ಯೆಯರು, ಒಮ್ಮೆ ಮೋಹಿಸಿದ ಮೇಲೆ, ಒಮ್ಮೆ ಆತ್ಮಾರ್ಪಣ ಮಾಡಿದ ಮೇಲೆ ಇನ್ನೋರ್ವನನ್ನು ಕಾಮಿಸುವ

ಪಾತಕವನ್ನೆಂದಿಗೂ ಮಾಡಲಾರರು. ನನ್ನ ಜೀವನಾಧಾರವು ಈ ಮೋಹನಾಂಗನನ್ನೇ ಅವಲಂಬಿಸಿದೆ ಸಖಿ.

**ಚಿತ್ರಲೇಖ –** ಹಾಗಾದರೆ ನಾವು ಅತ್ಯಂತ ಜಾಗರೂಕತೆಯಿಂದ ವರ್ತಿಸುವದು ಅವಶ್ಯವಿದೆ.

**ಉಷಾ –** ನನ್ನ ಎಲ್ಲಾ ಭಾರವು ನಿನ್ನನ್ನೇ ಕೂಡಿದೆ ಸಖೀ. ನನಗೆ ಮೊದಲು ಈ ಪ್ರದ್ಯುಮ್ನ ಕುಮಾರನನ್ನು ತೋರಿಸಿ ಬದುಕಿಸು. ಇಲ್ಲವಾದರೆ ನಾನು ಖಂಡಿತವಾಗಿಯೂ ಜೀವಿಸಲಾರೆ.

**ಚಿತ್ರಲೇಖ –** ಶಾಂತಳಾಗು ದೇವಿ. (ಪದ)...ನಿನ್ನ ಸೇವೆಯಲ್ಲಿ ಅಪ್ರತಿಮ ಸಾಹಸ ಮಾಡುತ್ತೇನೆ. ಈ ಸುದ್ದಿಯು ಮಾತ್ರ ಬಹು ಗೂಢವಿರಲಿ. ನಾನೂ ಬಾಲ್ಯದಲ್ಲಿ ಕಲಿತ ಯಕ್ಷಿಣೀ ವಿದ್ಯಾಬಲದಿಂದ ದ್ವಾರಕೆಗೆ ಹೋಗಿ ನಿನ್ನ ಮನೋಹರನನ್ನು ಪರ್ಯಂಕಸಮೇತವಾಗಿ ಅರಮನೆಯಲ್ಲಿ ತಂದಿಳುಹುತ್ತೇನೆ. ನೀನು ಮಾತ್ರ ಶಾಂತಳಾಗು.

**ಉಷಾ –** ಅ ಹ ಹ ಹ ಸಖೀ, ಎಂತಹ ಸಾಹಸವೇ ನಿನ್ನದು! ಲೋಕದಲ್ಲಿ ಸಖಿಯರಿಗಿಂತಲೂ ಹೆಚ್ಚಿನ ಆಪ್ತರಿಲ್ಲವೆಂಬುದನ್ನು ತೋರಿಸಿಕೊಟ್ಟೆ. ನಮ್ಮ ನೆಚ್ಚಿನ ಗೆಳೆತನಕ್ಕಾಗಿ, ನೀನು ಎಂತಹ ಭಯಂಕರ ಗಂಡಾಂತರದಲ್ಲಿ ನುಗ್ಗುತ್ತಿರುವೆ–ನಿನ್ನಂಥ ಸ್ನೇಹಮಯಿಯನ್ನು ಈ ಪ್ರಪಂಚದಲ್ಲಿ ಕಾಣುವದು ಅಪರೂಪ. ಇನ್ನು ತಡ ಬೇಡ ಸಖೀ– ತೀವ್ರ ಕಾರ್ಯೋನ್ಮುಖಳಾಗು.

**ಚಿತ್ರಲೇಖ –** ಅನುಜ್ಞೆ ಕೊಡು ದೇವಿ.

**ಉಷಾ –** ಧನ್ಯ ಬಾ, ಗೆಳದಿ, (ಪದ) ನಿನ್ನ ಸಾಹಸಕಾರ್ಯಕ್ಕೆ ಜಗಜ್ಜನನಿಯಾದ ಭುವನೇಶ್ವರಿಯು ಜಯ ನೀಡಲಿ. (ಮಾಲೆಯನ್ನು ಹಾಕಿ ಹರಸುವಳು)

**ಚಿತ್ರಲೇಖ –** (ಮೆಲ್ಲಗೆ ಹಿಂದೆ ಸರಿಯುತ್ತಾ ಹಸನ್ಮುಖಿಯಾಗಿ) ಅಪ್ಪಣೆಯನ್ನು ದಯಪಾಲಿಸು ದೇವಿ (ಹಾಗೆಯೇ ವಂದಿಸಿ, ತೆರೆಯಲ್ಲಿ ಮಾಯವಾಗುವಳು)

**ಉಷಾ –** ಜಯಶೀಲೆಯಾಗು ಸಖಿ

**ಚಿತ್ರಲೇಖ –** ಕೃತಾರ್ಥಳಾದೆ ಸಖಿ

**ಉಷಾ** — ಬೇಗ ಬಾ ಗೆಳದಿ... (ನೇಪಥ್ಯದ ಕಡೆ ದಿಟ್ಟಿಸುತ್ತ ನಿಲ್ಲುವಳು. ತೆರೆಯು ನಿಧಾನವಾಗಿ ಇಳಿಯುವದು.)

## ದೃಶ್ಯ ೩. ರಾಜಬೀದಿ

ಸಮಯ – ಮಧ್ಯರಾತ್ರಿ

[ವೇಷ ಮರೆಸಿಕೊಂಡು ಚಿತ್ರಲೇಖೆಯು ಯಕ್ಷಿಣೀವಿದ್ಯಾಸಾಧನ ಸಾಮಗ್ರಿಗಳೊಡನೆ ಪ್ರವೇಶಿಸುವಳು. ಕರಿಯ ಬಣ್ಣದ ಗೌನೊಂದು ಮೈ ಮುಚ್ಚಿದೆ, ಕೆದರಿದ ಕೇಶರಾಶಿಗಳು ಭುಜ, ಹಿಂಭಾಗಗಳ ಮೇಲೆ ಬಿದ್ದಿವೆ. ಸೊಂಟದಲ್ಲಿ ಖಡ್ಗವು ನೇತಾಡುತ್ತಿದೆ.]

**ಚಿತ್ರಲೇಖ** — (ಪ್ರವೇಶಿಸಿ, ಸ್ವಗತ) ಕಾವಲುಗಾರರ ಕಣ್ಣಲ್ಲಿ ಮಣ್ಣನ್ನೆರಚಿ, ಅರಮನೆಯ ಪ್ರಾಕಾರದಿಂದ ಪಾರಾದದ್ದಾಯಿತು. ನಾನೀಗ ಕೈಕೊಂಡಿರುವ ಮಿತ್ರಕಾರ್ಯವು ಕಷ್ಟಸಾಧ್ಯವಾಗಿದೆ. ನಾನೀಗ ಭಯಂಕರ ರೌದ್ರಾವೇಶದಿಂದ ಬಾಯಿದೆರೆದ ಸಿಂಹದ ಶೂಲ ದಂತಗಳಲ್ಲಿ ದಾರಿಯನ್ನು ಹುಡುಕುತ್ತಿದ್ದೇನೆಂಬುದು ನಿಜ. ಆದರೆ, ಮೈತ್ರಿಣಿಯ ಮುಂದೆ ಪ್ರಾಣವು ತೃಣೀಕೃತವಾಗಿದೆ. ನನ್ನ ಯಶಾಪಯಶಗಳು ಲೋಕಮಾತೆಯಾದ ಆ ಮಹಾದೇವಿಯನ್ನೇ ಕೂಡಿವೆ. (ಪದ) ಹೇ ಜಗಜ್ಜನನಿಯಾದ ಜಯದೇವಿಯೆ, ನನ್ನ ಕಾರ್ಯಕ್ಕೆ ಜಯು ನೀಡು! ನಿನ್ನ ಕೃಪೆಯಿದ್ದರೆ ಸ್ತ್ರೀಸಾಹಸವೇನೆಂಬುದನ್ನು ಈ ಲೋಕಕ್ಕೆ ತೋರಿಸುತ್ತೇನೆ, (ತನ್ನನ್ನೇ ತಾನು ನೋಡಿಕೊಂಡು) ಓಹೋ ನನ್ನ ಕಾರ್ಯಕ್ಕೆ ನನ್ನ ವೇಷವೂ ಅನುಕೂಲವಾಗಿದೆ. (ತೆರೆಯಲ್ಲಿ ಧ್ವನಿ, ಒಮ್ಮಿಂದೊಮ್ಮೆ ಬೆಚ್ಚಿ ಬೀಳುವಳು.)

**ನಗರರಕ್ಷಕರು** — (ತೆರೆಯಲ್ಲಿ) ನಾಗರೀಕರೇ ಭದ್ರ, ಚೋರರಿಂದ ಎಚ್ಚರ!

**ಚಿತ್ರಲೇಖ** — (ಬೆಚ್ಚಿ) ಓಹೊಹೋ, ಪ್ರಮಾದ! ನಗರರಕ್ಷರ ಕೈಯಲ್ಲಿ ಸಿಕ್ಕುಬಿದ್ದರೆ ಕಾರ್ಯವು ಮಣ್ಣುಗೂಡಿ, ಕಾರಾಗೃಹವನ್ನೇ ಸೇರಬೇಕಾದೀತು. (ಮತ್ತೆ ಧ್ವನಿ) ಓಹೋ, ತೀರಾ ಸಮೀಪಿಸಿದರು. ಅದೋ ನಗರದ ಮುಂಭಾಗದಿಂದ ಹಾದು ಹೋಗಲೋ ....? ಛೆ,ಛೆ, ಬೇಡ ನಗರದ ಮುಂಬಾಗದ ಮುಂದೆ, ಜಯಧ್ವಜವನ್ನು ರಕ್ಷಿಸುತ್ತಿದ್ದ ರಕ್ಷಕ ವ್ಯೂಹದ ಸೆರೆಯಾಳಾಗಬೇಕಾದೀತು. (ಸ್ವಲ್ಪ ಯೋಚಿಸು)

ಹೂಂ, ಇದೇ ಉಪಾಯ. ಈ ಚೋರಮಾರ್ಗದಿಂದಲೇ ಪಾರಾಗುವದು ಮೇಲು, ಅದೋ ಸ್ಮಶಾನಭೂಮಿಯು ಕಾಣಿಸುತ್ತಿರುವದು. ಹೌದು. ಅದೇ ನನ್ನ ವಿದ್ಯಾ ಸಾಮಗ್ರಿಗಳ ಸಾಧನ ಭೂಮಿ. ಜಯ ಶಂಕರಿ, ಜಯ ಭದ್ರಕಾಳಿ! (ಚಪಲಗತಿಯಿಂದ ಹಾರಿ ಓಡುವಳು)

**ಚಂದ್ರಕಾಂತ** – (ಆವೇಶದಿಂದ ಬೆನ್ನಟ್ಟಿ ಬಂದು) ಯಾರಾಗಿರಬಹುದು! ಈ ಸಮರಾತ್ರಿಯ ಸನ್ನಿವೇಶದಲ್ಲಿ ಗುಪ್ತ ವೇಷಧಾರಿಯಾದ ಸಾಹಸಿಯು ಯಾರಾಗಿರಬಹುದು! ನಮ್ಮ ದೇಶದ ಜಾರನಾಗಿರಬಹುದೋ...? ಅಥವಾ ವಿದೇಶದ ಬೇಹುಗಾರನಾಗಿರಬಹುದೋ...? ಯಾವನಾದರಾಗಲಿ, ಈಗಲೆ ಹಿಡಿದು ದಂಡಿಸುವೆನು. ಯಾಮಿಕರೆ, ನೀವು ನಗರವನ್ನು ರಕ್ಷಿಸಿರಿ. (ಸ್ವಲ್ಪ ಮುಂದೆ ಹೋಗಿ ನೋಡಿ) ಎಲವೋ ನೀನಾರು? ನಿಲ್ಲು,ನಿಲ್ಲು! ಶೋಣಿತ ಸಾಮ್ರಾಜ್ಯಕ್ಕೆ ಸರ್ಪಗಾವಲನ್ನಿಟ್ಟ ಈ ಶೂರ ಸೇನಾಪತಿಯನ್ನು ವಂಚಿಸುವ ಸಾಹಸ ಮಾಡಿ ವ್ಯರ್ಥವಾಗಿ ಸಾಯಬೇಡ! ನಿಲ್ಲು, ಹರಣ ಭಿಕ್ಷೆಯನ್ನು ಬೇಡು. ಹುಂ, ಏನು! ನನ್ನಾಜ್ಞೆಯನ್ನು ಮನ್ನಿಸದೆ ಚೋರಮಾರ್ಗದಿಂದ ಪಾರಾಗಲೆತ್ನಿಸುವೆಯಾ, ಏನಿದು...! ಎಲವೋ ಅನ್ಯದೇಶದ ಕುನ್ನಿಯೇ, ನಿಲ್ಲು! ನಿಲ್ಲದಿದ್ದರೆ ನಿನ್ನ ನಾಲಿಗೆಯನ್ನೇ ಕತ್ತರಿಸಿ ಭೂತಲಕ್ಕೆ ಚಲ್ಲುತ್ತೇನೆ. (ಸ್ವಲ್ಪ ಮುಂದೆ ಹೋಗಿ) ಏನಿದು! ಭಯಾನಕ ದೃಶ್ಯ! ಸಮರಾತ್ರಿಯಲ್ಲಿ! ಅದೂ–ಸ್ಮಶಾನ ಮಧ್ಯದಲ್ಲಿ ಸುಳಿದಾಡುತ್ತಿರುವದು! ಭೂತವೋ! ಪ್ರೇತವೋ!! ಏನಾದರಾಗಲಿ; ಯಾರಾದರಾಗಲಿ! ದೆವ್ವವಾದರಾಗಲಿ ! ದೇವರಾದೊಡಾಗಲಿ ಇದರ ಪ್ರತಿಶೋಧವನ್ನು ಮಾಡದೆ ಬಿಡೆನು. ಹೌದು, ಹೌದು! ಬೇಹುಗಾರನೇ ನಿಜ. ಅರಣ್ಯಮಾರ್ಗದಲ್ಲಿ ಪಲಾಯನ ಮಾಡಲೆತ್ನಿಸುತ್ತಿರುವನು. ಎಲವೋ ಕರ್ಮಚಾರನೆ, ನಿನ್ನ ಕರ್ತವ್ಯ ಕರ್ಮವು ಕೊನೆಗೊಂಡಿತೆಂದು ತಿಳಿ. ಇದೋ ಬಂದೆ ಪಾರಾಗುವುದೆಲ್ಲಿಗೆ!.... (ಆವೇಶದಿಂದ ಹಾರಿ ಓಡುವನು.)

## ದೃಶ್ಯ ೪

(ಓಡುತ್ತೋಡುತ್ತ ಬಂದು)

**ರುದ್ರಾಕ್ಷ** – ಏನಪಾ ಇವ, ವಳ್ಳೆ ಭರ ಭರ್ರ್ಯಾಟ್ಯಾಗೆ ಓಡಿಹ್ಯಾದನಲ್ಲಾ, ಎಲ್ಲ್ಯಾರಾ

ಈ ಅಪರಾತ್ರ್ಯಾಗ ಅಂಜಿಕೊಂಡ, ಉರಿ ಚಳಿ ಬಂದಾವು ಅಂತೀನಿ, ವಳ್ಳೇ ಕಿರ್ದಿನೆಬಿದ್ದ. ಓಡಿ ಹ್ವಾದನಲ್ಲಾ, ಯಾ ಕಡಿಗಿ ಹ್ವಾದಾ ಅಂತೀನಿ, (ಹಿಂದಕ್ಕೆ ಸರಿದು ನೋಡಿ) ಅ ಬ ಬ ಅಲ್ಲಿ ಹೋಗ್ತಾನಲ್ಲಪಾ, ಏಟು ದೂರ ಹ್ವೋದನಲ್ಲಾ ಇಂವಾ,ಏನ ಇಚಿತ್ರಪ ಇದು, ಈ ಅಪರಾತ್ರ್ಯಾಗ ಅವ ಯಾರಿರಬೇಕು ಉಲೂಲಮರಿ, ಈ ನಡರಾತ್ರ್ಯಾಗ ಸರ್‍ರ ಅಂತ ಸರ್ಪಾ ವಂಟಾಂಗ ವಂಟಾನ, ಅಂವಂದೆಂತಾ ಗಟ್ಟಿ ಗುಂಡಿಗ್ಯಪ್ಪ! ಅಂವ ಯಾರನಬೇಕು, ಏನ ಕಳ್ಳನಾ, ಸುಳ್ಳನಾ, ದೆಂವ್ವಾ, ಪಿಚಾಚ್ಯ, ಏನೂ ತಿಳ್ಯನೇವಲ್ಲದ ಬಿಡಪ, ನಮ್ಮ ಮಂಗ್ಯಾ ಬುದ್ದೀಗಿ, ಈಟೊಂದು ಮಬ್ಬಗತ್ತಾಲಾಗ ಇಂಗ ಯೇಸ್ಯಾ ಬದಲಮಾಡಿಕೊಂಡ ಅಂಜಿಕಿ ಇಲ್ಲದಾ ಹೊಂಟಾನ ಅಂದಮ್ಯಾಲ ಏನಾರಾ ಗುಟ್ಟು ಇರಬೇಕಲ್ಲಾ, ಏನಾರ ಇರಲೇಬೇಕು, ಇಲ್ಲದರ ಇಂಗ ಜೀವದ ಹಂಗ ಇಲ್ಲದಾನೇ ಖಬರ ತಪ್ಪಿ ಹೊಂಡಬೇಕಾರ, ಯೇನಾರಾ ಯಾನ ಗುಟ್ಟು ಇರಲೇಬೇಕು, ಇದರದೂ ಒಂದು ಕೈ ನೋಡೇ ಬಿಡ್ತೀನಿ–ಕರಿಬಂಟ ಬೆನ್ನ ಹತ್ತಿದಾಂಗ ಬೆನ್ನ ಹತ್ತತೀನಿ–ಗುಟ್ಟು ತಿಳ್ಯೋವರಿಗೂ ಬೆನ್ನೇ ಬಿಡಾಂಗಿಲ್ಲ, ತಿಳಿಲಿ, (ಹಿಂದಕ್ಕೆ ಸರಿದು ನೋಡಿ) ಅಲಲ ಏಟ ದೂರ ರಪಾಟೀನೆ ಓಡಿದನಲಪಾ ಇಂವ, ಸುಡಗಾಡಾದ ಕಡಿ ಮಾರಿ ಮಾಡಿಕೊಂಡೇ ಹೊಂಟರಲ್ಲಾ ಇಬ್ಬರು, ಭಪ್ಪರೆ ಗೂಳಿ! ಅಂವನೂ ಓಡೋ, ಇವನೂ ಓಡೋ, ನಾನೂ ಬೆನ್ನ ಹತ್ತಿ ನೋಡೇ ಬಿಡ್ತೀನಿ–ಈ ಮಜ್ಯಾದಾಟಾನ (ಓಡುವನು)

## ದೃಶ್ಯ ೫ ಅರಣ್ಯ

[ಚಿತ್ರಲೇಖೆಯು ಅರಣ್ಯ ಮಾರ್ಗದಲ್ಲಿ ತಲೆಪರಟೆಯನ್ನು ಕೈಯಲ್ಲಿ ಹಿಡಿದುಕೊಂಡು ಪ್ರವೇಶಿಸುವಳು.]

ಚಿತ್ರ — ಟೊಳ್ಳು ಬುರುಡೆಯೇ, ಅರಳಿದ ನಿನ್ನ ಮೆದುಳನ್ನು ತೊರೆದ ಹುರುಳಿಲ್ಲದ ಪರಟೆಯೆ–ಹಿಂದೊಮ್ಮೆ ನಿನ್ನ ಜೀವಮಾನದಲ್ಲಿ ಮರುಳು ಗೊಳಿಸಿದ ಮದವು ಈಗೆಲ್ಲಿ ಮಾಯವಾಯಿತು! ಅ ಹ ಹ ಹ ನೀನಿಗ ನನಗೆ ಸಹಾಯಮಾಡು–ನಿನ್ನ ಸಹಾಯದಿಂದಲೇ ನನ್ನ ಸಮ್ಮೋಹನ ವಿದ್ಯೆಯ ಸಿದ್ಧಿಯಿದೆ. ಈಗಲೇ ನನ್ನ ಯಕ್ಷಿಣೀ

ಬಲವನ್ನು ಪ್ರಯೋಗಿಸುವೆನು. ನನ್ನಾಜ್ಞೆಯಿಂದ ನೀನು ಹೋಗಿ ಇಡೀ ದ್ವಾರಕೆಯನ್ನೇ ಮಂತ್ರ ಮುಗ್ಧ ಮಾಡಿ, ಅನಿರುದ್ಧನನ್ನು ಶಯ್ಯಾಸಮೇತ ಉಷಾ ಮಂದಿರದಲ್ಲಿ ಇಳಿಸು (ಮಂತ್ರ ಹೇಳುವಳು. ತಲೆಬುರುಡೆಯು ಮೆಲ್ಲನೆ ಹಾರಹತ್ತುವದು) ಹ ಹ ಹ ಹ. ನನ್ನಾಜ್ಞೆ,ಹೋಗು ಬಲವಾನ್ ಯಕ್ಷಿಣೀ ದೇವಿಯ ಬೆಂಬಲವಿದೆ ಹೋಗು ಮಾನವ, ದಾನವರಡ್ಡ ಬಂದರೂ ಲಕ್ಷಿಸದೆ ಹೋಗು (ತೆರೆಯಲ್ಲಿ ಧ್ವನಿ ನಿಲ್ಲು)

**ಚಿತ್ರಲೇಖ–** (ಬೆಚ್ಚಿ ಹಿಂದಕ್ಕೆ ನೋಡಿ) ಓ ಹೊ ಹೋ, ನನ್ನ ಪ್ರೇಮ ಮೂರ್ತಿಯ ಪುನರಾಗಮನ! ಇನ್ನೂ ಬೆನ್ನಟ್ಟಿಯೇ ಬರುತ್ತಿರುವನು! ಬರಲಿ, ಪ್ರೇಮಲೀಲೆಯಲ್ಲಿ ಕಾಲಹರಣ ಮಾಡಲು ಇದು ಪ್ರೇಮ ಭೂಮಿಯಲ್ಲ. ನಾನೀಗ ಸ್ಮಶಾನಭೂಮಿಯನ್ನು ದಾಟಿ, ಸಾಹಸದ ಭೂಮಿಯ ಮೇಲೆ ನಿಂತಿದ್ದೇನೆ. ಸಾಹಸವು ಸಾಧಿಸಲಿ, ಆಮೇಲೆ, ನನ್ನ ಸುಖಚಂದ್ರಮನ ಸಂಗಡ ಸ್ವರ್ಗೀಯ ಸೌಖ್ಯವನ್ನು ಸೂರೆಗೊಂಬುವ ಸುಂದರ ಸನ್ನಿವೇಶವು ಪ್ರಾಪ್ತವಾಗಲಿ (ಮತ್ತೆ ಬುರುಡೆಯನ್ನು ಈಕ್ಷಿಸಿ) ಹಾರು, ಹಾರೆಲೆ ಬುರುಡೆ–ದ್ವಾರಕಿಗೆ ಹಾರು, ಆಮೇಲೆ ಅನಿರುದ್ಧ ಸಮೇತ ಉಷಾ ಮಂದಿರಕ್ಕೆ ಹಾರು.

**ಚಂದ್ರಕಾಂತ** – (ರಭಸದಿಂದ ಬಂದು, ಅಪ್ರತಿಭನಾಗಿ ನಿಲ್ಲುವನು.) ಏನಿದು! ಭೂತಲೀಲೆ, ವೇಷವೊಂದು–ಭಾಷೆಯೊಂದು? ಹೆಣ್ಣು ಭಾಷೆ–ಗಂಡು ವೇಷ! ಯೋಧನ ಕತ್ತಿ–ಬೋಧಕನ ಆಜ್ಞೆ! ಇದೇನು ಭೇತಾಳನು ಹೂಡಿರುವ ಯಜ್ಞವೋ....? ಶೋಣಿತ ಸೇನಾಪತಿಯ ಶಾಸನಕ್ಕೆ ವಿಘ್ನವೋ...? ಇಲ್ಲ, ಇಲ್ಲ–ನಮ್ಮ ಸಾಮ್ರಾಜ್ಯದ ವಿಜಯಧ್ವಜವು ಅನಂತಾಕಾಶದಲ್ಲಿ ಹಾರಾಡುವವರೆಗೂ, ಶತ್ರುಗಳ ಶಿರಗಳನ್ನು ಆಣೆಯ ಕಲ್ಲುಗಳಂತೆ ಹಾರಿಸಬಲ್ಲ ಈ ವೀರ ಖಡ್ಗವು ನನ್ನ ಸೊಂಟದಲ್ಲಿ ನೇತಾಡುತ್ತಿರುವವರೆಗೂ, ಸಾಮ್ರಾಟ ಬಾಣಾಸುರನ ಮಸ್ತಕದ ಮೇಲೆ ಭವ್ಯ ಮಕುಟವು ರಾರಾಜಿಸುತ್ತಿರುವವರೆಗೂ, ಎಂದಿಗೂ ಶಾಸನೋಲ್ಲಂಘನೆಯಾಗಲಾರದು. (ಸ್ವಲ್ಪ ಮುಂದೆ ಬಂದು) ಏನಿದೀ ಪೈಶಾಚಿಕ ವಿಲಾಸ! ನಿಶಾಚರ ಲೀಲೆ! ಹಾರುವದು! ಸತ್ತ ಬುರುಡೆಯು ಸಜೀವಿಯಂತೆ ಆಕಾಶಕ್ಕೆ ಹಾರುತ್ತಿರುವದು! ಬಿಡಲಾರೆ, ಯಾರಾದೊಡಾಗಲಿ ಬಂಧಿಸದೆ ಬಿಡಲಾರೆ–ಶಸ್ತ್ರವೇ ರಕ್ತಪಾನಕ್ಕೆ

ಸಿದ್ಧವಾಗು; ಖಂಡಿತವಾಗಿಯೂ ಬಿಡಲಾರೆ–ಎಲವೋ ಬದುಕಲಾರೆ, ಯಾರೆಂಬುದನ್ನು ಹೇಳು? (ಶಸ್ತ್ರ ಹೀರಿ ನಿಲ್ಲುವನು)

**ಚಿತ್ರಲೇಖ** – ಶೋಣಿತ ಸಾಮ್ರಾಜ್ಯದ ಸೇನಾಪತಿಯನ್ನು ಸವರೆಗೈಯಬಲ್ಲ ಅಜೇಯ ವೀರಶಕ್ತಿ!

**ಚಂದ್ರಕಾಂತ** – ಎಲವೋ ಕ್ಷುದ್ರಾ, ನಿನ್ನ ಕುಲಪರಂಪರೆಯನ್ನೇ ಕಡಿದು ಬಿಸಾಡುತ್ತೇನೆ. ನಿಲ್ಲು! ಅಜಿತ ಪರಾಕ್ರಮಿಗಳನ್ನು ಪರಾಭವಗೊಳಿಸಿದ ಅಪ್ರತಿಮ ವೀರನ ಮುಂದೆ ಈ ಬೆದರಿಕೆಯೇ?

**ಚಿತ್ರಲೇಖ** – ಹೌದು, ಖಂಡಿತವಾಗಿ ನಂಬು, ನಿನ್ನಂಥ ಸಾವಿರಾರು ಸೇನಾನಿಗಳಿಂದ ಜಯಲಕ್ಷ್ಮಿಯನ್ನು ಸೆಳೆದೊಯ್ಯುವ ಶಾಸನಶಕ್ತಿ! ನಿನ್ನ ಹೃದಯವನ್ನೇ ಹಿಂಡಿ ಹರುಷದಿಂದ ಹಾರಾಡಬಲ್ಲ ದಿವ್ಯಶಕ್ತಿ!

**ಚಂದ್ರಕಾಂತ** – ತುಚ್ಛವಾದ ಹೀನಶಕ್ತಿಯೆ, ತಿಮಿರವು ತರಣಿಯ ಸಂಗಡ ಸರಸವಾಡಬಹುದೇ?ಎಲವೆಲವೋ ನೀಚಮತಿಯೆ–ನಿಲ್ಲು ಯುದ್ಧಕ್ಕೆ (ಚಿತ್ರಲೇಖೆಯು ಶಸ್ತ್ರ ಹೀಡಿದು ತಿರುಗಿ ನಿಲ್ಲುವಳು–ಶಸ್ತ್ರಗಳ ಹೋರಾಟದಲ್ಲಿ ಚಂದ್ರಕಾಂತನು ಸೌಂದರ್ಯಾಧಿ ದೇವತೆಯಂತಿರುವ ಅವಳನ್ನವಲೋಕಿಸಿ, ಮೆಲ್ಲಗೆ ಶಸ್ತ್ರವನ್ನು ಹಿಂತೆಗೆದುಕೊಂಡು) ಏನಿದೀ ಮೋಹನಾಕಾರ! ಮಧುವನ್ನು ಸೂಸುವ ಮೃದುಹಾಸ್ಯವದನ! ಯಾರು ಚಿತ್ರಲೇಖಾ! ಈ ಕಾಳ ರಾತ್ರಿಯಲ್ಲಿ ಈ ಸಾಹಸ! (ಚಿತ್ರಲೇಖೆಯು ನಸುನಾಚಿ ನಿಲ್ಲುವಳು. ಚಂದ್ರ ಕಾಂತನು ಅವಳ ಭುಜಗಳನ್ನು ಹಿಡಿದು ಅಲ್ಲಾಡಿಸುತ್ತ)... ಅ ಹ ಹ ಹ, ಪ್ರೇಯಸಿ, ಪನ್ನಗವೇಣಿ–ನನ್ನನ್ನೇಕೆ ಇಷ್ಟು ಪ್ರಯಾಸಪಡಿಸಿದೆ?

**ಚಿತ್ರಲೇಖ** – ಶೂರ ಸೇನಾಪತಿಗಳೆ, ಜಯಲಕ್ಷ್ಮಿಯು ಯಾರನ್ನು ಸೇರಿದಳು?

**ಚಂದ್ರಕಾಂತ** – ನೀನೇ ನನ್ನ ಭಾಗದ ಜಯದೇವತೆ, ಜಯಲಕ್ಷ್ಮಿಯಾದ ನೀನು ನನ್ನನ್ನು ಜಯಿಸಿದೆ. (ಕೈಹಿಡಿದು ಜಗ್ಗಿ) ಈ ಜಯದೇವಿಯು ನನ್ನನ್ನು ಜಯಿಸಿದಳು. ಅಥವಾ....

**ಚಿತ್ರಲೇಖ** – ಅಥವಾ... ಹೂಂ, ಸೇನಾಪತಿಗಳೆ ಸಂದಿಗ್ಧವೇಕೆ, ಸಾಗಲಿ ....ಹುಂ....ಅಥವಾ....?

**ಚಂದ್ರಕಾಂತ** – ಅಥವಾ ಈ ಜಯದೇವಿಯ (ಬಾಹುಗಳನ್ನು ಹಿಡಿದು ಭುಜದ ಮೇಲೆ ಹಾಕಿಕೊಂಡು) ಮಾಲೆಯನ್ನು ನಾನು ಧರಿಸಿದೆ (ಪದ)

**ಚಿತ್ರಲೇಖ** – ಅಂದರೆ... ಸೋಲು ಯಾರ ಪಾಲಿಗೆ ಮನೋಹರಾ?

**ಚಂದ್ರಕಾಂತ** – ನಿನ್ನ ಪಾಲಿಗೆ!

**ಚಿತ್ರಲೇಖ** – ಹುಂ ಹೂಂ, ನಾನು ಸೋಲನ್ನೊಪ್ಪುವುದಿಲ್ಲ. ತಿಮಿರವು ತರಣಿಯನ್ನು ಗೆಲ್ಲಲಾರದು – ಆದರೆ ತರುಣಿಯು ಮಾತ್ರ ತರುಣನನ್ನು....?

**ಚಂದ್ರಕಾಂತ** – ಹೌದು, ಹೌದು–ಹೃದಯಾರವಿಂದವೆ, ಸೋಲು ನನ್ನ ಪಾಲಿಗೆ! ಈ ತೆರದ ಸೋಲಿನ ಸುಖವೇ ನನಗೆ ಯಾವಾಗಲೂ ಇರಲಿ.

**ಚಿತ್ರಲೇಖ** – ಸೇನಾಪತಿಯನ್ನು ಸೋಲಿಸಿದ ಶೂರಳೆಂದು ನಾಳೆ ಪುರದಲ್ಲೆಲ್ಲ ಡಂಗುರ!

**ಚಂದ್ರಕಾಂತ** – ಧನ್ಯನಾದೆ ದೇವಿ – ಅದೇ ಸುಮುಹೂರ್ತವನ್ನೇ ಬಯಸುತ್ತಿದ್ದೇನೆ.

**ಚಿತ್ರಲೇಖ** – ಇದೇನು ಅಲಂಕಾರವೇ?

**ಚಂದ್ರಕಾಂತ** – ಹೌದು, ನೀನು ನನಗೆ ಅಲಂಕಾರವಾಧಾಗ–ನಿನ್ನ ಸಮಾಗಮ ಸುಖವನ್ನು ಹೊಂದುವ ಸುಯೋಗದಲ್ಲಿ ನಿನಗೆ ನಾನು ಮಾಂಗಲ್ಯವನ್ನು ಅಲಂಕಾರ ಮಾಡುವಾಗ–ನಮ್ಮೀರ್ವರ ಮೆರೆವಣಿಗೆಯು, ವೈಭವದಿಂದ ನಗರದಲ್ಲೆಲ್ಲ ಅಲಂಕಾರವಾಗಿ ಮೆರೆಯುವಾಗ–ಮಂಗಲ ವಾದ್ಯಗಳೆಲ್ಲವೂ ಹೀಗೆಯೆ ಸಾರುತ್ತವೆ.

**ಚಿತ್ರಲೇಖ** – ಏನೆಂದು?

**ಚಂದ್ರಕಾಂತ** – ಸೇನಾಪತಿಯು ಅಮಾತ್ಯನಂದಿನಿಗೆ ಸೋತನೆಂದು?

**ಚಿತ್ರಲೇಖ** – ಅಬ್ಬಾ, ಒಳ್ಳೇ ಸೋಲನ್ನೊಪ್ಪಿಕೊಂಡಿರಿ!

**ಚಂದ್ರಕಾಂತ** – ಇಂತಹ ಸೋಲೇ ಸಂತೋಷದಾಯಕ ಸಖೀ

**ಚಿತ್ರಲೇಖ** – ನಡೆಯಿರಿ, ಮರಳಿ ಭೆಟ್ಟಿಯಾಗೋಣ. ಬೆಳಗಿನಜಾವಕ್ಕೆ ಸಮೀಪಿಸಿತು.

**ಚಂದ್ರಕಾಂತ** ದೇವಿ ಈ ಅಪರಾತ್ರಿಯಲ್ಲಿ ಇದೆಂತಹ ಸಾಹಸ!

**ಚಿತ್ರಲೇಕ** – ಹೌದು, ಪ್ರಿಯತಮ–ಮಿತ್ರಕಾರ್ಯಕ್ಕಾಗಿ ಈ ಸಾಹಸ, ಇಲ್ಲಿ ಬನ್ನಿ. (ಕಿವಿಯಲ್ಲಿ ಹೇಳಿ) ಇದಕ್ಕೆ ತಮ್ಮ ಸಹಾಯವಿರಲಿ. ಆದರೆ, ಮಮಸುಂದರಾ, ನನಗಾಗಿ, ನನ್ನ ನಿನ್ನ ಪ್ರೇಮಕ್ಕಾಗಿ, ನನ್ನಾಣೆಯಾಗಿ

ಈ ರಹಸ್ಯವು ಮಾತ್ರ ಅಭೇದ್ಯವಾಗಿರಲಿ. ಇದೇ ನಿನ್ನಲ್ಲಿ ನನ್ನ ಪ್ರೇಮ ಪೂರ್ವಕವಾದ ಭಿಕ್ಷೆ.

ಚಂದ್ರಕಾಂತ — (ಹಸ್ತಲಾಘವ ಮಾಡಿ) ಆಗಲಿ ದೇವಿ–ನಿನ್ನ ಪ್ರೇಮದಲ್ಲಿ ಪ್ರಪಂಚವನ್ನೇ ತ್ಯಾಗಮಾಡಬಲ್ಲೆನು. (ಚಿತ್ರಲೇಖೆಯು ಹೋಗುವಳು) (ಸ್ವಗತ) ಉಭಯ ಸಂಕಟ–ಒಂದು ಕಡೆ ರಾಜಕಾರಣ ತಂತ್ರ–ಮತ್ತೊಂದು ಕಡೆ ನನ್ನ ಮೋಹಿನಿಯ ಪ್ರೇಮದ ಮೂಲಮಂತ್ರ! ಆಗಲಿ, ದೈವೇಚ್ಛೆ. (ಹೋಗುವನು. ಪರದೆ ಬೀಳುವುದು.)

## ದೃಶ್ಯ ೫. ರಾಜಬೀದಿ

(ಓಡುತ್ತ ಬಂದು)

ರುದ್ರಾಕ್ಷ — ಅಲಲ ಏನ ಚಮತಗಾರಪ ಇದು! ನೋಡಾಕ ಹೆಂಣಾದರೂ ಗಂಡಮಕ್ಕಳ ಇಕಿ ಮುಂದ ಝುಕ್ಕಿಸಿದರ ಬಿಡ ನಿನ, ಹಾಂ! ಈ ಅಪರಾತ್ರ್ಯಾಗ ಹೀಂಗ ಹೊರಗ ಹೊಂಡ್ರಬೇಕಾದ್ರ ಗಂಡಸರ ಗುಂಡಿಗಿ ವಡದ ನೀರಾಗ್ತದಾ.... ಅಂದಮ್ಯಾಲ ಇದೇನ ಹೆಂಗಸಪಾ ಇದು! ಭಲೆ ಹೆಂಗಸು! ಹೆಂಗಸರ ಬುದ್ಧೀ ಯಾರ್ಗಿ ತಿಳ್ದಿಲ್ಲ ಬಿಡು–ಹೊಡ್ತೀನಿ, ಕಡ್ತೀನಿ ಅಂತ ಓಡಿಹ್ವಾದ ನಮ್ಮ ಸೂರಾ, ಆಕಿ ಮಾರಿ ನೋಡಾಣ ತಡ, ಕಯಾಗಿನ ಹತ್ಯಾರಿ, ಘಳ್ಳ... ಅಂತ ಉಚ್ಚೇ ಬಿತ್ತಲ್ಲ; ಯಂಗಾದ ನೋಡಪ ಯಂಗಸರ ಸಗತೀ.... ಅಂತಾ ಸಗತೀ, ಯಾನ ಇಟ್ಟಿದ್ದಾನಪ ಆ ಬ್ರಮ್ಮ ಈ ಹೆಂಗಸರಲ್ಲಿ! ಆಕೀನ ನೋಡಿದ ದುರಿಪೀಲೆ ಸುರುವೇ ಮಾಡಿದ್ನಲ್ಲ ನಮ್ಮ ಓಡಿಹ್ವಾದ ಈರಾ ಸೂರ ಭೂಪಂಣ, ನಾ ಚಂದ್ರಾ ನೀ ಚುಕ್ಕೀ ಅಂತಾ–ಏನ ಗಮ್ಮಾತಪ ಇದು ಅಂತೀನಿ–ಏನ ಕಲಕಮಲಕಿತನ, ಏನ ಜಾಲಪ ಹೆಂಗಸರದು! ಆಕೀನ ನೋಡಾಣ, ಉಬ್ಬಳದಾಗ ಸಿಗಬಿದ್ದ ಕೋಣ ತೇಕಿದಾಂಗ ತೇಕಕೆ ಹತ್ತಿದ ನೋಡು, ಏನ ಮಾಯಿ ಇದು! (ಪದ) ತಾನ ಹೆಂಣಾಗಿ – ಗಂಡ ಯೇಶ್ಯಾ ಹಾಕ್ಕೊಂಡು, ಸುಡಗಾಡದಾಗ ತೆಲಿಬುರಡಿ ಇಡಕೊಂಡು, ಏನೇನಾ ಮಾಡಿಬಿಟ್ಲು–ಏನ ಚೋಜಿಗ ಅದು? ಏನ ಇರಬೇಕ ಅದು! ನಮ್ಮ ದಳವಾಯಪ್ಪನ ಏನಾರ ಮರಳಮಾತಂಗಿ ಮಾಡಿದ್ಲೇನೋ ಅಂತೀನಿ! ಏನೇನೋ ಕಿಂಪ್ಯಾಗ ಊರಿದ್ದೇ ತಡಾ, ನಾಯಿ ಬಾಲಾ ಅಳ್ಳಾಡ್ಸಿಗೋತ

ಬಂದಾಂಗ, ಸುಮ್ಮನ ಮಾರಿ ಜೋಲ ಹಾಕ್ಕೊಂಡು ಸಪ್ಪಗ ಬಂದನಲ್ಲ! ಏನಿದ್ದೀತಪ ಅಂತಾ ಮಂತ್ರ! ಅದೇನಾದ್ರ ಗುಟ್ಟಿನ ಮಾತ ಇರಬೇಕ ಬಿಡು; ಆಕಿ ಯಾರಿಬೇಕಪ ಅಂತೀನಿ, ಆಕಿ ಪತ್ತಾ ಹಚ್ಚಿ ಈ ಗುಟ್ಟ ತಿಳಕೋಬೇಕು. ಇದಕ ನಮ್ಮ ಚನ್ನೀನ ಕೇಳಬೇಕ – ಯಾಕಂದ್ರ ಹೆಂಗಸರ ಯುಗತಿ ಹೆಂಗಸರಿಗೇ ಗೊತ್ತು! ನಮ್ಮ ಚನ್ನೀ ಅಂದರ ಸೊಟ್ಟಾಪಟ್ಟ ಇಲ್ಲ, ತ್ಯೋಡೆ ನೀರಿನಾಗ ಮುಣಗೋಕಿ ಅಲ್ಲ, ಆಂ ಮತ್ತೆ. ಇಂತಾ ಸುದ್ದ್ಯಾಗ ಅಂದ್ರ ಆಕಿ ಬಲು ಎತ್ತಿದ ಕೈ. ಇನ್ನಮ್ಯಾಲ ಹೋಗ್ತೀನ್ರಪಾ– ಎಲ್ಲ್ಯಾರ ಈ ಸುಡಗಾಡದಾಗಿನ ದೆವ್ವ ನಮಗ ಬಡಕೊಂಡರ! ಮತ್ತೆಲ್ಲಿ ಫಜೀತಿ–ನೂರ ನಿಂಬೆಕಾಯಿ, ಸಾವಿರ ಉಳ್ಳಾಗಡ್ಡಿ ಪೀಕ ಲಾಟಕ ಬಂದೀತು ಮತ್ತೆ. ಯಾರೇನ ಕಾಳಜಿ ಮಾಡಬ್ಯಾಡ್ರಿ, ನಾ ಸೂರಾ ಇರೋವರಿಗೂ ನಿಮಗ್ಯಾಕ ಚಿಂತಿ–ಈ ಗುಟ್ಟ ಮಾತ್ರ ಬೈಲಿಗಿ ತರ್ತೀನಿ. ಹೋಕ್ತೀನ್ರ್ಯಪಾ. ಈ ನಡರಾತ್ರ್ಯಾಗ ನಮ್ಮ ಚನ್ನೀ ಎಲ್ಲ್ಯಾರ ಕಾಬಕ್ಕ್ಯಗಿ ದಾರಿ ನೋಡಿಕೋತ ಕುಂತಿದ್ದಾಳು. (ಹೋಗುವನು)

## ದೃಶ್ಯ ೬. ಉಷಾಮಂದಿರ

[ಉಷೆಯ ನಿದ್ರೆಯಿಲ್ಲದ, ವಿರಹದಿಂದ ಬಳಲಿ ಬಾಡಿದ ಮುಖ, ಮೇಲ್ಮಹಡಿಯ ಶಯ್ಯಾಸನದಮೇಲಿಂದ ಎದ್ದು, ಸುತ್ತಲೂ ಸೋತ ಕಣ್ಣಿನಿಂದ ನಿರೀಕ್ಷಿಸುತ್ತಿರುವಳು. ಆಯಾಸಭಾರದಿಂದ ಮೈಮುರಿದು, ಆಕಳಿಸಿ, ಉದಯೋನ್ಮುಖನಾದ ಸೂರ್ಯ ದೇವನನ್ನು ನೆಟ್ಟದೃಷ್ಟಿಯಿಂದ ನೋಡಿ ಭಾವೋನ್ಮಾದಿತಳಾಗುವಳು. ವಿರಹವೇ ಹೊರಹೊಮ್ಮಿ ಬರುವಂತೆ ಅವಳ ಮುಖದಿಂದ ಹಾಡಿನ ರಾಗಾಲಾಪಗಳು ತೆರೆಯಂತೆ ಏಳುವವು. ಹಾಗೆಯೇ ಹಾಡುತ್ತ ಹಾಡುತ್ತ ಸೋಪಾನಗಳಿಂದ ಕೆಳಗೆ ಕಾಣುವ ಉಪವನದ ಕಡೆ ಬರುವಳು. ಅಲ್ಲಲ್ಲಿ ನಾನಾವಿಧ ಪುಷ್ಪಗಳನ್ನು ಹೊತ್ತು ನಿಂದ ಸಣ್ಣ ಸಣ್ಣ ಸುಕೋಮಲ ವೃಕ್ಷಬೃಂದ. ಮಧ್ಯರಂಗದಲ್ಲೊಂದು ಸ್ಫಟಿಕ ಶಿಲಾನಿರ್ಮಿತವಾದ ಪುಷ್ಕರಿಣಿ, ಸ್ವಚ್ಛ, ಶೀತಲ ಜಲದ ಮೇಲೆ ಕಮಲಗಳು ವಿಕಸಿತವಾಗಿ ನಗುವವು. ಉಷೆಯು ಅಲ್ಲಿಗೆ ಬಂದು, ಆಗ ತಾನೆ ಅರುಣಮಯ ರನ್ನಪರದೆಯನ್ನು ಮೆಲ್ಲಗೆ ಸರಿಸಿ, ನಗೆಮುಖದಿಂದ ಇಣಿಕಿ ಹಾಕುತ್ತಿರುವ ಹೊಂಬಣ್ಣದ ಬಾಲ ಸೂರ್ಯನನ್ನು ನೋಡಿ]

ಉಷಾ — ಪ್ರಾತಃಕಾಲ! ಸುಪ್ರಭಾತ ಸನ್ನಿವೇಶ! ಉಷಾ ಸಮಯ! ಉಷಾರಾಣಿಯು ಉದಯೋನ್ಮುಖನಾದ ಸೂರ್ಯದೇವನನ್ನು ಸಂಧಿಸಿ, ಉದಯಾದ್ರಿಯ ಮೇಲ್ಮಂದಿರದಲ್ಲಿ, ಉದಿತರಾಗದಿಂದ ಉನ್ಮತ್ತಳಾಗಿ, ಕ್ಷಿತಿಜದ ತಲ್ಪದ ಮೇಲೆ ತನ್ನ ಪ್ರಿಯ ಪ್ರಭಾಕರನನ್ನಪ್ಪಿ ನಗುತ್ತ, ನಲಿಯುತ್ತ ಉಯ್ಯಾಲೆಯಾಡುತ್ತಿರುವಳು. ಪ್ರಭಾಮಂಜ ಪರ್ಯಂಕದ ಮೇಲೊರಗಿದ ಪ್ರಭಾಕರನು. ಪ್ರಭಾತರಮಣಿಯೊಡನೆ ಪರಮಾನಂದದಿಂದ ಉಲಿಯುತ್ತಿರುವನು. ಉಷೆಯು ಉಬ್ಬಿ, ಉಬ್ಬಿ, ಉಲಿಯುತ್ತಿರುವಳು. ಉಷಾವನಿತೆ! ಇಷ್ಟೊಂದು ಉನ್ಮತ್ತಳಾಗಬೇಡ. ಈ ಉಷೆಯನ್ನು ನೋಡಿ ನಗಬೇಡ. ಸುಖವು ಸ್ಥಿರವಲ್ಲ. ನಿನ್ನಿನಿಯನನ್ನು ನೀನು ಅಪ್ಪಿ ಆನಂದಿಸುತ್ತಿರುವಾಗ ನನ್ನನ್ನು ನೋಡಿ ನೀನೇಕೆ ಹೀಯಾಳಿಸುವೆ? ಮೇಲಿದ್ದವರು ಕೆಳಗಿನವರನ್ನು ನೋಡಿ ಹೀಗೆಯೇ ಹೀಯಾಳಿಸುವರೆ? ಏನು! ನೀನು ಉಚ್ಚ ತರಗತಿಯಲ್ಲಿ–ನಾನು ನೀಚ ತರಗತಿಯಲ್ಲಿ! ಸಾಕುಬಿಡೆ–ನಿನ್ನ ಸವತೀ ಮತ್ಸರ. ನೀನು.. ನೀನು ನೀಚಳು! ಪರರ ಸುಖಕ್ಕೆ ಕಲ್ಲೆರಚುವ ನೀನು ನೀಚಳು. (ಪುಷ್ಕರಿಣಿಯ ಸಮೀಪಕ್ಕೆ ಹೋಗಿ) ಅಯ್ಯೋ ಮುಗ್ಧಕಮಲೆ, ನೀನೆಷ್ಟು ಮಂದಮತಿಯೆ–ಬುದ್ಧಿಯಿಲ್ಲ ನಿನಗೆ! ಅವನು... ಆ ಪ್ರಭಾಕರನು... ಅವಳನ್ನು..... ಅಲ್ಲಿ–ಅಪ್ಪಿ ಆನಂದಿಸುತ್ತಿರುವಾಗ... ನೀನಿಲ್ಲಿಯೇ ಹಸನ್ಮುಖಿಯಾಗಿ ನಗುತ್ತಿರುವೆಯಲ್ಲವೆ–ಎಂತಹ ಹುಚ್ಚು! ಅವನನ್ನು....ಅಲ್ಲಿ... ಆಕಾಶದಲ್ಲಿರುವವನನ್ನು ನೋಡಿ, ಇಲ್ಲಿ...ಜಲತಲದಲ್ಲಿರುವ ಇಲ್ಲಿಯ....ಈ ಕಮಲೆಯ ಹುಚ್ಚು! ಅಲ್ಲಿರುವವನನ್ನು ಮೆಚ್ಚಿ ಇಲ್ಲಿರುವವಳು ಹುಚ್ಚಳಾಗಬೇಕೆ? ಎಂತಹ ಹುಚ್ಚು!.... ಉಷೆಯ ಹುಚ್ಚು.... ಕನಸಿನ ಹುಚ್ಚು....ಸುಳ್ಳು...ಸ್ವಪ್ನಸೃಷ್ಟಿಯ ಹುಚ್ಚು!.... (ಹಹಹಹಹ) ನನ್ನ ಪ್ರಭಾಕರ...! ಉಷಾರಾಣಿಯ ಪ್ರಭಾಕರ... ಉದ್ದಾಮವೀರ ಅನಿರುದ್ಧ ದೇವ! ಸುಖದ ಮಿಂಚಿನ ಬೆಳಗು... ಮೋಹನಮೂರ್ತಿಯೆ? ಮನದಲ್ಲಿ ನೆನೆದರೂ ಕನಸಿನಲ್ಲಿ ಬರಬಾರದೆ!....ಕನಸು.....ಕನಸು....! ಕನಸು ನನಸಾಗಬಹುದೇ...? ನಿಷ್ಠುರವಿಧಾತಾ, ನ್ಯಾಯವಿಲ್ಲ ನಿನ್ನಲ್ಲಿ! ನಿಷ್ಕರುಣಿ ವಿಧಿಯೆ ನನ್ನನ್ನೇಕೆ ಕಾಡುವೆ–ನನ್ನ ಹೃದಯಾರವಿಂದವು ಬಾಯಿದೆರೆದು ಬಾ, ಬಾ ಎಂದು ಬಾರಿಬಾರಿಗೂ ಕರೆದರೂ ಬರಲಾರೆಯಾ? ಕಮಲಾಕರಾ–ಮೊರೆಯಿಡುವ ಕಮಲಿನಿಯನ್ನು ಸಂತೈಸಲು ಬರಲಾರೆಯಾ?

(ಕಮಲಪುಷ್ಪದ ಕಡೆ ನೋಡಿ) ... ಸುಮ್ಮನಿರು ಕಮಲೆ–ಸುಮ್ಮನೆ ಮೊರೆ ಇಟ್ಟು ಕೊರಗ ಬೇಡ–ಮೊದಲೇ ಅವನು ಪ್ರಖರನು. ಚಂಡಕರನು! ಚಂಡಿತನದಲ್ಲಿಯೇ ಅವನಿಗೆ ಚಿನ್ನಾಟ!.... ಸಾಕು ದಿನಕರಾ...ಬನ್ನಬಡುವವರನ್ನು ಕಂಡರೆ ನಿನಗೆ ಚಿನ್ನಾಟವೆ?.... ಅಯ್ಯೋ ಕಮಲೆ... ಮತ್ತೂ ಬಾಯಿದೆರೆಯುವೆಯಾ–ಬಾ, ಬಾ ಎಂದು ಕರೆದರೆ ಅವನು ಬರಲಾರನು! ಉಂ ಹೂಂ.......ಅವನು ಬರಲಾರನು....

**ಚಿತ್ರಲೇಖ** – (ಒಮ್ಮಿಂದೊಮ್ಮೆ ಪ್ರವೇಶಿಸಿ) ಹಾಂ ಹಾಂ, ಬರುವನು, ಬಂದೇ ಬರುವನು. ಬಾ, ಬಾ ಎಂದು ನಂಬಿ ಕರೆದರೆ ಓಹೋ ಎಂದು ಓಡಿ ಬರುವನು.

**ಉಷಾ** – ಉಂ ಹೂಂ, ನೀನು ಸುಳ್ಳು ಹೇಳುವಿಯಮ್ಮಾ–ಇಲ್ಲಿ ನೋಡು, ಇದೋ ಈ ಕಮಲೆಯು ಕರೆದರೂ ಅದೋ...ಅವನು ಬರಲೊಲ್ಲನು.

**ಚಿತ್ರಲೇಖ** – ಇದೋ ದೇವಿ, ಆ ಕಮಲಾಕರನು ಬಂದುದಕ್ಕಾಗಿಯೇ ಈ ಕಮಲಿನಿಗೆ ಇಷ್ಟು ಸಂತೋಷ! ಎಷ್ಟು ಹಸನ್ಮುಖಿಯಾಗಿ ನಗುತ್ತಿರುವಳು...ಇದೋ ಎಂತಹ ವಿಕಾಸವದನ! ಹೂಂ ದೇವಿ, ಈ ವದನ ಕಮಲವು ನಗುವನ್ನು ಸೂಸಲಿ! ಹೂಂ, ಒಮ್ಮೆ ನೋಡವೆನು, ಸೂಸಲಿ!

**ಉಷಾ** – ಹುಂ ಹುಂ ಹೂಂ, ಹೀಗೆ ಕೆಣಕಬೇಡ ಸಖೀ, ಕಷ್ಟದಲ್ಲಿ ನನ್ನನ್ನು ನಿರರ್ಥಕವಾಗಿ ಚುಚ್ಚಿ ಕಾಡಬೇಡ.

**ಚಿತ್ರಲೇಖ** – ಕಮಲಾಕರನು ಬಂದರೂ ಈ ಕಮಲವರಳಬಾರದೇ?

**ಉಷಾ** – ಎಲ್ಲಿ...! ಎಲ್ಲಿ ಸಖೀ....ಎಲ್ಲಿರುವನು ನನ್ನ ಕಮಲಾಕರನು!

**ಚಿತ್ರಲೇಖ** – ಅಲ್ಲಿ.....!

**ಉಷಾ** – (ಓಡಿಹೋಗಿ) ಎಲ್ಲಿ ಸಖೀ!

**ಚಿತ್ರಲೇಖ** – ಅಲ್ಲಿ ಎಂದರೆ ಇಲ್ಲಿಗೇಕೆ ಬಂದೆ...?

**ಉಷಾ** – ಅಲ್ಲಿ...! ಎಲ್ಲಿ...! ಕಾಣಿಸಲೊಲ್ಲನು...ಉಹೂಂ ಕಾಣಿಸಲೊಲ್ಲನು....ಎಲ್ಲಿಯೂ ಕಾಣಿಸುವುದಿಲ್ಲವಲ್ಲ...! ಸುಳ್ಳೇಕೆ ಹೇಳುವಿಯಮ್ಮಾ!

ಚಿತ್ರಲೇಖ — ಇಲ್ಲಿ ಸಖೀ....!

ಉಷಾ — (ಅವಳ ಕೈಗಳನ್ನು ಗಟ್ಟಿಯಾಗಿ ಹಿಡಿದು) ಎಲ್ಲಿ ಸಖೀ — ಎಲ್ಲಿ ಹೇಳು

ಚಿತ್ರಲೇಖ — ನಿನ್ನ ಮಾನಸಮಂದಿರಲ್ಲಿ!

ಉಷಾ — ಛೀ. ಹೋಗು, ಹೂಂ ಹೊರಡು ಹೋಗು ನಡೆ.... (ಹುಸಿಮುನಿಸಿನಿಂದ ತೊಡೆಯುವಳು)

ಚಿತ್ರಲೇಖ — ಹೋಗಲೋ?... ನಾನು ಹೋಗಲೋ....ಹಾಗಾದರೆ ನಿನ್ನ ಪ್ರಿಯಕರನು ನಿನಗೆ ಬೇಡವೆ?....ಹೋಗುತ್ತೇನೆ. (ಹೋಗ ಹತ್ತುವಳು)

ಉಷಾ — ಬೇಡ, ಬೇಡ ಸಖೀ—ಇಲ್ಲಿ ಬಾ. ಎಲ್ಲಿ....? ತೋರು—ಮನೋಹರನು ಬಂದಿರುವನೆ...?

ಚಿತ್ರಲೇಖ — ಹೌದು ಬಂದಿರುವನು!

ಉಷಾ — ಎಲ್ಲಿ, ಎಲ್ಲಿ..! ನಿಮ್ಮರಮನೆಯಲ್ಲಿಯೆ? ದೇವಾಲಯದಲ್ಲಿಯೆ? ಅಥವಾ ಉದ್ಯಾನವನದಲ್ಲಿಯೆ?

ಚಿತ್ರಲೇಖ — ನಿಮ್ಮರಸನು ನಮ್ಮರಮನೆಗೇಕೆ ಬರುವನು?

ಉಷಾ — ಅಂದರೆ ದೇವಾಲಯದಲ್ಲಿರುವನೆ?

ಚಿತ್ರಲೇಖ — ಈ ದೇವಿಯನ್ನು ಬಿಟ್ಟು ಆ ದೇವನಲ್ಲಿಗೇಕೆ ಹೋಗುವನು!

ಉಷಾ — ಹಾಗಾದರೆ ವನದಲ್ಲಿರುವನೆ?

ಚಿತ್ರಲೇಖ — ಛೆ, ವನದಲ್ಲಿರುವುದಕ್ಕೆ ಅದೇನು ಕಾಡುಮೃಗವೇ?

ಉಷಾ — ಇಲ್ಲಿಯೂ ಇಲ್ಲ.......ಅಲ್ಲಿಯೂ ಇಲ್ಲ............ಮತ್ತೆಲ್ಲಿರುವನು? ಸುಳ್ಳು ಹೇಳುವಿ.... ಹೋಗು, ಹೂಂ ಹೋಗು.

ಚಿತ್ರಲೇಖ — ನೀನು ಬಾರೆಂದು ಕರೆದರೆ ಮಾತ್ರ ಬರುವನು

ಉಷಾ — ಛೀ ಹೋಗು.... ಹುಂ ಹೊರಡು

ಚಿತ್ರಲೇಖ — ಇಲ್ಲ ಸಖೀ ನಿಜವಾಗಿ ಹೇಳುತ್ತೇನೆ, ನಂಬು. ನಿನ್ನ ಮಾನಸ ಮಂತ್ರವನ್ನು ಜಪಿಸು—ಅವಶ್ಯ ಬರುವನು

**ಉಷಾ –** ನಿಜವೇ–ಸತ್ಯವೇ?

**ಚಿತ್ರಲೇಖ –** ಅಕ್ಷರಶಃ ಸತ್ಯ

**ಉಷಾ –** ಹೂಂ, ಹಾಗಾದರೆ ಕಣ್ಣು ಮುಚ್ಚಿಕೊಳ್ಳಲೊ?

**ಚಿತ್ರಲೇಖ –** ನಾನು ಮುಚ್ಚುತ್ತೇನೆ. (ಕಣ್ಣು ಮುಚ್ಚಿ) ಸಾಗಲಿ ಪಾರಾಯಣ

**ಉಷಾ –** ಮನಮೋಹನ.....ಬಾ....ಬಾ....ಬಾ....

**ಚಿತ್ರಲೇಖ –** ಜಯ ಶಂಕರಿ, (ಟ್ರಾನ್ಸಫರ್ ಸೀನರಿ, ಉಷಾಮಂದಿರದಲ್ಲಿ ಅನಿರುದ್ಧನು ಶಯ್ಯೆಯ ಮೇಲೆ ಮಲಗಿರುವ ದೃಶ್ಯ) ಇದೊ ಬಂದನು

**ಉಷಾ –** ಬಂದನೆ! ನಿಜವಾಗಿಯೂ ಬಂದನೆ, ಅಹಹಹ....ಬಂದ! ಬಂ....(ಉಲ್ಲಾಸಭರಿತಳಾಗಿ, ಮನದಣಿಯುವಂತೆ ನೋಡಿ ನೋಡಿ, ಪದ ಹಾಡುವಳು) ಚಿತ್ರಲೇಖ, ಗೆಳದಿ, ಎಂತಹ ವಿಚಿತ್ರಮತಿಯೆ, ನೀನು. ನನ್ನ ಸ್ವಪ್ನದ ಸುಖ ಸಾಮ್ರಾಜ್ಯವನ್ನು ಜಾಗೃತಪ್ರಪಂಚಕ್ಕಿಳಿಸಿದ ಜಾಣೆ! ಸಖೀ ನಿನ್ನಲ್ಲಿ ಅನಂತ ಧನ್ಯವಾದಗಳು. ಎನ್ನಾನಂದಚಕೋರ ಚಂದ್ರಮನನ್ನು, ಎನ್ನ ಹೃದಾಯಾಂಬುಜ ಭಾಸ್ಕರನನ್ನು ತೋರಿ, ನನಗೆ ಚಿರ ಸುಖವನ್ನು ಕರುಣಿಸಿದೆ. ಎಂತಹ ಮನೋಹರ ಮೂರ್ತಿಯಿದು! ಅಹಹಹ ಅಮ್ಮಾ...ಎಂತಹ ಸುಲಲಿತ ಗಾತ್ರ....! ಸುಹಾಸ ವದನ! ನನ್ನ ಹರ್ಷಾಂಕುರವು ಮೊಳೆತು, ಚಿಗುರಿ, ಮರವಾಗಿ ಪಲ್ಲವಿಸಿತು. ಆನಂದವು ವಿದ್ಯುದ್ವೇಗದಿಂದ, ಅಂಗಗಳಲ್ಲಿ ಸಂಚರಿಸಿ, ಹೃದಯ ಪಾತ್ರೆಯನ್ನೇ ತುಂಬುತ್ತಿರುವದು. ಅಹಹಹ, ಮನವನ್ನು ಧನ್ಯತೆಯು ಆವರಿಸಿ, ಆಶಾಲಹರಿಯು ಆನಂದದಲ್ಲಿ ಪರಮಾನುಭವವನ್ನು ಹೊಂದುತ್ತಿರುವದು. ಸಖೀ–ಇಲ್ಲಿ ಬಾ. ಎಚ್ಚರಿಸಲೊ? ಎನ್ನಾಳ್ದನೆ ಎದ್ದೇಳು ಎಂದು ಹೇಳಲೋ...! (ನಾಚಿ)....ಛೆ, ಬೇಡ, ಉಷೆಯು ಹುಚ್ಚಿಯೆಂದು ಹಿಯಾಳಿಸುವನೇನೋ, ನಿರ್ಲಜ್ಜೆ, ಎಂದು ಜರಿಯುವನೋ ಏನೋ? ಹುಂ, ಹೂಂ ನನ್ನರಮನೆಯಲ್ಲಿ ಸಿಕ್ಕು ನನ್ನನ್ನೆಂದಿಗೂ ಜರಿಯಲಾರನು. ಅಹಹಹ, ನನ್ನ ಹೃದಯೇಶ್ವರನ ಮುಖಾರವಿಂದದಿಂದ ಎಂತಹ ಸುಮನೋರಮ್ಯ ಶಾಂತಿಯು ತುಂಬಿ ಸೂಸುತ್ತಿರುವದು. ನಾನಿನ್ನು ತಡೆಯಲಾರೆ... ಎಚ್ಚರಿಸುವೆನು...ಎಚ್ಚರಿಸಿಯೇ ಬಿಡುವೆನು... (ಅವನ ಸಮೀಪಕ್ಕೆ

ಹೋಗಿ) ಸಖೀ ಎಚ್ಚರಿಸಲಾ... (ದಿಟ್ಟಿಸಿ ಮಂಚದ ಮೇಲಿರುವ ತಲೆಪರಟೆಯನ್ನು ನೋಡಿ ಬೆಚ್ಚಿ ಹೌಹಾರಿ) ಹಾಯ್.... ಅಯ್ಯೋ...

**ಚಿತ್ರಲೇಖ** — ಏನು ಸಖೀ, ಹೀಗೇಕೆ ಗಾಬರಿಗೊಳ್ಳುವೆ? ಏನಾಯಿತು?

**ಉಷಾ** — ಹಾಳಾಯಿತು.... ನನ್ನ ಸರ್ವಸ್ವವೂ ಹಾಳಾಯಿತು.... (ನಡಗುತ್ತ) ಇದೋ, ಇದೋ.... ಇಲ್ಲಿ ಬಾ, ಮಾನವನ ಮರುಳು ತಲೆ! ಎಲುವಿನ ಬುರುಡೆ! ಸ್ಮಶಾನದಲ್ಲಿರುವ ತಲೆಪರಟೆ....! ನನ್ನ ಮಂಗಲ ಮೂರ್ತಿಯ ಮಂದ ಮೇಲೆ! ಎಂತಹ ವಿಕಟ ಲೀಲೆ! ಭಯಂಕರ ಚಿತ್ರ! ಒಳನಟ್ಟ ಕಣ್ಣುಗಳಿಂದಲೂ, ಹೊರಬಿದ್ದ ಹಲ್ಲುಗಳಿಂದಲೂ ವಿಕಟವಾಗಿ ನಗುತ್ತಿರುವದು, ಅಯ್ಯೋ.... ನನ್ನ ಪ್ರೇಮರತ್ನವನ್ನಪಹರಿಸಲು ಬಂದ ಭೂತವೆ! ಥೂ, ಪಿಶಾಚಿಯೆ, ದೂರ ಸಾರು.

**ಚಿತ್ರಲೇಖ** — ಸುಮ್ಮನಿರು ದೇವಿ, ಶಾಂತಳಾಗು. ಅದೇ ನೀರಸ ಬುರುಡೆಯೇ ನಿನಗೆ ಈ ರಸಮಯ ಸೃಷ್ಟಿಯನ್ನು ಕಲ್ಪಿಸಿ ಕೊಟ್ಟಿರುವುದು.

**ಉಷಾ** — ಓಹೋ ಹೀಗೋ, ಹಾಗಾದರೆ ಇದು ನಿನ್ನ ಇಂದ್ರಜಾಲವೋ? ಎಚ್ಚರಿಸು ಸಖಿ.

**ಚಿತ್ರಲೇಖ** — ಅವನೀಗ ಮಂತ್ರಮುಗ್ಧನಾಗಿದ್ದಾನೆ—ಎಚ್ಚರವಾಗಲಾರನು.

**ಉಷಾ** — ಎಚ್ಚರಿಸು ಸಖೀ, ಬೇಗ ಎಚ್ಚರಿಸು.

**ಚಿತ್ರಲೇಖ** — ಚಂಚಲತೆಯನ್ನು ನೀಗು ಸಖೀ, ಸಾವಧಾನದಿಂದ ನಿರೀಕ್ಷಿಸು. ಇದೀಗ ಎಚ್ಚರಿಸುವೆನು. ನೀನೀಗ ಸ್ವಲ್ಪ ಮರೆಯಾಗು — ಒಂದು ಚಮತ್ಕಾರವಾದ ಸೃಷ್ಟಿಯನ್ನೇ ನಿರ್ಮಿಸೋಣ.

**ಉಷಾ** — ಹೌದು, ಹೌದು, ಸಖೀ — ನೀನು ಬಲು ಜಾಣೆ. (ಉಷೆಯು ಮರೆಯಾಗುವಳು. ಚಿತ್ರಲೇಖೆಯು ಮಂಚದ ಮೇಲಿದ್ದ ತಲೆಬುರುಡೆಯನ್ನು ಬಾರಿಸಿ ತೆಗೆದೊಗೆಯುವಳು. ಉಷೆಯು ಮರೆಯಲ್ಲಿ ನಗುವಳು. ಚಿತ್ರಲೇಖೆಯು ಸುಮ್ಮನಿರೆಂದು ಸನ್ನೆಗೈಯುವಳು. ಆಮೇಲೆ ಮಂತ್ರವನ್ನು ಪಠಿಸಿ, ಉದ್ದಕ್ಕೂ ಅನಿರುದ್ಧನ ಆಪಾದಮಸ್ತಕದವರೆಗೂ ಕೈಯೆಳೆದು ಎಚ್ಚರಿಸಿ ಮರೆಯಾಗುವಳು. ಅನಿರುದ್ಧನು ಮೆಲ್ಲಗೆ ನಿದ್ರೆಯಿಂದ ಎಚ್ಚತ್ತು, ಕಣ್ತೆರೆದು, ಆಕಳಿಸಿ, ಮೈಮುರಿಯುತ್ತ—ನಾರಾಯಣ, ವಾಸುದೇವ,

ಮುರಾಸುರ ಮರ್ದನ, ಗೋವಿಂದ ಎಂದು ಎದ್ದು ಕಣ್ಣುಜ್ಜಿಕೊಂಡು, ಸುತ್ತಲೂ ನಿರೀಕ್ಷಿಸಿ, ದಿಗ್ಭ್ರಮೆಗೊಂಡು, ದಿಟ್ಟಿಸಿ ನೋಡುತ್ತ, ಚತುರ್ದಿಕ್ಕುಗಳನ್ನು ಅವಲೋಕಿಸುತ್ತ ತನ್ನಲ್ಲಿ ತಾನೇ)

**ಅನಿರುದ್ಧ** — ಗಾಢನಿದ್ರೆ! ಸುಪ್ತಾನಂದವು ಬ್ರಹ್ಮಾನಂದವನ್ನು ಸರಿಹೋಲುವದು. ನಿದ್ರಾಂಗನೆಯ ದೃಢಾಲಿಂಗನದಲ್ಲಿ ಎಂತಹ ಸಮ್ಮೋಹಕ ಶಾಂತಿ! ಇಂದು ನಿಶಾದೇವಿಯು ತೋರಿದ ರಮಣೀಯ ರಮ್ಯತೆ! (ಪುನಃ ಕಣ್ಣುಜ್ಜಿ ನೋಡುವನು.)

**ಚಿತ್ರಲೇಖ** — (ಮರೆಯಲ್ಲಿ ಉಷೆಯನ್ನು ಕೆಣಕಿ, ಜನಾಂತಿಕ) ನಿಶಾದೇವಿಯು ಕೊಟ್ಟ ನಿದ್ರಾ ನೆಮ್ಮದಿಗಿಂತಲೂ ನೂರಾರು ಪಟ್ಟು ಮಿಗಿಲೆನಿಸುವ ಈ ಉಷಾದೇವಿಯು ರೂಪ ರಮ್ಯತೆಯನ್ನು ನೋಡಿ ನಿಜಾನಂದವನ್ನು ಕೂಡಾ ನಿರಾಕರಿಸಬಲ್ಲೆ!

**ಉಷಾ** — ಚುಂ....! (ಎಂದು ಸುಮ್ಮನಿರಲು ಸನ್ನೆಗೈಯುವಳು)

**ಅನಿರುದ್ಧ** — (ಎಚ್ಚರಗೊಂಡು ಸುತ್ತಲೂ ನಿಟ್ಟಿಸಿ) ಏನಿದು! ನಾನು ಮಲಗಿರುವೆನೋ? ಎದ್ದಿರುವೆನೋ?..... ದ್ವಾರಕಾ ನಗರದಲ್ಲಿ ಉತ್ತರಾಭಿಮುಖವಾಗಿದ್ದ ನನ್ನ ಮಂದಿರದ ದ್ವಾರವನ್ನು, ಪೂರ್ವಾಭಿಮುಖವಾಗಿ ಯಾರು ತಿರುಗಿಸಿಟ್ಟರು! ಇದು.... ನನ್ನ ಅರಮನೆಯೆ....? ಅಲ್ಲ! ನನ್ನ ಮಂದಿರದಲ್ಲಿ ನನ್ನ ಪಿತಾಮಹಾನ ಭಾವಚಿತ್ರವು ಹೊಳೆಯುತ್ತಿತ್ತು.... ಈಗ ಅದು ಎಲ್ಲಿ....? ಎಲ್ಲಿಯೂ ಕಾಣುವುದಿಲ್ಲ. ನನ್ನ ಮಂದಿರವು ಇಷ್ಟು.... ಇಷ್ಟು... ಭ'ವ್ಯವಾಗಿರಲಿಲ್ಲ!....ಏನು? ನಾನು ದ್ವಾರಕೆಯಲ್ಲಿರುವೆನೆ?.............ನಾನು ನಿಜವಾಗಿಯೂ ಯಾದವ ವಂಶದ ರತ್ನವೋ........? (ತನ್ನನ್ನು ತಾನೇ ನೋಡಿಕೊಂಡು, ಸಂಶಯದ ಸ್ವರದಲ್ಲಿ) ಹೌದು, ನಾನು ಅನಿರುದ್ಧ!........... ನಿಜವಾಗಿಯೂ ಅನಿರುದ್ಧ!..... ಇದೇನು? ವಿಸ್ಮೃತಿಯೋ ಅಥವಾ ಕನಸಿನಲ್ಲಿಯ ಕನಸೋ..... ಅಲ್ಲ......ಸ್ವಪ್ನವಲ್ಲ......ನಾನು ಮಾತಾಡುತ್ತಿದ್ದೇನೆ......ಇದೋ ನಾನೇ ಮಾತಾಡುತ್ತಿದ್ದೇನಲ್ಲವೆ.......?ಸ್ವಪ್ನದಲ್ಲಿಯ ಜಾಗೃತವೇ? ಜಾಗೃತದಲ್ಲಿಯ ಸವಪ್ನವೆ?........ಸುಷುಪ್ತಿಯನ್ನು ದಾಟಿದ್ದೇನೆ.......ಸ್ವಪ್ನವೂ ಅಲ್ಲ.......... ಜಾಗೃತವೂ ಅಲ್ಲ........ಅಂದರೆ

ಏನು....ಏನೆಂಬುದೇ ತಿಳಿಯದಲ್ಲ!........(ಧಿಗ್ಗನೆ ಎದ್ದು ಹಾಸಿಗೆಯನ್ನು ನೋಡಿ) ಹೌದು! ಇದೇ ನನ್ನ ತೀವಾಸಿಗೆ.....ಇದೇ ನನ್ನ ಪರ್ಯಂಕ.....ಇದೇ ನನ್ನ ಪೀತಾಂಬರ! (ಹಾಸಿಗೆ ಬುಡದಿಂದ ಖಡ್ಗವನ್ನು ತೆಗೆದುಕೊಂಡು ದಿಟ್ಟಿಸಿ) ಹೌದು. ಇವನೇ ನನ್ನ ಖಡ್ಗರಾಜ! ಖಡ್ಗರಾಜ.....(ಸುತ್ತಲೂ ದಿಟ್ಟಿಸಿ ನೋಡಿ)......ಇದೆಂತಹ ಭ್ರಾಮಕ ಸೃಷ್ಟಿ! ಸೃಷ್ಟಿಯು ನನ್ನನ್ನು ವಂಚಿಸುತ್ತಿರುವದು ಅಥವಾ ನನ್ನ ಕಣ್ಣುಗಳೇ.....?(ಕಣ್ಣುಗಳನ್ನು ವಿಶಾಲವಾಗಿ ತೆಗೆದು) ಏನಿದು! ರತ್ನಖಚಿತ ಪೀಟಗಳು! ರಾರಾಜಿಸುವ ಸುಖಾಸನಗಳು! ರಜತಕರಂಡಗಳು..ರಮಣೀಯವಾದ ಭಾವಚಿತ್ರಗಳು! ರಮ್ಯವಾದ ಮಣಿಮಯ ಮಂಟಪ! ನರರು ಈ ವೈಭವವನ್ನು ಉಪಭೋಗಿಸಲಾರರು! ಇಂದ್ರನ ವಿಲಾಸಮಂದಿರವೋ? ಗಂಧರ್ವರ ಗಾಯನಶಾಲೆಯೋ? ರಂಭೆಯ ಕ್ರೀಡಾಂಗಣವೋ..? ಉಂ ಹೂಂ–ನಂಬಲಾರೆ, ನನ್ನನ್ನಾರು ಇಲ್ಲಿಗೆ ತಂದರು..... ಎಲ್ಲಿ ನೋಡಿದರೂ ಭ್ರಾಂತಿ!....ದಿಗ್ಭ್ರಾಂತಿ!......ಇದಾರ ಭಾವಚಿತ್ರ! ಅಹಹಹ, ಎಂತಹ ರಮಣೀಯ ರೂಪರಮ್ಯತೆ!....ರಮೆಯೋ, ಉಮೆಯೋ......? ಉಂ ಹೂಂ, ಯಾರೂ ಸರಿಹೋಗಲಾರರು. ಈ ರೂಪ ಮೋಹಕ ರಮ್ಯತೆ! ರಮಣೀಯ ಮೋಹಕ ರೂಪ! (ಪದ) ರಮಣಿಯೆ, ರಾಜೀವನಯನೆಯೆ, ರತ್ನದ ದೀಪ್ತಿಯೆ....ನೀನಾರು ಹೇಳು?....ಹೇಳು.....! (ಸಮೀಪಕ್ಕೆ ಹೋಗಿ, ಇನ್ನೊಂದು ಭಾವಚಿತ್ರವನ್ನು ನೋಡಿ ಬೆಚ್ಚಿ) ಏನಾಶ್ಚರ್ಯ!... ಚಿತ್ರಮಯ ಪ್ರಪಂಚ! ಈ ಭವ್ಯ ಮಂದಿರದಲ್ಲಿ ನನ್ನ ಭಾವಚಿತ್ರವೇಕೆ?......ಹೌದು.....ನಾನೇ.....ಅನಿರುದ್ಧನು....ನಾನೇ........? ಇದೇನು? ಅತಳವೋ? ಭೂತಳವೋ? ಪಾತಾಳವೋ......ತಿಳಿಯದು.....ತಿಳಿಯದು.....ನನ್ನ ಬುದ್ಧಿಗೆ ಭೂತ ಬಡಿದಿದೆಯೇ?–ಇದೇನು, ಹೀಗೆ ಹಸುಗೂಸಿನಂತೆ ಹಂಬಲಿಸುತ್ತ ಕೂಡುವದು ಪುರುಷಸಿಂಹನ ಲಕ್ಷನವಲ್ಲ.... ಇಲ್ಲಿಂದ ಪಾರಾಗಲೇಬೇಕು....ಖಡ್ಗರಾಜನೆ, ಸಹಾಯ ಮಾಡು–ಇಂದು ನೀನೇ ನನ್ನನ್ನು ರಕ್ಷಿಸು! (ಖಡ್ಗವನ್ನು ಹಿಡಿದು ಮುನ್ನುಗ್ಗುವಾಗ, ಚಿತ್ರ ಲೇಖೆಯು ಎದುರಿಗೆ ಬಂದು ನಿಂದು)

ಚಿತ್ರಲೇಖ – ನಿಲ್ಲು ಚೋರನೆ–ಎಲ್ಲಿಗೆ ಪಾರಾಗುವೆ?

**ಅನಿರುದ್ಧ** – (ಅಪ್ರತಿಭನಾಗಿ) ನಾನು ಚೋರನೆ?

**ಚಿತ್ರಲೇಖ** – ಪರಗೃಹದಲ್ಲಿ ಪ್ರವೇಶಿಸುವವನು ವೀರನೋ...........

**ಅನಿರುದ್ಧ** – ನಾನು ಪ್ರವೇಶಿಸಿಲ್ಲ

**ಚಿತ್ರಲೇಖ** – ಹಾಗಾದರೆ ಇಲ್ಲೇಕೆ ನಿಂತಿರುವೆ?

**ಅನಿರುದ್ಧ** – (ಭ್ರಮಿಷ್ಟನಂತೆ) ಹೌದು – ಇಲ್ಲಿಯೇ ನಿಂತಿರುವೆನು

**ಚಿತ್ರಲೇಖ** – ಏಕೆ?

**ಅನಿರುದ್ಧ** – ನನಗಾವದೂ ತಿಳಿಯದು! ಇದಾರ ಗೃಹ–ಬಾಲೆ? ದಯವಿಟ್ಟು ಹೇಳುವೆಯಾ?

**ಚಿತ್ರಲೇಖ** – ಇದು ಶೋಣಿತಸಾಮ್ರಾಜ್ಞಿಯ ಸುಖೋಪಭೋಗವಿಲಾಸವಾದ ಶಯ್ಯಾಗೃಹ!

**ಅನಿರುದ್ಧ** – ನಾನೀಗ ಶೋಣಿತರಾಜಧಾನಿಯಲ್ಲಿಯೇ–ವೈರಿಯ ಅಂತಃಪುರದಲ್ಲಿ ನಾನೀಗ ಸೆರೆಯಾಳುವೆ?......ಎಲ್ಲಿ ಯಾದವ ರಾಜ್ಯ–ಎಲ್ಲಿ ಶೋಣಿತ ರಾಜ್ಯ! ಅತ್ಯಾಶ್ಚರ್ಯ! (ಆವೇಶದಿಂದ) ಯಾರು ನನ್ನನ್ನು ಸೆರೆಗೈಯುವವರು! ಖಡ್ಗರಾಜನೆ ಸಿದ್ಧನಾಗು.

**ಚಿತ್ರಲೇಖ** – ಸಿದ್ಧನಾಗು! ಸಖೀ ಈ ವೀರನನ್ನು ಸೆರೆಹಿಡಿದು ನಿನ್ನ ಸ್ವಾಧೀನಪಡಿಸಿಕೊ...?

**ಉಷಾ** – (ಆನಂದಮುದ್ರೆಯಿಂದ) ನಾಥಾ....! ಇಷ್ಟೇಕೆ ರೋಷಾವೇಶ!

**ಅನಿರುದ್ಧ** – ಎಲ್ಲಿ ನೋಡಿದರೂ ಚಿತ್ರವಿಚಿತ್ರ! ಇದೇನು ಇಂದ್ರಜಾಲವೋ ಅಥವಾ ನನ್ನ ಮತಿಭ್ರಾಂತಿಯೋ....? ವೈರಿಯ ಗೃಹದಲ್ಲಿ ಅನಾಥನಾಗಿ ಸಿಕ್ಕುಬಿದ್ದ ನನ್ನನ್ನು ಸನಾಥನನ್ನಾಗಿ ಮಾಡಿಕೊಂಡ ಈ ಅಪೂರ್ವ ಸುಂದರಿ ಯಾರು....? ಸುಂದರೀ.... ಸುಮನೋಹರೀ....ಸುದತೀಮಣಿ..........ನನ್ನ ಭಾಗ್ಯವನದ ಕೋಕಿಲೆ! ವೀರಾಧಿವೀರರನ್ನು ಸೆರೆಗೈಯಬಲ್ಲ ಅನಿರುದ್ಧನ ಖಡ್ಗ ರಾಜನು(ಖಡ್ಗವನ್ನು ದೂರ ಬಿಸಾಡಿ) ..........ಖಡ್ಗರಾಜನೆ, ವಿಶ್ರಾಂತಿಯನ್ನು ಹೊಂದು(ಪದ) ಇದೋ ಇಂದು ಬೇಕಾದ ಹಾಗೆ ಸೆರೆಯಾಳಾಗಿದ್ದೇನೆ–ಬೇಕಾದ ಹಾಗೆ ಈ ಮುದ್ದು ಕರಪಲ್ಲವಗಳಿಂದ ಶಿಕ್ಷಿಸು. ನೀನಾರೆಂಬುದನ್ನು ಹೇಳು. ನಿನ್ನ ಈ

ಅತಿ ನೂತನ ಸೌಂದರ್ಯರಾಶಿಯು ನನ್ನನ್ನು ದಿಗ್ಭ್ರಾಂತನನ್ನಾಗಿ ಮಾಡಿದೆ. ಹೇಳು, ಒಮ್ಮೆ ಹೇಳು! ನೀರಾರೆಂಬುದನ್ನು ಹೇಳು. (ಉಷೆಯು ನಾಚಿ ನಿಲ್ಲುವಳು)

**ಚಿತ್ರಲೇಖ** – ಸಾಸಿರದೋಳಿನ ಸಬಲ ಸಂಭ್ರಮವನ್ನು ಪಡೆದ ಸಾಮ್ರಾಟ ಬಾಣಾಸುರನ ಸುಕುಮಾರೀ ರತ್ನ!

**ಅನಿರುದ್ಧ** – (ಆಶ್ಚರ್ಯದಿಂದ) ದೈತ್ಯಕನ್ಯೆಗೆ ಈ ಅಪೂರ್ವ ಸೌಂದರ್ಯ ರಾಶಿ..........! ಅನುಪಮ ಮನಮೋಹಕ ರೂಪಮುದ್ರೆ..........!

**ಚಿತ್ರಲೇಖ** – ವೃಂದಾದೇವಿಯ ಧ್ಯಾನದಲ್ಲಿ ಹುಚ್ಚನಾದ ವಿಷ್ಣುದೇವರನ್ನು ಕೇಳಿ ಬನ್ನಿ–ಅಂದರೆ ನಿಮ್ಮ ಸಂಶಯವು ದೂರವಾಗುವುದು.

**ಅನಿರುದ್ಧ** – ಎಂತಹ ಮೇಧಾಮತಿಯಮ್ಮಾ!

**ಚಿತ್ರಲೇಖ** – ದೈತ್ಯಜಾತಿಯ ಮೇಲೆ ದ್ವೇಷ ಕಾರುವ ಕುರುಡರಿಗೆ ದನುಜ ವೀರರ ತತ್ವವು ತಿಳಿಯಲಾರದು. ದೈತ್ಯರಮಣಿಯರ ರೂಪವನ್ನು ಹೊಗಳಲು ಕೂಡಾ ಮಾತ್ಸರ್ಯದಿಂದ ಹೇಸುವರು. ದೇವತೆಗಳೆಂದು ಹೆಮ್ಮೆಪಟ್ಟು ಹಿಗ್ಗುವ ನರಾಧಮರು ಕೂಡಾ ದೈತ್ಯರಲ್ಲಿ ಪಾಠ ಕಲಿಯಬೇಕಾಗಿದೆ ಅನಿರುದ್ಧಾ!

**ಅನಿರುದ್ಧ** – ದೈತ್ಯಸ್ತ್ರೀಯರಲ್ಲಿ ಇಂತಹ ಸ್ವಾಭಿಮಾನವಿರುವದೆ..........! ಆಶ್ಚರ್ಯ!

**ಚಿತ್ರಲೇಖ** – ಬುದ್ಧಿಯ ಅಭಾವವೇ ಆಶ್ಚರ್ಯಕ್ಕೆ ಆಸ್ಪದವಾಗಿದೆ ಅನಿರುದ್ಧಾ. ಸರಳತೆಎಲ್ಲಿರುವದೋ ಅಲ್ಲಿ ಸಹಜವಾದ ಸ್ವಾಭಿಮಾನವಿರುವುದು. ಎಲ್ಲಿ ಕುಟಿಲತೆಯಿರುವದೋ ಅಲ್ಲಿ ಕ್ಷುದ್ರವಾದ ಕಾರ್ಯ ಸಾಧನೆಯ ಕಪಟ ತತ್ವದಿಂದ ತುಂಬಿದ ದುರಾಭಿಮಾನವಿರುವದು. ರಾಜಕುಮಾರಾ–ಇಲ್ಲಿ–ಉಷಾರಾಣಿಯ ಸುಖಸಾಮ್ರಾಜ್ಯದಲ್ಲಿ ಸರಳತೆಯಿಂದ ವರ್ತಿಸು.

**ಅನಿರುದ್ಧ** – ವೀರವನಿತೆ, ನಿನ್ನ ಪ್ರತಿಯೊಂದು ಶಬ್ದವೂ ತತ್ವಪೂರಿತವಾಗಿರುವದು. ಆರ್ಯ ಸಂಸ್ಕೃತಿಯೇ ಮೈಗೊಂಡ ನಾನು–ದೈತ್ಯರನ್ನು ದ್ವೇಷಿಸುತ್ತಿದ್ದೆ. ದೈತ್ಯರು ಎಂತಹ ಸರಳಜೀವಿಗಳು–ನಿಷ್ಕಪಟಿಗಳು, ಕೋಮಲ ಹೃದಯಿಗಳು ಎಂಬುದನ್ನು ನಾನು ಇಂದು ಅರಿತೆ.! ನಿಮ್ಮ ಧರ್ಮ, ನಿಮ್ಮ ಸಂಸ್ಕೃತಿಗಳನ್ನು ಕೂಡಾ ನಾನು ಪೂಜ್ಯಭಾವದಿಂದ, ಅಭಿಮಾನಪೂರ್ವಕವಾಗಿ ನೋಡುತ್ತೇನೆ.

**ಚಿತ್ರಲೇಖ** — ಧನ್ಯ ಅನಿರುದ್ಧ! ಇಂತಹ ವಿಮಲಹೃದಯವನ್ನೇ ನಾನು ಆಶಿಸುತ್ತಿದ್ದೆ— ಅಮಲಾಂತಃಕರಣದ ನನ್ನ ಉಷೆಗೆ ಇಂಥ ಅನುರೂಪ, ಗುಣಸಂಪನ್ನನನ್ನೇ ಅರಸುತ್ತಿದ್ದೆ. ಇಂದು ನನ್ನ ಆಸೆ ಪೂರ್ತಿಯಾಯಿತು.

**ಅನಿರುದ್ಧ** — ಅಸುರಮಾನಿನಿ—ಎಲ್ಲವೂ ನನಗೆ ಜಟಿಲ—ಸಮಸ್ಯಾತ್ಮಕವಾಗಿದೆ! ನನ್ನ ಅರಮನೆಯಲ್ಲಿದ್ದವನು ಇಲ್ಲಿಗೇಕೆ ಬಂದೆ? ಹೇಗೆ ಬಂದೆ? ನೀನಾರು.....ಈ ಮುದ್ದುಮಾನಿನೀಮಣಿ ಯಾರು.......... ಎಂಬುದನ್ನು ಕೃಪೆಮಾಡಿ ಕೂಲಂಕಷವಾಗಿ ತಿಳಿಸಬಲ್ಲೆಯಾ?

**ಚಿತ್ರಲೇಖ** — ಚಿಂತಿಸಬೇಡ, ಯಾದವ ರತ್ನವೆ—ಈ ಪವಿತ್ರಪುತ್ಥಳಿಯ ಪ್ರೇಮಶಕ್ತಿಯೇ ನಿನ್ನನ್ನು ಇಲ್ಲಿಗೆ ಸೆಳೆದು ತಂದಿತು. ಈ ನಿನ್ನ ಭಾವ ಚಿತ್ರದ ರೂಪರಾಶಿಗೆ ಇವಳು ಮೋಹಿತಳಾದಳು. ನಾನು ನನ್ನ ಸಮ್ಮೋಹನ ವಿದ್ಯಾಬಲದಿಂದ ನಿನ್ನನ್ನಿಲ್ಲಿಗೆ ತಂದೆನು. ಆರ್ಯದ್ರಾವಿಡರ ಸಂಸ್ಕೃತಿಗಳು ಸಂಗಮದಂತೆ ಸುಖಿಗಮ್ಯವಾಗಿ ಮಾನವ ಜಾತಿಗೆ ಶಾಂತಿಯನ್ನು ನೀಡಲೆಂಬುದೇ ನನ್ನ ಉದ್ದೇಶ.

**ಅನಿರುದ್ಧ** — ಅದ್ಭುತ ಸಾಹಸ ಮಾಡಿದೆ, ಅಸುರಕುಲಭೂಷಿಣಿ! ಮೈತ್ರಿಣಿಯ ಸಲುವಾಗಿ ಮಾಡಿದ ನಿನ್ನ ಸಾಹಸವು ಪುರುಷಾಳಿಯನ್ನು ನಾಚಿಸುತ್ತಿರುವುದು. ನಿನ್ನ ಪವಿತ್ರ ಉದ್ದೇಶವು ಈಡೇರಲಿ. ಸುಮತಿ— ನಿಮ್ಮ ಸುಶೀಲ, ಸುವಿಚಾರಗಳಿಗೆ ನಾನು ಮಾರುಹೋಗಿದ್ದೇನೆ. ನಿಮ್ಮ ವಿಶ್ವಾಸವನ್ನು ನಾನು ಸಂಭ್ರಮದಿಂದ ಸ್ವಾಗತಿಸುತ್ತೇನೆ. ಆದರೆ ನನ್ನ ರಕ್ಷಣೆಯ ಭಾರವು ನಿಮ್ಮನ್ನೇ ಕೂಡಿದೆ.

**ಚಿತ್ರಲೇಖ** — ಚಿಂತಿಸಬೇಡ ಸುಕುಮಾರಾ! ನಿನ್ನ ಎಲ್ಲಾ ವ್ಯವಸ್ಥೆಯನ್ನು ಏರ್ಪಡಿಸುತ್ತೇನೆ. ಈ ವಿಷಯವು ಸ್ಫೋಟವಾಗದಂತೆ ಜಾಗರೂಕರಾಗಿರುವದು ನಮ್ಮೆಲ್ಲರ ಕರ್ತವ್ಯ. ಬಾ ದೇವಿ, ನಿನ್ನ ದೇವರ ಸನ್ನಿಧಿಯಲ್ಲಿ ಸುಪ್ರಸನ್ನನಾಗಿರಲು ನೀನು ಸುಮ್ಮನಿರುವಿಯೇಕೆ? ನಿನ್ನ ಹೃದಯ ಭಾಂಡಾರವು, ನೀನು ನೆನಿಸಿದ ನಿಧಾನವು, ನಿನ್ನನ್ನು ಕನಸಿನಲ್ಲಿ ಕದ್ದ ಕಳ್ಳನು—ಕೈಗೆ ಸಿಕ್ಕಿರಲು ನಿನಗೇಕೆ ಸಂಕೋಚ! ನಿನ್ನ ಮಾನಸಮಂತ್ರ ಇಂದು ಸಿದ್ಧಿಯಾಯಿತು. ಮನದಾಣ್ಮನನ್ನು ವರಿಸಿ ಸುಖಿಯಾಗು.

**ಉಷಾ** — (ನಸುನಾಚಿ) ಸಾಕು ಬಿಡು ಸಖಿ—ನಿನ್ನ ಕಾವ್ಯಮಯ ವಾಣಿ!

**ಚಿತ್ರಲೇಖ** – ಆಗಲೇ ಸಾಕಾಯಿತೆ ದೇವಿ, ಸಖಿಯರ ಸಹವಾಸ! ಹೌದು, ಕಾವ್ಯವಾಣಿಯು ಸಾಕು, ಇನ್ನುಮೇಲೆ ನಿನ್ನ ಕಾಮನ ವಾಣಿಯನ್ನು ಕೇಳಿ ಸುಖಿಸು. ಇಲ್ಲಿ ನಮ್ಮದೇನು ಕೆಲಸ! (ಹೋಗಹತ್ತುವಳು)

**ಉಷಾ** – (ಕೈಹಿಡಿದು ನಿಲ್ಲಿಸಿ) ನನ್ನೊಬ್ಬಳನ್ನೇ ಬಿಟ್ಟು ಹೋಗಬೇಡಮ್ಮಾ.

**ಚಿತ್ರಲೇಖ** – ಒಬ್ಬಳಿದ್ದರೆ ಇರುತ್ತಿದ್ದೆನು ಸಖೀ–ಈಗ ಇಬ್ಬರಾದುದಕ್ಕಾಗಿಯೇ ನಾನು ಹೋಗಬೇಕಾಗಿದೆ. ಸಖನಾಗಮನವಾದ ಮೇಲೆ ಸಖಿಯರ ಅವಶ್ಯಕತೆಯೇನಿದೆ?

**ಉಷಾ** – ಬಿಡು ಸಖೀ–ನಿನ್ನ ಈ ಕೊಂಕುತನವನ್ನು ಬಿಡು! ಹೀಗೆ ಕುಚೇಷ್ಟೆಯಿಂದ ನನ್ನನ್ನು ಚುಚ್ಚಬೇಡ.

**ಚಿತ್ರಲೇಖ** – ಬಾಣನ ಮಗಳಿಗೆ ಯೋಗ್ಯವಾದ ನಿಜಕಾಮನ ಬಾಣವು ಇದೋ ಚುಚ್ಚಲು ಬಂದಿರುವದು! ಇನ್ನು ನಿಮ್ಮ ಸಮರಭೂಮಿಯು ಸಿದ್ಧವಾಯಿತು. ಇನ್ನು ನಿಮ್ಮ ನಿಮ್ಮ ಸಾಮರ್ಥ್ಯಗಳನ್ನು ಪರೀಕ್ಷಿಸಿ ಕೊಳ್ಳಿರಿ. (ಹೋಗಹತ್ತುವಳು)

**ಅನಿರುದ್ಧ** – ಹಾಂ ಹಾಂ, ನಿಲ್ಲು ಚಪಲೆ, ನಿನ್ನ ಕಾರ್ಯವಿನ್ನೂ ಕೈಗೂಡಿಲ್ಲ.

**ಚಿತ್ರಲೇಖ** – ಅದೇಕೆ ವೀರಾ!

**ಅನಿರುದ್ಧ** – ಸಮರಭೂಮಿಯು ರಚಿತವಾದರೂ ಸೇನಾನಿಯಾದ ನಿನ್ನ ಆಜ್ಞೆಯು ಅವಶ್ಯಕ.

**ಚಿತ್ರಲೇಖ** – ಛೆ! ಛೆ! ನಿಮಗೆ ಪ್ರೇಮದೀಕ್ಷೆಗೊಡಲು ಉಷಾರಾಣಿಯು ಯೋಗ್ಯಳಿದ್ದಾಳೆ.

**ಉಷಾ** – (ಹುಸಿಮುನಿಸಿನಿಂದ) ಛೀ! ಸಖೀ ಎಷ್ಟು ಗಂಭೀರವಾಗಿ ಹೇಳುವೆ.

**ಚಿತ್ರಲೇಖ** – ಆಗಲಿ, ರಾಜಕುಮಾರಾ–ತಡವೇಕೆ, ನಿಮ್ಮ ವಿವಾಹವು ನೆರವೇರಲಿ

**ಅನಿರುದ್ಧ** – ಹೌದು ರಮಣಿ–ಗಾಂಧರ್ವ ವಿಧಿಯಿಂದ ನಮ್ಮ ಲಗ್ನವು ಸಂಕ್ಷಿಪ್ತದಲ್ಲಿ ಪೂರೈಸಲಿ

**ಚಿತ್ರಲೇಖ** – ಹಾಮ ಹಾಂ! ಆದಾಗಕೂಡದು! ರಾಕ್ಷಸ ಪದ್ಧತಿಯನ್ನೇ ನಾವು ಅನುಸರಿಸುತ್ತೇವೆ. ಯಾಕಂದರೆ ನಾವು ನಿನ್ನನ್ನು ನಮ್ಮ ಬಲದಿಂದ ಇಲ್ಲಿಗೆ ತಂದಿದ್ದೇವೆ. ಕಾರಣ ರಾಕ್ಷಸ ವಿವಾಹವೇ ಯೋಗ್ಯವಾಗಿದೆ.

ಅನಿರುದ್ಧ — ಕುಶಲಮತಿಯೆ, ನಿನ್ನ ಇಚ್ಛೆಯಂತೆಯೇ ನೆರವೇರಲಿ.

ಚಿತ್ರಲೇಖ — ಸಖೀ–ಇದೀಗ ನಿನಗೆ ಗಿರಿಜಾದೇವಿಯು ಕೊಟ್ಟ ವರವು ಸಫಲವಾಯಿತು. ಸುಮಂಗಲೆಯಾಗಿ ಚಿರಸುಖಿಯಾಗಿ ಬಾಳು. ಇದೋ ನಿಮ್ಮ ವಿವಾಹಕ್ಕೆ ನಾನೇ ಪುರೋಹಿತಳು.

ಅನಿರುದ್ಧ — ನೀನೇ?

ಚಿತ್ರಲೇಖ — ಹೌದು, ನಾನೇ–ಮತ್ತಾರಿರುವರು?

ಉಷಾ — ಆಗಲಿ ಬುದ್ಧೀ (ನಗುವಳು) ನೀವೇ ಈ ವಿವಾಹಮಂಟಪದ ಅಧ್ವರ್ಯುಗಳಾದ ಆಚಾರ್ಯ ಶಿರೋಮಣಿಯರು!

ಚಿತ್ರಲೇಖ — ಒಳ್ಳೇದು, ನಾನು ಹೇಳಿದ ಮಂತ್ರಗಳನ್ನು ನೀವು ಸರಿಯಾಗಿ ಹೇಳಬೇಕು.

ಉಷಾ — ತಮ್ಮಾಜ್ಞೆಯೇ ನಮಗೆ ಶಿರೋಧಾರ್ಯ ಗುರುಗಳೇ?

ಚಿತ್ರಲೇಖ — (ನಗುತ್ತ) ಇಲ್ಲಿ ಬನ್ನಿ. ವಧೂವರರೀರ್ವರೂ ಇಲ್ಲಿ ಬನ್ನಿ. ನೀವೀರ್ವರು ನಿಮ್ಮ ಲಗ್ನಕ್ಕೆ ಒಪ್ಪಿರುವಿರಾ? (ಸುಮ್ಮನಿರುವರು) ಹೂಂ ಸಂದಿಗ್ಧವೇಕೆ? ಮನಃಪೂರ್ವಕವಾಗಿ ಒಪ್ಪಿರುವಿರಾ..........? ಏನಿದು, ಇಲ್ಲವಾದರೆ ಇಲ್ಲ ಅನ್ನಿ. ಸಂದೇಹ ಬೇಡ.

ಅನಿರುದ್ಧ — ನನ್ನ....ನನ್ನ ಅಂತಃಕರಣ ಪೂರ್ವಕವಾಗಿ ಒಪ್ಪಿದ್ದೇನೆ.

ಚಿತ್ರಲೇಖ — (ಉಷೆಯ ಕಡೆಗೆ ನೋಡಿ) ಹೂಂ, ನೀನು! ..........ಏನಿದು ಪುರೋಹಿತರಿಗೆ ಮನ್ನಣೆಯೇ ಬೇಡವೆ? ಏಕಪಕ್ಷವು ಒಪ್ಪಿದರೆ ಲಗ್ನವು ಹೇಗೆ ನೆರವೇರಬೇಕು ಅನಿರುದ್ಧಾ –ಹೂಂ ಹೊರಡು– ಬಂದ ದಾರಿಗೆ ಸುಂಕವಿಲ್ಲವೆಂದು ದಾರಿ ಹಿಡಿ.

ಉಷಾ — ಇದೆಂತಹ ಪರಿಹಾಸ ಖೀ...

ಚಿತ್ರಲೇಖ— ಜನ್ಮಜನ್ಮಾಂತರಕ್ಕೆ ಸಂಬಂಧಪಟ್ಟ ಈ ಬ್ರಹ್ಮಗಂಟು ಪರಿಹಾಸವೇನು– ಅಂದರೆ ನೀನು ಈ ಲಗ್ನಕ್ಕೆ ಒಪ್ಪಿದ ಹಾಗಾಯಿತು. (ಮಾಲೆಯನ್ನು ಉಷೆಯ ಕೈಗೆ ಕೊಟ್ಟು) ಹೂಂ, ನಾನು ಮಂತ್ರಗಳನ್ನು ಹೇಳುತ್ತೇನೆ. ಚೆನ್ನಾಗಿ ಗಮನಿಸಿರಿ, ಹಾಂ..........ನಾನು..........

ಉಷಾ — ಇದು ಮಂತ್ರವೋ..........?

**ಚಿತ್ರಲೇಖ** – ಎಂತಹ ದಡ್ಡಳಮ್ಮಾ ಸಖೀ–ಮನವಿಲ್ಲದ ಎರಡು ಮಾನವ ರೂಪೀ ಪಶುಗಳನ್ನು ಎಳೆದು ತಂದು–ತಿಳಿಯದ ಶುಷ್ಕಮಂತ್ರಗಳನ್ನು ಘಟಾಸ್ಫೋಟವಾಗಿ ಪಠಿಸಿ–ಮಧುರ ಜೀವನವನ್ನು ನರಕಕ್ಕೆಳೆದೊಯ್ಯುವ ನರ ರಾಕ್ಷಸಿಯು ನಾನಲ್ಲ...ಲಗ್ನವೆಂದರೆ–ಮನಗಳ ಮಹಾ ಮಧುರಮಿಲಿನ! ಮಂತ್ರಗಳೆಂದರೆ–ವಧೂವರರು ಆಜನ್ಮಪರ್ಯಂತ ಸುಖದುಃಖಗಳಲ್ಲಿ ಸಾಕ್ಷೀಭೂತರಾಗಿ ವರ್ತಿಸಲು ಬದ್ಧಕಂಕಣರಾಗಿ ಸ್ವೀಕರಿಸುವ ಸತ್ಯವಚನ–ಪರಿಪಾಲನಾ ಪ್ರಮಾಣ! ಇದು ಲಗ್ನದ ರಹಸ್ಯ! ತಿಳಿಯಿತೇ ಸಖೀ!

**ಉಷಾ** – ತಿಳಿಯಿತು ಮಹಾಸ್ವಾಮಿ, (ನಕ್ಕು) ತಮ್ಮಾಜ್ಞೆಯೇ ನಮಗೆ ಪ್ರಮಾಣವಾಕ್ಯ! .......... ಹುಂ, ನಾನು...

**ಚಿತ್ರಲೇಖ** – ನಿನ್ನನ್ನು.........ಪ್ರೇಮಪೂರ್ವಕವಾಗಿ....

**ಉಷಾ** – ನಿನ್ನನ್ನೇ?

**ಚಿತ್ರಲೇಖ** – ನನ್ನನ್ನಲ್ಲ! ಹೆದರಬೇಡ–ಅನಿರುದ್ಧನನ್ನು!

**ಉಷಾ** – (ನಕ್ಕು) ಅನಿರುದ್ಧ ದೇವನನ್ನು ಪ್ರೇಮಪೂರ್ವಕವಾಗಿ...

**ಚಿತ್ರಲೇಖ** – ಅಂತಃಕರಣಪೂರ್ವಕವಾಗಿ ಲಗ್ನವಾಗಿದ್ದೇನೆ.

**ಉಷಾ** – ಅಂತಃಕರಣಪೂರ್ವಕವಾಗಿ ಲಗ್ನವಾಗಿದ್ದೇನೆ.

**ಚಿತ್ರಲೇಖ** – ಹೂಂ, ದೇವಿ–ಮಾಲೆಯನ್ನು ಹಾಕು.

**ಉಷಾ** – ಆಗಲಿ–ಪುರೋಹಿತ ಮಹಾಶಯರೆ!

**ಚಿತ್ರಲೇಖ** – ಹೀಗೆ ಬಾ ಸ್ವಾಮಿ. ನಾನು ನಿನಗೆ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಸಂಪಾದಿಸಿಕೊಡುತ್ತೇನೆ.

**ಅನಿರುದ್ಧ** – ನಿನಗೆ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಸಂಪಾದಿಸಿ ಕೊಡುತ್ತೇನೆ.

**ಚಿತ್ರಲೇಖ** – ನಿನ್ನ ಸುಖದುಃಖದಲ್ಲಿ ಸಮಭಾಗಿಯಾಗಿದ್ದೇನೆ. ಈರ್ವರೂ ಅನ್ನಿರಿ. (ಈರ್ವರೂ ಅನ್ನುವರು)

**ಚಿತ್ರಲೇಖ** – ಹೂಂ, ದಕ್ಷಿಣೆ ಸ್ವಾಮೀ

ಅನಿರುದ್ಧ — ದಯವಿಟ್ಟು ತಾವು ತೀವ್ರ ಹೊರಗೆ ಹೋಗುವದೇ ತಮಗೆ ದಕ್ಷಿಣೆ!

ಉಷಾ — ಪುರೋಹಿತರೇ, ಇದೇ ತಮಗೆ ಸರಿಯಾದ ದಕ್ಷಿಣೆ!

ಚಿತ್ರಲೇಖ — ಅಬ್ಬಾ–ಚೆನ್ನಾಗಿದೆ, ಈ ಮಂಗಲಮುಹೂರ್ತದಲ್ಲಿ ಈ ದಕ್ಷಿಣೆ– ವಧೂವರರೇ ನನ್ನ ಪೌರೋಹಿತ್ಯವು ಪೂರೈಸಿತು. ಪ್ರಿಯ ಯುಂಗ್ಮವೆ, ಈ ಸುಖಾಸನದಲ್ಲಿ ಮಂಡಿಸಿ, ನಾನು ಮಂಗಲವನ್ನು ಪಾಡುವೆ.

(ವಧೂವರರೀರ್ವರು ಹಸನ್ಮುಖಿಗಳಾಗಿ ಕೂಡುವರು. ಚಿತ್ರಲೇಖೆಯು ಮಂಗಲವನ್ನು ಪಾಡುವಳು. ತೆರೆಯು ಮೆಲ್ಲನೆ ಬೀಳುವದು)

## ದೃಶ್ಯ ೭. ರಾಜಬೀದಿ

(ರುದ್ರಾಕ್ಷನು ಮುಂದೆ ಮುಂದೆ ಬರುವನು. ಅವನ ಹಿಂದೆಯೇ ಚನ್ನಿ ಬರುತ್ತಿರುವಳು)

ರುದ್ರಾಕ್ಷ — ನಿಂದ ಭಾಳ ಭಾಳ ಚುರಕ ಬುದ್ಧಿ ನೋಡ ಚನ್ನಿ, ನೀಯೇನ ಮಾಮೂಲಿ ಮನಸ್ಯಾಳಲ್ಲ ಬಿಡು–ಮಂದಸ್ತಾನದಾಗ ಇಟ್ಟರ, ಮಾಡದಾಗ ತೇಲ್ತೀ, ಮಾಡದಾಗ ಇಟ್ಟರ ಒಲ್ಯಾಗ ತೇಲ್ತಿ, ಸಮದುರ್ಗದಾಗಳ ಮೀನಾ ಇದ್ದಾಂಗ ಇದ್ದೀ ನೋಡ ನೀ, ನೀ ಎಲ್ಲಿ ಹೋಗಿ ಬಂದರೂ ನಿನ್ನ ಹೆಜ್ಜೇನಾ ಸಿಗೋಂಗಿಲ್ಲ–ಇದ್ದರ ಇರಬೇಕು ನಿನ್ನಂತ ಹೆಣ್ತೀನೆ. ಈಟ ಚುರಕ ಬುದ್ಯಾಕಿ ಇದ್ದೀ ಅಂತ, ನಾನು ಇಂತಾ ದೊಡ್ಡ ಹುದ್ದೇವಕ್ಕೇರೀನಿ, ಹೂಂ ಮತ್ತಾ, ಮುಂದೇನಾತು ಹೇಳಬಾರ್ದ್ಾ!

ಚನ್ನಿ — ಮತ್ತ ಮುಂದೇನಾದ, ಆ ನಡರಾತ್ರ್ಯಾಗ ನೀ ನೋಡಿ ಬಂದೀದ್ಯಲ್ಲ– ಆ ಹೆಂಗಸು. ಆಕಿ ಯಾರಂತಾ ತಿಳಿದಿದೀ ನೀ! ಆಕಿ ಬ್ಯಾರೆ ಯಾರೂ ಅಲ್ಲ, ನಮ್ಮ ಕುಂಬಣ್ಣ ಮಂತ್ರಿ ಇದ್ದಾನಲ್ಲಾ–ಆತನ ಮಗಳು ಚಿತ್ರಮ್ಮ!

ರುದ್ರಾಕ್ಷ — (ಆಶ್ಚರ್ಯ) ಚಿತ್ತ್ಯಾರಮ್ಮಾ.........! ಆಂ! ಅಬಬಬ ಏನ್ ಚಿತ್ತ್ಯಾರಮ್ಮ ಎಂತಾ ಗಂಡಬೀರಿ ಆಕಿ! ಚಿತ್ತ್ಯಾರಮ್ಮ ಆದರೂ ಚಿಂತಿಲ್ಲ ಬಿಡು. ಬಲಬಲು ಚಿತ್ತಾರನೇ ಮಾಡಿಬಿಟ್ಲು. ಆಕೀನ್ನ ನೋಡಾಣ ಇಂವ, ನಮ್ಮ ದಳವಾಯಿ ಆಂಗ ಯಾಕ ಚೇಳು ಕಡದೋರ ತಣ್ಣಗಾದಾಂಗ, ತಣಾಗ ಆಗಿಬಂದ ಅಂತೀನಿ!

ಚನ್ನಿ — ಈಟಾರಾ ತಿಳೋದಿಲ್ಲ ನಿನಗ ಗಂಡಸಾಗಿ – ಎಂತಾ ಮಬ್ಬ ಗಂಡಸ ನೀ–ಆಂವಗ ಆಕೀಗಿ ಗೆಣ್ಯಾನ ಕಲ್ತದ, ಗೆಣ್ಯಾನ!

ರುದ್ರಾಕ್ಷ — ಛೆ, ಅಲ್ಲ ಬಿಡ ನಿನ ಮಾತ, ನಾ ಒಪ್ಪಂಗಿಲ್ಲ. ಗಂಡ್ಮಕ್ಕಳ ಕೂಡ ಹೆಂಗಸರದೇನ ಗೆಣ್ತ್ಯಾನ ಅದು! ಅದರಾಗ ಆ ಮಂತ್ರೀ ಮಗಳು, ಆ ಮಟಮಟ ಮಧ್ಯಾಣದ ರಾತ್ರ್ಯಾಗ–ಗಂಡಸಿನಗೂಡ ಏನ ಗೆಣ್ತ್ಯಾನ ಅದು? ಭಲೆ ಗೆಣ್ತ್ಯಾನ ಬಿಡು–ಚಿತ್ತಾರಮ್ಮನ ಗೆಣ್ತ್ಯಾನ!

ಚನ್ನಿ — ಏ ನಿನ ಮಂಕೆ, ನಿನ ಮಂಕ ಬುದ್ದೀಗಿ ಇಷ್ಟೂನು ತಿಳ್ಯೋದಿಲ್ಲ ಹ್ಯಾಂಗ! ಈಗ ನೋಡು–ನನಗೂ ನಿನಗೂ ಹ್ಯಾಂಗ ಗೆಣ್ತ್ಯಾನ ಕಲ್ಯಾದಲ್ಲಾ, ಹಾಂಗ ಅವರ ಗೆಣ್ತ್ಯಾನಾ–ಅಂತಾ ಗೆಣ್ತ್ಯಾನ, ಈಗಾರೇ ತೀಳೀತಾ?

ರುದ್ರಾಕ್ಷ — ಛೆ, ಛೆ, ಛೆ, ತಿಳೀತ ಬಿಡೆ ಅವರ ಗೆಣ್ತ್ಯಾನಾ–ಬಲೆ ಗೆಣ್ತ್ಯಾನ ಬಿಡು. ನೀಲಿ ಕೆಟ್ಟ ಸುದ್ದಿ ಕೇಳ್ದಾಂಗ ಆತು–ಮದಿವಿಲ್ಲ, ಮುಂಜಿವಿಲ್ಲ, ಕುಲ ಇಲ್ಲ. ನೆಲಿ ಇಲ್ಲ–ಹೌಂದು ಇಲ್ಲ, ಅಲ್ಲ ಇಲ್ಲ–ಎಲ್ಲಾ ಇಲ್ಲ! ಮನಸಿಗಿ ಬಂದೋರು ಮನಸಿಗಿ ಬಂದಾವ್ರ ಸಂಗಾತ ಗೆಣ್ತ್ಯಾನ ಕಟ್ತಾರಲ್ಲಾ–ತುಸಾ ಏನ್ ಇರೇರ, ಕಿರೇರ ಅಂಬೋ ಅಂಜಿಕೀನೇ ಇಲ್ದಾಂಗ ಆತು! ಏನ ಕಾಲಪಾ ಇದು–ಕೆಟ್ಟ ಕಾಲ! ಕಾಲ ಕೆಟ್ಟು ಕರ್‍ರಗ ಆಗಿಹೋತು ನೋಡು–ಎಲಾ ಕಾಲ, ಏನ ಕಾಲಣ್ಣಾ ನಿನ್ನ ಆಟ, ನೀ ಒಂದೊಂದೇ ಮಾಡ್ತ್ಯಾ ಕೀಟಗತನ. (ಪದ) ಇರ್‍ಲಿ ಬಿಡು, ಮುಂದೇನಾತು ಹೇಳು–ಪಿರೀತೀ ಕಲ್ತರಾ? ಇಂತಾ ಸೋಂಗ್ಯಾಕ, ಈ ತಾರೀಪಿನ ಢೋಂಗ್ಯಾಕ, ಈಟೊಂದು ಇಕೀ ಹೊಯ್ಮಾಲಿತನ್ಯಾಕ? ಇದರಾಗೇನಾರ ಗುಟ್ಟ ಇರಬೇಕಲ್ಲ, ಗುಟ್ಟು!

ಚನ್ನಿ — ಅಯ್ಯ ನನ್ನ ಮುದ್ದಿನ ಮರಿಗೊಂಬಿ–ಅದರಾಗೊಂದು ಬಲು ಮಜ್ಯಾದ ಗುಟ್ಟಾದ

ರುದ್ರಾಕ್ಷ — ಕದೇ ಹೇಳಬಾರ್‍ದಾ. ಕದನ್ನೇ ನಾ ಕೇಳೋದು!

ಚನ್ನಿ — ನಮ್ಮ ರಾಜಾ ಇದ್ದಾನಲ್ಲಾ–ನಮ್ಮ ರಾಜಾ...

ರುದ್ರಾಕ್ಷ — ಹೌದು, ನಮ್ಮ ರಾಜಾ ಆನ–ಇದು ಖರೇ ಮಾತ ಅದ.

ಚನ್ನಿ — ಇದೇನು? ನಮ್ಮ ರಾಜಾನ ಮಗಳ ಆಳಲ್ಲಾ — ಆಕಿ ಅನಿರುದ್ರಪ್ಪ ನಂತಲ್ಲ–ಆ ಕೃಷ್ಣಪ್ಪನ ಮೊಮ್ಮಗಾ ಅಂತ–ಆತನ ಮ್ಯಾಲಿ ಬಲೆ ಮನಸ ಇಟ್ಟಿದ್ದಳಂತ!

ರುದ್ರಾಕ್ಷ – ಮನಸ್ಸಿಟ್ಟರ! ಆ ಒಣಾ ಮನಸಿನಿಂದ ಆಗ್ತದೇನು? ಅದು ಸಮದುರ್ಗದಾಗಳ ಉಪ್ಪು, ಇದು ಗುಡ್ಡದಾಗಳ ನೆಲ್ಲೀಕಾಯಿ. ಆಕೀ ಮನಸೀಗಿ. ಈಕೀ ಗೆಣ್ಯ್ಯಾನಕ ಸಂಬಂಧೇನು? ಸಾವೇನು? ನೀನೂ ಕೇಳ್ತಾರಂತ ಬಲೆ ಹೇಳಾಕಿ ಬಿಡು. ಬುರುಡೀ ಮ್ಯಾಲ ಬುರುಡೀ ಉಳ್ಳಸಬ್ಯಾಡ!

ಚನ್ನಿ – ಕಿವಿಗೊಟ್ಟಾರ ಕೇಳಬಾರ್ದಾ, ಒಣಾ ಹಿಕತ್ಯಾಕ ಮಾಡ್ತೀ. ಅರಸನ ಮಗಳಿಗೀ ಈ ಚಿತ್ತಾರಮ್ಮಗ ಭಾಳ ಭಾಳ ಜೋಡೀನ ಗೆಣ್ಯ್ಯಾನ ಆದ. ಗೆಳತೀ ಸಲುವಾಗಿ ಆಕೀ ಬೇಕು ಬೇಕಾದ್ದ ಮಂತ್ರಾ, ತಂತ್ರಾ ಮಾಡಿ, ಈಗ ಮನ್ಯಾಗ ತಂದು ಇಟ್ಟಾಳಂತ–ರಾಜನ ಮಗಳಲ್ಲಿ ತಿಳೀತ?

ರುದ್ರಾಕ್ಷ – (ಆಶ್ಚರ್ಯ) ಮಂತ್ರಾ, ತಂತ್ರಾ, ಏನ ಮಂತ್ರಾ ಅದು? ಮಂತ್ರಾದಿಂದ ಮನಸ್ಯಾನ ತಂದಾಳ!

ಚನ್ನಿ – ಹೂಂ, ಹೌದು. ಈಗ ಒಳಮನ್ಯಾಗ ಇಟಗೊಂಡಾರಂತ! ಈ ಸುದ್ದಿ ಮುಚಗೊಂಬೋದಕ್ಕ. ಆ ನಿಮ್ಮ ಸೇನಾಪತ್ಯಪ್ಪಗ ಮೆಚ್ಚಮುದ್ದು ಮಾಡಿ, ಕಿವಿ ಹಿಂಡಿಬಿಟ್ಟ್ಯಾಳ–ಅವ ಇಕೀ ಮಾತಿಗೆ ಮರುಳಾಗಿ– ಮಳ್ಳ ಕುರಿಮರಿ ಬ್ಯಾ, ಬ್ಯಾ ಅಂತ ಹೋಧಾಂಗ ಓಡಾಡ್ತದ ಅದು–ಇನ್ನೇನಾದ ಮಣ್ಣು!–ಈ ಗುಟ್ಟಿನ್ಯಾಗ!

ರುದ್ರಾಕ್ಷ – ಅಬಬಬ, ಏನ್ ಗುಟ್ಟಿದು? ಬಲ ಗುಟ್ಟು! ಮನೆಮುರುಕ ಗುಟ್ಟು! ಈ ಗುಟ್ಟು ರಟ್ಟಾದ್ರ ತಲೀನೇ ಹೋಗೋ ಗುಟ್ಟು! ಅಲಲಲ ಏನಿದು? ನನ್ನ ತಲೀನೇ ತಿರಿಗಿ ಬಿಟ್ಟಾದ ನೋಡು–ಏನದು? ಆ ಕಿಟ್ಟಪ್ಪನ ಮೊಮ್ಮಗ ಅಂದ್ರೇನು–ನಮ್ಮ ದೊರೀ ದೊಡ್ಡ ಮಗಳ ಅಂದ್ರೇನು? ಅಲಲಲ! ಏನ ಕಾಲಪ ಇದು? ಈ ಕಿಷ್ಟಪ್ಪ ಅಂದ್ರ ನಮ್ಮ ದೊರಿ ಕಾದು ಕೆಂಡಾಗ್ತಾನ. ಏನ ಹೊತ್ತು ಬಂತಪ್ಪಾ ಇದು ಅಂತೀನಿ! ಉಳಿಗಾಲಾನೇ ಇಲ್ದಾಂಗ ಆತು, ಹೊತ್ತೇ ಮುಗಧಾಂಗ ಆತು–ಇವರೆಲ್ಲರಿಗಿ! ಏನ ಹೆಂಗಸರಪಾ ಇವರು, ಎಂಥಾ ತ್ರೈಕಾರ್ತಿ ಹೆಂಗಸರು! ಇವು ಹೆಂಗಸರಲ್ಲ–ನಮ್ಮ ರಾಜೇವಕ ಗಂಟಬಿದ್ದ ಇದಿ ಮಾಯಿ, ದೆವ್ವಗೋಳು! ಏನ ಮಾಡಬೇಕ ನೀನೇ ಹೇಳು? ನೆನಿಸಿ ಕೊಂಡರ ನನ್ನಂಥವರ ಮೈ ಉರೀತದ! ಏನ್ ಶಿವಪೂಜೀ ಮಾಡೋ ನಮ್ಮ ಧರ್ಮರಾಜಾಗ ಎಂಥಾ ಇದಿಮಾಯಿ ಹೆಣ್ಣು

ಹುಟ್ಟಲಿಲ್ಲಾ ಅಂತೀನಿ! ಇದು ಹೆಣ್ಣಲ್ಲ ಬಿಡು. ಇದು ನಮ್ಮ ರಾಜೇಕ್ಕೆ ಹುಣ್ಣು ಹುಟ್ಟಿಧಾಂಗ ಆತು. (ಪದ)

**ಚನ್ನಿ** — ಏಯ್, ಬೆಪ್– ಕುರಿಮರಿ–ಸುಮ್ಮನಿರಬಾರ್ದ–ಯಾಕ ಚಿಂತೀ ಮಾಡಿ ಮಾಡಿ ಸಾಯ್ತೀ? ದೊಡ್ಡವರ ಗೊಡವಿ ನಮಗ್ಯಾಕ ಬೇಕು. ಇದಂದ್ರ ಬಡವರ ಶಿರಾ ಹೋಗೂ ಸುದ್ದಿ! ಅದನ್ನ ಅಲ್ಲಿಗೇ ಮರ್ತು ಬಿಡು. ಅವರವರ ಹಣೆಬಾರ್ದಾಗ ಬರಧಾಂಗ ಆಗ್ತದ! ಅದರ ಚಿಂತಿ ನಮಗ್ಯಾಕ ಬೇಕೀಗ?

**ರುದ್ರಾಕ್ಷ** — ನೀ ಎಂತಾ ಹುಚ್ಚಿ ಇದ್ದೀ? ಉಪ್ಪು ಉಂಡವನ ಚಿಂತೀನೇ ಬ್ಯಾಡೇನ ನಮಗ? ಎಲ್ಲಾರ್ರ ಈ ಕುತ್ತಿಗ್ಗೊಯ್ಯರು ಕೂಡಿ ನಮ್ಮ ರಾಜೇದ ಹಡಗಾ ಮುಣುಗಿಸ್ಯಾರು ಅಂತಾ ಚಿಂತೀ ಮಾಡ್ತೀನಿ. ದೇವರಂತಾ ನಮ್ಮ ರಾಜಾಗ ಎಂಥಾ ಕೆಟ್ಟ ಕಾಲ ಬಂತೂ ಅಂತೀನಿ. ಖರೇ ಅದನ! ಇಲ್ಲಾ ಮತ್ತ ನೀನೂ ಬಲು ಚುರುಕು ನೋಡು, ತಪಾಸ ತೆಗೀಲಿಕ್ಕೆ ನರೀ ಇದ್ದಾಂಗ ನೋಡು ನೀನು. ನಿನಗ ಸುದ್ದಿ ಹ್ಯಾಂಗ ತಿಳೀತು?

**ಚನ್ನಿ**— ಅಯ್ಯ ನೀ ಏನ್ ಕೇಳ್ತೀ ಬಿಡು! ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡದ್ರ ನೋಡಾಂಗ ಇಲ್ಲೇನು? ಹೆಣಾನ ಏಟ ಮುಚ್ಚಿಟಗೊಂಡರ ಏನು? ಅದರ ಕೊಳಕ ನಾತ ಬರೋದಿಲ್ಲೇನು? ಈಗ ಊರೆಲ್ಲಾ ಈ ನಾತ ಹಬ್ಬಿಬಿಟ್ಟದ. ಯಾವ ಜಾಗದಾಗ ಕೇಳಿದ್ರೂ ಇದೇ ಸುದ್ದೀನೇ ಸುದ್ಧಿ. ಮೊನ್ನೆ ನಾ ಕಾಯಿಪಲ್ಲೆ ಬಜಾರ್ಕ ಹೋದಾಗ ಯಾರ ಬಾಯಾಗ ನೋಡಿದ್ರು ಇದೇ ಗುಜುಗುಜು ನಡದಿತ್ತು ನೋಡು, ಮಾರಾಯ! ಈ ಸುದ್ದೀ ಕೇಳಿ ನನಗ ಶಿಡ್ಲು ಬಡಧಾಂಗ ಆಯ್ತು. ಏನ್ ಮಾಡಬೇಕು ನೀನೇ ಹೇಳು? ಎಲ್ಲಾ ಹಣೇಬರಾ! ಕಾಲದ ಮಹಿಮಾ!

**ರುದ್ರಾಕ್ಷ** — ಏನ್ ಕಾಲ ಬಿಡ ನಿನ. ಸಿಗಬೇಕು ಸಿಗ್ಗ–ತುಸಾನರ ಸಿಗ್ಗಬೇಕು. ಹೆಣ್ಮಕ್ಕಳಾದ ಮ್ಯಾಲೆ ಹೆಂಗಸ್ರಗೆ ಭಾಳ ಸಲಿಗಿ. ಕೊಟ್ರ ಇದೇ ಗತಿ ನೋಡು! ಹಿಂದ ನೋಡೋದಿಲ್ಲ ಮುಂದ ನೋಡೋದಿಲ್ಲ. ಮಾನಾ ಇಲ್ಲಾ, ಮರ್ಯಾದಿ ಇಲ್ಲ. ಗಂಡ ಕುದುರಿ ಗತೀನೇ ತಕಪಕ, ತಕಪಕ ಕುಣ್ಯಾಕೆ ಸುರು ಮಾಡಿಬಿಡ್ತಾವ. ತುಸಾರ ಲಜ್ಜಿ ಗಿಜ್ಜಿ ಅಂಬೋದೇ ಇಲ್ಲಾ. ಏನು ಒಬ್ಬ ಮಗಳಂತ ಭಾಳ ಸಲಿಗಿ

ಕೊಟ್ಟಿದ್ನೋಡ ನಮ್ಮ ರಾಜಾ. ಏನಿದು–ಯಾರ್‍ಯಾರ ಮನಸಿನಾಗ ಬಂಧಾಂಗ ಕುಣಿದರ, ರಾಜೇವರ ಹ್ಯಾಂಗ ಉಳೀಬೇಕು? ಛೆ! ಛೆ! ಇದೇನು ಪಾಡ ಕಾಣೂದಿಲ್ಲ ಬಿಡು ನನಗ. ಅಲ್ಲದ ಮಾತು, ಕುಂತ ಕೊಲ್ಲೇನೆ ಕಡಕೊಳ್ಳೋದು, ಕುಂತ ದೋಣೀಗೆ ತೂತು ಹಾಕೋದು. ಇದೇನು ಕಳ್ಳಕೆಲಸ, ಆಮೇಲೇನು ಮಾಡ್ತೀ–ದೋಣಿ ತೂತ ಬಿದ್ದಮ್ಯಾಲ ಎಲ್ಲಾರೂ ಕೂಡೇ ಧುಡುಂ ಅಂತ ಮುಣಗೋದು, ಹೌದಲ್ಲೊ! ತುಸು ವಿಚಾರ ಮಾಡಬೇಕು. ನಮ್ಮ ಮನೆತನ ಏನು? ಯಾರೇನು? ಅಂಬೋದು. ಹೂಂ ಹೂಂ, ಕೆಟ್ಟಿಹೋಯ್ತು ಬಿಡು, ಕಾಲ!

**ಚನ್ನಿ –** ಇರ್‍ಲಿ ಬಿಡು, ಅದೆಲ್ಲ ನಮಗ್ಯಾಕ ಬೇಕು. ಆಮ್ಯಾಲ ಅದರ ಚಿಂತಿ ಮಾಡೋಣಂತ. ಈಗ ನೀ ಊಟಾ ಗೀಟಾ ಮಾಡೋದಿಲ್ಲೇನು? ಹೊತ್ತಾಗೇದ ಮತ್ತ.

**ರುದ್ರಾಕ್ಷ –** ಹೌಂದಲ್ಲ, ನಡಿಯೇ, ಈ ಚಿಂತ್ಯಾಗ ಹಸಿವೇ ಹಾರಿ ಹೋಗೇದ! ಎಂಥಾ ಗಟ್ಟಿಮುಟ್ಟಿ ಕೆಲಸಾನೇ ಮರ್ತುಬಿಟ್ಟೀನಲ್ಲಪ್ಪ ನಾನು! ಹಂಗಾರ ಇವತ್ತ ನನಗ ಊಟಕ್ಕ ಏನು ಬಡಸ್ತೀ ಚನ್ನೀ?

**ಚನ್ನಿ –** ಅಯ್ಯ ಅಯ್ಯ ನಿನ, ಇವತ್ತೇನ ಅಚಾಟಿ – ಮಾಡ್ತೆಲ್ಲ. ಬಡಸ್ತೀ ಗಿಡಸ್ತೀ ಅಂತ ಭ್ರಾಂಬರ ಮಾತ ಕಲ್ತೀಯೇನು? ಅದೆಲ್ಲಾ ಬಿಟ್ಟುಬಿಡು.

**ರುದ್ರಾಕ್ಷ –** ತಪ್ಪಾತ ಬಿಡ, ಮರ್‍ತು ಹಾಂಗ ಸೊಟ್ಟ ಹೋಯ್ತು. ಬಾಯಿ ನಾಲಗಿ ಗೀಲಿಗಿ ಸುಟಗೊಳ್ಳೇನು...ಹೂಂ, ಏನ ನೀಡ್ತಿ ಹೇಳಬಾರ್‍ದ?

**ಚನ್ನಿ –** ಮತ್ತೇನದ ಮನ್ಯಾಗ – ಹುಳಿಚಿಕ್ಕಿ ಪಲ್ಯಾದ ಬ್ಯಾಳಿ, ಹೊಡದ ಮುಡಿಯಜ್ಜಿನ ಬೋನಾ, ಮ್ಯಾಲ ಹುಣಿಸೇಕಾಯೀ ತೊಕ್ಕು, ಭಾಳ ಸವಿ ಇರ್‍ತದ, ಹೌಂದಲ್ಲ!

**ರುದ್ರಾಕ್ಷ –** ಅಲಲ, ಏನ ಸಂವಿ ಅಪ ಅದು, ಬರೇ ನಿನ್ನ ಮಾತಿನ ಸಂವಿ ನೋಡಬೇಕು! ಅಲ್ಲೇ ನಿನ, ಈ ನಿನ್ನ ತೊಕ್ಕು ತಿಂದೂ ತಿಂದೂ, ನನಗ ತಲಿಬ್ಯಾನೀನೇ ಹತ್ತೇದ ನೋಡು. ಇಂಥಾ ಕೂಳು ತಿಂದು ನನ್ನ ಮೈಯಾಗಿನ ತ್ರಾಣ ಎಲ್ಲಾ ಹೋಗಿಬಿಟ್ಟಿತು. ಅಡಿಗಿ ಅಂದ್ರ ಹ್ಯಾಂಗಿರ ಬೇಕು, ಅಡಿಗಿ–ಗೊತ್ತಾದ (ಪದ) ಹಿಂಗ ಇರಬೇಕು, ಇದಕಂತಾದ ಊಟಂತ!

ಚನ್ನಿ — ಹಂಗಾರ ನಡೀ—ಅಂಥಾದೇ ಮಾಡಿ ನೀಡ್ತೀನಿ ಲಗೂನೇ ಉಂಡು ಹೋಗೋವಂತಿ.

ರುದ್ರಾಕ್ಷ — ಇದಕ್ಕಂತಾರ ಹೆಂಡ್ತಿ ಪ್ರೀತಿ! ನಡಿಯೇ, ಪ್ರೀತಿಯ ಖಣಿಯೇ, ಬಂಗಾರ ಗಿಣಿಯೇ ನಡೀ. (ಹೋಗುವರು)

## ದೃಶ್ಯ ೮. ಬಾಣಾಸುರನ ಮಂತ್ರಾಗಾರ

[ಬಾಣಾಸುರನ ಮಂತ್ರಾಗಾರ, ಅಲ್ಲಲ್ಲಿ ಸುಸಜ್ಜಿತ ಸುಖಾಸನಗಳು, ಬಾಣಾಸುರನು ಓರ್ವನೇ ಆಲೋಚನಾಮಗ್ನನಾಗಿ, ಆವೇಶಯುಕ್ತ ಭಾವದಿಂದ ಶತಪಥ ಹಾಕುತ್ತಿರುವನು. ಓರ್ವ ಪರಿಚಾರಕನು ಭಲ್ಲೆಯನ್ನು ಹಿಡಿದುಕೊಂಡು ಕರ್ತವ್ಯಪಾಲನೆಯ ಸ್ತಬ್ಧತೆಯಲ್ಲಿ ಸೊಂಟ ಕಟ್ಟಿಕೊಂಡು ಪ್ರತಿಮೆಯಂತೆ ನಿಂತಿರುವನು.]

**ಬಾಣಾಸುರ** — ಮಾರುತ್ತರ!.... ಮಾಧವನ ಮಸ್ತಕವನ್ನೇ ಚೂರ್ಣಮಾಡ ಬಲ್ಲ ಈ ಮಹಾಬಲನ ಪ್ರತೀಕಾರ...! ದಿಗ್ದೇವತೆಗಳ ಮೇಲೆ ಶಾಸನ ಮಾಡಬಲ್ಲ ಸಾಮ್ರಾಟ್ ಬಾಣನ ಶಾಸನೋಲ್ಲಂಘನ! ಕುನ್ನಿ ಕಾಶ್ಮೀರಾಧಿಪನ ಕರುಳುಗಳನ್ನು ಖಂಡಿತವಾಗಿ ಬಗೆಯಲೇಬೇಕು. ಭೂತೇಶನ ವರಬಲದಿಂದ ಈ ಕ್ಷತ್ರಿಯ ಭೂತಗಳ ನಿರ್ನಾಮವಾಗಲೇಬೇಕು. ರುದ್ರಾಕ್ಷ...! ಆ ಖೂಳನು ಏನೆಂದು ಬೊಗಳಿದನು...?

ರುದ್ರಾಕ್ಷ — (ಮುಜುರೆ ಮಾಡಿ, ವಿನಮ್ರತೆಯಿಂದ ವಂದಿಸಿ) ಮಹಾಪ್ರಭು, ಅವನು ಮಹಾನೀಚನು. ನಿಮ್ಮ ಬಾಣಾಸುರನು ಬಲ್ಲಿದನಾದರೆ ತನ್ನ ತೋಳ್ಬಲವನ್ನು ನಮ್ಮ ಮುಂದೆ ತೋರಿಸಲಿ ಎಂದನು.

**ಬಾಣಾಸುರ** — ಹುಂ ಶುನಕ! ಕ್ಷುದ್ರ ಶುನಕವು ಈ ಶಾರ್ದೂಲನ ಶಕ್ತಿಯನ್ನು ಪರೀಕ್ಷಿಸಬಲ್ಲುದೇ! ಈ ದುರಹಂಕಾರಿಗೆ ನಮ್ಮ ದುರ್ಧರ ಶಕ್ತಿಯ ಪ್ರಭಾವವನ್ನು ತೋರಲೇಬೇಕು. ದುರ್ಮದದಿಂದ ಸೊಕ್ಕಿದ ಈ ಕ್ಷತ್ರಿಯ ಜಾತಿಯ ಪ್ರೇತಗಳಿಗೆ ಅಗ್ನಿಸಂಸ್ಕಾರವಾಗಲೇಬೇಕು. ನಮ್ಮ ಶಾಸನವು ಆಸೇತುಹಿಮಾಚಲದವರೆಗೆ ಆತಂಕವಿಲ್ಲದೆ ಸಾಗಬೇಕು. ನಮ್ಮ ಪ್ರತಿಭಟನೆಯೇ ಪ್ರಪಂಚಕ್ಕೆ ಪ್ರಳಯವಾಗಿ ಪರಿಣಮಿಸಬಲ್ಲದು.

(ತೆರೆಯಲ್ಲಿ ಜಯಜಯಕಾರ, ಬಾಣಾಸುರನು ಹೊರಳಿ ನೋಡುವನು. ಅಮಾತ್ಯರ ಪ್ರವೇಶ.)

**ಕುಂಭಕ** — (ವಂದಿಸಿ) ಸನ್ನಿಧಾನದಲ್ಲಿ ಪ್ರಣಾಮಗಳು.

**ಬಾಣಾಸುರ** – ಹೇಗಿದೆ–ಕಾಶ್ಮೀರ ದೇಶದ ದಂಡಯಾತ್ರೆ!

**ಕುಂಭಕ** – ಅನಿರೋಧದಿಂದ ಸಾಗಿತು, ಪ್ರಭು. ಜಯಲಕ್ಷ್ಮಿಯು ತಮ್ಮ ಪಾದಗಳನ್ನೇ ಆಶ್ರಯಿಸಿದ್ದಾಳೆ. ಇದೋ..........ಇವನೇ ಕಾಶ್ಮೀರದ ದೇಶಾಧಿಪತಿಯು. ಇವನ ಭಾಂಡಾವರನ್ನೆಲ್ಲಾ ಕೊಳ್ಳೆಹೊಡೆದು ಬೊಕ್ಕಸಕ್ಕೆ ಸೇರಿಸಿದ್ದೇನೆ.

**ಬಾಣಾಸುರ** – ಅಹಹಹ! ಬಾಣನ ಸೆರೆಯಲ್ಲಿ ಸಿಕ್ಕ ಜಯವಧುವು ಈ ಜಗತ್ತಿಗೆ ಮರಳಿ ದೊರೆಯಲಾರದು! (ಕಾಶ್ಮೀರಾಧಿಪನನ್ನು ನೋಡಿ) ದುರ್ಬಲ! ಕ್ಷತ್ರಿಯ ಕುಲಾಧಮಾ! ವೀರರು ಪೌರುಷಹೀನರನ್ನು ಮನ್ನಿಸಿ ಬಿಡಲಾರರು. ನೀಚ! ಹುಲ್ಲೆಗಳಿಗೆ ಹುಲಿಯ ವೇಷವು ಸಲ್ಲಲಾರದು. ಎಲವೋ, ಕಿತ್ತಿಕೊಳ್ಳಿರಿ ಇವನ ಖಡ್ಗ ಕಿರೀಟಗಳನ್ನು ಬಲ್ಲಿದ ಬಾಣನ ಬಾಹುಬಲದ ಪರೀಕ್ಷೆಯಾಯಿತೇ, ಅಹಹಹ! ತಳ್ಳಿರಿ ಮೂರ್ಖನನ್ನು ಕಾರಾಗೃಹದಲ್ಲಿ!

(ಅವನನ್ನು ದಬ್ಬಿಕೊಂಡು ಹೋಗುವರು.)

**ಚಂದ್ರಕಾಂತ** – (ಪ್ರವೇಶಿಸಿ) ವಿಜಯವಾಗಲಿ, ಮಹಾರಾಜರಿಗೆ!

**ಬಾಣಾಸುರ** – ಯಾರು? ದಂಡನಾಯಕ!

**ಚಂದ್ರಕಾಂತ** – ಮಹಾವತಾರ, ಸನ್ನಿಧಿಯಲ್ಲಿ ವಿಜ್ಞಾಪನೆ.

**ಬಾಣಾಸುರ** – ಸಮಾಚಾರವೇನು?

**ಚಂದ್ರಕಾಂತ** – ಪರಾಮರ್ಶಿಸಬೇಕು, ಪ್ರಭು. ಧೂರ್ತನಾದ ಮಾಧವನೆಂಬ ಋತ್ವಿಜನು ದಂಡಕಾರಣ್ಯದಲ್ಲಿ ಯಜ್ಞವನ್ನು ಪ್ರಾರಂಭಿಸಿದ್ದಾನಂತೆ– ಇದೀಗ ನಮ್ಮ ಗೂಢಚಾರರಿಂದ ತಿಳಿದುಬಂದಿದೆ.

**ಬಾಣಾಸುರ** – ಯಜ್ಞ! ದಂಡಕಾರಣ್ಯದಲ್ಲಿ ಯಜ್ಞ! ಋತ್ವಿಜರು ರಚಿಸಿರುವ ಹೋಮಕುಂಡಲಿಗೆ ಅಧ್ಯಕ್ಷನಾದ ಆಚಾರ್ಯನನ್ನೇ ಬಲಿಕೊಡಬೇಕು. ಇದೇ ಪಾಮರರಿಗೆ ತಕ್ಕ ಪ್ರಾಯಶ್ಚಿತ್ತ! ಯಜ್ಞಕ್ಕೆ ವಿಘ್ನವಾಗಲೇಬೇಕು. ಯಜ್ಞಸಂಸ್ಕೃತಿಯನ್ನು ನಾಶ ಮಾಡುವ ಶುಭ ದಿನವೇ ದೈತ್ಯರಿಗೆ ಹಿರಿದಾದ ಹಬ್ಬವಾಗಿದೆ.

**ಚಂದ್ರಕಾಂತ** – ದುರ್ಬಲರಾದ ಕ್ಷತ್ರಿಯ ರಾಜರೆಲ್ಲರೂ ಸೇರಿ, ತಮ್ಮ ನಿಧನಾರ್ಥವಾಗಿ ಮಾಧವಮುನಿಯನ್ನು ಪ್ರೇರೇಪಿಸಿ ಈ ಯಜ್ಞವನ್ನು ಪ್ರಾರಂಭಿಸಿರುವಂತೆ!

**ಬಾಣಾಸುರ** – ನಿಧನ! ಬಾಣನ ನಿಧನ! ಸಾಸಿರ ಜಿಂಕೆಗಳು ಸೇರಿ, ಅಜಿಂಕ್ಯನಾದ ವನರಾಜನನ್ನು ವಧಿಸಬಲ್ಲವೇ? ಮೂರು ಕೋಟಿ ಮೂಷಿಕಗಳು ಒಂದು ಮುದಿ ಮಾರ್ಜಾಲವನ್ನು ಮರ್ದಿಸಬಲ್ಲವೇ? ನಿಧನಕ್ಕಾಗಿ ಹೂಡಿರುವ ಈ ಯಜ್ಞಕ್ಕೆ ಆ ನರಪಿಶಾಚಿಗಳನ್ನೇ ಬಲಿಗೊಟ್ಟು ಹಿಗ್ಗಿ ನಲಿಯುತ್ತೇನೆ. ಹುಟ್ಟಿ, ಹುಟ್ಟಿ ಸಾಯಲು ಬಾಣನು ಹುಲ್ಲುಕಣಜವಲ್ಲ; ಸತ್ತು, ಸತ್ತು ಹುಟ್ಟಲು ಬಾಣನು ಮರ್ತ್ಯದ ಮರುಳುಜೀವಿಯಲ್ಲ! ಬಾಣನಂಥ ಅನರ್ಘ್ಯ ವೀರ ರತ್ನವು, ಭೂಮಿಗೆ ಭೂಷಣಪ್ರದವಾದ ಅದ್ಭುತ ಶಕ್ತಿಯ ಅಭಿಯೋಗ– ಸಾವಿರ ವರುಷಕ್ಕೊಂದು ಸಂತಾನ! ಬಾಣನ ಒಂದೇ ಒಂದು ಬಾರಿಯ ಬೀಜಮಂತ್ರದ ಪುನಶ್ಚರಣ, ಬಾಣನ ಒಂದೇ ಒಂದು ಬಾರಿಯ ನೇತ್ರಯೋಗದ ಸ್ಥಿರ ಲಕ್ಷ್ಯ ಸಮಸ್ತ ಪ್ರಪಂಚವನ್ನೇ ಪ್ರಳಯಹೋಮದಲ್ಲಿ ಆಹುತಿ ಕೊಡಬಲ್ಲದು!

**ಚಂದ್ರಕಾಂತ** – ಮಹಾಪ್ರಭು, ಯಜ್ಞಸಂಸ್ಕೃತಿಯು ನಾಶವಾಗಲೇಬೇಕು.

**ಬಾಣಾಸುರ** – ಅಜಪಮೇಧವಂತೆ! ಅಶ್ವಮೇಧವಂತೆ! ಹಹಹಹ, ವಿವೇಕ ಹೀನರ ಅವ್ಯಾಹತ ವಧೆ! ಠಕ್ಕರ ಅದ್ಭುತ ಹಿಂಸೆ! ಭೂತಗಳನ್ನೇ ಪೂಜಿಸುವ ಬ್ರಾಹ್ಮಣರು ಭೂದೇವತೆಗಳಂತೆ! ಇಲ್ಲದ ದೇವನನ್ನು ಆಹ್ವಾನಿಸಿ, ಇದ್ದ ದೇವನನ್ನು ವಿಸರ್ಜಿಸುವರಂತೆ! ಅಖಂಡಾತ್ಮನಾದ ದೇವನನ್ನು ಖಂಡ್ರಿಸಿ, ಶಾಸ್ತ್ರಪ್ರಮಾಣಗಳೆಂಬ ಸಂತೆಯಲ್ಲಿ ಕೃತಕ ದೇವರ ತುಂಡುಗಳನ್ನು ಮಾರುವ ಮೋಸಗಾರರಂತೆ! ಶಾಸ್ತ್ರಗಳೆಂಬ ಪ್ರಬಲ ಶಸ್ತ್ರಗಳಿಂದ ಮಾನವ ಜನಾಂಗವನ್ನೇ ಸೀಳಿ, ವರ್ಣರಾಕ್ಷಸನ ಆ ಹರಿತ ಗರಗಸದಿಂದ ಹೋಳುಮಾಡಿ, ಮಾತ್ಸರ್ಯವೆಂಬ ಹೋಮ ಕುಂಡಲಿಯನ್ನು ರಚಿಸಿ, ದ್ವೇಷಾಗ್ನಿಯನ್ನು ಹೊತ್ತಿ ಉರಿಸುತ್ತ, ಸ್ವಜಾತಿ ಬಂಧುಗಳಾದ ಮಾನವರೂಪೀ ಮೇಕೆಗಳನ್ನು ಬಲಿಗೊಟ್ಟು ಹಿಗ್ಗುವ ರಂತೆ! ಕೈತವ ಶಾಸ್ತ್ರಗಳನ್ನು ಕಟ್ಟಿಕೊಂಡು ಭೂತಲೀಲೆಯನ್ನು ಪ್ರದರ್ಶಿಸುತ್ತಿರುವ ಮಾನವಕುಲಕಂಟಕರಿಗೆ, ನಮ್ಮ ಉಗ್ರಶಾಸನದ ಸವಿಯನ್ನು ತೋರಲೇಬೇಕು. ಸೇನಾಪತಿ, ಮಾಧವನನ್ನು ಬಂಧಿಸಿ ಸೆರೆಯಲ್ಲಿರಿಸು. ನನ್ನಾಜ್ಞೆ, ಹೋಗು.

**ಚಂದ್ರಕಾಂತ** – ಮಹದಾಜ್ಞೆ ಪ್ರಭು. (ನಿಷ್ಕ್ರಾಂತ)

(ತೆರೆಯು ಬೀಳುವದು)

## ದೃಶ್ಯ ೯. ರುದ್ರಾಕ್ಷನ ಮನೆ

[ರುದ್ರಾಕ್ಷ ತಲೆ ಅಲ್ಲಾಡಿಸುತ್ತಿರುವನು. ಅವನ ಹಿಂದೆಯೇ ಅವನ ಅಂಗಿಯೊಂದನ್ನು ಕೈಯಲ್ಲಿ ಹಿಡಿದುಕೊಂಡು ಚನ್ನಿ ಪ್ರವೇಶಿಸುವಳು.]

**ರುದ್ರಾಕ್ಷ –** ನಾ ಒಲ್ಲ ಹೋಗು, ನಾ ಹೋಗೋದಿಲ್ಲ. ನನ್ನ ಶಿರಾ ಕೊಯ್ದು ನನ್ನ ಮುಂದಿಟ್ಟರೂ ನಾ ಹೋಗೋದಿಲ್ಲ ನೋಡು. ನಮ್ಮ ರಾಜಾ ಅಂದ್ರ ಏನ ತಿಳದಿದ್ದೀ ನೀ. ನಮ್ಮ ರಾಜಾ ಅಂದ್ರ ರಣದುರ್ಗಿ ರಾಜಾ–ಒಮ್ಮೆ ರಾಜಾನ ಮುಂದ ಹೋಗಿ ಬಂದರ, ಶಿವಂಗಿ ಬಾಯಾಗಿನ ಮರಿ ತಿರಿಗಿ ಬಂಧಾಂಗ ಆಗತದ, ತಿಳೀತಾ! ಸಿಟ್ಟು ಬಂದರಂತೂ ತೀರೇ ಹೋಯ್ತು – ಅದು ಸಿಡ್ಲಿನ ಮರಿ ಇದ್ದಾಂಗ! ಇಂಥಾ ಬೆಂಕ್ಯಾಗ ನನ್ನ ಯಾಕ ನೂಕ್ತೀ ಮರಾಯಳ – ನಿನ್ನ ಕಾಲ ಬೀಳ್ತೀನಿ, ಬಿಟ್ಟು ಬಿಡು. ನಿನಗ ನನ್ನ ಸಂಗಾತ ಬಾಳೇವು ಸಾಕಾದ್ರ ನನ್ನ ಸೆರಿ ಬಿಟ್ಟು ಬಿಡು. ಎಲ್ಯಾರಾ ಸಾಮೂ ಗೀದೂ ಆಗಿ, ಶಿಂವಾ ಶಿಂವಾ ಅಂತ ಬದಕಿಕೋತೀನಿ!

**ಚನ್ನಿ –** ಅಲಲಲ! ಎದ್ದೇಳು, ಯಾಕ ಅಳ್ತೀ? ಯಾಕ ಗಂಡಸಾಗಿ ಹುಟ್ಟಿದ್ದೀ..........

**ರುದ್ರಾಕ್ಷ –** ಅಂವಾ ಕಳ್ಳ ಬ್ರಹ್ಮಾ ಸುಮ್ಮಸುಮ್ಮನೆ ಹುಟ್ಟಿಸ್ಯಾನ ನನ್ನ ಗಂಡಸಂತ. ನಾನೇನ ಮಾಡ್ಲಿ – ಇದೊಂದು ಕೆಲಸ ಬಿಟ್ಟು ಹೇಳು ಬೇಕಾದ್ದು....

**ಚನ್ನಿ –** ಅಲಲಲ! ಇರಬೇಕ ನಿಮ್ಮಂಥಾ ಸಾವಿರ ಮಂದಿ ಸರದಾರ ಗಂಡಸರು! ನಮ್ಮ ರಾಜೇವಕ್ಕ ವಿಪತ್ತು ಬಂದಾಗ ನಮ್ಮ ಜೀಂವದ ಪಾಡೇನು? ದೇವರಂಥಾ ನಮ್ಮ ರಾಜಾಗ ಕುತ್ತು ಬಂದಾಗ ನಾವು ಅವನ ಅನ್ನಾ ತಿಂದು ಹಂಗೇ ಇರಬೇಕೇನು ಅಂಜಿಕೋತ? ನಮ್ಮರಸ ತಾನೇ ಹೋದಮ್ಯಾಲ ನಮ್ಮನ್ನ ಯಾರು ಕೇಳ್ಬೇಕು? ಬಂದ ರಾಜೇರು ನಮ್ಮನ್ನ ಗಾಣ ಕೂಡ ಕಟ್ಟಿ ಎತ್ತಿನ್ನ ಹೊಡ್ದಾಂಗ ಹೊಡೀತಾರ! ಬಾರ ಕೋಲು ತಗೊಂಡು ನಮ್ಮ ದಮ್ಮಡೀ ಸುಲೀತಾರ, ನಮ್ಮ ಹೆಣ್ಮಕ್ಕಳ್ನ ಎತ್ತಕೊಂಡು ಹೋಗ್ತಾರ–ನಮ್ಮ ಧರ್ಮಾನ ಹಾಳುಮಾಡಿ ಹತ್ತಿ ಬಿತ್ತತಾರ. ಆವಾಗ ನಮ್ಮ ಜೀವಕ್ಕೇ ಅರದಾಳ ಹಚ್ಚತಾರ. ಆಗ ಏನ್ ಮಾಡ್ತೀರಿ ನೀವು ಗಂಡ್ಸರೆಲ್ಲಾ ಕೂಡಿ–ಮಂದೀ ಮನಿ ಹೆಂಡಿ ಇಡ್ಲಾಕ ಹೋಗತೀರೇನು?

ರುದ್ರಾಕ್ಷ – ಎಂಥಾ ಹೆಂಗಸೇ ನೀನು! ಒಂದ ಯಾಳೇಕ ಯುದ್ಧಕ್ಕೇ ಹೋಗಿ ಸಾಯಂದ್ರೂ ಸತ್ತೇನು, ಮನಸ್ಯಾ ಆಗಿ ಹುಟ್ಟಿದ ಮ್ಯಾಲ ಕಡಿದಾರೆ ಬಂಟ ಆಗಬೇಕು. ಇಲ್ಲಾ, ಮಡಿದಾರೇ ಬಂಟ ಆಗಬೇಕು. ಅಂಥಾದರ ಒಂದು ಗಂಡಸ್ತನದ ಸುದ್ದೀ ಹೇಳು ಕೇಳ್ತೀನಿ. ಛೀ, ಇದೇನಿದು, ಸೂಳೇರ ಸುದ್ದಿ ನನ್ನಂಥ ಗಂಡಸಿನ ತಲೀಗಿ ಸುತ್ತಿ ಕಳಿಸಬೇಕಂತ ಮಾಡಿದ್ದೀ. ನಿನ್ನ ಮಾತ ಕೇಳಿ ನಾ ಹೋದರ, ಮನೀಗೆ ನಾ ನಿನ್ನ ಗಂಡ ಆಗಿ ಬರೋದಿಲ್ಲ. ಮಸವಂಟಿಗಿ ಹೆಣ ಆಗೋದಿಲ್ – ಎರಡೂ ಕಡೀಗೆಸಲ್ಲಧಾಂಗ ಮಾಡಬೇಕಂತೀ ಏನೇ, ನನ್ನ ಜೀವದ ಸಂಗಾತೀ!

ಚನ್ನಿ – ಸಿಗ್ಗ ಬೇಕು ಸಿಗ್ಗು. ಸ್ವಲ್ಪನಾರ ಸಿಗ್ಗು...ಗಂಡಸಾಗಿ ಹುಟ್ಟಿದ ಮ್ಯಾಲ ಪರತಂತ್ರ ಸುಗ್ಗದ ಕಂತಾ ಸ್ವತಂತ್ರ ನರಕಾನೇ ಲೇಸು ಅಂಬೋದು ಹ್ಯಾಂಗ ತಿಳೀತದ ಸಿಗ್ಗಿಲ್ಲದ ಸೋಮಾರಿ ಗಂಡಸರ್ಗ! ಇದರಾಗೇನ ನಿನಗ ನಾಚಿಗಿ ಆದ ಹೇಳಬಾರ್ದ–ರಾಜೇದ ಆಳಾದ ಮ್ಯಾಲ ಇದ್ದ ಸುದ್ದೀ ಇದ್ದಾಂಗ ರಾಜಾಗ ಮುಟ್ಸೋದ್ರಾಗ, ಏನ ತಪ್ಪಾತು? ಇಂಥಾ ಸುದ್ದಿ ಅಂತಾ ಹೇಳ್ತೀ – ಇಂಥಾದೇನು ಸಣ್ಣ ಸುದ್ದೆ! ಇಂಥಾವೇ ಆಲದ ಮರಕ್ಕ ಹುಳಾ ಹಿಡಧಾಂಗ! ಹುಳಾ ಹಿಡಿದ ಎಂಥ ದೊಡ್ಡ ಮರಾನಾದ್ರೂ ಸಣ್ಣ ಗಾಳಿ ಬಿಟ್ರ ಮುರ್ಕೊಂಡು ಬೀಳ್ತಾವ, ಹೌಂದಿಲ್ಲ. ಇಂಥಾದ್ರಾಗೇ ಎಂಥೆಂಥಾ ರಾಜೇವ್ರುಗೋಳು ಉರುಳಿ ಹೋಗ್ಯಾವ! ತುಸಾನರೆ ಗೊತ್ತದ ಏನು? ಇಂಥಾ ಕೀಟಗ ಮರಿಗೋಳ್ನ ಇರಗೊಡಬಾರ್ದು, ರಾಜೇದ ಬಗತರಾದ ಮ್ಯಾಗ– ಈಗಾರ ತಿಳೀತಾ! ಹೂಂ ಲಗೂ ಲಗೂ ಅಂಗೀ ಹಕ್ಕೋ, ಈಗ ಭಲ್ಲೆ ತರ್ತೀನಿ...(ಹೋಗುವಳು)

ರುದ್ರಾಕ್ಷ – ಶರಣಾರಿತ್ರೆಪ್ಪೊ, ನಮ್ಮ ಜೀಂವಾ ಸಣ್ಣಗಾಗಿ ತಣ್ಣಗಾಗ್ತಾ ಬಂತು. ಕಡೆ ಶರಣಾರ್ತಿ. ಇಕಿ ನಮ್ಮ ಜೀವಕ್ಕ ಸಂಚಕಾರ ತಂದ ಬಿಟ್ಟಾಳ, ಏನ ಮಾಡೋದು? ದೇವ್ರಾಟ! ಮನಸ್ಯಾಗ ಇದಿವಾಯಿ ಹೆಗಲೇರಿದಾಗ ಯಾರ ಮಾಡೋದೇನಾದ? ಅಲಲ! ಏನ ಹೆಣ್ಮಕ್ಕಳ ಜಾಲಪ ಇದು ಅಂತೀನಿ, ಆ ಕಡಿಗಿ ಆ ಚಂದ್ರಕಾಂತಪ್ಪನ ಹಂಗ ಕಾಡ್ತಾಳ ಆ ಹೆಣ್ಣು, ಇಲ್ಲಿ ರಾಜಾನ ಮಗಳಾಗಿ ಮನೀನೆ ಮುರೀಲಿಕ್ಕೆ ಹತ್ಯಾಳ. ಈಗ ನನಗ ಹೇಣ್ಣ್ಯಾಗಿ ಕುತ್ತಿಗೀಗೆ ತಂದಾಳ ಹೊಸಾ ಚೂರಿ ಅಲಲ! ಏನ ಆಟಪ ಇದು, ಮಾಯೇದಾಟ! ಇದರಾಗಿಂದ

ನನ್ನ ಸಾಂಬಯ್ಯನೇ ಕಾಯಬೇಕು! (ಪದ) ಸಾಂಬಸದಾಶಿವ....

ಚನ್ನಿ – (ಪ್ರವೇಶಿಸಿ) ಹಿಡಿ, ಹಿಡಿ, ಇದು ಭಜನಿ ಮಾಡೋ ಕಾಲಲ್ಲ! ಸುಳ್ಳ ಭಜನಿ ಮಾಡಿದ್ರೆಲ್ಲಾ ಸಾಂಬಾ ಮೆಚ್ಚತಾನಾ, ನಡಿ.

ರುದ್ರಾಕ್ಷ – ಅಲ್ಲೇ ಚನ್ನೀ, ಸ್ವಲ್ಪ ತಡಿ. ಇಲ್ಲಿ ಇವತ್ತು ರಾಜಾನ ಹುಟ್ಟಿದ ಹಬ್ಬ ಅಂತ! ನೀ ಕೇಳಿಲ್ಲೇನು? ಎಲ್ಲಾರೂ ಮನಿಮನೀಗಿ ತೋರಣ ಕಟ್ಯಾರ, ತಳಿರು ಕಟ್ಯಾರ, ರಂಗೋಲಿ ಹಾಕಿ ಊರೆಲ್ಲಾ ಸಿಂಗಾರ ಮಾಡ್ಯಾರ. ಇಂಥಾ ಹಬ್ಬದಾಗ ನಾನು ಇಂಥಾ ಸುದ್ದಿ ಹೊತಗೊಂಡು ಹೋದರ ಆ ರಾಜಾ ನನ್ನ ಬಿಟ್ಟಾರೆ ಬಿಟ್ಟಾನ! ನೀನೇ ತುಸು ವಿಚಾರ ಮಾಡಿ ನೋಡು. ನನ್ನ ಎಲುಬು ಚೂರು ಚೂರು ಮಾಡಿ, ಬುಟ್ಟಿ ತುಂಬಿ ನಿನ್ನಲ್ಲಿಗೆ ಕಳಸ್ತಾನ! ನಿನಗರೆ ಇದು ಚಂದ ಕಾಣ್ತದೇನು? ಇವತ್ತ ಹಬ್ಬಾದ, ನಾಳೆ ಹೇಳಿದ್ರ ಬರೋದಿಲ್ಲೇನು!

ಚನ್ನಿ – ಮತ್ತ....ಮತ್ತ....ನಿನ್ನ ಮುಗ್ಗಲಗೇಡಿ ಮಾತ ಆಡ್ತೀದ್ಯಲ್ಲ.........ನಿನಗ್ಯಾಕ ಬೇಕ ಅದೆಲ್ಲ ಹಾಳ ಹಿಕಾತಿ–ಇದ್ದ ಸುದ್ದಿ ಇದ್ದಾಂಗ ಹೇಳಿದ್ರ ನೀನ್ಯಾಕ ಸಾಯ್ತೀ...ದೇಶ ನಾಶ ಆಗೋ ವ್ಯಾಳೇದಾಗ ಏಟು ಬಡಾನ ಕೆಲಸಾ ಮಾಡಿದ್ರೂ ಆ ಕೆಲಸ ಥೋಡೇನೇ ಅದ. ಇಷ್ಟೆಲ್ಲಾ ನಿಮ್ಮಂಥಾ ಸೋವಾರಿ ಸುಂಬ್ರಾಂಯರಿಗ್ಯಾಂಗ ಗೊತ್ತಾಗಬೇಕು. ಈಗ ನಮ್ಮ ರಾಜೇವಕೇ ಹಾಂವು ಕಚ್ಚಿಧಾಂಗ ಆಗೇದ. ವಿಷಾ ಮಾತ್ರ ಹಬ್ಬಧಾಂಗ ಮಾಡಬೇಕು. ಸರದಾರರಾದವ್ರು ರಾಜೇವು ಉಳಿಸಬೇಕು, ತಿಳೀತಾ! ಹೂಂ, ಹಿಡಿ. (ಭಲ್ಲೆ ಕೊಡುವಳು) ಹೂಂ, ಹೊಂಡ್ರು ಲಗೂ.

ರುದ್ರಾಕ್ಷ – ಹೂಂ, ಹೊತ್ತಂತೂ ಬಂತ್ರೆಪಾ, ನಮಗ ಹೊತ್ತು. ಶರಣಾರ್ತ್ರೆಪೊ ನಿಮ್ಮೆಲ್ಲಾರ್ಗಿ, ನಮಗ ಈ ಬೇತಾಳ ಮಾಯಿ ಹೆಗಲ ಮ್ಯಾಗ ಕುಂತಾಗ ಯಾರ ಮಾಡೋದೇನಾದ! ಆಗಲಿ, ಎಲ್ಲಾ ಶಿವನ ಆಟ....ಸಾಂಬಸದಾಶಿವ, ಸಾಂಬಸದಾಶಿವ.

(ಹೋಗುವನು)

## ದೃಶ್ಯ ೧೦. ನದೀತೀರ

[ನದೀತೀರದ ಆಚೆಯ ದಂಡೆಯ ಮೇಲೆ ವೃಕ್ಷ ಸಮೂಹವು ಸಾಲುಸಾಲಾಗಿ

ಕಂಗೊಳಿಸುತ್ತಿರುವವು. ಸಂಧ್ಯಾ ಸೂರ್ಯನು ಅಸ್ತಾದ್ರಿಯನ್ನು ಸೇರುತ್ತಿರುವನು. ಸಂಜೆಗೆಂಪು ಆಕಾಶವನ್ನಡರಿ ಭಾವತರಂಗಗಳನ್ನೆಬ್ಬಿಸುತ್ತಿರುವ ಸುಂದರ ಸನ್ನಿವೇಶ. ಚಂದ್ರಕಾಂತ ಸೇನಾದಿಪತಿಯೋರ್ವನೇ ಚಿಂತಾಕುಲನಾಗಿ ಪ್ರವೇಶಿಸಿ, ಸುತ್ತಲಿರುವ ಮರಳು ದಿನ್ನೆಗಳನ್ನು ದಿಟ್ಟಿಸುತ್ತ, ಮಂಜುಳವಾಗಿ ಹರಿಯುವ ಸ್ವಚ್ಛ ಶೀತ ಲೋದಕವನ್ನು ನೋಡುತ್ತ, ನದಿಯ ಮಧ್ಯದಲ್ಲಿರುವ ಒಂದು ಬೃಹದ್ವಂಡೆಯ ಮೇಲೆ ಬಲಗಾಲನ್ನೂರಿ, ಸುತ್ತಲೂ ವಿಹಂಗಮ ದೃಷ್ಟಿಯನ್ನು ಬೀರುತ್ತ, ಚಿಲಿಪಿಲಿ ಗೈಯುವ ಪಕ್ಷಿನಿಕರದ ಇನಿಗೊರಲಿನಿಂಚರವನ್ನಾಲಿಸುತ್ತ, ಆವುದೋ ಭಯಂಕರ ಆಲೋಚನೆಯಲ್ಲಿ ಮಗ್ನನಾಗಿದ್ದಾನೆ. ಅವನ ಹೃದಯವು ತಾಲಗತಿಯಿಲ್ಲದೆ ಹೊಯ್ದಾಡುತ್ತಿದೆ]

**ಚಂದ್ರಕಾಂತ** – ಸಂಧ್ಯಾಸೂರ್ಯ! ಗಂಗಾತರಂಗ!! ಸೂರ್ಯದೇವನು ಆಕಾಶಪಥದಿಂದ ಹಾಂಕ್ಕುದ್ದು ತನ್ನ ದಿವಾಂಯಾತ್ರೆಯನ್ನು ಮುಗಿಸಿಕೊಂಡು ಸ್ವಸ್ಥಾನವನ್ನು ಸೇರುತ್ತಿರುವನು. ತರಂಗಗಳು ಜಲರಾಶಿಯಿಂದೆದ್ದು ತಮ್ಮ ತೀರವನ್ನು ಮುಟ್ಟಿಯೇ ತೀರುವವು. ಆದರೆ! ಪಥವಿಲ್ಲದೆ ಹೊಯ್ದಾಡುವ ನನ್ನ ಮಾನಸ ಸೂರ್ಯನು ಶಾಂತಿನಿಕೇತನವನ್ನು ಸೇರಲು ಒಂದು ಸ್ವತಂತ್ರ ಸ್ಥಾನವಿಲ್ಲ! ಭಾವಗಂಗೆಯಲ್ಲೆದ್ದ ತೆರೆಗಳು ಸೇರಲು ಒಂದು ತೀರವಿಲ್ಲ! ಹೃದಯದ ಕೂಗು! ವಿಶ್ವದ ಅನಂತಾಕಾಶದಲ್ಲಿ ಲೀನವಾಗಿ ಪ್ರತಿಧ್ವನಿಯಿಲ್ಲದೆ, ಲಕ್ಷ್ಯವಿಲ್ಲದ ಬಾಣದಂತೆ ಶೂನ್ಯಗರ್ಭದಲ್ಲಿ ಮಾಯವಾಗುತ್ತಿರುವದು. ಜೀವನ ಸಮಸ್ಯೆಯಿದು! ರಕ್ತನಾಳದ ಪ್ರತಿ ರಕ್ತಬಿಂದುವಿನಲ್ಲೂ ಸಮರಸವಾಗಿ ಸೇರಿ ಹೃದಯ ದೇವತೆಯ ಗರ್ಭಗುಡಿಯನ್ನು ನಡುಗಿಸುತ್ತಿರುವದು. ಸಬಳದ ಮೊನೆಯಂತೆ ಆತ್ಮದೇವನ ಅಸ್ತಿವಾರವನ್ನು ಕೆಡುಹಲು ಮೀಟುತ್ತಿರುವದು! ಆದರೂ..........ಸಮಸ್ಯೆಯು ಸಂಪೂರ್ಣವಾಗಲೊಲ್ಲದು. ಎರಡು–ಎರಡು ಭೀಕರ ಶಕ್ತಿಗಳ ಭಯಂಕರ ಹೋರಾಟವು ಹೃದಯರಂಗದಲ್ಲಿ ನಡದಿರುವದು. ಹೃದಯವನ್ನೇ ಹರಿದು ಹಿಂಡುತ್ತಿರುವ ಈ ಹೋರಾಟವನ್ನು ನಿಲ್ಲಿಸುವ ಹಿರಿಯನಾರು? (ನಿಟ್ಟುಸುರ್ಗರಿಯುತ್ತ, ಅತ್ತಿಂದಿತ್ತ ತಿರುಗಾಡಿ) ಕವಿಗಳಿಗೂ ಕಲಾಕೋವಿದರಿಗೂ ಕೃಷಿಕರ್ಮಿಗಳಿಗೂ ಶಾಂತಿಯನ್ನೀಯುವ ಈ ಸಂಧ್ಯಾಸಮಯವು, ನನ್ನ ಹೃದಯದ ಅಂತರಂಗದಲ್ಲೆದ್ದ ಕಲಮಲ, ಕೋಲಾಹಲವನ್ನು ಶಾಂತಪಡಿಸಲಾರದು..........ಜಲವು! ಜಲರಾಶಿಯು..........ಜ್ವಲಂತ ಅಗ್ನಿಯನ್ನು

ಶಾಂತಪಡಿಸಬಲ್ಲದು.........ಆದರೆ.........ಹೃದಯದಲ್ಲಿ ಹೊತ್ತಿ ಉರಿಯುತ್ತಿರುವ ಅಗ್ನಿಯನ್ನು ಶಾಂತಪಡಿಸಲಾರದು ಅಯ್ಯೋ! ಚಿಂತೆಯು ಚಿತೆಯಂತೆ ಚತುರ್ಮುಖದಿಂದ ನನ್ನನ್ನು ಮುತ್ತಿ ದಹಿಸುತ್ತಿದೆ! ಏನು ಮಾಡಲಿ? ಹೇಗೆ ಈ ಕಳವಳವನ್ನು ಶಾಂತಪಡಿಸಲಿ. ಒಂದು ಕಡೆ ರಾಜ್ಯಲಕ್ಷ್ಮಿ! ಮತ್ತೊಂದು ಕಡೆ ನನ್ನ ಹೃದಯವನ್ನೇ ಸೆಳೆದುಕೊಂಡ ಪ್ರೇಮಲಕ್ಷ್ಮಿ! ಯಾರನ್ನು ಪುರಸ್ಕರಿಸಲಿ? ಯಾರನ್ನು ತಿರಸ್ಕರಿಸಲಿ! ನನ್ನ ಜೀವನದ ಸಮತೂಕ ತಕ್ಕಡಿಯ ಪರಡೆಗಳಲ್ಲಿ ನನ್ನ ಲಕ್ಷ್ಮಿಯರಿಬ್ಬರೂ ಕುಳಿತಿದ್ದಾರೆ. ಹೃದಯ ಮಧ್ಯದಲ್ಲಿರುವ ಮುಳ್ಳನ್ನು ಹಿಡಿದು ನಾನು ನಿಂತಿದ್ದೇನೆ. ಇಬ್ಬರೂ ನನ್ನನ್ನು ಮೋಹಾತಿಶಯದಿಂದ ದಿಟ್ಟಿಸುತ್ತಿರುವರು! ಯಾರನ್ನು ವಂಚಿಸಲಿ? ಅಯ್ಯೋ, ಅನಾಹುತ ಯುದ್ಧ! ಇದರಲ್ಲಿ ನಾನು ಜಯಶೀಲನಾಗುವ ಬಗೆ ಹೇಗೆ? ಈ ಹೋರಾಟ ಕೊನೆಗಾಣುವ ಬಗೆಯೆಂತು! .........ಹೃದಯದೇವತೆಯಾದ, ಪ್ರೇಮಲಕ್ಷ್ಮಿಯಾದ, ಭಾವೀಪತ್ನಿಯಾದ, ಚಿನ್ನದ ಪುತ್ಥಳಿಯಂತಿರುವ ಚಿತ್ರಲೇಖೆಯನ್ನು ತ್ಯಜಿಸಲೇ? .........ಅಯ್ಯೋ, ಸಾಯಲೇ.........ನನ್ನನ್ನೇ ನಂಬಿರುವ ಚಿನ್ನದ ಬೊಂಬೆಯನ್ನು ನನ್ನ ಕೈಯಿಂದಲೇ ಒಡೆದು ಚೂರುಚೂರು ಮಾಡಲೇ? ನಾನಿತ್ತ ವಿಶ್ವಾಸವನ್ನು ಸ್ಮಶಾನಪಾಲು ಮಾಡಲೆ? ನನ್ನ ಭಾವೀಸುಂದರ ಜೀವನದ ಜೀವಂತಮೂರ್ತಿಯನ್ನೇ ಶೂಲಕ್ಕೇರಿಸಲೆ? ಛೆ, ಆಗದು.........ಅದಾಗದು.........ಹಾಗಾದರೆ ನನ್ನ ಸ್ವಾಭಿಮಾನವನ್ನೇ ಮಣ್ಣುಗೂಡಿಸಲೋ? ಸ್ವಾರ್ಥಕ್ಕಾಗಿ ಸ್ವರಾಜ್ಯವನ್ನೇ ಬಲಿಗೊಡಲೊ? ಸ್ವಂತದ ಹಿತಕ್ಕಾಗಿ ಸ್ವಕೀಯರನ್ನೇ ಬಲಿಗೊಡಲೋ? ನನ್ನ ಕಾಮ ಲಾಲಸೆಯ ತೃಪ್ತಿಗಾಗಿ, ಕೇವಲ ತುಚ್ಛಜೀವನದ ಆಸೆಗಾಗಿ, ಇಡೀ ರಾಕ್ಷಸರಾಜ್ಯವನ್ನೇ ಬಲಿಗೊಡಲೋ!...ಅಯ್ಯೋ, ರಾಜದ್ರೋಹ..! ದೇಶದ್ರೋಹ....! ಬಂಧುದ್ರೋಹ! ಆಗದು, ನನ್ನಿಂದಾಗದು. ಒಬ್ಬನ ಕ್ಷುಲ್ಲಕ ಜೀವನಕ್ಕಾಗಿ ಕೋಟಿ, ಕೋಟಿ ಬಾಂಧವರ ಜೀವನವನ್ನು ನಾಶ ಮಾಡುವದು ನನ್ನಿಂದಾಗದು. ಎಲೈ, ಸ್ವಾಮಿಘಾತುಕರಾದ ಸುಗ್ರೀವ ವಿಭೀಷಣಾದಿಗಳೇ–ಕುಲಕಂಟಕರೆ, ನನ್ನ ಸ್ಮೃತಿಪಥದಿಂದ ದೂರ ಸರಿಯಿರಿ. ಸೇನಾಪತಿ ಚಂದ್ರಕಾಂತನು ನಿಮ್ಮಂಥ ಸ್ವಾರ್ಥಿಯಲ್ಲ! ವಂಶಘಾತುಕನಲ್ಲ, ದೇಶದ್ರೋಹಿಯಲ್ಲ! ಶೋಣಿತ ಸಾಮ್ರಾಜ್ಯದ ದಂಡನಾಯಕನು ಸ್ವಾರ್ಥಕ್ಕಾಗಿ, ಒಂದೇ ಒಂದು

ಸ್ತ್ರೀವ್ಯಾಮೋಹಕ್ಕಾಗಿ, ತನ್ನ ಪ್ರಭುವಿನ ಪ್ರಾಣವನ್ನು ಅನಾಯಾಸವಾಗಿ ಪರರ ಸ್ವಾಧೀನ ಮಾಡಲಾರನು. ಕಾಲಕಾಲಾನಂತರದಲ್ಲಿಯೂ ತನ್ನ ಚರಿತ್ರೆಗೆ ಕಲಂಕವನ್ನು ಹಚ್ಚಲಾರನು! ..........

(ಅಷ್ಟರಲ್ಲಿ ಇವನನ್ನೇ ಅರಸುತ್ತ, ಹಸನ್ಮುಖಿಯಾದ ಚಿತ್ರಲೇಖೆಯು ಮುಂದೆ ಬಂದು ನಿಲ್ಲುವಳು)

**ಚಿತ್ರಲೇಖ** — ಇದಾವ ಘೋರ ಪ್ರತಿಜ್ಞೆ, ಪ್ರಿಯತಮಾ!

**ಚಂದ್ರಕಾಂತ** — (ಅತಿ ಮರುಳನಂತೆ ಅವಳನ್ನು ಶೂನ್ಯದೃಷ್ಟಿಯಿಂದ ನೋಡುತ್ತ) ಪ್ರತಿಜ್ಞೆ! .......... ಪ್ರತಿಜ್ಞೆಯಲ್ಲಿ ಪ್ರೇಯಸಿ–ಪ್ರಮತ್ತನು ಜ್ಞಾನಶೂನ್ಯನಾಗಿ ಆಚರಿಸುವ ಉನ್ಮಾದಕ ಪ್ರಮಾದ! (ಸ್ವಗತ) ಏನು ಮಾಡಲಿ? ಹೃದಯಕುಸುಮವನ್ನು ಯಾವುದೋ ಕರಾಳಶಕ್ತಿಯು ಇತ್ತಂಡಗತ್ತರಿಯಿಂದ ಕತ್ತರಿಸುತ್ತಿರುವದು. ಇಂತಹ ವಿಶ್ವಮೋಹಕ ರೂಪವನ್ನು ತ್ಯಜಿಸಲೇ? ಕೈಗೆ ಸಿಕ್ಕ ಅಮೌಲ್ಯ ರತ್ನವನ್ನು ಒಡೆದು ಬಿಸಾಡಲೇ? ಮಾಧುರ್ಯ ಸೂಸುವ ಮುದ್ದು ಮಾತುಗಳನ್ನು ನಿರಾಕರಿಸಲೆ? ..........ಹೇಗೆ..........ಹೃದಯನೌಕೆಯು ಹೊಯ್ದಾಡುತ್ತಿರುವದು...ಏನುಮಾಡಲಿ?..........ನಾನು ಜೀವದಿಂದಿದ್ದೂ ನಿರ್ಜೀವಿಯಾಗಲೇ..........ಹೇಗೆ?

**ಚಿತ್ರಲೇಖ** — ಯಾವ ಭ್ರಾಮಕ ಮೋಡವು ತಮ್ಮ ಮಾನಸ ಸೂರ್ಯನನ್ನು ಮುಸುಕಿ ಈ ತೆರದ ಭ್ರಾಂತಿಯಲ್ಲಿ ಕಾಂತಿಹೀನನ್ನಾಗಿ ಮಾಡುತ್ತಿರುವದು ನಾಥಾ?

**ಚಂದ್ರಕಾಂತ** — ಹೌದು, ದೇವಿ, ನಾನು ಭ್ರಾಂತನಾಗಿಯೇ ಈ ಬಯಲಲ್ಲಿ ಶಾಂತಿಯನ್ನು ಹುಡುಕುತ್ತ ಬಂದಿದ್ದೇನೆ....ಆದರೆ...ನೀನಿಲ್ಲಿಗೇಕೆ ಬಂದೆ?

**ಚಿತ್ರಲೇಖ** — ಎಲ್ಲಿ ಹಿಮಕರನ ಬೆಳ್ಗಸವು....ಆದರೆ...ನೀನಿಲ್ಲಿಗೇಕೆ ಬಂದೆ?

**ಚಿತ್ರಲೇಖ** — ಎಲ್ಲಿ ಹಿಮಕರನ ಬೆಳ್ಗಸವು ಬೆಳಗುವುದೋ ಅಲ್ಲಿ ವಿರಹಿಯಾದ ಚಕ್ರವಾಕವು ತಾನಾಗಿಯೇ ಕೇಕೆ ಹಾಕುತ್ತ ಬರುವದು. ಆತ್ಮ ದೇವನನ್ನು ಪ್ರಕೃತಿದೇವಿಯು ತಾನಾಗಿಯೇ ಹಿಂಬಾಲಿಸುವಳು. ರಜನಿಯನ್ನು ಕಂಡರೂ ಕಾಂತಿಹೀನನಾದ ಶಶಾಂಕನನ್ನು ನೋಡಿ ಭ್ರಾಂತಳಾಗಿದ್ದೇನೆ, ನಾಥಾ. ನನ್ನ ಭ್ರಾಂತಿಯು ಬಯಲಾಗಬಹುದೇ?

**ಚಂದ್ರಕಾಂತ** – ನನ್ನ ಭ್ರಾಂತಿ–ನಿನ್ನ ಭ್ರಾಂತಿ! ಎರಡೂ ಒಂದೇ ಆಗಬಹುದೇ?...ಹೋಗಲಿ ಬಿಡು...ಭ್ರಾಂತಿಗಳು ಬಯಲಾಗಲಿ, ದೇವಿ...ಕರಪಲ್ಲವಗಳನ್ನು ಮುದ್ದಿಸುತ್ತೇನೆ..........ನನ್ನ ಭ್ರಾಂತಿಯಾದರೂ ಕ್ಷಣ ಕಾಲ ಶಾಂತವಾಗಲಿ!

**ಚಿತ್ರಲೇಖ** – ನಿನ್ನ ಭ್ರಾಂತಿಯು ಬೇಗನೆ ಬಯಲಾಗಲಿ, ಹೃದಯಾಂಬುಧಿಯನ್ನು ಕ್ಷೋಭೆಗೊಳಿಸಿದ ಬಿರುಗಾಳಿಯು ಶಾಂತವಾಗಲಿ. ಪ್ರಿಯಕರ, ಶಾಂತಿಸುವಿಚಾರಗಳಿಂದ ನಿನ್ನ ಮನವು ಸದಾಲಂಕೃತವಾಗಿ ಮೆರೆಯಲಿ.

**ಚಂದ್ರಕಾಂತ** – ನನ್ನ ಜೀವನಜ್ಯೋತಿಯೇ, ನನಗೆ ಶಾಂತಿಯನ್ನು ನೀಡಲಾರೆಯಾ? ನನ್ನ ಜೀವನ ಪ್ರವಾಹವು ಉಭಯ ಸಂಕಟಗಳೆಂಬ ಎರಡು ದಡಗಳಲ್ಲಿ ಹಾಯ್ದು, ಸೇರಲು ನಿಯಮಿತ ಸ್ಥಾನವಿಲ್ಲದೆ ಓಡುತ್ತಿರುವದು. ದೇವಿ, ನಿನ್ನ ಪ್ರೇಮಕ್ಕಾಗಿ ನಮ್ಮ ಸಾಮ್ರಾಜ್ಯವೇ ಆಹುತಿಯಾಗಬೇಕೆ?

**ಚಿತ್ರಲೇಖ** – ಬೇಡ ದೊರೆಯೇ, ಬೇಡ. ನನ್ನಂಥ ಸಾವಿರಾರು ಬಾಲೆಯರು ಮಣ್ಣುಗೂಡಿದರೂ ನಿನ್ನ ದೇಶಭಕ್ತಿಯು ನಾಶವಾಗದಿರಲಿ! ನನ್ನ ಆಶೆಯು ಶ್ಮಶಾನಪಾಲಾದರೂ ಅಡ್ಡಿಯಿಲ್ಲ. ಆದರೆ ರಾಕ್ಷಸ ರಾಜ್ಯದ ದಂಡನಾಯಕನು ಕರ್ತವ್ಯದಕ್ಷನಾಗಲಿ! ಅಮಾತ್ಯನಂದಿನಿಯು, ದೈತ್ಯರಾಜ್ಯದ ದಳಪತಿಯ ದಾಸಿಯು, ಕ್ಷುದ್ರತನದಿಂದ ವರ್ತಿಸಿ ದುಶ್ಶೀಲೆಯಾಗಿ ಬಾಳಲಾರಳು.

**ಚಂದ್ರಕಾಂತ** – ಭಲೆ ಸುಭಾಷಿಣಿ, ನೀನು ಸ್ತ್ರೀ ಮಾತ್ರವಲ್ಲ, ಸ್ತ್ರೀರತ್ನ....ನಿನ್ನ ವೀರವಾಣಿಯು ನನ್ನಲ್ಲಿ ವಿವೇಕವನ್ನು ಜಾಗೃತಗೊಳಿಸುತ್ತಿರುವದು. ವಿಚಾರಹೀನನಾದ ನಾನು ದುಃಖವಿಹ್ವಲತೆಯಿಂದ ಕಂಗೆಟ್ಟಿದ್ದೆನು. ಸಾಹಸಮತಿಯಾದ ನಿನ್ನಸಂಭಾಷಣೆಯ ಅಮೃತಸೇಚನೆಯಿಂದ ನನ್ನಲ್ಲಿ ನವಜೀವನದ ಚೇತನವುಂಟು ವಿದ್ಯುತ್ ಸಂಚಾರವಾದಂತಾಯಿತು. ಆದರೆ ಆದರ್ಶ ರಮಣಿ..........ಒಡಲ ಚಿಂಚಯುವನ್ನೇ ತುಂಬಿ, ಉಕ್ಕಿ ಹರಿಯುತ್ತಿರುವ ಈ ಪ್ರೇಮವಾಹಿನಿಯನ್ನೇ ಬತ್ತಿಸಲೋ?

**ಚಿತ್ರಲೇಖ** – ನಿಮ್ಮ ಹೃದಯವು ಹೊಯ್ದಾಡದಿರಲಿ. ಉಭಯಸಂಕಟಗಳಿಂದ ನಿಮ್ಮನ್ನುಳಿಸುವ ಉದ್ದೇಶವನ್ನಿಟ್ಟುಕೊಂಡೇ ನಾನಿಲ್ಲಿಗೆ ಧಾವಿಸಿ

ಬಂದಿದ್ದೇನೆ. ಮಂತ್ರಿಕುಮಾರಿಯು ಮತಿಹೀನೆಯಾಗಿ ತನ್ನ ಆತ್ಮವನ್ನು ಅಧಃಪತನದ ಸಂತೆಯಲ್ಲಿ ಮಾರಲಾರಳು. ವಂಚನೆ, ದ್ರೋಹ ಇವಳಿಂದ, ಈ ಮಾನಿನಿಯಿಂದ ಎಂದಿಗೂ ಘಟಿಸಲಾರವು. ಇವಳ ಉದ್ದೇಶವು ಉದಾತ್ತವಿದೆ, ಪವಿತ್ರವಿದೆ–ಇಡೀ ಮನುಷ್ಯಜಾತಿಯ ಕಲ್ಯಾಣವಿದೆ. ಮನುಷ್ಯಜಾತಿಯು ಮಾನವಧರ್ಮವನ್ನೇ ಮರೆತು, ಮಹತ್ಕಷ್ಮಲದಿಂದ ಕೂಡಿದೆ. ದೀರ್ಘಕಾಲದಿಂದ ಅಂಟಿಕೊಂಡು ಬಂದ ಈ ಮಹತ್ಕಷ್ಮಲ, ಈ ಅಭಿಶಾಪ, ಈ ಭಯಂಕರ ಪಾಪವನ್ನು ತೊಳೆಯುವ ಆತ್ಮಪವಿತ್ರತೆ, ಆ ಅಸೀಮ ಸಾಹಸ–ಈ ವೀರವನಿತೆಯಲ್ಲಿದೆ. ಇದನ್ನು ದೃಢವಾಗಿ ನಂಬು, ಪ್ರಿಯತಮಾ! ನಿನ್ನ ಧರ್ಮವು, ನಿನ್ನ ದೈತ್ಯಧರ್ಮದ ಜ್ವಲಂತ ತೇಜವು, ನನ್ನ ದಮನಿಗಳಲ್ಲಿಯೂ ಪ್ರವಹಿಸುತ್ತಿರುವದೆಂಬುದನ್ನು ನಂಬು; ಆದರೆ ಆರ್ಯಜಾತಿಯ ಆಚಾರವಿಚಾರಗಳಲ್ಲಿ ನನಗೆ ತುಂಬಾ ಮರುಕವಿದೆ. ಧಾರ್ಮಿಕ ವಿಚಾರಗಳಲ್ಲಿಯ ಅವರ ಶಿಶುಪ್ರವೃತ್ತಿಗಾಗಿಯೇ ಅವರನ್ನು ಶಿಕ್ಷಿಸಬೇಕೆನ್ನುವ ದಡ್ಡಳು ನಾನಲ್ಲ! ಅದು ಅವರ ತಪ್ಪಲ್ಲ. ಅಂಬೆಗಾಲಿಟ್ಟು ಎಡವಿ ಮುಗ್ಗರಿಸುವವರನ್ನು ಅಧಃಪಾತದಲ್ಲಿ ತಳ್ಳುವುದು ಹೇಯ ಕಾರ್ಯವಾಗಿದೆ. ಶೈಶವಾವಸ್ಥೆಯಲ್ಲಿದ್ದ ನರರ ಮೇಲೆ ಕರುಣೆ ತೋರಿ, ಮಾನವಧರ್ಮದ ಗಮ್ಯಗುರಿಯಾದ, ಆತ್ಮೋದ್ಧಾರದ ಮಹಾಮನೆಯ ಮಾರ್ಗವನ್ನು ತೋರಿಸುವದೇ ಸಮದರ್ಶಿಗಳ ಆದರ್ಶ ಕರ್ತವ್ಯವಾಗಿದೆ. ನನ್ನ ಪವಿತ್ರ ಧರ್ಮವು ಈ ಅಪಾರವಾದ ದಯೆಯನ್ನೇ ಬೋಧಿಸುತ್ತದೆ. ಯೋಧನ ಖಡ್ಗವು ಹೃದಯವನ್ನು ಗೆಲ್ಲಲಾರದು. ಆದರೆ ಎದೆಯ ಪ್ರೇಮವು ಮಾತ್ರ ಗೆಲ್ಲಬಲ್ಲುದು. ಇದುವೇ ಧರ್ಮಶಾಸನ! ಪ್ರೇಮಪ್ರಪಂಚದಲ್ಲಿ, ದ್ವೇಷವು ಕೂಡಾ, ಪ್ರೇಮಧರ್ಮದಲ್ಲಿ ಪರಾವರ್ತನವಾಗದು!

**ಚಂದ್ರಕಾಂತ** – ಅಮೃತ ನಿರ್ಝರ ರಮಣಿಯಂತೆ ಹರಿಯುತ್ತಿರುವ ನಿನ್ನ ಇನಿವಾತುಗಳು ಎಂತಹ ಕಲ್ಲೆದೆಯನ್ನು ಕೂಡಾ ಕರಗಿಸಬಲ್ಲವು, ಪ್ರಿಯೆ. ಆದರೆ ಪೂರ್ವ ಪಶ್ಚಿಮಗಳೂ, ಬೆಳಕು ಕತ್ತಲೆಗಳೂ– ಎಂದಾದರೂ ಕೂಡುವುದು ಸಾಧ್ಯವಿದೆಯೇ?

**ಚಿತ್ರಲೇಖ** – ಸಾಧ್ಯವಿದೆ, ಸುಮನೋಹರಾ, ಸಾಧ್ಯವಿದೆ. ಕಲ್ಪನೆಯ ಕಟ್ಟಡವನ್ನು ನಂಬಿ ಮೋಸ ಹೋಗಬೇಡ. ವಿಶ್ವಗೋಲದಲ್ಲಿ ಅನಂತಾಕಾಶದಲ್ಲಿ, ಹೊಳೆದು ಚಲಿಸುತ್ತಿರುವ ಎಲ್ಲ ಗ್ರಹತಾರೆಗಳಿಗೂ ಒಂದೇ ಒಂದು

ಶೂನ್ಯದ, ಮಧ್ಯೆ ಬಂದುವಿನ ಸತ್ ಶಕ್ತಿಯು ಆಧಾರವಾಗಿದೆ. ಮಂದ ಬುದ್ಧಿಯ ಮಾನವನು ತನ್ನ ಸಂಕುಚಿತ ಭಾವದ ಕಿಂಚಿತ್ ಬುದ್ಧಿಯ ಅಳತೆಯ ಗೋಲಿನಿಂದ ಪೂರ್ವ ಪಶ್ಚಿಮಗಳನ್ನು ಅಳೆದು, ದೂರ, ಅನತಿ ದೂರ...ವಾಗಿ ಸರಿಸಿ, ತನ್ನನ್ನೇ ತಾನು ವಂಚಿಸಿಕೊಂಡು ಗೋಳಿಡುತ್ತಾನೆ. ಕತ್ತಲೆ ಬೆಳಕುಗಳಿಗೂ ಒಂದು ಸೀಮೆ ಇದೆ. ಅವು ಒಂದನ್ನೊಂದು ನಿಕಟವಾಗಿ, ತದಾತ್ಮವಾಗಿ ಆಶ್ರಯಿಸಿವೆ. ಸಮವಾಗಿ ತೂಗುವ ತಕ್ಕಡಿಗೂ ಒಂದು ಮಧ್ಯಬಿಂದುವಿರುವಂತೆ ವಿಶ್ವದ ಪ್ರತಿ ಕಣಕಣಕ್ಕೂ ಸ್ಥಿರರೂಪೀಚಿನ್ಮಯಾತ್ಮಕವಾದ ಗುರುತ್ವಾಕರ್ಷಣಶಕ್ತಿಯ ಮೂಲ ಮಧ್ಯಬಿಂದುವಿದೆ. ಇದರ ನೆಲೆಯೇ ಧರ್ಮದ ರಹಸ್ಯ. ದಾರುಣವಾದ ದ್ವೇಷವು ಧರ್ಮದ ರಹಸ್ಯವಲ್ಲ. ಶಕ್ತಿಯಿಲ್ಲದ ಶಿವನು ಕಂಪಿಲ್ಲದ ಕುಸುಮದಂತೆ! ಶಿವನಿಲ್ಲದ ಶಕ್ತಿಯೂ ಜೀವವಿಲ್ಲದ ಶವದಂತೆ ಇವೆರಡನ್ನೂ ಸಮ್ಯಕ್ ದೃಷ್ಟಿಯಿಂದ ಸೇರಿಸುವುದೇ ಸ್ವಯಂಭುವಿನ ಪ್ರೇರಣೆಯಾಗಿದೆ. ಇದೇ ನಿಜವಾದ ತತ್ವಪೂರಿತ ಶಿವಧರ್ಮವಾಗಿದೆ, ಭಯಂಕರ ಆಜನ್ಮದ್ವೇಷಿಗಳಾದ ದೈತ್ಯನಂದಿನಿಯೂ, ದ್ವಾರಕೆಯ ನಂದನನೂ ಇದೇ ಪ್ರೇಮಧರ್ಮದ ದೀಕ್ಷೆಯನ್ನು ಹೊಂದಿ ಹೇಗೆ ಸುಖಿಗಳಾಗಿರುವರೆಂಬುದನ್ನು ನೋಡಬಲ್ಲೆಯಾ!

ಚಂದ್ರಕಾಂತ — ಅದೇ ಪಾಶವೀ ಬಂಧನವೇ ನನ್ನನ್ನು ಕರ್ತವ್ಯಪರಾಙ್ಮುಖನನ್ನಾಗಿ ಮಾಡಿದೆ. ಇದರ ಪರ್ಯವಸಾನವು ಹೇಗಾಗಬಹುದೆಂದು ಊಹಿಸಿರುವೆಯಾ?

ಚಿತ್ರಲೇಖ — ಊಹಿಸಿರುವೆನು, ಪ್ರಿಯುತಮಾ. ನಿಮ್ಮ ದೃಷ್ಟಿಕೋನವು ವಿಶಾಲವಾಗಲಿ. ಪ್ರೇಮಕ್ಕಾಗಿ ಪ್ರಂಚವನ್ನೇ ತ್ಯಾಗಮಾಡಬಲ್ಲದು— ಸ್ತ್ರೀ ಹೃದಯ! ಅನಿರುದ್ಧನೀಗ ನಮ್ಮ ಅತಿಥಿ. ಅವನ ಆತಿಥ್ಯವೀಗ ನಮಗೆ ಮೊದಲನೆಯ ಧರ್ಮ. ನೀವೀಗ ಅವನ ಸಖ್ಯಕ್ಕಾಗಿ ಕೈಚಾಚಿರಿ. ನಿಮ್ಮೀರ್ವರ ಹಸ್ತಗಳ ಮಹಾ ಮಿಲನದಲ್ಲಿ ಎರಡು ದೊಡ್ಡ ಜನಾಂಗಗಳ ಕ್ಷೇಮವು ಹುದುಗಿಕೊಂಡಿದೆ. ಮೊದಲು ಕಹಿಯಾಗಿ ಕಂಡರೂ ಕಡೆಗೆ ಸಿಹಿಯಾಗಿ ಪರಿಣಮಿಸುತ್ತದೆ.

ಚಂದ್ರಕಾಂತ— ವೀರನಾದ ನನ್ನನ್ನು ವೈರಿಯ ಹಸ್ತಲಾಘವಕ್ಕಾಗಿ ಎಳೆದೊಯ್ಯುವಿಯಾ? ದೇವಿ, ಎಂತಹ ಪ್ರತಿಸೃಷ್ಟಿ!

ಚಿತ್ರಲೇಖ – ಪ್ರತಿಸೃಷ್ಟಿಯಾಗಲೇಬೇಕು. ನಮ್ಮ ನಿಮ್ಮ ಪ್ರೇಮಕ್ಕಾಗಿ, ಧರ್ಮದ ವಿಜಯಕ್ಕಾಗಿ ಈ ದಯಾರಹಿತ ಸೃಷ್ಟಿಯು ಪಲ್ಲಟವಾಗಲೇ ಬೇಕು.

ಚಂದ್ರಕಾಂತ – ಪಾಪಕ್ಕಾಗಿ ಈ ಸೃಷ್ಟಿಯು ಪಲ್ಲಟವಾಗಲೇ ಬೇಕೇ? ಚಿತ್ರಲೇಖಾ, ಅವರವರ ಪಾಪವು ಗುಪ್ತವಾಗಿಯೇ ನಡೆಯಲಿ. ಪಾಪದ ಮುಂದೆ ನನ್ನನ್ನು ಪ್ರತ್ಯಕ್ಷವಾಗಿ ನಿಲ್ಲಿಸಬೇಡ.

ಚಿತ್ರಲೇಖ – ಏನು? ಪ್ರೇಮಿಗಳ ಮಧುರ ಮಿಲನವು ಪಾಪವಾಗಬಹುದೆ? ಅಂದರೆ ಪುಣ್ಯಾವಾವುದು? ಪ್ರಿಯಕರ, ಇದು ಪತನದ ಹಾದಿ. ನಾನಿದುವರೆಗೂ ಹೇಳಿದ್ದು ಹಾಳು ಪುರಾಣವಾಯಿತೆ? ನಡೆಯಿರಿ ಹಾಗಾದರೆ, ನನ್ನ ಭವಿತವ್ಯತೆಯೇ ನನ್ನ ಜೀವನವನ್ನು ನಿರ್ಣಯಿಸಬಲ್ಲದು. (ಹೋಗಹತ್ತುವಳು)

ಚಂದ್ರಕಾಂತ – ಬೇಡ ಸುಂದರಿ, ಬೇಡ. ನನ್ನನ್ನು ನಿರಂತರವಾಗಿ, ನಿರಾಶಾ ನರಕದಲ್ಲಿ ನೂಕಬೇಡ. ನೀನೇ ನನ್ನ ವೀರಧರ್ಮದ ಶಕ್ತಿ. ಆ ಧರ್ಮವನ್ನು ರಕ್ಷಿಸುವ ಭಾರವು ನಿನ್ನನ್ನೇ ಕೂಡಿದೆ. ಪಾಪವು ಯಾವುದೋ, ಪುಣ್ಯವು ಯಾವುದೋ? ನನಗೆ ತಿಳಿಯದು. ಜೀವನದ ಜೊತೆಗಾರ್ತಿಯೆ, ನೀನು ಹೇಳಿದಂತೆ ವರ್ತಿಸುತ್ತೇನೆ. ನೀನೊಲಿದೊಡೆ ಸಗ್ಗ, ನೀ ಮುನಿದೊಡೆ ನರಕ. ನಡೆ, ಹೋಗುವಾ.

ಚಿತ್ರಲೇಖ – ಧನ್ಯ ಪ್ರಿಯತಮಾ, ನಡೆಯಿರಿ. (ಇಬ್ಬರೂ ಕೈ ಹಿಡಿದುಕೊಂಡು ಆನಂದಪರವಶರಾಗಿ ಪ್ರೇಮಗೀತೆಯನ್ನು ಹಾಡುತ್ತ ನಿರ್ಗಮಿಸುವರು.)

(ತೆರೆ ಬೀಳುವದು)

## ದೃಶ್ಯ ೧೧. ಉಷಾಮಂದಿರ

[ಶೋಭಾಯಮಾನವಾಗಿ ರಂಜಿಸುತ್ತಿರುವ ಮೇಲ್ಮಂದಿರದ ಅಂತರ್ಭಾಗ– ಸಕಲ ಸುಖಸಾಮಗ್ರಿಗಳಿಂದ ಸುರಮ್ಯವಾಗಿ ಕಂಗೊಳಿಸುತ್ತಿದೆ. ಉಷಾರಾಣಿಯು ಓರ್ವಳೆ ಮಲ್ಲಿಕಾಮಾಲೆಯನ್ನು ಹಿಡಿದು, ಭಾವಪರವಶಳಾಗಿ ಬಂದು, ಮಾಲೆಯನ್ನು ಈಕ್ಷಿಸಿ, ಮಂದಸ್ಮಿತಳಾಗಿ, ತನ್ನಲ್ಲಿ ತಾನೇ ಮಾತಾಡುವಳು.]

ಉಷಾ – ನಿನ್ನೆಯ ಕನಸಿಂದು ನನಸಾಗಿರುವದು. ನವ ಯೌವನದ ಕೋಮಲತೆಯಿಂದ ಮಿನುಗುತ್ತ ಇಂದು ಮಲ್ಲಿಕಾವನಿತೆಯು

ಸೌರಭವನ್ನು ತೂರುತ್ತ, ಸುಂದರ ಪ್ರಪಂಚದ ನವ ಶೋಭೆಗೆ ಕಾರಣಳಾಗಿರುವ ಲತಾಮಾತೆಯನ್ನು ತೊರೆದ ಮಲ್ಲಿಕಾ ಮಾನಿನಿ ಯೌವನ ಭಾರದಿಂದ ಮದಿಸಿ, ನಿನ್ನ ಪರಾಗವನ್ನೆಲ್ಲಾ ಪರರ ಪಾಲುಮಾಡಿದೆಯಲ್ಲಾ! ಇದು ನಿನಗೆ ಶೋಭಿಸುವುದೇ? ಅಹಹಹ..........! ನನ್ನನ್ನು ನೋಡಿ ನಗಬೇಡಮ್ಮ. ಹೌದು, ಹೌದು, ಪರಿಮಳವು ನಿನ್ನಲ್ಲಿ ತುಂಬಿ ಸೂಸುತ್ತಿರುವದು. ಪ್ರೇಮವು ನನ್ನಲ್ಲಿ ತುಂಬಿ ತುಳುಕುತ್ತಿರುವದು. ನಿನ್ನ ಹೃದ್ಭಾಂಡಾರದಿಂದ ಸೌರಭವನ್ನು ಹೊರಚೆಲ್ಲಿ ಸುಂದರ ಪ್ರಪಂಚದ ನವಶೋಭೆಗೆ ಕಾರಣಳಾಗಿರು. ನಾನು ನನ್ನ ಹೃತ್ಕಮಲ ಕರ್ಣಿಕೆಯಿಂದ ಅನಿರ್ವಚನೀಯವಾದ ಪ್ರೇಮಬಂಡನ್ನು ಹರಡಿ, ಹೂಂ, ಅಹಹಹ, (ಅನಿರುದ್ಧನ ಭಾವಚಿತ್ರದ ಸಮೀಪಕ್ಕೆ ಹೋಗಿ) ಇರಲಿ, ಇರಲಿ ಮಾರಸುತಾ, ಜಗದಲ್ಲಿ ನಾನೊಬ್ಬನೇ ಜಾಣನೆಂಬ ಜಂಬದಿಂದ ದಿಟ್ಟಿಸುತ್ತಿರುವೆಯೇ? ನಿನ್ನಂಥ ಅಪರಾಧಿಯನ್ನು ಲೋಕದಲ್ಲಿ ಕಾಣುವದು ಅಪರೂಪ! ಹಲವಾರು ವಸ್ತುಗಳನ್ನು ಕದಿಯಬಲ್ಲ ಬಲ್ಲಿದ ಕಳ್ಳರಿರುವರು. ಆದರೆ ಅಪ್ರತ್ಯಕ್ಷ ವಸ್ತುಗಳನ್ನು ಅಂದರೆ ಮನ, ಪ್ರಾಣಗಳನ್ನು ಕದಿಯಬಲ್ಲ ನಿನ್ನಂಥ ಅಪರೋಕ್ಷ ಕಳ್ಳನನ್ನು ನಾನು ಕಾಣಲಾರೆ. ಜಾಣ ಕಳ್ಳ! ನಿನಗಿದೇ ಶಿಕ್ಷೆ ವಿಧಿಸುತ್ತೇನೆ, ತಾಳು. ಈ ಪೂಮಾಲೆಯ ಬಂಧುರ ಪ್ರೇಮದ ಸಂಕೋಲೆಯಿಂದ ನಿನ್ನನ್ನು ಬಂದಿಸುತ್ತೇನೆ. ವಿಷಯ ಪ್ರೇಮ ತಂತುವಿನಿಂದ ಹೆಣೆದ ಪುಷ್ಪಗಳ ಮಾಲೆಯಿಂದ ಕಟ್ಟುತ್ತೇನೆ. ಈ ಅರಮನೆಯ ಸೆರೆಮನೆಯಲ್ಲಿರುವದೇ ನಿನಗೆ ಶಾಸನ. ಇದನ್ನು ಧಿಕ್ಕರಿಸಿದರೆ ಬಾಹುಗಳ ಬಂಧುರ ಪಾಶದಿಂದ ಬಂದಿಸುತ್ತೇನೆ. ಆಗ ಎಲ್ಲಿಗೆ ಓಡುವೆ? ಅಬ್ಬಾ ಚೋರನು! ಒಳ್ಳೇ ದಿಟ್ಟನು! (ಭಾವಚಿತ್ರಕ್ಕೆ ಪೂಮಾಲೆಯನ್ನರ್ಪಿಸಿ, ಧನ್ಯತೆಯನ್ನು ಪಡೆದು) ನಗಬೇಡ ದೊರೆಯೇ? ಭಾವೋನ್ಮಾದಿನಿಯೆಂದು ನಗಬೇಡ. ನನ್ನ ಶಿಕ್ಷೆಯೇ ನಿನಗೆ ಪ್ರೇಮ ದೀಕ್ಷೆಯಾಯಿತಲ್ಲವೆ? ..........ಅಹಹಹ..........ಚೋರ..........ಚತುರನಾದ ಚೋರ...ವೀರನಾದ ಚೋರ....ಲಾವಣ್ಯನಿಧಿಯಾದ ಸುಕೋಮಲ ಕಂಠವನ್ನಾಶ್ರಯಿಸಿ, ಸುಮಮಾಲಾಮಾನಿನಿಯು ಧನ್ಯಳಾದಳು. ನಿನ್ನ ಮಂದಸ್ಮಿತದಿಂದ ಹೊರಟ ಚಂದ್ರಮನ ಬೆಳಕು ನನ್ನ ಹೃತ್ಕುಮುದಿನಿಯನ್ನು ವಿಕಾಸಗೊಳಿಸುತ್ತಿರುವುದು, ನಾಥಾ. (ಹಾಗೆಯೇ ಭಾವಚಿತ್ರಕ್ಕೆ

ಕೈಮುಗಿದು ಪ್ರೇಮಪರವಶಳಾಗಿ ನಿಂತಿರುವಳು)

**ಅನಿರುದ್ಧ** – (ಹಿಂದಿನಿಂದ ಮೆಲ್ಲಗೆ ಪ್ರವೇಶಿಸಿ, ಉಷಾರಾಣಿಯು ಭಾವಚಿತ್ರಕ್ಕಭಿಮುಖವಾಗಿ ನಿಂತು) ಮೋಹಿನಿ, ನೀನು ಚೋರಳು...ನೀ ಗೈದ ಅಕ್ಷಮ್ಯ ಅಪರಾಧಕ್ಕಾಗಿ ನಿನ್ನನ್ನು ಶಾಸನ ಮಾಡುವೆ, ನಿಲ್ಲು. ಕಲಾವತಿ, ಈ ಕಳ್ಳತನದ ಕಲೆಯನ್ನು ಎಲ್ಲಿ ಕಲಿತೆ? ತರುಣರು ತರುಣಿಯರನ್ನು ಕದ್ದುತಂದ ಉದಾಹರಣೆಗಳೆಷ್ಟೋ ಇತಿಹಾಸಪ್ರಸಿದ್ಧವಾಗಿರುವುವು. ಆದರೆ, ತರುಣಿಯರು ತರುಣರನ್ನು ಕದ್ದು ತಂದ ಈ ಘಟನೆಯು ಮಾತ್ರ ಪ್ರಪಂಚಕ್ಕೆ ಹೊಸದು! ನಿದ್ರಾವಶದಲ್ಲಿ...ಅದೂ ಅಪರಾತ್ರಿಯಲ್ಲಿ..ಹಾಸಿಗೆಯಲ್ಲಿರುವವನನ್ನು ಅಪಹರಿಸಿದ ಅಪಹಾರಿಯೆ?

**ಉಷಾ** – (ಹಿಂದೆ ತಿರುಗಿ ನೋಡಿ) ಹುಂ, ಹುಂ, ನಾನಲ್ಲ ಅಪರಾಧಿ ನೀವು ಅಪಹಾರಕರು. ನಿಮ್ಮ ಆರೋಪವು ನನಗೆ ಸಂಬಂಧವಿಲ್ಲ.

**ಅನಿರುದ್ಧ** – ಸಮ್ಮಂಧವಿದೆ, ದೇವಿ–ಅನಿರುದ್ಧ ಉಷೆಯರ ಜನ್ಮಜನ್ಮಾಂತರಗಳಿಗೂ ಸಮ್ಮಂದವಿದೆ. ನನ್ನ ಜೀವನದ ಜ್ಯೋತಿಗೆ ಚಿರಪ್ರಕಾಶವನ್ನು ಕರುಣಿಸಿದ ಪ್ರಕಾಶಪ್ರವಾಹಿನಿ! ನಾನು ಪತಿತನೊ, ಪವಿತ್ರನೊ ನನಗೆ ತಿಳಿಯದು. ಆದರೆ ನಿನ್ನ ಪ್ರೇಮಪ್ರವಾಹದಲ್ಲಿ ಅವಯವಹೀನವಾದ ಮತ್ಸ್ಯದಂತೆ ಮಾತ್ರ ಕೊಚ್ಚಿಹೋಗುತ್ತಲಿದ್ದೇನೆ!

**ಉಷಾ** – (ಅಧೀರತೆಯಿಂದ ಬೆಚ್ಚಿ) ನಿಮ್ಮ ಭಾವನೆಯೇ ಇದು. ಉಷಾ ಸಂಬಂಧವು ನಿಮ್ಮನ್ನು ಪತಿತರ ಪಙ್ತಿಯಲ್ಲಿ....

**ಅನಿರುದ್ಧ** – ನಿನ್ನ ಕೋಮಲ ಹೃದಯಕ್ಕೆ ಕಂಟಕವು ಚುಚ್ಚದಿರಲಿ. ಪ್ರಿಯೆ, ನಿನ್ನನ್ನು ನೋಯಿಸುವ ಕಂಟಕವು ನನ್ನ ಹೃದಯವನ್ನೇ ಕೂರಲಿನಂತೆ ಸೀಳುವದು. ಅಧೀರಳಾಗದಿರು ಪ್ರೇಯಸಿ...ಹೂಂ, ಅಪರಾಧವು ನಿನ್ನದಲ್ಲವೆ?

**ಉಷಾ** – ಉಹೂಂ....

**ಅನಿರುದ್ಧ** – ಅಪರಾಧಕ್ಕಾಗಿ ಹೆದರಬೇಡ. ಅಪರಾಧವು ನಿನ್ನದೆಂಬುದನ್ನು ಮಾತ್ರ ಒಪ್ಪು, ಇಷ್ಟೆ.

ಉಷಾ — ಉಹುಂ, ನಾನೊಪ್ಪಲಾರೆ.

ಅನಿರುದ್ದ — ಒಪ್ಪಿಸುವೆನು. ಪ್ರಿಯೆ, ಒಪ್ಪಿಸುವೆನು. ಮೊದಲು ನೀನು ನನ್ನನ್ನಿಲ್ಲಿಗೆ ತಂದದ್ದು ಅಪರಾಧವಲ್ಲವೆ? ಹೂಂ, ಒಪ್ಪು. ತರ್ಕಬದ್ಧವಾದ ವಿಚಾರಸರಣಿಗಾದರೂ ಒಪ್ಪುವುದಿಲ್ಲವೆ?

ಉಷಾ — ಒಪ್ಪಲಾರೆ, ಬಲವಂತವಾಗಿ ನೀವು ನನ್ನನ್ನು ಒಪ್ಪಿಸಬೇಡಿ. ಮೊದಲು ಈ ನಿಮ್ಮ ಅತುಲ ರೂಪರಾಶಿಯಿಂದ ನನ್ನ ಮನವನ್ನೇಕೆ ಅಪಹರಿಸಿದಿರಿ? ಈ ಮೊದಲನೆಯ ತಪ್ಪನ್ನು ನೀವು ಒಪ್ಪಿಕೊಳ್ಳಲೇಬೇಕು. ಹೂಂ, ಒಪ್ಪಿರಿ.

ಅನಿರುದ್ಧ — ಭಾವಚಿತ್ರಕ್ಕೆ ಮೋಹಿಸಿ ನೀನೇಕೆ ಭ್ರಮಿತಳಾದೆ?

ಉಷಾ — ಮನ ಒಪ್ಪಿದವರನ್ನು ಮೋಹಿಸಲು ಕನ್ಯೆಯರಿಗೆ ಅಧಿಕಾರವಿದೆ. ಅಬಲೆಯರ ಈ ಅನಾದಿಕಾಲದಿಂದ ಬಂದ ಅಧಿಕಾರವು ಅಪರಾಧವೆಂದಿಗೂ ಆಗಲಾರದು.

ಅನಿರುದ್ದ — ಚಿನ್ನದ ಬೊಂಬೆ–ಚಿತ್ರದ ಬೊಂಬೆಗಾಗಿ ಜೀವಂತ ಬೊಂಬೆಯನ್ನು ಶಿಕ್ಷಿಸಬೇಕೆ?

ಉಷಾ — (ಹುಸಿಮುನಿಸಿನಿಂದ) ಹಾಗಾದರೆ ನನ್ನ ಪ್ರಾಣಪದಕದಂತಿದ್ದ ಚಿತ್ರದ ಬೊಂಬೆಯನ್ನೇ ಶಿಕ್ಷಿಸುತ್ತೇನೆ. (ಓಡಿಹೋಗಿ ಚಿತ್ರದ ಮುಂದೆ ನಿಂದು) ನಿನ್ನನ್ನೇ ಶಿಕ್ಷಿಸುತ್ತೇನೆ. ಮನಾಪಹಾರಿ, ನಿನ್ನನ್ನೇ ಶಿಕ್ಷಿಸುತ್ತೇನೆ.

ಅನಿರುದ್ಧ — (ನಗುತ್ತ) ಮಂಜುಲವಾಣಿ, ನನ್ನ ಪ್ರೇಮಚಂದ್ರಮನ ಪವಿತ್ರ ರೋಹಿಣಿ–ಇದೋ ಅಪರಾಧಿಯು ಒಪ್ಪಿಕೊಂಡಿರುವನು. ಬಾ ಶಿಕ್ಷಿಸು. (ಪದ–ಸಂಪಾದ)

ಉಷಾ — ನಾಥಾ, ಕ್ಷಮಿಸು. ನಮ್ಮ ವಿಮಲಪ್ರೇಮಕ್ಕೆ, ನಮ್ಮ ಈ ಆನಂದ ಯೋಗಕ್ಕೆ ಕಾರಣನಾದ ಆ ಪ್ರೇಮಮಯ ಪ್ರಭುವಿನ ಪಾದಾರವಿಂದಗಳಲ್ಲಿ ಅನಂತ ಧನ್ಯವಾದಗಳು. ಜಗನ್ನಿಯಾಮಕನಾದ ಆ ಸರ್ವಾಂತರ್ಯಾಮಿಯು ನಿನಗೆ ಸದಾ ಸನ್ಮಂಗಳ ಮೋದಗಳನ್ನು ಕೊಡಲೆಂದು ನನ್ನ ನೇತ್ರಯುಗದ ಚಿಜ್ಜ್ಯೋತಿಯಿಂದ ಸದಾ ಬೆಳಗುವೆನು.

(ಪದ. ಹಾಡು ಮುಗಿಯುವ ಸಂದರ್ಭದಲ್ಲಿ ಚಿತ್ರಲೇಖೆಯು ಚಂದ್ರಕಾಂತನೊಂದಿಗೆ ಪ್ರವೇಶಿಸುವಳು.)

**ಅನಿರುದ್ಧ –** (ಭಯಾಶ್ಚರ್ಯ ಮುದ್ರೆಯಿಂದ) ಯಾರು? ಚಿತ್ರಲೇಖಾ, ಏನಿದೀ ಅಘಟಿತ ಘಟನೆ! ಈ ವೀರನಾರು?

**ಚಿತ್ರಲೇಖ –** ಲಕ್ಷೋಪಲಕ್ಷ ಸೇನಾಸಮೂಹದ ಅಧಿಪತ್ಯವನ್ನು ವಹಿಸಿದ ಶೋಣಿತ ಸಾಮ್ರಾಜ್ಯದ ಮಹಾದಂಡನಾಯಕ!

**ಅನಿರುದ್ಧ –** ಇದೇನು ಚಪಲೆ? ನನ್ನ ಸೌಖ್ಯಸಾಗರದಲ್ಲಿ ಒಮ್ಮಿಂದೊಮ್ಮೆ ಪ್ರತ್ಯಕ್ಷವಾದ ಬಡವಾಗ್ನಿಯೆ, ನನ್ನ ಜನ್ಮದ ಇತಿಶ್ರೀಯೆ!

**ಚಿತ್ರಲೇಖ –** ಅಲ್ಲಲ್ಲ, ಹಾಗೆ ಭಾವಿಸಕೂಡದು. ನಿನ್ನ ಭಾಗ್ಯೋದಯದ ಶ್ರೀಕಾರ, ನಿನ್ನ ಮಂಗಳದ ಆದಿ.

**ಚಂದ್ರಕಾಂತ –** (ಜನಾಂತಿಕ) ಮಹಾಮೇರುವಿನಂತೆ ಎದುರಾಗಿ ಬರಲು ಈ ಸೇನಾಸಮೂಹವನ್ನು ಹುಡಿಗೈಯಬಲ್ಲ ಈ ವಜ್ರಮುಷ್ಟಿಯು ವೈರಿಗೆ ಅಭಯವನ್ನೀಯುವ ವರದಹಸ್ತವಾಗಿ ಪರಿಣಮಿಸಿರುವದು. ವಿಧಿಯ ವಿಚಿತ್ರ ಲೀಲೆ! ಸ್ತ್ರೀಯರ ಅದ್ಭುತ ಸಾಹಸ!

**ಚಿತ್ರಲೇಖ –** (ಚಂದ್ರಕಾಂತನ ಕೈ ಹಿಡಿದು ಜಗ್ಗುತ್ತ) ಬಾ, ಸುಮನೋಹರ! ನಿಮ್ಮೀರ್ವರ ಸಖ್ಯವು ಚಂಚಲ ಜಗತ್ತಿಗೆ ವಿಶ್ವಾಸದ ದೀಕ್ಷೆಯನ್ನು ಅನುಗ್ರಹಿಸಲಿ. (ಈರ್ವರ ಹಸ್ತಲಾಘವ ಮಾಡಿಸಿ) ಭಿನ್ನ ಸಂಪ್ರದಾಯಗಳು ಮಾಯವಾಗಲಿ!

**ಅನಿರುದ್ಧ –** ಮಿತ್ರಾ, ನಾನೀಗ ಅಸಹಾಯಕನು. ರಾಜಕುಮಾರನಾದರೂ ನಾನು ಅಪ್ರಬುದ್ಧನು. ನಮ್ಮ ಸಖ್ಯವನ್ನು ಆ ಸರ್ವೇಶ್ವರನೇ ಸಾಕ್ಷೀಭೂತನಾಗಿ ಕಾಪಾಡಲಿ. (ಪದ)

**ಚಂದ್ರಕಾಂತ –** ಇರಲಿ, ಮಿತ್ರಾ, ನಿಶ್ಚಿಂತನಾಗಿರು. ನಾವೀರ್ವರೂ ಪ್ರೇಮಯಜ್ಞಕ್ಕೆ ಬಲಿದಾನವಾಗಿರುವೆವು. ಆ ನಿಶ್ಚಲ ಪ್ರೇಮವೇ ನಮ್ಮನ್ನು ರಕ್ಷಿಸಲಿ.

**ಚಿತ್ರಲೇಖ –** (ಕೊಂಕುನುಡಿಯಿಂದ, ಚಂದ್ರಕಾಂತನನ್ನುದ್ದೇಶಿಸಿ) ಪುರುಷನನ್ನು ಬಲಿ ತೆಗೆದುಕೊಳ್ಳುವ ಸ್ತ್ರೀಯೇನು ದುರ್ಗಾದೇವತೆಯೆ? ಎಷ್ಟಾದರೂ ಪುರುಷರು ಪಕ್ಷಪಾತಿಗಳು, ಚಂಚಲ ಹೃದಯಿಗಳು!

**ಅನಿರುದ್ಧ –** ಅಲ್ಲಲ್ಲ–ಪುರುಷರು ಪಕ್ಷಪಾತಿಗಳಲ್ಲ. ಸ್ತ್ರೀಯರು ಕಾರ್ಯಸಾಧಕರು. ತಮ್ಮ ಚಂಚಲ ನೇತ್ರಗಳು ಕೋಲ್ಮಿಂಚುಗಳಿಂದ ಪುರುಷರನ್ನು ಘಾತಿಸುವರು, ಇಷ್ಟೇ!

**ಉಷಾ –** ಸ್ತ್ರೀಯರಿಗೇ ಮಾತ್ರ ಪ್ರೇಮವನ್ನು ಉಂಬಳಿ ಹಾಕಿಕೊಟ್ಟಿಲ್ಲ. ಪ್ರಿಯಕರಾ, ಪುರುಷರೇನು ಹೃದಯಹೀನ ಬರಡುಗಳೇ?

ಅವರೇನು ನಿರ್ಗಂಧ ಕುಸುಮಗಳೆ? ಪುರುಷರ ಪ್ರೇಮಜಾಲವೇ ಮುಗ್ಧಬಾಲೆಯರನ್ನು ಅಕ್ಷಯಾಸ್ತ್ರಗಳಂತೆ ಅವ್ಯಾಹತವಾಗಿ ಬಂಧಿಸುವದು..........

ಚಿತ್ರಲೇಖ – ಹೌದು, ಸಖೀ, ಎಷ್ಟಾದರೂ ಪುರುಷರು ಪಕ್ಷಪಾತಿಗಳು, ತಮ್ಮ ಅಗ್ಗಳಿಕೆಯೇ ತಮಗೆ ಶಾಸ್ತ್ರಣ! ಸತ್ಯವೆಂಬುದೆಲ್ಲಾ ಇವರ ಬತ್ತಳಿಕೆಯಿಂದಲೇ ಬಂದುದಂತೆ! ಇವರನ್ನು ನಾವು ನಂಬಕೂಡದು!

ಚಂದ್ರಕಾಂತ – ನೀವು ನಮ್ಮನ್ನು ನಂಬದಿದ್ದರೆ ನಾವು ನಿಮ್ಮನ್ನು ನಂಬುವುದಿಲ್ಲ. ಮಿತ್ರಾ, ಇಲ್ಲಿ ಬಾ. ಸೃಷ್ಟಿಕರ್ತನು ಮೊದಲೇ ಜಗದ್ವಯಗಳನ್ನು ಸೃಷ್ಟಿಸಿರುವನು. ಒಂದು ಪುರುಷ ಜಗತ್ತು! ಇನ್ನೊಂದು ಸ್ತ್ರೀ ಜಗತ್ತು! ಸ್ತ್ರೀ ಜಗತ್ತಿಗೆ ಪುರುಷ ಜಗತ್ತಿನ ಸಂಬಂಧವೇನು..........?

ಅನಿರುದ್ಧ – ಹೌದು, ಮಿತ್ರಾ, ಇಂದಿನಿಂದ ನಾವು ಸ್ವತಂತ್ರರಾಗೋಣ. ಅಖಂಡ ಬ್ರಹ್ಮಚಾರಿಗಳಾಗಿ ಸ್ತ್ರೀಯರ ಅಹಂಕಾರವನ್ನೇ ತಗ್ಗಿಸೋಣ!

ಉಷಾ – ನಮಗೂ ಸ್ವಾತಂತ್ರ್ಯವಿದೆ, ಸಖೀ, ಇಂದಿನಿಂದ ನಾವೂ ನೈಷ್ಠಿಕ ಬ್ರಹ್ಮಚಾರಿಣಿಯರಾಗಿ ಪುರಷಾಳಿಯ ದರ್ಪವನ್ನೇ ಕುಗ್ಗಿಸೋಣ!

ಚಂದ್ರಕಾಂತ – ಚಿತ್ರಲೇಖಾ, ಇದೋ..........ಇಂದಿನಿಂದ..........ಅಲ್ಲ! ಈಗಿಂದೀಗಲೇ.....ಭಾಷಣ ಸತ್ಯಾಗ್ರಹ! ಅಂದರೆ, ನಿಮ್ಮ ಸಂಗಡ....ಮಾತಿನಿಂದ ಬಹಿಷ್ಕಾರ!

ಚಿತ್ರಲೇಖ – ನಿಮ್ಮ ಸಂಗಡ ಈಗಿಂದೀಗಲೇ ನಮ್ಮ ಅಸಹಕಾರ! .......... ಸಖೀ, ನಡೆ ಹೋಗುವಾ. (ಎಂದು ಹೋಗಹತ್ತುವರು)

ಚಂದ್ರಕಾಂತ – ಹಾಂ, ಹಾಂ ಹಾಗೆ ಹೋಗಕೂಡದು. ಈ ಸೌಧಾಗ್ರ ಸಾಮ್ರಾಜ್ಯದಲ್ಲಿಯೇ ಎಲ್ಲವೂ ನಡೆದುಹೋಗಬೇಕು.

ಚಿತ್ರಲೇಖ – ಹಾಗಾದರೆ ನಿಮ್ಮ ಭಾಷಣ ಸತ್ಯಾಗ್ರಹಕ್ಕೆ ಭಂಗ ಬಂದಿತು, ಇದು ನಿಮ್ಮ ಸೋಲು!

ಅನಿರುದ್ಧ – ಭಂಗ ಬಂದಿಲ್ಲ, ಇದೀಗ ಅದು ಪ್ರಾರಂಭವಾಗಲಿದೆ. ಮಿತ್ರಾ, ನಾವು ಇಲ್ಲಿಯೇ ಇದ್ದು, ಇವರ ಸಂಗಡ ಮಾತಾಡಕೂಡದು. ಇದೇ ನಾವೀಗ ಹೂಡುವ ಯುದ್ಧದ ಮೊದಲನೇ ನೇಮ! ಯಾರು ಮೊದಲು ಮಾತನಾಡುವರೋ ಅವರು ಸೋತ ಹಾಗೆ.

ಉಷಾ – ಸಖೀ ನಾವು ಎಂದೆಂದಿಗೂ ಮಾತಾಡಕೂಡದು. ಇದೋ, ಇಲ್ಲಿಯೇ ವಿಶ್ರಮಿಸೋಣ. (ಈರ್ವರೂ ಇವರಿಗೆ ವಿಮುಖರಾಗಿ

ಕೂಡುವರು)

**ಅನಿರುದ್ಧ –** ಮಿತ್ರಾ, ನನ್ನನ್ನೊಬ್ಬಳು ಕದ್ದುಕೊಂಡು, ತಂದಳು. ಕದ್ದವರು ಅಪರಾಧಿಗಳ ಅಥವಾ ಕದಿಯಲ್ಪಟ್ಟವನೇ ಅಪರಾಧಿಯೋ–ನೀನೇ ನಿರ್ಣಯಿಸಿ ಹೇಳು.........

**ಚಂದ್ರಕಾಂತ –** ಕದ್ದವರೇ ಅಪರಾಧಿಗಳು, ಇದೇ ನ್ಯಾಯಸಮ್ಮತ.

**ಉಷಾ –** ಯೋಗ್ಯ ನಿರ್ಣಯ! ಛೆ ಛೆ ಯಾರು ನಿಮ್ಮನ್ನು ಕದ್ದು ತಂದರು!

**ಚಂದ್ರಕಾಂತ –** ಸಖಾ, ನಾವು ಜಯಶೀಲರಾದೆವು, ಒಳ್ಳೆಯ ಯುಕ್ತಿವಾದವನ್ನು ಹೂಡಿದೆ. ಜಯಲಾಭವಾಯಿತು!

**ಚಿತ್ರಲೇಖ –** ಹಾಂ, ಹಾಂ, ಜಯಶೀಲರಾಗಲಿಲ್ಲ, ಸುಮ್ಮನೆ ಹಿಗ್ಗಿ ನಲಿಯಬೇಡಿ– ಮೊದಲು ನೀವು ತಪ್ಪಿದಿರಿ, ಈಗ ನಾವು ತಪ್ಪಿದೆವು. ಎರಡೂ ಬಣಗಳಿಗೀಗ ಸಮವಾದ ಸೋಲು! ಈಗ ಪ್ರಾರಂಭವಾಗಲಿ– ಇಲ್ಲಿಂದ ನಾವು ಮಾತಾಡುವದೇ ಇಲ್ಲ. ಸಖೀ, ಪುರುಷರು ಚತುರರು! ನಾವು ಮಾತಾಡಲೇಕೂಡದು. ಹಾಂ..........

**ಉಷಾ –** ಹೌದು, ಸಖೀ–ಮರೆತೆ..........ಕ್ಷಮಿಸು.

**ಚಿತ್ರಲೇಖ –** ಸಖೀ..........ಒಂದಾನೊಂದು ದಿವಸ....ಹಾಂ, ಚೆನ್ನಾಗಿ ಕೇಳು..........ಕಾಳಿರುಳಿನಲ್ಲಿ ನನಗೊಬ್ಬ ಕಳ್ಳನು ಸಿಕ್ಕನು..........

**ಚಂದ್ರಕಾಂತ –** ನೀನು ಕಳ್ಳಿಯೋ–ನಾನು ಕಳ್ಳನೋ? ..........

**ಅನಿರುದ್ಧ –** ಸುಮ್ಮನಿರು, ಮಿತ್ರಾ. ನಮ್ಮ ಭಾಷೆಗೆ ಭಂಗ ಬರುವದು!

**ಉಷಾ –** ಹಾಂ, ನಾವು ಗೆದ್ದೆವು. ವಿಜಯದ ಪತಾಕೆಯು ನಮ್ಮನ್ನು ಸೇರಿತು.

**ಅನಿರುದ್ಧ –** ಯಾರನ್ನೂ ಸೇರಿಲ್ಲ ಉಭಯಪಕ್ಷಗಳು ಇದೀಗ ಸಮನಾಗಿವೆ. ಹೂಂ, ಮತ್ತೆ ಪ್ರಾರಂಭವಾಗಲಿ ನಮ್ಮ ಸ್ವಾತಂತ್ರ್ಯ ಯುದ್ಧ!

**ಚಿತ್ರಲೇಖ –** ಆಗಲಿ, ಸಖೀ, ನೀನು ಬಹು ಮುಗ್ಧೆಯಮ್ಮಾ! ಇನ್ನೊಮ್ಮೆ ಎಂದಿಗೂ ಮಾತಾಡಬೇಡ. (ಎಲ್ಲರೂ ಹಿಮ್ಮುಖವಾಗಿ ಕುಳಿತುಕೊಳ್ಳುವರು) (ನಾರದನು ಪ್ರವೇಶಿಸಿ, ಆಶ್ಚರ್ಯದಿಂದ)

**ನಾರದ –** ನಾರಾಯಣ, ನಾರಾಯಣ, (ನೋಡಿ) ಏನಿದೀ ವಿಚಿತ್ರ! ನೂತನ ಯುಗ್ಮಗಳು! ನೂತನ ಮಂಟಪ! ನೂತನ ದೃಶ್ಯ!

ಚಂದ್ರಕಾಂತ – (ದಿಗಿಲುಗೊಂಡು) ಮಿತ್ರಾ, ಗೂಢವು ಸ್ಫೋಟವಾಯಿತು. ನಮ್ಮ ಅನುಸಂಧಾನವು ನಾರದರಿಗೆ ತಿಳಿದರೆ ಮೂರು ಲೋಕಂಗಳಿಗೆ ತಿಳಿದಂತಾಯಿತು.

ಅನಿರುದ್ಧ – ಅಳುಕದಿರು, ನಾರದರು ನಮಗೆ ಆಪ್ತಬಂಧುಗಳು. ಆ ವ್ಯವಸ್ಥೆಯನ್ನು ನಾನು ಮಾಡುತ್ತೇನೆ, ಅಂಜಬೇಡ. (ಅನಿರುದ್ಧನು ನಾರದನಲ್ಲಿಗೆ ಹೋಗುವನು)

ಚಂದ್ರಕಾಂತ– (ಅಸಹ್ಯ ವೇದನೆಯಿಂದ, ಆತ್ಮಗತವಾಗಿ) ಅಂಜಬೇಡ! ಅಂಜಲೇಬೇಕು. ರಾಜದ್ರೋಹಿಯು ಅಂಜಲೇಬೇಕು.

ಅನಿರುದ್ಧ – ಯತಿಕುಲ ಚೂಡಾಮಣಿಯ ಪಾದಪದ್ಮಗಳಲ್ಲಿ ದಂಡವತ್ ಪ್ರಣಾಮಗಳು.

ನಾರದ – ಸಹಸ್ರಾಯುಷ್ಮಂತನಾಗಿ ಬಾಳು, ಬಾಳಾ!

ಚಂದ್ರಕಾಂತ – ಮಹರ್ಷಿಗಳಲ್ಲಿ ಅಭಿವಂದನೆಗಳು!

ನಾರದ – ಕೀರ್ತಿಶಾಲಿಯಾಗಿ ಬಾಳು, ವೀರವರ!

ಉಷಾ – (ವಂದಿಸಿ ನಿಲ್ಲುವಳು)

ನಾರದ – ಅಷ್ಟಪುತ್ರ ಸೌಭಾಗ್ಯವತೀ ಭವ!

ಚಿತ್ರಲೇಖ – (ವಂದಿಸುವಳು) ದೀರ್ಘ ಸುಮಂಗಲೀ ಭವ!

ಅನಿರುದ್ಧ – ಪೂಜ್ಯಪಾದರೆ, ಈ ಪೀಠವನ್ನಲಂಕರಿಸಿರಿ.

ಚಂದ್ರಕಾಂತ – (ಆತ್ಮಗತ, ಜನಾಂತಿಕ) ಮಧ್ಯರಾತ್ರಿಯಲ್ಲಿ ಈ ಮೂರ್ತಿಯ ಆಗಮನ! ಈ ಸಂಚಿನ ಅರ್ಥವೇನು..........ಕುಟಿಲ ಕಾರಸ್ಥಾನವೇ ಆರ್ಯನೀತಿಯ ಬಂಡವಾಳ! ..........ಸಾಗಲಿ....ಹೃದಯವನ್ನು ಮಾರಿಕೊಂಡು ಪರಾಧೀನನಾಗಿದ್ದೇನೆ....ನಿರಾತಂಕವಾಗಿ ಸಾಗಲಿ.

ನಾರದ – (ಆಸನಾಶೀಲನಾಗಿ) ಅನಿರುದ್ಧಾ, ಎಲ್ಲವೂ ಕುಶಲವಷ್ಟೆ?

ಅನಿರುದ್ಧ – ತಮ್ಮ ಅನುಗ್ರಹ! ..........ತಮ್ಮ ಕೃಪೆಯಿಂದ ಕ್ಷೇಮದಿಂದಿದ್ದೇನೆ. ಆದರೆ ತಮ್ಮಲ್ಲಿ ಒಂದು ವರವನ್ನು ಬೇಡುವೆ..........ನಮ್ಮ ಈ ಗುಪ್ತಸಂಧಾನವು ಸ್ಫೋಟವಾಗದಿರಲಿ.

ನಾರದ – ಆಗಲಿ, ಕುಮಾರಾ! ನನ್ನ ಸಾಹಸವೆಲ್ಲವೂ ನಿನ್ನ ಕ್ಷೇಮಕ್ಕಾಗಿಯೇ. ನೀನೀಗ ಪ್ರೇಮರಾಜ್ಯದಲ್ಲಿ ಎಚ್ಚರದಪ್ಪಿ ಬಿದ್ದಿರುವೆ. ನಿನ್ನ ಮಾತಾಪಿತೃಗಳ ಗತಿಯೇನು?

ಅನಿರುದ್ಧ – ಅದೆಲ್ಲ ನಿಮಗೆ ಅರಿಕೆ ಇದೆ, ಸ್ವಾಮಿ! ಈ ನನ್ನ ಅಸಹಾಯ ಪರಿಸ್ಥಿತಿಯ ಸಮಾಚಾರವನ್ನು ನಮ್ಮ ತಾತನಿಗೆ ಮುಟ್ಟಿಸಿರಿ–ನಿಮ್ಮ ವಾತ್ಸಲ್ಯಪೂರಿತ ಸಂದೇಶದಿಂ ಪಿತಾಮಹಾನು ಉಪಾಯಾಂತರದಿಂದ ಕಾರ್ಯವನ್ನು ಸಾಧಿಸಬಹುದು.

ನಾರದ – ಸುಕುಮಾರಾ, ನಿನ್ನ ಎಲ್ಲಾ ಸದಾಶಯೆಗಳನ್ನು ಪೂರೈಸುತ್ತೇನೆ. ಇದೀಗ ಮಧ್ಯರಾತ್ರಿ–ನೀನು ಶಾಂತನಾಗಿರು. ಇನ್ನು ಸಮಯವಿಲ್ಲ– ನಾನು ಹೋಗುತ್ತೇನೆ.

ಅನಿರುದ್ಧ – ಆಗಬಹುದು, ದಯಪಾಲಿಸಿರಿ

ನಾರದ – ತಥಾಸ್ತು (ಹೋಗುವನು)

ಚಂದ್ರಕಾಂತ – ಮಿತ್ರಾ, ಮರಳಿ ಭೆಟ್ಟಿಯಾಗುತ್ತೇನೆ ಇದೀಗ ನಿಶಾದೇವಿಯು ದ್ವಿತೀಯ ಯಾಮದಿಂದ ತೃತೀಯ ಯಾಮದಲ್ಲಿ ನುಗ್ಗುತ್ತಿರುವಳು. ನಾನು ಕರ್ತವ್ಯಮೂಢನಾಗಿದ್ದೇನೆ. ಅಪ್ಪಣೆಯನ್ನು ದಯಪಾಲಿಸು.

ಅನಿರುದ್ಧ – ಆಗಲಿ, ಮಿತ್ರಾ, ಪ್ರೇಮವಿರಲಿ

ಚಿತ್ರಲೇಖ – ಮನಮೋಹನಾ, ನಿನ್ನನ್ನೇ ಹಿಂಬಾಲಿಸುವೆನು. ಇದೋ ಬಂದೆ, ಪ್ರಿಯತಮಾ – ಬರುವೆನು....

ಚಂದ್ರಕಾಂತ – ಬಾ, ಪ್ರಿಯೆ..........! (ಮುಗುಳುನಗೆಯಿಂದ ಕೈಗಳನ್ನು ಹಿಡಿದು ಕೊಂಡು ಹೋಗುವರು. ಉಷೆಯು ಸುಹಾಸದಿಂದ ಬೀಳ್ಕೊಡುವಳು)

## ದೃಶ್ಯ ೧೨. ಬಾಣಾಸುರನ ಒಡ್ಡೋಲಗ

[ಬಾಣಾಸುರನ ಹುಟ್ಟುಹಬ್ಬದ ಆನಂದೋತ್ಸವ, ರಾಜಧಾನಿಯಲ್ಲೆಲ್ಲಿಯೂ ಆನಂದ, ಹಾಸ್ಯ, ಶೃಂಗಾರ, ಶಿವಸಂಕೀರ್ತನೆಗಳಿಂದ ತುಂಬಿದ ಹೊಳೆಯು ಹರಿಯುತ್ತದೆ. ಉದ್ದಾಮ ವೀರನಾದ ದೈತ್ಯೇಂದ್ರನು ಸುವರ್ಣ ಖಚಿತವಾದ ಸುಂದರ ಉಡುಪಿನಲ್ಲಿ ಶೃಂಗರಿಸಲ್ಪಟ್ಟವನಾಗಿ ಸಿಂಹಾಸನಾರೂಢನಾಗಿದ್ದಾನೆ. ಅಮಾತ್ಯ, ಸೇನಾಪತಿಗಳು ತಮ್ಮ ತಮ್ಮ ಗೌರವಸ್ಥಾನಗಳನ್ನು ಅಲಂಕರಿಸಿದ್ದಾರೆ.

ಸಾಮಂತ ರಾಜರೂ, ಪ್ರಜಾನಾಯಕರೂ ಅನುಕ್ರಮವಾಗಿ ಕುಳಿತಿದ್ದಾರೆ.]

**ಬಾಣಾಸುರ** – ಇಂದು ನಮ್ಮ ಹುಟ್ಟುಹಬ್ಬದ ಆನಂದೋತ್ಸವದಲ್ಲಿ ನೀವೆಲ್ಲರೂ ಅಭೂತಪೂರ್ವವಾದ ಉತ್ಸಾಹದಿಂದ ಭಾಗವಹಿಸಿರುವದ್ದನ್ನು ಕಂಡು, ನಾನು ಅಪಾರವಾದ ಆನಂದಾಂಬುಧಿಯಲ್ಲಿ ಈಜಹತ್ತಿದ್ದೇನೆ.

**ಎಲ್ಲರು** – ಶಾಂತಂ!

**ಬಾಣಾಸುರ** – ನಿಮ್ಮೆಲ್ಲರ ಸ್ವಾಮಿಭಕ್ತಿಯಿಂದ ನಮ್ಮ ಸಾಮ್ರಾಜ್ಯದ ಯಶಸ್ಸೂರ್ಯನು, ಶೋಣಿತ ಗಗನದಲ್ಲಿ ಅವಿಚ್ಛಿನ್ನ ಕಾಂತಿಯಿಂದ ಬೆಳಗುತ್ತಿರುವನು....

**ಎಲ್ಲರು** – ಸಮೃದ್ಧಂ!

**ಬಾಣಾಸುರ** – ನಮ್ಮ ಸೇನಾಸಮೂಹ ಸಮ್ಮೋದನಾರ್ಥವಾಗಿ ಶತ ಸಹಸ್ರ ವರಗಳನ್ನು ಪ್ರದಾನ ಮಾಡಿದ್ದೇನೆ. ನಮ್ಮ ಪ್ರಜೆಗಳಿಗೆ, ಸಕಲ ಸಂರಕ್ಷಣೆಗಳ ಸೌಲಭ್ಯಗಳನ್ನು ಒದಗಿಸಿಕೊಡುತ್ತೇನೆಂದು, ಈ ಸುಸಂದರ್ಭದಲ್ಲಿ ಆಶ್ವಾಸನ ಕೊಡುತ್ತೇನೆ.

**ಎಲ್ಲರು** – ಮಹದ್ಭಾಗ್ಯಂ!

**ಬಾಣಾಸುರ** – ಭಾವೀ ಹೊಸ ಸಂವತ್ಸರದಲ್ಲಿ, ಸರ್ವೇಶ್ವರನಾದ ಸ್ವಯಂಭುವು ಸರ್ವರಿಗೂ ಪರಿತೋಷ ಪ್ರದಾನಮಾಡಲೆಂದು, ಈ ಸಮಯದಲ್ಲಿ ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

**ಎಲ್ಲರು** – ಶಾಂತಂ ಸಮೃದ್ಧಂ!

**ಬಾಣಾಸುರ** – ಅಮಾತ್ಯರೇ, ಈ ಆನಂದೋತ್ಸವದಲ್ಲಿ ನಾವು ದೀನದುಃಖಿಗಳನ್ನು ಮರೆಯಕೂಡದು. ಕಾಶ್ಮೀರದ ಕಣಿವೆಗಳಲ್ಲಿ ಬೆಳೆದ ಉರುಟು ಪಾಳಯಗಾರರೆಲ್ಲರಿಗೆ ಸಂಸ್ಕೃತಿಯ ಗಂಧವಿಲ್ಲ. ಕಾಶ್ಮೀರಾಧಿಪನಿಗೆ ನಮ್ಮ ಸಂಸ್ಕೃತಿಯ ಜ್ಞಾನವನ್ನುಂಟುಮಾಡಿ, ಬಂಧಿಯಾದ ಅವನನ್ನು ಬಂಧುಮುಕ್ತನನ್ನಾಗಿ ಮಾಡಿರಿ–ಇದು ನಮ್ಮಾಜ್ಞೆ!

**ಕುಂಭಕ** – ಮಹಾವತಾರ! ಅಪ್ಪಣೆಯನ್ನು ಶಿರಸಾವಹಿಸಿ ಪಾಲಿಸುತ್ತೇನೆ.

**ಬಾಣಾಸುರ** – ಸಚಿವಶ್ರೇಷ್ಠರೇ, ಭೂತಗಳನ್ನೇ ನಂಬಿ–ಅರ್ಥಿಯಿಂದ ಆರಾಧಿಸುವದು ಆತ್ಮದ್ರೋಹವೆಂದು ತಿಳಿಸಿ! ಆ...ಅರೆಹುಚ್ಚ ಮಾಧವ ಮುನಿಯನ್ನು ಬಂಧಮುಕ್ತ ಮಾಡು–ಅಹಹ, ಇದು ನಮ್ಮ ನಿರೋಪ!

**ಕುಂಭಕ** – ಮಹಾಪ್ರಸಾದ, ತಮ್ಮ ಕೃಪಾಕ್ಷೇತ್ರದಲ್ಲಿ ಪಾಲಿಸಲ್ಪಡುವ ಪ್ರಜಾಕೋಟಿಯು ಸಂಪತ್ಸಮೃದ್ಧಿಯಿಂದ ನಲಿಯುತ್ತಿರುವದು ಪ್ರಭುಗಳ ವಿಮಲಕೀರ್ತಿಜ್ಯೋತಿಯನ್ನು, ಪ್ರಜಾವರ್ಗವು ನಂದಾದೀಪದಂತೆ ಕಾಪಾಡಿಕೊಂಡಿರುವದು. ಪ್ರಜೆಗಳು ಹೃತ್ಪೂರ್ವಕವಾಗಿ ಅರ್ಪಿಸಲಿರುವ, ಅಭಿನಂದನಾರೂಪವಾದ ಈ ರತ್ನಮಾಲಿಕೆಯನ್ನು ಪ್ರಭುಚಿತ್ತವು ದಿವ್ಯ ಸನ್ನಿಧಿಯಲ್ಲಿ ಅರ್ಪಿಸಿಕೊಳ್ಳಬೇಕು. (ಮಾಲೆ ಹಾಕಿ) ಪರಮಾತ್ಮನು ಪ್ರಭುಗಳ ಆಯುರಾರೋಗ್ಯಗಳನ್ನು ಸಂಸಾರ ಸಂತಾನಗಳ ಆಯುರಾರೋಗ್ಯವನ್ನು ನೀಡಲೆಂದು ಭಕ್ತಿಪೂರ್ವಕವಾಗಿ ಬೇಡುತ್ತೇನೆ.

ಎಲ್ಲರು – ಜಯಶಂಕರ ! ಹರಹರ ಮಹಾದೇವ!

ನಾರದ – (ಪ್ರವೇಶಿಸಿ) ವೀರ ಮಾರ್ತಾಂಡನಿಗೆ ವಿಜಯವಾಗಲಿ!

**ಬಾಣಾಸುರ** – ಸಂತೋಷ! ನಾರದರೆ, ಸುಸಂದರ್ಭದಲ್ಲಿ ತಮ್ಮ ಆಗಮನವಾಯಿತು. ಬನ್ನಿರಿ. ಆ ಸುಖಾಸನವನ್ನು ಅಲಂಕರಿಸಿರಿ.

ನಾರದ – ಕೀರ್ತಿಶಾಲಿಯಾಗಿ ಬಾಳು, ದೈತ್ಯೇಂದ್ರ! ಇಂದು ಎಲ್ಲೆಲ್ಲಿಯೂ ಶುಭಸೂಚನೆಗಳೇ ದೃಗ್ಗೋಚರವಾಗುತ್ತಿರುವವು. ಇಂದು ಶೋಣಿತ ಸಾಮ್ರಾಜ್ಯಲಕ್ಷ್ಮಿಯು ತಮ್ಮ ಯಶೋವರ್ಧನದ ಸಾಮಗಾನವನ್ನೇ ಹಾಡುತ್ತಿರುವಳು!

**ಬಾಣಾಸುರ** – ಅಹಹಹ! ಇಂದು ನಮ್ಮ ಜನ್ಮೋತ್ಸವದ ಶುಭೋದಯ! ಸೇವಕರೇ, ಆ ಫಲಪುಷ್ಪಗಳನ್ನು ನಾರದಮಹರ್ಷಿಗಳಿಗೆ ಅರ್ಪಿಸಿರಿ. (ನಾರದರಿಗೆ ಫಲಪುಷ್ಪಗಳನ್ನು ಅರ್ಪಿಸುವರು) ಹೂಂ, ಸಾಗಲಿ! ಸಂಗೀತ, ನೃತ್ಯ! (ಸುಂದರ ಬಾಲಿಕೆಯರು ವೈಯಾರದಿಂದ ಬಂದು, ಮುಜುರೆ ಮಾಡಿ, ನೃತ್ಯ ಗಾಯನಗಳನ್ನು ಕಲಾಮಯವಾಗಿ ಅಭಿನಯಿಸುವರು. ಶೋಭಾಯ ಮಾನವಾದ ಸುಂದರ ಮಂದಿರವು, ಸಂಗೀತಮಯವಾಗಿದೆ. ಎಲ್ಲೆಲ್ಲಿಯೂ ಸುಖಶೃಂಗಾರಗಳ ಸುಗ್ಗಿಯು, ಬಾಣನು ಸುಖಾಸನದಲ್ಲಿ ವಿರಾಮದಿಂದ ಒರಗಿದ್ದಾನೆ. ಓರ್ವ ಸೇವಕನು ಮಧುರ ಪಾನೀಯವನ್ನು ಅಣಿಮಾಡಿಕೊಂಡು ದೊರೆಗಳ ಕೃಪಾವಲೋಕನವನ್ನೇ ಕಾದು ನಿಂತಿದ್ದಾನೆ.)

ರುದ್ರಾಕ್ಷ — (ತೆರೆಯಲ್ಲಿ) ಮಹಾರಾಜ, ಮಹಾರಾಜ!

ಬಾಣಾಸುರ — (ಹೊರಳಿ ನೋಡಿ) ಏನಿದು ಕೋಲಾಹಲ?

ರುದ್ರಾಕ್ಷ — (ತೆರೆಯಲ್ಲಿ) ಘಾತವಾಯಿತು, ಪ್ರಭು ಘಾತವಾಯಿತು!

ಬಾಣಾಸುರ — (ಸಿಡಿದು ಗೊಂಡವನಂತೆ ಎದ್ದು, ತೀಕ್ಷ್ಣ ಧ್ವನಿಯಲ್ಲಿ) ಯಾವ ಕರ್ಕಶ ವಾಣಿಯದು! ಕುಲಮದಾಂಧ! ನಿನ್ನ ಕುಲದ ಬೇರನ್ನೇ ಕತ್ತರಿಸಿ ಬಿಸಾಡುವೆ ಬಾ!

ರುದ್ರಾಕ್ಷ — (ಪ್ರಕಟವಾಗಿ, ಅಧೋವದನನಾಗಿ, ಅಂಜುತ್ತಂಜುತ್ತ) ಮಹಾಪರಾತ! ಅರಮನೆಯಲ್ಲಿ ಪರಪುರುಷ...!

ಬಾಣಾಸುರ — ನರಗುರಿಯೇ! ನಿನ್ನ ನಾಶದ ಹಾದಿಯು ಹಸನವಾಗಿರುವದೆ? ನಿನ್ನ ಪಂಚಪ್ರಾಣಗಳ ಪೂರ್ಣಾಯುಷ್ಯವು ಮುಗಿದಿರುವದೊ?

ರುದ್ರಾಕ್ಷ — ಮಹಾ..........ಮಹಾ..........ಮಹಾಪತಾರ! ಉ..........ಉ..........ಷಾ..........ರಾ..........ರಾಣಿಯ ಮಂದಿರದಲ್ಲಿ..........

ಬಾಣಾಸುರ — ನನ್ನ ಉಷೆಯ ಹೆಸರನ್ನು ನಿರ್ಭೀತನಾಗಿ ಉಚ್ಚರಿಸುವ ಜಡಾತ್ಮ! ಸೇರು ಪರಂಧಾಮವನ್ನು! (ಗದೆಯನ್ನು ಎತ್ತುವನು)

ರುದ್ರಾಕ್ಷ — (ಚಿಟ್ಟನೆ ಚೀರಿ, ಪದತಲದಲ್ಲಿ ಬಿದ್ದು) ಅಯ್ಯೋ, ಸತ್ತೆ ಬುದ್ಧಿ....ರಕ್ಷಿಸು, ಅಭಯ ನೀಡು....ಪರಪುರುಷ....

ಬಾಣಾಸುರ — (ನಿರ್ಭರಹೃದಯನಾಗಿ, ಗದೆಯು ಕಳಚಿ ಬೀಳುವದು) ಉಷಾ ಮಂದಿರಲ್ಲಿ ಪರಪುರುಷ! ಶೋಣಿತ ಸಾಮ್ರಾಜ್ಯದ ಭಾವೀ ಸಾಮ್ರಾಜ್ಞಿಯ ಅಂತಃಪುರದಲ್ಲಿ ಪರಪುರುಷನ ಪ್ರವೇಶ! ಉಷೆಯ ಸೌಧಾಗ್ರದ ಮೇಲೆ ಗಂಡು ಹಕ್ಕಿ ಹಾರಲು ನಮ್ಮ ಅಭಿಶಾಪವಿದೆ. ಅದಾವ ಪುರುಷಾಧಮನ ಎದೆಯು ಗಟ್ಟಿಗೊಂಡು ಉಷಾವಜ್ರಶಲ್ಯವನ್ನು ಹಾಯಲು ಹವಣಿಸಿತು!

ನಾರದ — ವಿಸ್ತಾರವಾಗಿ ಹೇಳುತ್ತೇನೆ—ಚಿತ್ತೈಸಬೇಕು, ಪ್ರಭು! ಉಷಾಮಂದಿರದ ಪ್ರಾಕಾರಭಿತ್ತಿಗಳನ್ನು ಒಂದೇ ಒಂದು ಗಂಡು ಕಿಟಕವು ಕೂಡಾ ಮುಟ್ಟಲು ಅಂಜುವದು. ಆದರೆ, ದೈವವಿಲಾಸವೇ ಬೇರೆ. ಉಷಾದೇವಿಯು ಯದುಕುಲ ಚೂಡಾಮಣಿಯಾದ ಅನಿರುದ್ಧನನ್ನು ಮೋಹಿಸಿ ಅಂತಃಪುರದಲ್ಲಿಟ್ಟುಕೊಂಡು ಇಂದಿಗೆ ಅರ್ಧ

ವರ್ಷವಾಯಿತು.

**ಬಾಣಾಸುರ** — (ಅಸಹ್ಯ ವೇದನೆಯಿಂದ ಮೆಟ್ಟಿಬಿದ್ದು) ಅರ್ಧ ವರ್ಷವಾಯಿತು! ..........ಯದುಕುಲ ಕೀಟಕ ನನ್ನ ಪ್ರೇಮಾಮೃತ ಧಾರೆಯಿಂದ ಸಾಕಿ ಸಲಹಿದ ಮಲ್ಲಿಕಾಲತೆಯ ಬುಡವನ್ನು..........ಕ್ಷುದ್ರಕೀಟಕವೊಂದು..........ಕಡಿದು ಕೆಡಹುತ್ತಿರುವದೆ.........ಹಾವಿನ ವಿಷಾರಿ ಹಲ್ಲುಗಳಲ್ಲಿ ಬಡಮೂಷಿಕವು ದಾರಿಯನ್ನು ಹುಡುಕುವದು ಶಕ್ಯವಿದೆಯೆ?

**ನಾರದ** — ಹೌದು, ವೀರಾ! ಉಷಾ ಅನಿರುದ್ಧರ ಅನುಸಂಧಾನವು ಅಮಾತ್ಯ ಕುಮಾರಿಯಾದ ಚಿತ್ರಲೇಖೆಯಿಂದ ನಡೆದಿರುವದು. ಚಿತ್ರಲೇಖೆಯೇ ಇವರಿಗೆ ಪ್ರೇಮದೀಕ್ಷೆ ಕೊಟ್ಟ ಗುರು.

**ಬಾಣಾಸುರ** — ಗಾರುಡಿ ಲೀಲೆ! ಬಾಣನ ಕಣ್ಣುಕಟ್ಟಿ ಅರ್ಧವರ್ಷದಿಂದ ಈ ಇಂದ್ರಜಾಲದ ಸೃಷ್ಟಿ! ಅಮಾತ್ಯಕುಮಾರಿ, ಚಿತ್ರಲೇಖಾ! ಫಾಲನೇತ್ರನಾದ ಕುಮಾರಿಯ ಮುಂದೆ ನಿನ್ನ ಕಾಮನ ಲೀಲಾಪ್ರದರ್ಶನವೆ! ತಾಳು. ಅಮಾತ್ಯರೆ, ನಿಮ್ಮ ಅಭಿಪ್ರಾಯವೇನು?

**ಕುಂಭಕ** — ಮಹಾಪ್ರಭು, ಸತ್ಯಸಾಕ್ಷಿಯಾಗಿ ನನಗಾವುದೂ ತಿಳಿಯದು.

**ನಾರದ** — ಸರ್ವಕಾರ್ಯಗಳಿಗೂ ಸಾಕ್ಷೀಭೂತರಾದ ಅಮಾತ್ಯರು ಅರಿಕೆ ಇಲ್ಲದವರಂತೆ ನಟಿಸುತ್ತಿರುವರು!

**ಬಾಣಾಸುರ** — ರಾಜದ್ರೋಹಿ, ಅಮಾತ್ಯ ಪದವಿಯನ್ನು ದುರುಪಯೋಗ ಪಡಿಸಿಕೊಂಡ ನೀಚಾಧಮಾ, ನಿನ್ನ ಕರಾಳ ಕೃತ್ಯದ ಕಹಿ ಫಲವನ್ನು ಶೀಘ್ರದಲ್ಲಿಯೇ ಅನುಭವಿಸು. ಎಲವೋ–ಬಂಧಿಸಿರಿ ಇವನನ್ನು, ಸೆಳೆದೊಯ್ಯಿರಿ ಸೆರೆಮನೆಗೆ ಈ ಸ್ವಾರ್ಥಸಾಧಕನನ್ನು! ಸ್ವಾರ್ಥದ ಸವಿಫಲವನ್ನು ಕ್ಷಿಪ್ರದಲ್ಲಿಯೇ ಅನುಭವಿಸುವೆ, ತಾಳು.

**ಕುಂಭಕ** — ಮಹಾಪ್ರಭು, ನಾನು ನಿರಪರಾಧಿ, ನಿಷ್ಕಲಂಕ. ಇದು ಕುಹಕಿಗಳು ಹೂಡಿದ ಕುಟಿಲೋಪಾಯ! ಮೋಸಹೋಗಬೇಡಿ ಪ್ರಭು! ಸ್ವಾರ್ಥಸಾಧಕರು ನಮ್ಮ ಸಾಮ್ರಾಜ್ಯವನ್ನು ನಾಶಮಾಡಲೋಸುಗ ಹೂಡಿರುವ ದುರಂತ ನಾಟಕ! ವಿಚಾರಶೀಲನಾಗು ಪ್ರಭು. ಸತ್ಯವನ್ನು ಶೋಧಿಸಿ, ಕುಹಕ ಕುಟಿಲತೆಗಳೆಂಬ ಹೆಜ್ಜಾಲಿಯ ಮರಗಳಿಗೆ ಕುಠಾರ ಪ್ರಾಯನಾಗಿ ಮೆರೆಯುವೆ–ಸ್ವಲ್ಪ ಸಾವಧಾನವಾಗಿ ವರ್ತಿಸು.

**ಬಾಣಾಸುರ** — ಕುಲಾಧಮಾ, ಪುತ್ರಿಯ ಕಾರಸ್ಥಾನವು ಕಲಂಕೀಪಿತನಿಗೆ ತಿಳಿಯದೆ! ಇದು ವಂಚನೆಯ ಸಂಚು! ಸತ್ಯದ ವಿಪರ್ಯಾಸ!

**ಕುಂಭಕ** — ಅಭದ್ರ ನುಡಿಯಬೇಡ, ಪ್ರಭು! ಅಸುರ ಸಂಸ್ಕೃತಿಗಾಗಿ, ಶೋಣಿತ ಸಾಮ್ರಾಜ್ಯದ ಭಾಗ್ಯದೇವತೆಗಾಗಿ ನನ್ನ ಸರ್ವಸ್ವವನ್ನು ಸೂರೆ ಮಾಡಬಲ್ಲೆ! ಪಿತಾಪುತ್ರಿಸಂಬಂಧಜನ್ಯವಾದ ವ್ಯಾಮೋಹವನ್ನು ಕೊಲೆಗೈದು ನಿನಗೆ ನಿವಾಳಿಗೈಯಬಲ್ಲೆ!

**ಬಾಣಾಸುರ** — ಇದು ಮಾತಿನ ಬಿಂಕ! ಬುರುಡೆಯ ಘಟಾಟೋಪ! ಸತ್ಯದ ವಿಡಂಬನೆ..........ಹೋಗು..........ಭೋಗಿಸು ನಿನ್ನ ಕೃತಕರ್ಮಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು! (ಸೇವಕರು ಬಂಧಿಸಿ ಎಳೆದೊಯ್ಯುವಾಗ)

**ಕುಂಭಕ** — ಅನ್ಯಾಯದ ಅತಿರೇಕ ! ಸತ್ಯದ ಸಮಾಧಿ! ಅಯ್ಯೋ ಅಯ್ಯೋ.... ದ್ರಾವಿಡ ಸಂಸ್ಕೃತಿಯ ಸರ್ವನಾಶ!....ರಾಕ್ಷಸ ಕುಲದೇವತೆಯಾದ ರಾಜಶೇಖರಾ.....ಸಾನಿಲ್ಲದಾಗ..........ನನ್ನ ಕುಲಸ್ವಾಮಿಯಾದ ರಾಕ್ಷಸರಾಜನನ್ನು ರಕ್ಷಿಸು. (ಹೋಗುವನು, ಎಳೆದೊಯ್ಯುವರು)

**ನಾರದ** — (ಸ್ವಗತ) ನಾರದರ ಸಲಹೆಯು ಈಗ ಯೋಗ್ಯವಾಯಿತಲ್ಲವೆ– ಸೇರಿರಿ ಸೆರೆಮನೆಯನ್ನು. ಇನ್ನು ಪಠಿಸಿರಿ, ನಿಮ್ಮ ಸ್ವಾಮಿಭಕ್ತಿಯ ಪಾರಾಯಣವನ್ನು! (ಪ್ರಕಟ) ಮಹಾರಾಜ! ಉಷೆಯು ಇದೀಗ ಐದು ತಿಂಗಳ ಗರ್ಭಿಣಿ!

**ಬಾಣಾಸುರ** — (ಮೆಟ್ಟಿಬಿದ್ದು) ಸಾಕು, ನಾರದರೆ! ಈ ಭಯಂಕರ ವೇದನೆ ನನ್ನನ್ನು ಶೂಲದ ಮೊನೆಯಂತೆ ಘಾತಿಸಿ ಹಿಂಸಿಸುತ್ತಿರುವದು! ಎಲೆ, ಉಷೆಯೆಂಬ ಕ್ರೂರ ಕಠಾರಿಯೆ! ವಿಜಯೋನ್ಮಾದದಿಂದ ಉಬ್ಬಿ ಈ ರಣ ಸಿಂಹನನ್ನೇ ಘಾತಿಸಿದೆಯಾ? ವಿಷಾರಿ ನಾಗಿಣಿ! ಹಾಲುಣಿಸಿದ ಹಸ್ತವನ್ನೇ ಕಚ್ಚಿ ವಿಷಪ್ರಾಶನ ಮಾಡಿಸಿದ ಕರಾಳ ಕಾಳಸರ್ಪಿಣಿ! ಅಯ್ಯೋ, ಯಾವುದನ್ನು ನಾನು ನನ್ನ ಜೀವರತ್ನವೆಂದು ರಕ್ಷಿಸಿದ್ದೆನೋ ಅದೇ..........ಅದು..........ಇಂದು ನನ್ನನ್ನು ಭಕ್ಷಿಸುವ ಘೋರ ಮೃತ್ಯುರೂಪದ ಮಹಾ ಮಾರಿಯಂತೆ ತೋರುತ್ತಿರುವದು! ದುರಾಚಾರಿಣಿ, ಕಲ್ಪವೃಕ್ಷದ ನೆರಳಲ್ಲಿ ಬೆಳೆದ ಕದಂಬ ವೃಕ್ಷವೇ–ನನ್ನ ಆಶಾವನಕ್ಕೆ ಕೊಳ್ಳಿ ಕೊಟ್ಟು, ಶ್ಮಶಾನವನ್ನಾಗಿ ಮಾರ್ಪಡಿಸಿದ ಡಾಕಿನಿ!....ನಿನ್ನ ನೀಚ ವಿಷಯ ಲಾಲಸೆಯ ತೃಪ್ತಿಗಾಗಿ, ನಿನ್ನ ಹೀನ ಜೀವನದ ಕಾಮೋಪಭೋಗಕ್ಕಾಗಿ ರಾಕ್ಷಸ

ರಾಜ್ಯದ ಅರವತ್ತು ಮಹರ್ಘ್ಯದ ಸಂಖ್ಯೆಯಲ್ಲಿ ನಿನಗೆ ಯಾರೂ ಸಿಗಲಿಲ್ಲವೇ? ನೀನು ಯಾವನಾದರೊಬ್ಬ ಸಾಮಾನ್ಯ ದೈತ್ಯವೀರನನ್ನು ಮೋಹಿಸಿದ್ದರೆ ಧಾರೆಯೆರೆದು ಕೊಡುತ್ತಿದ್ದೆ.........ಯಾವನಾದರೊಬ್ಬ ಪತಿತ, ರೋಗಿಷ್ಠ, ಇಲ್ಲವೆ....ಚಂಡಾಲನನ್ನು ಮೋಹಿಸಿದ್ದರೂ....ಈ ವಾತ್ಸಲ್ಯದ ಕರಗಳು ಇಷ್ಟು...ಇಷ್ಟು ಹಿಂಜರಿಯುತ್ತಿರಲಿಲ್ಲ–ಹೃದಯವು ಇಷ್ಟು ಕ್ಷೋಭೆಗೊಂಡು ತಳಮಳಿಸುತ್ತಿರಲಿಲ್ಲ. ಕುಟಿಲೆ, ದುರಾತ್ಮಳೆ, ನಿನ್ನ ದುರಂತ ದುರಾಚಾರದ ವಿಷೋಜ್ವಲ ಅಗ್ನಿಜ್ವಾಲೆ ನನ್ನ ತೇಜೋವಾಹಿನಿಗಳಲ್ಲಿ ವಿದ್ಯುದ್ವೇಗದಿಂದ ಸಂಚರಿಸಿ, ಜ್ವಾಲಾಮುಖಿಯಂತೆ ತನಿಗೆಂಡಗಳನ್ನು ಕಾರುತ್ತಿರುವದು. ವೈರಿಗಳ ಸಂತೆಯಲ್ಲಿ ನನ್ನ ಶಿರವನ್ನು ಮಾರಿಕೊಂಡು ದೈತ್ಯಜಾತಿಯನ್ನೇ ನುಂಗಲು ಬಂದ ಪ್ರಳಯ ದುರ್ಗಿಯೇ, ನೀನಿನ್ನು ಬದುಕಲಾರೆ– ನಿನ್ನನ್ನು ಯಮಸದನಕ್ಕಟ್ಟದೆ ಬಿಡಲಾರೆ!

**ನಾರದ** — ದೈತ್ಯರಾಜಾ, ನಿನ್ನ ವೈರಿಯನ್ನೇ ದಮನಮಾಡುವ ಸುಯೋಗವು ಪ್ರಾಪ್ತವಾಗಿರುವುದು.

**ಬಾಣಾಸುರ**— ಸುಯೋಗ! ಸುಯೋಗವನ್ನು ಸಂಧಿಸಿಕೊಟ್ಟ ಎಲೆ ಕಾಲ! ಅವ್ಯಾಹತವಾಗಿ ತಿರುಗುತ್ತಿರುವ ನಿನ್ನ ಕಾಲಯಂತ್ರದ ಕೀಲನ್ನೇ ಮುರಿದು ಚೆಲ್ಲುತ್ತೇನೆ ನಿಲ್ಲು! ಆಕಾಶದಲ್ಲಿದ್ದ ಗ್ರಹಗಳು ಮುನಿದು ಇಂದು ನನ್ನ ನೆತ್ತಿಯ ಮೇಲೆ ಸಿಡಿಲಿನ ಧಾರೆಯನ್ನೇ ಸುಡುತ್ತಿರುವವು! ಕಂಪನೆ, ಅತೀವ ಕಂಪನೆ! ಪದಪ್ರದೇಶದಲ್ಲಿರುವ ಭುವಿಯು ನಡುಗುತ್ತಿರುವುದು! ನಡುಗದಿರು, ಎಲೆ ಧರಣಿ, ಅಂಜಿ ಕುಸಿಯದಿರು! ಪರಬಲದ ಮೂಳೆಗಳಿಂದ ನಿನ್ನ ಅಸ್ತಿಭಾರವನ್ನು ಭದ್ರಗೊಳಿಸುತ್ತೇನೆ, ತಾಳು! ಒಡಲ ವಾರಿಧಿಯಲ್ಲಿ ಹುಟ್ಟಿರುವ ಬಡವಾಗ್ನಿ ಪ್ರಳಯಾಂತ ಕಿಡಿಗಳನೆ ಕಾರುತಿದೆ! ಉರಿಯುತಿದೆ, ಬಡವಾಗ್ನಿ! ಶಕ್ತಿಯನೆ ಹಿಮ್ಮೆಟ್ಟಿ, ವಿಷ್ಣುಲೋಕವ ಸುಟ್ಟು, ಶಿವನ ಶಾಂತಿಯ ಕೆಡಿಸಿ, ರುದ್ರ ಮಾರ್ಗದಿ ನೆಗೆದು, ಬ್ರಹ್ಮಪೀಠವನೊದೆದು, ಪುಟನೆಗೆದು ಕೂಗುತಿದೆ! ತನಿಗೆಂಡಗಳ ಕಾರಿ, ಸೂಯುತಿದೆ ಬಿರುಗಾಳಿ! ನಿಲಯ ಮಾರುತ ಧಾಳಿ! ಪ್ರಜ್ವಲಿಸಿ ಉರಿಯುತಿದೆ, ಒಡಲ ದಳ್ಳುರಿಯ! ಓ! ......... ಜ್ವಲಂತ ಜ್ವಾಲಾಮಾಲ...ಆಗಸದ ಆಸನದಿ ಅಂತಿಮದ ಅಂಚಿನಲಿ, ಅಂತಕನು ರಚಿಸುತಿಹ ಮತ್ತೊಂದು ದುರಂತ ಮಹಾ ರಣವ! ಬ್ರಹ್ಮಗರ್ಭವ ಬಿಚ್ಚಿ, ದೇಹ ದೇಗುಲಕೆಲ್ಲ ಬೆಂಕಿಯನೆ ಹಚ್ಚಿ, ರೋಷ

ರೌದ್ರದ ಶಕ್ತಿ ಗರಿಗೆದರಿ ಚಿಮ್ಮುತಿದೆ–ಶಿರಶಿಖರ ಸೀಳಿ, ಜ್ವಲಂತಪ್ರವಾಹಿನಿ! ಹರಿಯುತಿದೆ. ಭಾರಿ ಪಾಪದ ಮೈಥರಣಿ–ತೇಲಿ ಬರುತಿರುವದೊಂದು ವಿಗಡಕಾಲನ ಶಕ್ತಿ–ಏಕಾಂತವನೆ ಬಿಟ್ಟು, ಲೋಕಾಂತವನೆ ಸುಡಲು, ಉರಿಯುತಲೆ ಬರುತಿಹುದು, ಉರಿಗಣ್ಣ ರುದ್ರನ ನಚ್ಚು ರೊಚ್ಚಿನ ಕಿಚ್ಚು–ಕೇಳುವುದು ನಾದ–ಇಳೆಯ ನಾಶದ ನಾದ–ವಿಶ್ವವನು ವಿರಾಟ ಗರ್ಭದಲಿ ಬೈಚಿಡುವ ಭೈರವ ಭಂ ನಾದ–ಅಹಹಹ, (ವಿಕಟ ನಗೆ) ಅಹಹಹ, ಬರಲಿರುವ ಬಾಣ! ವಿಲಯಕಾಲದ ಬಾಣ! ಅಹಹಹ! (ಖಡ್ಗವನ್ನು ವರೆಸೆಳೆದು) ಅಹಹಹ ಖಡ್ಗ! ಕುಣಿಯುತಿದೆ ಖಡ್ಗ! ಬ್ರಹ್ಮಾಂಡಭಾಂಡವನು ಪುಡಿಗೈದು ತೂರಬಲ್ಲ ಖಡ್ಗ! ಕುಲಮಾರಿಯನ್ನು ಕಾಲಸದನಕ್ಕಟ್ಟುವ ಖಡ್ಗ! ಕೃತ್ರಿಮ ಜೀವಗಳ ಕರುಳುಗಳನ್ನು ಬಗೆಯುವದು ಇದೇ ಖಡ್ಗ.........! (ಓಡುವನು)

ನಾರದ — (ಸ್ವಗತ) ಇದೀಗ ನಾನು ಹತ್ತಿಸಿದ ಅಗ್ನಿಯು ಯಥಾರ್ಥವಾಗಿ ಉರಿಯಹತ್ತಿತು ದೈತ್ಯಪಿಶಾಚಿಗಳಿಗೆ ಇದೇ ತಕ್ಕ ಪ್ರಾಯಶ್ಚಿತ್ತ! (ಪದ ಹಾಡುತ್ತ ಹೋಗುವನು)

(ತೆರೆ ಬೀಳುವದು)

## ದೃಶ್ಯ ೧೩. ರುದ್ರಾಕ್ಷನ ಮನೆ

(ರುದ್ರಾಕ್ಷ ಓಡುತ್ತೋಡುತ್ತ ಬಂದು)

ರುದ್ರಾಕ್ಷ — ಚನ್ನಿ, ಏ ಚನ್ನೀ ! ಇಲ್ಲಿ ಬಾ....ಭಾಳ ಬೇಸ ಹೇಳ್ದಿ. ಒಂದೇ ಉಸಿರ್ಲೇ ಓಡಿಬಂದು ದಮ್ಮ ಹತ್ತೇದ, ಲಗೂನೆ ಸ್ವಲ್ಪ ನೀರ ತಾ...

ಚನ್ನಿ — ಅಯ್ಯ ನನ ನರಿರಾಯಾ, ಬಂದೇನು? ನೀ ಯಾಕ ಅಷ್ಟು ಗಡ ಬಡಾಸ ಓಡಿಬಂದಿ?

ರುದ್ರಾಕ್ಷ — ಏ ನಿನ! ಲಗೂನೆ ನೀರ ತಾ! ನಾ ಇಷ್ಟು ಬಡಕೋತೀನಿ–ಹೆಂಗಸರ್ಗೆ ಹ್ಯಾಂಗ ತಿಳೀಬೇಕು–ನನ್ನ ತಾಪತ್ರಯ! ಹೋಗು, ಹೋಗು ಅಂಬೋದೆ ಗೊತ್ತು. ನಮ್ಮ ಹಿರೇರ ಪುಣ್ಯಾ ಭಾಳ ಇತ್ತಂತ ಬದುಕಿ ಬಂದೆ. ಇಲ್ಲದಿದ್ದರ ಇಷ್ಟೊತ್ತಿಗೆ ಯಮಲೋಕದಾಗ ಮೇಜವಾನಿ ನಡೀತಿತ್ತು ನಂದು! (ನೀರು ಕುಡಿದು) ಅಹಹಹ!

ಈಗ ನಾ ಬದುಕಿಕೊಂಡೆನಪ್ಪ! ಆಂವಾ ಆ ಕಡೆ ಎಳಿಯೋ–ನಾನು ಈ ಕಡೆ ಎಳಿಯೋ...ಜಗ್ಗಾಡ್ರೊಳಗ ಸಾಕುಬೇಕಾತು, ನೋಡು.

ಚನ್ನಿ – ಯಾರು ನಿನ್ನ ಇಷ್ಟು ಜಗ್ಗಿದವರು? ಅಯ್ಯ, ಪಾಪ! ಮೈ ನುಗ್ಗಾಯ್ತೇನು? (ಮೈ ಜಾಡಿಸುವಳು)

ರುದ್ರಾಕ್ಷ – ಬಿಡು, ಬಿಡು ನಿನ, ಈಗೇನು ಜಾಡಿಸ್ತೀ–ಯಾರು ಯಾರು ಅಂತ ಕೇಳ್ತೀ ಮತ್ತ. ಅಂವ ಯಮ ಆ ಕಡಿಗೆ ಜಗ್ಗೋದು–ನಾನು ಇತ್ತ ಕಡಿಗೆ ಜಗ್ಗೋದು. ಏ ಮಾರಾಯಾ ತಡಿ, ಸ್ವಲ್ಪ ನಮ್ಮ ಚನ್ನೀಗೆ ಹೇಳಿ ಬರ್ತೀನಿ. ತುಸಾ ತಡಿ, ಅಂತ ಬಂದೆ. ಮತ್ತೆಲ್ಲಾರ ಬಂದ್ನೇನು ಆಂವಾ ಆ ಕಳ್ಳ ಯಮಾ ಹೊಂಚು ಹಾಕ್ಕೊಂಡು! ಸಾವಿನ ಬಾಯಾಗಿಂದ ಪಾರಾಗಿ ಬಂದೆ ನೋಡು! ಆದರೆ ಹೇಳ್ತಾರ ದೊಡ್ಡವರು–ಹೆಂಗ್ಸರ ಮಾತು ಕೇಳ್ಬಾರ್ದು ಅಂತ.

ಚನ್ನಿ – ಅಯ್ಯ, ನನ ಸರದಾರ–ಏನಾಯ್ತು? ಆದದ್ದರ ಹೇಳಬಾರ್ದ, ಖೋಡಿ.

ರುದ್ರಾಕ್ಷ – ಏನಾಗ್ತದ – ಎಲ್ಲಾ ಅವಲಕ್ಷಣ ಆಗಿಹೋಯ್ತು. ಅರಮನ್ಯಾಗ ಪರಪುರುಷ ಅಂತ ಕೂಗಿದ್ದೊಂದೇ ತಡ, ಶಿಡ್ಲು ಬಡಿಧಾಂಗ ಆತ ನೋಡು, ಶಿಡ್ಲು! ಅಬಬಬ, ಅದನ್ನ ನೆನಸಿದ್ರ ಪ್ರಾಣ ಹೋಗ್ತದ....ಹತ್ಯಾರಾ ಕಿತ್ತಗೊಂಡೇ ಬಂದ ನೋಡು ನನ್ನ ಮ್ಯಾಲ, ರಾಜಾ. ಏನಾರಾ ಆಗಲಿ ಅಂತ ರಾಜಾನ ಕಾಲು ಬುಡಕೆ ಬುದ್ದ ಬುಟ್ಟೆ. ಆಗ ನೋಡು, ಆಕಾರ, ಪಾತಾಳ, ತಾರಾಮಂಡಲ, ಸಗ್ಗ, ನರಕ, ಎಲ್ಲಾ ಒಮ್ಮೆಲೇ ನೋಡಿಬಿಟ್ಟೆ. ಮತ್ತೇನದ–ಹೂಂ, ಹೂಂ ಅಂತ ಕೋಣದ ಮರಿ ಭುಸುಗುಟ್ಟಿದಾಂಗ ಗುಟ್ಟಿದರ, ಕೇಳವರ ಗಂಟೇನು ಹೋಗ್ತದ!

ಚನ್ನಿ – ಮಳ್ಳಗೇಡಿ ಮನಸ್ಯಾ ನೋಡು, ನೀನು. ಪೂರ್ಣ ಸುದ್ದೀ ಹೆಳ್ಬಾರ್ದ – ಯಾಕ ನಡಗತಿದ್ದೀ?

ರುದ್ರಾಕ್ಷ – ಯಾಕ ನಡಗ್ತೀ ಅಂತೀಯ–ನೀನಗೇನು ಗೊತ್ತು ಆ ಸುದ್ದಿ! ಅದರೊಳಗ ಆ ಟಿಂಗ್ರಿ ಬಾರಸೂವವ ಗಂಟೇ ಬಿದ್ದಾನ ಬ್ಯಾರೆ–ಕೊಂಡೀ ಚುಚ್ಚೋದೇ ಚುಚ್ಚೋದು. ಎಲ್ಲಿ ಕಲ್ತು ಬಂದಾನೋ ಮಾರಾಯಾ–ಈ ಕೊಳ್ಳಿ ಹಚ್ಚೋ ವಿದ್ಯಾನ?

ಚನ್ನಿ — ಯಾರಂಪಾ ಟಿಂಗ್ರಯ್ಯ?

ರುದ್ರಾಕ್ಷ — ಮತ್ತ್ಯಾರು — ಆ ಟಿಂಗ್ರಿ ನಾರದಯ್ಯ–ಒಂದೇ ಸವನೇ ಬೆನ್ನೇ ಹತ್ತ್ಯಾನ, ಕೆಟ್ಟ ಬೇತಾಳಧಾಂಗ. ನಿನ್ನ ಮಗಳು ಹಾಂಗ ಮಾಡಿದ್ಲು– ಚಿತ್ತಾರಮ್ಮ ಹೀಂಗ ಮಾಡಿದ್ಲು–ನಿನ್ನ ಮಗಳು ಈಗ ಬಸರಾಗ್ಯಾಳ ಅಂತ ಸಹಿತ ಹೇಳಬೇಕ, ಆ ಲಜ್ಜಿಗೇಡಿ! ಛೆ, ಛೆ, ಏನ ಮಾನಗೇಡಿ ಮನಸ್ಯಾ ಅವನು....

ಚನ್ನಿ — ಏನು.........ಬಸರಾಗ್ಯಾಳ.........ಅಬ್ಬಾ.........!

ರುದ್ರಾಕ್ಷ — ಎಲ್ಲಾ ಆಗಿಹೋತು–ಸೋಬಾನ ಆಯ್ತು, ಬಸರ ಆಯ್ತು–ಈಗ ಉಳಿದಿರೋದು ಬಾಣಂತನಾ ಒಂದೇ! ಅದಕ್ಕೂ ಸೂಲಗಿತ್ತಿ ಆಗಿ ಹೋಗಂತೀ ಏನು ಮತ್ತೆ!–ಹೆಂಗಸರ ಕಾರಭಾರದಾಗ. ಇನ್ನ ಮ್ಯಾಲೆ ನೋಡು ಚನ್ನೀ–ನೀ ಗಳಿಗಿ, ಮಳಿಗಿ–ನೀ ಹೇಳಿಧಾಂಗ ನಾ ಏನು ಹೇಳಾಂವಲ್ಲ. ನಿನ್ನ ಮಾತ ಕೇಳಿ, ನನಗ ಭಾಳ ಫಜೀತಿ ಆಯ್ತು. ಇನ್ನಮ್ಯಾಲ ನೋಡು–ಇದುವರೆಗೆ ಆದ್ದು ಬ್ಯಾರೆ, ಇನ್ನ ಮ್ಯಾಲಿನ ಮಾತು ಬ್ಯಾರೆ.

ಚನ್ನಿ — ಏನದು– ಇದ್ದರ ಇರಬೇಕು ನಿನ್ನಂಥ ಸರದಾರ ಗಂಡ! ಕಡೀಗೆ ಕೆಲಸಾ ಮಾಡಿಕೊಂಡೆ ಬಂದೆಲ್ಲಾ!

ರುದ್ರಾಕ್ಷ — ಹಂ, ಹಂ, (ಕೆಮ್ಮಿ) ನನ್ನ ಕೆಲಸಾ ಅಂದ್ರ ಏನ ತಿಳಕೊಂಡೀ ನೀನು–ಒಂದು ಕಡತ, ಎರಡು ತುಂಡು. ಈಗ ಹೋಗ್ತೀನಿ ನೋಡು ನಮ್ಮ ರಾಜಾನ ಹಿಂದ ಮಂದೀ ಮನಿ ಮುರುದೋರ್ನೆಲ್ಲಾ ಹೆಡಮುರಿಗಿ ಕಟ್ಟಾಕ. ಎಷ್ಟ ತಂತ್ರಾನಪ ಅವರದು! ಏಟ ಚಕ್ಕಂದ! ವಾಹ್ವಾ! ಈಗ ಸಿಕ್ಕರಲ್ಲಾ ಬಲ್ಯಾಗ–ಮೊಲಾ ಸಿಕ್ಕಾಂಗ. ಇನ್ನ ಮ್ಯಾಲ ತಿಳೀಲಿ ನಿಮ್ಮದು. ಹೂಂ, ಹೂಂ, ಸಾಲಾಗಿ ಹೆಣಾ ಹಾಕಿಬಿಡ್ತೀನಿ–ಸಾಲ ಹೆಣಾ! ಏ ಚನ್ನಿ, ಲಗೂ ಲಗೂ ಹಗ್ಗಾ ತಾ– ಉರ್ಲ್ಯ ಹಾಕ್ತೀನಿ, ಆ ಕಳ್ಳರಿಗೆ, ಹೂಂ, ಲಗು. ಒಂದು, ಎರಡು, ಮೂ....(ಹಗ್ಗ ತಂದು ಕೊಡುವಳು) ಹೂಂ, ಮತ್ತೆ ಸಿದ್ಧಾಗು.

ಚನ್ನಿ — ಎಲ್ಲಿಗೆ! ಯಾಕ?

ರುದ್ರಾಕ್ಷ — ಎಲ್ಲಿಗೆ? ಯಮರಾಯನಲ್ಲಿಗೆ! ಯಾಕಂದ್ರ ಉರ್ಲ್ಯ ಹಾಕ್ತಿನಿ. ಇದು ಉರ್ಲ ಹಗ್ಗ! (ಕೊರಳಿಗೆ ಹಾಕಿ) ಮೊದಲ ಕಲಕೊತೀನಿ

ಸಾಧನಾ ಮಾಡಿ!

ಚನ್ನಿ – ಅಯ್ಯೋ, ಬಿಡ ನಿನ–ಏ ಮಾರಾಯಾ, ಇದೆಲ್ಲೀದ ಕಲ್ತು ಬಂದಿ. ಮನಿ ಹೆಂಡ್ತೀನ್ನ ಉರ್ಲು ಹಾಕೋ ವಿದ್ಯಾ ಎಲ್ಲಿ ಕಲಿತಿ?

ರುದ್ರಾಕ್ಷ – ಹಂಗಾರ, ನಾನು ಮನೀ ಗಂಡಾ ಇದ್ದೀನೇನು! ಮನೀ ಗಂಡಾ– ಅದು ಖಾಸಾ ನಿನ್ನ ಗಂಡನಾದ ನನ್ನ ಹಗ್ಗಾ ಇಲ್ದೇ ಉರ್ಲು ಹಾಕಿದ್ದೆಲ್ಲಾ!

ಚನ್ನಿ – ಬಿಡು, ಮಾರಾಯಾ–ನೀ ಹೇಳಿಧಾಂಗ ಕೇಳ್ತೀನಿ. ಮಂದೀ ಉಸಾಬರೀಗೆ ನಾನು ಹೊಗೂದುಲ್ಲಾ–ತಿರಿಗಿ ಹಾಂಗ ನಾನು ಎಂದೂ ಹೇಳೋದಿಲ್ಲ, ಬಿಡು.

ರುದ್ರಾಕ್ಷ – ಹೇಳೋದಿಲ್ಲ, ಅಹಹಹ! ಇಟ್ಟರ ಇಡಬೇಕು–ಮೀಶಿ ಹೊತ್ತ ಗಂಡಸ ಆದ ಮ್ಯಾಲೆ, ಅಂಜಿಕಿ. (ಹಗ್ಗ ತೆಗೆದು) ಹೂಂ, ಚನ್ನಿ–ನಾ ಹೋಗ್ತೀನಿ. ಮಹಾರಾಜರು ಬಾಳ, ಭಾಳ ಸಿಟ್ಟಿಗೆದ್ದಾರ–ಈಗ ನಾನು ಲಗೂ ಹೋಗ್ಬೇಕು.

ಚನ್ನಿ – ರಾಜಾ ಭಾಳ ಸಿಟ್ಟಿಗೇರ್‍ಯಾನೇನು?

ರುದ್ರಾಕ್ಷ – ಛೆ, ಛೆ, ಹೇಳಬಾರ್ದ್ದ ಬಿಡ ನಿನ–ಆ ಸಿಟ್ಟು. ಅದೇ ಸಿಟ್ಟು ಒಂದು ವ್ಯಾಳೇ ಕಡೀತನಕ ಇತ್ತಂದ್ರ ಯಾರೂ ಉಳಿಯೂ ಹಾಂಗಿಲ್ಲ, ಬಿಡು–ಎಂಥಾ ಸಿಟ್ಟು ಅದು. ಕಿಡಿ, ಕಿಡಿ, ಕಿಡಿ ಬೆಂಕಿ ಥಾಡ (ಅಂಜುವಳು) ಅಂಜಬ್ಯಾಡ ನನ ಅಂಜೀ ಪುಟ್ಟೀ–ಇದು ರಾಜಾನ ಸಿಟ್ಟು, ನಂದಲ್ಲ ಆಂ, ಇನ್ನ ನಾ ಹೋಗ್ತೀನಿ–ಇಕಾ ನಾ ಹೋಗ್ತೀನಿ– ಆಂ, ಹೋಗ್ಲೆ, ಇಕಾ ಹೊಂಟೆ, ನೋಡು ಜ್ವಾಕಿ, ಆಂ! (ಹೋಗುವನು)

(ತೆರೆ ಇಳಿಯುವುದು)

===***====***===

## ಅಂಕ ೩.

## ದೃಶ್ಯ ೧. ಅರಮನೆ

[ಶೋಭಾಯಮಾನವಾಗಿ ರಂಜಿಸುತ್ತಿರುವ ಸುಂದರ ಮಂದಿರ, ಸಕಲ ಭೋಗೋಪಭೋಗ್ಯ ವಸ್ತುಗಳು ತರತಮವಾಗಿ ಕಂಗೊಳಿಸುತ್ತಿವೆ. ಮಧ್ಯರಂಗದಲ್ಲೊಂದು ಉಯ್ಯಾಲೆಯು ಸಾಗರದ ಅಲೆಯಂತೆ ಮೆಲ್ಲಗೆ ಮೇಲೇರಿ ಕೆಳಗಿಳಿಯುತ್ತಿದೆ. ತೂಗುತ್ತಿರುವ ಉಯ್ಯಾಲೆಯ ಸುವರ್ಣ ರಂಜಿತ ಸರಪಳಿಗಳು– ಮಲ್ಲಿಕಾಲತೆಯಿಂದಲೂ, ನವೋನವವಾಗಿ ಸೌರಭವನ್ನು ತೂರುವ ಪುಷ್ಪಗಳಿಂದಲೂ, ಅಲ್ಲಲ್ಲಿ ಹೂಗಳ ರಾಣಿಯಾಗಿ, ರಂಜಿಸಿ ಮಿರುಗುವ ಅಂದವಾದ ಕುಂದಣಿಕೆಯಿಂದಲೂ ಪರಿಶೋಭಿಸುತ್ತಿದೆ. ಉಯ್ಯಾಲೆಯ ಮೇಲೆ ಭರ್ಜರಿಯಿಂದ ಕೆಚ್ಚಿದ ಕುಸುಮ ಕಮಲಗಳ ಬಲೆಯಂತಿರುವ ರತ್ನಗಂಬಳಿಯೊಂದು ನಯನಮನೋಪರವಾಗಿ ಹಾಸಲ್ಪಟ್ಟಿದೆ. ಎರಡೂ ಬದಿಗಳಲ್ಲಿ ಮೆತ್ತನೆಯ ರೇಶ್ಮೆಯ ದಿಂಬುಗಳು ಶೋಭಿಸುತ್ತಿವೆ. ಅನಿರುದ್ಧನೋರ್ವನೇ ವಿಶ್ರಾಂತಿಯ ಉಡುಪಿನಲ್ಲಿ ವಿಚಾರಮಗ್ನನಾಗಿ ಪ್ರವೇಶಿಸುವನು.]

**ಅನಿರುದ್ಧ –** ಬಂಧನ!.....ಪಾಶ!.....ಪ್ರತಿಯೊಂದು ಅವಯವವನ್ನು ಬಂಧಿಸಿದ ಪ್ರೇಮಪಾಶ! ಪ್ರದ್ಯುಮ್ನಕುಮಾರನು ಉಷಾರಾಣಿಯ ಪ್ರೇಮ ಪಾಶದಿಂದ ಬಂಧಿತನಾಗಿ ಪ್ರಪಂಚವನ್ನೇ ತ್ಯಾಗಮಾಡಿದ್ದಾನೆ. ಪಿತೃವಿನ ರಾಜ್ಯವನ್ನು ತೊರೆದು–ಮಾತಾಪಿತೃಗಳನ್ನು ಮರೆತು–ಪ್ರೇಮ ಪ್ರಪಂಚದ ಅಭೇದ್ಯ ಕಾರಾಗೃಹದಲ್ಲಿ ಪ್ರತಿಬಂಧಿಸಲ್ಪಟ್ಟಿದ್ದಾನೆ– ಈಅನಿರುದ್ಧ ಕುಮಾರನು. ಅನಿರುದ್ಧ..........! ಕರ್ತವ್ಯ ಮೂಢನಾದ ಅನಿರುದ್ಧ.....! ಕಾಲನನ್ನು ಕೆಣಕುವ ಸಾಹಸವಿದ್ದರೂ ಕಿಡಿಗೆದರಿಬರುವ ಕೂರ್ಗಣೆಗಳನ್ನು ಕರದಲ್ಲಿ ಹಿಡಿದು, ಪಿರಿದಾದ ವೀರಾವೇಶವನ್ನು ಪ್ರದರ್ಶಿಸಬಲ್ಲ ಶಕ್ತಿಯಿದ್ದರೂ ಅಸಹಾಯಶೂರನಾದಅನಿರುದ್ಧನಿಂದು. ...ಉಷೆಯ.... ಉನ್ಮಾದಿನೀ....ಉಷೆಯ.....ಅಜೇಯ ಕರಪಲ್ಲವಗಳಲ್ಲಿ ಬಂದಿಯಾಗಿರುವನು. ದುರ್ಭೇದ್ಯವಾದ ಉಕ್ಕಿನ ಕೋಟೆಗಳನ್ನು ಕೆಡಹಿ ಶತ್ರು ಶಿಬಿರಗಳ ಮೇಲೆ ವಿಜಯಪತಾಕೆಯನ್ನು

ಹಾರಿಸಬಲ್ಲನು. ಆದರೆ....ಉಷೆಯು ಕಟ್ಟಿದ ಕಾಲ್ಪನಿಕ ಕೋಟೆಯನ್ನು ಕೆಡಹದೆ ಅನಿರುದ್ಧ ವೀರನಿಂದು ಕೈಯೂರಿ ಕುಳಿತಿರುವನು. ಇದೇನು! ಪ್ರೇಮಪಾಶದ ಬಂಧನವೇ ಇಷ್ಟು ಬಿಗಿಯಾಗಿರುವದೆ? ಅಥವಾ ಮೋಹವಶನಾದ ಮತಿಹೀನ ಅನಿರುದ್ಧನ ಹೀನ ಹೃದಯದ ಅವ್ಯವಸ್ಥೆಯೆ? ತಾಳಗೆಟ್ಟ ಹೃದಯಕ್ಕೆ ಒಂದು ತಾಣವಿಲ್ಲವೆ? ಮಾನವಜೀವನದ ಪರಮೋದ್ದೇಶವು....ಬಾಳಿನ ಬೃಹತ್ ಸಾಹಸವು....ಒಂದೇ ಒಂದು ಸ್ತ್ರೀವ್ಯಾಮೋಹಕ್ಕಾಗಿಯೇ ಮುಡುಪಾಗಿರಬೇಕೆ!.... ಸತ್‌ಸೃಷ್ಟಿಯ ಆಗುಹೋಗುಗಳಿಗೆ ಮೂಲಾಧಾರವಾದ ಪ್ರೇಮವು ಪಾಪವಾಗಬಹುದೆ! ಆದಿಮನುವಿನಿಂದ ಉದ್ಭವವಾದ ಮಾನವಜಾತಿಯ ಸಂತಾನ ಒಂದೇ ಒಂದು ಬಂಧುರ ಪ್ರೇಮಶಕ್ತಿಯ ಸಮ್ಮುದಿತ ವಸಂತೋದ್ಯಾನ, ಶೂನ್ಯಗರ್ಭದಿಂದ ಹೊರಬಿದ್ದಿದೆ. ಮಾನವನ ಮೂಲಭೂತ ಧರ್ಮಜನ್ಯವಾದ ಪ್ರೇಮವು ಎಂದಿಗೂ ಪಾಪವಾಗಿ ಪರಿಣಮಿಸಲಾರದು! ಒಂದೇ ಒಂದು ಬ್ರಹ್ಮ ಶಕ್ತಿಯ ಯೋಗದಲ್ಲಿಯೇ ಈ ವಿಶಾಲ ಜಗದ ಉದಯ...! ಪಾಪ...! ಪುಣ್ಯ....! ಏನೋ...ಹೃದಯವು ಚಿರ ತಾಣ ಗಾಣದೆ...ತೂಗುತಿದೆ. (ಉಯ್ಯಾಲೆಯ ಕಡೆ ನೋಡಿ) ತೂಗುತಿದೆ ಉಯ್ಯಾಲೆ!....ಉಯ್ಯಾಲೆ! ಹೃದಯದ ಉಯ್ಯಾಲೆ...ಆಗಸದ ಸೀಮೆಯನು ಮುಟ್ಟಲೇಬೇಕೆಂದು ತೂಗುತಿದೆ ಉಯ್ಯಾಲೆ! ನಿಸ್ಸೀಮ ಆಗಸದ ನೆಲೆಯ ಕಾಣದೆ ಮೇಲೆ ಹತ್ತುತಿದೆ...ಉಯ್ಯಾಲೆ! ನಿತಾಂತ ಆಗಸದ ನಿರಾಶಾ ಅಣಕವು ಅದು ಇಳಿಸುತಿದೆ ಕೆಳಗೆ! ಆಶೆಯಿಂ ಹೊಯ್ದಾಡುತಿಹ ಉಯ್ಯಾಲೆಯ ಪತನವಿದು! ಉನ್ನತಿಯ ಗತಿಯಲ್ಲಿ ಉಲಿಯುವ ಉಯ್ಯಾಲೆ! ದಂಡೆಗಾಣದೆ ಮರಳಿ ಉರುಳುರುಳಿ ಬರುತಿಹುದು— ದಡವಿಲ್ಲದಾ ಹೊಳೆ! ಪಥವಿಲ್ಲದಾ ಪಾಂಥಿಕ! ಆಳವಾದ ಹೊಳೆಯು ಪ್ರೇಮನಿಸ್ಸೀಮ! ಹೃದಯವದು ಆಶೆಯಿಂ ಭಾವಾನಾಪಾಶದಲಿ ಬಾನದೆಡೆಯನು ಕಾಂಬ ಉಯ್ಯಾಲೆಯಂತೆ! ಹೊಯ್ದಾಡುತಿಹುದು...! ಹೂಂ. ಉಯ್ಯಾಲೆಯ ಏರಾಟ ಇಳಿದಾಟಗಳು, ಹೃದಯದ ಹಿನ್ನೆಲೆಯಲ್ಲಿ ಅವಿತುಕೊಂಡು ವಿಮಲ ವಿಚಾರಪರಿಪ್ಲುತ ಹೃದಯವು ಭಾವನಾಕಾಶದಲಿ ಹೊಯ್ದಾಡುತಿದೆ.

ಉಷಾ — (ವ್ಯಥಿತಮಾನಸಳಾಗಿ ಪ್ರವೇಶಿಸಿ) ಮಮ ಭಾಗ್ಯೋದಯದ ಬಳ್ಳಿ ಬಿಟ್ಟ ಪುಷ್ಪವು ಅರಳುವುದನ್ನು ಬಿಟ್ಟು ಇಂದು ಸುರುಟಿರುವುದು!

ಹೃದಯಾಧಾರವೆ, ನನ್ನೀ ಪ್ರೇಮದ ಇನಿವಾತುಗಳನ್ನು ಬಿಟ್ಟು ಇಂದು ಮನದಲ್ಲಿ ಕೊರಗುವ ಕಾರಣವೇನು? ನನ್ನ ಪ್ರೇಮಲತೆಯು ಕೊನರುವುದನ್ನು ಬಿಟ್ಟು ಇಂದೇಕೆ ಕೊರಗಿ ಕಮರುತ್ತಿರುವುದು? ಚರಣದಾಸಿಯ ವರ್ತನವೇನಾದರೂ ನಿಮ್ಮ ವಿಚಾರಕ್ಷೋಭೆಗೆ ಕಾರಣವಾಯಿತೆ–ಹೇಳು ಪ್ರಿಯಕರಾ? ಈ ದೀರ್ಘ ಮೌನದ ರಹಸ್ಯವೇನು? ಕೇಳಬಹುದೆ?

**ಅನಿರುದ್ಧ** – ಪ್ರೇಮಪೂರಿತ ಪ್ರಪಂಚದಲ್ಲಿ ಪ್ರೇಮವು ಅಪರಾಧವೆಂದಿಗೂ ಆಗಲಾರದು, ಪ್ರೇಯಸಿ! ಪ್ರೇಮ ಪೂಜಾರಿಣಿ ನೀನು, ಪ್ರೇಮ ಪೀಠಾಚಾರ್ಯನು ನಾನು! ಪ್ರೇಮಪತಾಕೆಯ ಪವಿತ್ರ ನೆರಳಲ್ಲಿ ವಿಶ್ರಾಂತಿ ಹೊಂದುವ ಈ ಪ್ರಿಯ ಯುಗ್ಮಕ್ಕೆ ಪಾಪವೆಂದಿಗೂ ಸೋಂಕಲಾರದು, ಪ್ರಿಯೆ! ಆದರೂ ಹಿಂದಿನ ಸವಿ ನೆನಪುಗಳು ಸ್ಮೃತಿಪಥದಲ್ಲಿ ನೆಟ್ಟು, ಮನದ ಸೂಕ್ಷ್ಮನಾಡಿಗಳಲ್ಲಿ ಬೇರು ಬಿಟ್ಟು ಒಂದು ತರದ ಕಂಪನೆಯ ವೇದನೆಯನ್ನು ಉಂಟುಮಾಡಿದೆ. ಇದು–ಮೂಕನು ಅನುಭವಿಸುವ ರೋಗದಂತಾಗಿದೆ!

**ಉಷಾ** – ಪರಮಾನಂದದಾಯಕ ಮೂರ್ತಿಯೆ, ಪ್ರಸನ್ನಳಾದ ನನ್ನನ್ನು ಪೊರೆಯುವದು ಪುರುಷಶ್ರೇಷ್ಠನಾದ ನಿನ್ನ ವೀರಧರ್ಮವಲ್ಲವೇ? ಪ್ರಪಂಚವನ್ನು ಅಲ್ಲಗಳೆದು, ಪಾಪವನ್ನು ಪರಿತ್ಯಜಿಸಿ, ನನ್ನ ಸರ್ವಸ್ವವಾದ ಪ್ರಾಣಪಕ್ಷಿಯನ್ನು ನಿಮ್ಮ ಪ್ರೇಮಪಂಜರದ ಪೀಠದ ಮೇಲೆ ಕೂಡಿಸಿದ್ದೇನೆ. ಅದು ನಿಮ್ಮ ಪ್ರೇಮಾನುರಾಗದ ಮುದ್ದು ನುಡಿಗಳನ್ನೇ ಕಲಿತು, ಪ್ರತಿ ನಿಮಿಷದಲ್ಲಿಯೂ ನಿಮ್ಮ ಗೀತೆಯನ್ನೇ ಹಾಡುತ್ತಿರುವದು. ಈ ಪಂಡಿತವಕ್ಕಿಯು ಪ್ರಪಂಚದ ಪ್ರೇಮವನ್ನೆಲ್ಲ, ಆನಂದಚಂದಿರನಂತಿರುವ ನಿನ್ನ ಈ ವಿರಾಟ ರೂಪದಲ್ಲಿಯೇ ಕಾಣುತ್ತಿರುವದು. ನಿಮ್ಮ ಭವ್ಯ ರೂಪದ ದಿಗ್ದರ್ಶನವನ್ನು ಮಾಡಿಕೊಂಡು ಈಗದು ನಿಜದ, ನಿಷ್ಠಾರೂಪದ ಅಂತರಾತ್ಮನ ನಿಶ್ಚಲ ಪಾವಕಪುಂಜದಂತೆ, ಪ್ರೇಮಾನುಭವ ಬೆಳಗಿನ ದಿವ್ಯದರ್ಶನವನ್ನು ಪಡೆಯುತ್ತಿರುವದು. ಅಮರಾನಂದಕ್ಕೆ ಆದಿಯಾದ ಮೇದಿನೀ ಬಾಧೆಗಳಿಂದ ಅಬಾಧಿತವಾದ, ಪ್ರೇಮವೀಣೆಯ ಮೃದು ಮಧುರ ತಂತಿಗಳನ್ನು ಮಿಡಿಯುತ್ತ, ಆಸ್ತಿಕರ ಸೊತ್ತಾದ, ಆಶಾಪೂರ್ಣರಾಗದಿಂದ, ಒಳಗಿನ ಒಳದನಿಯೊಂದು, ಏಕೋನ್ಮುಖವಾಗಿ ನಿಮ್ಮ ಯಶೋಗಾನವನ್ನು ಪಾಡುತ್ತಿರುವದು.

ಸಮಸ್ತ ಪ್ರಪಂಚದ ಪರ್ಯವಸಾನಕ್ಕೂ ಲೆಕ್ಕಿಸದ ಪ್ರಾಣಪಕ್ಷಿಯ ಪಕ್ಕಗಳನ್ನು ಮುರಿದು ಪತಿಕರಿಸಿ ಹೋಗುವಿರಾ? ನೀವು ಎಲ್ಲಿಗೆ ಹೋದರೂ ಧರ್ಮವನ್ನೇ ಹಿಂಬಾಲಿಸಿದ ಪವಿತ್ರ ಸಾವಿತ್ರಿಯಂತೆ, ನಿಮ್ಮ ನೆಳಲಾಗಿ ಹಿಂಬಾಲಿಸುವೆ. ಆಕಾರವನ್ನು ಬಿಟ್ಟಮೇಲೆ, ಈ ಹರಣ ಹಕ್ಕಿಗೆ ಹಾರಲು ಆಶ್ರಯಸ್ಥನವೆಲ್ಲಿ, ನಾಥಾ? ಹೇಳು.

**ಅನಿರುದ್ಧ –** ಪ್ರಮೋದಪ್ರದಾಯಿನಿ, ಪರಮೇಷ್ಠಿಯಿಂದ ಪ್ರತಿಷ್ಠಿತವಾದ ಕಲಾಮಯ ಪ್ರಪಂಚದಲ್ಲಿಯೇ ನೀನೊಂದು ಅಪೂರ್ವ ಪುಷ್ಪ! ಪ್ರಪಂಚಕ್ಕೆ ಪ್ರೇಮ ಪರಿಮಳವನ್ನು ನೀಡಲು ಕಲಾವಿದನಾದ ಚತುರ ಸೃಷ್ಟಿಕರ್ತನು–ಇದೊಂದೇ ಪುಷ್ಪವನ್ನು ನಿರ್ಮಿಸಿರುವನು. ಪ್ರೇಮ ಶಕ್ತಿಯ ಪೂರ್ಣಾಧಿಕಾರದಂಡವನ್ನು ಹಿಡಿದು ಆಳುವ ನನ್ನ ಪ್ರೇಮಲರಾಣಿಯೆ? ನಿನ್ನ ಸೀಮಾರಹಿತ ಪ್ರೇಮಪ್ರಪಂಚವನ್ನು ದಾಟಿ ನಾನು ಹೋಗುವುದೆಲ್ಲಿಗೆ?–ಉಷಾರಾಣಿಯಲ್ಲಿ–ನನಗೊಂದು ನಿತ್ಯನೂತನ ಚಿರಪ್ರಪಂಚವೊಂದು ಕಾಣುತ್ತಿರುವದು. ಪ್ರೇಮಜೀವಿಯಾದ ನಾನು ಇದನ್ನು ಧಿಕ್ಕರಿಸಿ, ಎಲ್ಲಿಗೆ ಹೋಗಲಿ, ಪ್ರೇಯಸಿ? ನಿನ್ನ ಈ ಅಳಕಾವಳಿಯೇ ನನಗೆ ಆಕಾಶ! ಈ ನಯನಗಳ ನೀಲಚ್ಛವಿಯೇ ಚಂದ್ರ ಸೂರ್ಯರ ಪ್ರಕಾಶ! ಹವಳದ ಬಣ್ಣದಿಂದೊಪ್ಪುವ ಈ ಅಧರವು, ಸದಾ ಸುಧೆಯಿಂದ ತಣಿಸುವ ಮಧುಕೂಪ! ಈ ಅಮೃತವನ್ನು ಸೇವಿಸಿ ಅಮರನಾದ ಪ್ರೇಮಪೂಜಾರಿಯು ಯಾವಾಗಲೂ ನಿಷ್ಪಾಪಿ! ಸ್ವರ್ಗೀಯ ಸೌಂದರ್ಯದ ಚಿರಪಟ್ಟನಾಯಕಿ! ಈ ಪಿಂಡಾಂಡದಲ್ಲಿಯೇ ನಾನೊಂದು ಚಿರ ನೂತನ ಬ್ರಹ್ಮಾಂಡವನ್ನು ಕಾಣುತ್ತಿದ್ದೇನೆ.

**ಉಷಾ –** (ಅರ್ಧ ನಿಮಿಲನೇತ್ರೆಯಾಗಿ) ಪ್ರೇಮವನದ ವಂಸತಾ, ಘನ ಶಾಂತಾ, ಈ ಉತ್ಪ್ರೇಕ್ಷೆಯು ಈ ದಾಸಿಗೆ ಸಲ್ಲದು.

**ಅನಿರುದ್ಧ –** ನನ್ನ ಪ್ರೇಮಪಂಜರದಲ್ಲಿರುವ ಪಂಡಿತವಕ್ಕಿಯೆ, ದಾಸ ಈಶತ್ವದ ಭಾಷೆಯು ಪ್ರೇಮಭೂಮಿಯ ಚಕ್ರವರ್ತಿನಿಯಾದ ನಿನಗೆ ಸಲ್ಲದು. ಕನ್ನಡಿಯನ್ನು ಕಳೆಗುಂದಿಸುವ ಈ ಕದಪುಗಳು, ಪಲ್ಲವಿಸುವ ಮಾಮರದ ಚಿಗುರೆಲೆಗಳನ್ನು ಕಡೆಗಣಿಸುವ ಈ ಕರಕಮಲಗಳು, ಕಮನೀಯ ಕಾಂತಿಯಿಂದೊಪ್ಪುವ ಈ ಬಾಹುಲತೆಗಳು– (ಅಪ್ಪಿಕೊಂಡು) ಆನಂದದಾಯಿನಿ, ಮೃಣ್ಮಯ ಲೋಕದ ಈ ಅಪಾರ ಆನಂದಾನುಭವದ ಅರಿವು ಆ ಅಮರರಿಗಿರಬಹುದೆ?

(ಒಮ್ಮಿಂದೊಮ್ಮೆ ಚಿತ್ರಲೇಖೆಯು ಪ್ರವೇಶಿಸುವಳು. ಉಷೆಯು ನಸುನಾಚಿ, ತೋಳತೆಕ್ಕೆಯನ್ನು ಸಡಲಿಸಿಕೊಂಡು, ಸರಿದು ನಿಲ್ಲುವಳು)

**ಚಿತ್ರಲೇಖ –** ಈ ಅಪೂರ್ವ ಆನಂದವನ್ನು ಅಮರರು ಅನುಭವಿಸಲಾರರು– ನಾನು ತಪ್ಪು ಮಾಡಿದೆ, ಗೆಳತಿ. ನಿಮ್ಮಾಜ್ಞೆ ಇಲ್ಲದೆ ಬಳಿ ಸಾರಿ ಬಂದದ್ದು ಬಹಳ ದೊಡ್ಡ ತಪ್ಪು–ಕ್ಷಮಿಸಿರಿ. ನಾನು ಹೋಗುತ್ತೇನೆ. (ಹೋಗಹತ್ತುವಳು)

**ಅನಿರುದ್ಧ –** ನಿಲ್ಲು, ಲಂತಾಗಿ! ಮಘಮಘಿಸುವ ಮಾಘವು ಮಾಮರವನ್ನಪ್ಪಿ, ಮಲ್ಲಿಕಾಲತೆಯಿಂದು ಅಮರಪ್ರೇಮದ ಪುಷ್ಪವೊಂದನ್ನು ಅರಳಿಸಿತು, ಮಧು ಚೈತ್ರನ ಆಗಮನದ ಶುಭಸಂದೇಶವನ್ನು ಕಿನ್ನರ ಕಂಠದೆ ಕೋಕಿಲೆಯು ಬೀರಿತು–ಮಂದಸಮಿರನಿಂದ ಬಂದ ಪರಿಮಳವನ್ನು ಸೇವಿಸಿ ಸ್ವಾನಂದದಿಂದ ಉಲಿಯಿತು--ಇದರಲ್ಲಿ ತಪ್ಪೇನಿದೆ? ನೀನು ಶ್ರಮ ವಹಿಸಿ ಬೆಳಸಿದ ಪ್ರೇಮೋದ್ಯಾನದ ಮಲ್ಲಿಕಾ ಮಕರಂದವನ್ನು ಸೇವಿಸಲು ನಿನಗೆ ಸರ್ವಾಧಿಕಾರವಿದೆ, ಬಾ. ಸಮದರ್ಶಿಗಳ ಸುಮ್ಮಾನ ರಾಜ್ಯದಲ್ಲಿ–ತಪ್ಪು ಒಪ್ಪುಗಳ ಪ್ರಶ್ನೆಯೇ ಇಲ್ಲ!

**ಉಷಾ –** ಸಖೀ, ನಮ್ಮ ಪ್ರೇಮವನಕ್ಕೆ ಪ್ರಾಕಾರ ಕಟ್ಟಿ–ನಿನ್ನ ಪವಿತ್ರ ಸಾಹಸಜಲದಿಂದ ಸಂಗೋಪನಗೈದಿರುವೆ–ನಿನ್ನ ಸಾಹಸಮೂಲದಿಂದ ಪಳಗಿದ ಪುಷ್ಪಗಳನ್ನು ನೋಡಲು ನಿನಗೆ ಅಧಿಕಾರವಿಲ್ಲವೆ? ಬಾ, ನಿನ್ನ ಸಾಹಸವೇ ನಮ್ಮ ಪ್ರೇಮದೀಕ್ಷೆ! ಮತ್ತೆ ನೀನು ಯಾರ ಆಜ್ಞೆಯನ್ನು ನಿರೀಕ್ಷಿಸುವೆ?

**ಚಿತ್ರಲೇಖ –** ಪ್ರಿಯ ಯುಂಗ್ಮವೆ, ನವ ದಂಪತಿಗಳಾದ ನಿಮ್ಮ ಪವಿತ್ರ ಪ್ರೇಮವನ್ನು ನೋಡಿ, ನಾನು ಹರ್ಷಾತಿರೇಕದಿಂದ ಉಬ್ಬಿ ಹೋಗಿದ್ದೇನೆ– ನಿಮ್ಮನ್ನು ಈ ಉಯ್ಯಾಲೆಯಲ್ಲಿ ಕೂಡಿಸಿ, ಪೂಮಾಲೆಗಳಿಂದ ಪೂಜಿಸಿ, ಪಾಡುತ್ತೇನೆ. ನಿಮ್ಮ ಶೃಂಗಾರವನ್ನು ಕಣ್ಮುಟ್ಟಿ ನೋಡಿ ತಣಿಯಬೇಕೆಂದು ಆಶಿಸಿದ್ದೇನೆ. ನಿಮ್ಮ ದಿವ್ಯ ಪ್ರೇಮದರ್ಶನದಿಂದ ನನ್ನ ಕಣ್ಣುಗಳು ಪಾವನವಾಗಲಿ!

**ಅನಿರುದ್ಧ–** ಆಗಲಿ,ದಯಾಮಯಿ–ಪೂವಮಾಲೆಗಳನ್ನರ್ಪಿಸುವೆಯೋ.... ಅಥವಾ...ಹೂ ಮುಡಿಸುವೆಯೋ...?

**ಉಷಾ –** (ಹುಸಿಮುನಿಸು) ಹೀಗೆ ಸುಮ್ಮನೆ ನನ್ನನ್ನು ಕೆಣಕಬೇಡಿರಿ!

**ಚಿತ್ರಲೇಖ** — ಇದೊಂದು ಶುಭಸೂಚನೆ ಸಖಿ. ಸೃಷ್ಟಿಕರ್ತನ ನೇಮ! ಆಗಲಿ. ಬನ್ನಿರಿ–ನಮ್ಮ ಪ್ರೇಮಪ್ರಪಂಚದ ಇಂದ್ರ ಇಂದ್ರಾಣಿಯರೇ ಬನ್ನಿರಿ. ಈ ಉಯ್ಯಾಲೆಯ ಜನ್ಮವನ್ನು ಪಾವನಮಾಡಿರಿ. (ಶೃಂಗಾರ ಭರಿತವಾಗಿ ಅಲಂಕರಿಸಲ್ಪಟ್ಟ ನವ ದಂಪತಿಗಳು ಉಯ್ಯಾಲೆಯಲ್ಲಿ ಕೂಡುವರು. ಸುಂದರ ಭವನವು ಆನಂದ ಪರಿಮಳದಿಂದ ತುಂಬಿಹೋಗುವುದು. ಚಿತ್ರಲೇಖೆಯು ಹಿಂದೆ ನಿಂತು, ಹರ್ಷದ ಉಬ್ಬೆಗದಿಂದ ಉಯ್ಯಾಲೆಯನ್ನು ತೂಗುವಳು. ಗಂಗಾ ನದಿಯ ಗಂಭೀರ ತೆರೆಗಳಂತೆ, ಗಾನಲಹರಿಯು ತಾನವಿತಾನವಾಗಿ, ಮಧುರಾಲಾಪಗಳಿಂದ ಹೊರ ಹರಿಯುವದು. ಹಾಡು ಮುಗಿಯುವಾಗ, ವ್ಯಗ್ರಚಿತ್ತನಾದ, ಅತ್ಯುಗ್ರ ರೂಪನಾದ ಬಾಣನು–ಸಿಬ್ಬಂದಿ ಸಮೇತವಾಗಿ ಬಂದು, ವಿಗಡಾಕಾರದ ವಿಕಟ ನಗೆಯನ್ನು ಬೀರುತ್ತ, ಇವರನ್ನು ನೋಡಿ, ನೆಟ್ಟದೃಷ್ಟಿಯಿಂದ, ಕರವಾಲವನ್ನು ಝುಳಪಿಸುತ್ತ ನಿಲ್ಲುವನು. ಒಮ್ಮೆಲೆ, ಬಿರುಗಾಳಿಯ ಹೊಡೆತದಿಂದ ಮುರಿದು ಬೀಳುವ ಮರಗಳಂತೆ–ಉಯ್ಯಾಲೆಯಿಂದ ಧಿಗ್ಗನೆದ್ದು, ಒಂದು ಮೂಲೆಯಲ್ಲಿ ಸರಿದು, ಮ್ಲಾನವದನರಾಗಿ ನಿಲ್ಲುವರು. ಎಲ್ಲೆಲ್ಲಿಯೂ ದುಗುಡ ದುಮ್ಮಾನಗಳೇ ಕಾಣುವದು. ಸುಂದರ ಸನ್ನಿವೇಶವು ರುದ್ರಗಂಭೀರತೆಯಲ್ಲಿ ಮಾರ್ಪಡುವದು.)

**ಬಾಣಾಸುರ** — (ಉನ್ಮತ್ತ ಕೋಪೋದ್ರೇಕದಿಂದ ವಿಕಟ ನಗೆಯನ್ನು ಬೀರುತ್ತ) ಅಹಹಹ! ಕುಣಿಯುತಿದೆ ಖಡ್ಗ! ಕುಣಿಯುತಿದೆ! ಕಾಪಟ್ಯ ಕಲ್ಲೆದೆಯ ಕುಲಾಚಲವನ್ನು, ಖತಿಗೊಂಡ ಉಕ್ಕಿನ ಕೈಚಾನುಗಳಿಂದ ಮೆಟ್ಟಿ ಸೀಳಿ ಕುಲಾದ್ರಿಯ ಗರ್ಭಖಣಿಯಿಂದ ಕಲ್ಲೆಣ್ಣೆಯನ್ನು ಹೊರಚೆಲ್ಲಿ, ಕಡು ಕೋಪಾಗ್ನಿಯನ್ನು ಕಲ್ಲೆಣ್ಣೆಗೆ ಸಂಧಿಸಿ–ಕಾಡು ಜನರ ಕರ್ಮಾಚರಣಕ್ಕೆ ಬೆಂಕಿ ಹಚ್ಚಲು, ಕುಣಿಯುತಿದೆ ಖಡ್ಗ! ಕೃತಾಂತನ ಕಪಾಲ ಬರಹವನ್ನೇ ತೊಡೆಯಲು ಬಲ್ಲದೀ ಖಡ್ಗ! ರಣಕ್ರಾಂತಿಯಲ್ಲಿ ವಿಕ್ರಾಂತ ಕಂಠೀರವರ ಸದೆಬಡೆದು, ರೌದ್ರಾವೇಶದಿಂದ ಕೂಗುತ್ತಿರುವ ಈ ಖಡ್ಗವ–ರಾಧೆಯ ಅರಸನ ರಕ್ತವನ್ನೀಂಟಲು ಹಣಾಹಣಿಯಲ್ಲಿ ಹವಣಿಸುತ್ತಿರುವ ಈ ಖಡ್ಗ! ರಿಪುಬಲದ ವಿಪುಲ ರಕ್ತಾಭಿಷೇಕದಿಂದ ಸದಾ ರಂಜಿಸುತ್ತಿರುವ ಈ ಹದನವಾದ ಖಡ್ಗ! ಎಲವೋ, ಪಿತ್ತವೇರಿ ಮೃತ್ಯುವನ್ನಾಶ್ರಯಿಸಿದ ತೊತ್ತಿನ ತನಯಾ–ಕಲ್ಪವೃಕ್ಷದ ನೆರಳೆಂದು ಭಾವಿಸಿ ಕಟುಕನ ಕತ್ತಿಯ ಮುಂದೆ ಕೊರಳ ನೀಡಾಡಿದ ಕಡು ಪಾಪಿ, ಬಡ ಕುರಿಯೆ–ಯಮನ ಆಳುಗಳು ಇಣಿಕಿ ಹಾಕಲು

ಹೆದರುತ್ತಿರುವ ಈ ಬಾಣಭೈರವನ ಕ್ರೀಡಾರಂಗವನ್ನು ಹೇಗೆ ಪ್ರವೇಸಿಸಿದೆ, ಪಾತಕಿ? ಕೇಡುಗಾಲದ, ಒಡಲೋನ್ಮಾದದಿಂದ ಗಡಬಡಿಸಿ, ಬೃಹತ್ ತರಂಗಗಳಲ್ಲಿ ತೇಲಿ ಬಂದಿರುವುದು ನಿನ್ನ ದುರ್ಲಿಖಿತ ಫಾಲ! ಎಲವೋ ಹುಲಿಯ ಬಿಲವನ್ನು ಹೊಕ್ಕ ಇಲಿಯೋ–ಹುಲಿಯ ಕುಡಿಮೀಶೆಯನ್ನು ಹಿಡಿದು ಉಯ್ಯಾಲೆಯಾಡಬೇಕೆಂದು, ದುರ್ಮದದಿಂದ ಸೊಕ್ಕಿಬಂದು ಸಿಕ್ಕಿರುವ ನರಕದ ನರಿಯೆ–ಖುಲ್ಲತನದಿಂಧ ಹಲ್ಲು ತೋರಿಸಿದರೆ, ಕರುಣವನ್ನೇ ಕಾಣದ ಕಲ್ಲೆದೆಯ ಬಾಣನ ಕಬ್ಬಿಣ ಕರಗಳು ಕಡುಪಾಪಿಯಾದ ನಿನ್ನ ಕರುಳುಗಳನ್ನೇ ಕತ್ತರಿಸಿ, ಖಂಡ ಮಾಂಸಗಳನ್ನು ನಿನ್ನ ಕಬರಿಯಲ್ಲಿ ತುಂಬಿ, ಆ ನಿನ್ನ ಕಳ್ಳಗೊಲ್ಲನಿಗೆ ಕಾಣಿಕೆಯಾಗಿ ಕಳಿಸುತ್ತೇನೆ, ನಿಲ್ಲು!

**ಅನಿರುದ್ಧ** – ಕಡುಪಾಪಿಯೇ – ನಿನ್ನ ಸಮರಲಾಲಸೆಗೆ ಸರಿಯದ ಸಮಯವು ಸಿಕ್ಕಿರುವುದು, ಸುಮ್ಮನಿರು. ನಿನ್ನ ಲೋಭ ಹೃದಯದ ರಣಲಾಲಸೆಯನ್ನು ಲೀಲೆಯಿಂದ ಪರಿಹರಿಸಬಲ್ಲ ಕೌಸ್ತುಭ ಮಾಲಿಯ ಪೌತ್ರನನ್ನು ಕೆಣಕದಿರು. ಕನಲಿ ಕೆಣಕಿದರೆ, ಕುಲಾದ್ರಿಗಳ ದರ್ಪವನ್ನು ಲೀಲಾಜಾಲವಾಗಿ ಮುರಿಯುಬಲ್ಲ ಕಲಶದ ಕಿರುಖಡ್ಗವೆಂದಿಗೂ ಅಳುಕಲಾರದು! ಪಶ್ಚಿಮಾದ್ರಿಯ ಕಡೆಗೆ ನೋಡುತ್ತಿರುವ ನಿನ್ನ ಶಕ್ತಿಸೂರ್ಯನಿಗೆ ರಾಹು ತೊಡಕುಹಾಕಿರುವನೆಂದು ತಿಳಿ! ಮತ್ತೇಭಸಾಸಿರದಲ್ಲಿ ಸಿಕ್ಕ ಮರಿಸಿಂಹವು ಅವುಗಳ ಮದೋದಕ ಪಾನಮಾಡಿ ಮೆರೆಯಬಲ್ಲದು!

**ಬಾಣಾಸುರ** – ಮೆರೆಯಬಲ್ಲದು ನಿನ್ನ ಶಿರವು, ಅಹವಮಲ್ಲನಾದ ಸಾಕ್ಷಾತ್ ಬಾಣನ ಹೆಮ್ಮಾರೀ ಖಡ್ಗ ಪ್ರಹಾರದಿಂದ ನಿನ್ನ ಶಿರವು ಆಕಾಶಮಂಡಲದಲ್ಲಿ! ಬೀಳ್‌ಹೊಯ್ದ ರಕ್ತರಂಜಿತ ಮುಂಡವು ಭೂವಲಯದಲ್ಲಿ! ಮೆರೆಯಬಲ್ಲವು. ಎಲವೋ, ಬಂಧು ಭಾವನೆಗಳಿಗೆ ಕೊಳ್ಳಿಯನೆ ಕೊಟ್ಟು–ಕಳವು, ಕೊಲೆ, ಕಾಪಟ್ಯಗಳ ಕಳ್ಳನ್ನು ಕುಡಿದು, ಮದವೇರಿದ ಮಿಂಚುಹುಳುವು ನಭಾಗ್ರದಲ್ಲಿ–ಥಳಥಳಿಪ ನಕ್ಷತ್ರಮಂಡಲವನ್ನು ಸರಿಗಟ್ಟುವೆನೆಂಬಂತೆ, ಬರಿದೆ ಗುಲ್ಲನ್ನೆಬ್ಬಿಸುವ ಗೊಲ್ಲಕುಮಾರ–ಅಣಕು ನಾಡುವ ನಿನ್ನ ಬಣಗು ನುಡಿಗಳನ್ನು ಕೇಳಲು ಬಾಣನ ಬಧಿರ ಕಿವಿಗಳು ಸಿದ್ಧವಿಲ್ಲ. ಶೃಗಾಲಗಳ ಆತ್ಮಸಂಕೀರ್ತನೆಯನ್ನು ಕೇಳುವುದು ಕನಲಿದ ಕೇಸರಿಗೆ ಶಕ್ಯವಿಲ್ಲ.

ದುರಾಚಾರವೇ ಬಾಳಾಗಿ ಬೆಳೆದ ನಿನ್ನ ದೇಹದಿಂಡನ್ನು ಹರಿಗಡಿದು ಉಗ್ಗಡಿಸಿ ಬರುವ ಅರುಣಜಲಧಾರೆಯಿಂದ ಸ್ವರ್ಗದಲ್ಲಿ ನೋಡುತ್ತಿರುವ ನನ್ನ ಪಿತೃಶ್ರೇಷ್ಠರಿಗೆ ಅರ್ಘ್ಯ ಬಿಡುತ್ತೇನೆ. ತಾಳು. ಇದು ಭೀಕರ ಬಾಣನ ಸಾಹಸಕ್ಕೆ ಶೃಂಗಾರ!

**ಅನಿರುದ್ಧ** – ಸಾಸಿರದೋಳನ ಹೆಮ್ಮೆಯಿಂದ ಹುಮ್ಮಸಪಡುತ್ತಿರುವ ಸಮರ ಸಾಹಸಿಯೇ! ಸುಮ್ಮನಿರು. ಉತ್ತುಂಗಶ್ರೇಣಿಯಲ್ಲಿ ಉಚ್ಚತಮವಾಗಿ ಮೆರೆಯುವ, ಆರ್ಯವಂಶದ ನಿರ್ಮಲ ಶುಭ್ರಾಕಾಶವು ಯಾವಾಗಲೂ ದೈತ್ಯಜಾತಿಯ ದುರ್ಭೀತ ಮೋಡಗಳಿಂದ ನಿರ್ಭೀತವಾಗಿರುತ್ತದೆ. ಆರ್ಯವೀರನ ದೇಹದಿಂದ ಹೊರಡುವ ಪ್ರತಿಯೊಂದು ರಕ್ತದ ಕಣ–ದೈತ್ಯಜಾತಿಯ ದುಷ್ಟ ವನವನ್ನು ದಹಿಸಬಲ್ಲ ದಾವಾನಲದ ಕಾರ್ಗಿಡಿ! ಆರ್ಯಯೋಧನ ಶರೀರದಿಂದ ಹೊರಡುವ ಕೆನ್ನೀರು–ಅದು ಭವಿಷ್ಯತ್ಕಾಲದಲ್ಲಿ ಹರಿಯುವ ದೈತ್ಯರಮಣಿಯರ ಕಣ್ಣೀರು!

**ಬಾಣಾಸುರ** – ಕ್ಷುದ್ರ ಬಾಲಾ, ನಿನ್ನನ್ನು ದುರಂತ ನರಕದಲ್ಲಿ ತುಳಿದು ನಾಟ್ಯವಾಡುತ್ತೇನೆ, ನಿಲ್ಲು. ನಿನ್ನ ಹೃದ್ಭೂಮಿಯನ್ನು ಬಗೆದು, ಎಲುಬಿನ ಮಂದೆಯನ್ನು ಪುಡಿಗೈದು, ಜಲಪಾತದಂತೆ ರಕ್ತದ ಸೆಲೆಯನ್ನು ಹೊರಚೆಲ್ಲಿ, ರಕ್ತವಾರಿಧಿಯಲ್ಲಿ ವಿಲಾಸವಾಡಬೇಕೆಂದು ಬಂದಿರುವನು–ಈ ಯಾದವ ಕುಲದ ಯಮನು!

**ಅನಿರುದ್ಧ** – ಮದೋನ್ಮತ್ತವಾಗಿ ಬರುವ ಮದಿಸಿ ಮೇಲ್ವಾಯ್ದು ಬರುವ ಕಾಡಾನೆಯನ್ನು ಕಿಶೋರವನರಾಜನೆಂದಿಗೂ ಲೆಕ್ಕಿಸಲಾರನು! ಕನಲಿ ಬರುವ ಕಶ್ಯಪ ವಂಶದ ವೀರರ ರಕ್ತದ ಹೊನಲನ್ನೇ ಹರಿಸಬಲ್ಲನು– ಬಾಲಾರ್ಕಬಿಂಬದಂತಿರುವ ಈ ಕದನಕಂಠೀರವನು!

**ಬಾಣಾಸುರ** – (ಕಣ್ಣನ್ನು ವಿಶಾಲವಾಗಿ ತೆರೆದು, ಕಿಡಿಕಿಡಿಯಾಗಿ) ಕೃತಾಂತ ಕಾಲದಂಡದ ಬಿಂಕವನ್ನು ಮುರಿಯಬಲ್ಲ ಕ್ರೂರ ಕರವಾಲವೆ! ಸಿದ್ಧವಾಗು. ಗಂಡೆದೆಯಿಂದ ಗುಡಿಗಟ್ಟಿ ಮಾರ್ನುಡಿಯುವ ಷಂಡಾತ್ಮನಾದ ಭಂಡ ಶಿಖಾಮಣಿ–ಪ್ರಚಂಡ ಬಲನ ಮುಂದೆ ಪರಿಹಾಸದ ಚೆಲ್ಲಾಟವೇ? ಎಲವೆಲವೋ ದುರಾತ್ಮಾ, ಈ ಚಂಡವಿಕ್ರಮನು ತನ್ನ ಪದಸ್ಪಂದನದಿಂದ ಘಾತಿಸಿ, ಭೂಗರ್ಭವನ್ನು ಭೇದಿಸಿ ಮೂಲನಾಗನ ನೆತ್ತಿಯಲ್ಲಿರುವ ವಿಷಪೂರಿತ

ಪಿತ್ತಕೋಶವನ್ನೇ ನಿನ್ನ ಬ್ರಹ್ಮನಾಡಿಯಲ್ಲಿ ಬಿಡುವನು. (ಕೆಡವಿಹಾಕಿ, ಎದೆಯ ಮೇಲೆ ಕುಳಿತು) ನೀಚಾಧಮಾ, ದಂಡಿದುರ್ಗಿಗೆ ನಿನ್ನನ್ನು ಬಲಿದಾನ ಕೊಟ್ಟು, ಹಿಂದು ಭೂತಗಳಿಗೆ ರಕ್ತಸ್ನಾನ ಮಾಡಿಸುವೆ– (ಮರುಳು ಸಿಂಹದಂತೆ ರೋಷೋನ್ಮತ್ತದಿಂದ ವಿಲಾಸದಲ್ಲಿರುವಾಗ)....

**ಉಷಾ** — (ಓಡಿಬಂದು, ಕಾಲುಗಳನ್ನು ಗಟ್ಟಿಯಾಗಿ ಹಿಡಿದು) ತಂದೆಯೆ, ನಿನ್ನ ಪಾದಗಳಲ್ಲಿ ಅಭಿವಂದಿಸುತ್ತೇನೆ. ನನ್ನ ಆಶಾಮಂದಿರದ ತಳಹದಿಯನ್ನು ತುಳಿದು ಕೆಡಹಬೇಡ–ಉಷೆಯು ಕಟ್ಟಿದ ಸುಧಾಮಯ ಸುಂದರ ಸೌಧಕ್ಕೆ ಬೆಂಕಿ ಹಚ್ಚಬೇಡ. ಸುಳಿದೆಗೆದು ರಂಜಿಸುವ ಈ ಎಳೆಬಾಳೆಯ ಮರವನ್ನು ನಿನ್ನ ಕೃತಾಮತ ಕೋಪದ ಕಾಡ್ಗಿಚ್ಚಿನಿಂದ ದಹಿಸಬೇಡ, ಪ್ರಭು. ಉಷೆಯ ಜೀವನೋದ್ಯಾನಕ್ಕೆ ಕೊಳ್ಳಿ ಕೊಡಬೇಡ. ಬೇಕಾದರೆ ಮೊದಲು ನೀನು–ಸಾತಿಶಯ ಪ್ರೇಮದಿಂದ ಬೆಳಸಿದ ನಿನ್ನ ಕರುಳಿನ ಲತೆಯನ್ನೇ ಮೊದಲು ನಿನ್ನ ಕೈಯಿಂದ ಕತ್ತರಿಸು. ನಿನ್ನ ಜಾತಿಯ ಕಲಂಕವನ್ನು ತೊಡೆಯಲು ಈ ಉಗ್ರೋಪಾಯ ಬೇಡ, ತಂದೆ. ನಿನ್ನ ವಂಶಕ್ಕೆ ಕುಂದನ್ನು ತಂದ ಹತಭಾಗಿನಿಯು ನಾನಾಗಿದ್ದರೆ ಮೊದಲು ನನ್ನನ್ನು ಶೂಲಕ್ಕೇರಿಸು! ಪ್ರೀತಿಯಿಂದ ಸಾಕಿ ಸಲಹಿದ ಮಮತೆಯ ಕರುಳಿನಲ್ಲಿ ಇಂತಹ ಭಯಂಕರ ಬಡಬಾಗ್ನಿಯು ಉದಯವಾಗಬೇಕೆ! ತಾತಾ, ಸಹಿಸಲಾರೆನು, ಮೊದಲು ನನ್ನನ್ನು ಶಿಕ್ಷಿಸು.

**ಬಾಣಾಸುರ** — (ಮೆಲ್ಲನೆ ಎದ್ದು ನಿಂದು) ಬಡಬಡಿಸದಿರು, ಕಡುಪಾಪಿಯೆ, ಕುಲಕುಠಾರಿಣೀ, ನನ್ನ ವಂಶಾಕಾರದಲ್ಲಿ ಒಮ್ಮಿಂದೊಮ್ಮೆ ಮೂಡಿಬಂದ ವಿನಾಶಕಾಲದ ಧೂಮಕೇತುವೆ? ದೈತ್ಯಜಾತಿಯ ನಂದನವನ್ನು ದಹಿಸಬಂದ ದಾವಾನಲವೆ? ಬಾಣನು ತನ್ನ ರಕ್ತಾಶ್ರುಗಳಿಂದ ಈ ಪಾಪಾನಲವನ್ನು ಶಾಂತಪಡಿಸುವನು. ಚಂಡಿಯೆ, ಮಾವಿನಮರದ ಮರಿಗೋಗಿಲೆಯೆಂದು ನಿನ್ನನ್ನು ಸಾಕಿ ಸಲಹಿದೆ. ನಿನ್ನ ಯೌವನವು ವಸಂತಾಗಮನದಿಂದ ಪಲ್ಲವಿಸುವ ಮಾಮರದಂತೆ ಸುಫಲ ನೀಡುವದೆಂದು ಬಯಸಿದ್ದೆ! ನಿನ್ನ ಕೋಕಿಲ ಕಂಠದಿಂದ ಹೊರಡುವ ಮಾರ್ದವ ದನಿಯು, ನನ್ನ ವಿಜಯವಿಲಾಸ ಕಿನ್ನರ ಕಹಳೆಯೆಂದು ಆಶಿಸಿದ್ದೆ...ಆದರೆ ನಿನ್ನ ಕಠೋರಕೃತ್ಯವು– ನಿನ್ನ ಕರ್ಕಶ ವಾಣಿಯು–ನನ್ನ ಹುತಾತ್ಮ ಪಿತೃಗಳನ್ನು

ಕೆರಳಿಸುತ್ತಿರುವುದು. ಮಾವಿನಮರದ ಕೋಗಿಲೆಯು ಬೇವಿನಮರದ ಕಾಗೆಯಾಯಿತು! ಪೀಯೂಷಪಾತ್ರೆಯನ್ನು ಬುಡಮೇಲು ಉರುಳಿಸಿ, ಕಾಳಿಂಗನ ವಿಷಪ್ರಾಶನಕ್ಕಾಗಿ ಹಾತೊರೆಯುತ್ತಿರುವ ಚಾಂಡಾಲ ಹಕ್ಕಿಯೆ–ನೀನಿನ್ನು ಬದುಕಲಾರೆ–ಇದುವರೆಗೂ ನಿನ್ನನ್ನು ನನ್ನ ಒಡಲನ್ನಲಂಕರಿಸಿರುವ ಸುಶೋಭಿತ ರತ್ನಪದಕವೆಂದು ಗ್ರಹಿಸಿದ್ದೆ–ಈಗ ಅದು ನನ್ನ ಒಡಲನ್ನು ಸುತ್ತಿ, ಪಂಚಪ್ರಾಣಗಳನ್ನೇ ಸೆಳೆಯುವ ಘಟಸರ್ಪವೆಂದು ತಿಳಿದೆ! ಎಲೆ, ನಾಗಿಣಿ–ನನ್ನ ಸ್ನಿಗ್ಧ ಸ್ನೇಹರಸ, ಮಮತೆ, ಪ್ರೇಮಾಮೃತಸಿಂಚನೆಯಿಂದ ಬೆಳೆದ ನೀನು, ಈ ತೆರದ ವಿಷಫಲವನ್ನು ಕೊಟ್ಟೆ! ಪಿತೃಪ್ರೇಮವನ್ನು, ಸಾಮ್ರಾಜ್ಯದ ಗೌರವವನ್ನು, ಸಜಾತಿಯ ಪಾವಿತ್ರ್ಯತೆಯನ್ನು–ಕೇವಲ ನಿನ್ನ ವಿಷಯೋಪಭೋಗದ ಕಾಮಲಾಲಸೆಗಾಗಿ ಮಾರಿಕೊಂಡೆಯಲ್ಲವೆ, ಮಾರಿಯೇ? ನಿನ್ನ ನೀಚ ಕೃತ್ಯವನ್ನು ನೆನೆದರೆ, ಸ್ಮೃತಿಗಗನದಲ್ಲಿ ಭಯಂಕರವಾದ ಬಿರುಗಾಳಿಯೆದ್ದು, ಮಹಾ ರೋಷಗರ್ಜನೆಯಿಂದ ಸಿಡಿಲು ಮಿಂಚುಗಳನ್ನೇ ಕಾರುವುದು, ಪಾತಕಿ!

**ಉಷಾ** – ಪಿತಾಶ್ರೇಷ್ಠ! ಹೆಂಗರುಳನ್ನು ಕೊಲೆ ಮಾಡುವದು ವೀರಸಿಂಹನಾದ ನಿನ್ನ ಧರ್ಮವೆ? ಶಾಂತನಾಗು, ತಂದೆ. ನಮಗೆ ಸೌಮ್ಯ ಶಿಕ್ಷೆಯನ್ನೇ ವಿಧಿಸು..........

**ಬಾಣಾಸುರ** – (ಆತ್ಮಗತಿ) ಕೋಲ್ಮಿಂಚುಗಳನ್ನು ಕಾರುತ್ತಿರುವ ರೋಷದ ರಭಸವು ಶೋಕದ ಸೆಲೆಯಾಗಿ ಮಾರ್ಪಡುತ್ತಿರುವದು. ಹೃದಯಾಂತರಾಳದ ಈ ಪರಿತಾಪಕ್ಕೆ ನೆಲೆ ಯಾವುದು? ಸಂಸ್ಕಾರದ ಶಕ್ತಿಯು ಉಕ್ಕಿನ ಹೃದಯವನ್ನು ನೀರಾಗಿ ಕರಗಿಸಬಲ್ಲುದು! (ಪ್ರಕಟ) ಜಾರಿಣಿ! ಕುಲಟೆ! ನಿನ್ನ ಕ್ರೂರ ಕೃತ್ಯವು ಕೂರಲಗಿನಂತೆ ನನ್ನ ನರನಾಡಿಗಳನ್ನು ಮಿಡಿದು ಹೃದಯವನ್ನೇ ಹಿಂಡುತ್ತಿರುವದು! ಇದೀಗ ನಿಮಗೆ ಉಗ್ರ ಕಾರಾಗೃಹ ಶಿಕ್ಷೆಯನ್ನೇ ವಿಧಿಸಿದ್ದೇನೆ. ಭೋಗಿಸು ನಿನ್ನ ಕೃತಕರ್ಮವನ್ನು! ಎಲವೋ, ಬಂಧಿಸಿರಿ ಇವರನ್ನು! ಇವರ ಸೆರೆಮನೆಯಲ್ಲಿ ಸೂರ್ಯರಶ್ಮಿಗಳು ಸುಳಿದಾಡಿದರೆ ದಂಡಗಳ ಮೇಲೆ ರುಂಡಗಳು ಇರಲಾರವು! ಭದ್ರ!

(ಎಲ್ಲರನ್ನೂ ಸೇವಕರು ಎಳೆದೊಯ್ಯುವರು. ಬಾಣನು ಅವರ ನಿರ್ಗಮನವನ್ನೇ ನಿಟ್ಟಿಸುತ್ತಿರುವನು.)

(ತೆರೆ ಮೆಲ್ಲಗೆ ಇಳಿಯುವುದು)

## ದೃಶ್ಯ ೨. ದ್ವಾರಕಾನಗರ

[ರುಕ್ಮಿಣಿದೇವಿಯ ಏಕಾಂತ ಮಂದಿರ–ಆಲೋಚನಾಕ್ರಾಂತಳಾಗಿರುವಳು]

**ರುಕ್ಮಿಣಿ –** ಅನಿರುದ್ಧ ಕುಮಾರನ ವಿಷಯ ತಿಳಿಯದೆ ದಿಗ್ಭ್ರಾಂತಳಾಗಿದ್ದೇನೆ. ಮನವು ದುಃಖಾತಿಶಯದಿಂದ ಬಳಲುತ್ತಿರುವದು. ಎಂತಹ ಅಭೂತಪೂರ್ವ ಛಾಯೆ ಇದು! ಇರುಳಿನಲ್ಲಿ ಮಲಗಿದ್ದ ಮುದ್ದು ಕುಮಾರನು ಬೆಳಗಾಗುವುದರೊಳಗಾಗಿ ಪರ್ಯಂಕ ಸಮೇತ ಮಾಯವಾಗಿದ್ದಾನೆ? ಎಂತಹ ಭೀಷಣ ಶಕ್ತಿಯಿದು! ಆ ಸನ್ನಿವೇಶವನ್ನು ನೆನೆದರೆ ದೇಹಾದ್ಯಂತ ರೋಮಾಂಚನವಾಗುತ್ತಿರುವದು. ಯಾವ ಕ್ರೂರ ಶಕ್ತಿಯು ನನ್ನ ಅನಿರುದ್ಧ ಕುಮಾರನನ್ನು ಸೆಳೆದೊಯ್ದಿರಬಹುದು! ಮಂತ್ರವಾದಿಗಳೂ ಕೂಡ ಆಶ್ಚರ್ಯಚಕಿತರಾಗಿದ್ದಾರೆ. ಭೂತಗಳ ಘಾತುಕ ಲೀಲೆಯಾಗಿರಬಹುದೇ! ಮನವು ಕಾತುರದಿಂದ ಕಳವಳ ಪಡುತ್ತಿದೆ. ಒಡ್ಡೋಲಗದಲ್ಲಿ ವಿಶೇಷ ಸಮಾಚಾರ ತಿಳಿದಿರಬಹುದೇ? ಸಾತ್ಯಕಿ, ಸಾತ್ಯಕಿ!

**ಸಾತ್ಯಕಿ –** ಬಂದೆ ಮಾತೆ, ಚರಣಕಮಲಗಳಲ್ಲಿ ವಂದನೆಗಳು. ಪ್ರಸಾದ ವಾಣಿಯಿಂದ ಕೃಪೆಯಾಗಬೇಕು.

**ರುಕ್ಮಿಣಿ –** ಮಗು, ಸಾತ್ಯಕಿ, ಅನಿರುದ್ಧ ಕುಮಾರನ ವಿಷಯದಲ್ಲಿ ನನಗೆ ದಿನ ದಿನಕ್ಕೂ ಭೀತಿ ಹೆಚ್ಚುತ್ತಿದೆ. ಅನಿರುದ್ಧನು ಯಾವ ಮಾಯೆಯ ಮನೆಯನ್ನು ಹೊಕ್ಕಿರಬಹುದು! ಇದರ ಕಾರಣವನ್ನಾದರೂ ಊಹಿಸಿರುವೆಯಾ?

**ಸಾತ್ಯಕಿ –** ಇಡೀ ಯಾದವ ರಾಜ್ಯವೇ ಕಾರಣವನ್ನು ತಿಳಿಯದೆ ಮರುಗುತ್ತಿರುವುದು, ದೇವಿ. ಇದೊಂದು ಕಲ್ಪನಾತೀತ ಭೂತಲೀಲೆ! ನೆನೆದರೆ ಮೈ ನವಿರೇಳುವದು. ಊಹೆಗೆ ಕೂಡಾ ನಿಲುಕಲಾರದ ಸಮಸ್ಯೆಯಾಗಿದೆ, ಮಾತೆ.

**ರುಕ್ಮಿಣಿ –** ಅಹುದು, ಮಗು, ಕುಮಾರವೀರನ ಕಣ್ಮರೆಯಿಂದ ಶೋಕಾಕುಲಳಾಗಿದ್ದೇನೆ. ಯಾರು ನನ್ನ ಮುದ್ದು ಮಗುವನ್ನು ತೋಿಸಬಹುದು! ಯಾವ ಚೋರನಾದರೂ ಕದ್ದೊಯ್ದಿರಬಹುದೆ?

**ಸಾತ್ಯಕಿ –** ಇದೆಂತಹ ಮುಗ್ಧ ಕಲ್ಪನೆ, ಮಾತೆ. ಅನಿರುದ್ಧವೀರನೇನು ಸಾಮಾನ್ಯನೆ!

ಸ್ವಾಭಿಮಾನಿಯಾದ ವೀರ ತರುಣ, ಉಜ್ವಲ ಸಾಹಸಿ, ಯಾದವ ವಂಶಕ್ಕೇ ಕಲಶಪ್ರಾಯನಾದ ಕೀರ್ತಿರತ್ನ, ಮೇಲೆ ರಾಜನೀತಿ ನಿಪುಣನಾದ ಶ್ರೀಕೃಷ್ಣನ ಸಾಹಸಗರಡಿಯಲ್ಲಿ ಬೆಳೆದ ಜಗಜ್ಜೇತ ಜಟ್ಟಿ! ಅದೇನು ಕರ್ದೊಯ್ಯಲು ಬಾಲಕರಾಡುವ ಬೊಂಬೆಯೆ? ಅಸಾಧ್ಯ, ಅಸಂಭವ!

**ರುಕ್ಮಣಿ —** ನೀನು ಹೇಳುವದು ಯಥಾರ್ಥವಿದೆ. ಸಾಮಾನ್ಯನಂತೆ ಅವನು ಎಂದೂ ವೈರಿಯ ಕೈಯಲ್ಲಿ ಸೆರೆಯಾಳಾಗಲಾರನು—ಆದರೆ ಕ್ಷಣ ಕ್ಷಣಕ್ಕೂ ಮನದ ಮರುಕವು ಹೆಚ್ಚಿ, ವ್ಯಾಕುಲದ ವೇದನೆ ತಡೆಯಲಾರದಾಗಿದ್ದೇನೆ. ಸಾತ್ಯಕಿ, ಈ ಪ್ರಶ್ನೆ ಪ್ರಶ್ನೆಯಾಗಿಯೆ ಉಳಿಯಬೇಕೆ?

**ಸಾತ್ಯಕಿ —** ಈ ಪ್ರಶ್ನೆ ಪ್ರತಿಭಾವಂತರ ತಲೆಗಳನ್ನೇ ತಿನ್ನಹತ್ತಿದೆ. ಜ್ಯೋತಿಷ್ಯಶಾಸ್ತ್ರದ ಗಣಿತಗಳೆಲ್ಲಾ ಬಿದ್ದುಹೋದವು—ಮಾಡುವದೇನು—ವಿಧಿಯ ವಿಚಿತ್ರಲೀಲೆ!

**ರುಕ್ಮಿಣಿ —** ಒಡ್ಡೋಲಗದಲ್ಲೇನಾದರೂ ಈ ವಿಷಯದ ಪ್ರಸ್ತಾಪವೆದ್ದಿದ್ದಿತೆ?

**ಸಾತ್ಯಾಕಿ —** ಆಗದೇನು, ಮಾತೆ! ಅನಿರುದ್ಧನು ಕಣ್ಮರೆಯಾಗಿ ಆರು ತಿಂಗಳಾದರೂ ಒಡ್ಡೋಲಗದಲ್ಲಿ ಈ ವಿಷಯದ ಆಪ್ತಾಲೋಚನೆಯೇ ದಿನನಿತ್ಯದ ಕರ್ಮವಾಗಿಬಿಟ್ಟಿದೆ. ಅಷ್ಟದಿಕ್ಕುಗಳಲ್ಲಿ ಪರಿಚಾರಕರನ್ನು ಅಟ್ಟಲಾಯಿತು—ಗೂಡಚಾರರನ್ನು ಕಳುಹಿಸಲಾಯಿತು—ರಾಜಾಧಿರಾಜದಲ್ಲಿರುವ ರಾಯಭಾರಿಗಳಿಗೆ ತಿಳಿಸಲಾಯಿತು—ಪ್ರಶ್ನೋತ್ತರಗಳಾದವು. ಜ್ಯೋತಿಷ್ಯವಾಯಿತು—ಮಾಂತ್ರಿಕರ ಮಂತ್ರಗಳಾದವು—ಆಕಾಶ ಪಾತಾಳಗಳನ್ನು ಭೇದಿಸಿದರೂ ಸುದ್ದಿಯ ಸುಳುವಿಲ್ಲ. ರಹಸ್ಯವು ರಹಸ್ಯವಾಗಿಯೇ ಉಳಿದಿದೆ! ಮಾಡಬೇಕೇನು?

**ರುಕ್ಮಿಣಿ —** ಅಯ್ಯೋ, ಸಾತ್ಯಕಿ, ಅನಿರುದ್ಧನು ನನಗೆ ಮರಳಿ ಭೆಟ್ಟಿಯಾಗಬಹುದೆ? ಅವನ ಶುಭ ಸಂದರ್ಶನವು ಎಂದಿಗಾದರೂ ಆಗಬಹುದೆ? ಅಯ್ಯೋ, ಬಾಳ ಬಾನಿನಲ್ಲಿ ನಿರಾಶೆಯ ಧೂಮಕೇತು ಮೂಡಿಬರುತ್ತಿರುವುದು! ಅನಿರುದ್ಧ ಕುಮಾರಾ, ಮಗು—(ಪದ) ಎಲ್ಲಿರುವೆ?

**ಸಾತ್ಯಕಿ** — ಸಹಿಸು, ಮಾತಾಮಯೀ. ಶೋಕಾತಿಶಯವನ್ನು ಶಾಂತ ಪಡಿಸು. ಅದೋ, ದೇವಿ, (ತೆರೆಯ ಕಡೆ ನೋಡಿ) ದೇವರು ದರ್ಭಾರದಿಂದ ದಯಮಾಡಿಸುತ್ತಿರುವರು ಅವರೇ ನಿಮ್ಮ ವ್ಯಾಕುಲಚಿತ್ತವನ್ನು ಸಂತೈಸಿ ಶಾಂತಗೊಳಿಸಬಲ್ಲರು.

**ರುಕ್ಮಿಣಿ** — ಅವರು ಬರುತ್ತಿರುವರೆ, ಸಾತ್ಯಕಿ! ಯಾರು ಬಂದರೇನು? ನನ್ನ ಮುದ್ದು ಕುಮಾರನನ್ನು ತೋರುವ ಸಾಹಸ ಯಾರಲ್ಲಿಯೂ ಇಲ್ಲ ದಾಯಿತೆ!

**ಕೃಷ್ಣ** — (ನಾರದನ ಸಂಗಡ ಹಾಸ್ಯಾಲಾಪಗಳಾಡುತ್ತ ಬಂದು) ಇಷ್ಟೇಕೆ ವ್ಯಾಕುಲ ಮಾನಸಳಾಗಿ ಕಾತರಗೊಳ್ಳುತ್ತಿರುವೆ, ಪ್ರಿಯೆ? ನಿನ್ನ ಮನದ ದುಗುಡವನ್ನು ಪರಿಹರಿಸುವುದಕ್ಕಾಗಿಯೇ ನಾರದರು ಶುಭ ಸಮಾಚಾರವನ್ನು ತಂದಿರುವರು.

**ರುಕ್ಮಿಣಿ** — ನಿಜವೇ, ನಾಥಾ! ನಾರದರು ಶುಭ ಸಮಾಚಾರವನ್ನು ತಂದಿರುವದು ಸತ್ಯವೆ?

**ಕೃಷ್ಣ** — ಇದೋ, ಕೇಳಿ ಆನಂದಿಸು.

**ನಾರದ** — ಮಾತೆಯ ಚರಣಗಳಲ್ಲಿ ಅಭಿನಂದನೆಗಳು!

**ರುಕ್ಮಿಣಿ** — ಶ್ರೀಮನ್ನಾರಾಯಣನು ನಿನಗೆ ಕಲ್ಯಾಣವನ್ನು ಮಾಡಲಿ. (ದುಗುಡದಿಂದ) ನಾರದರೆ, ಪತಿದೇವರು ಆಡಿದ ಮಾತು ಸತ್ಯವೇ?

**ನಾರದ** — (ಸ್ವಗತ) ಇವರನ್ನು ನಂಬಿಸುವ ಬಗೆ ಹೇಗೆ! ಕೃಷ್ಣನಂತೂ ಭಾರತಾದ್ಯಂತ ಕಪಟ, ಕಳ್ಳ ಎಂದು ಹೆಸರುವಾಸಿಯಾಗಿದ್ದಾನೆ. ನನಗಂತೂ ಮನೆಮನೆಗೆ ತಿರುಗಿ ಕೊಳ್ಳಿ ಹಚ್ಚುವ ಕೀಟಕ ಎಂದು ಬಿರುದು ಬಂದಿದೆ. ಒಮ್ಮೆ ಕಪಟ, ಕಳ್ಳ, ಕೀಟಕ ಎಂಬ ಹೆಸರು ಬಂದಮೇಲೆ ಮರಳಿ ಈ ಲೋಕದಲ್ಲಿ ಅದು ಮಾಸುವದೇ ಇಲ್ಲ. ಅದಕ್ಕಂತೆಯೇ ಜ್ಞಾನಿಗಳು–ಕನಸಿನಲ್ಲಿಯೂ ಅಸತ್ಯವಾಡಬಾರದೆಂದು ಹೇಳಿದ್ದಾರೆ. ಈಗ ನಾನೀರ್ವರೂ ಸತ್ಯವಂತರೆಂದು ಮಾತೆಯಲ್ಲಿ ಹೇಗೆ ನಂಬಿಕೆ ಹುಟ್ಟಿಸಬೇಕು? (ಆಲೋಚನೆ)

**ರುಕ್ಮಿಣಿ** — ಸತ್ಯ ಹೇಳುವುದರಲ್ಲಿ ಸಂಶಯವೇಕೆ, ನಾರದರೆ! (ಕೃಷ್ಣನನ್ನು ಉದ್ದೇಶಿಸಿ) ಮತ್ತಾವ ಮೋಸದ ಬಲೆ, ಮಹಾನುಭಾವ!

**ಕೃಷ್ಣ** – ಸಂದೇಹ ಬೇಡ, ರುಕ್ಮಿಣಿ. ನಾರದರನ್ನು ನಂಬು.

**ನಾರದ** – ಮಾತೆ, ಸಂಶಯವಿಲ್ಲ–ಆದರೆ ನಮ್ಮೀರ್ವರ ಮೇಲಿರುವ ಜಗತ್ತಿನ ಅಪನಂಬಿಕೆಯನ್ನು ಹೇಗೆ ನಿವಾರಿಸಿಕೊಳ್ಳಬೇಕೆಂದು ಆಲೋಚಿಸುತ್ತೇನೆ. ಮನುಷ್ಯ ಒಮ್ಮೆ ಮೋಸಗಾರನೆಂಬ ಆಪಾದನೆಗೆ ಗುರಿಯಾದರೆ, ಅದನ್ನು ಅಳಿಸುವುದು ಕಷ್ಟ! ಇವರಂತೂ ಹೇಳಿ ಕೇಳಿ ಕಪಟನಾಟಕ ಸೂತ್ರಧಾರಿಯೆಂದು ಸುಪ್ರಸಿದ್ಧರು! ನಾನಂತೂ ಕಲಹಪ್ರಿಯೆನೆಂದು–ಜಗವು ಕೊಂಡಾಡುತ್ತಿದೆ! ಕುಟಿಲ, ಕಪಟ, ಕಲಹಗಳಲ್ಲಿ ಇಷ್ಟು ಸುಪ್ರಸಿದ್ಧರಾದ ನಾವು ಜನಾಂಗದ ವಿಶ್ವಾಸಕ್ಕೆ ಪಾತ್ರರಾಗುವದು ಸುಲಭಸಾಧ್ಯವಾದ ಮಾತಲ್ಲ! ತಮ್ಮನ್ನು ಸಧ್ಯ ಹೇಗೆ ನಂಬಿಸಬಲ್ಲೆನೆಂಬುದೇ ನನ್ನ ಪ್ರಕೃತ ಸಂಶಯದ ಕಾರಣವಾಗಿದೆ.

**ರುಕ್ಮಿಣಿ** – ಆಶಾದಾಯಕವಾದ ಅಸತ್ಯವನ್ನೂ ನಂಬುವಷ್ಟು ನಾನು ಅಧೀರ ಮಾನಸಳಾಗಿದ್ದೇನೆ. ಆದರೆ ನಿರಾಶೆಯ ಸುಳಿಗಾಳಿಯು ಬೀಸದಿರಲಿ! ಆತುರ ಹೆಚ್ಚುತ್ತಿದೆ, ನಾರದರೆ ಬಂದರೆ ಕಾಲಹರಣ ಮಾಡಬೇಡಿ– ನಿಜವನ್ನೇ ಹೇಳಿರಿ.

**ಸಾತ್ಯಾಕಿ**– ಚೇಷ್ಟೆಗಿದು ಸಮಯವಲ್ಲ ಸ್ವಾಮಿ – ಸತ್ಯವನ್ನೇ ಹೇಳಿರಿ– ಮಾಯಾಬಜಾರದ ಸಂತೆಯೇ ಬೇಡ–ಬುರುಡೆ ಹಾರಿಸುವದರಿಂದ ಏನು ಫಲ!

**ನಾರದ** – (ಸ್ವಗತ) ಅಯ್ಯೋ, ಮತ್ತೆ ಮತ್ತೆ ಅದೇ ಅಪವಾದ. ಆಗಲಿ. (ಪ್ರಕಟ) ದೇವಿ, ತಾವು ಸ್ವಸ್ಥಚಿತ್ತರಾಗಿ. ಅನಿರುದ್ಧ ಕುಮಾರನ ಚಿಂತೆಯನ್ನು ಬಿಡಿರಿ. ಅವನು ಕ್ಷೇಮದಿಂದಿದ್ದಾನೆ.

**ರುಕ್ಮಿಣಿ** – ಅಹಹಹ, ನಿಜವೆ? ಅಂದರೆ....ಅವನು ಎಲ್ಲಿರುವನು, ನಾರದರೆ? ಅವನನ್ನು ನಾವು ಕಳೆದುಕೊಂಡು ಇಂದಿಗೆ ಅರ್ಧ ವರ್ಷವಾಯಿತು.

**ನಾರದ** – ಬರಿ ಅರ್ಧ ವರ್ಷವೇಕೆ, ಮಾತೆ–ಅರ್ಧ ಶತಮಾನವಾದರೂ ಅವನು ನಿಮಗೆ ಸಿಗಲಾರನು.

**ರುಕ್ಮಿಣಿ** – ಅಯ್ಯೋ, ಕುಮಾರವೀರನು ಪ್ರಪಂಚದಲ್ಲಿ ನನಗೊಂದು ಸಲ ಸಿಗಲಾರನೆ?

**ನಾರದ** – ಸಿಗುವನು, ದೇವಿ–ಸಾಧ್ಯವಿಲ್ಲದ ಸ್ಥಳದಲ್ಲಿ ಸಿಕ್ಕುಬಿದ್ದಮೇಲೆ ಸಿಗುವದು ಸ್ವಲ್ಪ ಕಷ್ಟಸಾಧ್ಯವೇ, ಸರಿ.

**ಸಾತ್ಯಕಿ** – (ಸ್ವಗತ) ಮತ್ತೆ ತಂತ್ರವನ್ನು ಪ್ರಾರಂಭಿಸಿದರಲ್ಲಾ! (ಪ್ರಕಟ) ಸ್ವಾಮಿ, ಸ್ವಲ್ಪ ನಿಜ ಹೇಳುವುದನ್ನು ರೂಢಿಮಾಡಿಕೊಳ್ಳಿರಿ. ಕುಮಾರ ವೀರನು ಅದಾವ ದುರ್ಭೇದ್ಯ ಸ್ಥಳದಲ್ಲಿ ಬಂಧಿತನಾಗಿರುವನು?

**ರುಕ್ಮಿಣಿ** – ನಾರದರೆ, ತೀವ್ರ ಹೇಳಿರಿ. ನನ್ನ ಸ್ವಾಮಿಗೆ ಅಭೇದ್ಯವು ಭೇದ್ಯವಾಗಿರುವದು–ಅಸಾಧ್ಯವು ಸಾಧ್ಯವಾಗಿರುವದು. ಶ್ರೀಕೃಷ್ಣನ ಸುದರ್ಶನವನ್ನು ಆಹ್ವಾನಿಸುವ ಅದಾವ ದುರ್ಧರ ಶಕ್ತಿ ತಲೆಯೆತ್ತುತ್ತಿರುವದು!

**ನಾರದ** – ಹಿಂಸೆಯ ಆಟವು ಇಲ್ಲಿ ನಡೆಯಲಾಗದು, ಮಾತೆ ಕಾಲಭೈರವನನ್ನು ಕೆಣಕುವ ಸಾಹಸವು ಸುದರ್ಶನದಲ್ಲಿರುವದೆ? ಹಿಂಸೆಯನ್ನೇ ಹೆಗ್ಗುರಿಯಾಗಿಟ್ಟುಕೊಂಡ ಯಾವ ಜನಾಂಗವೂ ಕಲ್ಯಾಣವನ್ನು ಸಾಧಿಸಲಾರದು.

**ಸಾತ್ಯಕಿ** – ಬ್ರಹ್ಮಾಂಡವನ್ನೇ ಅರೆನಿಮಿಷದಲ್ಲಿ ಭಸ್ಮೀಭೂತ ಮಾಡಬಲ್ಲ ಸುದರ್ಶನದ ಮಹಾಶಕ್ತಿಯಲ್ಲಿ ನಿಮಗೆ ಅಪನಂಬಿಕೆಯೆ!

**ನಾರದ** – ಶಕ್ತಿ ಶಕ್ತಿಗಳ ಸ್ಪರ್ಧೆಯು ಯಾವಾಗಲೂ ಈ ಲೀಲಾರಂಗದಲ್ಲಿ ನಡೆದೇ ಇದೆ. ಸಾತ್ಯಕಿ, ಒಂದನ್ನೊಂದು ಉರುಳಿಸಿ ಅರಳುವದು ಸಹಜ ಸಿದ್ಧವಾದ ನಿಸರ್ಗ ಸಿದ್ಧಾಂತ! ಆದರೆ ಶಕ್ತಿಯೇ ಲೋಕದ ಸರ್ವಸ್ವವಲ್ಲ ಸರ್ವಶಕ್ತಿಗಳನ್ನೂ ಶಾಸನ ಮಾಡಬಲ್ಲ ಸರ್ವ ಚೇತನದ ಮೂಲವಾದ ಸಹಜ ನಿರ್ವಿಕಾರ, ಕೇವಲ ಸತ್ಯವಾದ ಅಪರಾಧಿಯ ಶೂನ್ಯಶಕ್ತಿಯೊಂದಿದೆ–ಅದೇ ಸಕಲ ದೈವಗಳ ಶಾಸನ, ಪ್ರಭು. ಅದನ್ನು ಅಂತರಂಗದ ಆತ್ಮತೇಜವು ಸಾಧಿಸಬಲ್ಲದು–ಬಹಿರಂಗದ ಸಾವಿರ ಸುದರ್ಶನಗಳು ಸಾಟಿಯಾಗಲಾರದು. ಸುದರ್ಶನವೆಂದರೆ ಮಹಾ ಶೂನ್ಯಚಕ್ರದ ಒಂದು ಸಾಮಾನ್ಯ ಕಿರಣ! ಅಂತಹ ಅಂತಿಮ ಶಕ್ತಿಯ ಸಂಗಡ ಸರಿ ಸಮವಾಗಿ ಸೆಣಸಬಲ್ಲ ವೀರರಾರಿರುವರು ಹೇಳಬಲ್ಲಿರಾ?

**ಕೃಷ್ಣ** – ನಿಜ, ನಾರದ–ಯಥಾರ್ಥವನ್ನೇ ಹೇಳಿದೆ. (ನಗು)

**ರುಕ್ಮಿಣಿ** – ಹಾಗಾದರೆ ಕುಮಾರವೀರನು ನಮಗೆ ಲಭ್ಯನಲ್ಲವೆ? ನಾರದರೆ

ಅವನು ಎಲ್ಲಿರುವನೆಂಬುದನ್ನಾದರೂ ತಿಳಿಸಿ, ಸಂತೋಷಪಡಿಸಿ.

**ನಾರದ –** ದೇವಿ, ಅವನು ಇದುವರೆಗೂ ಸುಖದಿಂದ ಮಾವನ ಮನೆಯಲ್ಲಿ ಕಾಲ ಕಳೆದನು. ಆದರೆ ಇದೀಗ ಅವನನ್ನು ಮಾವನ ಮನೆಗೆ ವರ್ಗಾಯಿಸಿದೆ. ಈಗ ಮಾತ್ರ ಅವನು ದಾರುಣ ಸ್ಥಿತಿಯಲ್ಲಿದ್ದಾನೆ.

**ರುಕ್ಮಿಣಿ –** ಬೇಗನೆ ಹೇಳಿ, ನಾರದರೆ. ನಿಮ್ಮ ಸಂದಿಗ್ಧವನ್ನರಿಯುವ ಸಾಮರ್ಥ್ಯವಿಲ್ಲ– ಸ್ಪಷ್ಟವಾಗಿ ವಿವರಿಸಿರಿ.

**ಸಾತ್ಯಕಿ –** (ಜನಾಂತಿಕ) ಒಮ್ಮಿಂದೊಮ್ಮೆ ಸ್ಪಷ್ಟವಾಗಿ ಹೇಳಿದರೆ, ಇವರ ಜಾಣತನ ಮಾಯವಾಗಿ ಜಗತ್ತೇ ನಾಶವಾಗುವುದಲ್ಲ! ದೊಡ್ಡವರೆನಿಸಿ ಕೊಳ್ಳಬೇಕಾದರೆ ಇಷ್ಟೆಲ್ಲ ಹೊಯ್ಮಾಲಿತನದ, ಹೊನ್ನಿನ ಸರಪಳಿ ಹಿಡಿದಿರಬೇಕು, ನೋಡಿ (ಪ್ರಕಟ) ಮಹಾಸ್ವಾಮಿ, ಇದ್ದದ್ದನ್ನು ಒಮ್ಮೆ ಇದ್ದ ಹಾಗೆ ಸ್ಪಷ್ಟವಾಗಿ ತಿಳಿಯುವಂತೆ ಹೇಳಿಬಿಡಿರಿ. ತಾಯಿಯವರೂ ತವಕ ಪಡುತ್ತಿದ್ದಾರೆ. ನಮಗೂ ತ್ರಾಸವಾಗಿದೆ.

**ನಾರದ –** ಅದನ್ನೇ ಹೇಳುತ್ತಿರುವೆನಲ್ಲಾ, ಸಾತ್ಯಕಿ. ಸ್ವಲ್ಪ ಸಮಾಧಾನದಿಂದ ಕೇಳಿರಿ. ಶೋಣಿತ ಸಾಮ್ರಾಜ್ಯದ ಚಕ್ರವರ್ತಿಯಾದ ಬಾಣಾಸುರನ ಏಕಮಾತ್ರ ಕುವರಿಯಾದ ಉಷಾರಾಣಿಯು ಜಗನ್ಮೋಹನ ರೂಪದಿಂದ ಮೆರೆಯುತ್ತಿರುವಳು. ತ್ರಿಭುವನ ಸುಂದರಿಯಾದ ಅವಳು ಅನಿರುದ್ಧನ ಭಾವಚಿತ್ರಕ್ಕೆ ಮೋಹಿಸಿದಳು. ಅನಿರ್ವಚನೀಯವಾದ ಅವಳ ಪ್ರೇಮದೊಲವನ್ನು ತಿಳಿದು, ಅವಳ ಗೆಳತಿಯಾದ ಚಿತ್ರಲೇಖೆಯೆಂಬ ಸಾಹಸಸಿಂಹಿಣಿಯು ತನ್ನ ಯಕ್ಷಿಣೀ ಬಲದಿಂದ ಅವನನ್ನು ಶಯ್ಯಾಸಮೇತವಾಗಿ ಉಷಾಮಂದಿರದಲ್ಲಿ ಇಳಿಸಿದಳು. ನವದಂಪತಿಗಳ ರಹಸ್ಯವು ಸ್ಫೋಟವಾಗಿ ಅವರೀಗ ಸಾಸಿರ ಭುಜಬಲನಾದ ಬಾಣನ ಸೆರೆಯಲ್ಲಿ ಸಿಕ್ಕಿರುವರು. ಇದೇ– ಈಗ ಅವರು ಅನುಭವಿಸುತ್ತಿರುವ ನಿಜ ಚಿತ್ರ!

**ಸಾತ್ಯಕಿ –** ಹೆಣ್ಣುಮಕ್ಕಳ ಮಹಾ ಮೋಸ!

**ರುಕ್ಮಿಣಿ –** ಅದ್ಭುತ ಸಾಹಸ! ಬಾಣಾಸುರನು ಅಸಮಾನ ಭುಜಬಲನು. ಶಿವಪೂಜಾ ಧುರಂಧರನು! ಸಂಯಮೀ ಶ್ರೇಷ್ಠನು. ಆ ಮಹಾಬಲದ ವಿರೋಧವು ಸಾಮಾನ್ಯವಲ್ಲ! ಯಾದವ ವಂಶದ ಕಡುವಿರೋಧಿಯಾದ ಅವನು ತನ್ನ ಸಕಲ ಸನ್ನಾಹ ಬಲದಿಂದ

ಈ ದುರಂತ ನಾಟಕದ ಕೊನೆಯ ಗಳಿಗೆಯನ್ನು ಎಣಿಸಲು ಕಾತುರದಿಂದ ಸಿದ್ಧನಾಗಿ ನಿಂತಿದ್ದಾನೆ.

**ಕೃಷ್ಣ** — ಆದರೂ ಈ ವಾರ್ಧಿಕ್ಯದಲ್ಲಿ ಯುದ್ಧವು ಅನಿವಾರ್ಯವಾಗಿ ಒದಗಿದಂತಾಯಿತು, ನಾರದರೆ. ಆಗಲಿ. ಈ ಯುದ್ಧವನ್ನು ಸಮಾಪ್ತಿಗೊಳಿಸುವ ಸೂಕ್ಷ್ಮ ಸಂಧಿಯನ್ನೊಂದು ಯೋಚಿಸಿರಿ.

**ನಾರದ** — ಆ ಕಾರ್ಯಭಾಗವನ್ನು ನಾನು ಕೊನೆಗಾಣಿಸುತ್ತೇನೆ, ದೇವಾ! ಮೊದಲು ತಾವು ಯುದ್ಧ ಸನ್ನದ್ಧರಾಗಿರಿ.

**ರುಕ್ಮಿಣಿ** — ಯುದ್ಧವೆಂದರೆ ತಮ್ಮ ಹೃದಯವು ಆನಂದದಿಂದ ನರ್ತಿಸುವದು.

**ಕೃಷ್ಣ** — ಸಹಜವಾಗಿ ಹೇಳಿದೆ. ಯುದ್ಧಪ್ರಿಯನಾದ ವೀರನ ಹೃದಯವು ನರ್ತಿಸುವದು ಸಹಜವಾಗಿದೆ. ಆದರೆ ಗತಿಸಿದ ಹಲವಾರು ಯುದ್ಧಗಳಂತೆ ಸಂಪತ್ಕಾಂಕ್ಷೆಯುಳ್ಳ ರಾಜಕೀಯ ಯುದ್ಧವಲ್ಲ! ಇದೊಂದು ವಿಲಕ್ಷಣ! ವಿನೂತನ!....ತಾತ್ವಿಕ ಯುದ್ಧ! ಶಿವಶಕ್ತಿಯರ ಸಮ್ಮಿಳಿತ ಸುಜ್ಞಾನದಿಂದ ಮಾನವ ಜೀವನವು ಹೇಗೆ ಚಿರಶಾಂತಿಯ ಅಮರ ಫಲಗಳನ್ನು ಸವಿಯಬಲ್ಲದೆಂಬುದನ್ನು ಈ ಯುದ್ಧದಲ್ಲಿ ಪ್ರದರ್ಶಿಸಬೇಕಾಗಿದೆ. ಇದೊಂದು ಅಪೂರ್ವ ಸಂಧಿ! ಸಾತ್ಯಕಿ, ನನ್ನ ಸಂದೇಶವನ್ನು ಯಾದವ ಸೈನ್ಯದ ದಂಡನಾಯಕನಿಗೆ ತಿಳಿಸು. ನಮ್ಮ ಪ್ರಚಂಡ ಸೇನಾಬಲವು ಶೋಣಿತ ರಾಜಧಾನಿಯನ್ನು ಮುತ್ತಲಿ. ರಣಭೂಮಿಯು ರಚಿತವಾಗಲಿ!

**ಸಾತ್ಯಕಿ** — ಮಹದಾಜ್ಞೆ, ಪ್ರಭು! (ಹೋಗುವನು)

**ಕೃಷ್ಣ** — ನಾರದರೆ, ಜಯವೇ ಸತ್ಯ–ಸತ್ಯಮೇವ ಜಯತೆ ಎಂಬ ಮಂತ್ರವನ್ನು ಪಠಿಸಿರಿ. ಸಕಾಲದಲ್ಲಿ ನಿಮ್ಮ ಕಾರ್ಯವನ್ನು ಸಾಧಿಸಿರಿ!

**ನಾರದ** — ಹಾಗೆಯೇ ಆಗಲಿ – ನನಗಿನ್ನು ಅಪ್ಪಣೆ ಕೊಡಿರಿ. (ಹೋಗುವನು)

**ಕೃಷ್ಣ** — (ಸುದರ್ಶನವನ್ನು ನೋಡಿ) ಸುದರ್ಶನವೇ, ಜಾಗ್ರತವಾಗು! ಸತ್ಯವೇ ನಿನ್ನ ಚರಮ ಸೀಮೆ! ಸತ್ಯಸಂಸ್ಥಾಪನೆಗಾಗಿ ಸಿದ್ಧವಾಗು!

**ರುಕ್ಮಿಣಿ** — ದೇವಾ, ಈ ಯುದ್ಧದಲ್ಲಿ ಯಶೋವಂತರಾಗಿ ಅನಿರುದ್ಧ ಸಮೇತ ಮರಳಿ ಬನ್ನಿರಿ. ಇದೋ, ಈ ಪೀಠವನ್ನಲಂಕರಿಸಿ, ದೇವಾ! ಮಂಗಳವನ್ನು ಪಾಡುತ್ತೇನೆ.

**ಕೃಷ್ಣ** — ಆಗಲಿ ನನ್ನ ಮಂಗಳಲಕ್ಷ್ಮೀ. ನಿನ್ನ ಮಂಗಳ ಗಾನವೇ ನಮ್ಮ ಜಯದುಂದುಭಿಯ ಸಮರ ಗಾನ! ಸಾಗಲಿ.

**ರುಕ್ಮಿಣಿ** — ಧನ್ಯಾತ್ಮಳಾದೆ, ಪ್ರಭು! (ಮಂಗಳವನ್ನೂ ಪಾಡಿ, ಆರುತಿಯನ್ನು ಬೆಳಗಿ, ಹಣೆಗೆ ಕುಂಕುಮ ಹಚ್ಚುವಳು. ಹಾರ ಅರ್ಪಿಸುವಳು, ಅಪ್ಸರಲ್ಲಿ ನಿಧಾನವಾಗಿ ತೆರೆ ಬೀಳುವದು).

## ದೃಶ್ಯ ೩. ಕಾರಾಗಾರ

[ಮಧ್ಯಾಹ್ನ ಸಮಯ. ಪ್ರತೀಹಾರಿಗಳೀರ್ವರು ತಮ್ಮ ಸರದಿಯ ಪ್ರಕಾರ, ಸೈನಿಕ ಉಡುಪಿನಲ್ಲಿ, ಇತ್ತಿಂದತ್ತ ಅತ್ತಿಂದಿತ್ತ ಭದ್ರ ಜಾಗ್ರತೆ ಎಂದು ಆಗಿಂದಾಗ್ಗೆ ಕೂಗುತ್ತಾ ದಕ್ಷತೆಯಿಂದ ತಿರುಗುತ್ತಿರುವರು. ಬಾಣಾಸುರನು ಸೇನಾಪತಿ ಮುಂತಾದ ಪರಿವಾರ ಸಮೇತನಾಗಿ, ರೋಷಾವೇಶದಿಂದ ಗದಾಧಾರಿಯಾಗಿ ಬರುವನು. ಕಾವಲಿನ ಯಾಮಿಕರು ನಮ್ರತೆಯಿಂದ ತಲೆಬಾಗಿ, ಆಜ್ಞೆಗಾಗಿ ಕಾದು ಸಿದ್ಧರಾಗಿ ನಿಂತಿರುವರು]

**ಬಾಣಾಸುರ** — (ದರ್ಪದಿಂದ ಪ್ರವೇಶಿಸಿ ಉನ್ನತ ಕಂಠದಿಂದ) ಪ್ರತೀಹಾರೀ! ಬಂಧಿಗಳನ್ನು ತಂದು ನಿಲ್ಲಿಸು.

**ಪ್ರತೀಹಾರಿ** — (ಮುಜುರೆ ಮಾಡಿ) ಮಹಾಪ್ರಸಾದ! (ಬಂದಿಗಳನ್ನು ತಂದು ನಿಲ್ಲಿಸುವನು. ಉಷಾ, ಚಿತ್ರಲೇಖ, ಮಂತ್ರಿ, ಅನಿರುದ್ಧರೆಲ್ಲರೂ ಅಧೋವದನರಾಗಿ ಮೂಲೆ ಮೂಲೆಗಳಲ್ಲಿ ನಿಲ್ಲುವರು.)

**ಬಾಣಾಸುರ** — ಕುಂಭಕ ! ಹೇಗಿದೆ ಸ್ವಾಮಿದ್ರೋಹದ ಸವಿಫಲ ! ಚಾಣಾಕ್ಷ ಚಿತ್ರಲೇಖೆಯ ಅಂತಿಮ ಚಿತ್ರವನ್ನು ನೆನೆದು ಚಿಂತಿಸುತ್ತಿರುವೆಯಾ!

**ಕುಂಭಕ** — ಸತ್ಯಸಾಧನೆಗಾಗಿ, ನ್ಯಾಯಕ್ಕಾಗಿ, ಸಾಮ್ರಾಜ್ಯದ ಸ್ವಾತಂತ್ರ್ಯ ಧ್ವಜ — ರಕ್ಷಣೆಗಾಗಿ ಇಂಥ ಸಾವಿರಾರು ಬಾಲೆಯರ ಬಲಿದಾನವಾದರೂ ನಾನು ಚಿಂತಿಸಲಾರೆ ! ನಾನು ಕಾರಾಗೃಹದ ಶಿಕ್ಷೆಯನ್ನು ಸಂತೋಷದಿಂದ ಅನುಭವಿಸಲು ಸಿದ್ಧನಿದ್ದೇನೆ. ಮಾತೃದೇಶದ ವಾತ್ಸಲ್ಯವುಳ್ಳ ಸ್ವತಂತ್ರ ನಾಗರಿಕನಿಗೆ ಇದೊಂದು ಸದಭಿಮಾನದ ಸಂಗತಿ ! ಆದರೆ, ಪ್ರಭು, ಅನ್ಯಾಯವು ತಲೆಯೆತ್ತದಿರಲಿ. ಘಟಿಸಬಾರದ ಪ್ರಮಾದವೊಂದು ಘಟಿಸಿಹೋಗಿದೆ. ಇನ್ನು ಚಿಂತಿಸಿ

ಫಲವೇನು ? ಇದು ದೈವದ ದುರ್ವಿಲಾಸ ! ಕುಹಕಿಗಳ ಕೈ ಮೇಲಾಗಿದೆ. ಶೋಣಿತ ಗಗನವು ಮೋಡಗಳಿಂದ ಮುಚ್ಚಿಹೋಗಿದೆ. ಎಲ್ಲೆಲ್ಲಿಯೂ ಅಂಧಕಾರವು ಆಚ್ಛಾಧಿತವಾಗಿದೆ ! ಜಾಗೃತನಾಗಿ ವರ್ತಿಸು, ಪ್ರಭು! ಸಮಯಸಾಧಕ ಶಕ್ತಿಗಳಿಗೆ ಸಾಮ್ರಾಜ್ಯವು ಬಲಿಯಾಗದಿರಲಿ! ಸ್ವತಂತ್ರ ಸಾಮ್ರಾಜ್ಯದ ಕೀರ್ತಿ ಗೌರವದ ಜ್ಯೋತಿಯು ಅಕ್ಷಯವಾಗಿ ಬೆಳಗಲಿ! ಇದೇ–ಅಡಿಗಡಿಗೂ ಹಂಬಲಿಸುತ್ತಿರುವ ಹೃದಯಾಕಾಂಕ್ಷೆ!

**ಬಾಣಾಸುರ** – ಎಲವೋ, ಯಾದವ ರಾಜ್ಯದ ಹುಳುವೆ? ಶೋಣಿತಸಾಮ್ರಾಟನ ಸಂತಾಪಾಗ್ನಿಯಲ್ಲಿ ಸುಟ್ಟುಹೋಗುವ ಸೂಕರಾ! ನನ್ನ ಶುಭ್ರವಂಶದ ಯಶೋವಸನಕ್ಕೆ ಕಳಂಕವನ್ನು ಬಳೆದ ಶೀಲಭ್ರಷ್ಟ! ನಿನ್ನನ್ನು ನೆಟ್ಟಗೆ ಶೂಲಕ್ಕೇರಿಸಿ, ನಿನ್ನ– ಛಿನ್ನಮುಂಡದ ರಕ್ತಧಾರೆಯಿಂದ ನನ್ನ ಸಂತಪ್ತ ಪಿತೃಗಳಿಗೆ ಅಭಿಷೇಕಗೈಯುತ್ತೇನೆ! ಎಲವೋ, ಕಾಡಾನೆಯಂತೆ ಕದಳಿಯ ಬನವನ್ನು ಹೊಕ್ಕ ಸೂಕರ ಕುನ್ನಿಯೆ! ನಿನ್ನ ಖಂಢ, ಮಾಂಸಗಳನ್ನು ತಪ್ತ ತೈಲದಲ್ಲಿ ಸುಡಿಸುತ್ತೇನೆ. ನಿನ್ನ ಪಕ್ಷವನ್ನು ಸೀಳಿ, ಶೋಣಿತ ನಗರಾಧಿದೇವತೆಯಾದ ರಣದುರ್ಗಿಯನ್ನು ನಿನ್ನ ಕರುಳುಗಳಿಂದ ಶೃಂಗರಿಸುತ್ತೇನೆ! ಪಾಪಿಯೆ! ನಿನ್ನ ಅಕ್ಷಮ್ಯ ಅಪರಾಧದ ಚಿತ್ರ ಹಿಂಸೆಯನ್ನು ನೆನೆ!

**ಅನಿರುದ್ಧ** – ಪ್ರೇಮಕ್ಕಾಗಿ ಸಹಿಸುವ ಯಾತನೆಯು ನರಕವಲ್ಲ.......... ಅದೊಂದು ಅಚಲಪ್ರೇಮವನ್ನು ಚಿರಸ್ಥಾಯಿಗೊಳಿಸುವ ಸುರಮ್ಯ ಸುಕೃತ! ಸತ್ಯಪ್ರೇಮಕ್ಕಾಗಿ ಜೀವನವೇ ಬಲಿಯಾದರೆ ಅದೇ ಶಾಶ್ವತ ಸಗ್ಗ! ಪ್ರೇಮದ ಚಿರಂತ ದರ್ಶನ! ರಾಕ್ಷಸರಾಜಾ, ಪ್ರೇಮರಾಜ್ಯದಲ್ಲಿ ಕುಲ ಜಾತಿಗಳ ಕಟ್ಟಿಲ್ಲ.....ವಿದ್ವೇಷದ ಕಾಡ್ಗಿಚ್ಚಿಲ್ಲ...ಶೋಕದ ಪರಿಭ್ರಮಣವಿಲ್ಲ. ಬೇಕಾದರೆ, ನಿನ್ನ ತಾಮಸೀಕಾಂಕ್ಷೆಯಿಂದ ಹಿಂಸಿಸು. ಪ್ರೇಮಕ್ಕಾಗಿ ಚಿತ್ತಹಿಂಸೆಯನ್ನು ಸಹಿಸುವ ಧೀರತೆಯಾದರೂ ನಮ್ಮಲ್ಲಿದೆಯೊ, ಎಂಬ ಪರೀಕ್ಷೆಯಾಗಲಿ. ಹುಂ, ನಿನ್ನ ಪ್ರತೀಕಾರ ರೂಪವಾದ ಅಂತರ ಬೆಂತರಗಳು ಎದ್ದು ಕುಣಿಯಲಿ.

**ಬಾಣಾಸುರ** –ಅಧಮಾಧಮಾ, ದ್ರೋಹಿ, ನಿನ್ನ ಅವಿವೇಕ ವರ್ತನೆಯಿಂದ ಅವ್ಯಾಜಪ್ರೇಮದ ಅವಾಸ್ತವ ಚಿತ್ರವನ್ನು ರೂಪಿಸುತ್ತಿರುವೆ. ಇದು ನಿನ್ನ ಸಮಾಧಿಯ ಭೀಕರ ಚಿತ್ರ! ಮದಾಂಧತೆಯಿಂದ ವರ್ತಿಸುವ

ನಿನಗೆ ರವರವ ನರಕದ ದರ್ಶನಮಾಡಿಸುತ್ತೇನೆ. ನಿನ್ನ ಶಾಸನವೇ ನಮ್ಮ ಕರವಾಲದ ವೀರಧರ್ಮ (ಚಿತ್ರಲೇಖೆಯ ಕಡೆ ತಿರುಗಿ) ಎಲೆ ಚಾಂಡಾಲಿನಿ, ಚಿತ್ರಲೇಖಾ, ನಿನ್ನ ಚಮತ್ಕಾರ ಬುದ್ಧಿಯಿಂದ ಶೋಣಿತ ಸಾಮ್ರಾಜ್ಯದ ನಂದನವನಕ್ಕೆ ಕೊಡಲಿಯನ್ನು ಹಚ್ಚಿದ ಕುಲಕುಠಾರಿಣಿ! ಶೋಣಿತ ಗಗನದಲ್ಲಿ, ಎಂದೆಂದಿಗೂ, ಯಾವ ಯುಗದಲ್ಲಿಯೂ – ನಿನ್ನಂಥ ಕರಾಳ ಧೂಮಕೇತುವು ಮೂಡದಿರಲಿ. ಮಮತೆಯ ಕರುಳಿನಂತೆ ಸದಾ ನಿಮ್ಮನ್ನು ಸ್ನೇಹ ಹಸ್ತದಿಂದ ಶೋಣಿತ ಸಾಮ್ರಾಜ್ಯದೇವಿಯ ಅಮೃತ ಹಸ್ತಗಳನ್ನು ನಿರ್ದಯಳಾಗಿ ಕತ್ತರಿಸಿದೆಯಲ್ಲವೆ–ಅಪಕಾರಿಯೆ–ಮಾತೃಭೂಮಿಯ ಅನ್ನವನ್ನು ಉಂಡು, ಮಾತೃವಧೆಗೆ ಕಾರಣಳಾದ ನೀಚಳೇ, ಅಸುರ ಸಂಸ್ಕೃತಿಯ ಅಮೃತ ಕಡಲಲ್ಲಿ ಆವಿರ್ಭವಿಸಿಬಂದ ಹಾಲಾಹಲವೆ–ಸ್ವಾಭಿಮಾನಕ್ಕೆ ಸಮಾಧಿಯನ್ನು ಕಟ್ಟಿ, ಸ್ವಕೀಯರನ್ನು ವಂಚಿಸುವ ಈ ಅಸೀಮ ಮೋಸದ ಕಲೆಯನ್ನು ಎಲ್ಲಿ ಕಲಿತೆ? ಪಾಪಿಣಿ ಯಾವಳನ್ನು ನಾನು ನನ್ನ ಅಭಿಮಾನದೇವತೆಯೆಂದು ತಿಳಿದಿದ್ದೆನೋ ಯಾವಳನ್ನು ನಾನು ನನ್ನ ಧವಳ ಕೀರ್ತಿಯ ಶರದಚಂದ್ರನೆಂದು ಗ್ರಹಿಸಿದ್ದೆನೋ, ಆ ಕೀರ್ತಿ ವಿಧುಬಿಂಬವನ್ನು ಕಾಳ ಕಗ್ಗತ್ತಲೆಯ – ಮಹಾ ಸಮುದ್ರದಲ್ಲಿ ಮುಳುಗಿಸಿದೆಯಲ್ಲವೆ ! ಪಾತಕಿ, ತಲೆಯೆತ್ತಿ ಊರ್ಧ್ವಗತಿಯಲ್ಲಿ ಉನ್ನತವಾಗಿ ಮೆರೆಯುವ ಗೌರವಧ್ವಜವನ್ನು ನಿರ್ಧಯದಿಂದ ಬುಡಮೇಲು ಮಾಡಿ ಉರುಳಿಸಿದೆಯಲ್ಲವೆ, ಪಿಶಾಚಿ ! ಪರಂಪರಾಗತವಾಗಿ ಕಾಯ್ದು ಕೊಂಡು ಬಂದ ರಾಕ್ಷಸರಮಣಿಯರ ಯಶೋಮಂಟಪಕ್ಕೆ ಬೆಂಕಿ ಹಚ್ಚಿದೆಯಲ್ಲವೆ–ಹೀನಾತ್ಮಳೆ ! ನಿರ್ಲಜ್ಜೆ ! ಯಾವ ವೀರಲಂಕಿಣಿಯು, ವನಿತಾ ಸಮಾಜದ ಗೌರವಕ್ಕಾಗಿ, ಜನ್ಮಭೂಮಿಯ ಸ್ವಾತಂತ್ರ್ಯಕ್ಕಾಗಿ, ಪ್ರಾಣ ಹೋದರೂ ಲಂಕಾಪ್ರವೇಶಕ್ಕವಕಾಶ ಕೊಡಲಾರೆನೆಂಬ ಕೆಚ್ಚೆದೆಯ ಹಟದಿಂದ, ಮೊದಲನೇ ಮುಡುಪಾಗಿ, ಲಂಕಾಮಾತೆಯ ಪವಿತ್ರ ಚರಣಗಳಲ್ಲಿ ಬಲಿಯಾಗಿ ಅರ್ಪಿಸಲಿಲ್ಲವೆ ! ಲಂಕಾಜನನಿಯೆನಿಸಿದ, ಬೃಹದ್ ಲಂಕಾರಾಜ್ಯದಭಿಮಾನದೇವತೆಯಂತೆ ಮೆರೆದ, ನಾರೀಕುಲದ ಕೀರ್ತಿ ಗೌರವಗಳನ್ನು ಚತುರ್ಯುಗಗಳಲ್ಲಿ ಕಾಪಾಡಬಲ್ಲ ದಿವ್ಯಶಕ್ತಿ ವೀರರಾಣಿ ಮಂಡೋದರಿಯು, ತನ್ನ ರಾಜ್ಯರಕ್ಷಣೆಗಾಗಿ ರಾಮನ ಬಾಣಕ್ಕೆ ಮೊದಲ ತುತ್ತಾಗಲಿಲ್ಲವೆ ! ಅದೇ ಮಹಿಳಾಸಮಾಜದ ಮಲ್ಲಿಕಾಲತೆಯಲ್ಲಿ ಹುಟ್ಟಿ ಬಂದ ಮದ್ದುಗುಣಿಕೆಯ ಹೂವಲ್ಲವೇ,

ಇದು ! ಎಲೆ, ಕುಲಟೆ ! ನಿನ್ನ ದುರ್ವಿಚಾರಗಳಿಂದ, ನಿನ್ನ ದುರಂತ ನರಕವನ್ನೇ ನಿರ್ಮಿಸಿಕೊಂಡೆಯಲ್ಲವೆ? ದುರಾಚಾರಿಣಿ, ನಿನಗೆ ಯಮಶಾಸನದ ಸರ್ವ ಶಿಕ್ಷೆಗಳನ್ನು ಏಕಕಾಲದಲ್ಲಿ ವಿಧಿಸುತ್ತೇನೆ, ತಾಳು ! ದಂಡನಾಯಕಾ—ವಿಷಭರಿತ ಕಸುಗಾಯಿಯಂತಿರುವ ಈ ನೀಚಳ ದೇಹವನ್ನು ನನ್ನ ಸಮ್ಮುಖದಲ್ಲಿಯೇ ಶಿಕ್ಷಿಸು. ಚಾಬುಕದ ಅವ್ಯಾಹತ ಚಾಟಿಗಳಿಂದ ಈ ವಿಷಾರೀ ಜಂತುವಿನ ಚರ್ಮವನ್ನೇ ಸುಲಿದುಬಿಡು..........ಹೂಂ, ಸಾಗಲಿ...ತಡ ಬೇಡ...(ಚಂದ್ರಕಾಂತನ ಕರಗಳು ಕಂಪಿಸುವವು. ಅದನ್ನು ನೋಡಿ)... ದುಗುಡಬೇಕೆ ವೀರ— ಸ್ವರ್ಗ, ಮರ್ತ್ಯ, ಪಾತಾಳಗಳಲ್ಲಿ ಜಯದುಂದುಭಿಯನ್ನು ಮೊಳಗಿಸಬಲ್ಲ ವೀರ ಸಾಹಸಿಯ ಕರಗಳು, ವಿದರೋಹಿ ಬಾಲಕಿಯ ಬೆನ್ನ ಬಾರನೆತ್ತಲು ಕಂಪಿಸುವವೇಕೆ?

**ನಾರದ** — (ಪ್ರವೇಶಿಸಿ) ಕಾರಣವಿದೆ ಮಹಾರಾಜ, ಕಂಪಿಸಲು ಕಾರಣವಿದೆ. ಶಿಲೆಯನ್ನು ಲೀಲೆಯಿಂದ ಸೀಳಬಲ್ಲ ಈ ಉಕ್ಕಿನ ಕರಗಳು, ಚಿತ್ರ ಲೇಖೆಯ ಚರ್ಮವನ್ನು ಸಿಟ್ಟಿನಿಂದ ಎಂದಿಗೂ ತಟ್ಟಲಾರವು!

**ಬಾಣಾಸುರ** — (ರೋಷಾಶ್ಚರ್ಯಭರಿತನಾಗಿ) ಮತ್ತಾವ ಭಯಂಕರ ಭೂತ ಲೀಲೆ!

**ನಾರದ** — ಸಂಚುಗಾರನಾದ ಈ ಸೇನಾಪತಿಯು, ನಿಮ್ಮ ಆಪ್ತಮಿತ್ರನಂಥೆ ನಟಿಸುತ್ತಿರುವನು. ಚಿತ್ರಲೇಖೆಯ ಮೋಹಜಾಲದಲ್ಲಿ ಸಿಲುಕಿರುವ ಇವನೇ ಇಷ್ಟೆಲ್ಲ ಅನರ್ಥಗಳಿಗೆ ಕಾರಣನಾಗಿರುವನು. ಇದೊಂದು ವಿದ್ರೋಹಿಗಳ ಮಾಲಿಕೆಯಲ್ಲಿ ಶೋಭಿಸುವ ರಾಜದ್ರೋಹೀ ನಾಯಕರತ್ನ!

**ಬಾಣಾಸುರ** — (ರೋಷೋನ್ಮತ್ತನಾಗಿ) ದ್ರೋಹ... ವಿದ್ರೋಹ...ಮೋಸ! ಮಗಳು ಪಿತನನ್ನು ಮೋಸಮಾಡಿದಳು! ಅಮಾತ್ಯನು ಅಪಕಾರ ಬಗೆದನು...! ಅಮಾತ್ಯಕುಮಾರಿಯು ದೇಶದ್ರೋಹ ಮಾಡಿದಳು! ಸಂಚುಗಾರನಾದ ಸೇನಾನಿಯು, ರಾಜದ್ರೋಹ ಬಗೆಯುತ್ತಿರುವನು...! ದ್ರೋಹ...! ದ್ರೋಹ!! ದ್ರೋಹವು ದಿಕ್ತಟಗಳಲ್ಲಿ ತುಂಬಿ ಸಾಗರವಾಗಿ ಹರಿಯುತ್ತಿದೆ. ಸಾಮ್ರಾಜ್ಯದ ಅಂತರಂಗದಲ್ಲಿ ಮೋಸ! ಸಾಮ್ರಾಜ್ಯದ ಬಹಿರಂಗದಲ್ಲಿ ಮೋಸ! ಪೃಥ್ವಿಯೇ ಪಾಪದ ನೆಲೆಗಟ್ಟಾಗಿರಬಹುದೇ? ....ಮೋಸ! ಶೋಣಿತ ಸಾಮ್ರಾಜ್ಯದ ಪ್ರತಿ ಭಿತ್ತಿ ಭಿತ್ತಿಗಳಲ್ಲಿಯೂ ಮೋಸದ

ಪ್ರತಿಧ್ವನಿಯಾಗುತ್ತಿರುವದು–ಹಾಗೆಯೇ. ಬಾಣನ ಪ್ರತಿಯೊಂದು ನರನಾಡಿಗಳಲ್ಲಿ ಸ್ವಾಭಿಮಾನದ ನೆತ್ತರವು, ರೋಷೋನ್ಮಾದದಿಂದ ಕುದಿದು ಬುಗ್ಗೆಯಂತೆ ಪುಟಿಯುತ್ತಿರುವದು! ಪ್ರತಿಯೊಂದು ರಕ್ತಬಿಂದು, ಸೇಡಿನ ಪ್ರತೀಕಾರ ಮಾಡುತ್ತಿರುವದು. ಶೋಣಿತ ಸಾಮ್ರಾಜ್ಯದ ಪ್ರತಿಯೊಂದು ಶಿಲೆಯು ಪೃಥಕ್ಕರಣವಾಗಿ, ಮೋಸದ, ಅನ್ಯಾಯದ ಅನೈಕ್ಯದ, ಅತ್ಯಾಚಾರದ ಕಣಗಳಾಗಿ ಸಿಡಿಯುತ್ತಿರುವದು ! ಅಂತಿಮ ನಾಶದ, ರುದ್ರ ಡಮರುಗದ ಗಂಭೀರ ಗೀತವು, ಕಾಲಪ್ರವಾಹದ ಕೇಡಿನ ಕೂಗು–ಕರ್ಣಕಠೋರವಾಗಿ ಕೇಳಿಸುತ್ತಿರುವದು. ಪ್ರತಿಯೊಂದು ಪ್ರಾನಿಯ, ಮಾತ್ಸರ್ಯಪೂರಿತ, ಮಲಿನ ಶ್ವಾಸಕೋಶದ ಮೋಸದ ಶ್ವಾಸವು ಸುಂಟರಗಾಳಿಯನ್ನೆಬ್ಬಿಸುತ್ತಿರುವದು. ಎಲೈ! ಕುಲಾರೀ ಕಾಳಸರ್ಪಿಣೀ, (ಸೇನಾಪತಿಯ ಎದೆಯ ಕವಚವನ್ನು ಹಿಡಿದು ಹಿಂದೂಡಿ) ನಿನ್ನ ಕೃಷ್ಣ ಕಾರಕಾಸ್ಥಾನವು ನನ್ನ ಕುಲವನ್ನೇ ದಹಿಸುತ್ತಿರುವದು. ನಿನ್ನ ನಿಸ್ಸೀಮ ಕಾಪಟ್ಯ, ಶೋಣಿತ ಸಾಮ್ರಾಜ್ಯದ ಆ ಅಸ್ತಿಭಾರವನ್ನು ಸಮೂಲವಾಗಿ ನಡುಗಿಸುತ್ತಿರುವದು. ಪಿಶಾಚಿ! ಸ್ವಾಮಿ ದ್ರೋಹಿ! ನಿನ್ನ ಪೈಶಾಚಿಕ ಕೃತಿಗಳಿಂದ, ರಾಜ್ಯರಮಣಿಯು, ರಿಕ್ತ ವಸನೆಯಾಗಿ ವ್ಯಸನಾಧಿಕ್ಯದಿಂದ ಗದಗದನೆ ನಡುಗುತ್ತಿರುವಳು! ನಡುಗದಿರು, ಎಲೆ ರಾಜ್ಯರಮಣಿ...ಎಲೆ, ವಸುಂಧರೆ, ನಡುಗದಿರು. ನಿನ್ನ ರಕ್ಷಿಸಲು ಬಾಣನು ಬದ್ಧದೀಕ್ಷಿತನಾಗಿರುವನು. ಬಾಣನೀಗ ಏಕಾಂಗವೀರನು, ಅಪ್ರತಿಮ ಬಂಟನು, ಅಸಹಾಯಶೂರನು. ಕೋಟ್ಯಾವಧಿ ಸ್ವಾರ್ಥದ ಸೊಡರುಗಳು, ಮೋಸದ ಬಿರುಗಾಳಿಯಿಂದ ಶಾಂತವಾದರೂ, ಕುಲದೀಪಕನಾದ ಈ ಸ್ವಾಭಿಮಾನ ಸೂರ್ಯನು, ದೈತ್ಯನಗರದಲ್ಲಿ ನಿಶ್ಚಲ ಪ್ರಕಾಶದಿಂದ ಬೆಳಗುವನು! ಬಾಣನ ರೌದ್ರಾವೇಶವು ಪಿಶಾಚಿಗಳನ್ನೆಲ್ಲಾ ಪಾತಾಳಕ್ಕೆ ಮೆಟ್ಟುವದೆಂದು ತಿಳಿ. ಎಲೆ ಧರಿತ್ರೀ, ಕೀರ್ತಿಜ್ಯೋತಿಯನ್ನು ನಂದಾದೀಪದಂತೆ ಕಾಪಾಡುವೆ, ನಂಬು.

**ಚಾರ** – (ಓಡಿ ಬಂದು, ಮುಜುರೆ ಮಾಡಿ) ಮಹಾಪ್ರಭು, ಸರ್ವನಾಶ! ಯಾದವ ಸೈನ್ಯವು ಪ್ರಳಯಾಕಾರವಾಗಿ ನಮ್ಮ ರಾಜಧಾನಿಯನ್ನು ಮುತ್ತುತ್ತಿರುವದು!

**ಬಾಣಾಸುರ** – ಅಹಹಹ, ಬೈಗಿನ ನಿಶೆಯು ಭಾಸ್ಕರನನ್ನು ಮುತ್ತುವುದೇ? ಸಾಗಲಿ. ಬಾಣನ ವೀರ ಸಂದೇಶವು ದೈತ್ಯ – ಜಾತಿಯ ಸ್ವಾಬಿಮಾನದ

ಶಸ್ತ್ರವಾಗಲಿ. ಎಲವೊ, ಯಾದವ ಕುನ್ನಿಯೇ, ನಿನ್ನನ್ನು ಸದೆಬಡಿದು ನನ್ನ ಶ್ವೇತಛತ್ರಕ್ಕೆ ಕೀರ್ತಿ ಕಲಶವನ್ನಿಟ್ಟು ಮೆರೆಯುತ್ತೇನೆ. ಈ ಹೋರಾಟದಲ್ಲಿ ಬಾಣನ ಶಿರ ಹರಿದು ನೆಲಕ್ಕುರುಳಿದರೂ, ನಾಲಿಗೆಯು ಛಲದಿಂದ ವೀರಬೊಬ್ಬೆಯಿಡುವದು. ಬಾಣನ ದೇಹವು ಭಸ್ಮವಾದರೂ, ಬೂದಿಯ ಹುಡಿಯಾಗಿ ಹಾರಿ ಸ್ವಾತಂತ್ರ್ಯದ ಸಮರಗಾನವನ್ನೇ ಹಾಡುವದು. ಬಾಣನ ಭೌತಿಕ ದೇಹವು ನಾಶವಾದರೂ ಪಂಚಪ್ರಾಣಗಳು ಬ್ರಹ್ಮಾಂಡವ್ಯಾಪಕವಾಗಿ ಸೇಡಿನ ಪ್ರತಿಶೋಧ ಮಾಡದೆ ಬಿಡಲಾರವು. ಎಲವೋ! ರಣಭೇರಿಯು ಮೊಳಗಲಿ. (ಚಾರನು ಓಡುವನು) ಎಲ್ಲೈ, ಅರಿಮದಮರ್ದಿನಿಯಾದ ಗದಾಶಕ್ತಿಯೇ ಸಿದ್ಧಳಾಗು! ಇಂದಿನ ರಣವಿಲಾಸದಲ್ಲಿ ಯಥೇಚ್ಛವಾಗಿ ರಕ್ತಪಾನ ಮಾಡು. ಎಲವೋ, ಯಾದವ ಕುಲ ಕೀಟಕವೆ, ಬಂದೆನಿದೊ, ಸಹಿಸು! (ಓಡುವನು, ತೆರೆ ಬೀಳುವದು)

## ದೃಶ್ಯ ೪.

## ರುದ್ರಾಕ್ಷನ ಮನೆ

(ರುದ್ರಾಕ್ಷನು ಸೈನಿಕ ಉಡುಪಿನಲ್ಲಿ ಆವೇಶದಿಂದ ಪ್ರವೇಶಿಸುವನು)

**ರುದ್ರಾಕ್ಷ –** ಅರರೆ, ಅರರೆ. ಎನ್ನಯ ಸಮಾನರಾರು, ಧರಣಿಪರಾರಿ ಹರೊ! ಅಹಹ! ಧರಣಿಪರಾರಿಹರೊ! ಸುರಪತಿಯಂತೆ...ಸೊಬಗಿ ನಿಂದಲಿ...!

**ಚನ್ನಿ –** (ಚಕಿತ ದೃಷ್ಟಿಯಿಂದ) ಅಯ್ಯ, ಅಯ್ಯ, ಅವ್ವಯ್ಯಾ – ಏನಿದು ಶೂರಾ, ಗಂಭೀರಾ, ಇದೇನು ನನ್ನ ಈರಾದಿ ಈರಾ?

**ರುದ್ರಾಕ್ಷ –** ಅರರೆ...ಅರರೆ...ಗಡಬಡದಿ ನಾಂ, ಫಡಿಫಡಿಸಿ ನಾಂ, ಖಡ್ ಖಡ್ ಖಡ್ಗದಿ ನಾಂ, ಫಡ ಫಡ ಫಡ, ಛಟ್ ಛಟ್ ಛಟ್, ಫಟ್ ಫಟ್, ಫಟ್, ಭಂ ಭಂ ಭಂ, ಚುಂ ಚುಂ ಚುಂ, ಚನನನ............

**ಚನ್ನಿ –** ಅಯ್ಯ, ಅಯ್ಯ ನಿನ, ನನ್ನ ಚೆನ್ನಾ, ಏನ ಚೆನ್ನಾಟಾ, ಯಾವ ರೋಸಾ, ಯಾಕ ಈ ಯೇಸಾ–ಹೇಳ್ಬಾರ್ದಾ ತುಸಾನರಾ?

**ರುದ್ರಾಕ್ಷ –** ಫಡ್, ಫಡ್, ಫಡ್ (ಗಾಬರಿಯಾಗುವಳು) ಆಂಹಾಂ, ತಡಿ,. ತಡೀ, ಓಬ್ ಗಬರಾಸಬ್ಯಾಡ, ಈಗ ನಾವು ಯುದ್ಧಕ್ಕ ಹೋಕ್ಕೀವಿ– ನಾನೀಗ ಸೂಯೋಧಾ–ಗಂಡುಗಲಿ–ಗಿಲಿಗಿಲಿಗಿಲಿ–ಮಾರ್ತಂಡಾ,

ಚಂಡ ಪರಚಂಡಾ–ವೈರಿಗಳ ಮಿಂಡ–ಸಾವಿರಾಳಿನ ಗಂಡಭೇರುಂಡ, ಚಾಮುಂಡ, ಜಗದೊಳ್ ಅಖಂಡ ಭಂಡಾ! ಎಲ್ಲೆ, ಚನ್ನೀ, ಮುದ್ದು ನಾಯಿ ಕುನ್ನೀ, ಇನ್ನು ಕೇಳುವಂಥವಳಾಗು–ಅತಳ, ಈತಳ, ವಿತಳ, ಬೇತಾಳ, ತಳಾತಳ, ರಸಾತಳ, ಶೀತಾಳ–ಅಹಂ, ಅಹ, ಅಹ– (ತೇಕುತ್ತ)–ಇನ್ನೂ ಏನೆಂತೆದೊಡೊ–ಅಂಗ, ವಂಗ, ಭಂಗ, ತರಂಗ, ಚದುರಂಗ, ಕಾಳಿಂಗ, ನಿನ್ನ ಮನೋರಂಗ! ಭಲೆ, ಭಲೇ – ಇನ್ನೂ ಕೇಳು–ಕಾಶ್ಮೀರ, ಕಾರ್ಕಳ, ಕರತಾಳ–ಇದೂ ಅಲ್ಲದೆ...ಎಲ್ಯೆ, ಚನ್ನೀ–ಚೋಳ, ಚೇರ, ಕೂಳ, ಪಾಂಡ್ಯ, ಮರಾಠ, ಕರ್ನಾಟಕ– ಹಾಂ!

ಚನ್ನಿ – ಅಯ್ಯ ನಿನ, ಸಾಕು ಬಿಡು–ನನ ಗಂಭೀರಾ ನನ ಜಂಬೀರಾ, ಸುಮ್ಮನೆ ಹೇಳ್ಬಾರ್ದಾ–ಎಲ್ಲ್ಯಾರೆ ಹೊಟ್ಟಿ ಉಬ್ಬಿ ಸತ್ತುಹೋದಗೀದಿ– ಹಂಗ ಯಾಕ–ಹುಚ್ಚು ನಾಯಿ ಹಾಂಗ–ಬಂವ್ ಬಂವ್, ಕಂವ್ ಅಂತಾ ಒದರ್ತಿ–ಎಲ್ಲ್ಯಾರ ಚಿಕ್ಕೋರಾಂಗ ಟಟಟ, ಡಡಡ, ಣಣಣ, ಅಂತಾ ಸಾಲೀ ಗುಡಿ ಬೀಳೂ ಹಾಂಗ ಒದರಿಧಾಂಗ ಒದರ್ತಿ– ಇದೇನು ಶಾಣ್ಯಾರ ಮಾತಲ್ಲ ಬಿಡು, ಮಂದೀಗಿ ತಿಳೀಧಾಂಗ. ಅದರಾಗೀಟ ಇದರಾಗೀಟ ಕದ್ದುಕೊಂಡು, ತಿರುಗಾ ಮುರಗೀ– ಮಾತಾಡಿದ್ದೇ ಆಡೋದು ಶಾಣ್ಯಾತನ ಅಲ್ಲ ಬಿಡು. ಹಾಡಿದ್ದೇ ಹಾಡೋ ಕಿಸಬಾಯಿ ದಾಸಯ್ಯ ಅಂದ ಹಾಂಗ ಆತು.

ರುದ್ರಾಕ್ಷ – ಅಲ್ಲಾ ನಿನ...! ಸಿಟ್ಟು ಹೀಂಗ ಬಂದು ಬಿಟ್ಟದ – ನಾ ಮಾಡೋದೇನದ – ನನ್ನ ಕೈಯಾಗಿನ ಮಾತು? – ಅದರಾಗ ಗಂಡಸಿಗ ಸಿಟ್ಟು ಬಂದ ಮ್ಯಾಲ ಕೇಳ್ತೀಯೇನು...ಶಿಡ್ಲಿನ ಮರಿ ಇದ್ದಾಂಗ, ಅದರ ಎದುರ ಬಂದೋರ ತಲೀನೆ ಸೀಳ್ತದ, ಜ್ಯೋಕಿ! ಎದುರುಗಿದುರು ಬಂದೀ ಹಾಂ...ಹೂಂ...ಚನ್ನೀ–ಈಗ ನನಗ ಉಗ್ರನೇ ತುಂಬಿಧಾಂಗ ಆಗೇದ. ಈಗ ನಾನು ಹೋಗೇ ತೀರಬೇಕು. ಇನ್ನ ಮ್ಯಾಲ ಈ ಮಾಂವಾಚಾರ ಬಿಡು–ಹೋಗು, ಲಗೂನೆ ಮಂಗಳಾರತಿ ಮಾಡಿ ಕಳಿಸು.

ಚನ್ನಿ – ಅಯ್ಯ ನನ ಚಿವಂಗಿ ಮರಿಯೇ! ನೀ ಯುದ್ಧಕ್ಕ ಹೋಗ್ತೀ! ಇದೇನ ನನ್ನ ಹಣೇಬಾರಾ....

ರುದ್ರಾಕ್ಷ – ಹುಂ, ಹುಂಹೂಂ, ಹೋಗು ಬಡಾಬಡಾ, ಆರತಿ ತಾ. ಯಾರ

ಹಣೇಬಾರಾನೂ ನಾವೀಗ ಕೇಳೋಹಾಂಗಿಲ್ಲ.

**ಚನ್ನಿ** — (ಆರತಿ ತಂದು) ಅಯ್ಯಯ್ಯ, ನನ್ನ ಗಿಣೀಮರಿಯೇ. ನಿನ್ನ ಬಿಟ್ಟು ನಾ ಒಬ್ಬಳೇ ಕಾಲ ಹ್ಯಾಂಗ ಕಳೀಲೀ...ೀ...ೀ...(ಬೆಳಗುವಳು)

**ರುದ್ರಾಕ್ಷ** — ಅಲೆ, ಅಲೆ ನಿನ, ಅತ್ತಗೊಂತ ಬೆಳಗಬ್ಯಾಡೇ, ಒಮ್ಮಿಗೆ, ಈಗಲೆ, ಅಪ್ಪನೋರ ಮನೀಗಿ ಅಪ್ಪಣೆ ಕೊಡಬೇಕಂತ ಮಾಡಿದ್ದೇನ...ಬ್ಯಾಡೆ. ಅಳಬ್ಯಾಡೆ ನನ್ನ ಮುದಿ ಗಿಳಿ (ತಾನೂ ಅಳುತ್ತ) ಅಳಬ್ಯಾಡೆ ನನ್ನ ಚಿನ್ನದ ಮುದ್ದೇ–ನೀನು ಯಾರ ಬಾಯಾಗರೆ ಬಿದ್ದೀ, ನಿಜಾ ಮನಸಿನಿಂದ ಬೆಳಗು, ನಕ್ಕೋಂತ ಬೆಳಗು ಮುತ್ತೈದ್ಯಾಗಿ. ಆ ಮುಕ್ಕಣ್ಣನ್ನ ನೆನಿಸಿಗೋತ ಬೆಳಗು. (ಬೆಳಗಿ ಕುಂಕುಮ ಇಟ್ಟ ಮೇಲೆ) ಅಲ್ಲೆ, ಇದೆಲ್ಲಾ ಆತು ಖರೆ, ನಾ ಗೆದ್ದು ಬಂದರಂತೂ ಸರೀನೆ ಹೋತು; ಒಂದು ವ್ಯಾಳೆ ನಾನು ಆ ಕಡೇನೆ ಗುಡಚ್ಯಾಪಿ ಕಟ್ಟಿದರ, ನೀ ಹ್ಯಾಂಗ ಮಾಡ್ತೀ ಅಂತ ಚಿಂತೀ ಮಾಡ್ತೀನಿ–ಆಂ, ಆಂ.

**ಚನ್ನಿ** — ಏ ನಿನ, ಆ ಸಂಶೇವು ಯಾಕ ಮಾಡ್ತೀ. ಏನ ಗಡಗಡ ಮಾಡ್ತಿ, ಹೀಂಗ ಯಾಕ ಅಳುಬುರುಕನಹಾಂಗ ಅಂಜ್ತೀ–ಸೂರತನದಿಂದ ಯುದ್ದಾಮಾಡು. ನೀ ಸತ್ತರ, ನಾನೂ ಆಗಲೇ ಇಸಾ ಕುಡದಾರ ಸಾಯ್ತೀನಿ. ತಿಳೀತಾ, ಹೀಂಗ ಅಮಂಗಳ ಮಾತು ಆಡಬ್ಯಾಡ.

**ರುದ್ರಾಕ್ಷ** — ಹಾಂ, ಅದೇ ಅಂತೀನಿ–ಖರೇನಾ? ಹಂಗಾರ ನನ್ನ ಸಂಗಾತ ಸಾಯ್ತೀನಿ ಅಂತ ಕೈಯಾಗ ಕೈ ಹಾಕು, ತಲೀಮ್ಯಾಲ ಕೈ ಇಡು–ಇಕಾ, ನನ್ನ ಅಣ್ಯಾಗಿ ನೀ ಇರಬಾರ್ದು ನೋಡು. ಹಾಂ, ಯಾಕಂದ್ರ ಸತ್ತಮ್ಯಾಗ ಕೂಡ ಹೀಂಗ ಸಂಸಾರ ಮಾಡಕ ಬರ್ತದ ಆ ಸತ್ತವರ ಲೋಕದಾಗ, ತಿಳೀತಾ ಮರೀಬ್ಯಾಡ ನೋಡು. ನಿನ್ನ ದೇವರಾಣಿ, ನಾನ ಗಟ್ಟಿಮುಟ್ಟಿ ಭರವಸ ಮಾಡಿಕೊಳ್ಯಾ! ಹಾಂ, ಅದೇ ಅಂತೀನಿ–ಜ್ಯೋಕಿ (ಕಹಳೆ ಶಬ್ದ) ಅಯ್ಯಯ್ಯೋ ರಣಕಾಳಿ ಕೂಗತಾಳ–ಇನ್ನ ತಡ್ಯಾಂಗಿಲ್ಲ ನಾ ಹೋಗ್ತೀನಿ ಜೋಕಿ..(ಓಡುವನು)

# ದೃಶ್ಯ ೫

## ಕೋಟೆಯ ಹೊರಭಾಗ

(ಶೋಣಿತ ರಾಜಧಾನಿಯನ್ನು ಭದ್ರವಾಗಿ ಸುತ್ತಿದ ಕೋಟೆಯ ಹೊರವಲಯ ಭವ್ಯವಾದ ಮಹಾದ್ವಾರವು ವೈರಿಭೀಕರವಾಗಿ ತೋರುತ್ತಿರುವದು.)

**ಕೃಷ್ಣ** — (ಯೋಧರ ಉಡುಪಿನಲ್ಲಿ, ಚಕ್ರಪಾಣಿಯಾಗಿ) ಸಾತ್ಯಕಿ, ಶೋಣಿತ ರಾಜಧಾನಿಯ ಶಿಲಾಮಯ ದುರ್ಗಮ ದುರ್ಗವು ಉನ್ಮತ್ತ ಶಾರ್ದೂಲನಂತೆ ಸೊಕ್ಕಿ ವೈರಿಗಳನ್ನು ಲೆಕ್ಕಿಸದೆ, ಮೂದಲಿಸುತ್ತ ನಿಂತಿರುವದು. ಮಹಾದ್ವಾರದ ಚೌಕಟ್ಟಿನ ಮೇಲೆ ಕಲಾವಿದನಾದ ಶಿಲ್ಪಿಯು ಕಾಲಭೈರವನ ಪ್ರತಿಮೆಯನ್ನು ಕಟಿದು, ತನ್ನ ಕಲಾಚಾತುರ್ಯದಿಂದ ಅವರ ವಿಶಾಲ ಬಾಹುಗಳಲ್ಲಿ ತ್ರಿಶೂಲವನ್ನು ಕೊಟ್ಟು ವೈರಿಯ ಹೃದಯ ನಡುಗುವಂತೆ ಕೆಚ್ಚಿದ್ದಾನೆ. ಫಾಲನೇತ್ರದ ದಳ್ಳುರಿಯು ಉದ್ವಗಲಕ್ಕೂ ಹರಡುವಂತೆ ಚಿತ್ರಮಯವಾಗಿ ನಿರ್ಮಿಸಿದ್ದಾನೆ. ಕೋಟಿ ಕೊತ್ತಲುಗಳ ಶಿರೋಭಾಗದಲ್ಲಿ ರಾರಾಜಿಸುವ ಸುವರ್ಣ ಕಲಶಗಳು ಮುಗಿಲನ್ನು ಮುದ್ದಿಡುವಂತೆ ಭಾಸವಾಗುತ್ತಿವೆ, ನೋಡು! ಒಟ್ಟಾರೆ ಸುರಶಿಲ್ಪಿಯನ್ನು ನಾಚಿ ಸುತ್ತಿರುವುದೀ ಭವ್ಯ ನಗರದ ಪ್ರಾಕಾರ! ಸಾತ್ಯಕಿ, ಇಂದಿಗೆ ನಾವು ಬೀಡು ಬಿಟ್ಟು ಒಂದು ಪಕ್ಷವಾದರೂ ಶತ್ರುಪಕ್ಷವು ಪರಾಜಯವಾಗುವ ಲಕ್ಷಣಗಳು ತೋರಲಿಲ್ಲ. ಈ ದುರ್ಭೇದ್ಯವಾದ ಉಕ್ಕಿನ ಕೋಟೆಯನ್ನು ಭೇದಿಸುವ ಬಗೆಯೆಂತು?...

**ಸಾತ್ಯಕಿ** — ಮಹಾಪ್ರಭು, ಕ್ಷಿಪ್ರದಲ್ಲಿಯೇ ಭೇದಿಸುವ ಉಪಾಯವು ಹೊಳೆಯಬಹುದು. ಶುಭಲಕ್ಷಣಗಳು ಹಾಗೆ ಸೂಚಿಸುತ್ತಿವೆ. ನಮಗೀಗ ಮಹತ್ವವಾದ ಶುಭ ಸಂಧಿಯು ಪ್ರಾಪ್ತವಾಗಿದೆ. ಕುಟಿಲೋಪಾಯದಲ್ಲಿ ಪ್ರವೀಣರಾದ ನಾರದರು ತಮ್ಮ ಅಭಿಪ್ರಾಯದಂತೆ ಕಾರ್ಯ ಸಾಧಿಸಿರುವರು.

**ಕೃಷ್ಣ** — ನಿಜವೆ, ಸಾತ್ಯಕಿ, ಹಾಗಾದರೆ ನಮ್ಮ ಕಾರ್ಯವು ಬೇಗನೇ ಕೈಗೂಡುವುದು. ಆದರೂ ನಾವು ನಿರ್ಲಕ್ಷಿಸಕೂಡದು. ದೈತ್ಯರು ರಣ ನೀತಿಯನ್ನು ಬಲ್ಲ ಚತುರರು. ಸಾಯುವವರೆಗೂ ಅವರ ಸಮರ ಸಾಹಸವು ಹಿಮ್ಮೆಟ್ಟಲಾರದು.

**ಸಾತ್ಯಕಿ**— ಹೌದು, ಮಹಾಪ್ರಭು. ರಾಕ್ಷಸರು ಮಹಾ ಮಾಯಾವಿಗಳು. ಅದೋ,

ದೇವಾ, ಭೂಗರ್ಭವನು ಬಿಚ್ಚಿ ಆದಿಶೇಷನು ತನ್ನ ಸಹಸ್ರ ಫಣಿಗಳನ್ನು ತೆರೆದುಬರುವಂತೆ, ಸಂಗ್ರಾಮಸಿಂಹನಾದ ಬಾಣಾಸುರನು ಸಹಸ್ರಾವಧಿ ಸೇನಾಸಮೂಹದಿಂದ ಬರುತ್ತಿರುವನು.

**ಕೃಷ್ಣ** – (ಹಿಂದಕ್ಕೆ ಸರಿದು ನೋಡಿ) ಹೌದು, ಹೌದು. ಅವನೇ ಬರುತ್ತಿರುವನು. ಮದಿಸಿದ ಮರುಳು ಸಿಂಹದಂತೆ, ರೋಷೋನ್ಮಾದದಿಂದ ನಮ್ಮ ಕಡೆಗೆ ಧಾವಿಸಿ ನುಗ್ಗುತ್ತಿರುವನು. ದೋ, ಬಂದನು.

**ಸಾತ್ಯಕಿ** – ಬೇಗ ಸಿದ್ಧನಾಗು. ಪ್ರಭು! ರಣಭೇರಿಯ ವಾದ್ಯಘೋಷವು ದಿಕ್ತಟಗಳನ್ನು ಭೇದಿಸುತ್ತಿರುವದು.

**ಕೃಷ್ಣ** – (ಹಿಂದಿರುಗಿ ನೋಡಿ) ಓಹೋ, ಪ್ರಮಾದ! ನನ್ನ ಸೇನಾಸಾಗರದಲ್ಲಿ ಗಲಭೆಯ ತರಂಗಗಳೆದ್ದಿರುವವು. ಕ್ಷಿಪ್ರದಲ್ಲಿಯೇ ಶಾಂತಪಡಿಸುತ್ತೇನೆ. ಕ್ಷಣಕಾಲ ವೈರಿಯನ್ನು ತಡೆ. (ಓಡುವನು)

**ಸಾತ್ಯಕಿ** – ಖೂಳಾ, ಮುಂದೆ ಸಾಗದಿರು. ನಿಲ್ಲು!

**ಬಾಣಾಸುರ** – (ಆವೇಶದಿಂದ ಪ್ರವೇಶಿಸಿ) ಪಿಶಾಚಿಯೇ, ಸೇರು ಪರಂಧಾಮವನ್ನು! (ಸಾತ್ಯಕಿಯ ಪತನ) ಅಹಹಹಾ, ರಣೋನ್ಮಾದದಿಂದ ಹರಿ ಹಾಯ್ದು ಬರುವ ಹುಲಿಯ ಛಲದ ಮುಂದೆ ಮೊದಲ ಬಿಂಕವೇ! ಹೋಗು ಯಮನಾಲಯದ ಅತಿಥಿಯಾಗಿ! ಅಹಹಹ....! (ಓಡುವನು)

## ದೃಶ್ಯ ೬

## ರಣಭೂಮಿ.

[ಸಾತ್ಯಕಿಯ ಪತನಾನಂತರ ರುದ್ರಾಕ್ಷನು ಓಡಿಬಂದು, ದಿಟ್ಟಿಸಿ ನೋಡಿ)

**ರುದ್ರಾಕ್ಷ** – ಹ್ಯಾಂಗಪಾ, ಗೆಣೆಯಾ–ನಮ್ಮೇಟು! ಎಲ್ಯಾರಾ ನಮ್ಮಂಥೋರು ಕೂಡ ಎದುರಿಗೆ ಬಂದು, ಕಣ್ಣು ಕಿಸಿದು, ಕಾಲು ತಿರುವಿ, ತೊಡಿ ಚಪ್ಪರಿಸಿ, ಮೀಸಿ ಹುರಿಮಾಡಿಕೊಂತ, ಎದಿ ಉಬ್ಬಿಸಿಕೊಂಡು, ಓಡಿಹೋಗೋದು ಬಿಟ್ಟು–ಏ ನನ್ನ ಗೆಣೆರಾಯಾ, ಒಮ್ಮೆಲೇ ಹುಲಿ ಬಾಯಾಗ ಯಾಕ ಹಾರಿದ್ಯೋ–ನನ್ನ ದಡ್ಡ ಕುರಿರಾಯಾ, ಆ...ಆಂ ಆಂ...(ವ್ಯಂಗ್ಯವಾಗಿ ಅಳುತ್ತಾ ಹೆಣವನ್ನು ತಿರುವಿ ಹಾಕಿ ನೋಡಿ)

ಎಲಾ ನಿನ, ಇವನ ಕತೀನೇ ಮುಗದ ಹೋಗೇದ! ಬರೋ ಕಾಲಕ್ಕ ಹ್ಯಾಂಗಿ ದ್ದೆಲ್ಲೋ ಮಾರಾಯಾ, ಹೆಂಡ್ರು ಮಕ್ಕಳಿಗ್ಯಾರ ಹೇಳಿ ಬಂದ್ಯಾ. ಇಲ್ಲೋ! ಪಾಪ! ಹೋಗು, ಯೋಗು–ಸುಮ್ಮನಾ ಹೆಣಾ ಆಗಿ ಹೋದೆಲ್ಲೋ–ನೀ ಏನು ದಡ್ಡ ಕೆಲಸ ಮಾಡಿಬಿಟ್ಟೀ– ಅಂವಾ, ಕಿಷ್ಟಪ್ಪನ ಮಾತ ಕೇಳಿ ಮುಂದಕ ಬಂದು ಕೆಟ್ಟೆಲ್ಲೋ, ನನ್ನ ಕಳ್ಳಪ್ಪಾ! ನಿನ್ನ ಹೆಂಡ್ರು ಮಕ್ಕಳಿಗೆ ಏನು ಹೇಳಿ ಹೋದ್ಯೋ, ನನ್ನ ಸುಳ್ಳ ಸೂರಪ್ಪ! ಅಂವಾ ಹ್ಯಾಂಗ ಇದ್ದಾನ ಗಡಿ! ನಾಕೊಪ್ಪತ್ತು ಬಾಳ್ವೆ ಮಾಡೋ ಬಡವನ ಕೊಲಿಸಿಟ್ಟಾ! ಈ ಬಡಪಾಯಿನ ಮುಂದಕ ನೂಕಿ ತಾನು ಹ್ಯಾಂಗ ಹಿಂದಕ ಓಡಿಹೋಗಿ ಅಡಗಿ ಕುಂತಾನ ನೋಡು, ಗರಡೀ! ಅದೆಲ್ಲಾ ಶಾಣೇರ ಲೆಕ್ಕಪಾ, ಸುಮ್ಮನೆ ಕೆಟ್ಟುಹೋದೆಲ್ಲೊ ಮುದಿ ಗೂಳಿ! ಏ ನನ ದಡ್ಡ ಹೋತಿನ ಮರಿ. (ತೆರೆಯ ಕಡೆ ನೋಡಿ) ಅಬಬಬಾ, ಘನ ಘೋರ ಕಾಳಗಾ ನಡೀತು, ಬಿಡಪಾ–ರಣಮಾರೀನೆ ನಿಂಥಾಂಗ ಆಗೇದ! ನಡೀಯೋ ನಿನ, ಇದೊಂದು ಸುಗ್ಗಿ! (ಓಡುವನು)

## ದೃಶ್ಯ ೧೭

### ರಣಾಂಗಣ

**ಬಾಣಾಸುರ** — (ಪ್ರವೇಶಿಸಿ) ಎಲವೆಲವೊ, ಯಾದವ ಕುಲಕೀಟಕವೇ, ಬಾ. ಉನ್ಮತ್ತನಾದ ನಿನ್ನ ಬಿಸಿ ರಕ್ತವನ್ನು ಬಸಿದು, ಭೂತಗಣಗಳಿಗೆ ಔತಣವನ್ನು ಕೊಡುತ್ತೇನೆ! ಬಾ, ಎಲವೋ! ಮುಗ್ಧ ಮಾನವರಲ್ಲಿ ದೇವರೆಂದು ನಟಿಸುವ ಧೂರ್ತ ಪಿಶಾಚಿಯೇ, ಬಾ! ನಿನ್ನ ಉಚ್ಛೃಂಕಲ ವರ್ತನದಿಂದ, ನೀತಿ ನೇಮಗಳನ್ನು ನಿಶ್ಶೇಷಮಾಡಿ, ನಿನ್ನ ಕಟಪತನದ ಪೆರ್ಮೆಯಿಂದ ಆರ್ಯಾವರ್ತದಲ್ಲಿ ರಕ್ತದ ಹೊನಲನ್ನೇ ಹರಿಸುವೆ! ಇದೀಗ ಶೋಣಿತ ಶಾರ್ದೂಲನ ಸಂಗಡ ಸೆಣಸಿ ಸುಖರೂಪವಾಗಿ ಮರಳಲಾರೆ! ಬಾ, ಪಾತಕಿಯೆ, ಅದೋ ನೋಡು, ನಿನ್ನ ಸೇನಾನಿಯು ನಿನ್ನನ್ನು ನರಕದಲ್ಲಿ ನಿರೀಕ್ಷಿಸುತ್ತಿರುವನು! ಬೇಗ ಬಾ. ಬಾಣನ ಗದಾಘಾತವನ್ನು ಸಹಿಸದೆ, ನಿನ್ನ ಸೇವೆಯು ಯಮನಗರದ ಮಾರ್ಗದಲ್ಲಿ ಚೆದುರಿ ಓಡುತ್ತಿರುವದು. ಕಪಟಿಯೇ, ಎಲ್ಲಡಗಿರುವೆ, ಬಾ

**ಕೃಷ್ಣ –** (ಆವೇಶದಿಂದ ಪ್ರವೇಶಿಸಿ) ಅಸುರಾಧಮಾ, ನಿಲ್ಲಿಸು ನಿನ್ನ ವಾಗ್ವೈಖರಿಯನ್ನು! ತೋರು ನಿನ್ನ ಗದಾದಂಡದ ಶೌರ್ಯಪ್ರತಾಪವನ್ನು ಬರಿದೆ ಹರಟಬೇಡ, ನೀಚಾ!

**ಬಾಣಾಸುರ –** ಸುಮ್ಮನಿರು, ಪಾಂಡುರಂಗ! ನಿನ್ನ ಕಟ್ಟುಕಥೆಯನ್ನು ಕೇಳಿ ಬೆಚ್ಚಿ ಬೆದರಲು ಇದು ದ್ರೌಪದಿಯ ಪಾಕಶಾಲೆಯಲ್ಲ! ವೇಣುಗಾನದಿಂದ ಜಾರಿಣಿಯರನ್ನು ಕುಣಿಸುವ ಗೋಪಾಂಗನೆಯರ ಮಧುರೆಯಲ್ಲ! ಇದು ರಣದುರ್ಗಿಯ ಸ್ವೇಚ್ಛಾವಿಲಾಸಭೂಮಿ–ರೋಷೋಜ್ವಲ ಜ್ವಾಲೆಯಿಂದ ಧಗಧಗಿಸುವ ರಣಯಜ್ಞಕುಂಡ!

**ಕೃಷ್ಣ –** ಬಡಬಡಿಸದಿರು ಕಡುಮೂರ್ಖ! ಬಾಣನೆಂಬ ನೊರಜು ಕೀಟವೆ– ಸಮರಾಂಗಣದಲ್ಲಿ ಸಾಹಸ ಪ್ರದರ್ಶಿಸಿದ ಸಪ್ತ ಮಹಾರಥಿಕರ ಪತನದ ಚಿತ್ರವನ್ನು [illegible]ರಿಸು. ಬಲ್ಲಿದ ಮಲ್ಲರ ಸೊಲ್ಲನ್ನಡಗಿಸಿದ ಈ ರಣ ಧುರಂಧರನನ್ನು ಕೆಣಕದಿರು! ಈಗಲೇ ನಿನ್ನನ್ನು ರಣಚಂಡಿಗರ್ಪಿಸಿ, ಶಿಶುಪಾಲ, ಜರಾಸಂಧಾದಿಗಳ ಸಮಪಂಕ್ತಿಯಲ್ಲಿ ಸೇರಿಸುತ್ತೇನೆ ಸ್ವಲ್ಪ ತಾಳು.

**ಬಾಣಾಸುರ –** ಬಲ್ಲೆ, ಬಲ್ಲೆನಲಾ ಗೊಲ್ಲಾ, ನಿನ್ನ ಸೊಲ್ಲನ್ನು! ಪೊಳ್ಳು ಗುಲ್ಲನ್ನೆಬ್ಬಿಸದಿರು! ಪರರನ್ನು ವಂಚಿಸುವ ನಿನ್ನ ಕಪಟ ಕಲೆಯನ್ನು ಬಲ್ಲೆ–ಜ್ಞಾತಿಗಳ ಹೃದಯದಲ್ಲಿ ಕಲಹದ ಬೀಜವನ್ನು ನೆಟ್ಟು ಬೃಹದ್ಭಾರತದಲ್ಲಿ ರಕ್ತದ ಕೋಡಿಯನ್ನು ಹರಿಸಿದ ನಿನ್ನ ಚಾಂಡಾಲ ನೀತಿಯನ್ನು ಬಲ್ಲೆ; ಮನೆಯಲ್ಲಿ ಮೈಮರೆದು ಕುಳಿತ ಕಂಸ, ಜರಾಸಂಧ, ಶಿಶುಪಾಲಾದಿ ದಾನವ ವೀರರನ್ನು ಕೊಂದ ಕೊಲೆಪಾತಕತನದ ನಿನ್ನ ಕೀಳು ಕಥೆಯನ್ನು ಬಲ್ಲೆ! ನಿನ್ನ ಸಮರಚಾತುರ್ಯವನ್ನು ನಾನು ಬಲ್ಲೆ! ಇದೀಗ, ಸಾಸಿರಭುಜನ ಸಮರಕ್ರೀಡಾರಂಗವನ್ನು ಹೊಕ್ಕಿರುವೆ! ಮಲ್ಲಿಗೆಯ ಬನದಲ್ಲಿ ವಿಹರಿಸುವ ಮರಿದುಂಬಿಯು ಕೇತಕಿಯ ಬನವನ್ನು ಹೊಕ್ಕಂತಾಗಿರುವದು ನಿನ್ನ ಪಾಡು. ಜೋಕೆ! ಇದು ಸಿಡಿಲನ್ನು ಕಾರುವ ಸಿಡಿಮದ್ದಿನ ಶಸ್ತ್ರಾಗಾರ–ಸುಟ್ಟು ಭಸ್ಮವಾಗುವೆ!

**ಕೃಷ್ಣ –** ವಿಷಾರಿ ಜಂತುವೆ, ಗರುಡಧ್ವಜನ ಮುಂದೆ ಹೆಡೆಯೆತ್ತಿ ಭೋರ್ಗರೆಯದಿರು. ಸೊಣಗವೆ, ಬರಿದೆ ಭೋಂಕದಿರು! ನಿನ್ನ

ಹೃನ್ನಾಳವನ್ನೇ ಸೀಳುತ್ತೇನೆ ನಿನ್ನ ಸಾವಿನ ಸಮಯವು ಸನ್ನಿಹಿತವಾಗಿದೆ. ಸಿದ್ಧನಾಗು!

**ಬಾಣಾಸುರ** – ಗೂಬೆಯೇ, ದಿನಮಣಿಯ ಮುಂದೆ ಕಿರುಚದಿರು–ಇಷ್ಟ ದೈವವನ್ನು ಸ್ಮರಿಸು. (ಗದಾಯುದ್ಧ–ಕೃಷ್ಣನ ಗದೆಯ ಪತನ) ಅಹಹಹ, ಮಾತಿನಮಲ್ಲಾ! ಇದೆಯೇನೋ? ರಣಕುಶಲನೆಂದು ಖ್ಯಾತಿವೆತ್ತ ನಿನ್ನ ಕೈಚಳಕ! ಸಾವರಿಸಿಕೊ. ತೆಗೆದುಕೋ ನಿನ್ನ ಶಕ್ತಿಸರ್ವಸ್ವವಾದ ಸುದರ್ಶನ! ಪ್ರಯೋಗಿಸು ನಿನ್ನ ಆ ಜಡಬಲವನ್ನು! ಹೂಂ, ತಡಬೇಡ, ಬೆದರದಿರು......

**ಕೃಷ್ಣ** – ದೈತ್ಯಕುಲಾಧಮಾ, ಹಿಗ್ಗಿ ಉಬ್ಬದಿರು! ಇದೋ ಪ್ರಳಯಾಕಾರವಾಗಿ ಭೋರ್ಗರೆದು ಬರುವ ಸುದರ್ಶನವು ನಿನ್ನ ಗರ್ಭವನ್ನೇ ಭೇದಿಸುವುದು. ಇದು ತೃಟಿಕಾಲದಲ್ಲಿಯೇ ನಿನ್ನನ್ನು ಸಂಹಾರಮಾಡಬಲ್ಲ ಅಜೇಯ ಶಕ್ತಿ! ಖೂಳಾ ಕಡೆಗೊಮ್ಮೆ ನಿನ್ನಕುಲದೇವತೆಯನ್ನು ಸ್ಮರಿಸು! (ಎಂದು ಚಕ್ರವನ್ನು ತಿರುಗಿಸಿ ಎತ್ತುವನು)

**ಬಾಣಾಸುರ** –ಆಹ್ವಾನಿಸುವೆ–ಧೀರತೆಯಿಂದ ಆಹ್ವಾನಿಸುವೆ! ಶಂಭುವನ್ನು ಸಾಕ್ಷಾತ್ಕರಿಸಿಕೊಂಡು ನಿನ್ನ ಸುದರ್ಶನದ ಶಿವಶಕ್ತಿಯನ್ನು ನೋಡುವೆ! ನಿನ್ನ ಪುಣ್ಯಬಲವನ್ನು ಪರೀಕ್ಷಿಸುವೆ–ಪ್ರಯೋಗಿಸು!

**ಕೃಷ್ಣ** – ಕೊಬ್ಬಬೇಡ, ದುರಾತ್ಮ! ಕ್ಷಣಾರ್ಧದಲ್ಲಿ ಕುಲಾಚಲಗಳನ್ನು ಅಣುರೇಣುವಿನಂತೆ ಹಾರಿಸಬಲ್ಲ ಈ ಕೃಷ್ಣನ ರೋಷದ ಅಂತಿಮ ಶಕ್ತಿಯನ್ನು ಪರೀಕ್ಷಿಸಬಲ್ಲೆಯಾ? ಹಾಗಾದರೆ ಬೇಗ ನಿರೀಕ್ಷಿಸು. ಸುದರ್ಶನವೆ, ಜಾಗ್ರತವಾಗು (ಎತ್ತುವನು)

**ಬಾಣಾಸುರ** – (ಎದೆ ಎತ್ತಿಕೊಂಡು) ಜಯ ಕಾಲಸಂಹಾರಿ, ಜಯ ಕಾಮ ಮದವಿದಾರಿ. (ಕಾಲಶಕ್ತಿ ರೂಪವಾದ ಸುದರ್ಶನವನ್ನು ಬಾಣನು ನಿರ್ಭೀತನಾಗಿ ಆಹ್ವಾನಿಸುವಾಗ ಪರಮಾತ್ಮನು ರಣರಂಗ ಮಧ್ಯದಲ್ಲಿ ಪ್ರಕಟನಾಗಿ)

**ಪರಮಾತ್ಮ** – ಹಾಂ, ಹಾಂ, ಕೃಷ್ಣಾ, ಪ್ರಮಾದವಶನಾಗಿ ಸುದರ್ಶನವನ್ನು ಪ್ರಯೋಗಿಸಬೇಡ ತಡೆ.

**ಬಾಣಾಸುರ** – ಜಯ ಶಂಕರ! ಎಲವೆಲವೋ ಬಣಗು ಕೃಷ್ಣಾ, ಬೇಗ ಬಾ. ನನ್ನ ಸ್ವಾಮಿಯು ನನ್ನ ಸಮರ ಸಾಹಸವನ್ನು ಕಣ್ಮುಟ್ಟ ನೋಡಲಿ! ಪ್ರತ್ಯಕ್ಷನಾದ ಕಾಲಭೈರವನ ರುಂಡಮಾಲೆಯಲ್ಲಿ ನಿನ್ನ ಶಿರವನ್ನು ಸೇರಿಸುತ್ತೇನೆ.

**ಪರಮಾತ್ಮ**– ತಡೆ, ಬಾಣಾ. ವರಬಲದಿಂದ ಗರ್ವಿತನಾಗಿ ವರ್ತಿಸದಿರು. ನಿನ್ನ ಛಲವನ್ನು ಬಿಡು.

**ಕೃಷ್ಣ** – ದೀನ ದಯಾಘನ, ಮಹಾದೇವ, ನಿನ್ನಿಚ್ಛೆಯನ್ನು ಮೀರಿ ಅದಾವ ಶಕ್ತಿಯು ವರ್ತಿಸಬಲ್ಲುದು! ನಾವೆಲ್ಲರೂ ನಿನ್ನ ಲೀಲಾಮಾತ್ರದಿಂದ ಕುಣಿಯುವ ಬೊಂಬೆಗಳು!

**ಬಾಣಾಸುರ** – ಸರ್ವೇಶ್ವರನಾದ ಸ್ವಯಂಭುವೆ, ಇದು ನನ್ನ ವೀರ ಛಲ! ನನ್ನ ಹಿರಿಯಾಸೆಯನ್ನು ಹಿಮ್ಮೆಟ್ಟಿಸಬೇಡ! ನಿನ್ನಿಚ್ಛೆಯಿದ್ದರೆ ನನ್ನ ಶಿರವನ್ನು ನಿನ್ನ ರುಂಡಮಾಲೆಯಲ್ಲಿ ಸೇರಿಸು. ಆದರೆ ಈ ಅಪಮಾನವನ್ನು ನಿನ್ನ ಭಕ್ತನು ಎಂದಿಗೂ ಸಹಿಸಲಾರನು!

**ಪರಮಾತ್** – ಬಾಣಾ, ನಿನ್ನ ಸಮರಲಾಲಸೆಯು ಶಾಂತವಾಗಲಿ, ತಾಮಸವನ್ನು ನೀಗು, ಭಕ್ತಶ್ರೇಷ್ಠನಾದ ನೀನು ಸತ್ವಶಾಲಿಯಾಗಿ ಬೆಳಗು! ಇದು ನಿನ್ನ ಅಪಮಾನವಲ್ಲ, ಅಪಜಯವಲ್ಲ–ಅಖಂಡ ವಿಜಯ! ಶ್ರೇಯೋಸಾಧನೆಯ ಚಿರಸೌಖ್ಯ ಸೀಮೆ! ಬಾ, ಸುಖಕ್ಕಾಗಿ ಕೈ ಚಾಚು. ಸಖ್ಯವೇ ಜೀವನಶಾಂತಿಯ ರಾಜಮಾರ್ಗ!

**ಬಾಣಾಸುರ** – ನಿನ್ನಿಚ್ಛೆ ದೇವಾ, ನಿನ್ನಾಜ್ಞೆಯೇ ನನ್ನ ಧರ್ಮ!

**ಪರಮಾತ್ಮ** – ಮಹಾನಂದ! (ಈರ್ವರ ಹಸ್ತಗಳನ್ನೂ ಕೂಡಿಸಿ) ಗಂಗಾ ಯಮುನೆಗಳ ಸಂಗಮದಂತೆ–ನನ್ನ ಶಕ್ತಿ ಭಕ್ತಿಗಳ ಮಹಾ ಮಿಲನ! ಇದೇ ಮಂಗಳದ ಹಾದಿ! ಲೋಕದ ವಿದ್ವೇಷ ವಿದ್ರೋಹಗಳೆಲ್ಲವೂ ಅಳಿಯಲಿ. ಮತ ಮತಾಂತರಗಳ ಕೊಳೆಯು ಕಳಚಿ ಹೋಗಲಿ! ಮಾನವನ ಮನದ ಮಾಲಿನ್ಯವು ತೊಲಗಿ ನಿರ್ಮಲವಾಗಲಿ. ಜಗವು ಸುಖ ಸಂತೋಷಗಳ ಸುಗ್ಗಿಯನ್ನು ಕಂಡು ಆನಂದದಿಂದ ನರ್ತಿಸಲಿ!

**ಕೃಷ್ಣ** – ಓಂ ಶಾಂತಿ, ಶಾಂತಿ! ಶಾಂತಿ! ಸಚ್ಚಿದಾನಂದ ಮೂರ್ತಿಯೇ, ನನ್ನ ಹೃದಯವು ಆನಂದದಿಂದ ಕುಣಿಯುತ್ತಿರುವದು. ವಂದಿಸುವೆನು.

**ಬಾಣಾಸುರ** – ಪರಮ ಕಾರುಣಿಕ ಮೂರ್ತಿಯೇ! ನಿನ್ನ ಸನ್ನಿಧಿಯಲ್ಲಿ ಪ್ರಪಂಚವೇ ಆನಂದದಿಂದ ನರ್ತಿಸುವದುರು. ನಿನ್ನ ಮಹಾ ಬೆಳಗೇ ಬೆಳಗು. (ಅಷ್ಟರಲ್ಲಿ ಉಷಾ, ಚಿತ್ರಲೇಖ, ಅನಿರುದ್ಧ ಮುಂತಾದವರೆಲ್ಲರೂ ಬಂದು ವಂದಿಸುವರು.)

**ಪರಮಾತ್ಮ** – ವಿಜಯೀ ಭವ, ಕಲ್ಯಾಣಮಸ್ತು! ಉಷಾರಾಣಿ – ಪ್ರೇಮಮಯಿಯಾದ ನೀನು ನಿನ್ನ ಅದ್ಭುತ ಪ್ರೇಮದಿಂದ ಜಗತ್ತಿಗೆ ಸತ್ಯ ಪ್ರೇಮದ ಪಾಠವನ್ನು ಕಲಿಸಿದೆ. ನಿಮ್ಮ ಕಲ್ಯಾಣದಿಂದ ಜಾತಿ ಜಾತಿ ಜಾತಿಗಳ ಮತ್ಸರ ವಿದ್ವೇಷಗಳು ಅಳಿದು, ಲೋಕವು ಚಿರಶಾಂತಿಯನ್ನು ಅನುಭವಿಸಲಿ! ಬಾಣಾ, ಇವರ ಮಂಗಳಕಾರ್ಯವನ್ನು ವೈಭವದಿಂದ ನೇರವೇರಿಸು. ಬಾಣಾಸುರನು ಭಕ್ತಶ್ರೇಷ್ಠನೆಂಬ ಖ್ಯಾತಿಯನ್ನು ಪಡೆ!

**ಬಾಣಾಸುರ** – ಆಗಬಹುದು ಪ್ರಭು, ನಿನ್ನಿಚ್ಛೆ!

(ಪರಮಾತ್ಮನು ಎಲ್ಲರನ್ನೂ ಹರಸಲು ಅಭಯಹಸ್ತವನ್ನು ಎತ್ತಿ ನಿಲ್ಲುವನು. ಎಲ್ಲರೂ ಕೈಜೋಡಿಸಿಕೊಂಡು ಮಂಗಳಸ್ತವನ ಮಾಡುವರು)

(ತೆರೆ ಮೆಲ್ಲಗೆ ಇಳಿಯುವದು)

– ಸಮಾಪ್ತ –

ಇಳೆಯನೆ ಬೆಳಗುವ ದಿನಮಣಿ ನಯನ ।
ಸುಧೆಯನೆ ಸುರಿಸುವ ತಿಂಗಳ ನಯನ ॥
ದುರಿತಾರಣ್ಯವ ದಹಿಸುವ ನಯನ ।
ಜಯ ಮಂಗಳಾ ಕರುಣಾ ಭರಣಾ ॥

# ಉಷಾರಾಣಿ ನಾಟಕದ ಹಾಡುಗಳು

ಹಾಡು ರಚಿಸಿದವರು : **ಶ್ರೀ ಶಂಕರಪ್ಪ, ಮಾಸ್ತರ್, ಕಲ್ಮಾಲಿ**
ರಾಗ ರಚಿಸಿದವರು : **ಶ್ರೀ ನಾರಾಯಣಪ್ಪ, ಅಕ್ಕಸಾಲಿಗ, ಕಲ್ಮಾಲಿ**

## ನಾಂದಿ

**ರಾಗ–ಕೇದಾರ ತಾಲ – ತ್ರಿಶಾಲ**

**ಸರ್ವರು :–** ಶಾರದೆ ಶುಭವಾಣಿ! ಕವಿಕುಲ ಶ್ರೇಣಿ ।
ವೀಣಾ ಪಾಣಿ ।
ಬ್ರಹ್ಮನ ರಾಣಿ ಕೊಡು ನೀ । ಮಂಗಳ ಕರುಣಿಸು ದಾನಿ।
ಸಂಗೀತ ನಾಟ್ಯ । ಕಾವ್ಯ ವಿಲಾಸಿನಿ ।
ಶಿವಜ್ಞಾನ ಶಾಂತಿ । ದಾತೆ । ಪ್ರೀತೆ । ॥ ೧ ॥

ಎರಡನೆಯ ಕಾಲದಲ್ಲಿ

ದ್ವಿತಿಯಾ ಶಂಭೋ । ಬಸವೇಶ ದೇವ ।
ಮಾದಾನಿ ನೀ ನೀಡೂವದೀಗ ॥ ಪ ॥
ಕವಿ ಕಾವ್ಯ ಕೃತಿಗೆ ಕಲ್ಯಾಣ ನೀಡು ।
ಕೊಡು ಎಮಗೆ ಜಯವ । ನತ ಪಾಲ ದೇವ । ॥ ೧ ॥

**ರಾಗ–ದುರ್ಗಾ ತಾಲ – ತ್ರಿಶಾಲ**

(ತಂತ್ರಗಾರನಾದ ಆ ಕೃಷ್ಣನು ಮಹಾಮೋಸಗಾರ ಈ ಮಾತಿನ ನಂತರ)

**ಚಂದ್ರಕಾಂತ:–**
ಖಲನಾ ಕಪಟಿ ಕೃಷ್ಣನು ದುರುಳಾತ್ಮ । ಕುಟಿಲ ಕುಲಘಾತುಕಾ॥ ಪ ॥
ರಾಧೆಯ ಜಾರ । ಮಧುರೆಯ ಚೋರ ।
ಭಾರತ ಯೋಧರ । ರುಧಿರವ ಹರಿಸಿದ । ನಾ ॥ ॥ ೧ ॥

### ರಾಗ–ಯಮನ ಕಲ್ಯಾಣಿ ತಾಲ – ಜಲದಯಕ್ಕಾ

(ಬಾಣ: ಅಹಹಹ ಬಹಳ ಸಂಭ್ರಮ. ಹೀಗೆ ಭಜನಾಸಕ್ತರಾಗಿ ಧನ್ಯಕಾಯರಾಗಿರಿ. ಬಾಣನ ಈ ಮಾತಿನ ನಂತರ)

ನಾರದ :– ಶುಭದಾ ಸ್ಮರನಾಶ ಈಶ । ಸದಾನಂದಕರ ಮಹೇಶ ।
ನಿಜಾನಂದ ಜಗವಿಲಾಸ । ಗಂಗಾಧರಗಗನಕೇಶ । ॥ ಪ ॥
ಭಾವಮಂದಿರಾತ್ಮವಾಸ । ಕಾಲಕರ್ಮ ಅಘವಿನಾಶ ।
ಚಂದ್ರಚೂಡವ್ಯಾಲಹಾರ । ನೀಡು ಶಾಂತಿ ಭಯವಿದಾರ ॥ ೧ ॥

### ರಾಗ–ತಿಲಕ ಕಾಮೋದ ತಾಲ – ಜಲದಯಕ್ಕಾ

(ದೇವಾ ಎಲ್ಲವೂ ನಿನ್ನ ಲೀಲೆ – ಈ ಮಾತಿನ ನಂತರ)

ನಾರದ :– ಭೂರಿ ಕರುಣಿ ಭುವನಾಧಾರ । ದೀನ ಜನ ಸುಪಾಲ॥ ಪ ॥
ಭವಪಾಶವ ಪರಿಹರಿಸು । ಪೊರೆ ಜಗವ ಹೇ ಕೃಪಾಲ ।
ಸುವಿಶಾಲ ಭಸಿತಫಾಲ । ಕಾಮಾರಿ ಗೌರೀಶಾ । ॥ ೧ ॥

### ರಾಗ – ದುರ್ಗಾ ತಾಲ – ತ್ರಿತಾಲ

ಶಂಕರ:– ಮಾಯೆ ಮೋಹನ ಲೀಲ । ಜಾಲ । ॥ ಪ ॥
ಜೀವನ ಚಕ್ರ ಕುಬಾಲ । ಸೊಬಗಿನ ಮಲ ।
ವರಶಾಂಭವೀ । ಆದೀಯ ಮೂಲ । ॥ ೧ ॥

### ರಾಗ–ಮಿಶ್ರಕಾಫಿ ತಾಲ – ಏಕತಾಲ

(ಶಂಕರ : ಚಿಚ್ಛಕ್ತಿಯೇ ವಿರಮಿಸೋಣ ನಡೆ ಈ ಮಾತಿನ ನಂತರ)

ಸರ್ವರು:– ಜಯ ಜಯ ಶಂಕರ ಜಯ ಕರುಣಾಕರ ಜಯ ಮನ್ಮಥಹರ
ಜೈ । ಜೈ । ಜೈ । ಪಂಚಪಾತಕಿಯ ಸಂಚಯ ನೀಗುವ
ಪಂಚಾನನನೆ ಜೈ । ಜೈ । ಜೈ । ॥ ೧ ॥

ಉಷಾ :– ಮೂಲ ಮಂತ್ರದ ಮಾಲೆಯ ಧರಿಸಿದ ।
ಮಾಯಾಲೋಲನೆ ಜೈ । ಜೈ । ಜೈ ।

ಅಂಬಾ ಶಕ್ತಿಯ ಅಂಬುಧಿ ಚಂದ್ರನೆ ।
ಅಂಬರಕೇಶನೆ ಜೈ । ಜೈ । ಜೈ ।
ಜಯ ಭವಭಂಗನೆ ಶರಣರ ಸಂಗನೆ ಜೋತಿರ್ಲಿಂಗನೆ ಜೈ ಜೈ ಜೈ
ಜಯಶಿವಲಿಂಗನೆ ಜಯ ನಿಜಲಿಂಗನೆ ಜಯ ಮಹಲಿಂಗನೆ ಜೈ ಜೈ ಜೈ

===***===***===

ಉಷಾರಾಣಿ / ೨೬೧

# ಮಾರ್ಗ ತೋರಿದ ಮಡದಿ

• ಶಿವಲಿಂಗಪ್ಪಯ್ಯ ನಾಯ್ಕಲ್ ಹಿರೇಮಠ

# ಶಿವಲಿಂಗಪ್ಪಯ್ಯ ನಾಯ್ಕಲ್ ಹಿರೇಮಠ

ಶಿವಲಿಂಗಪ್ಪಯ್ಯ ಶಾಸ್ತ್ರಿಗಳ ಅಡ್ಡ ಹೆಸರು ನಾಯ್ಕಲ್ ಹಿರೇಮಠ. ಇಂದಿನ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ನಾಯ್ಕಲ್ ಗ್ರಾಮದಲ್ಲಿ ೨೪–೦೪–೧೯೧೦ರಂದು ಶಾಸ್ತ್ರಿಗಳು ಜನಿಸಿದರು. ಇವರ ತಂದೆಯ ಹೆಸರು ಮಲ್ಲಿಕಾರ್ಜುನಯ್ಯ. ಇವರು ಉರ್ದು ಮಾಧ್ಯಮದಲ್ಲಿ ತಮ್ಮ ಮುಲ್ಕಿ ಶಿಕ್ಷಣ ಮುಗಿಸಿ, ರಾಯಚೂರಿನ ಸಂಗೀತ ವಿದ್ವಾಂಸ ಖಾಜಣ್ಣ ಗವಾಯಿಗಳಲ್ಲಿ ಸಂಗೀತಭ್ಯಾಸ ಮುಗಿಸಿ ಕೊಪ್ಪಳ ತಾಲೂಕಿನ ಗೊಂಡಬಾಳಗೆ ಬಂದು ಶಿಕ್ಷಕರಾಗಿ ಸೇವೆಸಲ್ಲಿಸಿ ಅಲ್ಲಿಯೇ ನೆಲೆಸಿದರು.

ಇವರ ಮಕ್ಕಳು ಈಗ ಗೊಂಡಬಾಳದಲ್ಲೇ ವಾಸವಾಗಿದ್ದಾರೆ. ಶ್ರೀ ಗವಿಮಠದ ಉಗಮ ಹಾಗೂ ಪರಂಪರೆ ಕುರಿತು ಕೃತಿ ರಚಿಸಿದ್ದಾರೆ. ಶಿಕ್ಷಣ – ಸಂಗೀತ ಜ್ಯೋತಿಷ್ಯ ಕ್ಷೇತ್ರಗಳಲ್ಲಿ ತಜ್ಞರಾಗಿದ್ದ ಶಾಸ್ತ್ರಿಗಳು ಮಹತ್ವದ ನಾಟಕಕಾರರೂ ಹೌದು. ಅನೇಕ ನಾಟಕಗಳನ್ನು ರಚಿಸಿ ಜನಮನ ಸೂರೆಗೊಂಡಿದ್ದಾರೆ. ಇಬ್ಬರ್ಹೆಂಡಿರ ಗಂಡ, ಮನವೆ ಮಹಾಮಂದಿರ, ಇವಳೆಂಥ ಸತಿ, ಆಶಾಭೂತ ದಂತಹ ಅನೇಕ ಸಾಮಾಜಿಕ ನಾಟಕಗಳು, ಸಿದ್ಧಾರೂಡ ಮತ್ತು ಗವಿಸಿದ್ಧೇಶ್ವರ ಕುರಿತಾದ ಪೌರಾಣಿಕ ನಾಟಕಗಳು ಪ್ರಕಟವಾಗಿವೆ. ಇವರ ಪ್ರಸಿದ್ಧ ನಾಟಕ " ಮಾರ್ಗ ತೋರಿದ ಮಡದಿ" ಯನ್ನು ಇಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಸಮಾಜೋಧಾರ್ಮಿಕ ಕಾರ್ಯದಲ್ಲಿ ನಿರಂತರ ಸೇವೆಸಲ್ಲಿಸುತ್ತ ಬಂದ ಶಾಸ್ತ್ರಿಗಳು ೧೫–೧೨–೧೯೮೦ರಲ್ಲಿ ಗೊಂಡಬಾಳದಲ್ಲಿ ಲಿಂಗೈಕ್ಯರಾದರು.

# ಈ ನಾಟಕದಲ್ಲಿಯ ಪಾತ್ರ ಪರಿಚಯ

**– ಪುರುಷರು –**

| | | |
|---|---|---|
| **ಸೋಮಣ್ಣ** | ... | ಗೌರಿಯ ಮಾವ (ಕಥಾ ನಾಯಕಿಯ ಮಾವ) |
| **ಶಾಮು** | ... | ಸೋಮಣ್ಣನ ಮಗ ಗೌರಿಯ ಗಂಡ (ಮಾರ್ಗತಪ್ಪಿದವ) |
| **ಶ್ರೀಧರ** | ... | ಗ್ರಾಮ ಪಂಚಾಯ್ತಿ ಚೇರಮನ್ನ (ಶ್ರೀಮಂತ) |
| **ರಾಮು** | ... | ಬಿ.ಎ ವರೆಗೆ ಓದಿದವ....ಬಡವ...<br>ಚೇರಮನ್ನರ ದೋಸ್ತ... |
| **ಶ್ರೀನಿವಾಸ** | ... | ಹೆಲ್ತ ಆಫೀಸಿನ ಕ್ಲಾರ್ಕ |
| **ವಾಸು** | ... | ಗ್ರಾಮ ಸೇವಕ... |
| **ರಾಜು** | ... | ಚಪ್ಪಲ ಅಂಗಡಿಯವ |

**ಸಬ್ಬ ಇನಸ್ಪೆಕ್ಟರ್ ಮತ್ತು ಒಬ್ಬ ಪೋಲೀಸ್**

**– ಸ್ತ್ರೀಯರು –**

| | | |
|---|---|---|
| **ಗೌರಿ** | ... | ಶಾಮುವಿನ ಹೆಂಡತಿ (ಕಥಾನಾಯಕಿ) |
| **ಸೀತಮ್ಮ** | ... | ಚೇರಮನ್ನರ ಹೆಂಡತಿ |
| **ಶಾಮಲಾ** | ... | ಸೀತಮ್ಮನ ಮಗಳು |
| **ಕಾಮಾಕ್ಷಿ** | ... | ಹರಿಜನ ಹುಡುಗಿ |

ಕಾಮುಕರ ಕಣ್ಣಿಗೆ ಕಾಡಿಗೆ ಹಚ್ಚಿದ ನಾಟಕವೆಂದರೆ

# ಮಾರ್ಗ ತೋರಿದ ಮಡದಿ

ಎಂಬ ಸಾಮಾಜಿಕ ನಾಟಕವು

## ಪ್ರಥಮ ಪ್ರವೇಶ

ಬಡವನಾದ ಸೋಮಣ್ಣನ ಮನೆ. ಸೊಸಿಯಾದ ಗೌರಿಯು ದೇವಿ ಫೋಟೋ ಇಟ್ಟು ಪೂಜಿಸುತ್ತ ಪದ ಹಾಡುತ್ತಿರುತ್ತಾಳೆ. ಜಡ್ಡಾದ ಮಾವನು ಹೊರಸಿನ ಮೇಲೆ ಮಲಗಿರುತ್ತಾನೆ. ಗೌರಿಯು ನಮಿಸುವಾಗ್ಗೆ ಗಂಡನಾದ ಶಾಮಣ್ಣನು ಅಪ್ಟುಡೇಟ್ ಫ್ಯಾಷನ್ನದಿಂದ ಬಂದು ಗೌರಿಯ ಹಿಂದೆ ನಿಂತು ಕೈ ಮುಗಿದದ್ದು ನೋಡಿ ಗಂಡನಿಗೆ ದೇವಿಯ ಪ್ರಸಾದ ಕೊಡುತ್ತಾಳೆ. ಬಾಯಿಯಲ್ಲಿ ಹಾಕಿಕೊಂಡು ಹಾಗೆ ಹೊರಗೆ ಹೋಗುತ್ತಾನೆ. ಹೋಗುವದನ್ನು ನಿಂತು ನೋಡಿದ ಗೌರಿ...

### ಪದ – ರಾಗ – ತಾಳ

ಪೂಜಿಸುವೆನಾ ಗುಹ ಜನನೀ ಸುಜನ ಪೋಷಿತೆ ಭೂಮಾತೇ ॥
ಶಿವನ ಧೂತೆ ಶಿವಚರಿತೆ ಪಾವನ ಭರಿತೇ ನುತಿಪೆ ಪಾವನ ಚರಿತೇ ನುತಿಪೆ
ಪಾವನ ಚರಿತೇ ಮನದೀನಾ ॥ ೧ ॥
ಕಾಮಹರಗೆ ಭಾಮೆಯಾಗಿ ಹಿಮಸುತೆಯನಿಸೀ ಕಾಮ ದಹಿಸಿ ಹಿಮ
ಸುತೆಯನಿಸೀ ನಿನ್ನನುನಾ ॥ ೨ ॥
ನಿತ್ಯನಂದಳೆ ನಿಗಮ ಗೋಚರಳೆ ಸತ್ಯವಸ್ತುಸನಾತಿನಿಯೇ । ನಿನಗೆ
ನಮೋ ನಮೋ ಎಂಬೆನು ನಾನು ॥ ೩ ॥

ಹೊಸದಾಗಿ ಬಂದು ಕಾಲೂರಿದೆ ಈ ಮನೆಯಲ್ಲಿ. ತ್ರಾಸಾಗಿ ನರಳುತಿಹ ಮಾವನು ರೋಗದಲಿ. ವೆಸನವಿಲ್ಲದೆ ತಿರುಗುತಿಹ ಯನ್ನ ಪತಿ ಡೌಲಿನಲಿ....ಇದೇನು ನೋಡುತ್ತಿರುವೆ ಹೇ ದೇವಿ ಇಂಥಾ ಮನೆಗೆ ನನ್ನನ್ನು ಆರಿಸಿ ತಂದಿರುವೆ. ಆದರೆ ನನ್ನ ಯೋಗ ಕ್ಷೇಮವು ಮಾತ್ರ ನಿನ್ನದಾಗಿದೆ. ಹೆಣ್ಣಾಗಿ ಜೀವಿಸುವಳು ಪರಮನೆಯ ತೊತ್ತಾಗಿಯಲ್ಲದೆ ನಿಜ ಬಾಳಿದರೂ ಬಾಳಬೇಕು ಆದರ್ಶ ಮಡದಿಯಾಗಿ. ಈ ರೀತಿ ಬಾಳದ ಹೆಣ್ಣು ಹೆಣ್ಣಲ್ಲ ಅದೊಂದು ದೇಹಕ್ಕೆ ತಗಲಿದ ಹುಣ್ಣೆಂದು

ತಿಳಿಯಬೇಕು. ಇರಲಿ (ಮಾವನ ಸಮೀಪ ಹೋಗಿ ನಮಿಸಿ) ಮಾವಾ ಕಾಫಿಯಾದರೂ ಮಾಡಿ ಕೊಡಲೇ ನಿನ್ನೆ ರಾತ್ರಿಯಿಂದ ಉಣ್ಣಲಾರದೆ ಹೊಟ್ಟೆ ಕಸವಿಸಿಯಾಗುತ್ತಿರಬಹುದಲ್ಲವೆ.......

**ಸೋಮಣ್ಣ** – ಇಲ್ಲಮ್ಮಾ ನೀನು ಬಂದಂದಿನಿಂದ ನನ್ನ ಜಡ್ಡೆಲ್ಲ ಹೋಗಿದೆ. ಮೈಯಲ್ಲಿ ಶಕ್ತಿ ಇಲ್ಲದ್ದಕ್ಕೆ ಹಾಗೆ ಮಲಗಿದೇನೆ. ಶ್ಯಾಮಂಣಾ ಏ ಶ್ಯಾಮಂಣಾ ಇಲ್ಲೇನಮ್ಮಾ ಮನೆಯಲ್ಲಿ....

**ಗೌರಿ** – ಇಲ್ಲ ಮಾವಾ ಆಗಲೇ ಹೊರಟು ಹೋದರು ಏನಾದರೂ ಕೆಲ್ಸವಿರಬೇಕು.

**ಸೋಮಣ್ಣ** –(ಏಳುತ್ತ) ಕೆಲ್ಸವಿದೆ... ನನ್ನ ಮಗನಿಗೆ ಬಹಳ ಕೆಲ್ಸವಿದೆ ಗೌರೀ ನೀನು ಸುಖವಾಗಿ ಉಂಡುಟ್ಟು ನಿನ್ನ ತಾಯಿ ತಂದೆಗಳ ಪ್ರೇಮದಿ ಬೆಳೆದು ವಿದ್ಯಾ ಕಲಿತು ಸುಸಿಕ್ಷಿತಳಾದವಳನ್ನು ಇವನಿಗೆ ಗಂಟು ಹಾಕಿದೆನಲ್ಲಾ ಎಂಬ ಹೃದ್ರೋಗವು ಮಾತ್ರ ಹೆಚ್ಚಾಗಿದೆ. ಗೌರೀ ನನ್ನನ್ನು ಬಯ್ಯ ಬೇಡಮ್ಮಾ ನಿನಗೆ ಕೈ ಮುಗಿಯುತ್ತೇನೆ... (ದುಃಖಿಸುವನು)

**ಗೌರಿ** – ಇದೇನು ಮಾವಾ ನಿಮಗೆ ಹುಚ್ಚು ಹಿಡಿಯಿತೇ... ಹೀಗೇಕೆ ಮಾಡುವಿರಿ ಸಧ್ಯ ಏನಾಗಿದೆ...

**ಸೋಮಣ್ಣ** – ಸದ್ಯ ಏನಾಗಿದೆ...ನಿಜ...ಸಧ್ಯ ಏನೂ ಆಗಿಲ್ಲಮ್ಮಾ ಮುಂದೆ ಆಗುವದೆಲ್ಲ ಆಗುತ್ತದೆ....ನಾನು...ನಿನ್ನನ್ನು ನೋಡಲಿಕ್ಕೆ ಬಂದಗ್ಯೆ ನಿನ್ನ ತಂದಿ ತಾಯಿಗಳು ಅಳಿಯ ಹೇಗಿದ್ದಾನೆ ಏನು ಓದಿದ್ದಾನೆ...ಎಂದು ಕೇಳಿದಾಗ್ಯೆ ಅಯ್ಯೋ.... (ದುಃಖಿಸುವನು)

**ಗೌರಿ** – ಆಗ ನೀವೇನು ಹೇಳಿದಿರಿ ಮಾವಾ....

**ಸೋಮಣ್ಣ** – (ದುಃಖಿಸುತ್ತ) ಹೇಳಿದೆನಮ್ಮಾ ಹೇಳಿದೆ...... ನಿನ್ನ ತಾಯಿ ತಂದೆ ಮನ ಕರಗುವಂತೆ ಅವರ ಬಾಯಲ್ಲಿ ನೀರು ಬರುವಂತೆ ಹೇಳಿದೆನಮ್ಮಾ... ನನ್ನ ಮಗ ವಿದ್ಯಾವಂತ ಸುಶಿಕ್ಷಿತ ಇಂದಿಲ್ಲ ನಾಳೆ ದೊಡ್ಡ ನೌಕರಿ ಛಾನ್ಸ ಇದೆ ಎಂದು ಸುಳ್ಳು ಮಾತನ್ನು ಹೇಳಿದೆ. ಅವರು ನನ್ನ ಮಾತಿಗೆ ಮೋಸ ಹೋದರಮ್ಮಾ ಮೋಸ ಹೋದರು. ಎಷ್ಟು ಓದಿದರೇನು ಓದದಿದ್ದರೇನು ನೀತಿಯಿಲ್ಲದೆ ಪಶುವಿನಂತೆ ವರ್ತಿಸುವ ಮಾನವನು ಮಾನವನೇ... ಅವನನ್ನು ಪಶುಗಳ ಎಣಿಕೆಯಲ್ಲಿ ಸೇರಿಸುವದೇ ಮೇಲು. ಇಂಥವನಿಗೆ ಇಂಥಾದೇ ಒಂದು ಹೆಣ್ಣನ್ನು ತಂದು ಲಗ್ನ ಮಾಡಿದ್ದರೆ ಮೇಲಿತ್ತು ಆದರೆ ನಿನ್ನಂಥವಳನ್ನು ಇವನಿಗೆ ಗಂಟು ಹಾಕಿ ಮಹಾ

ಪಾಪಕ್ಕೊಳಗಾದೆ ನಮ್ಮಾ ಪಾಪಕ್ಕೊಳಗಾದೆ.... (ದುಃಖಿಸುವನು)

**ಗೌರಿ** – (ಸ್ವ) ಇದೇನು ಮಾವನು ಜಡ್ಡಿನ ತಾಪದಿಂದ ಹೀಗೆಲ್ಲ ಮಾತಾಡುತ್ತಿರಬಹುದೇ (ಪ್ರ) ಮಾಮಾ ಹೀಗೇಕೆ ಮಾತಾಡುವಿರಿ ನಿಮ್ಮ ಮಾತುಗಳು ಸೇತುವೆಯಾಗಿ ತೋರುತ್ತಿವೆ. ಇದುವರೆಗೂ ಅವರಿಂದ ಅಂಥಾದ್ದೇನು ಕಂಡಿಲ್ಲವಲ್ಲಾ ಏನಾಗಿದೆ...

**ಸೋಮಣ್ಣ** – ಏನೂ ಆಗಿಲ್ಲಮ್ಮಾ ನೀನು ನಮ್ಮ ಮನಿಗೆ ಬಂದು ಕೇವಲ ಐದೇ ಐದು ದಿವ್ಸವಾಯಿತು ಅಷ್ಟೇ ಇನ್ನೂ ನಿನ್ನ ಗಂಡನ ಕೃತ್ಯಗಳು ನಿನ್ನ ಕಣ್ಣಿಗೆ ಬಿದ್ದಿಲ್ಲ. ಬಿದ್ದ ಮೇಲೆ ಮಾತ್ರ ನನ್ನನ್ನು ಶಪಿಸಬೇಡಮ್ಮಾ, ನನ್ನ ತಪ್ಪನ್ನು ಕ್ಷಮಿಸು ಗೌರೀ.... ಇದೊಂದೇ ನನ್ನ ಬೇಡಿಕೆ ತಾಯಿ.... (ದುಃಖಿಸುವನು)

**ಗೌರಿ** – (ಆಲೋಚಿಸುತ್ತ) ಆಗಲಿ ಮಾಮಾ ನೀವೇನೂ ಚಿಂತಿಸುವ ಕಾರಣವಿಲ್ಲ ಪಾಲಿಗೆ ಬಂದದ್ದು ಪಂಚಾಮೃತವೆಂದು ತಿಳಿದು ಕಾಲಿಟ್ಟಿರುವಳು.... ಈ ನಿನ್ನ ಸೊಸಿ.... ಆದರೆ ಇದರಲ್ಲಿ ನಿಮ್ಮ ತಪ್ಪೇನಿದೆ ದೈವ ಸಂಕಲ್ಪ ತಪ್ಪಿಸುವವರು ನೀವೂ ಅಲ್ಲ ನಾನೂ ಅಲ್ಲ. ಕೆಟ್ಟದ್ದನ್ನು ಸುಟ್ಟು ಬೀಸಾಡುವವಳು ನಿನ್ನ ಸೊಸಿಯಲ್ಲ ಮಾವಾ... ನಿರಿಯಡಗಿ ಉರಿಯದ್ದು ಕರಗೆ ಬೆಂದು ಬೆಂಡಾದರೂ ಸಹನ ಶೀಲತೆಯ ಶಾಂತಿಯಿಂದ ನಿಮ್ಮನ್ನು ಜೋಪಾನ ಮಾಡತಕ್ಕವಳು ಈ ಗೌರಿ ಮಾಮಾ. ಹಾಗೆಲ್ಲ ಮನದ ಏಕಾರದಂತೆ ಓಡ ಹತ್ತಿದರೆ ಹೇಗೆ, ಅದೆಲ್ಲ ಹೋಗಲಿಬಿಡ್ರಿ ಆಯಾಸವಾಗಿರಬಹುದು ಸ್ವಲ್ಪ ಕಾಫಿ ಮಾಡಿ ತರುತ್ತೇನೆ. ತಡಿಯಿರಿ... (ಹೋಗುತ್ತಾಳೆ) ಚೇರಮನ್ ಶ್ರೀಮಂತ ಶ್ರೀಧರ ರಾಮು ಈರ್ವರು ಬರುತ್ತಾರೆ...

**ಶ್ರೀಧರ** – ಏನು ಸೋಮಣ್ಣನವರೇ ಸ್ವಲ್ಪ ಆರಾಮ ಆಗಿದೆಯೇ...

**ಸೋಮಣ್ಣ** – ನಮಸ್ಕಾರ ಚೇರಮನ್ರೆ ನಮಸ್ಕಾರ, ಬಾ ರಾಮೂ ಕೂತುಕೊಳ್ಳಿ....

**ರಾಮು** – ಪಾಪ ತಿಂಗಳಾಯಿತು ಹಾಸಿಗೆ ಹಿಡಿದು ಸೊರಿಗೇ ಬಿಟ್ಟಿದ್ದಾರೆ ಪಾಪ....

**ಸೋಮಣ್ಣ** – ನನಗೇನೂ ಅಂಥಾ ಜಡ್ಡಿಲ್ಲ ಶ್ರೀಧರಾ. ನಿತ್ರಾಣ ಬಹಳಾಗಿದೆ ಅಲ್ಲದೆ ಹೊಟ್ಟೆ ಮುರಿತ ಆಗಾಗ್ಗೆ ಏಳುತ್ತಿದೆ ಇಷ್ಟೇ....

**ಶ್ರೀಧರ**– ಇಷ್ಟೇ ತಾನೇ ಅದೇನೋ ಮಾಡಲಾರದು ಬಿಡ್ರಿ. ಹೇಗಾದರೂ ಮನೆಗೆ ಸೊಸಿ ಬಂದಿದ್ದಾಳೆ. ಬೇಕಬೇಕಾದದ್ದು ಅಡ್ಗಿ ಮಾಡಿಕೊಂಡು

ಉಂಡರೆ ನಿಮ್ಮ ನಿತ್ರಾಣೆಲ್ಲ ತಾನಾಗೇ ಹೋಗಿ ಮೈಯ್ಯಲ್ಲಿ ಚೈತನ್ಯ ಬರುತ್ತೆ ಯಾಕೋ ರಾಮು.

**ರಾಮು** – ನಿಜ ನಿಜ ನೀವು ಹೇಳಿದಂತೆ ಮಾಡೋದೆ ಉತ್ತಮ. (ಮೆಲ್ಲಗೆ) ಬಡವರೆಂದರೆ ಬಹು ಪ್ರೇಮ ನಮ್ಮ ಶ್ರೀಧರನಿಗೆ ಏನು ಬಣ್ಣದ ಪ್ರೇಮವೋ ಏನು ಹೆಣ್ಣಿನ ಪ್ರೇಮವೋ ತಿಳಿದರೂ ಹೇಳದಂತಾಗಿದೆ ಯನ್ನ ಮನಧರ್ಮ.

(ಗೌರಿಯು ಒಂದು ಕಾಫಿ ತಂದು ಮಾವನಿಗೆ ಕೊಡುವಾಗ್ಗೆ)

**ಸೋಮಣ್ಣ**– ತಂಗೀ ಇನ್ನು ೨ ಕಾಫಿ ತಗೊಂಡು ಬಾ ಅಮ್ಮಾ (ಹೋಗುತ್ತಾಳೆ) ಅತ್ತ ಶ್ರೀಧರನು ನೋಡುವಾಗ್ಗೆ.

**ಶ್ರೀಧರ**– ಛೇ ಛೇ ಅದೇನಿಲ್ಲ. ನೀವು ತಗೊಳ್ಳಿ. ಇದೇ ಈಗ ನಾವು ಕುಡಿದೇ ಬಂದಿದ್ದೇವೆ ಯಾಕೋ ರಾಮು.

**ರಾಮು**– ನಿಜ ಕುಡಿದೇ ಬಂದಿದ್ದೇವೆ ಚಿಕ್ಕಪ್ಪಾ ಒಂದು ವ್ಯಾಳ್ಯೆ ಬಲತ್ಕರಿಸಿ ನೀವು ಕೊಟ್ಟರೆ ಇವರಿಗೆ ಹೊಟ್ಟೆಯಲ್ಲಿ ಸ್ಥಳವಿಲ್ಲ ಬಿಡ್ರಿ....... (ಗೌರಿ ೨ ಕಾಫಿ ತಂದು ಇವರಿಗೆ ಕೊಡುತ್ತಾಳೆ.) ಶ್ರೀಧರ ಗೌರಿ ಮುಖವನ್ನು ಪಿಳಿಕಿಸಿದೆ ನೋಡುತ್ತಿರುವಾಗ್ಗೆ.

**ರಾಮು**– ಶ್ರೀಧರಾ ಇಲ್ಲಿ ನೋಡು ಶಾಮುವಿನ ಹೆಂಡತಿ. ಗುಣವಂತಿ ಇದ್ದಾಳೆ.

**ಶ್ರೀಧರ**– ನಿಜ ಸೋಮಣ್ಣನವರೇ ನಿಮ್ಮ ಸೊಸಿ ಬಹು ಬುದ್ಧಿವಂತಿಯೆಂದು ತಿಳಿದು ಬಂತು. ಮುಖ ನೋಡಲಾಗಿ ವಿದ್ಯೆಯನ್ನುಸಹ ಕಲಿತಿರಬಹುದಲ್ಲವೇ.

**ರಾಮು**– ಛೇ ಛೇ ಛೇ ಇಷ್ಟು ತಿಳಿಯುವದಿಲ್ಲೇನೋ ಶ್ರೀಧರಾ. ವಿದ್ಯಾವಂತಿ ಗುಣವಂತಿ ಲಕ್ಷ್ಮಣವಂತಿಯು ಇರುತ್ತಾಳೆಂಬುದು ಮುಖ್ಯವಾಗಿ ಸೋಮಣ್ಣನವರು ಪುಣ್ಯಾತ್ಮರೆಂದು ಹೇಳಬೇಕಾಗಿದೆ.

**ಸೋಮಣ್ಣ**– ರಾಮಣ್ಣ ಬಹಾಳ ಹುಷಾರಿ ಶ್ರೀಧರಾ. ಪರಿಚಯವಿಲ್ಲದಿದ್ದರೂ ಇಂಥವರ ಗುಣ ಇಂಥಾದ್ದೇ ಎಂದು ಹೇಳಬಲ್ಲ. ಇರಲಿಬಿಡು ರಾಮೂ. ನಿನ್ನ ಲಗ್ನದ ಹೋಳಿಗೆ ಎಂದು ಉಣಿಸುವಿಯೋ ಬೇಗ ಉಣಿಸೋ. ನಾನು ಘಟ್ಟಿಯಾಗಿರುವದರೊಳಗಾಗಿ ಏನಂದೀ.

**ರಾಮು**– ಏನಂದಿ ಚಿಕ್ಕಪ್ಪಾ ನನ್ನ ಮದುವೆ ಬೇಡ್ರೆಪಾ ಮದುವೆ ಅಂದರೆ ಸುಖದ

ಸುಪ್ಪತ್ತಿಯಿಂದು ಸಂಕಟ ಪಡುವ ಅದೊಂದು ಸಾಧನ ಚಿಕ್ಕಪ್ಪಾ. ಅದರ ಗೊಡವಿಯೇ ಬೇಡವಾಗಿದೆ.

**ಶ್ರೀಧರ–** ಇವಕ್ಕೆಲ್ಲ ನಿರುತ್ಸಾಹವೇ ನಿರುದ್ಯೋಗದ ಕವನ.

**ಸೋಮಣ್ಣ–** ಇಂಥವರಿಗೆಲ್ಲ ಉದ್ಯೋಗ ಹಚ್ಚಲು ನಿಮ್ಮಂಥವರು ಇರಲಿಕ್ಕಾಗಿ ಅವರಿಗೇನು ವ್ಯಸನ.

**ಶ್ರೀಧರ–** ಅಹಹಹ (ನಗುತ್ತ) ನಿಜ ನಿಜ ಇರಲಿ ಶಾಮಂಣನವರೇ ಶಾಮಂಣನೆಲ್ಲಿ ಮನೆಯಲ್ಲಿಲ್ಲವಲ್ಲಾ.

**ಸೋಮಣ್ಣ–** (ವ್ಯಸನ ಮುದ್ರೆಯಿಂದ) ಶ್ರೀಧರಾ ಅವನ ಹೆಸರು ತಗೆಯದಿರು. ನೆನಪಾದರೆ ಹೊಟ್ಟೆ ಮುರಿತ ಸುರುವಾಗುತ್ತೆ. ಏನು ಮಾಡೋದು. ಇದೊಂದು ನನ್ನ ಕರ್ಮವೆಂದೇ ತಿಳಿಯಬೇಕು. (ಗೌರಿ ಬಾಗಿಲು ಮರೆಗೆ ನಿಂತು ಕೇಳುತ್ತಾಳೆ)

**ಶ್ರೀಧರ–** ಇದೇನ್ರಿ ಸೋಮಂಣನವರೇ ನಿಮ್ಮ ಮಗನ ವಿಷಯಕ್ಕೆ ಹೀಗಂತೀರಾ. ಛೇ ನಾನೊಪ್ಪಲಾರೆ. ಬಿಡ್ರೀ. ಶಾಮಂಣ ಹೊರಗ ಹೊರಟಾನಂದರೆ ತೀರೇ ಹೋತು. ಹತ್ತೆಂಟು ಮಂದಿ ಹಿಂದೆ ಇದ್ದೇ ಇರುತ್ತಾರೆ ಇಸ್ಪೇಟು ಆಟದಲ್ಲಿ ಬಹು ಜಾಣನೆಂದು ಕೇಳಿದ್ದೆ., ನೋಡು ರಾಮೂ ಸೋಲು ಅನ್ನೋದೇ ಇವನಿಗೆ ಗೊತ್ತಿಲ್ಲಂತೆ.

**ರಾಮು–** ಆಹಾ ಅದೆ ನಾನು ಹೇಳೋದು ಇಸ್ಪೆಟು ಆಡಿದರೇನಾಯ್ತು ಸೋಲಂತೂ ಇವನಿಗೆ ಇಲ್ಲೇಇಲ್ಲವೆಂದು ನಿನ್ನೆ ಕಾಫಿ ಕ್ಲಬ್ಬಿನಲ್ಲಿ ಇವನ ಸುದ್ದಿಯೇ ಮಾತಾಡಿದ್ರ ನೋಡ್ರಿ. ಸೋತು ಮನಿಗಿ ಬರತಿದ್ರ ಮಾತ್ರ ಇಸ್ಪೇಟಿನ ಆಟ ಕೆಟ್ಟದ್ದೆಂದು ಹೇಳಬೇಕು. ಮಗ ಗೆದ್ದು ಮನಿಗಿ ಹಣ ತರ್‍ತಾನಂದ್ರ ಅದೇನೂ ಅಷ್ಟು ಕೆಟ್ಟಲ್ಲ ಬಿಡ್ರಿ....ಯಾಕ್ರೀ ಶ್ರೀಧರರೇ.

**ಶ್ರೀಧರ–** ಏನ್ರಿ ಸೋಮಂಣನವರೆ ಜನಾ ದನಾ ಒಬ್ಬರು ಹಾಗನ್ನಬಹುದು ಒಬ್ಬರು ಹೀಗನ್ನಬಹುದು. ಅದನ್ನೆಲ್ಲ ಕೇಳಿ ನಾವು ಮಾಡೋದೇನು ಯಾದರಿಂದಾಗಲೀ ಮನಿ ಮಗ ಮನಿಗಿ ಹಣ ತಂದರಾತು ಇಷ್ಟೇ ಯಾಕೋ ರಾಮು........

**ರಾಮು–** ಆಹಾ ನಾನು ಅದೇ ಹೇಳೋದು ಸುಳ್ಳು ಹೇಳಿ ನೂರು ದುಡಿಯುವದಕ್ಕಿಂತ ಒಳ್ಳೇವೆರಡು ಮಾತಾಡಿ ಈಸ್ಪೇಟ ಆಟದಲ್ಲಿ ಮೂರು ರೂಪಾಯಿ ದುಡ್ದರೆ ಸಾಕು. ನೀತಿ ಇಲ್ಲದ ಜನಾ ದುಡ್ಡು ಸಿಗತಾದಂದ್ರ

ಏನೇನೋ ಮಾಡಿ ಬಿಡ್ತಾರ್ರಿ. ನೋಡ್ರಿ ಯಾವ ಕೆಲಸದಲ್ಲಿ ಸುಖವಿದೆ ಅಂತೀರ್ರಿ ಇನ್ನ ಕಾಂಚಣಂ ಕಾರ್ಯಸಿದ್ಧಿಯ ದೇವರೆಂದರೆ "ಡಾಕ್ಟರ್" ಮತ್ತೆ ಕೊಟ್ಟ ಹಣವನ್ನು ಹಿಂತಿರುಗಿಸದ ಪ್ರಾಮಾಣಿಕ ವ್ಯಕ್ತಿಯಂದರೆ "ವಕೀಲ" ಇನ್ನು ಸರ್ವಾಂತರ್ಯಾಮಿ ದರ್ಶನ ಕೊಡುವ ಭಗವಂತನೆಂದರೆ "ಮಂತ್ರಿ" ಇವೆಲ್ಲ ಉದ್ಯೋಗಗಳಲ್ಲಿ ಎಷ್ಟೇ ಬೆಲಿ ಇದ್ದರೂ ಮುಂದೆ ಮುಂದೆ ಹೊಗಳಿ ಬೆನ್ನ ಹಿಂದೆ ಉಗುಳುವ ಜನಗಳ ನೋಡಿದರೆ ಆ ಕೆಲಸಕ್ಕೆನೇ ಕೈ ಹಾಕುಬಾರದೂ ಅಂತೀನಿ ಯಾಕ್ರೀ

**ಶ್ರೀಧರ–** ಅಲ್ಲೋ ರಾಮು ಭಗವಂತನಂತೆ ಕಾಣುವ ಮಂತ್ರಿಗಳಿಗೆ ಸಹ ಇದೇ ರೀತಿಯೇನೋ

**ರಾಮು–** ಅಯ್ಯೋ ಚೇರಮನ್ರೇ ಅವರಿಗಂತೂ ಐದೇ ಐದು ವರ್ಷ ಆಯುಷ್ಯ ಅದರೊಳಗೆ ಎಷ್ಟೋ ಗಂಡಾಂತರಗಳು ಅಂದಮೇಲೆ ಜನಗಳಿಂದ ಉಗುಳಿಸಿಕೊಳ್ಳುವ ಕೆಲಸಕ್ಕಿಂತ ನಮ್ಮ ಶ್ಯಾಮುವಿನ ಸ್ವತಂತ್ರದ ಇಸ್ಪೇಟಿನ ಆಟವೇ ಮೇಲೆಂದು ನನ್ನ ಮನಸ್ಸು ಹೇಳುತ್ತೆ ಯಾಕ್ರಿ ಸೋಮಂಣನವರೆ ನಾ ಹೇಳೋ ಮಾತು ಸುಳ್ಳೋ ನಿಜವೋ ವಿಚಾರ ಮಾಡಿ ಹೇಳ್ರಿ....

**ಸೋಮಣ್ಣ–** (ನಕ್ಕು) ಶ್ರೀಧರಾ.... ರಾಮು ಎಷ್ಟು ಜಾಣನಪಾ ಬಹಳ ಸುರಿತ ವ್ಯಕ್ತಿ.

**ಶ್ರೀಧರ–** ಅದಕ್ಕಾಗೇ ಇವನನ್ನು ಅಲ್ಲೇದಲ್ಲೆ ಭಾಷಣ ಮಾಡಲಿಕೆ ಕರೆದುಕೊಂಡು ಹೋಗೋದು, ಬಹಾಳ ಜಾಣ.

**ಸೋಮಣ್ಣ–**ಇರಲಿ ರಾಮೂ ನಿನ್ನ ಉದ್ಯೋಗ ಎಲ್ಲಿಯಾದರೂ ಹುಡಿಕಿ ಕೊಂಡಿರುವಿಯಾ ಹೇಗೆ, ನೋಡೂ ಬಿ.ಎ ವರೆಗೆ ಓದಿ ಹಾಗೆ ಮನೆಯಲ್ಲಿ ಕೂತರೆ ಹೇಗೆ ನೀನೇ ನೋಡು.

**ರಾಮು–** ಚಿಕ್ಕಪ್ಪ ಓದೋದೇನು ಓದಿದೆ ನೌಕರಿಗಾಗಿ ಸಾಕಷ್ಟು ಅರ್ಜಿನೂ ಇಟ್ಟೆ ಆದರೆ ಕೇಳಿದಷ್ಟು ಲಂಚ ಕೊಟ್ಟಿದ್ರ ಮಾತ್ರ ಸಿಗತಿತ್ತೇನೋ ಕೆಲಸ ಬಡತನದ ಬಾಳ್ವಿ ಅದಕ್ಕಾಗಿ ಅದರ ಗೋಜಿಗೆ ಹೋಗಲೇ ಇಲ್ಲ.

**ಸೋಮಣ್ಣ–**ಇದೇನು ರಾಮು ನೀ ಹೇಳೋದು ನಿಮ್ಮ ತಂದಿ ಚನ್ನಾಗಿ ದುಡಿದಿದ್ದಾನೆ. ಆತನು ಸತ್ತರೆ ಮಾತ್ರ ದುಡ್ಡು ಮಾತ್ರ ಬೆನ್ನ ಹತ್ತಿರಾಕಿಲ್ಲ ಯಾಕ್ರಿ ಚೇರಮನ್ರೇ....

ರಾಮು– ನಿಜ ಚಿಕ್ಕಪ್ಪಾ ನಮ್ಮಪ್ಪನೇನೋ ಕೂಡಿಟ್ಟದ್ದೂ ಖರೆ. ಆದರೆ ನಮ್ಮ ತಂಗಿ ಲಗ್ನ ಮಾಡಬೇಕಾದರೆ ಅಳಿಯನಿಗೆ ಯಲ್ಲಾ ದುಡ್ಡು ಕೊಟ್ಟರೂ ಕಡಿಮೆ. ಆದದ್ದರಿಂದಲೇ ತನ್ನ ಪ್ರಾಣ ಸಹಿತ ಅವನಿಗೆ ಅರ್ಪಿಸಿದ. ಮುಖ್ಯವಾಗಿ ಚಿಕ್ಕಪ್ಪಾ ಕನ್ಯ ಇದ್ದ ಮನೆಗೆ ಎ.ಬಿ.ಸಿ.ಡಿ ಕಲಿತ ಅಳಿಯ ಸಿಕ್ಕರೆ ಮಾತ್ರ ಎಬ್ಬಿಸಿ ಬಿಡುತ್ತಾನೆ ಹುಗಿದ ಗಂಟನ್ನು. ಅದರಂತೆ ನನ್ನ ಪಾಲಿಗೆ ನಾನೇ ಒಬ್ಬ ಉಳಿದಿದ್ದೇನೆ. ಸಧ್ಯ ನನಗೆ ತಕ್ಕ ನೌಕರಿ ಛಾನ್ಸ ಇಲ್ಲಾಂತ ತಿಳಿದೇ ಯಾರ ಸಿಫಾರಸೂ ಬೇಡಾಂತ ನೈಟ್ ಡ್ಯೂಟಿ ತಕ್ಕೊಂಡು ಮೇನೇಜರ್ ಆಗಿದ್ದೇನೆ. ಹಗಲೆಲ್ಲರ ಜನ...

ಶ್ರೀಧರ– ಅಲ್ಲೋ ರಾಮು ರಾತ್ರಿ ಡ್ಯೂಟಿ ತಕ್ಕೊಂಡು ಮೇನೇಜರ ಆದದ್ದಾದರೂ ಯಾವದಕ್ಕೊ....

ರಾಮು– ಚೇರಮನ್ರೇ ೮ ದಿವ್ಸವಾದರೂ ನೀವು ಕೇಳಿಲ್ಲಾನ್ನು....

ಶ್ರೀಧರ– ಇಲ್ಲ ಬಿಡು ಯಾವದಕ್ಕೋ ನೀನು ಮೇನೇಜರ್ ಆದದ್ದು

ರಾಮು– ತಗಣೀ ಸಾಕೋ ಕೇಂದ್ರಕ್ಕೆ....

ಶ್ರೀಧರ– ತಿಳಿತು ಬಿಡಯ್ಯಾ ಈಗ ತಿಳಿತು (ಅಹಹಹಹಹ ನಕ್ಕು) ರಾತ್ರಿಯಲ್ಲ ತಗಣಿ ಹೆಚ್ಚಾ ಕುಡಿದ ಮೂಲಕ ಅವನ್ನು ಕೊಲ್ಲುತ್ತ ಕೂಡೋ ಉದ್ಯೋಗಂದ್ಯಾ, ಈಗ ತಿಳಿತು ಬಿಡು (ನಗು)

ರಾಮು– ಅಯ್ಯೋ ನಿಮ್ಮ ತಲಿ ಇಷ್ಟು ನಿಮಗೆ ತಿಳಿಯೋದಿಲ್ಲೇನಯ್ಯಾ ತಗಣಿ ಸಾಕೋ ಕೇಂದ್ರ ಅಂದರೆ ಸಿನೇಮಾ ಮಂದಿರ. ಅದರಲ್ಲಿ ಮೇನೇಜರ ಆಗಿದ್ದೇನೆ ತಿಳಿತಾ. ಇದಕ್ಕೂ ಮುಂಚೆ ಇಹಲೋಕದ ನರಕಕ್ಕೆ ಅರ್ಜಿಯಿಟ್ಟಿದ್ದೆ....

ಶ್ರೀಧರ– ಆಹಾ ಏನಯ್ಯಾ ನಿನ ಮಾತು ಒಂದೂ ಅರ್ಥವಾಗೊಲ್ಲಾ

ರಾಮು– ಅದೇ ಇಹಲೋಕದ ನರಕ ಅಂದರೆ ಆಸ್ಪತ್ರಿಯಲ್ಲವೇ? ಅದಕ್ಕೆ ಅರ್ಜಿ ಯಿಟ್ಟಿದ್ದೆ ಲಗೂನ ತಲ್ಯಾಗ ಹೊಳಿತು ಆಸ್ಪತ್ರಿಯಲ್ಲಿ ಕೆಲ್ಸ ಮಾಡೋದಕ್ಕಿಂತ ಪರಲೋಕ ಯಾತ್ರೆಯೇ ಮೇಲೆಂದು ಕೊಟ್ಟ ಅರ್ಜಿ ವಾಪಸ್ ತಂದೆ....

ಶ್ರೀಧರ– ಪರಲೋಕ ಯಾತ್ರೆ ಅಂದರೆ ಚಂದ್ರಲೋಕವೇನಯ್ಯಾ....

ರಾಮು– ಛೇ ಛೇ ಆಸ್ಪತ್ರೆಯಲ್ಲಿ ಕೆಲ್ಸ ಮಾಡೋದಕ್ಕಿಂತ ಸಾಯೋದೇ ಮೇಲೆಂದು ತಿಳಿದು ಕೊಟ್ಟ ಅರ್ಜಿ ವಾಪಸ್ ತಂದೆ.... ಸಧ್ಯ ರಾತ್ರಿ ಕೆಲ್ಸಂತೂ ಸಿಕ್ಕಿದೆ ಇಷ್ಟೇ ಸಾಕು....

**ಶ್ರೀಧರ–** ಛೇ....ಛೇ ಛೇ....ರಾಮು ನಿನ್ನ ಒಗಟಿನ ವಗ್ಗರಣೆಯ ಅರ್ಥವೇ ಆಗೋಲ್ಲ ಇರಲಿ ಸೋಮಣ್ಣನವರೆ ಹೊತ್ತಾತು ಬರ್ತೀವಿ.... (ಎದ್ದು ನಿಲ್ಲುವನು)

**ಸೋಮಣ್ಣ–** ಕೂತುಕೊಳ್ಳೋ ಶ್ರೀಧರಾ ಹಾಗೇಕೆ ಅವಸರ.... ಏನಿಲ್ಲ ನೀನಿಷ್ಟು ಮನಸ್ಸು ಮಾಡಿ ನಮ್ಮ ಶಾಮಣ್ಣಗೆ ಯಾವದಾದರೂ ಉದ್ಯೋಗ ಹಚ್ಚಿದರೆ ಈ ಹಾಳ ಹರಟೆಲ್ಲ ಹೋಗಿ ಬಿಡುತ್ತೆ. ಅದಕಾಗೇ ನಿಮಗೆ ಹೇಳಿಕೊಳ್ಳೋದು....

**ಶ್ರೀಧರ–** ಆಗಲಿ ನೋಡೋಣ.... ಶಾಮು ಸರಿಯಾಗಿ ವಿದ್ಯಾಭ್ಯಾಸ ಮಾಡಿದ್ದರೆ ನೆಟ್ಟಗಿತ್ತು ಅವನಿಗೆ ಈಗ ನೌಕರಿ ಹತ್ತೋದೆ ಕಷ್ಟ.... ಏನೇ ಆಗಲಿ ಪ್ರಯತ್ನ ಮಾಡಿ ವಿಚಾರಸ್ತೀನಿ ನೋಡೋಣ....

**ರಾಮು–** ಅದೇನಯ್ಯಾ ವಿಚಾರಿಸೋದು ವಿದ್ಯೆ ಕಲಿಯದಿದ್ದರೆ ಏನಾತು ಹುಡುಗ ನೀಟಾಗಿದ್ದಾನೆ. ಇವನನ್ನು ನೋಡಿದರೆ ಬಿಡುವಂತೆ ಇಲ್ಲ, ತಕ್ಕೊಂಡೇ ತೀರುತ್ತಾರೆ ಕಡಿಗೆ ಅಲ್ಲಿಗೆ ಕಳ್ಸಿದರಾತು....

**ಶ್ರೀಧರ–** ಎಲ್ಲಿಗಿ ರಾಮು ಕಳ್ಸೋದು....

**ರಾಮು–** ಎಲ್ಲಿಗಿ ಅಂತೀರಲ್ಲರೀ ಏನ ತಲೀರಿ ನಿಮ್ಮದು.... ಅಲ್ಲಾ ನೀವು ಪಂಚಾಯ್ತಿ ಚೇರಮನ ಹ್ಯಾಗಾದ್ರೀ ಅಂತ.... ಆ ನಮ್ಮ ಸರ್ಕಾರ ವಿದ್ಯ ಕಲಿಲಾರದವರಿಗೆ ಒಂದು ಉತ್ತಮ ಕೇಂದ್ರ ತಗೆದಿದ್ದಾರೆ ಗೊತ್ತಿಲ್ಲೇನಯ್ಯಾ ನಿಮಗೆ....

**ಶ್ರೀಧರ–** ಇಲ್ಲಾ, ಅದ್ಯಾವ ಕೇಂದ್ರೋ ಹೊಸಾ ಕೇಂದ್ರ....

**ರಾಮು–** ನಿರುದ್ಯೋಗದ ನಿವಾರಣ ಕೇಂದ್ರವೆಂದು ಹೊಸದಾಗಿ ತೆಗೆದಿದ್ದಾರೆ....

**ಶ್ರೀಧರ–** ಅಂದರೆ....

**ರಾಮು–** ಅಂದರೆ ನಿರುದ್ಯೋಗಿಗಳು ಕೂತು ಕೆಡಬಾರದೆಂದೇ ಮಿಲ್ಟ್ರಿಗೆ ಭರ್ತಿ ಮಾಡಿಕೊಂಡು ಹೆಚ್ಚಾದ ಪಗಾರ ಕೊಡುತ್ತಾರೆ. ತಿನ್ನಲು ಉಂಣಲು ಬೇಕಾದ್ದು ಸಿಗುತ್ತೆ ಕೇಳಿಲ್ಲವೇ.

**ಶ್ರೀಧರ–** ಓಹೋ ಮಿಲ್ಟ್ರಿಗೆ ಶೇರಿಸಬೇಕಂದ್ಯಾ ನಮ್ಮ ಶಾಮುನ. ಹೊಸದಾಗಿ ಬಂದ ಹೆಂಡ್ತಿ ಬಿಟ್ಟು ಹೋಗಬೇಕೆಂದರೆ ಇದೇನೂ ನೆಟ್ಟಗಲ್ಲ ಬಿಡು ಮೇಲಾಗಿ ಸೋಮಣ್ಣನವರ ಇಚ್ಛೆ ಇದ್ದರೆ ಕಳಿಸಿದರೂ ಕಳಿಸಬಹುದು (ಶಾಮು ಬರುತ್ತಾನೆ) ಓಹೋ ಅವನೇ ಬಂದನಲ್ಲಾ ಅವನನ್ನೇ ಕೇಳು.

**ಶಾಮು–** ನಮಸ್ಕಾರ ಚೇರಮನ್ರೇ ನಮಸ್ಕಾರ, ರಾಮು ಏನೋ ನಡ್ಸೀಯಲ್ಲಪ್ಪಾ

ಮತ್ತೇನು ಹೊಸಾ ಸುದ್ದಿ.

**ರಾಮು–** ಹೊಸಾ ಸುದ್ದಿ ಅಂದರೆ ನಿನ್ನದೇ ಹೇಳ್ತೀ ತಡಿ. (ಸೋಮಣ್ಣನ ಕಿವಿಯಲ್ಲಿ ಮಾತಾಡಿ) ಇಲ್ಲಿ ಬಾ ಶಾಮು (ಕೈ ಹಿಡಿದು ಮುಂದೆ ಕರ ತಂದು) ಯಾರೋ ಅಂದರಂತೆ ನಿಮ್ಮ ತಂದಿ ಮುಂದೆ ನಿನ್ನ ಮಗ ಇಸ್ಪೇಟ ಆಡುತ್ತಾನೆ. ಸೂಳೇರ್ನ ಮಾಡುತ್ತಾನೆ. ಕಳವು ಮಾಡುತ್ತಾನೆ. ಇನ್ನು ಏನೇನೋ ಮಾಡ್ತಾನಂತ ಹೇಳಿದರಂತೆ. ಕೇಳಿ ನಿಮ್ಮಪ್ಪನಿಗೆ ಸಿಟ್ಟೇನೋ ಬಂದಿತ್ತು. ಅದೇ ವ್ಯಾಳ್ಯಕ್ಕೆ ನಾ ಬಂದೆ. ಅದಕ್ಕೆಲ್ಲ ಸರಿಯಾಗೇ ಹೇಳಿಬಿಟ್ಟೆ.....

**ಶಾಮು–** ಉಂ ಹೂಂ ಅಪ್ಪಗ ಏನಂತ ಹೇಳಿದ್ಯೋ ರಾಮು.

**ರಾಮು–** ಇದೆಲ್ಲ ಕೇಳಿ ನನಗೇನೋ ಶಿಟ್ಟು ಬಂತು. ನಿಮ್ಮಪ್ಪನಿಗೆ ಸರಿಯಾಗೇ ಹೇಳಿದೆ. ಅವ ಯಾವ ಹೇಳ್ತಾನ್ರೀ ಕರಕೊಂಡು ಬರ್ರಿ ನನ್ನ ಹತ್ತರ. ಇದಕ್ಕೆ ಶಾಮು ಯಾಕೆ ಬೇಕು. ನಾನೇ ಅವರಿಗೆಲ್ಲ ಸರಿಯಾಗಿ ಉತ್ರ ಕೊಡ್ತೀನಿ ಅಂದೆ. ನೋಡು ಶಾಮು. ನಿಮ್ಮಪ್ಪ ಸುಮ್ಮನೇ ಕೂತು ಬಿಟ್ಟ ಮತ್ತೇನಾದ್ರ ಅಂದಿದ್ದರೆ ತಿಳ್ಸಿತಿದ್ದೆ. ಅಲ್ಲಿಗೇನೇ ಬಾಯ ಮುಚ್ಚಿಗೊಂಡ.

**ಶಾಮು–** (ರಾಮುವಿನ ಬೆನ್ನು ಚಪ್ಪರಿಸಿ) ಬೇಷ ಬೇಷ ಸರಿಯಾಗೇ ಹೇಳೀದಿ. ನೋಡು ರಾಮೂ ನಮ್ಮೂರಲ್ಲಿ ಇದೇ ಕಿಳ್ಳಿ ಮಿಳ್ಳಿ ಜನರೇ ಬಹಳಾಗ್ಯಾರ. ನನ್ನ ಮುಂದೆ ಬಂದು ನಿಂತು ಮಾತಾಡಿ ನನ್ನ ಸರಿಗಟ್ಟಿದರೆ ಅಂದೇ ಅವರಿಗಿ ನಾನು ಶರಣಾಗತನಾಗ್ತೀನಿ, ಹೇಡಿ ಸೂಳೇ ಮಕ್ಕಳು. ನಾನೇನಾದ್ರೂS ಇಸ್ಪೇಟು ಕಳಿವಿಲಿ ಆಡ್ತೀನಾ. ಕಳಿವಿಲೇನಾದರೂ ಸೂಳೇರ್ನ ಮಾಡ್ತೀನಾ. ಇನ್ನ ಕಳವು ಏನೋ ಅಕಲ್ಪಿತ. ಕೈಕಟ್ಟಾದಾಗ ಮಾತ್ರ ಮಾಡ್ತೀನಿ. ತಮ್ಮಪ್ಪನ ಗಂಟೇನು ಹೋಗುತ್ತೆ ನೋಡು ರಾಮು.

**ರಾಮು–** ನಾನು ಅದೇ ಅನ್ನೋದು. ಇಷ್ಟೆಲ್ಲ ಮಾಡಬೇಕಾದರೆ ಕಳವೇನ ಬಂದಿದೆ. ಇದೊಂದು ನಮ್ಮ ಉದ್ಯೋಗ್ರೆಪಾ. ಇದಕ್ಕೆ ನೀವೇನು ಮಾಡೋದು.

**ಶಾಮು–** ಅದೇ ಹೇಳ್ತೀನಿ. ಈ ಕಳ್ಳಸೂಳೇಮಕ್ಕಳ ಗಂಟೇನಾದರೂ ಹೋಗುತ್ತೆ ಹೇಗೆ. ನಮಗ ಕೈ ಕಟ್ಟಾಗಿ ಅಡಚಣೀ ತೋರಿದರೆ ಕೊಡೋ ಮುಂಡೇಗಂಡ್ರು ಯಾರಂದೆ. ಇರಲಿ ಬಿಡು ರಾಮು ಅಪ್ಪನೇನು ಬೈದನೇನು.

**ರಾಮು–** ಛೇ ಛೇ ಛೇ ಬಾಯಿ ತಗ್ಗಿಲ್ಲ ಬಿಡು. ಸುಳ್ಳೇ ಯಾಕೆ ಹೇಳೋದು. ಇನ್ನೇನು ಮಗನಿಗಿ ಯಲ್ಯಾದರೂ ನೌಕರಿ ಕೊಡಿಸಿರೆಂದು ಶ್ರೀಧರನಿಗೆ ಹೇಳಿದನು.

**ಶಾಮು–** ಅದಕ್ಕೆ ಶ್ರೀಧರರು ಏನೆಂದರು.

**ರಾಮು–** ನೋಡೋಣ ಅಂದ್ರು, ಅದಕ್ಕೆ ನಾ ಹೇಳಿದೆ. ಇಂಥಾ ಸಂಣ ಸಂಣ ಕೆಲ್ಸಕ್ಕೆ ಪಾಯ್ದೆ ಹಾಕೋದಕ್ಕಿಂತ ಹೆಳೋದಿತ್ತು. ನೀವು ಹೇಳ್ರಿ ಇಲ್ಲಾಂದ್ರ ನಾ ಹೇಳ್ತೀನಿ ಕೇಳ್ರೀ ಅಂದೆ.

**ಶಾಮು–** ಅದಕ್ಕೆ ಅವರೇನಂದ್ರು.

**ರಾಮು–** ಹೇಳಂದ್ಯ ಹೇಳೇ ಬಿಟ್ಟೆ ನೋಡು ಶಾಮೂ. ನಿನ್ನ ಮನಸ್ಸಿಗೆ ಬಂದರೆ ಮಾತ್ರ ಹೂಂ ಅನ್ನು ಇಲ್ಲವಾದರೆ ಇಲ್ಲ.

**ಶಾಮು–** ಅಲ್ಲೋ ರಾಮು. ಇನ್ನೂ ನನ್ನ ಮುಂದೆ ಹೇಳೇ ಇಲ್ಲ. ನಾನೇನ ಹೇಳಲಿ.

**ರಾಮು–** ಹೌದಲ್ಲಾ ನಿನ ಮುಂದೆ ಹೇಳೇಯಿಲ್ಲ. ಸರೆ ನೋಡ ರಾಮು ನಿಮ್ಮಂಥವರು ವಿದ್ಯಾ ಕಲಿತಿದ್ದರೆ ಮಾತ್ರ ಯಾವದಾದ್ರೂ ನೌಕರಿ ಸಿಗುತ್ತಿತ್ತು ಕಾರಣ ನಿನ್ನನ್ನು ಸಧ್ಯಮಿಲ್ಟ್ರಿಗೆ ಕಳಿಸಬೇಕೆಂದು ಆಲೋಚಿಸಿದೆವು. ನಿನ್ನ ಮನಸ್ಸು ಇದ್ದರೆ ಮಾತ್ರ ಹೂಂ ಅನ್ನು ಇಲ್ಲವಾದರೆ ಇಲ್ಲಾನ್ನು.

**ಶಾಮು–** ಏನೂ ನನ್ನನ್ನು ಮಿಲ್ಟ್ರಿಗೆ ಸೇರಿಸಬೇಕೆನ್ನುವಿಯಾ ರಾಮು. ಇರಲಿ ಅಲ್ಲಿ ಮಾಡೋ ಉದ್ಯೋಗಾದ್ರೂ ಏನು?

**ರಾಮು–** ಅಲ್ಲಿ ಮಾತ್ರ ಆರಾಮು ಉಣ್ಣೋದು ತಿನ್ನೋದು ಡ್ರಿಲ್ ಮಾಡೋದು ಪ್ರಸಂಗ ಬಂದರೆ ಮಾತ್ರ ಯುದ್ಧ ಮಾಡೋದು. ಸಮಯ ಒದಗಿ ಬಂದರೆ ಮಾತ್ರ ಸಾಯೋದು ಇಷ್ಟೇ ತಿಳಿತಾ.

**ಶ್ಯಾಮು–** ತಿಳಿತು ಬಿಡು ರಾಮೂ ಈ ಕೆಲಸಕ್ಕೆ ಆಗೋದಿಲ್ಲ ಬಿಡು ನನ್ನಿಂದ ಬೇರೆ ಯಾವದಾದರೂ ಇದ್ದರೆ ಹೇಳು ಯುದ್ಧ ಭೂಮಿಗೆ ಮಾತ್ರ ಹೋಗಲಾರೆ.

**ರಾಮು–** ನಿಜ ನಿಜ ಹ್ಯಾಗೋದಿಯಪ್ಪಾ ಅದರಲ್ಲಿ ಹೊಸದಾಗಿ ಕಾಲಿಟ್ಟ ಹೆಂಡತಿ ಬಿಟ್ಟು ಇರಲಿ ಹೋಗಲಿ ಬಿಡು.... ಆ .... ಹಾಗಾದರೆ ಹೀಗೆ ಮಾಡು ನವದಂಪತಿಗಳ ಸ್ವಾಗತ ಗೃಹಕ್ಕಾದರೂ ಹೋಗುವೆಯಾ ಪ್ರತಿ ದಿವಸ

ಹೊಸ ಹೊಸ ಜನಗಳ ದರ್ಶನ ಆಗುತ್ತೆ ಏನಂದಿ ಹೋಗುವೆಯಾ ಅಲ್ಲಿಗಾದರೂ

**ಶ್ಯಾಮು–** ಆ ಏನಂದಿ ರಾಮೂ ನಿನ್ನ ಮಾತಿನ ಅರ್ಥವೇ ಆಗೊಲ್ಲ ನವದಂಪತಿಗಳ ಸ್ವಾಗತ ಗೃಹ ಅಂದರೆ ಯಾವದಯ್ಯಾ ಆ ಗ್ರಹ

**ರಾಮು–** ಅಯ್ಯೋ ಹುಚ್ಚಾ ಪ್ರತಿ ದಿವಸ ಹತ್ತೆಂಟುಸಾರೆ ನೀನೇ ಹೋಗಿ ಹಣ ಕೊಟ್ಟು ಬರ್ತೀಯಲ್ಲೋ ಅಂದರೆ ಕಾಫಿಕ್ಲಬ್ಬೋ. ನೋಡು ಅಲ್ಲಿ ಸರಿಯಾದ ಪಗಾರ ಶಿಗುತ್ತೆ ಸರಿಯಾದ ಥಿಂಡಿ ಸಿಗುತ್ತೆ ಊಟಾ ಸಿಗುತ್ತೆ ಪಗಾರೆಲ್ಲ ಮನಿಗಿ ಕಳಿಸಿ ಬಿಡು. ಏನಂದಿ ಇದಾದರೂ ಮನಸ್ಸಿಗೆ ಬಂತೇ....

**ಶ್ಯಾಮು–** ಹೌದು ರಾಮೂ ಹೊಟ್ಟಲ್ಲಿನಲ್ಲಿ ನನಗೆ ಏನು ಮಾಡಲಿಕ್ಕೆ ಬರುತ್ತೆ ಸರಿಯಾದ ಥಿಂಡಿ ಸಾಮಾನಂತೂ ಮಾಡಲಿಕ್ಕೆ ಬರೋದೇ ಇಲ್ಲ.....

**ರಾಮು–** ಮಾಡೋದಕ್ಕೆ ಬರದಿದ್ರ ಯೇನಾತು ತಿನ್ನೊದ್ಕಂತೂ ಬರುತ್ತೆ ತಪ್ಪೇನಿದೆ ಸಪ್ಲೈ ಮಾಡಬೇಕು. ಇದೊಂದು ಜನತಾ ಸೇವೆಯೆಂದು ತಿಳಿದು. ಚನ್ನಾಗಿ ಓದಿದವರು ಸಹ ಹೋಟಲ್ಲಿಗೆ ಬಂದು ಸೇರುತ್ತಾರೆ. ಗೊತ್ತಿಲ್ಲವೇ ನಿನಗೆ.....

**ಶ್ಯಾಮು–** ಇದೇನು ರಾಮು ಓದಿದವರು ಹೋಟಲ್ಲಿಗೆ ದುಡಿಯಲಿಕ್ಕೆ ಬರುತ್ತಾರೆಯೇ....

**ರಾಮು–** ಹೌದಯ್ಯಾ ನೀನ್ಯಾಕೆ ಆಶ್ಚರ್ಯ ಪಡುತ್ತೀ ಜನತಾ ಸೇವೆಯೇ ಜನಾರ್ಧನ ಸೇವೆಯೆಂದು ತಿಳಿದು ಬರುತ್ತಾರೆ ಅದಕ್ಕಾಗೇ

**ಶ್ಯಾಮು–** ಅಂತೂ ಹೋಟಲ್ಲಿಗೆ ಸೇರಬೇಕೆಂದಿರುವಿಯಾ ರಾಮು? ಆಗಲಿ ನೋಡೋಣ ಮನೆಯಲ್ಲಿ ವಿಚಾರಿಸಿ ಆಮೇಲೆ ಹೇಳುತ್ತೇನೆ.

**ರಾಮು–** ಹೌದು ಹೌದು ಗೌರ್ನಮೆಂಟ ಸನದು ಪಡೆದ ಮೇಲೆ ಮುಂದೆ ನೌಕರಿ ಆಲೋಚನಾ ಹೌದಲ್ಲೋ ಸರೆ ಕೇಳಿ ನೋಡು

**ಶ್ರೀಧರ–** ಕಡಿಗೆ ಯಾವ ನಿರ್ಧಾರವಾಯಿತಯ್ಯಾ.....

**ರಾಮು–** ಇನ್ನೂ ಯಾವ ನಿರ್ಧಾರವಿಲ್ಲ ಇವರಿಗೆ ತಕ್ಕ ಹಾಗೆ ಎರಡು ಉದ್ಯೋಗ ತಿಳಿಸಿದ್ದೇನೆ. ಆಲೋಚಿಸಿ ಹೇಳುತ್ತಾನಂತೆ ಆಗಲಿ ಆಮೇಲೆ ಹೇಳಲಿ ತಪ್ಪೇನು.

**ಸೋಮಣ್ಣ–** ನೋಡು ಶ್ಯಾಮು, ರಾಮು ಹೇಳಿದಂತೆ ಯಾವದಕ್ಕಾದರೂ ಸೇರುವದೇ ಮೇಲು. ನಿರುದ್ಯೋಗ ಬೇಸಲ್ಲಾ, ಹಾ ಹೊಟ್ಟಿ ಮುರಿತ್ತ (ಮಲಗುವನು)

**ಶ್ರೀಧರ–** ಸೋಮಣ್ಣನವರೆ ಸ್ವಲ್ಪ ವಿಶ್ರಾಂತಿ ತಗೊಳ್ಳಿ ನಮಸ್ಕಾರ ಬರ್ತೀವಿ.....

**ಶ್ಯಾಮು–** ಬರ್ತೀನಿ ಶಾಮೂ ಆಲೋಚಿಸಿ ನೋಡು ಮತ್ತೆ ನಾಳೆ ಕೂಡೋಣ. ನಮಸ್ಕಾರ ಚಿಕ್ಕಪ್ಪಾ ಬರ್ತೀನಿ (ಹೋಗುವರು.)

## ಪ್ರವೇಶ ೨

## ರಸ್ತೆ

(ಗ್ರಾಮ ಸೇವಕನಾದ ವಾಸುದೇವನು ಕೈಯಲ್ಲಿ ಪೇಪರ ಹಿಡಿದುಕೊಂಡು ಬರುತ್ತಾನೆ.)

**ವಾಸು–** (ಕೈಯಲ್ಲಿ ಪೇಪರ ನೋಡುತ್ತ ಬರಬೇಕು) ವಿದ್ಯೆ ಕಲಿತರೂ ಪಶ್ಚಾತ್ತಾಪ ಪಡುವ ವ್ಯಕ್ತಿ ಅಂದರೆ ಶಾಲಾಧ್ಯಾಪಕ ನಿಜ. ಅದಕ್ಕಾಗೇ ಮಾಸ್ತರ್ ಕೆಲ್ಸಕ್ಕೆ ನಾ ಕೈ ಹಾಕಲಿಲ್ಲ. ಅಂತು ಇಂತು ಸರ್ಕಾರಿ ನೌಕರಿ ಮೇಲೆ ಈ ಊರಿಗೆ ಬಂದು ೨ ವರ್ಷ ಗತಿಸಿದವು.... ಮೊದಲಿಗೆ ಈ ಊರ ಜನಾ ನೋಡಿ ಹೆದರಿದ್ದೆ ಇಲ್ಲಿ ಹ್ಯಾಗ್ರೆಪಾ ಕಾಲ ಕಳಿಯೋದು ಅಂತ ತಿಳಿದಿದ್ದೆ. ಆಮೇಲೆ ಬರತಾ ಬರತಾ ಯಲ್ಲಾ ಸರಿ ಹೋತು. ಮೇಲಾಗಿ ಯಲ್ಲಾ ರೈತ ಜನಗಳು ನನ್ನಲ್ಲಿ ಬರಲೇಬೇಕು. ಸರ್ಕಾರ ನನ್ನ ಉದ್ಯೋಗಕ್ಕೆ ಎಂಥಾ ಮುದ್ದು ಹೆಸರಿಟ್ಟಿದೆ ಅಹಹಹ "ಗ್ರಾಮಸೇವಕ" ಅಂದರೆ ಗ್ರಾಮದ ಶೇವೆ ಮಾಡತಕ್ಕ ವ್ಯಕ್ತಿ.... ಅಂತ ಹೆಸರೇನೋ ಇಟ್ಟಿದೆ.... ಆದರೆ ನಾನು ಮಾತ್ರ ಗ್ರಾಮದ ಜನರಿಂದಲೇ ಶೇವೆ ತಕ್ಕೊಳ್ಳುತ್ತಿದ್ದೇನೆ.... ಈ ಹಳ್ಳಿ ಮುಂಡೇ ಗಂಡರು ಬಹಳ ದಡ್ಡ ಜನಾ ಹಾಗೆ ಇರೋದೇ ಒಳ್ಳೆಯದು ಅಂದರೇನೇ ನಮ್ಮಂಥವರ ಆಟ. ಅದರಲ್ಲಿ ಈ ಗ್ರಾಮದ ಚೇರಮನ್ನನಂತೂ ವಿದ್ಯಾ ಇಲ್ಲದ ಪಶು. ಅವನೇನೋ ಶ್ರೀಮಂತ, ಯಾರಿಗಾಗಿ ನನಗಾಗಿ. ಶ್ರೀಮಂತರೇ ಅಂದರೆ ಸಾಕು ಕೈ ಜೋಡಿಸಿಕೊಂಡೇ ಬರುತ್ತಾನೆ. ಪಾಪ ಅವನಿಗೊಂದು ಹೆಂಣಿನ ಹುಚ್ಚು, ಮಾಡಲಿ ಮಾಡಲಿ ಬೇಕಾದಷ್ಟು ಧನವಿದೆ. ಬೇಕಾದದ್ದು ಮಾಡಲಿ ಅವನು ಮಾತ್ರ ನಾನು ಕೇಳಿದ ವ್ಯಾಳ್ಯಕ್ಕೆ ಧನ ಹಿಡಿದೇ ಇರುತ್ತಾನೆ. ಅಂದ ಮೇಲೆ ನನಗೇಕೆ ಅವನ ವ್ಯಸನ. ಮುಖ್ಯವಾಗಿ ಈ ಹಳ್ಳಿ ಸಿಕ್ಕದ್ದು ಬಹು ಪುಣ್ಯ ಆದರೆ ಈ ಗ್ರಾಮದ ಕನ್ಯೆ ಲಗ್ನವಾದದ್ದು ಮಾತ್ರ ಮಹಪಾಪವೆಂದು ಹೇಳಬೇಕಾಗಿದೆ ವರದಕ್ಷಿಣೆಗಳ ಆಶೆಗಾಗಿ ಮಾಡಿಕೊಳ್ಳುವ ಕನ್ಯೆಗಳೆಲ್ಲ ಹೀಗೆ ಇರಬಹುದೂ ಅನಿಸಿದೆ. ಈ

ಪಿಶಾಚಿ ನನಗಾಗಿ ಎಷ್ಟು ದಿವಸದಿಂದ ಕಾದು ಕೂತಿತ್ತೋ ದೇವರೇ ಬಲ್ಲ. ಮನೆಗೆ ಹೋದೆನೆಂದರೆ ಭೂತವಿದ್ದ ಮನೆ ಹೊಕ್ಕಂತಾಗುತ್ತಿದೆ ಇದೊಂದು ನನ್ನ ಕರ್ಮ.

ಶ್ರೀನಿವಾಸ– ನಿನ್ನ ಕರ್ಮ ಅಲ್ಲಯ್ಯಾ ನನ್ನ ಕರ್ಮ. ನಿಮ್ಮನ್ನು ಎಲ್ಲೆಂತ ಹುಡುಕಲಿ ಮನಿಗೆ ಹೋಗಿ ನೋಡಿದೆ ಹೋಟಲ್ಲಿಗಿ ಹೋಗಿ ನೋಡಿದೆ ಆಫೀಸಿಗೆ ಹೋಗಿ ನೋಡಿದೆ ಯಲ್ಲಿಯೂ ಇಲ್ಲದ ನೀವು ಈ ರಸ್ತೆ ಮೇಲೆ ನಿಂತು ನನ್ನ ಕರ್ಮ ಅಂತ ಹೇಳೋದಕಿಂತ ೨ ತಾಸು ಹುಡ್ಕಿದ್ದು ನಿನ್ನ ಕರ್ಮಾಂತ ಹೇಳೊದು ಮೇಲು.....

ವಾಸು– ಯಾಕ್ರೀ ಶ್ರೀನಿವಾಸರೆ ಮತ್ತೇನು ಸುದ್ದಿ. ಯಾವದಾದರೂ ಗಿರಾಕಿ ಬಂದಿದೆಯೇನೋ ಪಾಪ.

ಶ್ರೀನಿವಾಸ– ಹೂನ್ರೀ ಅವಕಾಗೆ ನಿಮ್ಮನ್ನು ಹುಡುಕಿದ್ದು. (ಹಿಂದೆ ಮುಂದೆ ನೋಡಿ) ನಿಮ್ಮ ಲಾಭಕ್ಕಾಗೇ ನಿಮ್ಮನ್ನು ಹುಡ್ಕಿದ್ದು. ಅವ ಒಕ್ಕಲಿಗರ ಸಂಗಪ್ಪನಿಗೆ ನಿಮ್ಮ ಪರಿಚಯವಿಲ್ಲದಂತೆ ಅವನಿಗೆ ಬಾವಿ ತೆಗೆಸಲಿಕ್ಕೆ ದುಡ್ಡು ಬೇಕಂತೆ ಅದಕಾಗೇ ನಿಮಗೆ ತಿಳಿಸಬೇಕೆಂದು ಹುಡ್ಕಿದ್ದು.

ವಾಸು– ಓಹೋ ಹೀಗೋ ಬೇಡೆನ್ನುವವರಾರು ಕೊಡಿಸರಿ ಅವನಿಂದ ಅರ್ಜಿ. ಆದರೆ ಎಷ್ಟು ರೂಪಾಯಿ ಬೇಕಂತೆ....(ರಾಮು ಅವಸರದಿಂದ ಬಂದು ಇವರನ್ನು ನೋಡಿ ಹಿಂದೆ ಸರಿದು ನಿಲ್ಲುತ್ತಾನೆ).....

ಶ್ರೀನಿವಾಸ– ಅವಗ ನೋಡ್ರಿ ೩ ಸಾವಿರ ಬೇಕಂತೆ

ವಾಸು– ಅಂದರೆ.... ನಮಗೆ....

ಶ್ರೀನಿವಾಸ– (ಅತ್ತಿತ್ತನೋಡಿ) ಹೂನಯ್ಯಾ ನಮಗೂ ನಿಮಗೂ ಕೂಡೇ ಶಿಗುತ್ತೆ... ಅದರಾಗ ಅವಗ ದಕ್ಕೋದಂದ್ರೆ ೧॥ ಸಾವಿರ ತಿಳಿತ್ರ್ಯಾ.... ಇಷ್ಟೆಲ್ಲ ಅವಗ ಸರಿಯಾಗಿ ಹೇಳೇ ಬಿಟ್ಟೀನಿ.... ನೋಡು ವಾಸು ನನ್ನ ಕೆಲ್ಸದಾಗಂತೂ ಬಿಲ್ಲಿ ಪ್ರಾಪ್ತಿ ಇಲ್ಲ ನಿನಗಾದರೂ ಗೊತ್ತೇ ಇದೆ. ನಿನ್ನಿಂದಲೇ ನಾನು ನಾಲ್ಕು ದುಡ್ಡು ಕಾಣೋದು. ಅದಿರ್ಲಿ ವಾಸು ಈ ಹಳ್ಳಿಯಲ್ಲಿ ನನ್ನ ಕೆಲಸಕ್ಕೆ ಬೆಲಿ ಇಲ್ಲದೆ ಬೇಸರವಾಗಿದೆ.

ವಾಸು– ಅಲ್ಲರೀ ಎಷ್ಟೋ ಜನರು ಇದೇ ಕೆಲಸಕ್ಕಾಗಿ ಅಡ್ಡಾಡಿ ಬೇಸತ್ತರು. ನೀವು ಕೈಗೆ ಕೆಲಸ ಸಿಕ್ಕರೂ ಬೇಸರವೆಂದು ಹೇಳುತ್ತೀರಲ್ಲಾ ಕೈಗೆ ಬಂದ ತುತ್ತು ಕಳಕೊಂಡು ಮಾಡುವದಾದರೂ ಏನಿದೆ ಹೇಳಿ.

**ಶ್ರೀನಿವಾಸ–** ಅದೇನೋ ಖರೇ ಆದರೆ ಏನು ಮಾಡೋದು ವಾಸು ನೌಕರೀ ಪೈಕಿ ಇಂಥಾ ಕೆಟ್ಟ ನೌಕರಿ ಮತ್ಯಾವದೂ ಕಾಣೆ. ಮನಿ ಬಿಟ್ಟು ಹೊರಗೆ ಬಂದು ತಿರುಗಿ ಮನಿ ಸೇರುವದರೊಳಗಾಗಿ ಕೆಲವರಿಂದ ಛೀ ಹಾಕಿಸಿಕೊಳ್ಳದೆ ಮನಿ ಮುಟ್ಟುವಂತಿಲ್ಲ ಅದಕ್ಕಾಗೇ ಬೇಸರ ಇಷ್ಟೇ

**ವಾಸು–** ಆ ಏನಂದೀ ಜನಗಳಿಂದ ಛೀ ಹಾಕಿಸಿಕೊಳ್ಳುವ ಕೆಲಸವೇನಿದೆ ನಮ್ಮದು.

**ಶ್ರೀನಿವಾಸ–** ಏನೂ ಇಲ್ಲ ಇಷ್ಟೇ, ಆರಾಮ ಇದ್ದೀರಾ ಎಂದು ಕೇಳಿದ ಕೂಡಲೇ ಜಡ್ಡಾಗಿದ್ದರೆ ನೆಟ್ಟಗಿತ್ತೇನಪ್ಪಾ ಮಹರಾಯಾ ಮುಂಜಾನೆದ್ದು ಬೇಸ ಗಂಟ ಬಿದ್ದೆಲ್ಲಾ ಅಂತಾ ಬೈಯುತ್ತಾರೆ. ತಿರುಗಿ ನಾನೇನಾದರೂ ಮಾತಾಡಿದರೆ ಹೆಚ್ಚಾಗಿ ಬೈಯುತ್ತಾರೆ. ಅದಕ್ಕಾಗೇ ಬೇಸರವಾಗಿದೆ ೨–೩ ದಿವಸ ಡ್ಯೂಟಿಗೆ ಹೋಗೇ ಇಲ್ಲ. ಏನು ಮಾಡಲಿ ವಾಸು.... (ರಾಮನು ಬರುತ್ತಾನೆ.)

**ರಾಮು–** ಆರಾಮು ಇದ್ದಿರಾ ಅಲ್ಲಲ್ಲ ಇದು ನೀವು ಕೇಳೋ ಮಾತು ಮರೆತು ನಾನೇ ಕೇಳಿದೆ ತಪ್ಪಾತು ನಮಸ್ಕಾರರೀ ಶ್ರೀನಿವಾಸರೆ ನಮಸ್ಕಾರ (ವಾಸು ತಿರುಗಿ ನಿಲ್ಲುವನು)

**ಶ್ರೀನಿವಾಸ–** ನಮಸ್ಕಾರ ಬಾರಪ್ಪಾ ರಾಮಣ್ಣಾ ನಮ್ಮ ಮಾತಂದರೆ ಈ ಊರಲ್ಲಿ ಹುಡುಗಾಟಿಕೆಯಾಗಿವೆ. ಹುಡುಗರು ಸಹ ನನ್ನನ್ನು ಹೀಗೆ ಕೇಳುತ್ತವೆ ಅಂದ ಮೇಲೆ ನೀವು ಕೇಳುವದೇನು ಮಹಾ.......

**ರಾಮು–** (ವಾಸುವಿನ ಕಡೆ ತೋರಿಸಿ) ಯಾಕೊ ಇಬ್ಬರೂ ಕೂಡಿರಲ್ಲಾ ಯಾವದಾದರೊಂದು ಹೊಸಾ ಗಿರಾಕಿ ಹುಡ್ಕಿರೇನು? ಇರಬಹುದು ಇರಬಹುದು ಮೇಲಿಂದ ಮೇಲೆ ಹೊಸ ಛಾನ್ಸ ಇದ್ದೇ ಇರುತ್ತವೆ ನಿಮಗೆ. ನಿಜವಲ್ಲವೇ?

**ಶ್ರೀನಿವಾಸ–** ಹೊಸ ಛಾನ್ಸ ಯೇನಿದೆ ರಾಮಣ್ಣಾ ಅವರನ್ನೇ ಕೇಳು ನಮ್ಮದೇನು ಏನ್ರಾ್ಯ ಅರಾಮ ಇದ್ರ್ಯಾ ಅನ್ನೋಪದ ಕಲಿತವರು ಮತ್ಯಾವದೂ ನಮಗೆ ಗೊತ್ತೇ ಇರೋದಿಲ್ಲ ಯಾಕ್ರಿ (ವಾಸುನ ಕಡೆ)

**ವಾಸು–** (ಮೆಲ್ಲಗೆ ಹೇಳುತ್ತಾನೆ) ಶ್ರೀನಿವಾಸ ಇವರೇ ನಮ್ಮ ಮಾವಂದಿರು.

**ಶ್ರೀನಿವಾಸ–** ಮಾವಂದಿರು? ಹ್ಯಾಗ್ರೆಪ್ಪಾ ಇವರು ನಿಮಗೆ ಮಾವ ಆದದ್ದು.

ರಾಮು– ಶ್ರೀನಿವಾಸರೇ ನನ್ನ ಕೇಳ್ರೀ ನಾ ಹೇಳ್ತಿನಿ. ನಮ್ಮ ತಂಗೀನ ಚಿಂತಾಲ ಪರಡ್ಯಾಗ ಕೂಡ್ಸಿ ಮತ್ತೊಂದರಲ್ಲಿ ರೂಪಾಯಿಗಳು ಹಾಕಿ ಸರಿಯಾಗಿ ಕಾಣಿ ಬರದ ಹಾಗೆ ತೂಕಾ ಮಾಡಿ ಎರಡೂ ಪರಡಿ ಎತ್ತಿ ಚಿಂತಾಲ ಸಹಿತ ನಮ್ಮಪ್ಪ ಇವನಿಗಿ ಕೊಟ್ಟಾನ್ರೀ, ಅದಕ್ಕಾಗೆ ಇವಗ ನಾ ಮಾವಾಗೀನಿ ತಿಳಿತ್ರ್ಯಾ

ಶ್ರೀನಿವಾಸ– ಓಹೋ ಹೀಗೋ ಇವರ ಕಟುಂಬದ ಅಣ್ಣನವರು ನೀವೇ ಏನು?

ರಾಮು– ಹೌದ್ರಿ ನಾವೇ ಇವರ ಅಂಣಂದಿರು – ಅಲ್ಲಲ್ಲ ಇವರ ಕುಟುಂಬದ ಅಂಣಂದಿರು ನಿಮಗ ಗೊತ್ತೇ ಇಲ್ಲೇನ್ರಿ.

ಶ್ರೀನಿವಾಸ– ಗೊತ್ತಿದ್ದಿಲ್ಲ ಬಿಡ್ರೀ. ಈಗ ತಿಳೀತು.

ರಾಮು– ಇರಲಿ. ನೀವಿಬ್ಬರೂ ವತ್ತಟ್ಟಿಗೆ ಕೂಡೀರಲ್ಲಾ ಇದೇ ನನಗ ಅನುಮಾನ. ನಿಮ್ಮನ್ನು ನೋಡಿದರೆ ಏನೇನೋ ಆಗತ್ರೀ. ದಯಮಾಡಿ ಕೈಮುಗಿದು ಹೇಳ್ತೀನಿ. ನೀವಿಬ್ಬರು ಮಾತ್ರ ಯಾರಿಲ್ಲದ ಜಾಗದಲ್ಲಿ ಕೂಡಬ್ಯಾಡ್ರಿ ಅಂದೆ. ಕೂಡಿದ್ದೆ ಆದರೆ ಯಾರ ಮೇಲೆ ಹೋಗುತ್ತೆಯೇನೊ ನಿಮ್ಮ ಅಣ್ವಸ್ತ್ರ ಪ್ರಯೋಗ, ಅವನ ನಶೀಬ ಮಾತ್ರ ಕೆಟ್ಟದೆಂದು ತಿಳಿಯಬೇಕು....

ಶ್ರೀನಿವಾಸ– ರಾಮಂಣಾ ಹಾಗೆಲ್ಲ ಮಾತಾಡಬೇಡ ಅಂಥಾ ಕೆಟ್ಟವರು ನಾವಲ್ಲ....

ರಾಮು– ಛೇ ಛೇ ಛೇ ನೀವು ಕೆಟ್ಟವರೆಂದು ಹೇಳಲಿಲ್ಲಯ್ಯ. ನಿಮ್ಮ ದೃಷ್ಟಿ ಯಾವನ ಮೇಲೆ ಬೀಳುವದೋ ಅವನ ಹಣೆ ಬರಹ ಮಾತ್ರ ಕೆಟ್ಟಂದೆ. ನೀವೇನೋ ಪುಣ್ಯಾತ್ಮರು ಬಿದ್ದವರನ್ನು ಯತ್ತಿ ಹಿಡಿದು ಕತ್ತು ಹಿಚಿಕಿ ಹಾಕಿದರೂ ಯಾರ ಮುಂದೆ ಹೇಳದಂತೆ ವಚನ ತಕ್ಕೊಳ್ಳುವವರು. ಪಾಪ ನಿಮ್ಮಂಥವರಿಗೆ ಕೆಟ್ಟವರೆಂದು ಅನ್ನಬಹುದೇ ಛೇ ಛೇ ಹಾಗೇನೂ ತಿಳಕೋ ಬ್ಯಾಡಿ..... (ದೇಶಾವರಿ ನಗು ನಗುವನು)

ಶ್ರೀನಿವಾಸ– ವಾಸೂ... ನಿನ್ನ ಮಾವನ ಹುಡುಗಾಟಿಕೆ ಬಹಳ ಆತಲ್ಲಾಂದೇ....

ರಾಮು– ಹುಡುಗಾಟಿಕೆ... ನಿಮ್ಮೊಡನೆ...ಛೇ ಛೇ ಅಲ್ಲ ಶ್ರೀನಿವಾಸರೆ ನಿಮ್ಮ ಹಿತಕ್ಕಾಗೇ ಹೇಳೋ ಮಾತು ನನ್ನದು ಯಾಕಂದರೆ ನಮ್ಮೂರ ಜನರು ಬಹಳ ದಡ್ಡರಾದರೂ ಸಧ್ಯ ನಿಮ್ಮಿಬ್ಬರ ಸಮ್ಮಂಥ ಏನೇನು ಮಾತಾಡುತ್ತಾರೆ ಗೊತ್ತೇ.....

ಶ್ರೀನಿವಾಸ– (ಆಶ್ಚರ್ಯದಿಂದ) ನಮ್ಮಿಬ್ಬರ ಸಮ್ಮಂದ ಈ ಊರ ಜನರು... ಏನಂತ ಮಾತಾಡ್ತಾರೋ ರಾಮಣ್ಣಾ....'

ರಾಮು— ಈಗಿನ ಸರ್ಕಾರ ದುಡ್ಡು ಹೆಚ್ಚಾಗಿ ಇವರಿಬ್ಬರಿಗೆ ಪಗಾರ ಕೊಡುತ್ತೆ.... ಇವರಿಂದ ನಮಗೇನೂ ಲಾಭ ಇಲ್ಲಾಂತ ಒಬ್ಬವ. ಆದ್ಯಾಕ್ರೀ ನಮ್ಮೂರ ಮಂದಿ ಚರ್ಮ ಸುಲಿಲಿಕ್ಕೆ ಕಳ್ಸ್ಯಾರ್ರೀ ಅಂತ ಇನ್ನೊಬ್ಬಾತ.... ಯಾಕ್ರೀ ಬೇಕಾದಷ್ಟು ಲಂಚಾ ತಿಂದರೂ ಚಿಂತೆ ಇಲ್ಲ ತಿಂಗಳಿಗಿ ಆಗೋ ಕೆಲಸ ವರ್ಷಕ್ಕಾದರೂ ಮಾಡಿ ಕೊಡ್ತಾರಲ್ಲಾಂತ ಮತ್ತೊಬ್ಬಾತ... ಈ ರೀತಿ ಮಾತಾಡೋ ಮಾತು. ನಿಮ್ಮ ಕಿವಿ ಕೇಳಿದರೂ ಕೇಳದಂತೆ ಇರಬಹುದು ಅದಕ್ಕಾಗೇ ನಾನು ಹೇಳಿದ್ದು....ಪಾಪ....ನೀವು ಕತ್ತಿ ದುಡಿದಂತೆ ದುಡಿದು ನೆತ್ತಿಗಿ ಬಿಸಿಲು ಬಡ್ಸಿಕೊಂಡು ಸತಗೋಂತ ಕೆಲ್ಸಮಾಡಿ ಕೊಟ್ಟರೂ ಈ ಮುಂಡೇ ಗಂಡ್ರು ಪದೇ ಪದೇ ತಾವು ಕೊಟ್ಟ ಲಂಚದ ಸುದ್ದಿಯೇ ಹೇಳ್ತಾರಲ್ಲಾ ಇಂಥವರಿಗೆ ಏನ ಮಾಡಬೇಕೂ ಅಂತೀನಿ....

ಶ್ರೀನಿವಾಸ—ನೋಡು ರಾಮಂಣಾ ಹ್ಯಾಗಿದ್ರೂ ಜನರು ಬಾಯಿ ಕಟ್ಟೋದು ಆಗೋದಿಲ್ಲ... ಏನೆ ಆಗಲಿ ಹಳ್ಳಿಂಯುಲ್ಲಿರಬೇಕಾದರೆ ಹುಷರಾಗಿರಬೇಕನ್ನು.....

ರಾಮು— ಹಾ ನಾನು ಅದನ್ನೇ ಹೇಳೋದು (ರಾಮುವಿನ ಹಿಂದೆ ನಿರ್ಮಲಾದೇವಿ ಬಂದು ವಾಸುವಿನ ಕಡೆ ಸಿಟ್ಟಿನಿಂದ ನೋಡಿ ಹಲ್ಲು ಕಡಿಯುತ್ತಾಳೆ....)

ನಿರ್ಮಲ— ಅಯ್ಯಯ್ಯ ನನ ಶಿವನ... ಎಲ್ಲೆಲ್ಲೆಂತ ಹುಡುಕಲೆ ನಿನ್ನ. ನೆತ್ತಿ ಮೇಲೆ ಸೂರ್ಯ ಬಂದರೂ ಮನಿಗಿ ಬರುವದಾಗಲಿಲ್ಲ ನಿನಗ. ಈ ಬೀದ್ಯಾಗ ನಿಂತು ಹರಟೀ ಹೊಡದರ ಬರುವದಾದರೂ ಏನಂದೆ. ಮಸ್ಯಾಗ ಕೂಡೋದೇ ಆಗೊದಿಲ್ಲ ಈ ಮಹರಾಯಗ... (ರಾಮು ಹಿಂದಕ್ಕೆ ಸರಿದು)....

ರಾಮು— ಸುರುವಾತ್ರೆಪಾ ನನ್ನ ತಂಗಿ ಭಾಷಣ ಇನ್ನ ನಾ ಇಲ್ಲಿರಬಾರದು (ಹೋಗುತ್ತಾನೆ)

ಶ್ರೀನಿವಾಸ— ಇಲ್ಲಿತನಕ ಬಂದ ಬಿಟ್ರಲ್ಲೋ ವಾಸು ನಿಮ್ಮ ರಾಣಿ ಸಾಹೇಬರು. ಲಗು ಹೋಗೋ ಮನಿಗಿ....

ನಿರ್ಮಲ— ಅಲ್ಲರೀ ನಾನು ಯಮ್ಮಿ ಕೆಲ್ಸದಲ್ಲಿರೋದು ನೋಡೀ ನೋಡಿ ಇವರು ಮನಿ ಬಿಟ್ಟು ಬರ್ತಾರಲ್ಲಾ ನೀವಾದ್ರೂ ಹೇಳ್ರೀ. ಸ್ವಲ್ಪ ಒಲಿಮುಂದೆ ಕೂತು ವಲಿಚಾಚಿದ್ರೆ ಗಂಟೇನಾದ್ರೂ ಹೋಗುತಿತ್ತೆ ಇವರದು.... ಒಲಿಮ್ಯಾಲೆ ಬ್ಯಾಳಿಗಿಟ್ಟೀನಿ ಅಲ್ಲೇ ಅದು ನೆನಿಗುದಿಗ್ಯೆ ಬಿದ್ದಿದೆ. ಬಾ ಅದನ್ನೇ ತಿನ್ಸತೀನಿ ಅಂದರೆ ತಾನೇ ತಿಳಿಯುತ್ತೆ. ನಾನೆಂಥವಳು (ವಾಸು ಸೊನ್ನೆಯಿಂದ ಶ್ರೀನಿವಾಸಗೆ ಹೇಳುತ್ತಾನೆ.)

ಶ್ರೀನಿವಾಸ– ಇರಲಿ ಬಿಡಮ್ಮಾ ಸ್ವಲ್ಪು ಮಾತಾಡೋ ಕೆಲ್ಸವಿತ್ತು ಅದಕಾಗೇ ಇಲ್ಲಿ ನಿಲ್ಲಬೇಕಾತು ನಾನೇ ಇವರನ್ನು ನಿಲ್ಲಿಸಿದ್ದು ಹೋಗುತ್ತಾರೆ ಬಿಡು.

ನಿರ್ಮಲ– ಹಾಂ....ನೀವ ನಿಲ್ಲಿಸಿದ್ರ್ಯಾ, ಯಾಕ .... ನೀವಂತೂ ಮನಿಮನಿಗೆ ಹೋಗಿ ನೆಟ್ಟಗಿದ್ದಿರಾ, ಆರಾಮ ಇದ್ದೀರಾ, ಅಂತ ಕೇಳೋರು ನೀವು. ಇವರ ಗೂಡ ಮಾತಾಡಾದೇನಿದೆ ಅಂದೆ. ವಂದು ವ್ಯಾಳ್ಯ ಮಾತಾಡೋದಿದ್ರ ಅಲ್ಲೇ ನಮ್ಮ ಮನಿಗಿ ಬರಬೇಕು. ಇವರು ಒಲಿ ಮುಂದ ಕೂತ್ರ ಏನಾತು ಅಲ್ಲೇ ಕೂತು ಮಾತಾಡುತ್ತ ಇಬ್ಬರೂ ಒಲಿಗಿ ಕೈ ಚಾಚಿದ್ರ ಬರತಿತ್ತ ಇಲ್ಲಾ ನೀವS ಹೇಳ್ರೀ. ದೊಡ್ಡವರಾಗಿ ದಡ್ಡತನಕ ಬಿದ್ದು ಮಡ್ಡ ಜನರಂತೆ ಬೀದ್ಯಾಗ ನಿಂತ್ರ ನಿಮ್ಮ ಕೆಲ್ಸನೂ ಕೆಡುತ್ತೆ. ನಮ್ಮದೂ ಕೆಡುತ್ತೆ. ನಿಮಗಾದರೂ ತಿಳಿಲಿಲ್ಲಾ. ಮುಕುಳಿಗಿ ಸೂಟು, ಕಾಲಿಗೆರಡು ಬೂಟು ಮೈಮ್ಯಾಲೆ ಬುಸ್ಕೋಟ ತಲಿಮ್ಯಾಲಿಂದು ಹ್ಯಾಟು ಹಾಗಕೊಂಡು ನೀಟಾಗಿ ತಿರುಗುವ ನಿಮ್ಮಂಥವರಿಗೆ ಸ್ವಾಟೆಗೆ ತಿವಿಯುವ ನೀಟಾದ ಹೆಂಙು ನಿಮ್ಮ ಮನ್ಯಾಗ ಇದ್ರ ತಿಳಿತಿತ್ತು. ಇದ್ಹಾಂಗ ಕಾಣೋದಿಲ್ಲ ಯಾಕ್ರಿ.

ಶ್ರೀನಿವಾಸ–ಇರುವಳಮ್ಮಾ ಆದರೆ ನಿಂಮ್ಮಂಥ ಸುಧಾರಿಸಿದವರು ನಮ್ಮವಳಲ್ಲಾ ಅದೊಂದು ಅರವೆಟ್ಟಿನ ಹುಚ್ಚಿ.

ನಿರ್ಮಲ–ಅದಕ್ಕಾಗೇ ನೀವು ದಾರಿ ತಪ್ಪಿರೋರು (ಗಂಡನ ಕಡೆ ನೋಡಿ) ಲಗೂನ ಬರ್ರಿ. ಹಾಗೆ ನಿಂತ್ರೆಲ್ಲ ದೀಪಮಾಲೀ ಕಂಬದಂತೆ ಬರ್ರಿ ಬರ್ರಿ (ಅನ್ನುತ್ತ ಶಿಟ್ಟಿನಿಂದ ಹೋಗುತ್ತಾಳೆ. ವಾಸು ನೋಡುತ್ತಿರುತ್ತಾನೆ)

ಶ್ರೀನಿವಾಸ– ನಡ್ರೆಪಾ ನಮಗೂ ಬುದ್ಧಿ ಬಂತು. ನಿಮಗೂ ಬಂತು. ಇನ್ನು ಮೇಲೆ ಮನಿ ಬಿಟ್ಟು ಕದಲಬೇಡ್ರಿ. ಒಲಿ ಮುಂದ ಕೂಡ್ರಿ. ಪತಿಗೆ ಮಾರ್ಗ ತೋರುವ ಮಡದಿ ಮನೆಯಲ್ಲಿ ನೆಲಿಸಿರಲು ಮತ್ತಾವ ಚಿಂತೆ ನಿಮಗೇಕೆ ಹೊತ್ತಾಗಿ ಹೋದರೆ ಬೆತ್ತ ಬೆನ್ನಿಗಿ ಬಂದೀತು. ಸಾಗಿರಿ ಲಗು. (ವಾಸು ಓಡುತ್ತಾನೆ ಶ್ರೀನಿವಾಸ ನೋಡುತ್ತ ಹಣಿ ಹಣಿ ಬಡಕೊಂಡು) ಸರೆ.... ಇದ್ದರೆ ಇರಬೇಕು. ಇಂಥಾ ಇರಕಿನ ಹೆಂಡ್ತ್ಯ. ಇಂಥವಳೆಂದು ತಿಳಿದೇ ಇವರಪ್ಪ. ಸಾಕಷ್ಟು ವರದಕ್ಷಿಣೆ ಕೊಟ್ಟು ಇವನಿಗೆ ಗಂಟು ಹಾಕಿದ್ದಾನೆ. ನೋಡ್ರಿ ವರದಕ್ಷಿಣ ಹೆಚ್ಚಾಗಿ ಕೊಡ್ತೀವಿ ಅನ್ನೋ ಕನ್ಯಗಳೆಲ್ಲ ಫೊರಟೀನ್ ಕ್ಯಾರೆಕ್ಟ ಚಿನ್ನದಂತೆ ಎಂದು ತಿಳಿಯಬೇಕು. ಪಾಪ ವಾಸು ಮನಗಿ ಹೋದಮೇಲೆ ಸಾಡೇಸಾತ ಶನಿಯೇ ಆಗುವಳೋ

ಏನೋ ದೇವರೇ ಬಲ್ಲ. ವಾಸೂ ಇನ್ನು ಮೇಲೆ ಮನ್ಯಾಗ ಇರೋದೇ ಲೇಸು. (ಹೋಗುತ್ತಾನೆ).

(ಅದೇ ರಸ್ತೆಯಲ್ಲಿ ಶ್ರೀಧರನ ಮಗಳು ಶಾಮಲಾದೇವಿ ಒಗೆದ ಅರಿವೆಯ ಗಂಟನ್ನು ಬಗಲಲ್ಲಿ ಇಟ್ಟುಕೊಂಡು ಬರುತ್ತಾಳೆ. ಎದುರಿಗೆ ರಾಮು ಅವಸರದಿಂದ ಮುಂದಕ್ಕೆ ಹೋಗಿ ತಿರುಗಿ)

**ರಾಮು–** (ಶಾಮಲಾ ತಿರುಗಿ ನೋಡುತ್ತಾಳೆ). ಯಾರು ಶಾಮಲಾ, ಅಪ್ಪನು ಮನೆಯಲ್ಲಿರುವನೇ.

**ಶಾಮಲಾ–**(ನಿರಾಶೆಯಿಂದ) ಇದ್ದರೂ ಇರಬಹುದು. ಕೆರೆಗೆ ಒಗೆಯಲು ಹೋದ ನಾನು ಈಗ ತಾನೇ ಬಂದೆ. ಆದರೆ ತಾವು ಮಾತ್ರ ನಾಲ್ಕಾರು ದಿವ್ಸವಾದರೂ ಮನೆಕಡೆ ಬಂದಿಲ್ಲವಲ್ಲಾ ಕಾರಣ....

**ರಾಮು–** ಕಾರಣವೇನೂ ಇಲ್ಲ ಶಾಮಲಾ. ನಿಮ್ಮಪ್ಪನೂ ನಾನೂ ಅಲ್ಲೇ ಪಂಚಾಯ್ತಿ ಆಫೀಸಿನಲ್ಲೇ ಕೂಡುತ್ತೇವೆ. ಅದಕ್ಕಾಗಿ ಮನೆಗೆ ಬರೋ ಕೆಲ್ಸವೇ ಬಿದ್ದಿಲ್ಲ. ನಿನ್ನೆ ಮಾತ್ರ ನಿಮ್ಮಪ್ಪನು... ನಿನ್ನ ಲಗ್ನದ ವಿಷಯವಾಗಿ ಬಹಳ ಚಿಂತಿಸಿದರು. ಮೇಲಾಗಿ ಒಳ್ಳೇ ವರನನ್ನು ಶೋಧಿಸಲಿಕ್ಕೆ ನನಗೆ ಹೇಳಿದ್ದಾರೆ.

**ಶಾಮಲಾ–** ಏನೂ ನನಗಾಗಿ ವರನನ್ನು ಶೋಧಿಸಲಿಕ್ಕೆ ನಿಮಗೆ ಹೇಳಿರುವನೇ....ಸರೆ ಅದಕ್ಕೆ ನೀವೇನು ಹೇಳಿದಿರಿ....

**ರಾಮು–** ನೋಡುತ್ತೇನೆಂದು ಹೇಳಿದೆ....

**ಶಾಮಲಾ–** ಯಾಕೆ ನೋಡಿರುವೆನೆಂದು ಹೇಳಬೇಕು....

**ರಾಮು–** ನೋಡಲಾರದೆ ಸುಳ್ಳು ಹೇಗೆ ಹೇಳಲಿ....

**ಶಾಮಲಾ–** ಅದೇನಿಲ್ಲ ಸಧ್ಯ ವರನನ್ನು ಹುಡುಕುವದಕ್ಕಿಂತ ಒಂದು ಕನ್ಯೆಯನ್ನು ಹುಡಿಕಿರಿ....

**ರಾಮು–** (ಘಾಬರಿಯಿಂದ) ಕನ್ಯೆ..... ಯಾರಿಗೆ.....

**ಶಾಮಲಾ–** ನಿಮ್ಮ ಚೇರಮನ್ನರಿಗೆ..... ಸಧ್ಯ ಆತನ ಲಗ್ನವಾದ ಮೇಲೆ ನನ್ನ ಲಗ್ನವೆಂದು ಅಪ್ಪನಿಗೆ ನಿಚ್ಚಳವಾಗಿ ಹೇಳಿರಿ..... ರಾಮೂ.... ಇದುವರೆಗೆ ಗುಪ್ತ ರೀತಿಯಿಂದ ನೀವಿಬ್ಬರೂ ಮಾತಾಡುವದನ್ನು ಕೇಳಿದ್ದೇನೆ. ಕಾರಣ ನನಗಾಗಿ ಚಿಂತಿಸುವದೇ ಬೇಡ ತಿಳಿಯಿತೇ....

**ರಾಮು–** ಶಾಮಲಾ ನಾವು ಎಷ್ಟು ಗುಪ್ತ ರೀತಿಯಿಂದ ಮಾತಾಡಿದರೂ ಈಗಿನ ಕಾಲದಲ್ಲಿ ಗೋಡೆಗಳಿಗೆ ಸಹ ಕಿವಿಗಳಿವೆ ಎಂಬಂತೆ ಗುಟ್ಟು ರಟ್ಟಾಗುವ ಕಾಲವಿದು.... ಇರಲಿ ಮೊದಲು ಆತನು ಹೇಳಿದಂತೆ ಸುಶಿಕ್ಷಿತ ವರನನ್ನು ಶೋಧಿಸಿ ಆಮೇಲೆ ಮುಂದಿನ ವಿಚಾರ.....

**ಶಾಮಲಾ–** ವರನನ್ನು....ಯಾರಿಗಾಗಿ....

**ರಾಮು–** ನಿಮಗಾಗಿ....

**ಶಾಮಲಾ–** ರಾಮಾಯಣದಲ್ಲಿ ಸೀತೆ ಇದ್ದಲ್ಲಿಗೆ ರಾಮನೇ ಸ್ವತಃ ತಾನೇ ಬಂದನೆಂದು ಹೇಳುತ್ತಾರೆ. ಅಲ್ಲದೆ ರಾಮಾಯಣದಲ್ಲಿ ಓದಿದ್ದೇನೆ ಇದು ನಿಜವೇ....

**ರಾಮು–** ಹುಚ್ಚಿ ಅದು ತ್ರೈತಾಯುಗ.... ಇದು ಮಾತ್ರ ಕಲಿಯುಗ ಈ ಕಲಿ ಯುಗವೇ ಹೆಚ್ಚಾಗಿ ಭಾರತದ ನವಯುಗವೆಂಬುದನ್ನು ಮರೆಯಕೂಡದು.

**ಶಾಮಲಾ–** ಅಂದರೆ.... ಆ ಕಾಲದಲ್ಲಿ ಕನ್ಯೆಗಳನ್ನೇ ಹುಡುಕುತೇ ಬರುತ್ತಿದ್ದರು. ಈ ಕಾಲದಲ್ಲಿ ವರನನ್ನೇ ಹುಡುಕುವ ಕಾಲವೆಂದಲ್ಲವೆ ನಿಮ್ಮ ಅಭಿಪ್ರಾಯ....

**ರಾಮು–** ಹಾ ನಾನು ಅದನ್ನೇ ಹೇಳಿದೆ. ಸಧ್ಯದ ಪರಿಸ್ಥಿತಿ ಹಾಗೆ ಬಂದಿದೆ....

**ಶಾಮಲಾ–** ಇದನ್ನು ತಿಳಿದೇ ನಾನು ಹುಡ್ಕಿಕೊಂಡಿರುವೆನು....

**ರಾಮು–** ಹುಡಿಕಿ ಕೊಂಡಿರುವೆ.... ಏನನ್ನು....

**ಶಾಮಲಾ–** ವರನನ್ನು.....

**ರಾಮು–** ನಿಜವೇ.... ಎಲ್ಲಿದೇ....

**ಶಾಮಲಾ–** ಇಲ್ಲೇಯಿದೆ.... ರೈಲು ಹತ್ತುವಂತಿಲ್ಲ ಭಂಡಿ ಕಟ್ಟುವಂತಿಲ್ಲ.... ಬುತ್ತಿಯಂತೂ ಬೇಕೇ ಇಲ್ಲ....

**ರಾಮು–** ಅಂದರೆ ಇದೇ ಊರಲ್ಲಿಯೇ ನಿಮ್ಮ ವರನು.....

**ಶಾಮಲಾ–** ಹೂಂ.... ಊರಲ್ಲಿ ಏಕೆ ಸಧ್ಯ ನನ್ನ ಸಮಿಾಪದಲ್ಲೇ ನನ್ನ ಪ್ರೇಮದ ವರನು ನಿಂತಿದ್ದಾನೆ.

**ರಾಮು–** ಯಾರು ನಾನೇ... ಛೇ.... ಶಾಮಲಾ ನೀನು ಶ್ರೀಮಂತ ಕನ್ಯೆ.... ಏನು

ಮಾತಾಡಿದರೂ ಚನ್ನಾಗಿ ತೋರುತ್ತೆ... ಆದರೆ ನಿಮ್ಮಂತೆ ಕುಣಿಯಲು ಈ ಬಡವ ಅಸಮರ್ಥ....

**ಶಾಮಲಾ**–ಏನು ನೀನು ಬಡವನೇ.... ಹಹಹಹ (ನಕ್ಕು) ವಿದ್ಯಾವಂತ ವಿಚಾರಶೀಲನಾದವನು ಬಡವನೇ? ಅವಿದ್ಯಾವಂತನಾಗಿ ಅವಿಚಾರಿಯಾಗಿ ಶ್ರೀಮಂತನಾದರೆ ಸಾಕು, ಅಂಥವನೇ ನಿನಗೆ ಯೋಗ್ಯ ವರನೆಂದು ಹೇಳುವಿಯಾ.... ನಿನ್ನ ಮನವಾದರೂ ಒಪ್ಪುವದೇ ರಾಮು....

**ರಾಮು**– ಶಾಮಲಾ ಸಕಾಲದಲ್ಲಿ ಧನಕ್ಕಿದ್ದ ಬೆಲೆ ವಿದ್ಯಕ್ಕೆ ಇಲ್ಲವೆಂದು ತಿಳಿ.... ಓದಿದರೇನು ಓದದಿದ್ದರೇನು ಧನವಂತನೇ ಶ್ರೀಮಂತ... ಲಕ್ಷ್ಮಿಯು ಕಾಲೂರಿದ ಮನೆಯಲ್ಲಿ ಸರ್ವರೂ ವಿದ್ಯಾವಂತರಾಗೇ ಕಾಣುತ್ತಾರೆ. ಕುಲಗೇಡಿಗಳಾದರೂ ಉತ್ತಮ ಕುಲದವರಾಗಿ ತೋರುತ್ತಾರೆ. ಗುಣ ಹೀನನಾಗಿದ್ದರೂ ಲಕ್ಷ್ಮೀ ಪುತ್ರನು ಸುಗುಣಿಯಾಗೇ ತೋರುತ್ತಾನೆ.... ಅದಕ್ಕಾಗೇ ನಿಮ್ಮ ತಂದೆಯವರು ಶ್ರೀಮಂತ ವರನನ್ನು ನೋಡೆಂದು ಹೇಳಿದನೇ ಹೊರ್ತು.... ವಿದ್ಯಾವಂತ ಗುಣವಂತನಾದರೆ ಸಾಕೆಂದು ಹೇಳಿಲ್ಲ ತಿಳಿಯಿತೇ

**ಶಾಮಲಾ**– ಕನ್ಯಾ ವರಗಳೆರಡೂ ಪರಸ್ಪರ ನೋಡಿ ಒಪ್ಪಿದ ಮೇಲೆಲ್ಲವೇ ಅಪ್ಪನ ಅಧಿಕಾರ.... ರಾಮೂ ಬಡವರ ಪ್ರೇಮಕ್ಕೂ ಬಲ್ಲಿದರ ಪ್ರೇಮಕ್ಕೂ ವ್ಯತ್ಯಾಸವಿದೆಯೇ.... ಹಾಗಾದರೆ ಹೇಳು ಬಲ್ಲಿದ ಶ್ರೀಮಂತಿಕೆ ಪ್ರೇಮವು ಯಾವ ಆಕಾರದ್ದು ಹೇಳುವೆಯಾ....

**ರಾಮು**– ಶಾಮಲಾ ನೀನು ಶ್ರೀಮಂತ ಕನ್ಯೆಯಾದರೂ ಸುಶಿಕ್ಷಿತಳೆಂಬುದನ್ನು ಬಲ್ಲೆ ಆದರೆ... ಈ ರೀತಿ ನಿನ್ನ ಮನವನ್ನು ಓಡಿಸದಿರು.... ಇದರಿಂದ ನನಗೆ ಜಯವಿಲ್ಲ. ಈ ವಿಷಯ ಇಂದಿಲ್ಲ ನಾಳೆ ನಿಮ್ಮಪ್ಪನ ಕಿವಿಗೆ ಕೇಳಿಸಿದರೆ ನನಗಾಗಿ ಅಪಮಾನದ ಆ ಮಂತ್ರವನ್ನು ಕಾದಿಟ್ಟಿರುವಳೆಂದ ಸಂಶಯವು ಮುಂದೆ ಬಂದು ಕೈಮಾಡಿ ಕರಿಯುತಿದೆ. ಅದಕ್ಕಾಗಿ ಸಾಗಿ ಬರುತಿಹ ಪ್ರೇಮಪಾಶವನ್ನು ಹಿಂದಕ್ಕೆ ಸೆಳೆದು ಈ ಬಡವನನ್ನು ಕಾಪಾಡು....

**ಶಾಮಲಾ**– ಬಡವ... ನಿಜ.... ಬಡವ ಬಲ್ಲಿದಯಂಬ ಶಬ್ದವು.... ಪ್ರೇಮಕ್ಕೆ ಮಾತ್ರಸಮ್ಮಂಧ ವಿಲ್ಲವು... ರಾಮೂ ನಿಜವಾಗಿ ಹೇಳುತ್ತೇನೆ.... ನಿನ್ನನ್ನು ಮನಸಾರೆ ಪ್ರೀತಿಸಿದ್ದೇನೆ. ನನ್ನನ್ನು ನಿರಾಶಳನ್ನಾಗಿ ಮಾಡದಿರು.... ನಿನಗೆ ಅರ್ಪಿತವಾದ ಈ ದೇಹವು ಇನ್ನಾರನ್ನೂ ಮುಟ್ಟಲಾರದು. ಕೈಬಿಡಬೇಡ ಇದುವರೆಗೂ ಮನದ ಗುಟ್ಟನ್ನು ರಟ್ಟು ಮಾಡದೆ ಕಾದಿದ್ದೆ

ನನ್ನ ನಿನ್ನ ಪ್ರೇಮ ಸಂಕಲ್ಪವೇ ಒದಗಿಸಿ ಕೊಟ್ಟಿದೆ ಈ ಏಕಾಂತ ಸ್ಥಳ ನನ್ನನ್ನು ಕೈಬಿಡಬೇಡ ರಾಮೂ.... (ಕಾಲಿಗೆ ಬೀಳಲು ಹೋಗುವಳು ಹಿಂದಕ್ಕೆ ಸರಿಯುತ್ತಾನೆ....)

ರಾಮು– ಹುಂ ಇದೊಂದು ನಿನ್ನ ಮನದ ಭ್ರಾಂತಿ ಶಾಮಲಾ. ಕುರುಡನ ಕೈಯಲ್ಲಿ ಕನ್ನಡಿ ಕೊಟ್ಟಂತೆ ಅಜೀರ್ಣದವನಿಗೆ ಮೃಷ್ಟಾನ್ನವಿಟ್ಟಂತೆ ಲಗ್ನದ ಇಷ್ಟವೇ ಇಲ್ಲದ ನನಗೆ ನಿನ್ನ ಪ್ರೇಮಾನುರಾಗವು ನಿರಾಶಕ್ಕೆ ಕಾರಣ....

ಶಾಮಲಾ– ಅಂದರೆ ನೀನು ಲಗ್ನವಾಗದೆ ಯೋಗಿಯಾಗಿ ಬಾಳುವೆಯಾ....

ರಾಮು– ಹುಂ.... ಯೋಗಿಯಾಗಿ ಬಾಳುವ ಯೋಗ್ಯತೆ ಬಂದರೆ ನನ್ನಂಥ ಸುದೈವಿಯೇ ಇಲ್ಲವೆಂದು ಹೇಳಬೇಕು....

ಶಾಮಲಾ– ನೋಡು ರಾಮೂ ಕಾಲಿಗೆ ಬಿದ್ದು ಬೇಡಿಕೊಳ್ಳುತ್ತೇನೆ.... ಇನ್ನಾರನ್ನೂ ನಂಬದ ಈ ಕಠಿಣ ಹೃದಯಿಯನ್ನು ನಿರಾಶಳನ್ನಾಗಿ ಮಾಡದಿರು. ನಾನಂತೂ ನಿನ್ನನ್ನು ಬಿಡಲಾರೆ ಒಪ್ಪಲೇಬೇಕು.

.... ಪದ ....

ಡಿ – ನೀನೊಮ್ಮೆ ಮನಗೆ ಬಂದಾಗ ।
ನಾನೊಬ್ಬಳೇ ಮನೆಯಲ್ಲಿದ್ದಾಗ ।
ಏನೇನೋ ಅನ್ನುತ್ತ ಗಲ್ಲಕ್ಕೆ ನೀ ಕೈ ಇಟ್ಟಾಗ ।
ಯನಗಾಗ ಮೈ ನಡುಗೀ ನಕ್ಕಾಗ ॥ ಪ ॥

ಮನದಲ್ಲಿ ಪ್ರೇಮವು ನಟ್ಟಾಗ ।
ಅನುರಾಗ ಬೆಳೆಯಿತು ಮನದಾಗ ।
ಆನಂದದಾ ಕನಸು ಬಿದ್ದಾಗ ।
ನೀನೊಳ್ಳೆ ಮದು ಮಗನಾದಾಗ ॥ ೧ ॥

ರಾಮು– ಛೇ ಇದೆಂದಿಗೂ ಆಗದು. ಶಾಮಲಾ ಈ ಮಾತಿಗಾಗಿ ನಾನೆಂದೂ ವಚನ ಕೊಡಲಾರೆ. ನಿನಗೆ ತಕ್ಕಂತೆ ಮತ್ತಾವನಾದರೂ ಶ್ರೀಮಂತ ಸುಂದರನನ್ನು ನಿನ್ನ ಬಲಿಯಲ್ಲಿ ಕೆಡವಿಕೋ. ಇಂದಿನಿಂದ ನನ್ನ ಆಶೆಯನ್ನು ಬಿಟ್ಟು ಬಿಡು. ನನಗೆ ಹೋಗಲನುಕೂಲ ಕೊಡು.

ಶಾಮಲಾ– (ಅಡ್ಡಗಟ್ಟಿ) ಅದು ಸಾಧ್ಯವಿಲ್ಲ. ಎನ್ನ ಮನವ ಕದ್ದ ಚೋರನನು ಎಂದಿಗೂ ಬಿಡಲಾರೆ. ನೀನು ಒಪ್ಪಲೇಬೇಕು. ನನ್ನ ಮೂರ್ತಿವಂತ

ದೇವರಾಗಲಿಕ್ಕೆ ನೀನು ವಚನ ಕೊಡದಿದ್ದಲ್ಲಿ ಅನರ್ಥ ಪರಂಪರೆ ಇಬ್ಬರೂ ಹೊಂದುವ ಪ್ರಸಂಗ ಬರದೆ ಇರಲಾರದು, ನೆನಪಿನಲ್ಲಿರಲಿ.

ರಾಮು– ಇಂಥಾ ಮಾತಿಗೆ ಬೆದರಿ ಬೀಳಲಾರ ಈ ರಾಮು. ಇರಲಿ ನಾನು ಬರುತ್ತೇನೆ.... (ಹೋಗುವನು)

ಶಾಮಲಾ– (ರಾಮು ಹೋಗುವದನ್ನು ನೋಡುತ್ತ) ಹೋದನು. ಹೋಗೇ ಬಿಟ್ಟನು. (ದುಃಖಿಸುತ್ತ) ಇದು ವರೆಗೆ ಮನದಲ್ಲಿ ಕಟ್ಟಿದ ಮಂದಿರವು ಕುಸಿದು ಬಿತ್ತು. ಏನು ಮಾಡಲಿ. ರುದ್ರಜ್ಜನು ಕೊಟ್ಟ ಅಂತ್ರದ ಗತಿಯೇನು ಅಜ್ಜನ ಅಂತ್ರವೇ ಬೂಟಾಟಿಕೆಯಾಗಿರಬಹುದೇ ಸುಳ್ಳು ಹೇಳಿಕೊಳ್ಳುತ್ತ ಬಡವರ ಗೋಣು ಮುರಿಯುವ ಇಂಥಾ ಕಳ್ಳ ಅಜ್ಜನವರಿಂದಲೇ ಜಗತ್ತೆ ನಂಬಿ ಕೆಟ್ಟಂತೆ ಇಂದು ನಾನು ಸಹ ಮೋಸ ಹೋದೆನು. ನನ್ನಿಂದ ೨ ತೊಲಿ ಬಂಗಾರ ಸೆಳೆದ ಅಜ್ಜನು ಅಪ್ಪನಿಂದ ಎಷ್ಟು ಧನ ಸೆಳೆದಿರುವನೋ ತಿಳಿಯದು. ಆಗಲಿ ಮೊದಲು ಕಳ್ಳ ಅಜ್ಜನವರ ಮೇಲೆ ನನ್ನ ಅಣ್ವಾಸ್ತ್ರ ಪ್ರಯೋಗ. ಆಮೇಲೆ ಈ ರಾಮುವಿನ ಮೇಲೆ ಮಾಡದೇ ಬಿಡಲಾರೆ. ಈಗಲೇ ಹೋಗಿ ತೋರಿಸುತ್ತೇನೆ ನನ್ನ ಕೈಯ್ಯನ್ನು....

(ಪದ ಹಾಡುತ್ತ ಹೋಗುತ್ತಾಳೆ)

## ಪ್ರವೇಶ ೩

## ಸೋಮಣ್ಣನ ಮನೆಯ ದೃಶ್ಯ

(ಸೋಮಣ್ಣ ಹೊರ್ಸಿನ ಮೇಲೆ ಕೂತಾಗ್ಯೆ ಗೌರಿಯು ಕಾಫಿ ತಂದು ಕೊಡುತ್ತಾಳೆ. ಕುಡಿದಮೇಲೆ ಕಪ್ಪು ಬಸಿಯನ್ನು ಒಳಗೆ ತಕ್ಕೊಂಡು ಹೋಗುವಾಗ್ಯೆ.)

ಪೆಲ್ತ ಶ್ರೀನಿವಾಸರು– ಏನಯ್ಯ ನಮಸ್ಕಾರ ಆರಾಮ ಇದ್ದೀರಾ?

ಸೋಮಣ್ಣ– ಹುಂ ಆರಾಮ ಇದ್ದಿಲ್ಲಂದರೆ ನೀವೇನಾದರೂ ಔಷಧಿ ಕೊಡುತ್ತೀರಾ....

ಶ್ರೀನಿವಾಸ– ನಮ್ಮ ಡ್ಯೂಟಿ ಪ್ರಕಾರ ಕೇಳೋದೆಂದೇ, ಮಾಡೋ ಕೆಲ್ಸ ನಮ್ಮದಲ್ಲ. ಮೇಲಿನ ಅಧಿಕಾರಿಗಳು ಹೇಳಿದಷ್ಟು ಕೇಳುವದೇ ನಮ್ಮ ಉದ್ಯೋಗ. ಬಾಯಿಲಿ ಕೇಳೋದು, ಗೋಡೆಗೆ ಬರಿಯುವದು ಇಷ್ಟೆ.

ಸೋಮಣ್ಣ– ಅಲ್ಲಯ್ಯ ಗೋಡಿ ಮೇಲೆ ಬರದೂ ಬರದೂ ಬಿಳೀ ಗೋಡಿ ಕರ್ರಗೆ

ಮಾಡೋದಕ್ಕಿಂತ ನಮ್ಮ ಹಣೆಯ ಮೇಲೆ ಬರೆಯುವದೇ ಉತ್ತಮವಾಗಿದೆ. ಅಲ್ಲಾ ಸುಮ್ಮನೆ ಅಡ್ಡಾಡಿ ಅಡ್ಡಾಡಿ ಯಾಕೆ ತ್ರಾಸ ತಕ್ಕೊಳ್ಳುವದು ಪಾಪ ಅಡ್ಡಾಡಿ ಕಾಲು ನೋಯಿತ್ತಿರಬಹುದಲ್ಲವೇ?

ಶ್ರೀನಿವಾಸ– ನೋಡ್ರಿ ಕಾಲ ನೋದರೇನು, ಬೇಜಾರ ಬಂದ್ರೇನು ಅಡ್ಡಾಡಿ ನಮ್ಮ ಡ್ಯೂಟಿ ಮುಗಿಸಿದರೇನೇ ನಮಗೆ ಪಗಾರ ಸಿಗುತ್ತೆ ಇಲ್ಲವಾದರೆ ಈಗಿನ ಸರ್ಕಾರ ೧ ನಯಾ ಪೈಸಾ ಕೂಡ ನಮಗೆ ಕೊಡಲಾರದು ತಿಳಿತ್ರ್ಯಾ.

**ಸೋಮಣ್ಣ**– ಓಹೋ ಹೀಗೇನು ಸರೆ ಬಿಡ್ರಿ. ಅಡ್ಡಾಡಿ ಪಗಾರ ತಿನತಕ್ಕವರೆಂದರೆ ನೀವ ಒಬ್ಬರ ಮತ್ಯಾರಾದರೂ ಉಂಟಾ.....

ರಾಮು– (ಬರಬರುತ್ತ) ಇವರೊಬ್ಬರೇ ಯಾಕ ಚಿಕ್ಕಪ್ಪಾ (ಶ್ರೀನಿವಾಸರ ಕಡೆ ನೋಡಿ) ನಮಸ್ಕಾರರೀ.... ಪಾಪ ಇವರೇನ್ರೀ ಊರೆಲ್ಲ ಅಡ್ಡಾಡಿ ಆರಾಮ ಇದ್ದೀರಾ .... ಎಂದು ಜನಗಳ ಯೋಗಕ್ಷೇಮವನ್ನು ಕೇಳಿ ಮನಿಗೆ ಹೋಗಿ ಸುಖವಾಗಿ ಉಂಡು, ಸಂಜೀವರೆಗೆ ಮಲಗೋ ಪುಣ್ಯಾತ್ಮರು. ಇವರಿಂದ ಯಾರಿಗೂ ಲಾಭ ಇಲ್ಲದಿದ್ದರೂ ಚಿಂತೆಯಿಲ್ಲ ಕೇಡು ಮಾತ್ರ ಇವರಿಂದ ಏನೂ ಆಗೋದಿಲ್ಲಾಂತ ತಿಳಿರಿ. ಇನ್ನು ಕೂತುಂಣೋರು ಕೆಲವರು ಮಲಗಿ ಉಂಣೋರು ಕೆಲವರು ಇವರಿಂದ ಮಾತ್ರ ದೇಶಕ್ಕೆ ದೇಶವೇ ಹಾಳಾಗಿ ಹೋಗುತ್ತೆ ಚಿಕ್ಕಪ್ಪಾ ಯಾರೂ ಲಕ್ಷಕ್ಕೆ ಹಾಕಿ ಕೊಳ್ಳುವವರೇ ಇಲ್ಲ....

**ಸೋಮಣ್ಣ**– ಅಲ್ಲೋ ರಾಮು.... ಇವರಂತೂ... ಅಡ್ಡಾಡಿ.... ಉಂಣೋರು... ಕೂತುಂಣುವವರು ಯಾರೋ

ರಾಮು– ಕೂತು ಉಣ್ಣವರು ಅದಾರ್‍ರಿ... ನಮ್ಮಲ್ಲೆ ಇದ್ದಾರೆ ಅವರ ಹೆಸರು ಕೇಳಿದರೆ ಮಾತ್ರ ಮುದ್ದು ಬರಬೇಕು. ಗ್ರಾಮ ಸೇವಕನಂತೆ ಗ್ರಾಮ ಸೇವಕ, ಹೆಸರಿಗೆ ತಕ್ಕಂತೆ ಇವರ ಸೇವೆ ಜನಕ್ಕೆಲ್ಲ ಸಲ್ಲುತ್ತದೆ.

**ಸೋಮಣ್ಣ**– ಅಂದರೆ....

ರಾಮು– ಅಂದರೆ ಇಷ್ಟೇ ಇವರ ಸೇವೆ... ಸ್ವಾರ್ಥ ರೂಪದಲ್ಲಿ ಸಲ್ಲುತ್ತೆ.... ಹಳ್ಳಿ ಜನಕೆಲ್ಲ ಕೃಷಿ ಉದ್ಯೋಗಕ್ಕಾಗಿ ಸರಕಾರದಿಂದ ಸಾಲದ ಸೌಲಭ್ಯ ತೋರಿಸಿ ಸಾಕಷ್ಟು ಹಣ ಅವರಿಂದ ಅಪಹಾರ ಮಾಡಿದರೂ ಅಪಾರವಾದ ನಿಃಸ್ವಾರ್ಥತೆಯನ್ನು ತೋರಿಸಿ ರೈತರಿಗೆ ಮಂಕು ಬೂದಿಯನ್ನುಗ್ಗುವ ಈ ಅಧಿಕಾರಿಗಳು ಗ್ರಾಮದ ಶೇವಕರಂತೆ... ಇವರಿಗೆ

ಗ್ರಾಮ ನಾಶಕರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲವಷ್ಟೇ...... ಯಾಕ್ರೀ ಶ್ರೀನಿವಾಸರೇ (ಶ್ರೀನಿವಾರು ತಿರುಗಿ ನಿಂತು ಹಲ್ಲು ಕಡಿಯುವನು)

**ಸೋಮಣ್ಣ–** ಇರಲಿ.... ಮಲಗಿ ಉಂಣುವವರು... ಯಾರೋ ರಾಮು.......

**ರಾಮು–** ಮಲಗಿ ಉಂಣುವವರೆಂದರೆ ಮಂತ್ರಿಗಳು ಚಿಕ್ಕಪ್ಪಾ..... ಇವರು ಕೈಲಾಸದಿಂದ ಭೂಮಿಗಿಳಿದು ಬಂದ ಭಗವಂತರಂತೆ ಮಹಾ ಮಹಿಮಶಾಲಿಗಳಾಗಿದ್ದಾರೆ. ಮಹಾತ್ಮಾಜೀಯವರು ಹಾಕಿದ ತಳ ಬುನಾದಿಯ ಮೇಲೆ ನಿಂತು ಅವರ ನಾಮ ಜಯಘೋಷ ಮಾಡುತ್ತ ಬಡವರಿಗಾಗಿ ಕಡುತರ ಸೇವೆಯನ್ನು ಬಿಡದೆ ಮಾಡುತ್ತೇವೆಂದು ಬಡಬಡಿಸಿ ಕೂಗುತ್ತ ಸಡಗರದ ವಿಧಾನ ಸೌದೆಯಲಿ ವಡಲ ತುಂಬಿ ಹೊರ ಚಲ್ಲುವಂತೆ ಸುರಾಪಾನ ಮಾಡಿ ಸುಡುಗಾಡಿಗೆ ಅಲ್ಲಲ್ಲ ದೇವಲೋಕಕ್ಕೆ ಹೋಗುವ ಮಹಾ ಮಹಿಮರೆಂದರೆ ಮಂತ್ರಿಗಳು ಚಿಕ್ಕಪ್ಪಾ.... ಈ ಸುರಾಪಾನವು ಕರಿನಾಡಿನಲ್ಲಿರಕೂಡದೆಂದು ಸಾರಿ ಸಾರಿ ಹೇಳಿದ ಮಹಾತ್ಮರ ಮಾತಿಗೆ ತಿಲಾಂಜನವನ್ನೆರೆದು ದೇಶದಾದ್ಯಂತ ಶೆರೆ ಮಾರುವ ಅಂಗಡಿಗಳನ್ನು ಸ್ಥಾಪಿಸಿ ಕಾಂಗ್ರೇಸ್ ಅನ್ನುವ ಶಬ್ದಕ್ಕೆ ಕಲಂಕವನ್ನು ತಂದೊಡ್ಡಿದ ಮಹಾ ಪ್ರತಿಭಾಶಾಲಿಗಳೆಂದರೆ ನಮ್ಮ ಮಂತ್ರಿಗಳು ಚಿಕ್ಕಪ್ಪಾ... ಇವರೆಲ್ಲ ಮಲಗಿ ಉಂಡರೂ ಕೇಳುವವರಾರು.... ಯಾಕರೀ (ಶ್ರೀನಿವಾಸರ ಕಡೆ ಅವರು ತಿರುಗುವರು.)

**ಸೋಮಣ್ಣ–** ನಿಜ ರಾಮೂ ನೀ ಹೇಳುವದೆಲ್ಲ ನಿಜವಿದೆ..... ಇಂಥವರಿಂದಲೇ ಪ್ರಜೆಗಳಿಗೆ ಆಹಾಕಾರವಾಗ ಹತ್ತಿದೆ ಇದು ನಿಜ.....

**ರಾಮು–** ಇಂತಿಂಥಾ ಮಂತ್ರಿಗಳೆಲ್ಲ ತಮ್ಮ ಸುಖಕ್ಕಾಗಿ ಕಪಟ ನಾಟಕವನ್ನಾಡುತ್ತ ಭಾರತಾಂಬೆಯ ಮಕ್ಕಳಾದ ಒಕ್ಕಲಿಗರಿಗೆ ನೂರಾರು ತೆರಿಗೆಗಳನ್ನು ಹೇರಿ ಚೊಕ್ಕ ಮಾತಿನಿಂದ ತಮ್ಮ ಭ್ರಷ್ಟಾಚಾರವನ್ನು ತೋರಿಸದೆ ಶಿಷ್ಟಾಚಾರದ ಉಪದೇಶದಿಂದ ಮರುಳುಮಾಡಿ ಅವರ ಕರುಳನ್ನೇ ಬಗೆಯುತ್ತಿರುವ ಈ ಮಂತ್ರಿಗಳು ಲಂಚಾವತಾರಿಗಳಾಗಿ ಮಂಚದ ಮೇಲೆ ಚಕ್ಕಂದವನ್ನು ಹೊಡಿಯುತ್ತಿದ್ದಾರೆ.....ಪಾಪ.....ಕಾಂಗ್ರೇಸ್ಸಿಗೆ ಕಂಣಿನೋಪಾದಿಯಲ್ಲಿದ್ದ ಪಂಡಿತ ನೆಹರೂರವರು ಇವರ ನೀಚ ಕೃತ್ಯಗಳನ್ನು ನೋಡದೆ ವ್ಯಸನದಿಂದಲೇ ಈ ನರಲೋಕವನ್ನು ಬಿಟ್ಟು ಪರಲೋಕ ಯಾತ್ರೆಯನ್ನು ಕೈಕೊಂಡರು..... ಇಲ್ಲವಾದರೆ ಇನ್ನೂ ಕೆಲವು ಕಾಲ ಭೂಮಾತೆಗಾಗಿ ತಮ್ಮ ಸೇವೆಯನ್ನು ಮನ ಮುಟ್ಟಿ ಮಾಡುತ್ತಿದ್ದರು ಚಿಕ್ಕಪ್ಪಾ.... ಇಂದಿಲ್ಲ ನಾಳೆ ಮಕ್ಕಳ ಮೇಲೆ ಮಮತೆ

ಇದ್ದ ಭೂಮಾತೆ ಇವರ ವಂಶವನ್ನೇ ಹಾಳು ಮಾಡದೆ ಬಿಡಲಾರಳು..... ಯಾಕ್ರೀ ಶ್ರೀನಿವಾಸರೇ....

**ಶ್ರೀನಿವಾಸ–** ನಿಜ ರಾಮಂಣಾ ನೀ ಹೇಳುವದೆಲ್ಲ ಸತ್ಯವಿದೆ.... ಲಂಚದ ಸಂಚಕಾರವು ಸಾಕಷ್ಟು ನನ್ನಿಂದ ದೊರೆತ ಮೇಲಲ್ಲವೇ ಈ ಹೆಲ್ತ ಡಿಪಾರ್ಟಮೆಂಟಿನ ಅಧಿಕಾರಿಗಳು ಆರಾಮ ಇದ್ದೀರಾ ಅನ್ನುವ ಶಬ್ದ ನನಗೆ ಕಲಿಸಿದ್ದು ಇನ್ನಾದರೂ ಅವರ ಕಾಟ ತಪ್ಪಿಲ್ಲ. ಮೇಲಿಂದಮೇಲೆ ಇದ್ದೇ ಇದೆ.... ಅದಕ್ಕಾಗಿ ಈ ನೌಕರಿಗೆ ರಾಜೀನಾಮೆ ಕೊಡಬೇಕೆಂದು ನಿರ್ಧರಿಸಿದ್ದೇನೆ.

**ರಾಮು–** ಯಾಕ್ರೆಪಾ ರಾಜೀನಾಮೆ ಕೊಟ್ಟು ಏನ ಮಾಡಬೇಕೆಂದಿದ್ದೀರಿ. ಅದನ್ನಾದರೂ ಹೇಳಿ. ತಾನಾಗೆ ಕೈಗೆ ಸಿಕ್ಕದ್ದು ಕಳಕೊಂಡರೆ ಮತ್ತೆ ಸಿಗಲಾರದು ಇಂಥಾ ಛಾನ್ಸ. ನೋಡ್ರಿ ನೀವಾಗಿ ರಾಜೀನಾಮೆ ಕೊಟ್ರೀ ಅಂತ ತಿಳಿರಿ ಮುಂದ ನಿಮ್ಮಿಂದ ಯಾವ ಕೆಲ್ಸನೂ ಆಗೋದಿಲ್ಲ. ಕಿರಾಣಿ ಅಂಗಡಿಯಲ್ಲಿ ತೂಗಾಕ ಬರೋದಿಲ್ಲ. ದಲಾಲ ಅಂಗಡಿಯಲ್ಲಿ ಖಾತೆ ಬರಿಲಿಕ್ಕೆ ಬರೋದಿಲ್ಲ. ಲೆಕ್ಕಾಬಾಕಿಯಂತೂ ಮೊದಲೇ ನಿಮಗೆ ಗೊತ್ತೇ ಇಲ್ಲ. ಅಂದಮೇಲೆ ನೀವು ಸೇರಬೇಕಾದ ಅಂಗಡಿ ಅಂದರೆ ಕಡಿಗೆ ಒಂದೇ ಒಂದು ಅದರಲ್ಲಿ ಸೇರೋ ಪ್ರಸಂಗ ಬರುತ್ತೆ. ಅದಕಾಗೇ ಬಿಡಬ್ಯಾಡ್ರಿ ಅನ್ನೋದು.

**ಶ್ರೀನಿವಾಸ–** ಅದ್ಯಾವದು ರಾಮೂ ನಾವು ಸೇರತಕ್ಕ ಅಂಗಡಿಯಂದರೆ.

**ರಾಮು–** ಚಹದ ಅಂಗಡಿಯಲ್ಲಿ ಸಪ್ಲೈ ಅಲ್ವೆ ಕಡಿಗೆ.

**ಶ್ರೀನಿವಾಸ–** ನಿಜ ನಿಜ ರಾಮೂ ನೀ ಹೇಳಿದಂತೆ ಯಾವ ಉದ್ಯೋಗವೂ ನಾನರಿಯೆ. ಆಗಲಿ. ಪಾಲಿಗೆ ಬಂದದ್ದು ಪಂಚಾಮೃತವೆಂದು ತಿಳಿದು ಇದನ್ನೇ ಕೈಗೊಳ್ಳುತ್ತೇನೆ. ಬರ್ತಿನಿ, ಹೊತ್ತಾತು. ಇನ್ನೂ ಮನೆಗಳು ಬಹಳ ಇವೆ. ನಮಸ್ಕಾರ.

**ರಾಮು–** ನಮಸ್ಕಾರ ಹೋಗಿರಿ. ಇಲ್ಲೇ ಹೊತ್ತು ಗಳೆದರೆ ನಿಮ್ಮ ಪಗಾರ ಹಗರ ಆದೀತು. ಲಗು ಹೋಗ್ರಿ.

**ಶ್ರೀಧರ–** (ರಾಮುವಿಗೆ ಬೆನ್ನು ಚಪ್ಪರಿಸಿ) ಯಾರದು ರಾಮು ಹಗರಾಗುವದು.

**ರಾಮು–** ಅವರೇ ಮತ್ಯಾರು ಆರಾಮ ಇದ್ದೀರಾ ಅನ್ನುವವರು.

**ಶ್ರೀಧರ–** ಓಹೋ ಶ್ರೀನಿವಾಸರೇನು ಅಹಹಹ (ನಕ್ಕು) ಏನು ಸೋಮಂಣನವರೇ ಸ್ವಲ್ಪ ಆರಾಮ ಆಗಿದೆಯೇ?

**ಸೋಮಣ್ಣ**– ಬನ್ನಿ. ಬನ್ನಿ, ಕೂತುಕೊಳ್ಳಿ. ಸಧ್ಯ ಸ್ವಲ್ಪ ಆರಾಮ ಅನಿಸಿದೆ. ಗೌರಾ, ಗೌರಾ....

**ಗೌರಿ**– (ಒಳಗಿನಿಂದ ಬರುತ್ತ) ಬಂದೆ ಮಾವಾ ಬಂದೆ (ದೂರ ನಿಲ್ಲುವಳು ಶ್ರೀಧರ ಅವಳನ್ನು ನೋಡುತ್ತಾನೆ)

**ಸೋಮಣ್ಣ**– ಮೂರು ಕಾಫಿ ಮಾಡಮ್ಮಾ.

**ಗೌರಿ**– ಆಗಲಿ ಮಾಡುತ್ತೇನೆ. (ಹೋಗುವಳು)

**ಶ್ರೀಧರ**– (ಗೌರಿ ಕಡೆ ನೋಡುತ್ತ) ನೋಡ್ರೀ ಸೋಮಣ್ಣನವರೇ ದುಡಿಯುವವ ಒಬ್ಬ ಮಗ. ನಿಮ್ಮ ಮನಿ ಖರ್ಚು ನೋಡಿದರೆ ಬಹಳ ಕಾಣುತ್ತೆ. ಅದಕ್ಕಾಗಿ ಪ್ರಸಂಗ ಬಂದಾಗ ೧೦–೫೦ ರೂಪಾಯಿ ಹೇಳಿಕಳ್ಸರಿ ಕೊಡುತ್ತೇನೆ. ನೀವೇನೂ ಕಾಳಜೀ ಮಾಡಬೇಡ್ರಿ. ತಿಳಿತೋ. ನಿಮ್ಮಂಥವರಿಗೆ ಕೊಡದಿದ್ದರೆ ಇನ್ನಾರಿಗೆ ಕೊಡಲಿ, ಯಾಕೋ ರಾಮು....

**ರಾಮು**– ನಿಜ ಪಾಪ ಮತ್ತಾರಿಗೂ ಕೊಡೋರೇ ಅಲ್ಲ ಇವರು. ನಿಮ್ಮಂಥವರಿಗೇನೆ ಕೊಡೋದು

**ಸೋಮಣ್ಣ**– ಆಗಲಿ ಇಷ್ಟು ನಮ್ಮ ಮೇಲೆ ಕರುಣೆ ಇದ್ದರೆ ಸಾಕು ಬೇಕಾದಾಗ ಕೇಳೇ ಕೇಳುತ್ತೇವೆ ನೀವು ಕೊಟ್ಟೇ ಕೊಡ್ತಿರಿ ಆಗಲಿ....ಆಗಲಿ

**ರಾಮು**– ಆಹಾಹಾಹಾ ಬಡವರೆಂದರೆ ನಮ್ಮ ಶ್ರೀಧರರು ಒಡಲನ್ನೇ ಹರಿದು ಕೊಡತಕ್ಕವರು. ನಡು ರಾತ್ರಿಯಲ್ಲಿ ಕೇಳು ಚೆಕ್ಕಪ್ಪಾ ಮುಡುಪಾಗಿ ಕಳಿಸುವರು ಕೇಳಿದಷ್ಟು ಹಣ. ಶ್ರೀಮಂತ ಶ್ರೀಧರರೆಂದರೆ ಏನೆಂದು ತಿಳಿದಿದ್ದೀರಿ ಭಾರತ ಸರ್ಕಾರ ಬಡವರಿಗಾಗಿ ಹೇಗೆ ದುಡಿಯುತ್ತೋ ಹಾಗೆಯೇ ಇವರ ಮನಸ್ಸು. ನಿಜವನ್ನೇ ಹೇಳಿರುವರು........

(ಗೌರಿ ೩ ಕಾಫಿ ತಂದು. ಮುವ್ವರಿಗೂ ಕೊಡುತ್ತಾಳೆ. ಶ್ರೀಧರನು ಅವಳ ಮುಖ ನೋಡುತ್ತ ಕಪ್ಪುಬಸಿ ಕೈ ಬಿಡುವ ಪ್ರಸಂಗದಲ್ಲಿ ರಾಮು ಹಿಡಿದು ಕೊಡುತ್ತಾನೆ. ಗೌರಿಯು ಸಿಟ್ಟಿನ ಮುಖಮುದ್ರೆಯಿಂದ ಒಳಗೆ ಹೋಗುತ್ತಾಳೆ.)

**ಶ್ರೀಧರ**– (ಕಾಫಿ ಕುಡಿಯುತ್ತ) ಇದೇನು ಸೋಮಣ್ಣನವರೇ ಹೇಳಹೇಳೋದರೊಳಗಾಗಿ ನಿಮ್ಮ ಸೊಸಿ ಕಾಫಿ ತಂದೇ ಬಿಟ್ಟಳು. ಅಡಿಗಿ ಮನೆಯಲ್ಲಿ ಒಳ್ಳೇ ನುರಿತಂತೆ ಕಾಣುತ್ತೆ ಅಲ್ವೇ,

**ರಾಮು**– ಹಾಗಲ್ಲ ಚೇರಮನ್ನರೇ ಊರ ಪ್ರಮುಖ ಪ್ರೆಸಿಡೆಂಟರು ಬಂದಾರಂತ

ಅರ್ಜಂಟಾಗಿ ಕಾಫಿ ಮಾಡಿದ್ದು (ಸೊನ್ನಿ ಮಾಡುತ್ತ) ಅತ್ತಿತ್ತ ಯಾಕ ನೋಡ್ತೀರ್‍ರೀ. ಕುಡಿರಿ. ಕಾಫಿ ಆರುತ್ತೆ. (ಕಣ್ಣು ಸನ್ನೆ ಮಾಡಿ ತೋರಿಸುವನು.)

**ಶ್ರೀಧರ–** (ಕಾಪಿ ಕುಡಿದು ಕೆಳಗಿಟ್ಟು) ಹಾ ಮರತೇ ಬಿಟ್ಟೆ ನಿನ್ನೆ ಅಜ್ಜನವರು ಬಂದಿದ್ದಾರೆ. ಇದೇ ಈಗ ಸ್ನಾನಕ್ಕೆ ಹೋದರು. ನನಗೆ ಮಾತ್ರ ನಿಮ್ಮ ಕಡೆ ನೆನಪಾಗಿ ಹಾಗೆ ಬಂದೆ. ಸ್ನಾನ ಮುಗಿದಿರಬಹುದು, ಬರ್ತೀನಿ. (ಎದ್ದು ನಿಲ್ಲುವನು.)

**ಸೋಮಣ್ಣ–** ಇರಲಿ ಕೂಡಪ್ಪಾ. ಇಷ್ಟ್ಯಾಕೆ ಅವಸರ. (ಕೂತ ಮೇಲೆ) ಇರಲಿ ಅಜ್ಜನವರು ಅಂದರೆ ಆ ದಿವ್ಸ ಬಂದಿದ್ರಲ್ಲಾ, ನಾಯಿಪುಡಿ ಅಜ್ಜ ಅವರೆ ಏನು ?

**ಶ್ರೀಧರ–** ಹಾ.... ಅದೇ ನಾಯಿಪುಡಿ ಅಜ್ಜನೇ.

**ರಾಮು–** ಆಹಾ. ಆ ದಿವ್ಸ ನೋಡಿದ್ದೆಲ್ಲ ಚಿಕ್ಕಪ್ಪಾ ಅದೇ ಅಜ್ಜನಾ ಏನ ಅಜ್ಜನ್ರೀ ಮಾಃಹ್ಯಾಃ ಅವರು ಬಂದಾರಂದ್ರ ನಮ್ಮ ಚೇರಮನ್ನರಿಗೆ ದೇವರೇ ಮನಿಗಿ ಇಳಿದಾನಂತ ತಿಳಿದುಕೊಳ್ಳುತ್ತಾರೆ. ಇವರ್‍ಯಾಕೆ ಗಂಡಸರು ಹೆಂಗಸರು ಗುಂಪಿಗೆ ಗುಂಪೇ ಕೂಡುತ್ತಾರೆ. ಅದರಲ್ಲಿ ಹೆಂಣು ಬಳಗವೇ ಹೆಚ್ಚು. ನೋಡು ಚಿಕ್ಕಪ್ಪಾ ಹಂಣ ಬಳಗ ಇದ್ದರೆ ಸಾಕು. ಅವರಿಗಿ ಊಟಾಬೇಡ, ನಿದ್ದೀ ಬೇಡ. ಕಾಪೀ ಬೇಡ, ಅಕಸ್ಮಾತ್ ಬರೇ ಥಿಂಡಿ ಇದ್ದರೆ ಸಾಕು. ಆ ಥಿಂಡಿ ಮೇಲೆ ಹೊತ್ತು ಮುಳುಗೋವರಿಗೂ ಮಾತಾಡಿದ್ದೇ ಆಡೋದು. ಹಾಡಿದ್ದೇ ಹಾಡೋದು. ಅವರು ಪದ ಹಾಡಿದರಂತೂ ಸಿನಿಮಾ ನಟಿಯರು ಇವರ ಮುಂದೆ ಲಗಾ ಹೊಡಿಯಬೇಕು. ಯಾಕ್ರೀ ಚೇರಮನ್ರೇ.

**ಶ್ರೀಧರ–** ನಿಜ. ರಾಮು ಹೇಳೋದೆಲ್ಲ ಖರೇನೇ ಅವರು ಬಹಾಳ ಯೋಗ್ಯರಿದ್ದಾರೆ. ನೋಡಿದರೆ ಒಳ್ಳೇ ಚಿಕ್ಕ ವಯಸ್ಸು.

**ರಾಮು–** ಹಾ.... ನಾನು ಅದೇ ಹೇಳೋದು. ಇಂಥಾ ಚಿಕ್ಕ ವಯಸ್ಸು ಅಂತ ಅವರ ವೇದಾಂತ ಹೆಣ್ಣು ಬಳಗಕ್ಕೆ ಹಿಡಿದಿರೋದು. ಇಲ್ಲವಾದರೆ ಮುದಿಮೂಳಗಳಾಗಲೀ ಕುರೂಪಿಯಾಗಲೀ ಆಗಿ ಇದಕ್ಕಿಂತಲೂ ಹೆಚ್ಚಿಗೆ ಹೇಳಿ ಅಂಗೈಯ್ಯಲ್ಲಿ ದೇವರನ್ನು ಪ್ರತ್ಯಕ್ಷ ಮಾಡಿದರೂ ನಂಬಲಾರರು. ಈ ಹೆಂಣುಬಳಗ ನೋಡು ಚಿಕ್ಕಪ್ಪಾ ಇಂಥವರನ್ನು ಕಂಡರೆ ನಮ್ಮ

ಧಣೇರು ತಮ್ಮ ತನು–ಮನ–ಧನವನ್ನು ಸಹ ಅವರಿಗೆ ಮೀಸಲಿರಿಸುತ್ತಾರೆ. ಅಲ್ಲದೆ ಅವರಿಂದ ಆಶೀರ್ವಾದ ತಕ್ಕೊಂಡೇ ಕೈಬಿಡುತ್ತಾರೆ. ಪಾಪ ಅವರು ಇನ್ನೂ ಹೊಸಬರು ದಿನ ಕಳೆದಂತೆ ಆ ಮಹಿಮರ ಕೃತಿಗಳು ತಾನಾಗೆ ಹೊರಬೀಳುತ್ತವೆ. ಮುಖ್ಯವಾಗಿ ಅವರು ಬಹಾಳ ಯೋಗ್ಯರು.

**ಸೋಮಣ್ಣ**– ಇರಲಿ. ಶ್ರೀಧರಾ ಇವರ ಪೂಜೆ ಬಹಾಳ ಹೊತ್ತಾಗುವುದೋ ಹೇಗೆ....

ರಾಮು– ಛೇ ಛೇ ಛೇ ಅವರಿಗೇನು ಗೊತ್ತು ಚಿಕ್ಕಪ್ಪಾ ನನ್ನ ಕೇಳ್ರಿ. ನಾ ಹೇಳ್ತಿನಿ. ಇವರ ಪೂಜೆ ಸಮಯ ನೋಡಿ ಹೆಚ್ಚಾಗುತ್ತೇ. ಸಮಯ ನೋಡಿ ಕಡಿಮಿ ಆಗುತ್ತೆ ಅನ್ನಿ. ಕೈಯ್ಯಲ್ಲಿ ಲಿಂಗವಿಲ್ಲ. ಮುಂದೆ ಯಾವ ಮೂರ್ತಿಯ ಚಿತ್ರವಿಲ್ಲಾ. ಸುಮ್ಮನೇ ಕಣ್ಣು ಮುಚ್ಚಿ ಕೂಡ್ರುವ ಪೂಜೆ ಇವರದು. ಆ ಸಮಯಕ್ಕೆ ಹೆಣ್ಣು ಬಳಗ ಬಂದರೆಮಾತ್ರ ತಕ್ಷಣವೇ ಪೂಜೆ ಮುಗಿದು ಅರ್ಘ್ಯ ಬಿಡುತ್ತೆ. ಗಂಡಸರು ಬಹಾಳ ಬಂದಲ್ಲಿ ಬಹಾಳ ಹೊತ್ತು ಕಣ್ಣು ಮುಚ್ಚುತ್ತೆ ಇಂಥಾ ಪೂಜೆ ಅವರದು. ಯಲ್ಲಾ ತಮ್ಮ ಸ್ವಾಧೀನದ ಪೂಜೆಯನ್ನೇ ಅವರು ಕೈಕೊಂಡಿರುತ್ತಾರೆ. ಪರಾಧೀನದ ಪೂಜೆಯಂತೂ ಅವರದಲ್ಲಾ ಅನ್ನಿ. ಯಾಕ್ರೀ?

ಶ್ರೀಧರ– (ನಗುತ್ತ) ಅಲ್ಲೋ ರಾಮೂ. ಯಲ್ಲಾ ನೋಡಿದವನಂತೆ ಹೇಳುವಿಯಲ್ಲಾ. ಯಾವಾಗ ನೋಡಿದ್ಯೋ ಅವರ ಪೂಜೆ ನೀ ಹೇಳೋದೆಲ್ಲ ನಿಜವಾದ ಮಾತೇ ನೋಡು.

ರಾಮು– ಅಂದರೆ ಇದುವರೆಗೂ ಸುಳ್ಳೆಂದು ತಿಳಿದಿದ್ದಿರಾ ನನ್ನ ಮಾತು. ನಿಜವಾಗಿ ಹೇಳಬೇಕೆಂದರೆ ಅವರ ಪೂಜೆ ನೋಡಿಲ್ಲ ..... ಅಲ್ರೀ ನೋಡೋದು ಯಾಕೆ ಬೇಕ್ರೀ. ಇಂಥವರ ಪೂಜೆ ಹೀಗೇ ಎಂದು ನಮ್ಮ ಇಂಗ್ಲೀಷ ಬೈಬಲ್ಲಿನಲ್ಲಿ ಓದೇ ಬಿಟ್ಟಿದ್ದೇನೆ. ಅದನ್ನೇ ಹೇಳಿದೆ.

**ಸೋಮಣ್ಣ**– ಇರಲಿ. ಶ್ರೀಧರಾ ಅಜ್ಜನವರ ಕುಲವಾವುದು ಕೇಳಿದ್ದೀರಾ.

ಶ್ರೀಧರ– ಇಲ್ಲ ಬಿಡ್ರಿ ಕುಲ ಇದುವರೆಗೆ ನಾನಂತೂ ಕೇಳೇ ಇಲ್ಲ.

ರಾಮು– ಛೇ ಛೇ ಕೇಳೋದು ಯಾಕಬೇಕ್ರೀ. ನೋಡಿದರೆ ತಿಳ್ಯೋದಿಲೇನ್ರೀ ಲಿಂಗಾಯತ್ ಅಂದೀರಾ ಲಿಂಗವಿಲ್ಲ ಕೊರಳಲ್ಲಿ. ಬರೇ ಧಾರವದೆ. ಅದನ್ನೇ ಜನಿವಾರವೆಂದು ತಿಳಿದು ಬ್ರಾಹ್ಮಣನೆಂದೀರಾ. ಹಣೆಗೆ ಕುಂಕುಮ ಧಾರಾಳವಾಗಿದೆ. ಇನ್ನು ಅವರ ಸ್ತೋತ್ರ ಪದ್ಯಗಳನ್ನು ಕೇಳುವಿರಾ.

ವೀರಭದ್ರ ದೇವರ ಒಡಪುಗಳು ಇದರ ಮೇಲಿಂದ ಅಜ್ಜನವರ ಕುಲ ಯಾವದೆಂದು ನಿರ್ಧಾರ ಮಾಡುವಿರಿ. ನಿಮ್ಮಿಂದ ನಿರ್ಧಾರವೇ ಆಗೀದಿಲ್ಲಾನ್ನಿ. ನಾನಂತೂ ಮಾಡೇ ಬಿಟ್ಟೇನಿ.

**ಶ್ರೀಧರ–** ಏನೂ. ನೀನು ನಿರ್ಧಾರ ಮಾಡಿದ ಕುಲವ್ಯಾವದು ರಾಮೂ.

**ರಾಮು–** ಕೇಳಿ ಹಾಗಾದರೆ ಬ್ರಹ್ಮನು ಈ ಅಜ್ಜನನ್ನು ಸೃಷ್ಟಿ ಮಾಡಬೇಕಾದರೆ ಕುಲ ಹದಿನೆಂಟು ಜಾತಿಯನ್ನು ಕಲಿಸಿ ಮುದ್ದೀ ಮಾಡಿ ಪುರುಷ ಕಳೆ ಕೊಟ್ಟು ಭೂಮಿಗೆ ಒಗೆದುಬಿಟ್ಟಿದ್ದಾನೆ. ಆ ಬ್ರಹ್ಮನಿಗೂ ಕೂಡ ಇಂಥಾ ಕುಲವೆಂದು ಹೆಸರಿಡಲಿಕ್ಕೆ ಬಾರದೆ ಇದೊಂದು ೧೯ನೇ ಹೊಸಕುಲವೆಂದು ನಿರ್ಧಾರ ಮಾಡಿದ್ದಾನೆ. ಅದಕ್ಕಾಗೇ ಇದೊಂದು ಜಾತಿಯ ಕಲಿಬೆರಿಕಿ ಕುಲವೆಂದು ನಾನು ನಿರ್ಧಾರ ಮಾಡಿದ್ದೇನೆ. ಇಷ್ಟೇ.

**ಶ್ರೀಧರ–** ರಾಮು ನೀನು ಬಹಳ ಬುದ್ಧಿವಂತನಯ್ಯ ನಿನ್ನಷ್ಟು ನಾ ಓದಲಿಲ್ಲ. ಓದಿದ್ದರೆ ಮಾತ್ರ ನಾ ಏನ ಹೇಳಲೀ.....

**ರಾಮು–** ಆಹ ಅದೇ ನಾ ಹೇಳೋದು. ನೀವು ಓದದೇ ಇದ್ದದ್ದೇ ನೆಟ್ಟಗನ್ನಿ. ಯಾಕಂದರೆ ನೀವು ಚನ್ನಾಗಿ ಓದಿದ್ದರೆ ಮಾತ್ರ ಸ್ವಗ್ರಾಮದಲ್ಲಿರುತ್ತಿದ್ದಿಲ್ಲ ಈ ಚೇರಮನ್ ಕೆಲ್ಸಕ್ಕಂತೂ ಸೇರ ತಾನೇ ಇರಲಿಲ್ಲ. ಊರ ಜನರಂತೂ ನಿಮ್ಮನ್ನು ನಂಬತಾನೇ ಇದ್ದಿಲ್ಲ. ಯಾಕೆ ಚಿಕ್ಕಪ್ಪಾ ನಿಜವಲ್ವೇ ನನ್ನ ಮಾತು.

**ಸೋಮಣ್ಣ–** ನಿಜ ರಾಮೂ..... ನೀ ಹೇಳಿದ್ದೆಲ್ಲ ನಿಜವೇ..... (ಮಲಗುತ್ತ) ಹಾ ನೋಡು ಶ್ರೀಧರಾ ಹೊಟ್ಟೆ ಮುರಿಯಹತ್ತಿತು..... (ಮಲಗುತ್ತ) ಹಾ ನೋಡು ಶ್ರೀಧರಾ ಹೊಟ್ಟೆ ಮುರಿಯಹತ್ತಿತು.....

**ಶ್ರೀಧರ–** ಸೋಮಣ್ಣನವರೇ ಸ್ವಲ್ಪು ಆರಾಮ ಮಲಗಿ ವಿಶ್ರಾಂತಿ ತಕ್ಕೊಳ್ಳಿರಿ..... ನಾವು ಬರುತ್ತೇವೆ..... ನಡಿ ರಾಮೂ ಅಜ್ಜನ ಪೂಜೆ ಮುಗಿದಿರಬಹುದು. ಹೋಗೋಣ....

**ರಾಮು–** ನಿಜ ಬನ್ನಿ..... ಅಲ್ಲಿದ್ದರೆ ಮಾತ್ರ ಬಾಳೆಹಣ್ಣು ಕಿತ್ಲೀಹಣ್ಣು ಕಲ್ಲಸಕ್ರಿ ದ್ರಾಕ್ಷಿ ಬೇಕಾದದ್ದು ಸಿಗುತ್ತೆ ಬರ್ರಿ ಹೋಗೋಣ.... ನಮಸ್ಕಾರ ಚಿಕ್ಕಪ್ಪಾ ಬರ್ತೀವಿ. (ಹೋಗುತ್ತಾರೆ)

## ಪ್ರವೇಶ ೪

## ರಸ್ತೆ

(ಶ್ರೀಧರ ರಾಮು ಇಬ್ಬರೂ ಮಾತಾಡುತ್ತ ರಸ್ತೆಗೆ ಬರುತ್ತಾರೆ)

**ರಾಮು--** ಛೇ ಛೇ ನೀನು ವಿಚಿತ್ರ ವ್ಯಕ್ತಿ.... ಶ್ರೀಧರಾ.... ಗೌರಿಯನ್ನು ನೀನು ನೋಡುವಾಗ್ಯೆ ಸೋಮಂಣನವರು ನಿನ್ನನ್ನೇ ನೋಡುತ್ತಿದ್ದರು..... ಅದಕ್ಕಾಗೇ ನಿನಗೆ ಎಚ್ಚರಿಸಿದೆ. ಏನೇ ಇರಲಿ ಇಂಥಾ ಕಾರ್‍ಯದಲ್ಲಿ ಬಹು ಜಾಣನೆಂದು ನನಗೆ ಅರ್ಥವಾಯಿತು. ಇರಲಿ (ಪೋಸ್ಟ್‌ಮನ್ ಬರುತ್ತಾನೆ....)

**ಪೋಸ್ಟಮನ್–** ನಮಸ್ಕಾರ ಚೇರಮನ್ನರೇ ತಮ್ಮ ಟಪಾಲ ತಕೊಳ್ಳಿರಿ..... (ಕೊಟ್ಟು ಹೋಗುತ್ತಾನೆ.)

**ಶ್ರೀಧರ--** (ಕವರನ್ನು ವಡೆಯುತ್ತ) ಇದ್ಯಾವದಪ್ಪಾ (ಹರಿದು ಓದಿ) ಓಹೋ ರಾಮು ಇದು ಅಜ್ಜನ ವರಪತ್ರ. ಹುಬ್ಬಳ್ಳಿ ಅಕ್ಕನ ಬಳಗದವರಿಂದ ಆಮಂತ್ರಣವಿದೆ, ಅರ್ಜಂಟಾಗಿ ಬರಬೇಕೆಂದು ಬರೆದಿದ್ದಾರೆ......

**ರಾಮು--** ನೋಡು ಶ್ರೀಧರಾ ಅಜ್ಜನವರ ಪೂಜೆ ಮುಗಿದ ಮೇಲೆ ತೋರಿಸು ಇಲ್ಲವಾದರೆ ಪೂಜೆ ಅರ್ಧಕ್ಕೆ ನಿಲ್ಲುವ ಪ್ರಸಂಗ ಬಂದೀತು.... ಹುಷಾರಿ.... ನಾನು ಮಾತ್ರ ಮನೆಗೆ ಹೋಗಿ ಲಗು ಬರುತ್ತೇನೆ ನೀವು ಹೋಗಿರಿ.... (ಹೋಗುತ್ತಾನೆ) (ಮತ್ತೊಂದು ಕಡೆ ಒಳಗೆ ಶಾಮುವಿನ ಶಬ್ದವಾಗುತ್ತದೆ ಶ್ರೀಧರ ಲಕ್ಷಿಸಿ ಕೇಳುತ್ತಾನೆ)

**ಶ್ಯಾಮು--** (ಒಳಗೆ) ಛೇ ಛೇ... ಈಗ ಬೇಡ ಮತ್ತೆ ಬಂದೇ ಬರುತ್ತೇನೆ. ಸಧ್ಯ ಮನಗೆ ಹೋಗಬೇಕಾಗಿದೆ ಬರ್ತೀನಿ ನಮಸ್ಕಾರ.... (ಹೊರಗೆ ಬರುತ್ತ ಶ್ರೀಧರನನ್ನು ಕಂಡು) ನಮಸ್ಕಾರ ಚೇರಮನ್ರೇ ಮನೆಯಿಂದಲೇ ಬಂದಿರಾ

**ಶ್ರೀಧರ--** ನಿಜ ಶಾಮು ನಿಮ್ಮ ಮನಿಯಿಂದಲೇ ಬಂದೆ ಯಾಕೆ ಎಷ್ಟು ಘಾಬರಿಯಿಂದಿರುವಿ....

**ಶ್ಯಾಮು--** ಏನಿಲ್ಲ.... ಅಪ್ಪನಿಗೆ.... ಹೊಟ್ಟೆ ಶೂಲೆ ಹೆಚ್ಚಾಗಿದೆಯಂತೆ ಕರೀಲಿಕ್ಕ ಬಂದಿದ್ದರು ಅದಕ್ಕಾಗೇ ಕೇಳಿದ್ದು.....

**ಶ್ರೀಧರ--** ಓಹೋ ಹೀಗೋ ನಾನು ಬರುವಾಗ್ಯೆ ಹೊಟ್ಟೆ ಮುರಿಯುತ್ತೆ ಎಂದು ಮಲಗಿದರು ಅವಸರವಿದ್ದ ಮೂಲಕ ಹಾಗೆ ಬಂದೆನು..... ಲಗು ಹೋಗು.... ಇದೋ ಶಾಮು.... ಪ್ರಸಂಗ ಬಂದಲ್ಲಿ ೧೦–೫೦

ರೂಪಾಯಿಗಳನ್ನು ನನ್ನಿಂದ ತರ್ಸಿಕೋ ನೀನೇನೂ ಚಿಂತೆ ಮಾಡಬೇಡ

**ಶ್ಯಾಮು–** ಆಗಲಿ ತಮ್ಮಂಥವರ ಕರುಣೆ ಇದ್ದರೆ ಸಾಕು ಬರ್ತೀನಿ. (ಹೋಗುತ್ತಾನೆ.)

**ಶ್ರೀಧರ–** ಹೋಗು ಹೋಗು ಶಾಮೂ ನೀವೆಲ್ಲ ನನ್ನ ಕೈಗೊಂಬೆಯಾಗುವಂತೆ ಮಾಡಲು ನನ್ನ ಧನವೇ ನಿಮ್ಮನ್ನು ಮರುಳು ಮಾಡಹತ್ತಿದೆ. ಅಂದ ಮೇಲೆ ನಿನ್ನ ಗೊಂಬೆಯಾದ ಗೌರಿಯ ಪಾಡೇನು! ಎಂದೋ ನನ್ನ ವಶವಾಗಲಿಕ್ಕೆ ತಾನೇ ಹಾತೊರೆಯುವ ಸಂಭವ ಬರುತ್ತದೆ.... ಈಗಲೇ ಹೋಗಿ ನನ್ನ ಸೇವಕರಿಂದ ನೂರಾರು ರೂಪಾಯಿಗಳನ್ನು ಖರ್ಚಿಗಾಗಿ ಕಳ್ಸಿ ಕೊಡುತ್ತೇನೆ. ಆ ಮೇಲೆ ಏನಾಗುತ್ತದೋ ನೋಡೋಣ ಹಣವೆಂದರೆ ಸಾಮಾನ್ಯವಲ್ಲಾ ಹೆಣವನ್ನು ಸಹ ಮಾತಾಡಿಸುತ್ತದೆ....

**.... ಪದ ....**

(ಈ ಭವಸಾಗರದೀ ಎಂಬಂತೆ)
ಈ ಧನವೇ ಜಗದೀ । ಸಂಸಾರಕೆ ತಾ.... ಶಾಂತಿ ॥
ಹಣವಿದ್ದವನೇ ದೇವ ಸಮಾನ ।
ಹಣವಿಲ್ಲದವ ಹೆಣದ ಸಮಾನ ॥
ಏಕ ಭಾವದೀ ಧನವಂತನನು ।
ಪ್ರೇಮ ಗಳಿಸಿದವನೇ.... ಧನ್ಯ ॥ ೧ ॥

(ಹಾಡುತ್ತ ಹೋಗುತ್ತಾನೆ.)

## ಪ್ರವೇಶ ೫

### ಶ್ರೀಧರರ ಮನೆಯ ಶೀನು

(ಮನೆಯಲ್ಲಿ ಮಂಚದ ಮೇಲೆ ೨ ತೆಕ್ಕೆ ಇಟ್ಟಿರಬೇಕು. ತಲಿಕಡೆ ಕಾಲಿನಕಡೆ ಯಡಬಲ ನಾಲ್ಕು ಚೇರುಗಳಿರಬೇಕು.....)

**ಸೀತಮ್ಮ–** ಶಾಮಲಾ, ನಿನ್ನೇ ನೀ ಹೇಳಿದ್ದೆಲ್ಲ ನಿಜವೇ....

**ಶಾಮಲಾ–** ನಿಜವಮ್ಮಾ ನಿನ್ನೊಡನೆ ನನ್ನ ಸುಳ್ಳಿನ ಕಥೆಯೇ.... ನನ್ನಾಣೆಯಾಗಿ ಹೇಳುತ್ತೇನೆ ಅಪ್ಪನು ಇಷ್ಟೊಂದು ದಾರಿ ತಪ್ಪಿರುವೆನೆಂದು ನಾನು ತಿಳಿದಿರಲಿಲ್ಲ... ಅದೇಕೆ.... ನಿನ್ನೆ ಇದೇ ಅಜ್ಜನಲ್ಲೇ ಅಪ್ಪನು ಗುಪ್ತವಾಗಿ ಮಾತಾಡುವ ಯಲ್ಲಾ ಮಾತುಗಳನ್ನು ಕೇಳಿದ್ದೇನೆ.... ಅಪ್ಪನಿಗೆ ಅಂತ್ರವನ್ನು ಬರೆದು ಹಾಕಿದನಮ್ಮಾ. ಮರೆಗೆ ನಿಂತು ಎಲ್ಲಾ ನೋಡಿದೆ.... ಅಮ್ಮಾ

ಇಂಥ ಸುಳ್ಳು ಅಜ್ಜನನ್ನು ನಂಬಿ ಅಪ್ಪನು ಎಲ್ಲಿ ಮರ್ಯಾದೆಗೆ ಕುಂದು ತಂದುಕೊಳ್ಳುವನೋ ಏನೋ.... ಇನ್ನು ಮೇಲೆ ನೀನಾದರೂ ಅಪ್ಪನಿಗೆ ಹೇಳಮ್ಮಾ. ಆಜ್ಜನವರದು ಬರೇ ಬೂಟಾಟಿಕೆ.... ನಾನೆಲ್ಲ ಕಂಡು ಹಿಡಿದಿದ್ದೇನೆ....

ಸೀತಮ್ಮ– ಆ.... ಅಜ್ಜನವರು ಇಂಥಾ ಹೀನ ಕೆಲಸಕ್ಕೆ ಅಂತ್ರ ಮಾಡಿ ಕಟ್ಟುವರೇ.... ಏನಿದು.... ಇಂತಿಂಥಿವರು ಇಂಥಾ ಹೀನ ಕೆಲಸಕ್ಕೆ ಕೈ ಹಾಕಿದರೆ ಕುರಿಗಳಂತಿರುವ ಜನಗಳು ನಿಶ್ಚಯವಾಗಿ ಕೆಟ್ಟು ಹೋಗುತ್ತಾರೆ.... ಅದಕ್ಕಾಗಿಯೇ ಇಂಥಾ ಕಾಲ ಬಂದಿದೆ.... ಇರಲಿ ಶಾಮಲಾ..... ಯಾರ ಮುಂದೆ ಈ ಸುದ್ದಿ ಹೇಳಬೇಡ ಸುಮ್ಮನಿರು..... ಇನ್ನೂ ಇವರ ಆಟ ಎಲ್ಲಿಗೆ ಬರುತ್ತದೋ ನೋಡೋಣ. ಪಾಪ.... ಗೌರಿಯು ಬಹಳ ಸುಶಿಕ್ಷಿತಳು ಇವರ ವಿಷಯಕ್ಕೆ ಏನು ತಿಳಿದುಕೊಳ್ಳುವಳೋ ಏನೋ....

ಶಾಮಲಾ– ಅದಿರ್ಲಿ ಅಮ್ಮಾ ಅವಳ ಗಂಡ ಶಾಮಂಣನಿಗೆ ಗೊತ್ತಾದರೆ ದೊಡ್ಡ ಅನಾಹುತವೆಂದೇ ತಿಳಿಯಬೇಕು. ನಿನ್ನೆ ಗೌರಿಯ ಮಾವನು ರಾತ್ರಿ ಸತ್ತನಂತೆ.

ಸೀತಮ್ಮ– ಏನೂ.... ಸೋಮಂಣನು ಸತ್ತನೇ.... ಏನಾಗಿತ್ತು....

ಶಾಮಲಾ– ರಾತ್ರಿಯಲ್ಲಿ ಹೊಟ್ಟೆಶೂಲೆ ಹೆಚ್ಚಾಗಿ ಒಮ್ಮಿಂದೊಮ್ಮೆಲೆ ಚೀರಾಡಿ ಪ್ರಾಣ ಬಿಟ್ಟನಂತೆ. ಉದಯಕ್ಕೆ ಭಾವೀ ಮೇಲೆ ಜನರು ಮಾತಾಡಿದರು......

ಸೀತಮ್ಮ– ಪಾಪ ಬಹಳ ಒಳ್ಳೆಯವರು ಇನ್ನೂ ಕೆಲವು ದಿವ್ಸ ಇರಬೇಕಾಗಿತ್ತು.... ಸೊಸಿಯ ಮೇಲಂತೂ.... ಬಹಳ ಪ್ರೇಮ ಯಿದ್ದನಂತೆ.... ಮುಖ್ಯವಾಗಿ ಮಗನ ದುರ್ಘಟೆಯ ದುರ್ವ್ಯವಹಾರವೇ ಅವರಿಗೆ ಮೃತ್ಯುವೆಂದು ತಿಳಿಯಬೇಕು. ಇರಲಿ ಶಾಮಲಾ ನಾಲ್ಕು ಘಂಟೆಗೆ ಇಬ್ಬರೂ ಹೋಗಿ ಮಾತಾಡಿಸಿ ಬರೋಣವೇ....

ಶಾಮಲಾ– ಆಗಲೆಮ್ಮಾ ಹೋಗಿ ಬರೋಣ..... ಗೌರಿ ಬಹಾಳ ಒಳ್ಳೆಯವಳು.... ಅಂಥವಳ ಮೇಲೆ ಅಪ್ಪನ ಅತ್ಯಾಚಾರ ಏನಮ್ಮಾ ಇದು....

ಸೀತಮ್ಮ– ಆಗಲಿ ನೀನು ನನಗೆ ತಿಳಿಸಿದ್ದೇ ಮೇಲು... ಇರಲಿ ಅಜ್ಜನ ಪೂಜೆ ಮುಗಿಯುವದರೊಳಗಾಗಿ ಚಹ ಸೋಸು. ಅವರು ಈಗ ಬರಬಹುದು (ಒಳಗೆ ಶ್ರೀಧರನ ಶಬ್ದ) ಅದೋ ಬಂದೇ ಬಿಟ್ಟರು ಒಳಗೆ ನಡೆ.... (ಹೋಗುವಳು.)

(ಶ್ರೀಧರ ರಾಮು ಇಬ್ಬರೂ ಬರುತ್ತಾರೆ.)

**ಶ್ರೀಧರ–** ಅಜ್ಜನ ಪೂಜೆ ಮುಗಿದಿಲ್ಲವೇನೆ...... ಬಾ ರಾಮೂ....... ಕೂಡು..... (ಕೂತ ಮೇಲೆ)

**ಸೀತಮ್ಮ–** ಇನ್ನೂ ಮುಗಿದಲ್ಲ.....

**ರಾಮು–** ನಾವು ಬಂದರೆಂದು ತಿಳಿದ ಮೇಲೆ ಲಗು ಮುಗೆಯುತ್ತೆ ಅಜ್ಜನ ಪೂಜೆ...

**ಶ್ರೀಧರ–** ನೀನೂ ಸಹ ಅಜ್ಜನಂತೆ ಮಾತಾಡಿವಿಯಲ್ಲೋ ರಾಮು...

**ರಾಮು–** ಹೌದು ಸಧ್ಯ ಇದಕ್ಕೆ ಬೇಕಾಗಿದೆ ನಾಯಿ ಮುಡಿ ಕಷಾಯ... ತಯಾರೇನಮ್ಮಾ.

**ಸೀತಮ್ಮ–** ಯಾಕೋ ರಾಮು ಅಜ್ಜನವರ ಉಪದೇಶವಾಯಿತೇನು.

**ರಾಮು–** ಹೌದಮ್ಮಾ ನಿನ್ನೆ ಅವರಿಂದ ಉಪದೇಶವಾಗಿದೆ ನಾನು ಅಂದರೆ ನರಕವಂತೆ ಚಹಪುಡಿಗೆ ನಾಯಿಪುಡಿ ಅನ್ನಬೇಕಂತೆ.... ಮತ್ತೆ.... ಬೀಡಿಗೆ ಊದಿನಕಡ್ಡಿ ಎಂದು ಹೇಳಿ ನಮಗೆಲ್ಲ ಉಪದೇಶ ಮಾಡಿದರು. ಅದಕ್ಕಾಗಿ ನಾನು ಮಾತ್ರ ಘಟ್ಟ್ಯಾಗಿ ಅವರ ಮಾತು ನಂಬಿದ್ದೇನೆ..... ಯಾಕರೀ ಶ್ರೀಧರರೇ ಮತ್ತೇ ನೀವು.....

**ಶ್ರೀಧರ–** ಛೇ ನನಗೆ ಸಾಧ್ಯವಿಲ್ಲ.....ನೀನೊಬ್ಬ ಭಕ್ತನು ಉದ್ಧಾರ ಆದರೆ ಸಾಕು..

**ಸೀತಮ್ಮ–** (ಶಾಮಲಾ ಬಂದು ತಾಯಿಗೆ ಹೇಳುತ್ತಾ) ಅದೋ ಅಜ್ಜನ ಪೂಜೆ ಮುಗಿದಿದೆ ರಾಮೂ ನೀವಿಬ್ಬರೂ ಪ್ರಸಾದಕ್ಕೆ ಹೋಗಬೇಕಂತೆ ನಡಿರಿ ಒಳಗೆ.....

**ಶ್ರೀಧರ–** ಬಾರೋ ರಾಮು ಪೂಜೆ ಮುಗಿಯಿತಂತೆ..... ಪ್ರಸಾದಕ್ಕೆ ಬಾರೋ.

**ರಾಮು–** ನಡಿರೀ ಅದಕ್ಕಾಗೇ ಬಂದಿರೋದು..... ಇರಲಿ ಪ್ರಸಾದದ ಮೇಲೆ ನಾಯಿ ಪುಡಿ ಕಷಾಯವುಂಟಾ.....

**ಶ್ರೀಧರ–** ಓಹೋ ಅದು ಅಜ್ಜನ ವರಮಹ ಪ್ರಸಾದ ಬಾ ಹೋಗೋಣ (ಒಳಗೆ ಹೋಗುತ್ತಾರೆ.)

– ತೆರೆ ಬೀಳುತ್ತದೆ –

ರಸ್ತೆ

(ವಾಸು ಗ್ರಾಮಸೇವಕ ಬರುತ್ತಾನೆ)

ವಾಸು– ಲಗ್ನಾಗದೇ ಬ್ರಹ್ಮಚಾರಿ ಆಗಿರುವವನೇ ಪುಣ್ಯವಂತನೆಂದು ಹೇಳಬೇಕು. ಮೊದಲಿಗೆ ಲಗ್ನ ಆಂದರೆ ನನಗೆ ಎಷ್ಟು ಸಂತೋಷವಾಗಿತ್ತೋ ಅಂದಮೇಲೆ ನನ್ನಂಥಾ ವ್ಯಥೆ ಯಾರಿಗೂ ಬೇಡ. (ಅತ್ತಿತ್ತ ನೋಡಿ) ಅದರಲ್ಲಿ ನನ್ನ ಹಂಡತಿಯಂಥ ಸೂಕ್ಷ್ಮ ಕನ್ಯೆ ಎಲ್ಲಿಯೂ ನೋಡಲಿಲ್ಲ ಇವರಪ್ಪ ಇವಳನ್ನು ತೋರಿಸದೆ ಇವಳ ಗುಣ ವರ್ಣನೆಯನ್ನು ಮಾಡಿ ನನಗೆ ಮೋಸ ಮಾಡಿದನೆಂದು ಹೇಳಿದರೆ ತಪ್ಪಾಗುತ್ತದೆ. ಯಾಕಂದರೆ ಸಾಕಷ್ಟು ವರದಕ್ಷಿಣೆ ಆಶೆಗಾಗಿ ನಾನೇ ಈ ಕೊಂಡದಲ್ಲಿ ಬಿದ್ದಿರುವೆನೆಂದು ಹೇಳಬೇಕಾಗಿದೆ. ದಾರಿಯಲ್ಲಿ ಸ್ವಲ್ಪು ಹೊತ್ತಾದರೆ ಕರಿಲಿಕ್ಕೆ ಬರುತ್ತಾಳೆ. ಮಹರಾಯಳು ಅದಕ್ಕಾಗಿ ಲಗು ಹೋಗಲೇಬೇಕು.

ಶ್ರೀನಿವಾಸ– (ಬರುತ್ತಾನೆ) ಯಾಕ್ರಿ ಆರಾಮ ಇದ್ದೀರಾ ನಮಸ್ಕಾರ.

ವಾಸು– ಬನ್ನಿ ಶ್ರೀನಿವಾಸರೇ ಎಲ್ಲಿಯ ಆರಾಮು. ನೀ ನೋಡಿದ್ದೇ ಆರಾಮು.

ಶ್ರೀನಿವಾಸ– ಇರಲಿ. ಆ ದಿವ್ಸ ನಿಮ್ಮ ಹೆಂಡತಿ ಕೈಯ್ಯಲ್ಲಿ ಸಿಕ್ಕು ಬಹಾಳ ಬುದ್ಧಿ ಬಂತೋ. ಈ ದಿವ್ಸ ನಿಮ್ಮನ್ನು ಕಂಡದ್ದು ನನ್ನ ಪುಣ್ಯ.

ವಾಸು– ಪುಣ್ಯ ಪಾಪ ಎರಡೂ ಸೇರಿ ನನ್ನ ಹೆಗಲಿಗೆ ಬಿದ್ದಿವೆ. ಏನ ಮಾಡೋದು ಇನ್ನು ಸ್ವಲ್ಪು ಹೊತ್ತು ನಾವಿಬ್ಬರೂ ಇಲ್ಲೇ ನಿಂತರೆ ಮತ್ತೇ ಅದೇ ದಿವಸ್ದ ಮಂಗಳಾರ್ತಿ ಬಂದೇ ತೀರುತ್ತೆ. ಅದಕ್ಕಾಗಿ ಅಲ್ಲೇ ಮನೆಗೆ ಹೋಗೋಣ ನಡೆ. ಏನನ್ನಾದರೂ ಅಲ್ಲೇ ಮಾತಾಡೋಣ.

ಶ್ರೀನಿವಾಸ– ಸರಿ ನಡಿರಿ ಹೊಸಾ ಸುದ್ದಿ ಹೇಳಬೇಕಾಗಿದೆ. ಅದಕ್ಕಾಗಿ ನಿಮ್ಮನ್ನು ಹುಡುಕುತ್ತ ಬಂದೆ. ನೀವೇ ಕಂಡಿರಿ. ಇರಲಿ. ಇಲ್ಲಿ ನಿಲ್ಲುವದೇ ಬೇಡ ಹೋಗೋಣ ಬನ್ನಿ. (ಹೋಗುವರು)

## ಪ್ರವೇಶ ೬

## ರಸ್ತೆ

(ರಾಮು–ಶ್ರೀಧರರು ಮಾತಾಡುತ್ತ ಬರುತ್ತಾರೆ.)

ರಾಮು– ಉಹೂಂ. ಹೀಗಂದಿರಾ, ಹಾಗಾದರೆ ಅಜ್ಜನವರು ಬಹಳ ವಿದ್ಯಾವಂತರನ್ನಿ.

ಶ್ರೀಧರ– ನಿಜ ರಾಮು ಅವರ ವಿದ್ಯ ಬೈಲಿಗೆ ತೋರಲಾರದು. ಎಲ್ಲಾ ಒಳಗೆ ಇರುತ್ತದೆ. ನಾನು ಮಾತ್ರ ಅವರಿಗೆ ಬಿಚ್ಚೇ ಹೇಳಿ ಬಿಟ್ಟೆ. ಗೌರಿ

ನನ್ನವಳಾಗಲಿಕ್ಕೆ [illegible]

ರಾಮು— ಆಗ ಅವರು ಏನಂತ ಹೇಳಿದರು.

ಶ್ರೀಧರ— ಏನೂ ಹೇಳಲೇ ಇಲ್ಲ. ಅಂತ್ರ ಮಾಡಿ ಕಟ್ಟೇಬಿಟ್ಟರು. ನೀನು ಬೇಕಾದವರನ್ನು ಮುಟ್ಟು. ಅವರೆಲ್ಲರು ನಿನ್ನ ಪ್ರೇಮದವರೆಂದು ಹೇಳಿದ್ದಾರೆ.

ರಾಮು— ಏನು ನಾನು ಮುಟ್ಟಿದವರೇ

ಶ್ರೀಧರ— ನೀನಲ್ಲೋ ನಾನು. ಯಾರನ್ನು ಪ್ರೀತಿಸುವೆನೋ ಅವರೆಲ್ಲ ನನ್ನವರೆ ಇನ್ನುಮೇಲೆ ಗೌರಿ ನನ್ನವಳೆಂದು ತಿಳಿ. ಇನ್ನು ಅವಳ ಗಂಡ ಶಾಮು ಅವನಿಗಂತೂ ಕೇಳಿದಾಗೆಲ್ಲ ದುಡ್ಡು ಕೊಟ್ಟೂ ಕೊಟ್ಟು ನನ್ನ ವಶ ಮಾಡಿಕೊಂಡು ಬಿಟ್ಟೇನಿ. ಇದರ ಮೇಲೆ ಅಜ್ಜನ ಮಂತ್ರ ಶಕ್ತಿಯ ಅಂತ್ರವಂತೂ ಇದ್ದೇ ಇದೆ. ಕೇಳುವದೇನು.

ರಾಮು— ಸರಿ ಮನೆಯಲ್ಲಿದ್ದ ಸೋಮಣ್ಣನಂತೂ ಸತ್ತು ಹೋದ. ಶಾಮುವಂತೂ ಮನೆಯಲ್ಲಿ ಇರುವದೇ ಇಲ್ಲ. ಅಂದಮೇಲೆ ನಿನ್ನ ಕಾರ್‍ಯಕ್ಕೆ ಜಯವೆಂದೇ ಹೇಳಬೇಕು ಅಲ್ವೆ

ಶ್ರೀಧರ— ಅದಿರಲಿ ರಾಮು ನನ್ನ ಜನ್ಮದಾಗಂತೂ ಮನಸ್ಸಿಟ್ಟ ಹೆಂಣನ್ನು ಮುಟ್ಟದೇ ಬಿಟ್ಟದ್ದು ನೆನಪೇ ಇಲ್ಲ. ಇಂಥವಳದೇನು ಮಹಾ....

ರಾಮು— ಹಾ.... ಅದೇ ಅನ್ನೋದು.... ಈ ಬಡ ಗೌರಿದೇನು..... ನೀವು ಹೇಳಿದಂತೆ ಕೇಳುವ ಹೆಂಣು.... ಊ.... ಇರಲಿ.... ಬಿಡು ರಾಯರೇ.... ಈಗ ೨ ದಿವ್ಸದಿಂದ.... ನಿಮಗೊಂದು ಹೊಸಾ ಸುದ್ಧಿ ತಿಳಿಸ ಬೇಕೆಂದು ಮಾಡೀನಿ.... ನೀವು ಕಂಡ ಕೂಡಲೇ ಆ ಮಾತು ಈ ಮಾತಾಡಿ ಮರತೇ ಹೋಗುತ್ತೇನೆ..... ಈಗ ನೆನಪಿಗೆ ಬಂತು ಹೇಳಲೇ....

ಶ್ರೀಧರ— ಹೇಳೋ ರಾಮು ಅಂಥಾ ಮಾತೇನಿದೆ ಹೇಳಲ್ಲಾ.....

ರಾಮು— ಏನಿಲ್ಲ.... ಒಂದು ಒಳ್ಳೇ ಸುಂದರ ಹುಡುಗಿಯನ್ನು ನೋಡೀನಿ, ಪಾಪ ಪರದೇಶಿ... ದೊಡ್ಡವಳಾಗಿ ೨ ವರ್ಷವಾಗಿರಬೇಕು. ಆ ಹುಡ್ಗಿ ಮುಂದೆ ಈ ಗೌರಿಯನ್ನು ನಿವಾಳಿ ತಗಿಯಬೇಕು.... ಇಂಥವರಿಗೆಲ್ಲ.... ನೀನು ಕಷ್ಟ ಪಡುವದಕ್ಕಿಂತ ಅವಳನ್ನು ಲಗ್ನ ಮಾಡಿಕೊಂಡರೆ ಈ ಹಾಳ ಹರಟೆಲ್ಲ ತಾನಾಗೀ ಮಾಯವಾಗುತ್ತೆ.... ಏನಂದಿ....

ಶ್ರೀಧರ– ಇದೇನು ಹೇಳಿದ್ಯೋ ರಾಮು..... ಅಂಥಾ ರೂಪವೇ ಅವಳದು.... ಇದುವರೆಗೆ ಈ ಸುದ್ದಿ ತಿಳಿಸಬಾರದೆ ರಾಮು.... ಇರಲಿ.... ಅಂಥವಳನ್ನು..... ಲಗ್ನವಾಗುವದೇನೋ.... ಉತ್ತುಮ.... ಆದರೆ.... ಮನೆಯಲ್ಲಿ ನಮ್ಮವಳು ವಪ್ಪುವಳೇ.... ಲಗ್ನವೆಂದರೆ ಈಗಿನ ಕಾನೂನಿಗೆ ವಿರುದ್ಧವಾಗಿ ವಿಪರೀತವಾಗಬಹುದು ರಾಮೂ....

ರಾಮು– ಅದೇನು ಕಾನೂನು.... ಧನವಿದ್ದವರೆ ಮನೆಯಲ್ಲಿ ಕಾನೂನ ವತ್ತೀ ಬಿಳುತ್ತೆ .ಸೀತಮ್ಮಾನೋರು ಒಪ್ಪುವಂತೆ ಮಾಡುವದು ನನ್ನ ಕರ್ತವ್ಯ ಅವರು ಒಪ್ಪಿದ ಮೇಲೆ ಈಗಿನ ಕಾನೂನು ಕೈಯ್ಯಲ್ಲಿ ತಾನಾಗೇ ಸೇರುತ್ತೆ ನೀ ಹೇಳಿದಾಂಗೆ ಕೇಳುತ್ತೆ.... ತಿಳಿತಾ....

ಶ್ರೀಧರ– ಸರೆ ನೀನಿದ್ದಮೇಲೆ ನನಗೇನು ಭಯವಿದೆ ಆದರೂ ನಮ್ಮವಳನ್ನು ಸರಿಪಡಿಸೊ ಭಾರ ನಿನ್ನದಾಗಿದೆ. ನಿನ್ನ ಮಾತಂತೂ ನಮ್ಮವಳು ಕೇಳೇ ಕೇಳುತ್ತಾಳೆ ಆದರೂ ಅದಕ್ಕೊಂದು ಉಪಾಯ ಬೇಕಲ್ಲಾ.

ರಾಮು– ಉಪಾಯಕ್ಕೇನು ಕೊರತೆ ಇಲ್ಲಯ್ಯ ಅಪಾಯ ಬರದಂತೆ ನೋಡಿಕೊಳ್ಳುವ ನಾನಿರುವಾಗ ನಿನಗೇಕೆ ಈ ಹೆದರಿಕೆ ನೀನು ಒಪ್ಪುವದೊಂದೇ ತಡ. ಅವಳನ್ನು ಕರೆತಂದು ನಿನ್ನ ಮುಂದೆ ನಿಲ್ಲಿಸುತ್ತೇನೆ ಊಂ ಏನಂದಿ....

ಶ್ರೀಧರ– ಇರಲಿ ಆ ಕನ್ಯದ ಕುಲಗೋತ್ರ ಕೇಳಿರುವೆಯಾ ವೈಷ್ಣವರೋ ಸ್ಮಾರ್ತರೋ ಏನು ಲಿಂಗಾಯತರೋ ಕೇಳಿರುವಿಯೇನು.........

ರಾಮು– ಅಯ್ಯೊ ಅಯ್ಯೊ ಅಯ್ಯೊ ಇಂಥಾ ಕುಲಕ್ಕೆಲ್ಲ ಬೆಲೆ ಕೊಡದಯ್ಯಾ ಈಗಿನ ಸರ್ಕಾರ ಸಮಾಜಕ್ಕೆ ತಪ್ಪಿದರೂ ಚಿಂತೆಯಿಲ್ಲ. ಸರ್ಕಾರವೇ ನಿಂತು ಲಗ್ನ ಮಾಡಹತ್ತಿದರೆ ಸಾಕು ದೊಡ್ಡ ದೊಡ್ಡ ಮಂತ್ರಿಗಳು ಲಗ್ನಕ್ಕೆ ಬಂದು ದೊಡ್ಡ ದೊಡ್ಡ ಮಲ್ಲಿಗೆ ಹಾರ ಕೊರಳಿಗೆ ಹಾಕೋ ಪ್ರಸಂಗ ತಂದು ಕೊಡುವ ಜಾತೀ ಕನ್ಯೆ ಅದು. ಅಂದರೆ ಹರಿಜನರ ಹುಡುಗಿ. ಅದಕ್ಕೆ ತಂದಿ–ತಾಯಿ ಯಾರೂ ಇಲ್ಲ ಅದಕ್ಕಾಗೇ ಹೇಳಿದ್ದು.

ಶ್ರೀಧರ– ಏನ ಹರಿಜನ ಹುಡಗಿಯೇ.... ಭಲೆ ರಾಮು. ಆ ಜಾತಿ ಕನ್ಯ ತಂದು ಲಗ್ನ ಮಾಡಬೇಕೆಂದಿರುವಿಯಾ........

ರಾಮು– ಈಗಿನ ಕಾಲದಲ್ಲಿ ಯಾರ ಕೇಳಬೆಕ್ರಿ ಎಷ್ಟೋ ಸ್ಟೂಡೆಂಟುಗಳು ಓದಲಿಕ್ಕೆ ಬೆಂಗಳೂರಿಗೆ ಹೋಗಿ ಬರುವಾಗ್ಯೆ ರಜಿಷ್ಟರ ಮ್ಯಾರೇಜ ಮಾಡಿಕೊಂಡು ಬರ್ತಾರಲ್ಲ, ನೀವು ಕೇಳಿದ್ದು ಸ್ವತಃ ನೋಡಿದ ಮಾತಿಗೆ ಆಶ್ಚರ್ಯವೇ.

**ಶ್ರೀಧರ–** ಅದೆಲ್ಲ ಪಟ್ಟಣವಾಸಿಗಳ ಮಾತು ಹಳ್ಳಿಯಲ್ಲಿ ಹರಿಜನರ ಹಂಣಾನ್ನು ಲಗ್ನವಾದರೆ ಸಮಾಜ ಒಪ್ಪಬೇಕಲ್ಲಾ.

**ರಾಮು–** ಅಲ್ರೀ ಸರ್ಕಾರ ಒಪ್ಪಿದ ಮಾತು. ಸಮಾಜ ಒಪ್ಪೋದಿಲ್ಲಾಂತ ಹೇಳ್ತಿರಲ್ಲಾ. ಇಲ್ಲೇ ತಪ್ಪೋದು. ಈಗಿನ ಸಮಾಜ ಅಂದರೆ ಏನಂತ ತಿಳ್ದೀರಿ. ಸಾಕಷ್ಟು ದುಡ್ಡು ಖರ್ಚು ಮಾಡತಕ್ಕವರಿಗೆ ಸಮಾಜ ಎಲ್ಲಿಗೂ ಹೋಗೋದೇ ಇಲ್ಲ. ಬೆನ್ನ ಹಿಂದೆ ನಿಂತಿರುತ್ತೆ ತಿಳಿತೇ. ಅದೆಲ್ಲ ಹಚ್ಚಿಕೊಳ್ಳುವ ಕಾರಣವಿಲ್ಲ. ಹೋಗಲಿ ಬಿಡ್ರಿ. ನಾನ್ಯಾಕೆ ಹೆಚ್ಚಿಗೆ ಹೇಳಬೇಕು. ಅವಳನ್ನು ನೀನು ಕಂಣು ತುಂಬ ನೋಡಿದಮೇಲೆ ನೀನೇ ಬಿಡುವಂತಿಲ್ಲ. ಅಹಾಹಾ, ಏನ ರೂಪ, ಏನ ಬಂಣ, ಏನ ನಗುಮುಖ. ಸಿನಿಮಾ ನಟಿಯರು ಅವಳ ಮುಂದೆ ಲಾಗಾ ಹೊಡಿಯಬೇಕು. ನೋಡಿದಮೇಲೆ ತಾನೇ ತಿಳಿಯುತ್ತೆ. ಆಮೇಲೆ ನಿನ್ನ ಇಷ್ಟ.

**ಶ್ರೀಧರ–** ಆಹಾ, ಇದೇನು ರಾಮು, ಅಂಥಾ ರೂಪವೇ ಅವಳದು.

**ರಾಮು–** ಯಾಕೆ, ಇನ್ನು ನನ್ನ ಮಾತಿನ ಮೇಲೆ ವಿಶ್ವಾಸವಿಲ್ಲವೇ ಪಾಪ....

**ಶ್ರೀಧರ–** ಛೇ ಛೇ ಅದೇನಿಲ್ಲ ಬಿಡು. ಸುಳ್ಳು ಹೇಳುವವನೇ ಅಲ್ಲೆಂದು ತಿಳಿದಿದ್ದೇನೆ. ಆದರೆ ಗ್ರಾಮದಲ್ಲಿ ಗಣ್ಯ ವ್ಯಕ್ತಿಯಾದ ನಾನೇ ಹರಿಜನ ಹುಡುಗಿಯ ಸಂಪರ್ಕ ಮಾಡಿದೆನೆಂದರೆ ಚಿಲ್ಲರ ಜನಗಳೆಲ್ಲಿ ಛೀ ಹಾಕುವರೋ ಎಂಬ ಭಯವಾಗಿದೆ ಇಷ್ಟೇ.

**ರಾಮು–** ಇಷ್ಟೇ ತಾನೆ, ಅಲ್ರೀ ಇಂಥಾ ಪ್ರೇಮದ ಕೆಲ್ಸದಲ್ಲಿ ನಿಮ್ಮಂಥವರು ಚಿಲ್ಲರ ಜನಗಳ ನೆನಪೇ ತಗಿಯಬಾರದು. ಬೇಕಾದವರು ಬೇಕಾದ ಹಾಗೆ ಕೂಗಿಕೊಳ್ಳಲಿ. ಇವ ಎಂಥಾ ಕುಲಗೇಡಿಯನ್ನಲಿ. ಇವ ಎಂಥಾ ನಾಚಿಗ್ಗೇಡಿಯನ್ನಲಿ. ತಪ್ಪೇನಿದೆ. ನಮ್ಮ ಮನತೃಪ್ತಿಯೇ ಮಹಾ ವೈಕುಂಠವೆಂದು ತಿಳಿಯಬೇಕು. ಅಜ್ಜನವರು ಪ್ರಸಂಗ ಬಂದಾಗ್ಯೆ ಹೇಳುವದಿಲ್ಲವೇ. ಮನ ಒಲಿದುದೇ ಬ್ರಹ್ಮ ಎಂದು ಹೇಳುವದನ್ನು ಕೇಳಿಲ್ಲವೇ. ಜಾತಿಯಲ್ಲೇನಿದೆ ಮಣ್ಣು. ನೀತಿಯಲ್ಲಿದೆ ಸುಖ. ಅಜ್ಜನವರು ತಮ್ಮ ಅನುಭವದ ಮಾತನ್ನೇ ನಮಗೆಲ್ಲ ಹೇಳುತ್ತಾರೆಂದು ತಿಳಿ. ಮುಖ್ಯವಾಗಿ ಅವಳ ದೃಷ್ಟಿ ನಿನ್ನ ಮೇಲೆ, ನಿನ್ನ ದೃಷ್ಟಿ ಅವಳ ಮೇಲೆ. ಬಿದ್ದ ಮೇಲೆ ಈ ನಿನ್ನ ಬೆದರಿಕೆ ಉಳಿಯಲಾರದೆಂದು ನಾನು ಖಂಡಿತವಾಗಿ ತಿಳಿದಿದ್ದೇನೆ.

**ಶ್ರೀಧರ–** ಆಗಲಿ ರಾಮು. ನಾಳೆ ೩ ಘಂಟಗೆ ತೋಟಕ್ಕೆ ಬರ ಹೇಳು

ನೋಡೋಣ.

**ರಾಮು–** ಆಹ ನೋಡಿದ ಮೇಲೆ ಲಗ್ನ ನಿರ್ಧಾರಮಾಡು ತಪ್ಪೇನಿದೆ. (ಘನ ನೋಡಿ) ಸರೆ ನನ್ನ ಟೈಮ ಸಮೀಪಿಸಿತು. ಸ್ಟೇಜಿಗೆ ಹೋಗುತ್ತೇನೆ. ಬರ್ತೀನಿ. ನಮಸ್ಕಾರ.

**ಶ್ರೀಧರ–** ರಾಮು, ನಾನು ಸಹ ಸಿನೇಮಾಕ್ಕೆ ಬರುತ್ತೇನೆ. ನಡೆ, ನೋಡದೆ ಬಹು ದಿವ್ಸವಾಯಿತು.

**ರಾಮು–** ನಡೆ ಹಾಗಾದರೆ ಹೋಗೋಣ. (ಹೋಗುತ್ತಾರೆ)

**೧ನೇ ಅಂಕ ಸಮಾಪ್ತಃ**

===**=====**===

## ೨ನೇ ಅಂಕ ಪ್ರಾರಂಭ

### ಪ್ರವೇಶ ೧

### ಶಾಮಣ್ಣನ ಮನೆಯ ನೋಟ

ಗೌರಿಯು ಒಬ್ಬಳೇ ದೇವಿ ಫೋಟೋ ಮತ್ತು ತನ್ನ ಮಾವನ ಫೋಟೋಗಳಿಗೆ ಊದಬತ್ತಿ ಹಚ್ಚಿ ಬೆಳಗುತ್ತ ಪದ ಹಾಡುತ್ತಾಳೆ....

**ಪದ** (ದೇವಿಸ್ತೋತ್ರ....)
ಪೂಜಿಪೆನು ತನುಮನದೀ ತಾಯೇ ।
ಭಜಿಸೀ ಬೇಡುವೆ ವರ ನೀಡೆನಗೆ ॥ ಪ ॥
ನಿತ್ಯಾನಂದಳೆ ನಿಗಮ ಗೋಚರಳೆ ।
ಕಾತ್ಯಾಯನಿಯೆ ಕಮಲಾ ನಯನೇ ॥
ಪತಿಗಾಯುಷವ ನೀಡೌ ತಾಯೇ ॥ ೧ ॥

**ಗೌರಿ–** ಮಾವನವರು ಹೇಳಿದಂತೆ ನಮ್ಮವರ ನಡತೆ ಒಂದೊಂದೇ ನೋಡಲಾಗಿ.... ದುರ್ವಾರ್ಗದ ವರ್ತನೆಯೇ ಹೆಚ್ಚಾಗಿ ತೋರುವವಲ್ಲಾ.... ಏನು ಮಾಡಲಿ.... ಅವರನ್ನು ಸುಮಾರ್ಗಕ್ಕೆ ತರಬಲ್ಲೆನೇ.... ಛೇ ಇದು ನನ್ನ ಭ್ರಮೆ.... ಒಂದು ವ್ಯಾಳ್ಯ ಅವರಿಗೆ ನಿಮ್ಮ ನಡತೆ ಸರಿಯಾಗಿಲ್ಲ ಇದನ್ನು ಬಿಡಿರಿ ಅಂದರೆ ನನ್ನ ಮೇಲೆ ಎಷ್ಟು ಕೋಪಗೊಳ್ಳುವರೋ ಏನೋ.... ಮಾವನವರಂತೂ ಇವರ ಚಿಂತೆಯಲ್ಲಿಯೇ ಚಿತೆಗೆ ಬಲಿಯಾದರು. ಏನು ಮಾಡಲಿ ರಾತ್ರಿಯಲ್ಲಿ ಒಬ್ಬಳೇ ಮನೆಯಲ್ಲಿ ಮಲಗಬೇಕು.... ಇದು ಸಹ ತಿಳಿಯಲಿಕ್ಕಿಲ್ಲವೇ ಇವರಿಗೆ.... ಹೇ ಶಾಂಭವೀ ನನ್ನ ಪತಿಯನ್ನು ಸುಮಾರ್ಗಕ್ಕೆ ತರಲು ನನಗೆ ನೀನೇ ಸಹಾಯಕಳಾಗು... ಬೆಳಗಾಗಿ ೬॥ ಘಂಟೆಯಾದರೂ ಇವರು ಬರಲೇ ಇಲ್ಲವಲ್ಲಾ.... ಇರಲಿ ಕಾಫಿಯಂತೂ ಸೋಸಿ ಇಡುತ್ತೇನೆ. ಅವರು ಬಂದಮೇಲೆ ಕುಡಿಯುತ್ತಾರೆ. (ಒಳಗೆ ಹೋಗುತ್ತಾಳೆ)

(ಆಗ ಕೂದಲು ಕೆದರಿಕೊಂಡು ನಿರುತ್ಸಾಹಗೊಂಡ ಶಾಮು ಉಸುರು ಹಾಕತ್ತ ಹೊರಸಿನ ಮೇಲೆ ಮಲಗುತ್ತಾನೆ.)

ಶ್ಯಾಮು– ಗೌರೀ.... ಗೌರಿ... (ಎಂದು ಕರೆಯುತ್ತಾನೆ)

ಗೌರಿ– (ಒಳಗಿನಿಂದಲೇ) ಬಂದೆ ಸ್ವಾಮಿಾ ಬಂದೆ (ಬಂದು ಗಂಡನ ತಲೆ ಹಿಚಗುತ್ತ) ಯಾಕೆ ಮೈಯ್ಯಲ್ಲಿ ಆರೋಗ್ಯವಿಲ್ಲವೇ ಏನಾಗಿದೆ ಸ್ವಾಮಿಾ. (ಕನಿಕರದಿಂದ)

ಶ್ಯಾಮು– ಏನಿಲ್ಲ ಸ್ವಲ್ಪು ತಲಿ ನೋಯುತ್ತೆ.. ಅಷ್ಟೆ...

ಗೌರಿ– ರಾತ್ರಿಯಲ್ಲಿ ನಿದ್ದೆಗೆಟ್ಟು ಹೀಗಾಗಿರಬೇಕು... ಅಲ್ವೆ.. ತಡಿಯಿರಿ ಒಲಿಮೇಲೆ ಕಾಫಿ ತಯಾರಿದೆ ತರುತ್ತೇನೆ. (ಹೋಗಿ ತಂದು ಕೊಡುವಳು. ಶಾಮು ಎದ್ದು ಕೂತು ಕುಡಿಯುತ್ತ)

ಶ್ಯಾಮು– ಆಹಾಹಾ, ಗೌರೀ ನಿನ್ನ ಕೈಯಿಂದ ತಯ್ಯಾರಾದ ಕಾಫಿ ರುಚಿ ಎಷ್ಟು ಮಧುರವಾಗಿದೆ. ಬೇರೆ ಕಡೆ ಈ ರೀತಿ ಇರುವದೇ ಇಲ್ಲವಲ್ಲಾ ಕಾರಣ....

ಗೌರಿ– ಸ್ವಾಮಿಾ, ಇದು ನಿಮ್ಮ ಕಲ್ಪನೆ. ಇದರಲ್ಲಿ ನಾನೇನು ಬೇರೆ ಹಾಕಿದ್ದೇನೆ. ಅದೇ ಹಾಲು. ಅದೇ ಕಾಫಿ ಪುಡಿ. ಅದೇ ಸಕ್ರಿ. ನೀರು ಮಾತ್ರ ಬೇರೆ ಬೇರೆ ಇರಬಹುದು ಇಷ್ಟೇ.....

ಶ್ಯಾಮು– ಛೇ ಛೇ ನಾನೊಪ್ಪಲಾರೆ ಪ್ರತಿ ದಿವಸ ರಾತ್ರಿ ಅವಳು ಮಾಡುತ್ತಾಳೆ ಥೂ ಸ್ವಲ್ಪಾದರೂ ರುಚಿಯೇ ಇರುವದಿಲ್ಲ.

ಗೌರಿ– ಏನಂದಿರೀ ಸ್ವಾಮಿಾ ಅವಳು.... ಅಂದರೆ ಯಾರು....

ಶ್ಯಾಮು– ಓಹೋ ಅವಳ ವಿಷಯ ! ಹೌದು ನಿನ್ನ ಮುಂದೆ ಇದುವರಿಗೂ ಹೇಳೇ ಇಲ್ಲ ಗೌರಿ. ಅವಳೊಬ್ಬ ನಿನ್ನ ತಂಗಿ.... ನಿನ್ನ ವಿಷಯ ಮಾತ್ರ ಅವಳ ಮುಂದೆ ಆಗಾಗ್ಯೆ ತಗೆಯುತ್ತೇನೇ ಅವಳೇ ನಿನ್ನನ್ನು ಕಾಣಲು ಇಂದಿಲ್ಲ ನಾಳೆ ಬರಬಹುದು ನೋಡು ಗೌರೀ ನಿನ್ನಂತೆ ಅವಳೂ ನನ್ನನ್ನು ಬಹುವಾಗಿ ಪ್ರೀತಿಸುತ್ತಾಳೆ. ಅವಳು ಇಲ್ಲಿಗೆ ಬಂದಾಗ್ಯೆ ಮಾತ್ರ ಇದೇ ರೀತಿ ಕಾಫಿ ಮಾಡಿ ಕುಡಿಸುವೆಯಾ ಅವಳಿಗೆ

ಗೌರಿ– ಆಗಲಿ ಸ್ವಾಮಿ ನಿಮ್ಮ ಪ್ರೇಮವೇ ನನ್ನ ಪ್ರೇಮ. ಇಂದೇ ಕರತನ್ನಿ ಇದುವರೆಗೆ ನನ್ನ ತಂಗಿಯ ಸುದ್ದಿಯನ್ನು ಅಕ್ಕನ ಮುಂದೆ ತಿಳಿಸಲು ಮರತಿರಾ......

ಶ್ಯಾಮು– ಮತ್ತೆ.... ನೀನು.... ಎಲ್ಲಿ.... ಸಿಟ್ಟಾಗುವಿಯೋ.... ಅಂತ ತಿಳಿಸಿದ್ದಿಲ್ಲ.

ಅವಳಾದರೂ ನಿನ್ನಂತೆ ಬಹಳ ಒಳ್ಳೆಯವಳು ಗೌರಿ.... ಸನ್ನನ್ನು ನೋಡಬೇಕೆಂದು ಹಟ ಹಿಡಿದಿದ್ದಾಳೆ ಅದಕ್ಕಾಗೀ ಕರತರಲೇ......

ಗೌರಿ— ಓಹೋ ತನ್ನ ಮನಿಗೆ ತಾನು ಬರಲಿಕ್ಕೆ ಯಾರ ಅತಂಕವಿಲ್ಲ ಸ್ವಾಮಿ.... ಇರಲಿ ಅವಳ ಹೆಸರು.... ಯಾಕೆ ಹೇಳಲು ನಾಚಿಕೆಯೇ....

ಶ್ಯಾಮು— ಅದೇನಿಲ್ಲ.... ಅವರ ಹೆಸರು... ಗಂಗಾ....

ಗೌರಿ— ಅಂದರೆ ತಾವು ದಿನಾಲು ರಾತ್ರಿ ಅಲ್ಲೇ ಮಲಗುವಿರಾ ತಂಗಿಯ ಮನೆಯಲ್ಲಿ.

ಶ್ಯಾಮು— ನೋಡು ಗೌರೀ ನಿಜವಾಗಿ ಹೇಳುತ್ತೇನೆ ಚಿಕ್ಕಂದಿನಿಂದಲೂ ನನಗೆ ಇಸ್ಪೇಟು ಆಡುವ ಚಟವುಂಟು ಇಲ್ಲಿಂದ ರಾತ್ರಿ ಕ್ಲಬ್ಬಿಗೆ ಹೋಗಿ ೧ ಘಂಟೆಯವರೆಗೆ ಆಡಿ ಆ ಮೇಲೆ ಅವಳ ಮನೆಗೆ ಹೋಗಿ ಕಾಫಿ ಕುಡಿದು ಮಲಗುತ್ತೇನೆ. ನಿನ್ನ ಮುಂದೆ ಸುಳ್ಳು ಹೇಳಲಾರೆ ಗೌರೀ ಸುಳ್ಳು ಮಹಾಪಾಪ.

ಗೌರಿ— ಆಹಾ ಸಂತೋಷ ಪರಮ ಸಂತೋಷ (ಕಣ್ಣು ಮುಚ್ಚಿ ಕೈ ಮುಗಿದು) ನೀವು ಯಲ್ಲಿಗಾದರೂ ಹೋಗಿರಿ ಏನಾದರೂ ಮಾಡಿರಿ. ಆದರೆ ನಿಮ್ಮ ಬಾಯಿಂದ ಬರುವ ಸತ್ಯದ ವಾಕ್ಯವನ್ನು ಕೇಳಿ ನನಗೆ ಹಿಡಸಲಾರದಷ್ಟು ಸಂತೋಷವಾಗಿದೆ. ಅಂದ ಮೇಲೆ ನಿಮ್ಮನ್ನು ಕೈಹಿಡಿದ ನನ್ನಂಥ ಭಾಗ್ಯವಂತೆಯನ್ನು ಈ ಜಗದಲ್ಲಿ ಯಾರನ್ನೂ ಕಾಣೆನು ಇಂದಿಗೆ ನಾನೇ ಧನ್ಯಳು. (ಕಂಣು ಮುಚ್ಚಿ ಮೈಮರೆತು ನಿಂತವಳನ್ನು ಶ್ಯಾಮು ನೋಡಿ ಘಾಬರಿಯಿಂದ)

ಶ್ಯಾಮು— (ಸ್ವ) ಹಾ ಇದೇನು ಗೌರಿಯು ಹೀಗೇಕೆ ಮಾಡುತ್ತಿರುವಳು ಇದರಲ್ಲಿ ನನ್ನ ಪ್ರಖ್ಯಾತಿ ಏನು ಕಂಡಿರುವಳು.... ಗೌರೀ.... (ಎಚ್ಚರಿಸುವನು.)

ಗೌರಿ— (ಕಂಣು ತೆರೆದು) ಸ್ವಾಮಿ.... (ಅನ್ನುವಳು)

ಶ್ಯಾಮು— ಗೌರೀ ನಾನು ನಿಜವಾದ ಮಾತನ್ನು ಹೇಳಿದರೆ ನಿನಗೆ ಇಷ್ಟು ಆನಂದವೇ.... ಇದರಲ್ಲಿ ಆಶ್ಚರ್ಯವೇನಿದೆ.

ಗೌರಿ— ಇದೆ ಇದರಲ್ಲಿ ಉತ್ತಮವಾದ ಸನ್ಮಾರ್ಗದ ಸದ್ಗುಣವಿದೆ ನನ್ನ ಸ್ವಾಮಿಯ ನಿಶ್ಚಲತ್ವ ಮನಸನ್ನು ಕಂಡು ನನಗೆ ಪರಮ ಸಂತೋಷವಾಗಿ ಮೈಮರೆತೆನು ಇಷ್ಟೇ.......

**ಶ್ಯಾಮು–** ಅಂದರೆ ನನಗೆ ಅರ್ಥವಾಗಲಿಲ್ಲ....ಗೌರೀ....

**ಗೌರಿ–** ನಿಮಗೆ ಅರ್ಥವಾಗದಿದ್ದರೂ ನನಗೆ ಮಾತ್ರ ಚನ್ನಾಗಿ ಅರ್ಥವಾಗಿದೆ ಸ್ವಾಮಿ ಯಾರೇ ಆಗಲಿ ಆತ್ಮದಲ್ಲಿ ವಂಚನೆ ಸುಳ್ಳುಮೋಸ ಇವುಗಳಿಗೆ ಸ್ಥಳ ಕೊಡುವದಿಲ್ಲವೋ ಅವರೇ ಇಂದಿನ ಈ ಭಾರತ ನಾಡಿನ ದೇವರೆಂದರೂ ಅಡ್ಡಿ ಇಲ್ಲ ಪತಿ ದೇವಾ ಇದುವರೆಗೆ ನೀವು ಮಾಡಿದ ಕೃತ್ಯಗಳಲ್ಲಿ ವಂಚನೆ ಮಾಡದೆ ಸತ್ಯವನ್ನೇ ನುಡಿದಿದ್ದಕ್ಕಾಗಿ ತಮ್ಮನ್ನು ಕೈ ಹಿಡಿದ ನಾನು ಮಾತ್ರ ಮಹ ಭಾಗ್ಯವಂತೆಯಂದು ಆನಂದಿಸುತ್ತೇನೆ.... ತಾವು ಮಾತ್ರ ದೇವಾಂಶ ಸಂಭೂತರೆಂದೇ ತಿಳಿದಿದ್ದೇನೆ.....

**ಶ್ಯಾಮು–** (ವಿಕಟ ನಗುವಿನಿಂದ) ಗೌರೀ ಇದೊಂದು ನಿನ್ನ ಮನಸ್ಸಿನ ಭ್ರಮೆ... ಇರಲಿ ಗೌರೀ ನೀನು ಹೇಳಿದಂತೆ ಸತ್ಯವಾದ ಮನುಷ್ಯನಿಗೆ ಜಗದಲ್ಲಿ ನಿಶ್ಚಯವಾಗಿ ಬೆಲೆ ಇದೆ ಸುಳ್ಳು ಮೋಸ ವಂಚನೆಗಳಿಗೆ ಬೆಲೆ ಸಿಕ್ಕಲಾರದು ಇವಕ್ಕೆಲ್ಲ ನಿನ್ನ ಪತಿದೇವ ಯಾವಾಗ್ಯೂ ಬಹು ದೂರವೆಂದು ತಿಳಿ....

**ಗೌರಿ–** (ಕಂಣು ಮುಚ್ಚಿ ಮೈ ಮರೆತು) ಅಹಹಾ ಏನು ಅಮೃತ ವಾಣಿಯಿದು.... ಇರಲಿ ಸ್ವಾಮಿ ತಮಗೆ.... ಒಂದು ಮಾತು ಕೇಳಬೇಕೆಂದು ನಾನು ಬಂದಂದಿನಿಂದಲೂ ಇತ್ತು... ಕೇಳಿದರೆ ತಮಗೆ ಕೋಪವೆಲ್ಲಿ ಬರುತ್ತೋ ಎಂಬ ಭಯವಾಗಿದೆ ತಾವು ಅನುಮತಿ ಕೊಟ್ಟರೆ ಮಾತ್ರ....

**ಶ್ಯಾಮು–** ಕೇಳು ಗೌರಿ ನೀನು ಬೇಕಾದದ್ದು ಕೇಳು ಯಾವದನ್ನು ನೀನು ಕೇಳಿದರೂ ನಿನ್ನ ಪತಿಯು ನಿನ್ನ ಮೇಲೆ ಕೋಪ ಮಾಡಲಾರೆ. ಕೇಳು.... ಏನದು....

**ಗೌರಿ–** ಏನೂ ಇಲ್ಲ.... ಮಾವನವರು.... ಆಗಾಗ್ಯೆ ಹೇಳುತ್ತಿದ್ದರು ಪ್ರಸಂಗ ಬಂದಾಗ್ಯೆ ಕೇಳೋಣವೆಂದಿದ್ದೆ.... ಬೇಡಿ ಬೇಡಿ ತಮಗೆ ತಾಪವಾಗಬಹುದು........

**ಶ್ಯಾಮು–** ಏನೂ ನೀನು ಕೇಳತಕ್ಕ ಮಾತಿನಲ್ಲಿ ನನಗೆ ತಾಪವಾಗುವದೇ.... ಛೇ ಅದೇನಿಲ್ಲ ನಿನ್ನ ನನ್ನ ಮನ ಒಂದಾದ ಬಳಿಕ ಹಚ್ಚಿಕೊಳ್ಳುವ ಕಾರಣವೇ ಇಲ್ಲ.... ಬೇಕಾದದ್ದು ಕೇಳು ನಿನ್ನ ಮಾತಿಗೆ ನನ್ನ ಮನ ಕುಂದಲಾರದು... ಏನದು.... ಕೇಳು....

**ಗೌರಿ–** ಏನಿಲ್ಲ.... ಮಾವನವರು.... ಹೇಳುತ್ತಿದ್ದರು.... ನೀವು ಕೈ ಕಟ್ಟಾದಾಗ ಕಳವು ಮಾಡಲಿಕ್ಕೆ ಸಹಾ....

**ಶ್ಯಾಮು–** ಹೋಗುತ್ತಾನೆ ಎಂದು ಹೇಳಿರಬಹುದಲ್ಲವೇ ಗೌರಿ ಇಷ್ಟ್ಯಾಕೆ ಹೆದರುವೆ.... ನಿಜವಾದ ಮಾತನ್ನೇ ಅಪ್ಪನು ನಿನ್ನ ಮುಂದೆ ಹೇಳಿದ್ದಾನೆ. ಸುಳ್ಳೆಂದು ನಾನು ಹೇಳಲಾರೆ.... ನೋಡು ಗೌರೀ ಕಳ್ಳತನ ಅಂದರೆ ಸುಲಭವಾದ ಕಾರ್ಯವಲ್ಲಾ. ಆ ಕೆಲಸದಲ್ಲಿ ನನ್ನಂತೆ ಯಾರಿಗೂ ಸಾಧ್ಯವಿಲ್ಲ ಚಿಕ್ಕಂದಿನಿಂದ ನಾನು ಕಳ್ಳತನ ಮಾಡಿದರೂ ಯಾರಿಂದಲೂ ಕಳ್ಳಾ ಎಂದು ತೋರಿಸಿ ಕೊಂಡಿಲ್ಲ ತಿಳಿಯಿತೇ ನಿನ್ನ ಪತಿ....

**ಗೌರಿ–** ಪತಿದೇವಾ ನಿಜವನ್ನೇ ಹೇಳಿದಿರಿ....ಆದರೆ... ಇದರಲ್ಲಿ... ನನ್ನದೊಂದು... ಮಾತು ನಡಿಸಿ ಕೊಡುವಿರಾ....

**ಶ್ಯಾಮು–** ಗೌರೀ ನೀನು ಏನ ಹೇಳಿದರೂ ಒಪ್ಪುತ್ತೇನೆ. ಅದರಲ್ಲಿ ಅಕ್ಷರಶಃ ನಾನು ತಪ್ಪುವದಿಲ್ಲ ಯಾಕೆ ಇನ್ನೂ ಸಂಸಯವೇ....

**ಗೌರಿ–** ಸಂಶಯವೇನೂ ಇಲ್ಲ. ಕೇಳಿದ ಮೇಲೆ ತಪ್ಪದೆ ನಡಿಸಿಕೊಡುತ್ತೇನೆಂದು ತಾವು ಪ್ರಮಾಣ ಮಾಡಬೇಕಾಗುತ್ತದೆ.... ಇದಕ್ಕೆ ಒಪ್ಪುವಿರಾ....

**ಶ್ಯಾಮು–** ಛೀ ಹುಚ್ಚೀ ಇನ್ನೂ ನನ್ನ ಮನಸ್ಸಿನ ನಿಜವೇ ನಿನಗೆ ತಿಳಿಯದಾಗಿದೆ. ಇದೋ ತೆಗೆದುಕೋ ಪ್ರಮಾಣವನ್ನು (ಕೈಮೇಲೆ ಕೈಹಾಕಿ) ಈಗಲಾದರೂ ಏನದು ಕೇಳು. ಪ್ರಮಾಣವಾಗಿ ನೀನು ಕೇಳಿದ್ದನ್ನು ನಡಿಸಿ ಕೊಡುತ್ತೇನೆ. ಇದಕ್ಕೆ ತಪ್ಪುವದಿಲ್ಲ. ದೇವರಾಣೆಯಾಗಿ ತಪ್ಪುವದಿಲ್ಲ ಕೇಳು.

**ಗೌರಿ–** ಹಾಗಾದರೆ ಕೇಳಿ ನೀವು ಕಳವಿಗೆ ಹೋಗುವಾಗ್ಯೆ ಮಾತ್ರ ನನ್ನನ್ನು ಸಂಗಡ ಕರೆದುಕೊಂಡು ಹೋಗಲೇಬೇಕು.

**ಶ್ಯಾಮು–** ಏನು ನೀನು ಬರುವೆಯಾ ಸಂಗಡ (ವಿಕಟ ನಗುವಿನಿಂದ) ಗೌರೀ ಅಲ್ಲಿಗೆ ಬಂದು ಏನು ಮಾಡಬಲ್ಲಿ. ನಿನ್ನಿಂದ ಏನಾಗುತ್ತೆ. ಕಳವು ಎಂದರೆ ಅದೊಂದು ಮೋಜಿನ ಆಟವೆಂದು ತಿಳಿದಿರುವಿಯಾ ಹೇಗೆ. ಹುಚ್ಚಿ ಸುಮ್ಮನೆ ಮನೆಯಲ್ಲಿರು. ಆ ಕೆಲಸ ನಿನ್ನಂಥವಳಿಗೆ ಸಲ್ಲದು.

**ಗೌರಿ–** ಏನೇ ಇರಲಿ ನಾನೂ ಬರತಕ್ಕವಳೇ (ಮುನಿಸಿನಂತೆ ನಟನೆ ಮಾಡುವಳು)

**ಶಾಮು–** ಛೀ ಹುಚ್ಚೀ. ಹಾಗೆಲ್ಲ ಹಟ ಹಿಡಿಯಬಾರದು.

**ಗೌರಿ–** ಇಲ್ಲ ಇಲ್ಲ ಕಳವಿಗೆ ನಾನೂ ಬರತಕ್ಕವಳೇ.

**ಶಾಮು–** ಮತ್ತೆ ಅದೇ ಮಾತೆ. ಆ ಕೆಲಸಕ್ಕೆ ನಿನ್ಯಾಕೆ ಮತ್ತೆ ಯಾರನ್ನೂ ಕರಕೊಂಡು ಹೋಗಲಾರೆ. ಯಾಕಂದರೆ ನನಗೆ ಕಾಲ ತೊಡಕು. ಮೇಲಾಗಿ ಅಂಥಾ ಕೆಲಸ ನಿನ್ನಿಂದಾಗದು. ಅದಕ್ಕಾಗಿ ಬೇಡ

**ಗೌರಿ–** ಓಹೋ ಇದೊಂದು ನಿಮ್ಮ ತಲೆಯಲ್ಲಿ ಅಂಟಿಕೊಂಡ ಮಾತಾಗಿದೆಯಲ್ಲವೇ ನನ್ನಂತೆ ಕಳವು ಮಾಡುವವರೇ ಇಲ್ಲವೆಂದು ಇದೇ ಅಲ್ಲವೇ ನಿಮ್ಮ ಅಭಿಪ್ರಾಯ. ಇದು ಶುದ್ಧ ತಪ್ಪೆಂದು ತಿಳಿದುಕೊಳ್ಳಿ. ಹುಂ ನಾನು ಸಂಣವಳಿದ್ದಾಗಿನಿಂದ ನಿಮ್ಮ ಮನೆಗೆ ಬರುವ ವರೆಗೂ ಅದೇ ಕೆಲಸವೇ ಮಾಡಿದ್ದೇನೆ. ಇದು ವರೆಗೆ ನಿಮ್ಮ ಮುಂದೆ ಹೇಳಲು ಹೆದರಿದೆ ಆದರೆ ನನ್ನಂತೆ ಕಳವು ಮಾಡುವದು ನೀವ್ಯಾಕೆ ಮತ್ತಾರಿಗೂ ಸಾಧ್ಯವಿಲ್ಲ. ತಿಳಿದಿದ್ದೀರಿ ಹುಂ.

**ಶಾಮು–** ಹಾ, ಇದೇನು ಗೌರಿ ಹೀಗೆ ಹೇಳುತ್ತಿ ನಿಜವಾಗಿರುವದೆ ನಿನ್ನ ಮಾತು.

**ಗೌರಿ–** ಸುಳ್ಳೆಂದು ಖಂಡಿತವಾಗಿ ತಿಳಿಯಬೇಡಿರಿ ನನ್ನ ಕಳವು ಇದುವರೆಗೂ ಯಾರೂ ಕಳ್ಳೀ ಎಂದು ಕೈಮಾಡಿ ತೋರಿಸರು. ಸಂಣ ಸಂಣ ಬಾಲಕರ ಕೊರಳ ಪದಕ, ಕಾಲಚೈನ, ಉಂಗುರ, ಗುಂಡು, ಬಿಂದಲಿ ಇಂಥವೆಲ್ಲ ಕಳವು ಮಾಡೇ ನಮ್ಮ ಮನೆಯ ಸಂಸಾರ. ಇಲ್ಲವಾದರೆ ಅನ್ನ ಕಾಣುವದು ದುರ್ಲಭವಿತ್ತು. ಇಲ್ಲಿಗೆ ಬಂದ ಮೇಲೆ ನನ್ನ ತಂದೆ ತಾಯಿಗಳು ಕೂಳಿಲ್ಲದೇ ಸತ್ತಿರಬೇಕೆಂದು ಅನಿಸುತ್ತದೆ. ಇಲ್ಲಿ ಮಾತ್ರ ಹೊರಗೆ ಹೋಗದಂತಾಗಿ ಕಳವಿಗೆ ಕಟ್ಟಾಗಿದೆ. ಅಲ್ಲದೆ ಕೂತು ಕೂತು ಬೇಜಾರವಾಗಹತ್ತಿದೆ. ಅದಕ್ಕಾಗಿ ನನ್ನನ್ನು ಬಿಟ್ಟು ಹೋಗಬೇಡಿ. ಬರುತ್ತೇನೆ.

**ಶಾಮು–** (ಶಿಟ್ಟಿನಿಂದ) ಸಾಕುಮಾಡು ಗೌರೀ. ಇಂಥಾ ಹೀನ ಕೃತ್ಯಕ್ಕೆ ಮನಸ್ಸು ಮಾಡಿದವಳೆಂದು ನಾನು ತಿಳಿದಿರಲಿಲ್ಲ. ಹುಂ ಬಾಲಕರ ಸೊತ್ತು ಅಪಹರಿಸುವದು ಮಹಪಾಪವಲ್ಲವೇ. ಬಾಲಕರೆಂದರೆ ದೇವರ ಸಮಾನ. ನೀನು ಮಹತಪ್ಪು ಮಾಡಿರುವೆ, ಇನ್ನು ಮೇಲೆ ಅಂಥ ಹೀನ ಕೆಲಸಕ್ಕೆ ಕೈಹಾಕಬೇಡ. ಇದು ಮಹಪಾಪ ತಿಳಿಯಿತೇ.....

**ಗೌರಿ–** ಹುಂ.... ಪಾಪ–ಪುಣ್ಯ ಕಳವು ಮಾಡತಕ್ಕವಳು. ಇದರ ಲೆಕ್ಕವೇ ಹಾಕಲಾರೆ. ಆದರೂ ನಾನು ಮಾಡುವ ಕಳವಿನಲ್ಲಿ ಪಾಪವುಂಟು ನೀವು ಮಾಡತಕ್ಕ ಕಳವಿನಲ್ಲಿ ಪುಣ್ಯವುಂಟು. ಇದೇ ಅಲ್ಲವೇ ನಿಮ್ಮ ಅಭಿಪ್ರಾಯ. ನಿಜ ಅದಕ್ಕಾಗಿಯೇ ಸ್ವಾಮಿಾ ನನ್ನ ಪಾಪದ ಕಳವು ಬಿಟ್ಟು ನಿಮ್ಮ ಪುಣ್ಯ ಕಳವಿಗೆ ಬರುತ್ತೇನೆಂದು ಹೇಳುವದು ತಾವು ಮಾತ್ರ ವಚನಕೊಟ್ಟಂತೆ ಕರೆದುಕೊಂಡು ಹೋಗಲೇಬೇಕು.

**ಶಾಮು–** ಛೇ ಛೇ ನಾನೆಂದಿಗೂ ನಿನ್ನನ್ನು ಕರೆದುಕೊಂಡು ಹೋಗಲಾರೆ.

ಗೌರಿ— ಹಾಗಾದರೆ ಕೈ ಮೇಲೆ ಕೈ ಹಾಕಿದ್ದೀರಿ ಪ್ರಮಾಣ ವಚನ ಕೊಟ್ಟಿದ್ದಿರಿ. ಈಗಿಂದೀಗಲೇ ಕೊಟ್ಟ ವಚನವನ್ನು ಮರೆತಿರೇನು ಹೂಂ. ಎಲ್ಲಿದ ನಿಮ್ಮ ಪ್ರಮಾಣ ವಚನ ಈ ರೀತಿ ವಚನಭ್ರಷ್ಟರೆಂದು ನಾನು ತಿಳಿದಿರಲಿಲ್ಲ. ಈಗ ತಿಳಿಯಿತು ಬಿಡಿ.

ಶಾಮು— (ಶಿಟ್ಟಿನಿಂದ) ಸಾಕು ಸುಮ್ಮನಿರು ಗೌರಿ ವಚನ ಕೊಟ್ಟಿರುವದೇನೋ ನಿಜ ಆದರೆ ಕಳವಿಗೆ ಬರಲಿಕ್ಕೆ ಕೇಳುವಳೆಂದು ಮಾತ್ರ ತಿಳಿದಿರಲಿಲ್ಲ. ಆಗಲಿ ತಪ್ಪೇನೀದೆ ಈ ಮಾತಿನ ಬದಲು ಮತ್ಯಾವದನ್ನಾದರೂ ಕೇಳು ನಡಿಸಿ ಕೊಡುತ್ತೇನೆ ಕಳವಿಗೆ ಮಾತ್ರ ಬರಲು ನಾನು ಒಪ್ಪಲಾರೆ.

ಗೌರಿ— ಹುಂ.... ತಿಳಿಯಿತು ಬಿಡಿ. ಬೇಡಿದ್ದೊಂದು ಬಿಟ್ಟು ಬೇಕಾದದ್ದು ಕೇಳು ಕೊಡುತ್ತೆನೆ ಎಂದಂತಾಯಿತು ನಿಮ್ಮ ವಚನ ಸಾಕು ಬಿಡಿರಿ. ಈ ರೀತಿ ಪ್ರಮಾಣ ಮಾಡಿ ವಚನ ಕೊಟ್ಟು ತಿರುಗಿ ಬಿದ್ದವರನ್ನು ನಾನು ಎಂದೂ ಕಂಡಿಲ್ಲ.

ಶಾಮು— ಕಳವಿಗೆ ಬರುತ್ತೇನೆಂದು ಪ್ರಮಾಣ ತೆಗೆದುಕೊಂಡ ಹೆಂಣನ್ನು ನಾನೂ ಕಂಡಿಲ್ಲ ಹೋಗಲಿ ಬಿಡು ಗೌರೀ ಶಿಟ್ಟಾಗಬೇಡ ಇದರ ಬದಲು ಮತ್ತೇನಾದರೂ ಕೇಳಿಕೋ ನಡಿಸುತ್ತೇನೆ.

ಗೌರಿ— ಇರಲಿ ಬಿಡು ಸಾಕು. (ಯೋಚಿಸಿದಂತೆ ಮಾಡಿ) ಹುಂ.... ನಿಮ್ಮಂತೆ ಆಗಲಿ ಇದರ ಬದಲು ಮತ್ತೊಂದು ಮಾತನ್ನು ಕೇಳುತ್ತೇನೆ. ಅದನ್ನಾದರೂ ನಡಿಸಿಕೊಡುವಿರಾ.

ಶಾಮು— ಕೇಳು ಗೌರಿ ಕಳವಿಗೆ ಬರುವದನ್ನು ಬಿಟ್ಟು ಯಾವುದನ್ನಾದರೂ ಕೇಳು ನಡಿಸಿಕೊಡುತ್ತೇನೆ ಸಿಟ್ಟಾಗಬೇಡ ನನ್ನ ಪ್ರಾಣವನ್ನಾದರೂ ಕೇಳು ತಪ್ಪುವದಿಲ್ಲ ಕೊಡುತ್ತೇನೆ ಮತ್ತೇನು.

ಗೌರಿ— ಆಗಲಿ ಇದನ್ನಾದರೂ ಕೇಳಿದ ಮೇಲೆ ನಡಿಸಿದೆ ಹಿಮ್ಮುಖರಾದರೆ ಮಾತ್ರ ಅಂದೇ ನಿಮ್ಮ ಗೌರಿ ನಿಮಗೆ ಶಿಗಲಾರಳು ವಿಷ ಕುಡಿದು ಪ್ರಾಣತ್ಯಾಗ ಮಾಡುವಳು ಅದಕ್ಕಾಗಿ ಆಲೋಚಿಸಿ ವಚನ ಕೊಡಿ.

ಶಾಮು— (ಘಾಬರಿಯಿಂದ) ಹಾ ಇದೇನು ಎಂಥಾ ಕಠಿಣ ಪ್ರತಿಜ್ಞೆ ಇದು ಗೌರೀ ವಚನ ಕೊಟ್ಟು ನಾನು ನಡಿಸದಿದ್ದಲ್ಲಿ ನೀನು ವಿಷ ಕುಡಿದು ಸಾಯುವೆಯಾ.....

ಗೌರಿ— ನಿಜ ಹಾಗಿದ್ದರೆ ನನಗೆ ವಚನ ಕೊಡಿ ಇಲ್ಲವಾದರೆ ನನ್ನಿಂದಾಲಾರದೆಂದು ಖಂಡಿತವಾಗಿ ಹೇಳಿ ಬಿಡಿ.

**ಶಾಮು–** ಏನೂ ನನ್ನಿಂದಾಗದೆಂದು ಹೇಳಲೇ.... ಇಲ್ಲ ಇಲ್ಲ ಖಂಡಿತವಾಗಿ ನಡಿಸಿಕೊಡುತ್ತೇನೆ. ಹೆಂಡತಿಗೆ ನೀಡಿದ ವಚನ ನಡಿಸದೇ ಈ ಪಂಚದಲ್ಲಿ ಷಂಢನಾಗಿ ಬಾಳಲೆ ಕೇಳು ಗೌರಿ ಏನು ಕೇಳುವಿಯೋ ಕೇಳು ನಾನು ತಪ್ಪದೆ ನಡಿಸುವೆ ನಿನ್ನ ಮಾಂಗಲ್ಯ ಸಾಕ್ಷಿಯಾಗಿ ನಡಿಸುತ್ತೇನೆ ಆಲಸ್ಯವೇಬೇಡ ಕೇಳು.......

**ಗೌರಿ–** ಏನು ಇಲ್ಲ ನೀವು ಮಾಡತಕ್ಕ ಉದ್ಯೋಗಲ್ಲಿ ಯಾವುದನ್ನೂ ಬಿಡಬೇಡಿರಿ ಆದರೆ ಪ್ರಸಂಗ ಬಂದಾಗ್ಗೆ ನಿಮ್ಮ ಬಾಯಿಂದ ಬರುವ ಒಂದು ಶಬ್ದವನ್ನು ಮಾತ್ರ ನನಗೆ ಉಡಿ ತುಂಬಿರಿ ಇಷ್ಟೇ ನಿಮ್ಮ ಕೈಯಿಂದ ಉಡಿ ತುಂಬಿದ ಮೇಲೆ ತಿರುಗಿ ಆ ಶಬ್ದವನ್ನು ನೀವು ಎಲ್ಲಿಯೂ ಉಪಯೋಗಿಸಬಾರದು ಇದಾದರೂ ನಡಿಸುವಿರಾ.

**ಶಾಮು–** ಅಂದರೆ ಯಾವ ಶಬ್ದವನ್ನು ನಿನಗೆ ಉಡಿ ತುಂಬಲಿ ಹೇಳು ಈಗಲೇ ತುಂಬಿ ಬಿಡುತ್ತೇನೆ ನನ್ನ ಪ್ರಾಣಕ್ಕೆ ಸಂಚಾರ ಬಂದ ಆ ಶಬ್ದವನ್ನು ನನ್ನ ಬಾಯಿಂದ ನುಡಿಯಲಾರೆ ಇದಕ್ಕೆ ನಿನ್ನ ಕೊರಳಾಣೆ ಸಾಕ್ಷಿಯಾಗಿದೆ ಕೇಳು?

**ಗೌರಿ–** ಸ್ವಾಮಿ ಅದೇನೂ ಅಂಥಾ ಶಬ್ದವಲ್ಲಾ ಯಾವ ಕೃತ್ಯದಲ್ಲ್ಯೂ ಸುಳ್ಳು ಹೇಳುವದನ್ನು ಬಿಟ್ಟು ಆ ಸುಳ್ಳನ್ನು ನನಗೆ ಈಗಲೇ ಉಡಿ ತುಂಬಬೇಕು. ಇಷ್ಟೇ ಅದನ್ನು ಇನ್ನು ಮೇಲೆ ತಾವು ಎಲ್ಲಿಯೂ ಉಪಯೋಗಿಸಬಾರದು. ಇದನ್ನಾದರೂ ನಡಿಸುವಿರಾ.

**ಶಾಮು–** ಅಯ್ಯೋ ಹುಚ್ಚಿ ಇದ್ಯಾವ ದೊಡ್ಡ ಕೆಲಸವು ಇದೋ ತೆಗೆದುಕೋ (ಉಡಿಯಲ್ಲಿ ಕೈ ಇಟ್ಟು) ಇನ್ನು ಮೇಲೆ ಈ ಸುಳ್ಳು ಹೇಳುವದನ್ನು ಬಿಟ್ಟೆನು. ನನ್ನ ಪ್ರಾಣ ಹೋದರೂ ಇದನ್ನು ಉಪಯೋಗಿಸಲಾರೆ. ಈಗಲಾದರೂ ಸಮಾಧಾನವಾಯಿತೇ.

**ಗೌರಿ–** ನೋಡಿ ಒಂದು ವ್ಯಾಳ್ಯ ಸುಳ್ಳು ಹೇಳುವ ಪ್ರಸಂಗವೇ ಬಂದು ನಿಂತರೆ ಅದನ್ನು ಗೌರಿಗೆ ಕೊಟ್ಟಿದ್ದೇನೆ ಎಂದು ತಿಳಿದು ನನ್ನಲ್ಲಿಗೆ ಬಂದು ನನ್ನಿಂದ ಪಡೆದು ಅದನ್ನು ಉಪಯೋಗಿಸಬೇಕು. ನನ್ನನ್ನು ಕೇಳದೆ ಉಪಯೋಗಿಸಿದಲ್ಲಿ ಅಂದೇ ನನ್ನ ಮರಣವು ಖಂಡಿತವೆಂದು ತಿಳಿಯಿರಿ ಮರೆಯಬೇಡಿರಿ.

**ಶಾಮು–** ಇಷ್ಟೇತಾನೆ ಸುಳ್ಳು..... ಹುಂ ಇದರ ಪ್ರಯೋಜನವೇ ನನಗಿಲ್ಲವೆಂದು ತಿಳಿ ನನ್ನ ಕರ್ತವ್ಯದಲ್ಲಿ ಸುಳ್ಳು ಶಬ್ದವೇ ನಿರುಪಯೋಗವಾಗಿದೆ ಇನ್ನಾದರೂ ಸಂತೋಷವೇ.

**ಗೌರಿ–** ಆಹಾಹಾ ಈಗ ಸಂತೋಷವಾಯಿತು ಇದುವರೆಗೆ ತಮಗೆ ಕಾಡಿ ಬೇಡಿದ್ದಕ್ಕಾಗಿ ನನ್ನನ್ನು ಕ್ಷಮಿಸಬೇಕು. ಹೊತ್ತಾಗಿದೆ ಫಲಹಾರ ಮಾಡ ಹೇಳಿ

**ಶಾಮು–** ನಡಿ ಗೌರಿ ಹಸಿವಾಗಿದೆ ಏನಾದರೂ ತಿನ್ನೋಣ ನಡೆ. (ಒಳಗೆ ಹೋಗುವಾಗ್ಯೆ)

**ಶ್ರೀನಿವಾಸ–**ಅರಾಮು ಇದ್ದಿರಾ ನಮಸ್ಕಾರ (ಹಿಂದಕ್ಕೆ ಇಬ್ಬರೂ ಬರುವರು)

**ಶಾಮು–** ಸ್ವಲ್ಪು ತಲಿ ನೋಯುತ್ತೆ. ಯಾವದಾದರೂ ತ್ಯೈಲ ಕೊಡುವಿರಾ.

**ಗೌರಿ–** ನಡು ನೋಯತ್ತೆ ಏನಾದರೂ ಔಷಧಿ ಕೊಡುವಿರಾ.

**ಶಾಮು–** ಕಾಲಿಗೆ ಬಕ್ಕಿಗಳಾಗಿವೆ, ಹಚ್ಚಲು ಮುಲಾಮನ್ನಾದರೂ ಕೊಡುವಿರಾ.

**ಶ್ರೀನಿವಾಸ–**ಅಯ್ಯೋ ಅಯ್ಯೋ ಅದೇನೂ ನನ್ನಲ್ಲಿ ಇಲ್ಲಯ್ಯಾ ಇದೊಂದು ನಮ್ಮ ಡ್ಯೂಟಿಯಾಗಿದೆ. ಆರಾಮ ಇದ್ದೀರಾ ಅಂತ ಕೇಳೋದು ಗೋಡಿ ಮೇಲೆ ಬರ್ಯೋದು ಇಷ್ಟೇ.

**ಶಾಮು–** ಅಂದರೆ ಇದೆಂಥಾ ನಿಮ್ಮ ಡ್ಯೂಟಿ ಸಂಣ ಸಂಣ ಔಷಧಿ ನಿಮ್ಮಲ್ಲಿಲ್ಲಂದರೆ ಸುಮ್ಮನೆ ಕಾಲ ಸುಟ್ಟ ಬೆಕ್ಕಿನಂತೆ ಮನಿಮನಿಯಾಕೆ ತಿರುಗೋದು. ಕೊಡಲಿಲ್ಲ ತಕ್ಕೊಳ್ಳಲಿಲ್ಲಾ ಇಂಥಾ ಕೆಲ್ಸಕ್ಕೆ ಬಾರದ ಡ್ಯೂಟಿ ಮೇಲೆ ಪ್ಯಾಟ್ಯಾಗ ವಂಟ್ರ ಸೋಟಾ ತಗೊಂಡು ನಿಮ್ಮ ಹ್ಯಾಟಿಗೆ ಬಡಿದಾರು. ಸುಮ್ಮನೆ ಹೋಗ್ರಿ. ಮತ್ಯಾವದಾದರೂ ಉದ್ಯೋಗ ಇಲ್ವಾ ನಿಮಗೆ ಬಿಳೀಗೋಡಿಗೆ ವಾರಕ್ಕೊಮ್ಮೆ ಬರದೂ ಬರದೂ ಕರೆಗೋಡಿ ಮಾಡಿಬಿಟ್ರಿ ಇರಲಿ ಹೋಗ್ರೀ....

**ಶ್ರೀನಿವಾಸ–** ಇಲ್ಲಯ್ಯಾ ಹಾಗ ಮಾಡಬೇಡ ನಾನು ನಿಮ್ಮ ಗೋಡಿ ಮೇಲೆ ಬರೆಯದಿದ್ದಲ್ಲಿ ನನ್ನ ನೌಕರಿಯೇ ಹೋಗುತ್ತೆ ಅದಕ್ಕಾಗೆ ಹಾಗೆ ಮಾಡಬೇಡಿ.....

**ಗೌರಿ–** ಇದೇನ್ರೀ ನಮ್ಮ ಗೋಡೆಯ ಮೇಲೆ ಬರೆದರೆ ಮಾತ್ರ ನಿಮ್ಮ ನೌಕರಿ ಉಳಿಯುತ್ತೆ ಇಲ್ಲವಾದರೆ ನಿಮ್ಮ ನೌಕರಿಯೇ ಕ್ಯಾನ್ಸಲ್ ಆಗುತ್ತೆ. ಇದೊಂದು ಹೊಸ ಚಾನ್ಸ ಉದ್ಯೋಗ್ರೆಪಾ.....

**ಶ್ರೀನಿವಾಸ–** ನಿಜ ಅಮ್ಮಾ ನನ್ನ ಮೇಲಧಿಕಾರಿಗಳು ಹೇಳಿದಷ್ಟು ನಾವು ಕೇಳಬೇಕಾಗಿದೆ.

**ಶಾಮು–** ನಿನ್ನ ಮೇಲಧಿಕಾರಿಗಳು ನಿನಗಿಂತ ಹೆಚ್ಚಿನ ಪಗಾರ ತಿನ್ನಬಹುದಲ್ಲಾ ನೀನು ಗೊಡೇಗೆ ಬರೆದರೆ ಅವರು ಕುಂಬಿಗೆ ನಂಬರು ಹಾಕಿ ತಿನ್ನಬಹುದಲ್ಲಾ ಸರೆ ನಿಮ್ಮಂಥವರು ಮಾಡಿದ್ದೇ ಪ್ರಾಧಾನ್ಯವೆಂದು ತಿಳಿದು ನಮ್ಮಂಥವರು ಕೇಳದೆ ಬಿಟ್ಟರೆ ಮುಂದೆ ನಮ್ಮ ಹಣಿ ಮೇಲೆ ಬರಿಯುವ ಪ್ರಸಂಗವಾದರೂ ತರುವಿರಿ ಗೆಟೌಟ ಇನ್ನು ಮೇಲೆ ಗೋಡಿ ಮೇಲೆ ಕೈ ಹಾಕಿದರೆ ಕೆಟ್ಟೀರಿ ನಡಿರಿ....

**ಶ್ರೀನಿವಾಸ–**(ಕೈಮುಗಿದು) ಹಾಗೆ ಮಾಡಬೇಡ್ರಿ ನಾಳೆ ನಮ್ಮ ಇನಸ್ಪೇಕ್ಟರರು ಇನಸ್ಪೇಕ್ಷನ್ನಿಗೆ ಬರುತ್ತಾರೆ. ಅವರು ಬಂದು ನೋಡಿದಾಗ್ಯೆ ನನ್ನ ಹಸ್ತಾಕ್ಷರ ಇರಲೇಬೇಕು..... ಇಲ್ಲವಾದರೆ ನಾನು ಮನಿ ಶೇರಬೇಕು (ಬರೆಯ ಹೋಗುವನು)

**ಶಾಮು–** ನೀನು ಸುಮ್ಮನೇ ಹೋಗುವಂತೆ ಕಾಣೋದಿಲ್ಲ ತಡಿ ಬರ್ತೀನಿ. (ಒಳಗೆ ಹೋಗಿ ಒಂದು ಬಡ್ಗಿ ತಂದು ಹೊಡಿಯ ಹೋಗುವನು ಶ್ರೀನಿವಾಸರು ಅಯ್ಯೋ ಅಯ್ಯೋ ಅನ್ನುತ್ತ ಓಡಿ ಹೋಗುತ್ತಾರೆ.....)

(ತೆರೆ ಬೀಳುತ್ತದೆ)

===***=====***===

## ಪ್ರವೇಶ ೨

## ರಸ್ತೆ

(ಶ್ರೀಧರನು ಪೇಪರ ಓದುತ್ತ ಬರುತ್ತಾನೆ)

ರಾಜು ಬರುತ್ತಾರೆ.....

ರಾಜು— ನಮಸ್ಕಾರ ಚೇರಮನ್ರೇ ನಮಸ್ಕಾರ (ನಗುಮೊಗದಿಂದ)

ಶ್ರೀಧರ— (ಪೇಪರ ನೋಡುತ್ತಲೇ ವಕ್ರದಿಂದ) ಏನಪ್ಪಾ ಬಂದಿದ್ದೀ.

ರಾಜು— (ಕೈಜೋಡಿಸುತ್ತ ತಿಕ್ಕುತ್ತ) ಏನೂ ಇಲ್ಲರೀ (ಮುಂದೆ ಮಾತಾಡಿದಂತೆ ಬಾಯಿ ಮಿಸುಕುತ್ತ)

ಶ್ರೀಧರ— ಏನೂ ಇಲ್ಲದಿದ್ದರೆ ಯಾಕೆ ಬಂದೆ.

ರಾಜು— ಅಲ್ಲರೀ ನಾಳೆ ನಮ್ಮ ಹೊಸ ಅಂಗಡಿ ಸ್ಥಾಪನಕ್ಕೆ ನೀವು ಅಧ್ಯಕ್ಷರಾಗಬೇಕೆಂದು ಹೇಳಲು ಬಂದಿದ್ದೆ. ಅದಕ್ಕಾಗಿ.....

ಶ್ರೀಧರ— ಹೊಸ ಅಂಗಡಿ ಸ್ಥಾಪನೆ ಮಾಡುತ್ತೀಯಾ. ಸರಿ. ನನ್ನಲ್ಲಿಗೆ ಹೋಗೆಂದು ನಿನಗೆ ಯಾರು ಹೇಳಿದರೋ....

ರಾಜು— ನನಗ್ಯಾರು ಹೇಳಬೇಕ್ರಿ ನಾನೇ ಬಂದೆ. ನಿನ್ನೆ ಕಾಂಗ್ರೇಸ ಎಂ.ಪಿ. ಯವರಲ್ಲಿಗೆ ಹೋಗಿದ್ದೆ. ಅವರು ಊರಲ್ಲಿದ್ದಿಲ್ಲ. ಹೋಗಲಿ ಬಿಡು. ನಮ್ಮ ಗ್ರಾಮದಲ್ಲೇ ಚೇರಮನ್ನ ಇರಲಿಕ್ಕಾಗಿ ಮತ್ತೇಕೆ ಎಂದು ಹಾಗೆ ಬಂದೀನ್ರಿ ಅದಕ್ಕಾಗಿ ಹೊಸ ಅಂಗಡಿ ಉದ್ಘಾಟನಾ ಕಾರ್ಯದ ಅಧ್ಯಕ್ಷತೆ ನಿಮ್ಮ ಪಾಲಿಗಿದೆ. ಇದನ್ನು ತಿಳಿಸುವದಕ್ಕಾಗೇ ಬಂದೀನ್ರಿ. ಬಡವನ ಆಮಂತ್ರಣೆ ಸ್ವೀಕರಿಸಿ ಬಂದು ತಾವು ಈ ಕಾರ್ಯ ನೆರವೇರಿಸಬೇಕು. ಇಷ್ಟೇ.

ಶ್ರೀಧರ— ಅಲ್ಲೋ ನಿನ್ನ ಹೆಸರೇನೋ....

ರಾಜು— ನನ್ನ ಹೆಸರು ರಾಜಾ ಅಂತಾರ್ರೀ.

ಶ್ರೀಧರ— ಅಲ್ಲಪ್ಪ ರಾಜೂ ನಿಮ್ಮಂಥವರ ನೀಟಾದ ಓಟಿನಿಂದ ಆರಿಸಿ ಬಂದವರು

ನಾವು, ನಿನ್ನ ಅಂಗಡಿ ಉದ್ಘಾಟನಕ್ಕೆ ಬರದಿದ್ದರೆ ಹೇಗೆ ಮೊದಲೇ ನನ್ನ ಹತ್ತರ ಬರದೇ ಆ ಎಂ.ಪಿ. ಹತ್ತರ ಯಾಕೋ ಹೋದದ್ದು, ಆವ ಇಲ್ಲಿಗೆ ಬಂದು ಏನು ಮಾಡಬಲ್ಲ. ನಮ್ಮಂಥವರು ಊರಲ್ಲಿರಲಿಕ್ಕಾಗಿ ನೀನು ಅಲ್ಲಿಗೆ ಹೋದದ್ದು ತಪ್ಪು. ಹೌದಲ್ಲೋ. ನೀನೇ ಹೇಳು.

**ರಾಜು–** ಹೌದ್ರಿ. ನಂದು ತಪ್ಪಾಗಿದೆ. ಅಲ್ಲಿಗೆ ಹೋದದ್ದು ಬಹಳ ತಪ್ಪಾಗಿದೆ.

**ಶ್ರೀಧರ–** ಆಗಲಿ. ಉದ್ಘಾಟನಾ ಎಂದು ಅಂಗಡಿ ಸ್ಥಾಪನಾ ಎಂದು ಯಾವ ವಾರ, ಯಾವ ತಾರೀಖು, ಯಾವ ಟೈಮು ಮೊದಲೇ ತಿಳಿಸು.

**ರಾಜು–** ಅಂಗಡಿ ಸ್ಥಾಪನೆಯಾದರೂ ನಾಳೆ ಮೂರು ಘಂಟೆಗೆ ಮಾಡಬೇಕಾಗಿದೆ ಸ್ವಾಮಿಾ.

**ಶ್ರೀಧರ–** ಹೌದೋ ಉದ್ಘಾಟನಾ ಕಾರ್ಯ ಎಂದು ಇಟ್ಟಿರುವಿಯೋ.

**ರಾಜು–** ಅದು ಸಹ ನಾಳೆರೀ ಮೂರು ಘಂಟೆಗೆ.

**ಶ್ರೀಧರ–** ಅಲೆ ಇವನಾ. ಸ್ಥಾಪನಾ ನಾಳೆ. ಉದ್ಘಾಟನಾನೂ ನಾಳೆ. ಅದೂ ಮೂರು ಘಂಟೆಗೆ. ಇದು ಮೂರು ಘಂಟೆಗೆ. ಇದೇನೋ ಯರಡೂ ವಂದೇ ಟೈಮಿನಲ್ಲಿ ಸ್ವಲ್ಪ ಹಿಂದುಮುಂದು ಮಾಡಿದ್ದರೆ ಮೇಲಿತ್ತು. ಹೌದಲ್ಲೋ ರಾಜು.

**ರಾಜು–** ಹಾಗಲ್ಲರೀ ಮೊದಲು ಉದ್ಘಾಟನಾ. ಆಮೇಲೆ ಸ್ಥಾಪನಾ ಹಿಂಗೆಂದು ನೇಮಕ ಮಾಡಿಕೊಂಡಿರುತ್ತದೆ. ತಿಳಿತ್ರ್ಯಾ.

**ಶ್ರೀಧರ–** ಹಾ, ಹೀಗಂದ್ಯ, ಅದಕ್ಕಂತೀನಿ. ಎರಡೂ ಒಮ್ಮೆಲೇ ಅಂದರೆ ಹೇಗೆ ನೋಡು ಇರಲಿ ಭಾಷಣಕ್ಕೆಯಾರನ್ನಾದರೂ ಕರಿಸುವಿಯೇನು.

**ರಾಜು–** ನಿಮ್ಮಂಥವರು ಇರಲಿಕ್ಕಾಗಿ ಯಾರು ಯಾತಕ್ಕ ಬೇಕ್ರೀ.

**ಶ್ರೀಧರ–** ಆಂ ಸರೆ ಇರಲಿ ಬಿಡು. ನಮ್ಮ ರಾಮು ಚನ್ನಾಗಿ ಮಾತಾಡುತ್ತಾನೆ. ಅವನಿಗೆ ನಾನೇ ಹೇಳಿ ಕರಕೊಂಡು ಬರುತ್ತೇನೆ.

**ರಾಜು–** ಅಷ್ಟು ಮಾಡಿ ಬಿಡ್ರೀಯಪಾ. ನಾ ಬರ್ತೀನ್ರೀ. ನಮಸ್ಕಾರ (ಹೋಗುವಾಗ್ಗೆ)

**ಶ್ರೀಧರ–** ಹೇ ರಾಜೂ ಬಾರೋ ಇಲ್ಲಿ, ನೋಡು. ೨ ಹುವ್ವಿನ ಸರ ಮಾತ್ರ ಮರೆಯಬೇಡ.

**ರಾಜು–** ಹೂನ್ರಿ. ಬರ್ತೀನ್ರಿ. (ಹೋಗುವಾಗ್ಗೆ) (ಮತ್ತೆ)

ಶ್ರೀಧರ– ಬಾರೊ ಇಲ್ಲಿ ಏನಿಲ್ಲ. ಊರ ಜನಕೆಲ್ಲ ತಿಳಿಸು. ಶ್ರೀಮಂತ ಶ್ರೀಧರ ಚೇರಮನ್ನರನ್ನು ಅಧ್ಯಕ್ಷಸ್ಥಾನಕ್ಕೆ ಆರಿಸಿದ್ದೇನೆ. ಸರ್ವರೂ ಬರ‍್ರಿ ಎಂದು ಕರೆ ತಿಳೀತ.

ರಾಜು– ಆಗಲ್ರೀ ಯಪಾ ಬರ‍್ತೀನಿ. ನಮಸ್ಕಾರ (ಹೋಗುವಾಗ್ಯೆ)

ಶ್ರೀಧರ– ಆ ರಾಜೂ ಬಾ ಯಿಲ್ಲಿ. ಏನೋ ಹೇಳಬೇಕಾಗಿತ್ತು..... ಆ ಇದೋ ಫೋಟೋ ಕ್ಯಾಮರಾದವರಿಗೆ ಹೇಳಿಕಳುಹಿಸು. ಮರಿಯಬೇಡ ಇನ್ನು ಹೋಗು.

ರಾಜು– ಹೂನ್ರೀ ಯಲ್ಲಾ ತಯಾರ ಮಾಡಿನ್ರೀ, ಬರ‍್ತೀನಿ. ನಮಸ್ಕಾರ. (ಹೋಗುತ್ತಾನೆ)

ಶ್ರೀಧರ– ಉದ್ಘಾಟನಾ ಕಾರ‍್ಯಕ್ಕೆ ಅಧ್ಯಕ್ಷತೆ ಏನೋ ನಂದು ಆದರೆ ಅದರಲ್ಲಿ ಏನು ಮಾತಾಡಬೇಕೋ ನನಗೆ ತಿಳಿಯದಾಗಿದೆ. ಇರಲಿ ಇಂದೇ ರಾಮುವಿಗೆ ತಿಳಿಸಿ ಅವನಿಂದ ಬರ‍್ಸಿಕೊಂಡು ಮಾತಾಡಲು ಸುಲಭವಾಗುತ್ತದೆ. ಅದರಂತೆ ಮಾಡುತ್ತೇನೆ. (ಹೋಗುತ್ತಾನೆ.)

===***====***===

## ಪ್ರವೇಶ ೩

## ಶ್ರೀಧರರ ಮನೆಯ ಸೀನು

(ರಾಮು ಬರುತ್ತಾನೆ ಅತ್ತಿತ್ತ ನೋಡುತ್ತಾನೆ ಯಾರು ಇರುವದಿಲ್ಲ ಹೊರಗಿನಿಂದ ಬಂದ ಶಾಮಲಾ ರಾಮುನನ್ನು ನೋಡುತ್ತ ಸಿಟ್ಟಿನಿಂದ ಒಳಗೆ ಹೋಗುತ್ತಾಳೆ.... ಶ್ರೀಧರ ಹೊರಗೆ ಬರುತ್ತಾನೆ)

**ರಾಮು–** ನಮಸ್ಕಾರ ಚೇರಮನ್ರೇ..... ನಿನ್ನೆ ತಾವು ಹೇಳಿ ಕಳಿಸಿದ ಕಾರ್ಯವೇನಿದೆ ಹೇಳಿ ಕರೆಯ ಬಂದವನು ಉದಯಕ್ಕೆ ಬರಬೇಕೆಂದು ಹೇಳಿದನು. ಮಾತ್ರ ವಿಷಯವೇನೂ ತಿಳಿಸಲಿಲ್ಲ.

**ಶ್ರೀಧರ–** ಏನೂ ಇಲ್ಲ ಈ ದಿವ್ಸ ಒಂದು ಹೊಸ ಅಂಗಡಿ ಸ್ಥಾಪನೆಯ ಆಮಂತ್ರಣವದೆ ೩ ಘಂಟೆಗೆ ಇಬ್ಬರೂ ಸೇರಬೇಕು.... ಆದರೆ ಅಧ್ಯಕ್ಷತೆ ನನಗೆ ಅತಿಥಿ ಸತ್ಕಾರ ನಿನಗೆ ಆದಕಾರಣ ತಿಳಿಸಬೇಕೆಂದು ಕರೆಯಲು ಕಳುಹಿದೆ ಇರಲಿ ಅಧ್ಯಕ್ಷತೆಯಲ್ಲಿ ಮಾತಾಡುವ ಪ್ರಸಂಗ ಬಂದರೆ ಹೇಗೆ ಮಾಡಬೇಕು....

**ರಾಮು–** ಓಹೋ ಇಷ್ಟೇ ತಾನೇ.... ಅದು ಯಾವ ಅಂಗಡಿ ಕಾಳಿನದೋ ಅರಿಬಿಯ ಅಂಗಡಿಯೋ ಅಥವಾ ಕಿರಾಣಿದೋ ಗೊತ್ತಿದೆಯೇ ನಿಮಗೆ.

**ಶ್ರೀಧರ–** ಇಲ್ಲ ಬಿಡು. ಅವನನ್ನು ಕೇಳಲೇ ಇಲ್ಲ. ಹೋಗಲಿ ಬಿಡೋ ಯಾವದೇ ಆಗಲಿ ಮಾತಾಡುವ ವಿಷಯವನ್ನು ಸ್ವಲ್ಪು ಬರೆದಿಡು ಇಷ್ಟೇ.... ಮೇಲಾಗಿ ಅತಿಥಿಯ ಭಾಷಣವಂತೂ ಇದ್ದೇ ಇದೆ ಚನ್ನಾಗಿ ಮಾತಾಡು.... ಶಾಮಲಾ.... ಶಾಮಲಾ (ಎಂದು ಕರೆಯುತ್ತಾನೆ.

**ಶಾಮಲಾ–** (ಒಳಗಿನಿಂದಲೇ) ಬಂದೆ ಅಪ್ಪಾ ಬಂದೆ (ಬರುತ್ತಾಳೆ)

**ಶ್ರೀಧರ–** ಏನಮ್ಮಾ ಕಾಫಿಯೇನಾದರೂ ಕುಡಿಸುವೆಯಾ....

**ಶಾಮಲಾ–** ಒಲಿ ಮೇಲಿದೆ ಸಧ್ಯ ತರುತ್ತೇನೆ (ಹೋಗುವಳು)

**ಶ್ರೀಧರ–** ರಾಮೂ ನಮ್ಮ ಶಾಮಲಾಗೆ ಸರಿಯಾದ ವರನನ್ನು ಶೋಧಿಸೋ ನಿನಗೆ ಹೇಳಿ ಹೇಳಿ ಸಾಕಾಗಿ ಹೋಯಿತು. ಈ ವರ್ಷ ಲಗ್ನ ಮಾಡಲೇಬೇಕು.

**ರಾಮು—** ಹೋಗಲಿ ಬಿಡಿ ವರಕ್ಕೇನು ಕಡಿಮೆ ಆದರೆ ನಿಮ್ಮಂಥವರಿಗೆ ವರ ಸಿಗುವದು ದುರ್ಲಭವಾಗಿದೆ ಇಷ್ಟೇ.....

**ಶ್ರೀಧರ—** ಅಂದರೆ ನಾವು ಅಂಥಾ ಕೆಟ್ಟವರೆಂದು ತಿಳಿದಿರುವೆಯಾ.....

**ರಾಮು—** ಛೇ ಛೇ ಕೆಟ್ಟವರೆಂದು ನಾ ಹೇಳಲಿಲ್ಲ ದೊಡ್ಡ ಶ್ರೀಮಂತರೂ ಅಧಿಕಾರಿಗಳೂ ಆದ ತಮ್ಮಂಥವರ ಕೂಡ ಶರೀರ ಸಮ್ಮಂಧ ಮಾಡಬೇಕಾದರೆ ವರನೂ ಸಹ ಶ್ರೀಮಂತನಾಗಿಯೇ ಇರಬೇಕೆಂದು ಹೇಳಿದೆ ಇಷ್ಟೆ ಬರೇ ವಿದ್ಯಾವಂತನಾದರೆ ಏನಾಯ್ತು ನಿಮ್ಮ ಮುಂದೆ ಅವನಿಗೆ ಬೆಲೆ ಸಿಗಲಾರದು.... ಅದಕ್ಕಾಗೇ....

**ಶ್ರೀಧರ—** ಛೇ ಛೇ ಹಾಗೇನೂ ತಿಳಿಯಬೇಡ ಬಡವನಿದ್ದರೂ ಚಿಂತೆಯಿಲ್ಲ ಸುಶಿಕ್ಷಿತ ವರನಾದರೆ ಸಾಕು.....

**ರಾಮು—** ನೀವೇನೊ ಹೇಳುತ್ತೀರಿ ಖರೆ ಆದರೆ ನಿಮ್ಮ ಮಗಳು ಒಪ್ಪಬೇಕಲ್ಲಾ....

**ಶ್ರೀಧರ—** ನಾವಿಬ್ಬರೂ ಒಪ್ಪಿದ ಮೇಲೆ ನನ್ನ ಮಗಳು ಒಪ್ಪದೆ ತಿರಸ್ಕಾರ ಮಾಡುವಳೇ ಛೇ ಎಂದಿಗೂ ಸಾಧ್ಯವಿಲ್ಲ....

**ರಾಮು—** ಚೇರಮನ್ರೇ ಇದೊಂದು ನಿಮ್ಮ ಭ್ರಮೆ ಹೆಂಣುಮಕ್ಕಳು ದೊಡ್ಡವರಾದ ಮೇಲೆ ತಮ್ಮ ಮನವಪ್ಪಿದ ವರನನ್ನೇ ಕೈ ಹಿಡಿಯುತ್ತಾರೆಂಬುದನ್ನು ಮಾತ್ರ ಮರೆಯಬೇಡಿರಿ ಈಗೇನಾಗಿದೆ ನಿಮ್ಮ ಮಗಳನ್ನೇ ಕೇಳಿರಿ ಸಧ್ಯ.... ಒಂದು ವರ ಚನ್ನಾಗಿದೆ. ನಾಳೆ ಕರಕೊಂಡು ಬರಲೇ (ಶಾಮಲಾ ಬಾಗಿಲೊಳಗೆ ನಿಂತು ಕೇಳುತ್ತಾಳೆ.)

**ಶ್ರೀಧರ—** ಅವನ ವಯಸ್ಸೆಷ್ಟು? ಅಭ್ಯಾಸ ಎಲ್ಲಿವರೆಗೆ ಮಾಡಿದ್ದಾನೆ ಅವನ ಉದ್ಯೋಗವೇನು ಚನ್ನಾಗಿ ತಿಳಿದಿರುವಬೇ ನಿನಗೆ

**ರಾಮು—** ಅವನು ಮ್ಯಾಟ್ರಿಕೆಯ ವರೆಗೆ ಓದಿದ್ದಾನೆ ಒಳ್ಳೇ ಲಕ್ಷಣವಂತ ಸಧ್ಯ ಪಂಚಾಯ್ತ ಸೆಕ್ರೆಟರಿ ಆಗಿದ್ದಾನೆ. ಅವನ ವಯಸ್ಸು ೨೨ಕ್ಕೆ ಮಿಕ್ಕಿಲ್ಲ ಬಹುಜಾಣ ನಿನ್ನ ಮಗಳು ಒಪ್ಪಿದರೆ ಮಾತ್ರ ನಾಳೆ ಕರಕೊಂಡೇ ಬರುತ್ತೇನೆ ಕೇಳಿ ಹಾಗಾದರೆ (ಶಾಮಲಾ ಚಾ ತಗೊಂಡು ಬಂದು ಇಬ್ಬರಿಗೂ ಕೊಡುತ್ತಾಳೆ.)

**ಶ್ರೀಧರ—** ಶಾಮಲಾ ಇಲ್ಲಿ ಬಾ ಅಮ್ಮಾ (ಬಂದು ಅಪ್ಪನ ಹಿಂದೆ ನಿಲ್ಲುವಳು) ನೋಡು ನಿನಗೆ ಸರಿಯಾದ ವರನನ್ನು ಹುಡುಕಿದ್ದೇನೆ ನಾಳೆ ಬರುತ್ತಾನೆ. ನೋಡಮ್ಮಾ ಇದೇ ತಿಂಗಳಲ್ಲಿ ಲಗ್ನ ಮಾಡಬೇಕೆಂದು ನಿಶ್ಚಯಿಸಿದ್ದೇನೆ ಅವನನ್ನು ಕರಿಸಲೇನಮ್ಮಾ ನಾಳೆ.

**ಶಾಮಲಾ**– (ರಾಮನ ಕಡೆ ನೋಡಿ ಸಿಟ್ಟಿನಿಂದ) ಉಹೂ ಬೇಡಪ್ಪಾ ಸಧ್ಯ ನಾನು ಲಗ್ನವಾಗುವದೇ ಇಲ್ಲ ಇನ್ನೂ ಕೆಲವು ದಿವಸ ಹೋಗಲಿ ಆ ಮೇಲೆ ಹೇಳುತ್ತೇನೆ ಸಧ್ಯ ಮಾತ್ರ ಬೇಡ (ಒಳಗೆ ಹೋಗುತ್ತಾಳೆ)

**ರಾಮು**– ನಾನು ಮೊದಲೇ ಹೇಳಿದೆ ನಿಮ್ಮ ಮಗಳು ಸುಶಿಕ್ಷಿತ ಕನ್ಯೆ ಕಂಡ ಕಂಡ ವರಗಳನ್ನು ಒಪ್ಪುವದೇ ಇಲ್ಲವೆಂದು ನನ್ನ ಮಾತು ನೀವು ನಂಬುವದೇ ಇಲ್ಲ ಹೋಗಲಿ ಬಿಡಿ ಸಧ್ಯ ನಿಮ್ಮ ಕೆಲಸ ಎಲ್ಲಿಗೆ ಬಂದಿದೆ

**ಶ್ರೀಧರ**– ಅದ್ಯಾವುದೋ ನನ್ನ ಹೊಸಾ ಕೆಲಸ

**ರಾಮು**– ಅದೇ ಗೌರಿ ವಿಷಯ ಎಲ್ಲಿಗಿ ಬಂತೂ ಅಂದೆ (ಅತ್ತಿತ್ತ ನೋಡಿ) ಸೀತಮ್ಮಾ ಅಕ್ಕನವರಿಲ್ಲವೇ ಮನೆಯಲ್ಲಿ

**ಶ್ರೀಧರ**– ಇದೇ ಈಗ ಹೊರಗೆ ಹೊದಂತಿದೆ ಯಾಕೆ ಅವಳ ಮುಂದೆ ಹೇಳಬೇಕೆಂದಿರುವಿಯಾ ಗೌರಿ ವಿಷಯ.....

**ರಾಮು**– ಛೇ ಛೇ ಹೇಳುವದುಂಟೇ..... ಶ್ರೀಧರರೇ ನಿಮ್ಮ ಗೋಡೆಗಳಿಗೆ ಸಹ ಕಿವಿಗಳುಂಟು ಅದಕ್ಕಾಗಿ ಆ ವಿಷಯ ಇಲ್ಲಿ ತಗಿಯುವದೇ ಬೇಡ ಅಲ್ಲೇ ಆಫಿಸಿಗೆ ಹೋಗೋಣ ನಡಿರಿ.

**ಶ್ರೀಧರ**– ಹೌದು ನಡೆ ಹೋಗೋಣ.... (ಹೋಗುವರು) ತೆರೆ ಬೀಳುತ್ತದೆ.

===***===***===

## ಪ್ರವೇಶ ೪

## ರಸ್ತೆ

(ಗ್ರಾಮ ಸೇವಕನಿಗೆ ಬೇರೆ ಗ್ರಾಮಕ್ಕೆ ಟ್ರಾನ್ಸಫರ್ ಆಗಿರುತ್ತದೆ. ತಲೆ ಮೇಲೆ ಬೆಡ್ಡ್ ಕೈಯ್ಯಲ್ಲಿ ಟ್ರಂಕ ಹಿಡಿದುಕೊಂಡು ಬರುತ್ತಾನೆ.)

ವಾಸು— ನನ್ನ ಮನಸ್ಸಿನಂತೆ ಆ ಊರು ಬಿಟ್ಟು ಬೇರೆ ಗ್ರಾಮಕ್ಕೆ ಟ್ರಾನ್ಸಫರ್ ಆಗಬೇಕಂತ ಇತ್ತು ಮನಸ್ಸಿನಂತೆ ಆಗೇ ಹೋತು, ಆದರೆ ತಲಿ ಮೇಲೆ ಬೆಡ್ಡು ಕೈಯಲ್ಲಿ ನಮ್ಮವಳ ಟ್ರಂಕ ಮಾತ್ರ ಬಂತು (ಕೆಳಗಿರಿಸಿ) ಹುಶ್ಯ.... ಇದೇನು ಬಂತಪ್ಪಾ ನನಗೆ ಸಾವಿರ ಕುದ್ರಿ ಸರ್ದಾರ ಆದರೂ ಮನಿ ಹೆಂಡತಿಗೆ ಮಾತ್ರ ಪಿಂಜಾರ ಎಂಬಂತೆ ಬೇಕಾದಷ್ಟು ದುಡಿದರೂ ಕಾಫಿ ಕುಡಿಲಿಕ್ಕೆ ನಾಲ್ಕಾಣೆ ಬೇಕಾದರೆ ನಮ್ಮ ರಾಣಿಯಿಂದಲೇ ಚಕ್ಕ್ ಮಂಜೂರಿ ಆಗಬೇಕು.... ಇದೊಳ್ಳೆ ಲೆಕ್ಕಾಚಾರಪ್ಪಾ, ಇದೂ ಸುಡುಗಾಡ ಮೋಟರ ಸ್ಟ್ಯಾಂಡ ಇನ್ನೂ ೨ ಫರ್ಲಾಂಗ ಇದೆ. ಅಲ್ಲಿಯವರೆಗೆ ಈ ಭಾರವಾದ ಸಾಮಾನು ಹೇಗೆ ಹೊರಲಿ ಅಂತೀನಿ. ಹೋರಲು ಕೂಲಿಯವನನ್ನು ಕರೆದರೆ ಬೈದು ಅವನನ್ನು ಕಳಿಸೇಬಿಟ್ಟಳು. ಅವಳ ಮುಂದೆ ನಿಂತು ಮಾತಾಡಬೇಕೆಂದರೆ ಏನೋ ಎಂತೋ ಬಾಯಿಗಿ ಬೀಗನೇ ಬೀಳುತ್ತೆ.... ಸಾಕಾಗಿ ಹೋತು ಈ ಪ್ರಪಂಚ ಏನು ಮಾಡಲಿ, ಆ ಬಂದಳು ದುರ್ಗಿ ಇವಳ ಮುಂದೆ ಸುಮ್ಮನಿರುವದೇ ಲೇಸು....

ನಿರ್ಮಲ— (ಗಂಟುಗಳೆರಡು ತಂದು) ಅಯ್ಯಯ್ಯ ಎಲ್ಲಾ ಸಾಮಾನು ನನಗೇ ಬಿಟ್ಟು ಬರಬೇಕೇನು ತಗೋ ಇದೊಂದು ಗಂಟು.... ಏಸಂತ ಹೊರಲಿ..... (ಅವನ ಹೆಗಲಿಗೆ ಹಾಕಿ)

ವಾಸು— ಅಲ್ಲೇ, ನಮ್ಮ ಸಾಮಾನು ನೋಡಿದರೆ ಕತ್ತಿ ಸಹ ಹೋರಲಾರವು ಕೂಲಿಯವನನ್ನು ಕರೆದರೆ ಅವನಿಗೆ ಬೈದು ಕಳಿಸೇ ಬಿಟ್ಟು ಮತ್ತೊಂದು ಗಂಟು ಬಗಲಿಗೆ ಕೊಟ್ಟಿ. ಹ್ಯಾಗಂದೆ ಹೋರೋದು ಆ... ಇನ್ನಾದರೂ ಕರಿಲ್ಯಾ ಅವನನ್ನು.... ನಾಲ್ಕಾಣೆ ಕೊಟ್ಟರೆ ಅಲ್ಲಿವರೆಗೆ ವಯ್ಯುತ್ತಾನೆ ಕರಿಲ್ಯಾ....

ನಿರ್ಮಲ— (ಶಿಟ್ಟಿನಿಂದ) ಆಂ.... ನಾಲ್ಕಾಣೆ ಕೊಡ್ತೀಯಾ ಕೊಡು ಯಾರ

ಬೇಡೆನ್ನುವರು ದುಡ್ಡು ಹೆಚ್ಚಾಗಿದೆ ನಿನಗೆ.... ಕೊಡು....

ವಾಸು– ಅಲ್ಲ ಮಹರಾಯಳೇ... ಹಾಲು ಮಾರಿದ್ದು ನನ್ನ ಪಗಾರದ ದುಡ್ಡೂ ಮತ್ತೆ ನಿನ್ನೆ ಯಮ್ಮಿ ಮಾರಿದೆಲ್ಲ ಅದೆಲ್ಲ ದುಡ್ಡು ಏನ ಮಾಡಿದೇ.... ಯಲ್ಲ್ಯಾದರೂ ಹುಗಿದು ಬಂದಿಯೋ ಹೇಗೆ ಕೂಲಿಯವಗೆ ನಾನೆಲ್ಲಿಂದ ಕೊಡಲಿ.....

ನಿರ್ಮಲ– ನನಗೇನು ಗೊತ್ತು. ಬೇಸಿದೆ ನಿಂದು, ಯಮ್ಮಿ ಮಾರೀದಿ ನನ್ನ ಪಗಾರ ತಗೊಂಡೀದಿ ಅನ್ನುವಿಯಲ್ಲಾ ಇದೆಲ್ಲ ಯಾರ ಗಂಟಂತ ತಿಳ್ದೀಯೋ.... ಆಂ.... ನಮ್ಮಪ್ಪ ಕೊಟ್ಟ ವರದಕ್ಷಿಣಗೆ ಬಡ್ಡಿ ಸಹ ಆಗೋದಿಲ್ಲ ತಿಳಿತಾ ವಿಚಾರಮಾಡಿ ಮಾತಾಡು. ನಿನ್ನ ಜನ್ಮ ಹೋಗೋವರಿಗೂ ದುಡಿದು ಕೊಟ್ಟರೂ ಮುಟ್ಟುವಂತಿಲ್ಲ, ಮರಿತೇನು ಆಗಲೆ.... ಸುಮ್ಮನೇ ಹೊತ್ತುಕೊಂಡು ಬಾ....

ವಾಸು– ಆಗಲಿ ಮಹರಾಯಳ ದುಡಿದ ಪಗಾರೆಲ್ಲ ನಿನಗೆ ಜಮಾ ಮಾಡ್ತೀನಿ ಆದರೆ ಮಾತಿಗೊಮ್ಮೆ ಮಂದ್ಯಾಗ ನಿಂತು ಮರ್ಯಾದಿಗೆ ಧಕ್ಕಿ ತರಬೇಡ ಇಷ್ಟೇ. ಅಲ್ಲಾ ನಿಮ್ಮಪ್ಪ ಕೊಟ್ಟಿರೋ ವರದಕ್ಷಿಣದ ಸುದ್ದಿ ಹಾದಿಗೆ ನಿಂತು ಮಾತಾಡಿದರೆ ಹೇಗೆ ಭಾರತ ಸರ್ಕಾರ ವರದಕ್ಷಿಣಾ ನಿರ್ಮೂಲನಾ ಕಾಯ್ದೆ ಜಾರಿ ತಂದಿದೆ ಅಂದಮೇಲೆ ನನ್ನ ನೌಕರಿ ಗತಿ ಏನು ಅದಕ್ಕಾಗಿ ದಯಮಾಡಿ ಇನ್ನು ಮೇಲೆ ಅದರ ಸುದ್ದಿಯೇ ತಗಿಯಬೇಡ ತಿಳಿತೇ.

ನಿರ್ಮಲ– ಇಲ್ಲದ್ದೊಂದು ನೀನು ತಗೆದರೆ ಮಾತ್ರ ನಾನೂ ಅದರ ಸುದ್ದಿ ತಗಿಯುವಾಕೀನ.... ನಾನೇನು ಬಿಡೋದಿಲ್ಲ ನೋಡು....

ವಾಸು– ಅಲ್ಲಾ ನಿರ್ಮಲಾ.... ಹಗಲೆಲ್ಲ ನನಗ ಮೇಲೆ ರಂಗರಂಗ ಮಾಡ್ತೀಯಲ್ಲಾ ನಾ ಹ್ಯಾಗ ತಡಿಬೇಕೂ ಅಂದೆ.... ಇದೇ ಸಿಟ್ಟು ರಾತ್ರಿ ಕಾಲದಲ್ಲಿ ಎಲ್ಲಿ ಹೋಗುತ್ತೋ ದೇವರೆ ಬಲ್ಲ.... ಹೊತ್ತು ಮುಳುಗಿತೆಂದರೆ ನೀ ಮಾಡೋ ಪ್ರೇಮ ಯಾರಾದರೂ ನೋಡಿದರೆ ಬಾಯಲ್ಲಿ ನೀರು ಬರಬೇಕು ಬೆಳಕ ಹರಿತೂ ಅಂದರೆ ತೀರಿತು. ನನ್ನ ಮರ್ಯಾದೆ ಕಾಶಿಗೆ ಪಂಚೇರ ಮಾಡ್ತೀಯಲ್ಲಾ ಇದೇ ತಿಳಿಯದಾಗಿದೆ ನನಗೆ......

ನಿರ್ಮಲ– (ನಗುಮೊಗದಿಂದ) ಇರಲಿ ಬಿಡ.... ಸಾಕು ನಿನಮಾತು ಯಾರಾದರೂ ಕೇಳಿದರೆ ಯೇನಂದಾರು... ಇರಲಿ ಹೊತ್ತಾತು ಬಾ ಲಗು.... (ಲಗು ಲಗು ಹೋಗುತ್ತಾಳೆ)

ವಾಸು– ನಿಲ್ಲು.... ನಿಲ್ಲು.... ಅಲೆ ಇವಳಾ ಹೋಗೇ ಬಿಟ್ಲಲ್ಲೋ.... ಇದನಿಷ್ಟು

ಯತ್ತಿ ತಲಿ ಮೇಲೆ ಇಟ್ಟಿದ್ದರೆ ನೆಟ್ಟಗಿತ್ತು ಹೋಗೇ ಬಿಟ್ಟಿತು ಪಿಶಾಚಿ.... ಆಂ... ಏನ ಹೆಂಡತಿಯಪ್ಪಾ ಇದರ ಮನಿ ಹಾಳಾಗ.... ಹೆಸರು ಹೇಳಿದರೆ ಮುದ್ದು ಬರುತ್ತೆ, ಇವಳ ಗುಣ ನೋಡಿದರೆ ಸಿಟ್ಟು ಬರುತ್ತೆ, ಇದೊಂದು ಹೆಂಣಿನ ಜಾತಿಯೇ ಬೇರೆ. ಯಾಕಂದರೆ ಹಗಲು ಗುಣ ರಾತ್ರಿ ಇಲ್ಲ ರಾತ್ರಿ ಗುಣ ಹಗಲಿಲ್ಲ. ರಾತ್ರಿ ಮಾತ್ರ ನಿರ್ಮಲನ ಹೌದು ಹಗಲು ಮಾತ್ರ ಮೊದಲಕ್ಷರ ತಗಿಯಬೇಕು. ನಿ ತಗೆದರೆ ಮಲ ಎಂದು ಆಗುತ್ತದೆ. ಮಲ ಅಂದರೆ ಹೊಲಸೂ ಅಂತ. ಮುಖ್ಯವಾಗಿ ಹೊಲಸುಮುಂಡೆ ಅಂತಲೇ ಕರಿಯಬೇಕು. ಏನು ಮಾಡಲಿ ಯಾರಾದರೂ ಬಂದಿದ್ದರೆ ನೆಟ್ಟಗಿತ್ತು. (ನೋಡಿ) ಓಹೋ ಅಲ್ಲಿ ಯಾರೋ ಬಂದರು ನಮ್ಮ ಮಾಮಾ.... ಬರ್ಲಿ (ರಾಮು ಬರುತ್ತಾನೆ) ನಮಸ್ಕಾರ ಮಾಮಾ ನಾನು ಹೋಗಿ ಬರುತ್ತೇನೆ. ನನಗೆ ಟ್ರಾನ್ಸಫರ್ ಆಗಿದೆ....

ರಾಮು— ಆ ಏನೂ ಕ್ಯಾನ್ಸರ್ ಆಗಿದೆಯೇ. ಅದೇಕಾಯಿತೋ ನಿನಗೆ ಕ್ಯಾನ್ಸರ್....

ವಾಸು— ಕ್ಯಾನ್ಸರ್ ಅಲ್ಲ ಮಾಮಾ ಟ್ರಾನ್ಸಫರ್.....

ರಾಮು— ಓಹೋ ಇಲ್ಲಿಂದ ಟ್ರಾನ್ಸಫರ್ ಆಯಿತೋ ಸರೆ.... ಒಬ್ಬರೇ ವಂಟೀರಲ್ಲ ನಿಮ್ಮ ಸೌಭಾಗ್ಯವತಿ....

ವಾಸು— ಅವರಾ ನಿಮ್ಮ ತಂಗಿಯವರು ಆಗಲೇ ಮೋಟರ ಸ್ಟ್ಯಾಂಡಿಗೆ ಮುಟ್ಟಿರಬೇಕು. ಇವೆಲ್ಲ ಸಾಮಾನು ನನ್ನ ಪಾಲಿಗೆ ಬಿಟ್ಟು ಮುಂದೆ ಹೋಗೇ ಬಿಟ್ಲು. ಯಂಥಾ ತಂಗೆಪ್ಪ ಮಾಮಾ ನಿಮ್ಮ ತಂಗಿ....

ರಾಮು— ನೋಡು ವಾಸು ಅದೆಲ್ಲ ನಿಮ್ಮ ಅದೃಷ್ಟವೆಂದೇ ಹೇಳಬೇಕು ಇದಕ್ಕೆ ಸಾಕ್ಷಿ ಈ ಸೀರಿ ಗಂಟೇ ಸಾಕ್ಷಿ.....

ವಾಸು— ನಿಜ ಇದೇ ಸಾಕ್ಷಿ.... ಇರಲಿ ಹೊತ್ತಾಗಿದೆ ತಲಿ ಮೇಲಿಟ್ಟರೆ ಇಡ್ತೀರಾ....

ರಾಮು— ತಗೋ ಹೊರು (ಎತ್ತಿ ಯಿಡುವನು)

ವಾಸು— ಬರ್ತೀನಿ ಮಾಮಾ ಹೋದ ಮೇಲೆ ಪತ್ರಾ ಬರಿತೀನಿ ನಮಸ್ಕಾರ (ಹೋಗುವನು....)

ರಾಮು— ಹೋಗಲೇ ಹೋಗು ನಿನ್ನ ಪತ್ರ ಬೇಡ ನಿನ್ನ ದರ್ಶನ ಸಹಬೇಡ.... ಇವನಂತೂ ಊರು ಬಿಟ್ಟು ಹೋದ ಇನ್ನು ಮೇಲೆ ಊರು ಸುಧಾರಿಸಬಹುದು. ಇವನ ಜಾಗದ ಮೇಲೆ ಇವನಂಥವನೇ ಬಂದರೆ

ಮಾತ್ರ ಮತ್ತೂ ಕೆಡುತ್ತದೆ, ಆಗಲಿ ನೋಡೋಣ.... ಇವನ ಗದ್ದಲದಲ್ಲೇ ಹೊತ್ತಾತು ಶ್ರೀಧರರು ನನ್ನ ದಾರಿ ನೋಡುತ್ತಿರಬಹುದು.... ಇದೇನು ಬಂದೇ ಬಿಟ್ರಲ್ಲಾ, ನಮಸ್ಕಾರ ಅಲ್ಲಿಗೇನೆ ಬರುತ್ತಿದ್ದೆ ತಾವೇ ಬಂದಿರಿ ಬನ್ನಿ....

**ಶ್ರೀಧರ–** ಮತ್ತೇನು ಮಾಡಲಿ ರಾಮು ನೀನು ಲಗು ಬರಲಿಲ್ಲ. ಅದಕ್ಕಾಗೇ ನಾ ಬಂದೆ...

**ರಾಮು–** ಓಹೋ ತಿಳಿತು ಬಿಡು. ನನ್ನಲ್ಲಿಗೆ ಬರಬೇಕೆಂದು ಬಂದವರಲ್ಲಾ ನೀವು ಗೌರಿ ಮನಿಗೆ ಹೋಗೇ ಬಂದಿರಬೇಕು ಅಲ್ವೆ.... ನೀನು ಬಹು ಜಾಣನಯ್ಯಾ ಇಂಥಾ ಕಾರ್ಯದಲ್ಲಿ.....

**ಶ್ರೀಧರ–** ನೋಡು ರಾಮೂ ನೀ ಹೇಳಿದ್ದೆಲ್ಲ ಖರೇನೆ.... ಆದರೆ ಯಾವ ಕೆಲಸಕ್ಕಾದರೂ ಗುರಿ ಇಡೋದಿಲ್ಲ ಇಟ್ಟ ಮೇಲೆ ಬಿಡೋದಿಲ್ಲಾಂತ ತಿಳಿ

**ರಾಮು–** ಹೌದ ಹೌದು ಗುರಿಯಂತೂ ಗೌರಿಯ ಮೇಲೆ ಬಲವಾಗಿ ಇಟ್ಟಿರುವೆ ಆದರೆ ಕಾರ್ಯವಾದ ಮೇಲೆ ಮುಂದಿನ ಮಾತು.... ಏನೇ ಇರಲಿ ನೀನು ಬಹು ಮುಂಗೋಪಿ ಮನುಷ್ಯ.....

**ಶ್ರೀಧರ–** ಅದೆಲ್ಲ ಇರಲಿ ಬಿಡು ನಿನ್ನ ಹುಡುಗಿಯನ್ನು ತೋರಿಸಲೇ ಇಲ್ಲವಲ್ಲಾ....

**ರಾಮು–** ನನ್ನ ಹುಡುಗಿಯಲ್ಲಯ್ಯಾ ನಾ ಹೇಳಿದ ಹರಿಜನ ಹುಡಿಗಿ ವಿಷಯ ಹೌದಲ್ಲೋ ನಾಳೆ ತೋಟಕ್ಕೆ ಬಾರಯ್ಯಾ ೩ ಘಂಟೆಗೆ.... ಬರುತ್ತಾಳೆ ಅವಳನ್ನು ನೋಡಿದ ಮೇಲೆ ನಿನಗೇನೆ ತಿಳಿಯುತ್ತೆ ಆದರೂ ಅವಳು ಬಹಳ ಹುಡುಗಾಟಿಕೆಯವಳು ಹುಷಾರಿಯಿಂದ ವರ್ತಿಸಿರಿ.....

**ಶ್ರೀಧರ–** ಓಹೋ ಹೀಗೇನು ಆಗಲಿ ತಪ್ಪೇನಿದೆ ಅವಳ ವಿನೋದವೆಲ್ಲ ನಾ ನೋಡಿಕೊಳ್ಳುತ್ತೇನೆ. (ರಾಜು ಬರುತ್ತಾನೆ......)

**ರಾಜು–** ನಮಸ್ಕಾರ ಚೇರಮನ್ರೇ ಬರಬೇಕು ಸರ್ವರೂ ಬಂದಿದ್ದಾರೆ.

**ಶ್ರೀಧರ–** ಆಗಲಿ ರಾಮು ನಡೆ ಹೋಗೋಣ ಮೊನ್ನೆ ಹೇಳಿದ್ದು ಇವನ ಅಂಗಡಿ ಉದ್ಘಾಟನವೇ ಹೋಗು ರಾಜು ಈಗಲೇ ಬರುತ್ತೇವೆ..... (ಹೋಗುತ್ತಾನೆ.) ರಾಮು ನಮ್ಮ ಮನೆಗೆ ಹೋಗಿ ಕಾಫಿ ಕುಡಿದು ಹೋಗೋಣ ನಡೆ.... (ಹೋಗುತ್ತಾರೆ)

===****======****====

## ಪ್ರವೇಶ ೫

(ರಾಜುವಿನ ಚಪ್ಪಲಿ ಅಂಗಡಿಯು. ಅಲ್ಲೇದಲ್ಲೆ ತೂಗ ಹಾಕಿರಬೇಕು ಚಪ್ಪಲಿ ಶ್ರೀಧರ ರಾಮೂ ಬರುತ್ತಾರೆ.....)

**ರಾಜು–** ಬನ್ನಿ ಬನ್ನಿ ನಮಸ್ಕಾರ ಇತ್ತ ಸ್ವಲ್ಪು ಕೂತುಕೊಳ್ಳಿ.... (ಕೂಡುವರು) ಇದೋ ತಮಗಾಗಿ ತರಿಸಿದ್ದೇನೆ ಇದು ಬಹಳ ಬೆಲೆ (ಬೆಳ್ಳಿ ಗ್ಲಾಸನ್ನು ತೋರಿಸಿ).....

**ಶ್ರೀಧರ–** (ಅದನ್ನು ಕೈಯಲ್ಲಿ ಹಿಡಿದು) ನೋಡಿದೇನೋ ರಾಮು ರಾಜು ಬಹಾಳ ಹುಷಾರಿ, ಎಂಥವರಿಗೆ ಎಂಥಾ ಸಾಮಾನು ಕೊಡಬೇಕೆಂಬುದೆಲ್ಲ ಇವನಿಗೆ ಗೊತ್ತುಂಟು ಬಹುಜಾಣ....

**ರಾಮು–** ನೋಡಿದೆ ಚೇರಮನ್ರೇ ನೋಡಿದೆ ಮುಂದೆ ಇಟ್ಟಿದ್ದ ಬೆಳ್ಳಿ ಗ್ಲಾಸೂ ನೋಡಿದೆ ಹಿಂದೆ ತೂಗಾಕಿದ ಸಾಮಾನು ಸಹ ನೋಡಿದೆ. ಇರಲಿ ರಾಜೂ ನಿನ್ನ ಅಂಗಡಿ ಸ್ಥಾಪನೆ ಕಾಳಿನದೋ ಕಿರಾಣಿದೋ ಏನು ದಲಾಲಿ ಅಂಗಡಿಯೊ ನೀನು ತಿಳಿಸಿದಲ್ಲಿ ಅದರ ಸಮ್ಮಂಧ ಮಾತಾಡಲಿಕ್ಕೆ ಬರುತ್ತದೆ ಯಾವದಿದೆ.....

**ರಾಜು–** ನನ್ನ ಅಂಗಡಿ ಕೇಳಿದಿರಾ.... ಚಪ್ಪಲಿ ಅಂಗಡಿ ರೀ....

**ಶ್ರೀಧರ–** ಆಂ.... (ಘಾಬರಿಯಿಂದ) ಏನೂ ಚಪ್ಪಲಿ ಅಂಗಡಿಯೇ ಇದರ ಉದ್ಘಾಟನವೇ....

**ರಾಜು–** ಹೌದ್ರೀ... ನಿನ್ನೆ ನೀವು ಕೇಳಲಿಲ್ಲ ನಾನು ತಿಳಿಸಲಿಲ್ಲ.

**ಶ್ರೀಧರ–** (ಕೈಯಲ್ಲಿ ಗ್ಲಾಸನ್ನು ತಿರುವಿ ತಿರುವಿ ನೋಡುತ್ತ) ಹೌದು ರಾಮು ನಾನು ಕೇಳಿದ್ದರೆ ನಿನ್ನೆ ಹೇಳೇ ಹೇಳುತ್ತಿದ್ದೆ ನಾ ಕೇಳಿಲ್ಲ ಇವ ಹೇಳಿಲ್ಲ ತಪ್ಪೇನಿದೆ ಇಂತಿಂಥ ಅಂಗಡಿಗಳ ಉದ್ಘಾಟನಕ್ಕೆ ಎಂತೆಂಥಾ ಮಂತ್ರಿಗಳು ಹೋಗುತ್ತಾರಂದ ಮೇಲೆ ನಮ್ಮಂಥವರ ಪಾಡೇನು ಯಾಕೋ ರಾಮು

**ರಾಮು–** (ಗೋಣು ಹಾಕುವನು) ಜನರೆಲ್ಲ ಬಂದು ಕೂಡುತ್ತಾರೆ. ರಾಜು ಕೂಡಿಸುತ್ತಾನೆ.

**ರಾಜು–** (ಎದ್ದು ನಿಂತು) ನನ್ನ ಪ್ರೇಮದ ಬಂಧುಗಳೇ ಈ ನನ್ನ ಹೊಸ ಅಂಗಡಿಯ ಉದ್ಘಾಟನಕ್ಕಾಗಿ ಈ ಗ್ರಾಮದ ಪಂಚಾಯತ ಚೇರಮನ್ನರು ಅಧ್ಯಕ್ಷಸ್ಥಾನವನ್ನು ಅಲಂಕರಿಸಬೇಕೆಂದು ಬೇಡಿಕೊಳ್ಳುತ್ತೇನೆ..... (ಹೊರೀಗಿ ಕೂಡುತ್ತಾರೆ) ಮತ್ತು ನನ್ನ ಕರೆಯ ಮೇರೆಗೆ ಬಿ.ಎ. ರಾಮಣ್ಣನವರು ಅತಿಥಿಗಳಾಗಿ ಬಂದಿದ್ದಾರೆ. ಅವರು ಸಹ ತಮ್ಮ ಸ್ಥಾನದ ಮೇಲೆ ಕೂಡ್ರಬೇಕೆಂದು ಬೇಡಿಕೊಳ್ಳುತ್ತೇನೆ. (ಹೋಗಿ ಕೂತ ಮೇಲೆ ಹುವ್ವಿನ ಹಾರವನ್ನು ಹಾಕುತ್ತಾನೆ. ಮತ್ತು ಆ ಬೆಳ್ಳಿ ಗ್ಲಾಸನ್ನು ಚೇರಮನ್ನರ ಕೈಯಲ್ಲಿ ಕೊಡುತ್ತಾನೆ.)

**ಶ್ರೀಧರ–** (ನಗುತ್ತ) ರಾಮೂ ೧–೨ ಮಾತುಗಳನ್ನು ಹೇಳೋ.....

**ರಾಮು–** ಯಾವ ನಾಟಕದ ಮಾತು ಕೇಳಬೇಕ್ರಿ....

**ಶ್ರೀಧರ–** ನಾಟಕದ ಮಾತು ಬೇಡೋ ಈ ಅಂಗಡಿ ಸಮಂಧ ಮಾತಾಡೋ....

**ರಾಮು–** ಹೀಗೋ ಮೊದಲು ನೀವೇ ಹೇಳ್ರಿ ತಪ್ಪೇನಿದೆ....

**ಶ್ರೀಧರ–** ಮೊದಲು ನಾನೇ ಹೇಳಲೇ, ಆಗಲಿ. (ಎದ್ದು ನಿಂತು ಅಂಗಿ ಸರಿಪಡಿಸಿಕೊಂಡು) ಸಭ್ಯರೇ ಯನ್ನ ಬಂಧುಗಳೇ ಈ ಹೊಸ ಅಂಗಡಿ ಸ್ಥಾಪನೆಯ ಕಾಲದಲ್ಲಿ ಎಲ್ಲರೂ ಸೇರಿ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿದ ಮೂಲಕ ನಿಮಗೆಲ್ಲ ತುಂಬಾ ಆಭಾರಿಯಾಗಿದ್ದೇನೆ. (ಜನರು ಚಪ್ಪಾಳೆ ತಟ್ಟುವರು) ಓ – ನನ್ನ ಅಣ್ಣ ತಮ್ಮಂದಿರೇ ಮತ್ತು ಅಕ್ಕ–ತಂಗಿಯರೇ... ಇಲ್ಲ ಇಲ್ಲ ಈ ಸಭೆಯಲ್ಲಿ ಹೆಣ್ಣು ಮಕ್ಕಳೇ ಇಲ್ಲ. ಮರೆತೆ ಅಣ್ಣ ತಮ್ಮಂದಿರೆ ಮಿತ್ರರೆ ಈ ದಿವಸ ಹೊಸದಾಗಿ ಸ್ಥಾಪಿಸುವೆ ಅಂಗಡಿಯು ಸರ್ವರಿಗೂ ಬೇಕಾದ ಅಂಗಡಿಯಾಗಿದೆ. ಪ್ರತಿಯೊಬ್ಬರಿಗೂ ಕಾಲಿಗೆ ಜೋಡು ಬೇಕೆ ಬೇಕು. ಯಾರು ಕಾಲಲ್ಲಿ ಜೋಡು ಮೆಟ್ಟದೆ ಅಡ್ಡಾಡುವರೋ ಅವರು ಎಷ್ಟೇ ಧನಿಕರಿದ್ದರೂ ಸಹ ಹಗುರಾಗಿ ಕಾಣುತ್ತಾರ? ಅದಕ್ಕಾಗಿ ಸರ್ವರೂ ಸಹಕರಿಸಲೆಂದು ನಮ್ಮ ರಾಜು ಜರ್ಮನ್, ಜಪಾನ, ಅಮೇರಿಕದಿಂದ ಉತ್ತಮ ಚರ್ಮವನ್ನು ತರಿಸಿ ಸರ್ವರಿಗೂ ಆಕರ್ಷಕವಾಗುವಂಥ ಚಪ್ಪಲಿಗಳನ್ನು ತಯಾರಿಸುತ್ತಾನೆ ಕಾರಣ ಸರ್ವರೂ ಈತನೊಡನೆ ಸಹಕರಿಸಿ ವ್ಯವಹಾರ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. (ಚಪ್ಪಾಳೆ ಆದ ಮೇಲೆ) ಮತ್ತು ಇದರ ಬಗ್ಗೆ ನಮ್ಮ ಬಿ.ಎ. ರಾಮು ಒಂದೆರಡು ಮಾತುಗಳನ್ನು ಹೇಳುತ್ತಾನೆ. ಸರ್ವರೂ ಶಾಂತ ಚಿತ್ತರಾಗಿ ಕೇಳಬೇಕು. (ಚಪ್ಪಾಳೆ ಹೊಡೆಯುತ್ತಾರೆ.)

**ರಾಮು–** (ಎದ್ದುನಿಂತು) ನನ್ನ ಮಿತ್ರರೇ ಮತ್ತು ಅಧ್ಯಕ್ಷರೇ ಈ ದಿವಸ ಹೊಸ ಅಂಗಡಿಯ ಉದ್ಘಾಟನಾ ಕಾರ್ಯದಲ್ಲಿ ಅತಿಥಿಯನ್ನಾಗಿ ತಾವೆಲ್ಲರೂ ನನ್ನನ್ನು ಆರಿಸಿದ್ದಕ್ಕಾಗಿ ತಮ್ಮೆಲ್ಲರಿಗೂ ಅಭಿವಂದಿಸುತ್ತೇನೆ..... ಮತ್ತು ಅಧ್ಯಕ್ಷರು ಸೂಚಿಸಿದ ಪ್ರಕಾರ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ ಶಾಂತ ಚಿತ್ತರಾಗಬೇಕು.... ಸಧ್ಯ ಪಂಚವಾರ್ಷಿಕ ಯೋಜನೆಯಲ್ಲಿ ಲಂಚವಾರ್ಷಿಕ ಯೋಜನೆಯು (ಎದ್ದು ನಿಂತು) ಅಧಿಕಾರಕ್ಕೆ ಸಿದ್ಧವಾಗಿದೆ ಲಂಚಶೀಲರು ರಕ್ತ ಬೀಜಾಸುರನ ಅವತಾರಿಗಳೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲವಷ್ಟೇ (ಚಪ್ಪಾಳೆ) ಲಂಚ.... ಎಂಬ ಯರಡಕ್ಷರವು ದೇವ ಎಂಬ ಯರಡಕ್ಷರಕ್ಕೆ ಸರಿ ಹೋಗಿ ಜಗತ್ತನ್ನೇ ಸಧ್ಯ ಆವರಿಸಿದೆ. ಕಾಲರಾ ಪ್ಲೇಗುಗಳಿಗಿಂತಲೂ ಇದು ತೀವ್ರವಾದ ಜಾಡ್ಯವಾಗಿದೆ. ಕಾರ್ಯವು ಎಂಥಾ ಕೀಳಿದ್ದರೂ ತಮಗೆ ಲಾಭವಿದೆ ಎಂದು ತಿಳಿದರೆ ಸಾಕು. ಕೀಳು ಹಾಳು ಈಗಿನ ಅಧಿಕಾರಿಗಳು ನೋಡಲಾರರು. ಅದರಂತೆ ನಮ್ಮ ಪ್ರಸಿಡೆಂಟರು ಸಹ ಬಡವ ಬಲ್ಲಿದ ಅನ್ನುವದನ್ನು ನೋಡದೆ ದೊಡ್ಡ ಗುಣದವರೂ ಮೇಧಾವಿಗಳೂ ಬಡವರಲ್ಲಿ ದಯೆಯುಳ್ಳವರೂ ಆಗಿ ಈ ಚಪ್ಪಲಿ ಅಂಗಡಿಯ ಉದ್ಘಾಟನಾ ಕಾರ್ಯಕ್ಕೆ ನೆರವಾಗಿ ಅಧ್ಯಕ್ಷತೆ ವಹಿಸಿ ಕಾರ್ಯ ಸಾಗಿಸಿದರು ಇನ್ನು ಮೇಲೆ ಅಧ್ಯಕ್ಷರು ಹೇಳಿದಂತೆ ಹೊಸ ಅಂಗಡಿಯಲ್ಲಿ ವ್ಯವಹಾರ ಮಾಡಬೇಕೆಂದು ಬಯಸುತ್ತೇನೆ. ಮತ್ತು ತಮ್ಮೆಲ್ಲರಿಗೂ ಅಭಿವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.... (ಚಪ್ಪಾಳೆ ತಟ್ಟುವರು.)

(ಅಭಾರ ಮನ್ನಣೆ)

**ರಾಜು–** ನನ್ನ ಹೊಸ ಅಂಗಡಿಯ ಸ್ಥಾಪನೆಗಾಗಿ ಚೇರಮನ್ನರೂ ಬಿ.ಎ. ರಾಮಣ್ಣನವರೂ ಮತ್ತು ಸರ್ವ ಪ್ರಮುಖರೂ ಆಗಮಿಸಿ ಈ ಕಾರ್ಯವನ್ನು ನೆರವೇರಿಸಿದ್ದಕ್ಕಾಗಿ ಸರ್ವರಿಗೂ ಧನ್ಯವಾದವುಗಳನ್ನು ಅರ್ಪಿಸುತ್ತೇನೆ (ಚಪ್ಪಾಳೆ ಇಡುತ್ತಾರೆ) (ಸರ್ವರೂ ಶರಣ ಮಾಡಿ ಹೋಗುತ್ತಾರೆ)

**ಶ್ರೀಧರ–** ಅಲ್ಲೋ ರಾಜೂ ಫೋಟೋಗ್ರಾಫರ ಯಾಕೆ ಬರಲಿಲ್ಲ...

**ರಾಜು–** ಬರಲಿಲ್ಲ ನೋಡಿ ಅವ ಲೋಫರ್ ಇದ್ದಾನೆ

**ರಾಮು–** ಆಗಲಿ ರಾಜು ಈಗ ಬರದಿದ್ದರೇನಾಯಿತು. ಮತ್ತೊಮ್ಮೆ ಸಮಯ ನೋಡಿ ಕರ್ಸಿ ನಮ್ಮ ಅಧ್ಯಕ್ಷರನ್ನು ಇದೇ ಸ್ಥಾನದಲ್ಲಿ ಕೂಡಿಸಿ ತಗಿಸಿಬಿಡು. ಮರಿಯಬೇಡ.......

ರಾಜು– ಆಗಲ್ರೀ.....

ಶ್ರೀಧರ– (ಎದ್ದು) ಬರ್ತೀವಿ ರಾಜು (ಕೈಯಲ್ಲಿ ಬೆಳ್ಳಿಗ್ಲಾಸ ಹೂವಿನ ಸರ ಹಿಡಿದುಕೊಂಡು)

ರಾಜು– ಅಲ್ಲರೀ ನೀವು ನಮ್ಮಲ್ಲಿ ಯೇನೂ ತಿನ್ನೋದಿಲ್ಲಾಂತ ತಿಳಿದೇ ಮಜ್ಜಿಗಿ ತರ್ಸೀನಿ, ಸ್ವಲ್ಪು ಕುಡಿದಿದ್ದರೆ ನೆಟ್ಟಗಿತ್ತು....

ಶ್ರೀಧರ– ಅದೇನೂ ಬೇಡ, ಬರ್ತೀವಿ (ಅನ್ನುತ್ತಾ ಹೋಗುತ್ತಾರೆ)

**ರಸ್ತೆ**

[ಇಬ್ಬರೂ ಬರುತ್ತಾರೆ]

ಶ್ರೀಧರ– ರಾಮೂ ೬ ಘಂಟೆಯಾಯಿತಲ್ಲೋ ಈ ದಿವಸ ಅಲ್ಲಿಗಿ ಹೋಗಬೇಕಾಗಿತ್ತು ಹೋಗಲ್ಯಾ ರಾಮು.......

ರಾಮು– ಹೋಗಿ ಬನ್ನಿ ಆದರೆ ಬಹಳ ಹುಷಾರಿಯಿಂದ ವರ್ತಿಸು ಹೆಂಣಿನ ನೆಲೆ ತಿಳಿಯದು ಅದಕ್ಕಾಗಿ ನೋಡಿ ಮಾತಾಡು ತಿಳಿತೇ......

ಶ್ರೀಧರ– ಓಹೋ ಕಾಳಜಿಯೇ ಮಾಡಬೇಡ.... (ಹೋಗುತ್ತಾನೆ)

ರಾಮು– ಇವನಂತೂ ಸಧ್ಯ ಗೌರಿಯ ಮನೆಗೆ ಹೋದನು ಇವನ ಹಣೇ ಬರಹ ಏನಿದೆಯೋ ದೇವರಿಗೆ ಗೊತ್ತು ಆಗಲಿ ನಾಳೆ ತಾನಾಗಿಯೇ ತಿಳಿಯುತ್ತೆ. (ಘಡಿ ನೋಡಿ) ಓಹೋ ಸಿನೇಮಾ ಟೈಮಾಯಿತು ಥೇಟರಿಗೆ ಹೋಗೋಣ.... (ಹೋಗುತ್ತಾನೆ)

## ಮಧ್ಯಾಂತರವು–

**ಶಾಮುವಿನ ಮನೆ**

(ಗೌರಿಯು ಕಸ ಗೂಡಿಸುತ್ತ ಪದ ಹಾಡುತ್ತ ಆಮೇಲೆ ನೀರು ಚಳಿ ಹೊಡೆದು ಊದಿನಕಡ್ಡಿ ಬೆಳಗಿ ನಮಿಸುತ್ತಾಳೆ. ಸಾಯಂಕಾಲ ೬ ಘಂಟೆ ಸಮಯ. ಶ್ರೀಧರನು ಬರುತ್ತಾನೆ.)

ಶ್ರೀಧರ– (ಬರಬರುತ್ತ) ಶಾಮೂ...ಶಾಮೂ.... ಇದ್ದಾನೆಯೇ ಮನೆಯಲ್ಲಿ ಶಾಮು....

ಗೌರಿ– (ಗೌರವದಿಂದ) ಇಲ್ಲಂಣಾ ಎಲ್ಯೋ ಹೊರಗೆ ಹೋಗಿದಾರೆ.

ಶ್ರೀಧರ– ಸರೆ ಅವನು ಹೋದರೂ ಹೋಗಲಿ ನೀವಂತೂ ಇದ್ದೀರಲ್ಲ ಮನೆಯಲ್ಲಿ....

**ಗೌರಿ–** ನಾನೆಲ್ಲಿ ಹೋಗಲೆಣ್ಣಾ.... ಅವರು ಮಾತ್ರ ಊಟ ಮುಗಿಸೇ ಹೋದರು ಅಂದ ಮೇಲೆ ಸೀನೆಮಾಕ್ಕೇನಾದರೂ ಹೋಗಿರಬೇಕು.....

**ಶ್ರೀಧರ–** ಓಹೋ ತಿಳಿತು ಬಿಡು. ಸೀನೆಮಾಕ್ಕೆ ಹೋಗಿರುವದೇ ಖಂಡಿತ..... ಮುಂಜಾನೆ ನನ್ನ ಮುಂದೆ ತಿಳ್ಸಿ ೨ ರೂಪಾಯಿ ಕೂಡ ಕೇಳಿದ ಕೊಟ್ಟು ಕಳ್ಸಿದ್ದೇ ಮರತೇ ಬಿಟ್ಟೆ.

**ಗೌರಿ–** ನೋಡಿ ನೀವೇ ಸೀನೆಮಾಕ್ಕೆಂದು ಖರ್ಚಿಗೆ ಕೊಟ್ಟು ಕಳ್ಸಿದವರು ಮರೆತ ಮೇಲೆ ನನಗೆ ಹೇಗೆ ಗೊತ್ತಾಗಬೇಕಂಣಾ.....

**ಶ್ರೀಧರ–** ನೋಡು ನಿನ್ನ ಗಂಡ ಅಂದರೆ ನನಗೆ ಬಹು ಪ್ರೇಮ.... ಅದಕ್ಕಾಗಿ ಅವನು ಕೇಳಿದಷ್ಟು ಹಣ ಕೊಡಲೇಬೇಕಾಗಿದೆ.... ಮೇಲಾಗಿ ಮೊದಲಿನಿಂದಲೂ ಈ ಮನೆಯ ಮೇಲೆ ನನ್ನ ಕನಿಕರ ಇದ್ದೇ ಇದೆ.... ಇರಲಿ ಬಿಡು ಗೌರಿ ಒಬ್ಬಳೇ ಈ ಮನೆಯಲ್ಲಿ ನಿನಗೆ ಬೇಜಾರ ಆಗೋದಿಲ್ವೇ....ನಮ್ಮ ಮನಿ ಕಡೆ ಬರಬೇಕು. ನಮ್ಮವಳಿದ್ದಾಳೆ ಶಾಮಲಾ ಇದ್ದಾಳೆ, ಇನ್ನೂ ಎಷ್ಟೋ ಬಾಜು ಮನೆಯವರು ಕೂಡುತ್ತಾರೆ ಅಲ್ಲಿಗೆ ಬಂದರೆ ಹೊತ್ತೇ ಸರಿ ಹೋಗದು.... ಅಲ್ವೆ.....

**ಗೌರಿ–** ನಿಜ ಬರಬೇಕಂಣಾ ಆದರೆ ನಮ್ಮವರು ಮನೆಗೆ ಬರುವ ಟೈಮೇ ತಿಳಿಯದಾಗಿದೆ. ಅವರು ಮನೆಗೆ ಬಂದಾಗ್ಯೆ ನಾನಿಲ್ಲದಿದ್ದರೆ ಎಲ್ಲಿ ಕೋಪಗೊಳ್ಳುವರೋ ಏನೋ ಅಂತ ಮನಿ ಬಿಟ್ಟು ಕದಲದಂತಾಗಿದೆ.....

**ಶ್ರೀಧರ–** ಛೇ ಛೇ ಅದೇನಿಲ್ಲ ನೀನು ನಮ್ಮ ಮನಿಗೆ ಬಂದರೆ ಮಾತ್ರ ಏನೂ ತಿಳಕೊಳ್ಳಲಾರ, ಇರಲಿ ಬಿಡು ಈಗಲಾದರೂ ಶಾಮು..... ರಾತ್ರಿ ಮನೆಯಲ್ಲಿ ಮಲಗುತ್ತಾನೆಯೇ......

**ಗೌರಿ–** ಏನೋ ಮನಸ್ಸಿಗೆ ಬೇಸರ ಬಂದಿದ್ದರೆ ಮಾತ್ರ ಮಲಗುತ್ತಾನೆ. ಇಲ್ಲವಾದರೆ ಇಲ್ಲ ಅವರಿಗೆ ಯಾರೂ ಹೇಳುವವರೇ ಇಲ್ಲಾನ್ನಿ....

**ಶ್ರೀಧರ–** ಹುಚ್ಚ.... ನಿನ್ನಂಥವಳನ್ನು ಮನೆಯಲ್ಲಿ ಒಬ್ಬಳನ್ನೇ ಬಿಟ್ಟು ಸೂಳೀ ಮನೆಯಲ್ಲಿ ಸುಬೆದಾರನಾಗಲಿಕ್ಕೆ ನಾಚಿಕೆ ಬರುವದಿಲ್ಲವೇ. ಪಾಪ ರಾತ್ರಿಯಲ್ಲಿ ಒಬ್ಬಳೇ ಮಲಗಿದರೆ ನಿನಗೂ ಸಹ ನಿದ್ರೆ ಬರಲಿಕ್ಕಿಲ್ಲ. ಪಾಪ.....

**ಗೌರಿ–** ಅದೇಕೆ ಅಂಣಾ ನನಗೆ ನಿದ್ರೆ ಚನ್ನಾಗಿ ಬರುತ್ತದೆ (ಶ್ರೀಧರ ಆಲೋಚಿಸುತ್ತ)

**ಶ್ರೀಧರ–** ನೋಡು ಗೌರಿ.... ನೀ ಬಂದಂದಿನಿಂದ ನಿನಗೆ ಒಂದು ಮಾತು

ಕೇಳಬೇಕೆಂದು ಮಾಡಿದ್ದೆ..... ಕೇಳಿದರೆ.... ಎಲ್ಲಿ... ಏನು ತಿಳಕೊಳ್ಳುವಳೋ ಎಂದು ಕೇಳೇ ಇಲ್ಲ ಕೇಳಂದರೆ ಮಾತ್ರ....

**ಗೌರಿ–** ತಪ್ಪೇನಿದೆ ಕೇಳಂಣಾ ನೀವೂ ನಮ್ಮ ಹಿತೈಷಿಗಳೆಂದೇ ತಿಳಿದಿದ್ದೇನೆ ತಪ್ಪೇನಿದೆ ಅದೇನು ಕೇಳಿ....

**ಶ್ರೀಧರ–** ಏನೂ ಇಲ್ಲ. ನೀನು ಒಳ್ಳೇ ವಯಸ್ಸಿನವಳು. ನಿನ್ನಂಥವಳನ್ನು ರಾತ್ರಿಯಲ್ಲಿಯೂ ಒಬ್ಬಳನ್ನೇ ಬಿಟ್ಟು ಶಾಮೂ ಸೂಳಿ ಮನೆಯಲ್ಲಿ ಮಲಗುವದೆಂದರೆ ಬಹಾಳ ತಪ್ಪು. ನೀನಾದರೂ ಸಿಟ್ಟು ಮಾಡಬಹುದಿತ್ತು, ಯಾಕೋ ಸುಮ್ಮನಿರುವಿ.....

**ಗೌರಿ–** ನಿಜ ಸುಮ್ಮನಿರುವೆ, ಎಷ್ಟಾದರೂ ಅವರು ನನ್ನ ಪಾಲಿನ ದೇವರೆಂದೇ ತಿಳಿದು ಸುಮ್ಮನಿರುವೆ. (ಅದಕ್ಕಾಗೇ)

**ಶ್ರೀಧರ–** ಓಹೋ ದೇವರೆಂದು ತಿಳಿದು ಸುಮ್ಮನಿರುವಿಯಲ್ಲವೇ ಅಹಹಹಹ (ನಕ್ಕು) ದೇವರು... ಅಹಹಾ ನಿನ್ನ ಪಾಲಿನ ದೇವರು ಎಂಥಾ ದೇವರನ್ನು ಹಿಡಿದಿರುವೆ ಗೌರೀ.... ಅವನು ನಿನ್ನನ್ನು ಮನಸ್ಸಿನಿಂದ ನಂಬಿದ್ದರೆ ಇನ್ನೂ ಎಷ್ಟು ಹೊಗಳುತ್ತಿದ್ದಿಯೋ ನಾಕಾಣೆ. ಅಹಹಹಹಾ.... ಮುಖ್ಯವಾಗಿ ಅವನ ಗುಣವನ್ನೇ ತಿಳಿಯದೆ ನೀನು ಮೋಸ ಹೋಗಿರುವೆ. ಇನ್ನು ಮೇಲಾದರೂ ಎಚ್ಚರಾಗು ಹುಚ್ಚೀ.... ಅಹಹಹಹಹಾ (ನಕ್ಕು) ದೇವರೆಂತೆ ದೇವರು.....

**ಗೌರಿ–** (ಆಶ್ಚರ್ಯದಿಂದ) ಆಂ... ಏನು ನಮ್ಮವರ ಗುಣ ಧರ್ಮ ನನಗೆ ತಿಳಿದಿಲ್ಲವೇ.... ಅಂದರೆ ಅವರು ನನ್ನನ್ನು ನಂಬಿಲ್ಲವೇ.... ಹಾ ಇದೇನು.

**ಶ್ರೀಧರ–** ನೀನು ತಿಳಿದಿರಬಹುದು ಶಾಮು ನಿನ್ನನ್ನು ಬಹುವಾಗಿ ಪ್ರೀತಿಸುತ್ತಾನೆಂದು ಇದೆಲ್ಲ ಸುಳ್ಳೇ ಸುಳ್ಳು..... ಅವನದು ಇದೊಂದು ನಟನೆ ಶಾಪ ಇದು ನಿನಗೆ ಹೇಗೆ ತಿಳಿಯಬೇಕು.

**ಗೌರಿ–** (ಆಶ್ಚರ್ಯದಿಂದ) ಅವರದು ಇದೊಂದು ನಟನೆಯೇ ಇದು ನಿಜವೇ ನಿಮ್ಮ ಮುಂದೆ ಮಾತಾಡಿರುವರೇ (ಅಳುಮೊಗದಲ್ಲಿ ಕೇಳುತ್ತಾಳೆ)

**ಶ್ರೀಧರ–** ನೋಡು ಗೌರೀ ನಾ ಹೇಳೋದೆಲ್ಲ ನಿಜವೆಂದೇ ತಿಳಿ. ತನ್ನ ಸೂಳಿಗೆ ವಚನ ಕೊಟ್ಟಿರುವನಂತೆ.....

**ಗೌರಿ–** ಏನೆಂದು ಅಂಣಾ.....

**ಶ್ರೀಧರ–** ನನ್ನ ಲಗ್ನವಾದರೂ ಚಿಂತೆ ಇಲ್ಲ ನಿನ್ನನ್ನು ಮಾತ್ರ ಎಂದೂ ಕೈ ಬಿಡುವದಿಲ್ಲ ಸತ್ಯವಾಗಿ ಪ್ರಮಾಣವಾಗಿ ಆಕೆಯ ತಲಿಮೇಲೆ ಕೈಯಿಟ್ಟು ಆಣೆ ಮಾಡಿರುವವನಂತೆ.... ಇದಾದರೂ ನನಗೇನು ಗೊತ್ತು. ಈ ತಿಂಗಳ ಹಿಂದೆ ಆ ದಾರಿಯಿಂದ ನಾನು ಬರುವಾಗ ಅವಳೇ ನನ್ನನ್ನು ನೋಡಿ ಕರೆದಳು. ಆಗ್ಯೆ ಮಾತಿಗೆ ಮಾತು ಹೊರಟು ಈ ಸುದ್ದಿ ತಿಳಿಸಿದಳು. ಅದಕ್ಕಾಗಿಯೇ ನಿನಗೆ ಹೇಳಿದ್ದು ಇದರ ಮೇಲೆ ನಿನ್ನ ಇಷ್ಟ ಬಂದಂತೆ ಮಾಡಬಹುದು.

**ಗೌರಿ–** ನಿಜ, ಅಂಣಾ. ಈಗ ತಿಳಿದಂತಾಯಿತು ನೀವು ಹೇಳಿದಂತೆ ಈ ಮಾತು ಸತ್ಯವಿರಲೇಬೇಕು. ಯಾಕಂದರೆ ಇದುವರೆಗೆ ನೋಡುವ ಇವರ ನಡಾವಳಿಗಳೇ ಇದಕ್ಕೆ ಸಾಕ್ಷಿಯಾಗಿವೆ (ನಟನಾವೃತ್ತಿಯಿಂದ) ಇರಲಿ ತಪ್ಪೇನಿದೆ. ಅವರು ಸ್ವೇಚ್ಛಾವರ್ತಿಗಳಾದರೆ ಇನ್ನು ಮೇಲೆ ನಾನಾದರೂ ಇವರಂತೆ ವರ್ತಿಸಲು ದಾರಿ ಹುಡುಕಿಕೊಳ್ಳುವೆ. ಮೊದಲು ಅವರನ್ನು ಪರೀಕ್ಷಿಸುವೆ. ಆಮೇಲೆ ನನ್ನ ದಾರಿ ನನಗೆ ಅವರ ದಾರಿ ಅವರಿಗೆ ಕಂಣು ಚಿವುಟಿ ನಗುತ್ತ ನುಡಿವಳು.)

**ಶ್ರೀಧರ–** ಅದೇ ಅನ್ನೋದು ಅವನು ದಾರೀ ತಪ್ಪಿ ನಡಿದರೆ ನೀನು ದಾರಿ ಬಿಡಲು ಅದೇನೂ ದೋಷವಿಲ್ಲಾನ್ನು. ಮುಖ್ಯವಾಗಿ ಶಾಮು ಸೂಳಿಗೆ ಘಟ್ಟಿ ವಚನವನ್ನಿತ್ತು ಬಹಳ ತಪ್ಪು ಮಾಡಿದ್ದಾನೆ. ಇದರ ಮೇಲಿಂದ ನೋಡಿದರೆ ಇವನು ಬಹಳ ಕಪಟಿಯಂದು ತಾನೇ ಸಿದ್ಧವಾಗುತ್ತಿದೆ ಇರಲಿ ಗೌರೀ. ಅವನು ಮಾರ್ಗ ತಪ್ಪಿ ನಡೆದರೆ ನೀನೂ ತಪ್ಪಿ ನಡಿಯಬಹುದು. ಇದಕ್ಕೆ ಯಾರೇನು ಹೇಳುತ್ತಾರೆ. ನಿನ್ನ ಮನ ಬಂದಂತೆ ವರ್ತಿಸುವದೇ ಮೇಲು. ಇನ್ನೇನು ಬಡತನದ ಬಾಳ್ವಿ ಇಷ್ಟೆ ಇರಲಿ ಗೌರಿ ಅಂಥಾ ಪ್ರಸಂಗವೇ ಬಂದಲ್ಲಿ ನಾನು ಹೇಳಿದಂತೆ ಮಾಡಿದರೆ ನಿನಗೆ ಕಷ್ಟವೇ ಬರಲಾರದು. ನನ್ನ ಮಾತು ನಂಬಿದರೆ ಮಾತ್ರ ಹೇಳುವೆ. ಏನಂದೀ.

**ಗೌರಿ–** ಹೇಳು ಹೇಳಂಣಾ. ಅಂಥಾ ಪ್ರಸಂಗದಲ್ಲಿ ನಿಮ್ಮಂಥವರ ಮಾತು ನಂಬದಿದ್ದರೆ ಹೇಗೆ ಹೇಳಿ ಹೇಳಿ ಏನದು.

**ಶ್ರೀಧರ–** ಹೇಳುವದೇನಿದೆ. ಅವನಂತೆ ನೀನೂ ಸ್ವೇಚ್ಛೆಯಾಗಿ ಬೇರೆ ಕಡೆಗೆ ಹೋಗುವ ಪ್ರಸಂಗವೇ ಬಂದಲ್ಲಿ ಮಾತ್ರ (ಕೈಸೊನ್ನೆಯಿಂದ ನಗುತ್ತ) ಏನಂದಿ.

**ಗೌರಿ–** ಹೇಳಿ ಹೇಳಿ ಹೇಳುವದೆಲ್ಲವನ್ನು ಹೇಳೇಬಿಡಿ. ಅನುಮಾನವೇಕೆ ಒಂದೂ ಉಳಿಯದಂತೆ ಹೇಳೇಬಿಡಿ ಅಂಣಾ.

**ಶ್ರೀಧರ–** (ಸ್ವ) ಅಂಣಾ ಅನಬೇಡೇ. (ಪ್ರ) ಏನೂ ಇಲ್ಲ. ಬೇರೆ ಕಡೆಗೆ ಹೋಗುವದಕ್ಕಿಂತ ನೀನು ನನ್ನ ಮನೆಯಲ್ಲಿಯೇ ಇದ್ದು..... ಉ..... ನನ್ನವಳಾದರೆ ಮಾತ್ರ ನೀನೇ ನನ್ನ ಪಾಲಿನ ದೇವಿಯಂದು ಪೂಜಿಸುತ್ತೇನೆ. ನೋಡು ಗೌರಿ. ನನ್ನ ಸಂಪತ್ತೆಲ್ಲ ನಿನ್ನ ಸ್ವಾಧೀನವೆಂದು ತಿಳಿ. ಆಲೋಚಿಸಿ ನೋಡು. ತಪ್ಪೇನಿದೆ. ನೀನಾಗಿ ಒಪ್ಪಿವರೆ ಮಾತ್ರ ಇಲ್ಲವಾದರೆ ಇಲ್ಲ ನಿನ್ನ ಇಚ್ಛೆ.

**ಗೌರಿ–** (ಸ್ವ) ಸಿಟ್ಟಿನಿಂದ ಇದೇನು ನಮ್ಮವನೆಂದು ಮರ್ಯಾದೆ ಕೊಟ್ಟು ಮಾತಾಡಿದರೆ ಸಲಗಿ ಕೊಟ್ಟ ಮಂಗಲ ಮಲಗಲು ಮಂಚ ಕೇಳಿತು ಎಂಬ ಗಾದೆಯಂತೆ ಈ ನೀಚನು ಮಾತಿನಲ್ಲಿ ಎಷ್ಟು ಮುಂದೆ ಹೋದನಲ್ಲಾ. ಇದಕ್ಕೆ ನಮ್ಮವರು ಸಲಿಗೆಯಿಂದ ಸಾಲ ಮಾಡಿದ್ದರ ಪರಿಣಾಮವೇ ಇದು ಇರಲಿ. ಇಂಥವರಿಗೆತಕ್ಕ ಪ್ರಾಯಶ್ಚಿತ್ತವನ್ನು ಮಾತಿನಿಂದಲೇ ಮುಗಿಸಬೇಕು. (ನಾಚಿದಂತೆ ನಟನೆ ಮಾಡುತ್ತ ನಿಲ್ಲುವಳು)

**ಶ್ರೀಧರ–** (ಅವಳನ್ನೇ ನೋಡುತ್ತ) (ಸ್ವ) ಹೀಗೆ ಸುಮ್ಮನೇ ನಿಲ್ಲುವದರ ಅರ್ಥ ನಾನು ಏನೆಂದು ತಿಳಿದುಕೊಳ್ಳಬೇಕು...... ಮನಸ್ಸೇನೊ ಒಪ್ಪಿದೆ ಪಾಪ ನಾಚಿಕೆ ಮಾತ್ರ ಅಡ್ಡಾಗಿದೆ..... ಇರಲಿ ಬಿಡು ಗೌರೀ ನಾಚುವದೇಕೆ. ಹೇಳು ನಿನಗೇನಾದರೂ ಬೇಕಿದ್ದರೆ ಕೇಳು ಅದಕ್ಕೆ ಸಿದ್ಧನಿದ್ದೇನೆ.... ಹುಂ ಕೇಳು ನಾಚುವದೇಕೆ....

**ಗೌರಿ–** (ಲಜ್ಜೆಯಿಂದ) ನೀವು.... ಹೇಳುವದೆಲ್ಲ ನಿಜವಿದೆ.... ಆದರೆ....

**ಶ್ರೀಧರ–** ತಪ್ಪೇನಿದೆ ಕೇಳು ನಡುವೆ ಆದರೆ ಯಂಬ ಅಡ್ಡಗೋಡೆ ಏಕೆ ಏನದು ಬಿಚ್ಚಿ ಹೇಳು

**ಗೌರಿ–** ನೀವು.... ನನ್ನ ಮಾತಿಗೆ....ಒಪ್ಪುವಿರಾ....

**ಶ್ರೀಧರ–** ಇನ್ನೂ ನಿನಗೆ ಅನುಮಾನವೇ.....

**ಗೌರಿ–** ಸಧ್ಯ ಪ್ರೇಮ ತೋರಿಸಿ ನಡು ಮಧ್ಯೆ ಕೈ ಬಿಡುವವರನ್ನು ನೋಡಿ ನನಗೆ ಭಯವಾಗುತ್ತೆ ಅದರಂತೆ ನೀವಾದರೂ.....

ಶ್ರೀಧರ– ಕೈಬಿಡುವವನೆಂದು ತಿಳಿದಿರುವಿಂಯಾ.... ನಾನು ಮೆಚ್ಚಿದ ಮೇಲೆ ಎಂದೂ ಕೈ ಬಿಡುವದಿಲ್ಲವೆಂದು ಪ್ರಮಾಣವಾಗಿ ಹೇಳುತ್ತೇನೆ. ಅದಕ್ಕಾದರೂ ನಂಬುವಿಯಾ.....

ಗೌರಿ– ನಾನೇನೋ ನಂಬುತ್ತೇನೆ.... ಆದರೆ ನಿಮ್ಮ ಧರ್ಮಪತ್ನಿ ನನ್ನನ್ನು ದೂಷಿಸಿದರೆ ಮಾತ್ರ ಆಗ ನೀವೇನು ಮಾಡುವಿರಿ.....

ಶ್ರೀಧರ– ಛೀ ಹುಚ್ಚೀ ನನ್ನ ಪ್ರೇಮಕ್ಕೆ ಅವಳು ಅಡ್ಡ ಬಂದರೆ ಅಂದೇ ಅವಳಿಗೆ ಮನೆಯಿಂದ ಹೊರಗೆ ಹೋಗುವ ಪ್ರಸಂಗ ಬಂತೆಂದು ತಿಳಿ ನನ್ನನ್ನು ನೀನು ಮನಸಾ ಪ್ರೀತಿಸಿದರೆ ಸಾಕು....

ಗೌರಿ– (ನಟನಾವೃತ್ತಿಯಿಂದ) ತಮ್ಮಂಥ ಶ್ರೀಮಂತರು.... ನನ್ನಂಥವಳ ಮೇಲೆ ಪ್ರೇಮ ಮಾಡುವದೆಂದರೆ....ನನ್ನ ಭಾಗ್ಯವೆಂದೇ ತಿಳಿಯುವೆ.... (ವಿಕಟ ನಗು ನಗುತ್ತಾಳೆ)

ಶ್ರೀಧರ– (ಆನಂದ ಭರದಿಂದ) ನಿನ್ನ ಮೇಲೆ ನಿಜವಾದ ಪ್ರೇಮವುಂಟಾಗಿದೆ ಗೌರೀ ಅಷ್ಟೇ ಅಲ್ಲ ನನ್ನ ಸಂಪತ್ತೆಲ್ಲ ನಿನ್ನ ವಶ ಮಾಡುತ್ತೇನೆ ನೀನು ಮಾತ್ರ ನನ್ನವಳಾದರೆ ಸಾಕು. ಇದಕ್ಕೆ ತಪ್ಪುವದಿಲ್ಲ.... ತಿಳಿಯಿತೇ.... ಬಾಯಿಲ್ಲಿ... ನಿಂತು ಮಾತಾಡಿ ಮಾತಾಡಿ ಬೇಜಾರ ಆಗಿದೆ ಸ್ವಲ್ಪ ಆರಾಮ ಕೂಡೋಣ ಬಾ.

ಗೌರಿ– ತಾವು ಕೂಡಿ (ಹೊರ್ಸಿನ ಮೇಲೆ ಕೂತ ಮೇಲೆ ಗೌರಿ ಅತ್ತಿತ್ತ ನೋಡುತ್ತ ನಟನೆಯಿಂದ ಮೆಲ್ಲನೆ) ಇರಲಿ ನಮ್ಮವರು ಸೀನೆಮಾಕ್ಕೆ ಹೋಗಿರುವದು ನಿಜವೇ....

ಶ್ರೀಧರ– ನಿಜ ಗೌರೀ ನಾನೇ ಅವನಿಗೆ ೨ ರೂಪಾಯಿ ಕೊಟ್ಟು ಕಳ್ಸಿದ್ದೇನೆ ಇಲ್ಲವಾದರೆ ನನ್ನ ನಿನ್ನ ಮಿಲನಕ್ಕೆ ಆತಂಕವಾಗುವದೆಂದೇ ಕಳಿಸಿದ್ದೇನೆ..... ಇನ್ನೂ ಅವನು ಬರಲಿಕ್ಕೆ ೧ ಘಂಟೆ ಬೇಕು..... ಅದಕ್ಕಾಗೇ ಬಾ ಇಲ್ಲಿ.... ಹೂಂ..... ಬಾ....

ಗೌರಿ– ನೋಡಿ ಅವರಂತೂ ಊಟಾ ಮುಗಿಸೇ ಹೊರಗೆ ಹೋದರು ಸಧ್ಯ ನನಗೆ ಹಸಿವಾಗಿದೆ ಕಾರಣ ಇದೊಂದು ಶುಭ ದಿವ್ಸವೆಂದು ತಿಳಿದು ಇಬ್ಬರೂ ಊಟಾ ಮಾಡೇ ವಿರಾಮ ಮಾಡೋಣ ಏಳೀ.....

ಶ್ರೀಧರ– ಇಲ್ಲ ಗೌರೀ ನೀನು ಮಾಡು ನಡೆ. ನನಗೆ ಮಾತ್ರ ನಿನ ಪ್ರೇಮದ

ಅಮೃತವೇ ಹಸಿವೆಯನ್ನು ಅಡಗಿಸಿದೆ ಕಾರಣ ನೀನು ಲಗುತೀರಿಸು ನಡೆ....

**ಗೌರಿ–** ಉ.... ಹೂಂ ನಾನೊಲ್ಲೆ ನಿಮ್ಮನ್ನು ಬಿಟ್ಟು ಉಂಣಲೇ ಅದಾಗದು ಬಿಡಿ ನೀವು ವುಂಡರೆ ಮಾತ್ರ ನಾನು ಉಂಣುವೆ ಇಲ್ಲವಾದರೆ ಇಲ್ಲ ಯಾರಿಗೆ ಬೇಕಾಗಿದೆ ಊಟ (ಮುನುಸು ಮಾಡಿದಂತೆ ನಟಿಸುವಳು.)

**ಶ್ರೀಧರ–** ಛೇ ಛೇ ಒಳ್ಳೇ ಪಿಕಲಾಟವಿದು ಇರಲಿ ನಡೆ ಗೌರಿ ನಾನೂ ಉಂಣುತ್ತೇನೆ.

**ಗೌರಿ–** (ನಗುವಿನಿಂದ) ಹಾಗಾದರೆ ತಡಿಯಿರಿ ನೀರು ತರುತ್ತೇನೆ. (ನೀರು ತಂದು ಕೊಡುತ್ತಾಳೆ. ಕೈ ತೊಳೆದುಕೊಂಡು ಹಾಕಿದ ಮಣಿ ಮೇಲೆ ಕೂಡುತ್ತಾನೆ.) (ಯಲಿ ತರಲು ಒಳಗೆ ಹೋಗುತ್ತಾಳೆ)

**ಶ್ರೀಧರ–** ಅಹಹ ಏನು ಪ್ರೇಮವಿದು ನಿಜವಾಗಿ ಅಜ್ಜನ ಅಂತ್ರದ ಪ್ರಭಾವವೇ ಇದು. ಇವಳು ಇಷ್ಟೊಂದು ಸರಳವಾಗಿ ಕೈಸೇರುವಳೆಂದು ನಾನು ತಿಳಿದಿರಲಿಲ್ಲ ಇದೊಂದು ನನ್ನ ಹೆಚ್ಚಿನ ಭಾಗ್ಯವೇ ಸರಿ.... (ಬರುವಳು)

(ಗೌರಿಯು ೨ ತಳಿಗಿ ಯಲಿಗಳನ್ನು ತಂದು ತನಗೊಂದು ಶ್ರೀಧರಗೊಂದು ಹಾಕುತ್ತಾಳೆ ಅವನ ಮುಂದೆ ಮುಸುರೆಯ ಯಲಿ ಹಾಕಿದ್ದಾಳೆ.)

**ಶ್ರೀಧರ–** (ನೋಡಿ) ಇದೇನು ಗೌರೀ ಈ ಯಲಿಯಲ್ಲಿ ಯಾರೋ ಉಂಡಂತಿದೆ ಇದೇನು ಯಂಜಲವೇ ಯಂಜಲವು....

**ಗೌರಿ–** ನಿಜ ರಾಯರೇ ಅದು ಪವಿತ್ರವಾದ ಯಲಿ ಇದೇ ಈಗ ನಮ್ಮವರು ಉಂಡು ಹಾಗೆ ಬಿಟ್ಟು ಹೋಗಿದ್ದಾರೆ ಈ ದಿವ್ಸ ನಿಮಗಾಗಿ ಕೊಟ್ಟಿದ್ದೇನೆ ತಕ್ಕೊಳ್ಳಿ.

**ಶ್ರೀಧರ–** ನನಗೇಕೆ ಗೌರೀ ಪತಿಯುಂಡ ಯಲಿ ಸತಿಗಲ್ಲದೆ ಮತ್ತಾರಿಗೂ ಸಲ್ಲದು ಅದಕ್ಕಾಗಿ ಇದನ್ನು ನೀನು ತಕ್ಕೊಂಡು ಆ ಯಲಿಯನ್ನು ತಾ.

**ಗೌರಿ–** (ನಗುತ್ತ) ಶ್ರೀಮಂತರೆ ನನ್ನ ಗಂಡನು ಉಂಡ ಯಲಿ ಒಳ್ಳೇ ಆಕಾರದ್ದೂ ಅಚ್ಚುಕಟ್ಟಾದದ್ದೂ ಇದೆ ತಕ್ಕೊಳಿ. ಬೇರೆಯವರಿಗಾದರೆ ಆ ಯಲಿಯನ್ನು ಎಂದೂ ಕೊಡಲಾರೆ ನಿಮಗಾಗಿ ಕೊಟ್ಟಿದ್ದೇನೆ. ಮೇಲಾಗಿ ಅದರಲ್ಲಿಯ ರುಚಿ ಮತ್ತಾವ ಯಲಿಯಲ್ಲೂ ಇರೋದಿಲ್ಲ. ಈ ದಿವ್ಸ ಉಂಡು ನೋಡಿರಿ ನಿಮಗೆ ತಾನೇ ತಿಳಿಯುತ್ತೆ ತಗೊಳ್ಳಿ

(ನಗುವಳು)

ಶ್ರೀಧರ– ಛೀ ಛೀ ಅದು ಸಾಧ್ಯವಿಲ್ಲ ಗೌರಿ ನನ್ನಿಂದಾಗದು ನಾನು ಯಂಜಲೆಲಿಯಲ್ಲಿ ಉಂಣಾಲು ಬಂದವನಲ್ಲ. ನಿನ್ನ ಪ್ರೇಮಕ್ಕಾಗಿ ಬಂದವನು ನಾನು ತಿಳಿಯಿತೇ

ಗೌರಿ– ತಿಳಿದಿದೆ ರಾಯರೇ ಇಂಥಾ ಯಂಜಲ ಯಲಿಗಳಿಗಾಗಿ ಯಷ್ಟೋ ಜನರು ಹುಡುಕಿ..... ಸಿಗದೆ ನಿರಾಶರಾಗುತ್ತಾರೆ. ಅಂದ ಮೇಲೆ ತಾನಾಗೇ ಸಿಕ್ಕರೂ ಕೈ ಬಿಡುವಿರೆಂದ ಮೇಲೆ ನೀವು ದುರ್ದೈವಿಗಳೆಂದೇ ಹೇಳಬೇಕು.

ಶ್ರೀಧರ– ಏನೂ ಇಂಥಾ ಯಂಜಲ ಯಲಿಗಳಿಗಾಗಿ ಜನರು ಅಡ್ಡಾಡುವರೇ ಛೀ ನನಗೆ ಮಾತ್ರ ಬೇಡ..... ನನಗೆ ಬೇಕಾದದ್ದು ನೀನು.... ಯಂಜಲ ಯಲ್ಲಿಯಲ್ಲಾ ತಿಳಿಯಿತೇ.

ಗೌರಿ– ಶ್ರೀಮಂತರೆ ಸಾವಕಾಶವಾಗಿ ಆಲೋಚಿಸಿರಿ, ನನ್ನ ಗಂಡನ ಯಂಜಲಕ್ಕಾಗಿ ಇಲ್ಲಿವರೆಗೆ ಬಂದು ಅದಕ್ಕೆ ತಿರಸ್ಕಾರ ಮಾಡುವಂಥವರನ್ನು ನಿಮ್ಮ ಹೊರ್ತು ಯಾರನ್ನೂ ಕಾಣಲಿಲ್ಲ. ಬಿಟ್ಟು ಹೋಗುವದಕ್ಕಿಂತ ಉಂಡೇ ಹೋಗುವದು ಲೇಸಾಗಿತ್ತು. ಪರಂತು.....

ಶ್ರೀಧರ– ಗೌರೀ ಪದೇಪದೆ ಅದೇ ಮಾತೇ ಈ ಯಂಜಲಕ್ಕಾಗಿ ಬಂದವನು ನಾನಲ್ಲ. ನಿನ್ನ ಮೇಲಿನ ಪ್ರೇಮಕ್ಕಾಗಿ ಬಂದಿರುವೆ. ಈಗಲಾದರೂ ಅರ್ಥವಾಯಿತೆ.

ಗೌರಿ– ಅರ್ಥವಾಗಿದೆ. ಶ್ರೀಮಂತರೇ ಈ ನನ್ನ ದೇಹವಾದರೂ ನಮ್ಮವರು ಉಂಡುಟ್ಟು ಹೊಲಸು ಮಾಡಿಲ್ಲವೇ? ಈ ಯಂಜಲಕ್ಕೆ ಮನಸ್ಸು ಮಾಡಿದವರು. ಆ ಯಲಿಯ ಯಂಜಲಕ್ಕೆ ತಿರಸ್ಕಾರವೇಕೆ ನೀವೇ ಹೇಳಿರಿ. ಈ ದೇಹವಾದರೂ ಯಂಜಲವಾಗಿಲ್ಲವೇ.... ತಿಳಿದುನೋಡಿ....

ಶ್ರೀಧರ– ಗೌರೀ ಇಂಥಾ ಗೊಡ್ಡು ವೇದಾಂತವನ್ನು ಕೊಚ್ಚಬೇಡ ನನಗಾಗಿ ನೀನು ಒಪ್ಪಲೇಬೇಕು. ಇಂದಿನಿಂದ ನನ್ನವಳಾಗುವಿಯೋ ಇಲ್ಲೋ ಹೇಳಿಬಿಡು ಗೌರಿ........

ಗೌರಿ– ಧನಿಕರೇ 'ನಾನು ಮೊದಲೇ ವಚನ ಕೊಟ್ಟಿರುವೆ ಆದರೆ ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಬಯಸುವೆ. ತಾವು ಇಂದು ನನ್ನ ಗಂಡನ ಯಂಜಲಕ್ಕಾಗಿ ಹಾತೊರೆದು ಬಂದಿರುವೆನೆಂಬುದನ್ನು ಮಾತ್ರ ಮರೆಯ

ಕೂಡದು ಹೂಂ.... ಹೇಳಿ ಹೊತ್ತಾಗುತ್ತದೆ. ಯಾಕಂದರೆ ಉಂಡು ಬಿಟ್ಟು ಹೋದವರು ತಿರುಗಿಬಂದ ಮೇಲೆ ಈ ಯಂಜಲದ ಯಲಿ ಮತ್ತೆ ಸಿಗಲಾರದು. ಆಲಸ್ಯ ಮಾಡಬೇಡಿರಿ. ಬನ್ನಿ ನೀಡುತ್ತೇನೆ ಬೇಗ ಕೂತುಕೊಳ್ಳಿ.....

**ಶ್ರೀಧರ–** ಹುಂ ಹಸಿವೆಯಾಗಿದ್ದರಲ್ಲವೇ ಊಟಕ್ಕೆ ಕೂಡುವದು ಗೌರಿ ಅಶನದ ತೃಪ್ತಿಗಾಗಿ ಬಂದವನು ನಾನಲ್ಲ ಕಾಮತೃಪ್ತಿಗಾಗಿ ಬಂದವನು ನಾನು. ನನ್ನ ಮಾತೇ ನಿನಗೆ ಅರ್ಥವಾಗಲೊಲ್ಲದು ಈಗಲಾದರೂ ತಿಳಿಯಿತೇ.....

**ಗೌರಿ–** ಹುಂ....ಎಂದೋ ತಿಳಿದಿದೆ ಇಲ್ಲಿ ಕೇಳಿ. ಒಂದು ನಾಯಿಯು ಧನಿಕನು ಉಂಡು ಒಗೆದ ಯಂಜಲವನ್ನೆಲ್ಲ ತಿಂದು ಆ ಮೇಲೆ ಬಡವನು ಒಗೆದ ಯಂಜಲ ಯಲಿಯ ಬಳಿಗೆ ಹೋಗಿ ಇದು ಬಡವನದಾಗಿದೆ ಎಂದು ಬಿಟ್ಟು ಹೋಲಾರದು. ಯರಡೂ ಎಲಿಗಳು ಒಂದೇ ಸಮವೆಂದು ತಿಳಿದು ಅದನ್ನು ಸಹ ತಿನ್ನುತ್ತದೆ. ಅದರಂತೆ ಯಾವನಾದರೂ ಕಾಮ ಪೀಡಿತನು ಒಂದು ಯಂಜಲಕ್ಕೆ ಮನಸೋತು ಮತ್ತೊಂದಕ್ಕೆ ತಿರಸ್ಕಾರ ಮಾಡುವನೋ ಅವನು ಆ ನಾಯಿಗಿಂತಲೂ ಕೀಳ ಪಶುವೆಂದು ನಾನು ಹೇಳುವದೇಬೇಡ, ನೋಡಿದವರು ಹೇಳೇ ಹೇಳುತ್ತಾರೆ. ಇದಕ್ಕೆ ತಮ್ಮ ಅಭಿಪ್ರಾಯವೇನಾದರೂ ಇದ್ದರೆ ಹೇಳಿ......

**ಶ್ರೀಧರ–** ಹೇಳುವದೇನಿದೆ ಗೌರಿ! ನೀನು ಎಷ್ಟೇ ಕೆಟ್ಟಶಬ್ದಗಳನ್ನು ಉಪಯೋಗಿಸಿದರೂ ನನಗೇನೂ ಸಿಟ್ಟು ಬರಲಾರದು. ನಿನ್ನ ವೇದಾಂತವಂತೂ ಕೇಳಲು ನನ್ನ ಕಿವಿಗಳು ಕಿವುಡಾಗಿವೆ. ಪ್ರೇಮರಸಕ್ಕೆ ಹಾತೊರೆದು ಬಂದರೆ ನೀನು ವಿಷವೆರಿಯಬೇಕೆನ್ನುವಿಯಾ. ಗೌರೀ.... ಇಂದಿನಿಂದ ನೀನು ನನ್ನವಳಾಗುವದಿಲ್ಲವೇ......

**ಗೌರಿ–** ನೋಡಿ ಶ್ರೀಮಂತರೇ ಇನ್ನು ಮೇಲೆ ನಿಮ್ಮವಳಾಗಬೇಕೆಂದೇ ಇಲ್ಲಿಯವರೆಗೂ ಹೇಳಿದೆನು. ಆದರೂ ನೀವು ಒಪ್ಪದಿದ್ದಲ್ಲಿ ನಾನೇನು ಮಾಡಲಿ. ಒಮ್ಮೆ ನಿಮಗೆ ಅರ್ಪಿಸಿದ ಈ ದೇಹವು. ನನ್ನ ಗಂಡನಿಗೆ ಯಂಜಲವಾಗಿ ದೂರಾಗುತ್ತದೆ. ಆಗ ನಮ್ಮವರು ಸತಿ ಇಲ್ಲದ ಪರದೇಶಿಯಾಗುವರೆಂದೇ ತಿಳಿದು ನೀವು ನಿಮ್ಮ ಸತಿಯಳನ್ನು ಜೋಡ ಮಾಡುವಿರೆಂದು ಎಂದೋ ತಿಳಿದಿದ್ದೇನೆ. ಯಾಕೆಂದರೆ ನಮ್ಮವರ ಮೇಲೆ ನಿಮ್ಮ ಪ್ರೇಮ ಬಹಳ ಇದ್ದುದಕ್ಕಾಗಿ ಯಾರೂ ಹೇಳಬೇಕಾದುದೇ ಇಲ್ಲ.... ಜೋಡು ಮಾಡೇ ಮಾಡುತ್ತೀರಿ. ಆಗ ನಮ್ಮ ಮನೆಯಲ್ಲಿ

ಸೀತಾದೇವಿ, ನಿಮ್ಮ ಮನೆಯಲ್ಲಿ ಈ ಗೌರಿ. ಈ ರೀತಿಯಾಗಿ ಇದೊಂದು ಹೊಸ ರಾಜ್ಯದಲ್ಲಿ ಹೊಸ ಪದ್ಧತಿಯು ನಿರ್ಮಾಣ ಮಾಡಬೇಕೆಂಬುದೇ ನಿಮ್ಮ ಕರ್ತವ್ಯವಲ್ಲವೇ, ಇದನ್ನು ಸರ್ವರೂ ನೋಡಿ ಆನಂದಪಡುವರು ನಿಜವಲ್ಲವೇ ನಿಮ್ಮ ಅಭಿಪ್ರಾಯ

**ಶ್ರೀಧರ–** ಎಲೇ ಗೌರೀ ನಿನ್ನ ನಾಲಿಗೆ ಉದ್ದವಾಗಿ ಚಾಚಿದೆ. ಇನ್ನು ಮೇಲೆ ನೋಡಿ ಮಾತಾಡು ಇದುವರೆಗೆ ಏನೋ ಹಾಸ್ಯ ಮಾಡುವಳೆಂದು ತಿಳಿದಿದ್ದೆ ನಾನ್ಯಾರೆಂಬುವದು ಯಚ್ಚರವಿದೆಯೇ..... (ಸಿಟ್ಟಿನಿಂದ ಅನ್ನುವನು)

**ಗೌರಿ–** (ನಗುತ್ತ) ಹುಂ ಯಚ್ಚರವಿದೆ ಕಾಮಾಂಧದ ಕಾರ್ಗತ್ತಲೆಯಲ್ಲಿ ಕಾಲಿಡುತ್ತ ಬಂದ ಕಾಮುಕ. ಶ್ರೀಮಂತರೂ ಕಾರುಣ್ಯಮೂರ್ತಿಗಳೂ ಎಂಬುದನ್ನು ಚನ್ನಾಗಿ ಅರಿತಿರುವೆ.....

**ಶ್ರೀಧರ–** ನೋಡು ಗೌರಿ ನನ್ನ–ನಿನ್ನ ಮನ ಪಂದಾದ ಬಳಿಕ ಈ ಚೇಷ್ಟೇ ಮಾತುಗಳಿಂದ ಪ್ರಯೋಜನವೇನಿದೆ ಮುಖ್ಯವಾಗಿ ನೀನು ನನ್ನವಳೆಂದೇ ತಿಳಿದಿರುವೆ.

**ಗೌರಿ–** ತಿಳಕೊಳ್ಳಿ ಹಾಗೆ ತಿಳಕೊಳ್ಳಿ ಸದಾ ನಿಮ್ಮ ಮಗಳೆಂದೇ ತಿಳಕೊಳ್ಳಿ ತಪ್ಪೇನಿದೆ ಇಷ್ಟೇ ತಾನೇ.... (ಶಾಮು ಬರುತ್ತಾನೆ.)

**ಶ್ಯಾಮು–** (ಒಳಗಿನಿಂದಲೇ) ಆಹ ಇಷ್ಟೇ ಇಷ್ಟೇ ಮತ್ತೇನೂ ಇಲ್ಲ (ಶ್ರೀಧರನನ್ನು ನೋಡಿ) ಅಯ್ಯೋ ಶ್ರೀಧರ ಇದೇನು ನಿಂತುಕೊಂಡೇ ಮಾತು ಛೇ ಏನೇ ಶ್ರೀಮಂತ ಅನ್ನುವದು ಗೊತ್ತಿಲ್ಲೇ ನಿನಗೆ ಕೂಡಲಿಕ್ಕೆ ಹೇಳಬೇಕಿಲ್ಲೇ ಬಾ ಶ್ರೀಧರಾ ಕೂಡು.

**ಶ್ರೀಧರ–** (ನಾಚಿ ಗಡಿಬಿಡಿಯಿಂದ) ಇರಲಿ ಬಿಡು ಶ್ಯಾಮು ಈಗ ತಾನೆ ನಿನ್ನನ್ನು ನೋಡಲು ಬಂದೆ ನೀನಿದ್ದಿಲ್ಲ ಹಾಗೇ ವಾಪಸ್ ತಿರುಗುವದಕ್ಕೂ ನೀನು ಬರವದಕ್ಕೂ ಸರಿ ಹೋಯಿತು. ಎಲ್ಲಿಗೆ ಹೋಗಿದ್ಯೋ.....

**ಶ್ಯಾಮು–** ಯಾರು.... ನಾನಾ.... ಏನು. ಇವಳಾ.... (ಗೌರಿಯು ಹಿಂದಕ್ಕೆ ಸರಿದು ಆ ಯಲಿ ಮಣಿಗಳನ್ನು ತಗಿಯುತ್ತಾಳೆ.)

**ಶ್ರೀಧರ–** ಅಲ್ಲೋ ನೀನೇ ಎಲ್ಲಗಿ ಹೋಗಿದ್ದೀ ಅಂದೆ.....

**ಶ್ಯಾಮು–** ಅಯ್ಯೋ ಶ್ರೀಧರಾ ಆಗಲೆ ೩ ತಾಸಿನೊಳಗೆ ನನ್ನನ್ನು ಮರೆತೆಯಾ

ಸಿನೆಮಾಕ್ಕೆ ಹೋಗಲು ೨ ರೂ. ಕೊಟ್ಕಳ್ಸಿದೆ ಇಷ್ವರಲ್ಲಿ ಮರತೆಯಾ ಶ್ರೀಮಂತರ ಮಾತೇ ಹೀಗೆ ನೋಡೋ ಶ್ರೀಧರಾ ಈ ದಿವಸ ಪಿಚ್ಚರ ನೋಡಬೇಕೋ ಆದರೆ ಏನ ಮಾಡೋದು ಅದರಲ್ಲಿ ವಂದು ಸನ್ನಿವೇಶ ಹೀಗಿತ್ತು ಒಬ್ಬವಳ ಮೇಲೆ ಒಬ್ಬವನ ಬಲತ್ಕಾರ ಮಾಡಿದ ಆಗ ಮಾತ್ರ ನನಗೆ ತಡಿಯದೆ ಎದ್ದುನಿಂತು ಯಾಕಲೆ ಕಳ್ಳಾ ಬಂದೆ ನಿಲ್ಲು ಎಂದು ಘಟ್ಟಿಯಾಗಿ ಕೂಗಿದೆ. ಅವನು ಹೆದರಿ ಹೋಗೇ ಬಿಟ್ಟ ಆದರೆ ನೋಡಲಿಕ್ಕೆ ಕೂತ ಜನವೆಲ್ಲ ನನ್ನನ್ನೇ ಬೈದರೇ ಹೊರ್ತು ಆ ಕಳ್ಳ ಮುಂಡೇ ಗಂಡನ್ನ ಯಾರೂ ಬಯ್ಯಲಿಲ್ಲ....ಇದೇನು ಕಾಲಪ್ಪಾ ಅಂದೆ.... ಅವನು ಮಾತ್ರ ನನ್ನ ಕೂಗಿಗೆ ಹೆದರಿ ಹೋದನೇ ಹೊರ್ತು....ಅವಳನ್ನೇನು ಬಿಡುವಂತದ್ದಿಲ್ಲ....

**ಶ್ರೀಧರ–** (ಜೋರಾಗಿ ನಕ್ಕು) ಹೌದು ನೋಡು ನೀನು ಜೋರಾಗಿ ಕೂಗಿದ್ದು ಕೇಳಿ ಅವನು ಹೆದರಿ ಹೋಗಿರಬೇಕು ಅಲ್ವೇ... ಅಹಹಹಹ....

**ಶ್ಯಾಮು–** ನಿಜ ನೋಡು ನನಗೆ ಹೆದರೇ ಹೋದ ಅವ ಎಂಥಾ ಕೆಟ್ಟವನಂತೀಯಾ ಯಾರೂ ಇಲ್ಲದ್ದು ಕಂಡು ಅವಳನ್ನು ಮಾನಭಂಗ ಮಾಡೋ ಮುಂಡೇ ಗಂಡ ನನ್ನ ಕೈಯಲ್ಲಿ ಸಿಗಬೇಕಾಗಿತ್ತು. ಸಿಕ್ಕಿದ್ದರೆ ಸರಿಯಾಗೇ ಹೇಳುತ್ತಿದ್ದೆ.

**ಶ್ರೀಧರ–** ಇರಲಿ ಶಾಮು ಬರ್ತೀನಿ ಹೊತ್ತಾಗಿದೆ (ಹೋಗುವನು)

**ಶ್ಯಾಮು–** (ನಗುತ್ತ ಕೈಮುಗಿದು) ಅಹ ಹೋಗಿ ಬರ್ರೆಪಾ (ಹೌದೆಲೆ ಅನ್ನುತ್ತ ಒಳಗೆ ಹೋಗುತ್ತಾನೆ.... ತೆರೆ ಬೀಳುತ್ತದೆ)

===**=====**===

## ಪ್ರವೇಶ ೭

## ರಸ್ತೆ

(ಶ್ರೀನಿವಾಸನು ಬರುತ್ತಾನೆ)

**ಶ್ರೀನಿವಾಸ–** ಯಾವ ರೀತಿಯಿಂದ ಕೆಲಸ ಮಾಡಿದರೂ ನಮ್ಮ ಸರ್ಕಾರಕ್ಕೆ ಹೆದರುವದು ನನಗೆ ತಪ್ಪಲಿಲ್ಲ....ಇದೊಂದು ನನ್ನ ಹಣೇಬರಹ ಗ್ರಾಮಶೇವಕ ಇರೋವರೆಗೆ ನಾಲ್ಕು ದುಡ್ಡಾದರೂ ಕೈಗೆ ಸೇರುತ್ತಿತ್ತು.... ಅವನು ಹೋದ ಮೇಲೆ ಹೊಸ ಗಿರಾಕಿನೇ ಕಾಣೆ....ಅದಿರಲಿ....ನಾಳೆ ನಮ್ಮ ಇನಸ್ಪೇಕ್ಟರರು ಬರುತ್ತಾರಂತೆ ಇನ್ನೂ ನಾಲ್ಕೈದು ಮನೆಗಳು ನಂಬರ ಹಾಕದೆ ಹಾಗೆ ಉಳಿದಿವೆ. ಆ ಮನಿಗಳ ಸಮೀಪ ಹೋದರೆ ಅವರಿಂದ ಛೀ ಮಾಡಿಸಿಕೊಳ್ಳಬೇಕು ಇಲ್ಲವಾದರೆ ಬಿಡಿಸಿಕೊಳ್ಳಬೇಕು. ವಲ್ಲೆನೆಂದರೆ ನೌಕರೀ ಕಳೆದುಕೊಂಡು ಮನೆಗೆ ಹೋಗಬೇಕು ನಾಳೆ ಏನಾಗುತ್ತೊ ದೇವರಿಗೇನೇ ಗೊತ್ತು (ರಾಮು ಬಂದು ಇವರನ್ನು ನೋಡಿ ಹಿಂದಕ್ಕೆ ನಿಲ್ಲುತ್ತಾನೆ) ಆದದ್ದಾಗಲಿ ಯಾರಿಲ್ಲದ ಸಮಯ ನೋಡಿ ನನ್ನ ಪೆನ್ಸಲ್ಲಿಗೆ ಅಪ್ಪಣೆ ಕೊಟ್ಟು ಕೆಲ್ಸಂತೂ ಮುಗಿಸೆ ಬಿಡುತ್ತೇನೆ. (ಹೋಗುವಾಗ್ಯೆ) ರಾಮು ಬರುತ್ತಾನೆ.....

**ರಾಮು–** ನಮಸ್ಕಾರರ್ರೀ.... ಏನೋ ಆಲೋಚಿಸುತ್ತ ಹಾಗೆ ಹೊರಟಿರೆಲ್ಲ ಮತ್ತೇನು ಸಮಾಚಾರ ಆರಾಮ ಇದ್ದೀರಾ.....

**ಶ್ರೀನಿವಾಸ–** ಆರಾಮ ನಮಗೆಲ್ಲಿದೆ ರಾಮೂ.... ನಾಳೆ ನಮ್ಮ ಇನಸ್ಪೆಕ್ಟರರು ತನಖೀಗೆ ಬರುತ್ತಾರಂತೆ ಇಲ್ಲಿ ನೋಡಿದರೆ ನಾಲ್ಕಾರು ಮನಿಯ ಜನರು ಗೋಡೆಗಳ ಮೇಲೆ ಬರೆಯಗೊಡರು ಅವರು ಬಂದು ಕೇಳಿದರೆ ಹೇಳಬೇಕೆಂಬುವದೇ ತಿಳಿಯದಾಗಿದೆ.

**ರಾಮು–** ಇಷ್ಟೇ ತಾನೆ ಹೋಗಲಿ ಬಿಡ್ರಿ ಇಂಥಾ ಸಂಣ ಸಂಣ ಕೆಲ್ಸ ನಿಮ್ಮ ತಲಿಯಲ್ಲಿ ಹೊಳೆಯಲಿಲ್ಲವೇ ಅಲ್ಲರೀ ಸೃಷ್ಟಿ ಮಾಡಿದ ಬ್ರಹ್ಮ ನಿಮ್ಮ ತಲಿ ಯೇನೋ ಮಾಡಿದ. ಪರಂತು ಅದರಲ್ಲಿ ಮಿದಿಳು ಇಡೋದನ್ನು

ಮರೆತಂತೆ ಕಾಣುತ್ತದೆ. ಯಾಕ್ರೀ ಶ್ರೀನಿವಾಸರೆ ಇಷ್ಟು ತಿಳಿಯುವದಿಲ್ಲವೇ ನಿಮಗೆ. ಆ ಮನೆಯವರು ಹೊರಗೋ ಒಳಗೋ ಇದ್ದಾಗ್ಯೆ ನೋಡಿ ನಿಮ್ಮ ಸೀಸಪೇನಿಗೆ ಅಪ್ಪಣೆ ಕೊಟ್ರಾತು. ಸಾಕಷ್ಟು ಗೀಚಿ ಮತ್ತೆ ನಿಮ್ಮ ಜೇಬಿನಲ್ಲಿ ಬಂದು ಸೇರುತ್ತೇ. ನಿಮ್ಮನ್ನು ಯಾರು ಕೇಳಬೇಕ್ರೀ. ಅಷ್ಟು ಮಾಡಿ ಬಿಡ್ರೀ....

**ಶ್ರೀನಿವಾಸ–** (ಸ್ವ) ನಾ ಮಾತಾಡಿದ್ದು ಕೇಳಿದನೇನೋ ಇವ (ಪ್ರ)ಯೋನಾದರೂ ಮಾಡಿ ನನ್ನ ನೌಕರಿ ಉಳಿಸಿಕೊಳ್ಳುವದೇ ನನ್ನ ಕೆಲಸ ರಾಮೂ ಬರ್ತೀನಿ. ನಮಸ್ಕಾರ.

**ರಾಮು–** ನಮಸ್ಕಾರ ಹೋಗ್ರೆಪಾ ಎನದೆಯೋ ನಿನ್ನ ಹಣೆಬರಹ. ಇರಲಿ ಇರಲಿ. ನಿನ್ನೆ ಗೌರಿ ಮನೆಗೆ ಹೋದ ನಮ್ಮ ಶ್ರೀಧರರ ಹಣೆ ಬರಹವನ್ನು ಯಾವ ಪೆನ್ನಿನಿಂದ ಬರೆದನೋ ಆ ಬ್ರಹ್ಮ. ಇವನಿಗಿರತಕ್ಕ ಹೆಂಣಿನ ಚಟವನ್ನು ಹೇಗಾದರೂ ಮಾಡಿ ಬಿಡಿಸಲೇಬೇಕು. ಗೌರಿಯ ಮೇಲಿಟ್ಟ ಕೆಟ್ಟ ನೋಟವನ್ನು ಆ ಹರಿಜನ ಹುಡಿಗೆಯ ಮಾಟಕ್ಕೆ ಮನವೆಳಸಿ ನೀಟಾದ ಸಮಾಜದಲ್ಲಿ. ಅಪಹಾಸ್ಯಕ್ಕೆ ಗುರಿ ಮಾಡದೇ ಹೋದರೆ ಕುಲೀನ ಸ್ತ್ರೀಯರಿಗೆ ಕಾಟವೆಂದೂ ತಪ್ಪಲಾರದು. ಈಗಲೇ ಹೋಗಿ ಕಂಡು ಮುಂದಿನ ಕೆಲಸಕ್ಕೆ ಕೈ ಹಾಕುವೆ. (ಹೋಗುವಾಗ್ಯೆ ಶ್ರೀಧರನೇ ಬರುತ್ತಾನೆ).

ನಮಸ್ಕಾರ ಚೇರಮನ್ನರೇ.

**ಶ್ರೀಧರ–** ನಮಸ್ಕಾರ. ಬಾರೋ ರಾಮು. ನಿನ್ನಲ್ಲಿಗೇನೆ ಬರಬೇಕೆಂದು ಬಂದೆ. ಇಲ್ಲೇ ಇರುವಿ. ಮತ್ತೇನು ಸಮಾಚಾರ.

**ರಾಮು–** ಸಮಾಚಾರವೇ, ಚೀನಾದವರು ಮತ್ತೆ ಭಾರತದ ಮೇಲೆ ದಾಳಿ ಮಾಡಿದರಂತೆ.

**ಶ್ರೀಧರ–** ಅವರ ಸುದ್ದಿ ನಮಗೇಕೆ ಬೇಕೋ

**ರಾಮು–** ಅಲ್ಲಾ ನಿನ್ನ ಸಮಾಚಾರ ಕೇಳಲು ಹಾತೊರೆದವಗೆ ನನ್ನನ್ನೇ ಸಮಾಚಾರವೇನೆಂದು ಕೇಳಿದಿರಿ. ಅದಕ್ಕಾಗೆ ದೇಶದ ಸಮಾಚಾರ ಹೇಳಿದೆ. ಇರಲಿ, ನಿನ್ನೆ ನೀ ಹೋದ ಕೆಲಸವೇನಾಯ್ತು.

**ಶ್ರೀಧರ–** ಉಂ ಹೂಂ (ನಗುತ್ತ)

ರಾಮು– ಉಂ ಹೂಂ ಅಂದರೆ ಇದರ ಅರ್ಥವೇನೆಂದು ತಿಳಿಯಲಿ ಬಿಚ್ಚಿ ಹೇಳಬಾರದೇ.

ಶ್ರೀಧರ– ಹೂಂ ರಾಮು ಆಗಿದೆ.

ರಾಮು– ಏನಾಗಿದೆ ಗೌರಿಯಂತೆಯೋ ಅಥವಾ ನಿನ್ನಂತೆಯೋ ಆದದ್ದು ಏನಾಗಿದೆ.

ಶ್ರೀಧರ– ರಾಮೂ ನನ್ನ ಮೇಲೆ ವಿಶ್ವಾಸವಿಲ್ಲವೇ ಕೆಲ್ಸಂತೂ ಆಗಿದೆ.

ರಾಮು– ಯಾವ ಕೆಲ್ಸಯ್ಯಾ. ನೀನು ಹೋಗಿ ಸುರಕ್ಷಿತವಾಗಿ ತಿರುಗಿ ಬಂದ ಕೆಲಸವೆ ಆದದ್ದು ಇರಲಿ ಬಿಡು ಗೌರಿ ನಾಲ್ಕು ತಿಂಗಳ ಗರ್ಭವತಿ ಎಂದು ಕೇಳಿದ್ದೇನೆ.

ಶ್ರೀಧರ– ಇದ್ದರೂ ಇರಬಹುದು. ಅದೆಲ್ಲ ನನಗೇಕೆ.... ರಾಮು ನಾನಂದರೆ ಯಾರೆಂದು ತಿಳಿದಿರುವಿ. ಇರಲಿ. ನಾನು ಕೈ ಹಾಕಿದ ಕೆಲಸ ಎಂದಾದರೂ ಹುಶಿಯಾಗಿರುವದೇ ನಿನಗೆ ಗೊತ್ತಿಲ್ಲವೇ....

ರಾಮು– ಹೂನಯ್ಯಾ ಇದಕ್ಕೆ ನಾನು ಒಪ್ತೀನಿ.... ಆದರೆ ಗೌರಿ ಕೆಲ್ಸ ವಂದು ಬಿಟ್ಟು ನಿನ್ನ ಹಿಂದಿನ ಕೆಲ್ಸ ಹುಶೀನ ಆಗಿಲ್ಲಾಂತ ಎಂದೋ ತಿಳಿದೀನಿ.....

ಶ್ರೀಧರ– ಅಲ್ಲೋ ರಾಮು ನಿನ್ನೆ ಹದಿನೈದಾಣೆ ಭಾಗ ಕೆಲಸ ಮುಗಿದಿದೆ.....ವಂದಾಣೆ ಭಾಗ ಉಳಿದದ್ದು ಇದೇನೂ ನನಗೆ ದೊಡ್ಡದಲ್ಲ....ನಾಳೆ ಮುಗಿಸೇ ಬಿಡುತ್ತೇನೆ.....

ರಾಮು– ಆ....ಹ.... ನಾನು ಅದೇ ಹೇಳೋದು ಹದಿನೈದಾಣೆ ಭಾಗ ಕಠಿಣ ಅಲ್ಲಯ್ಯಾ ೧ ಆಣೆ ಭಾಗ ಕೊನಿಯದೇ ಮಹ ಕಠಿಣ ಅದು ಮಾತ್ರ ನಿನ್ನಿಂದ ಸಾಧ್ಯವಿಲ್ಲಂತ ಎಂದೋ ತಿಳಿದಿದ್ದೇನೆ....

ಶ್ರೀಧರ– ಅಂದರೆ ನನ್ನ ಮಾತೆಲ್ಲ ಸುಳ್ಳೆಂದೇ ತಿಳಿದಿರುವಿಯಾ.... ರಾಮೂ ನನ್ನ ಮಾತು ಪೂರಾ ಕೇಳು ಅಂದರೆ ತಾನೇ ತಿಳಿಯುತ್ತೇ.... ಅವಳ ಗಂಡ ಇಲ್ಲದ ಸಮಯದಲ್ಲಿ ನನ್ನ ಮೇಲೆ ತೋರಿಸಿದ ಪ್ರೇಮ ಎಷ್ಟೆಂದು ಹೇಳಲಿ ಇದೊಂದು ಶುಭ ದಿವ್ಸವದೆ ನಾನೂ ನೀನು ಕೂಡಿ ಊಟ ಮಾಡೋಣವೆಂದು ಹಟ ಮಾಡಿದಳು.....

ರಾಮು– ಅದಕ್ಕೆ ನೀವೇನು ಹೇಳಿದಿರಿ

ಶ್ರೀಧರ– ಸಧ್ಯ ನನಗೆ ಹಸಿವೆಯೇ ಇಲ್ಲ ನೀನೇ ಮಾಡೆಂದೆ.... ಅವಳಿಗೆ ಸಿಟ್ಟು

ಬಂದು ಊಟ ಬಿಡುವ ಪ್ರಸಂಗ ತೋರಿಸಿದಳು.

**ರಾಮು–** ಆಗ.....

**ಶ್ರೀಧರ–** ನಾನೂ ಊಟಕ್ಕೆ ಕೂಡುವ ಸಮಯ ಅದೇ ಕಾಲಕ್ಕೆ ಶಾಮು ಬರಬೇಕೇ....

**ರಾಮು–** ಛೇ ಛೇ ಎಂಥಾ ಹೊತ್ತಿನಲ್ಲಿ ಬಂದನೋ ಶಾಮು.... ಆಗ.... ಮುಂದೇನಾಯಿತು.

**ಶ್ರೀಧರ–** ಮುಂದೇನು ಅವನ ಕೂಡ ಕೆಲವು ಮಾತು ಹರಟಿ ಹೊಡೆದು ಮನಿ ದಾರಿ ಹಿಡಿದೆ ಇಷ್ಟೇ.....

**ರಾಮು–** ಏನು ಅದೃಷ್ಟಶಾಲಿಯಪ್ಪಾ ನೀನು.... ನಿಲ್ಲು.... ಮುಂದಾದರೂ ಸುರುಕ್ಷಿತವಾಗುವದೋ ಹೇಗೆ ನೋಡೋಣ.... ಸ್ವಲ್ಪ ತಡೆ.... (ಬೆರಳೆಣಿಸಿ) ಏನಯ್ಯ ೧೦೮ ಅಂಕಿಯಲ್ಲಿ ಎಷ್ಟು ಬೇಕು ಹೇಳು.... ನೋಡೋಣ.

**ಶ್ರೀಧರ–** ಓಹೋ ಪ್ರಶ್ನೆ ನೋಡುವಿಯಾ.... ನನಗೆ.... ೪೨ ಬೇಕು ಹೇಳು ಏನಾಗುತ್ತೆ.

**ರಾಮು–** (ಎಣಿಸಿದಂತೆ ಮಾಡಿ) ಸಾಕು ಬಿಡಯ್ಯ ಇನ್ನು ಮೇಲೆ ಆ ಕೆಲ್ಸಕ್ಕೇನೇ ಹೋಗಬೇಡ ಅದರಿಂದ ಮುಂದೆ ಅನರ್ಥವಿದೆ.... ಮೇಲಾಗಿ ನೀನು ತಿಳಿದಿರಬಹುದು ಕೆಲಸವಂತೂ ಮೊದಲೇ ಆಗೋದಿಲ್ಲ ನಿನಗಾಗ ಅನರ್ಥ ತಪ್ಪೋದಿಲ್ಲ ಹುಷಾರಿ....

**ಶ್ರೀಧರ–** ಅಲ್ಲೋ ರಾಮು ನಿನ್ನ ಪ್ರಶ್ನೆ ಏನ ಹೇಳಿತೋ....

**ರಾಮು–** ಈ ಕೆಲ್ಸಕ್ಕೆ ಕೈ ಹಾಕ ಬೇಡಾಂತ ಸ್ವಚ್ಛ ಹೇಳೇ ಬಿಟ್ಟಿತು. ಇದು ಸರ್ವಜ್ಞ ಮೂರ್ತಿಯ ಅಂಕ ಪ್ರಶ್ನೆ ಸುಳ್ಳೆಂದು ತಿಳಿಯಬೇಡ.

**ಶ್ರೀಧರ–** ಅದು ಹೇಗೆ ಬಿಚ್ಚಿ ಹೇಳಬಾರದೇನೋ....

**ರಾಮು–** ಬಿಚ್ಚಿ ಹೇಳದೆ ಮುಚ್ಚಿಡುವ ಮಾತೇ ಇಲ್ಲ ಇದರಲ್ಲಿ ನೀನು ೪೨ ಅಂಕಿಯನ್ನು ಕೇಳಿದೆ ಇದಕ್ಕೆ ೮ ರಿಂದ ಭಾಗಿಸಿದರೆ ಶೇಷ ೨ ವುಳಿಯುತು.....

**ಶ್ರೀಧರ–** ೨ ವುಳಿದರೆ ಏನೆಂದು ಅರ್ಥವಾಯಿತು.

**ರಾಮು–** ಕೇಳು ಹೀಗಿದೆ. ವಂದೈದು ಶುಭ ಮಸ್ತು ಛಂದಹುದು ನಾಲ್ಕಾರು ಕುಂದಹುದು ಮೂರೇಳು ೨–೮ ಎಂದೆಂದು ಬ್ಯಾಡೆಂದ ಸರ್ವಜ್ಞ ಈಪ್ರಕಾರ ೨ ರ ಅರ್ಥ. ನೀನು ಇದನ್ನು ನಂಬದಿದ್ದರೆ ಬಹು ಅನರ್ಥ. ತಿಳಿಯಿತೇ.

**ಶ್ರೀಧರ–** ರಾಮೂ, ಇಂಥಾ ಪ್ರಶ್ನೆಗಳಿಗೆಲ್ಲ ನಾನು ನಂಬಿ ಬಿಡತಕ್ಕ ಹೇಡಿಯಲ್ಲ. ಮೊದಲೇ ಕೈ ಇಡುವದಿಲ್ಲ. ಇಟ್ಟಮೇಲೆ ಬಿಡುವದಿಲ್ಲ. ಕೆಲಸವಾದ ಮೇಲಾದರೂ ನಿನ್ನ ಸರ್ವಜ್ಞಮೂರ್ತಿಯನ್ನೇ ಕೇಳು. ಆವಾಗ್ಯೆ ಏನು ಹೇಳುತ್ತಾನೋ ನೋಡೋಣ.

**ರಾಮು–** ಆಗಲಿ ತಪ್ಪೇನಿದೆ. ಈ ಪ್ರಶ್ನೆಯು ಮಾತ್ರ ಹುಶಿ ಹೋಗಲಾರದು ಯಚ್ಚರದಿಂದ ವರ್ತಿಸಿರಿ (ಘಡಿ ನೋಡಿ) ನನಗೆ ಟೈಮಾತು ಬರ್‍ತೀನಿ ನಮಸ್ಕಾರ.

**ಶ್ರೀಧರ–** ಅಲ್ಲೋ ತೋಟಕ್ಕೆ ಎಂದು ಕರತರುವಿಯೋ ಆ ಹೆಣ್ಣನ್ನು

**ರಾಮು–** ನೀವು ಲಗ್ನಕ್ಕೆ ಒಪ್ಪಿದರೆ ನಾಳೆಯೇ ಬರುತ್ತಾಳೆ.

**ಶ್ರೀಧರ–** ಅವಳನ್ನು ನೋಡಿದ ಮೇಲಲ್ಲವೇ ಲಗ್ನದ ಸುದ್ದಿ ಇರಲಿ ನಾಳೆ ೩ ಘಂಟೆಗೆ ಬರುವಿಯಾ ರಾಮು....

**ರಾಮು–** ಆಗಲಿ ಕರಕೊಂಡು ಬರುತ್ತೇನೆ ನಮಸ್ಕಾರ (ಹೋಗುವರು)

(ಅದೇ ರಸ್ತೆಯಲ್ಲಿ)

===**===**===

## ಪ್ರವೇಶ ೮

(ಶಾಮುನನ್ನು ಪೋಲಿಸ ಇನಸ್ಪೆಕ್ಟರರು ಕೈಗೆ ಹಗ್ಗವನ್ನು ಹಚ್ಚಿಕೊಂಡು ಕರೆದೊಯ್ಯುವರು.)

**ಇನಸ್ಪೇಕ್ಟರ್–** ಎಲೋ ಬಾರೋ ಇಲ್ಲಿ.... (ಮುಂದೆ ಬರುವನು) ನಿಜವಾಗಿ ಹೇಳುವಿಯೋ ನಿಜ ಹೇಳಿದರೆ ಒಳಿತು. ಸುಳ್ಳು ಹೇಳಿದರೆ ಮಾತ್ರ ಮೈ ಮೆತ್ತಗಾಗುವ ಪ್ರಸಂಗ ಬರಬಹುದು ಏನಂದಿ....

**ಶಾಮು–** (ಆಲೋಚಿಸುತ್ತ) ಸುಳ್ಳು.... ಹೌದು.... ನಿಜ.... ನಿಜವನ್ನೇ ಹೇಳುತ್ತೇನೆ ಸಾರ್ (ಘಾಬರಿಪಡುತ್ತ ಹೇಳುತ್ತಾನೆ)

**ಇನ–** ಇವೆಲ್ಲ ಸಾಮಾನುಗಳನ್ನು ಕದ್ದು ತಂದಿರುವಿಯಲ್ಲವೇ....... (ಶಿಗ್ರೇಟು ಹಚ್ಚುವನು)

**ಶ್ಯಾಮು–** (ಸ್ವಗತ) ಕದ್ದು ತಂದದ್ದು ನಿಜ. ನಿಜವನ್ನೇ ಹೇಳಬೇಕಾಗಿದೆ ಸುಳ್ಳು ಛೇ ಸುಳ್ಳನ್ನು ನನ್ನ ಗೌರಿಗೆ ಉಡಿ ತುಂಬಿದ್ದೇನೆ ಹೇಳಲು ಬರುವಂತೆ ಇಲ್ಲ. ಹೇಳಿದರೆ ಮಾತ್ರ ಗೌರಿಯು ಜೀವಿಸಲಾರಳು ನಿಜ. ಗೌರೀ ನನ್ನ ಪ್ರಾಣ ಹೋದರೂ ಸುಳ್ಳನ್ನು ಹೇಳಲಾರೆ.

**ಇನ–** ಯಾಕೋ ಸುಮ್ಮನಾದೆ. ನಿಜವಾಗಿ ಹೇಳು. ಕದ್ದು ತಂದ ವಸ್ತುಗಳಲ್ಲವೇ ಇವು.

**ಶ್ಯಾಮು–** ನಿಜ ಸಾರ್. ಇವೆಲ್ಲವನ್ನು ಕದ್ದೇ ತಂದಿರುವೆ, ನಿಜ.

**ಇನ–** ಹಾ.... ಹೀಗೆ ಇದ್ದದ್ದನ್ನು ಇದ್ದ ಹಾಗೆ ಹೇಳಬೇಕು. ಸುಳ್ಳು ಹೇಳಿದರೆ ಮಾತ್ರ ಅನರ್ಥಕ್ಕೆ ಗುರಿಯಾಗುವಿ. ಇರಲಿ. ಇವನ್ನು ಕದಿಯಲು ಕಾರಣ.....

**ಶ್ಯಾಮು–** (ಘಾಬರಿಯಿಂದ) ಕಾರಣ.... ಇಷ್ಟೇ.... ನನ್ನ ನಿರುದ್ಯೋಗವೇ ಕಾರಣ ನನ್ನ ಬಡತನವೇ ಇದಕ್ಕೆ ಕಾರಣ.... ನನ್ನ ಅಡಚಣೆಯೇ ಇದಕ್ಕೆಲ್ಲ ದೊಡ್ಡಕಾರಣ......

ಇನಸ್ಪೇಕ್ಟರ್– (ದಿಟ್ಟಿಸಿ ನೋಡಿ).... ಅಲ್ಲೋ ನೀನು ವಂದುವ್ಯಾಳ್ಯ ಕ್ಲಬ್ಬಿನಲ್ಲಿ ನನ್ನ ಕೈಗೆ ಸಿಕ್ಕಿದ್ದಿಯಲ್ಲ.... ನೆನಪಿದೆಯೇ.... ಇಸ್ಪೇಟ ಆಟದಲ್ಲಿ

ಶ್ಯಾಮು– ನಿಜ ಸಾರ್.....

ಇನಸ್ಪೆಕ್ಟರ್– ಆದರೆ ಆ ದಿವಸ ಬೆರೇ ಸುಳ್ಳಿನ ಕಥೆಯನ್ನೇ ಹೇಳಿ ಪಾರಾದವನು ನಿನಲ್ಲವೇ.....

ಶ್ಯಾಮು– ಅದು ನಿಜ ಸಾರ್

ಇನಸ್ಪೇಕ್ಟರ್– ಅಂದಮೇಲೆ ಆ ದಿವಸ ನಿನ್ನನ್ನು ನೋಡಿದ ಗುರ್ತು ಈ ದಿವಸ ಸರಿಯಾಗಿ ಸಿಕ್ಕಿತು ಆದರೆ ಆ ದಿವಸ ತಿಳಿದಿದ್ದೆ ಇದೊಂದು ಸುಳ್ಳಿನ ಗಿರಾಕಿಯಂದು ಈ ದಿವಸ ನಿನ್ನನ್ನು ನೋಡಿದರೆ ಮಾತ್ರ ನನಗೆ ಏನೇನೋ ಅನಿಸುತ್ತಿತೆ.... ಯಾಕಂದರೆ ಆ ದಿವಸ ಮಾಡಿದ ತಪ್ಪು ಕಣ್ಣು ತುಂಬ ನೋಡಿದರೂ ನನ್ನ ಕಣ್ಣಲ್ಲಿ ಮಂಕುಬೂದಿ ಉಗ್ಗಿದೆ ಆದರೆ ಈ ದಿವಸ ನಾನು ಕಾಣದ್ದನ್ನು ನಿಜವೆಂದು ಹೇಳುವಿಯಲ್ಲಾ ನಿನ್ನ ಗುಣವೇ ನನಗೆ ಅರ್ಥವಾಗದಾಗಿದೆ. ನಿಜವಾಗಿ ಹೇಳು ಇವನ್ನೆಲ್ಲ ನೀನೇ ಕದ್ದಿರುವೆಯಾ.....

ಶ್ಯಾಮು– ನಿಜ ಸಾರ್ ನಾನೇ ಸ್ವತಃ ಕದ್ದಿರುವೆ ನಿಮಗೆ ನನ್ನ ಮಾತಿನ ನಂಬಿಗೆಯೇ ಸಾಲದಾಗಿದೆಯಲ್ಲವೇ.... ಹಿಂದಕ್ಕೆ ಎಷ್ಟೋ ಸುಳ್ಳು ಹೇಳಿದವನು ಈಗ ನಿಜವನ್ನೇ ಹೇಳುವನಲ್ಲಾ ಎಂಬುವ ಸಂಶಯವಲ್ಲವೇ ಸಾರ್..... ಆಗಿನ ಮನುಷ್ಯನೇ ಬೇರೆ ಈಗಿನ ಮನುಷ್ಯನೇ ಬೇರೆ ಆಗಿದ್ದೇನೆ ಸಾರ್.....

ಇನೆಸ್ಪೇಕ್ಟರ್– ನೀ ಹೇಳುವದೆಲ್ಲ ನಿಜವಿದ್ದರೂ ನಿನ್ನಲ್ಲಿ ಮಾತ್ರ ನಾವು ಬಹು ಜಾಗರೂಕರಾಗೇ ವರ್ತಿಸಬೇಕು. ಆದರೆ ಸಧ್ಯ ನಿನ್ನ ಮಾತು ನನಗೆ ಆಲೋಚನಕ್ಕೆ ಅವಕಾಶವನ್ನು ನೀಡಿದೆ.

ಶ್ಯಾಮು– ಅದೇಕೆ ಸಾರ್.... ಆಗ್ಯೆ ಸುಳ್ಳು ಬೇಕಾದಷ್ಟು ಹೇಳಲಿಕ್ಕೆ ನನಗೆ ಅಧಿಕಾರವಿತ್ತು ಈಗ ಮಾತ್ರ ಅಧಿಕಾರವಿಲ್ಲ ಇಷ್ಟೇ.....

ಇನಸ್ಪೇಕ್ಟರ್– ಆ ಆಗ.... ಯಾರಿಂದ ಅಧಿಕಾರ ಪಡೆದಿದ್ದಿ ಈಗ ಯಾರಿಂದ ಸುಳ್ಳು ಹೇಳುವದನ್ನು ಬಿಟ್ಟಿದ್ದೀ ಹೇಳುವಿಯಾ.....

ಶ್ಯಾಮು– ಇದೇನು ಸಾರ್ ನೀವು ಕೇಳುವದು.... ಸುಳ್ಳು ಹೇಳಲಿಕ್ಕೆ ಯಾರಿಂದಲೂ ಅಧಿಕಾರ ಪಡೆಯಬೇಕಾಗಿಲ್ಲ..... ಆದರೆ ಸಧ್ಯ ಸುಳ್ಳನ್ನು ದಾನ ರೂಪವಾಗಿ ಕೊಟ್ಟದ್ದಕ್ಕಾಗೇ ಈ ಪರಿ ನನ್ನ ಕೈಗಳಿಗೆ ಹಗ್ಗ ಬಂದಿತು ಇಲ್ಲವಾದರೆ

ಅದೇ ಸುಳ್ಳು ನನ್ನ ವಂಶಕ್ಕೆ ಇದ್ದರೆ ಕೈಗೆ ಹಗ್ಗ ಬರುತ್ತಿದ್ದಿಲ್ಲ. ನಿಮಗೆ ನಾನು ಸಿಗುತ್ತಿದ್ದಿಲ್ಲ ಸಿಕ್ಕರೂ ನಿಮ್ಮ ಆಟ ನನ ಮೇಲೆ ನಡಿತಾನೇ ಇದ್ದಿಲ್ಲ. ಏನು ಮಾಡಲಿ.....

**ಇನಸ್ಪೇಕ್ಟರ್**– ಉಂ ಹೂಂ...... ನಿನ್ನ ಹೆಸರೇನು?

**ಶ್ಯಾಮು**– ನನ್ನ ಹೆಸರು ಶ್ಯಾಮು.....

**ಇನಸ್ಪೇಕ್ಟರ್**– ಶ್ಯಾಮೂ ನೀನು ವಿಚಿತ್ರವ್ಯಕ್ತಿ.... ಇರಲಿ ಸುಳ್ಳು ಯಾರಿಗೆ ದಾನ ಕೊಟ್ಟೆ.....

**ಶ್ಯಾಮು**– ಇಂಥದ್ದೆಲ್ಲ ಬೇರೆಯುವರಿಗೆ ಕೊಟ್ಟಿಲ್ಲಿ ಸಾರ್ ಮನೆಯಲ್ಲಿ ನನ್ನ ಹೆಂಡತಿ ಪೀಡಿಸಿ ಉಡಿ ತುಂಬಿಸಿಕೊಂಡಿದ್ದಾಳೆ ಅದಕ್ಕಾಗೇ ನನಗೆ ತೊಂದರೆ ಇಲ್ಲವಾದರೆ ನಾ.... ಏನ ಹೇಳಲಿ.

**ಇನ**– ನಿನ್ನ ಹೆಂಡತಿಯ ಹೆಸರನ್ನು ಹೇಳಬಲ್ಲೆಯಾ

**ಶ್ಯಾಮು**– ನಿಮ್ಮಂಥವರು ಕೇಳಿದ ಮೇಲೆ ಹೇಳದಿದ್ದರೆ ಹೇಗೆ ಸಾರ್ ನನ್ನ ಹೆಂಡತಿಯ ಹೆಸರು ಗೌರಿ ಸಾರ್.

**ಇನ**– ಶಾಮೂ ಇನ್ನು ಮೇಲೆ ನನ್ನ ಕೈಯಿಂದ ಪಾರಾಗಲಾರೆ. ನಿನ್ನನ್ನು ಜೇಲಿಗೆ ಹಾಕುತ್ತೇನೆ. ಕಠಿಣ ಶಿಕ್ಷೆಯನ್ನು ಕೊಡಿಸುತ್ತೇನೆ. ತಿಳಿಯಿತೇ ಇನ್ನು ಮೇಲೆ ನಿನ್ನ ಗೌರಿಯು ಮುಖವನ್ನು ಸಹ ನೋಡಲಾರೆ.

**ಶ್ಯಾಮು**– (ಘಾಬರಿಯಿಂದ) (ಸ್ವ) ಏನು ಗೌರಿಯ ಮುಖವನ್ನು ನೋಡಲಾರೆನೇ. ನನಗೆ ಜೇಲು. ನನಗೆ ಕಠಿಣ ಶಿಕ್ಷೆ. ಅಯ್ಯೋ ಗೌರೀ ನಿನ್ನ ಮುಖವನ್ನು ಸಹ ನೋಡಲು ಅವಕಾಶವಿಲ್ಲದಿರುವಾಗ ನಾನು ಉಡಿ ತುಂಬಿದ ಸುಳ್ಳನ್ನು ತಿರುಗಿ ತಕ್ಕೊಳ್ಳಲು ಸಹ ಬಾರದಾಯಿತೇ. ನಿನ್ನಿಂದ ಪಡೆಯದೇ ಅದನ್ನು ಉಪಯೋಗಿಸಿದರೆ ಅಂದೇ ನಿನ್ನ ಮರಣವೆಂದು ಹೇಳಿದೆಯಲ್ಲವೇ. ಗೌರೀ ನಾನು ಜೇಲಿಗೆ ಹೋಗುತ್ತೇನೆ. (ಪ್ರ) ಸಾರ್ ಜೇಲಿಗೆ ಒಯ್ಯುವ ಮುನ್ನ ನನ್ನ ಗೌರಿಯನ್ನು ಕಂಡು ಹೋಗಬೇಕೆಂಬ ಬಯಕೆಯಾಗಿದೆ. ಇದಕ್ಕೆ ತಮ್ಮ ಅಪ್ಪಣೆಯಾಗಬೇಕು.

**ಇನ**– ಓಹೋ ಹೆಂಡತಿಯ ನೆನಪಾಯಿತೇ ಸರೆ. (ಸ್ವ) ಇವನಿಂದ ಸುಳ್ಳಿನ ಶಬ್ದವನ್ನು ಉಡಿತುಂಬಿಸಿಕೊಳ್ಳಬೇಕಾದರೆ ಅವಳೆಂಥಾ ಪತಿವ್ರತೆ ಇರಬಹುದು. ಇವ ದುರ್ನಡತೆಗಳನ್ನು ದೂರಿರಿಸಬೇಕೆಂದೇ ಆ

ತಾಯಿಯು ಇವನಿಂದ ವಚನ ತಕ್ಕೊಂಡಿರಬಹುದು. ಇಂಥಾ ಸ್ತ್ರೀಯರೇ ಈ ಭಾರತದ ಆದರ್ಶ ಮಾತೆಯರೆಂದು ಹೇಳಬೇಕಾಗುತ್ತದೆ (ಪ್ರ) ಆಗಲಿ ಶಾಮು ನಿನ್ನ ಹೆಂಡತಿಯನ್ನು ತೋರಿಸಿಕೊಂಡೇ ಜೇಲಿಗೆ ಒಯ್ಯುತ್ತೇನೆ. ನಡೆ ಏ ಪೋಲೀಸ್ ಕಟ್ಟಿದ ಹಗ್ಗವನ್ನು ಬಿಚ್ಚು. ಇವನಿಗೆ ದೊಡ್ಡದೊಂದು ಕಬ್ಬಿಣದ ಕೈ ಬೀಗವನ್ನು ಹಾಕು. (ಮುಗುಳ್ನಗೆಯಿಂದ)

**ಶ್ಯಾಮು–** (ಕೈ ಮುಗಿದು) ಬೇಡ ಬೇಡ ಸಾರ್. ಕಬ್ಬಿಣದ ಕೈಬೀಗ ಸಧ್ಯ ಹಾಕಬೇಡಿರಿ. ನನ್ನ ಹೆಂಡತಿಯನ್ನು ಕಂಡು ಹೊರಗೆ ಬಂದಮೇಲೆ ಬೇಕಾದ ಬೀಗವನ್ನು ಹಾಕಿರಿ. ನಿಮಗೆ ಪುಣ್ಯ ಬರುತ್ತೆ.

**ಇನ–** ಓಹೋ ಹೆಂಡತಿಯ ಮುಂದೆ ನಾಚಿಕೆಯಲ್ಲವೇ. ಆಗಲಿ. ನಡೆ. ಹಾಗೆ ಮಾಡುತ್ತೇನೆ. (ಹೋಗುತ್ತಾನೆ.)

**ಶಾಮುವಿನ ಮನೆ ಶೀನು**

ಗೌರಿಯು ಫೋಟೋ ಪೂಜಿಸುತ್ತ ಪದ ಹಾಡುವದು ಮುಗಿಯುವಾಗ್ಗೆ ಇನಸ್ಪೆಕ್ಟರ್, ಶಾಮು, ಒಬ್ಬ ಪೋಲೀಸ ಇವರೆಲ್ಲ ಬಂದು ನಿಲ್ಲುತ್ತಾರೆ. ಇವರೆಲ್ಲರ ನೋಡಿ

(ಪದ)

ಹೇ ದೇವಿ ನಿನ್ನ ಪೂಜೆ ಮುಗಿದ ಮೇಲೆ ಇದನ್ನೇನು ನೋಡುತ್ತಿರುವೆ. ನನ್ನ ಪತಿಯ ಬಂಧನವು ಪೋಲೀಸರಿಂದ ಹೇ ತಾಯಿ ಇದರಲ್ಲಿ ನೀನೇ ಜಯವನ್ನು ನೀಡು. (ಕೈ ಮುಗಿದು)

**ಶ್ಯಾಮು–** (ದುಃಖದಿಂದ) ಗೌರೀ ನೀನು ಮೋಸ ಮಾಡಿದೆ. ಆ ದಿವ್ಸ ನನ್ನಿಂದ ಸುಳ್ಳಿನ ಶಬ್ದವನ್ನು ಉಡಿತುಂಬಿಸಿಕೊಂಡ ಪರಿಣಾಮವೇ ಇದು. ಸಧ್ಯ ಅದು ನನ್ನ ವಶವಿದ್ದರೆ ನಾನು ಸಿಗುತ್ತಿದ್ದಿಲ್ಲ. ಸಿಕ್ಕರೂ ಶಿಕ್ಷೆಯಾಗುವ ಪ್ರಸಂಗವೇ ಬರುತ್ತಿದ್ದಿಲ್ಲ. ಇದೆಲ್ಲಕ್ಕೂ ನೀನೇ ಕಾರಣಳು. ಗೌರೀ ನೀನೇ ಕಾರಣಳು (ದುಃಖಿಸುವನು)

**ಗೌರಿ–** (ಪತಿಯ ಕೈಗಳೆರಡನ್ನೂ ಹಿಡಿದು ಧೈರ್ಯದಿಂದಲೂ ನಗುಮೊಗದಿಂದಲೂ ಏಕಚಿತ್ತದಿಂದಲೂ) ನಿಜ ನಿಮ್ಮ ಈ ಕೆಟ್ಟ ಪರಿಣಾಮಕ್ಕೆಲ್ಲ ನಾನೇ ಕಾರಣಳು. (ದೃಷ್ಟಿ ತೆಗೆಯದೇ ನುಡಿಯುವಳು–ನಗುಮೊಗದಿಂದ)

**ಶ್ಯಾಮು–** ನನಗೆ ಬಂದ ಪರಿಣಾಮವನ್ನು ನೋಡದೆ ಸುಮ್ಮನೇ ನಿಂತಿರುವಿಯಲ್ಲೇ.

ಆ ಇದೇನು ನಗುವಿಯಲ್ಲೇ ಇನ್ನಾದರೂ ನನ್ನ ವಸ್ತುವನ್ನು ನನಗೆ ಕೊಟ್ಟಲ್ಲಿ ನೋಡು ನನ್ನ ಚಮತ್ಕಾರವನ್ನು ಯಾಕೆ ಮಾತಾಡುವದಿಲ್ಲವೇನೇ. ನನ್ನನ್ನು ನೋಡುವದಿಲ್ಲವೇನೇ, ನಿಜ ನಾನು ಮಾಡಿದ ಕೆಟ್ಟ ಕೃತಿಗಳೆಲ್ಲ ನಿನಗೆ ಈ ಪರಿಣಾಮವನ್ನು ಹೊಂದಿರುವೆಯಲ್ಲವೇ ಹೇಳು. ಗೌರೀ ಯಾವದಕ್ಕೂ ಮಾತಾಡು. ನಿಜ ಜೇಲಿಗೆ ಹೋಗತಕ್ಕವನೊಡನೆ ಮಾತೇನೆಂದು ನೋಡಲಾರೆಯಾ ಗೌರೀ ಗೌರೀ (ಅಳುವನು.)

ಗೌರಿ– ಏನು ಜೇಲು ನಿಮಗೆ ಇಂದು ಜೇಲುವಾಸವೇ ಇದಾದರೂ ನನ್ನಿಂದಲೇ ನಿಮಗೆ ಈ ಕಠಿಣ ಶಿಕ್ಷೆಯಲ್ಲವೇ ಹುಂ ನಿಜ ನಾನು ಮಹ ಪಾಪಿಯು. ಮುಂದೆ ಇಂಥಾ ಘಟನೆಗಳು ಬರುವವೆಂದು ತಿಳಿಯದೇ ನಿಮ್ಮಿಂದ ಉಡಿ ತುಂಬಿಸಿಕೊಂಡೆನಲ್ಲವೇ ನಿಮ್ಮ ಸುಳ್ಳನ್ನು ತುಂಬಿದ ಉಡಿ ಚೆಲ್ಲಲೂ ಬರುವಂತೆಯೂ ಇಲ್ಲ. ಇಡಲು ಬರುವಂತೆಯೂ ಇಲ್ಲ. ಏನು ಮಾಡಲಿ (ಏಕ ದೃಷ್ಟಿಯಿಂದಲೇ ನಗುಮೊಗದಿಂದ ಅನ್ನುವಳು.)

ಇನ– ತಾಯಿ ನಿಮ್ಮ ಪತಿಗಳು ನಿಜವಾಗಿ ಸುಳ್ಳು ಶಬ್ದವನ್ನು ಉಡಿ ತುಂಬಿರುವರೇನಮ್ಮಾ.

ಗೌರಿ– (ಏಕದೃಷ್ಟಿಯಿಂದಲೇ) ನಿಜ ಅಂಣಾ ನಿಜವಾಗಿ ನನಗೆ ಉಡಿ ತುಂಬಿರುವರು.

ಇನ– ಇವರು ಕಳವು ಮಾಡಹತ್ತಿ ಎಷ್ಟು ದಿನಗಳಾದವು ತಾಯಿ

ಗೌರಿ– ನನಗೆ ತಿಳಿಯದಂಣಾ. ನಾನು ಮಾತ್ರ ಇವರ ಮನೆ ಸಮಿಪದಲ್ಲೇ ಬಂದವಳು ಒಂದು ದಿನ ಇವರು ಮಾಡುವ ಕೃತಿಗಳನ್ನು ನೋಡಿ ಅನೇಕ ರೀತಿಯಿಂದ ಸೂಕ್ಷ್ಮವಾಗಿ ಹೇಳಿದೆ. ಕಳವು ಮೋಸ ಲಂಚ ಇವುಗಳಿಗಿಂತಲೂ ಕೆಟ್ಟ ಕೃತಿಗಳು ಮತ್ತಾವೂ ಇಲ್ಲವು. ಇವುಗಳಿಗೆ ಕೈ ಹಾಕಬೇಡಿರಿ ಎಂದು ಪರಿಪರಿಯಾಗಿ ಹೇಳಿದೆ. ಇವರು ಕೇಳಲಿಲ್ಲ. ಈ ಪಾಪ ಕಾರ್ಯಗಳಿಗೆಲ್ಲ ಸೋಪಾನದಂತಿರುವ ಸುಳ್ಳನ್ನು ದಾನವಾಗಿ ಕೇಳಿದೆ. ಆಗ್ಯೆ ಇವರು ಮುಂದಿನ ಆಲೋಚನೆಯನ್ನರಿಯದೆ ದಾನವಾಗಿ ಉಡಿ ತುಂಬಿದರು ಇಷ್ಟೇ.

ಇನ– ಇವರು ಮಾಡತಕ್ಕ ಕಳವಿಗೆ ನೀವು ಸೇರದೆ ಬುದ್ಧಿ ಹೇಳಿದರೂ ಕೇಳಲಿಲ್ಲವೇ ತಾಯೀ

ಗೌರಿ– ಅಂಣಾ ಅದಕ್ಕೆಲ್ಲ ಇಂದಿನ ಕಳವು ಮಾಡಿದ್ದೇ ಸಾಕ್ಷಿಯಾಗಿ ನನ್ನ

ಮುಂದೆ ನಿಂತಿದೆ ಇರಲಿ.... ಅಂಣಾ ನೀವು.... ಇವರನ್ನು ಹಿಡಿದಾಗ್ಯೆ ಇವರ ಬಾಯಿಂದ ಸುಳ್ಳು ಬರಲಿಲ್ಲವೇ....

**ಶಾಮು–** (ದುಃಖ ಮತ್ತು ಸಿಟ್ಟಿನಿಂದ) ಅದು ನನ್ನ ವಶವಿದ್ದರೆ. ಇವರ ಸುದ್ದಿ ಏನು ಹೇಳಲೇ.... ಇಂಥವರು ಹತ್ತುಮಂದಿ ಬಂದು ಕ್ಲಾಸು ಹಾಕಿದರೂ ಸಾಧ್ಯವಿದ್ದಿಲ್ಲ ಇದಕ್ಕೆಲ್ಲ ನೀನೇ ಕಾರಣಳು (ದುಃಖಿಸುವನು)

**ಇನಸ್ಪೇಕ್ಟರ–** ಇಲ್ಲ ತಾಯಿಾ..... ಇದ್ದ ಮಾತು ಇದ್ದಂತೆ ಹೇಳಿ. ಕದ್ದಿರುವವನು ನಾನೇ ಯಂದು ಒಪ್ಪಿದ್ದಾನೆ.... ಇವರ ಮಾತುಗಳು ನನಗೆ ಆಶ್ಚರ್ಯವನ್ನುಂಟು ಮಾಡಿದವು ಅದಕ್ಕಾಗಿ ನಿಮ್ಮನ್ನು ಕಾಣಬೇಕಾಯಿತು....

**ಗೌರಿ–** (ಉಲ್ಲಾಸದಿಂದ) ಆಹಾಹಾ.... ಇದೇನು ನನ್ನ ಪತಿಯು ಸುಳ್ಳು ನುಡಿಯಲಿಲ್ಲವೇ ನನಗೆ ಉಡಿ ತುಂಬಿರುವೆನೆಂದು ನೆನಪಿನಿಂದ ಮಾಡಿದ ಕಳವಿಗೆ ಒಪ್ಪಿದನೇ ಅಹಹಾ ಪತಿದೇವಾ ಇಂದಿಗೆ ನಿಮ್ಮ ನಿರ್ಮಲವಾದ ಮನಸ್ಸನ್ನು ನೋಡಿ ಆನಂದವಾಯಿತು. ನಿಮ್ಮ ಶರೀರ ಪವಿತ್ರವಾಯಿತು..... ಸಧ್ಯ ನೀವು ನನಗೆ ದೇವರಂತೆ ಕಾಣುವಿರಿ..... (ನಮಿಸುವಳು)

**ಶ್ಯಾಮು–** ಹುಂ ಇದೊಂದು ಹುಚ್ಚುತನ..... ನನ್ನ ಜನ್ಮ ಪವಿತ್ರವಂತೆ ಇಂದಿನ ದಿನವೇ ಜೇಲಿಗೆ ಹೋಗುವ ಪಾಪಿಯು ಇವಳಿಗೆ ದೇವರಂತೆ.... ಗೌರೀ ಸುಮ್ಮನೇ ನನ್ನನ್ನು ಯಾಕೆ ಹೊಗಳುವಿಯೇ.... (ದುಃಖಿಸಿ) ನೀನೊಬ್ಬ ಮಹಪಾಪಿಯಂದು ಹೇಳಿ ನನ್ನನ್ನು ಜೇಲಿಗೆ ದಬ್ಬಬಾರದೇನೆ.....

**ಗೌರಿ–** ಹೊಗಳಲು ನಾನು ಶಕ್ರಳಲ್ಲಾ..... ನೀವು ನನಗೆ ಉಡಿ ತುಂಬಿದ ಸುಳ್ಳನ್ನು ಉಪಯೋಗಿಸದೆ ಮಾತಿಗೆ ಕಟ್ಟು ಬಿದ್ದು ಕಟ್ಟಿದ ಹಗ್ಗದಿಂದೇ ಶೀಕ್ಷೆ ಕೊಡಿಸತಕ್ಕವರನ್ನು ಇಲ್ಲಿಯವರೆಗೆ ಕರೆದುಕೊಂಡು ಬಂದಾಗಲೇ ತಿಳಿಯಿತು ನಿಮ್ಮ ನಿಜವಾದ ವ್ಯಕ್ತಿತ್ವ... ಅದಕ್ಕಾಗಿ ಹೊಗಳಿದೆನಲ್ಲದೆ ನೀವು ಮಾಡಿದ ಕಳ್ಳತನಕ್ಕಾಗಿ ಹೊಗಳಲಿಲ್ಲ.... ಇನ್ನಾದರೂ.... ಪಾಲಿಗೆ ಬಂದದ್ದು ಪಂಚಾಮೃತವೆಂದು ಅನುಭವಿಸಿ ಮುಂದೆ... ಇಂಥಾ ಕಾರ್ಯಗಳಿಗೆ ಕೈ ಹಾಕಬೇಡಿರಿ ನಿಮ್ಮ ಕಾಲಿಗೆ ಬಿದ್ದು ಬೇಡಿಕೊಳ್ಳುತ್ತೇನೆ.... (ಕಾಲಿಗೆ ಬೀಳುವಳು.)

ಇನ– (ಸ್ವ) ಅಹಹಾ.... ಏನು ನಿರ್ಮಲ ಹೃದಯವಿದು.... ಮಾನಿನಿಯು ತಾನಾಗಿ ಮಾತಿಗೆ ಕಟ್ಟು ಬಿದ್ದು.... ಮತಿಯಿಲ್ಲದ ಪತಿಗೆ.... ಮಾರ್ಗದರ್ಶಕಳಾದದ್ದು ನೋಡಿದರೆ ಇಂದು ನಾನೇ ಭಾಗ್ಯಶಾಲಿಯು ಇದುವರೆಗೂ ಈ ಭಾರತದಲ್ಲಿ ಆರನ್ನೂ ಕಾಣದಾದೆ ನೀನಲ್ಲವೇ ತಾಯಿ "ಮಾರ್ಗ ತೋರಿದ ಮಡದಿ ನಿಮ್ಮಂಥವರಿಂದಲೇ ಜಗತ್ತು ಬೆಳಗುವದಮ್ಮಾ" (ಪ್ರ).... ಅಮ್ಮಾ ನಿನ್ನ ದರ್ಶನದಿಂದ ಪುನೀತನಾದೆ (ನಮಿಸುವನು)

ಗೌರಿ– ನೋಡಂಣಾ ಮಾನವರಾಗಿ ಹುಟ್ಟಿದಮೇಲೆ ಸುಳ್ಳು ಕಳವು ಮೋಸ ಲಂಚ ಇಂಥಾ ಕೀಳುತನನ ಕಾರ್ಯಗಳಿಗೆ ಕೈಹಾಕದೆ ಇರುವದೇ ಮಾನವತ್ವದ ಭೋಗವು. ಇಂಥಾ ಮಾನವ ಜನ್ಮವನ್ನು ಕೆಡಿಸಿಕೊಂಡು ಅನರ್ಥವಾದ ಕಾರ್ಯಕ್ಕೆ ಕೈಹಾಕಿ ನರಕಕ್ಕೆ ಹೋಗುವ ದುರ್ಮಾರ್ಗಿಗಳ ದರ್ಶನವು ಸಹ ಮಾಡಲಾಗದು. ಇದನ್ನು ಸರ್ವರೂ ಪರಿಪಾಲಿಸಿದಲ್ಲಿ ಅವರೇ ನಿಜವಾದ ದೇವರೆಂದರೂ ಅಡ್ಡಿ ಇಲ್ಲ. ನಮ್ಮವರಾದರೂ ಸುಳ್ಳು ನುಡಿಯದೇ ಮಾಡಿದ ತಪ್ಪಿಗೆ ಒಪ್ಪಿಕೊಂಡರೆಂಬುದು ನಿಮ್ಮ ಬಾಯಿಂದ ಕೇಳಿದ ಮೇಲೆ ನನಗೆ ಪರಮಾನಂದವಾಯಿತು. ಆಗಲಿ ಸಧ್ಯ ಬಂದುದು ಅನುಭೋಗಿಸುವದು ಅವರ ಕರ್ತವ್ಯವಾಗಿದೆ.

ಶಾಮು– ಅಂದರೆ ಈಗ ಮಾತ್ರ ಜೇಲಿಗೆ ಹೋಗಲೇಬೇಕೇನೇ.

ಇನ– ತಾಯಿ ಇದುವರೆಗೆ ನಿನ್ನಿಂದ ಬಂದ ಶಬ್ದಗಳು ನೋಡಿದಲ್ಲಿ ನಿನ್ನ ಪತಿಗಿಂತಲೂ ನಾನು ಮಹಪಾಪಿಯು. ಹೊಟ್ಟೆಪಾಡಿಗಾಗಿ ಈ ಪೋಲೀಸ ಖಾತೆಯಲ್ಲಿ ಸೇರಿ ಅನೇಕ ಜನರಿಂದ ಲಂಚಾ ತಿಂದೆ. ಲಂಚಾ ಕೊಡದವರನ್ನು ಮನಬಂದಂತೆ ಬೆತ್ತದಿಂದ ಥಳಿಸಿದೆ. ಸರ್ಕಾರಕ್ಕೆ ದ್ರೋಹ ಮಾಡಿದೆ. ಇಂಥಾ ನೀಚ ಕೃತ್ಯಗಳನ್ನು ಅಭ್ಯಾಸಮಾಡಬೇಕಾದರೆ ಮಾತ್ರ ಯಾವ ನೌಕರಿಗೆ ಕೈ ಹಾಕದೆ ಈ ಪೋಲೀಸ ಖಾತೆಗೆ ಸೇರಿದರೆ ಮಾತ್ರ ನರಕದ ಬಾಗಿಲು ಯಾರೂ ತೋರಿಸುವದೇ ಬೇಡ. ತಾಯಿ ಇಂಥಾ ಹೀನ ಕೃತ್ಯಗಳಿಗೆಲ್ಲ ತವರು ಮನೆ ಇದ್ದಂಥ ನನಗೆ ನಿನ್ನ ದರ್ಶನ ಮಾತ್ರದಿಂದ ನನ್ನ ಹೃದಯವು ಪರಿಪಕ್ವವಾಗಿ ಜ್ಞಾನಜ್ಯೋತಿಯು ಬೆಳಗಿತು. ಕೂಲಿಯಾದರೂ ಮಾಡಿ ಜೀವಿಸುತ್ತೇನೆ. ಇನ್ನು ಈ ಪೋಲೀಸ ಖಾತೆಗೆ ರಾಜಿನಾಮೆ ಕೊಡುತ್ತೇನೆ. (ಡ್ರೆಸ್ ಬಿಚ್ಚಿ ಪೋಲೀಸ ಕೈಗೆ ಕೊಟ್ಟು, ಕೈ ಮುಗಿದು) ತಾಯಿ ಬರುವೆ.

ನಿಮ್ಮ ಪತಿಯನ್ನು ನಿಮಗೆ ಒಪ್ಪಿಸಿರುವೆ. ಶಾಮೂ ಇನ್ನು ಮೇಲೆ ಜಾಗ್ರತನಾಗು ಬರುತ್ತೇನೆ. (ಹೋಗುವಾಗ್ಯೆ)

**ಶಾಮು**– ನಿಲ್ಲು ಅಂಣಾ ಇನ್ನುಮೇಲೆ ಇಂಥಾ ಹೀನ ಕಾರ್ಯ ಮಾಡಲಾರೆ. ಇದೋ ಈ ವಸ್ತುಗಳನ್ನೆಲ್ಲ ನೀವೇ ತಕ್ಕೊಂಡು ಹೋಗಿರಿ. (ಕೊಡಲು ಹೋಗುವನು)

**ಇನ**– ಛೇ ಛೇ, ಈ ವಸ್ತುಗಳಿಗೆ ಕೈ ಹಾಕಲಾರೆ. ಶಾಮು ತಂದವನಿಗೆ ಮಾತ್ರ ಬಿಡುಗಡೆ ಇಲ್ಲ. ಮತ್ತೊಮ್ಮೆ ಇಂಥಾ ಹೀನ ಕಾರ್ಯಕ್ಕೆ ಕೈ ಹಾಕಬೇಡ ತಿಳಿಯಿತೇ.

**ಗೌರಿ**– ಸ್ವಾಮಿಾ ಇವರನ್ನು ಕೂಡಿಕೊಂಡೇ ಹೋಗಿ. ಅವರ ವಸ್ತುಗಳನ್ನು ಅವರಿಗೆ ಮುಟ್ಟಿಸಿ ತಪ್ಪಿಗೆ ಕ್ಷಮೆ ಕೇಳಿಕೊಳ್ಳಿರಿ. ಅಂದರೆ ನಿಮ್ಮ ಜನ್ಮ ಸಾರ್ಥಕವಾಗುತ್ತದೆ. ಲಗು ಹೋಗಿರಿ.

**ಇನ**– ಅಹಹಾ ಏನು ದಯಾಂತಃಕರುಣ ಹೃದಯುವಿದು. ಇಂಥ ಮಹಿಳೆಯರಿಂದಲೇ ಕರ್ನಾಟಕದ ಏಳಿಗೆಯಲ್ಲವೇ ಬಾ ಶಾಮೂ ಹೋಗೋಣ (ಹೋಗುವನು)

**ಗೌರಿ**– ಹೇಶಾಂಭವೀ ನೀನು ದೊಡ್ಡವಳು ನಿನ್ನನ್ನು ನಂಬಿದ ಭಕ್ತರಿಗೆ ಇಂಬುಗೊಟ್ಟು ಬಂದ ಕಷ್ಟಗಳೆಲ್ಲ ಪರಿಹಾರ ಮಾಡುವ ತಾಯಿಯಂದರೆ ನೀನೇ ಅಲ್ಲವೇ! ಅದಕ್ಕಾಗೇ ಪರಮಾತ್ಮನು ನಿನ್ನನ್ನು ಯಡೆಬಿಡದೆ ತೊಡಿಯ ಮೇಲಿರಿಸಿರುವನು. ಭಕ್ತರಾದರೂ ಶಿವನಿಗಿಂತಲೂ ಮೊದಲೇ ನಿನ್ನ ಹೆಸರನ್ನು ತಕ್ಕೊಂಡು....ಪಾರ್ವತೀ ಪತೇ ಹರಹರ ಮಹಾದೇವ ಯಂದು ಧ್ಯಾನಿಸುವರಮ್ಮಾ.... ಇಂದಿನ ಕೆಟ್ಟ ಪರಿಣಾಮವೆಲ್ಲ ಸೂಕ್ಷ್ಮವಾಗಿಯೇ ಹರಿದು ಹಾಕಿದೆ. ಸದಾ ನಿನ್ನ ಪುತ್ರಿಯ ಮೇಲೆ ಇದೇ ರೀತಿ ಶುಭಾಶಿರ್ವಾದ ಇರಲೆಂದು ಬೇಡಿಕೊಳ್ಳವೇ ತಾಯೇ.... (ನಮಿಸಿ)

**... ಪದ ...**

ಕಾಯೊ ಶ್ರೀ ಪಾರ್ವತೀ ತಾಯೇ ।
ಜಯವ ನೀಡೌ ಮತಿಗೆ ಸರಸ್ವತಿ ॥
ಭಯವಾ ನೀಗಿದ । ಸರಳಾವ್ರತದೀ ।

ತೆರೆ ಬೀಳುತ್ತದೆ

**ರಸ್ತೆ**

(ಇನಸ್ಪೇಕ್ಟರ ಮತ್ತು ಶಾಮು ಇಬ್ಬರೂ ಬರುತ್ತಾರೆ)

**ಇನ–** (ಬರಬರುತ್ತ) ನೋಡು ಶಾಮು ಇನ್ನಾದರೂ ಜಾಣನಾಗು ಇನ್ನು ಮೇಲೆ ಇಂಥಾ ಕಳ್ಳತನಕ್ಕೆ ಮನಸ್ಸು ಮಾಡಬೇಡ.... ನಿನ್ನ ದುರ್ಮಾರ್ಗವೆಲ್ಲ ದೂರ ಮಾಡಿಸು ಮಾರ್ಗ ತೋರಿಸುವ ಸುದತಿಯೇ ನಿನ್ನ ಸತಿ ನಿನಗೆ ಮಾರ್ಗದರ್ಶಕಳಾದಳು ಇದನ್ನು ಮರೆಯಬೇಡ. ಆ ಮಾತೆಯ ನೀತಿ ಮಾತುಗಳನ್ನು ಕೇಳಿ ನನ್ನ ಜನ್ಮವು ಸಹ ಪವಿತ್ರವಾಯಿತು. ಇದ್ದರೆ ಇರಬೇಕು ಇಂಥ ಸತಿಯರು. ಇಂಥವರಿದ್ದ ಸ್ಥಲವೇ ಪಾವನವಾಗುತ್ತದೆಂದು ತಿಳಿ.

**ಶಾಮು–** ತಿಳಿದೆ ಯಚ್ಚರಾದೆಮರೆತು ನಾನೇನಾದರೂ ನಿಮ್ಮ ಮುಂದೆ ಸುಳ್ಳು ಹೇಳಿದ್ದರೆ ಇವಳು ಜೀವದಿಂದ ಉಳಿಯುತ್ತಿರಲಿಲ್ಲ.... ಅದಕ್ಕಾಗೇ ನಿಜವನ್ನು ಹೇಳಿದೆ ಇನ್ನು ಮೇಲೆ ಈ ಕಳ್ಳತನಕ್ಕೆ ಕೈ ಹಾಕಿದರೆ ಅಂದೇ ನನ್ನ ಕೈಗೆ ಕಬ್ಬಿಣದ ಬೀಗವನ್ನು ಹಾಕಿ ಜೇಲಿಗೆ ಸೇರಿಸಿರಿ. ಇನಸ್ಪೇಕ್ಟರರೇ ಇಂಥಾ ಮಹಾ ಪಾಪ ಕೃತ್ಯವನ್ನು ಯಂದೂ ಮಾಡಲಾರೆ....

**ಇನ–** ಶಾಮು ಇನ್ನು ಮೇಲೆ ನನಗೆ ಇನಸ್ಪೇಕ್ಟರನೆಂದು ಕರೆಯಬೇಡ ನನ್ನ ಹೆಸರು ಸಿದ್ಧಂಣನೆಂದು ಕರೆ ಇನ್ನು ಆ ಮನೆ ಎಲ್ಲಿದೆ ಹೋಗಿ ಈ ಸಾಮಾನು ಮುಟ್ಟಿಸುವ ನಡೆ.... (ಹೋಗುತ್ತಾರೆ)

===***=====***====

## ಶ್ರೀಧರರ ಮನೆ

## ಪ್ರವೇಶ ೯

ಶಾಮಲಾ ಒಬ್ಬಳೇ ಇರತ್ತಾಳೆ ಪೇಪರ ಓದುತ್ತ ಸಂಣ ದನಿಯಲ್ಲಿ ಗುನು ಗುನು ಪದ ಹಾಡುತ್ತ

**ಶಾಮಲಾ–** ಏನಿದು ತಿಂಗಳಾದರೂ ನಮ್ಮ ರಾಮುವಿನ ದರ್ಶನವೇ ಆಗಲಿಲ್ಲ ನಿಜವಾಗಿ ಆತನು ನನ್ನನ್ನು ತಿರಸ್ಕಾರ ಮಾಡಿರಬಹುದೇ.... ಅಥವಾ ನನ್ನೊಡನೆ ಚೇಷ್ಟೆಯೇನಾದರೂ ಮಾಡುತ್ತಿರಬಹುದೇ ಒಂದು ವೇಳೆ ಈತನನ್ನೇ ಲಗ್ನವಾಗುತ್ತೇನೆಂದು ಅಪ್ಪನಿಗೆ ನಾನೇ ತಿಳಿಸಿದಲ್ಲಿ ಅಪ್ಪನು ನಿರಾಕರಿಸಬಹುದೇ ಇನ್ನು ಮೇಲೆ ಸುಮ್ಮ ಕೂತರೆ ಫಲವಿಲ್ಲ. ಅಮ್ಮನಿಗೆ ಈ ವಿಷಯವನ್ನು ತಿಳಿಸಿದರೆ ಅಪ್ಪನಿಗೆ ತಾನೇ ತಿಳಿಸುತ್ತಾಳೆ. ಅಪ್ಪನಂತೂ ಮೇಲೆ ಮಲಗಿದ್ದಾನೆ. ಆತನು ಏಳುವದರೊಳಗಾಗಿ ಕಾಫಿ ತಯಾರ ಮಾಡುತ್ತೇನೆ. (ಒಳಗೆ ಹೋಗುವದರಲ್ಲಿ ರಾಮು ಬರುತ್ತಾನೆ ರಾಮು ಸುತ್ತುಮುತ್ತು ನೋಡುತ್ತ ಬಂದು ಖುರ್ಚಿಯ ಮೇಲೆ ಕೂಡುತ್ತಾನೆ ಹಿಂದಿನಿಂದ ಶಾಮಲಾ ಬಂದು ಮೆಲ್ಲಗೆ ಕಿವಿಯಲ್ಲಿ.....)

**ಶಾಮಲಾ–** ತಾವು ಯಾವಾಗ ಬಂದಿರಿ (ಅನ್ನುತ್ತಾಳೆ.)

**ರಾಮು–** ಇದೇ ಈಗ ಬಂದೆ (ಮೆಲ್ಲನೆ ಹೇಳಿ) ಅಪ್ಪನೆಲ್ಲಿ .... (ಕೈಸೊನ್ನೆ ಮಾಡುವನು)

**ಶಾಮಲಾ–** (ಕೈಸೊನ್ನೆ ಮಾಡಿ ಮೇಲಕ್ಕೆ ತೋರಿಸುವಳು) ಅಮ್ಮನಂತೂ ಮನೆಯಲ್ಲಿಲ್ಲ ಇಂಥಾ ಸಮಯದಲ್ಲಿ ನೀವು ಮಾತ್ರ ನನ್ನ ಕೈಯಲ್ಲಿ ಸಿಕ್ಕಿರಿ ... (ನಗುವಳು)

**ರಾಮು–** ಆಹಾ ಇದೇನ ನಗು ಹುಶ್ಯ.... ಮೆಲ್ಲನೆ ನಗು.... ಯಾಕೆ ನಿನ್ನ ಕೈಯಲ್ಲಿ ಸಿಕ್ಕರೇನು ಸಿಗದಿದ್ದರೇನು ನಿಮ್ಮಪ್ಪನಂತೂ ನಿನಗೆ ದೊಡ್ಡ ಶ್ರೀಮಂತ ವರನನ್ನು ಹುಡುಕಲಿಕ್ಕೆ ಹೇಳಿದ್ದಾನೆ. ಶ್ರೀಮಂತನೂ ವಿದ್ಯಾವಂತನೂ ಸಿಕ್ಕ ಮೇಲೆ ಆಗ ನಿನ್ನನ್ನು ಕಾಣಬೇಕೆಂದರೆ ಟಿಕೀಟ ತಗಿಸಬೇಕಾಗುತ್ತದೆ

ಟಿಕೀಟ... ಅದಕ್ಕಾಗಿ ಈಗಲೇ ಮತ್ತೊಮ್ಮೆ ನಿನ್ನ ಮುಖ ನೋಡಿ ಹೋಗಬೇಕೆಂದು ಬಂದೆ.... ಇದೊಂದು ಒಳ್ಳೆ ಸಮಯ ನಾನು ಬಂದಾಗ್ಯೆ ನೀನು ಮನೆಯಲ್ಲಿದ್ದದ್ದು...

**ಶಾಮಲಾ–** ಅಂದರೆ ಈ ವಳಗಾಗಿ ನೀವು ಬಂದಾಗ್ಯೆ ನಾನು ಮನೆಯಲ್ಲಿರಲಿಲ್ಲವೇ....

ರಾಮು– ಇಲ್ಲವೆಂದೇ ಹೇಳಿದ್ದು.... ನಾಲ್ಕಾರು ಸಲ ಬಂದರೂ ನಿನ್ನ ದರ್ಶನವೇ ಇಲ್ಲ.... ದೊಡ್ಡ ಆಫೀಸರನ ಪತ್ನಿಯಾಗತಕ್ಕವಳು ಈಗಲೇ ಮಾಯವಾದಳಲ್ಲಾ ಎಂದು ಚಿಂತಿಸಿ ಹಾಗೆ ಹೋಗಿ ಬಿಟ್ಟೆ....

**ಶಾಮಲಾ–** ಹುಂ ನಾನು ಒಪ್ಪಿದರಲ್ಲವೇ ಆಫೀಸರ ಪತ್ನಿಯಾಗುವದು ಇದೊಂದು ನಿಮ್ಮ ಭ್ರಮೆ.....

ರಾಮು– ನನ್ನ ಭ್ರಮೆಯೋ ಅಥವಾ ನಿಮ್ಮಪ್ಪನ ಭ್ರಮೆಯೋ ಯಾವದೂ ತಿಳಿಯದು.....

**ಶಾಮಲಾ–**ನನಗೆ ಮಾತ್ರ ಚನ್ನಾಗಿ ತಿಳಿದಿದೆ ನೀವು ಅನ್ನುವದೇ ನಿಜವೆಂದು ಯಾಕಂದರೆ ನೀವಾದರೂ ಬಿ.ಎ. ವರೆಗೆ ಓದಿದ್ದೀರಿ.... ಇಂದಿಲ್ಲ ನಾಳೆ ಆಫೀಸರ್ ಆಗೇ ಆಗುತ್ತೀರಿ. ಅಂದಮೇಲೆ ನಿಮ್ಮ ಮಾತಿನಂತೆ ಆಗ ಆಫೀಸರ ಪತ್ನಿಯಾಗುವದೇ ಖಂಡಿತವು.....

ರಾಮು– ಹುಂ..... ಬಾಯಾರಿಕೆಯುಳ್ಳ ಮನುಷ್ಯನು ಮೃಗಜಲವನ್ನು ನೋಡಿ ತೃಪ್ತಿಯಾದಂತೆ ನೀನಾದರೂ ತೃಪ್ತಿಯಾಗಿರುವೆಯಲ್ಲವೇ. ಇದೇ ಮಾತನ್ನು ನಿಮ್ಮಪ್ಪನು ಕೇಳಿದರೆ ನಮ್ಮಿಬ್ಬರ ಪರಿಣಾಮವೇನಾಗುತ್ತದೆಂಬುದನ್ನು ತಿಳಿದಿರುವೆಯಾ ಸಾಕು ಸುಮ್ಮನಿರು.....

**ಶಾಮಲಾ–** ನನ್ನ ಪರಿಣಾಮವೇನಾಗುತ್ತದೆ ನೀನೊಲಿದರೆ ನಾರಿಯಾಗಿ ಬಾಳುತ್ತೇನೆ. ನೀನೊಲಿಯದಿದ್ದರೆ ಮಾತ್ರ ಮಾರಿಯಾಗುತ್ತೇನೆಂಬುದನ್ನು ಮರೆಯಬೇಡ ತಿಳಿಯಿತೇ.

ರಾಮು– ಹುಶ್ಯ.....ಮೆಲ್ಲಗೆ ಮಾತಾಡು. ಅಪ್ಪನೇನಾದರೂ ಕೇಳಿದರೆ ಮುಂದಾಗುವ ಗತಿ ಇಂದೇ ಆಗಿ ಹೋದೀತು. ಸುಮ್ಮನಿರು.

**ಶಾಮಲಾ–** ನಿಜ. ಇಂದೇ ಅಮ್ಮನಿಂದ ಸಾಕಷ್ಟು ಛೀ ಮಾಡಿಸುತ್ತೇನೆ. ತಡೆ ಅಮ್ಮನು ಬರಲಿ.

ರಾಮು– ಬರಲಿ. ತಪ್ಪೇನಿದೆ. ನನ್ನಿಂದ ಆದದ್ದಾದರೂ ಏನಿದೆ ನೋಡೋಣ.

ಶಾಮು– ಮತ್ತೇನಾಗಬೇಕು. ಮನೆಯಿಂದ ಅಪ್ಪನನ್ನು ಕರೆದುಕೊಂಡು ಹೋಗಿ ಮತ್ತೊಬ್ಬಳ ಸ್ನೇಹ ಮಾಡಿಸುವ ನಿಮ್ಮಂಥವರಿಗೆ ಅಮ್ಮನು ಏನು ಮಾಡುತ್ತಾಳೆಂಬದನ್ನು ನಾನೇನು ಹೇಳಲಿ. ಬರಲಿ. ಅಮ್ಮನ ಮುಂದೆ ಹೇಳಿ ಬಿಡುತ್ತೇನೆ.

ಶ್ರೀಧರ– (ಬರಬರುತ್ತ ಆಕಳಿಸುತ್ತ) ಏನಮ್ಮಾ ಅದು ಅಮ್ಮನ ಮುಂದೆ ಹೇಳೋದು. ಓಹೋ ರಾಮು ಯಾವಾಗ ಬಂದ್ಯೋ. (ಶಾಮಲಾ ನಾಚಿ ವತ್ತಟ್ಟಿಗೆ ನಿಲ್ಲುವಳು)

ರಾಮು– ನಾ ಇದೇ ಈಗ ತಾನೇ ಬಂದೆ, ಶಾಮಲಾದೇವಿ. ನನ್ನ ಮೇಲೆ ಕೋಪ ಮಾಡಹತ್ತಿದ್ದಾಳೆ. ನೀವೇ ಹೇಳಿಲ್ಲವೆ ಇವರಿಗೆ ವರನನು ಶೋಧಿಸಲಿಕ್ಕೆ

ಶ್ರೀಧರ– ನಿಜ ನಾನೇ ಹೇಳಿದ್ದು. ಈಗೇನಾಯಿತು.

ರಾಮು– ಕೇಳಿದೇನಮ್ಮಾ ಈಗಲಾದರೂ ತಿಳಿಯಿತೇ. ಅಮ್ಮನ್ನ ಮುಂದೆ ಹೇಳಿ ಛೀ ಮಾಡಿಸತಕ್ಕ ಕೆಲ್ಸ ಮಾಡಿದ್ದರಲ್ಲವೇ ನೀನನ್ನುವದು.

ಶ್ರೀಧರ– ಇರಲಿ ಹೋಗಮ್ಮಾ. ಸ್ವಲ್ಪ ಕಾಫಿ ಮಾಡಿ ಕುಡಿಸು ಹೋಗುತ್ತೇವೆ. (ಹೋಗುವಳು) ಅಲ್ಲೋ ರಾಮು ನಿಮ್ಮ ಕಾಮಾಕ್ಷಿ ತೋಟಕ್ಕೆ ಬರುವಳೇನೋ ಇಂದು.

ರಾಮು– ಬರುವಳೇ ಎಂದು ಕೇಳುವಿರಲ್ಲಾ ಆಗಲೆ ಬಂದಿದ್ದಾಳೆ ಎಂದು ತಿಳಿಯಿರಿ. ಸಧ್ಯ ೧ ಘಂಟೆಯಾಗಿರಬೇಕು. ನಡೀರಿ ಲಗು ಹೋಗೋಣ. (ಶಾಮಲಾ ಕಾಫಿ ತಂದು ಕೊಡುತ್ತಾಳೆ.)

(ಇಬ್ಬರೂ ಕುಡಿದು)

ಶ್ರೀಧರ– ಇದೋ ಮೂರು ಘಂಟೆಯಾಯಿತು. ನಡೆಹೋಗೋಣ. (ಹೋಗುತ್ತಾರೆ. ಶಾಮಲಾ ಇವರನ್ನು ನೋಡುತ್ತ ಒಳಗೆ ಹೋಗುತ್ತಾಳೆ ಸೀತಮ್ಮ ಬರುತ್ತಾಳೆ.)

ಸೀತಮ್ಮ– ಶಾಮಲಾ ಶಾಮಲಾ (ಕರೆಯುತ್ತಾಳೆ)

ಶಾಮಲಾ– (ಕೈಯ್ಯಲ್ಲಿ ಕಾಫಿ ಗ್ಲಾಸ ಹಿಡಿದುಕೊಂಡೇ (ಬರುತ್ತ) ಬಂದೆ ಅಮ್ಮಾ

ಬಂದೆ. ಅಮ್ಮಾ ಕಾಫಿ ತರುತ್ತೇನೆ ನೀನು ಕುಡಿ. (ಹೋಗಿ ತಂದುಕೊಡುತ್ತಾಳೆ ಕುಡಿಯುತ್ತ ಕೂತು ಅಪ್ಪನೂ ಇದೇ ಈಗ ಕಾಫಿ ಕುಡಿದೇ ರಾಮುವಿನೊಡನೆ ಹೊರಗೆ ಹೋದರು.

**ಸೀತಮ್ಮ**– ಏನೂ ರಾಮು ಬಂದಿದ್ದನೇ, ಸರೆ ಶಾಮಲಾ ಗೌರಿ ತುಂಬಾ ಗರ್ಭಿಣಿಯಂತೆ. ಸಧ್ಯ ದಿನದಲ್ಲಿದೆ ಎಂದು ಆ ಓಣಿಯವರಿಂದ ಕೇಳಿದೆ. ನಾವು ಹೋಗಿ ಬಂದು ಸಾಧಾರಣ ೫ ತಿಂಗಳಾಗಿರಬೇಕು. ನಾಳೆ ಹೋಗಿ ಬರೋಣವೇನೇ.

**ಶಾಮಲಾ**– ಹೋಗೋಣ ನಡಿ ಅಮ್ಮಾ ಅಂದರೆ ಬರೇ ಕೈಯಿಂದ ಹೋಗುವದೇ.

**ಸೀತಮ್ಮ**– ಛೇ ಛೇ ಬುತ್ತಿ ಮಾಡಿಕೊಂಡು ಹೋಗಿ ಅವಳಿಗೆ ಕೊಟ್ಟುಬರೋಣ.

**ಶಾಮಲಾ**– ಹಾಗಾದರೆ ಸಜ್ಜಿ ರೊಟ್ಟಿ, ನಾಲ್ಕು ದಿನಸಿನ ಪಲ್ಲೆ. ಕಲಸನ್ನ ಮತ್ತೆ ಯಾವದಾದರೂ ಸಿಹಿ ಮಾಡಿಕೊಂಡು ಹೋದರೆ ನೆಟ್ಟಗಿರುತ್ತೆ ಏನ ಮಾಡಲಿ ಹೇಳು.

**ಸೀತಮ್ಮ**– ಸಿಹಿ ಅಂದರೆ..... ಕರಜೀಕಾಯಿ ಮಾಡಿದರೆ ಚನ್ನಾಗಿರುತ್ತೇಂದು ಮಾಡುವಿಯಾ....

**ಶಾಮಲಾ**– ಓಹೋ ಇಂದೇ ಮಾಡಿ ಬಿಡುತ್ತೇನೆ ನಾಳೆ ಮಾಡಲು ಆಗೋದಿಲ್ಲ.

**ಸೀತಮ್ಮ**– ಇದರ ಮೇಲೆ ಹಪ್ಪಳ ಸೊಂಡಿಗಿ ಇವೆಲ್ಲ ತಗೆಂಡೆ ಹೊಗೋಣ ನಡೆ ಲಗು ಹೋಗಿ ಮೈಲಿಗಿ ಅರಿಬಿಯನ್ನು ತೊಳೆದುಕೊಂಡು ಬಾ ರಾತ್ರಿಯಲ್ಲಾ ಮಾಡೇ ಬಿಡೋಣ.

**ಶಾಮಲಾ**– ಸರೆ ಹಾಗಾದರೆ ಕೆರೆಗೆ ಹೋಗಿ ಲಗು ಬರುತ್ತೇನೆ. (ಎಂದು ಒಳಗೆ ಹೋಗುತ್ತಾನೆ.)

===**=====**===

## ಪ್ರವೇಶ ೧೦

### ತೆರೆ ಬೀಳುತ್ತದೆ ತೋಟದ ಶೀನು......

(ಒಬ್ಬ ಹೆಂಣು ಬಾಲೆ ಕೂತಿರುತ್ತಾಳೆ. ಅವಳೇ ಕಾಮಾಕ್ಷಿ)

(ಬಿಳೇ ಚೀಟಿನ ಶೀರೆ ಉಟ್ಟಿರುತ್ತಾಳೆ. ರಾಮು ಶ್ರೀಧರ ಬರುತ್ತಾರೆ.)

**ರಾಮು–** ಅದೋ.... ನಮಗಿಂತಲೂ ಮುಂಚೆ ಬಂದಿದ್ದಾಳೆ ಅದೋ ನೋಡು ಚನ್ನಾಗಿ ನೋಡು.

**ಶ್ರೀಧರ–** (ನೋಡಿ) ಅಲ್ಲೋ ರಾಮು ಇವಳು ನಿಜವಾಗಿ ಹರಿಜನ ಹುಡಿಗಿಯೇ ಯಂಥಾ ರೂಪು ಯಂಥಾ ಉಡುಗರೆ.... ರಾಮು ನೀನೇ ಮೊದಲು ಹೋಗಿ ಅವಳಿಗೆ ಎಲ್ಲಾ ಸರಿಯಾಗಿ ತಿಳಿಸು....

**ರಾಮು–** ಆಗಲೇ ಸರಿಯಾಗಿ ಹೇಳಿದ್ದೇನೆ. ಭಯವೇಕೆ ಹೋಗು ನಾನು ಇಲ್ಲೇ ಮರೆಯಲ್ಲಿರುವೆ ಹೋಗು (ದಬ್ಬುವನು) ಅಂಜುತ್ತ ಮೆಲ್ಲನೆ ಹೋಗಿ ಹಿಂದೆ ನಿಂತು ಮಾತಾಡಿಸುತ್ತಾನೆ.

**ಶ್ರೀಧರ–** ನೀನು.... ಬಂದು.... ಬಹಳ ಹೊತ್ತಾಯಿತೇನು....

**ಕಾಮಾಕ್ಷಿ–** ಊಂ.... (ಮುಸುಕು ಹಾಕುವಳು)

**ಶ್ರೀಧರ–** ಶ್ರೀಧರ ಅಲ್ಲಾ ನಾನು. ನಿನ್ನ ದಾರಿ ಎಂಟು ದಿವಸದಿಂದ ಕಾದೆ ಇಂದು ಬಂದೆಯಾ ಕಾಮಾಕ್ಷಿ (ಹೆಗಲು ಮೇಲೆ ಕೈ ಹಾಕುವನು.)

**ಕಾಮಾಕ್ಷಿ–** ಬಿಡಿ ಬಿಡಿ ನಾನೊಲ್ಲೆ ಬಿಡಿ ಮುಂದಕ್ಕೆ (ಸರಿಯುತ್ತಾಳೆ)

**ಶ್ರೀಧರ–** ಸರಿಯ ಬೇಡೇ ಕಾಮಾಕ್ಷೀ.... ನಿನಗೆ ವಂದು ಮಾತು ಕೇಳಬೇಕೆಂದು ಮಾಡಿದ್ದೇನೆ ಕೇಳಲೇನೇ.....

**ಕಾಮಾಕ್ಷಿ–** ಕೇಳಿ.... ಏನದು....

**ಶ್ರೀಧರ–** ಏನೂ ಇಲ್ಲ ನನ್ನ ನಿನ್ನ ಲಗ್ನದಕಿಂತಲೂ ಹಾಗೆ ಕೂಡಿರುವದು ಮೇಲಲ್ಲವೇ.

**ಕಾಮಾಕ್ಷಿ**– ಊಂ..... ನಾನೊಲ್ಲೆ ಸೂಳಿಯಾಗಿ ಬಾಳಲೇ....

**ಶ್ರೀಧರ**– ಅಲ್ಲೇ ಲಗ್ನದ ಪ್ರೇಮಕ್ಕಿಂತಲೂ ಕೂಡಿಕೊಂಡಿರೋ ಪ್ರೇಮ ಹೆಚ್ಚಿನದು ನಿನಗೆ ತಿಳಿಯದು ಮೇಲಾಗಿ ನಿನಗೆ ಯಾವ ಕೊರತೆಯೂ ಬಾರದಂತೆ ನೋಡಿಕೊಳ್ಳುವೆ ಕೇಳು, ನಿನಗೆ ಏನು ಬೇಕಾಗಿದೆ ಹೇಳು.

**ಕಾಮಾಕ್ಷಿ**– ಹಾಗಾದರೆ ನಾನು ಕೇಳಿದ್ದೆಲ್ಲಾ ಕೊಡುವಿರಾ, ನೋಡಿ ತಪ್ಪಬಾರದು.

**ಶ್ರೀಧರ**– ನಾನು ವಚನ ಕೊಟ್ಟಮೇಲೆ ತಪ್ಪುವದಿಲ್ಲ ಬೇಕಾದದ್ದು ಕೇಳು......

**ಕಾಮಾಕ್ಷಿ**– ಹಾಗಾದರೆ ಈ ತೋಟವನ್ನು ನನ್ನ ಹೆಸರಿಲೆ ರಜಿಷ್ಟರ ಮಾಡಿಸಬೇಕು.

**ಶ್ರೀಧರ**– ಇಷ್ಟೆ ತಾನೇ.... ಮತ್ತೇನಾಗಬೇಕು ಹೇಳು....

**ಕಾಮಾಕ್ಷಿ**– ಇಲ್ಲಿ ವಂದು ಮನೆಯನ್ನು ಕಟ್ಟಿಸಬೇಕು.

**ಶ್ರೀಧರ**– ಸರೆ ನಾನೂ ನೀನೂ ಇರಲಿಕ್ಕೆ ಇಲ್ಲಿ ವಂದು ಮನೆ ಬೇಕೇ ಬೇಕು.... ಮತ್ತೇನು.....

**ಕಾಮಾಕ್ಷಿ**– ಸರೆ ತಿಳಿಯಿತು ಕೇಳಿದ್ದೆಲ್ಲವನ್ನು ಬಾಯಿಯಿಂದಲೇ ಇದ್ದ ಹಾಗಿದೆ ಅದೆಲ್ಲ ಬೇಕಿಲ್ಲ ಇಂದೇ ಕಾಗದದಲ್ಲಿ ವಚನ ಪತ್ರವಾಗಲೇ ಬೇಕು ಮತ್ತು ನನ್ನನ್ನು ಯಂದೂ ಕೈಬಿಡಲಾರೆನೆಂದು ಬರೆದು ಸಹಿ ಹಾಕಿ ಕೊಡಬೇಕು..... ಇಲ್ಲವಾದರೆ ದೂರ ಸರಿದು ನಿಲ್ಲಬೇಕು ಇಷ್ಟೇ.

**ಶ್ರೀಧರ**– ಇದು ಮಾತ್ರ ಆಗದು.... ಯಾಕೆಂದರೆ ನೀನು ಕೇಳಿದ್ದೆಲ್ಲ ಕೊಡಲಾರದ ಷಂಡನಲ್ಲಾ ತಿಳಿಯಿತೇ ಈಗಾಡಿದ ಮಾತು ಮತ್ತೊಮ್ಮೆ ಆಡದಿರು ಕಾಮಾಕ್ಷೀ.... ಆಡದಿರು.....

**ಕಾಮಾಕ್ಷಿ**– ಗಂಡಸರು ಮಹಾ ಮೋಸಗಾರರು ತಮ್ಮ ಕಾಮ ವಿಲಾಸ ತೀರುವವರೆಗೆ ಏನೇನೋ ಮಾತಾಡಿ ಅಂತ್ಯಕ್ಕೆ ತಮ್ಮ ಕಪಟ ಜಾಲವನ್ನೇ ಹೂಡುತ್ತಾರೆ..... ಇದೆಲ್ಲವನ್ನೂ ನೋಡಿದ್ದೇನೆ.

**ಶ್ರೀಧರ**– ಮತ್ತೊಬ್ಬರ ಸುದ್ದಿಯನ್ನು ನನ್ನೆದುರು ಮಾತಾಡದಿರು ಬೇಕಾದರೆ ರಾಮುನನ್ನು ಕೇಳು ನನ್ನ ವಿಷಯಲ್ಲಾ ತಿಳಿಯುತ್ತದೆ.....

**ಕಾಮಾಕ್ಷಿ**– ಆರನ್ನೂ ಕೇಳುವ ಅವಶ್ಯವಿಲ್ಲ.... ಮುಖ್ಯವಾಗಿ ನಿಮ್ಮಿಂದ ಬೇಕಾಗಿದೆ ವಚನಪತ್ರ ಇಷ್ಟೇ ಯಾವ ಟೈಮಿಗೆ ನನ್ನ ಕೈಯಲ್ಲಿ ಕರಾರ ಪತ್ರ ಬರುವದೋ ಅದೇ ಕಾಲಕ್ಕೇನೆ ಈ ಕಾಮಾಕ್ಷಿ ನಿಮ್ಮ ಸ್ವಾಧೀನವೆಂದು ತಿಳಿಯಿರಿ ಇಲ್ಲವಾದರೆ ಅಪ್ಪಣೆ ಕೊಡಿರಿ....

**ಶ್ರೀಧರ**– ಓಹೋ ಈಗಲೇ ಬರ್ಸಿಕೊಡುತ್ತೇನೆ ರಾಮೂ. ರಾಮೂ.....

**ರಾಮು**– (ದೂರದಿಂದಲೇ) ಬಂದೇ ಬಂದೆ..... (ಬಂದು) ಏನು ಚೇರಮನ್ರೇ....

**ಶ್ರೀಧರ**– ಅಲ್ಲೋ ವಚನಪತ್ರ ಆಗುವವರೆಗೆ ತನ್ನನ್ನು ಮುಟ್ಟಲಾಗದಂತೆ ಹೇಗೆ ಮಾಡೋಣ.

**ರಾಮು**– ಇರಲಿ ಬಿಡ್ರಿ ಅದೇನು ಮಹಾಕೆಲಸ ಈಗಲೇ ಬರೆದು ಕೊಡುತ್ತೇನೆ ಸಹಿ ಮಾಡಿ.

ವಗೆದು ಬಿಡು ಅವಳ ಮುಖಕ್ಕೆ.... (ಬರೆಯುವನು ಸಹಿ ಮಾಡುವನು)

(ಇಲ್ಲಿ ಕಾಮಾಕ್ಷಿ ಟ್ರಾನ್ಸಫರ್ ಆಗುತ್ತಾಳೆ) (ಕರೇ ಮೋತಿ ಕೋರೆ ಹಲ್ಲು–ಕರ್ಕಶ ಶಬ್ದದಿಂದಿರಬೇಕು. ಮೋತಿ ಮುಚ್ಚಿಕೊಂಡೇ ಕೂತಿರುತ್ತಾಳೆ)

**ಶ್ರೀಧರ**– ಇದೋ ಕಾಮಾಕ್ಷಿ ನೀನು ಕೇಳಿದಂತೆ ಇದರಲ್ಲಿ ಯಲ್ಲಾ ಬರಿಸಿದ್ದೇನೆ ನೋಡು ತಗೋ. (ಕೈಯ್ಯಲ್ಲಿ ಕೊಡುವನು–ಓದಿಕೊಳ್ಳುವಳು)

**ಕಾಮಾಕ್ಷಿ**– (ದೇಶಾವರಿ ನಗುವಿನಿಂದ) ನಿಮ್ಮಲ್ಲಿ ಮನಸೋತು ಬಂದ ನಾನು ನಿಮ್ಮ ಗುಣ ಪರೀಕ್ಷೆಗೋಸುಗ ವಚನ ಪತ್ರವನ್ನು ಕೇಳಿದೆನೆ ಹೊರ್ತು ಯಾರಿಗೆ ಬೇಕಾಗಿದೆ ಈ ಕಾಗದ ನನಗೆ ಬೇಕಾದದ್ದು ನೀವು.... ಇರಲಿ ಹೀಗೆಲ್ಲ ಬರ್ಸಿಕೊಂಡಳೆಂದು ನೀವು ಏನೂ ತಿಳಿಯದಿದ್ದರೆ ಮಾತ್ರ ಇಲ್ಲವಾದರೆ ತಗೊಳ್ಳಿ ನಾನು ನಿಮ್ಮವಳಾದ ಮೇಲೆ ಇದಾದರೂ ನಿಮ್ಮದಲ್ಲವೇ....

**ಶ್ರೀಧರ**– ನಿಜ ನಿಜ.... ಅದೇನೂ ಇಲ್ಲ. ನೀನು ಮಾತ್ರ ನನ್ನವಳಾದರೆ. ಸಾಕು. ಏನೂ ತಿಳಿದು ಕೊಳ್ಳಲಾರೆ. ಕಾಮಾಕ್ಷಿ, ಇನ್ನಾದರೂ ಸಮೀಪ ಬರುವದಿಲ್ಲವೇ.... ನೋಡು. ನನ್ನ ನಿನ್ನ ಪ್ರೇಮದ ಮಿಲನ ನೀನು ಎಂದೂಮರೆಯವಂತಿಲ್ಲ– ಮತ್ತು ನನ್ನಂಥವರನ್ನು ನೀನು ಎಂದೂ ನೋಡಿಲ್ಲವೆಂದು ತಿಳಿ.

**ಕಾಮಾಕ್ಷಿ**– ನಿಜ ನೀವಾದರೂ ಹಾಗೆಯೇ ತಿಳಿದು ಕೊಳ್ಳಿ. ಇದುವರೆಗೆ. ನನ್ನಂಥವಳ ಪ್ರೇಮ ಪಾಶವನ್ನು ಎಂದೂ ಹೊಂದಿಲ್ಲವೆಂದು ಖಂಡಿತವಾಗಿ ತಿಳಿದುಕೊಳ್ಳಿ.....

**ಶ್ರೀಧರ**– ಅಲ್ಲವೆಂದು ಹೇಳಿದೆನೇ. ಬಾ ಕಾಮಾಕ್ಷಿ ಇನ್ನಾದರೂ. ತಗೆ. ಈ ಮುಸುಕನ್ನು. (ಸೆರಗು ಯಳೆಯುವನು. ಮುಖ. ಕಾಣುತ್ತದೆ. ಕಪ್ಪು ಮುಖ.. ಕೋರೆಹಲ್ಲು ಬಿಳೇಕಂಣು ಇವೆಲ್ಲ ನೋಡಿ ಚಿಟ್ಟನೇ ಚೀರಿ

ಶ್ರೀಧರ– ಅಯ್ಯಯ್ಯೋ ಸತ್ತಿನೋ ರಾಮು. ಬಾರೋ ಇಲ್ಲಿ ನಾನು ವುಳಿಯುವಂತಿಲ್ಲ ಬಾರೋ (ಕೈ ಕೊಸರುವನು) (ಕಾಮಾಕ್ಷಿ ಹೋಗುವಳು)

ರಾಮು– ಬಂದೆ ಬಂದೆ ಏನದು ಚೀರಮನ್ರೇ (ಒಳಗಿನಿಂದಲೇ)

ಶ್ರೀಧರ– ಮಿತ್ರದ್ರೋಹಿ ನೀನು ನನಗೆ ಮೋಸ ಮಾಡಿದೆಯಾ..... ಹೀಗೆ ಮಾಡಬೇಕೆಂದು ಎಷ್ಟು ದಿವ್ಸಗಳವರೆಗೆ ಆಲೋಚಿಸಿದ್ದೆಯೋ ಅಯ್ಯೋ ರಾಕ್ಷಸಿಯನ್ನೇ ಕರತಂದು ನನಗೆ ಗಂಟು ಹಾಕಬೇಕೆಂದಿದ್ದಿಯಾ.....

ರಾಮು– ಶ್ರೀಧರಾ ಹೀಗೇಕೆ ಮಾಡುವೆ. ಏನಾಯಿತು....

ಶ್ರೀಧರ– ಮತ್ತೇನಾಗಬೇಕು ಮನೆ ಹಾಳಾಯಿತು ನಿನ್ನ ಸುದದ್ರೂಪಿ ಕನ್ಯ ಓಡಿ ಹೋಯಿತು ಅಹಾಹಾ.... ರಾಮು ಈ ಕನ್ಯ ಹುಡುಕಿ ತರಲಿಕ್ಕೆ ಬಹಾಳ ಪ್ರಯಾಸ ಪಟ್ಟಿರುವೆ. ಏನು ರೂಪ, ಏನು ಬಂಣ, ಏನು ಲಕ್ಷಣ, ಇಂಥಾ ಕನ್ಯ ನನ್ನಂಥಾ ಕುರೂಪಿಯನ್ನು ಹ್ಯಾಗೆ ನಂಬೀತಪ್ಪ..... ಪಾಪ....

ರಾಮು– ಅಲ್ಲರೀ ಅವಳೆಲ್ಲಿ ಹೋದಳು.... (ಅತ್ತಿತ್ತ ನೋಡುತ್ತಾನೆ)

ಶ್ರೀಧರ– ಸುಡುಗಾಡಿಗೆ ಹೋದಳು....

ರಾಮು– ಅವಳ ಕುಚೇಷ್ಟೆ ಬಹಳೆಂದು.... ಮೊದಲೇ ತಿಳಿಸಿದ್ದೆ.... (ಅತ್ತಿತ್ತ ನೋಡುತ್ತ)

ಶ್ರೀಧರ– ಕುಚೇಷ್ಟೆ ಎಷ್ಟಿದ್ದರೂ ತಡಿಯಬಹುದು ರಾಮೂ. ಇವಳ ರೂಪಕ್ಕೆ ತಡಿಯುವ ಗಂಡಸರನ್ನೇ ಕಾಣೆ. ಇದು ಹೆಂಣಲ್ಲ. ಶುದ್ಧ ರಾಕ್ಷಸಿ.

ರಾಮು– ಓಹೋ ತಿಳೀತು ಬಿಡಯ್ಯಾ. ತನ್ನ ರೂಪವನ್ನು ಬದಲಿಸಿ ನಿನಗೆ ಚೇಷ್ಟೆ ಮಾಡಿರಬಹುದು. ತಿಳಿತು ಬಿಡು.

ಶ್ರೀಧರ– ಏನು ತಿಳಿಯಿತೋ ರೂಪ ಬದಲಿಸಲಿಕ್ಕೆ ಇವಳೇನು ಪಾರ್ವತಿ ಅಲ್ಲಯ್ಯ. ಸಾಕು ಬಿಡು ನಿನ್ನ ಚೇಷ್ಟೆ.

ರಾಮು– ಅವಳೆಲ್ಲಿ ಹೋದಳು. (ದೂರ ನೋಡಿ) ಓಹೋ ಅಲ್ಲಿ ನಿಂತಿರುತ್ತಾಳೆ. ತಡೆ. ಕರೆದುಕೊಂಡು ಬರುತ್ತೇನೆ.

ಶ್ರೀಧರ– ಬೇಡ ಮಹಾರಾಯಾ. ಅವಳನ್ನು ನೋಡಿದರೆ ಜ್ವರ ಬರುತ್ತವೆ. ಇಲ್ಲಿಗೆ ಕರೆಯಬೇಡ. ಅಲ್ಲಿಗೆ ಹೋಗಿ ನಾನು ಬರೆದುಕೊಟ್ಟು ಕಾಗದವನ್ನು ತಂದುಬಿಡು [ಓಡುತ್ತಾನೆ] ಥೂ ಮನಿ ಹಾಳಾಗ ಅವಳ

ರೂಪು ನೋಡಿ ಕಂಣಿಗೆ ಮಂಜು ಮುಸುಕಿದಂತಾಗಿದೆ.

**ರಾಮು**– (ಒಳಗಿನಿಂದಲೆ) ಬಾ ಕಾಮಾಕ್ಷೀ ಬಾರಮ್ಮ ಇಲ್ಲೆ ನಮ್ಮ ಚೀರಮನ್ನರು ಮೊದಲೇ ಸೂಕ್ಷ್ಮ ಸ್ವಭಾವದವರು ಇಂಥವರೊಡನೆ ನಿನ್ನ ಚೇಷ್ಟೆಯೇ ಶ್ರೀಧರಾ ಇವಳೇ ಅಲ್ಲವೇ ನಿನ್ನ ಕಾಮಾಕ್ಷಿ ತಿರುಗಿ ನೋಡು.

**ಶ್ರೀಧರ**– ಬೇಡ ರಾಮೂ ಬೇಡ ನಾನು ತಿರುಗುವದೇ ಬೇಡ ನೋಡುವದಿದ್ದರೆ ನೀನೇ ಸಾಕಾಗುವಂತೆ ಅವಳ ರೂಪವನ್ನು ನೋಡು ನನ್ನ ಕಾಗದವನ್ನು ಮಾತ್ರ ಕೊಡು.

**ರಾಮು**– ಇಲ್ಲಿ ನೋಡು (ತಲಿ ಹಿಡಿದು ತಿರುಗಿಸುವನು) ಒಳ್ಳೇ ಸ್ಫುರದ್ರೂಪಿ. ನಗುತ್ತ ನಿಂತಿರುವಳು ಕಂಣು ಪಿಳಿಕಿಸದೆ ನೋಡಿ.

**ಶ್ರೀಧರ**– ಇದೇನು ರಾಮು ಇವಳ್ಯಾರು

**ಕಾಮಾಕ್ಷಿ**– ನಾನೊಬ್ಬಳು ಬೇರೆ.

**ರಾಮು**– (ನಗುತ್ತ) ಹುಚ್ಚನಂತೆ ಹೀಗೇಕೆ ಮಾಡುವಿ ಶ್ರೀಧರಾ ನೀನು ಬರೆದು ಕೊಟ್ಟ ಕಾಗದವನ್ನಾದರೂ ನೋಡಿ ನಂಬು ನನ್ನ ಮಾತಂದರೆ ಮೋಸಗಾನೆಂದೇ ನಿನ್ನ ಅಭಿಪ್ರಾಯವಲ್ಲಿವೇ....

**ಶ್ರೀಧರ**– (ಅವಳ ಕೈ ಹಿಡಿದು) ರಾಮು ಕ್ಷಮಾ ಮಾಡು ಸರಿಯಾಗಿ ಇವಳ ಗುಣ ಪರೀಕ್ಷೆ ಮಾಡದೆ ನಿನಗೆ ಏನೇನೋ ಕೆಟ್ಟ ಶಬ್ದಗಳನ್ನಾಡಿದೆ.... ಇದರ ಪ್ರತಿ ವುಪಕಾರ ನಿನಗೆ ಎಂದಾದರೂ ತೀರಿಸುವ ರಾಮೂ ಮರೆಯಲಾರೆ.... ಕಾಮಾಕ್ಷಿ ನನ್ನೊಡನೆ ವಿನೋದವೇ ಆದರೆ ಮತ್ತೊಮ್ಮೆ ಮೊದಲಿನ ರೂಪವನ್ನು ತೋರಿಸಬೇಡ ತಿಳಿಯಿತೇ.....

**ಕಾಮಾಕ್ಷಿ**– (ನಗುತ್ತ) ನೋಡೋಣವೆಂದು ಹಾಗೆ ಮಾಡಿದೆ.... ನೀವು ಇಷ್ಟೊಂದು ಪುಕ್ಕ ಸ್ವಭಾದವರೆಂದು ತಿಳಿದಿರಲಿಲ್ಲ....

**ರಾಮು**– ಇನ್ನಾದರೂ ಸರಿಯಾಗಿ ನೋಡು ಇವಳದೇ ಮುಖ ಇನ್ನು ನನಗೆ ಟೈಮಾತು ನಾನು ಸಧ್ಯ ಹೋಗಲೇ....

**ಶ್ರೀಧರ**– (ಘಡಿ ನೋಡಿ) ಐದು ಮುಕ್ಕಾಲು ಘಂಟೆಯಲ್ಲವೇ ನಿನ್ನ ಕೆಲ್ಸಕ್ಕೆ ನೀನು ಹೋಗು ಸ್ವಲ್ಪ ವಿರಾಮ ಹೊಂದಿ ನಾವು ಬರುತ್ತೇವೆ.

ತೆರೆ ಬೀಳುತ್ತದೆ.

===*****=====****====

## ಪ್ರವೇಶ ೧೧

(ಶಾಮಲಾ ಬುತ್ತಿಗಂಟ ಹೊತ್ತು ತಾಯಿಯ ಸಂಗಡ ಬರುತ್ತಾಳೆ)

**ಸೀತಮ್ಮ–** ಶಾಮಲಾ ಗೌರಿ ಮನಿ ಬಹು ದೂರಮ್ಮಾ ಇನ್ನೂ ಎಲ್ಲಿದೆ ಕಾಣಲೊಲ್ಲದು.

**ಶಾಮಲಾ–** ಅಮ್ಮಾ ಅದೋ ಅಲ್ಲಿ ಕಾಣುವ ಬೇವಿನ ಗಿಡ ದಾಟಿ ಹೋದ ಮೇಲೆ ಪೋಸ್ಟ ಆಫೀಸು ಬರುತ್ತದೆ. ಅದರಾಚೆ ವಂದು ಗಿಡವಿರುವದಲ್ಲಾ ಅದು ದಾಟುತ್ತಲೇ ವೀರಭದ್ರದೇವರ ಗುಡಿ ಆ ಗುಡಿ ದಾಟಿದ ಮೇಲೆ ೩ನೇ ಮನೆಯೇ ಗೌರಿಯ ಮನೆ ಹಿಂದೊಮ್ಮೆ ನಾನೂ ನೀನು ಬಂದಾಗ್ಯೆ ಈ ದಾರಿಯಿಂದ ಬರಲಿಲ್ಲ ಆಚೆ ಭಾಗದಿಂದ ಬಂದಿದ್ದೆವು.... ಅದಕ್ಕಾಗಿ ಗುರ್ತು ತಪ್ಪಿರಬೇಕು ಅಲ್ಲೇನಮ್ಮಾ....

**ಸೀತಮ್ಮ–** ನಿಜ ಆ ದಿವಸದ ದಾರಿಯೇ ಬೇರೆಯಾಗಿತ್ತು ನಡಿ, ನಡಿ ಹೊತ್ತಾಗುತ್ತಾ ಹೋಗೋಣ. ಹೋಗುತ್ತಾರೆ. ಅದೇ ರಸ್ತೆಯಲ್ಲಿ ಶ್ರೀಧರನು ಬರುತ್ತಾನೆ.

**ಶ್ರೀಧರ–** ಅಹಹಹಾ ಏನಿವಳ ವಡನಾಟ ಕಾಮತೃಪ್ತಿಯ ಚಲ್ಲಾಟ ಸರಸ ಸಲ್ಲಾಪಗಳಿಗೆ ಅವಳ ನೋಟ ಬಹು ಮಾಟ ಇಂಥಾ ರೂಪುಳ್ಳ ಹೆಂಗಳೆಯರ ಕೂಟ ವಿನೋದದ ರಸದೂಟ. ರಾಮೂ ಮೊದಲಿಗೆ ನಿನ್ನನ್ನು ಮೋಸಗಾರನೆಂದು ಬೈದದ್ದು ನನ್ನ ಮಹಾಪರಾಧವಾಗಿದೆ. ನೀನು ನನಗಾಗಿ ಹುಡುಕಿ ತಂದ ಉಪಕಾರಕ್ಕೆ ಪ್ರತ್ಯುಪಕಾರವನ್ನು ಶೀಘ್ರದಲ್ಲೇ ತೀರಿಸುತ್ತೇನೆ. ಮರೆಯುವಂತಿಲ್ಲ. (ಪದ ಹಾಡುತ್ತ ಹೋಗುತ್ತಾನೆ.)

### ಗೌರಿಯ ಮನೆ ಪ್ಲಾಟು

(ಗೌರಿ ಫೋಟೋ ಪೂಜಿಸಿ ಊದಬತ್ತಿ ಬೆಳಗುತ್ತಿರುತ್ತಾಳೆ)

**ಸೀತಮ್ಮಾ–** (ಒಳಗಿನಿಂದಲೇ) ಗೌರಾ, ಗೌರಾ ಇರುವಿಯೇನಮ್ಮಾ

**ಗೌರಿ–** ಬನ್ನಿ ಯಾರವರು (ಹೊರಗೆ ಹೋಗಿ ಕಲೆತು ಬರುತ್ತಾರೆ.ಹೊರಸಿಗೆ ಹಾಸಿಗೆ ಹಾಕಿ) ಬಾ ತಾಯಿಾ, ಬಾ ಶಾಮಲಾ ಯಲ್ಲಾ ಆರಾಮ ಇದ್ದೀರೇನಮ್ಮಾ ಕೂತುಕೊಳ್ಳಿ.

**ಶಾಮಲಾ–**ತಕ್ಕೊಳ್ಳಿ ಅಕ್ಕಾ ನಿನಗಾಗಿ ತಂದ ಬುತ್ತಿ ಇದು (ಕೊಡುವಳು)

ಸೀತಮ್ಮ– ಗೌರಾ ಈ ಬುತ್ತಿ ಸಹ ನಿನ್ನ ತವರ ಮನಿಯದೆಂದೇ ತಿಳಿ.........
(ನಗುತ್ತ)

ಗೌರಿ– ನಿಜವಮ್ಮಾ ಇದು ನಿಜವಾಗಿ ತವರೂರಿನ ಬುತ್ತಿಯೆ ನಿಜ ಶಾಮಲಾ ಕೂಡಿ ಊಟ ಮಾಡೋಣ ನಡೆ....

ಶಾಮಲಾ– ಇಲ್ಲಮ್ಮಾ ಇದು ನಿನಗಾಗಿ ತಂದ ಬುತ್ತಿ....ನೀನು ಗರ್ಭಿಣಿ ಇದ್ದದ್ದೇ ಅಮ್ಮನಿಗೆ ಗೊತ್ತಿಲ್ಲವಂತೆ ನಿನ್ನೆ ಯಾರಿಂದಲೋ ಕೇಳಿ ಬಂದು ಇಷ್ಟೆಲ್ಲ ಬುತ್ತಿ ತಯಾರ ಮಾಡಿಸಿದಳು. ಅಕ್ಕಾ ಇದರಲ್ಲಿ ನನ್ನ ಪಾಲು ಇಲ್ಲ ಯಲ್ಲಾ ನಿನ್ನದೇ.....

ಸೀತಮ್ಮ– ಅಕ್ಕನಿಗಾಗಿ ಏನೇನು ಅಡ್ಗಿ ಮಾಡಿ ತಂದಿರುವಳೊ ಕಾಣೆ....ಗೌರಾ ಎಲ್ಲಾ ಇವಳೇ ಮಾಡಿದ್ದಾಳೆ....

ಗೌರಿ– ಹೌದೇನೇ ಶಾಮಲಾ ಹತ್ತಿ ಹೊಂದಿದ ಬಂಧುಗಳಿಲ್ಲದಿದ್ದರೂ ಚಿಂತೆಯಿಲ್ಲ ಮುತ್ತಿನಂಥ ಒಬ್ಬ ತಂಗಿ ಇದ್ದರೆ ಸಾಕು. ಮತ್ತೇನೂ ಬೇಡ ಈ ವಳಗಾಗಿ ನಾನು ನಿಮ್ಮ ಮನೆಗೆ ಬರಬೇಕೆಂದು ಎಷ್ಟೋ ಸಲ ನೋಡಿದೆ ಆಗಲೇ ಇಲ್ಲ ಮನೆಯಲ್ಲಿ ನಮ್ಮವರಂತೂ ಮನೆಯಲ್ಲಿ ಇರುವದೇ ಇಲ್ಲ ಅದಕ್ಕಾಗಿ ಮನಿ ಬಿಟ್ಟು ಬರುವದೇ ಕಷ್ಟ ಸಧ್ಯ ನನಗೆ ೯ ತಿಂಗಳಂತೂ ಗತಿಸಿದವು ಇಂದೇನೋ ನಾಳೇನೋ ಹಡಿಯಲಿಕ್ಕೆ ದೇವರೇ ಬಲ್ಲ.....

ಸೀತಮ್ಮ– ಆಗಲೆಮ್ಮಾ ಸಂತೋಷ ಇಂದಿಲ್ಲ ನಾಳೆ ಗಂಡು ಮಗುವನ್ನು ಹಡೆದು ಅವನನ್ನು ಎತ್ತಿಕೊಂಡೇ ನಮ್ಮ ಮನಿಗೆ ಬಾ....

ಶಾಮಲಾ– ಹೌದಕ್ಕಾ ಸಧ್ಯ ಹುಟ್ಟುವವನು ಗಂಡು ಮಗುವೆಂದೇ ತಿಳಿ....

ಗೌರಿ– ಅಗಲೆಮ್ಮಾ ನಿನ್ನ ಬಾಯಿಗೆ ಸಕ್ರಿ ತುಂಬುತ್ತೇನೆ.

ಸೀತಮ್ಮ– ಗೌರೀ ಇನ್ನೊಂದು ಮಾತು ನನಗೆ ಬಹಾಳವಾಗಿ. ಪೆಟ್ಟು ತಗಲಿದಂತಿದೆ....

ಗೌರಿ– ಏನಮ್ಮಾ ಅದು. ಪೆಟ್ಟು ತಗುಲಿದ ಮಾತು. ನನ್ನಿಂದಲೇ ಆಗಿದೆಯೇ. (ಘಾಬರಿಯಿಂದ)

ಸೀತಮ್ಮ– ನಿನ್ನಿಂದ ಅಲ್ಲ ಗೌರೀ ನಮ್ಮ ಯಜಮಾನರಿಂದ.... ಅವರಿಂದ ನಿನಗೆ ಏನೇನೋ ಅಪಶಬ್ದಗಳು ಬೀರಿದವಂತೆ. ಅದನ್ನು ಕೇಳುತ್ತಲೇ ನನಗೆ ಕೋಪವೇರಿ. ನಮ್ಮವರಿಗೆ ಛೀ ಹಾಕಿದ್ದೇನೆ. ನೀನೇನೂ. ಹಚ್ಚಿಕೊಳ್ಳುವ ಕಾರಣವಿಲ್ಲ. ತಿಳಿಯಿತೇ.....

ಗೌರಿ– (ನಗುತ್ತ.) ಇಲ್ಲ ಬಿಡಮ್ಮಾ ಅವರೊಬ್ಬರು ಅಂಣಂದಿರೆಂದು ತಿಳಿದು ಮರೆತು ಬಿಟ್ಟಿದ್ದೇನೆ.

ಸೀತಮ್ಮ– ಎಷ್ಟಾದರೂ ನೀನು ಸುಶಿಕ್ಷಿತಳು. ಗೌರೀ ಇನ್ನೂ ಬರೋಣವೇ. (ಎದ್ದ ಮೇಲೆ)

ಗೌರಿ– ಇಲ್ಲ ಸ್ವಲ್ಪು ತಡಿಯಿರಿ. ಕಾಫಿ ಮಾಡಿ ತರುತ್ತೇನೆ. ಹತ್ತೇ ನಿಮಿಷದಲ್ಲೇ. ಒಳಗೆ (ಹೋಗುವಳು)

ಶಾಮಲಾ– ಅಮ್ಮಾ ಗೌರಕ್ಕನ ಗುಣ ಯಾರಿಗೂ ಬಾರದಮ್ಮಾ. ನೋಡು ಅಪ್ಪನಿಂದ ಆಟ್ ಅಪಮಾನದ. ಗುಟ್ಟು ರಟ್ಟಾಗಿ ಮಾಡದೆ, ಕೆಟ್ಟ ಸಿಟ್ಟೆಲ್ಲ ನುಂಗಿ. ನೀರು ಕುಡಿದಿರುವಳು. ಇದೇ ನಿಜವಾದ ಸ್ತ್ರೀಯರ ಮಾರ್ಗವು.....

ಸೀತಮ್ಮಾ– ನೋಡು ಶಾಮಲಾ. ಇಂಥವರಿಗೆಲ್ಲ ಕರೆಯಲ್ಪಡುವದು.... ಸುಮಾರ್ಗದ ಸುದತಿಯರೆಂದು. ಕೇಳಿದಿಯಾ. ಗೌರಿಯ ಗುಟ್ಟು ಹೇಗಿದೆ..... (ಬರುವವಳನ್ನು ಶಾಮಲಾ ತೋರಿಸಿ) (ಗೌರಿ ಕಾಫಿ ತಂದು ಕೋಡುವಳು)

ಶಾಮಲಾ– ಇದೇನಕ್ಕಾ ನಮಗಾಗಿ ಮೊದಲೇ ಕಾಫಿ ತಯ್ಯಾರ ಮಾಡಿ ಇಟ್ಟಿದ್ದಿಯಾ.....

ಗೌರಿ– ಇಲ್ಲ ತಂಗೀ. ಅವರು ಬರುಹೋತ್ತು.... ಅದಕ್ಕಾಗಿ ವಲಿಯ ಮೇಲೆ ನೀರು ಕಾದಿತ್ತು ಕಾದ ನೀರಿದ್ದರೆ. ಕಾಫಿ ಯಾಗುವದು ಎಷ್ಟು ಹೊತ್ತು.... ಅವಸರದ ಕಾಫಿ ಹೇಗಿದೆಯೋ ಏನೋ.....

ಸೀತಮ್ಮ– ಓಳ್ಳೇ ರುಚಿಯಾಗಿದೆ. ಗೌರಿ. ನೀನು ಕುಡಿಯುವದಿಲ್ಲವೇ....

ಗೌರಿ– ಇಲ್ಲಮ್ಮಾ ನನಗೆ ಅದರ ಚಟವೇ ಇಲ್ಲ ಅವರಿಗಾಗಿಯೇ ಆಗಾಗ್ಯೆ ಮಾಡುವದು ನನಗಾಗಿ ಅಲ್ಲ.... (ಇಬ್ಬರೂ ಎದ್ದು ನಿಂತು ಬರ್ತೀವಿ ಗೌರಿ ಅನ್ನುವರು)

ಸೀತಮ್ಮ– ಇದೋ ಮರತಿದ್ದೆ.... ನಿನಗಾಗಿ ತಂದ ಜರಿ ಖಣ ತೆಗೆದುಕೋ (ಕೈಯಲ್ಲಿ ಕೊಡುವರು)

ಗೌರಿ– ಅಂತೂ–ಇಂತು ನಿಮ್ಮ ಭಾರ ಹೆಚ್ಚಾಯಿತು ಶಾಮಲಾ....

ಸೀತಮ್ಮ– ಹಾಗೇನು ತಿಳಿಯಬಾರದು.... ಬರ್ತೀವಿ.... (ಗೌರಿ ಕೈ ಮುಗಿಯುವಳು)

ಶಾಮಲಾ– ಬರ್ತೀವಿ ಅಕ್ಕಾ (ನಮಸ್ಕಾರ ಮಾಡಲು ಹೋಗುವಳು ಗೌರಿ ಹಿಂದಕ್ಕೆ ಸರಿದು ಅಪ್ಪಿಕೊಂಡು.)

ಗೌರಿ– ಹೋಗಿ ಬಾ ತಂಗಿ.... ಮರೆಯಬೇಡ.... (ಗಲ್ಲ ಹಿಡಿಯುವಳು.) ಕಳಿಸಲು ಹೊರಗೆ ಹೋಗಿ ಬಂದು ಆ ಬುತ್ತಿ ಬಿಚ್ಚುತ್ತ....

ಏನಿದು ೮ ದಿವ್ಸಗಳವರೆಗೆ ನಾವಿಬ್ಬರು ಉಂಡರೂ ತೀರದಂತಿದೆ ಈ ಬುತ್ತಿ....ಸಜ್ಜಿರೊಟ್ಟಿ....ಕರಚೀಕಾಯಿ.....ಕಲಸನ್ನ....ಹಪ್ಪಳ.....ಸಂಡಿಗಿ....ಸಹಿತ.... ನೋಡಿದೆ ತವರೂರ ತಾಯಿಯನ್ನು ಮರೆತು ಹೋದದ್ದು ಮತ್ತೆ ನೆನಪಿಗೆ ತಂದಿತು ಈ ಬುತ್ತೀ ಗಂಟು.,. ನವಮಾಸ ಗರ್ಭದಿ ಹೊತ್ತು ಹಡೆದು ಮಲೆಯುಣಿಸಿ ಸಾಕಿ ಸಲಹಿದ ಹೆತ್ತವ್ವನಿದ್ದರೆ ಎಷ್ಟು ಸಲ ಬಂದು ಹೋಗುತ್ತಿದ್ದಳೋ....ಏನೋ.... ಜನ್ಮ ನೀಗಿದ ಹಡೆದವ್ವನ ನೆನಹು ಕೊಟ್ಟದ್ದು.... ಪಡೆದ ತಾಯಿ ಸೀತಮ್ಮನು ತಂದ ಬುತ್ತೀ ಗಂಟಲ್ಲವೇ....ಮುಖ್ಯವಾಗಿ ನನ್ನ ಗರ್ಭದ ಶಿಶುವು ದುರ್ದೈವಿ....

ಶಾಮು– (ಒಳಗಿನಿಂದಬರುತ್ತಲೇ) ನಿನ್ನ ಗರ್ಭ ಶಿಶು ದುರ್ದೈವಿ–ಅದ್ಯಾಕೆ ಗೌರೀ....

ಗೌರಿ– ನಿಜ – ನನ್ನ ಗರ್ಭದಶಿಶು ದುರ್ದೈವಿ ಅನ್ನುವದಕ್ಕೆ ಈಬುತ್ತಿಗಂಟೇ ಸಾಕ್ಷಿಯಾಗಿದೆ, ನನ್ನ ಹೆತ್ತವ್ವನಿದ್ದರೆ ಇಂಥಾ ಬುತ್ತಿ ಎಷ್ಟು ಸಲ ಬರುತ್ತಿತ್ತೋ ಕಾಣೆ – ಇದನ್ನು ನೋಡೇ ನನ್ನ ತಾಯಿಯ ನೆನಪಾಯಿತು..... ಅಷ್ಟೇ....

ಶಾಮು– (ಬುತ್ತಿಗಂಟನ್ನು ನೋಡಿ) ಇದೇನೇ ಬುತ್ತೀಗಂಟು ಇಷ್ಟೊಂದು ಯಾವ ಬೀಗರು ತಂದರೇ ಗೌರೀ.. ಅಬಬಬಬ ಎಷ್ಟಿದೆಯಲ್ಲೇ.. (ಒಂದೊಂದೇ ತೋರಿಸುವನು)

ಪದ

ಗೌರಿ– ತವರವರು ತಂದಂಥ ಬುತ್ತಿ ।
ಇದು ಎಷ್ಟಿದೆ ನೋಡಿರಿ ಮೇಲಕ್ಕೆಯತ್ತೀ.... ।
ಯನ್ನ ತವರವರು ತಂದಂಥ ಬುತ್ತಿ ॥

ಶಾಮು– ಯಳ್ಳು ಹಚ್ಚಿದ ಸಜ್ಜಿ ರೊಟ್ಟಿ ।
ಇದರೊಳು ನಾನಾ ತರದ ಪಲ್ಲೆ ಸಾಕಷ್ಟ ಕಟ್ಟೀ ।
ಬೆಳ್ಳನ್ನ ಅನ್ನಕ್ಕೆ ಕೆನೆ ಮೊಸರು ಘಟ್ಟಿ ।
ಬೊಳ್ಳೊಳ್ಳಿ ಕಲಿಸಿಹರು ಕುಟ್ಟಿ ।
ಇದನೂ ಸಾಕಷ್ಟು ತಿನ್ನುವದು ಹೊಟ್ಟಿ ॥ ೧ ॥

**ಗೌರಿ–** ಕರಿದಂಥ ಕರಜೀಕಾಯಿ ಇದರೊಳು ।
ವಾಸನೆ ಬರುತಿದೆ ಯಾಲಕ್ಕಿಕಾಯಿ ॥
ಕರಿದಂಥ ಕರಜೀಕಾಯಿ ॥
ಮರೆಯದೆ ಹಪ್ಪಳ ಸೊಂಡಿಗುಪ್ಪಿನಕಾಯಿ ।
ಪ್ರೇಮದಿ ತಂದಿಹರು ಶಾಮಲ ತಾಯಿ ।
ತವರವರು ತಂದಂಥ ಬುತ್ತಿ ।
ಇದು ಎಷ್ಟಿದೆ ನೋಡಿರಿ ಮೇಲಕ್ಕೆ ಯತ್ತಿ ॥ ೨ ॥

**ಶಾಮು–** ಇದನ್ನು ಯಾವ ಬೀಗರು ಕೊಟ್ಟರು ಹೇಳೇ.....

**ಗೌರಿ–** ಹುಂ.... ನಮಗಾವ ಬೀಗರು ತರಬೇಕಾಗಿದೆ.... ಹಡೆದ ತಾಯಿ ಇಲ್ಲದಿದ್ದರೂ ಪಡೆದ ತಾಯಿಯಂತಿರುವ ಸೀತಮ್ಮನವರು ನಾನು ತುಂಬಾ ಗರ್ಭಿಣಿ ಇರುವದನ್ನು ಯಾರಿಂದಲೋ ಕೇಳಿ ಮಗಳೊಡನೆ ಬಂದು ಕೊಟ್ಟು ಹೋದರು. ಅವರು ಯಂಥಾ ನಿರ್ಮಲ ಹೃದಯಿಗಳು ನೋಡಿ.... ಹಡೆದ ತಾಯಿಗಿಂತಲೂ ಹೆಚ್ಚು ಪ್ರೇಮ ತೋರಿ ಇದೋ ಈ ಜರಿ ಖಣವನ್ನು ಸಹ ಕೈಯ್ಯಲ್ಲಿಟ್ಟು ಇದೇ ಈಗ ಹೋದರು.....

**ಶಾಮು–** ಓಹೋ ನಮ್ಮ ಪ್ರಸಿಡೆಂಟ ಶ್ರೀಧರನ ಪತ್ನಿಯಲ್ಲವೇನೇ....

**ಗೌರಿ–** ನಿಜ ಅವರೇ... ಹೋಗುವಾಗ್ಯೆ ಮತ್ತೊಂದು ಮಾತು ಕೇಳಿದರು ಆದರೆ.... ನಿಮ್ಮ.... ಮುಂದೆ ಹೇಳಲು.... ನಾಚಿಕೆ....

**ಶಾಮು–** ಮತ್ತೇನು ಹೇಳಿದರೆ.... ಹೇಳು....ನಾಚಿಕೆ ಏಕೆ...ಇಲ್ಲಿ ಯಾರೂ ಇರುವದಿಲ್ಲ ನಾನು....ಮತ್ತೆ....ನೀನು....ಅಂದ ಮೇಲೆ ನಾಚುವದೇಕೆ ಹೇಳೇ....

**ಗೌರಿ–** ಹಡೆದ ಮೇಲಾದರೂ ನಮ್ಮ ಮನೆಗೆ ಬರುವಿಯಾ ಎಂದು ಕೇಳಿದರು....

**ಶಾಮು–** ಅದಕ್ಕೆ ನೀ ಏನು ಹೇಳಿದಿ....

**ಗೌರಿ–** ಆಗಲಿ ಬರುತ್ತೇನೆಂದು ಹೇಳಿದೆ....

**ಶಾಮು–** ಸರೆ ಹೋಗಿ ಬಾ ತಪ್ಪೇನಿದೆ. ಅವರು ಬಹಾಳ ಒಳ್ಳೆಯವರು....

**ಗೌರಿ–** ನೀನು ನಮ್ಮ ಮನಿಗೆ ಬರಬೇಕಾದರೆ ಗಂಡು ಮಗುವನ್ನೇ ಯತ್ತಿಕೊಂಡು ಬರಬೇಕೆಂದು ಹೇಳಿದರು....

**ಶಾಮು–** ಇಷ್ಟೇ ತಾನೇ ನೋಡು ಈ ರೀತಿ ಅವರು ಹೇಳಿ ಹೋಗ್ಯಾರಂದ ಮೇಲೆ ನೀನು ಅಲಕ್ಷ ಮಾಡಬೇಡ. ಮರೆತು ಹೆಂಣೇನಾದರೂ ಹಡೆದೀಯೆ. ತಿಳಿತಾ, ಗಂಡೇ ಹಡಿ.

**ಗೌರಿ–** ಅದರಲ್ಲಿ ನೀವಂತೂ ಬಹಳ ಹುಡುಗಾಟದವರು....

**ಶಾಮು–** ಇರಲಿ ಬಂದವರಿಗೆ ಕಾಫಿ ಯೇನಾದರೂ ಮಾಡಿದಿಯಾ

**ಗೌರಿ–** ಕಾಫಿ ಕುಡಿದೇ ಹೋದರು. ನಡಿರಿ ಹೊತ್ತಾಗಿದೆ. ಅವರು ತಂದ ಬುತ್ತಿ ನೀಡುತ್ತೇನೆ. ಊಟ ಮಾಡಿರಿ.....

**ಶಾಮು–** ಛೇ ಛೇ ಅದು ನನಗಾಗಿ ತಂದದ್ದಲ್ಲಾ ನಿನಗಾಗಿ. ನಾನೇನು ಗರ್ಭಧರಿಸಿರುವೆನೇನೇ

**ಗೌರಿ–** ಯಾರಿಗಾದರೂ ತರಲಿ ನಾವಿಬ್ಬರೂ ಕೂಡಿ ಆರು ದಿವ್ಸಗಳವರೆಗೆ ಉಂಡರೂ ತೀರದಂತಿದೆ. ಬನ್ನಿ ವಳಗೆ.

**ಶಾಮು–** ಹೀಗೇನು ಹಾಗಾದರೆ ನನಗೆ ಮಾತ್ರ ಕರಜೀಕಾಯಿಗಳನ್ನೇ ಕೊಟ್ಟರೆ ಮಾತ್ರ ಬರುತ್ತೇನೆ. ನೋಡು.

**ಗೌರಿ–** ಆಗಲಿ ಬರ್‍ರಿ. ಅವನ್ನೇ ತಕ್ಕೊಳ್ಳಿ. ಬನ್ನಿ (ಒಳ ಹೋಗುತ್ತಾರೆ.)

ತೆರೆ ಬೀಳುತ್ತದೆ

**ರಸ್ತೆ**

(ರಾಮು ಕೈಯ್ಯಲ್ಲಿ ಪೇಪರ ಹಿಡಿದುಕೊಂಡು ನೋಡುತ್ತ ಬರುತ್ತಾನೆ.)

**ರಾಮು–** ನನ್ನಂಥಾ ಹಣೇ ಬರಹ ಇನ್ನಾರಿಗೂ ಇಲ್ಲದಾಗಿದೆ. ನಾನು ಬಿ.ಎ. ವರೆಗೆ ಓದಿ ಸಿನೇಮಾ ಮಂದಿರದ ಬಾಗಿಲು ಕಾಯಬೇಕಾಗಿದೆ. ಮೊನ್ನೆ ಬಂದಿದ್ದ ಶಾಲಾಧಿಕಾರಿಗಳ ಮಾತಿನಂತೆ ಅರ್ಜಿಯಂತೂ ಬರೆದುಕೊಟ್ಟೆನು. ಆದರೆ ಕಾಲೇಜಿನಲ್ಲಿ ಕೆಲಸ ದೊರೆಯಬೇಕಾದರೆ ಲಂಚವೆಷ್ಟು ಕೊಡಬೇಕೋ ಕಾಣೆ. ದುಡ್ಡಿದ್ದರೆ ಮಾತ್ರ ದೊಡ್ಡಪ್ಪನಾಗಿ ಕಾಣುತ್ತೇನೆ. ಇಲ್ಲವಾದರೆ ಎಲ್ಲರಿಗಿಂತಲೂ ಚಿಕ್ಕವನೆಂದರೆ ನಾನೇ ಇದೆಲ್ಲ ಈಗಿನ ಕಾಲದ ಮಹಿಮೆ. ಏನಾದರೂ ಮಾಡಿ ಶಾಲಾಖಾತೆಯಲ್ಲಿ ಶೇರುವದೇ ಯೋಗ್ಯವಿದೆ. ಇದರ ವಿಷಯವನ್ನು ನಮ್ಮ ಚೇರಮನ್ನರಿಗೆ ತಿಳಿಸುತ್ತೇನೆ. (ಹೋಗುವಾಗ್ಯೆ)

**ಶ್ರೀನಿವಾಸ–** ಆರಾಮ ಇದ್ದಿರಾ....

**ರಾಮು–** ಆರಾಮ ಅದೀವ್ರಿ. ನೀವು ಹರಾಮ ಇದ್ದೀರಾ....

**ಶ್ರೀನಿವಾಸ–** ಏನ ಆರಾಮರೀ ಹಾಗೆ ಇದ್ದೇವೆ.

**ರಾಮು–** ಮತ್ತೇನು ಸುದ್ದಿ ಊರಲ್ಲಿ.

**ಶ್ರೀನಿವಾಸ–** ಸುದ್ದಿ ಅಂದರೆ ಅದೇ ನಿನ್ನೆ ೨–೩ ಜನ ಸತ್ತರು. ಈ ದಿವ್ಸ ೧–೨ ಹುಡುಗರು ಹುಟ್ಟಿದವು. ಎಲ್ಲಾ ಸರೀಗೆ ನಡೆದಿದೆ ಊರಲ್ಲಿ.

**ರಾಮು–** ಅ.... ಹಾ.... ಇದೇನ್ರಿ ನೀವು ಮುಂಜಾನೆಯದ್ದು ಆರಾಮು ಇದ್ದಿರಾ ಎಂದು ಶುಭವನ್ನೇ ಕೋರುವವರು ಸತ್ತಸುದ್ದಿ ಹೇಳಲಿಕ್ಕೆ ಹತ್ತೀರಲ್ಲಾ ಇದೊಂದು ಖಾತೆ ಸರ್ಕಾರದಿಂದ ನಿಮಗೇನೆ ಮಂಜೂರ ಆಗಿದೆಯೇ ಈ ಕೆಲಸಕ್ಕೆ ಪಗಾರ ಎಷ್ಟು ಕೊಡುತ್ತಾರೆ.

**ಶ್ರೀನಿವಾಸ–** ಛೇ ಛೇ ಇದಕ್ಕೆ ಪಗಾರ ಇಲ್ಲಾನ್ರೀ ಊರಲ್ಲಿ ಹಾಗೆ ನೋಡುತ್ತ ಬಂದ್ದು ಹೇಳಿದೆ ಈ ಓಣಿಯಿಂದ ಬರುವಾಗ ಇದೇ ಈಗ ಶಾಮುವಿನ ಹೆಂಡತಿ ಗೌರಮ್ಮನು ಗಂಡು ಕೂಸನ್ನು ಹೆತ್ತಳಂತೆ ಅದೂನು ಕೇಳಿದೆ. ಹಾಗೆ ದಾರಿಗುಂಟ ಸತ್ತಂಥವೂ ಹುಟ್ಟಿದವೂ ಕೇಳಿಕೋತ ಬಂದೆ ಇದಕೆಲ್ಲಿ ಬರಬೇಕ್ರೀ ಪಗಾರ.

**ರಾಮು–** ಓಹೋ ನಮ್ಮ ಶಾಮುವಿನ ಹೆಂಡತಿ ಗಂಡು ಹಡೆದಳೇ ಪಾಪ. ಅವರ ಮಾವ ಜೀವಂತ ಇದ್ದರೆ ಯಷ್ಟು ಹಿಗ್ಗುತ್ತಿದ್ದನೋ ಏನೋ ನೆಟ್ಟಗಾತು ಬಿಡ್ರಿ....

**ಶ್ರೀನಿವಾಸ–** ನಿಮಗೇನು ನೆಟ್ಟಗಾತು.... ನಮಗ ಮಾತ್ರ ಕಟ್ಟಾತು ಬಿಡ್ರೀ.....

**ರಾಮು–** ಆಂ.... ನಿಮಗೇನು ಕಟ್ಟಾತ್ರೀ.....

**ಶ್ರೀನಿವಾಸ–** ಬರತಕ್ಕ ತಿಂಗಳ ಪಗಾರ ಕಟ್ಟಾತ್ರೀ....

**ರಾಮು–** ಕಾರಣ....

**ಶ್ರೀನಿವಾಸ–** ಕಾರಣಂದರೆ ಅದಕ್ಕೆಲ್ಲ ಇವರೇ ಕಾರಣ ನಮ್ಮ ನಂಬರ ಗೌರಮ್ಮನ ಮನಿಗೆ ಬೀಳಲಾರದ್ದೇ ಕಾರಣ.

**ರಾಮು–** ಹೌದು ನೀವು ಹಾಕದಿದ್ದರೆ ಅವರೇನು ಮಾಡಬೇಕು.

**ಶ್ರೀನಿವಾಸ–** ಹಾಕಲಿಕ್ಕೆ ಹೋದಾಗ್ಯೆ ಇದ್ದಾನಲ್ಲ ಅವಳ ಗಂಡ ಶಾಮು ಬಿಳೇ ಗೋಡಿ ಕರ್‍ರಗೆ ಮಾಡಬೇಡ್ರಿ ಅಂದು ಲಾಠಿ ಪ್ರಹರ ಮಾಡಲಿಕ್ಕೆ ಬಂದನು. ತಕ್ಷಣವೇ ನಾನು ನನ್ನ ಕಾಲಿಗೆ ಓಡಲಿಕ್ಕೆ ಅಪ್ಪಣೆ ಕೊಟ್ಟೆ ಮುಖ್ಯವಾಗಿ ನನಗೆ ಕಾಡೋ ಕಾಲ ರಾಮು ನಮ್ಮ ಇನಸ್ಪೆಕ್ಟರ್ ಬಂದು ಅದೇ ಮನಿ ತನಖೀ ಮಾಡಿದಾಗ್ಯೆ ಶೀರಿಯಲ್ ನಂಬರ ತಾರೀಖು ಇಲ್ಲದ್ದು

ನೋಡಿ ೩ ತಿಂಗಳು ಪಗಾರ ಕಟ್ಟು ಮಾಡಿದ್ದೇ ನನ್ನ ದುರ್ದೈವ

**ರಾಮು**– ನಿಜ ನಿಮ್ಮ ಅದೃಷ್ಟವೇ ನೆಟ್ಟಗಿಲ್ಲಾಂತ ತಿಳಿಯಬೇಕು. ಪಾಪ ಕಷ್ಟವಿಲ್ಲದೆ ಅಡ್ಡಾಡಿ ಪಗಾರ ತಿನ್ನುವವರಿಗೆ ಈ ರೀತಿ ಆಗಬಾರದಿತ್ತು.

**ಶ್ರೀನಿವಾಸ**– ಆಗಲಿ ಬರ್ತೀನಿ ರಾಮೂ, ಇನ್ನೂ ಮನೆಗಳಿವೆ ಬರ್ತೀನಿ. ಹೋಗುತ್ತಾನೆ)

**ರಾಮು**– ಹೋಗ್ರೆಪಾ ಹೋಗ್ರಿ ಬಿಳೇಗೋಡಿ ಕರ್ರಗೆ ಮಾಡ್ರಿ ತಪ್ಪೇನಿದೆ. ಇದೇ ನಿಮ್ಮ ಡ್ಯೂಟಿ ಆ.... ಇದೇನು ನಮ್ಮ ಶ್ರೀಧರರು ಒಳ್ಳೇ ಜೋರಾಗಿ ಹೊರಟಾರಲ್ಲ. ಬರಲಿ, ಬರಲಿ. (ಪೇಪರ ಓದುತ್ತ ನಿಲ್ಲುತ್ತಾನೆ.)

**ಶ್ರೀಧರ**– ಇದೇನೋ ರಾಮು ದಾರಿಯಲ್ಲೇ ಒಳ್ಳೇ ಜೋರಾಗಿ ನೋಡುವಿಯಲ್ಲಾ ಪೇಪರ್. ಏನಾದರೂ ವಿಶೇಷ ಸುದ್ದಿ ಇರಬಹುದಲ್ವೆ

**ರಾಮು**– ಆ....ಹಾ ವಿಶೇಷ ಇದ್ದರೇನೇ ಆತುರದಿಂದ ದಾರಿಯಲ್ಲಿ ಓದಬೇಕಾಗುತ್ತದೆ. ಇಲ್ಲಿ ನೋಡು ಶ್ರೀಧರಾ ಅರ್ಧ ಪೇಜಿನವರೆಗೆ ಕನ್ಯಗಳ ಅಡ್ವರ್‌ಟೈಜ್ ನಡೆದಿದೆ. ಇಷ್ಟೊಂದು ವರಗಳು ಎಲ್ಲಿ ಸಿಗಬೇಕೂ ಅಂದೆ ನೂರು ಸಂತಾನ ಹೆಂಣಾದರೆ ಮೂವತ್ತರಷ್ಟು ಗಂಡು ಸಂತಾನಗಳು ಜನಿಸುವವಂತೆ ಅಂದಮೇಲೆ ನವಯುಗದಲ್ಲಿ ಸ್ತ್ರೀಯುಗವಾಗಿದೆಯೆಂದು ತಿಳಿದೇ ಸ್ಕೂಲುಗಳಲ್ಲಿ ಇವರಿಗೆ ನಾಟಕ ನೃತ್ಯ ಕವನ ಹೆಚ್ಚಾಗಿ ಕಲಿಸುತ್ತಾರೆಂದು ತಿಳಿದು ಬಂತು. ಹೌದ ಹೌದು.

**ಶ್ರೀಧರ**– ಅಂದರೆ.....

**ರಾಮು**– ಅಂದರೆ ಇಷ್ಟೇ. ಮುಂದೆ ಇವರ ಜೀವನಗಳು ಸುರಕ್ಷಿತವಾಗಿ ಸಾಗಲೆಂದೇ ಇವರಿಗೆ ಸಂಗೀತ ನೃತ್ಯ ಕಲಿಸುತ್ತಾರೆ. ನೋಡು ಶ್ರೀಧರಾ ಈಗಿನ ಸಾಲಿಮಾಸ್ತರ ಜನರು. ಬಹಳ ಬುದ್ಧಿವಂತರು. ಮುಂದಿನ ಆಗಮಾನ ಬಲ್ಲವರೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ.

**ಶ್ರೀಧರ**– ಅಲ್ಲೋ ರಾಮು ಸಂಗೀತ ನೃತ್ಯದಿಂದ ಸ್ತ್ರೀಯರಿಗೇನಯ್ಯ ಪ್ರಯೋಜನ.

**ರಾಮು**– ಚೇರಮನ್ರೇ ಇದರಲ್ಲಿ ನಿಮ್ಮ ತಲೆ ಓಡುವದೇ ಇಲ್ಲಾನ್ನು. ಕನ್ಯಗಳು ಹೆಚ್ಚಾಗಿ ವರಗಳು ಕಡಿಮೆ ಆದರೆ ಇದೇ ನೃತ್ಯವೇ ಅವರ ಜೀವನೋದ್ಧಾರವೆನ್ನುವದನ್ನು ಮರೆತಿರಬಹುದಲ್ಲವೇ.....

**ಶ್ರೀಧರ**– ನಿನ್ನ ಮಾತಿನ ಅರ್ಥವೇ ಆಗದಯ್ಯ......

ರಾಮು– ನಿಜ ಕಂಡಕಂಡವರಿಗೆ ನನ್ನ ಮಾತಿನ ಅರ್ಥವೇ ಆಗದು ನೋಡ್ರೀ. ಕನ್ಯಗಳಿಗೆ ಸಾಕಷ್ಟು ವರಗಳೇ ಸಿಗದಿದ್ದ ಪಕ್ಷದಲ್ಲಿ ಕನ್ಯಗಳ ಜೀವನವು ಹಾಳಾಗುವದೆಂದೇ ನೃತ್ಯ ಸಂಗೀತ ಕಲ್ಸಿದ್ದರೆ ಸಿನೇಮಾ ನಾಟಕ ಇವುಗಳಲ್ಲಿ ಪಾತ್ರದಾರಿಗಳಾಗಿ ಸರ್ವರಿಗೂ ಮನಾನಂದ ತೋರಿ ತಮ್ಮ ಜೀವನವನ್ನು ಆನಂಬದಿಂದ ಸಾಗಿಸಲೆಂದೇ ಈಗಿನ ಸ್ಕೂಲಿನಲ್ಲಿ ಇದರ ಕ್ಲಾಸ ಇಟ್ಟಿರುತ್ತಾರೆಂದು ತಿಳಿದಿದ್ದೇನೆ. ಇದಕ್ಕೂ ಹೆಚ್ಚಾಗಿ ಕಲಿಯಬೇಕಾದರೆ ಅಲ್ಲೇದಲ್ಲೇ ಕಲಾಮಂದಿರಗಳು ಕೈಮಾಡಿ ಕರೆಯುತ್ತಿವೆ. ಹೆಂಣು ಬಳಗವನ್ನು ಅದಕ್ಕಾಗೇ ಹೆಂಣು ಹಡೆದ ಮಹಾಶಯರ ಪುಣ್ಯಕ್ಕೆ ಬೇಲಿಯೇ ಇಲ್ಲವೆಂದು ತಿಳಿದಿದ್ದೇನೆ ಯಾಕ್ರೀ.

ಶ್ರೀಧರ– ಸಾಕುಮಾಡಯ್ಯಾ ನಿನ್ನ ಕೀರ್ತನ, ಕುಲೀನ ಸ್ತ್ರೀಯರೆಲ್ಲ, ಕುಣಿಯುತ್ತ ಸಿನೆಮಾಕ್ಕೆ ಹೋಗುವರೇನೋ ರಾಮು.

ರಾಮು– ಅಂದರೆ ಸೀನೆಮಾದಲ್ಲಿ ಸಧ್ಯ ಪಾತ್ರಧಾರಿಗಳೆಲ್ಲ ಪಾತರದವರೆಂತಲೇ ನಿಮ್ಮ ಅಭಿಪ್ರಾಯವೇ. ನೂರಕ್ಕೆ ೫೦ ರಷ್ಟು ಬ್ರಾಹ್ಮಣರೂ, ೨೫ ರಷ್ಟು ಮುಸ್ಲೀಮರೂ, ೨೫ ರಷ್ಟು ಇನ್ನುಳಿದ ಎಲ್ಲಾ ಜಾತಿಯವರಿಂದಲೇ ಸೀನೇಮಾ ರಂಗಭೂಮಿ ಸಂಗಮವಾಗಿ ತೋರುತ್ತಿದೆ. ಇದನ್ನು ತಿಳಿದೇ ನಿಮ್ಮ ಮಗಳು ಲಗ್ನವೇ ಬೇಡವೆಂದು ಹೇಳುತ್ತಾಳೆ. ಶಾಮಲಾ ನಾಟಕದಲ್ಲಿ ಪಾತ್ರ ವಹಿಸಿದ್ದು ನೋಡಿಲ್ಲವೇ ನಾವು ನೀವು ಸಂಗೀತದಲ್ಲಿ ಯಂತೂ ಬಹು ಕುಶಲಳು ಸ್ಕೂಲಿನ ನಾಟಕದಲ್ಲಿ ಮಾಡಿದ ನೃತ್ಯವಂತೂ ಹೇಳಲಿಕ್ಕೆಬಾರದು ಅಂದಮೇಲೆ....

ಶ್ರೀಧರ– ಸಾಕು ಬಿಡು ರಾಮೂ. ನಾನಾದರೂ ಸೀನೆಮಾಕ್ಕೆ ಕಳಿಸುವನೆಂದೇ ನಿನ್ನ ಅಭಿಪ್ರಾಯ.

ರಾಮು– ಛೇ ಛೇ ಛೇ, ನಿಮ್ಮದು ಬಹಾಳ ತಪ್ಪು ಕಲ್ಪನೆ ನೀವ್ಯಾಕೆ ಕಳಿಸಲಿಕ್ಕೆ ಖರ್ಚು ಮಾಡಿ ಹೋಗುವಿರಿ ಕೂತಲ್ಲೇ ಒಂದು ಅಪ್ಲಿಕೇಷನ ಬರೆದು ಕಳ್ಸಿದರೆ ಸಾಕು ಮದ್ರಾಸಿನಿಂದ ತಾವೇ ಬಂದು ಕರೆದುಕೊಂಡು ಹೋಗುತ್ತಾರೆ ಅದರಲ್ಲಿ ಲಗ್ನವಾಗದೆ ಇದ್ದಂಥ ಹೆಂಣುಗಳಿಗೆ ಬೆಲೆ ಬಹಳ ಕೇಳಿದಷ್ಟು ದುಡ್ಡು ಕೊಡುತ್ತಾರೆ ಇವರ ವ್ಯವಸ್ಥೆ ನೋಡಿದರಂತೂ ತೀರೇ ಹೋತು ಸೀನೆಮಾ ನಟಿಯರಿಗಿದ್ದ ಬೆಲೆ ಸಧ್ಯ ಭಾರತದ ಮಂತ್ರಿಗಳಿಗೆ ಸಹಾ ದೊರೆಯಲಾರದು....

ಶ್ರೀಧರ– ಇರಲಿ ಸಾಕು ಮಾಡಯ್ಯಾ ನಿನ್ನ ಕುಚೇಷ್ಟೆ ನಮ್ಮ ಶಾಮಲಾಗೆ ಇದೇ

ತಿಂಗಳಲ್ಲೇ ವರನನ್ನು ಶೋಧಿಸಿ ಲಗ್ನ ಮಾಡುವ ವ್ಯವಸ್ಥೆಯನ್ನು ಮಾಡುತ್ತೇನೆ ಅಲಕ್ಷ ಮಾಡಿದರೆ ಅನರ್ಥಕ್ಕೆ ಗುರಿಯಾಗಬಹುದು.... ಇರಲಿ ರಾಮು ನಾನೊಂದು ಸಮಾಚಾರ ನಿನ್ನ ಮುಂದೆ ಹೇಳಲು ಬಂದರೆ ನೀನೊಂದು ಹಚ್ಚಿ ಬಟ್ಟೆಂಗಳೆ ಯಲ್ಲಾ ಕೂಡಿಕೊಂಡು ನನ್ನ ಮನಕೆ ಸಮಾಧಾನವೇ ಇಲ್ಲದಾಗಿದೆ ಅಪಮಾನಕ್ಕೆ ಅಪಾರ ದುಃಖವಾಗಿದೆ ರಾಮೂ ಏನು ಮಾಡಲಿ ಹೇಳು....

**ರಾಮು–** ಅಪಮಾನ ಮತ್ತೇನಯ್ಯ ನಿನಗೆ ಅಪಮಾನ.... ಛೇ ಛೇ ಮರಣ ಬಂದರೂ ಚಿಂತೆ ಇಲ್ಲ ಮಾನಕ್ಕೆ ಮಾತ್ರ ಚ್ಯುತಿ ಬರಬಾರದಯ್ಯಾ ಬರಬಾರದು.... ಸಧ್ಯ ಏನಾಗಿದೆ.

**ಶ್ರೀಧರ–** ರಾಮು ನನಗೆ ಇನ್ನಾರಿಂದಲೂ ಅಲ್ಲವು ಅವಳೇ ಆ ಗೌರಿಯಿಂದಲೆ... ಆದದ್ದು ಹೇಳಲಿಕ್ಕೆ ಬಾರದಂತಿದೆ ರಾಮೂ ಅದಕ್ಕಾಗಿ ನಿನ್ನನ್ನು ಹುಡುಕುತ್ತ ಬಂದೆ ಇಲ್ಲಿ ಬಾ (ಕಿವಿಯಲ್ಲಿ ತಿದ್ದಿ ತಿದ್ದಿ ಹೇಳುತ್ತಾನೆ) ಅದಕ್ಕಾಗಿ ತಡಿಯಲಾರೆ ಬರುತ್ತೇನೆ. (ಹೋಗುತ್ತಾನೆ.)

**ರಾಮು–** ಏ....ಏ ನಿಲ್ಲೋ ಶ್ರೀಧರಾ.... ಅಲೆ ಹೋಗೇಬಿಟ್ಟನಲ್ಲೋ.... ಅಯ್ಯೋ..... ಶ್ರೀಧರಾ ನೀನು ಇಷ್ಟು ಕೆಟ್ಟವನಿರುವಿಯಂದು ನಾನು ತಿಳಿದಿರಲಿಲ್ಲ ಗೌರಿ ನಿನ್ನ ವಶವಾಗದಿದ್ದರೆ ಅವಳ ಮನಿ ಜಪ್ತಿ ಮಾಡಿಸುವಿಯಾ ಇದೇನು ಕೇಳಿದೆ.... ಪಾಪ ಅವಳು ಹಡೆದು ಯಳೇ ಕೂಸನ್ನು ಕಟ್ಟಿಕೊಂಡು ಯಲ್ಲಿಗೆ ಹೋಗಬೇಕು, ಇವನಿಗೆ ಹೊರ್ತಾದವರಿಗೆ ಈ ಊರಲ್ಲಿ ಯಾರ ಮನೆಯಲ್ಲೂ ಸ್ಥಳವಿಲ್ಲ ಸಧ್ಯ ನಾನೂ ಸಹಾಯ ಮಾಡುವಂತಿಲ್ಲ.... ಆಗಲಿ ಯಲ್ಲಿಯವರೆಗೆ ಇವನ ನಾಟಕಕ್ಕೆ ಕಳೆ ಬರುತ್ತದೋ ನೋಡುತ್ತೇನೆ. ಮುಂದಾದರೂ ಗೌರಿಗೆ ಎಂಥಾ ವಿಪತ್ತು ತಂದೊಡ್ಡುವನೋ ದೇವರಿಗೆ ಗೊತ್ತು ಇರಲಿ ಮುಳ್ಳು ನಟ್ಟರೆ ಮುಳ್ಳಿನಿಂದಲೇ ತಗೆದಂತೆ ಇವನ ಮಗಳಿಂದಲೇ ಇವನಿಗೆ ಪ್ರಾಯಶ್ಚಿತ್ತ ಮಾಡಿಸುತ್ತೇನೆ. ಈಗಲೇ ಶ್ರೀಧರನ ಮನೆಗೆ ಹೋಗಿ ಮುಂದಿನ ವಿಚಾರ ಮಾಡುತ್ತೇನೆ..... (ಹೋಗುವಾಗ್ಯೆ ಹಿಂದೆ ಶಾಮಲೆ ಬರುತ್ತಾಳೆ ಒಗೆದ ಅರವಿ ಗಂಟಿರಬೇಕು)

**ಶಾಮಲಾ–** ಮುಂದಿನ ವಿಚಾರ ಮಾಡೇಬಿಟ್ಟಿದ್ದೀರಾ....ಆಗಲೇ.... (ನಗುತ್ತ) ಇದೇನು ಯಾರಿಲ್ಲದ ಜಾಗದಲ್ಲಿ ಒಬ್ಬರೇ ನಿಂತು ಆಲೋಚಿಸುತ್ತಿರುವಿರಿ.....

**ರಾಮು–** ಬಾ ಶಾಮಲಾ.... ಸಧ್ಯ ನಿನ್ನಲ್ಲಿಗೇನೇ ಬರುತ್ತಿದ್ದೆ ನೀನೇ ಬಂದೆ ನನ್ನ ಸುದೈವ.....

**ಶಾಮಲಾ–** ಹುಂ ನಿನ್ನ ಸುದೈವ.... ಆಹಹಹಹಹಾ.... (ನಕ್ಕು) ನನ್ನ ಸುದೈವ ಕೂಡಿ ಬಂದ ಮಾತ್ರ ನಿನ್ನ ಸುದೈವ ಇಲ್ಲದಿದ್ದರೆ ಮಾತ್ರ ದುರ್ದೈವವೇ ಸರಿ........

**ರಾಮು–** ಆ ಮಾತಂತೂ ಇರಲಿ ಶಾಮಲಾ ಬರಬರುತ್ತ ನಿಮ್ಮಪ್ಪನ ನಡಾವಳಿ ಬಹಳ ಕೆಡಹತ್ತಿದೆ. ಕಂಡ ಕಂಡ ಸ್ತ್ರೀಯರ ಮೇಲೆ ಕಂಣಿಕ್ಕಿ ಬಲಾತ್ಕಾರ ಮಾಡುತ್ತ ತನ್ನ ಅಧಿಕಾರದ ದರ್ಪವನ್ನು ತೋರಿಸಹತ್ತಿದ್ದಾನೆ. ನೀನು ಕೇಳಿಲ್ಲವೇ ಈ ದಿವ್ಸದ ಸುದ್ದಿಯನ್ನು....

**ಶಾಮಲಾ–** (ಆಶ್ಚರ್ಯದಿಂದ) ಈ ದಿನದ ಸುದ್ದಿ ಮತ್ತೇನಾಗಿದೆ.....

**ರಾಮು–** ಮತ್ತೆನಾಗಬೇಕು ಗೌರಿಯ ಮನೆಯನ್ನು ಜಪ್ತಿ ಮಾಡಿ ತನ್ನ ವಶಕ್ಕೆ ತಕ್ಕೊಳ್ಳಬೇಕು ಪಾಪ ಆ ಗೌರಿ ಇಂದಿನ ದಿನವೇ ಉದಯಕ್ಕೆ ಗಂಡುಮಗುವನ್ನು ಹೆತ್ತಿದ್ದಾಳೆ ಆ ಕಳಲನ್ನು ಕಟ್ಟಿಕೊಂಡು ಎಲ್ಲಿಗೆ ಹೋಗಬೇಕು....

**ಶಾಮಲಾ–** ಏನೂ ಗೌರಿ ಹಡೆದಳೇ.... ಗಂಡು ಕೂಸೇ....

**ರಾಮು–** ನಿಜ ಹುಡುಗನು ಹುಟ್ಟಿದ ಮುಹೂರ್ತವೇ ಚನ್ನಾಗಿರಲಿಕ್ಕಿಲ್ಲವೇ....

**ಶಾಮಲಾ–** ಇಷ್ಟೆಲ್ಲ ಮಾಡಲಿಕ್ಕೆ ಕಾರಣ.....

**ರಾಮು–** ಆಗಾಗ್ಯೆ ಶಾಮು ಕೇಳಿದರೇನು ಕೇಳದಿದ್ದರೇನ ಅವನಿಗೆ ದುಡ್ಡು ಕೊಟ್ಟು ಬಡ್ಡಿಗೆ ಬಡ್ಡಿ ಹಾಕಿ ೨ ಸಾವೀರ ಮಾಡಿದ್ದೇ ಕಾರಣ.

**ಶಾಮಲಾ–** ಪ್ರೇಮದಿಂದ ಕೈಗಡವಾಗಿ ಕೊಟ್ಟ ಹಣಕ್ಕೆ ಬಡ್ಡಿ ಹಾಕುವದೇ.... ಆವನೊಡನೆ ವೈರತ್ವವೇಕೆ....

**ರಾಮು–** ಶಾಮಲಾ ನಿನಗೆ ಮುಖ್ಯವಾದ ಅರ್ಹವೇ ಆಗಿಲ್ಲ ಅವನ ಮೇಲೆ ಸಿಟ್ಟಿನಿಂದಲ್ಲ ಇದೆಲ್ಲಕ್ಕೂ ಗೌರಿಯೇ ಕಾರಣಳು. ಆಕೆಯು ಸರಳ ರೀತಿಯಲ್ಲಿ ವಶವಾಗಿದ್ದರೆ ಮನಿ ಜಪ್ತಿಯ ಸುದ್ದಿಯೇ ಇರಲಿಲ್ಲ.... ಮುಂದಾದರೂ ಕಷ್ಟ ಸೋಸದೆ ವಶವಾಗುತ್ತಾಳೆಂಬ ಭರವಸೆ ಇಟ್ಟಿದ್ದಾನೆ ತಿಳಿಯಿತೋ....

**ಶಾಮಲಾ–** ಅಂದರೆ ನಿಜವಾಗಿ ಅವಳನ್ನು ಹೊರಗೆ ಹಾಕುವನೇ.... ರಾಮೂ.....

**ರಾಮು–** ಇನ್ನೂ ಅನುಮಾನವೇ ಶಾಮಲಾ.... ನನಗೆ ಹೇಳಿ ಹೋಗಿ ೨ ಘಂಟೆಯಾಯಿತು ಆಗಲೇ ಕೆಲ್ಸವಾಗಿರಬೇಕು.

**ಶಾಮಲಾ–** ಹಾಗಾದರೆ ಈಗಲೇ ಮನೆಗೆ ಹೋಗಿ ಅಮ್ಮನಿಗೆ ತಿಳಿಸೋಣ ನೀನು ನಡೆ ಹೋಗೋಣ.....

**ರಾಮು–** ಹುಚ್ಚೀ ಸಧ್ಯ ನಿಮ್ಮಪ್ಪನ ತಲೆ ಕೆಟ್ಟಿದೆ ಯಾರಿಗೂ ಹೆದರುವಂತಿಲ್ಲ ಇಷ್ಟಕ್ಕೆ ತೀರಲಿಲ್ಲ ಮನೆಯಿಂದ ಗೌರಿ ಹೋದರೂ ಆಕಿಗೆ ಉಳಿಗಾಲವಿಲ್ಲೆಂದು ನನಗೆ ತೋರುತ್ತದೆ ಹುಟ್ಟಿದ ಹುಡುಗನ ಹಣೇ ಬರಹ ಹೇಗಿದೆಯೋ ದೇವರಿಗೆ ಗೊತ್ತು.

**ಶಾಮಲಾ–** ನಿಜ ನೀವು ಹೇಳಿದಂತೆ ಮುಂದಾದರೂ ಗೌರಿಗೆ ಹೆಚ್ಚಿನ ತ್ರಾಸ ಆಗುವದೇ ಖಂಡಿತವು.....

**ರಾಮು–** ಅದಕ್ಕಾಗಿ ಶಾಮಲಾ ಅವಳನ್ನು ಹೇಗಾದರೂ ಮಾಡಿ ನಾವಿಬ್ಬರೂ ಕಾಪಾಡಲೇಬೇಕು ನೀನು ಸಹಾಯಕಳಾಗುವಿಯಾ....

**ಶಾಮಲಾ–** ಹುಂ.... ನಾನು ಸಹಾಯಕಳಾಗಬೇಕೇ ನಿನಗೆ.... ಹುಂ ನೀನೇನೋ ಪುಣ್ಯದ ಕೆಲಸ ಮಾಡುತ್ತೀ.... ಪುಣ್ಯ ಕಟ್ಟಿಕೊಳ್ಳುತ್ತೀ.... ಪರಂತು ಇದಕ್ಕೆ ನನ್ನ ಸಹಾಯವೇಕೆ.... ಮೇಲಾಗಿ ನೀನು ಗಂಡಸು.... ನಾನು ಹೆಂಗಸು.... ನನ್ನಿಂದಲೇ ಬೇಕಲ್ಲವೆ ನಿನಗೆ ಸಹಾಯ..... ಹುಂ ನೀನು ನನಗೇನಾಗಬೇಕು. ನೋಡಿದವರು ಏನಂದಾರು ಸಾಕು ಸುಮ್ಮನಿರು ಚಪ್ಪಾಳೆ ತಟ್ಟಿ ನಕ್ಕಾರು.....

**ರಾಮು–** ಇದೇನು ಶಾಮಲಾ ಗೌರಿಯ ಕಷ್ಟವನ್ನು ನಾವಿಬ್ಬರೂ ಕೂಡಿ ದೂರ ಮಾಡಿದರೆ ಜನರು ನಗುತ್ತಾರೆಯೇ ಇದೇನು....

**ಶಾಮು–** ನಗುವದಿಲ್ಲ ಬೊಬ್ಬೆ ಇಡುತ್ತಾರೆ ನಿಮ್ಮ ಕೈಲಾದರೆ ಒಬ್ಬರೇ ಮಾಡಿರಿ. ಕೈಲಾಗದಿದ್ದರೆ ಬಿಟ್ಟು ಬಿಡಿ ನಾನೊಬ್ಬಳೇ ನೋಡಿ ಕೊಳ್ಳುತ್ತೇನೆ. ತನಗೆ ಸಹಾಯ ಅಹಹಹಹ (ನಕ್ಕು) ನೀನೇನು ಬೀಗನೋ ಸೋದರ ಮಾವನೋ ಹುಂ ನೀನ್ಯಾರೋ ನಾನ್ಯಾರೋ ನಿನಗೇಕೆ ನನ್ನಿ ಸಹಾಯದ ಮಾತು ನೀನಾಗೇ ಕೆಡಿಸಿಕೊಂಡಮೇಲೆ ನನ್ನ ಸಹಾಯ ಕೇಳಲು ಧೈರ್ಯವಿದೆಯೇ ನಿಮಗೆ ಅದೆಲ್ಲ ಮರೆತು ಸಹಾಯ ಕೇಳುತ್ತಾನೆ.... ಸಾಕು ಸುಮ್ಮನಿರು (ತಿರುಗಿ ನಿಲ್ಲುವಳು)

**ರಾಮು–** ಓಹೋ ಈಗ ಅರ್ಥವಾಯಿತು. ಶಾಮಲಾ ನಿಜವಾಗಿ ಸಿಟ್ಟು ಬಂದಿತೇ ಇಲ್ಲಿ ನೋಡು.

**ಶಾಮಲಾ–**ಎಲ್ಲಿ ನೋಡುವದೇಬೇಡ ಇನ್ನು ಮೇಲೆ ನಿನ್ನೊಡನೆ ಮಾತು ಸಹಬೇಡವಾಗಿದೆ ಇಂದೇ ಕಡೆಯ ದರ್ಶನವೆಂದು ಖಂಡಿತವಾಗಿ ತಿಳಕೊಳ್ಳಿ ಇನ್ನು ಮೇಲೆ ಯಲ್ಯಾದರೂ ನಾನು ಕಂಡರೆ ನೀವು ಮಾತಾಡಿಸಕೂಡದು ಹೊತ್ತಾಗಿದೆ ಬರ್ತೀನಿ (ತನ್ನ ಅರಬಿ ಗಂಟನ್ನು ಬಗಲಲ್ಲಿಟ್ಟುಕೊಳ್ಳುವಳು)

**ರಾಮು–** ಏನಿದು ಶಾಮಲಾ ನಿಜವಾಗಿ ನನ್ನ ಮೇಲೆ ಕೋಪವೇ ಹಾಗಾದರೆ ನನ್ನನ್ನು ಮಾತಾಡಿಸುವದಿಲ್ಲವೇ....

**ಶ್ಯಾಮಲಾ–** ಇಲ್ಲಾ – ಇಲ್ಲಾ ಇಲ್ಲ ಇನ್ನೆಷ್ಟು ಸಾರೆ ಹೇಳಲಿ (ಹೋಗಲಸುವಾಗುವಳು)

**ರಾಮು–** ನೋಡು ಶಾಮಲಾ ನನ್ನ ಮೇಲಿನ ಸಿಟ್ಟಿನ ಅರ್ಥವಾಗುತ್ತದೆ ಆದರೆ ನಿನ್ನನ್ನು ಲಗ್ನವಾಗಲಿಕ್ಕೆ ನನ್ನ ಮನದ ಪಂಥವೆಂದು ಅಡ್ಡಾಗಿ ದಾರಿ ಕಟ್ಟಿದೆ ಅದಕ್ಕಾಗೇ ನಿರಾಕರಿಸಿದ್ದು ನಿಜವಾದದ್ದನ್ನು ಹೇಳಿದ ಮೇಲಾದರೂ ನೀನು ನಂಬುವಿಯಾ.....

**ಶ್ಯಾಮಲಾ–** ಹೇಳು ಹೇಳುವದೆಲ್ಲವನ್ನು ಹೇಳೇಬೀಡು ನೋಡೋಣ

**ರಾಮು–** ನನ್ನ ಮಾತು ನಿನಗೆ ರುಚಿಸಲಿಕ್ಕಿಲ್ಲ ಅದಕ್ಕಾಗೇ ಹೇಳಲು ಹಿಂಜರಿವೆ. ಅದನ್ನು ಕೇಳಿಯಾದರೂ ನೀನು ಮಾಡುವದೇನಿದೆ.

**ಶಾಮಲಾ–**ನಾನು ಮಾಡುವದೇನಿಲ್ಲದಿದ್ದರೂ ಚಿಂತೆಯಿಲ್ಲ. ಇದಕ್ಕೆ ಗಾದೀ ಮಾತಿದೆ ಮನದೊಳಗೆ ಮಂಡಿಗೆ ಮಾಡಿದರೆ ಗೋದಿ ರೊಕ್ಕ ಕೊಡುವವರ್ಯಾರು ಎಂಬಂತೆ ಮನದಲ್ಲಿ ಹುಗಿದಿಟ್ಟ ಮಾತೂ ಅಂತ್ಯದಲ್ಲಿ ನೆಲದಲ್ಲಿ ಹುಗಿದ ಧನ ಇವೆಲ್ಲ ನಿಃಪ್ರಯೋಜನವೆಂದು ನಿಮ್ಮ ಇಂಗ್ಲೀಷ ವಾಕ್ಯದಲ್ಲಿ ನೀವು ಓದಿಲ್ಲವೇ.... ಓದಿದರೂ ಸಧ್ಯ ಮರೆತಂತಿದೆಯಲ್ಲವೇ.... ನಿಮ್ಮ ಮನದ ಆಶೆಯನ್ನು ಹೊರಚಲ್ಲಿರಿ ಅಂದರೆ ನನಗೆ ಅರ್ಥವಾಗುತ್ತದೆ.....

**ರಾಮು–** ನೋಡು ಶಾಮಲಾ ಮನುಷ್ಯನಾಗಿ ಹುಟ್ಟಿದ ಮೇಲೆ ಜಗತ್ಯದ ಕಲ್ಯಾಣಕ್ಕಾಗಿ ಮಹಾತ್ಮಾ ಗಾಂಧಿಯವರು ಘಣತೊಟ್ಟು ತಮ್ಮ ತನು ಮನವನ್ನು ಮುಡುಪಿಟ್ಟು ಆಂಗ್ಲರು ಮಾಡಿದ ಅತ್ಯಾಚಾರಕ್ಕೆ ಬೆದರದೆ ತಮ್ಮ ಶಾಂತಿಯ ಖಡ್ಗವೇ ಅವರನ್ನು ಸದೆ ಬಡೆಯಿತು ಕಡೆಗೆ ತಾವು ಮಾಡಿದ ಪಂಥ ಈಡೇರಿತು.... ಭಾರತವು ಸ್ವತಂತ್ರವಾಯಿತು. ಅಲ್ಲದೆ

ಅವರಿಗೆ ಮಹಾತ್ಮಾ ಎಂಬ ಪದವಿಯು ಸರ್ವಾನುಮತದಿಂದ ಸ್ಥಾಪಿತವಾಯಿತು. ಅವರು ಮಾಡುವಂಥ ಸತ್ಯಾಗ್ರಹಕ್ಕೆ ಎಷ್ಟೋ ಗ್ರಹಗಳು ಅಡ್ಡಾದರೂ ತಮ್ಮ ಮನದ ಪಂಥವನ್ನು ಕೈಬಿಡಲಿಲ್ಲವು.... ಅದರಂತೆ ನಾನಾದರೂ ಕನ್ನಡಿಗರ ಆತ್ಮಕ್ಕೆ ಶಾಂತಿಯಾಗುವಂಥ ಒಂದು ಪಂಥವನ್ನು ಮಾಡಿದ್ದೇನೆ. ಅದು ಈಡೇರುವವರೆಗೆ ನಾನು ಬ್ರಹ್ಮಚರ್ಯ ವ್ರತವನ್ನು ಪಾಲಿಸುತ್ತೇನೆಂದು ನನ್ನ ಮನಕ್ಕೆ ಹೇಳಿಕೊಂಡಿದ್ದೇನೆ ಇಂಥಾ ಸಮಯದಲ್ಲಿ ಕಾಮಪೀಡಿತರ ಮೋಹಜಾಲಕ್ಕೆ ಬೀಳತಕ್ಕವನು ನಾನಲ್ಲ ಯಂದಿಗೆ ನನ್ನ ಮನದ ಪಂಥ ಈಡೇರುವದೋ ಅಂದೇ ನನಗೆ ಲಗ್ನದ ಸುಮೂಹರ್ತವು ಕೂಡಿದೆ ಎಂದು ತಿಳಿಯಬೇಕು ಅದಕ್ಕಾಗಿ ಶಾಮಲಾ....

**ಶಾಮಲಾ**– ಇರಲಿ ರಾಮೂ ಬಿಚ್ಚಿ ಹೇಳಲಾರೆಯಾ ನಿನ್ನ ಮನದ ನಿಶ್ಚಯವನ್ನು ಸ್ವಚ್ಛವಾಗಿ ತಿಳಿದರೆ ಮಾತ್ರ ನಾನೂ ಹಿಂಬಾಲಿಸುವೆ ನಿನ್ನ ಪಥಕ್ಕೆ ಹೇಳುವದಲ್ಲವೇ ಅದು....

**ರಾಮು**– ನನ್ನ ಮನದ ಪಂಥ ಇಷ್ಟೇ ಮಹಾತ್ಮರ ಕೃಪೆಯಿಂದ ಸ್ವತಂತ್ರ ಭಾರತವಾಗಿ ಎಷ್ಟೋ ದಿವಸಗಳು ಗತಿಸಿದರೂ ಕರ್ನಾಟಕ ರಾಜ್ಯವೆಂದು ಕರೇಯದೇ ಎಷ್ಟೋ ಜನರು ತಮ್ಮ ತಮ್ಮ ಸ್ವಾರ್ಥಕ್ಕಾಗಿ ಮೈಸೂರು ರಾಜ್ಯವೆಂದು ಕರೆಯ ಹತ್ತಿ ಭಾರತ ಮಾತೆಗೆ ದ್ರೋಹ ಬಗೆಯಹತ್ತಿರುವರು. ಕರ್ನಾಟಕ ರಾಜ್ಯವೆಂದು ಕರೆಯಲು ಅಸಹ್ಯ ಪಡುವ ಮಧಾಂಧರು ನಾಶವಾಗಿ ಎಂದಿಗೆ ಕರ್ನಾಟಕ ರಾಜ್ಯವೆಂದು ಜೈಭೇರಿಯಾಗುವದೋ ಅಂದೇ ನನ್ನ ಲಗ್ನದ ಸುಮುಹೂರ್ತವು ಕೂಡಿದೆ ಎಂದು ತಿಳಿ. ಅಲ್ಲಿಯವರೆಗೆ ಬ್ರಹ್ಮಚಾರಿಯಾಗಿ ಬಾಳಲೇಬೇಕು. ಇದೇ ನನ್ನ ಮನದ ಪಂಥ ತಿಳಿಯಿತೇ ಅದಕ್ಕಾಗಿ ನೀನು ನನ್ನ ದಾರಿ ನೋಡಬೇಡ ತಿಳಿಯಿತೇ.

**ಶ್ಯಾಮಲಾ**– ಓಹೋ ಈಗ ತಿಳಿಯಿತು ಸರೆ ಕನ್ನಡಿಗರ ಆತ್ಮಕ್ಕೆ ಶಾಂತಿಯಾಗುವಂಥ ಕಾರ್ಯಕ್ಕಲ್ಲವೇ ನಿಮ್ಮ ಪಂಥ ಆಗಲಿ ತಪ್ಪೇನಿದೆ ನಾನಾದರೂ ನಿಮ್ಮಂತೆ ಅಲ್ಲಿಯವರೆಗೂ ಬ್ರಹ್ಮಚಾರಿಯಾಗೇ ಬಾಳುವೆನೆಂದು ಆಣೀಮಾಡಿ ಹೇಳುತ್ತೇನೆ ಇದಕ್ಕಾದರೂ ಒಪ್ಪಿವಿರಾ....

**ರಾಮು**– ಇದೇನು ಶಾಮಲಾ ನಿನಗೆ ಹುಚ್ಚು ಹಿಡಿಯಿತೇ ನನ್ನಂತೆ ನಿನಗೇಕೆ ಈ ಕಠೋರ ವ್ರತ. ಯಾವನಾದರೂ ಒಬ್ಬ ಶ್ರೀಮಂತ ವರನನ್ನು ಮಾಡಿಕೊಂಡು ಸುಖಿಯಾಗಿರಬಾರದೇ.

ಶಾಮಲಾ– ನಿಜ ನಾನೇನೋ ಹಾಗೆ ಮಾಡಿದ್ದೆ ಆದರೆ ನನ್ನಂತೆ ಬರಲೊಲ್ಲದು ನನ್ನ ಮನಸ್ಸು ರಾಮೂ ನಿನ್ನ ಹೃದಯ ಕಮಲಕ್ಕೆ ನನ್ನ ಮನವೆಂಬ ಭೃಂಗವು ಎಂದೋ ಸಿಕ್ಕುಬಿದ್ದಿದೆ ಅದೇ ಕಾಲಕ್ಕೆ ನನ್ನ ಪತಿಯಾಗಿರುವೆ ಈಗ ಮತ್ತೊಬ್ಬರ ಹೆಸರು ಹೇಳಲೇ ಇದು ಪಾತಿವ್ರತ್ಯದ ಲಕ್ಷಣವಲ್ಲ ಜಾರಿ ಹೋದ ಮನಸ್ಸು ಮತ್ತೆ ತಿರುಗಲಾರದು ಜನನಿಮಿತ್ಯಕ್ಕೆ ಮಾತ್ರ ಲಗ್ನವಾಗೋಣ.... ಎಲ್ಲಿಯವರೆಗೆ ಕರ್ನಾಟಕ ರಾಜ್ಯವೆಂದು ಸ್ಥಾಪಿತವಾಗಲಾರದೋ ಅಲ್ಲಿಯವರೆಗೆ ಇಬ್ಬರೂ ಬ್ರಹ್ಮಚರ್ಯ ವ್ರತವನ್ನೇ ಪಾಲಿಸೋಣ ನಿಜವಾಗಿ ಈ ಮಾತಿಗೆ ತಪ್ಪಲಾರೆ ಇದಕ್ಕೆ ನಿಮ್ಮ ಒಪ್ಪಿಗೆಯಾಗಲೇಬೇಕು.....

ರಾಮು– ಶಾಮಲಾ ನೀನು ಇಷ್ಟೊಂದು ನಿಶ್ಚಲವಾದ ಮನಸ್ಸುಳ್ಳವಳೆಂದು ನಾನು ತಿಳಿದಿರಲಿಲ್ಲ ಇಂದಿಗೆ ನನ್ನಂತೆ ಪಣತೊಟ್ಟು ನನ್ನ ಬೆನ್ನು ಹತ್ತಿದೆ ನನಗೆ ಆನಂದವಾಯಿತು. ಒಪ್ಪಿದರೆ ಲಗ್ನವಾಗಲು ಇನ್ನೇಕೆ ತಡ ಇದೋ ತಗೆದುಕೋ ನನ್ನಿಂದ ಪ್ರಮಾಣ ವಚನವನ್ನು (ಕೈಹಿಡಿದು ಕೈ ಮೇಲೆ ಕೈ ಹಾಕುವನು.)

ಶಾಮಲಾ– ಹಾಗಾದರೆ ಈ ವಿಷಯವನ್ನು ಇಂದೇ ಅಪ್ಪನಿಗೆ ತಿಳಿಸುತ್ತೇನೆ ಅಮ್ಮನಿಗಂತೂ ಮೊದಲೇ ತಿಳಿಸಿದ್ದೇನೆ.

ರಾಮು– ಆ.... ಹಾ.... ತಡೆ ನನ್ನ–ನಿನ್ನ ಲಗ್ನದ ವಿಷಯವು ಸ್ವಲ್ಪ ದಿವ್ಸ ಗುಪ್ತವಾಗೇ ಇರಲಿ. ಮೊದಲು ಗೌರಿಯ ಆಪತ್ಕಾಲ ದೂರಾದ ಮೇಲೆ ಅಪ್ಪನಿಗಾದರೂ ತಿಳಿಸು ಯಾರಿಗಾದರೂ ತಿಳಿಸು.....

ಶಾಮಲಾ– ಸರೆ ಹಾಗೆ ಆಗಲಿ ಗೌರಿಯ ಕಂಟಕ ನಿವಾರಣಾರ್ಥಕ್ಕೆ ನೀನು ಕರೆದಾಗ್ಯೆ ಬಂದು ನೀನು ಹೇಳಿದಂತೆ ಕೇಳಲು ಸಿದ್ಧಳಿದ್ದೇನೆ ಇದೇನು ಹೊತ್ತಾಯಿತು ಅಮ್ಮನು ಸಿಟ್ಟು ಮಾಡಬಹುದು ನಾನು ಬರಲೇ

ರಾಮು– ನಡೆಯಿನ್ನು, ಈ ದಿವ್ಸ ಮಾತಿನಲ್ಲಿ ನೀನೇ ಗೆದ್ದಿ ನಾನೇ ಸೋತೆ ನಡಿ ಹೊತ್ತಾಗಿದೆ (ನಗುತ್ತ ಹೋಗುತ್ತಾಳೆ.).....

===***=====***===

## ಪ್ರವೇಶ ೧೨

**(ಗುಡಿಸಲು ಸೀನು)**

(ಗೌರಿಯು ಗುಡಿಸಲಿನ ಮುಂದೆ ತೊಟ್ಟಿಲ ಕಟ್ಟಿ ಕೂಸನ್ನು ತೂಗುತ್ತ ಪದ ಹಾಡುತ್ತಾಳೆ.)

(ಪದ)

ತೂಗುವೇ ಮಲಗಯ್ಯ ಮಗುವೆ ನಾಗೇಶ ।
ರಾಗದಿಂದಲಿ ಹಾಡಿ ಹರಸುವೆ ಮಹೇಶಾ ಜೋ ಜೋ ।
ನೀ ಹುಟ್ಟಿದಾಲಯವು ನೀ ತೊರೆದು ಬಂದೇ ।
ನಿನಗೆ ಆಸರವು ಈ ಗುಡಿಸಲಿಗೆ ಇಂದೆ ।
ನನ್ನಂಥ ಪಾಪೀ ಹೃದಯದೀ ಬಂದೆ ।
ನಿನ್ನಿಂದ ಆಗಲಿ ಹೊಸ ಮನೆಯು ಮುಂದೇ ಜೋ ಜೋ ।

**ಗೌರಿ–** ಇಷ್ಟು ಹೋತ್ತಾದರೂ ನಮ್ಮವರು ಬರಲೇ ಇಲ್ಲವಲ್ಲಾ ಕಂದನಂತೂ ಮಲಗಿದನು. ನನಗೂ ನಿದ್ರೆ ಬಂದಿತು ನಾನೂ ಮಲಗಿಕೊಳ್ಳುತ್ತೇನೆ. ಬಂದರೆ ತಾವೇ ಯಬ್ಬಿಸುತ್ತಾರೆ. (ಗುಡಿಸಿಲಿನೊಳಗೆ ಹೋಗಿ ಮಲಗಿ ತಟ್ಟಿ ಮುಚ್ಚುತ್ತಾಳೆ.) (ಸ್ವಲ್ಪ ಹೊತ್ತಿನಲ್ಲಿ ಶ್ರೀಧರನು ವೇಷಧಾರಿಯಾಗಿ ನಾಲ್ಕು ಜನ ಸೇವಕರೊಂದಿಗೆ ಕೂಡಿಕೊಂಡು ಬಂದು ಸುತ್ತು ಮುತ್ತು ಅಡ್ಡಾಡಿ ಒಳಗೆ ನೋಡಿ ಕೈ ಸೊನ್ನೆ ಮಾಡುತ್ತ. ಕಡೆಗೆ ಗುಡಿಸಿಲಿಗೆ ಬೆಂಕಿ ಹಚ್ಚಿ ಓಡಿ ಹೋಗುತ್ತಾರೆ ಅವರ ಹಿಂದೆ ಇದ್ದ ರಾಮು ಉರಿ ಹೆಚ್ಚಾದ ಮೇಲೆ ಗದ್ದ ಮಾಡಿ).....

**ರಾಮು–** ಯಾರವರು ಗುಡಿಸಿಲಿನಲ್ಲಿ ಏಳ್ರೀ ಏಳ್ರೀ ಬೆಂಕಿ ಹತ್ತಿದೆ. ಲಗು ಏಳ್ರೀ (ಕೂಗುತ್ತಾನೆ.)

**ಗೌರಿ–** ಗೌರಿ (ಘಾಬರಿಯಿಂದ ಎದ್ದು ಹೊರಗೆ ಬಂದು) ಏನಣ್ಣಾ ಅಯ್ಯೋ ನನ್ನ ಕೂಸು ಅಯ್ಯೋ ನನ್ನ ಕಂದಮ್ಮ (ಚೀರುವಳು) (ರಾಮು ಒಳಗೆ ಹೋಗಿ ಕೂಸನ್ನೂ ಸಾಮಾನುಗಳನ್ನೂ ತಂದು ಹೊರಗೆ ಕೊಟ್ಟು)

**ರಾಮು–** ಯೇನಮ್ಮಾ ಗೌರಮ್ಮಾ ಇದೇನು ಅನಾಹುತ ನಾನು ನೋಡದಿದ್ದಲ್ಲಿ ನೀನು ಉಳಿಯುತ್ತಲೇ ಇಲ್ಲ ಶಾಮಣ್ಣನೆಲ್ಲಿ ಉರಲ್ಲಿಲ್ಲವೇನಮ್ಮಾ

**ಗೌರಿ–** ಇರುವರಂಣಾ ಹೊತ್ತು ಮುಳುಗುತ್ತಲೇ ಹೋದವರು ಇನ್ನೂ ಬಂದೇ ಇಲ್ಲ. ಒಳ್ಳೇ ವ್ಯಾಳ್ಯಕ್ಕೆ ನೀನು ಬಂದು ನಮ್ಮನ್ನು ರಕ್ಷಿಸಿದಿ ಅಂಣಾ ನಿಮ್ಮ ಉಪಕಾರ ಎಷ್ಟು ಹೇಳಿಕೊಂಡರೂ ತೀರದು ನನ್ನ ಕಂದನಂತೂ ಭಸ್ಮವಾಗೇ ಬಿಡುತ್ತಿದ್ದನು..... ನೋಡು ನಾಗೇಶಾ. ನಿನ್ನ ಮಾಮನಿಂದ ನೀನು ಉಳಿದಿಯಲ್ಲವೇ ನಾವು ಮರೆತರೂ ನೀನು ಮರೆಯಬೇಡಪ್ಪಾ (ಮುದ್ದು ಕೊಡುತ್ತಾಳೆ)

**ರಾಮು–** ಅಲ್ಲಮ್ಮಾ ಇನ್ನಾದರೂ ನಿನ್ನ ಗಂಡನನ್ನು ಮನೆಯಲ್ಲಿರಲಿಕ್ಕೆ ಹೇಳು. ಇಂದಿಲ್ಲ ನಾಳೆ ನಾನಾದರೂ ತಿಳಿಸುತ್ತೇನೆ ಅಕಸ್ಮಾತ್ತಾಗಿ ಬಂದೆ ಇಲ್ಲವಾದರೆ ಅನಾಹುತವೇ ಸರಿ ತಂಗೀ ಆಶ್ರಯವಾಗಿದ್ದ ಈ ಗುಡಿಸಲು ಸಧ್ಯ ರಾತ್ರೀಕಾಲದಲ್ಲಿ ನಿರಾಶ್ಯಕ್ಕೆ ಕಾರಣವಾಯಿತಲ್ಲಾ ಒಬ್ಬಳೇ ಇಲ್ಲಿ ಬೈಲಿನಲ್ಲಿ ಇರುವದಕ್ಕಿಂತ ಇಲ್ಲೇ ಸಮೀಪದಲ್ಲಿ ದೇವಸ್ಥಾನವಿದೆ ನಡೆಮ್ಮಾ ಕಳಿಸಿ ಬರುವೆ....

**ಗೌರಿ–** ಬೇಡಂಣಾ ನಾನು ಮಹಪಾಪಿಯು ನನಗೇಕೆ ಅಂಥಾ ದೇವಸ್ಥಾನ.... ಮನೆ–ಮಠ– ಗುಡಿ– ಗುಂಡಾರಗಳ ಆಶ್ರಯ ನನ್ನಂಥವಳಿಗೆ ಸಲ್ಲದಂಣಾ ಅಂಥವೆಲ್ಲ ಪುಣ್ಯ ಮಾಡಿ ಪುರುಷರಿಗೆ ಸಲ್ಲುವವು. ಇರಲಿ ಅವರು ಬರುವ ಹೊತ್ತಾಗಿದೆ. ಅಲ್ಲಿಯವರೆಗೆ ಇದೇ ಗಿಡದ ಚಾಟಿನಲ್ಲಿಯೇ ಕೂಡುತ್ತೇನೆ ಆ ಮೇಲೆ ಮುಂದಿನ ವಿಚಾರ ಅಣ್ಣಾ ನನಗಾಗಿ ನಿನಗೆ ಬೆಂಕಿಯ ಶೆಕೆಯು ಸಹ ತಟ್ಟಿದಂತಿದೆಯಲ್ಲವೇ.....

**ರಾಮು–** ಅದೇನೂ ಮಾಡಲಾರದು ಬಿಡಮ್ಮಾ ಆಗಲಿ ನಾನು ಬರುತ್ತೇನೆ ಒಟ್ಟಿ ಬಯಲಿಗೆ ಆಶ್ರಯ ಮಾಡಿದ ತಂಗೀಯನ್ನು ಬಿಟ್ಟು ಹೋಗುವದೇ ಕಷ್ಟವಾಗಿದೆ.... ಆಗಲಿ ದೇವರೆ ಕಾಪಾಡುವನು ಬರ್ತೀನಮ್ಮಾ– (ಹೋಗುವನು)...

**(ಗೌರಿ–** ಗಿಡದ ಆಸರಕ್ಕೆ ಕೂತು ಮಗನನ್ನು ತೊಡೆಯ ಮೇಲೆ ತೂಗುತ್ತಲೇ ನಿದ್ದೆ ಮಾಡುವಳು) (ಜನಪದ ಸಾಹಿತ್ಯ)

ಆಸರಿಲ್ಲದೆ ನಾನು ಗಾಳಿಯಾಶ್ರಯಳಾದೇ ।

ಬೇಸರವು ಕಳಿವೆ ನಾಗೇಶ ನಿನ್ನ ನೋಡಿ । ಬೇಸರವು ಕಳಿವೆ ನಾಗೇಶ.
ನೀನೀಗ ತಾಯಿಯಾಶ್ರಯವಾದರೆ ಮಲಗು ಕಂದಾ ॥
(ಹಾಡುತ್ತಲೇ ಗೌರಿ ನಿದ್ದೆ ಹೋಗುತ್ತಾಳೆ ಶ್ಯಾಮು ಬರುತ್ತಾನೆ)

**ಶ್ಯಾಮು–** (ಬರುತ್ತಲೇ ನೋಡಿ) ಹಾ ಇದೇನು ನೋಡುತ್ತಿರುವೆ ನನ್ನ ಗುಡಿಸಲು ಭಸ್ಮವಾಯಿತೇ ಗೌರೀ ಗೌರೀ (ಏಳುತ್ತಾಳೆ) ಇದಕ್ಕೆ ಬೆಂಕಿ ಹತ್ತಲು ಕಾರಣವೇನು?

**ಗೌರಿ–** (ಮಗನನ್ನು ಯತ್ತಿಕೊಂಡು) ಅದೆಲ್ಲ ದೇವರಿಗೆಗೊತ್ತು ನಿಮ್ಮ ಗೌರಿಯು ಈ ಅಗ್ನಿಯಿಂದ ಉಳಿದದ್ದೇ ಹೆಚ್ಚು ನಿಮ್ಮ ಕಂದನಂತೂ ಭಸ್ಮವಾಗುತ್ತಿದ್ದನು ನೀವು ಮಾತ್ರ ಪರದೇಶಿಗಳಾಗುತ್ತಿದ್ದಿರಿ ೧೨ ಘಂಟೆ ವರೆಗೆ ನಿಮ್ಮದಾರೀ ನೋಡಿದೆ ನೀವು ಬರಲಿಲ್ಲ ಒಳಗೆ ಹೋಗಿ ಮಲಗಿದೆ ನಿದ್ರೆ ಹತ್ತಿತು ಆಗ ಉರಿ ಹತ್ತಿದ್ದನ್ನು ಬಿ.ಎ. ರಾಮು ಕಂಡು ಓಡುತ್ತ ಬಂದು ಎಬ್ಬಿಸಿದನು ನಾನೊಬ್ಬಳೇ ಧಾವಿಸಿ ಹೊರಗೆ ಬಂದು. ನೋಡಿದೆ ಕಂದನು ಸಾಯುತ್ತಾನೆಂದು ಚೀರಿದೆ. ಅಂಥಾ ಬೆಂಕಿಯಲ್ಲಿ ರಾಮು ಹೋಗಿ ಮಗನನ್ನೂ ಯುಲ್ಲಾ ಸಾಮಾನುಗಳನ್ನೂ ತಂದಿರಿಸಿದನು ಇಲ್ಲವಾದರೆ ಸರ್ವವೂ ಇಂದುಲಯವೇ.....

**ಶಾಮು–** ಏನೂ ಅಂಥಾ ಅಪರಾತ್ರಿಯಲ್ಲಿ ರಾಮು ಬಂದಿದ್ದನೇ ಇಲ್ಲಿಗೆ ಹುಂ(ಹಲ್ಲು ಕಡಿಯುವನು)

**ಗೌರಿ–** ಅವನು ಬಂದದಕ್ಕಾಗೇ ನಾವು ಉಳಿದದ್ದು ಇಲ್ಲವಾದರೆ, ಅಯ್ಯೋ ದೊಡ್ಡ ಅನಾಹುತವಿದು

**ಶಾಮು–** (ಸಿಟ್ಟಿನಿಂದ) ಲೇ ರಾಮೂ ಅಂಥಾ ರಾತ್ರಿಯಲ್ಲಿ ಇಲ್ಲಿಗೆ ಬರಲು ನಿನಗೆ ಕೆಲಸವೇನಿತ್ತು ಥೂ ಪಾಪೀ ನೀನು ಆ ಶ್ರೀಧರನ ದೋಸ್ತನಲ್ಲವೇ ಆಗಲಿ ನೋಡಿಕೊಳ್ಳುತ್ತೇನೆ. ನಿಮ್ಮಿಬ್ಬರನ್ನು ಒಂದೇ ಮನೆಯಲ್ಲಿ ಹಾಕಿ ಬೆಂಕಿ ಹಚ್ಚಿ ಸುಡದಿದ್ದರೆ ನಾನು ಶಾಮಂಣನೇ ಅಲ್ಲವೆಂದು ತಿಳಿ. ಇರಲೀ ಗೌರೀ ಅಂತೂ ಬೆಂಕಿಯಿಂದ ನಿನಗೇನು ಅಪಾಯವಿಲ್ಲವಷ್ಟೇ (ಕೂಸನ್ನು ಎತ್ತಿಕೊಳ್ಳುವನು)

**ಗೌರಿ–** ನನಗೇನೂ ಬಾಧೆಯಾಗಿಲ್ಲ ಬಿಡಿ ನೋಡದೆ ಸುಮ್ಮನೆ ಒಬ್ಬರ ಮೇಲೆ ಹಾಗೆಲ್ಲ ಮಾತಾಡಬಾರದು. ನಮ್ಮನ್ನು ಉಳಿಸಲು ಬಂದವನ ಮೇಲೆ ಕೋಪತಾಳಿದರೆ ದೇವರು ಮೆಚ್ಚುವನೇ ಮತ್ತೊಮ್ಮೆ ಇಂಥಾ ಬಿರು ನುಡಿಗಳನ್ನಾಡಬೇಡಿರಿ ನಿಮಗೆ ಕೈ ಮುಗಿಯುತ್ತೇನೆ ಇರಲಿ ಸಧ್ಯ ಇಲ್ಲೆ

ಹಾಸಿಕೊಡುತ್ತೇನೆ ಮಲಗಿರಿ ಉದಯಕ್ಕೆ ಏನಾದರೂ ಮಾಡೋಣ (ಆತನು ಮಲಗಿದ ಮೇಲೆ ತಾನು ಆ ಗಿಡದ ಆಸರಕ್ಕೆ ಕೂತು ನಿದ್ದೆ ಮಾಡುತ್ತಾಳೆ. ಹಿಂದಿನ ಜನಪದವನ್ನೇ ಹೇಳಬೇಕು.)

**ತೆರೆ ಬೀಳುತ್ತದೆ ರಸ್ತೆ**

(ಶ್ರೀಧರ ನಗುತ್ತ ಆನಂದದಿಂದ ಬರುತ್ತಾನೆ)

**ಶ್ರೀಧರ–** ಅಹಹಹಹ (ನಕ್ಕು) ಅಹಂಕಾರಕ್ಕೆ ತಕ್ಕ ಫಲವನ್ನು ಅನುಭವಿಸಿದಳೇ ಆ ಗೌರೀ– ಭಲೆ– ಒಳ್ಳೇ ಜಾಗ್ರತಿಯಿಂದ ಕೆಲಸ ಮಾಡಿದೆ ನನ್ನ ಸೇವಕರು ಸಹ ಹುಷಾರಿಯಿಂದ ಕೊಳ್ಳಿಯನ್ನಿಕ್ಕಿದರು ಈ ದಿವಸವೇ ಅವರಿಗೆ ಕೇಳಿದಷ್ಟು ಬಹುಮಾನವನ್ನು ಕೊಡುತ್ತೇನೆ. ಎಲೆ ಗೌರೀ.... ನಿನ್ನ ಪ್ರೇಮಕ್ಕಾಗಿ ನನ್ನ ಸಂಪತ್ತನ್ನೇ ನಿನಗೆ ಸೇರಿಸಲು ತಯ್ಯಾರಾದ ನನಗೆ ನಿನ್ನಿಂದ ಅಪಮಾನವೇನೆ.... ಉಂಣುವ ಪುಣ್ಯಫಲ ನಿನಗಿಲ್ಲ ದೋಯಿತೇ ಇಂದಿಗೆ ನಿನ್ನ ಅಹಂಕಾರ ಮಾಯವಾಯಿತೇ ನಿನಗೆ ಸರಿಯಾದ ಶಿಕ್ಷೆಯಾಯಿತು. ಅಹಹಹಹ (ನಗುತ್ತ) ಎಲೇ ಗೌರೀ ನಾನು ನಿನ್ನ ಪ್ರೇಮಕ್ಕಾಗಿ ಹಾತೊರೆದರೆ ನೀನು ನನ್ನ ಹೆಂಡತಿಯನ್ನು ಗಂಡನಿಗೆ ಜೋಡು ಮಾಡೆಂದು ಹೇಳಿದವಳು ನೀನಲ್ಲವೇ ಪಾಪೀ ಹೇಗಿದೆ ಅದರ ಪ್ರಾಯಶ್ಚಿತ ಅಹಹಹಹಾ ಅಹಹಹ (ನಗುತ್ತಾನೆ.)

(ರಾಮು ಬರುತ್ತಾನೆ)

**ರಾಮು–** ಏನಯ್ಯಾ ಇದು ಎಷ್ಟು ಆನಂದದಲ್ಲಿರುವೆ....

**ಶ್ರೀಧರ–** ಬಾ ರಾಮು ಬಾ.... ಊರಲ್ಲಿ.... ಏನಾದರೂ.... ಹೊಸಾ ಸುದ್ದಿ ಕೇಳಿರುವೆಯಾ........

**ರಾಮು–** ಹೊಸದಾದ ಸುದ್ದಿ..... ನಮ್ಮೂರಲ್ಲಿ.... ಅದ್ಯಾವದಯ್ಯಾ ಹೊಸಾದು....

**ಶ್ರೀಧರ–** ಅಯ್ಯೋ ಹುಚ್ಚಾ ನೀನು ಕೇಳಿಲ್ಲವೇ.... ನಾನು ಮನಿಯನ್ನು ಬಿಡಿಸಿದ ಮೇಲೆ ಊರ ಮುಂದೆ ಬೈಲಿನಲ್ಲಿ ಗುಡಿಸಲ ಹಾಕಿಕೊಂಡನಂತೆ ನಿನ್ನೆ ರಾತ್ರಿ ಯಾರೋ ಕೊಟ್ಟಿರುವಂತೆ ಆ ಗುಡಿಸಲು ಸುಡುವದು ಒತ್ತಟ್ಟಿಗಿರಲಿ.... ಪಾಪ ಎಲ್ಲರೂ ಸುಟ್ಟ ಬಸ್ಮವಾದರಂತೆ ಇದೇ ಈಗ ಇಲ್ಲೇ ಯಾರೋ ಮಾತಾಡಿದರು ಮುಖ್ಯವಾಗಿ ನೋಡು ರಾಮೂ ಸೊಕ್ಕಿನ ಜನರಿಗೆಲ್ಲ ಇದೇ ಹಾಡೇ ಆಗೋದು.....

**ರಾಮು–** ಅಯ್ಯೋ ಹುಚ್ಚಪ್ಪಾ ನೀನು ಕನಸಿನಲ್ಲಿಯೇನಾದರೂ ಕಂಡಿರುವಿಯಾ

ಇದೇ ಈಗ ಬರುವಾಗ ಶ್ಯಾಮುವಿನನ್ನು ಕಂಡೇ ಬಂದಿದ್ದೇನೆ ಅವನು ಏನೂ ಹೇಳಲಿಲ್ಲ ನೀನು ಮಾತ್ರ ರಾಮಾಯಣವನ್ನೇ ಮುಗಿಸಿಬಿಟ್ಟೆ ನಿಜ ಇದು ನಿನ್ನ ಕಳವಳಿಕೆಯಾಗಿದೆಯಲ್ಲವೇ ಸರೆ....

**ಶ್ರೀಧರ–** ಆ...... ಇದೇನು ಶಾಮು ಕಂಡಿದ್ದನೇ.... ಹಾಗಾದರೆ ರಾಮೂ ಹೀಗಾಗಿರಬೇಕು. ಗುಡಿಸಿಲಿಗೆ ಬೆಂಕಿ ಹತ್ತಿದಾಗ್ಯೆ ಅವನು ಕ್ಲಬ್ಬ ಸೆರಿರಲೇಬೇಕು. ಹಾಗಾದರೆ ಗೌರಿ ಗೌರಿಯ ಮಗನು ಮಾತ್ರ ಭಸ್ಮವಾಗಿರಲೇಬೇಕು ನಿಜ.... ನಿಜ.....

**ರಾಮು–** ಯಾವದು ನಿಜರೀ.... ಇದೆಲ್ಲ ನಿಮ್ಮ ಭ್ರಮೆಯೇ, ನಿಜವನ್ನು ಇಲ್ಲಿ ಕೇಳ್ರಿ.... ಗುಡಿಸಲಿಗೆ ಬೆಂಕಿ ಹತ್ತಿದ ಕೂಡಲೇ ಗೌರಿ ಕೂಸನ್ನು ಎತ್ತಿಕೊಂಡು ಹೊರಗೆ ಬಂದಳಂತೆ ಗುಡಿಸಲು ಮಾತ್ರ ಸುಟ್ಟಿರುವದೆಂದು ಶಾಮಂಣನೇ ಈಗ ತಾನೇ ಹೇಳಿದ. ನೀವು ಮಾತ್ರ ಅಲ್ಲೇ ನಿಂತು ನೋಡಿದವರಂತೆ ಹೇಳುತ್ತಿರಲ್ಲಾ ನೋಡಿ ಶ್ರೀಧರಾ ಯಾವನೋ ಪಾಪಿ ಈ ಕೆಲಸಕ್ಕೆ ಕೈಹಾಕಿ ಬೆಂಕಿ ಹಚ್ಚಿ ಅಲ್ಲಿ ನಿಲ್ಲದೆ ಹೆದರಿ ಓಡಿ ಹೋಗಿರಲೇಬೇಕು. ಅಲ್ಲಾ ಬೆಂಕಿ ಹಚ್ಚಬೇಕಾದರೂ ತಲಿಬೇಕಯ್ಯಾ ತಲಿ.... ಹುಚ್ಚ ಮುಂಡೇಗಂಡರಿಗೆ ತಲೀನ ಇಲ್ಲಾನ್ನು ಕೊಳ್ಳೀ ಇಟ್ಟಮೇಲೆ ಅದೆಲ್ಲ ಸುಟ್ಟು ಭಸ್ಮ ಆಗುವವರೆಗೂ ಅಲ್ಲೇ ನಿಂತು ನೋಡಿ ಆನಂದದಿಂದ ಹೋಗಬೇಕು. ಕಳ್ಳ ಮುಂಡೇಗಂಡ್ರ ದೊಡ್ಡವರಾಗಿ ದಡ್ಡತನದ ಕೆಲಸಕ್ಕೆ ಮನಸ್ಸು ಕೊಡಬೇಕಾದರೆ ಅವರಂಥ ಹುಚ್ಚರು ಯಾರೂ ಇಲ್ಲಾಂತಿಳಿಯುತ್ತೇನೆ ಯಾಕ್ರೀ ಹೌದೇ ಅಲ್ಲೋ....

**ಶ್ರೀಧರ–** ನಿಜ..... ರಾಮೂ.... ಯಾರೋ ಮಾತಾಡಿದ್ದು ಕೇಳಿದೆ ಯಲ್ಲರೂ ಸತ್ತರೆಂದು ಕೇಳಿದೆ ನೀನು ಮಾತ್ರ ಇಲ್ಲಾಂತ ಹೇಳುವದು.... ನೋಡಿದರೆ ಇದೇನೋ ನನಗ....

**ರಾಮು–** ಅಪನಂಬಿಗೀ ಅಂತೀರಾ....ನನ್ನ ಮಾತು ವಿಶ್ವಾಸವಿಲ್ಲದಿದ್ದರೆ ಅಲ್ಲಿವರೆಗೆ ಹೋಗಿ ನೋಡಿಯಾದರೂ ಬಾರಯ್ಯಾ ಇಷ್ಟೆಲ್ಲ ಕೇಳಬೇಕಾದರೆ ಸುಡಲಿಕ್ಕೆ ನಿಮ್ಮ ಜನಗಳೇನಾದರೂ ಹೋಗಿದ್ದರೋ ಹೇಗೆ ನಿಜ ನೀವೇ ಕಳಿಸಿರಬೇಕು ಅಲ್ವೆ

**ಶ್ರೀಧರ–** ಛೇ ಛೇ ಛೇ ರಾಮೂ ಅಂಥಾ ಹೇಡಿ ಕೆಲಸ ನಾನೆಂದಾದರೂ ಮಾಡಿರುವೆನೇ.

**ರಾಮು–** ಛೇ ಛೇ ಅನ್ನುವದುಂಟೇ ನೀವು ಬಹಳ ಶೂರ ಕೆಲಸಕ್ಕೆ ಕೈ ಹಾಕತಕ್ಕವರು

ಇಂಥಾ ಹೇಡಿ ಕೆಲಸಕ್ಕೆ ಯಾಕರಿ ಕೈಹಾಕೋದು ಪಾಪ.

**ಶ್ರೀಧರ–** ನೋಡು ರಾಮು ನಿನಗೆ ನನ್ನ ಗುಣವೆಲ್ಲ ಗೊತ್ತೇ ಇದೆ ಇಂಥಾ ಕೆಲಸ ಎಂದಾದರೂ ಮಾಡಿರುವೆನೇ ಇದು ಮಹ ಪಾಪದ ಕೆಲಸ ಛೇ ಛೇ ಛೇ.

**ರಾಮು–** ನಿಜ ಪುಣ್ಯದ ಕೆಲಸ ಮಾಡೀ ಮಾಡಿ ಬೇಸತ್ತವರು ಇಂಥಾ ಪಾಪದ ಕೆಲಸಕ್ಕೆ ಕೈ ಹಾಕೋದುಹ್ಯಾಗ್ರೀ.... ತಿಳಿಲಾರದ ಜನಾ ಸುಮ್ಮನೇ ಹಾಸ್ಯಕ್ಕಾಗಿ ನಿಮ್ಮನ್ನೇ ಕೈಮಾಡಿ ತೋರಿಸುತ್ತಾರೆ ಮುರ್ಖ ಜನಾ

**ಶ್ರೀಧರ–** ಏನೂ ಆಗಲೇ ನನ್ನ ಮೇಲೆ ಹೇಳುವರೇ ಆ.......

**ರಾಮು–** ಬಿಡ್ತಾರೇನ್ರೀ ಸ್ವಲ್ಪು ಸಂಶಯ ಬಂದರೆ ಸಾಕು ಈಗಿನ ಜನ ಕೈ ಹಚ್ಚಿ ಬಿಡುತ್ತಾರೆ ಅಂದರೆ ನಾನೀದ್ದೇನಲ್ಲಾ ಹೇಳಲಿಕ್ಕೆ ಇವರು ಅದರ ಸಮಿಪಕ್ಕೆ ಹೋಗದೆ ಇದ್ದದ್ದು ಸುಳ್ಳೇ ಸುಳ್ಳು ಅಂತ ಹೇಳುತ್ತಲೇ ಬಂದೆ ಹೋಗಲಿ ಬಿಡ್ರಿ ಯಾರು ಮಾತಾಡಿ ನಿಮ್ಮನ್ನೇನು ಮಾಡುವರು ಇದೋ ಸ್ವಲ್ಪು ಅವಸರವಿದೆ ಬರ್ತೀನಿ ನೀವು ಮನಿಗೆ ಹೋಗಿರಿ ಈಗಲೇ ನಮ್ಮಮನಿಯಿಂದ ಅಲ್ಲಿಗೆ ಬರುತ್ತೇನೆ (ಹೋದಂತೆ ಮಾಡಿ ಮರೆಗೆ ನಿಲ್ಲುವನು) ಜನರಿಗೆ ಕಾಣುತ್ತಿರಬೇಕು.

**ಶ್ರೀಧರ–** ಥೂ–ಥೂ ಕೆಲಸ ಮಾತ್ರ ಕೆಟ್ಟೇ ಹೋಯಿತು. ರಾಮು ಹೇಳಿದಂತೆ ಪೂರಾ ಸುಡುವವರೆಗೆ ನಾನಾದರೂ ಅಲ್ಲೇನಿಂತಿದ್ದರೆ ನೆಟ್ಟಗಿತ್ತು ಈಗ ಮತ್ತೇನು ಮಾಡಲಿ (ಯೋಚಿಸಿದಂತೆ ಮಾಡಿ) (ಕೈಯಿಂದ ಲಟಗಿ ಹೊಡೆದು) ಇರಲಿ ಇನ್ನು ಮೇಲೆ ಇಂಥಾ ಹೇಡಿ ಕೆಲಸ ಮಾಡುವದೇಬೇಡ ನನ್ನ ಸೇವಕರಿಂದ ಆ ಗೌರಿಯನ್ನು ಹೊರಿಸಿ ಗಿಡಕ್ಕೆ ಕಟ್ಟಿಹಾಕಿ ಬಲಾತ್ಕಾರದಿಂದಲಾದರೂ ಅವಳ ಮನವನ್ನು ಕೆಡಿಸಿ ನನ್ನ ಮೋಹ ಪಾಶಕ್ಕೆ ಕೆಡವಿಕೊಳ್ಳದಿದ್ದರೆ ನಾನು ಶ್ರೀಮಂತ ಶ್ರೀಧರನೇ ಅಲ್ಲ ಇಷ್ಟಾದರೂ ಅವಳು ಒಪ್ಪದಿದ್ದರೆ ಮನಬಂದಂತೆ ಸೇಡನ್ನು ತೀರಿಸಿಕೊಳ್ಳುತ್ತೇನೆ. ಎಲೇ ಗೌರೀ ಸೆಳೆದುಕೊಂಡಿಹೆಯನ್ನ ಮನದ ಸಾರಾ। ಬಿಡಲಾರೆ ನಿನ್ನ ಚುಂಬನದ ಅಧರಾ ಕೇಳಲಾರೆ ನಿನ್ನವೇದಾಂತ ಸಾರಾ । ಒಪ್ಪದಿದ್ದರೆ ಕೊಲ್ಲುವನು ಶ್ರೀಧರಾ ನಾನ ಯಾರು ಈ ಗ್ರಾಮದ ಪ್ರೆಸಿಡೆಂಟ ತಿಳಿಯಿತೇ ಅಹಹಹಹಹ (ನಗುತ್ತ ಹೋಗುತ್ತಾನೆ)

**ರಾಮು–** (ಬೈಲಿಗೆ ಬಂದು) ಅಯ್ಯೊ ಹುಚ್ಚಾ ಹೆಚ್ಚಿನ ಕೆಲಸಕ್ಕೆ ಕೈ ಹಾಕಿದೆ ಗೌರಿಯ ಪಾತಿವ್ರತ್ಯ ಕೆಡಿಸುವಷ್ಟು ಶಕ್ತಿ ಇದೆಯೇ ನಿನ್ನಲ್ಲಿ ಕೆಡಿಸು

ನಾನು ನೋಡಿ ಕೋಳುತ್ತೇನೆ ನೀಚಾ ಇಂಥಾ ಹೀನಕಾರ್ಯಕ್ಕೆ ಕೈ ಹಾಕಿದ ಹಿಂದಿನ ಮಹಾಶಯರ ಚರಿತ್ರೆ ಯಾದರೂ. ನೆನಪಿಗೆ ಬಾರವೇ ಆಗಲಿ ಆ ಸಾಧ್ವಿಂಯುಳ ಸಲುವಾಗಿ ನಾನು ಸಹಜಾಗ್ರತೆಯಾಗಿರುತ್ತೇನೆ ಸಧ್ಯ ಈ ವಿಷಯುವನ್ನು ಇವನ ಮಗಳಾದ ಶಾಮಲೆಗೆ ತಿಳಿಸಿ ಅವಳಿಂದಲೇ ಮಾಡಿಸುವೆ ಇವನಿಗೆ ಪ್ರಾಯಶ್ಚಿತ್ತ...

(ಶಾಮು ಒಳಗೆ ರಾಮುವಿನನ್ನು ಬೈಯ್ಯುವ ಶಬ್ದವಾಗುತ್ತದೆ)

**ಶಾಮು–** (ಒಳಗೆ) ನೀವೇನಾದರೂ ನೋಡಿದ್ದಿರಾ ಆ ಕಳ್ಳ ರಾಮನನ್ನು. ಎಲೆ ನೀಚಾ ಯಲ್ಲಿಂಯುವರೆಗೆ ತಪ್ಪಿಸಿಕೊಳ್ಳುವಿಯೋ ತಪ್ಪಿಸಿಕೋ ನೋಡುತ್ತೇನೆ....

**ರಾಮು–** ಆ ಇದೇನು ಶಾಮು ನನ್ನ ಮೇಲೆ ವಿಷಕಾರುತ್ತ ಇತ್ತಲೇ ಬರುತ್ತಾನೆ (ನೋಡುತ್ತ) ಬಹುಜನಗಳ ಗುಂಪು ಕೂಡಿದೆ ಅಲ್ಲಿ ನನ್ನ ಹೆಸರು ತೆಗೆದು ಬೈಯ್ಯುತ್ತಾನೆ. ಇದೇನು ಓಹೋ ಇದೇ ಉಪಕಾರಕ್ಕೆ ಅಪಕಾರದ ಆಮಂತ್ರಣವಲ್ಲವೇ ಏನೇ ಇರಲಿ ಸಧ್ಯ ನಾನು ಮರೆಯಾಗುವದೇ ಒಳ್ಳೇದು (ಹೋಗುವಾಗ್ಯೆ)

**ಶಾಮು–** (ಬರುತ್ತ) ಏ.... ತಡಿಯೋ ರಾಮೂ (ರಾಮು ನಿಲ್ಲುತ್ತಾನೆ)

**ರಾಮು–** ಯಾಕೆ ಶಾಮು... ಬಾ... (ನಿರಾಳಮನದಿಂದಿರಬೇಕು)

**ಶಾಮು–** ನಿನ್ನೆ ರಾತ್ರಿ ೧ ಘಂಟೆ ಸುಮಾರಕ್ಕೆ ನಮ್ಮ ಗುಡಿಸಲು ಹತ್ತರ ಬಂದಕಾರಣ

**ರಾಮು–** ಕಾರಣವೆಂದರೆ ಇಷ್ಟೇ ಅದೇ ಆಗ ಸೀನೆಮಾ ಸೆಕೆಂಡು ಷೋ ಮುಗಿದ ಮೇಲೆ ಮನೆಗೆ ಬಂದು ಊಟ ಮಾಡಿ ಹೊರಗೆ ಬಂದೆ ಉರಿಯ ಬೆಳಕು ಕಂಡಿತು. ಏನೋ ಸುಡುತ್ತದೆಂದು ಸಮೀಪ ಬಂದೆ ನಿಮ್ಮ ಗುಡಿಸಲಾಗಿತ್ತು ಅನಾಯಾಸವಾಗಿ. ನೀವೆಲ್ಲ ಸತ್ತು ಹೋಗುತ್ತಾರೆಂದು ಜೋರಾಗಿ ಕೂಗಿದೆ. ಗೌರಾದೇವಿಯು ಎದ್ದು ಬಂದು ಚಿಟ್ಟನೆ ಚೀರಿ ಕೈಯಿಂದ ತೋರಿಸಿದಳು ಆಗ ನಿನ್ನ ಮಗನನ್ನೂ ಯಲ್ಲಾ ಸಾಮಾನುಗಳನ್ನೂ ಹೊರಗೆ ತಂದೆ ಇಷ್ಟೇ ಹೋರ್ತು ಮತ್ತೇನೂ ಕಾಣೆ

**ಶ್ಯಾಮು–** ಅಲ್ಲಾ ರಾಮು ನಮ್ಮ ಗುಡಿಸಲು ಸಟ್ಟು ಹೋಗಲಿ ನಮ್ಮವಳೂ ಸುಟ್ಟು ಹೋಗಲಿ. ನೀನು ಯಾತಕ್ಕಾಗಿ ಗುಡಿಸಲವರೆಗೆ ಬಂದೆ ಮೊದಲು ಹೇಳು

**ರಾಮು–** ಅನಾಯಾಸವಾಗಿ ಸಾಯುತಾರೆಂದು ಬಂದು ಸಹಾಯ ಮಾಡಿದ್ದು

ತಪ್ಪೇ ಶಾಮು ಹೀಗೇಕೆ ಮಾತಾಡುವಿ.

**ಶ್ಯಾಮು–** ವಾಹವ್ವಾ ರಾಮ ಎಷ್ಟು ಚಾಲಾಕಿಯಿಂದ ನಿನ್ನ ಕಾರ್ಯ ಸಾಧಿಸಿರುವೆಯಲ್ಲಾ ತಿಳಿದಿದ್ದೇನೆ ಪರಂತು ಆ ವ್ಯಾಳ್ಯದಲ್ಲಿ ನಾನಿದ್ದರೆ ಮಾತ್ರ ಅದೇ ಬೆಂಕಿಯಲ್ಲೇ ನಿನ್ನನ್ನ ಹಾಕಿ ಬಿಡುತ್ತಿದ್ದೆ ನಾನಿಲ್ಲದ ಸಮಯ ನೋಡೇ ಬಂದಿರುವಿಯಲ್ಲವೇ ಅಲ್ಲಿಗೆ.... ಆಗಲಿ ಮುಂದೆ ಹುಷಾರಿಯಿಂದ ವರ್ತಿಸು ತಿಳಿಯಿತೇ....

**ರಾಮು–** ನೋಡು ಶಾಮೂ ನಿನಗೆ ದೇವರು ಎಷ್ಟು ಬುದ್ಧಿ ಕೊಟ್ಟಿರುವನೋ ಅಷ್ಟು ಮಾತಾಡಬಲ್ಲೆ. ಪಾಪ, ನೀನೇನು ಮಾಡುವಿ.....

**ಶಾಮು–** ನಿಜ ನಿಜ ನಾನೇನು ಮಾಡಬಲ್ಲೆ ನೋಡು, ಇನ್ನು ಮೇಲೆ ಒಂದಿಲ್ಲ ಒಂದು ದಿವ್ಸ ನನ್ನ ಕೈಯನ್ನು ತೋರಿಸುತ್ತೇನೆ.... ಈಗಂತೂ ಉಳಿದುಕೊಂಡೇ ಹೋಗಯ್ಯ ಹೋಗು ಇರಲಿ (ಸಿಟ್ಟಿನಿಂದಲೇ ಅನ್ನುತ್ತಾನೆ)

**ರಾಮು–** ಆಗಲೆಪ್ಪಾ ರಾತ್ರಿ ಕಾಲದಲ್ಲಿ ನಿನ್ನ ಗುಡಿಸಲ ಹತ್ತರ ನಾನು ಬಂದದ್ದೇ ಅಪರಾಧವಾಗಿದೆ ಇದೆಲ್ಲ ದೇವರಿಗೆ ಗೊತ್ತು....

**ಶ್ಯಾಮು–** ಹುಂ– ನಿನ್ನ ಗುಣ ದೇವರಿಗೇನು ಗೊತ್ತಿದೆ ನನಗೆಲ್ಲ ಗೊತ್ತಿದೆ ನಿನ್ನ ಗುಣ. ಆಗಲಿ, ಸಮಯ ಸಿಕ್ಕಾಗ ನೋಡೆ ನೋಡುತ್ತೇನೆ ಆಗಲಿ (ಹೋಗುತ್ತಾನೆ)

**ರಾಮು–** ಹುಂ ಪರೋಪಕಾರವೇ ಈ ಕಲಿಕಾಲದಲ್ಲಿ ಪರರಿಗೆ ಕೇಡಾಗಿ ತೋರುತ್ತಿದೆಯಲ್ಲವೇ.

..... **ಪದ** ....

ಕಲಿ ಮಹ ಪುರುಷನೆ ನಿನ್ನಯ ಭಾವನೆ । ತೋರುವಿ ಸತ್ಯಕೆ ಅಪಮಾನವನೇ ॥
ಸುಳ್ಳಿಗೆ ಸುಖವಾ ತೋರುವಿ ನೀನು । ಕಳ್ಳರ ಮಾನವ ಕಾಯುವೆ ನೀನು ।
ಒಳ್ಳೇ ಜನಕೆಲ್ಲ ಮಾನಭಂಗವನು । ಸುಳ್ಳು ಸಾಕ್ಷಿಗಾಧಾರನು ನೀನು ॥ ೧ ॥

(ಪದ ಹಾಡುತ್ತ ಹೋಗುತ್ತಾನೆ)

===**===**===

## ಪ್ರವೇಶ ೧೩

### ಶ್ರೀಧರನ ಮನೆ

(ಸೀತಮ್ಮನು ಕೂತಿರುತ್ತಾಳೆ)

(ಶಾಮಲಾ ಹೊರಗಿನಿಂದ ಓಡಿ ಬಂದು)

**ಶ್ಯಾಮು–** ಅಮ್ಮಾ.... ಅಮ್ಮಾ ಘಾತವಾಯಿತು ಅಪ್ಪನು ಗೌರಿಯ ಮನೆ ಬಿಡಿಸಿದ್ದಲ್ಲದೆ ಅವರು ಹಾಕಿಕೊಂಡ ಗುಡಿಸಲು ಸಹ ಸುಟ್ಟಿರುವನಂತೆ. ಅವಳು ರಾತ್ರಿ ಮಲಗಿದಾಗ್ಯೆ ಕೊಳ್ಳಿ ಇಡಲು ತಾನೇ ಹೋಗಿ ಬೆಂಕಿ ಹಚ್ಚಿದನಂತೆ ಏನಮ್ಮಾ ಇದು....

**ಸೀತಮ್ಮ–** ಅಂದರೆ ಅವರೆಲ್ಲ ಸತ್ತೇ ಹೋದರೆ....

**ಶಾಮಲಾ–**ಇಲ್ಲಮ್ಮಾ ಅದೇ ವ್ಯಾಳೈದಲ್ಲಿ ರಾಮು ಹೋಗಿ ಗೌರಿಯನ್ನು ಎಬ್ಬಿಸಿ ಬಾಲಕನನ್ನೂ ಯಲ್ಲಾ ಸಾಮಾನುಗಳನ್ನು ಹೊರಗೆ ತಂದನಂತೆ ಆ ಕಾಲದಲ್ಲಿ ಶಾಮು ಇದ್ದಿಲ್ಲವಂತೆ ಏನಮ್ಮಾ ಗೌರಿಯ ಮೇಲೆ ಅನಾಹುತ ಕಾರ್ಯ, ಪಾಪ ಮೊನ್ನೆ ಹುಟ್ಟಿದ ಕೂಸು ಸಹ ಸತ್ತೇ ಹೋಗುತ್ತಿತ್ತು ಅಮ್ಮಾ ನೀನಾದರೂ ಹೇಳಬಾರದೇ ಅಪ್ಪನಿಗೆ–

**ಸೀತಮ್ಮ–** ಶಾಮಲಾ ಇದನ್ನೆಲ್ಲ ನಿನಗೆ ಯಾರು ಹೇಳಿದರು....

**ಶಾಮಲಾ–**ಹೊರಗೆ ಹೋಗಿ ಸ್ವಲ್ಪು ಕೇಳಮ್ಮಾ ಎಲ್ಲಾ ಜನಗಳ ಬಾಯಲ್ಲಿ ಇದೇ ಮಾತಿದೆ ಇದಕ್ಕೆ ಸಾಕ್ಷಿಯೇ ಬೇಡ.

**ಸೀತಮ್ಮ–** ನಮ್ಮವರಿಗೆ ಬರಬರುತ್ತ ಹುಚ್ಚು ಹಿಡಿಯುವದೋ ಏನೋ ಬಡವರ ಮೇಲೆ ದಯದೋರದೆ ಇಂಥಾ ಕೆಟ್ಟ ಕೃತ್ಯಗಳೇ.... ಇರಲಿ ಶಾಮಲಾ ಹೊರಗೆ ಯಾರಾದರೂ ಇದ್ದರೆ ರಾಮುವಿನನ್ನು ಕರೇ ಕಳುಹು. ಅವನು ಬಂದರೆ ಮಾತ್ರ ಎಲ್ಲಾ ತಿಳಿಯುತ್ತದೆ.

**ಶಾಮಲಾ–** ಆಗಲೆಮ್ಮಾ.... (ಹೊರಗೆ ಹೋಗಿ ಬಂದು) ನೆರೆಮನೆಯ ಶಂಕ್ರನನ್ನು ಕಳುಹಿದ್ದೇನೆ.... ಅಲ್ಲಮ್ಮಾ ಗೌರಿಯು.... ಎಷ್ಟು ನೊಂದಿರಬಹುದು ಹೋಗಿ ಕರತರಲೇನಮ್ಮಾ ಮನೆಗೆ.....

**ಸೀತಮ್ಮ**– ಸಧ್ಯ ಬೇಡ. ಸ್ವಲ್ಪ ತಡೆ. ಅವಳನ್ನು ಮನೆಗೆ ಕರತಂದರೆ ಅವಳ ಮೇಲಿನ ಕೋಪ ನಮ್ಮ ಮೇಲೆ ತಿರುಗಿದರೂ ತಿರುಗಬಹುದು ರಾಮನಂತೂ ಬರಲಿ ಆ ಮೇಲೆ ಮುಂದಿನ ಕೆಲಸ.

**ರಾಮು**– ನಮಸ್ಕಾರ ಅಮ್ಮನವರೇ... ಯಾಕೋ ಕರದಿರಂತೆ....

**ಸೀತಮ್ಮ**– ಬಾ ರಾಮೂ ನಿನ್ನೆ ರಾತ್ರಿ ನಡೆದ ಚರಿತ್ರೆಯನ್ನು ಕೇಳಬೇಕೆಂದು ಬರಹೇಳಿದೆ ಗೌರಿಯ ಗುಡಿಸಿಲಿಗೆ ಬೆಂಕಿ ಹತ್ತಿದ್ದು ನಿಜವೇ....

ರಾಮು– ನಿಜವಮ್ಮಾ ರಾತ್ರಿ ೧ ಘಂಟೆ ಸುಮಾರಕ್ಕೆ ಊಟಾ ಮುಗಿಸಿ ಹೊರಗೆ ಬಂದೆ ಉರಿಯ ಬೆಳಕು ಕಂಡಿತು. ಧಾವಿಸಿ ಅಲ್ಲಿಗೆ ಹೋದೆ ಅದು ಶಾಮುವಿನ ಗುಡಿಸಲವೆಂದು ತಿಳಿದು ಘಟ್ಟಿಯಾಗಿ ಕೂಗಿದೆ ಒಳಗಿನಿಂದ ಗೌರಮ್ಮನು ಘಾಬರಿಯಿಂದ ಎದ್ದು ಬಂದು ಅಯ್ಯೋ ನನ್ನ ಕೂಸು ಎಂದು ಚೀರಿದಳು ಆಗಲೇ ಒಳಗೆ ಹೋಗಿ ಕೂಸನ್ನೂ ಕೆಲವು ಸಾಮಾನುಗಳನ್ನು ತಂದು ಕೊಟ್ಟೆ..... ಅಂದರೆ....

ಸೀತಮ್ಮ– (ಆತುರದಿಂದ) ಮತ್ತೇನಾಯಿತು ರಾಮೂ....

ರಾಮು– ಪುಣ್ಯಕ್ಕೆ ಕಾಲವಿಲ್ಲವೆಂಬುದನ್ನು ನಿನ್ನೆ ಚನ್ನಾಗಿ ಅರ್ಥ ಮಾಡಿದೆ ಶಾಮು ಮಾತ್ರ ಇದಕ್ಕೆ ವಿಪರೀತಾರ್ಥ ಮಾಡಿಕೊಂಡು ಊರೆಲ್ಲ ಚೀರಾಡಹತ್ತಿದ್ದಾನೆ....

**ಸೀತಮ್ಮ**– ಏನೆಂದು....

**ರಾಮು**– ಇವನೇ ಕೊಳ್ಳಿ ಇಟ್ಟಿದ್ದಾನೆಂದು ಊರ ತುಂಬ ಅಲ್ಲೆದಲ್ಲೆ ಬೈಯ್ಯುತ್ತ ಹೊರಟಿದ್ದಾನೆ.

ಸೀತಮ್ಮ– ಆ.....ರಾಮನೇ ಹಚ್ಚಿದನೆಂದು ಹೇಳುತ್ತಾನೆಯೇ....

ರಾಮು– ಹೇಳುವದ್ಯಾಕೆ ನನ್ನನ್ನೇ ಕೇಳಿದನು ಇದ್ದದ್ದು ಹೇಳಿದರೆ ಅವನೇನೋ ನಂಬಲಿಲ್ಲ ನೀನು ಶ್ರೀಧರನ ದೋಸ್ತನಾದದ್ದು ಗೊತ್ತಿದೆ. ಅದಕ್ಕಾಗೇ ನೀನೇ ಈ ಕಾರ್ಯ ಮಾಡಿರಲೇಬೇಕು ಇನ್ನು ಮೇಲೆ ನೀವಿಬ್ಬರೂ ನನ್ನಿಂದ ಉಳಿಯಲಾರಿ ಎಂದು ಇನ್ನೂ ಏನೇನೋ ಅನ್ನುತ್ತ ಹೋದನಮ್ಮ ಮುಖ್ಯವಾಗಿ ಪುಣ್ಯಕ್ಕೆ ಕಾಲವಿಲ್ಲವು ಕಲಿಕಾಲ ಧರ್ಮವೇ ಇದು.....

ಸೀತಮ್ಮ– ಇರಲಿ ಬಿಡು ರಾಮು.... ತಿಳಿಯದೇ ಮಾತಾಡಿದ್ದಕ್ಕೆ ಬೆದರುವ ಕಾರಣವಿಲ್ಲ.

ಇಲ್ಲಿ ಕೇಳು ನಾನೊಂದು ನಿನ್ನನ್ನು ಪ್ರಶ್ನೆ ಮಾಡಬೇಕೆಂದು ಕರಿಸಿದ್ದೇನೆ ಕೇಳಲೋ.... (ಶಾಮಲಾ ಒಳಗೆ ಹೋಗುತ್ತಾಳೆ.)

**ರಾಮು–** ಕೇಳಮ್ಮಾ ಏನದು.....

**ಸೀತಮ್ಮ–** ಏನೂ ಇಲ್ಲ ಇದುವರೆಗೆ ಅಮ್ಮಾ ಎಂದು ನನಗೆ ಅನ್ನುವ ಶಬ್ದವನ್ನು ಕಿತ್ತಿ ಇಂದಿನಿಂದ ಅತ್ತಿ ಎಂದು ಕರೆಯಬೇಕು ಇಷ್ಟೇ.... (ರಾಮು ನಾಚಿ ನೆಲ ನೋಡುತ್ತಾನೆ)

ಯಾಕೆ ರಾಮೂ..... ಅತ್ತಿಯಂದು ಅನ್ನಲು ನಾಚಿಕೆಯಾಗುವದೇ.

**ರಾಮು–** ಅದೇನೂ ಇಲ್ಲ.... ಆದರೆ ತಮಗೆ ಅತ್ತಿಯಂದು ಕರೆದರೆ ಶ್ರೀಧರರಿಗೆ ಮಾವನೆಂದು ಕರೆಯಲು ಹೆದರಿಕೆಯಾಗಿದೆ ಇಷ್ಟೇ....

**ಸೀತಮ್ಮ–** ರಾವೂೂ ನೀನು ಹೆದರುವ ಕಾರಣವಿಲ್ಲ ಅವರಿಗೆ ನಾನು ಹೇಳಿಕೊಳ್ಳುತ್ತೇನೆ. ನೋಡು ರಾಮೂ ನನಗೇನು ಹತ್ತು ಜನ ಮಕ್ಕಳಿಲ್ಲ ಹೆಂಣು ಅಂದರೆ ಇದೇ ಗಂಡೆಂದರೂ ಇದೇ ಇದ್ದೊಬ್ಬ ಮಗಳನ್ನು ಬೇರೆ ಕಡೆ ಕೊಡುವದು ನನಗೆ ಇಷ್ಟವಿಲ್ಲ ಶಾಮಲೆಯಾದರೂ ನಿನ್ನನ್ನೇ ಪ್ರೇಮಿಸಿದಂತೆ ತೋರಿತು. ಅದಕ್ಕಾಗಿ ನನ್ನ ಮಗಳಿಗೆ ಪ್ರೀತಿಯ ಗಂಡನಾಗಿ ಇಲ್ಲೇ ಇದ್ದುಕೊಂಡು ಹೋದರೆ ಇಂದಿಲ್ಲ ನಾಳೆ ಈ ಸಂಪತ್ತೆಲ್ಲ ನಿಮ್ಮದೆ....ನಿಜವಲ್ಲವೇ ಇದಕ್ಕೇನೆನ್ನುವಿ. (ಶಾಮಲಾ ಬಾಗಿಲ ಹತ್ತರ ನಿಂತು ರಾಮುವಿಗೆ ಸೊನ್ನೆ ಮಾಡುವಳು.)

**ರಾಮು–** ಲಗ್ನವೇನೋ ನಿಮ್ಮ ಮಾತಿನಂತೆ ಆಗುತ್ತೇನೆ. ಅಂದರೆ ಮುಂದಿನ ವಿಚಾರ ಎಲ್ಲಾ ಶಾಮಲೆಗೆ ಗೊತ್ತಿದೆ ಆ ಮಾತಿಗೆ ಅವಳು ವಪ್ಪಿದರೆ ಮಾತ್ರ....

**ಶಾಮಲಾ–** ಆ ಮಾತು ಈಗೇಕೆ ಅಮ್ಮನಿಗೆ ತಿಳಿಸುವ ಅವಶ್ಯವು ಕೂಡ ಎಲ್ಲ ಅದು ನನ್ನ–ನಿನ್ನ ಮಾತು ಆ ಮಾತಿಗೆ ಸಿದ್ಧಳಿದ್ದೇನೆ.

**ರಾಮು–** ಹಾಗಾದರೆ ನಾನು ಸಹ ಲಗ್ನವಾಗಲು ಸಿದ್ಧನಿದ್ದೇನೆ.

**ಸೀತಮ್ಮಾ–** ಆಗಲಿ ಸಂತೋಷ ಅವರು ಮನೆಗೆ ಬಂದೊಡನೆ ಈ ಸಮಾಚಾರವನ್ನು ತಿಳಿಸಿ ಇದೇ ತಿಂಗಳಲ್ಲಿ ಲಗ್ನ ಕಾರ್ಯ ಮುಗಿಸಿ ಬಿಡುತ್ತೇನೆ... (ಹೊರಭಾಗದಲ್ಲಿ ಶಾಮುವಿನ ಸ್ವರ ಕೇಳ ಬರುತ್ತದೆ) ಗೌರಿ ಗೌರೀ ಗೌರಿ ಬಂದಿರುವಳೇನಮ್ಮಾ ನೀವು ನೋಡಿದ್ದೀರಾ ಮಗಳನು ಬಿಟ್ಟೇ ಹೋಗಿದ್ದಾಳೆ ಎಂದು ಶಬ್ದವಾಗುತ್ತದೆ. (ಶಾಮಲಾ ಧಾವಿಸಿ ಹೊರಗೆ

ಹೋಗಿ ಬಂದು)

**ಶಾಮಲಾ**–ಅಮ್ಮಾ ಗೌರಿಯ ಗಂಡ ಶಾಮು ಹುಡುಗನನ್ನು ಯತ್ತಿಕೊಂಡು ಗೌರೀ ಗೌರೀ ಎಂದು ಕೂಗುತ್ತ ಮೇಲಿನ ಬಾಜಾರಕ್ಕೆ ಹೋದನು ಕೂಸಂತೂ ಚೀರಹತ್ತಿದೆ ಇದೇನಮ್ಮಾ ಗೌರಿಯೆಲ್ಲಿ ಹೋಗಿರಬೇಕು....

**ರಾಮು**– ಅಯ್ಯೋ ಘಾತವಾಯಿತು ಶಾಮಲಾ ಮೊದಲೇ ನಿನಗೆ ತಿಳಿಸಲಿಲ್ಲವೇ ಈ ವಿಷಯ ಅದೇ ಪ್ರಕರಣವೇ ಇದು ತಡ ಮಾಡಿದಲ್ಲಿ ಕೆಲಸ ಕೆಡುತ್ತದೆ ಹೋಗಲೇಬೇಕು....(ಅವಳಿಗೆ ಸೊನ್ನೆ ಮಾಡುತ್ತಾನೆ.)

**ಶಾಮಲಾ**– ಅಮ್ಮಾ ಅಪ್ಪನು ಮಾಡಿದ ಮೋಸವೇ ಗೌರಿಯ ಕಣ್ಮರೆ ತಿಳಿಯಿತು. ಅಮ್ಮಾ ಇವರೊಡನೆ ನಾನೂ ಹೋಗಲೇನಮ್ಮಾ.... ಅಪ್ಪನಿಗೆ ಕೈ ಮುಗಿದು ಹೇಳಿ ಬಿಡಿಸುತ್ತೇನೆ. ಹೋಗಲೇನಮ್ಮಾ.....

ಸೀತಮ್ಮ– ಆಗಲಿ ಹೋಗು ಹುಷಾರಿಯಿಂದಿರಬೇಕು. ರಾಮೂ ನೀನಾದರೂ ಹುಷಾರಿಯಿಂದ ವರ್ತಿಸು ತಿಳಿಯಿತೇ.... (ಇಬ್ಬರೂ ಓಡಿ ಹೋಗುತ್ತಾರೆ)

===**====**====

## ಪ್ರವೇಶ ೧೪

### ರಸ್ತೆ

**ರಾಮು**— ಶಾಮಲಾ ಮನೆಯಿಂದ ಗಡಿಬಿಡಿಯಲ್ಲೇ ಬಂದೆ ಆದರೆ ಯಾತಕ್ಕಾಗಿ ಬಂದೆ....

**ಶಾಮಲಾ**— ನೀವು ಕೈ ಸೊನ್ನೆ ಮಾಡಿ ಕರೆದದ್ದಕ್ಕೆ ಬಂದೆ ಮುಂದಿನ ವಿಚಾರ ನಿಮ್ಮದು.

**ರಾಮು**— ನನ್ನಂತೆ ನಡೆಯಲು ನೀನು ಸಿದ್ಧಳಿರುವಿಯಾ.....

**ಶಾಮಲಾ**—ಪ್ರಥಮದಲ್ಲೇ ನನ್ನನ್ನು ಪರೀಕ್ಷಿಸುವಿರ ಆಗಲಿ ತಪ್ಪೇನಿದೆ ನಿಮ್ಮ ಅಪ್ಪಣೆಯಂತೆ ನಡೆಯಲು ಸಿದ್ಧಳಿದ್ದೇನೆ....ಹೇಳಿ ಏನದು.

**ರಾಮು**— ಏನೂ ಇಲ್ಲ ಇದೇ ಆಕಾರದಲ್ಲಿ ನಾವಿಬ್ಬರೂ ಹೋಗಿ ಮಾಡುವದೇನಿದೆ ನಿಮ್ಮಪ್ಪನಿಂದ ಛೀ ಮಾಡಿಸಿಕೊಳ್ಳುವದೇ ನಮ್ಮಿಬ್ಬರ ಕೆಲಸವು...ಅದಕ್ಕಾಗಿ ಈ ಉಡುಪನ್ನು ತೆಗೆದು ಬೇರೆ ಉಡುಗರೆಯನ್ನು ಧರಿಸಲೇಬೇಕು....

**ಶಾಮಲಾ**— ಬೇರೆ ಉಡುಪು ಅಂದರೆ ನಿಮಗೋ ನನಗೋ.

**ರಾಮು**— ನನಗೂ ನಿನಗೂ ಕೂಡೇ

**ಶಾಮಲಾ**— ನಿನಗೆ ಯಾವ ಡ್ರೆಸ್ಸು ಮತ್ತು ನನಗಾವುದು.

**ರಾಮು**— ಅದನ್ನು ಈಗಲೇ ಹೇಳಲೇಬೇಕೇನು. ನನಗೆ ರಾಮನ ಡ್ರೆಸು ನಿನಗೆ.

**ಶಾಮಲಾ**— ಸೀತೆಯ ಡ್ರೆಸ್ಸಲ್ಲವೇ ನೀವು ಹೇಳುವದು.

**ರಾಮು**— ಛೇ ಛೇ ಅದು ಲಗ್ನದ ಕಾಲದಲ್ಲಿ ಈಗಲ್ಲ ನೀನು ಸಧ್ಯ ಆಂಜನೇಯನಾಗಬೇಕು.

**ಶಾಮಲಾ**— ಹಾಕಿರಿ ನಿಮ್ಮ ಮನಸ್ಸಿಗೆ ಬಂದದ್ದನ್ನು ಹಾಕಿರಿ ಅಂತೂ ಕೋತಿಯ ಡ್ರೆಸ್ಸನ್ನು ಹಾಕಬೇಕೆನ್ನುವಿರಾ. ನನಗೆ ಹಾಕಿರಿ. ನಿಮ್ಮ ಕೈಯ್ಯಲ್ಲಿ ಸಿಕ್ಕಿರುವೆನೆಂದ ಮೇಲೆ ಕೋತಿಯನ್ನಾದರೂ ಮಾಡಿ ಕರಡಿಯನ್ನಾದರೂ ಮಾಡಿರಿ.

ರಾಮು– ಶಾಮಲಾ ನಾನು ಹೂಡಿದ ಹೊಸದಾದ ನಾಟಕಕ್ಕೆ ಕಳೆ ಬರಬೇಕಾದರೆ ನಿನ್ನಿಂದಲೇ ಇಂದು ನವೀನ ಕಲಾ ರಚನೆ ಮಾಡಿದ್ದೇನೆ ಇದರಲ್ಲಿ ನೀನು ಧೈರ್ಯಶಾಲಿಯಾಗಿದ್ದರೆ ಮಾತ್ರ ನನ್ನೊಡನೆ ಬಾ. ಇಲ್ಲವಾದರೆ ಇದೋ ನಿನ್ನ ಮನೆಯ ಹಾದಿ ಈ ಭಾಗದಲ್ಲಿದೆ ಹೇಡಿಯಾಗಿ ಲಗು ಓಡಿಹೋಗು. ತಿಳಿಯಿತೇ.

ಶಾಮಲಾ– ಏನೂ. ನಾನು ಓಡಿಹೋಗಿ ಹೇಡಿಯಾಗಲೇ ನೀವು ಹೂಡಿದ ಹೊಸ ರಚನೆಗೆ ನಡೆಯದಾಗದಿದ್ದರೆ ಮಾತ್ರವಲ್ಲವೇ ನನಗೆ ಹೇಡಿ ಎಂಬ ಶಬ್ದದ ಸ್ಪರ್ಶವು ತಡಿಯಲಾರೆ ಹೇಳಿ. ನಿಮ್ಮ ಒಡಲೊಳಗಿನ ಮರ್ಮವ.

ರಾಮು– ಇದೋ ಇಲ್ಲಿ ಬಾ. (ಕಿವಿಯಲ್ಲಿ ತಿದ್ದಿ ತಿದ್ದಿ ಹೇಳುವನು) ನಮ್ಮ ಮನೆಯಲ್ಲಿ ಯಲ್ಲಾ ತಯ್ಯಾರ ನಡೆ ಲಗು. ಹೋಗೋಣ (ಓಡುವರು)

– ತೋಟದ ಶೀನು –

(ಗೌರಿಯನ್ನು ಗಿಡಕ್ಕೆ ಆನಿಸಿ ಕಟ್ಟಿರುತ್ತಾನೆ. ಶ್ರೀಧರ ಕೈಯ್ಯಲ್ಲಿ ಪಿಸ್ತೂಲ ಹಿಡಿದು)

ಶ್ರೀಧರ– (ನಗುತ್ತ) ಅಹಹಹ. ಹೇಗಿದೆ ಗೌರೀ... ಮಾನವತಿಯಂದು ಮರ್ಯಾದೆ ಕೊಟ್ಟರೆ ಮಾರಿಕೊಂಡಿಯಾ ನಿನ್ನ ಮಾನವನ್ನು. ಮಾರನಾಟಕ್ಕೆ ಪ್ರೇಮದಿಂ ಕರೆದರೆ ಮತಿಗೆ ಹೊಳಿಯದಾಯಿತೇ ಇನ್ನು ಮಾಡುವ ಕೇಡು ನೀನಲ್ಲ ಮಾರಹರನೇ ಎಂದು ಕೂಗುತ್ತಿದ್ದೆಯಲ್ಲವೇ ಮತ್ತಾರು ಗೈದಿಹರು ಈ ಕೃತಿಯಾ ಮಗನನ್ನು ಅಗಲಿಸಿ ಮಾನಿನಿಯ ಪೊತ್ತವನು ನಾನಲ್ಲದೆ ಮತ್ತಾರು ಹೇಳೇ.

ಗೌರಿ– ಕೇಡು ಬರುವಾ ಕಾಲಕ್ಕೆ ಕೂಡುವವು ದುರ್ಬುದ್ಧಿಗಳು. ಮಾಡಿಸುತಿದೆಯನ್ನ ದುಷ್ಕರ್ಮ ಸಂಚಿತವು. ಹಿಡಿಯದಿರು ಅಂಣಾ. ನಾನೆ ಮಾಡಿದೆನೆಂಬುದರ ಅಹಂಕಾರವ. ಕೇಡಿಗೆ ಕಾರಣವಲ್ಲದೆ ಮಾಡಿದ್ದು ನೀನಲ್ಲವೆಂದು ತಿಳಿ.

ಶ್ರೀಧರ– ವೇದವನೆ ಕೊಚ್ಚಿ ವೇದಾಂತವನೆ ಬಿಚ್ಚಿದರೆ ಸಾಧುವರ್ಗದವರಿಲ್ಲ ನಿನ್ನೆದುರು. ಮದ್ದಾನೆಯಂತಿರುವ ಮುದ್ದು ಶ್ರೀಧರನು ಮದವೇರಿ ನಿಂತಿರಲು ಮಧುರ ಚುಂಬನವ ಕೊಟ್ಟು ಆಲಂಗಿಸಲಾರೆಯಾ ಮುಂದಾದರೂ ಬಿಚ್ಚಿ ಹೇಳಲಾರೆಯಾ ನಿನ್ನ ಒಡಲ ಧರ್ಮ.....

ಗೌರಿ– ಹೇಳುತಿದೆ ಯನ್ನ ಒಡಲ ಧರ್ಮ । ಕೇಳು ಪಾತಕನ ಕೈ ಸೆರೆಯಾದ

ಬಳಿಕ ತಾಳಿಕೋ ಯಂದು ಹೇಳುತಿದೆ । ಪ್ರಳಯ ತಾ ಬಂದು ಸಮ್ಮುಖದಿ ನಿಂತರೂ ಬಾಳಿ ಬದುಕೆಂದು ಹೇಳುತಿದೆನ್ನ ವಡಲ ಧರ್ಮ । ತಾಳವಿಲ್ಲದ ಗಾನದಂತೆ । ಮೇಳವಿಲ್ಲದ ಉತ್ಸವದಂತೆ ಬಳಲಿ ಬಾಯಾರಿ ತಿಳಿಯದ ಶ್ರೀಮಂತನ ನಾಲಿಗೆಯಂದು ಹೇಳುತಿದೆ ಯನ್ನ ವಡಲ ಧರ್ಮ....

ಶ್ರೀಧರ– ಸೊಕ್ಕಿನ ಮಾತುಗಳು ಮಿಕ್ಕಿ ಮತ್ತೊಮ್ಮೆ ಬಂದರೆ ಇಕ್ಕುವೆನು ನಿನ್ನಂತೆಕ್ಕಿಯೊಳು ಕಕ್ಕುಲಾತೆಯ ತೋರಿ ಧಕ್ಕೆ ಮಾಡದೆ ಬಿಟ್ಟು ನಕ್ಕು ನಲಿದರೆ ಮುಕ್ಕಿಸುವೆಯಾ ಮಂಣು.... ಹುಂ ಚಿಕ್ಕವಳ ಮಾತೇನೆಂದು ಚೊಕ್ಕ ಪ್ರೇಮವ ತೋರಿದರೆ ಸಿಕ್ಕಂತೆ ಬೊಗುಳುವಿಯಾ ಹೆಂಣೇ ಧಕ್ಕೆ ಬರುತಿದೆ ಇನ್ನೊಮ್ಮೆ ನುಡಿದರೆ ಮುಕ್ಕಂಣ ಬಂದರೂ ನಾ ಬಿಡೆ ನಿನ್ನ ಸಿಕ್ಕಿರುವೆ ಪಂಜರದ ಹಕ್ಕಿಯಂತೆ । ಮುಕ್ಕಾಲು ಘಳಿಗೆ ಯೊಚಿಸಿ ಹೇಳು ಅಕ್ಕರಿಸುವೆ ನಿನ್ನ । (ಶಾಮಲಾ ಸಬ್ ಇನಸ್ಪೇಕ್ಟರ ಡ್ರೆಸ್ಸಿನಿಂದಲೂ ರಾಮು ಪೋಲೀಸ ಡ್ರೆಸ್ಸಿನಿಂದಲೂ ಬರುತ್ತಾರೆ. ಶಾಮಲಾ ಮುನ್ನುಗ್ಗುವಾಗ್ಯೆ ಕೈ ಹಿಡಿದು ಹಿಂದಕ್ಕೆ ಸರಿಯುತ್ತಾರೆ.)

ಗೌರಿ– ಅಕ್ಕರಿಸುವೆಯಾ ಅಕ್ಕರಿಸು ನಿನ್ನ ಮಗಳಂತೆ । ಕಕ್ಕುಲಾತೆಯ ತೋರು ನಿನ್ನ ಸುತಳಂತೆ । ಚೊಕ್ಕ ಮಡದಿಯ ಗರ್ಭದಲಿ ಬೆಳೆದ ಚಿಕ್ಕ ಬಾಲಕಿಯಂದು ಅಕ್ಕರಿಸು । ಮಿಕ್ಕಿ ದಾರಿ ತಪ್ಪಿದ ನಿನಗೆ ಮುಕ್ಕಂಣ ಬಂದು ಮುಖವ ತೋರುವನೇ । ರಕ್ಕಸಾಧಮಗೆ ಮಾಯವಾಗದಿರೆ ಧಕ್ಕೆ ಬರುತಿದೆ ಆ ಶಿವಂಗೆ । ತಕ್ಕ ಪತಿ ದೇವಂಗೆ ಸದಾ ಪಂಜರದ ಗಿಳಿಯಾಗಿ ಸಿಕ್ಕಿ ಬಿದ್ದ ಸತಿಯೇ ನೀತಿ ಮತಿಯಂಬುದನ್ನು ಮುಕ್ಕಾಲು ಏಕೆ ಸಕಾಲಕ್ಕೆ ಮರೆಯದಿರಂಣಾ.....

ಶ್ರೀಧರ– ಗೌರೀ....ಕಾಮನಂತಿರುವ ಈ ಶೂರನು ಕಾಮಿಸಿ ಕರೆದರೆ ನೇಮವಿಲ್ಲದ ಸಾಮ್ಯ ಹೇಳುವರೇನೇ । ತಾಮಸನು ನಾನಲ್ಲ. ಪ್ರೇಮದಿಂ ಕರ ಹಿಡಿದರೆ ಹೇಮದಿಂದ ಮುಚ್ಚುವೆನು ನಿನ್ನ । ಕಾಮ್ಯದಿಂದ ಸರಮಣಿ ನೀನಾಗಲಾರಿಯಾ ಗೌರೀ.

ಗೌರಿ– ಕಾಮ್ಯದಾರಸರಮಣಿ ನಾನಹುದು ಕಾಮನಂತಿಹ ಶೂರ ನೀನಹುದು । ನೇಮವರಿತಿಹೆನು ಆ ಮಹಾಶಂಕರನ ಉರಿ ನೇತ್ರಕ್ಕೆ ಕಾಮನು ದಹಿಸಿ ಬೂದಿಯಾಗಿಹನು । ವಿಮಲತೇಜಃಪುಂಜಾ ನೀನದರಂತೆ ಭಸ್ಮವಾಗುವಿಯೇನೋ ಎಂಬ ಚಿಂತೆ ಯನಗಿಹುದು ।

ಶ್ರೀಧರ– ಸುಟ್ಟು ಭಸ್ಮವಾಗುವ ಕಾಮನು ನಾನಲ್ಲ ಗೌರೀ ಕೊಟ್ಟ ಭಾಷೆಗೆ ತಪ್ಪಲಾರದೇ ಕೆಟ್ಟ ಆ ಮಾರನದೇನು ಧಿಟ್ಟ ಶ್ರೀಧರನು ನಿನ್ನಂ ಬಿಡಲಾರ. ಕೆಟ್ಟೆನೆನಬೇಡ । ಘಟ್ಟಿ ವಚನವಿತ್ತು ಪಟ್ಟದರಸಿ ನೀನಾಗಲಾರೆಯಾ ।

ಗೌರಿ– ಪಟ್ಟದರಸಿ ನಾನಾಗಿ ದಿಟ ವಚನವನೀಯಬೇಕೆಂದಿದ್ದೆ । ಇಟ್ಟ ಫಣಿಲಿಖಿತ ತಪ್ಪಿ ಬರೆದಿಹನು ಆ ಖೊಟ್ಟಿ ಬ್ರಹ್ಮ । ನಿಟ್ಟುಸುರು ಹಾಕಿ ಎಷ್ಟೊಂದು ಯೋಚಿಸಿದರೂ ತೀರದಾಗಿದೆ ಯನ್ನ ಮನದಾಶೇ ।

ಶ್ರೀಧರ– ನಿನ್ನ ಮನದಾಶೆ ಇಹುದೆಂದು ಮುನ್ನ ತಿಳಿದಿಹೆನು ನಾನು । ಚನ್ನಾಗಿ ಅರಿತೆ ನಿನ್ನಿಂಗಿತವ । ಕನ್ನ ಘಾತುಕನಾದ ಆ ಬೊಮ್ಮನ ಲೇಖನಕೆ ಈ ನಿನ್ನ ಶ್ರೀಮಂತ ಬೆದರಲಾರ । ಇನ್ನೊಂದರ ಘಳಿಗೆಯೊಳಗಾಗಿ ರನ್ನದಾವರ ನೀಡು ಇಂದು । ಈ ಸೆರೆಯಿಂದ ಬಿಡುಗಡೆಯ ಹೊಂದು ।

ಗೌರಿ– ಈ ಸೆರೆಯಿಂದ ಬಿಡುಗಡೆಯಾಗಿ ನಿನಗೆ ಸತಿಯಾಗಿ ಬಾಳ ಬೇಕೆಂದಿದ್ದೆ । ಆದರೆ ಪತಿಯು ಪರಧೇಶಿಯೆಂಬ ನೆನಹು ಆಗಾಗ್ಗೆ ಬರುತಿದೆ । ಕ್ಷಿತಿಯೊಳಗೆ ಸತಿಪತಿಯೆಂಬ ಬಿರುದಿದೆ । ಮತಿಯುಳ್ಳ ಮಾನವನು ನೀನೆಂದು ತಿಳಿದಿದೆ । ನಿನ್ನ ಮಾಂಗಲ್ಯ ಮಡದಿಯನು ಯನ್ನ ಪತಿಗೆ ಜೋಡು ಮಾಡಬೇಕೆಂಬ ಹಂಬಲವು ನನಗಿದೆ. ನೀತಿಯುಳ್ಳ ಶ್ರೀಮಂತಾ ಸೋತು ಬರುವೆ ನಾ ನಿನ್ನ ಹಿಂದೆ ಅತಿ ತೀವ್ರದಲಿ ಕಳುಹಿಸು. ಸೀತೆಯನು ನಮ್ಮವರ ಜೊತೆಗೆ ಇಂದೇ । ಖ್ಯಾತಿಯಾಗಿ ಬಾಳಲಿ ಇದೊಂದು ಭಾರತದ ನೂತನ ಕೃತಿಯು ನಿನ್ನಿಂದೆ ।

ಶ್ರೀಧರ– ಎಲೆ ಗಯ್ಯಾಳಿ ಸಲ್ಲದ ಮಾತಾಡಿದರೆ ನಿಲ್ಲದೆ ಬರುತಿದೆ ಗಲ್ಲಕ್ಕೆ ಬಲವಾದ ಪೆಟ್ಟು ಹಲ್ಲೊಂದೂ ಉಳಿಯದಿಲ್ಲವೆಂಬ ಭರವಸೆಯ ನಿಟ್ಟು । ಕಾಲ ಗತಿಸಿದಂತೆಲ್ಲ ಏರಿ ಬರುತಿದೆ ಯನಗೆ ಸಿಟ್ಟು । ಲೀಲೆಯಂ ತೋರುವಳೆಂದು ಸೋತು ಮಾತಾಡಿದರೆ ಕಾಲನಂತೆ ಬಿರು ನುಡಿಯೇ । ಎಲೆ ನೀತಿವಂತ ಹೆಂಣ್ಣೇ ಇನ್ನ್ಯಾಕೆ ಸತಿಯಾಗಿ ಬಾಳುವಿಯೋ (ರಿವಾಲ್ವರ ತೋರಿಸಿ) ಇದರಿಂದ ಹತಳಾಗುವಿಯೋ ಬೇಗ ಹೇಳು. ಕೊನೆಯ ಮಾತು ತಿಳಿಯಿತೇ.

ಗೌರಿ– (ದುಃಖಿಸುತ್ತ) ತಿಳಿದಿದೆ ನುಡಿಯದಂತೆ ಮಾಡಿದೆ ಯನ್ನ ಹಿಂದಿನ ದುಷ್ಕರ್ಮ । ಸೇಡು ತೀರಿಸಿಕೊಳ್ಳುತಿದೆ. ಹಡೆದ ಮಗಳೆನ್ನದೆ ನಿಮ್ಮ ಬಲವಾದ ಹಮ್ಮು । ಕಡು ಪಾಪದ ಕೊಳೆಯಾಗಿ ಪರಿಣಮಿಸಿದೆ ನಿಮ್ಮ ಮನವೆಂಬ ಭೂತದ ಅಧರ್ಮ । ಪಿಡಿದ ವ್ರತ ಬಿಡಬೇಡವೆಂಬುದೇ ನನ್ನ ಮನ ಧರ್ಮ । ಸುಡು ತಡವ್ಯಾಕೆ ಶ್ರೀಧರಾ ಈ ಚಿತ್ರ ಹಿಂಸೆಗಿಂತಲೂ

ಮರಣವೇ ಬಯಸುವೆ । ಪತಿದೇವಾ ಕ್ರೂರನ ಬಲೆಗೆ ಸಿಕ್ಕು ಜಾರೆಯಾದಳೆಂಬ ಬಿರುನುಡಿಯನ್ನು ಮಾತ್ರ ಆಡದಿರು । ಪ್ರಾಣಕ್ಕೆ ಹೆದರಿ ಮನಸೋತು ನೀಚ ವೃತ್ತಿಗೆ ಜಾರಿಲ್ಲ ನಿನ್ನ ಸತಿ । ಇನ್ನು ಈ ನೀಚನಿಂದ ಉಳಿಗಾಲವಿಲ್ಲ । ಕೊನೆಯ ನಮಸ್ಕಾರ ಬರುವೆ ಯಲೋ ಪಾಪಿ ಹಾಕು ತಡಮಾಡದೇ ನಿನ್ನ ಬಲವಾದ ಗುಂಡನ್ನು । ನಿನ್ನ ಗುಂಡಿಗೆ ಹೆದರುವ ಹೇಡಿ ನಾನಲ್ಲವೆಂದು ತಿಳಿ.

**ಶ್ರೀಧರ–** ಆಂ, ಎಲೆ ಗೌರೀ ಸರ್ಪದ ಮರಿಯನ್ನು ಅರಘಾಯ ಮಾಡಿಬಿಟ್ಟರೆ ಕಚ್ಚದೆ ಹಾಗೆ ಬಿಡದು. ಅದಕ್ಕಾಗಿ ನಿನ್ನ ಪ್ರಾಣ ತೆಗೆದು ಕೊಳ್ಳದೆ ಬಿಡದು ಈ ಮದ್ದು. ಇನ್ನೊಂದರ ಘಳಿಗೆಯೊಳಗೆ ಅಡಗಿಹೋಗುವದು ನಿನ್ನ ಸದ್ದು । ಮುನ್ನೊಂದು ಅವಾಚ್ಯ ಶಬ್ದ ಕೊಚ್ಚಿದರೆ ಹಾರಿಸುವೆ ಕದ್ದು । ಬಾಗಿಲಿಗೆ ಬಂದ ಸಂಪತ್ತು ಕಾಲಲ್ಲೊದ್ದಂತೆ ತಡಮಾಡದೆ ಬಂದಿದೆ ನಿನಗೆ ಮೃತ್ಯು । ಸಹಕರಿಸದೇ ಕೆಟ್ಟೆ । ಇನ್ಯಾಕೆ ಅವಧಿ ಸಿದ್ಧಳಾಗು ಇಹಲೋಕದ ಯಾತ್ರೆಗೆ ರಿವಲ್ವಾರ ಗುರಿ ಇಡುವನು (ಶಾಮಲಾ ಇನಸ್ಪೆಕ್ಟರ ಹಾರಿ ಬಂದು ಅವನ ಪಿಸ್ತೂಲನ್ನು ಹೊಡೆದು ಕೆಡವಿ)

**ಶಾಮಲಾ–** ಥು ಪಾಪಿ ನಿನ್ನ ಯಾತ್ರೆಯಾದರೂ ಮುಗಿಯಿತೆಂದೇ ತಿಳಿ । ಹೆಂಣುಬಾಲೆಯ ಮೇಲೆ ಶೌರ್ಯ ತೋರಿಸುವ ಗಂಡಸೇ ಯಾರಲ್ಲಿ ಕಲಿತೇ ಈ ವಿದ್ಯೆಯನ್ನು ಇನ್ನು ತಯ್ಯಾರಾಗು ಸಾಯಲಿಕ್ಕೆ (ರಿವಲ್ವಾರ ತೋರಿಸುವಳು ಶ್ರೀಧರ ಬಗಲೆತ್ತಿ ನಿಂತು ಹಿಂದಕ್ಕೆ ಸರಿಯುವನು.)

**ಶ್ರೀಧರ–** ಓಹೋ ನೀವು ಅಪ್ಪಣೆ ಇಲ್ಲದೆ ನಿಮ್ಮನ್ನು ಇಲ್ಲಿಗೆ ಬಿಟ್ಟವರಾರು (ಶಾಮಲಾ ಮೇಲಕ್ಕೆ ಗುಂಡು ಹಾರಿಸುತ್ತಾಳೆ)

**ಶಾಮಲಾ–** ಮುಂದೆ ವಂದಕ್ಷರ ಮಾತಾಡಿದರೆ ನಿನ್ನ ಪ್ರಾಣವುಳಿಯದು ಪಶುವೇ ಇನ್ನು ಮೇಲೆ ನಿನ್ನ ಮರಣವೇ ನಿಜವೆಂದು ತಿಳಿ (ಪಿಸ್ತೂಲ ತೋರಿಸುತ್ತ ಪೋಲೀಸ್ ಅವಳನ್ನೂ ಬಿಚ್ಚು ಮತ್ತು ಅದೇ ಗಿಡಕ್ಕೆ ಈ ಮಹಾಶಯವನ್ನು ಘಟ್ಟಿಯಾಗಿ ಬಂಧಿಸು.

**ಶ್ರೀಧರ–** (ಕೈಮುಗಿದು) ಅಯ್ಯೋ ಹಾಗೆ ಮಾಡಬೇಡಿ. ಇದೇ ಗ್ರಾಮದ ಚೇರಮನ್ನನು ನಾನು ಜನರಲ್ಲಿ ನನ್ನ ಮರ್ಯಾದೆಯನ್ನು ಕಳೆಯಬೇಡಿರಿ.

**ಪೋಲೀಸ–** ನಿನ್ನಲ್ಲಿ ಮರ್ಯಾದೆ ಸ್ವಾಕ ಇದ್ದರಲ್ಲವೇ ಕಳೆದುಹೋಗುವದು ಮೊದಲೇ ಇಲ್ಲೆಂದಮೇಲೆ ನಿನಗೆ ಭಯವೇಕೆ ಸುಮ್ಮನೇ ಬಾ (ಅವಳನ್ನು ಬಿಚ್ಚಿದ

ಜಾಗಕ್ಕೆ ಈತನನ್ನು ಕಟ್ಟಿದವನು ಶಾಮಲಾ ಅತ್ತಿತ್ತ ನೋಡುತ್ತ ತಿರುಗಾಡುತ್ತಾಳೆ)

**ಶ್ರೀಧರ–** ಏ ಪೋಲೀಸ ಇನಸ್ಪೆಕ್ಟರರಿಗೆ ತಿಳುಹಿಸು ಅವರು ಕೇಳಿದಷ್ಟು ದುಡ್ಡು ಕೊಡುತ್ತೇನೆ ಹೇಳೋ.

**ಪೋಲೀಸ್–** ಆಗಲ್ರೀ ಹೇಳ್ತೀನಿ. ನಿಮ್ಮ ದುಡ್ಡೆಲ್ಲ ವತ್ತಟ್ಟಿಗೆ ಜಮಾ ಇಡ್ರಿ, ಇಂದಿಲ್ಲ ನಾಳೆ ಕೋರ್ಟಿನ ಖರ್ಚಿಗೆ ಬೇಕೇಬೇಕು. ಇವರಿಗೆ ಕೊಟ್ಟು ಬರೇಗೈ ಆಗಬೇಡಿರಿ.

**ಗೌರಿ–** (ಇಬ್ಬರಿಗೂ ನಮಸ್ಕರಿಸಿ) ಅಂಣಂದಿರೇ ತಾವು ಒಳ್ಳೇ ಸಮಯಕ್ಕೆ ಬಂದಿರಿ. ಇಲ್ಲವಾದರೆ ನಾನು ಇವನಿಂದ ಉಳಿತಾನೇ ಇರಲಿಲ್ಲ. ನಿಮ್ಮ ಉಪಕಾರವನ್ನು ಈ ಜನ್ಮದಲ್ಲಿ ತೀರಿಸಲು ಅಸಮರ್ಥಳು. ಮುಂದಿನ ಜನ್ಮದಲ್ಲಿಯಾದರೂ ತೀರಿಸುತ್ತೇನೆ. ಮರೆಯಲಾರೆ. ನಿಮ್ಮಿಂದಲೇ ಪ್ರಾಣದಾನವಾಯಿತು (ನಮಿಸುವಳು).

**ಇನಸ್ಪೆಕ್ಟರ್–** ನಿನ್ನ ಹೆಸರೇನಮ್ಮಾ (ಡೈರಿಯನ್ನು ತಕ್ಕೊಂಡು ಬರೆದುಕೊಳ್ಳುವರು)

**ಗೌರಿ–** ನನ್ನ ಹೆಸರು ಗೌರಿ.....

**ಇನ–** ನಿಮ್ಮ ಯಜಮಾನರ ಹೆಸರನ್ನು ಹೇಳುವಿಯಾ.

**ಗೌರಿ–** (ನಾಚಿ) ಶಾಮರಾಯರು (ಬರೆದುಕೊಂಡು) ಕಾಗದಕ್ಕೆ ಸಹಿ ಮಾಡಿಸಿಕೊಂಡು

**ಇನ–** ಗೌರೀ ನೀನು ಮೂರು ಘಂಟೆಗೆ ಇಲ್ಲಿಗೆ ಬರಬೇಕು. ಏಸಿ. ಸಾಹೇಬರು ಬರುತ್ತಾರೆ. ಅವರ ಮುಂದೆ ಇವರು ಮಾಡಿದಂಥ ಕೃತಿಗಳೆಲ್ಲವನ್ನು ತಿಳುಹಿಸಬೇಕು.... ಈ ಮಹಾಶಯರನ್ನು ಜೇಲಿಗೆ ಕಳಿಸುತ್ತೇನೆ ಇನ್ನು ನೀನು ನಡೆ....

**ಗೌರಿ–** ಆಗಲಿ ಬರ್ತೀನಿ (ನಮಿಸುವಳು ಹೋಗುತ್ತಾಳೆ)

ಪೋಲೀಸನಿಗೆ ಕಿವಿಯಲ್ಲಿ ಏನೋ ಹೇಳಿದಂತೆ ಮಾಡಿ ಇನಸ್ಪೆಕ್ಟರ್

**ಇನ–** ಏ ಪೋಲೀಸ್ ನಮ್ಮ ದೊಡ್ಡ ಸಾಹೇಬರು ಬರುವವರೆಗೆ ಇವನ ಹತ್ತರ ಯಾರನ್ನೂ ಬಿಡಬೇಡ ಯಾರಾದರೂ ಬಂದು ಇವರನ್ನು ಬಿಚ್ಚಿ ಹೋದರೆ ನನಗೆ ತಿಳಿಸಬೇಕು. ಅವರಿಗೆ ಇವನಂತೆ ಜೇಲಿಗೆ

ಕಳಿಸುತ್ತೇನೆ. ಹುಷಾರಿ ಸ್ವಲ್ಪು ಕೆಲಸವಿದೆ ಹೋಗಿ ಈಗಲೇ ಬರುತ್ತೇನೆ.....(ಹೋಗುವರು.)

**ಪೋಲೀಸ–** ನೋಡ್ರಿ ಚೇರಮನ್ರೇ ಸಾಹೇಬರು ಹೇಳಿದ್ದು ಕೇಳಿದಿರಾ ಅಧಿಕಾರ ಬಂದಾಗ್ಯೆ ಇಂಥಾ ಅನಾಚಾರ ಸಲ್ಲದಪ್ಪಾ.... ಈಗಲಾದರೂ ಏನಾಗಿದೆ ನಿನ್ನ ದೋಸ್ತರು ಯಾರಾದರೂ ಇದ್ದರೆ ಅವರನ್ನು ಬರಮಾಡಿಕೊಳ್ಳಿರಿ. ದೊಡ್ಡ ಸಾಹೇಬರು ಬಂದಾಗ್ಯೆ ಹೇಳುವ ಮಾತುಗಳಿವೆ ಅವರಿಂದ ಹೇಳಿಸಿದರೆ ಮಾತ್ರ ನಿಮ್ಮನ್ನು ಬಿಟ್ಟರೂ ಬಿಡಬಹುದು ಇದ್ದಾರೆಯೇ ಯಾರಾದರು....

ಶ್ರೀಧರ– ನನ್ನ ದೋಸ್ತರನ್ನು ಕರೆಸಲೇ ದೋಸ್ತನೆಂದರೆ ನಮ್ಮ ರಾಮು ಒಬ್ಬನೇ ಆದರೆ ಅವನಿಗೆ ನನ್ನ ಕೆಟ್ಟ ಹಣೇಬರಹವನ್ನು ನೋಡುವದಕ್ಕಾಗೇ ಕರಿಸಬೇಕೇ ಯಾಕಂದರೆ ಅವನು ನಾನು ಮಾಡತಕ್ಕ ಈ ಕೃತ್ಯಕ್ಕೆ ಸೇರದವನು ಅದಕ್ಕಾಗೇ ಆಲೋಚಿಸುತ್ತಿರುವೆ....

**ಪೋಲೀಸ್–** ಆದರೆ ನಾಚಿಕೆಯಾಗುವದಲ್ಲವೇ ನಿಜ ಹೇಗೆ ಮಾಡುವಿರಿ ನೋಡಿ.

ಶ್ರೀಧರ– ಅವನಲ್ಲಿದೆ ಮತ್ತಾರೂ ಇಲ್ಲ. ಏನೇ ಆಗಲಿ ಅವನು ಬಂದರೆ ಮಾತ್ರ ನನಗೆ ಜೇಲಾಗುವದಿಲ್ಲವೆಂದು ಭರವಸೆ ಹೇಳುತ್ತೇನೆ ಆದರೆ ಇದೋ ಪೋಲೀಸ್ ನೀವೇ ತೋಟದ ಹೊರಗೆ ಹೋಗಿ ಯಾರಾದರೂ ಕಂಡರೆ ಊರಲ್ಲಿ ಹೋಗಿ ಬಿ.ಎ. ರಾಮನನ್ನು ಚೇರಮನ್ನ ಕರಿತಾರೆ ಎಂದು ಹೇಳಿದರೆ ಸಾಕು ಬಂದೇ ಬಿಡುತ್ತಾನೆ ದಯಮಾಡಿ ಹೋಗಿ ಹೇಳಿ ನಿಮಗೆ ಪುಣ್ಯಾ ಬರುತ್ತದೆ....

**ಪೋಲೀಸ–** ಆಗಲೆಪ್ಪಾ ಸರ್ಕಾರೀ ನೌಕರ ನಾನು ನೀನಾದರೂ ಪಂಚಾಯ್ತು ಚೇರಮನ್ನ ಅಂದ ಮೇಲೆ ನೀನು ಸಹ ನನ್ನನ್ನು ದುಡಿಸಿಕೋ ತಪ್ಪೇನಿದೆ....ಬರ್ತೀನಿ. (ಹೋಗುತ್ತಾನೆ)

(ತೆರೆ ಬೀಳುತ್ತದೆ)

**ರಸ್ತೆ**

(ಗೌರಿಯು ಲಗುಬಗೆಯಿಂದ ಹೋಗುವಾಗ್ಯೆ ಶಾಮು ಬರುತ್ತಾನೆ ಹೆಗಲ ಮೇಲೆ ಮಗನಿರುತ್ತಾನೆ.)

**ಶಾಮು–** ಯಾರು ಗೌರೀ ಇದುವರೆಗೂ ಎಲ್ಲಿ ಹೋಗಿದ್ದೇ.....ಊರೆಲ್ಲ ಹುಡಿಕೀ ಹುಡಿಕೀ ಬೇಸತ್ತೆ ಹೋದದ್ದಾದರೂ ಎಲ್ಲಿಗೆ.....

ಗೌರಿ– (ಮಗನನ್ನು ಯತ್ತಿಕೊಂಡು ಮುದ್ದಿಸಿ) ನೋಡೀ. ಇಲ್ಲೇ ಹೊರಗೆ ನಿಂತಿದ್ದೆ. ಸೀತಮ್ಮನೋರು ಬಂದರು. ಬಾ ಗೌರೀ ಎಂದು ಮುಂದಕ್ಕೆ ಕರೆದರು. ಇಲ್ಲೇ ಮಾತಾಡಲಿಕ್ಕೆ ಕರಿಯಬಹುದೆಂದು ಸ್ವಲ್ಪು ಮುಂದೆ ಬಂದೆ ಆ ಮಾತು ಈ ಮಾತುಗಳಾಡುತ್ತ ತೋಟದ ವರೆಗೆ ಹೋದೆವು. ಮಾತಿನ ಭರದಲ್ಲಿ ಈತನ ನೆನಪೇ ನನಗೆ ಆಗಲಿಲ್ಲ. ಬುತ್ತಿ ತಂದಿದ್ದರು. ಊಟ ಮಾಡಿಸದೆ ಕಳಿಸಲಿಲ್ಲ. ಊಟಾದಮೇಲೆ ಮಗನ ಹೆಸರೇನು ಎಂದು ಅವರು ಕೇಳಿದ ಮೇಲೆ ನೆನಪಾಯಿತು. ನಾಗೇಶನು ಮಲಗಿದ್ದ ಅದಕ್ಕಾಗಿ ನನಗೆ ಅಪ್ಪಣೆ ಕೊಡಿ ಅಮ್ಮಾ ಅಂದು ಹಾಗೆ ಓಡುತ್ತ ಬಂದೆ. ಇವನು ಅತ್ತನೇನು.

ಶಾಮು– ಅಳದೇನು ಮಾಡ್ಯಾನು ಮೊದಲು ಅವನ ಹೊಟ್ಟೆಗೆ ಕೊಡು. ಅಲ್ಲಾ ಸೀತಮ್ಮನವರು ನಿನ್ನ ಮೇಲೆ ಬಹಳ ಪ್ರೀತಿ ಮಾಡುತ್ತಾರೆಂದು ಹೇಳಲಿಕ್ಕೆ ಅವರು ಆ ದಿವ್ಸ ತಂದಿದ್ದ ಬುತ್ತೀ ಗಂಟೇ ಸಾಕ್ಷಿಯಾಗಿದೆ ಆದರೆ ಶ್ರೀಧರನು ಮಾಡಿದ್ದು ನೋಡಿದರೆ. ನನ್ನ ತಲೆ ತಿರುಗುತ್ತಿದೆ....ಗೌರೀ ಅವನು ಒಮ್ಮಿಂದೊಮ್ಮೆ ನಮ್ಮನ್ನು ಮನೆಯಿಂದ ಹೊರಗೆ ಹಾಕಿದನಲ್ಲಾ ಅವನ ತಪ್ಪು ಎಷ್ಟಂತ ಹೇಳಿದರೂ ತೀರದಾಗಿವೆ.....

ಗೌರಿ– ಸಾಕು ಬಿಡ್ರಿ ಹಾಗೆಲ್ಲ ಮಾಡಬಾರದು..... ನಮ್ಮ ತಪ್ಪು ಸಾವಿರ ಇಟ್ಟುಕೊಂಡು ಮತ್ತೊಬ್ಬರ ತಪ್ಪು ಯಣಿಸಬಾರದು.... ದೋಸ್ತೀ ಜಾಗದಲ್ಲಿ ಸಾಲ ಮಾಡಿದ್ದು ನಮ್ಮ ತಪ್ಪಲ್ಲವೇ. ಮಾಡಿದರೂ ಮಾಡಲಿ ಅವರು ಕೇಳುವದಕ್ಕಿಂತ ಮುಂಚೆ ಕೊಡದೇ ಇದ್ದದ್ದು ನಮ್ಮ ತಪ್ಪಲ್ಲವೇ..... ತಾವು ಕೊಟ್ಟ ದುಡ್ಡಿಗಾಗಿ ಮನೆಯನ್ನು ಹಾಕಿಕೊಂಡು ಮುಟ್ಟಿಸಿಕೊಳ್ಳುತ್ತೇವೆ ಎಂದು ಮನತನಕ ಬಂದಾಗ್ಯೆ ಅವರೊಡನೆ ಬಾಯಿಗೆ ಬಂದಂತೆ ಪೇಚಾಡಿದ್ದು ನಮ್ಮ ತಪ್ಪಲ್ಲವೇ ಇಷ್ಟೆಲ್ಲ ತಪ್ಪು ನಾವು ಒಪ್ಪಿಕೊಳ್ಳದೇ ಅವರ ತಪ್ಪನ್ನೇ ಎತ್ತಿ ತೋರಿಸುವದು ನಮ್ಮ ಮೂರ್ಖತನವೆಂದು ನನಗನಿಸುತ್ತದೆ. ಯಾಕಂದರೆ ಅವರು ಶ್ರೀಮಂತರು, ಮಹ ಉದಾರಿಗಳು ಅಂಥವರಿಗೆ ನಾವು ಏನೂ ನುಡಿಯಬಾರದು ದೇವರ ಮೆಚ್ಚಲಾರನು....

ಶಾಮು– ಇರಲಿ ಸೀತಮ್ಮನವರು ಮತ್ತೇನಾದರೂ ಹೇಳಿದರೇನು.

ಗೌರಿ– ಅವರು ಹೇಳಿದ್ದಂದರೆ ಬಹಳ ಇವೆ. ಮುಖ್ಯವಾಗಿ ನೀವು ಮಾಡತಕ್ಕ ಕೃತ್ಯಕ್ಕಾಗಿ ಬಹಾಳ ಚಿಂತಿಸಿದರು ಮುಖ್ಯವಾಗಿ ಇದುವರೆಗೆ ಆದದ್ದಾಗಿ ಹೋಯಿತು ನೀವು ಮಾತ್ರ ದುರ್ಮಾರ್ಗಗಳನ್ನು ಬಿಟ್ಟರೆ ಮಾತ್ರ

ನನಗೆ ಅಂಥವರಲ್ಲಿ ಮರ್ಯಾದೆ ಇದೆ ಇಲ್ಲವಾದರೆ ನನ್ನ ಮರ್ಯಾದೆಯು ಸಹ ಕಾಸಿಗೆ ಪಂಚೇರಾಗುವ ಸಂಭವವಿದೆ ಇರಲಿ ಮನೆಗೆ ಹೋಗೋಣ ನಡೀರಿ. ಇನ್ನೂ ಅವರು ಹೇಳಿದ ಮಾತುಗಳು ಬಹಳ ಇವೆ ಹೇಳುತ್ತೇನೆ.....

**ಶಾಮು–** ಗೌರೀ ನಾನು ನಿಜವಾಗಿಯೂ ಮಹ ಪಾಪಿಯು. ಇನ್ನು ಮೇಲೆ ಹೊಸ ಮನುಷ್ಯನಾಗಿ ನಿನಗೆ ಸತ್ಕೀರ್ತಿಯನ್ನು ತರುತ್ತೇನೆಂದು ಖಂಡಿತವಾಗಿ ನಂಬು.

**ಗೌರಿ–** ಆ....ಹಾ, ಸ್ವಾಮಿ ಇದೇನು ಕೇಳುತ್ತಿರುವೆ ಇದುವರೆಗೂ ಇಂಥಾ ಶಬ್ದಗಳೇ ನಿಮ್ಮ ಬಾಯಿಂದ ಕೇಳದೇ ಈ ದಿವ್ಸ ಕೇಳಿ ಸಂತೋಷವಾಯಿತು. ಇಂದಿಗೆ ನಾನೇ ಭಾಗ್ಯವತಿ ನಡಿರಿ ನಿಮ್ಮ ಪಾದಪೂಜೆ ಮಾಡಬೇಕಾಗಿದೆ. ಮಗನೂ ಮಲಗಿದನು. ಹೋಗೋಣ ನಡಿರಿ. (ಹೋಗುತ್ತಾರೆ)

**ತೋಟದ ಶೀನು**

(ಶ್ರೀಧರನನ್ನು ಗಿಡಕ್ಕೆ ಕಟ್ಟಿ ಹಾಕಿರುತ್ತಾರೆ. ಶಾಮಲಾ, ಸೀತಾ ಇಬ್ಬರೂ ಬರುತ್ತಾರೆ.)

**ಸೀತಮ್ಮ–** (ನೋಡಿ) ಅಯ್ಯೋ ಈ ರೀತಿ ನಿಮ್ಮನ್ನು ಕಟ್ಟಿದವರಾರು ಸ್ವಾಮಿ.

**ಶ್ರೀಧರ–** ಸೀತಾ ಯಾರೂ ಕಟ್ಟಿಲ್ಲ. ನನ್ನ ಕರ್ಮವೇ ನನ್ನನ್ನು ಈ ರೀತಿ ಬಂಧಿಸಿದೆ. (ದುಃಖದಿಂದ)

**ಸೀತಮ್ಮ–** ನೋಡಲಾರೆ ಶಾಮಲಾ ಬಿಚ್ಚೇ ಸುಮ್ಮನೇ ನಿಂತಿರುವಿಯಲ್ಲಾ (ಬಿಚ್ಚಹೋಗುವಳು)

**ಶ್ರೀಧರ–** ಬೇಡಮ್ಮಾ ಬೇಡ ಬಿಚ್ಚಬೇಡ. ನಾನೊಬ್ಬನೇ ಜೇಲಿಗೆ ಹೋಗುತ್ತೇನೆ. ಬಿಚ್ಚಿದರೆ ನೀನೂ ಸಹ ಜೇಲಿಗೆ ಬರಬೇಕಾಗುವದು. ಅದಕ್ಕಾಗಿ ಬೇಡ ಶಾಮಲಾ ಬೇಡ ಪೋಲೀಸ್ ಇದೇ ಈಗ ಹೊರಗೆ ಹೋಗಿದ್ದಾನೆ.

**ಸೀತಮ್ಮ–** (ಅಳುತ್ತ) ಅಯ್ಯೋ ಇದೇನು ನಿಮಗೆ ಜೇಲಾಗಲು ಕಾರಣ.

**ಶ್ರೀಧರ–** ಕಾರಣ ಅಂದರೆ ಇಷ್ಟೇ ಗೌರಿಯಮೇಲೆ ಬಲತ್ಕಾರ ಮಾಡಿದ್ದೇ ಕಾರಣ.

**ಶಾಮಲಾ–** ಇದೇನು ಹೇಳುವೆ. ಅಪ್ಪಾ ಅವಳ ಮೇಲೆ ಬಲತ್ಕಾರವೇ ಪರಸ್ತ್ರೀ ಅನ್ನುವದನ್ನು ಸಹ ಮರಿತಿಯಾ ಅಪ್ಪಾ.

**ಶ್ರೀಧರ–** ನಿಜ ಶಾಮಲಾ. ಸರ್ವಥಾ ಅಪರಾಧವಾಗಿದೆ. ಇನ್ನು ಸ್ವಲ್ಪ

ಹೊತ್ತಿನಲ್ಲಿ ಇಲ್ಲಿಗೆ ಪೋಲಿಸ್ ಸಿಬ್ಬಂದಿಯೇ ಬರುತ್ತದಮ್ಮಾ ಇದೇ ನಮ್ಮ ನಿಮ್ಮ ಕಡೇ ದರ್ಶನ ಶಾಮಲಾ. (ದುಃಖಿಸುವನು)

(ಪೋಲೀಸ್ ಗೌರಿಯನ್ನು ಕರೆದುಕೊಂಡು ಬರುತ್ತಾನೆ)

**ಪೋಲೀಸ–** ಚೇರಮನ್ನರೇ ನಮ್ಮ ದೊಡ್ಡ ಸಾಹೇಬರಲ್ಲಿ ಗೌರಿಯ ಜವಾಬ ಆಯಿತು. ಅದನ್ನೆಲ್ಲ ಕೇಳಿ ನಮ್ಮ ಸಾಹೇಬರು ಸಿಟ್ಟಿಗೇರಿದ್ದಾರೆ. ಅಲ್ಲಿಗೆ ನಿಮ್ಮನ್ನು ಹಿಡಿದುಕೊಂಡು ಬರಲಿಕ್ಕೆ ಹೇಳಿದ್ದಾರೆ. ಆದರೆ ಸರ್ಕಾರೀ ರೂಲ್ಸಿನ ಪ್ರಕಾರ ನಿಮಗೆ ಕೈಕೋಳ ಹಾಕಲಿಕ್ಕೆಬೇಕು. ಬರ್ರಿ. (ಕಟ್ಟಿದ ಹಗ್ಗ ಬಿಚ್ಚುವನು.)

**ಶಾಮಲಾ–** (ಪೋಲೀಸನ ಕಾಲಿಗೆ ಬಿದ್ದು) ದಯಮಾಡಿ ನಮ್ಮಪ್ಪನಿಗೆ ಕೈಕೋಳ ಹಾಕಬೇಡಿ. ತಪ್ಪಿಗೆ ವಪ್ಪಿಕೊಂಡ ಮೇಲೆ ಅವರಿಗೆ ದಯಬಾರದೇ ಪೋಲೀಸ್.

**ಪೋಲೀಸ–** ಏನೂ ತಪ್ಪಿಗೆ ವಪ್ಪಿಕೊಳ್ಳುವರೇ. ನಿಜವೇನ್ರೀ ಚೇರಮನ್ನರೇ.

**ಶ್ರೀಧರ–** ಪೋಲಿಸ್ ಗೌರಿಯ ಮೇಲೆ ನಾನು ಅಪರಾಧ ಹೆಚ್ಚಾಗಿ ಮಾಡಿದ್ದೇನೆ. ಹೇಳಲಿಕ್ಕೆ ಬರುವಂತೆಯೂ ಇಲ್ಲ. ನೀವು ಹೇಳಿದಂತೆ ಕೇಳುತ್ತೇನೆ. ದಯಮಾಡಿ ಕೈಕೋಳ ಹಾಕಬೇಡಿರಿ ಬಾಜಾರ ಹಿಡಿದು ನನ್ನನ್ನು ಕರೆದುಕೊಂಡು ಹೋಗಬೇಡಿರಿ ನಿಮ್ಮ ಕಾಲಿಗೆ ಬೀಳುತ್ತೇನೆ. (ಕಾಲಿಗೆ ಬೀಳ ಹೋಗುವನು)

**ಪೋಲೀಸ–** ಗೌರಿಯ ಮನೆಯನ್ನು ಜಪ್ತ ಮಾಡಿ ನಿಮ್ಮ ಸ್ವಾಧೀನಕ್ಕೆ ತಕ್ಕೊಂಡದ್ದು ನಿಜವಲ್ಲವೇ.

**ಶ್ರೀಧರ–** ನಿಜ ಪೋಲೀಸ್ ಅದನ್ನು ಈಗಲೇ ಅವರ ಸ್ವಾಧೀನಕ್ಕೆ ಕೊಡುತ್ತೇನೆ.

**ಪೋಲೀಸ–** ಬಿಟ್ಟು ಕೊಡಿವಿರಾ ಹಾಗಾದರೆ ಇಲ್ಲಿ ಸಹಿ ಮಾಡಿರಿ... (ಮಾಡುವನು) ಇರಲಿ ಇವಳನ್ನು ಬಲಾತ್ಕಾರದಿಂದ ಕೆಡಿಸಬೇಕೆಂದು ಮನಸ್ಸು ಮಾಡಿದ್ದು ನಿಜವಲ್ಲವೇ.....

**ಶ್ರೀಧರ–** ಅದೂ ನಿಜ ನನ್ನದು ಬಹಳ ತಪ್ಪಾಗಿದೆ ಅವಳು ಇನ್ನು ಮೇಲೆ ವಡ ಹುಟ್ಟಿದವಳೆಂದು ದೇವರ ಸಾಕ್ಷಿಯಾಗಿ ಹೇಳುತ್ತೇನೆ.....

**ಪೋಲೀಸ–**ಹಾಗಾದರೆ ಗೌರಿಯ ಕ್ಷಮೆಯನ್ನು ಕೇಳಿಕೋ....

**ಶ್ರೀಧರ–** ತಂಗೀ ನನ್ನ ಸರ್ವ ಅಪರಾಧವನ್ನು ಕ್ಷಮಾ ಮಾಡುವಿದಿಲ್ಲವೇ ನನಗೆ ಸಾಕಷ್ಟು ಪ್ರಾಯಶ್ಚಿತ್ತವಾಯಿತು. ಮತ್ತು ಇದೇ ದಿವಸವೇ ನಿಮ್ಮ ಮನೆ

ನಿಮಗೆ ಹೋಗಲು ಬಿಟ್ಟಿದ್ದೇನೆ. ತಂಗೀ ನನ್ನ ಸಮಾಧಾನಕ್ಕಾದರೂ ನಿನ್ನ ಬಾಯಿಂದ ಒಮ್ಮೆಯಾದರೂ ಅಂಣಾ ಎಂದು ಕರೆಯುವದಿಲ್ಲವೇ.

**ಗೌರಿ–** ಅಂಣಾ ಇದರಲ್ಲಿ ನಿಮ್ಮ ತಪ್ಪು ಏನೂ ಇಲ್ಲ ಹಿಂದಿನ ಜನ್ಮದಲ್ಲಿ ನನ್ನ ವಡಹುಟ್ಟಿದವರಿಗೆ ಯಾವ ಕೇಡು ಬಗೆದಿದ್ದೆನೋ ಕಾಣೆ ಈ ಜನ್ಮದಲ್ಲಿ ಹಿಂದಿನ ಜನ್ಮದ ಅಂಣನಾಗಿ ಬಂದು ನಿನ್ನಿಂದ ಏನೇನು ಆಗಬೇಕಾಗಿತ್ತೋ ಆಗಿ ಹೋಯಿತು. ಇದರಲ್ಲಿ ನಿಮ್ಮ ತಪ್ಪೇನಿದೆ......ಹಿಂದಿನ ಜನ್ಮದ ನನ್ನ ಕರ್ಮದ ಫಲವೇ ಹೀಗೆ ಮಾಡಿಸಿದೆ.

**ಪೋಲೀಸ–**ಹಾಗಾದರೆ ಇಲ್ಲಿ ಸಹಿ ಮಾಡಮ್ಮಾ.... (ಮಾಡುವಳು) (ಹೋಗುವಳು.)

**ಗೌರಿ–** ಸೀತಮ್ಮನವರೇ ನನ್ನ ಅಪರಾಧವನ್ನು ಮನ್ನಿಸಿರಿ (ಕಾಲಿಗೆ ಬೀಳುವಳು) ಶಾಮಲಾ ಬಾ ಅಮ್ಮಾ ನನ್ನ ಮೇಲೆ ಸಿಟ್ಟಿಲ್ಲವಷ್ಟೇ....

**ಶಾಮಲಾ–**ಅಕ್ಕಾ ಅಪ್ಪನು ಮಾಡಿದ ತಪ್ಪಿಗಾಗೀ ನಾನೂ ಸಹ ಕ್ಷಮೆಯನ್ನು ಕೇಳುತ್ತೇನೆ (ನಮಸ್ಕರಿಸುವಳು) (ಗೌರಿ ಹಿಂದಕ್ಕೆ ಸರಿದು ಅವಳನ್ನು ಯತ್ತುವಳು)

**ಶ್ರೀಧರ–** ಗೌರಾದೇವೀ ನಿನ್ನ ಪವಿತ್ರವಾದ ದರ್ಶನದಿಂದ ನನ್ನಲ್ಲಿ ಅಡಗಿದ್ದ ಮಾಯಾ ಲಂಪಟವು ತಾನಾಗೇ ಓಡಿ ಹೋಯಿತು ತಂಗೀ ನೀನು ನಿಜವಾದ ಪತಿ ಧರ್ಮಶೀಲೆಯಮ್ಮಾ ನಿಮ್ಮಂಥವರಿಂದಲೇ ನಮ್ಮ ಭಾರತವು ಬೆಳಗುತ್ತಿದೆ ನಮ್ಮಂಥ ಮಾಯಾವಿಗಳ ಕಲ್ಯಾಣವಾಗುತ್ತಿದೆ ಇಂದಿಗೆ ನೀನೆ. ಹಾದೀ ತೋರಿಸಿದ ಹಡದವ್ವನಾಗಿ ಕೀರ್ತಿ ಪಡೆದೆ ಆದರೆ ನನ್ನದೊಂದು ವಿಜ್ಞಪನೆಯನ್ನು ಮನ್ನಿಸಬೇಕು ಕೇಳಲೇನಮ್ಮಾ.....

**ಗೌರಿ–** ಕೇಳಂಣಾ ಏನದು....

**ಶ್ರೀಧರ–** ಈಗಲೇನಮ್ಮ ಮನಿಗೆ ಬಂದು ಅಲ್ಲೇ ಊಟಾ ತೀರಿಸಬೇಕು ಅಲ್ಲದೆ ನಿನ್ನ ಅಂಣ ಕೊಡುವ ಉಡುಗೊರೆಯನ್ನುಟ್ಟುಕೊಂಡು ಹೋಗಬೇಕು ನಿನ್ನ ಗಂಡನ್ನೂ ಸಹಕರಿಸುತ್ತೇನೆ

**ಶಾಮಲಾ–** ಸೀತಾ– ನೀವು ಮುಂದೆ ಹೋಗಿ ಸರ್ವಸಿದ್ಧತೆ ಮಾಡಿರಿ ನಾವೂ ಬರುತ್ತೇವೆ ಯಾಕಮ್ಮಾ ಬರುವೆಮ್ಮಾ.

**ಗೌರಿ–** ನಡಿ ಅಂಣ್ಣಾ ಒಡಹುಟ್ಟಿದ ಅಂಣನು ಮನೆಗೆ ಕರೆದರೆ ಬಾರದಿರುವೆನೇ ಬರುವೆ ನಡಿ ಅಂಣಾ.....

**ರಾಮು–** ಇದೇನು ಚೇರಮನ್ನರೇ ತಡ ಮಾಡದೆ ಬರಬೇಕೆಂದು ಹೇಳಿ ಕಳಿಸಿದವರು ಆಗಲೇ ತೋಟವನ್ನು ಬಿಟ್ಟು ಹೊರಟಿರಾ ಇದೇನು ಗೌರಾದೇವಿಯವರು ಸಹ ಬಂದಿರುವರೇ.....

**ಶ್ರೀಧರ–** ಬಾ ರಾಮು ಕರಿಸೊ ಸಂದರ್ಭವೇ ಬಂದಿತ್ತು ದೇವರ ಕೃಪೆಯಿಂದ ತಾನೇ ಶಾಂತವಾಯಿತು.

**ರಾಮು–** ಅಂಥಾ ಸಂದರ್ಭವೇನಾಗಿತ್ತು ಬಿಚ್ಚಿ ಹೇಳಲು ಬಾರದಾಗಿದೆಯೇ ಆ ವಿಷಯ....

**ಶ್ರೀಧರ–** ಬಿಚ್ಚಿ ಹೇಳದೆ ನಿನ್ನ ಮುಂದೆ ಮುಚ್ಚಿಡುವ ಮಾತಾದರೂ ಏನಿದೆ ರಾಮೂ.... ಸರ್ವವೂಬಲ್ಲ ಸರ್ವಜ್ಞಮೂರ್ತಿ ನೀನಾಗಿದ್ದು ನನ್ನನ್ನು ಕೇಳುವ ವಿಷಯವೇನಿದೆ.

**ರಾಮು–** ಅಂದರೆ ಇದುವರೆಗೆ ನಡೆದದ್ದು ನಿಮ್ಮ ಚರಿತ್ರೆಯೇ ಯಾರೆದೋ ಅಂತ ತಿಳಿದಿದ್ದೆ.

**ಶ್ರೀಧರ–** ಬರೇ ಚರಿತ್ರೆಯಲ್ಲ ರಾಮೂ.... ನನ್ನದೊಂದು ದೊಡ್ಡ ನಾಟಕವು ಈ ಸಾಧ್ವಿಯ ಮೇಲೆ ನಾನು ಮಾಡಿದ ಅನ್ಯಾಯದ ಚರಿತ್ರೆಯಾಗಿದೆ. ಅಂತೂ ತಂಗಿಯು ನನ್ನನ್ನು ಕ್ಷಮಿಸಿದ್ದಕ್ಕಾಗಿ ನನ್ನ ಪರಿಣಾಮ ನೆಟ್ಟಗಾಗಿದೆ. ಇಲ್ಲವಾದರೆ ಅನಾಹುತವೇ ನಡಿದಿತ್ತು ಇರಲಿ ಇನ್ನು ಹೇಳತಕ್ಕ ವಿಷಯಗಳೆಲ್ಲ ಅಲ್ಲೇ ಮನೆಯಲ್ಲಿ ಹೇಳುವೆ. ಬಾ ಮನೆಗೆ ಹೋಗೋಣ (ಶಾಮು ಬರುತ್ತಾನೆ)

**ಶಾಮು–** ನಮಸ್ಕಾರ ಚೇರಮನ್ನರೇ ಯಾಕೆ? ಕರಿದಿರಂತೆ.....

**ಶ್ರೀಧರ–** ಬಾ ಶಾಮೂ ನಾನೇ ಕರಿಸಿದ್ದೇನೆ. ಈ ದಿವ್ಸ ನಮ್ಮ ಮನೆಯಲ್ಲಿ ಭೋಜನವಾಗಬೇಕಾಗಿದೆ ಬನ್ನಿ ಹೋಗೋಣ. (ರಾಮು ಶ್ರೀಧರ ಮುಂದೆ ಹೋಗುತ್ತಾರೆ.)

**ಶಾಮು–** ಇದೇನೆ ಗೌರೀ– ನಿನ್ನ ನಾಟಕವೇ ನನಗೆ ತಿಳಿಯಲಿಲ್ಲ ಇದೇನಂದೆ.....

**ಗೌರಿ–** ನಿಜ ನೀವು ಹೇಳುವದೆಲ್ಲ ನಿಜವೇ ಇದು ನನ್ನ ನಾಟಕವೇ ನಿಜವಾಗಿ ನಡೆದಿತ್ತು ಇಲ್ಲಿಗೆ ಮುಕ್ತಾವಾಯಿತು. ಅಂದರೆ ಈ ನಾಟಕದಲ್ಲಿ ನೀವು ಮುಖ್ಯ ಪಾತ್ರಧಾರಿಗಳಲ್ಲವೆಂದು ತಿಳಿಯಬೇಡಿರಿ.... ನೀವು ಇವರಲ್ಲಿ ಸಾಲ ಮಾಡಿದ್ದರೆ ಮನೆಯ ಜಪ್ತಿಯಾಗುತ್ತಿದ್ದಿಲ್ಲ ರಾತ್ರಿ ಕಾಲದಲ್ಲಿ ಮನಿ ಬಿಟ್ಟು ಅಗಲಿದಂತಿದ್ದರೆ ನಾವಿರುವ ಗುಡಿಸಲು ಸುಡುತ್ತಿದ್ದಿಲ್ಲ

ನಿಮ್ಮ ಅಲಕ್ಷತನವೇ ನನ್ನ ನಾಟಕಕ್ಕೆ ನಾಂದೀ ಸ್ಥಾಪನೆಯಾಗಿದೆಯಂದು ನೆನಪಿಗೆ ತಂದು ಕೊಳ್ಳಿರಿ. ಇನ್ನಾದರೂ ಸುಮಾರ್ಗದ ಸುಳಿ ಗಾಳಿಯು ತಾಕಿ ನಿಮ್ಮ ದುರ್ವತನೆ ದೂರ ಮಾಡುವಿರಾ ಅಥವಾ .....

**ಶಾಮು–** ಇಲ್ಲ ಇಲ್ಲ ಗೌರೀ ನೀನು ಹೇಳುವ ಮಾತಿನ ಅರ್ಥವಾಯಿತು ನನ್ನಿಂದಲೇ ಆದ ಅನಾಹುತವೆಂದು ತಿಳಿದುಕೊಂಡೆನು ಇನ್ನು ಮೇಲೆ ನಿನ್ನ ಕೊರಳಾಣೆಯಾಗಿದೆ ಕೂಲಿಯಾದರೂ ಮಾಡಿ ಜೀವಿಸೋಣ ನನ್ನ ದುರ್ವರ್ತನೆಗಳೆಲ್ಲ ಬಿಟ್ಟೇ ನಿನ್ನಂತೆ ನಾನು ಸುಗುಣಿಯಾಗಿ ಬಾಳುವೆ ಈ ವೇಳೆಗಾಗಿ ಮಾರ್ಗ ತೋರಿಸಿದ ಮಡದಿ ನೀನಲ್ಲವೇನೆ.... ಇನ್ನು ಮೇಲೆ ಪರಿಶುದ್ಧನಾದೆ ನಡೆ ಮನೆಗೆ ಹೋಗೋಣ.

**ಗೌರಿ–** ಮನಗೆ....ಯಾವ ಮನೆಗೆ.... ಅಹಹಾ.... (ನಗುವಳು.)

**ಶಾಮು–** ಮರತೆ ಗೌರೀ.... ನಗಬೇಡ..... ನಮ್ಮ ಗುಡಿಸಲಿಗೆ ಹೋಗೋಣ ನಡೆ.

**ಗೌರಿ–** ನಿಮ್ಮ ಗುಡಿಸಲು ಮತ್ತು ಯಾರೋ ಸುಟ್ಟರಂತೆ.... ಅದಕ್ಕಾಗಿ ಸಧ್ಯ ಚೇರಮನ್ನರ ಮನಗೆ ಹೋಗೋಣ ಬನ್ನಿ.....

**ಶಾಮು–** ಹೌದು ನಡೆ ಆಗಲೇ ಅವರು ಕರೆದು ಹೋದರು ನಡೆ ಹೋಗೋಣ (ಹೋಗುವರು)

**ಶ್ರೀಧರನ ಮನೆ**

(ಗೌರಿಗೆ ಹೊಸ ಶೀರೆ ಉಡಿಸಿ ದಂಡಿ ಹಾಕಿರುತ್ತಾರೆ)

(ಕೂಡಿಸಿ ಆರತಿ ಮಾಡುತ್ತ ಪದ ಹಾಡುತ್ತಾರೆ)

ಆ ಮೇಲೆ ಸೀತಮ್ಮನು ಗೌರಿ ಕಿವಿಯಲ್ಲಿ ಶಾಮಲೆಯ ಲಗ್ನದ ಸುದ್ದಿ ತಿಳಿಸುವಳು

**ಶ್ರೀಧರ–** ತಂಗೀ ನಿಮ್ಮ ಮನೆಗೆ ನೀವು ಹೋಗಲು ಮನೆ ತಯ್ಯಾರ ಮಾಡಿಸಿರು ಅಂಣನನ್ನು ಮರೆಯ ಬೇಡಮ್ಮಾ.... ಮತ್ತು ಹೆಚ್ಚಾದ ಬಯಕೆ ಏನಾದರೂ ಇದ್ದರೆ ತಿಳಿಸು ತಂಗೀ.

**ಗೌರಿ–** ಅಂಣಾ ನಾನು ಕೇಳಿದರೆ ನೀನು ಒಪ್ಪುವಿಯಾ....

**ಶ್ರೀಧರ–** ಯಾಕೆ ಇನ್ನೂ ಸಂಶಯವೇ ತಂಗಿ ಬೇಕಾದದ್ದು ಕೇಳು ಮಾತಿಗೆ ತಪ್ಪಲಾರೆನಮ್ಮಾ

**ಗೌರಿ–** ಹಾಗಾದರೆ ಬೆಂಕಿಯ ಅನಾಹುತದಲ್ಲಿ ಪಾರು ಮಾಡಿದ ನನ್ನ

ಅಂಣನೊಬ್ಬನಿದ್ದಾನೆ ಅವನಿಗೆ ನಿನ್ನ ಮಗಳಾದ ಶಾಮಲೆಯನ್ನು ಲಗ್ನ ಮಾಡಿ ಕೊಡಬೇಕು ಇಷ್ಟೇ ನನ್ನ ಆಶೆ. ಇದಕ್ಕೆ ನಿಮ್ಮ ಸಮ್ಮತಿಯೇನಂಣಾ.

**ಶ್ರೀಧರ–** ಆರಮ್ಮಾ ಅವರು ಹೇಳಬಾರದೇ....

**ಗೌರಿ–** ಮತ್ತಾರು ನಿನ್ನ ದೋಸ್ತ ಬಿ.ಎ. ವರೆಗೆ ಓದಿದ ವಿದ್ಯಾವಂತ ಸುಶ್ಶೀಲ ನಮ್ಮ ರಾಮುವಿಗೆ....

**ಶ್ರೀಧರ–** ಓಹೋ ಹೀಗೋ.... ಆಗಲೆಮ್ಮಾ ನೀನೇ ಕೊಟ್ಟು ನಿಂತು ಲಗ್ನ ಮಾಡಿ ಬಿಡು ನಿನ್ನ ಮಾತಿಗೆ ತಪ್ಪಲಾರೆ.....

**ಗೌರಿ–** ಶಾಮಲಾ ಬಾ ತಂಗೀ ಯಾಕಮ್ಮಾ ನಿನ್ನ ಒಪ್ಪಿಗೆ ಇದೆಯೇ.... (ನಾಚುತ್ತ ನಗುಮುಖದಿಂದ ನಿಲ್ಲುವಳು) ತಿಳಿಯಿತು ಬಾ ಇಲ್ಲಿ (ಇಬ್ಬರ ಕೈಗಳನ್ನು ಕೂಡಿಸಿ ನಡುಮಧ್ಯೆ ತಾನು ನಿಂತು......)

ನಾಳೆ ನಿಮ್ಮಿಬ್ಬರ ಲಗ್ನ ಮಾಡತಕ್ಕವಳು ನಾನೇ ಸೀತಾ..... ರಾಮರಂತೆ ಸುಖಿಯಾಗಿ ಬಾಳಿರಿ. ಇಂಥಾ ಶುಭ ಸಮಯದಲ್ಲಿ ದೇವಾದಿದೇವನನ್ನು ಧ್ಯಾನಿಸುವಾ....

**ರಾಗ – ಸೊಹನಿ ಪದ ತಾಲ–ತ್ರಿತಾಲ**

ಭಾರತಾಂಬೆ ಪೊರೆಯೇ ತಾಯೇ ।
ಮರೆಯದ ನಮ್ಮನು ಸತತ ಕಾಯೇ ॥ ಪ ॥
ಬಡವರ ಸತ್ಯಕೆ ನಿತ್ಯ ಸುಖವನೂ ।
ಸಡಗರದಿಂದಲಿ ನೀಡೀ ದಯವನು ।
ತಡಿಯದೆ ದೂರ ಮಾಡಿದ ತಾಯೆ ॥ ೧ ॥

ಬೋಲೋ ಭಾರತ ಮಾತಾಕೀ ಜೈ

ಒಂದೇ ಮಾತರಂ

ಕೃತ

===***====***===

# ಸ್ತ್ರೀ ರತ್ನ

• ಮಾರುತೇಶ ಮಾಂಡ್ರೆ

# ಮಾರುತೇಶ ಮಾಂಡ್ರೆ

ವೃತ್ತಿರಂಗಭೂಮಿಯ ಜನಪ್ರಿಯ ನಾಟಕಕಾರರಲ್ಲಿ ಮಾರುತೇಶ ಮಾಂಡ್ರೆ ಪ್ರಮುಖರು. ಇವರು ಕ್ರಿ.ಶ. ೧೯೨೨ರಲ್ಲಿ ಗದಗ ಜಿಲ್ಲೆಯ ರೋಣ ತಾಲೂಕಿನ ಹೊಳೆ ಆಲೂರದಲ್ಲಿ ಜನಿಸಿದರು. ತುಳಜಿರಾಮ ಮತ್ತು ತುಳಸಮ್ಮ ಇವರ ತಂದೆ – ತಾಯಿಗಳು. ಸಿಂಪಿಗೆ ವೃತ್ತಿಮಾಡುತ್ತಿದ್ದ ಇವರದು ಬಡತನದ ಕುಟುಂಬ. ತಂದೆ – ತಾಯಿಗಳಿಗೆ ಒಬ್ಬನೇ ಮಗ. ಬಡತನದ ಕಾರಣದಿಂದ ಶಾಲೆಗೆ ಹೋಗುವುದೇ ಕಷ್ಟವಾಗಿತ್ತು. ಆದರೂ ಮಾರುತೇಶ ಪ್ರಾರ್ಥಮಿಕ ಶಿಕ್ಷಣದ ವರೆಗೆ ಓದಿ ಮುಲ್ಕಿ ಪರೀಕ್ಷೆ ಪಾಸಾದರು. ಹತ್ತು ವರ್ಷದವರಿದ್ದಾಗಲೇ ತಂದೆಯನ್ನು ಕಳೆದುಕೊಂಡರು. ತಮ್ಮ ೨೪ನೇ ವಯಸ್ಸಿನಲ್ಲಿ ಕೊಪ್ಪಳ ತಾಲೂಕಿನ ಬೈರಾಪುರ ಗ್ರಾಮದ ರುಕ್ಮಿಣಿ ಬಾಯಿನ್ನು ಮದುವೆಯಾಗಿ, ಅಳವಂಡಿಯಲ್ಲಿಯೇ ವಾಸವಾದರು. ಹೊಳೆ ಆಲೂರದಲ್ಲಿ ಯಾವುದೇ ಆಸ್ತಿ ಇರದಿದ್ದುದರಿಂದ, ಬೈರಾಪುರ ಸಮೀಪದ ಅಳವಂಡಿಯಲ್ಲಿಯೇ (ಕೊಪ್ಪಳ –ತಾಲೂಕ) ನೆಲೆ ನಿಂತರು. ಇವರು ಟೇಲರಿಂಗ್ ವೃತ್ತಿ ಮಾಡುತ್ತಲೇ ನಾಟಕಗಳ ಕಡೆಗೆ ಆಸಕ್ತಿ ತಾಳಿದರು. ನೂರಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದರು.

ಮಾರುತೇಶ ಮಾಂಡ್ರೆಯವರ ಕಾರ್ಯಕ್ಷೇತ್ರ ಕೊಪ್ಪಳ ಜಿಲ್ಲೆಯಾಯಿತು. ಪೌರಾಣಿಕ, ಐತಿಹಾಸಿಕ, ಭಕ್ತಿಪ್ರಧಾನ, ಸಾಮಾಜಿಕ ನಾಟಕಗಳನ್ನು ರಚಿಸಿದರು. ಇವರ ನಾಟಕಗಳನ್ನು ಕರ್ನಾಟಕ ಪ್ರಸಿದ್ಧ ನಾಟಕ ಕಂಪನಿಗಳೆಲ್ಲ ಪ್ರಯೋಗಮಾಡಿದವು. ಗುಬ್ಬಿ ಕಂಪನಿಯೂ ಕೂಡ ಇವರ ನಾಟಕವನ್ನಾಡಿಸಿತು. ೧೯೪೬ ರಿಂದಲೇ ಇವರ ನಾಟಕಗಳು ಜನಪ್ರಿಯತೆಯನ್ನು ಗಳಿಸಿದವು.

ಮಾಂಡ್ರೆಯವರಿಗೆ ಅನೇಕ ಪ್ರಶಸ್ತಿ – ಪುರಸ್ಕಾರ ಲಭಿಸಿವೆ. ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಗಳ ಜೊತೆಗೆ ಕವಿರತ್ನ, ಶರಣಸಾಹಿತ್ಯ ರತ್ನ ಬಿರುದುಗಳೂ ಲಭಿಸಿವೆ. ೧೧–೦೮–೧೯೯೩ರಲ್ಲಿ ಮಾಂಡ್ರೆಯವರು ನಿಧನ ಹೊಂದಿದರು. ಅವರ ಜನಪ್ರಿಯ ನಾಟಕ "ಸ್ತ್ರೀರತ್ನ" ಕೃತಿಯನ್ನು ಇಲ್ಲಿ ಆಯ್ಕೆಮಾಡಿಕೊಳ್ಳಲಾಗಿದೆ.

## –: ಪಾತ್ರ ಪರಿಚಯ :–

ರಾಜಶೇಖರ

ಶೋಭಾ

ಆನಂದ

ಸುರೇಶ

ಅಣ್ಣಾ

ಬಸವಂತಿ

ಪುಷ್ಪಾ

ಶಂಕರ

ರತ್ನಾ

ಶಿವರಾಯ

# ನಾಂದಿ

ಉದಯರವಿ ಪಸರಿಸಿದ । ಉಷೆಯ ಮುಖದಲದಲಿ ಕಾಂತಿ
ಉದಯವಾಗಿದೆ ಜಗದಿ । ಜನಮನದಿ ನಿಜಶಾಂತಿ ॥ ಪಲ್ಲ॥

ಕವಿದ ಕತ್ತಲೆ ಓಡಿ । ರವಿ ಕಿರಣಗಳು ಮೂಡಿ
ನವಿಲು ಗಿರಿ ಶಿಖರದಲಿ । ನಲಿದು ನರ್ತನ ಮಾಡಿ
ನಳಿನ ಮೊಗವನು ನೋಡಿ । ಅಳಿಯು ಗಾನವ ಪಾಡಿ
ಬೆಳಗುತಿದೆ ಭುವನದಲೆ । ಸುಪ್ರಭಾತವ ಜ್ಯೋತಿ ॥ ೧ ॥

ಜ್ಞಾನನಿಧಿ ಏಳಯ್ಯ ದೀನಜನ ಪಾಲನೆಗೆ
ಕ್ಷೋಣಿಯೊಳು ಕ್ಷಯವಾದ ।ಧರ್ಮ ಸಂಸ್ಥಾಪನೆಗೆ
ಹೀನ ಮತ ಪಂಥಗಳ । ನವ್ಯನತೆಯ ಕಳೆದೇಳಿಗ
ಮಾನ್ಯತೆಯ ನೀಡು ಜನ । ದುನ್ನತದ ಮುನ್ನಡಿಗೆ ॥ ೨ ॥

ಕರುನಾಡಿನಲಿ ನಮ್ಮ ಕನ್ನಡದ ।ನಲುನಡಿಗೆ
ರನ್ನ ಪಂಪರ ಕಾವ್ಯ । ಮುನ್ನಡಿಗೆ ಚನ್ನುಡಿಗೆ
ಮಾನ್ಯ ಕನ್ನಡ ನಾಟ್ಯ । ರಂಗರಾಣಿಯ ಅಡಿಗೆ
ನನ್ನಿಯಲಿ ನಮಿಸುವೆವು । ಸಂಗೀತ ಸವಿನಯಡಿಗೆ ॥ ೩ ॥

# ಪ್ರಥಮಾಂಕ

## ಒಂದನೆ ದೃಶ್ಯ

ರಾಜಶೇಖರನ ಮನೆ

**ಶೋಭಾ** – (ದೇವರ ಫೋಟೋ ಪೂಜಿಸುತ್ತಿರುವಳು)

....ಪದ....

ಪೊರೆಯೆ ನೀ ತಾಯೆ । ನಿರುತ ನೀ ಕಾಯೆ
ಸುರನರ ಪೂಜಿತೆ । ಶಾಂತಿಧಾತೆ
ತಣಿಸುವಳೆ ಸ್ಥೈ । ಮಹಾಮೋದಕಾರಿ
ನಗೆಹೊಗೆ ತುಂಬಿ । ಶೈಲಾಧಾರೆ
ಸುಖವೋ ದುಃಖವೋ ಬಾಳು ಬೀಳು
ದಿನದಿನ ನಂದನ । ಕ್ಷಣಕೆ ಮಸಣವೊ

**ರಾಜಶೇಖರ** – ಶೋಭಾ

**ಶೋಭಾ** – ಸ್ವಾಮಿ

**ರಾಜಶೇಖರ** –ಎಂಥಾ ಭಾವನಾ ಜೀವಿ

**ಶೋಭಾ** – ಭಾವನೆಯು ಪವಿತ್ರವಾಗಿದ್ದರೆ ಮಾತ್ರ ದೇವನೊಲುಮೆ

**ರಾಜಶೇಖರ**– ನಿಜ, ಭಾವನೆಯು ಪಾವನೆಯಾಗಿರಬೇಕು ಅಂದರೆ ಮಾತ್ರ ಪ್ರೇಮದ ಉದಯ. ಭುವನ ಕತ್ತಲೆ ಹರಿದು ರವಿ ಉದಿಸಿ ಬಂದಾಗ ಜೀವನದ ಬೆಳಕು ಕಾಣುವದು. ಪ್ರೇಮ ಪ್ರಭಾಕರನ ಪ್ರಕಾಶದಿಂದ.

**ಶೋಭಾ** – ಆದೇ ಪರಮೇಶ್ವರನ ಪ್ರತಿಮೆ ಪ್ರಿತಿವಿಶ್ವಾಸಗಳು ಹೃದಯವನು ತುಂಬಿದ್ದರೆ ಅದು ವಿಶಾಲ ವಿಚಾರ. ಶೀಲ ಸಂಗಮ ಸಂಸಾರ ಪಾರು ಗಾಣಿಸುವ ನೌಕೆ, ಜೀವನದ ಆದರ್ಶವನ್ನು ಕಂಡು, ಉಂಡು ಪರರಿಗೆ ಉಣಿಸಿ ಜಗವನ್ನೆಲ್ಲ ತಣಿಸಿ, ನಿತ್ಯ ಬಾಳನ್ನೇ ಸ್ವರ್ಗಮಯಬಾಗಿ ಮಾಡುವದು ನಿಸರ್ಗ ದೇವತೆಯ ಕೃಪೆ

**ರಾಜಶೇಖರ–** ಹೌದು ಶೋಭಾ, ನನ್ನ ಜೀವನ ನಂದನ ವನವಾಗಬೇಕು. ಬಾಳು ಭವ್ಯವಾಗಬೇಕು ಉನ್ನತ ವಿಚಾರಗಳ ಕ್ರಾಂತಿಯಾಗಿ ಬದುಕು ಸಾಗಬೇಕು. ಅಂತೆಯೇ ಭಾವನೆ ಪಾವನವಾಗಬೇಕು

**ಶೋಭಾ –** ಸಂಸಾರ ರಥವು ಪಥದಲ್ಲಿ ಸರಿಯಾಗಿ ಸಾಗಬೇಕಾದರೆ, ಸತಿಪತಿಗಳೆಂಬ ಅಶ್ವಗಳು ಹಸನಾದ ಬಾಳನ್ನೇ ಬಾಳಲು ಪ್ರಯತ್ನಿಸಬೇಕು ವಿಷಯ ವಿಚಾರಗಳ ಸುಳಿಯಲ್ಲಿ ಸಿಕ್ಕು ಹೇಸಿ ವಿಷಯಗಳಿಗೆ ಆತ್ಮ ಮಾರಿಹೋದರೆ ಪರಮಾತ್ಮನಿಗೆ ದ್ರೋಹ ಮಾಡಿದಂತಾಗುವುದು.

**ರಾಜಶೇಖರ –** ನಿಜ, ಪತಿಯು ತನ್ನ ಬಾಳಿನ ಸೌಖ್ಯವನ್ನು ತಾನುಂಡು ಸತಿಗೂ ಉಣಿಸಿ ನಲಿದು ಸಾಗಿಸುವ ಜೀವನ ಪಾವನ.

**ಶೋಭಾ –** ಮಾನವ ಜೀವನದಲ್ಲಿ ಧರ್ಮ ನ್ಯಾಯ ನೀತಿಗಳು ನೆಲಿಸಬೇಕು. ಅಲ್ಲಿ ಅವು ನಿರಂತವಾಗಿ ನಲಿಯುತ್ತಿರಬೇಕು. ದುಷ್ಟ ವ್ಯಸನಗಳಿಂದ ದೊರಕುವ ಅಲ್ಪ ಸುಖಕ್ಕಾಗಿ ಜೀವನ ಮಹಾಶಕ್ತಿಯನೇ ಧಾರೆಯೆರೆದು ಕೊಡುವದು, ಅದೆಷ್ಟು ನೀಚತನವೋ ನಾನರಿಯೆ.

**ರಾಜಶೇಖರ–** ತೃಣಕ್ಕಾಗಿ ಕ್ಷೋಣಿಯನ್ನು ಆಕ್ರಮಿಸುವದು ಮಾನವ ಧರ್ಮವಲ್ಲ ತನ್ನ ಸುಖಕ್ಕಾಗಿ ನಿಮಿಷಕ್ಕಾಗಿ ಪರರ ಸಂತೋಷವನ್ನು ಮೆಟ್ಟಿ, ತಾನು ಸುಖವನ್ನು ಹೊಂದುವದು ಒಂದು ಸುಖವೇ ? ಪರರ ಬದುಕನ್ನು ಬಲಿಕೊಟ್ಟು ತಾನು ಬದುಕುವದು ಒಂದು ಬದುಕೇ

**ಶೋಭಾ –** ಅದು ಬದುಕಾಗದಿದ್ದತೂ ಯಾವದಕ್ಕೂ ಹೆದರದ ಹೇಸಿ ಜೀವನದ ಹೆಗ್ಗುರುತಲ್ಲವೇ?

**ರಾಜಶೇಖರ –** ಶೋಭಾ ಅಂಥ ಹೇಸಿ ಜೀವನ ಸಾಗಿಸುವ ಹೀನ ಗುಣದವನು ನಾನಲ್ಲ, ಸತಿಧರ್ಮದ ಪ್ರತೀಕವಾದ ನಿನ್ನಂಥ ಸ್ತ್ರೀರತ್ನ ನನ್ನ ಜಿವನದ ಜೀವಾಳಾಗಿರುವ ಸಹೋದರ ಆನಂದನನ್ನು ಪಡೆದ ನಾನು ಎಂಥ ಪುಣ್ಯಶಾಲಿ

**ಶೋಭಾ –** ಅಹಾಹಾ ಎಂಥ ದೇವವಾಣಿ. ಸುಗುಣಿಗಳಾದ ತಮ್ಮ ಪಾದಸ್ಪರ್ಶದಿಂದ ಪುನೀತಳಾದೆ. ನನ್ನ ದೇವರ ಹೃದಯ ಹೂವಿನ ಹಂದರ

**ರಾಜಶೇಖರ –** ನಿರ್ಮಲಾಂತಃಕರುಣ ಹೃದಯವು ದೇವತೆಯ ವಿಶಾಲ ವಿಚಾರಗಳ

ತವರುಮನೆ , ನಿನ್ನ ಮಾತಿನ ಪ್ರತಿಯೊಂದು ಅಕ್ಷರವು ದೇವಮಾನವತೆಯ ಮನಸ್ಸಿನಿಂದುದಿಸಿ ಬರುವ ಸತ್ಯ ಪ್ರಕಾಶ ಕಿರಣ ...

**ಶೋಭಾ –** ಇದೋ ಮಂಗಳಮಯಳಾದ ಸರ್ವಮಂಗಲೆಯ ಪ್ರಸಾದ

(ಕೊಡುವಳು ಶೇಖರನು ಸ್ವೀಕರಿಸುವನು)

**ರಾಜಶೇಕರ–** ಇದೇ ಧನ್ಯತೆಗೆ ದಾರಿ

ಪದ....

ಓ ಕಲಾ ಸುಂದರಿ ನೀ । ನೀ ಎನ್ನ ಮಧುರವೀಣಾ
ಪ್ರೇಮರಸವನು । ನೇಡೆನಗೆ ಹೃದಯ ಭಾವದಲ್ಲಿ
ತುಂಬಿ ನೀನು ॥ ಪಲ್ಲ ॥
ಸುಗುಣ ಸುಶೀಲೆ । ಸಂಪನ್ನೆ । ನೀಡೆನಗೆ ಮಧರಗಾನವಾ
ನೀ ಎನ್ನಃ ಮಧ ರವೀಣಾ (ಆನಂದ ಬರುವನು)

**ಆನಂದ –** ಪಾರ್ವತಿ ಪರಮೇಶ್ವರರಂತೆ ಪರಿಶೋಭಿಸುವ ನಿಮಗೆ ವಂದನೆಗಳು

(ನಮಸ್ಕರಿಸುವನು)

**ರಾಜಶೇಖರ –** ಏನು ತಮ್ಮ ಎಷ್ಟು ಸಂತೋಷವಾಗಿರುವೆಯಲ್ಲಾ

**ಆನಂದ –** ನಿಮ್ಮ ಆಶೀರ್ವಾದಿಂದ ಆನಂದನು ಸದಾ ಆನಂದದಲ್ಲಿರುವನು

**ರಾಜಶೇಖರ–** ಕಾರಣವೇನು?

**ಆನಂದ –** ಇಂದು ಎಸ್. ಎಸ್. ಎಲ್. ಸಿ ಪರಿಕ್ಷೆಯ ರಿಝುಲ್ಟು. ನಾನು ಉತ್ತಮ ರೀತಿಯಿಂದ ತೇರ್ಗಡೆಯಾಗಿರುವದೇ ಕಾರಣ

**ರಾಜಶೇಕರ –** ಸಂತೋಷ, ನಿನ್ನಂಥ ಜಾಣನಾದ ತಮ್ಮನನ್ನು ಪಡೆದ ನಾನು ಭಾಗ್ಯಶಾಲಿ.

**ಆನಂದ –** ಆ ಕೀರ್ತಿ ಎಲ್ಲವೂ ಅತ್ತಿಗೆಗೆ ಸಲ್ಲತಕ್ಕದ್ದು. ತಾಯಿಯನ್ನು ಕಳಿದುಕೊಂಡು ಪರದೇಶಿಯಾದ ನನ್ನನ್ನು ಹೆತ್ತ ತಾಯಿಗಿಂತಲೂ ಹೆಚ್ಚಾಗಿ ಪ್ರೀತಿಸಿ ಜೋಪಾನಮಾಡಿದ ಅತ್ತಿಗೆಯ ಮಹಾಕೃಪೆಯೇ ನನ್ನ ತೇರ್ಗಡೆಗೆ ಮೂಲ ಕಾರಣ. ಅಲ್ಲದೆ ಹಿರಿಯಣ್ಣಾ ಹಡೆದ ತಂದೆಯ ಸಮಾನವೆಂದು ಹಿರಿಯರ ಮಾತಿಗನುಸರಿಸಿ. ನನ್ನ

ಅಭ್ಯುದಯವನ್ನೇ ಎದುರು ನೋಡುತ್ತಿರುವ ನಿನ್ನ ಅಂತ;ಕರಣದ ಅಮೋಘ ಆಶೀರ್ವಾದ ಬಲವೇ ಬಲ.

**ಶೋಭಾ –** ಹೃದಯ ತುಂಬಿ ಬಂದ ಮಾತು ಮೈದುನನೆ. ಅನುಚಿತವ ನುಡಿಯದಿರು ಅತ್ತೆಯ ಪಾದಧೂಳಿಯ ಅಣುವಿನ ಬೆಲೆಯಿಲ್ಲ ನಿಮ್ಮ ಮನೆಯಲ್ಲಿ. ನಿಮ್ಮ ಸೇವೆಗಾಗಿ ದೇಹ ಸವಿಸುವ ದಾಸಿ ನಾನು. ದೇವ ಸೃಷ್ಟಿಸಿದ ಸಕಲ ವಸ್ತುಗಳಲ್ಲಿ ಯಾವದೂ ತಾಯಿಗೆ ಸರಿಯಲ್ಲ.

**ಆನಂದ –** ಉಚಿತವೆ ನುಡಿದಿರುವೆ ಅತ್ತಿಗೆಯೇ, ತಂದೆ ತಾಯಿ ತೀರಿದ ನಂತರ ತುಂಬಿದಿರಿ ಆ ಸ್ಥಳಗಳನ್ನು ಮಾತೆ ನೀನಾಗಿ, ಅಣ್ಣ ಪಿತನಾಗಿ. ನನ್ನ ಹೆಚ್ಚಳವನ್ನು ಕಂಡು ಆನಂದಿಸುವ ಭಾಗ್ಯ ನಿಮಗಲ್ಲದೇ ಸತ್ತವರಿಗಲ್ಲಾ.

**ಶೋಭಾ –** ಕೇಳಿದಿರಾ ಆನಂದನ ಮಾತನ್ನು

**ರಾಜಶೇಖರ–** ಆನಂದನ ಮಾತುಕೇಳಿ ನನಗಾದ ಆನಂದವನ್ನು ಬಣ್ಣಿಸಲು ಶಕ್ತಿಯಿಲ್ಲ.

**ಆನಂದ –** ಅತ್ತಿಗೆ ನಮ್ಮ ಹರಕೆ ಕೈಗೂಡಿತು ಅಣ್ಣ ಪೇಡಾ ಸ್ವೀಕರಿಸಿರಿ. ನನ್ನ ಗೆಲವನು ಕಂಡು ಆನಂದಿಸುವ ನಿಮಗೆ ಈ ಸವಿ ಪದಾರ್ಥವನ್ನು ಸಮರ್ಪಿಸುವೆ

**ಶೋಭಾ –** ತೆಗೆದುಕೊಳ್ಳಿ ನಿಮ್ಮ ತಮ್ಮ ಎಷ್ಟು ವಿನಯದಿಂದ ವಿನಂತಿ ಮಾಡಿಕೊಳ್ಳುತ್ತಾನೆ.

**ರಾಜಶೇಖರ –** ಕೊಡು ಆನಂದಾ. ಹೀಗೆ ನಿನ್ನೀ ಹೆಚ್ಚಳವನ್ನು ಕೇಳಿ ಪೇಡಾ ತಿನ್ನು ಭಾಗ್ಯ ಮೇಲಿಂದ ಮೇಲೆ ಬರುತ್ತಿರಲಿ (ಆನಂದನು ಇಬ್ಬರಿಗೂ ಪೇಡಾ ಕೊಡುವನು)

**ಶೋಭಾ –** ಕಾಫಿ ಕುಡಿಯ ಬನ್ನಿ

**ರಾಜಶೇಖರ –** ನಡೆ ಆನಂದ

**ಸುರೇಶ –** (ತೆರೆಯಲ್ಲಿ ಸುರೇಶ ಕೂಗುವನು) ಮಿಷ್ಟರ್ ರಾಜಶೇಖರ, ರಾಜಶೇಖರ ಸುರೇಶಬಾಬು ಬನ್ನಿ (ಶೋಭಾ ಒಳಗೆ ಹೋಗುವಳು)

ಸುರೇಶ – (ಬಂದು) ಸ್ವಲ್ಪ ಕೆಲಸವಿದೆ ಬರುವಿರ?

ರಾಜಶೇಖರ– ಅಗತ್ಯವಾಗಿ ಬರುವೆ ಕಾಫಿ ಕುಡಿದು ಹೊರಡೋಣ

ಸುರೇಶ – ಅಲ್ಲೇ ಸಿಟಿ ಕ್ಲಬ್ಬಿನಲ್ಲಿಯೇ ಕುಡಿಯೋಣವಂತೆ ಬಾ

ರಾಜಶೇಖರ – ಆನಂದಾ ನೀನು ನಡೆ ಕಾಫಿ ಕುಡಿ, ನಾನು ಇಷ್ಟರಲ್ಲಿಯೆ ಬರುವೆ (ಆನಂದನು ಹೋಗುವನು)

ಸುರೇಶ – ಇವನು ನಿಮ್ಮ ತಮ್ಮನಲ್ಲವೇ?

ರಾಜಶೇಖರ– ಹೌದು

ಸುರೇಶ – ಕಾಲೇಜಿಗೆ ಹೋಗುತ್ತಿದ್ದಾನೆಯೇ?

ರಾಜಶೇಖರ – ಈ ಸಲ ಕಳಿಸಬೇಕು ಬನ್ನಿ ಹೋಗೋಣ (ಹೋಗುವರು)

## ಎರಡನೆಯ ದೃಶ್ಯ

(ರಸ್ತಾ ರಾಜಶೇಖರ ಸುರೇಶ ಬರುವರು)

ಸುರೇಶ – ಇದೋ ಶೇಖರ. (ನೋಟಿನ ಕಟ್ಟನ್ನು ಕೊಡಲಿಕ್ಕೆ ಹೋಗುವನು)

ರಾಜಶೇಖರ– ಏನಿದು?

ಸುರೇಶ – ಕಟ್ಟನ್ನು ಒಡೆದು ನೋಡು (ಶೇಖರ ಒಡೆದು ನೋಡುವನು)

ರಾಜಶೇಖರ – ಇದೇನು ಸುರೇಶ?

ಸುರೇಶ – *ಅದೃಷ್ಟದ ಫಲ ಧನಲಕ್ಷ್ಮಿಸಾಗಿ ಬಂದಿದ್ದಾಳೆ ಅಚ್ಚರಿ ಗೊಳ್ಳಬೇಡ*

ರಾಜಶೇಖರ – ಅದೃಷ್ಟದ ಫಲ ಧನಲಕ್ಷ್ಮಿಸಾಗಿ ಬಂದಿದ್ದಾಳೆ.!ಯಾವ ಕಾರಣಕ್ಕಾಗಿ? ಯಾರ ದುಡಿಮೆಯ ಪ್ರತಿಫಲವಾಗಿ?

ಸುರೇಶ – ಸ್ನೇಹದ ಶ್ರಮದ ಸಾರ್ಥಕತೆಗಾಗಿ. ನನ್ನ ನಿನ್ನ ಗೆಳೆತನದ ಪ್ರತೀಕವಾಗಿ.

ರಾಜಶೇಖರ – ಅಂದರೆ?

ಸುರೇಶ – ಅಂದರೆ ನಿನ್ನ ಹೆಸರಿನಿಂದ ನಿನ್ನೆ ನಾನು ೨೦ ರೂಪಾಯಿಗಳನ್ನು ಓಸಿ ಆಟದಲ್ಲಿ ೪೮ ನೇ ನಂಬರಿಗೆ ಹಚ್ಚಿದ್ದೆ. ಇಂದು ಅದು ೧೬೦೦ ರೂಪಾಯಿಗಳೊಂದಿಗೆ ನಿನ್ನ ಕರದಲ್ಲಿ ಬಂದು ಬಿದ್ದಿದೆ.

**ರಾಜಶೇಖರ –** ಓಸಿ (ನಕ್ಕು) ಎಂಥಾ ಹೀನ ಕಾರ್ಯ, ನನ್ನ ಯಾವ ಜನ್ಮದಲ್ಲಿಯೂ ನಾನು ಅದಕ್ಕೆ ಮನಸ್ಸು ಮಾಡಲಾರೆ. ದುಡಿಯದೆ ಸುಖ ಪಡಬೇಕೆಂಬ ದುರಾಶೆಯದ ದವಡೆ ಇದು. ಸುರೇಶಾ, ಈ ಹಣವು ಪಾಪದ ಪ್ರತಿಫಲ.ನಾನಿದನ್ನು ಮುಟ್ಟಲಾರೆ.

**ಸುರೇಶ –** ರಾಜೂ ಮೂಢ ನಂಬಿಕೆಯ ರೂಢಿಯು ಇಂದಿನ ನವೀನ ಯುಗದಲ್ಲಿ ನಡೆಯಲಾರದು. ಧರ್ಮಾಧರ್ಮದ ವಿಚಾರ ವಿನಾಶದ ಮಾರ್ಗದರ್ಶನ. ಸಮಯ ಸಿಕ್ಕಾಗ ಸುಖಪಡುವದೇ ಜೀವನದ ಜೀವಾಳ.

**ರಾಜಶೇಖರ –** ಅದು ಸರಿಯಲ್ಲ ದುಃಖದ ಮೂಲ, ದೀಪವನ್ನು ಮುದ್ದಿಡಲು ಹೋದ ಪತಂಗ ಸುಟ್ಟು ಸಾಯುವಂತೆ ಹರೆಯದ ಮಬ್ಬಿನಲ್ಲಿ ಕಂಡಕಂಡದ್ದನ್ನೆಲ್ಲ ಸುಖವೆಂದು ಭಾವಿಸಿ ಅಪ್ಪಿದರೆ ರಾತ್ರಿ ಕಂಡು ಗುರ್ತಿಸಿದ ಭಾವಿಯಲ್ಲಿ ಹಗಲು ಹೋಗಿ ಬಿದ್ದಂತೆ.

**ಸುರೇಶ –** ಅಯ್ಯೋ ಹುಚ್ಚಪ್ಪ, ತಾರುಣ್ಯದ ತಾಣದಲ್ಲಿ ಕುಣಿಯುತ್ತಿರುವ ವಿಲಾಸ ಹೃದಯಕ್ಕೆ ಪುರಾಣದ ಮಾತೇಕೆ? ಅದ್ಯಾತ್ಮದ ಅಚ್ಛಾದನವೇಕೆ? ರಸ ಬಿಸಿಯಾಗುವ ಪ್ರಪಂಚದಲ್ಲಿ ಕಣ್ಣಿಗೆ ಕಾಣುವ ಪ್ರತಿಯೊಂದು ವಸ್ತುಗಳು ಮನುಷ್ಯನ ಸುಖಭೋಗಕ್ಕಾಗಿ

**ರಾಜಶೇಖರ–** ಸುರೇಶ, ಸಾಯುಂಕಾಲದ ಸಮೀಕರಣವು ಮನಸ್ಸಿಗೆ ಉಲ್ಲಾಸವನ್ನುಂಟು ಮಾಡುವಂತೆ ಭರದಿಂದ ಬೀಸುವ ಬಿರುಗಾಳಿ, ಎಂದೂ ಆನಂದವನ್ನು ನೀಡಲಾರದು

**ಸುರೇಶ –** ರಾಜು ಕೇವಲ ಮಾತಿನಿಂದ ಯಾವದನ್ನು ಅನುಭವಿಸಲು ಸಾಧ್ಯವಿಲ್ಲ. ನಮಗೀ ಸುಖದ ಸನ್ನಿವೇಶಗಳು ಸಂಬಧಿಸಿರುತ್ತವೆ ನಕ್ಕು ನಲಿದಾಡಿ ಅಕ್ಕರೆಯ ಅಮೃತವನ್ನುಂಡು ಬದುಕಿ, ಬಹುದಿವಸ ಬಾಳುವದು.

**ರಾಜಶೇಖರ –** ನಿಮಿಷದ ಆನಂದಕ್ಕಾಗಿ ಆ ನಿಮಿಷವನ್ನೂ ಮಿಥ್ಯವಾಗಿ ಸತ್ಯವನ್ನೂ ದೂರೀಕರಿಸಿ ಬದುಕುವ ಬಾಳು ಎಷ್ಟು ದಿನ ಬದುಕಿದರೇನು? ಯಾರದೋ ಹಣವನ್ನು ನಮ್ಮ ವಿಲಾಸಕ್ಕೆ ವಿನಿಯೋಗಿಸುತ್ತಿರುವದು ಎಷ್ಟು ಸಮಂಜಸ!

**ಸುರೇಶ –** ವೇದಾಂತದ ತಿರುಳನ್ನುಂಡು ತತ್ವಜ್ಞಾನ, ತತ್ವೋಪದೇಶ ಮಾಡುವ

ಸಮಯವಿದಲ್ಲ, ಅದಕ್ಕಾಗಿ ಕುಳಿತಿದೆ ಮುದಿತನ. ಯೌವ್ವನವು ವಿಲಾಸ ವೈಭವದ ವೈಖರಿಯ ಶಿಖರ. ಆದ್ಯಾತ್ಮಿಕವಾದ ಗೊಡ್ಡು ತತ್ವಗಳ ಪಠಣ ಸಂಸಾರದ ಸುಖಕ್ಕೆ ತಿಲಾರ್ಪಣ.

**ರಾಜಶೇಖರ** – ತಾನಾಗಿಯೇ ಬಂದು ಸೇರಿದ ಈ ಹಣದಲ್ಲಿ ಯಾವದೋ ದಾನವೀ ಕೂಗು ಕೇಳಿ ಬರುತಿದೆ. ಹದಿನಾರು ಸಾವಿರವನ್ನೊ ಸಕಲ ಶ್ರೀಮಂತಿಕೆಯನ್ನೊ ಅಥವಾ ಮೂಲ ನನ್ನ ಸಂಸಾರವನ್ನೊ ನಾಶಪಡಿಸುವ ಹೊಂಚು ಹಾಕುವಂತೆ ಕಾಣುತ್ತದೆ.

**ಸುರೇಶ** – ಒಟ್ಟಾರೆ ನಿನ್ನ ಅಭಿಮತವೇನು?

**ರಾಜಶೇಖರ** – ಈ ಹಣವು ನನ್ನದಲ್ಲವೆಂಬುವದೇ ನನ್ನ ಅಭಿಪ್ರಾಯ.

**ಸುರೇಶ** – ಕೆಟ್ಟು ಹೋಗದಿರು ವೃಥಾ. ಬಾಗಿಲಿಗೆ ಬಂದು ಸ್ಥಳಬೇಡುವ ಭಾಗ್ಯಶ್ರೀಯನ್ನು ಹಿಮ್ಮುಖಳನ್ನಾಗಿ ಮಾಡಬೇಡ. ಇಂದಿನ ಸಮಯ ನಾಳೆ ಸಿಗಲಾರದು. ಏಕೆ ಮೌನ ಬಲವಾಗಿ ಆವರಿಸಿತೆ, ಮನಸ್ಸಿನಲ್ಲಿ ದ್ವಂದ್ವ ನಡೆದಿದೆ ಏನು?

**ರಾಜಶೇಖರ** – ವಿವೇಕ ವಿಚಾರಿಸುತ್ತಿದೆ.

**ಸುರೇಶ** – ವಿಚಾರಿಸು ಸಾಕಷ್ಟು ವಿಚಾರಿಸು, ಕೇವಲ ಧನದಿಂದಲೇ ಸಾಗುತ್ತಿರುವ ಇಂದಿನ ಜಗತ್ತಿನಲ್ಲಿ ಹಣಕ್ಕದಕ್ಕೆಷ್ಟು ಪ್ರಾಧ್ಯಾನ್ಯತೆ ಇದೆ ಎಂಬುದನ್ನು ವಿಚಾರಿಸಿ ಒಂದು ನಿರ್ಧಾರಕ್ಕೆ ಬಾ.

**ರಾಜಶೇಖರ** – ನನಗಾವದು ತಿಳಿಯದಂತಾದೆ.

**ಸುರೇಶ** – ಮನಕ್ಕೆ ಮಂಕು ಕವಿದಿದೆ ಏನು? ಬೇಕಾದರೆ ಸೂಕ್ತ ಸಲಹೆ ಕೊಡಲೆ?

**ರಾಜಶೇಖರ** – ಏನದು?

**ಸುರೇಶ** – ರಾಜು ನಾನು ಹಿತಚಿಂತಕ ನನ್ನ ಮಾತಿಗೆ ಕಿವಿಗೊಡು. ನೀನರಿಯದಂತೆ ನಿನ್ನ ಹೆಸರಿನಿಂದ ಹಣ ಹಚ್ಚಿ ಒದಗಿಬಂದ ಪ್ರತಿಫಲವನ್ನು ತಂದು ಮುಂದಿಟ್ಟಿರುವೆ. ನನ್ನಲ್ಲಿ ಸ್ವಾರ್ಥತೆ ಇದ್ದರೆ ನಾನೇ ಎತ್ತಿ ಹಾಕಬಹುದಿತ್ತು ಆದರೆ ಆ ತರಹದ ಮನವೆನಗಿಲ್ಲ

**ರಾಜಶೇಖರ** – ಸುರೇಶಾ ನೀನನ್ನ ಪ್ರೀತಿಯ ಗೆಳೆಯ ಅದರೆ ........

**ಸುರೇಶ** – ಮತ್ತೇನು?

**ರಾಜಶೇಖರ –** ಸಮಾಜದಲ್ಲಿ ನಾನೊಬ್ಬ ಪ್ರತಿಷ್ಠಿತ ನಾಗರಿಕನಾಗಿದ್ದೇನೆ ನನ್ನಂಥ ಸುಶಿಕ್ಷಿತ ಸುಸಂಸ್ಕೃತನು ಓಸಿಯಂಥ ದುಷ್ಟವ್ಯಸನಕ್ಕೆ ಮರುಳಾಗಿರುವನೆಂದರೆ ಸಮಾಜದಲ್ಲಿ ನನ್ನ ಸ್ಥಾನಮಾಗಳು ಕಡಿಮೆ ಯಾಗುವವು.

**ಸುರೇಶ –** ಹುಚ್ಚಪ್ಪಾ ನೀನಿಷ್ಟು ಸಂಕುಚಿತ. ಬುದ್ಧಿಯವನೆಂಬುದು ನನ್ನ ಕಲ್ಪನೆಗೂ ಕೂಡಾ ಬಂದಿರಲಿಲ್ಲ ಸ್ಥಾನಮಾನಗಳು ಗುಣಕ್ಕಿಲ್ಲ ಹಣಕ್ಕಿವೆ? ನಿನಗಲ್ಲ, ನಿನ್ನ ಶ್ರೀಮಂತಿಕೆಗಿವೆ. ಮನುಷ್ಯನನ್ನು ಉಚ್ಚ ಸ್ಥಾನದಲ್ಲಿ ನಿಲ್ಲಿಸುವದು ಬುದ್ಧಿಯಲ್ಲ ಹಣ. ಹಣವಿಲ್ಲ ದವನ ಬುದ್ಧಿಗೆ ಯಾವ ಬೆಲೆಯೂ ಇಲ್ಲ, ಯಾವ ನೆಲೆಯೂ ಇಲ್ಲ.

**ರಾಜಶೇಖರ –** ಕೇವಲ ಹಣಕ್ಕಾಗಿ ಪ್ರಾಮಾಣಿಕತೆಯನ್ನು ತೊರೆದು ಬಿಡಬೇಕೆ?

**ಸುರೇಶ –** ಜಗದ ಜೀವಿಗಳಲ್ಲಿ ಪ್ರಾಮಾಣಿಕತೆ ಅಣುವಿನಷ್ಟು ಸಹುಳಿದಿಲ್ಲ. ಪ್ರೀತಿ, ವಿಶ್ವಾಸಗಳು ಸಮೂಲ ನಾಶವಾಗಿ ಕೇವಲ ಮುಖಸ್ತುತಿಗೆ ಜನತೆ ಮರ್ಯಾದೆ ಕೊಡುತ್ತಿದೆ. ಸತ್ಯವಾದುದನ್ನು ನಿಷ್ಠುರವಾಗಿ ನುಡಿದರೆ ಇವನೊಬ್ಬ ಅಲೌಕಿಕ ಪುರುಷ ಹಾಳುಹರಟೆಯನ್ನು ಕೊಚ್ಚುವ ಹುಚ್ಚನೆಂದು ಗಹಗಹಿಸಿ ನಕ್ಕು ಹುಚ್ಚರ ಮಾಲೆಯಲ್ಲಿ ಆತನನ್ನು ಸೇರಿಸುವರು. ರಾಜ, ಸತ್ಯ ಪ್ರಾಮಾಣಿಕತೆಗೆ ಈಗ ಆಶ್ರಯವೆಂದರೆ ಓಸಿ ಕಂಪನಿ. ಏಜಂಟರ ಪವಿತ್ರ ಹೃದಯ, ಕಾಗದವಿಲ್ಲ ಪತ್ರವಿಲ್ಲ ಹೆಸರಿಲ್ಲ ದೆಸೆಯಿಲ್ಲ' ಗುರ್ತಿಲ್ಲ ಕೂನಿಲ್ಲ ರೂಪಾಯಿಗೆ ಎಂಭತ್ತು ರೂಪಾಯಿಗಳನ್ನು ಅನುಗ್ರಹಿಸಬೇಕಾದರೆ ನಿಜವಾಗಿ ಇದು ರಾಮರಾಜ್ಯವೆಂದು ಕರೆದರೆ ತಪ್ಪಾಗಲಿಕ್ಕಿಲ್ಲವಷ್ಟೇ! ಇನ್ನೊಂದು ವಿಚಾರ, ಯಾವ ಸಮಾಜದ ಮುಂಖಡರಾಗಿ ಅವರು ಬಹುಕಾಲ ಬಾಳಲಿಕ್ಕೆ ಅವರ ಆರ್ಥಿಕ ನೆಲೆಗಟ್ಟು ಭದ್ರವಾಗಿರುವದೇ ಕಾರಣ.

**ರಾಜಶೇಖರ–** ಅಂತೂ ನೀನು ಗಲಾಟೆ ಮನುಷ್ಯ

**ಸುರೇಶ –** ಗಲಾಟೆ ಮಾಡದ್ದಿದ್ದರೆ ಪೇಚಾಟವಾಗುತ್ತದೆ. ತಲಾಠಿ ಸ್ಥಾನ ನಿರ್ಮಾಣವಾಯಿತು ಈಗ. ಬಂದಿರುವ ಹಣ ನಿನ್ನ ಆನಂದ ಪ್ರಸ್ತಾವನೆ ಗದರಲ್ಲಿ ಒಂದು ನೂರು ರೂಪಾಯಿಗಳನ್ನು ೬೦ನೇ ನಂಬರಿಗೆ ಹಚ್ಚು.

ರಾಜಶೇಖರ – ನಾನೊಲ್ಲೆ ನನಗೆ ಭಯವಾಗುವದು.

ಸುರೇಶ – ನಿನಗೆ ಇನ್ನೂ ಭಯ ಬಿಟ್ಟಿಲ್ಲವೇ ? ಹೆಂಗಸರು ಧೈರ್ಯವಾಗಿ ಓಸಿ ಆಡುತ್ತಿರುವಾಗ ಗಂಡಸಾದ ನೀನು ಹೆದರಿದರೆ ಹಣ್ಣಿಗಿಂತಲೂ ಎಷ್ಟು ಕಡಿಯಾದೆ?.

ರಾಜಶೇಖರ – ಸ್ತ್ರೀಯರು ಸಹ ಇದರಲ್ಲಿ ಭಾಗವಹಿಸುವರೇ?

ಸುರೇಶ–– IN 1950 ಆಗಲೇ ೫ವರ್ಷ ಕಳೆದು ಹೋದವು ಪ್ರಪಂಚದ ಜ್ಞಾನವಿಲ್ಲದ ನೀನು ಸಮಾಜದ ಮುಖಂಡನೆಂದು ಹೇಗೆ ಕರೆಯಿಸಿ ಕೊಳ್ಳುತ್ತಿರುವಿಯೋ ತಿಳಿಯದು. ರಾಜು, ಗಂಡಸು ಒಂದು ವೇಳೆ ನಂಬರು ತೆಗೆಯುವಲ್ಲಿ ತಪ್ಪಬಹುದು, ಹೆಂಗಸು ಮಾತ್ರ ತಪ್ಪುವದಿಲ್ಲ,

ರಾಜಶೇಖರ – ಅಂತೂ ಓಸಿ ಭಾರತದ ಬಹುಭಾಗವನ್ನು ವ್ಯಾಪಿಸಿದಂತಿದೆ

ಸುರೇಶ – ಅಂತೇಕೆ ಮತ್ತೆ ಬುಡತನಕ ಬೇರುಬಿಟ್ಟಿದೆ. ತಾಯಿಬೇರಂತೂ ಮೂಲನಾಡಿನ ನಾಲ್ಕು ನಿಟ್ಟಿಗೆ ಹಬ್ಬಿ ಟೊಂಗೆ ದಿನಕ್ಕೊಂದು ಅದರ ಫಲವನ್ನು ಸೇವಿಸ ಹತ್ತಿದೆ. ನಾನು ತಿಂದಿದ್ದೇನೆ, ನೀನೂ ತಿನ್ನು ನಾಡಿಗೆ ನಾಡೇ ತಿನ್ನಲಿ. ಓಸಿ ಕಂಪನಿ ಚಿರಂಜೀವಿಯಾಗಲಿ.

ರಾಜಶೇಖರ – ಅಳಿಗಾಲದ ಪ್ರಾರಂಭ.

ಸುರೇಶ – ಇದೇ ನಿನ್ನ ವಿಲಾಸದ ಆರಂಭ? ತಾ, ನೂರ ರೂಪಯಿ ನೋಟನ್ನು ನಿನಗೆ ಭಯವಾದರೆ ನಾನು ಹಚ್ಚುತ್ತೇನೆ. ಆ ರಾಜು, ಇನ್ನೊಂದು ವಿಚಾರ....

ರಾಜಶೇಖರ – ಮತ್ತೇನು?

ಸುರೇಶ – ಇದರಲ್ಲಿ ೧೦೧ ರೂಪಾಯಿಗಳನ್ನು ಬೋರ್ಡಿಂಗಿಗೆ ಕೊಟ್ಟು ಬಿಡು. ದಾನಶೂರನೆಂದು ಸಮಾಜದಲ್ಲಿ ನಿನ್ನ ಸ್ಥಾನ ಇನ್ನೂ ಭದ್ರವಾಗುವದು.

ರಾಜಶೇಖರ – ಅಂತೂ ನಿನ್ನ ಕಾರ್ಯ ಘನವಾದ್ದು

ಸುರೇಶ – ಅಷ್ಟೇ ಬೆಲೆಯುಳ್ಳದ್ದು ಲಕ್ಷಗಟ್ಟಲೆ ದರೋಡೆ ಮಾಡಿ ಹತ್ತು ಸಾವಿರ ದಾನಮಾಡಲು ನಮಪ್ಪನ ಗಂಟೇನು ಹೋಗಿದೆ. ಆಗ ನೀನು ಸಮಾಜದ ಪ್ರಮುಖ ದೊರೆಸ್ವಾಮಿ ಲಾರ್ಡಆಫ್‌ಲಾರ್ಡ

**ರಾಜಶೇಖರ**.......ವಿಚಿತ್ರ ವ್ಯಕ್ತಿ

**ಸುರೇಶ –** ಇಂದು ನಾವೇ ಬಂದು ಪಬ್ಲಿಕ ಮೀಟಿಂಗ ಕರೆದು ದೇಣಿಗೆ ಕೊಡುವದನ್ನೆಲ್ಲ ಕೊಟ್ಟು ಬಿಡೋಣ ಉಳಿದ ರೊಕ್ಕ ಓಸಿಗಾಗಿ ಮೀಸಲು. ಹತ್ತಕ್ಕೆ ನೂರಾಗಿ ನೂರಕ್ಕೆ ಸಾವಿರಾಗಿ ಸಾವಿರಕ್ಕೆ ಲಕ್ಷವಾಗಿ ಲಕ್ಷಕ್ಕೆ ಅಲಕ್ಷವಾಗಿ

**ರಾಜಶೇಖರ –** ಕೊನೆಗೆ ಭಿಕ್ಷುಕರಾಗಿ....(ಇಬ್ಬರೂ ನಗುವರು)

**ಸುರೇಶ –** ಬಾ ಕಾಫಿ ಕುಡಿಯಲು ಹೋಗೋಣ (ಹೋಗುವರು)

## ಮೂರನೆಯ ದೃಶ್ಯ

ರಸ್ತಾ ಪರದೆ (ಬಸವಂತಿ ಹೋಗುವಾಗ್ಗೆ ಅಣ್ಯಾ ಬಂದು)

**ಅಣ್ಯಾ** ಬಸಂತೀ ಏ...ಬಸಂತೀ...

**ಬಸವಂತಿ –** ಯಾಕ ಅಣ್ಯಾ.

**ಅಣ್ಯಾ –** ಅಣ್ಯಾ ಅಂತೀಯಲ್ಲ ನನ್ನ

**ಬಸವಂತಿ –** ಮತ್ತ ನಿನ ಹೆಸರು ಅಣ್ಯಾ ಅಲ್ಲನ?

**ಅಣ್ಯಾ –** ನನ್ನ ಹೆಸರು ಅಣ್ಯಾನ ಹೌದು

**ಬಸವಂತಿ –** ಅದನ ಅಂದೆನಲ್ಲಾ ನಾನು

**ಅಣ್ಯಾ –** ಅದನ್ನ ಅಂದದ್ದು... ಅಂದರೆ ಒಂಟಿ ಹೆಸರಲೆ ಕರಿತೀಯಲ್ಲ ಹಗಲಚಿಕ್ಕಿ

**ಬಸವಂತಿ –** ಹೀಂಗ.... ನನಗ ತಿಳಿಲಿಲ್ಲ ಬಿಡು. ಮೊದಲ ಹೇಳಲಬಾರದಾಗಿತ್ತ ನಾ ಎಲ್ಲೆ ಒಂಟಿ ಹೆಸರಲೆ ಕರಿತಿದ್ದೆ. ಹಂಗರ ನಿನಗ ಏನ ಅನಬೇಕ ಅಣ್ಯಾ

**ಅಣ್ಯಾ –** ಮೀಸಿ ತಿರ್ವುತ್ತ ಅಣ್ಯಾರಾವ ಅಂತಾ ಅನ್ನು

**ಬಸವಂತಿ –** ಇತ್ತಿತ್ತಲಾಗಿ ನಿನಗೆ ದೆವ್ವನ ಬಡದೈತೆ

**ಅಣ್ಯಾ –** ನನಗ್ಯಾಕ ದೆವ್ವ ಬಡದೈತೆ ದೆವ್ವನ್ನ ನಾ ಬಡುವಾಂಗ ಅದೇನಿ

**ಬಸಬಂತಿ –** ದೆವ್ವನ್ನ ಅಟ ಯಾಕS, ದೆವ್ವಕಿಂತ ಬಲಾ ಅದಿ ನೀನು

**ಅಣ್ಯಾ –** ಹುಚ್ಚು ಹುಡುಗಿ, ರಾವ ಅಂದರS ದೆವ್ವ ಅಲ್ಲ.

**ಬಸವಂತಿ –** ನನಗ ತಿಳೀಲಿಲ್ಲ ಬಿಡು ರಂಗಾ ಹೋದು ರಾವು ಬಿಡಿಸಬೇಕಂತ ಮಾಡಿದ್ದೆ

**ಅಣ್ಯಾ –** (ಮೈಮುರಿಯುವನು)

**ಬಸವಂತಿ –** ಯಾಕ

**ಅಣ್ಯಾ –** ಯಾಕೂ ಇಲ್ಲ.

**ಬಸವಂತಿ –** ಯಾಕೂ ಇಲ್ಲದಿದ್ರ ಹಿಂಗ್ಯಾಕ ಮಾಡತೀ, ಶಟರೋಗ ಬಂದೈತೇನ?

**ಅಣ್ಯಾ –** ನಿನ್ನ ಕಡೆಗೆ ಒಂದು ಚೂರು ಕೆಲಸ ಇತ್ತು

**ಬಸವಂತಿ –** ನನ್ನ ಕಡೆ ನಿಂದೇನು ಕೆಲಸ?

**ಅಣ್ಯಾ –** ಒಂದುಚೂರು ಐತಿ ಬ್ಯಾರೆ

**ಬಸವಂತಿ –** ಅದೇನ ಬ್ಯಾರೆ?

**ಅಣ್ಯಾ –** ನೀ ಹೇಳ ಅಂದರ ಹೇಳತೇನಿ

**ಬಸವಂತಿ –** ಅದೇನ, ಮಂದ್ಯಾಗ ಹೇಳೋದೋ? ಮಂದಿ ಇಲ್ಲದಾಗ ಹೆಳೋದೋ

**ಅಣ್ಯಾ –** ನೀ ಒಬ್ಬಕೆ ಇದ್ದಗ ಹೇಳಬೇಕು ಅಂತ...

**ಬಸವಂತಿ –** ಹೇಳಿ ಬಿಡು ಈಗ ಒಬ್ಬಾಕೆ ಅದಿನೆಲ್ಲ

**ಅಣ್ಯಾ –** ಅದೇನಿಲ್ಲಾ?

**ಬಸವಂತಿ –** ಮತ್ತ ಹಿಂಗ್ಯಾಕ ಮಾಡತೀದಿ ಸಂತ್ಯಾಗ ಮಂದಿ ಕಾಣದವರಂಗ

**ಅಣ್ಯಾ –** ಹಂಗS ಆಗೇತೆ ಈ ಮನಸ್ಸಿನಾಗ

**ಬಸವಂತಿ –** ಮನಸ್ಸಿನಾಗ ಯಾಕ ಮ್ಯಾಗ ಕಾಣತೈತಿ, ಹಿಂಗ್ಯಕ ನಿಂತಿ ಹೌಹಾರಿ. ಮೈಯಲ್ಲಾ ಬೆವರುತೋದು.

**ಅಣ್ಯಾ –** ಬೆವರೆಲ್ಲಾ ಬಂದೈತಿ.

**ಬಸವಂತಿ –** ಮಾರಿ ಒರಸಿಗೊ ಮೊದಲು. ಮೈ ಮಾಲೆ ಖಬರ ಐತೋ

ಇಲ್ಲೋ? ಬೆವರು ಬಂದದ್ದು ಸುದ್ದ ಗೊತ್ತಾಗವಲ್ಲದಲ್ಲಾ?ದಿಕ್ಕು ತಪ್ಪಿತೇನು?

**ಅಣ್ಣ್ಯಾ –** ನೀನು ಹದಿನಾರು ಆಣೆ ಹೆಣ್ಣು ನೋಡು.

**ಬಸವಂತಿ –** ಇಷ್ಟು ದಿವಸ ಹನ್ನೆರಡು ಆಣೆ ಹೆಣ್ಣು ನಾಲ್ಕಾಣೆ ಗಂಡು ಅಂತಾ ತಿಳಿದಿದ್ದಿ ಏನು?

**ಅಣ್ಣ್ಯಾ –** ಪಕ್ಕಾ ಖಿಲಾಡಿ ಅದಿಯಲ್ಲಾ

**ಬಸವಂತಿ –** ತೂಕಾ ಮಾಡಿ ಬಿಟ್ಟಿಯಲ್ಲಾ

**ಅಣ್ಣ್ಯಾ –** ಶೇರಿಗೆ ಸವ್ವಾ ಶೇರು

**ಬಸವಂತಿ –** ಅಂದರ ಈಗಿನ ಕಾಲದಾಗ ಪಾರು ಆಗುವದು ಅಣ್ಣ್ಯಾ ನೋಡಾಕ ಹೆಣ್ಣು ಕಂಡಾಂಗ ಕಂಡು, ಇಗೂತಿ ಶಗತ್ಯಾಗ ಗಂಡಸರಿಗಿಂತ ಮೂರು ಪಾಲು ಮುಂದೆ.

**ಅಣ್ಣ್ಯಾ –** ಮೂರು ಪಾಲು ಯಾಕ, ನೂರು ಪಾಲು ಅನ್ನು. ಅಂದಲ್ಲೆನS ಆಳಾಗಿ ಪುರೋಟ ಆಗೀದಿ ನೀ ಆ ಚಪ್ಪರಮನಿ ಸುರೇಶಪ್ಪನ ಕೈಯಾಗ

**ಬಸವಂತಿ –** ಇಲ್ಲದಿದ್ರ ಇಷ್ಟೊತ್ತಿಗೆ ಅಡ್ಡಾಡಿ ದುಡ್ಡು ಬೇಡಬೇಕಾಗುತ್ತಿತ್ತು

**ಅಣ್ಣ್ಯಾ –** ಇದೇನು ಹೇಳಿತಿಯಲ್ಲ ಅಸಲ ಮಾತು ನೋಡು

**ಬಸವಂತಿ –** ನನ್ನ ಹತ್ತಿರ ನಕಲಿ ಇಲ್ಲ ಬರೇ ಅಸಲ

**ಅಣ್ಣ್ಯಾ –** ಮತ್ತೆ ನನಗೇನ ಉತ್ತರ ಕೊಟ್ಟಂತಾತು?

**ಬಸವಂತಿ –** ಪ್ರಶ್ನೆನ ಕೇಳ್ಳಿಲ್ಲ ಉತ್ತರೇನು ಕೊಡ್ಲಿ?

**ಅಣ್ಣ್ಯಾ –** ಅಂದ್ರ ಇನ್ನೂ ನನ್ನ ಮನಸ್ಸಿನ ಮಾತು ತಿಳಿಲಿಲ್ಲೇನು ?

**ಬಸವಂತಿ –** ಮನಸ್ಸಿನ ಮಾತು ತಿಳಿಕೊಳ್ಳಾಕ ಕನಸಿನ್ಯಾಗ ಬಂದಿದ್ದೇನ?

**ಅಣ್ಣ್ಯಾ –** ಕನಸ್ಸಿನ್ಯಾಗ ಅಷ್ಟS ಯಾಕ ಹಂಗಾ ಇದುರಿಗೆ ಬಂದು ನಿಂತರಾ ಆಕೃತಿ

**ಬಸವಂತಿ –** ಯಾರು?

**ಅಣ್ಣ್ಯಾ –** ಮತ್ತ ಯಾರಂತ ಕೇಳತಿ ಬಸವಂತಿ ನೀನು?

ಬಸವಂತಿ – ನಾ ಯಾಕ ಬಂದು ನಿಂದರತೀನಿ ನಿನ್ನ ಇದರಿಗೆ

ಅಣ್ಯಾ – ಹಾಗ ಆಗೇತಿ.

ಬಸವಂತಿ – ಹಾಂಗ್ಯಾಕ ತಲಿಗಿಲಿ ಕೆಟ್ಟೇತೇನು?

ಅಣ್ಯಾ – ಇನ್ನೂ ಕೆಟ್ಟಿಲ್ಲ. ಇನ್ನ ಮ್ಯಾಲ್ಯ ಕೆಡಬಹುದು.

ಬಸವಂತಿ..... ಬರೆ ಅಜಮಾಸಿನ ಮ್ಯಾಲೆ ನಡಿತಲ್ಲ. ತುದಿ ಇಲ್ಲ ಬುಡಾ ಇಲ್ಲಾ

ಅಣ್ಯಾ – ಎಲ್ಲಾ ಬಿಚ್ಚು ಮಗ್ಗಿ ಆಗಬೇಕನ ನಿನಗ

ಬಸವಂತಿ – ಹಚ್ಚಮಗ್ಗಿ ಆಗದಿದ್ದರ ಹಚ್ಚುಮಗ್ಗೇರ ಆಗಬೇಕಲ್ಲ

ಅಣ್ಯಾ – ಹಚ್ಚು ಮಗ್ಗಿ ಆಗುವದಕ್ಕಿಂತ ಮೊದಲು ಮನ್ಸಸಸಿಗೆ ಮನಸ್ಸು ಹತ್ತುಬೇಕು

ಬಸವಂತಿ – ಮನಸ್ಸಿಗೆ ಮನಸ್ಸು ಹತ್ತಬೇಕಾದ್ರ ಬೆಸಗಿ ಬೀಳೊ ಕಸವು ಬೇಕಲ್ಲ

ಅಣ್ಯಾ – ಕಸುವಿಗೇನು ಕಡಿಮಿ ದಿನಾ ಒಂದರ ಹೊಸಮಾ......ಲ

ಬಸವಂತಿ – ಅಂತು ನೀರ ಕಲಕ ಆಗೇತೇಳ

ಅಣ್ಯಾ – ಅಲ್ಲೇನ ಹುಚ್ಚನಾಯಿ ಹಂಗ ಬೆನ್ನು ಹತ್ತಿ ತಿರಗತೀ

ಬಸವಂತಿ – ಮತ್ತೆ ಯಾರನ್ನಾದರೂ ಕಚ್ಚಿ ನಂಜ ಆದೀತು.

ಅಣ್ಯಾ – ಕಚ್ಚಿದರ ಕಚ್ಚಬೇಕು ನಿನ್ನ ಅಂದ್ರ ಇಳೂದು ಆ ನಂಜ

ಬಸವಂತಿ – ಮಂಜ ಕೌದತೀನ ಮಾರಿಗೆ ಕೆಂಜಿಗ್ಯಾ ಆಗಿದ್ದೆಲ್ಲ,

ಅಣ್ಯಾ – ಸಂಜಿ ಮುಂದ ಬಾ ಅಂದೆ

ಬಸವಂತಿ – ನನ'ಗಂಡಗ ತಿಳಿತಂದ್ರ ಹುಂಜಗ ಚೂರಿ ಹಾಕಿದಂಗ ಮಾಡ್ಯಾನು

ಅಣ್ಯಾ – ಅಷ್ಟು ಮಬ್ಬು ಅಲ್ಲೇಳ ನಾ.

ಬಸವಂತಿ – ನಿದ್ದಿ ಹತ್ತುವ ತನಕ ಹುಷಾರಿ, ಆಗಲೇ ನೋಡಿದೆನಲ್ಲ ಒಂದ ಗುಂಡಿಗೆ ಬೆದರಿ ಬಿದ್ದಿ

ಅಣ್ಯಾ – ಅದೇನಂದೆಲ್ಲ ಕಟ್ಟ ಖರೆ

ಬಸವಂತಿ – ಸುಟ್ಟ ಬೂದಿ ಅಲ್ಲ ನನ್ನ ಮಾತು ನೆಟ್ಟ ಬಡಿತಾವ

**ಅಣ್ಣ್ಯಾ –** ಕೊಟ್ಟೇನಿ ಹೋಗು ನಿನಗ

**ಬಸವಂತಿ –** ಬರೇ ಕೈಯ

**ಅಣ್ಣ್ಯಾ –** ಬರೇದಲ್ಲ ನನ್ನ ಭಂಗಾರಿ

**ಬಸವಂತಿ –** ಮೊದಲು ಆಗಬೇಕು ನಾ ಸಿಂಗಾರಿ

**ಅಣ್ಣ್ಯಾ –** ಮುಂಗಾರಿ ಸಿಡ್ಲು ಜಡದಾಂಗ ನಿನ್ನ ಮಾತು

**ಬಸವಂತಿ –** ಮಾತಾಡಿದರ ಅಷ್ಟು ಖಡಕೀಲೆ ಮಾತನಾಡಬೇಕು. ನಾಡಿ ಸತ್ತವರಂಗ ಇರಬಾರದು, ಏನದ ಈಗ ರಂಗು ರಂಗು

**ಅಣ್ಣ್ಯಾ –** ಈಗ ಬೇಕಾಗಿತ್ತನ?

**ಬಸವಂತ –** ಉಗಾದಿ ಉದ್ರಿ ಹೇಳಕಹತ್ತಿದಿ ಅಲ್ಲ (ಬಸವಂತ ಬರುವನು)

**ಬಸವಂತಿ –** ಇದು ಯಾಕ ಬಂದಾನ ಬಸವಂತಿ ? ಯುಗಾದಿ ಉದ್ರಿ ವಸೂಲಿಗೆ

**ಬಸವಂತಿ –** ಸುರೇಶಪ್ಪ ಸವಕಾರ ಊರಿಗೆ ಹೋಗವರ ಅದಾರಂತ ಲಗೂನ ಹೇಳಿ ಕಳಿಶ್ಯಾರ.

**ಅಣ್ಣ್ಯಾ –** ಹೌದು ಮಾವಾ ನಾ ಸಾವಕಾರ ಕೂಡ ಊರಿಗೆ ಹೋಗ ಬೇಕಾಗ್ಯೆತಿ ಅದಕ್ಕ ಅಡಗಿ ತಯ್ಯಾರ

**ಬಸವಂತ –** ಭಲೆ ಮಗನಾ ಹೇಳಾಕ ಬಂದಿದ್ದಿ?

**ಅಣ್ಣ್ಯಾ –** ಅಕ್ಕಗ ಹೇಳಾಕ ಬಂದಿದ್ದೆ.

**ಬಸವಂತ –** ಅದಕ್ಕ ಈಕಿ ಏನ ಅಂದ್ಲು?

**ಅಣ್ಣ್ಯಾ –** ಆದಷ್ಟು ಲಗು ಮಾಡವ್ವ ಅಂದೆ

**ಬಸವಂತ –** ಅದಕ್ಕ ಈಕೇನು ಅಂದಳು?

**ಅಣ್ಣ್ಯಾ –** ಹೂಂ ಅಂದಳು.

**ಬಸವಂತ –** ಅದಕ್ಕ ನೀ ಏನಂದೀ?

**ಅಣ್ಣ್ಯಾ –** ಅಗಲಿ ಅಂದೆ.

**ಬಸವಂತ –** ಅದಕ್ಕ ಈಕೇನ ಅಂದಳು.

**ಅಣ್ಣ್ಯಾ –** ಇನ್ನೂ ಏನು ಅಂದಿಲ್ಲ.

ಬಸವಂತ – ಅದಕ್ಕ ನೀ ಏನು ಅಂದಿ?

ಅಣ್ಣ್ಯಾ – ನಾ ಏನೂ ಅಂದಿಲ್ಲ.

ಬಸವಂತ – ಅದಕ್ಕೆ ಈಕೇನು ಅಂದಳು?

ಅಣ್ಣ್ಯಾ – ಸುಮ್ನೆ ಆದಳು.

ಬಸವಂತ – ಅದಕ್ಕ ನೀ ಏನಂದಿ?

ಅಣ್ಣ್ಯಾ – ಹೋಗೊ ನಿನ್ನ ಮಂಜಾಳ ಹೋಗ್ಲಿ ಅಂದೆ,

ಬಸವಂತ – ಅದಕ್ಕೆ ಆಕೇನು ಅಂದಳು?

ಅಣ್ಣ್ಯಾ – ಏನು ಅಂತಾಳೋ ಕೇಳಬೇಕು

ಬಸವಂತ – ಅದಕ್ಕ ನೀ ಏನು ಅಂದಿ?

ಅಣ್ಣ್ಯಾ – ಸುಮ್ನು ಇರಪಾ ಮಹಾರಾಯ

ಬಸವಂತ – ಅದಕ್ಕ ಅಕ್ಕೇನು ಅಂದಳು?

ಬಸವಂತ – ನಾ ಏನ ಅನ್ಲಿ ಸುಮ್ನು ಇರಬಾರದ ಏನ ಹಚ್ಚಿ ವಟವಟ

ಬಸವಂತ – ಯಾಕ ನಿನಗೆ ತ್ರಾಸಾತು? ನೀ ಕೇಳುವಾಕೆರ ಅಲ್ಲ ಹೆಳುವಾಕೆರ ಅಲ್ಲ

ಬಸವಂತ – ಏ ತಮ್ಮಾ ಅಣ್ಣಪ್ಪಾ ಹೋಗು. ಇವನ ಬಂದರ ಏನು ಕೆಲಸ ಆಗುವಂಗಿಲ್ಲ, ಹಂಗ ಒಣ ಒಣ ರಣ ರಣ.

ಬಸವಂತ – ಏನು ಹಂಗ ತಿರಗಾ ಮುರಗಾ ಹೇಳಿದರ ಕೆಲಸಗೇಡಿ ಕೆಲಸಗೇಡಿ ಮೀಳಾ ಅಲಸಂದಿ ಹುರಿತಂತ ಹೋಗು ತಮ್ಮಾ ಹೋಗು

ಅಣ್ಣ್ಯಾ – ಹೊಕ್ಕಿನಿ ಲಗು ಬಾಯಕ್ಕಾ.

ಬಸವಂತಿ – ಬರತಾಳ ಹೋಗಲೆ ಮಗನ, ಹೊಳ್ಳೊಳ್ಳಿ ನೊಡಬ್ಯಾಡ ನಾ ಎಲ್ಲಾಬಲ್ಲ್ಯಾ ಆರಹಡದಾಕಿ ಮುಂದ ಮೂರು ಮುರಕಾಮಾಡತಿದ್ದಳಂತ ಏ ಹಗಲಚಿಕ್ಕಿ ಮುಗಲ ಬಣ್ಣ ಅವಾ ಯಾರವಾ ಅಣ್ಣ್ಯಾ ಅಂದರೆ ಜಾಬಾದಿ ಮಗಾ ಹಾಕಲಂಗೇಶ್ವರ

ಕಂಪನಿ ಮ್ಯಾಳಾ, ನನಗ ಕಲಸತಿರೇನು ಪುಚ್ಚ ಬೆಳ್ಳಗಾದೀತು. ಹುಚ್ಚುಚ್ಚಾಕಾರ ಮಾಡಬೇಡಾ

**ಬಸವಂತಿ –** ಹೀಗ್ಯಾಕ ಸಾಯತೀದಿ ಬಿಕ್ಕಿ ಬಿಕ್ಕಿ ಹೋದಿ ಮಣ್ಣಾ ಮುಕ್ಕಿ ಪುಟ್ಟಾ ಪೂರಾ ಇಚ್ಯಾರಾ ಮಾಡಬೇಕು ಏನರ ಒಂದ ಒದರದಿ ಅಂದರ ಹೋದಿ ನೆಲ ನೆಕ್ಕಿ,

**ಬಸವಂತ –** ಏನ ವಿಚಾರ ಮಾಡಸತಿ ಕೈಯಾಗ ಕನಡಿ ಹಿಡಕೊಂಡ ಮಾರಿ ಹ್ಯಾಂಗ ಐತಿ ಅಂತ ಕೇಳಿದರ ಮಾರಿಗೆ ಹೊಡದಾರ

**ಬಸವಂತಿ –** ಈಗೇನ ತಪ್ಪ ಮಾಡೆನಿ?

**ಬಸವಂತ –** ಈಗೇನ ಮಾಡಿಲ್ಲ ಇನ್ನ ಮ್ಯಾಲೆ ಮಾಡುಹಂಗ ಕಾಣತ್ತೈತಿ.

**ಬಸವಂತಿ –** ಇನ್ನ ಮ್ಯಾಲೇರ ಯಾಕ ಮಾಡತೀನಿ?

**ಬಸವಂತ –** ಮತ್ತ ಗಂಟು ಬಿದ್ದಾನಲ್ಲ ಅಣ್ಣಾ

**ಬಸವಂತಿ –** ಇರಲಿಬಿಡು ನನಗೆಲ್ಲಾ ಗೊತ್ತೈತಿ. ಇಂಥಾ ಅಣ್ಣಾಗೊಳೂ ನನ್ನ ಮುಂದ ಸಾವಿರ ಮಂದಿ ಉಳ್ಯಾಡತಾರ. ಲಪುಟರ ಮನಿದೇವರು ಸೊಪ್ಪ ಹಾಕುವಾಕೀ ಅಲ್ಲಾ ನಾನು. ಇವ ಅಂದ್ರ ಏನು?

**ಬಸವಂತ –** ಇಷ್ಟು ಧೈರ್ಯ ಇದ್ದರ ಸಾಕಲ್ಲ

**ಬಸವಂತಿ –** ಕೂಳಗೀಳ ತಿಂತಿಯೋ ಹಂಗ ಹೊಕ್ಕಿಯೋ?

**ಬಸವಂತ –** ಬಂದಿರುದಾ ಆದಕ ಬಂದೀನಿ ಹಂಗ ಯಾಕ ಹೋಗೂದು

**ಬಸವಂತಿ –** ನಾನೂ ಸಾವುಕಾರ ಮನೆಗೆ ಹೋಗಬೇಕು ಲಗೂನ (ಹೋಗುವರು)

**ಪದ**

ನಲಿನಲಿಮನವೆ । ನಲ್ಲದ ಘನವೆ ।
ಮಲ್ಲಿಗೆ ಬನದೊಳು ನಾನೆ । ಹಾಡುತ ನಲಿಯುವೆನಾ ॥ಪ॥
ಓ ಪ್ರೀಯತಮ ಬಾ । ನಿನ್ನ ಅಗಲಿರಲಾರೆ ।
ವಿರಹ ದಾಹ । ಸಹಿಸೆ ನಾ ।

## ಮೂರನೆಯ ದೃಶ್ಯ

ಅರಣ್ಯ ರಸ್ತಾ

**ಪುಷ್ಪಾ –** ತಂಗಾಳಿ ಹೃದಯವನ್ನೆಷ್ಟು ಹಗುರಗೊಳಿಸುವದು

**ಸುರೇಶ –** ಬಹುದೂರ ಬಂದುದರಿಂದ ಆಯಾಸವಾಗಿರಬೇಕು

**ಪುಷ್ಪಾ –** ನಿಮ್ಮೊಡನೆ ಜೊತೆಯಾಗಿ ತಿರುಗಾಡುವದೆಂದರೆ ನನಗೆ ಶ್ರಮವೆನಿಸುವದಿಲ್ಲ.

**ಸುರೇಶ –** ಸಕಲ ಸೌಭಾಗ್ಯವನ್ನೇ ನನ್ನಲ್ಲಿ ಕಾಣುತ್ತಿರುವಿಯಲ್ಲ

**ಪುಷ್ಪಾ –** ಸಾಯಂಕಾಲದ ಸಮೀಕರಣವು ಸುವಾಸನೆಯ ಬೀರುತ್ತಿದೆ.

**ಸುರೇಶ –** ನಗರವನದ ಮೇಲಿಂದ ಬೀಸಿಬರುವ ಗಾಳಿ ಇದು. ಹಲವು ತರದ ಹೂಗಳ ವಾಸನೆ ಮಿಶ್ರವಗಿ ಸೊಗಸ ನೀಡುವಥು

**ಪುಷ್ಪಾ –** ಬಾಳಿನಲ್ಲಿ ಬೇಸರ ಹೊಂದಿದ ಜೀವನಕೆ ನವಚೈತನ್ಯ.

**ಸುರೇಶ –** ಇದು ಏಕಾಂತ ಸ್ಥಳ ಇಲ್ಲಿ ಯಾವ ಸದ್ದೂ ಇಲ್ಲ

**ಪುಷ್ಪಾ –** ಮುದ್ದು ಮಾತುಗಳ ಮಂಜುಳ ಸ್ವರ ಒಂದು ಕೇಳಿ ಬಂದರೆ ಸಾಕು ಕೋಗಿಲೆಯ ಧ್ವನಿ ಕೇಳುವದು

**ಸುರೇಶ –** ಕೋಗಿಲೆಯ ಧ್ವನಿ ಕೇಳುವದು!

**ಪುಷ್ಪಾ –** ಸನ್ನಿವೇಶನ್ನು ಮತ್ತಿಷ್ಟು ಸುಂದರಮಯಗೊಳಿಸಿವದು

**ಸುರೇಶ –** ಧನ್ಯ ಪ್ರಣಯ ಜೀವನ

**ಪುಷ್ಪಾ –** ಪ್ರೇಮ ಮಿಲನ,

**ಸುರೇಶ –** ಸಂಧ್ಯಾರಾಗ ಸಮೀಕರಣ

**ಪುಷ್ಪಾ –** ಅಂದಿನ ಮಧುರ ಕವನ

**ಸುರೇಶ –** ಇಂದಿನವರೆಗೂ ಸ್ಮರಣ.

**ಪುಷ್ಪಾ –** ಉನ್ನತ ಭಾವನ.

**ಸುರೇಶ –** ನುಡಿಸು ಇನ್ನೊಮ್ಮೆ ಆ ಕವನ

**ಪುಷ್ಪಾ –** ಬಾಹ್ಯ ಪ್ರಪಂಚವನ್ನೇ ಮರೆಯಿಸುವ ರಸ ಸ್ವಾದನ

**ಸುರೇಶ –** ಹೂಂ ಆಗಲಿ ಇನ್ನೊಮ್ಮೆ ಆ ಪೀಯೂಷ ಸೇವನ

**ಪುಷ್ಪಾ –** ಮತ್ತೊಮ್ಮೆ ಅದೆ ಕಾವ್ಯಗಾಯನ ಮಂಜುಳ ಸ್ವರ ಗಾನ ಚಿಮ್ಮಿ ಬರುವದೇ?

**ಸುರೇಶ –** (ನಗು) ನಗುವಿನೊಡನೆ ಹೊರಹೊಮ್ಮಲಿ ಭಾವಗೀತೆ (ಪುಷ್ಪಾ ಭವಗೀತೆ ಆನ್ನುವಳು)

**ಪುಷ್ಪಾ –** ಸಂಧ್ಯಾರಾಗ ಸಮೀಕರಣ
ಭಾನು ಪಶ್ಚಿಮ ಕಡಲ ಪಯಣ ॥
ಸಂಧ್ಯಾರಾಗ ಸುಗನ ।
ಪೂರ್ಣಚಂದ್ರ ಗಮನ ॥ ೧ ॥

**ಸುರೇಶ –** ಅಂಬರದ ಅಪ್ಸರೆ ಭೂಮಿಗಿಳಿದು ಬಂದು ನುಡಿಸುತಿಹಳೆ ಈ ಸ್ವರಗಾನ.

**ಪುಷ್ಪಾ –** ದೊರೆಯೇ!

**ಸುರೇಶ –** ಗಂಧರ್ವ ಕನ್ಯೆ ಶಾರದೆಯ ಮೀಣೆಯ ಮಂಜುಳನಿನಾದ ನಿನ್ನ ಕಂಠದಲಿಂದು ಸೇರಿದೆ ನೀ ಸಂಗೀತ ವಿಶಾರದೆ.

**ಪುಷ್ಪಾ –** ಮತ್ತೆಂದು ನಾ ವಿವಾಹದ ಶುಭಸಂದೇಶ ಕೇಳುವದು/

**ಸುರೇಶ –** ಯಾರದು?

**ಪುಷ್ಪಾ –** ನಮ್ಮಿಬ್ಬರದು

**ಸುರೇಶ –** ಅತುರವೇಕೆ?

**ಪುಷ್ಪಾ –** ಮದುವೆಯ ಮರುದಿನ ಮತ್ತೊಂದು ಹೊಸ ವರದಿಯನ್ನು ಒಪ್ಪಿಸುವದಿದೆ

**ಸುರೇಶ –** ಯಾರಿಗೆ?

**ಪುಷ್ಪಾ –** ನನ್ನ ಜೀವಿತೇಶ್ವರನಿಗೆ

**ಸುರೇಶ –** ವಿಷಯವೇನು?

**ಪುಷ್ಪಾ –** ಈಗಲ್ಲ ಹೇಳುವದು.

**ಸುರೇಶ –** ಈಗಲೆ ಹೇಳಿದರೆ ಪ್ರಮಾದವೇನು?

**ಪುಷ್ಪಾ –** ಪ್ರಮಾದವೇನು ಇಲ್ಲ.

**ಸುರೇಶ –** ಹಾಗಾದರೆ ಸಂಕೋಚವೇಕೆ ಅರುಹು

**ಪುಷ್ಪಾ –** ನಾನೀಗ........

**ಸುರೇಶ –** ನೀನೀಗ........

**ಪುಷ್ಪಾ –** ಹೂಂ ಹೂಂ ನಾನೀಗ......

**ಸುರೇಶ –** ನೀನೀಗ ಏನು........

**ಪುಷ್ಪಾ –** ಒಲ್ಲೆನಮ್ಮಾ ನಾಚಿಕೆಯಾಗುವದು

**ಸುರೇಶ –** ನಾಚಲು ನಮ್ಮಿಬ್ಬರ ಹೊರತು ಮತ್ತಾರೂ ಇಲ್ಲ.

**ಪುಷ್ಪಾ –** ನೀವು ಒಂದು ಶಿಶುವಿನ ತಂದೆಯಾಗುವಿರಿ

**ಸುರೇಶ –** ಹಾಂ (ಗಬರಿಯಾಗುವನು)

**ಪುಷ್ಪಾ –** ಯಾಕೆ ಗಾಬರಿಯಾದಿರಿ,

**ಸುರೇಶ –** ನೀನೀಗ ಗರ್ಭವತಿ ?

**ಪುಷ್ಪಾ –** ಹೌದು

**ಸುರೇಶ –** ಇದನ್ನು ಹೇಳುವದಕ್ಕಾಗಿ ಇಷ್ಟು ದೂರ ಕರೆತಂದೆಯಾ

**ಪುಷ್ಪಾ –** ನಿಜ, ಬೇಗನೆ ಲಗ್ನದ ವ್ಯವಸ್ಥೆಯನ್ನು ಮಾಡಬಾರದೆ?

**ಸುರೇಶ –** ಅದು ಸಾಧ್ಯವಿಲ್ಲ

**ಪುಷ್ಪಾ –** ಅದು ಸಾಧ್ಯವಿಲ್ಲವೇ?

**ಸುರೇಶ –** ಹೌದು

**ಪುಷ್ಪಾ –** ಚಾಂಡಾಲಾ ! ಲಗ್ನವಾಗುವೆನೆಂದು ವಚನಕೊಟ್ಟು ನಿರ್ಗತಿಕಳಾದ ನನ್ನನ್ನು ವಂಚಿಸಿದೆಯಾ !

**ಸುರೇಶ –** ವಂಚಿಸಿದವನು ನಾನಲ್ಲ

**ಪುಷ್ಪಾ –** ಮತ್ತಾರು ?

**ಸುರೇಶ –** ನೀನೆ ನಿನ್ನನ್ನು ವಂಚಿಸಿಕೊಂಡಿರುವಿ. ಅಲ್ಲದೆ ನನ್ನನ್ನು ವಂಚಿಸಲು ಹೊಂಚು ಹಾಕುತ್ತಿರುವಿ

ಪುಷ್ಪಾ – ಸುರೇಶ ! ನೀನೇ ಗಂಡನೆಂದು ನಂಬಿ ನಡೆದರೆ ನನಗೆ ಈ ರೀತಿ ಮೋಸ ಮಾಡುವೆಯಾ ?

ಸುರೇಶ – ಪುಷ್ಪಾ ಸೂಳೆಯ ಮಗಳ ಗಂಡನಾಗಲು ಯಾರಾದರೂ ಒಪ್ಪಬಹುದೆ ?

ಪುಷ್ಪಾ – ಮೊದಲು ನೀನು ಒಪ್ಪಿಗೆಯನ್ನು ಕೊಡಲಿಲ್ಲವೇ? ಕರಗ್ರಹಣ ಮಾಡುವನೆಂದು ವಚನಕೊಟ್ಟು ನನ್ನ ಶೀಲಭಂಗಗೊಳಿಸಿದಿ

ಸುರೇಶ– ವಚನಕಕೊಟ್ಟೆನಂದು ನನ್ನಿಚ್ಛೆಯನ್ನು ಈಡೇರಿಸಲೆಂದು,

ಪುಷ್ಪಾ – ವಚನವನ್ನೇ ಮುರಿದು ನುಂಗುವ ಎರಡು ತಲೆಯ ಹಾವಾದೆ ಮತ್ತಿಂದು

ಸುರೇಶ – ಬೇಕಾದ ಹಾಗೆ ಬೊಗಳು

ಪುಷ್ಪಾ – ಸುರೇಶ ನನ್ನ ಜೀವನ ಸುರೇಶಾ, ನಿನ್ನನ್ನೆ ನಂಬಿದ ದಾಸಿ ನಾನು ಈ ಹಟವನ್ನು ಬಿಡು. ಮುಗ್ಧ ಮನಸ್ಸುನು ನೋಯಿಸಬೇಡ ಕೈ ಹಿಡಿದು ಹುಟ್ಟಿಬರುವ ಕೂಸಿನ ತಂದೆಯಾಗು

ಸುರೇಶ – ನಿನ್ನ ಗರ್ಭದಿಂದ ಹುಟ್ಟಿಬರುವ ಕೂಸಿನ ಜನ್ಮದಾತ ನಾನೇ?

ಪುಷ್ಪಾ – ಅಲ್ಲದಿನ್ನಾರು?

ಸುರೇಶ – ನೀನು ವೇಶ್ಯೆಯ ಮಗಳು. ವೇಶ್ಯಾ ವೃತ್ತಿಯು ನಿಮ್ಮ ಮನೆತನದ ಕಸುಬು, ಹೀಗಿರವಾಗ ನನ್ನ ಮೇಲೇಕೆ ಆರೋಪ?

ಪುಷ್ಪಾ – ಅಂದರೆ ?

ಸುರೇಶ – ನನ್ನಂಥ ವಿಟರೆಷ್ಟು ಜನರೋ ನಿನಗೆ

ಪುಷ್ಪಾ – ಮುಚ್ಚು ಬಾಯಿ

ಸುರೇಶ – ಅದೇಕೇ?

ಪುಷ್ಪಾ – ಗರತಿಯ ಗುಣಗೌರವದ ಸೊಲ್ಲು ತುಂಬಿ ಹರಿಯುತ್ತಿದೆನ್ನ ಮನದಲಿ ಗಂಗಾ ಗೌರಿಯರ, ಶಂಭುವಿನಲ್ಲಿಟ್ಟ ನಲುಮೆ ಇದೆ ನಿನಗಾಗಿ ನನ್ನೆದೆಯಲಿ. ನೀ ಮಾತ್ರ ಕಿಚ್ಚಕೊಟ್ಟು ದಹಿಸುತಿರುವೆ ಧೈರ್ಯವನ್ನು. ಸೂಳೆಯ ಮಗಳಾದ ನಾನು ಸಂಸಾರಿಯಾಗಲು ಬಯಸಬಾರದೆ? ಸಂಸಾರಿಗಳ ಮನೆಯಲ್ಲಿ ಎಷ್ಟು ಜನ ಸೂಳೆಯರಿಲ್ಲ. ದಯವಿಟ್ಟು

ನೋಡು ದೀನಳು ನಾನು ವೇಷ್ಯಾ ಬೀದಿಗೆಳೆಯದಿರು.

**ಸುರೇಶ –** ವೇಶ್ಯಾ ಬೀದಿಗೆ ನಿನ್ನನು ನಾನಳೆದಿಲ್ಲ ನಿನ್ನ ದೈವವೆ ನಿನನ್ನು ಸೂಳೆಯರ ಮನೆಯಲ್ಲಿ ಹುಟ್ಟಿಸಿದೆ.

**ಪುಷ್ಪಾ –** ಹಾಗಾದರೆ ನಾನು ಸೂಳೆಯಾಗಿಯೇ ಬಾಳಬೇಕು?

**ಸುರೇಶ –** ಅದಕ್ಕಾಗಿಯೇ ನಿನ್ನ ಜನ್ಮವಾಗಿದೆ.

**ಪುಷ್ಪಾ –** ಇಲ್ಲ ನಾನು ಸೂಳೆಯಾಗಲಾರೆ.

**ಸುರೇಶ –** ನೀನೊಲ್ಲೆನೆಂದರೆ ಸಮಾಜ ಕೇಳಬೇಕಲ್ಲ. ಜಾತಿಯ ಉಪಭೋಗದ ವಸ್ತು ನಿನಗೇಕೆ .

**ಪುಷ್ಪಾ –** ಧರ್ಮಪತ್ನಿಯ ಸ್ಥಳವನ್ನು ತುಂಬಿಕೊಡುವೆ. ತಿರಸ್ಕರಿಸಬೇಡ ಸುರೇಶ. (ಕಾಲು ಹಿಡಿಯುವಳು)

**ಸುರೇಶ –** (ಒದೆದು) ಧರ್ಮಪತ್ನಿ ಸ್ಥಳವನ್ನು ನೀನು ತುಂಬಿಕೊಡುವದರೊಳಗಾಗಿ ಸಮಾಜದಲ್ಲಿ ನನಗೆ ದೊರಕಿರುವ ಗಣ್ಯಸ್ಥಳ ತೆರವಾಗುವದು.

**ಪುಷ್ಪಾ –** ಸಮಾಜ ನಿಮ್ಮಂಥ ಕ್ಷುಲ್ಲಕರಿಂದ ತುಂಬಿತಿಳುಕುತ್ತಿರುವದೇ ?

**ಸುರೇಶ –** ಇನ್ನೂ ನಿನಗೆ ತಿಳಿದು ಬಂದಿಲ್ಲವೇ?

**ಪುಷ್ಪಾ –** ಹಾಗಾದರೆ ನನ್ನ ಕರ ಹಿಡಿಯಲು ಸಮ್ಮತಿ ಇಲ್ಲವೇ ?

**ಸುರೇಶ –** ಇಲ್ಲ ಇಲ್ಲ ಇಲ್ಲವೆಂದು ಎಷ್ಟು ಸಲ ಹೇಳಲಿ.

**ಪುಷ್ಪಾ –** ಮುಂದೆ ನನ್ನ ಗತಿ ?

**ಸುರೇಶ –** ಅಧೋಗತಿ.

**ಪುಷ್ಪಾ –** ನಾ ಹೊತ್ತ ಗರ್ಭದ ಸ್ಥಿತಿ ?

**ಸುರೇಶ –** ಗರ್ಭಪಾತವೇ ಗತಿ.

**ಪುಷ್ಪಾ –** ಕರ್ಮ ಚಾಂಡಾಲಾ. ನಿನ್ನ ದೇಹ ಕೊಳೆತು ಹುಳುತುಹೋಗಲಿ ನಿನ್ನ ದೇಹವನ್ನು ಬೀದಿನಾಯಿಗಳು ಹರಿದು ತಿನ್ನಲಿ.

**ಸುರೇಶ –** ಶಪಿಸು, ಬೇಕಾದಷ್ಟು ನನಗೆ ಜೀವಂತ ನರಕವಾದರೂ ಸರಿಯೆ ಮಾತ್ರ ಇ ನಿನ್ನ ರೋದನ ಅರಣ್ಯ ರೋದನ.

**ಪುಷ್ಪಾ –** ಇಲ್ಲ ನಾ ರೋಧಿಸುವದಿಲ್ಲ ಸೇಡುತೀರಿಸುವೆ, ನನ್ನಿಷ್ಟು ಮೋಸಗೋಳಿಸಿದ ಪುರುಷವರ್ಗನ್ನೇ ಮಾಹಾರೋಗ ಕ್ಕೀಡುಮಾಡುವೆ ನನ್ನನ್ನು ಎತ್ತಿಹಿಡಿಯದ ಸಮಾಜವನ್ನು ಮುರಿದು ನುಂಗುವ ರಾಕ್ಷಸಿಯಾಗುವೆ.

**ಸುರೇಶ –** ಒದರಿ ಒದರಿ ನಿತ್ರಾಣಳೇಕಾಗುವಿ, ಲಗ್ನವಾಗುವ ಮೊದಲು ಗರ್ಭವತಿಯರಾಗುವವರ, ಗಂಡ ಸತ್ತನಂತರ ಬಸಿರಾಗುವವರ ಸಂಖ್ಯೆ ಬೆಳೆದುದರಿಂದ ಗರ್ಭ್ದಪತನ ಮಾಡುವ ಮಾಟಗಾರ್ತಿಯರು ಉರೂರಿಗೆ ಓಣಿಓಣಿಗೆ ಮನೆಮನೆಗಳಲ್ಲಿದ್ದಾರ? ಅವರಲ್ಲಿ ಹೋಗಿ ದಯಬೇಡು ಅಂದರೆ ನಿನ್ನ ಗರ್ಭದಲ್ಲಿರುವ ಪಾಪಪಿಂಡವನ್ನು ದೂರಮಾಡುವರು. ಇಲ್ಲಿ ಮೂರ್ಚಿತಳಾಗಿ ಬಿದ್ದರೆ ಉಪಚರಿಸಲು ಯಾರೂ ಇಲ್ಲ ಸುಮ್ಮನೇ ಅಡವಿ ಹೆಣವಾದಿ

**ಪುಷ್ಪಾ –** ಸುರೇಶ ನಿನ್ನ ಹೃದಯ ಕಲ್ಲಿಗಿಂತಲೂ ಕಠೋರ. ನಿರ್ದಯನೆ ಮರೆಯಾಗು ಇಲ್ಲಿಂದಾ ಸಾಯಂಕಾಲದ ಸುಂದರ ವಾತಾವರಣದಲ್ಲಿ ಅಮಂಗಲ ಮುಖ ನೋಡಲಾರೆ.

**ಸುರೇಶ –** ಅಗುವೆ ಮರೆಯಾಗುವೆ ಮೊದಲೊಂದು ಮಾತು ಹೇಳುವೆ, ಗರತಿ ಸತಿ ಎಂದು ಜೀವನವನ್ನು ವ್ಯರ್ಥ ಕಳೆದುಕೊಳ್ಳುವದಕ್ಕಿಂತ ಧನಿಕರ ಗುರ್ತು ಮಾಡಿಕೊ ಅಂದರೆ ಮುಪ್ಪಿನಲ್ಲಿ ಮುರಿದು ತಿನ್ನಲು ಹಣ ದೊರಕುವದು. ಹಾಳು ಗರತಿಯ ಧರ್ಮಕ್ಕೆ ಹೊಂದಿಕೊಂಡು ಸತ್ತು ಹೋದರೆ ಮುನಸಿಪಾಲಟಿ ಹೆಣವಾದಿ. ಬರುವೆ ಸಮಯ ಸಿಕ್ಕಾಗ ಸುಖಪಡುವದೇ ಜೀವನದ ಜೀವಾಳ (ಹೋಗುವನು ಪುಷ್ಪಾ ಅಳುತ್ತ ಹೋಗುವಳು.)

## ಐದನೆಯ ದೃಶ್ಯ

ರಾಜಶೇಖರನ ಮನೆ (ಶೋಭಾ ಪೂಜೆಗೆ ಹೊರಟಿರುವಳು)

**ಪದ**

**ಶೋಭಾ –** ಈ ಪ್ರೇಮವೆ ಜಗದ ಜೀವನವು ।
ಮಾನವ ಕುಲದಾ ದೈವವೊss

ಈ ಪ್ರೇಮದಿ ನಲಿದು ನಲಿಯುವ ಬಾ ।
ಬಾ ಇನಿಯಾ ಪ್ರಾಣಪತಿ ದೇವ ।
ಪ್ರೇಮದಾ ಭಾಗ್ಯ ಚಂದಿರ ಬಾ

ಬಾ ಶಂಕರಾ. ನಾಗರಪಂಚಮಿಯ ಸಂಭ್ರಮದ ಸ್ವಾಗತದಲ್ಲಿ ಬಂದು ಆನಂದವ ನೀಡಿದೆ. ಶ್ರಾವಣದ ಮಂಗಲಮಯ ಪ್ರಸಂಗದಲ್ಲಿ ಪಂಚಮಿಯೊಂದು ಶುಭಸಮಯ. ಬಾ ಮಗು. ಹಿರಿಯರು ಬರುವಷ್ಟರಲ್ಲಿ ಹಾಲೆರದು ಬರೋಣ

**ಶಂಕರ** – ನಡೆಯವ್ವಾ.

**ರಾಜಶೇಖರ**– (ನಿಶೆಯಿಂದ ಬರುವನು) ಏನು ಎಲ್ಲಿಗೆ ಹೊರಟಿರುವಿರಿ?

**ಶೋಭಾ** – ನಿಮ್ಮ ಬರುವನು ನೋಡಿ ವೇಳೆ ಬಹಳವಾದುದರಿಂದ ನಾಗೇಂದ್ರನಿಗೆ ಹಾಲೆರದು ಬರಲು ಹೊರಟಿದ್ದೇವೆ

**ರಾಜಶೇಖರ** – ಇಂದು ನಾಗರಪಂಚಮಿ. ಅದಕ್ಕಾಗಿ ಇಷ್ಟು ಸಂಭ್ರಮ

**ಶೋಭಾ** – ವರ್ಷಕ್ಕೊಮ್ಮೆ ಬರುವ ಈ ಹಬ್ಬದಲ್ಲಿ, ಹಾಲು ಹೊಯ್ಯುವ ಹಿರಿಯರ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿರುವದು ನಮ್ಮ ನಾಡಿನ **ಪದ್ದತಿಯಲ್ಲವೆ?**

**ರಾಜಶೇಖರ** – ಹೌದು ಇದು ನಾಡಿನ ಪದ್ಧತಿ ಜನಜೀವನ ಒಳಗು ಹೊರಗು ಸರಿಯಾಗಿ ಅಳುವಡಿಸಿಬಿಟ್ಟಿದೆ. ನಿಮ್ಮೀ ಮನಸ್ಸು ನೆಮ್ಮದಿಯಾಗಿದ್ದರೆ ಮಾತ್ರ ಹಬ್ಬಹರುಷ ನೀಡುವದು. ಮನೆತನಕೆ ಮಬ್ಬುಬಡಿದುಕೊಂಡು ತಬ್ಬಿಬ್ಬಾಗಿ ಹೋಗಿರುವಾಗ ಆನಂದ ಪ್ರದರ್ಶನ ಮಾಡುತ್ತ ಹಾಲು, ಹೊಯ್ಯಲು ಹೋಗುತ್ತಿರುವದನ್ನು ನೋಡಿದರೆ ನನ್ನ ಹೃದಯದಲ್ಲಿ ಹಾಲಾಹಲವನ್ನೊಯ್ಯದಂತಾಗುವದು.

**ಶೋಭಾ** – ತಮ್ಮ ಮಾತಿನ ಮತಿತಾರ್ಥವು ನನಗಾಗಲಿಲ್ಲ

**ರಾಜಶೇಖರ** – ಅದು ಹೇಗೆ ಅರ್ಥವಾಗಬೇಕು? ಅನರ್ಥಕ್ಕೆ ಸಿಕ್ಕುಬಿದ್ದವಳು ನೀನಲ್ಲ, ನಾನು

**ಶೋಭಾ** – ನಿನ್ನೆ ಸಾಯಂಕಾಲ ಮನೆಬಿಟ್ಟು ಹೋದವರು, ಇಂದು ಮಧ್ಯಾಹ್ನ ೩ ಘಂಟೆಯಾದರೂ ತಿರುಗಿ ಬರಲಿಲ್ಲ, ನಿಮ್ಮ ಆಗಮನ ನಿರೀಕ್ಷೆಯಲ್ಲಿ ಕಳೆದು ಹೋಯಿತು ರಾತ್ರಿ ಜಾಗರಣೆಯಲ್ಲಿ. ಇಂದು ಹಬ್ಬದ ದಿನವಾದುದರಿಂದ ಅಡುಗೆಯನ್ನು ಬೇಗ ಮುಗಿಸಿ ನಿಮ್ಮ

ಬರುವನ್ನೇ ಎದುರು ನೋಡುತ್ತಿದ್ದೆ

**ರಾಜಶೇಖರ –** ಅದಿರಲಿ, ನನ್ನ ಮಾತಿನ ಇತ್ಯರ್ಥವಾಗದೆ, ಮಾತು ಬದಲಿಸಬೇಡಾ, ಅನರ್ಥವನ್ನು ಆಮಂತ್ರಿಸಿದವರಾರು? ನಾನೋ ನೀನೋ?

**ಶೋಭಾ –** ನಾನಾವ ಕೇಡು ಬಗೆದಿರುವೆ? ಸತಿ ಪತಿಯ ದ್ರೋಹ ಬಗೆಯವಳೇ? ನನ್ನ ಆರಾಧ್ಯ ದೈವವೇ ನೀವಾಗಿರುವಾಗ ನಿಮಗೇನಾದರೂ ತೊಂದರೆಗಳನ್ನು ನಾನು ತಂದೊಡ್ಡುವೆನೆ?

**ರಾಜಶೇಖರ –** ನಿರ್ಮಲ ಮನಸ್ಸಿನಿಂದುದಿಸಿ ಬರುವ ಅಂತರಾತ್ಮದ ಹಾರೈಕೆಯಲ್ಲ ಇದು. ಕಣ್ಣು ಮುಚ್ಚಾಲೆಯ ಆಟ ನಾ ಬಲ್ಲೆ. ನಿನ್ನ ಮೋಸದ ಮಾತುಗಳನ್ನು ನಿಜವಾದ ಪ್ರೇಮ ಮಾಯವಾಗಿ ಕೇವಲ ನನ್ನನ್ನು ಭ್ರಮಿಸುವ ಶಬ್ದಗಳಿಂದ ಸಂಭೋದಿಸಿ ಮರಳು ಮಾಡುತ್ತಿರುವಿ

**ಶೋಭಾ –** ಗುಣವತಿ ಹೆಂಡತಿಗೆ ಗಂಡನೇ ಇಹಪರಗಳ ಪರಮ ದೈವವೆಂದು ನಂಬಿ ನಡೆದ ಸತಿ ನಾನು. ನಿಮ್ಮ ಪವಿತ್ರ ಮೂರ್ತಿಯನ್ನು ಮನಸ್ಸಿನಲ್ಲಿ ಮಂಡಿಸಿ, ನಿಮಗೆನ್ನ ಮನವಪ್ಪಿಸಿ, ಪೂಜಿಸುವ ಸೇವಕಿ ನಾನು. ಕುಹಕ ಕತ್ತಲೆ ಇಲ್ಲ, ಎನ್ನ ಕಾಯದಲಿ, ಗತಿ ನೀವಲ್ಲವೆ? ಬರಿದಾಗಿ ತೋರುವದು ನೀವಿಲ್ಲದ ಕ್ಷಿತಿಜ ದೊರೆಯೆ ಸಂಶಯದ ಸುಳಿವೇಕೆ ನನ್ನ ದೇವರ ಮನಸ್ಸಿನಲ್ಲಿ.

**ರಾಜಶೇಖರ –** ಬರಿ ಸಂಶಯವಿಲ್ಲ, ಸಂಶಯ ಸಾಗರದ ಸುಳಿಯಲ್ಲಿ ಸಿಕ್ಕು ತಿರುತಿರುಗಿ ಸಾಯುತಲಿರುವೆ, ನಿನ್ನ ಡಂಭಾಚಾರದ ಆಚರಣೆಯನ್ನು ಕಂಡು ಕುಲಕುಠಾರಿಣಿ.

**ಶೋಭಾ –** ಸ್ವಾಮಿ ಸಂಶಾಲಪ್ತ ಶಬ್ದಗಳ ಸುರಿಮಳೆಯು, ಸಹಸ್ರ ಸಿಡಿಲುಗಳ ಅಪರಘಾತದೊಂದಿಗೆ ಘಾಯಗೊಳಿಸಿತೆನ್ನ ತಮ್ಮ ಪವಿತ್ರ ಪಾದ ಸಾಕ್ಷಿಯಾಗಿ, ಹೇಸಿ ವಿಚಾರಗಳ ಸುಳಿವಿಲ್ಲ, ಸುಮಂತಿಯ ಮತಿಯಲ್ಲಿ

**ರಾಜಶೇಖರ –** ಎಲೆ ಮೋಸಗಾರ್ತಿ. ಪತಿಯ ಚಿಂತನೆ ಇಲ್ಲದ ವಂಚಕಳೇ, ಯಾವ ಸಂಚಿನಲ್ಲಿರುವೆ?

**ಶೋಭಾ –** ಸಂಚಿನ ಹಂಚಿಕೆ ಕಿಂಚಿತ್ತಾದರೂ ಕಾಣಲಾರದು ಕುಲವತಿಯ ಕಣ್ಣಿಗೆ

**ರಾಜಶೇಖರ –** ಶಬ್ದಾಡಂಬರದಲಿ ಬೊಗಳದಿರು ದುರುಳೆ, ಪತಿಯು ಸಂಕಟದಲ್ಲಿ ಸಿಕ್ಕು ಸಾಯುತ್ತಿರುವಾಗ, ವಿಲಾಸದಿಂದ ಒನಪು ಒಯ್ಯಾರ ಮಾಡುತ್ತ

ಬಸವಿಂಯಂತೆ ಬಜಾರದಲ್ಲಿ ಹಾಲು ಹೊಂಯ್ಯುವ ನೆಪಮಾಡಿಕೊಂಡು, ಹರೆಯದ ಹುಡುಗರಿಗೆ ಹರುಷದಲಿ, ಹಬ್ಬದ ಕಾಣಿಕೆ ಕೊಡುವ ಭರದಲ್ಲಿರುವೆ

**ಶೋಭಾ –** ಸ್ವಾಮಿ ಸಹಿಸಲು ಅಸಾದ್ಯವಾದ ಧಾರುಣ ಶಬ್ದಗಳ ಸಲಾಕೆ, ದಹಿಸುತಿದೆ ದೇಹವನು ದಾವಾಗ್ನಿ ಸತಿಗೆ ಮೃತಿ ತರುವ ಮಹಾಪ್ರಳಯ, ನನ್ನ ದೇವರ ಹೃದಯ ಕಲಂಕದ ಕೆಸರಾಯಿತೆ?

**ರಾಜಶೇಖರ –** ಏಕಿಂತು ಸೊಬಗಿಯಾಗಿ ನಲಿಯುತಿರುವೆ? ಆಭರಣಗಳ ಮೆರಗು ಮಾಡಿಕೊಂಡು, ಮೋದ ಪ್ರಮೋದ ವಿಲಾಸ ಭರದ ಬರುವ ಬಯಸಿದೆ ನಾನಿಲ್ಲದಾಗ

**ಶೋಭಾ –** ಮನವರಳಿ, ತನುವರಳಿ, ನನ್ನ ಜೀವನ ಜಗತ್ತಿನಲ್ಲಿ ಕಾಣುವದೊಂದು ಸುಂದರ ಸಜೀವ ಪ್ರತಿಮೆ ನನ್ನ ದೊರೆ, ಅದು ನಿಮ್ಮನ್ನು ಕನಸಿನಲ್ಲಿ ಕಾಣುವದು, ನನಸಾಗಿ ನಿಂತಿಹುದು, ಚಿತ್ತದಲ್ಲಿ ಕೆತ್ತಿಹುದು ಮೂಗತಿಯ ಮುತ್ತಿನಲಿ ಮತ್ತೆನ್ನ ಮಾಂಗಲ್ಯ ಮಂದಿರದಲ್ಲಿ ನೀವೆನ್ನ, ಬ್ರಹ್ಮಾಂಡ ನೀವೆನ್ನ ಹರಿಹರರು, ನಿಮ್ಮ ಜೀವನಜ್ಯೋತಿ ನನ್ನ ಹೃದಯದ ಪ್ರೀತಿ, ಪ್ರಭು ಇಂತೇಕೆ ನುಡಿದೆನ್ನ ಹರಣ ಹಿಂಡುವಿರಿ?

**ರಾಜಶೇಖರ –** ಹಗರಣವ ಗೈಯದಿರು ದೇವರು ನಾನಂದು ನಂಬಿ ನಡೆವ ನೀನು ಕಲ್ಲಿಗೆ ಹಾಲೊಯ್ಯಲು ಏಕೆ ಹೊರಟಿರುವೆ? ಸಕಲದೇವನನ್ನು ನನ್ನಲ್ಲಿ ಕಾಣುವ ಇನ್ನೊಬ್ಬ ದೇವರೇ?

**ಶೋಭಾ –** ಅಂದೊಮ್ಮೆ ನೀವು ಹೇಳಿದಂತೆ ಅಂದು ಭಾವನೆಯ ಪಾವನ

**ರಾಜಶೇಖರ –** ನಾನಿಂದು ಹಣಸೂರೆಗೈದು ಬರಿದಾಗಿ ಬಂದಿರುವಾಗ, ನೀ ನಕ್ಕು ನಲಿಯುತಲಿರುವಿ.

**ಶೋಭಾ –** ಹಣದ ಸೂರೆಗೆ ಕಾರಣವೇನು?

**ರಾಜಶೇಖರ –** ಕಾರಣವನ್ನು ಕೇಳಲು ನೀನಾರು?

**ಶೋಭಾ –** ಕೆಟ್ಟ ಚಟಗಳು ಅಂಟಿಕೊಂಡು ಮನಸ್ಸನ್ನು ದುರ್ಬಲಗೊಳಿಸಿ ನಮ್ಮ ಬಾಳಿನಲ್ಲಿ ಬೇವ ಬೆರಸುತಲಿಹವು.

**ರಾಜಶೇಖರ–** ನೀ ಪೂಜಿಸುತ್ತಿರುವ ದೇವರು ನನಗೇಕೆ ಜಯ ನೀಡಲಿಲ್ಲ ಇಂದಿನಾಟದಲಿ ನಾ ಸೋತದ್ದು ಐದು ಸಾವಿರ ರೂಪಾಯಿ

**ಶೋಭಾ –** ದುರುದ್ದೇಶಗಳಿಗೆ ದಯೆತೋರುವದು ದೇವನ ಕರ್ತವ್ಯವೆ?

**ರಾಜಶೇಖರ –** ಧರ್ಮ, ನ್ಯಾಯ, ನೀತಿಗಳನ್ನು ಮುಕ್ತಕಂಠದಿಂದ ಪ್ರಶಂಸೆ ಗೈಯುವ ಗೈಯ್ಯಾಳಿ, ನಿನ್ನ ಧರ್ಮ ನನಗೇಕೆ ಗೆಲುವು ತರಲಿಲ್ಲ? ನಿನ್ನ ನ್ಯಾಯ ನನ್ನೇಕೆ ಪರಿಪಾಲಿಸಲಿಲ್ಲ? ನಿನ್ನ ನೀತಿ ಏಕೆ ನೆಲೆಯಾಗಲಿಲ್ಲ?

**ಶೋಭಾ –** ಧರ್ಮ, ನ್ಯಾಯ ನೀತಿಗಳು ಸತ್ಯದಾರಿಯ ದೀವಟಿಗೆಗಳಲ್ಲದೆ, ಮಿಥ್ಯಪಥ ಪ್ರದೀಪಗಳಲ್ಲ ಬನ್ನಿ ಸ್ನಾನಮಾಡಿರಿ.

**ರಾಜಶೇಖರ –** ಸ್ನಾನ ಧ್ಯಾನ ಹಾಳಾಗಿ ಹೋಗಲಿ ಸುಖದ ಮುಖತೋರದ ಧರ್ಮ, ನ್ಯಾಯ, ನೀತಿಗಳು ಹೇಳಹೆಸರಿಲ್ಲದಂತಾಗಲಿ, ಇಟ್ಟು ಬಿಡು ಪೂಜಾ ಸಾಮಾಗ್ರಿಗಳನ್ನು ಏಕೆ ಕೇಳಿಸಲಿಲ್ಲವೇ?

**ಶೋಭಾ –** ಅಪ್ಪಾ ಅವ್ವನೊಂದಿಗೆ ಏಕೆ ಜಗಳ ಹೂಡಿರುವಿಯಪ್ಪ?

**ರಾಜಶೇಖರ –** ಸರಿಯೋ ದೂರಾ (ನೂಕುವನು)

**ಶೋಭಾ –** ಮಗುವಿನ ಮೇಲೆ ಸಹ ಇಷ್ಟೊಂದು ಕೋಪವೇ?

**ರಾಜಶೇಖರ –** ಮಗು. ಯಾರ ಮಗು? ಹುಂ! ನನ್ನ ಸಂಕಟದಲ್ಲಾಗದ ಸತಿಸುತರು, ಬದುಕಿದ್ದರೇನು? ಸತ್ತರೇನು?

**ಶೋಭಾ –** ನಿಮಗೆ ಬಂದಿರುವ ಸಂಕಟವಾದರೂ ಏನು?

**ರಾಜಶೇಖರ –** ನನಗೆ ಬಂದಿರುವ ಸಂಕಟ ಸಂಭ್ರಮದಿಂದ ಪೂಜೆಗೆ ಹೊರಟಲನುವಾದವಳಿಗೆ ಹೇಗೆ ತಿಳಿಯಬೇಕು? ಪೂಜೆಗೆ ದೊರೆವ ಪ್ರತಿಫಲ ನಾನೇ ಕೊಡುವೆ ಸ್ವೀಕರಿಸು. (ತಾಟು ಹಾರಿಬಡಿಯುವನು)

**ಶೋಭಾ –** ಇದೇನು ಮಾಡಿದಿರಿ?

**ರಾಜಶೇಖರ –** ನನಗೆ ಮನಸ್ಸಿಗೆ ಸಮಾಧಾನವಾಗುವಂತೆ ಮಾಡಿದ್ದೇನೆ.

**ಶೋಭಾ –** ನಿಮ್ಮ ಮನಸ್ಸು ಮಲಿನವಾಯಿತೆ?

**ರಾಜಶೇಖರ –** ಚಾಂಡಾಲಿನಿ (ಹೊಡೆಯುವನು)

**ಶಂಕರ –** ಅಪ್ಪ ಅವ್ವನನ್ನು ಹೊಡೆಯಬೇಡಪ್ಪ (ಶಂಕರನನ್ನು ಬಡೆಯುವನು)

**ಶೋಭಾ –** ಸತಿಸುತರ ಸುಖವನ್ನು ಬದಿಗೊತ್ತಿ ಮಾನ ಮರ್ಯಾದೆಗಳ

ಮಿತಿತಪ್ಪಿ ಮನೆತನಕ್ಕೆ ಕಲಂಕ ತರುವ ಕಾರ್ಯನಿರತರಾಗಿ ನಿಮ್ಮ ಆತ್ಮದ ಅದಃಪತನವನ್ನು ನೀವೇ ಮಾಡಿಕೊಳ್ಳುತ್ತಿರುವಿರಿ. ಉಚ್ಚ ಸಂಸ್ಕೃತಿಯವರಾದ ನೀವು ಶೆರೆಯ ಸೇವನೆ ಮಾಡಿದರೆ, ಸಮಾಜ ನಿಮ್ಮನ್ನು ಎಂಥಾ ಕೀಳು ದೃಷ್ಟಿಯಿಂದ ಕಾಣುವದು? ದುಷ್ಟ ಚಟಗಳನ್ನು ದೂರಮಾಡಿ ಸ್ವಾಮಿ, ಕೆಟ್ಟ ಆಟಗಳು ನಿಮ್ಮಂಥವರಿಗೆ ತರವಲ್ಲ ಕೆಟ್ಟು ಹೋಗುವ ಮೊದಲೇ ವಿಚಾರಿಸಿರಿ

**ರಾಜಶೇಖರ –** ನಾನೆಲ್ಲವನ್ನು ಬಲ್ಲೆ ತತ್ತೋಪದೇಶ ಮಾಡುವಿಯಾ? ಗಂಡನಿಗೆ ಬುದ್ಧಿ ಹೇಳುವಷ್ಟು ಗಂಡು ಬೀರಿಯಾದೆಯಾ? (ಬಡಿಯುವನು)

**ಶಂಕರ –** ಅಪ್ಪಾ ಅವ್ವನನ್ನು ಹೊಡಿಯಬೇಡಪ್ಪ (ಇಬ್ಬರನ್ನು ಹೊಡಿಯುವನು)

**ಶೋಭಾ –** ಅಯ್ಯೋ ಎಷ್ಟು ಕಲ್ಲಾಗಿದೆ ನಿಮ್ಮ ಮನ ನಿಮ್ಮ ಮಗನಲ್ಲವೆ? (ಶೇಖರ ಹೊಡಿಯುತ್ತ ಮೂರ್ಛಿತನಾಗುವನು) ಅಯ್ಯೋ ಏನಾಯಿತು? ನೀರು ಕೊಡು ಶಂಕರಾ ನಾಗೇಂದ್ರ, ನಿನ್ನ ಹಬ್ಬದ ದಿನವು ಈ ರೀತಿಯಾಗಿ ಪರಿಣಮಿಸಬೇಕೆಂದು ನಿನ್ನಿಚ್ಛೆಯೇ?

**ಶಂಕರ –** ಅವ್ವ ನೀರು ತೆಗೆದುಕೋ?

**ಶೋಭಾ –** ಗಾಳಿ ಹಾಕು ಶಂಕರಾ, ಇವರಿಗೆ ಬಹಳ ತ್ರಾಸಾಗಿದೆ. (ಉಪಚರಿಸುವಳು) ದೇವ ನನ್ನ ಮಾಂಗಲ್ಯದ ಮುತ್ತು ಪ್ರಕಾಶಮಾನವಾಗಿ ಕಂಗೊಳಿಸಲಿ. ಯಮನನ್ನು ಹಿಂಬಾಲಿಸಿ ಪತಿಯ ಪ್ರಾಣವನ್ನು ಪಡೆದ ಸಾವಿತ್ರಿ, ನಿನ್ನ ಮೂಗುತಿಯ ಆಯುಷ್ಯ ನನ್ನ ಪತಿಗಿರಲಿ. ಸತಿಧರ್ಮದ ಮಾತೃದೇವಿ ಪಾರ್ವತಿ ಹರಿಸು ನನ್ನ ಪತಿಗೆ ಆಯುಷ್ಯವನ್ನು ನನ್ನ ಕುಂಕುಮದೊಡೆಯನನ್ನು ಕಾಪಾಡಿರಿ

......೧ನೇ ಅಂಕ ಸಮಾಪ್ತ.........

===***===***===

# ದ್ವಿತೀಯಾಂಕ

## ಒಂದನೆಯ ದೃಶ್ಯ

(ರಸ್ತಾ)

**ಅಣ್ಣ್ಯಾ –** (ಗೊಂಬಿ ನೋಡುತ್ತ ನಿಂತಿರುವನು) ಇದೇನಾಗಿದ್ದೀತು.....?

**ಬಸವಂತಿ –** ಏನದು ಅಣ್ಣ್ಯಾ ಒಳ್ಳೇ ದಿಟ್ಟಿಸಿ ನೋಡತಿ,

**ಅಣ್ಣ್ಯಾ –** ಬಾ ಬಸವಂತಿ ಇದೇನಂತ ಕೇಳತೀಯಾ ಇದರ ಯ್ಯಾಪಾರ್‍ಯೈತಿ ಪಾಸಿ ಇದಕ ಅಂತಾರ ಓಸಿ

**ಬಸವಂತಿ –** ಹಾಗಂದ್ರೇನ ಬೇವರಸಿ

**ಅಣ್ಣ್ಯಾ –** ಇನ್ನು ಗೊತ್ತಾಗಲಿಲ್ಲ ಪರದೇಶಿ

**ಬಸವಂತಿ –** ಓಸಿ, ಅಂದ್ರ ನನಗ ಹ್ಯಾಂಗ ತಿಳಿಬೇಕ ಬಿಕನಾಸಿ

**ಅಣ್ಣ್ಯಾ –** ಇಕಾ ಅಣೆ ಹಚ್ಚಿದರೆ ಐದು ರೂಪಾಯಿ ಕೊಡತಾರ

**ಬಸವಂತಿ –** ಅಣೇಕ ಐದು ರೂಪಾಯಿ ಕೊಡತಾರ ಪಾಡಬಿಡು ಹಾಂಗಾರ ಎಲ್ಲಿ ನನಗಟ ತೋರಿಸು.

**ಅಣ್ಣ್ಯಾ –** ಮದಲ ಪೂರಾ ಕೇಳು., ದಿನಾ ಇದರ ನಂಬರ ಪೇಪರನ್ಯಾಗ ಬರತಾವ ನಮ್ಮ ನಂಬರಿಗೆ ಹಾರಿದರೆ ರೊಕ್ಕಾ ಕೊಡತಾರ,

**ಬಸವಂತಿ –** ನಿನಗ ಯಾವಾಗರ ಹಾರೇತನ

**ಅಣ್ಣ್ಯಾ –** ಜಗ್ಗ ಸರೆ, ಇಲ್ಲದಿದ್ದರೆ ನಮ್ಮಂಥವರ ಚೈನಿ ಹ್ಯಾಂಗ ನಡದೀತು

**ಬಸವಂತಿ –** ಹಂಗಾರ ನಂದೊಂದು ಆಣೆ ಹಚ್ಚತೀಯಾ?

**ಅಣ್ಣ್ಯಾ –** ಅಣೆ ಪಾಣೆ ಯಾಕ ಒಮ್ಮೆಲೆ ಒಂದೆರಡು ರೂಪಾಯಿ ಹಚ್ಚಿ ಬಿಡು

**ಬಸವಂತಿ –** ಅಷ್ಟ ರೊಕ್ಕಾ ಇಲ್ಲಬಿಡು ನನ್ನ ಹಂತ್ಯಾಕ

ಅಣ್ಣ್ಯಾ – ಈಗ ಎಷ್ಟು ಆದಾವು

**ಬಸವಂತಿ** – ಎರಡು ಆಣೆ ಅದಾವು

**ಅಣ್ಣ್ಯಾ** – ತಾ ಹಂಗರ

**ಬಸವಂತಿ** – ನಾಳೆ ಪೇಪರ ಬಂದ ಕೂಡಲೇ, ಹಾರಿತಂದ್ರ ನಾ ಬಂದ ರೊಕ್ಕ ಕೊಟ್ಟು ಹೊಕ್ಕೇನಿ. ಈ ರೊಕ್ಕಾ ಯಾರ ಇಸಗೊಂತಾರ ಅಣ್ಣ್ಯಾ

**ಅಣ್ಣ್ಯಾ** – ಜಗ್ಗ ಮಂದಿ ಏಜಂಟರ ಅದಾರ, ಚುಟ್ಟಾದ ಅಂಗಡಿ ಬಾಬಾಶಿ, ಚಹಾದಂಗಡಿ ಮಲ್ಲೇಶಿ ಖಾನಾವಳಿ ಫಕೀರವ್ವ,

**ಬಸವಂತಿ** – ಖಾನಾವಳಿ ಫಕೀರವ್ವನು ಆಡತಾಳೇನು?

**ಅಣ್ಣ್ಯಾ** – ಅಯ್ಯೋ ಭಯಂಕರ ಸುದ್ದಿ ಅದು, ಇತಿ ಮಿತಿ ಇಲ್ಲಾ. ಹೆಣ್ಣ ಮಕ್ಕಳ ಸೀಟೆಲ್ಲಾ ಆಕೀಗ ಬಸವಂತಿ ಮೊನ್ನೆ ನಡಮನಿ ನಿಂಗವ್ವಗ ಐವತ್ತು ರೂಪಾಯಿ ಹತ್ತಿತ್ತು

**ಬಸವಂತಿ** – ಹಿಂಗೇನ ಹಂಗರ ಈ ಸಾರೆ ನನಗೂ ಹತ್ತಬೇಕು ನೋಡ ಹಂಗರ

**ಅಣ್ಣ್ಯಾ** – ಬಿಡು ಅದರ ಕಾಳಜಿ ಈ ಪೇಪರ ತಗೊ ಇದರಾಗ ಗೊಂಬಿ ಅದಾವ ಲೆಕ್ಕಾ ಮಾಡು ಕೈಯಾಗ ಬಳ್ಳ ಏಸು ಅದಾವ ನೋಡು

**ಬಸವಂತಿ** – ಗೊಂಬಿ ಬಳ್ಳ ಎಣಿಸಂದ್ಯಾ

**ಅಣ್ಣ್ಯಾ** – ಹೂ

**ಬಸವಂತಿ** – (ಎಣಿಸಿದಂತೆ) ೨೧ ಬಳ್ಳ ಅದಾವ.

**ಅಣ್ಣ್ಯಾ** – ಹೂs ಹುಚ್ಚಪ್ಯಾಲಿ ಮನಶ್ಯಾರಿಗೆ ಇಪ್ಪತ್ತೊಂದು ಬಳ್ಳ ಇರತಾವೇನ

**ಬಸವಂತಿ** – ಮತ್ತ ನೋಡಿಲ್ಲೆ.

**ಅಣ್ಣ್ಯಾ** – ಬಳ್ಳ ಅಲ್ಲದು ಬಡಗಿ. ಬೇಸಂಗ ನೋಡ ಹೀಗೆ ಇಕಾ ಲೆಕ್ಕಾ ಮಾಡಬೇಕು.

**ಬಸವಂತಿ** – ಹ್ಯಾಗ ಲೆಕ್ಕಾ ಮಾಡಬೇಕು?

**ಅಣ್ಣ್ಯಾ** – ಒಬ್ಬಾವ ಕೈ ಅಗಲ ಮಾಡಿಕೊಂಡ ನಿಂತಾನ

**ಬಸವಂತಿ** – ಹೂಂ

**ಅಣ್ಣ್ಯಾ** – ಇನ್ನೊಬ್ಬ ಬಾ ಅಂತ ಕರಿತಾನ, ಇಲ್ಲೊಂದು ಗುಳಾಪ್ಯೆತಿ ಇಬ್ಬರ

ಮನಸ್ಸ್ಯಾರ, ಗುಳಾಪ ದುಂಡಗ ಇರತೈತಿ, ಅಂದರ ಪೂಜಿ.

**ಬಸವಂತಿ –** ಇದರಾಗ ಏನ ಗೊತ್ತಾತ ನಿನಗ,

**ಅಣ್ಣ್ಯಾ –** ಎರಡು ಓಪನ್ ಕ್ಲೋಜ ಪೂಜಿ, ಅಂದರ ಇಪ್ಪತ್ತು ನಂಬರಿಗೆ ಬರತೈತಿ.

**ಬಸವಂತಿ –** ಹಚ್ಚಿ ಬಿಡು ಹಂಗರ ೨೦ ನಂಬರಿಗೆ ಹೋಗ ಲಗೂನ ತಡ ಅದರ ಹಾರಾಕಿಲ್ಲ.

**ಅಣ್ಣ್ಯಾ –** ಇಲ್ನೋಡ ಬಸವಂತಿ ಇದರಾಗ ನಿನಗ ನಂಬರ ತಿಳಿಯಾಕಿಲ್ಲ ಕನಸ ಬಿಳತಾವಲ್ಲ ನನ್ನ ಮುಂದೆ ಹೇಳು. ಕನಸಿನಾಗ ಸತ್ಯೆ ಇರತೈತ ಇದರದು ಮತ್ತೆ ಅವತ್ತ ನಾ ಹೇಳಿದ್ದು.

**ಬಸವಂತಿ –** ಆ ಮೂಳಾ ಹೋಗು,

**ಅಣ್ಣ್ಯಾ –** ಇರಲೆ ಬಿಡ, ನೀ ಹಿಂಗ ಮಾಡತಿ, ಯಾವಾಗ ನೋಡಿದರು ।

**ಬಸವಂತಿ –** ಹೋಗು ತಡಾ ಆಗುತ್ತಮತ್ತೆ । ನಂಬರ ಬರಾಕಿಲ್ಲ.

**ಅಣ್ಣ್ಯಾ –** ಹಿಂದಾಗಡೆ ಬಾ ಅಂದ್ಯಾ

**ಬಸವಂತಿ –** ಹುಂ ಹುಂ (ಹೋಗುವನು) ಯಾಡನೇಕ ಹತ್ತು ರೂಪಾಯಿ ಬರತಾವ, ಹತ್ತು ರೂಪಾಯಿಕ ಎಷ್ಟು ಬರತಾವು, ಇಷ್ಟು ಬರತಾವು ಒಟ್ಟುರೊಕ್ಕ ಕೊಟ್ಟು ದಾಗೀನ ಮಾಡಿಸಿಕೊಂಡು ಮೆರದಾಡತೇನಿ (ಹೋಗುವಳು)

**ಪದ –** ಬಂಗಾರ ನಾನು । ಬೆಳ್ಳಿ ನಾನು
ಬೆಳ್ಳಿ ಚಿಕ್ಕಿನಾನು ! ಅಂಗೈಯೊಳಾಡುವ ಗಿಳಿ ನಾನು ॥ ಪಲ್ಲ॥
ಸಿಂಗಾರ ಸೊಬಗಿನ ಸಿರಿ ನಾನು ।
ಮುಂಗಾರಿ ಮಿಂಚಿನ ಬಳ್ಳಿ ನಾನು ।
ಕಾಮನ ಮಂದಿರದ ಗಿಣಿಯು ।
ಸವಿ ಮಾತನಾಡುವ ಕೋಗಿಲೆಯು । ॥ ೧ ॥

ಮೆಲ್ಲನೆ ನಡಿಯುವ ಹಂಸ ನಾನು ।
ನಲ್ಲನ ಒಡಗೂಡಿ ನಲಿಯುವೆನು ।

ಪಮಚಮದಿಂಚರದಿ ಹಾಡುವೆನು ।
ಸಂತಸ ನವಿಲಾಗಿ ಕುಣಿಯುವೆನು ॥ ೨ ॥

## ಎರಡನೆಯ ದೃಶ್ಯ

(ಸುರೇಶ ಶೇಖರ ಬರುವರು)

**ಸುರೇಶ –** ನೋಡು ಶೇಖರಾ, ಪೇಪರಿನಲ್ಲಿ ನಿನ್ನ ಹೆಸರು ಕಲಿಯುಗದ ಕರ್ಣ ದಾನಶೂರ ಇತ್ಯಾದಿ ಬಿರುದಾಂಕಿತ ನೋಡಿದೆ, ಏನಯ್ಯಾ ಬುದ್ದಿಗೇಡಿ ಜನಾ ಎಷ್ಟು ಬೇಗ ಮಬ್ಬಿಗೆ ಬೀಳುತ್ತಾರೆ?

**ರಾಜಶೇಖರ–** ಜನತೆ ಬುದ್ದಿಗೇಡಿಗಳೇ?

**ಸುರೇಶ –** ಯಾ ಸಂಶಯವು ಇಲ್ಲಾ. ದಾನದ ಹಿನ್ನೆಲೆ ಎಷ್ಟು ಭೀಕರವಾಗಿದೆ ಎಂಬುವದು ಅವರಿಗೆ ಹೇಗೆ ತಿಳಿಯಬೇಕು

**ರಾಜಶೇಖರ –** ನಿನ್ನೆ ಓಸಿ, ನಂಬರ ೭೦ ಇತ್ತು.

**ಸುರೇಶ –** ಒಂದು ತಿಂಗಳಾದರೂ ನಿನಗೆ ಯಾಕೋ ನಂಬರ ಹಾರಲಿಲ್ಲಾ

**ರಾಜಶೇಖರ –** ನನಗೂ ಅದೇ ಯೋಚನೆ.

**ಸುರೇಶ –** ಕರೆಕ್ಟ ನಂಬರ ತೆಗೆಯುವ ವಿಚಾರ ಶಕ್ತಿ ನಿನಗಿಲ್ಲ.

**ರಾಜಶೇಖರ –** ಒಂದೊಂದೇ ನಂಬರಿನಿಂದ ಫೇಲಾಗುತ್ತಿರುವೆ.

**ಸುರೇಶ –** ಒಂದು ಸಂಖ್ಯೆ ಸಹ ತಪ್ಪಬಾರದಯ್ಯಾ. ಓಪನಿಂಗ ಅಂಕಿ ಕ್ಲೋಜಿಂಗ ಹೊಡೆದರೆ ಗಚ್ಚ ಅಂದಿರಬೇಕು.

**ರಾಜಶೇಖರ –** ಸುರೇಶಾ, ಸಾಧಾರಣವಾಗಿ ಈಗ ನನ್ನ ಹಣ ೫೦ ರಕ್ಕೆ ಮಿಕ್ಕಿ ಹೋಗಿದೆ.

**ಸುರೇಶ –** ಹಾಗಾದರೆ ಹೀಗೆ ಮಾಡು, ಇಲ್ಲಿ ನಮ್ಮ ಪೈಕಿ ಒಬ್ಬರಿದ್ದಾರೆ, ಅವರ ಸ್ನೇಹವನ್ನು ನಿನಗೆ ಮಾಡಿಸುವೆ.

**ರಾಜಶೇಖರ –** ಹೆಣ್ಣೋ ಗಂಡೋ

**ಸುರೇಶ –** ಹೆಣ್ಣು, ನಂಬರ ತೆಗೆಯುವಲ್ಲಿ ಬಹು ಜಾಣೆ, ನಿನ್ನನ್ನು ಕರೆದುಕೊಂಡು ಹೋಗಿ ಭೆಟ್ಟಿ ಮಾಡಿಸಿ, ಒಂದು ಕರೆಕ್ಟ ನಂಬರ ತೆಗೆದು ಕೊಡುವಂತೆ ಹೇಳುವೆ ಏಕದಮ್ ೮೦೦೦ ರೂಪಾಯಿ

ಹಚ್ಚಿಬಿಡು ಅಂದರೆ ಹೋದ ಹಣದ ಹತ್ತು ಪಟ್ಟು ಹಿಂದಿರುಗುವದು.

**ರಾಜಶೇಖರ –** ಈಗ ಸಧ್ಯ ನನ್ನಲ್ಲಿ ಅಷ್ಟು ದುಡ್ಡು ಇಲ್ಲ.

**ಸುರೇಶ –** ನಿನ್ನ ಹತ್ತು ಕೂರಿಗೆ ಜಮಿನನ್ನು ಬ್ಯಾಂಕಿಗೆ ಒತ್ತಿ ಬರಕೊಡು

**ರಾಜಶೇಖರ –** ಬ್ಯಾಂಕಿಗೆ ಹೊಲ ಬರಕೊಟ್ಟರೆ !

**ಸುರೇಶ –** ಅದರಲ್ಲೇನು ತಪ್ಪು ! ಹೇಗಾದರೂ ಹಣ ಹೆಚ್ಚಾಗಿ ಹೊರಳುವದು ನಂತರ ಬಡ್ಡಿಗಂಟು ಸಹಿತ ಕೊಟ್ಟು ಬಿಡಿಸಿಕೊಂಡರಾಗುವದಿಲ್ಲವೆ? ಇನ್ನೂ ಹತ್ತು ಕೂರಿಗೆ ಹೆಚ್ಚಿಗೆ ಹೊಲ ಹಿಡಿಯುವಷ್ಟು ಹಣ ಬಂದು ಬೀಳುವದು,

**ರಾಜಶೇಖರ –** ನನಗೆ ಬ್ಯಾಂಕಿನಲ್ಲಿ ಯಾರ ಪರಿಚಯವೂ ಇಲ್ಲ.

**ಸುರೇಶ –** ಪ್ರೆಸಿಡೆಂಟರೇ ನಮ್ಮವರಿದ್ದಾರೆ ನನಗ ಹೆಚ್ಚಿನ ಪರಿಚಯದವರು

**ರಾಜಶೇಖರ –** ಹಾಗಾದರೆ ಯಾವಾಗ ಹೊರಡೋಣ

**ಸುರೇಶ –** ಈಗಲೇ ನಾನು ಸಿದ್ಧನೆ.

**ರಾಜಶೇಖರ –** ಆಗಲೇ ನೀನು ಹೇಳಿದೆಯಲ್ಲ. ಮೊದಲು ಅಲ್ಲಿಗೆ ಹೋಗಿ ಬರೋಣ

**ಸುರೇಶ –** ಪುಷ್ಪಾನ ಮನೆಗೆ

**ರಾಜಶೇಖರ –** ಅವಳ ಹೆಸರು ಪುಷ್ಪಾ.

**ಸುರೇಶ –** ಹೌದು ಪುಷ್ಪಾ, ಬಹಳ ರಸಿಕಳು ಪರಿಚಯವಿರಲಿ, ಇಲ್ಲದಿರಲಿ ಮನೆಗೆ ಹೋದವರ ಆದರಾತಿಥ್ಯ ಮಾಡುವದರಲ್ಲಿ ಸ್ವಲ್ಪೂ ಬೇಸರ ಪಟ್ಟುಕೊಳ್ಳುವದಿಲ್ಲ ಆದರೆ ಅವಳನ್ನು ಒಪ್ಪಿಸಬೇಕಾದರೆ ಬಹಳ ತೊಂದರೆಯಾಗಬಹುದು.

**ರಾಜಶೇಖರ –** ಅವಳು ಕುಲೀನ ಮನೆತನದವಳೆ?

**ಸುರೇಶ –** ವೇಶ್ಯಾ ಎಂದು ತಿಳಿದಿರುವೆ ಏನು?

**ರಾಜಶೇಖರ –** ಹೌದು

**ಸುರೇಶ –** ಅಲ್ಲಾ

**ರಾಜಶೇಖರ –** ಆ ವೇಳೆಯಲ್ಲಿ ಅವಳ ಗಂಡಬಂದರೆ ಹೇಗೆ?

**ಸುರೇಶ –** ಅವಳ ಗಂಡ ಇಲ್ಲಿ ಇರುವದಿಲ್ಲ ಮದ್ರಾಸಿನಲ್ಲಿ ಭಾರಿ ವ್ಯಾಪಾರ ಮಾಡುತ್ತಿದ್ದಾರೆ. ಯಾವಾಗಾದರೊಮ್ಮೆ ಬಂದು ಹತ್ತಿಪ್ಪತ್ತು ಸಾವಿರ ರೂ ಖರ್ಚಿಗಾಗಿ ಕೊಟ್ಟು ಹೋಗುವರು. ಆದರೂ ಆ ಹಣ ಅವಳಿಗೆ ಸಾಲದೆ ನನ್ನಿಂದ ಪ್ರತಿವರ್ಷ ಎರಡು ಮೂರುಸಾವಿರ ಜಗ್ಗಿ ಕೊಳ್ಳುವಳು ರೊಕ್ಕ ಹೋದರೂ ಅಡ್ಡಿಯಿಲ್ಲಾ ಒಳ್ಳೇ ಖುಷಿಯಾಗಿ ವರ್ಕಮಾಡ್ತಾಳೆ

**ರಾಜಶೇಖರ –** ನಡೆ, ಹೋಗೋಣ

**ಸುರೇಶ –** ಅಲ್ಲಿ ಬಹಳ ಸಿಸ್ತಾಗಿ ವರ್ತಿಸಬೇಕು. ಯಾವದಕ್ಕೂ ಹಿಂದೆಮುಂದೆ ನೋಡುವಂತೆ ಇಲ್ಲಾ. ಇಲ್ಲವಾದರೆ ಮೊದಲೇ ಹೇಳು? ಹೋಗುವದೇ ಬೇಡ.

**ರಾಜಶೇಖರ–** ಛೇ ಛೇ ಹೋಗುವದೆಂದು ನಿರ್ಧರಿಸಿದ ಮೇಲೆ ಹೋಗೇ ತೀರುವದು.

**ಸುರೇಶ –** ನೀನು ಬಹಳ ಹಟಮಾರಿ.

**ರಾಜಶೇಖರ–** ನಡೆ ! ಹೋಗೋಣ (ಹೋಗುವರು)

**ಪುಷ್ಪಾ –** (ಸುರೇಶನ ಭಾವಚಿತ್ರ ನೋಡುತ್ತ) ಸುರೇಶ, ನನ್ನ ಜೀವನದ ಸುರೇಶಾ (ಸುರೇಶನು ಬರುವನು)

**ಸುರೇಶ –** (ಬಂದು) ಬಂದೆ ಪುಷ್ಪಾ

**ಪುಷ್ಪಾ –** ನನ್ನ ಕೂಗು ಕೇಳಿಸಿತೇ

**ಸುರೇಶ –** ಕೇಳಿಸಿತೆಂದೇ ಬಂದೆ

**ಪುಷ್ಪಾ –** ನಿಜವಾಗಿಯಾ ಬಂದಿರುವೆಯಾ?

**ಸುರೇಶ –** ನೋಡು ನೀನೀಗ ಕನಸು ಕಾಣುತಿಲಿರುವಿಯಾ?

**ಪುಷ್ಪಾ –** (ಭ್ರಾಂತಳಾಗಿ,) ನೀಚಾ ಮತ್ತೇಕೆ ಇಲ್ಲಿ ಬಂದೆ? ಮತ್ತಾವ ಹೊಂಚು ಹಾಕಿರುವಿ,

**ಸುರೇಶ –** ಹೊಂಚಲ್ಲ, ಚಂಚಲೆ ನಿನ್ನ ಉದ್ಧಾರದ ಸಂಚುಮಾಡಿರುವೆ, ನಿನಗಾಗಿ ರಚಿಸಿರುವೆ ಮಾಯದ ಬಲೆ, ಶ್ರೀಮಂತ ಬೇಟೆ ಬರುವದಿದೆ ಮುಗ್ಧ ಮನಸ್ಸಿನ ಬುದ್ಧಿಗೇಡಿ ತರುಣ, ಬೇಕಾದಷ್ಟು ಹಣ.

**ಪುಷ್ಪಾ –** ಮತ್ತಾರ ಜೀವನವನ್ನು ಮುರಿದುನುಂಗುವ ಹವಣಿಕೆಯಲ್ಲಿರುವೆ?

**ಸುರೇಶ –** ಹವಣಿಕೆಯಲ್ಲಿಲ್ಲ ಕಾರ್ಯ ಕೈ ಗೂಡಿಸಿಕೊಂಡೆ ಬಂದಿರುವೆ ಇದೇ ಬರೆದು ಕೊಟ್ಟಿಹನು ೧೦ ಕೂರಿಗೆ ಜಮೀನು ಬಂದು ಸೇರಿವೆ ೧೦ ಸಾವಿರ ರೂಪಾಯಿಗಳು. ಮಧುರ ಮಾತನಾಡಿ ಹಸ್ತಗತಮಾಡಿಕೊ ವನಪು ವಯ್ಯಾರದುಯ್ಯಾಲೆಯಲ್ಲಿ ಕುಳ್ಳಿರಿಸಿ. ಕಣ್ಣಿಗೆ ಚಕ್ರ ಬರುವ ಹಾಗೆ ತೂಗೇಬಿಡು. ಬೇಹೋಸ್ಯಾಗಿ ಬಿದ್ದರೆ, ಬಂದು ಸೇರುವದು ಸಕಲ ಸಂಪತ್ತು ನಿನ್ನ ಮನೆಗೆ ಬರಲಿರುವ ಭಾಗ್ಯದೇವತೆಗೆ ಸಂಭ್ರಮದ ಸ್ವಾಗತ ನೀಡು. ಗರತಿ ಗರತಿ ಎಂದು ಗೊಡ್ಡು ಶಬ್ದಪಠಣ ಮಾಡುತ್ತ ಕೂಳಿಗೆ ಅಭಾವ ತಂದುಕೊಳ್ಳಬೇಡ

**ಪುಷ್ಪಾ –** ನೀನು ಮಾಟದ ಮದ್ದು.

**ಸುರೇಶ –** ಮಾಡದಿರು ಸದ್ದು

**ಪುಷ್ಪಾ –** ನಿನ್ನಂಥಾ ವಂಚಕನಲ್ಲಿ ವಿಶ್ವಾಸವಿಟ್ಟು ಹಾಳಾಗಿ ಹೋಗುವದು ಜನಾಂಗ !

**ಸುರೇಶ –** ಜಗತ್ತು ಗತ್ತುಗಾರನಿಗೆ ಬಗ್ಗಿ ಸಲಾಮು ಹೊಡೆಯುವದು ಪುಷ್ಪಾ ಇದೋ ತೆಗೆದುಕೋ ನೂರು ರೂಪಾಯಿ, ಬ್ರಾಂಡಿ, ವ್ಹಿಸ್ಕಿ, ಸೋಡಾ ತರಸು. ಈ ಎರಡು ನೂರು ರೂಪಾಯಿ ನಿನಗೆ ಸಲ್ಲಬೇಕಾದ ವೇಟಿಂಗ ಫೀ ಖುಷಿಯಾಗಿರು, ಮಾಯದ ಬಲೇಬೀಸಿ ಹಕ್ಕಿಯನ್ನು ಬಿಗಿ ಮುಂದೆ ಹೆಚ್ಚಿನ ಚಾನ್ಸ ಇನ್ನರ್ಧ ಘಂಟೆಯಲ್ಲಿ ಎಲ್ಲವೂ ಸಿದ್ಧವಾಗಿರಬೇಕು (ಪುಷ್ಪಾ ಒಳಗೆ ಹೋಗುವಳು, ಶೇಖರನನ್ನು ಕರೆತಂದ) ಪುಷ್ಪಾ ಪುಷ್ಪಾ ಕಮಾನ

**ಪುಷ್ಪಾ –** (ಬಂದು) ಏನು?

**ಸುರೇಶ –** ನಾನು ಮೊದಲೇ ಹೇಳಿದಂತೆ ಉದಾರ ಹೃದಯದ ಶೇಖರಬಾಬು ಇವರೇ,

**ಪುಷ್ಪಾ –** ಇಂದು ಪೇಪರಿನಲ್ಲಿ ಇವರ ಫೋಟೊ ಬಂದಿದೆಯಲ್ಲ

**ಸುರೇಶ –** ಹಾ. ಹಾ. ಅವರೇ ಇವರು ದಾನಶೂರ ಧರ್ಮ ರತ್ನಾಕರನ ಅವತಾರ ಏ ಏ ಅಣ್ಣಾ.

**ಅಣ್ಣಾ –** ಯಾಕ್ರಿ ಯಪ್ಪಾ.

ಸುರೇಶ – ಸಾಮಾಗ್ರಿ ಸಿದ್ಧವಾಗಿದೆಯೇ?

ಅಣ್ಣಾ – ತಯಾರ ಐತ್ರಿ.

ಸುರೇಶ – ಹೂಂ ಕೊಡು, ಎಲ್ಲರಿಗೂ ಒಂದೊಂದು ಗ್ಲಾಸ (ಎಲ್ಲರೂ ಕುಡಿಯುವರು) ಶೇಖರಾ ಇದು ವಿಲಾಸ ವೈಭವದ ವೈಜಯಂತಿಯ ಶಿಖರ (ಕುಡಿಯುವರು) ರಾಜು ರೂಪಾಯಿಗಳನ್ನು ತಾ, ಪುಷ್ಪಾ ನೀನಾವ ನಂಬರ ತೆಗೆದಿರುವಿ

ಪುಷ್ಪಾ – ಡಬಲ್ ಝೀರೋ

ಸುರೇಶ – ರಾಯಿಟ್ ರಾಯಿಟ್ ಶೇಖರಾ ನಾವು ಬರುವ ವರೆಗೆ ಇಲ್ಲಿಯೇ ವಿಶ್ರಮಿಸು, ನಡೆ ಅಣ್ಣಾ (ಸನ್ನೆಮಾಡಿ ಸುರೇಶ ಅಣ್ಣಾನು ಹೋಗುವರು)

## ನಾಲ್ಕನೆಯ ದೃಶ್ಯ

(ರಸ್ತಾ ಪರದೆ ಬೀಳುವದು, ಅಣ್ಣಾ, ಸುರೇಶ ಬರುವರು)

ಅಣ್ಣಾ – ಎಷ್ಟ ರೂಪಾಯಿ ಅದಾವರಿ ಧನ್ಯಾರ !

ಸುರೇಶ – ೧೦,೦೦೦ ರೂ ಮಗನೇ ಹತ್ತ ಸಾವಿರ,

ಅಣ್ಣಾ – ಹಂಗಾರ ನನಗೆಷ್ಟು?

ಸುರೇಶ – ನಾ ಕೊಟ್ಟಷ್ಟು?

ಅಣ್ಣಾ – ಕೊಡು ಹಂಗಾರ ನನ್ನ ಧನಿ ಹೊಲ್ಯಾರ ಹುಡುಗಿ ಹಾದಿನೋಡತಿದ್ದಾಳೆ ಬಹಳ ಖುಷಿಯಾಕ್ಕಾಳಿಂದು.

ಸುರೇಶ – ತೆಗೆದುಕೊ ಈ ಚೀಟಿಯನ್ನು ನಾಳೆ ಮುಂಜಾನೆ ಶೇಖರನಿಗೆ ಕೊಡು, ಹಣೆಗೆ ಹಚ್ಚಿಕೊಂಡು ತಿರುಗಾಡಲಿ.

ಅಣ್ಣಾ – ನೀವು ಹ್ಯಾಗಾದರೂ ಬಹಳ ಮಜಾ ಅದೀರಿ ಬಿಡ್ರಿ.

ಸುರೇಶ – ಅಂದ್ರೆನೇ ಕಾಲೂರಿ ನಿಂತಿದೆ ನಮ್ಮ ಕ್ಯಾಂಪು.

ಅಣ್ಣಾ – ಹೊಕ್ಕೇನ್ರಿ ಹೊತ್ತಾಗುತ್ತೆ.

**ಸುರೇಶ –** ತಿರುಗಿ ಬರುವದು ಯಾವಾಗ?

**ಅಣ್ಣ್ಯಾ –** ಸವರಾತ್ರ್ಯಾಗ

**ಬಸವಂತಿ –** ಬಾ, ಹಿಂಗ (ಕಿವಿಯಲ್ಲಿ ಹೇಳುವನು)

**ಅಣ್ಣ್ಯಾ –** ಅದರ ಕಾಳಿಜಿ ಬಿಡ್ರಿ ಸಾವಕಾರ (ಸುರೇಶ ಹೋಗುವನು.) (ಬಸವಂತಿ ಬರುವಾಗ ಅಡ್ಡಗಟ್ಟಿ) ಬೆಟ್ಟಿಯಾಗದ ಬಹಳ ದಿವಸಾತು.

**ಬಸವಂತಿ –** ಭೆಟ್ಟಿ ಆಗದ ಇದ್ದದ್ದ ನೆಟ್ಟಗಾತು.

**ಅಣ್ಣ್ಯಾ –** ಆ ನಿನ್ನ ಗಂಡಗ ಹೆದರೀ ಏನ ಮತ್ತ

**ಬಸವಂತಿ –** ಅವಗ್ಯಾಕ ಹೆದರಲಿ ನಾನು ನಿನ್ನಂಥವಗ ಗತ್ತ ಹಚ್ಚಿ ಹೊತ್ತು ಹಾಕುವಾಗ ಅವ ಅಂದ್ರ ಏನು?

**ಅಣ್ಣ್ಯಾ –** ಆದರೂ ನಿನ್ನ ಗಂಡಾ ಬಾಳ ಬೆರಕಿ ಬಸವಂತಿ.

**ಬಸವಂತಿ –** ಹಂಗ ಬೆರಿಕಿ ಅಲ್ಲ ಸರಬೆರಕಿ.

**ಅಣ್ಣ್ಯಾ –** ಅಂದ ನನ್ನ ಫಜೀತಿ ದೇವರಿಗೆ ಗೊತ್ತು ! ನಿನಗಟ ಏನಾರ ಕೊಡಬೇಕಂದ್ರ ಸವಡ ಸಿಗಲಿಲ್ಲ.

**ಬಸವಂತಿ –** ಈಗರ ತಂದಿ ಇಲ್ಲ ಮತ್ತೆ?

**ಅಣ್ಣ್ಯಾ –** ಹಂಗS ಬರಾಣ ದೇವರ ಹತ್ತರ.

**ಬಸವಂತಿ –** ಹೌದುಮತ್ತ, ಧೂಫಾ ಇಲ್ಲಾ ದೀಫಾ ಇಲ್ಲಾ, ಬಂದೆ ನಿನ್ನಗುಡಿಗೆ ವರಾ ಇಲ್ಲಾ, ಶಾಪ ಇಲ್ಲಾ ಹೋಗ ನಿನ್ನ ಮನಿಗೆ.

**ಅಣ್ಣ್ಯಾ –** ಬಸವಂತಿ ನಿನ್ನ ಪ್ರೀತಿ ಒಂದು ಇದ್ದರ ಸಾಕು ನೋಡ ನನಗೆ ರೊಕ್ಕಕ್ಕ ಹಿಂದ ಮುಂದ ನೋಡು ಮನಸ್ಯಾನ ಅಲ್ಲ ನಾ

**ಬಸವಂತಿ –** ನನಗ ಗೊತ್ತು ಐತಿ ಅದು ನೀಯಾಕ ಹೇಳ್ತಿ ಸ್ವತಃ ದುಡಿದುದ್ದಾದರ ಹಿಂದ ಮುಂದ ನೋಡಿಯನ್ನು ಹರಾಮ ಗಂಟು ಯಾರದೊ ರೊಕ್ಕಾ ಯಲ್ಲವ್ವನ ಜಾತ್ರಿ ಉದೋ ಅಂದ ಹೋಗಾಕ ಏನು ಗಂಟು ಹೋಗ್ಯೆತಿ ಬಾಳ ಚಾಲಕ ನೋಡ ನೀ.

**ಅಣ್ಣ್ಯಾ –** ಅಂತೂ ನಿನ್ನ ಸುತ್ತ ಮುತ್ತ ಗಿರಾಕಿನ ಬಾಳ

**ಬಸವಂತಿ –** ಏ ಹೊಗ ಗಿರಾಕಿ ಅಂದ್ರ ನಾ, ಕಡ್ಡಿ ಪುಗ್ಗೆ ಮಾರುವಾಕೆ

ಹೋಗುವಾಗ ವಾರಿ ನೋಡಿ ಮೂಗು ಮುರುದು–
ಸೇದುಭಾವಿಕಂಡು ನಾಯಿ ಸಂತೋಷಪಟ್ಟಾಂಗ.

**ಅಣ್ಣಾ** – ಒಬ್ಬರಿಗೂ ಆಂತಪಾರ ಹಚ್ಚಿ ಕೊಡುವದಿಲ್ಲ?

**ಬಸವಂತಿ** – ಕಂಡ ಕಂಡವರ ಕೂಡ ಕಿಸಿಕಿಸಿ ನಕ್ಕರ, ನನಗಂಡ ಬಡದ ಭಾವಿ ಕಾಣಸ್ಯಾನು.

**ಅಣ್ಣಾ** – ಅಂತಾ ಊರ ಬೆರಕಿನ ಮಣಿಸಬೇಕಾದರೆ ನೀನು ಮತ್ತ ಗನಬೆರಕಿ ನಿನಗೂ ಒಮ್ಮೆಮ್ಮೆ ಇದರ ಹಚ್ಚತಾನಲ್ಲ

**ಬಸವಂತಿ** – ಅವ ಎಲ್ಲಾ ಇದರ ಹಚ್ಚತಾನ ನಾ ಕೇಳಬೇಕಲ್ಲ, ಮೀಸಿ ಕಿತ್ತು ಕೈಯ್ಯಾಗ ಕೊಟ್ಟೇನ, ಮೂಸಿ ನೋಡಾಕ.

**ಅಣ್ಣಾ** – ನೀ ಏನ ಎಲ್ಲಾ ಬಲ್ಲಾಕಿ.

**ಬಸವಂತಿ** – ನಿಮ್ಮಂಥಾ ಮುಲ್ಲಾಗೋಳು ಭಾಳಮಂದಿ ಭೆಟ್ಟಿ ಆಗತಾರೋ ಅಣ್ಣಾ

**ಅಣ್ಣಾ** – ಅವರಿಗೆಲ್ಲ ಇದಪರಿ ಏನು

**ಬಸವಂತಿ** – ಇಲ್ಲದಿದ್ದರ ಕಾಲೂರಿ ನಿಂತೇನ ನಾ

**ಅಣ್ಣಾ** – ಮತ್ತ ನನಗೂ ಅದಗತ್ತ ಹಚ್ಚತಿಯೋ. ಏನರ ಆಟ ಮಸಾಲಿ ದ್ವಾಸಿ ತಿನಸ್ತಿಯೋ,

**ಬಸವಂತಿ** – ಇಕಾ, ಇದಕS ನನಗ ಸಿಟ್ಟು ಬರೋದು

**ಅಣ್ಣಾ** – ಯಾಕ ಸಿಟ್ಟು ಬಂತು?

**ಬಸವಂತಿ** – ಅದು ಮಂದಿಮ್ಯಾಗ ಕಾರಣ

**ಅಣ್ಣಾ** – ಹೌದ, ಕೆಲಿಕೋ ಮಿಲ್ಲಿನ ಮಸರಾಯಿ ಮಲ್ಲ

**ಬಸವಂತಿ** – ಏನಂತಂದಿ ಕೊಡಬಾರದ ಗಡಾನ

**ಅಣ್ಣಾ** – ಇಲ್ಲಾ ಕೊಳ್ಳಾಗ ನಾನ ಕಟ್ಟಾವ.

**ಬಸವಂತಿ** – ಕೊಳ್ಳಾಗ ಕಟ್ಟೂದ ತಂದಿಯೇನು?

**ಅಣ್ಣಾ** – ನಿನ್ನೆ ಹೊಡತಾ ಕೊಟ್ಟೇನಿ ಭಾರಿ ಸಾವಕಾರ ಮನೀನ ಅಲ್ಲೇ ಸಿಕ್ಕತೀ ಚಪಲಹಾರ

**ಬಸವಂತಿ –** ಚಪಲಹಾರಾ ಹಾಕ್ಕೊಂಡು ಅಡ್ಯಾಡುದರಾಗ ಯಾರರ ಚಪ್ಪಲ ಹಾರಾ ಹಾಕ್ಯಾರು

**ಅಣ್ಯಾ –** ಏನ ಬಂದ್ರೂದಕ್ಷಾಕ ಸಾವುಕಾರ ಸುರೇಶಪ್ಪ ಇರುವಾಗ ನಮಗೇನು ಚಿಂತಿ

**ಬಸವಂತಿ –** ಅವನ ಬಲಾನ ಬಲ ನಿನಗ

**ಅಣ್ಯಾ –** ಇಲ್ಲದಿದ್ದರ ಹ್ಯಾಂಗ ಕಂಬ ಇಲ್ಲದ ಮನಿ ಸೇರತಿದ್ದೆ ಗಡತರನ ರೊಟ್ಟಿ ತಿನ್ನಾಕ

**ಬಸವಂತಿ –** ಸುರೇಶಪ್ಪಗ ಎಲ್ಲಾರು ಹೆದರತಾರಲ್ಲ ಅಣ್ಯಾ

**ಅಣ್ಯಾ –** ಇಲ್ಲದಿದ್ದರ ಭೂಮಿಗೆ ಬೆಂಕಿ ಹಚ್ಚೂ ಮಗ ಅವ ಕಡಮಿಪೈಕಿ, ಯಲ್ಲ ! ದೀಪಾಹಚ್ಚಿ, ಬೆಂಕಿ ಹಚ್ಚಿ, ಹೋಕೊಂತ ನಿಂದ್ರು ಮಗಾ ಅವಾ

**ಬಸವಂತಿ –** ಎಲ್ಲೇ ಐತಿ ಚಪಲಹಾರಾ !

**ಅಣ್ಯಾ –** ಐತಿ ಕಿಸೆದಾಗ,

**ಬಸವಂತಿ –** ಹಂಗಾರ ನಾ ಹೊಕ್ಕೆತೀನಿ

**ಅಣ್ಯಾ –** ಇನ್ನೊಂದು ಚೂರು ನಿಂದ್ರಲ್ಲ

**ಬಸವಂತಿ –** ಚಪಲಹಾರಾ ಕಿಸೆದಾಗ ಇಟ್ಟುಕೊಂಡು ತೆಪ್ಪಗಾಗಿ ನಿಂತರ ಬೆಪ್ಪಾ ತುಪ್ಪದ ದ್ವಾಸಿ ಹ್ಯಾಂಗ ಸಿಗಬೇಕು.

**ಅಣ್ಯಾ –** ತಿಳಿತು ಬಿಡು ಅಂದೆ, ಬಪ್ಪರೆ ಬಸವಂತಿ, ಏನು ಕಳವಂತಿ ಕೋಲಮಿಂಚಿನಂಥಾ ಮಾತ ಎಳಿ ಬರೆ

**ಬಸವಂತಿ –** ಮತ್ತ ಹ್ಯಾಂಗ ನಿಂತೆಲ್ಲ ಉದ್ದಕ ಅಳ್ಳಾವರದ ಹಳುವಿನಾಗ ಬೆಳೆದ ಬಿದರಿನಂತೆ

**ಅಣ್ಯಾ –** ಮತ್ತ

**ಬಸವಂತಿ –** ಒಮ್ಮೆ ಹೇಳಿಂದ ಅಲ್ಲೇನ ಅದು ತಿರಗ ಮುರಗ ಪೀಡಸಬಾರದು ಹೆಂಗಿಸರ್ನ್ನ ಕಾಡಿದವರು ಹಂದಿಯಾಗಿ ಹುಟ್ಟತಾರ, ಮುಂದಿನ ಜನ್ಮದಾಗ

ಅಣ್ಣ್ಯಾ – ಮತ್ತ ಗಂಡಸರಿಗೆ ಇಂಗು ಹಚ್ಚಿ ಪಾರಾಗೋ ಹೆಂಗಸರು ಮಂಗ್ಯಾ ಆಗಿ ಹುಟ್ಟತಾರ ಅಂತಲ್ಲಾ ಸುಳ್ಳೋ ಖರೇನೋ

ಬಸವಂತಿ – ಚಳ್ಳಹಣ್ಣ ತಿನಸಬ್ಯಾಡ ಬಂದಗಿಂದಾನು ಗಡಾ ಕೊಡೋ ಮಾರಾಯಾ

ಅಣ್ಣ್ಯಾ – ಗಣಪತಿ ಗಣಪತಿ ಮೋರಯಾ. ಪುಂಡಿಪಲ್ಲೆ ಸೋರಯಾ

ಬಸವಂತಿ – ಎಲ್ಲಿ ಚಪಲ್ಹಾರಾ ಎಲ್ಲೆತಿ

ಅಣ್ಣ್ಯಾ – ಇಕಾ (ಕಿಸೆಯೊಳಗೆ ಕೈ ಹಾಕಿ ತೋರಿಸುವನು)

ಬಸವಂತಿ – ಒಳಗಿನಿಂದ ತೋರಸ್ತಿಯಲ್ಲಾ?

ಅಣ್ಣ್ಯಾ – ಮಂದ್ಯಾಗ ತೋರಸು ಸಾಮಾನೇನು ಅದು

ಬಸವಂತಿ – ಹೊಕ್ಕೇನಿ ನೋಡು ಹಂಗಾರ (ಹೋಗ ಹತ್ತುವಳು)

ಅಣ್ಣ್ಯಾ – ಕೊಡತೇನಿ ಕೊಡತೇನಿ ಹೋಗಬ್ಯಾಡ.

ಬಸವಂತಿ – ತಾ ಮತ್ತೆ

ಅಣ್ಣ್ಯಾ – ನಿನ್ನ ಕೈಯಾಗ ಕೊಡುದಿಲ್ಲ

ಬಸವಂತಿ – ಮತ್ತೇನ ಮಾಡತಿ,

ಅಣ್ಣ್ಯಾ – ಕೊಳ್ಳಾಗ ಕಟ್ಟತೀನಿ

ಬಸವಂತಿ – ಅದು ಬ್ಯಾಡಾ,

ಅಣ್ಣ್ಯಾ – ಯಾಕ ಬ್ಯಾಡ

ಬಸವಂತಿ – ದಾರಿ ಮ್ಯಾಗ ಯಾರರ ನೋಡಿದ್ರ

ಅಣ್ಣ್ಯಾ – ಅದಕೇನ ಆಗತ್ತೇಳ

ಬಸವಂತಿ – ಕಟ್ಟ ಹಂಗಾರ ಲಗೂನ ಯಾರರ ಬಂದಗಿಂದಾರು

ಅಣ್ಣ್ಯಾ – ಕಣ್ಣ ಮುಚಿಗೊಂಡು ನಿಂದ್ರು ಯಾರೂ ಕಾಣೂದಿಲ್ಲಾ

ಬಸವಂತಿ – ಲಗೂ ಕಟ್ಟಿಬಿಡು. (ಕಟ್ಟುವಾಗ ಬಸವಂತ ಬರುವನು)

ಬಸವಂತ – ಎಲೇ ಮಗನೇ ಅಣ್ಣ್ಯಾ ಆಕಿ ಬೆನ್ನ ಬಿಡುವಲ್ಲಿ ಅಲ್ಲಲೇ ಹಂಗಹದ್ದ ಆಗಿ ಹೋಗಿಬಿದ್ದೀ

**ಅಣ್ಣ್ಯಾ –** ಬಾ ಮಾವಾ ಕಣ್ಣಾಗ ಅರ್ಜಿಗುಳ್ಳಿ ಆಗಿತ್ತು. ಒಪ್ಪೆಸರಿನವ್ರು ಯಾಲಕ್ಕಿ ತಿಂದು ಊದಿದ್ರ ಹೋಕೈತಂತ ಹೇಳಿದ್ರು ಅದಕ ಅಕ್ಕನ ಕೂಡ ಊದಿಸಿಕೊಳ್ಳಾಕ ಬಂದೀನಿ

**ಬಸವಂತಿ –** ಊದಿಸಿಕೊಳ್ಳಾಕ ಬಂದಿದ್ಯೋ ಊದಾಕ ಬಂದಿದ್ಯೋ

**ಅಣ್ಣ್ಯಾ –** ಅಕ್ಕನ್ನರ ಕೇಳೋ ಮಾರಾಯಾ

**ಬಸವಂತಿ –** ಅವನ ತೆಲಿ ಕೆಡಾಕ ಹತ್ತ್ಯೈತಿ ತಮ್ಮಾ

**ಅಣ್ಣ್ಯಾ –** ಹಂಗ ಕಾಣತ್ತ ನನಗೂ

**ಬಸವಂತ –** ಕೆಡಸಾಕಂತೂ ಹತ್ತೀದಿ, ಪೂರಾ ಕೆಡ್ಲಿ ಆಮ್ಯಾಲೆ ತಗೋತೇನಿ ಕೊಡ್ಲಿ ಎಲೆ ಅಣ್ಣ್ಯಾ. ಇನ್ನೊಮ್ಮೆ ಈಕಿ ಕೂಡ ನಿಂತಿದ್ದ ನೋಡಿದಿನಿ ಅಂದರ ಮಗ್ಗಲೆಲಬು ಮುರಿತೇನ ಹೆಡಗಿ ಗಡತರ ಘಟಗಾಸುತಗೊಂಡು ಕೊಡ್ಲಿ ಮುಂಗೈಗೆ ಹಾಕಿ ಘುಡಾರಿ ಆಗ್ಯಾನ ಮೊಮ್ಮಗ

**ಬಸವಂತಿ –** ಇರ್ಲಿ ಬಿಡಬಾರದ ಯಾಕ ಒದರ್ಯಾಡತಿ

**ಬಸವಂತ –** ಎಲೆ ಯಾಕಲೇ, ಗೂಗಿಮಾರಿಯವನ ಅಲ್ಲೆ ಡೊಂಬರ ಆಟ ನಡದೈತಿ ಡೊಳ್ಳು ಬಡಿಯಾಕರ ಹೋಗು ಕೊಕ್ಕರೆ ಮೀಸಿ ಬಿಟಗೊಂಡು ಬೆಳ್ಳಿ ಕಣ್ಣು ಬಟ್ಟುಮಾಡಿ, ತೀರ್ರಾ, ತಿರಪೇನ ಸುಟ ಬತ್ತಿ,

**ಅಣ್ಣ್ಯಾ –** ಹೊಕ್ಕೇನಿ ಯಕ್ಕಾ ಸಂಜೀಮುಂದ ಆಟ ಬಂದು ಊದು ಕಣ್ಣ, ಕಣ್ಣು ಬಾಳ ಕೆಂಪು ಆಗ್ಯೈತಿ

**ಬಸವಂತ –** ಎಲೆ ಅಡಪು, ಅಲ್ಲೆ ಯಾರರ ಕೂಡರ ಊದಿಸಿಗೊ ಹೋಗಲೇ

**ಅಣ್ಣ್ಯಾ –** ಹೊಕ್ಕೀನಿ ಯಕ್ಕಾ (ಸನ್ನೆ ಮಾಡಿ ಹೋಗುವನು)

**ಬಸವಂತ –** (ಅಣ್ಣ್ಯಾ ಹೋಗುವಾಗ) ಹೇಳಿದ್ದು ಕೇಳಿಲ್ಲೇನ್ಲೇ ಮತ್ತ ಅಕಿ ಬ್ಯಾರೆ ಹೇಳಬೇಕೇನು ಏ ಬಸವಂತಿ ನಡಿ ನಿಂದರಬ್ಯಾಡ ಹಗಹಗ ಹ್ಯಾಂಗ ನೋಡತಾನ ನೋಡು ಹರಕೊಂಡು ತಿನ್ನುವಂಗ, ಯಾಕ ನೀನು ನಿಂತಬಿಟ್ಟಿ ಗಟ್ಟಿ ಅದಂಗ ಕಾಣತೀರಽಳ

**ಅಣ್ಣ್ಯಾ –** ಅಯ್ಯಯ್ಯೋ ಚಪಲ್ದಾರ (ಹೋಗುವನು)

**ಬಸವಂತಿ –** ಮೂಳಾ ನಿನಗಂತೂ ಬುದ್ಧೀನ ಇಲ್ಲ

ಬಸವಂತ – ಬಾಳ ಮಂದಿ ಅಂತಾರ ಊರತುಂಬ ಸುದ್ದಿ ಆಗೈತಿ ಗೊತ್ತ ಇಲ್ಲೇನ ನಿನಗ

ಬಸವಂತಿ – ಇರ್ಲಿ ನಾ ಶ್ಯಾಣ್ಯಾ ಅದೀನಿ

ಪದ....

ಬಸವಂತ – ನಡೆ ನಡೆ ಮನೆ । ಸಡಗರ ಸಾಕು
ಬಿಡು ಈ ಬಿಂಕ । ನಡಿ ಮನೆಗೆ

ಬಸವಂತಿ – ಗಡಿಬಿಡಿ ಗಂಡಾ । ಕಾಡುತಲಿಹನು
ಲಡಬಡ ಮಾಡಬ್ಯಾಡ । ನಡಿಮನೆಗೆ ॥ ಪಲ್ಲ ॥

ಬಸವಂತ – ಏತಕ್ಕೆ ಈ ಪರಿ ಕಾಡುತಲಿಹನು

ಬಸವಂತಿ – ಕೇಡನು ಮಾಡಲು । ಕೆಣಕುವೆ ಏನೋ

ಬಸವಂತಿ – ಹಾಗಲ್ಲಾ

ಬಸವಂತ – ನಾ ಬಲ್ಲೆ

ಬಸವಂತ – ಗುಣವತಿ ನಾನು । ಮನವನು ತಿಳಿದು
ನುಡಿನೀ ಸವಿಗಳ । ಸುರಿಸುತಲಿ
(ಬಸವಂತಿ ಹೋಗುವಳು ಆನಂದ ಬರುವನು)

ಬಸವಂತ – ನಮಸ್ಕಾರ್ರೀ ಯಪ್ಪಾ

ಆನಂದ – ನಮಸ್ಕಾರ ಬಸವಂತಪ್ಪ ಕ್ಷೇಮವಾಗಿರುವಿಯಾ?

ಬಸವಂತ – ಹೀಗಿದೇನಿ ನೋಡ್ರಿ

ಆನಂದ – ಮತ್ತೇನು ಸಮಾಚಾರ?

ಬಸವಂತ – ಯಪ್ಪಾ ದೊಡ್ಡ ಸಾವಕಾರ ಅದಾರಲ್ರಿ ಅವ್ರನ್ನ ಸುರೇಶಪ್ಪ ಪುಷ್ಪವ್ವ ಕೂಡಿ ಹಾಳ ಮಾಡಾಕ ಹತ್ಯಾರ ನೋಡ್ರಿ

ಆನಂದ – ನನ್ನ ಕಿವಿಯವರೆಗೂ ಸುದ್ದಿ ಬಂದು ಮುಟ್ಟಿದೆ ಊರ ತುಂಬೆಲ್ಲ ಹಬ್ಬಿದೆ ನಾನಾದರೂ ಏನು ಮಾಡಲಿ

ಬಸವಂತ – ಏನನೋಡ್ರಿ ದೊಡ್ಡೊವ್ರು ಸುಮ್ನ ಹಾಳಾಗಿ ಹೋಗಬಾರದಂತಾ ಹೇಳಿದೆ. ಇದರ ಮ್ಯಾಲೆ ನಿಮ್ಮ ಮರ್ಜಿರಿಯಪ್ಪಾ ದಿನಾ ಓಸಿಗೆ ಸಾವಿರಗಟ್ಟಲೆ ಹಚ್ಚತಾರಂತ್ರಿ

ಆನಂದ – ಹೌದು ಬಸವಂತಪ್ಪ ಏನು ಮಾಡಬೇಕೆಂಬುದೇ ತಿಳಿಯದಾಗಿದೆ

ಬಸವಂತ – ಯಪ್ಪಾ ಯಪ್ಪಾ ಅಕಾ ಬಂದರನೋಡ್ರಿ ಸೂಳೆಮ್ಮನೂ ಅದಾಳ್ರಿ

ಆನಂದ – ಹೌದು ಬಾ ಬಸವಂತಪ್ಪ ಮರೆಯಾಗಿ ಸಮಾಚಾರ ತಿಳಿಯುವಾ

(ಮರೆಯಾಗುವರು ಪುಷ್ಪಾ ರಾಜಶೇಖರ ಬರುವರು)

**.... ಪದ ....**

ರಾಜಶೇಖರ – ಇಂದಿರೆ ಮನs ಮಂದಿರೆ, ಮನಮಂದಿರೆ

ಇಂದಿರೆ ಮನಮಂದಿರೆ ।

ಪುಷ್ಪಾ – ಸುಂದರಾ ಗುಣ ಸುಂದರಾ ।

ರಾಜಶೇಖರ – ತನುತಂಪಾಗಿ ಇಂಪಾಗಿ ಅರಳಿಹಳೇ ಬನರಾಣಿಯು ॥೧॥

ಪುಷ್ಪಾ – ಎಲೆ ಹೆಸರಿಗಿ । ಹೆಸರಾದ ಕಾಲ ।

ಪುಷ್ಪಾ – ಸುಮಬಾಣವನು ಮೈದೋರು ಕಾಲಾ ।

ರಾಜಶೇಖರ – ವನರಾಣಿ ಮೈಮರೆಯುವ ಕಾಲಾ । ವನರಾಣಿಯು॥೨॥

ರಾಜಶೇಖರ – ಪುಷ್ಪಾ ನೀನೇನು ಚಿಂತಿಸಬೇಡ, ನಿನ್ನ ಚಿಂತೆಯನ್ನು ನನ್ನ ಪಾಲಿಗೆ ಬಿಟ್ಟು ಕೊಡು,

ಪುಷ್ಪಾ – ನೋಡಿ ಸಂಪೂರ್ಣ ವಿಚಾರ ಮಾಡಿರಿ ನಿಮ್ಮ ಪ್ರಪಂಚ ಬಹುದೊಡ್ಡದು ಏನೋ ಇಷ್ಟರಮಟ್ಟಿಗೆ ಋಣ ಹರಿದುಕೊಂಡು ಬಿಡೋಣ ಹೆಂಡರು ಮಕ್ಕಳು ತಮ್ಮ ಇಷ್ಟೆಲ್ಲ ನಿಮ್ಮ ಸಂಸಾರ

ರಾಜಶೇಖರ – ಬೇಕಾದಷ್ಟು ಭಾರವಾಗಿರಲಿ, ನನಗದರ ಭಯವಿಲ್ಲ; ನೀನು ಮಾತ್ರ ಕೈ ಬಿಡಬೇಡ

ಪುಷ್ಪಾ – ನಾನು ನಿನಗಾಗಿ ಎಂಥಾ ತ್ಯಾಗಕ್ಕಾದರೂ ಸಿದ್ಧಳು ಅದರಂತೆ ನೀವಾದರೂ.....

**ರಾಜಶೇಖರ** – ಎಂಥಾ ತ್ಯಾಗಕ್ಕಾದರೂ ಸಿದ್ಧನೆ ನನ್ನ ಸರ್ವಸ್ವವೇ ನೀನು.

**ಪುಷ್ಪಾ** – ಹಿಂದಿನಿಂದ ಕೈಕೆ ತಟ್ಟೀರಿ? ನಡೆಯಿರಿ ಹೋಗೋಣ ವೇಳೆ ಬಹಳವಾಯಿತು (ಹೋಗುವರು)

**ಬಸವಂತ** – ನೋಡಿದಿರಾ ಯಪ್ಪಾ ಆಣೆ ಸುದ್ದಾ ಮಾಡಿದರು

**ಆನಂದ** – ನೋಡಿದೆ, ನೋಡಿ ನಿರ್ಬಲನಾದೆ

**ಬಸವಂತ** – ನಾ ಹೋಕ್ಕಿನಿ ಯಪ್ಪಾ ನಮಸ್ಕಾರ;

**ಆನಂದ** – ನಮಸ್ಕಾರ – ಹೋಗು, (ಬಸವಂತ ಹೋಗುವನು) ದುರ್ದೈವಿ ಭಾರತಮಾತೆ, ನಿನ್ನ ಪಾವನವಾದ ಗರ್ಭದಲ್ಲಿ ಇಂಥಾ ಕೆಟ್ಟ ಕ್ರಿಮಿಗಳು ಕ್ರೀಡಿಸುತ್ತಿರುವವೇ? ಪುಣ್ಯ ಭೂಮಿಯಾದ ನಿನ್ನ ಮೇಲೇ ಇಂಥಾ ಅಸಹ್ಯ ಕೃತಿಗಳು ಸಾಗುತ್ತಿರುವವೆ? ವೇಶ್ಯಾ ಓ.ಸಿ. ಸೆರೆಯ ಅಖಂಡ ತಾಂಡವ ನೃತ್ಯ ನಡೆದಿದೆ ಎಡೆಬಿಡದೆ. ಅಮ್ಮಾ ಜವಾಹರನಂಥ ಪುತ್ರ ರತ್ನವನ್ನು ಹೆತ್ತ ನೀನು, ಇಂಥಾ ಕರ್ಮಚಾಂಡಾಲರಿಗೆ ಜನ್ಮ ಕೊಟ್ಟು ನಿನ್ನ ಕೀರ್ತಿಗೆ ಕಲಂಕ ತಂದೆಕೊಂಡೆಯಾ? ಹಾಳಾಗಿ ಹೋಗುತ್ತಿದೆ ಜನಾಂಗ ದುಷ್ಟ ವ್ಯಸನಗಳಿಗೆ ಒಳಗಾಗಿ ಅಪಸ್ವರದ ಕೂಗು ದೇಶವನ್ನು ದಾರಿದ್ರ್ಯದ ದಾರಿಯಲ್ಲಿ ತಳ್ಳುವ, ಇಂಥ ತಿಳಿಗೇಡಿಗಳನ್ನು ಹಡೆಯುವದಕ್ಕಿಂತ ನೀನು ಬಂಜೆಯಾಗಿದ್ದರೆ ಲೇಸಿತ್ತು. ಆಗಲಿ ಅಣ್ಣನವರನ್ನು ಈ ಕೆಟ್ಟ ಕೃತಿಗಳಿಂದ ಬಿಡಿಸುವ ಪ್ರಯತ್ನ ಮಾಡುವೆ ಮುಂದೆ ದೈವೇಚ್ಛೆ

**.....ಪದ.....**

ಸಿರಿಲೋಲ । ಜಗಪಾಲ ।
ಶುಭನೀಡು । ಹೇಶ್ಯಾಮ ॥ ಪಲ್ಲ ॥
ಎನ್ನ ಕರುಣಿಸು ಮಾನ ।
ನಾನು ನಿನ್ನಯ ಧ್ಯಾನ ।
ಪೊರೆ ದೇವ ಶುಭ ಚರಿತ ॥ ೧ ॥

(ಪುಷ್ಪಾನ ಮನೆ, ಆನಂದ ಬರುವನು)

**ಐದನೆಯ ದೃಶ್ಯ**

**ಪುಷ್ಪಾ** – ಓಹೋ ಆನಂದಬಾಬು, ಬನ್ನಿ ಕುಳಿತುಕೊಳ್ಳಿ

ಆನಂದ – ಬಂದಿರುವೆ

ಪುಷ್ಪಾ – ಕಾಫೀ ತರಲೇ

ಆನಂದ – ಬೇಡಮ್ಮಾ ಇದೀಗ ತೆಗೆದುಕೊಂಡು ಬಂದಿರುವೆ

ಪುಷ್ಪಾ – ತಮ್ಮಂಥವರು ಬಡವರ ಮನೆಗೆ ಬರುವದೆಂದರೆ ಭಾಗ್ಯದೇವರೆ ಬಂದಂತೆ

ಆನಂದ – ಭಾಗ್ಯದೇವತೆ ಭವಣಿಗೀಡಾಗಿ ಬಳಲುತ್ತಿದ್ದಾಳೆ

ಪುಷ್ಪಾ – ಎಣೆ ಇಲ್ಲದ ಭಾಗ್ಯಕ್ಕೆ ಭವಣಿ ಎಂದರೆ ಅಪಹಾಸ್ಯವೇ? ಬಾಬು

ಆನಂದ – ಹೌದು ಪುಷ್ಪಾ

ಪುಷ್ಪಾ – ಕೇವಲ ನನ್ನ ಮಾತಿನ ಮೇಲೆಯೇ ನಿರ್ಧಾರಪಡಿಸುವಿಯಲ್ಲ

ಆನಂದ – ನನಗೊದಗಿದ ಸಮಸ್ಯೆಯ ಪರಿಹಾರವೀಗ ನಿನ್ನಿಂದಲೇ ದೊರೆಯ ಬೇಕಾಗಿದೆ

ಪುಷ್ಪಾ – ತಮ್ಮಂಥವರ ಪ್ರಶ್ನೆ ಪರಿಹಾರ ಮಾಡುವ ಯೋಗ್ಯತೆ.....

ಆನಂದ – ಅದೆ ನಿನ್ನಲ್ಲಿ ಅದೆ

ಪುಷ್ಪಾ – ಅದೆಂತು ಸಾಧ್ಯ ಬಾಬು

ಆನಂದ – ಪುಷ್ಪಾ ಅನುಭವದ ಅಖಂಡ ಸಿದ್ಧಸಾಧನೆಯು ಬೆಂಬತ್ತಿರುವ ಒಂದು ಶಬ್ದಕ್ಕೆ ಸಾವಿರ ಪುಸ್ತಕಗಳ ಸಾಹಿತ್ಯ ಸರಿಯಾಗಲಾರದು

ಪುಷ್ಪಾ – ಆನಂದಬಾಬು ತಾವು ಓದಿಕೊಂಡವರು ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಬುದ್ಧಿ ಮಟ್ಟದ ಮುಂದೆ ನನ್ನ ಅಲ್ಪ ಅನುಭವದ ಬೆಲೆ ಏನು? ತಮ್ಮ ಪಾಂಡಿತ್ಯದ ಮುಂದೆ ನಾನಾವತೃಣ?

ಆನಂದ – ಆ ತೃಣವಿಂದು ನಮಗೆ ಘನವಾಗಿದೆ.

ಪುಷ್ಪಾ – ಗಹನವಾದ ವಿಚಾರಗಳನ್ನೇ ಮಾಡುತ್ತಿರುವಿರಲ್ಲಾ. ಈ ದಾಸಿಯಿಂದ ಏನಾಗಬೇಕು ತಮ್ಮಂಥವರ ಉಪಚಾರದ ಸಲುವಾಗಿಯೇ ನಾವು

ಆನಂದ – ನಾನಿಂದು ಭಿಕ್ಷುಕನಾಗಿದ್ದೇನೆ

ಪುಷ್ಪಾ – ಹಾಗಾದರೆ ಆತಂಕವೇನು ಹೇಳಿ

**ಆನಂದ** – ನಮ್ಮ ಅಣ್ಣ ನನ್ನು ಬಿಟ್ಟುಕೊಡು

**ಪುಷ್ಪಾ** – ಯಾರನ್ನು?

**ಆನಂದ** – ರಾಜಶೇಖರನನ್ನು

**ಪುಷ್ಪಾ** – (ನಕ್ಕು) ರಾಜಶೇಖರನನ್ನು....

**ಆನಂದ** – ಹೌದು ಪುಷ್ಪಾ

**ಪುಷ್ಪಾ** – ಸಾಧ್ಯವಿದೆಯೇ ಬಾಬು

**ಆನಂದ** – ಎಲ್ಲವೂ ನಿನ್ನಾಧೀನ

**ಪುಷ್ಪಾ** – ಇವು ನನ್ನ ಮನಸ್ಸಿಗೆ ವಿರೋಧವಾದ ಮಾತುಗಳು

**ಆನಂದ** – ನನ್ನ ವಿನಂತಿಯನ್ನು ಮಾನ್ಯಮಾಡು

**ಪುಷ್ಪಾ** – ನಿನ್ನ ವಿನಂತಿ ನನಗೆ ದುರ್ಗತಿ

**ಆನಂದ** – ಮತಿಗೇಡಿಯಾದವನನ್ನು ವಿಚಾರಿಸಿರಿ

**ಪುಷ್ಪಾ** – ನಾನೀಗಲೇ ನಿರ್ಧರಿಸಿದ್ದೇನೆ

**ಆನಂದ** – ಏನೆಂದು?

**ಪುಷ್ಪಾ** – ಈ ಬೇಡಿಕೆಯನ್ನು ಪೂರೈಸಲು ಅಸಮರ್ಥಳೆಂದು

**ಆನಂದ** – ನೀನು ದುರ್ಬಲ ಹೃದಯದವಳಲ್ಲ

**ಪುಷ್ಪಾ** – ದುರ್ಬಲತೆಯ ದ್ಯೋತಕವಲ್ಲ ನಿರ್ಧಾರದ ನಿಲುಮೆ

**ಆನಂದ** – ಬದಲಿಸಲು ಸಾಧ್ಯವಿಲ್ಲವೇ?

**ಪುಷ್ಪಾ** – ಸಾಧ್ಯವಿದ್ದರೂ ಬಿಟ್ಟು ಕೊಡಲಾರೆ.

**ಆನಂದ** – ನೀನು ಬಿಟ್ಟು ಕೊಡದಿದ್ದರೂ ಭೆಟ್ಟಿಕೊಟ್ಟು ಹೋಗುವದು

**ಪುಷ್ಪಾ** – ನಿಷ್ಕಾರಣವಾಗಿ ನನಗೇಕೆ ಆರೋಪ,

**ಆನಂದ** – ಆರೋಪವಲ್ಲ ಸಕಾರಣ ಸೂಚನೆ.

**ಪುಷ್ಪಾ** – ಆನಂದರಾವ ಬಿಟ್ಟು ಬಿಡು ಈ ಬೇಡಿಕೆಯನ್ನು

**ಆನಂದ** – ಮತ್ತೇತರ ಸಲುವಾಗಿ ನಾನಿಲ್ಲಿಗೆ ಬರಲಿ !

ಪುಷ್ಪಾ – ನನ್ನ ಮೇಲೆ ಆಶೆ ಇದ್ದರೆ ಈಡೇರಿಸಿಕೋ

ಆನಂದ – ನನ್ನಣ್ಣನ ಊಟದ ವಸ್ತುವಾದ ನೀನು ನನ್ನತ್ತಿಗೆ ಶೋಭಾನ ಸಮಾನ, ಹೇಸಿ ವಿಚಾರಗಳು ಸುಳಿಯಲಾರವು. ಅಣ್ಣನ ಅರ್ಧಾಂಗಿ ಹೆತ್ತ ತಾಯಿ.

ಪುಷ್ಪಾ – ನಿಮ್ಮ ಅಣ್ಣನ ಅರ್ಧಾಂಗಿಯಲ್ಲ ನಾನು ಸೂಳೆಯೆಂದು ಸಂಬೋಧಿಸು ಬಾಬು. ಧರ್ಮಪತ್ನಿಯಾಗುವ ಗುಣವೂ ನನ್ನಲ್ಲಿಲ್ಲ. ನಿಮ್ಮ ಅಣ್ಣನ ಕಷ್ಟಸುಖಗಳ ಸಮಭಾಗಿನಿ, ನಾನಲ್ಲ ಅಲ್ಲದೇ ನಿಮ್ಮ ಅಣ್ಣನ ರೂಪ ಯೌವನಕ್ಕೆ ಮನಸೋತವಳೂ ನಾನಲ್ಲ ಆತನಲ್ಲಿರುವ ಶ್ರೀಮಂತಿಕೆ ಮಾತ್ರ ನನ್ನ ಸ್ವಾಮಿ ಅತನನ್ನಾಶ್ರಯಿಸಿದ ಧನವೇ ನನ್ನ ದೊರೆ. ಹಣಕ್ಕಾಗಿ ಗುಣ ವರ್ಣನೆ ಮಾಡುತ್ತ ಕಪಟ ಪ್ರೇಮಬೀರಿ ಕಂಗಳ ಕಟಾಕ್ಷದಿಂದ ಕಾಮಕೇಳಿಯ ರಚಿಸಿ ಧನ ಸೆಳೆವ ದಾನವಿ ನಾ, ಸೂಳೆ ಯಾದವಳು ಧರ್ಮಪತ್ನಿಯ ಸ್ಥಳವನ್ನು ತುಂಬಿಕೊಡಬಹುದೆ?

ಆನಂದ – ಅಂತರಂಗದ ಮಾತು ಏನೇ ಇರಲಿ, ಒಲಿದುಬಂದವಳೆಂದೇ ನನ್ನ ಭಾವನೆ.

ಪುಷ್ಪಾ – ತಪ್ಪು ತಿಳುವಳಿಕೆ ನಾನೊಲಿದುದು ಸುರೇಶನಿಗೆ ಮಾತ್ರ, ಸತಿಯಾಗಿ ಬಾಳಬೇಕಾಗಿತ್ತು ಅವನಿಗಾಗಿ.

ಆನಂದ – ಅಂತೇಕೆಸಗಲೆಲ್ಲ?

ಪುಷ್ಪಾ – ಗತಿಸಿಹೋದ ಮಾತು ಮರೆತುಬಿಟ್ಟಿರುವೆ. ಪುನಃ ನೆನಪಿಗೆ ತಂದು ಕೊಡಬೇಡ ನಾನು ನಿನ್ನ ಉಪಭೋಗದ ವಸ್ತು ಆಗಬೇಕೆಂದು ಇಚ್ಛಿಸಿದರೆ ಮಾತ್ರ.....

ಆನಂದ – ಮತ್ತೆತ್ತದಿರು ಪುಷ್ಪಾ ನಾನಂಥವನಲ್ಲ.

ಪುಷ್ಪಾ – ನಾಬಲ್ಲೆ ಬಾಬು, ನಿಮ್ಮ ಹೃದಯ ಹೂವಿನ ಪರಿಮಳದಿಂದ ತುಂಬಿ ಘಮಘಮಿಸುತ್ತಿದೆ, ಆನಂದಾ ನಾನು ಸೂಳೆ, ನನ್ನಲ್ಲಿ ಅಣ್ಣ, ತಮ್ಮ ಭಾವ, ಮೈದುನ, ಆಳು, ಒಡೆಯ, ಮಾವ, ಅಳಿಯ ಯಾವ ಸಂಬಂಧವು ಇಲ್ಲ. ತಂದೆ ರತಿಕ್ರೀಡೆಮಾಡಿದನಂತರ ಮಗನು ಬಂದು ಮೋಹಿಸಬಹುದು, ಇದು ಸುಳ್ಳಲ್ಲ ಜಗದಲ್ಲಿ ಪ್ರತಿನಿತ್ಯ ನಡೆದಮಾತು.

**ಆನಂದ –** ದಯವಿಟ್ಟು ನನ್ನ ಮಾತನ್ನು ಮನ್ನಿಸು,

**ಪುಷ್ಪಾ –** ಸಾಧ್ಯವಿಲ್ಲ

**ಆನಂದ –** ರಾಜಶೇಖರನು ತಲೆ ಎತ್ತಿನಂತಿರುವ ನಮ್ಮ ಮನೆತನದ ಒಬ್ಬ ಮಹಾ ಮುಖ್ಯ ಮುಂದಾಳು, ಆತನು ಈ ರೀತಿ ಕೆಟ್ಟ ಚಟಗಳಿಗಂಟಿಕೊಂಡರೆ ನಾವು ರಸಾತಲಕ್ಕಿಳಿಯುವೆವು ಆತನ ಧರ್ಮಪತ್ನಿ ಶೋಭಾತಾಯಿ ಸತಿಧರ್ಮವನ್ನು ಬಿಡದೆ ಪಾಲಿಸುವ ಆದರ್ಶ ಮಹಿಳೆ. ಆ ಸಾಧ್ವಿಯ ಸಂಸಾರ ಸರಳ ಸಾಗಲೆಂಬ ಉದಾತ್ತಧ್ಯೇಯಕ್ಕಾದರೂ ನಮ್ಮಣ್ಣನನ್ನು ಬಿಟ್ಟಕೊಡು, ಇದೋ ತೆಗೆದುಕೋ ಈ ಹಣವನ್ನು ಪುಷ್ಪಾ, ನಿನ್ನ ಕಾಲಿಗೆ ಬಿದ್ದು ಬೇಡುವೆ, ಆತನ ಜೀವನ ಆದರ್ಶವಾಗಬೇಕಾಗಿದೆ. ನನ್ನ ಅಭ್ಯುದಯಕ್ಕಾದರೂ ಧಾರೆ ಎರೆದುಕೊಡು, ಆತನ ಮಗ ಶಂಕರನಿಗಾದರೂ ರಾಜಶೇಖರನನ್ನು ದಾನವಾಗಿ ನೀಡು.

**ಪುಷ್ಪಾ –** ಆನಂದಾ ಹೆಚ್ಚಿಗೆ ಮಾತುಬೆಳಿಸಬೇಡ ಹೊರಟುಹೋಗು ಇಲ್ಲಿಂದ ಬಲೆಗೆ ಬಿದ್ದ ಬೇಟೆಯೆನ್ನು ಬಿಟ್ಟುಕೊಡುವಷ್ಟು ಮೂರ್ಖಳು ನಾನಲ್ಲ. ನಿಮ್ಮಣ್ಣನ ಉಪಭೋಗದ ವಸ್ತುವಾಗಿ ಎಷ್ಟು ಹಣ ಸೆಳೆದುಕೊಂಡಿರುವೆನೋ? ಆ ಹಣವಲ್ಲದೆ ನನ್ನ ಸಂಪತ್ತಿನ ಅರ್ಧಭಾಗ ಕೊಡುವೆ. ನೀನು ಉಪಭೋಗದ ವಶನಾಗು, ನನ್ನ ಕೈಗೊಂಬೆಯಾಗು.

**ಆನಂದ –** ಪುಷ್ಪಾ?

**ಪುಷ್ಪಾ –** ಮುಚ್ಚುಬಾಯಿ ಮೊದಲು ಇಲ್ಲಿಂದ ತೊಲಗು. (ಹಣದ ಗಂಟನ್ನು ಪುಷ್ಪಾ ಒಗೆಯುವಳು, ಆನಂದ ತೆಗೆದುಕೊಂಡು ಹೋಗುವನು ನಂತರ ರಾಜಶೇಖರ ಬರುವನು. ಪುಷ್ಪಾ ಅಳುತ್ತಿರುವಳು)

**ರಾಜಶೇಖರ –** ಏಕೆ ಪುಷ್ಪಾ ಮುಖ ಬಾಡಿದೆಯಲ್ಲ,

**ಪುಷ್ಪಾ –** ರವಿ ಕಿರಣದ ಅಭಾವದಿಂದ.

**ರಾಜಶೇಖರ –** ಅತ್ತು ನೋಯಿಸಬೇಡ.

**ಪುಷ್ಪಾ –** ಅಪಮಾನ ಮಾಡಿಸಬೇಕೆಂದೇ ನನ್ನ ಸ್ನೇಹ ಮಾಡಿದಿರಾ?

**ರಾಜಶೇಖರ –** ನಲುಮೆಯಿಂದ ಬಂದವನು ಅಪಮಾನ ಮಾಡಿಸುವನೇ?

ಪುಷ್ಪಾ – ಇದುವರೆಗೂ ನಡೆದುದನ್ನು ನೆನಸಿಕೊಂಡರೆ ಅಳುವು ಇಮ್ಮಡಿಯಾಗುವದು.

ರಾಜಶೇಖರ – ಯಾರು ಕಾರಣ

ಪುಷ್ಪಾ – ನನ್ನ ನಿಮ್ಮ ಸ್ನೇಹ

ರಾಜಶೇಖರ – ಅರ್ಥವಾಗಲಿಲ್ಲ

ಪುಷ್ಪಾ – ಇನ್ನು ಮೇಲೆ ನೀವು ನನ್ನ ಮನೆಗೆ ಬರಬೇಡಿರಿ

ರಾಜಶೇಖರ – ನಾನೇನು ತಪ್ಪು ಮಾಡಿರುವೆ

ಪುಷ್ಪಾ – ತಪ್ಪನ್ನು ನೀವು ಮಾಡಿರದಿದ್ದರೂ, ಜನರು ತಪ್ಪು ತಿಳಿದು,

ರಾಜಶೇಖರ – ಯಾರಪ್ಪನ ಗಂಟೇನು ಹೋಗಿದೆ?

ಪುಷ್ಪಾ – ಗಂಟಿಗೆ ಸಂಬಂಧ ಪಟ್ಟವರೇ ಮನ ಹರಣ ಮಾಡಿದರೆ?

ರಾಜಶೇಖರ – ಯಾರವರು. ಹೇಳು ಬೇಗ ಹೇಳು ನನ್ನ ಹೊಟ್ಟೆಯ ಮಗನನ್ನೇ ಹರಿದು ಹಾಕುವೆ,

ಪುಷ್ಪಾ – ನನಗಾಗಿ ನೀವೇಕೆ ಅನರ್ಥಕ್ಕೆ ಗುರಿಯಾಗುವಿರಿ. ನಿಮ್ಮ ಮನೆತನದ ಮರ್ಯಾದಿಯನ್ನೇಕೆ ಕಳೆಯುವಿರಿ, ಮರ್ಯಾದೆ ಶೀಲರಾದ ನೀವು ಮನೆ ಹಿಡಿದು ಕೂಡ್ರಬೇಕು,

ರಾಜಶೇಖರ – ಅದು ನನ್ನಿಚ್ಛೆ

ಪುಷ್ಪಾ – ನಿಮ್ಮಿಚ್ಛೆಗೆ ನಿಮ್ಮವರೇ ವಿರೋಧವಿರುವಾಗ,

ರಾಜಶೇಖರ – ಹೆಚ್ಚಾಗಿ ಹಿಂಜರಿಯಬೇಡ. ಬಂದವರಾರೆಂಬುದನ್ನಷ್ಟು ಹೇಳು ಮುಂದೇನಾಗುವದನ್ನು ನೋಡುವೆಯಂತೆ.

ಪುಷ್ಪಾ – ಶೇಖರಬಾಬು ನಾನು ಕೇವಲ ನಿಮ್ಮ ರೊಕ್ಕಕ್ಕೆ ಮೋಹಿಸಿರುವೆನೆಂದು ನಿಮ್ಮ ತಮ್ಮ ಹಣದ ಗಂಟನ್ನು ತಂದು ಇದನ್ನು ತೆಗೆದುಕೊಂಡು ನಮ್ಮಣ್ಣನನ್ನು ಬಿಟ್ಟುಕೊಡು ಎಂದು ಬಹು ಪರಿಯಾಗಿ ಪೀಡಿಸಿ ಬಾಯಿಗೆ ಬಂದಂತೆ ಮಾತಾಡಿದನು.

ರಾಜಶೇಖರ – ಏನು ಆನಂದನೇ

ಪುಷ್ಪಾ – ಹುಂ ಆನಂದನೇ ಸತಿ ಸಹೋದರನ ಕೈಗೊಂಬೆಯಾದ ನೀವು

ನನ್ನನ್ನೇಕೆ ಕೊರಳಿಗೆ ಹಾಕಿಕೊಂಡಿರಿ

**ರಾಜಶೇಖರ –** ಏಲಾ ದುಷ್ಟಾ, ಸಾಕಿ ಸಲುಹಿ ವಿದ್ಯೆ ಕಲಿಸಿದ ಉಪಕಾರವನ್ನು ಈರೀತಿ ತೀರಿಸುವಿಯಾ, ತಾಳು ಸರಿಯಾಗಿ ಶಿಕ್ಷೆ ವಿಧಿಸುವೆ.

**ಪುಷ್ಪಾ –** ದುಡಕಬೇಡಿ ದಯವಿಟ್ಟು ನನ್ನನ್ನೇ ತೊರೆದು ಬಿಡಿ. ಕ್ಷುಲ್ಲಕಳಾದ ನನಗಾಗಿ ಸಿಟ್ಟಿಗೆದ್ದು ತಮ್ಮನನ್ನು ನಿಂದಿಸಿದರೆ ಜನರಾದರೂ ಏನಂದಾರು?

**ರಾಜಶೇಖರ –** ಜನರು ಏನಾದರು ಅನ್ನಲಿ ಯಾರ ಭಯವೂ ನನಗಿಲ್ಲ.. ಯಾರನ್ನು ಕೈಯೊಡ್ಡಿ ಕೇಳಿಲ್ಲ ನನ್ನ ಧನ ನನ್ನ ಮನ ನನ್ನ ಹಿಂದೆ ಇದೆ

**ಪುಷ್ಪಾ –** ನಿಮ್ಮ ಆಸ್ತಿಯಲ್ಲಿ ಆನಂದನ ಹಕ್ಕು ಇದೆ.

**ರಾಜಶೇಖರ –** ಇಲ್ಲಿಲ್ಲ ಅದೆಂದಿಗೋ ಹಾಳಾಗಿ ಹೋಗಿದೆ ನನಗೆ ಹೇಳುವ ಧೈರ್ಯ ದೇವನಲ್ಲಿಯೂ ಕೂಡಾ ಇಲ್ಲ

**ಪುಷ್ಪಾ –** ನಿಮಗೆ ಬುದ್ಧಿ ಹೇಳುವ ಶಕ್ತಿ ಸದ್ಯದ ದೇವರಿಗೂ ಇಲ್ಲ.

**ರಾಜಶೇಖರ –** ಆ ಚಾಂಡಾಲನ್ನು ಮನೆಯಿಂದ ಹೊರದಬ್ಬುವದು.....

**ಪುಷ್ಪಾ –** ನೋಡಿರಿ ಇನ್ನೂ ವಿಚಾರ ಮಾಡಿರಿ.

**ರಾಜಶೇಖರ –** ಎಲ್ಲಿಯ ವಿಚಾರ! ಅವನನ್ನು ಹೊರದುಡಲು ವಿಚಾರದ ಅವಶ್ಯವೇ ಇಲ್ಲ. ತಿಂದು ಬಿದ್ದಿರುವದನ್ನು ಬಿಟ್ಟು ಕ್ಷುಲ್ಲಕ ಕೆಲಸ ನಡೆಸಿರುವನು.

**ಪುಷ್ಪಾ –** ಅವನ ಸೊಕ್ಕಿನ ನುಡಿಗಳನ್ನು ಕೇಳಿದರೆ ವಿಷ ಕುಡಿದು ಸಾಯಬೇಕು. ಏನೋ ನಿಮ್ಮ ಮುಖ ನೋಡಿ ಉಳಿದಿದ್ದೇನೆ.

**ರಾಜಶೇಖರ –** ಹಾಗೇನಾದರೂ ಪ್ರಮಾದ ಮಾಡೀ. ಆ ದುಷ್ಟನಿಗಾಗಿ ನೀನೇಕೆ ವಿಷ ಕುಡಿಯುವೆ ವಿಷಭರಿತ ಮಾತನಾಡಿದ ಆ ಮದಾಂಧನಿಗೆ ವಿಷ ಹಾಕಿಬಿಟ್ಟರೆ ಮುಂದಿನ ಕಂಟಕವು ಕಡಿದು ಹೋಗುವದು

**ಪುಷ್ಪಾ –** ಅಷ್ಟು ಮಾಡಿದರಂತೂ ನಮಗಾರೂ ಎದುರಿಲ್ಲ.

**ರಾಜಶೇಖರ –** ಮತ್ತೇನು,

**ಪುಷ್ಪಾ –** ನೀನು ಸೂಳಿ. ನಮ್ಮಣ್ಣ ದೊಡ್ಡ ಮನುಷ್ಯ, ಅವನನ್ನು ಬಿಟ್ಟು ಬೇರೆ ಯಾರನ್ನಾದರೂ

**ರಾಜಶೇಖರ** – ಎಂದು ಸಂಭೋಧಿಸಿದನೇ?

**ಪುಷ್ಪಾ** – ಇನ್ನೂ ಏನೇನೋ ಅಂದ, ಅವನೆಲ್ಲ ನಿಮ್ಮ ಮುಂದೆ ಹೇಗೆ ಹೇಳುವದು.

**ರಾಜಶೇಖರ** – ಅಂದರೂ ಅಂದಿರಬಹುದು ಶ್ರೀಮಂತಿಕೆಯಿಂದ

**ಪುಷ್ಪಾ** – ಸ್ವಲ್ಪು ವಿಶ್ರಮಿಸಿರಿ

**ರಾಜಶೇಖರ** – ಇಲ್ಲಾ, ಇವನ ಮರ್ದನ ಮಾಡುವವರಗೆ ನನಗೆ ವಿಶ್ರಾಂತಿಯೇ ಬೇಡ (ಪುಷ್ಪಾ ಸೆರೆ ಹಾಕಿತಂದು ಕೊಡುವಳು ಕುಡಿದು) ಮನಸ್ಸಿಗೆ ಏನೂ ಹಚ್ಚಿಕೊಳ್ಳಬೇಡ, ಆ ಪಶುವಿನ ಇತ್ಯರ್ಥವಾಗದೆ ನನಗೆ ಸಮಾಧಾನವಿಲ್ಲ

**ಪುಷ್ಪಾ** – ಆದಷ್ಟು ಬೇಗ ಬಂದು ಬಿಡಿ ಖರ್ಚಿಗೆ ಸ್ವಲ್ಪು ಹಣ.

**ರಾಜಶೇಖರ** – ತೆಗೆದುಕೊ ನೀನು ಸುಖವಾಗಿದ್ದರೆ ಸಾಕು (ರೂಪಾಯಿಕೊಟ್ಟು ಹೋಗುವನು, ಪುಷ್ಪಾ ನಗುತ್ತ ಹೋಗುವಳು)

## ಆರನೇಯ ದೃಶ್ಯ

(ರಸ್ತಾ)

**ಅಣ್ಯಾ** – ಏ ಚಪಲಹಾರ ಹೊಡತ ಕೊಟ್ಟ ಚಕಪಕ ಚಲವಕ್ಕಿ.

**ಬಸವಂತಿ** – ಯಾಕ ಗೊಗ್ಗಂದನಿ ಗೊರವಂಕಾ

**ಅಣ್ಯಾ** – ನನ್ನ ಗೂರವಂಕನ್ನ ಮಾಡಿಬಿಟ್ಟೆಲ್ಲ

**ಬಸವಂತಿ** – ಗೊರವಂಕ ಆಗದಿದ್ದರ ಸಮಗಾರ ಕಾಗಿ ಆಗು.

**ಅಣ್ಯಾ** – ಮುಂಜೇಲೆದ್ದು ಸಮಗಾರ ಕಾಗಿ ಮಾರಿ ನೋಡಿದ್ರ ಹೊತ್ತು ಮುಳಗುದ್ರೊಳಗ ಹೋಳಿಗಿ ಊಟ (ಕಣ್ಣು ಹೊಡೆಯುವನು)

**ಬಸವಂತಿ** – ಅಂತೂ ಬಿಡಲಿಲ್ಲ ನಿನ್ನ ಕೆಟ್ಟ ಚಟ

**ಅಣ್ಯಾ** – ಕೆಟ್ಟದನ್ನು ಊಟ ಮಾಡಿದವನ**S** ಶ್ಯಾಣ್ಯಾ

**ಬಸವಂತಿ** – ಅದಕ ನಿಂತಿಯೇನು ತಯಾರಾಗಿ?

**ಅಣ್ಯಾ –** ತಯಾರಾಗಿ ನಿಂದರದಿದ್ರ ಹ್ಯಾಗನೋಡು, ಮಾಡಿದ್ದೆಲ್ಲಾ ಮದ್ದುಗುಂಡು ಆದೀತು

**ಬಸವಂತಿ –** ಬಂದೈತಿ ನಿನಗೂ ಹಂಗಾರ.

**ಅಣ್ಯಾ –** ಬಂದದ್ದೆಲ್ಲ ನಿನಗ ಇಟ್ಟೀನಿ ಇನ್ನೇನ ಉಳದೈತೆ.

**ಬಸವಂತಿ –** ಈಟ ಅನ್ನು ನಿನ್ನ ಬಂಡವಲು.

**ಅಣ್ಯಾ –** ನನ್ನ ಬಂಡವಲದ ಬುಡಾನ ಅಗಳ್ಯಾಡಸಾಕ ಹತ್ತಿದೆಲ್ಲ

**ಬಸವಂತಿ –** ಅಂದ್ರ ತಿಳೂದು ಹಕೀಕತ್ತ

**ಅಣ್ಯಾ –** ಪೂರಾ ತಿಳಕೊಂಡು ಬಿಡುವಾಕಿ ನೀ

**ಬಸವಂತಿ –** ಇನ್ನೇನು ಉಳದೈತಿ?

**ಅಣ್ಯಾ –** ನನಗ ಕಡಿಮಿ ಆಗೈತಿ ದಿನಾ ಹೊಸನಾತ

**ಬಸವಂತ –** (ತೆರೆಯಲ್ಲಿ) ಹೊಸನಾತಾ, ಹೊಸನಾತಾ

**ಬಸವಂತಿ –** ತಮ್ಮಾ, ಬಂದ ಬಂಟ

**ಅಣ್ಯಾ –** ಮತ್ತ ಯಾವಾಗ ಬೆಟ್ಟ

**ಬಸವಂತಿ –** ತೋಳಬಂದಿ ಎಂದ ತರತಿ ಅಂದ ಬೆಟ್ಟ (ಹೋಗುವಳು)

**ಬಸವಂತಿ –** (ಬಂದು) ಹೊಸನಾತ, ಹೊಸನಾತ.

**ಅಣ್ಯಾ –** ಗಟಾರ ಹಿಡಿದ ಬಂದಿ ಏನ

**ಬಸವಂತ –** ಗಟಾರ ದಂಡಿ ಹಿಡಿದು ಅಡ್ಡಾಡ್ಯಾಕ ಹಚ್ಚಿಯಲ್ಲ ಮಹಾರಾಯ ಒಬ್ಬನೇ ನಿಂತಿಯಲ್ಲ

**ಅಣ್ಯಾ –** ಮತ್ತ ಯಾರನ ಜೋಡಮಾಡಿಕೊಂಡ, ನಿಂದ್ರ ಅಂದ್ಯಾ.

**ಬಸವಂತ –** ಒಬ್ಬನ ಇರುಪೈಕಿ ಅಲ್ಲಾ ನೀನುಗಲಾಟಿ ಮನುಷ್ಯ ನಿನಗ ಒಂದು ಬಲುಗುಡಮ ಬೇಕೆಬೇಕು ಯಾಕೋ ಏನೋ ಒಬ್ಬನ ನಿಂತೀದಿ.

**ಅಣ್ಯಾ –** ಅಂತಾ ಪ್ರಸಂಗನ ಬಂತಲ್ಲ ಮಾವಾ

**ಬಸವಂತ –** ಆದರೂ ಗನ ಪಕ್ಕಾ ನೀನು.

**ಅಣ್ಯಾ –** ಎದರ ಪಕ್ಕಾ ಬಿಡೋ ನಿನ ಪಾತರಗಿತ್ತಿ ಪಕ್ಕ ನನ್ನಂಥವನ ಮಣ್ಣು

ಮುಕ್ಕಸ್ತಿಯಲ್ಲ ಹಂಗ ಬೆನ್ನ ಹತ್ತೀದಿ

**ಬಸವಂತ –** ನೀನು ಈ ಓಣ್ಯಾಗ ಕಾಲ ಇಟ್ಟೀ ಅಂದ್ರ ಬೇಕಾದಂತ ಕೆಲಸ ಇದ್ದರೂ ಬಿಟ್ಟ ಬರತೇನ

**ಅಣ್ಣ್ಯಾ –** ಹಿಂಗೇನ ಅಂಗಾರ

**ಬಸವಂತ –** ಹೂನಪಾ ಮಾರಾಯಾ ಕೈ ತಕ್ಕೊಂಡು ಬೆನ್ನ ಹತ್ತಿಯಲ್ಲ ಬೇತಾಳನಂತ ಬಾಯಿ ಬೆಲ್ಲದ ಹೇರು ಕೈ ಕಣಜಿರಗಿ ಹುಟ್ಟು ಅಲ್ಲಪ್ಪಾ ಅಣ್ಣ್ಯಾ.

**ಅಣ್ಣ್ಯಾ –** ಮತ್ತೇ ನಂದಿ

**ಬಸವಂತ –** ಇಷ್ಟ ಕೆಲಸಾ ಮಾಡಿಸ್ಥಿಯಲ್ಲಾ ಏನಾರ ಆಟಿ, ಗುಸುಮಿಸಿ

**ಅಣ್ಣ್ಯಾ –** ಎದರಿಂದ ಮಾವಾ.

**ಬಸವಂತ –** ಈಗೇನ ಕೆಲಸ ನಡಿಸೀದಿಯಲ್ಲಾ.

**ಅಣ್ಣ್ಯಾ –** ಯಾವ ಕೆಲಸ ಅಂತೀ

**ಬಸವಂತ –** ಎಕ್ಕಾ ಎಕ್ಕಾ ಅಂತ ತೆಕ್ಕಿ ಬೀಳುವ ಗತ್ತಿನಾಗ ನಿಂತಿಯಲ್ಲ.

**ಅಣ್ಣ್ಯಾ –** ತಿಳಿವಲ್ಲದು ಬಿಡು ನನಗ.

**ಬಸವಂತ –** ಅದ್ಯಾಂಗ ತಿಳಿದೀತು ನಿನಗ ಇರ್ಲಿಬಿಡು ನಿನ್ನ ಊರು ಯಾವದು.

**ಅಣ್ಣ್ಯಾ –** ಹಾಕನಳ್ಳಿ

**ಬಸವಂತ –** ಏನೂ ಅಡ್ಡಿ ಇಲ್ಲ ಬರೋಬರಿ ಆತು ನಮ್ಮ ಎರಡು ಹುಡ್ರು, ಇದ್ದುರು ಗೊತ್ತೈತೇನ ನಿನಗ

**ಅಣ್ಣ್ಯಾ –** ಅವರು ಯಾತರವರು

**ಬಸವಂತ –** ಕುರುಬರು

**ಅಣ್ಣ್ಯಾ –** ಕುರುಬರು ಹೌದು ಅದರಾಗ ಬ್ರಾಹ್ಮಣರೋ, ಲಿಂಗಾಯತರೋ

**ಬಸವಂತ –** ಬಪ್ಪರೇ ಮಗನ

**ಅಣ್ಣ್ಯಾ –** ಯಾಕೊ ಮಾವಾ

**ಬಸವಂತ –** ಯಾಕೂ ಇಲ್ಲ ಬೇಸಿ ಜೋಡ ಆದಿ ಮಟಮಟ ಮಧ್ಯಾಹ್ನದಾಗ

**ಅಣ್ಯಾ –** ನಾ ಎಲ್ಲಿ ಜೋಡ ಆಗೀನಿ ಮಾರಾಯಾ ನಿನಗ ಅಕ್ಕ ಜೋಡ ಆಗ್ಯಾಳ.

**ಬಸವಂತ –** ಅಕ್ಕ ನನಗ ಜೋಡ ಆಗ್ಯಾಳ ಅಕ್ಕಗ ನೀ ಜೋಡ ಆಗಿಯಲ್ಲ ಅಲ್ಲೋ ಅಣ್ಯಾ ಮನ್ಯಾಗ ಕಮತಾ ಗಿಮಿತಾ ಇತ್ತೊ ಇಲ್ಲೋ

**ಅಣ್ಯಾ –** ಇರದೇನ ಮಾಡಿತೋ ಮಾವಾ.

**ಬಸವಂತ –** ಏಸ ಎತ್ತ ಕಟ್ಟಿದ್ದಿ

**ಅಣ್ಯಾ –** ಎರಡ ಎತ್ತ ಅಲ್ಲ ಮಾವಾ.

**ಬಸವಂತ –** ಒಂದು ಕತ್ತಿ ಇತ್ತೋ ಏನ ಕತಿಗರಬು ಇತ್ತೋ.

**ಅಣ್ಯಾ –** ಒಂದು ಕೋಣಾನೂ ಇತ್ತು ಮಾವಾ.

**ಬಸವಂತ –** ಅದಕ ಹಿಂಗ ಆದಿಲೇ ನೀ ಕೋಣ ಇದ್ದಾಂಗ. ಕೋಣಗ ನಿನಗ ಏನೂ ಫರಕ ಕಾಣವಲ್ಲದು ಎಲೇ ಎಲೇ ಹರಕನವರ ತಿರಕ್ಯಾ ಕೋಣಗ ಏನ ಹೆಸರ ಇಟ್ಟಿದ್ದಿ.

**ಅಣ್ಯಾ –** ಕುಡಬಸ್ಯಾ ಅಂತ ಇಟ್ಟಿದ್ದೆ ಎತ್ತ ಇತ್ತ ಮಾವಾ ಇರಕಾಲಾ ಒರೆಕಲಾ.

**ಬಸವಂತ –** ಎರಡೂ ತಳಕ ಬಿದ್ದಿದ್ದು ಏನ.

**ಅಣ್ಯಾ –** ಗೆಜ್ಜೆ ಗೋವಿಂದ ಅಂದ್ರ. ಹಂಗ ಹಿಂಗಾಲ ಎತ್ತೇ ಬರುತ್ತಿತ್ತು. ಕೊಳ್ಳಾಗ ಗಂಟಾ ಹಾಕಿ ಕಂಟಿಗೇರೆ ಕಂಟ್ಯಾ ಅಂದ್ರ ಕುಣಕೋಂತ ಬರುತ್ತಿತ್ತು, ಏನ ಸರಳ ರಸ್ತಾ ಸಿಕ್ಕೀತೇನಪಾ ಮೋಟಿ ಮರದಂತ ಮಾವಾ, ಬರತೇನಿ ಬಹಳ ಹೊತ್ತಾತು.

**ಬಸವಂತ –** ಹೋಗ ಮಾರಾಯಾ ಹಿಂದಕ ಬಾಲಚಿಕ್ಕಿ ಮೂಡಿದಂಗಾತು

(ಹೋಗುವರು)

## ಏಳನೆಯ ದೃಶ್ಯ

**ರಾಜಶೇಖರ –** ಏ, ಏ ಶೋಭಾ

**ಶೋಭಾ –** (ಬಂದು) ಬಂದೆ ಸ್ವಾಮಿ.

**ರಾಜಶೇಖರ –** ಸ್ವಾಮಿ ಎನ್ನಲು ಸನ್ಯಾಸಿ ಏನೇ?

**ಶೋಭಾ –** ಮನ್ನಿಸಿರಿ.

**ರಾಜಶೇಖರ –** ಆನಂದನೆಲ್ಲಿ

**ಶೋಭಾ –** ನನ್ನ ಕೋಣೆಯಲ್ಲಿ

**ರಾಜಶೇಖರ –** ಏನು ಮಾಡುತ್ತಿದ್ದಾನೆ?

**ಶೋಭಾ –** ನಾನರಿಯೆ,

**ರಾಜಶೇಖರ –** ಕರೆ ಅವನನ್ನು (ಕರೆತರುವಳು) ಆನಂದ ನೀನು ನಿನ್ನೆ ಎಲ್ಲಿಗೆ ಹೋಗಿದ್ದೆ.

**ಆನಂದ –** ನಾನೆಲ್ಲಿಗೆ ಹೋಗಿದ್ದೆ

**ರಾಜಶೇಖರ–** ಎಷ್ಟು ಉದ್ಧಟತನದ ಉತ್ತರ ಕೊಡುತ್ತಿರುವೆಯಲ್ಲ

**ಆನಂದ –** ಉದ್ಧಟತನದ ವೃತ್ತಿಗಿಳಿದವರಿಗಿದು ಅನ್ವಯಿಸಬಹುದು.

**ರಾಜಶೇಖರ–** ನಿನ್ನೆ ಯಾರ ಮನೆಗೆ ಹೋಗಿದ್ದಿ, ಏನು ಮಾಡಿದ್ದಿ, ಏನು ನುಡಿದ ಎನ್ನುವದನ್ನು ಬಿಡದೆ ಹೇಳು,

**ಆನಂದ –** ಎಲ್ಲವೂ ತಿಳಿದಿರುವಾಗ ಮತ್ತೆ ನನ್ನನ್ನು ಕೇಳುವದಲ್ಲೇನಿದೆ.

**ರಾಜಶೇಖರ –** ಕೇಳಿರುವೆ, ಕೇಳಿ ತಿಳಿದಿರುವೆ.

**ಆನಂದ –** ಈಗೇನಾಯಿತು.

**ರಾಜಶೇಖರ –** ಆಗುವದೇನು ನಿನ್ನ ಮರ್ಧನ.

**ಆನಂದ –** ಏತಕ್ಕಾಗಿ?

**ರಾಜಶೇಖರ–** ನೀನು ಮಾಡಿದ ಅನುಚಿತ ಕಾರ್ಯಕ್ಕಾಗಿ,

**ಆನಂದ –** ನಾನು ಮಾಡಿರುವದು ನಿನಗೆ ಅನುಚಿತವೆಂದೆನಿಸಿದರೆ ಬೇಕಾದ

ಶಿಕ್ಷೆ ವಿಧಿಸು,

ರಾಜಶೇಖರ – ನಾನು ಬಂದಿರುವದಾದರೂ ಅದಕ್ಕಾಗಿಯೇ, ಸುಮ್ಮನೆ ತಿಂದು ಬಿದ್ದಿರುವದನ್ನು ಬಿಟ್ಟು

ಆನಂದ – ತಿಂದು ಬಿದ್ದಿರಲು ನಾನು ನಾಯಿ ಅಲ್ಲ ಅಣ್ಣಾ,

ರಾಜಶೇಖರ – ನೀನು ನಾಯಿ ಎಂದು ತಿಳಿದಿದ್ದೇನೆ.

ಆನಂದ – ಅಣ್ಣನ ಹೃದಯ ಇಷ್ಟು ಹೊಲಸಾಗಿರುವದೇ!

ರಾಜಶೇಖರ – ನನ್ನ ವಿಲಾಸಕ್ಕೆ ಅಡ್ಡಿ ಬಂದರೆ ನಿನಗಾಗುವ ಲಾಭ.

ಆನಂದ – ಅಣ್ಣಾ ಹೀನ ಕಾರ್ಯವನ್ನು ನೀನು ವಿಲಾಸವೆಂದು ಕರೆಯುವದಾದರೆ ಉದಾತ್ತ ವಿಚಾರವುಳ್ಳ ರಾಜಶೇಖರನ ಹೃದಯ ನರಕದ ಕುಂಡವಾಗಿರಬೇಕು.

ರಾಜಶೇಖರ – ನನ್ನ ಹೃದಯ ನರಕದ ಕುಂಡವೇ ಇರಲಿ ಸ್ವರ್ಗ ಸಿಂಹಾಸನವೇ ಆಗಿರಲಿ ಸೊಕ್ಕು ಉಕ್ಕುತ್ತಿರುವುದೇನು? ನೀರೆರೆದು ವಿಷವೃಕ್ಷವನ್ನು ಬೆಳಸಿದಂತಾಯಿತಲ್ಲ

ಆನಂದ – ವಿಷವೃಕ್ಷದ ವಾಸನೆಯು ಸುಗಂಧಮಯವಾಗಿಯೆಂದು ಒಪ್ಪುತ್ತಿರುವಾಗ ಸುಗಂಧ ಸ್ವಾಭಾವಿಕವಾಗಿ ವಿಷದಂತೆ ಭಾಸವಾಗುವದು

ರಾಜಶೇಖರ – ಎದುರು ನಿಂತು ಮಾತಾಡುವಷ್ಟು ಎದೆಗಾರಿಕೆ ಬಂದಿತೆ?

ಆನಂದ – ಅಂದು ನನ್ನಣ್ಣನ ಹೃದಯದಲ್ಲಿ ಕೋಮಲೆಯ ಕಡಲಾಡುತ್ತಿತ್ತು ಅದರ ಅಮೃತವನ್ನುಂಡು ನಿನ್ನ ಅಸಾಮಾನ್ಯ ವ್ಯಕ್ತಿತ್ವಕ್ಕೆ ಮನಸೋತು ಮೌನವಾಗಿರುತ್ತಿದ್ದೆ. ಆ ಮನವಿಂದು ಕ್ರೂರತನಕ್ಕೆ ಆಲಯವಾಗಿದೆ. ಅದಕ್ಕಾಗಿ ಇಷ್ಟು ಧೈರ್ಯದಿಂದ ಮಾತಾಡಬೇಕಾಗಿದೆ.

ರಾಜಶೇಖರ – ಒದಿಕೆಗಳನ್ನಪೇಕ್ಷಿಸುವಂತೆ ಕಾಣುತ್ತದೆ.

ಆನಂದ – ಸೂಳೆಯ ಮುಂದೆ ಸರ್ವಸವೂ ಶೂನ್ಯವಾಗಿ ಕಾಣುವಾಗ

ರಾಜಶೇಖರ – ಚಾಂಡಲಾ.

ಆನಂದ – ನಾನಲ್ಲ

**ರಾಜಶೇಖರ** – ಬೊಗಳದಿರು ದ್ರೋಹಿ,

**ಆನಂದ** – ಹುಚ್ಚುತನದ ವ್ಯರ್ಥ ತಾಪವಿದು

**ರಾಜಶೇಖರ** – ಎಲೇ ಕತ್ತೆ, ತೊತ್ತಾಗೆ ಬೀಳುವಂತಿದ್ದರೆ ಒಳಿತು, ಇಲ್ಲವಾದರೆ ಎದ್ದೇಳು

**ಆನಂದ** – ಇದು ದೇವತೆಯ ವಾಸ, ಅದಕ್ಕಾಗಿ ನಾ ತೊರೆಯಲಾರೆ.

**ರಾಜಶೇಖರ** – ಅದಾವ ದೇವತೆಯು ಬಂದು ನೆಲೆಸಿರುವಳೋ ಬುದ್ಧಿಗೇಡಿ

**ಆನಂದ** – ಮನೆಯ ಭಾಗ್ಯಲಕ್ಷ್ಮೀ ಸದ್ಗುಣದ ಖಣಿ ನಿನ್ನ ಧರ್ಮಪತ್ನಿ ಶೋಭಾತಾಯಿ, ದೇವತೆ ಅದ ಅವಳಂದು ನಿನ್ನ ರಾಕ್ಷಸಿ ಕಣ್ಣಿಗೆ ಕ್ರೂರವಾಗಿ ಕಂಡುಬಂದುದರಲ್ಲಿ ತಪ್ಪೇನು.

**ರಾಜಶೇಖರ** – ನಾನೂ ಕ್ರೂರನೇ?

**ಆನಂದ** – ಅಲ್ಲವೆನ್ನುವಷ್ಟು ಧೈರ್ಯ ನಿನಗಿದೆಯೇ ಅಣ್ಣಾ ! ಅಂದು ನಿನ್ನ ಹೃದಯ ಮಾನವತೆಯಿಂದ ತುಂಬಿ ತುಳುಕುತ್ತಲಿತ್ತು. ಆದರೆ ಇಂದು ! ಹೇಸಿ ವ್ಯಸನಗಳಿಂದ ಆವರಿಸಿದೆ, ನೀ ಮಾಡುತ್ತಿರುವ ಈ ಕೆಟ್ಟ ಕೆಲಸಗಳು ನಿನ್ನ ಬೆಲೆಗೆ ಕಲಂಕದ ಕಳಸವನ್ನಿಟ್ಟಿವೆ. ತೊರೆದರೆ ಮತ್ತೆ ನೀ ಧರ್ಮ ಮೂರ್ತಿ.

**ರಾಜಶೇಖರ**– ಕರ್ಮ ಧರ್ಮಗಳ ಸಾರ, ಸದುಪದೇಶ ನಿನ್ನಿಂದ ನನಗೆ ಬೇಕಾಗಿಲ್ಲ.

**ಆನಂದ** – ಉಪದೇಶವಲ್ಲ ಅಣ್ಣಾ ! ಇದು ವಿನಂತಿ. ಅತ್ತಿಗೆ ನಿನಗಾಗಿ ಸೊರಗಿ ಸಾಯಲಾಗಿದ್ದಾಳೆ, ಶಂಕರನು ಕೃಶವಾಗಿದ್ದಾನೆ. ನಾನಂತೂ ಹಗಲಿರುಳು ಹಿತಚಿಂತನೆಯಲ್ಲಿಯೇ ಮಗ್ನನಾಗಿದ್ದೇನೆ ಅಣ್ಣಾ ! ಮನೆತನವನ್ನು ಭಗ್ನಗೊಳಿಸುವ ವಿಘ್ನಗಳನ್ನು ತೊರೆದುಹಾಕಿ ಮೊದಲಿನ ಮನುಷ್ಯಾನಾಗು.

**ರಾಜಶೇಖರ** – ಅಂದರೆ ನಾನೀಗ ಪಶುವೆ?

**ಆನಂದ** – ಅದಕ್ಕಿಂತಲೂ ಎಷ್ಟೋ ಪಾಲು ಕಡಿಮೆ.

**ರಾಜಶೇಖರ** – ...ಬಂಧು ದ್ರೋಹಿ, ಹಿರಿಯಣ್ಣ ಹಡೆದಪ್ಪನಿಗೆ ಸರಿ ಎಂದು ಬೊಗಳುತ್ತಿದ್ದಿಯಲ್ಲಾ ! ಎಲ್ಲಿ ಅಡಗಿತೋ ನಿನ್ನ ವೇದಾಂತಾ.

**ಆನಂದ** – ಈಗ ನಾನು ಅಲ್ಲವೆಂದನೇ !

ರಾಜಶೇಖರ– ಸಾಕಷ್ಟು ಅವಮಾನ ಮಾಡಿದ್ದಲದೆ ನನ್ನ ಮನೋಹರಿಗೆ ಬಾಯಿಗೆ ಬಂದಂತೆ ಮಾತಾಡಿರುವೆಯಾ?

ಆನಂದ – ಅಣ್ಣಾ, ಅವಳು ಮನೋಹರಿಯಲ್ಲ, ಸಕಲ ಸಿರಿಯನ್ನು ಉಪಾಯದಿಂದ ಅಪಹರಿಸಿ ನಮ್ಮ ಕುಟುಂಬವನ್ನೇ ನಿರ್ಗತಿಕರನ್ನಾಗಿ ಮಾಡುವ ನಿರ್ದಯಿ.

ರಾಜಶೇಖರ – ನಿರ್ದಯಿ ಅಲ್ಲಾ, ನನ್ನ ಮನಸ್ಸಿಗೆ ಉಲ್ಹಾಸವನ್ನುಂಟು ಮಾಡುವ ದಯಾಮಯಿ.

ಆನಂದ – ವೇಶ್ಯಾ ವ್ಯಾಮೋಹದ ಮಧ್ಯ ನಿಶೆಯೇರಿದ ನಿನಗೀಗ ಯಾವದೂ ಬೇಡಾಗಿದೆ! ನಮ್ಮ ಸರ್ವಸ್ವವನ್ನು ನಾಸಪಡಿಸುವದಕ್ಕಾಗಿ ಅಖಂಡ ಆಯುಷ್ಯ ಅವಳಿಗೆ ವರ್ಧಿಸುತ್ತಲಿದೆ. ಅಣ್ಣಾ ವಸ್ತುವಿನ ನಾಶಬೇಗ ಆಗುವದಿಲ್ಲ ! ಅದರ ಅಂತಿಮಾವಸ್ಥೆ ಪ್ರಾಯಶ್ಚಿತ್ತದಲ್ಲಿ,

ರಾಜಶೇಖರ – ಏ ಚಾಂಡಾಲ ! (ಅಷ್ಟರಲ್ಲಿ ಶೋಭಾ)

ಶೋಭಾ – ವಿಚಾರ ಶೀಲನಾದ ತಮ್ಮನನ್ನು ! ನಿರ್ಧಯತನದಿಂದ ನಿಂದಿಸುವದರಲ್ಲಿ ಯಾವ ಪುರುಷಾರ್ಥವಿದೆ?

ರಾಜಶೇಖರ– ನಡುವೆ ನೀನೇಕೆ?

ಶೋಭಾ – ಅಯೋಗ್ಯ ಕಾರ್ಯಗಳು ನನ್ನ ದೊರೆಯ ಕೈಯಿಂದ ಆಗಬಾರದೆಂದು,

ರಾಜಶೇಖರ – ಎಲೆ ಮುರುಳೇ ನೀವಿಬ್ಬರೊಂದಾಗಿ ಈ ಕಾರ್ಯವು ಮಾಡಿದಂತಿದೆ

ಆನಂದ – ನಿರಪರಾಧಿಯಾದ ಅತ್ತಿಗೆಯಿನ್ನು ನಿಂದಿಸಿದರೆ, ನರಕದ ಹುಳುವಾಗುವಿ.

ಶೋಭಾ – ಅವಾಚ್ಯವನ್ನಾಡದಿರು ಮೈದುನ ಕೋಪದ ಭರದಲ್ಲಿ, ಅವರು ನಿಮಗೆ ಹಿರಿ ಅಣ್ಣ

ಆನಂದ – ಬಲ್ಲೆ ನಾನದನು ತಾಯೆ

ರಾಜಶೇಖರ – ನನಗೆ ಗತ್ತು ಹೆಚ್ಚುವಿರಾ? (ಶೋಭಾನನ್ನು ಹೊಡೆಯುವ)

ಆನಂದ – ನನ್ನನ್ನು ಬೇಕಾದಷ್ಟು ದೂಷಿಸು ಆದರೆ ಆ ಮಹಾಸಾಧ್ವಿಯನ್ನು

ಹಿಂಸಿಸಬೇಡ

**ಶೋಭಾ –** ಆನಂದನು ನಿಮ್ಮ ತಮ್ಮನಲ್ಲವೇ? ಆತನಿಗಾಗಿ ನಿಮಗಿದ್ದ ಮಾನ ಎಲ್ಲಿ ಹೋಯಿತು?

**ರಾಜಶೇಖರ –** ಇಷ್ಟು ಅನ್ಯೋನ್ಯವಾಗಿ ನೀವು ಮಾತನಾಡುತ್ತಿರುವುದನ್ನು ನೋಡಿದರೆ..... ನಿಮ್ಮಬ್ಬರಲ್ಲಿ ಪ್ರಣಯ ಬೆಳೆದು ಬಂದಂತಿದೆ?

**ಆನಂದ –** ಮುಚ್ಚುಬಾಯಿ ಅಣ್ಣ ! ವಿವೇಕದ ಸೀಮೆಯನು ದಾಟಿ ಮಾತನಾಡುತ್ತಿರುವಿ

**ರಾಜಶೇಖರ –** ಎಲೆ ಜಾರಿಣಿ, ಇವನು ನಿನ್ನ ವಿಟ ಪುರುಷನಲ್ಲವೇ?

**ಶೋಭಾ –** ದೇವ ದೇವ

**ಆನಂದ –** ಚಾಂಡಾಲಾ ತಾಯಿ ಮಕ್ಕಳ ನಡುವೆ ಮೋಹದ ಕೋಟೆ ಕಟ್ಟಲು ಪ್ರಯತ್ನಿಸುವಿಯಾ? ಕತ್ತು ಹಿಚುಕಿ ಕೊಂದು ಬಿಟ್ಟೇನು

**ರಾಜಶೇಖರ –** ನನ್ನನ್ನು ಕೊಲ್ಲುವಷ್ಟು ಸಾಮರ್ಥ್ಯ ನಿನಗಿದೆಯೇ?

**ಆನಂದ –** ಕರ್ಮವನ್ನು ಕೊಲ್ಲುವ ಶಕ್ತಿ ಧರ್ಮಕ್ಕಿಲ್ಲವೆಂದು ಅದಾರು ಹೇಳುವರು

**ರಾಜಶೇಖರ –** ಎಲೋ ಕ್ರೂರ ಹಾವೇ, ಎಷ್ಟು ಘೂತ್ಕರಿಸುವಿ?

(ಕಪ್ಪಾಳಕ್ಕೆ ಹೊಡೆಯುವನು)

**ಆನಂದ –** ಸುಬುದ್ಧಿಯ ಶೆಲೆ ಬತ್ತಿ ದುರ್ಬುದ್ಧಿ ಬಂದು ನೆಲಸಿದೆ ನನ್ನಣ್ಣನ ಹೃದಯದಲಿ

**ರಾಜಶೇಖರ –** ಹೊರಡು ಮೊದಲು ಮನೆಬಿಟ್ಟು.

**ಆನಂದ –** (ಅಳುತ್ತಾ) ಅತ್ತಿಗೆ

**ಶೋಭಾ –** ಅಳಬೇಡಪ್ಪಾ ತಿಳಿಯದೇ ತಪ್ಪು ಮಾಡಿದ್ದಾರೆ

**ರಾಜಶೇಖರ –** ರಮಿಸು ನಿನ್ನ ರಮಣನನ್ನು

**ಶೋಭಾ –** ಇಂತೇಕೆ ಕಠಿಣ ನುಡಿಯುವಿರಿ. ಸ್ನಾನ ಮಾಡಿ ಊಟ ತೀರಿಸಿ ಒಂದೆರಡು ತಾಸು ವಿಶ್ರಾಂತಿ ಪಡೆದರೆ ಎಲ್ಲವೂ ಸರಿಯಾಗುವುದು
(ಆನಂದ ಹೋಗುವನು)

ರಾಜಶೇಖರ – ನಿನ್ನ ಮುಖವನ್ನೇ ನೋಡುವದು ನನಗೆ ಬೇಡಾಗಿರುವಾಗ ನಿನ್ನ ಕೈಯೊಳಗಿನ ಕೂಳು ಯಾರಿಗೆ ಬೇಕು, ಹೂಂ ಕೊಡು ನಿನ್ನ ಕೊರಳೊಳಗಿನ ಚಂದ್ರಹಾರವನ್ನು....

ಶೋಭಾ – ಈಗ ಮನೆಗೆ ಬಾರದೇ ಮೂರು ದಿನಗಳಾಗಿದ್ದವು, ನಿಮ್ಮ ಬರವನ್ನೇ ಕಾಯುವ ನನಗೆ ಉಪವಾಸವೇ ಗತಿಯಾಗಿದೆ. ಸ್ವಲ್ಪಾದರೂ ಊಟ ಮಾಡಿದರೆ ನನಗೆ ಊಟಕ್ಕೆ ಅಪ್ಪಣೆ ಸಿಗುವದು,

ರಾಜಶೇಖರ – ನನ್ನಪ್ಪಣೆಯೇಕೆಬೇಕು? ಆನಂದನಿರುವನಲ್ಲ.

ಶೋಭಾ – ಶಿವ ಶಿವ ಪತಿದೇವ.

ರಾಜಶೇಖರ – ಕೊಡು ಹಾರವನ್ನು (ಗುದ್ದಿ ಕೆಡವಿ ಹಾರವನ್ನು ಕಸಿದುಕೊಂಡು ಹೋಗುವನು) .

## ಎಂಟನೆಯ ದೃಶ್ಯ

(ಸುರೇಶ, ಶೇಖರ ಬರುವರು ಅರಣ್ಯ ರಸ್ತಾ ಪರದೆ)

ರಾಜಶೇಖರ – ನನ್ನ ಸಂತೋಷದಲ್ಲಿ ನನ್ನ ತಮ್ಮನೊಂದು ಅಡ್ಡಗೋಡೆ ನನ್ನ ವಿಲಾಸ ವೈಭವಕ್ಕೆ ಅವನೊಬ್ಬ ಕಡುವಿರೋಧಿ.

ಸುರೇಶ – ಕಂಟಕವನ್ನು ಕತ್ತರಿಸಿ ಹಾಕುವಷ್ಟು ಶಕ್ತಿ ನಿನಗಾಗದಿದ್ದರೆ ವಿಲಾಸದ ಆನಂದವು ನಿನಗೆ ದೊರೆಯಲಾಗದು

ರಾಜಶೇಖರ – ಏನಾದರೂ ಉಪಾಯವಿದೆಯೇ?

ಸುರೇಶ – ನೀನೊಪ್ಪಿದರೆ....

ರಾಜಶೇಖರ – ಹೇಳು ಹೇಳು.

ಸುರೇಶ – ಕಿವಿ ಮುಂದೆ ಮಾಡು (ಕಿವಿಯಲ್ಲಿ ಹೇಳುವನು)

ರಾಜಶೇಖರ – ಏನು ವಿಷಹಾಕಲೇ

ಸುರೇಶ – ಅದರ ಹೊರತು ಗತಿಯಿಲ್ಲ.

ರಾಜಶೇಖರ – ಆನಂದನಿಗೆ ವಿಷಪ್ರಾಶನ ಮಾಡಿಸಲೇ (ನೀರಿಗೆ ಬಂದ ಶೋಭಾ ಮರೆಯಾಗುವಳು) ಹಾಗೇ ಹೊರಗೆ ಹಾಕಿದರೆ?

ಸುರೇಶ – ನಿನ್ನನ್ನು ಕೋರ್ಟಗೆಳೆದು ಪಾಲು ತೆಗೆದುಕೊಂಡು

ಸುಖವಾಗಿರುತ್ತಾನೆ. ನೀವು ಕೊಡುವದಿಲ್ಲವೆಂದರೂ ಸರ್ಕಾರ ಕಾಯ್ದೆಶೀರ ಕಸಿದು ಕೊಡುತ್ತಿದೆ.

**ರಾಜಶೇಖರ** – ಹಾಗಾದರೆ ವಿಷ ಹಾಕಲೇಬೇಕು.

**ಸುರೇಶ** – ನೀನು ಸಾಯುವವರೆಗೆ ಸುಖಪಡಬೇಕಾಗಿದ್ದರೆ ಹಾಕು, ಇಲ್ಲವಾದರೆ ಬಿಡು.

**ರಾಜಶೇಖರ** – ಎಲ್ಲಿದೆ ವಿಷ

**ಸುರೇಶ** – ಅದೇ ನನ್ನಲ್ಲಿ ಅದೆ

**ರಾಜಶೇಖರ** – ತಾ ಇಂದೇ ಹಾಕಿಬಿಡುವೆ

**ಸುರೇಶ** – ಆತನನ್ನು ರಮಿಸಿ ಮುಂಜಾತೆ ಕಾಫಿಯಲ್ಲಿ ಮಿಶ್ರಮಾಡಿ ಘೋಲು ಹೊಡಿಸು. ಎಚ್ಚರಿಕೆ, ಸಮಯ ಸಿಕ್ಕಾಗಲೇ ಸುಖ ಪಡುವದು ಜೀವನದ ಜೀವಾಳ (ವಿಷದ ಚೀಟನ್ನು ಕೊಟ್ಟು ಕರೆದುಕೊಂಡು ಹೋಗುವನು)

## ಒಂಬತ್ತನೆಯ ದೃಶ್ಯ

ರಾಜಶೇಖರನ ಮನೆ

(ಆನಂದನು ಮಲಗಿಕೊಂಡಿದ್ದಾನೆ. ಶೋಭಾ ಸಪ್ಪಳ ಮಾಡದೇ ಬರುವಳು.)

**ಶೋಭಾ** – (ಆನಂದನನ್ನು ಎಬ್ಬಿಸಿ) ಆನಂದಾ ಆನಂದಾ

**ಆನಂದ** – ಯಾರವರು?

**ಶೋಭಾ** – ಗದ್ದಲ ಮಾಡಬೇಡ.

**ಆನಂದ** – ಯಾರು ಅತ್ತಿಗೆ

**ಶೋಭಾ** – ಹೌದು.

**ಆನಂದ** – ಸಮಯವೀಗ ಮಧ್ಯ ರಾತ್ರಿ ನೀನೇಕೆ ಇಲ್ಲಿಗೆ ಬಂದೆಯಮ್ಮಾ ಅಣ್ಣನು ಬಂದರೆ ಏನಾದರೂ ಪ್ರಮಾದ ಸಂಭವಿಸಬಹುದು.

**ಶೋಭಾ** – ಪ್ರಮಾದದಿಂದ ಪಾರು ಮಾಡುವದಕ್ಕಾಗಿಯೇ ಬಂದಿರುವೆ. ಆನಂದಾ ಸಧ್ಯ ನೀನು ಮನೆಬಿಟ್ಟು ಹೊರಡಬೇಕು

**ಆನಂದ** – ಕಾರಣವೇನು ತಾಯಿ?

**ಶೋಭಾ** – ಬೆಳಗಾದರೆ ನಿನ್ನ ಹೆಣ ಬೀಳುವದಪ್ಪ.

**ಆನಂದ** – (ಆಶ್ಚರ್ಯದಿಂದ) ಏತಕ್ಕಾಗಿ?

**ಶೋಭಾ** – ತಮ್ಮ ಕ್ರೂರ ಕೃತಿಗಳನ್ನು ಸಾಧಿಸುವದಕ್ಕಾಗಿ

**ಆನಂದ** – ಯಾರು ಕೊಲ್ಲುವವರು?

**ಶೋಭಾ** – ನಿಮ್ಮ ಅಣ್ಣ

**ಆನಂದ** – ಏನು ನಮ್ಮ ಅಣ್ಣನೇ?

**ಶೋಭಾ** – ವಿಷ ಹಾಕಿ ಕೊಲ್ಲುಬೇಕೆಂದು ನಿರ್ಧರಿಸಿದ್ದಾರೆ

**ಆನಂದ** – ಕನವರಿಕೆಯ ಮಾತನಾಡುವಿ ಏನಮ್ಮ

**ಶೋಭಾ** – ನನ್ನ ಮಾಂಗಲ್ಯದಾಣೆ ಮೈದುನನೆ, ನಿನ್ನನ್ನು ಕೊಲ್ಲುವ ವಿಷವೀಗ ಅವರಲ್ಲಿ ಬಂದು ಸೇರಿದೆ

**ಆನಂದ** – ಕಣ್ಣಾರೆ ಕಂಡಿರುವೆ ಏನಮ್ಮಾ?

**ಶೋಭಾ** – ಸತ್ಯವಾಣಿ ಸಟಿಯಲ್ಲ

**ಆನಂದ** – ಹಿರಿ ಅಣ್ಣ ವಿಷಹಾಕಿ ಕೊಲ್ಲುವನೇ?

**ಶೋಭಾ** – ಹೊರಡು ಆನಂದ, ವೇಳೆಗಳಿಯಬೇಡ

**ಆನಂದ** – ತಾಯಿ ನಾನೆಲ್ಲಿಗೆ ಹೋಗಲಿ

**ಶೋಭಾ** – ಎಲ್ಲಿಗಾದರೂ ಹೋಗು ಇಲ್ಲಿ ಮಾತ್ರ ಇರುವದು ಬೇಡ, ನಾಳಿನ ಸೂರ್ಯೋದಯ ನಿನಗೆ ಸಾವಿನ ದಿನ?

**ಆನಂದ** – ಅತ್ತಿಗೆ ಇಂಥ ಕ್ರೂರನ ಕೈಯಲ್ಲಿ ನಿನ್ನಂಥ ಸಾತ್ವಿಕಳನ್ನು ಕೊಟ್ಟು ನಾನೆಲ್ಲಿಗೆ ಹೋಗಲಿ, ಸತ್ತರೂ ಚಿಂತೆಯಿಲ್ಲಾ ಪವಿತ್ರವಾದ ನಿನ್ನ ಪಾದಗಳಲ್ಲಿ ಬಿದ್ದು ಪ್ರಾಣಕೊಡುವೆ.

**ಶೋಭಾ** – ವಿಧಿ ನಮ್ಮನು ಕಾಡುವದಕ್ಕಾಗಿ ಸಕಲ ಸಿದ್ಧತೆಗಳಿಂದ ಬೆನ್ನು ಹತ್ತಿದೆಯಪ್ಪ. ಪಾರಾಗು ಮರಣದ ವಿಷ ಸರ್ಪದ ಬಾಯಿಂದ

**ಆನಂದ** – ನಾ ಹೋದ ನಂತರ ಇನ್ನೂ ಎಂಥ ಕಷ್ಟಗಳು ಒದಗುವವೋ ಏನೋ ತಾಯಿ ಮುಖ ಕಾಣದ ಮಗುವಾದ ನನಗೆ ನೀನೇ

ತಾಯಿ ಯಾದೆ ಅತ್ತಿಗೆ, (ಅಳುವನು) ನಾನು ಹೋಗಲಾರೆ. ರಾಕ್ಷಸನ ಕೈಯಲ್ಲಿ ಅಬಲೆಯಾದ ನಿನ್ನನ್ನು ಶಿಶುವಾದ ಶಂಕರನನ್ನು ಕೊಟ್ಟು ಹೋಗುವದೇ ಅದು ಹೇಗೆ ವಿಷ ಕೊಡುವನೋ ತಿಳಿದು ಹೋಗಲಿ

**ಶೋಭಾ** – ವಿಷ ಕೊಡುವದು ಅಸಾಧ್ಯವಾದ ಮಾತ್ರಕ್ಕೆ ನಿನ್ನ ಸಾವು ತಪ್ಪಿತೆಂದು ಕಲ್ಪಿಸಬೇಡ. ಯಾವದಾದರೊಂದು ರೀತಿಯಲ್ಲಿ ಇಂದಿಲ್ಲ ನಾಳೆಯಾದರೂ ಕೊಲ್ಲತಕ್ಕವರೇ ಅದಕ್ಕಾಗಿ ಹೊರಡು ಇಲ್ಲಿಂದ

**ಆನಂದ** – ಹೆತ್ತಮ್ಮ ಸತ್ತ ನಂತರ ಮುತ್ತಿನಂತೆ ಜೋಪಾನ ಮಾಡಿದ ಅತ್ತಿಗೆ, ನಾನು ನಿನ್ನನ್ನಗಲಿ ಎಲ್ಲಿಗೆ ಹೋಗಲಿ (ಅಳುವನು)

**ಶೋಭಾ** – ಅಳಬೇಡಾ, ಮತ್ತೊಮ್ಮೆ ನಮ್ಮ ಸಂದರ್ಶನವಾಗಬೇಕೆಂಬುದು ನಮ್ಮ ದೈವದಲ್ಲಿದ್ದರೆ ಅಂದೆಂದಿಗೂ ತಪ್ಪದು. ಸಧ್ಯಕ್ಕೆ ಎಲ್ಲಿಯಾದರೂ ಹೇಗಾದರೂ ಬದುಕಿಕೋ

**ಆನಂದ** – ಅತ್ತಿಗೆ (ಅಳುವನು)

**ಶೋಭಾ** – ಅಳಬೇಡ ಆನಂದಾ ಅವರು ಬಂದರೆ ಇದಕ್ಕಿಂತಲೂ ಹೆಚ್ಚಿನ ತೊಂದರೆಯನ್ನು ತಂದುಕೊಂಡಂತಾದೀತು

**ಆನಂದ** – ನಾ ಹೋದ ಮೇಲೆ ನಿನಗಾವ ಗತಿ?

**ಶೋಭಾ** – ಪತಿಯ ಪಾದವೇ ಗತಿ. ಉರಿ ಬರಲಿ, ಸಿರಿಬರಲಿ, ಸವಿ ಇರಲಿ, ವಿಷವಿರಲಿ ಪಾಲಿಗೆ ಬಂದದ್ದನ್ನು ಭೋಗಿಸಲು ಸಿದ್ಧಳಾಗಿರುವೆ. ಹೆಣ್ಣಿನ ಜೀವನ ಕಷ್ಟಮಯವಾಗಿದೆಯಪ್ಪ, ಬರುವ ಕಷ್ಟಗಳನ್ನುಂಡು ಬದುಕಿದರೆ ಆ ಹೆಣ್ಣು ದೇವತೆಯಾಗಿ ಪೂಜೆಗೊಳ್ಳುವಳು. ಸತ್ತರೆ ಮುತ್ತೈದೆತನ ಸಾವುಗಾಣುವಳು. ಹೆದರಿ ಹಿಮ್ಮೆಟ್ಟಿ ಸತಿಧರ್ಮ ತೊರೆದರೆ ಆ ನಾರಿ ಜಾರತನದ ಕೈವಾರಿ.

**ಆನಂದ** – ನಿನ್ನ ಹೃದಯವೆಷ್ಟು ಕರುಣಾಮಯವಾಗಿದೆಯಮ್ಮಾ ! ಮಾನವತೆಗೆ ಎಷ್ಟು ಮೇಲ್ಪಂಕ್ತಿಯಾಗಿದೆ, ನಿನ್ನ ಪಡೆದ ತಾಯಿಯ ಉದರ ಪುಣ್ಯಮಂದಿರ ನಿನ್ನ ಪಡೆದ ವಂಶ ಪಾವನಮಯ. ಪ್ರದೇಶ ಬಿಟ್ಟು ಹೋಗಲು ಮನ ಹಿಂಜರಿಯುತಿದೆ.

**ಶೋಭಾ** – ಧೈರ್ಯಗೆಡಬೇಡಪ್ಪ.

ಆನಂದ – ನನಗೊಂದು ಅಭಯ ಕೊಡು.

ಶೋಭಾ – ಏನಂದು?

ಆನಂದ – ಎಂಥ ಪ್ರಸಂಗ ಬಂದರೂ ಆತ್ಮಹತ್ಯ ಮಾಡಿಕೊಳ್ಳುವದಿಲ್ಲೆಂದು

ಶೋಭಾ – ಆತ್ಮಹತ್ಯ ಇಲ್ಲವಪ್ಪಾ ನಾನಾಗಿಯೇ ಸಾವನೊಪ್ಪುವದಿಲ್ಲ. ಪತಿಯ ಕರದಿಂದ ಮರಣ ಒದಗಿದರೆ ಒಲ್ಲೆನ್ನುವದಿಲ್ಲ. ಮರೆಯಾಗು, ಮೊದಲು ಇಲ್ಲಿಂದ.

ಆನಂದ – (ಅಳುತ್ತ ನಮಸ್ಕಾರ ಮಾಡುವನು) ಅತ್ತಿಗೆ !

ಶೋಭಾ – ಹೋಗು ಆನಂದಾ.

ಆನಂದ – ಅತ್ತಿಗೆ

ಶೋಭಾ – ಆನಂದಾ, (ತಿರುತಿರುಗಿ ನೋಡುತ್ತ ಹೋಗುವನು)

(ಶೋಭಾ ಹೋಗುವಳು, ತೆರೆ ಬೀಳುವದು

ರಸ್ತಾ (ರಾಜಶೇಖರನು ಬರುವನು)

ರಾಜಶೇಖರ – (ಬಂದು) ಬೆಳಗು ಬಂತು, ಕೊಂಚ ವೇಳೆಯಲ್ಲಿ ನಲೆಯುತ್ತಿದ್ದ ಆನಂದನು ಮಾಯವಾಗಿ, ಮನೆ ಮಸಣವಾಗುವದು ಆನಂದಾ, ಆನಂದಾ, ನಿದ್ರೆಯಲ್ಲಿರುವೆಯಾ, ಘನವಾದ ನಿದ್ರೆ ಆವರಿಸಲಿದೆ ಮುಂದೆ, ಶೋಭಾ, ಶೋಭಾ (ಮನೆ)

ಶೋಭಾ – (ಬಂದು) ಏನು ಸ್ವಾಮಿ

ರಾಜಶೇಖರ – ಆನಂದನೆಲ್ಲಿ?

ಶೋಭಾ – ಆತನಿಲ್ಲವಲ್ಲ

ರಾಜಶೇಖರ – ಎಲ್ಲಿಗೆ ಹೋಗಿದ್ದಾನೆ

ಶೋಭಾ – ನಾನರಿಯೆ

ರಾಜಶೇಖರ – (ಸಿಟ್ಟಿನಿಂದ) ನಿಜವ ಹೇಳು, ನನ್ನಪಾದಸಾಕ್ಷಿಯಾಗಿ, ಏಕೆ ತಡವರಿಸುತ್ತಿರುವೆಯಲ್ಲ, ಎಲ್ಲಿ ಓಡಿಸಿದೆ.

ಶೋಭಾ – ನನಗಾವದೂ ಗೊತ್ತಿಲ್ಲ.

**ರಾಜಶೇಖರ** – ಗೊತ್ತಿಲ್ಲ, ಗೊತಿದ್ದರೂ ಹೇಳುವಂತಿಲ್ಲ. ನಿನ್ನ ವಿಟನನ್ನು ಉಳಿಸಲು ಎಲ್ಲಿಗೆ ಕಳಿಸಿರುವಿ. ಎಷ್ಟು ಹಣ ಕೊಟ್ಟಿರುವೆ.

**ಶೋಭಾ** – (ಕಿವಿ ಮುಚ್ಚಿ) ಶಿವಶಿವ ಹೀಗೇಕೆ ಮಾತನಾಡುತ್ತಿರುವಿರಿ.

**ರಾಜಶೇಖರ** – ಹೇಳು ನಿಜವ ಚಾಂಡಾಲಗಿತ್ತಿ (ಹೊಡೆಯುವನು)

**ಶೋಭಾ** – ಸಟಿಯಾಡಿದೆನೇ ನಾನೀಗ.

**ರಾಜಶೇಖರ** – ನಿನ್ನೆದೆ ಹಾರುತಿದೆ ಹೆದರಿ ದಿಟವಿದ್ದರೆ ಧೈರ್ಯದಿಂದ ಮಾತನಾಡುತ್ತಿದ್ದಿ. ಹೇಳು ಹಾಗಾದರೆ ಹೊಲತಿ ಎಲ್ಲಿಗಟ್ಟಿರುವೆ.

**ಶೋಭಾ** – ಮಿತಿಯಿಲ್ಲದ ಮಾತು ನನ್ನೆದೆಗೆ ಕುತ್ತು, ನಿಮಗೇನು ಹೇಳಿದರೂ ನಂಬಿಗೆಯಿಲ್ಲ.

**ರಾಜಶೇಖರ** – ಯಾವ ವಿಷವು ಆನಂದನಿಗೆ ಅಂತಿಮಾವಸ್ಥೆಯನ್ನು ತಂದೊಡ್ಡುತ್ತಿತ್ತೊ. ಅದೇ ವಿಷ ಈಗ ಪ್ರಖರಗೊಂಡಿದೆ. ನನ್ನ ಆನಂದನನ್ನು ನೋಡಿ ಮತ್ಸರದಗ್ನಿಯನ್ನು ಕಾಣುವ ಕಣ್ಣುಗಳನ್ನೇ ಕಳೆದುಬಿಡುವೆ. (ಮೈಮೇಲೆ ಏರಿ ಹೋಗುವನು. ಶೋಭಾ ಕಾಲು ಹಿಡಿಯುವಳು)

**ಶೋಭಾ** – (ಅಳುತ್ತ) ನಿಮ್ಮ ಪಾದದಾಸಿ, ಕಣ್ಣು ಕಳೆಯಬೇಡಿ,

**ರಾಜಶೇಖರ** – (ಕೆಡವಿ) ಇದೋ ನಿನ್ನ ಕಾರ್ಯಕ್ಕೆ ತಕ್ಕ ಪ್ರಾಯಶ್ಚಿತ್ತ. (ಕೆಡವಿ ಕಣ್ಣುಗಳಲ್ಲಿ ರಸಾಯನಹಾಕುವನು) (ನಗುವನು)

**ಶೋಭಾ** – ಹಾ! ಹಾ! ನೇತ್ರಜ್ಯೋತಿಯೇ ಇಂಗಿಹೋಯಿತೇ ಕುರುಡಿಯನ್ನಾಗಿ ಮಾಡಿದಿರಾ ದೊರೆಯೇ, ಸಂಕಟ ಸ್ವಾಮಿ ಶಂಕರಾ ಶಂಕರಾ (ಶಂಕರ ಓಡಿ ಬಂದು)

**ಶಂಕರ** – ಅವ್ವ ಅವ್ವ

**ಶೋಭಾ** – ಶಂಕರಾ ನೇಸರನ ಪ್ರಕಾಶವ ಕಾಣದ ಗೂಗೆಯಂತಾಗಿದೆ. ನನ್ನ ಪಾಲಿಗೆ ಹಗಲು ಕತ್ತಲೆಯಾಯಿತು ಶಂಕರಾ, ಶಂಕರಾ.

**ಶಂಕರ** – ಅವ್ವಾ ಕುರುಡಿಯಾದಿ ಏನವ್ವ, ಕಂಣುಗಳು ಇಂಗಿ ಹೋದವೇ? ಚಾಂಡಾಲ ಪತಿಗೆ ಸತಿಯಾದೆಯಾ ಹೆಣ್ಣಾಗಿ ಹುಟ್ಟಿ ಬವಣೆಗೀಡಾದೆಯಾ, ಅವ್ವಾ ಅವ್ವಾ (ಅಳುವನು)

**ಶೋಭಾ –** ಜನ್ಮದಾತನನ್ನು ನಿಂದಿಸಬಾರದು, ಏನನ್ನು ಮಾತನಾಡಬೇಡಪ್ಪ ಈ ನಿನ್ನ ದೀನವಾಣಿಯು ಯಾವ ಕಾರ್ಯವನ್ನೂ ಮಾಡಲಾರದು.

**ಶಂಕರ –** ನನ್ನ ಅವ್ವನ ಕಣ್ಣುಗಳನ್ನು ಕಳೆದು ಕತ್ತಲೆಯ ಕೂಪದಲಿ ನೂಕಿದಿಯಾ ಪಾಪಿ (ಶೇಖರನು ಶಂಕರನನ್ನು ಬಡಿಯುವನು.)

ಅವ್ವಾ ಸಾಯುವೆನವ್ವ,

**ಶೋಭಾ –** ಅಯ್ಯೋ ಮಗುವನ್ನು ಬಡಿಯಬೇಡಿ ವಂಶದ ದೀಪವನ್ನಾರಿಸುವ ಪತಂಗವಾಗಬೇಡಿರಿ, ಶಂಕರಾ (ಕೈಯಾಡಿಸಿ ಎಲ್ಲಿರುವಿಯಪ್ಪ ಬಾ ಶಂಕರಾ (ಶಂಕರ ಅಳುತ್ತ ತಾಯಿ ಹತ್ತರ ಬಂದು ನಿಲ್ಲುವನು) ಅಳಬೇಡ ಮಗು, ಕರ್ಮದ ಕೊಡಲಿ ಕತ್ತರಿಸುತ್ತಿದೆ ಅಡಿಗಡಿಗೆ ಅವಯವಗಳನ್ನು ತಪ್ತಲೋಹದ ರೌದ್ರರಸಾಯನ ರೂಪದಲಿ ಇಂಗಿಸಿತದೆ ಕಂಗಳ ಜ್ಯೋತಿಯನು ಹೇ ವಿಧಾತಾ ಇದನೆ ಬೇಡಿದೆನೆ ನಾನಲ್ಲಿ ನಿನ್ನೆದುರಿನಲ್ಲಿ

**ರಾಜಶೇಖರ –** ಅತ್ತು ಅತ್ತು ಸತ್ತು ಹೋಗಿರಿ. ದೈವವನೆ ಶಪಿಸುತ್ತ ದೈವ ಹೀನರೆ.

**ಶೋಭಾ –** ತೃಪ್ತಿಯಾಯಿತೆ ನಿಮ್ಮ ಮನಕೆ?

**ರಾಜಶೇಖರ –** ಹೊರಟುಹೋಗಿರಿ ಮನೆಬಿಟ್ಟು, ಸ್ಥಳವಿಲ್ಲ ನಿಮಗಿಲ್ಲಿ.

**ಶೋಭಾ –** ಕೈ ಹಿಡಿದ ಗಂಡ ಹೊರದೂಡಿದರೆ ಪ್ರಪಂಚದಲ್ಲಿ ನಮಗೆ ಸ್ಥಳವಿದೆಯೇ, ನಿಮ್ಮ ಕರದಿಂದ ಸಿಗುವ ಹಳಸಿದ ಹಿಡಿ ಅನ್ನ ತಿಂದುಬಿದ್ದಿರುವೆ

**ರಾಜಶೇಖರ –** ನಿಮಿಷ ಸಹ ನಿಲ್ಲದಿರು ನೀನಿಲ್ಲಿ.

**ಶೋಭಾ –** ಮನೆ ಹತ್ತಿ ಉರಿದರೆ ನಿಲ್ಲಬಹುದು. ಮನ ಹತ್ತಿ ಉರಿದರೆ ನಿಲ್ಲುವದು ಇನ್ನೆಲ್ಲಿ? ನಿರಾಶ್ರಿತರನ್ನಾಗಿ ಮಾಡಬೇಡಿ.

**ರಾಜಶೇಖರ –** ನೀವಿಲ್ಲಿಂದ ತೊಲಗಬೇಕು.

**ಶೋಭಾ –** ಇಷ್ಟೇಕೆ ನಿರ್ದಯರಾದಿರಿ.

**ರಾಜಶೇಖರ –** ಮನೆಬಿಟ್ಟು ಹೋಗದಿದ್ದರೆ ನಾ ವಿಷಪಾನ ಮಾಡುವೆ ಹೋಗುವಿಯೋ? ವಿಷ ಕುಡಿಯಲು ಅನುಮತಿ ನೀಡುವಿಯೋ?

**ಶೋಭಾ –** ವಿಷಪಾನ ಮಾಡಬೇಡಿ, ವಿಷಪಾನ ಮಾಡಬೇಡಿ. ಹೊರಡುವೆ

ಮನೆಯಿಂದ ಅಲ್ಲಲ್ಲ ತೊಲಗುವೆ. ಈ ಜಗದಿಂದ ವಿಧವೆಯಾಗಿ ನಾ ಭೂಮಿಂಯ ಮೇಲೆ ಬಾಳಬೇಕೆ? ಬೇಡಿ ನನ್ನ ಮಾಂಗಲ್ಯದೊಡೆಯಾ ನನ್ನ ಕುಂಕುಮದ ತಿಲಕ ಸ್ಥಿರವಾಗಿ ಇರಲಿ ಬಾ ಶಂಕರಾ, ನಮಗಿಲ್ಲಿ ಸ್ಥಳವಿಲ್ಲ (ಇಬ್ಬರೂ ರಾಜಶೇಖರನಿಗೆ ನಮಸ್ಕರಿಸುವರು, ರಾಜಶೇಖರ ಒದೆಯುವನು. ಶೋಭಾ ಕೈಯಾಡಿಸಿ ಶಂಕರನೊಂದಿಗೆ ಹೋಗುವಳು)

: ಹಿನ್ನೆಲೆ :

**ಪದ**

ಜೀವನ ಘೋರಾಂಧಕಾರ ॥
ಆಸೆಯ ಕಮಲದಿ । ನಿರಾಸೆ ವಾಸನೆ ॥
ಸುಖದಲ್ಲಿ ದುಃಖದ । ಮಾಲಾ ।
ಆಶೆ ಸತಿಸುತ । ಸಿರಿ ಸಂಪದವಾ ।
ಆಶೆಗಳೆಲ್ಲ ನಿರಾಶಾ– ॥ ೧ ॥
ಬರುವದು ಒಂದೆ । ಹೋಗುವದೊಂದೆ ।
ಆಶೆಗಳೆಲ್ಲ । ನಿರಾಶಾ ॥ ೨ ॥

## ಹತ್ತನೆಯ ದೃಶ್ಯ

(ಅಣ್ಣ್ಯಾ ನಿಂತಾಗ ಬಸವಂತಿ ಹಾದು ಹೋಗುವಳು)

**ಅಣ್ಣ್ಯಾ –** ಅಲ್ಲಾ ನಾ ಇಲ್ಲೇ ನಿಂತೇನಿ, ಮುನಸಿಪಾಲಟಿ ಲೈಟಿನ ಕಂಬ ನಿಂತಾಗ ನಿನ್ನ ಹಾಳಹದ್ದಿನಂತ ಕಣ್ಣಿಗೆ ಕಾಣಲಿಲ್ಲ! ಸರಕಾರೀ ಎಸ್.ಟಿ ಬಸ್ಸಿನಂತೆ ಯಾಕ ಹಂಗ ಹೊಂಟಿ ಮಾತಾಡಸದ.

**ಬಸವಂತಿ –** ನಿನ್ನೇನ ಮಾತಾಡಸೂದ ಕರದ ಮೆಣಸಿನಕಾಯಿ ಮಾರಿಯವನ.

**ಅಣ್ಣ್ಯಾ –** ಏನ ಹೋಲಕಿ ಕೊಟ್ಟಿ, ಏನ ಹೋಲಕಿ ಕೊಟ್ಟೆ ಕಮಲದಂತಹ ಮಕದಾಕೆ ಕರದ ಅವಲಕ್ಕಿ.

**ಪದ**

ಮೂಡಿಬಾರ ಬೆಳ್ಳಿ ಚಿಕ್ಕಿ । ಹಾಡತೈತಿ ಬೆಳಗಿನ ಹಕ್ಕಿ ।
ಹಾಡತೈತಿ ಬೆಳಗಿನ ಹಕ್ಕಿ । ತಗದೈತಿ ಬಣ್ಣದ ಹಕ್ಕಿ ॥

**ಬಸವಂತಿ –** ಚಲುವಾ?

**ಅಣ್ಣ್ಯಾ –** ಅಲ್ಲೇನ ಮತ್ತ. ನೋಡು, ನನ್ನ ಮಾರೀನ ಮೂಡು ಸುರ್ಜ್ಯಾನ ಕಳ ನನ್ನ ಮಾರಿಮ್ಯಾಗ ಐತಿ. ಹುಣ್ಣಿವಿ ಚಂದಪ್ಪನಂಗೆ ಕಾಣತೈತಿ.

**ಬಸವಂತಿ –** ಮೂಡು ಸೂರ್ಜ್ಯಾನಂಗೈತೋ, ಅಮಾಸಿ ಚಂದಪ್ಪನಂಗೈತೋ ಹೋದ ಜನ್ಮದಾಗ ಇದ್ಲಿಗೆ ಅಣ್ಣ ಆಗಿದ್ದೇನು?

**ಅಣ್ಣ್ಯಾ –** ದಲಲಲ ಮುಂಗಾರಿ ಮಿಂಚ ಕಂಚ ಹೊಡದಂಗಾತ ನೋಡು ಬಸವಂತಿ.

**ಬಸವಂತಿ –** ಚಂದ್ರಾಮ, ಹೋಗು.

**ಅಣ್ಣ್ಯಾ –** ಹನಿಬಿತ್ತು ಮುತ್ತಿಂದು, ಕೆನಬಿತ್ತು ಹಾಲಿಂದು ಬೆಳದಿಂಗಳದಾಗ ಕುಂತಲಗೇಡಿ ಬಿಳಿಜೋಳದ ಬಾನಾ ಉಂಡಂಗಾತ ಬಸವಂತಿ (ಅಪ್ಪಿಕೊಳ್ಳಲು ಹೋಗುವನು)

**ಬಸವಂತಿ –** ಏ, ಏ, ಹಿಂಗ್ಯಾಕ ಮಾಡತಿ ಹಸಗೇಡಿ, ತೆಕ್ಕಿ ಬೀಳಾಕ ಬರತಿಯಲ್ಲ. ಮೆತ್ತಗಾಗಾಕ ಬಂದಿ ಏನ.

**ಅಣ್ಣ್ಯಾ –** ಇನ್ನು ತೆಕ್ಕಿ ಬಿದ್ದಿಲ್ಲ ಬೀಳಾಕ ಅನುಕೂಲ ಮಾಡಿಕೊಡು ಅಂದೆ

**ಬಸವಂತಿ –** ಇಕಾ ಅಣ್ಣ್ಯಾ ನೀನೆಲ್ಲೇ ಚಪಲಹಾರಾ ಕೊಟ್ಟೀನಂತ, ಕಂಡ ಕಂಡಲ್ಲೇ, ಕಂಡಕಂಡಂಗ ಮಾತಾಡಿದಿಯಂದ್ರ, ಕಣ್ಣಗುಡ್ಡೀನ ಕಡಿಗೆ ಮಾಡ್ತೇನಿ.

**ಅಣ್ಣ್ಯಾ –** ಮಾರಿ ಹಿಗ್ಗಿಸಿ, ಮೂಗು ಮುರಿದು, ಬಾಯಿಕಿಸಿದು, ಮಾತಾಡುದು ಬಿಡು. ನನಗೆಲ್ಲ ನಿನ್ನ ಚಾಳಿ ಗೊತ್ತ ಆಗೈತಿ, ಮೊನ್ನೆ ಕೆರಿಗೆ ನೀರಿಗೆ ಹೋಗಿದ್ದೆಲ್ಲ, ಏನೇನ ಹಕ್ಕೀಕತ್ತು ನಡೆಸಿದ್ದಿ ಖರೇ ಹೇಳು ನನಗ ಬಂದೈತಿ ಸುದ್ದಿ,

**ಬಸವಂತಿ –** ನಿನಗ ಸುದ್ದಿ ಬಂದಿಲ್ಲಾ, ಮುದ್ದಿ ಆಗುವಂತಾ ಹೊತ್ತ ಬಂದೈತಿ ಅದಕ ಹಿಂಗ ಹುಚ್ಚುಚ್ಚಾರ ಮಾತಾಡತಿ. ಅಣ್ಣ್ಯಾ ಮಣ್ಣ ಕಾಣುವಂಗ ಆಗೈತೇನು.

**ಅಣ್ಣ್ಯಾ –** ನನಗ ಮಣ್ಣ ಕೊಡಬೇಕಂತ ಮಾಡಿಯಾ

**ಬಸವಂತಿ –** ಆಟ ಆಗಾತನಕ ಸಮಾಧಾನ ಆಗುದಿಲ್ಲ ಕಾಣುತ್ತ ನಿನಗ.

**ಅಣ್ಣ್ಯಾ –** ಅಲ್ಲಾ ಚಪಲಹಾರಕ್ಕೂ ಚಕ್ರಕೊಟ್ಟ ನನಗೂ ಕೈಕೊಟ್ಟ, ನೀನ ದೇವರ ಸರಿಯಾಗಿ ಹೇಳು ಏನು ಹೇಳಿದ್ದಿ.

**ಬಸವಂತಿ –** ನಾ ಏನ ಹೇಳೀನಿ?

**ಅಣ್ಣ್ಯಾ –** ನೋಡು ನೆಪ್ಪ ಮಾಡಿಕೋ ಬಹುತೇಕ ನೆಪ್ಪ ಆಗಾಕಿಲ್ಲ. ಆದಹ್ಯಾಗ ನೆಪ್ಪು ಇದ್ದೀತು? ನೆಪ್ಪು ಉಳಿವಂಗ ಮಾಡಲಿಲ್ಲ ನಾನು, ತಪ್ಪ ಮಾಡಿದೆ

**ಬಸವಂತಿ –** ಅಣ್ಣ್ಯಾ ನೀ ಏನ ಮರಗಬೇಡ,

**ಅಣ್ಣ್ಯಾ –** ಯಾಕಂದಿ

**ಬಸವಂತಿ –** ಇಂದಿಲ್ಲ ನಾಳೆ ನಿನ್ನ ವ್ಯವಸ್ಥಾ ಮಾಡುವಾಕೇ ನಾ.

**ಅಣ್ಣ್ಯಾ –** ಆಟ ಹೇಳಿಬಿಡಲ್ಲ ಮನಸ್ಸಿಗೆ ಆನಂದರ ಆಗತ್ತ,

**ಬಸವಂತಿ –** ಬಿಡು ಅದರ ಕಾಳಜಿ ಅಣ್ಣ್ಯಾ. ನೀ ನನಗ ಚಪಲಹಾರಾ ಹಾಕಿಯಲ್ಲ, ನಿನಗ ನಾನು ಚಪ್ಪಲಹಾರಾ, ಹಾಕದಿದ್ದರೆ ದೇವರರ ಮೆಚ್ಚ್ಯಾನ.

**ಅಣ್ಣ್ಯಾ –** ತೊಗಲಿನ ತುರಾಯಿ ತರಾಕ ಮಾತ್ರ ಮರಿಬ್ಯಾಡ ಬಾಳ ಕಂಗಾಲ ಆಗೇನಿ ಪುಣವಂತೀ ಆಟ ಬಂಗಾರದ ಕಣ್ಣ ತೆಗಿ. ನನ್ನ ಸಿಂಗಾರಿ

**ಬಸವಂತಿ –** ನಿನ್ನ ಹತ್ತರ ಇದ್ದ ಬಂಗಾರವೆಲ್ಲಾ ನನ್ನ ಹತ್ತರ ಬಂದ ಬೀಳು ದಟ ತಡ, ನಿನ್ನ ಮ್ಯಾಲೆ ಕಣ್ಣ ತೆಗೆದ್ಯಾ ಅಂದ್ರ.....

**ಅಣ್ಣ್ಯಾ –** ಬೆಂಕಿ ಹತ್ತಿ, ಧಗಧಗ ಸುಟಗೊಂಡು ಸಾವತಿ ಅಂದೇನ, ಹಂಗ ಮಾಡಬ್ಯಾಡ ಕಾಲಿಗೆ ಬೀಳಲೇನು?

**ಬಸವಂತಿ –** ಬೀಳ ಹಂಗರ

**ಅಣ್ಣ್ಯಾ –** ಅಂದ್ರ ಕಾಲಿಗೆ ಕೆಡಿವಿಕೊಂಡು ಬಿಡುವಾಕೇನ, ನಾ ಎಂತೆಂಥವರ ಕಾಲಿಗೆ ಬಿದ್ದ ಮಗ ಅಲ್ಲ

**ಬಸವಂತಿ –** ಈಗ ನನ್ನ ಕಾಲಿಗೆ ಬೀಳುವ ಹೊತ್ತು ಬಂತಲ್ಲಾ, ಹೆದರಬೇಡ ಲಗೂನ ಬೀಳು ಯಾರೂ ಇಲ್ಲ

**ಅಣ್ಣ್ಯಾ –** ಬೀಳತೀನಿ ತೆಲಿಮ್ಯಾಗ ಮಾತ್ರ ಇಡಬ್ಯಾಡ

**ಬಸವಂತಿ –** ಮುಂದ ಹ್ಯಾಂಗ್ಯಾಂಗ ಬರತೈತೋ ನೋಡೂನು. ಒಳ್ಳೆ ದೊಡ್ಡ ಮನುಷ್ಯರ ಅನ್ನುವಾರ ಹೆಣ್ಣಿನ ಬೆನ್ನ ಹತ್ತಿ ಹುಚಪ್ಯಾಲಿ ಹಂಗ ತಿರುಗುವಾಗ ನಿನ್ನಂಥವರಂದರೇನು?

**ಅಣ್ಣ್ಯಾ –** ಆಗಲಿ ಮಾರಾಯಳ, ನಿನ್ನ ಕಾಲಾಗ ಏನೇನ ಆಗತ್ತ ಎಲ್ಲಾ

ಆಗಲಿ ನಿನ್ನ ಕಾಲ ದೇವರ ಜಗಲಿ

**ಬಸವಂತಿ** – ಹೂಂ ಲಗೂ ಬೀಳು ಯಾರರ ಬಂದಗಿಂದಾರು

**ಅಣ್ಯಾ** – ಅಯ್ಯಯ್ಯೋ?

**ಬಸವಂತಿ** – ಮರಗಬ್ಯಾಡ ಅಣ್ಯಾ ನಿನಗ ಚಲೋದು ಆಗತೈತಿ

**ಅಣ್ಯಾ** – ಅದನ್ನೂ ನೀನ ಹೇಳತಿಯಲ್ಲ (ಕಾಲಿಗೆ ಬೀಳುವನು ಬಸವಂತಿ ಸರಿದು ಬಸವಂತ ನಿಲ್ಲುವನು)

**ಬಸವಂತ** – ಉದ್ಧಾರ ಆಗ ಮಗನ, ದೇವರು ನಿನಗೆ ಅಖಂಡವಾಗಲಿ

**ಅಣ್ಯಾ** – (ಗಾಬರಿ) ಏನಂದಿ ನೀನು, ಅಯ್ಯಯ್ಯೋ ಏನ ಬಂತೋ ದೇವರ ಊರ ಹೊರಗಿನ ಹನಮಪ್ಪ ಉಳಕೊಂಡ ಬಂದ್ರ ಜೋಡು ತೆಂಗಿನ ಕಾಯಿ ಒಡಸತೀನಿ

**ಬಸವಂತ** – ಇಕಿ ಹೆಸರ್ಲೆ ಒಂದು, ನನ್ನ ಹೆಸರ್ಲೆ ಒಂದು ಹೌದಲ್ಲಲೇ ಅನಾದಿ ಬೇಡಿಕೊಂಡು ಬಂದಿ ಏನ

**ಅಣ್ಯಾ** – ಏನ ಆಗಲೆ ಅಂದಲ್ಲೋ ಮಾವಾ

**ಬಸವಂತ** – ಅಖಂಡನಾಗಲಿ, ಕಂಡತುಂಡರ ಆಗಲಿ ಅಂದೆ

**ಅಣ್ಯಾ** – ಕಂಡತುಂಡು ಅಂತಿಯಲ್ಲೋ ಮಾವಾ ಇದೇನ ತಂದಿ

**ಬಸವಂತ** – ಆಟ ಆಗುತನಕ ನಿನಗ ಬರೋಬರಿ ಕಾಣುದಿಲ್ಲ, ಅಲ್ಲಲ್ಲೇ ಅಣ್ಯಾ ನಿನ್ನ ತೆಲಿ ಕಡಿಗೆ ಆಗುತನಕ ದಾರಿ ನೋಡತಿಯಲ್ಲ, ಹಗ ಇಬ್ಬರೂ ಗುಜುಗುಜು ನಡಿಸೇ ಇರತೀರಿ. ಅಲ್ಲ ಬಸವಂತಿ ಈಗ್ಯಾಕ ಹೊಗಬಿದ್ದಾನ ಈಪರಿ ; ಏನರ ಇಸಕೊಂಡಿ ಏನ

**ಬಸವಂತಿ** – ಇಕಾ ಇಲ್ಲಿ ಐತಿ ನೋಡ್ರಿ, ಚಪಲಹಾರಾ

**ಬಸವಂತ** – ಅದರ ಬೆನ್ನಹತ್ತಿ ತಿರಗತಾನ ದಿಕ್ಕಾಲಗೇಡಿ

**ಅಣ್ಯಾ** – ಹೂನಪಾ ಮಾವಾ ಇಲ್ಲದಿದ್ರ ನಾಯಾಕ ಹಿಂಗ ಮಾಡಲಿ

**ಬಸವಂತ** – ಅಮಟಹಚ್ಚಿ ಕಮಟ ಮಾಡಿ ಬಿಟ್ಟಾಳು; ಇವನು ಪಂಚಪಾಂಡವರ ಹಂಚಿನಾಗ ಉಂಣುವಾಗ, ಸಂಕ್ರಮಣ ಬಂದು ಸೆಡವು ಮಾಡತಿತ್ತಂತ

**ಅಣ್ಣ್ಯಾ** – ನೋಡಾಕ ಅಂತ ಇಸಗೊಂಡು ಈಪರಿ ಕಾಡತಾಳಪ ಅಕ್ಕ ಕೊಡಿಸಿಬಿಡು ಹೋಕ್ಕೀನಿ

**ಬಸವಂತ** – ಕೊಡಸತೀನಿ ತಡಿಲೇ ಇಷ್ಟ್ಯಾಕ ಅವಸರ ಮಾಡತಿ. ನನಗೂ ಒಮ್ಮೆ ಕೊಡಬೇಕು ಅನ್ನು ಮನಸೂನು ಬಾಳ ಆಗ್ಯೈತಿ

**ಅಣ್ಣ್ಯಾ** – ಅಂತೂ ನಿನ್ನ ಮನಸಿನಾಗೂ ಪೂರಾ ಐತಿ ಅನಬಾರ್ದ

**ಬಸವಂತಿ** – ಅಣ್ಣ್ಯಾ ಸವಡು ಸವಡು ಸಿಗೂದಾಟS ಇಬ್ಬರೂ ಕೂಡೇ ಕೊಡತೀವಿ

**ಅಣ್ಣ್ಯಾ** – ಅದೇ ಆಲೊಚನದಾಗ ಅದಿರೇನ ಹಂಗರ

**ಬಸವಂತಿ** – ಇಚಾರ ಇಲ್ಲಾ, ಪಚಾರ ಇಲ್ಲಾ ಕೊಡಬೇಕಂತ ಆಗಲೇ ಠರಾವು ಮಾಡೀವಿ

**ಅಣ್ಣ್ಯಾ** – ಅಂತೂ ಸಭಾದಾಗ ಪಾಸ ಮಾಡಿಕೊಂಡು ಬಂದಂಗಾತು

**ಬಸವಂತಿ** – ಈಗಂತೂ ಹೋಗು ಇದು ಹೊತ್ತಲ್ಲ ಸವಡು ನೋಡಿ ಉಚ್ಚತಿದ್ಯಾ ಅವಗ ಮಂಕ ಬೂದಿಹಚ್ಚಿ

**ಬಸವಂತ** – ಸುಮ್ಮನಿರಿಸಿ ನನಗ ಮಂಕ ಬೂದಿಹಚ್ಚಿ

**ಬಸವಂತಿ** – ನಾ ಏನ ಅಜ್ಞಾನಿಗೇಡಿ ಅಲ್ಲಳ

**ಬಸವಂತ** – ಆಟ ನನಗೆ ಗೊತ್ತೈತಿ, ಆದರೂ ಹೆಂಗಸಿನ ಬುದ್ಧಿ ಮೊಣಕಾಲ ಕೆಳಗ ಏನಕೇನರ ಗದ್ಲಾ ಹಾಕಿದಿ ಅಂದ್ರ, ನನಗ ತಂದಿ ಪಿಕಲಾಟ

**ಬಸವಂತಿ** – ಇವನ ಮೈ ಮೆತ್ತಗ ಮಾಡಬೇಕಲ್ಲ

**ಬಸವಂತ** – ಅದS ಹಾದೀನ ನೋಡ್ತೀನೆ, ನಾನು

**ಬಸವಂತಿ** – ನಡಿ ಹೋಗೂನು ಹೊತ್ತು ನೆತ್ತಿಮ್ಯಾಗ ಬಂದೈತಿ

**ಬಸವಂತ** – ಹೋಗ ತಮ್ಮ ಹೋಗು ನೀ ಏನ ಚಿಂತಿ ಮಾಡಬೇಡಾ ಇವಳು ಮರತರೂ ನಾ ಮಾತ್ರ ಮರಿಯಾಂಗಿಲ್ಲ

**ಅಣ್ಣ್ಯಾ** – ಹೊಕ್ಕೀನಪಾ ಹಂಗರ ಮರಿಬ್ಯಾಡ್ರಿ ನೆನಪಿಲಿ ಕೆಲಸ ಮಾಡ್ರಿ.

**ಬಸವಂತಿ** – ನಿನಗ್ಯಾಕ ಹೋಗ ಅದರ ಕಾಳಜಿ, ನಿನಗ ಹಾರಾ ಹಾಕದಿದ್ರ ಕೂಳ ಸವಿ ಆಗುವದಿಲ್ಲ

**ಅಣ್ಣ್ಯಾ** – ಹೋಗಲಾ ಮಾವ (ಹೋಗುವನು) ಅಯ್ಯಯ್ಯೋ, ನನ್ನ

**ಬಸವಂತ –** ಬಸವಂತೀ ಬೇಸಿ ಬಡತಾ ಕೊಟ್ಟೆಯಲ್ಲ ಬೆಪ್ಪ ಆಗ್ಯಾನ ನೋಡ ನಿನ್ನ ಕೈಯಾಗ ಸಿಕ್ಕು.

**ಬಸವಂತಿ –** ಅದಕ ನಾ ಹೇಳಿದ್ದು ನೀ ಸುಮ್ಮನಿರು ಅಂತ, ಇನ್ನ ....

**ಅಣ್ಯಾ –** (ಓಡಿಬಂದು) ಎಕ್ಕಾ ಹಾರೇತ ನಿನಗ

**ಬಸವಂತಿ –** ಹಾರೇತಿ ! ತಾ ರೊಕ್ಕ

**ಬಸವಂತ –** ಏನಿದು ಗಲಾಟೆ

**ಅಣ್ಯಾ –** ತೊಗೊಯಕ್ಕ ೨ ರೂಪಾಯಿ,

**ಬಸವಂತ –** ಏನಿದು ಗದ್ದಲಾ ಅಣ್ಯಾ

**ಅಣ್ಯಾ –** ಏನಂತ ಏನ ಕೇಳತಿ ಮಾವಾ ಅಣೇಕ ೫ ರೂಪಾಯಿ

**ಬಸವಂತ –** ಅಂದ್ರ ಓಸಿ ಆಡತೀರೇನ್ಲೆ

**ಬಸವಂತಿ –** ಹೂ, ಅದನೋಡು ಇವತ್ತ ನನಗ ಹಾರೇತಿ

**ಅಣ್ಯಾ –** ಎರಡಾಣೆ ಕೊಟ್ಟಿದ್ಲು ಇಪ್ಪತ್ತಕ ಹಚ್ಚಿದ್ಯಾ ಅದ ನಂಬರ ಬಂದೈತಿ

**ಬಸವಂತ –** ಬಾಳ ಚಲೋ ಆತಲೇ. ಏನ ಹರಕತ್ತ ಇಲ್ಲಾ. ಬೇಸಿ ಊದಿದಿ ಮಂತ್ರ. ಎಲ್ಲಿ ನೋಡದರೂ ಇದು ದೊಡ್ಡವರಿಂದ ಹಿಡಕೊಂಡು ಸಣ್ಣವರತನಕ, ಗಂಡಸರಿಂದ ಹೆಂಗಸರತನಕ ಕುರುಡರು, ಕುಂಟರು, ಮೂಕರು, ಮೊದಲ ಮಾಡಿಕೊಂಡು

**ಬಸವಂತಿ –** ಅಯ್ಯ ೭ ॥ ಕೊಟ್ಟೆಲ್ಲ ಆಣೇಕ ೫ ಅಂದ್ರ, ಎರಡ ಅಣೆಕ ೧೦ ರೂಪಾಯಿ ಆಗಲಿಲ್ಲೇನ ಇನ್ನ ೨ ॥ ಏನ ಮಾಡಿದಿ ತಾಯಿಲ್ಲೆ

**ಅಣ್ಯಾ –** ಹಾಗಲ್ಲಬೇ ಅದು ಪೂಜಿ ಐದು ಯಾಕಡೆ ಬರತಾವು ಅದಕ ಕಡಿಮೆ ರೊಕ್ಕ, ಹಂಗ ಸರಿ ಅಂಕಿ ಬಂದ್ರ ೧೦ ರೂ ಕೊಡತಾರ ಇಪ್ಪತ್ತು ಬಂದೈತಿ ಅದಕ ೨॥ ಕಡಿಮೆ ಆಗಿ ೭॥ ಹತ್ತಿತ್ತು

**ಬಸವಂತ –** ಸುರುವಿಗೆ ಹತ್ತೈತೇಳ ೭॥ ಸುರುಮುರ ಆತಲ್ಲ ಸುರವುರ ಸಂತಿ

**ಬಸವಂತಿ –** ಮುಂಜಾಲೆದ್ದು ಸಂಜೀತನಕ ದುಡುದು ಒಂದು ರೂಪಾಯಿ ತರತೀ

**ಬಸವಂತ –** ಮತ್ತ ನೀನ?

**ಬಸವಂತಿ –** ಎರಡಾಣೆ ಕೊಟ್ಟು ೨॥ ತಂದೀನಿ

**ಬಸವಂತ –** ಓಸಿ ಆಡಬಾರದS ಪರದೇಶಿ ಹೋಸಿ

**ಬಸವಂತಿ –** ನೆರೆಮನೆ ನಿಂಗವ್ವ ಆಡತಾಳ, ಬಾಗಲಮನಿ ಬಾಳವ್ವ ಖಾನಾವಳಿ ಫಕ್ಕೀರವ್ವ, ಕಲ್ಲವ್ವ ಕಡ್ಲಿ ಪುಗ್ಗೆ ಮಾರಿ ಎಷ್ಟು ದಾಗೀನ ಮಾಡಿಸ್ಯಾಳ ನೋಡ ಆಡಿ, ಆಡಿ ಯಾಕ ತಮ್ಮ ?

**ಅಣ್ಯಾ –** ಹೂನ ಎಕ್ಕಾ ಇವನಿಗೇನ ಗೊತ್ತ ಅರ್ಧ ಊರ ಖಬರ ಇಲ್ಲ

**ಬಸವಂತಿ –** ಕಬರಗೆಟ್ಟ ನಿಂತೈತಿ ಕಬರ ಇದ್ರ ಕಟಗ ನೀರು ಬೀಳುತನ ಅಲ್ಲೆ ದುಡಿತಿತ್ತು ಹೊಲದಾಗ ಸಿಸ್ತಾಗಿ ಊರಾಗ ಇದ್ದು. ಓಸಿ. ಆಡತಿದ್ಯಾ.

**ಅಣ್ಯಾ –** ಆಟ ಮಾಡ ಮಾವ ಬೇಸಿ ಆಗತೈತಿ

**ಬಸವಂತ –** ಬೇಸಿ ಆಗತೈತಲೆ ಹೇಸಿ ನನ ಮಗನ, ನಮ್ಮ ಬಾಳೇನ ಹಸಗೆಡಿಸಬೇಕಂತ ಮಾಡಿ ಏನಲೇ ಅನಾದಿ

**ಅಣ್ಯಾ –** ಇಲ್ಲೋಡೆಕ್ಕ ಹ್ಯಾಗ ಮಾತನಾಡತಾನ

**ಬಸವಂತಿ –** ಅವನ ತೆಲಿ ಕೆಟ್ಟೈತಳ ತಮ್ಮ

**ಬಸವಂತ –** ಬಸವಂತಿ, ನನಗ ಗೊತ್ತ ಇಲ್ಲದಂಗ ಈಸರೆ ಕೆಲಸ ಆಗೇತಿ ಮತ್ತು ಇನ್ನೊಮ್ಮೆ ಆಡಿದಿ ಅಂದ್ರ ಕತ್ತಲರಾತ್ರೀನ

**ಬಸವಂತಿ –** ಆಣೆ ಕೊಟ್ರ ೫ ರೂಪಾಯಿ ಕೊಡತಾರ. ಬೇಸಲ್ಲೇನು

**ಬಸವಂತ –** ನಿನಗೇನ ಗೊತ್ತದು, ಬ್ಯಾರೆ ಐತಿ, ದಿನಾ ೯ ಕೋಟಿ ಅದರ ಯಾಪಾರ ಐತಿ, ಚಂಡ ಕಂಪನಿ ಸುದ್ದಿ ಬ್ಯಾಡ, ತಳಾ, ಭ್ರಷ್ಟಮಾಡೀತು,

**ಅಣ್ಯಾ –** ಯಕ್ಕಾ ನಾನು ಹೊಕ್ಕಿನಿ ಹಂಗರ

**ಬಸವಂತಿ –** ಹುಂ, ಹೋಗು, ಹೋಗು

**ಬಸವಂತ –** ಅಲ್ಲಾ ನಿನಗೇನ ತೆಲಿ ಕೆಟ್ಟೀತಿ, ಬಜಾರದಾಗ ಮಂದಿ ಏಜಂಟರ ಅಂಗಡಿ ಕಟ್ಟಿಗೆ ಸಾಲು ಹಿಡಿದು ಕುಂತಿರತಾರ. ಕೂಳಿನ ಕಬರ ಇದ್ದಾಂಗಿಲ್ಲ ಬಂಡರಿಗೆ. ಬಸವಂತೀ, ಓಪನಿಂಗಿಗೆ ಇಲ್ಲಾ, ಕ್ಲೋಜಿಂಗಿಗೆ ಇಲ್ಲಾ, ಅದು ಬಾಳೇವಂತರ ಮಾತಲ್ಲದು.

ಬಸವಂತಿ – ಏನ? ದೈವಂತರು ಬಡವರನ ಉದ್ಧಾರಮಾಡಕ ಮಾಡ್ಯಾರ ಓ. ಸಿ. ಕಂಪನಿ ಅಡಗಂಟು ಆಗಬ್ಯಾಡ ಬಡವರ ಬಾಯಿಗೆ ಗಡ್ಡಿ ಕೊಟ್ಟು ಸುಮಾಕ ಇರು

ಬಸವಂತ – ಅಂತೂ ಬೇಸಂಗ ಊದ್ಯಾನ ಮಂತ್ರ ಇರಲಿ, ನಡಿ ಗೆಡ್ಡಿಗೆ ಬಿಗದೇನು (ಹೋಗುವನು)

## ಹನ್ನೊಂದನೆಯ ದೃಶ್ಯ

(ಶೇಖರನ ಮನೆ: ರಾಜಶೇಖರ ಪುಷ್ಪಾ ಸುರೇಶ ಇರುವರು)

ರಾಜಶೇಖರ – ಮನೆ ಹೇಗಿದೆ ಪುಷ್ಪಾ

ಪುಷ್ಪಾ – ಭೂಲೋಕದಲ್ಲಿ ಇದೊಂದು ಸ್ವರ್ಗೀಯ ಮಂದಿರ

ಸುರೇಶ – ವಿಲಾಸ ವೈಭವದ ಅಂತಃಪುರ, ಅಂತೂ ನೀನು ಎಲ್ಲಾ ಪೀಡೆಗಳನ್ನು ಪರಿಹರಿಸಿಕೊಂಡಿ

ಪುಷ್ಪಾ – ಹಾಗ ಮಾಡದಿದ್ದರೆ. ನಮ್ಮ ಪಾಲಿನ ಸಂತೋಷವೆಲ್ಲಾ ನಾಶವಾಗುತ್ತಿತ್ತು

ರಾಜಶೇಖರ – ಅದಕ್ಕಾಗಿಯೇ ಎಲ್ಲರನ್ನೂ ಓಡಿಸಿ ಬಿಟ್ಟೆ (ಅಣ್ಣ್ಯಾ ಟಪಾಲು ತಂದು ಕೊಡುವನು)

ಅಣ್ಣ್ಯಾ – ನಿಮ್ಮ ಹಸರಿಲೇ ಒಂದು ಕಾಗದ ಬಂದೈತ್ರಿ

ಸುರೇಶ – ಏನಿದು?

ಪುಷ್ಪಾ – ಅದೇ ಮನೆಯನ್ನು ನನ್ನ ಹೆಸರಿನಿಂದ ಮಾಡಿದಿರಲ್ಲಾ ಅದೇ ರಜಿಸ್ಟರ ಕಾಗದ.

ಸುರೇಶ – ನೀನು ಇತ್ತಿತ್ತಲಾಗಿ ಒಳ್ಳೇ ರಸಿಕನಾಗಿಬಿಟ್ಟೆ ರಾಜು

ರಾಜಶೇಖರ – ನಾನು ಪೇಟೆಗೆ ಹೋಗಿ ಊಟದ ಸಾಮಗ್ರಿಗಳನ್ನು ತರುವೆ

ಸುರೇಶ – ಓಹೋ ಅವಶ್ಯವಾಗಿ

ರಾಜಶೇಖರ – ನಾನು ಬರುವವರೆಗೆ ಇಲ್ಲಿಯೇ ಇರು ! ಸುರೇಶ.

ಸುರೇಶ – ನಾನೆಲ್ಲಿಗೆ ಹೋಗಲಿ, ನಿನ್ನನ್ನು ಒಂದು ಸ್ಥಿತಿಗೆ ತಂದು ಮುಟ್ಟಿಸೂವರೆಗೆ ನಾನೆಲ್ಲಿಗೂ ಹೋಗುವದಿಲ್ಲ

**ರಾಜಶೇಖರ** – ಅಣ್ಣಾ ಸಾಮಾನುಗಳನ್ನು ಕೊಡಿಸುವೆ, ತೆಗೆದುಕೊಂಡು ಬರುವೆಯಂತೆ ಬಾ.

**ಅಣ್ಣಾ** – ನಡಿರಿ ಯಪ್ಪಾ (ಹೋಗುವರು)

**ಸುರೇಶ** – ಅಂತೂ ಎಲ್ಲ ಸಂಪತ್ತು ನಿನ್ನ ಹಸ್ತಗತವಾದಂತಾಯಿತಲ್ಲ!

**ಪುಷ್ಪಾ** – ಇನ್ನೂ ಸಂಕೋಚವೇ ಸುರೇಶ.

**ಸುರೇಶ** – ಇನ್ನು ಮೇಲಿದೆ ಚಕ್ಕಂದ, ಚಲುವಾಟ.

**ಪುಷ್ಪಾ** – ಇನ್ನು ಮೇಲಣ ಜೀವನ । ಬಹುಮಾಟ.

**ಸುರೇಶ** – ನಕ್ಕು ನಲಿಯುವ ಬಾಳು । ಗೋಳನ್ನೇ ಕಾಣದು.

**ಪುಷ್ಪಾ** – ಏನೇ ಆದರೂ ಪಾಪದ ಅತಿರೇಕ.

**ಸುರೇಶ** – ಸುಖಪಡುವ ಜೀವನಕ್ಕೆ ! ಪಾಪದ ಭಯವೇಕೆ

**ಪುಷ್ಪಾ** – ನೀನು ನರರಾಕ್ಷಸ

**ಸುರೇಶ** – ನಾನೊಬ್ಬನೇ ಅಲ್ಲ, ಜಗದ ಬಹುಭಾಗ ಅವರಿಂದ ತುಂಬಿಕೊಂಡಿದೆ

**ಪುಷ್ಪಾ** – ಬಹು ಸಾಹಸಿ

**ಸುರೇಶ** – ಎಲ್ಲಿ ಆ ಬ್ರ್ಯಾಂಡಿ

**ಪುಷ್ಪಾ** – ತರುವೆ ತಾಳಿ (ಇಬ್ಬರೂ ಕುಡಿದು ಮತ್ತರಾಗಿ ಒಂದೇ ಖುರ್ಚಿಯ ಮೇಲೆ ಅಪ್ಪಿಕೊಂಡು ಕೂಡ್ರುವರು)

**ರಾಜಶೇಖರ** – (ಬಂದು ನೋಡಿ) ಪುಷ್ಪಾ, ಸುರೇಶಾ ಅವಳೀಗ ನನ್ನ ಪತ್ನಿ ಪಥದಲ್ಲಿರುವಳೆಂಬುದು ಗೊತ್ತಿಲ್ಲವೆ?

**ಸುರೇಶ** – ಗೊತ್ತಿದೆ

**ರಾಜಶೇಖರ** – ಈ ತರದ ಅನಾಚಾರವೇಕೆ?

**ಸುರೇಶ** – ಏನು ಶೇಖರಾ ನಾನು ಅನಾಚಾರಿಯೆ?

**ರಾಜಶೇಖರ** – ಪುಷ್ಪಾ ಮೈಮೇಲೆ ಎಚ್ಚರವಿದೆಯೋ ಇಲ್ಲೋ?

**ಪುಷ್ಪಾ** – ಇದೆ ಎಚ್ಚರವಿದೆ, ನಿನ್ನ ಹುಚ್ಚನ್ನು ಇಳಿಸುವದಕ್ಕಾಗಿ ನಾನು ಸದಾ

ಎಚ್ಚರದಲ್ಲಿದ್ದೇನೆ,

**ರಾಜಶೇಖರ** – ಈಗೇನು ನಡೆಸಿರುವೆ?

**ಪುಷ್ಪಾ** – ನನಗೆ ಬೇಕಾದವನೊಂದಿಗೆ ನವವಿಲಾಸ

**ರಾಜಶೇಖರ** – ಹಾಗಾದರೆ ನಾನು ನಿನಗೆ ಬೇಡಾದೆನೇ

**ಪುಷ್ಪಾ** – ಬೇಡಾಗಿರುವಿ ಎಂದು ಎಲ್ಲಿ ಹೇಳಿರುವೆ?

**ರಾಜಶೇಖರ** – ಥೂ ಮಾನಗೆಟ್ಟವಳೆ

**ಪುಷ್ಪಾ** – ಎಚ್ಚರದಿಂದ ಬೊಗಳು

**ರಾಜಶೇಖರ**– ನಿನಗಾಗಿ ಸತಿ–ಸಹೋದರನನ್ನು ಮನೆಯಿಂದಾ ಹೊರದೂಡಿದೆನಲ್ಲಾ. ದ್ರೋಹಿ ಸುರೇಶ, ನನಗೆ ಈ ಗತಿಯನ್ನು ತಂದೊಡ್ಡಿದೆಯಾ?

**ಸುರೇಶ** – ಏ ಹುಚ್ಚಗೊಡ್ಡೆ ನಿನಗೆ ಈ ಸ್ಥಿತಿಯನ್ನು ತಂದವನು ನಾನಲ್ಲ ನೀನಾಗಿಯೇ ತಂದುಕೊಂಡಿರುವೆ

**ರಾಜಶೇಖರ** – ಮೊದಲು ನನ್ನ ಮನೆಬಿಟ್ಟು ಹೊರಬೀಳಿರಿ

**ಪುಷ್ಪಾ** – ಮನೆಯ ಮೇಲೆ ಸಂಪೂರ್ಣ ನನ್ನ ಸ್ವಾಮಿತ್ವವಿದೆ ಎಂಬ ಕಾಗದಕ್ಕೆ ಸಹಿ ಮಾಡಿರುವಿ ನೆನಪು ಹಾರಿತೆ?

**ರಾಜಶೇಖರ** – ಚಾಂಡಾಲಗಿತ್ತಿ

**ಸುರೇಶ** – ಸಿಕ್ಕಸಿಕ್ಕಂತೆ ಸೊಕ್ಕಿನ ನುಡಿಗಳನ್ನು ಕಕ್ಕುತ್ತ ಹೋಗಬೇಡ ನಿನ್ನ ಜೀವನ ಸಂಚಿಕೆಯ ಸಂಪುಟಗಳನ್ನು ತಿರುವಿ ನೋಡು ನಿನ್ನನ್ನೇ ನಂಬಿದ ಸಹೋದರನಿಗೆ ನೀನಾವ ಪ್ರತಿಫಲವ ನೀಡಿದೆ

**ಪುಷ್ಪಾ** – ಕೈ ಹಿಡಿದ ಹೆಂಡತಿಯ ಕಣ್ಣು ಕಳೆದು ಮನೆಯಿಂದ ಹೊರದೂಡಿದೆ

**ಸುರೇಶ** – ಹೆತ್ತ ಕರುಳಿನ ಕತ್ತು ಹಿಚುಕಲು ಸಿದ್ಧನಾಗಿದ್ದಿ

**ರಾಜಶೇಖರ** – ಎಲೆ ರಕ್ಕಸಿ ನಿನ್ನ ಕುತ್ತಿಗೆಯನ್ನು ಹಿಚುಕಿ (ಮುಂದಕ್ಕೆ ಹೋಗುವನು)

**ಸುರೇಶ** – ಮುಂದಕ್ಕಿಕ್ಕದಿರು ಹೆಜ್ಜೆ

**ಪುಷ್ಪಾ** – ಧರ್ಮಪತ್ನಿಯ ಮನವನ್ನು ಹಿಂಡಿದ ಕರ್ಮ ಚಾಂಡಾಲಾ ಕಂಗಳ

ಕಾಂತಿಯನ್ನು ಇಂಗಿಸಿದ ಮಂಗವೇ ! ಸಿದ್ಧನಾಗು ನಿಸರ್ಗ ನೀಡುವ ಶಿಕ್ಷೆಯನ್ನು ಅನುಭೋಗಿಸಲು

**ಸುರೇಶ –** ಯಾವ ಪವಿತ್ರ ಕರಗಳಿಂದ ಕುಲವತಿಗೆ ಮಂಗಲಸೂತ್ರವನ್ನು ಕಟ್ಟಿದೆಯೋ ಅದೇ ಕರಗಳ ಕ್ರೂರತನದಿಂದ ಕುಲಾಂಗನೆಯ ಕಂಗಳ ಜ್ಯೋತಿಯನ್ನೇ ಕರಗಿಸಿ ಬಿಟ್ಟೆ ಸ್ವಾಗತಿಸು ಪಾಪದ ಫಲವನ್ನು (ಕೆಡವಿ ಕಣ್ಣಲ್ಲಿ ರಸಾಯನ ಹಾಕುವನು) (ಛಾಯಾ ಆನಂದ ಶೋಭಾ ಸ್ಯಾಡೋಸೀನ)

**ಆನಂದ –** (ತೆರೆಯಲ್ಲಿ) ವೇಶ್ಯಾ ವ್ಯಾಮೋಹದ ಮದ್ಯ ನಿಶೆ ಏರಿದ ನಿನಗೀಗ ಯಾವದು ಬೇಡಾಗಿದೆ. ಕೆಟ್ಟ ವಸ್ತುವಿನ ನಾಶ ಬೇಗ ಆಗುವದಿಲ್ಲ ಅಣ್ಣಾ ಅವರ ಅಂತಿಮಾವಸ್ಥೆ ನಿನ್ನ ಪ್ರಾಯಶ್ಚಿತ್ತದಲ್ಲಿ

**ರಾಜಶೇಖರ –** ಹೌದು ಆನಂದಾ, ಶೋಭಾ, ಶೋಭಾ

**ಶೋಭಾ –** (ತೆರೆಂಯುಲ್ಲಿ) ಸತಿ–ಸುತರ ಸುಖವನ್ನು ಬದಿಗೊತ್ತಿ ಮಾನಮರ್ಯಾದೆಗಳ ಮಿತಿತಪ್ಪಿ ಮನೆತನಕ್ಕೆ ಕಲಂಕ ತರುವ ಕಾರ್ಯನಿರತರಾಗಿ ನಿಮ್ಮ ಆತ್ಮದ ಅಧಃಪತವನ್ನು ನೀವೇ ಮಾಡಿಕೊಳ್ಳುತ್ತಿರುವಿರಿ. ಉಚ್ಚ ಸಂಸ್ಕೃತಿಯವರಾದ ನೀವು ಸೆರೆಯ ಸೇವನೆ ಮಾಡಿದರೆ, ಸಮಾಜ ನಿಮ್ಮನ್ನು ಎಂಥ ಕೀಳುದೃಷ್ಟಿಯಿಂದ ಕಾಣುವದು. ಕೆಟ್ಟ ಚಟಗಳನ್ನು ದೂರ ಮಾಡಿ ಸ್ವಾಮಿ, ಕೆಟ್ಟ ಆಟಗಳು ನಿಮ್ಮಂಥವರಿಗೆ ತರವಲ್ಲ ಕೆಟ್ಟು ಹೋಗುವ ಮೊದಲೇ ವಿಚಾರಿಸಿ.

**ರಾಜಶೇಖರ –** ಸರಿಯಾದ ಶಿಕ್ಷೆ, ಕಣ್ಣಿನ ಕಾಂತಿಯನ್ನೇ ಹೀರಿ ಹರಣ ಹಾರುತಿದೆ ನಿಸರ್ಗವೇ, ಈ ರೀತಿ ಸೇಡು ತೀರಿಸಿದೆಯಾ? ಕೈ ಹಿಡಿದ ಹೆಂಡತಿಯ ಕಣ್ಣುಗಳ ನಾ ಕಳೆದೆ. ಕಳವಳಿಸಿ ಬೇಡಿದಳು ಬಿಡಿರೆನ್ನ ದೊರೆಯೆಂದು. ದಯಬಾರದೆ ಸುರುವಿದೆನು ನಾನು ಕೆಡವಿ ಕಾಲಕೂಟ ವಿಷವನ್ನು, ನನ್ನ ಕಣ್ಣನ್ನು ಕಳೆಯಿತು ನಿಸರ್ಗ, ನಿನ್ನ ಕರ್ಮವಾಗಿ ಕಟ್ಟಿದೆನು, ಕರ್ಮಕೋವಿಯನು ಇದೇ ಕರದಿಂದಲೇ ಉಣ್ಣುತಿರುವೆ ಆ ಕರ್ಮಫಲವನ್ನು ನರಕ ದೂರಹುದೇ? ಇಲ್ಲಿಲ್ಲಾ, ನಮ್ಮ ಪಾಪಕ್ಕನುಸರಿಸಿ ಅಲ್ಲಿಯೇ ಸಿದ್ಧವಾಗುವದು ಆನಂದಾ, ತಮ್ಮಾ ಆನಂದಾ, ನಿನ್ನ ಮಾತನ್ನು ಮನ್ನಿಸಿದೆ ನಾನು, ವಿಷಹಾಕಿ

ಕೊಲ್ಲಲು ಹವಣಿಸಿದ್ದೆ ತಮ್ಮಾ ಆನಂದಾ ಕ್ಷಮಿಸು ಶಂಕರಾ ಶಂಕರಾ ಮಗು ಮನ್ನಿಸುವೆಯೇನಪ್ಪಾ? ಶೋಭಾ, ಸತಿಧರ್ಮದ ಸ್ವರೂಪ ಸ್ತ್ರೀರತ್ನ ಎಲ್ಲಿರುವಿ ಸಾಧ್ವಿ ನಿಮ್ಮೆಲ್ಲರನ್ನು ನಿರ್ಗತಿಕರನ್ನಾಗಿ ಮಾಡಿದ ನಿಷ್ಕರುಣಿ ನಾನು ಶೋಭಾ, ಒಮ್ಮೆ ಹೇಳು ನಿನ್ನನ್ನು ಕ್ಷಮಿಸಿದೆನೆಂದು, ಶೋಭಾ, ಶೋಭಾ.

**ಪದ....**

ಶೋಭಾ ಬಾ ಗರತಿ । ಬಾ ಗರತೀ ಬಾ ಗರತೀ.....
ಬಾ ಗರತಿ
ಬಾರೇ ಯುವತಿ
ಮಂದಗಾಮಿ ? ಸುಂದರವನದೆ ।
ಅಗಲಿದೆಯಾ ನೀ । ಮಹಾಗರತಿ
ನಿಜದಿ ಭಾಗ್ಯವತಿ ॥ ೧ ॥

ಭಾಗ್ಯಹೀನ ಸತಿ । ಸುಗುಣ ಶೀಲ ಮತಿ ।
ತೋರು ತೋರು ನೀ ನಿರ್ಮಲ ಪ್ರೀತಿ ।
ಆಗಲಿದೆಯಾ ನೀ ಮಹಾ ಗರತಿ ।
ನಿಜದಿ ಭಾಗ್ಯವತಿ ॥ ೨ ॥

**೨ನೇ ಅಂಕ ಸಮಾಪ್ತ**

===*****====*****====

# ತೃತೀಯಾಂಕ

## ಒಂದನೇಯ ದೃಶ್ಯ

(ಭಾವಿ ಸೀನು)

(ಕುರುಡಿಯಾದ ಶೋಭಾಳನ್ನು ಶಂಕರನು ಕರೆದುಕೊಂಡು)

**ಪದ**

ಹೇ ದೇವನೇ ಲಾಲಿಸೊ । ಪರಿಮಳವ ನೀ ಪಾಲಿಸೋ ।
ವಿಧಿಲಿಖಿತ ತಾನು ಮೀರಲೇ । ಜನನ ಮರಣ ಮನದಾಶೆಯ ॥ ಪಲ್ಲ ॥
ಪಾವನನಾಮ ಪಾರ್ವಳ । ಗಾಯನಗಾತ್ರ ಅಜರಾಣಿ ನೀ ।
ಹೇ ದೇವನೆ ನೀ ಲಾಲಿಸೋ । ಪರಿಮಳವ ನೀ ಪಾಲಿಸೋ ॥ ೧ ॥

**ಶೋಭಾ –** ಶಂಕರಾ ನಾವೀಗ ಎಲ್ಲಿಗೆ ಬಂದಿದ್ದೇವೆ.

**ಶಂಕರ –** ಊರ ಬಿಟ್ಟು ಬಹುದೂರ ಬಂದಿದ್ದೇವೆ ಅವ್ವಾ, ಹಾಳು ಬಾವಿಯ ಸಮೀಪದಲ್ಲಿ ಬಂದಿದ್ದೇವೆ.

**ಶೋಭಾ –** ಇನ್ನೂ ಸ್ವಲ್ಪ ಮುಂದೆ ಹೋಗೋಣವೇನಪ್ಪ.

**ಶಂಕರ –** ಎಲ್ಲಿಗೆ ಕರೆದುಕೊಂಡು ಹೋಗುವೆ ಅವ್ವಾ ನನಗೆ ದಣಿವು ಆಗಿದೆ ನಾನು ನಡೆಯಲಾರೆ.

**ಶೋಭಾ –** ಇಂದಿನ ರಾತ್ರಿಯನ್ನು.....

**ಶಂಕರ –** ಅಡವಿಯಲ್ಲಿಯೇ ಕಳೆಯವದೇನವ್ವ.

**ಶೋಭಾ –** ನಿರ್ಗತಿರಾದ ನಮಗೆ ಮನೆ ಮಾರುಗಳಿರುವವೇ ಶಂಕರಾ, ಕೈಹಿಡದ ಪತಿ ಹೊರದೂಡಿದಾಗ ನಮಗಾರು ಗತಿ ಶಂಕರಾ.

**ಶಂಕರ –** ಕತ್ತಲೆ ಬಹಳವಾಗಿದೆ. ನೀನು ಅಳಬೇಡಮ್ಮಾ ನನಗೆ ಹೆದರಿಕೆ ಆಗುವದು

**ಶೋಭಾ –** ಹೆದರಬೇಡಪ್ಪ ಅಳುವದಿಲ್ಲ ನಾನಿನ್ನು ಅಳುವದಿಲ್ಲ ಶಂಕರಾ,

**ಶಂಕರ –** ಅವ್ವಾ, ಎತ್ತ ಹೋದರೂ ದಿಕ್ಕ ತಿಳಿಯುವಂತಿಲ್ಲ. ಕತ್ತಲಾವರಿಸಿದೆ ಜನರ ಸುಳಿವಿಲ್ಲದ ಈ ಕಗ್ಗಾಡಿನಲ್ಲಿ ! ಕಾಡ ಮೃಗಗಳ ಬಿಡಾರ ಅವುಗಳ ಹೊಟ್ಟೆಯ ಆಹಾರವಾಗಬೇಕಾದೀತು.

**ಶೋಭಾ –** ಸಂತೋಷವಲ್ಲವೇ, ನಿರರ್ಥಕವಾಗಿ ಮಣ್ಣಿನಲ್ಲಿ ಹೂತು ಮೆರೆತು ಬಿಡುವ ಈ ಶರೀರಗಳನ್ನು ಪ್ರಾಣಿಗಳು ತಿಂದು ತೃಪ್ತಿ ಹೊಂದಿದರೆ ಅಷ್ಟೊಂದು ಭಾಗ್ಯವನ್ನು ಪಡೆದಿಲ್ಲ ನಾವು ಬಾ ಮಗು! ಮಲಗಿಕೊಳ್ಳುವಾ (ಶಂಕರನಿಗೆ ನಿದ್ದೆ ಹತ್ತಿದ ನಂತರ ಎದ್ದು) ಮಲಗಿ ನಿದ್ರಿಸುತಿರುವೆಯಾ, ನಿದ್ರಿಸು ನಿರ್ಮಲ ಮನಸ್ಸಿನ ಶಾಂತಿ ಕದಡಿ ಹಸಿವೆ ಭಾಧೆಯನ್ನು ತಾಳಿ, ತಾಳಿ,! ಕೊನೆಗೆ ನಿದ್ರಾದೇವಿಗೆ ಶರಣು ಹೋದೆ ಏನಪ್ಪ ! ದೈವ ಹೀನಳ ಮಗನಪ್ಪ ನೀನು (ಅಳುವಳು) ಇನ್ನೇಕೆ ಈ ಹಾಳು ಬಾಳು. ಸಾವನ್ನಪ್ಪಿ ಸುಖಪಡಬೇಕು, ಏತಕ್ಕಾಗಿ ಬದುಕಬೇಕು, ನಾನು ಸಾಯಲೇಬೇಕು. (ಬಾವಿ ಕೈಯಾಡಿಸಿ) ಇದುವೇ ಸ್ವರ್ಗದ ದಾರಿ, ಸಾವ ನೀಡುವ ಪರೋಪಕಾರಿ, ಕ್ಷಮಿಸು ನಿನ್ನ ತಾಯಿಯನ್ನು (ಬೀಳಲಿಕ್ಕೆ ಹೋಗುವಳು)

**ಹಿನ್ನೆಲೆ –** ನಿಲ್ಲು, ನಿಲ್ಲು

**ಶೋಭಾ –** ನನ್ನನು ತಡೆದವರಾರು?

**ಹಿನ್ನೆಲೆ –** ನಾನು ನಿನ್ನ ಹೃದಯದಲ್ಲಿರುವ ವಿವೇಕ.

**ಶೋಭಾ –** ನನಗ ಹೃದಯವಿದೆಯೇ? ವಿವೇಕವಿದೆಯೇ?

**ಹಿನ್ನೆಲೆ –** ನೀನು ಮಾನವಳಲ್ಲವೇ?

**ಶೋಭಾ –** ಅಲ್ಲಾ ! ನಾನು ಮಾನವಿ ಅಲ್ಲಾ ! ಮಾನವ ಲೋಕದಲ್ಲಿ ನನಗೆ ಸ್ಥಳವೂ ಇಲ್ಲ

**ಹಿನ್ನೆಲೆ –** ನಿನ್ನ ಜೀವನದ ಜೀವಾಳವಾಗಿರುವ ಶಂಕರನ್ನು ಯಾರಿಗೆ ಒಪ್ಪಿಸುವೆ, ಹೆತ್ತಮ್ಮ ಸತ್ತು ಹೋದರೆ ? ನಿನ್ನ ಸುತನಿಗೆ ಗತಿಯಾರು

**ಶೋಭಾ –** (ನಡಗುತ್ತ ಭಯದಿಂದ) ಶಂಕರಾ, ನನ್ನ ಶಂಕರಾ (ಕೂಸಿನ್ನ ಮೇಲೆ ಬಿದ್ದು) ತಾಯಿ–ತಂದೆಗಳನ್ನು ಕಳೆದುಕೊಂಡು ತಬ್ಬಲಿಯಾದ

ಚಂದ್ರಹಾಸನನ್ನು ಯಾರು ಸಂರಕ್ಷಿಸಿದರೋ ಅವರೇ ನನ್ನ ಶಂಕರನನ್ನು ಸಂರಕ್ಷಿಸುವರು ! ಕ್ಷಮಾಗುಣಭರಿತ, ಚರಿತ್ರ ಭಾರತಿ ನನ್ನ ಮಗಳನ್ನು ನಿನ್ನ ಉಡಿಯಲ್ಲಿ ಹಾಕಿರುವೆ ಶಂಕರಾ ! ಶಂಕರಾ ಇಲ್ಲ ಇಲ್ಲವಪ್ಪ. ನಿನ್ನೊಬ್ಬನನ್ನೇ ಈ ನಿಷ್ಕರುಣಿಯಾದ ಜಗತ್ತಿನಲ್ಲಿ ಬಿಟ್ಟು ಹೋಗಲಾರೆ, ನೀನು ನನ್ನೊಡನೆ ಬರಲೇಬೇಕು ಅಳುವಿಲ್ಲದ ನಗುವಿಲ್ಲ, ಆ ಶೂನ್ಯದಲ್ಲಿ ಇಬ್ಬರೊಂದಾಗಿ ಸೇರೋಣ. ಹಸಿದು ಆಸನವಿಲ್ಲದೆ ಕಸಿವಿಸಿಗೊಂಡಿರುವದು ಬೇಡ. ಶಂಕರಾ (ಎತ್ತಿಕೊಂಡು) ಎತ್ತಿ ಮುದ್ದಿಟ್ಟು ಕರಗಳಿಂದ ಮೃತ್ಯುವಿನ ಮುಖದಲ್ಲಿ ಚಲ್ಲುವೆನಪ್ಪ ! ಹೆತ್ತ ಕರಳು ಹಿಚಕಿ ಹಾಳ ಬಾವಿಯಲ್ಲಿ ಚಲ್ಲುತ್ತಿವೆ ! ತೊಟ್ಟಿಲವ ತೂಗಿ ಜೋ ಎಂದು ಪಾಡಿದ ಹೆತ್ತಾಯಿ ನಿನಗಿಂದು ಮೃತ್ಯ ಆದಳು, ತಾಯಿಯಲ್ಲಾ ನಾನು ನಾಯಿ ಶಂಕರಾ (ಅಳುವಳು)

**ಶಂಕರ –** ಅವ್ವ ನಿನಗೆ ನಿದ್ರೆ ಬಂದಿಲ್ಲೇನವ್ವ, ಏನವ್ವ ಅಳುತ್ತಿರುವಿ? ಕಣ್ಣುಗಳು ನೋವಾಗಿರುವವೇ?

**ಶೋಭಾ –** ಇಲ್ಲವಪ್ಪ !

**ಶಂಕರ –** ಒತ್ತರಿಸಿ ಬರುತ್ತಿರುವ ದುಃಖದ ಅಳುವನ್ನು ನುಂಗಲಾರದೇ? ಹೃದಯದಿಂದ ಹೊರಹೊಮ್ಮಿ ಆಶ್ರಯಧಾರೆ ಶೋಕ !

**ಶೋಭಾ –** ಶಂಕರಾ ! ಈ ಸಂಕಟದಿಂದ ನಾವೊಮ್ಮೆ ಪಾರಾಗಿ ಬಿಡೋಣವೇ

**ಶಂಕರ –** ಸಾಧ್ಯವಿದೆಯೇ?

**ಶೋಭಾ –** ನೀನೊಪ್ಪುವಿಯಾ?

**ಶಂಕರ –** ನಿನ್ನ ಮಾತನೆಂದಾದರೂ ಮೀರಿರುವನೆ? ಈ ನಿನ್ನ ಮಗನು.

**ಶೋಭಾ –** ಇಲ್ಲವಪ್ಪಾ ನನ್ನ ಮಾತನೆಂದೂ ಮೀರಿದವನಲ್ಲ,

**ಶಂಕರ –** ಏಕವ್ವ ಮತ್ತೇನು ಸಂಶಯ.

**ಶೋಭಾ –** ಈಗೊದಗಿರುವದು ಸಂದಿಗ್ಧ ಸಮಯ

**ಶಂಕರ –** ತಾಯಿಯ ಮಾತು ಮೀರುವದಿಲ್ಲ ! ನಿನ್ನ ಮಗನ ಹೃದಯ

**ಶೋಭಾ –** ನಾ ಬಲ್ಲೆ ನಿನ್ನ ಮನ ಮಾತೃಭಕ್ತಿ ಘನ, ನಿನಗೆ ತಕ್ಕ ತಾಯಿ ನಾನಲ್ಲವಪ್ಪ.

**ಶಂಕರ** – ಹೇಳು ಹಾಗೇ ಅಳುವೆ ಏಕೆ?

**ಶೋಭಾ** – ಹಾಗೇ ಅಳುವಲ್ಲ. ಮನತುಂಬಿ, ಎದೆತುಂಬಿ, ಹೊರಹೊಮ್ಮಿ ಗಂಟಲಿಂದ ಚಿಮ್ಮಿ ತಡೆದರೂ ತಡೆಯಲಾರದೇ ಹೆಚ್ಚುತ್ತಿರುವದು ಅಳವು

**ಶಂಕರ** – ಅಳಬೇಡ, ಹೇಳು, ಅಳುವದನು ತಾಳು

**ಶೋಭಾ** – ನಿರ್ದಯವಾದ ಜಗತ್ತಿನಿಂದ ಸುಖಮಯವಾದ ವಿಶ್ವದ ಕಡೆಗೆ ಹಾಂ ಹೋಗೋಣವೆ?

**ಶಂಕರ** – ಅದೆಂತು ಸಾಧ್ಯ?

**ಶೋಭಾ** – ಸುಖಮಯವಾದ ಮಾರ್ಗವಿದೆ

**ಶಂಕರ** – ಎಲ್ಲಿ

**ಶೋಭಾ** – ಅದೋ ಅಲ್ಲಿ

**ಶಂಕರ** – ಅಲ್ಲಿ, ಹಾಳುಬಾವಿಯಲ್ಲಿ......

**ಶೋಭಾ** – ಹೌದು ಅಲ್ಲಿಯೇ, ಹಾಳು ಬಾವಿಯಲ್ಲಿಯೇ

**ಶಂಕರ** – ಆ ಬಾವಿಯಲ್ಲಿ ಬಿದ್ದು

**ಶೋಭಾ** – ಮರಣವನ್ನಾಶ್ರಯಿಸುವದು

**ಶಂಕರ** – ಅನಾಹುತಕ್ಕೀಡಾಗುವದು ಬೇಡವ್ವ

**ಶೋಭಾ** – ಅನಾಹುತದಿಂದ ತಪ್ಪಿಸುವ ಉಪಕಾರಿಯಾದ ಸಾವನ್ನು ನಮ್ಮ ಗೊದಗಿದ ಈ ಬಾವಿ ಸ್ವರ್ಗದ ದಾರಿ

**ಶಂಕರ** – ನಾನೊಲ್ಲೆ ಅಮ್ಮ

**ಶೋಭಾ** – ಇಲ್ಲಾ ನನ್ನೊಡನೆ ಬರಲೇಬೇಕು

**ಶಂಕರ** – ನನ್ನನ್ನು ಬಿಟ್ಟುಬಿಡವ್ವಾ

**ಶೋಭಾ** – ಕ್ರೂರವಾದ ಜಗತ್ತಿನ ಕೈಯಲ್ಲಿ ನಿನ್ನನ್ನು ಕೊಡಲಾರೆ

**ಶಂಕರ** – ಬಿಡು ಅವ್ವ, ನಾನು ಸಾವನ್ನು ಬಯಸುವದಿಲ್ಲ.

**ಶೋಭಾ** – ಸಾವನ್ನು ನೀನು ಬಯಸದಿದ್ದರೂ, ಸಾವು ನಿನ್ನನ್ನು ಬಯಸಿದೆ

ಶಂಕರ – ಬೇಡ ಅವ್ವ ಬಿಡು ನನ್ನನ್ನು

ಶೋಭಾ – ಇಲ್ಲಾ ಬಿಡುವದಿಲ್ಲಾ.

ಶಂಕರ – ಹೆತ್ತ ಹೃದಯವಿಷ್ಟು ಕಠೋರವಾಯಿತೇ ತಾಯಿ ಮೃತ್ಯ ಸ್ವರೂಪಳಾದಳೇ, ತಾಯಿಯ ಹೃದಯ ಕರುಣದ ಕಡಲಲ್ಲವೆ?

ಶೋಭಾ – ಅಲ್ಲಾ, ತಾಯಿಯ ಹೃದಯ ಕರುಣದ ಬೀಡಲ್ಲ.

ಶಂಕರ – ಹುಟ್ಟಿದಾಗಲೇ ಕತ್ತು ಹಿಚುಕಿ ಕೊಲ್ಲಬೇಕಾಗಿತ್ತು, ಹಾಳುಬಾವಿಯಲ್ಲಿ ಚಲ್ಲಿ ಕೊಲ್ಲುವದಕ್ಕಾಗಿ ಬೆಳಸಿದಿ ಏನವ್ವ ಅಕ್ಕರತೆಯಿಂದ?

ಶೋಭಾ – ನಾನು ಹಡೆವದಳಾದ್ದರಿಂದ ನಿನ್ನನ್ನು ಬೇಕಾದಾಗ ಕೊಲ್ಲಬಹುದು

ಶಂಕರ – ಹಾಗಾದರೆ ಚಲ್ಲಿಬಿಡು. ಹಾಳುಬಾವಿಯಲ್ಲಿ (ಹುಡುಗನನ್ನು ಎತ್ತಿಕೊಂಡು ಬಾವಿಯಲ್ಲಿ ಬೀಳಬೇಕೆನ್ನುವಷ್ಟರಲ್ಲಿ)

ಹಿನ್ನೆಲೆ – ತಡೆ ರಾಕ್ಷಸಿ

ಶೋಭಾ – ಮನವೇ ಮತ್ತೇಕೆ ಮುಗ್ಗುರಿಸಿದೆ?

ಹಿನ್ನೆಲೆ – ಆತ್ಮಹತ್ತ್ಯೆಯಲ್ಲದೆ ಮತ್ತೆ ಶಿಶುಹತ್ಯೆ ಮಾಡಲು ಮನಸ್ಸು ಮಾಡಿದೆಯಾ ದ್ರೋಹಿ

ಶೋಭಾ – ದ್ರೋಹಿ ಯಾರು?

ಹಿನ್ನೆಲೆ – ನೀನು?

ಶೋಭಾ – ನಾನಾರಿಗೆ ದ್ರೋಹ ಮಾಡಿರುವೆ?

ಹಿನ್ನೆಲೆ – ಮಾನವ ಕುಟುಂಬಕ್ಕೇನೆ ದ್ರೋಹ ಮಾಡುತಿರುವಿ. ಸತಿ ಧರ್ಮವನ್ನು ಬಿಡದೆ ಪಾಲಿಸಿ ಆದರ್ಶ ಸತಿಯಾಗುವ ಬದಲು. ಸತಿ ಧರ್ಮವನು ಹತ್ತಿಕ್ಕುವ ಘಾತಕಿಯಾಗಿರುವಿ ಶೋಭಾ ಇದು ನಿನ್ನ ಸೋಲಲ್ಲ, ಧರ್ಮದ ಸೋಲು ನಿನ್ನ ಸಾವಲ್ಲ, ಪತಿವೃತಾ ಧರ್ಮದ ಸಾವು. ಸತಿಧರ್ಮದ ಪಾಲನೆಯ ಪ್ರತಿಫಲವು, ನಿನ್ನ ಮೈದುನನಾದ ಆನಂದನಿಗೆ ನೀನೇನು ವಚನ ಕೊಟ್ಟಿದ್ದಿ, ಏಂಥ ಪ್ರಸಂಗಬಂದರೂ ಆತ್ಮಹತ್ಯ ಮಾಡಿಕೊಳ್ಳುವದಿಲ್ಲೆಂದು.

ಶೋಭಾ – ಆತ್ಮಹತ್ಯ ಇಲ್ಲ ಆನಂದಾ, ಇಲ್ಲಾ, ನಡೆ ಶಂಕರಾ ಇಲ್ಲಿ ನಿಲ್ಲುವದೇ ಬೇಡ. (ಹೋಗುವರು)

## ಎರಡನೆಯ ದೃಶ್ಯ

ರಸ್ತಾ

**ಬಸವಂತಿ –** ಅಲ್ಲ ಅಣ್ಣಾ ೨೦ ರೂಪಾಯಿ ಕೊಟ್ಟರೂ ಒಮ್ಮೆ ಸಹ ಹತ್ತಲಿಲ್ಲವಲ್ಲ

**ಅಣ್ಣಾ –** ಏನ ಮಾಡಲಿ ನಂಬರು ಬರವಲ್ಲದು,

**ಬಸವಂತಿ –** ಇನ್ನಮ್ಯಾಗ ಹಚ್ಚಲೋ, ಬ್ಯಾಡೋ.

**ಅಣ್ಣಾ –** ಬಿಡಬ್ಯಾಡ, ಒಮ್ಮೆ ಹತ್ತಬಾರದು ಹತ್ತಿತು ಅಂದ್ರ, ಹಿಂದಿಂದು ಮುಂದಿಂದು ರೂಪಾಯಿಗಳು ಗರ್ರಅಂತ ತಿರಗತಾವು

**ಬಸವಂತಿ –** ಸಾಮಾನ ವತ್ತಿ ಇಟ್ಟ ಸುದ್ದಿ, ನಮ್ಮ ಮನಿಯವಗ ತಿಳಿತಂದ್ರ, ಕೋಲ ತೋಗೋತಾನ

**ಅಣ್ಣಾ –** ಹೀಗ ಮಾಡಹಂಗರ, ಇವತ್ತ ನಮ್ಮ ಭೀಮ್ಯಾ ಒಳೇಟ ತೆಗೆದುಬಿಟ್ವಾನ ಬಾಳಮಂದಿ ಅದನ ಹಿಡಿದಾರ, ನೀನು ಅದನ ಹಿಡಿದುಬಿಡು

**ಬಸವಂತಿ –** ಮತ್ತ ರೊಕ್ಕ ಬೇಕಲ್ಲ?

**ಅಣ್ಣಾ –** ಇದೊಂದು ಸಾಮಾನ ಒತ್ತಿ ಇಡು ಅಲ್ಲಾ.

**ಬಸವಂತಿ –** ಚಾರುಚೂರು ಇದ್ವು ಇಲ್ಲಿತನಕ ಮಾರಿ ಕೊಟ್ಟೆ ಇನ್ನೇನೈತಿ

**ಅಣ್ಣಾ –** ಸೀರಿ ಪಾರೀ ಏನು ಇಲ್ಲೇನು?

**ಬಸವಂತಿ –** ಲಗ್ನ ಶೀರಿ ಒಂದs ಉಳದೈತಿ

**ಅಣ್ಣಾ –** ತಗೊಂಡು ಬಾ

**ಬಸವಂತಿ –** ನೋಡಮತ್ತ ನಂಬರ್ ಬರಾಕಿಲ್ಲ

**ಅಣ್ಣಾ –** ನಿನಗ್ಯಾಕ ಅದರ ಕಾಳಜಿ ಅದೀನಲ್ಲ

**ಬಸವಂತಿ –** ಹೀಂಗ ಅಂದ ೨೦ ರೂಪಾಯಿ ಹೋದವು

**ಅಣ್ಣಾ –** ಮನ್ಯಾಗ ಭಾಂಡೆ ಸಾಮಾನ ಅದಾವಲ್ಲ ಇನ್ನೂ

**ಬಸವಂತಿ –** ಅದಾವ ಏನ ಚಾರ ಚೂರು

**ಅಣ್ಣಾ –** ಮತ್ಯಾಕ ಹೆದರತಿ

**ಬಸವಂತಿ –** ಅವನ್ನೂ ಗೊತ್ತಿಗೆ ಹಚ್ಚಬೇಕಂದ್ಯಾ

**ಅಣ್ಣ್ಯಾ –** ಮುಂದ ಮತ್ತೊಬ್ಬ ಶಿವಾ, ಸೀರಿ ತಗೊಂಡ ಬಾ

**ಬಸವಂತಿ –** (ಸೀರಿ ತಂದು) ಇದು ೫೦ ರೂಪಾಯಿ ಶೀರಿ

**ಅಣ್ಣ್ಯಾ –** ಇದ ಆಟಕ್ಯಾರ ಇಟಗೊಂತಾರ, ಬಾಳ ಅಂದ್ರ ೨೦ ರೂಪಾಯಿ ನೀನ ಏನ ಕಾಳಜಿ ಮಾಡಬ್ಯಾಡ, ಬರೇ ಆಟ ನಂಬರ ತಕ್ಕೊಂಡು ಬಿಟ್ಟಾನ ಇಮಾಮ ಹಗ ಹಗ ಹೊಡದರ ಬಕ್ಕ ಅಂದಿರಬೇಕು

**ಬಸವಂತಿ –** ನೋಡ ಹಂಗರ ಹ್ಯಾಗ ಮಾಡತಿಯೋ?

**ಅಣ್ಣ್ಯಾ –** ನೀ ಏನ ಚಿಂತಿ ಮಾಡಬ್ಯಾಡ ಧ್ವನಿ ಬೇಸಿ ಅದ. ನಡೆ ಒತ್ತಿ ಇಟ್ಟು ರೂಪಾಯಿ, ತರೂನ. ಎ ಬಸವಂತೀ ನಿನ್ನೆ ರಾತ್ರಿ ಕನಸ ಬಿದ್ದಿತ್ತ ಏನ ನಿನಗ

**ಬಸವಂತಿ –** ನಿನ್ನೆ....ರಾತ್ರಿಯಲ್ಲಾ ಒಂದು ಕನಸು ಬಿದ್ದಿತ್ತು,

**ಅಣ್ಣ್ಯಾ –** ಹೇಳ ಏನಾತು,

**ಬಸವಂತಿ –** ನೀನು ನಮ್ಮ ಮನಿಗೆ ಬಂದಿದ್ದಿ ನಮ್ಮ ಮನಿಯವಾ ಇದ್ದಿಲ್ಲಾ ಹಂಗ ದಡದಡ ಒಳಗ ಬಂದಿ ನನ್ನ ಹತ್ತರ

**ಅಣ್ಣ್ಯಾ –** ಮುಂದ

**ಬಸವಂತಿ –** ಬಂದವನ ನನ್ನ ಕೈ ಹಿಡಿದಿ, ಅವಾಗ ನಮ್ಮ ಮನಿಯವ ಬಂದಾ ಬಂದು ಬಾಗಲಾ ಮುಚ್ಚಿ ಸಿಟ್ಟಿಗೆದ್ದ ನಮ್ಮಿಬ್ಬರನ್ನೂ ಹೋಳಿಯಾಡಿ ಬಿಟ್ಟ

**ಅಣ್ಣ್ಯಾ –** ಕೈಯಾಗ ಏನರ ಹಿಡಿದಿದ್ದನೇನು?

**ಬಸವಂತಿ –** ಏನ ಇತ್ತು ಉದ್ದ ಕಡಿಮೆ ಇತ್ತು, ಡೊಂಕ ಡೊಂಕ ಇತ್ತು

**ಅಣ್ಣ್ಯಾ –** ಕಸಬರಗಿ ಹಿಡಿದಿದ್ದನೇನು ಮತ್ತ,

**ಬಸವಂತಿ –** ಕಸಬರಗಿ ಅಲ್ಲಾ, ಕುಡಗೋಲು

**ಅಣ್ಣ್ಯಾ –** ಅಬಬಬ, ಅಲಲಲಲ ಕುಡಗೋಲು ಹಿಡಕೊಂಡಿದ್ದನೇನು ನಾನು ನೀನು ಮಾವಾ ೩ ಮಂದಿ ಆದ್ವಿ, ಕುಡಗೋಲು ಅಂದ್ರ ೮ ಇದ್ದಂಗ ಇರತೈತಿ ೩೮ ಆತಲ್ಲ ಹಚ್ಚಿಬಿಡು ೩೮ಕ್ಕ ಬರೋಬರಿ ಆತು ನಾನು ೨೦ ರೂಪಾಯಿ ಹಚ್ಚಿ ಬಿಡತೀನಿ

ಬಸವಂತಿ – ಅಷ್ಟ ರೊಕ್ಕ ಎಲ್ಲಿಂದ ಬಂತು ಅಣ್ಯಾ

ಅಣ್ಯಾ – ಸೂಳೆವ್ವನ ಮನ್ಯಾಗ ಸುರೇಶಪ್ಪ ಸಾವಕಾರ ಕುಡಿದು ನಿಶೇದಾಗ ಬಿದ್ದಾಗ ಕಿಸೆದನ್ನವು ತಕ್ಕೊಂಡು ಬಂದೀನಿ.

ಬಸವಂತಿ – ಓಸು ಹಚ್ಚಿ ಬಿಡತೀ ಏನ?

ಅಣ್ಯಾ – ಹಂಗ ಹೊಡ್ತಾನ ಹೊಡ್ತ, ನೋಡ ನಮ್ಮದು

## ಮೂರನೆಯ ದೃಶ್ಯ

(ಪುಷ್ಪಾನ ಮನೆ, ಪುಷ್ಪಾ ರೋಗದಿಂದ ಬಳಲುತ್ತಿದ್ದಾಳೆ)

ಪುಷ್ಪಾ – ಅಯ್ಯೋ ಬಹಳ ವೇದನೆ, ಮಾರದಿರಿ ದೇಹವನು ಹಣದಾಶೆಗಾಗಿ ಸಹೋದರಿಯರೆ. ವೇಶ್ಯೆಯ ಹೇಸಿ ಜೀವನದ ಅಂತ್ಯ ವಿಷಮವಿದೆ? ನರಕವನ್ನು ನಾ ಆಮಂತ್ರಿಸಿಕೊಂಡೆ. ಅಗರು ಚಂದನಗಳಿಂದ ಶೋಭಿಸುತ್ತಿದ್ದ ದೇಹವಿಂದು ಅನೇಕ ಕ್ರಿಮಿಗಳ ಆಗರವಾಗಿದೆ. ಗರತಿಯಾಗಿ ಬಾಳಿ ಹೆತ್ತವರ ಹೆಸರ ತಂದ ಆನಂದಾ ದೇವ ಮಾನವಾ ಆನಂದಾ ನಿನ್ನ ಅಮೃತ ವಿಷವೆಂದು ಭಾವಿಸಿದೆ ಪುಷ್ಪಾ ರಾಜಶೇಖರನನ್ನು ದಾನವಾಗಿ ನೀಡೆಂದು ದೀನವಾಗಿ ಬೇಡಿದೆ ನಿನ್ನ ಮಾತಿಗಾವ ಬೆಲೆ ನೀಡಿದೆ? ಹೀನ ವೇಶ್ಯೆಯಾಗಿ, ಜೀವನದ ಬಲಿಕೊಟ್ಟೆ, ಮನ್ನಿಸು ಶೋಭಾ, ನಿನ್ನ ಕಂಗಳ ಕಾಂತಿಯನಿಂಗಿಸಲು ಕಾರಣಳಾದ ಮಹಾಪಾಪಿ ನಾನು, ಸಾಧ್ವಿ ಮನ್ನಿಸು. (ಅಷ್ಟರಲ್ಲಿ ಸುರೇಶ ಬರುವನು) ನಿನ್ನ ಮಾತು ಕೇಳಿ ಮಾಡಬಾರದ್ದನ್ನು ಮಾಡಿ ! ಕೆಡಕನ್ನು ಬರಮಾಡಿಕೊಂಡೆ ಸುರೇಶಾ

ಸುರೇಶ – ಏಕೆ ಒಂದೇ ಸವನೆ ಚೀರಿ ಸಾಯುತ್ತಿರುವಿ?

ಪುಷ್ಪಾ – ಮೈಯಲ್ಲಾ ಹೊಲಸು, ಹೊಲಸು ನಾರುತಿದೆ ನೀರನ್ನಾದರೂ ಕುಡಿಸು

ಸುರೇಶ – ನಿನ್ನ ಮಹಾರೋಗದ ಪಾಲುಗಾರನಾಗಲೇ ನಾನು

ಪುಷ್ಪಾ – ನೀನೆಂಥ ನಿಷ್ಕರುಣಿ?

ಸುರೇಶ – ಟ್ರೇಝುರಿ ಕೈ ಎಲ್ಲಿ

ಪುಷ್ಪಾ — ಏಕೆ ?

ಸುರೇಶ — ಡಾಕ್ಟರರನ್ನು ಕರೆತರಲು ಹಣ ಬೇಡವೇ

ಪುಷ್ಪಾ — ತೆಗೆದುಕೋ

ಸುರೇಶ — ಒಗದುಬಿಡು ಇಲ್ಲಿಯೇ

ಪುಷ್ಪಾ — ನನ್ನ ಸಮೀಪ ಕೂಡ ಸುಳಿಯುವದಿಲ್ಲವೇ?

ಸುರೇಶ — ನರಕದ ಕುಂಡದಲ್ಲಿ ಬೀಳಲು ಬಾ ಎನ್ನುವಿಯಲ್ಲೆ

ಪುಷ್ಪಾ — ನರಕವೇ ನಾನಾಗಿರುವೆನೇ?

ಸುರೇಶ — ಇನ್ನು ನಿನಗೆ ತಿಳಿದಿಲ್ಲವೆ?

ಪುಷ್ಪಾ — ಹೋಗು, ಡಾಕ್ಟರರನ್ನು ಕರೆದುತಾ (ಕೀಲಿಕೈ ಕೊಡುವಳು)

ಸುರೇಶ — ಮಹಾರೋಗಿಯಾದ ನಿನ್ನನ್ನು ಡಾಕ್ಟರರೂ ಸಹ ಮುಟ್ಟಲಾರ ನಿನ್ನಂಥ ಕೆಟ್ಟ ರೋಗದವಳನ್ನು ಜನರು ಊರಲ್ಲಿ ಇಡಗೊಡುವದಿಲ್ಲ ಸುಮ್ಮನೆ ಬಿದ್ದುಕೊಂಡಿರು ಗದ್ದಲ ಮಾಡಬೇಡ

ಪುಷ್ಪಾ — ಈ ಸಂಕಟವನ್ನು ಸಹಿಸುವದು ನನ್ನಿಂದ ಸಾಧ್ಯವಿಲ್ಲ

ಸುರೇಶ — ನಿನ್ನನ್ನು ನೋಡುವದು ನನ್ನಿಂದಲೂ ಸಾಧ್ಯವಿಲ್ಲ

ಪುಷ್ಪಾ — ನೀನು ಸಹ ನನ್ನನ್ನು ಬಿಟ್ಟು ಹೋಗುವಿಯಾ

ಸುರೇಶ — ಇನ್ನು ಐದೇ ನಿಮಿಷದಲ್ಲಿ

ಪುಷ್ಪಾ — ನನ್ನ ಉಪಚಾರ ಮಾಡುವವರಾರು?

ಸುರೇಶ — ಮೃತ್ಯುದೇವತೆ

ಪುಷ್ಪಾ — ನೀನಿಂಥ ಕಟುಕನೆಂಬುದು ನನಗೆ ಗೊತ್ತು ಕೊನೆಗೂ ಕೈ ಕೊಟ್ಟಿಯಾ

ಸುರೇಶ — ಎಂದೋ ಅನುಭವಕ್ಕೆ ಬಂದ ಮಾತು, (ಒಳಗೆ ಹೋಗಿ ಕ್ಯಾಶಬ್ಯಾಗ ನೊಂದಿಗೆ ಬರುವನು) ಪುಷ್ಪಾ ಹೊರಟಿರುವೆ ನೋಡು ಬರಿಗೈಯಿಂದಲ್ಲ ನೀನು ಗಳಿಸಿದ ಸಕಲ ಸಂಪತ್ತಿನೊಂದಿಗೆ, ರಾಜಶೇಖರನ ಆಸ್ತಿಯೊಂದಿಗೆ

ಪುಷ್ಪಾ — ಸುರೇಶಾ, ಸುರೇಶಾ ಸ್ವಲ್ಪ ಹಣವನ್ನಾದರೂ ಬಿಟ್ಟು ಹೋಗು ಶೆರಗೊಡ್ಡಿ ಬೇಡುವೆ

**ಸುರೇಶ –** ಒಂದು ಒಡಕು ಕವಡೆ ಸಹ ಕೊಡಲಾರೆ ಇದು ನನ್ನ ಪ್ರಯತ್ನದ ಪ್ರತಿಫಲ

**ಪುಷ್ಪಾ –** ಹೌದು, ಇದು ನಿನ್ನ ಪ್ರಯತ್ನದ ಪ್ರತಿಫಲ, ಇನ್ನಷ್ಟು ಹಣವಿದೆ ನನ್ನಲ್ಲಿ, ಕೊಡುವೆ ಸ್ವಲ್ಪ ತಾಳು,

**ಸುರೇಶ –** ಇನ್ನೂ ಹಣವಿದೆಯೇ ತಾ ಹಾಗಾದರೆ.

**ಪುಷ್ಪಾ –** ಅರೆ ನಿಮಿಷದಲ್ಲಿ ಯಮನ ಸೆರೆಯಾಳಾಗುವ ನನಗೇಕೆ ಹಣದಾಸೆ. ಸುರೇಶ ನೀನೆನ್ನ ಸ್ವಾಮಿ ನಾನೀಗಮಾಡುತ್ತಿರುವದು ಕೊನೆಯ ಗಳಿಗೆಂಯು ಸೇವೆ ಮನ್ನಿಸು (ಒಳಗಿ ಹೋಗಿ ಪಿಸ್ತೂಲ ಮುಚ್ಚಿಕೊಂಡುಬಂದು ಸುರೇಶನಿಗೆ ಗುಂಡು ಹಾಕುವಳು. ಸುರೇಶ ಸಾಯುವನು. ನಂತರ ಪುಷ್ಪಾ ಸಾಯುವಳು)

## ನಾಲ್ಕನೆಯ ದೃಶ್ಯ

(ಬೆಂಗಳೂರ ಸ್ಟೇಶನ್ ರೋಡ್ ಆನಂದ ಕೂಲಿಯಾಗಿ ಅಲೆದಾಡುವನು)

**ರತ್ನಾ –** ಕೂಲಿ ಏ ಕೂಲೀ

**ಆನಂದ –** ಬಂದೆ ಬಾಯಿಸಾಹೇಬ, ಎಲ್ಲಿಗೆ ಹೊರಡುವದು?

**ರತ್ನಾ –** ಚಾಮರಾಜ ಸ್ಟ್ರೀಟ. (ಕರೆದುಕೊಂಡು ಹೋಗುತ್ತಿರುವಾಗ ಮೋಟಾರ ಬರುತ್ತದೆ)

**ಆನಂದ –** ಸ್ವಲ್ಪ ಬದಿಗೆ ಸರಿಯಿರಿ, ಬಾಯಿಸಾಹೇಬ. ಮೋಟಾರ ಬರುತ್ತದೆ (ಮೋಟಾರ ಎಕ್ಸಿಡೆಂಟ ಆವಾಜ) ಅಯ್ಯೋ ಅನಾಹುತ. ಗಾಲಿಯಲ್ಲಿ ಸಿಕ್ಕುಬಿದ್ದರು (ಆನಂದನು ರತ್ನಾನನ್ನು ಹೊತ್ತುಕೊಂಡು ದವಾಖಾನೆಗೆ ಹೋಗುವನು ಡಾಕ್ಟರರು ಪರೀಕ್ಷಿಸುವರು.)

(ದವಾಖಾನೆಯ ಒಂದು ಖೋಲೆ)

**ರತ್ನಾ –** ಈಗ ನಾನೆಲ್ಲಿರುವೆ?

**ಆನಂದ –** ಸಿವ್ಹಿಲ್ ಹಾಸ್ಪಿಟಲ್‌ನಲ್ಲಿ ಬಹಳ ತ್ರಾಸಾಗಿದೆ ನಿಮಗೆ

**ರತ್ನಾ –** ಇಲ್ಲಿಗೆ ನನ್ನನ್ನು ಯಾರು ಕರೆತಂದರು?

ಆನಂದ – ನಾನು ನಿಮ್ಮ ಕೂಲಿ, ನಿಮ್ಮ ಮನೆಯ ಅಡ್ರೆಸ್ ಕೊಡಿರಿ. ನಿಮ್ಮ ತಾಯಿ–ತಂದೆಗಳನ್ನು ಕರೆತರುವೆ.

ರತ್ನಾ – ನೀನೆಂಥ ದಯಾಳು! (ವ್ಹಿಜಿಟಿಂಗ್ ಕಾರ್ಡು ಕೊಡುವಳು)

ಆನಂದ – ಅದಷ್ಟು ಬೇಗನೇ ಬಂದುಬಿಡುವೆ, ವಿಶ್ರಾಂತಿ ಹೊಂದಿರಿ ತಲೆಗೆ ಬಲವಾದ ಪೆಟ್ಟು ಬಿದ್ದಿದೆ, (ಹೋಗುವನು ಆನಂದ ರತ್ನಾನ ತಂದೆಯನ್ನು ಕರೆತರುವನು)

ಶಿವರಾಯ – ಮಗು, ತಲೆಗೆ ಬಲವಾದ ಪೆಟ್ಟು ಬಿದ್ದಿದೆಯಂತಲ್ಲಮ್ಮ

ಡಾಕ್ಟರ – ನಿಮ್ಮ ಮಗಳಿಗೆ ಗುಣವಾಗಿದೆ, ಕರೆದುಕೊಂಡು ಹೋಗಿರಿ.

ಶಿವರಾಯ – ನಡೆ ಮಗು, ನೀನೂ ಬಾ (ಹೋಗುವರು)

(ರಸ್ತಾ–ಶಿವರಾಯ, ಆನಂದ ರತ್ನಾ ಬರುವರು)

ರತ್ನಾ – ಅಪ್ಪಾ, ನಿಜವಾಗಿಯೂ ಈತನು ಬಹಳ ದಯಾಳು.

ಶಿವರಾಯ – ಆನಂದ ನಿನ್ನ ಉಪಕಾರವನ್ನು ಹೇಗೆ ತೀರಿಸಲಿ?

ಆನಂದ – ಇದರಲ್ಲಿ ಏನು ಉಪಕಾರ ರಾಯರೇ, ಕಷ್ಟದಲ್ಲಿರುವವರನ್ನು ಕಂಡು ಹಾಗೇ ಹೋಗುವದು ಮನುಷ್ಯನಿಗೆ ಭೂಷಣವೇ?

ರತ್ನಾ – ಅಪ್ಪಾ ನೋಡಲು ಕೂಲಿಯಂತೆ ಕಂಡರೂ, ಮನಸ್ಸು ನಿರ್ಮಲತೆಯ ನಿಲಯ. ಉನ್ನತ ವಿಚಾರಗಳ ಸಮುದಾಯ.

ಶಿವರಾಯ – ಆನಂದ, ನಿಜವಾಗಿಯೂ ನೀನು ಕೂಲಿಯೇ?

ಆನಂದ – ಇನ್ನೂ ನಿಮಗೆ ಸಂಶಯವೇ?

ರತ್ನಾ – ಮುಖವನ್ನು ನೋಡಿದರೆ, ಸಂಸ್ಕೃತಿಯ ಲಕ್ಷಣ ಎದ್ದು ಕಾಣುವದು

ಆನಂದ – ಅದು ಹೇಗೆ ಕಾಣುವದೋ ನನಗೆ ತಿಳಿಯದು.

ರತ್ನಾ – ಮಾತಿನ ಪ್ರತಿಯೊಂದು ಶಬ್ದವು ಸೌಂದರ್ಯಮಯವಾಗಿದೆ.

ಆನಂದ – ನಾನು ಕವಿಯೇ?

ರತ್ನಾ – ಇಲ್ಲದಿದ್ದರೆ ನಿಮ್ಮಲ್ಲಿ ಪ್ರತಿಭೆ ಏಕೆ?

ಆನಂದ – ನನಗೆ ತಿಳಿಯಲಾರದ ಭಾಷೆ.

**ಶಿವರಾಯ –** ತಿಳಿಯದವನಂತೆ ನಟನೆ,

**ಆನಂದ –** ನಾನು ನಟನೆ ನಡಿಸಿರುವಿನೆ? ಬಾಯಿಸಾಹೇಬ.

**ಶಿವರಾಯ –** ನನಗೂ ಹಾಗೇ ಅನಿಸುತ್ತದೆ.

**ಆನಂದ –** ನಿಮ್ಮಿಬ್ಬರ ಅಭಿಪ್ರಾಯ ಒಂದಾಗಿರುವಾಗ, ನಾನೇನು ಹೇಳಿದರೂ ನಿಮಗೆ ನಂಬಿಗೆ ಇಲ್ಲಾ, ಯಜಮಾನರೇ

**ಶಿವರಾಯ –** ನಿನಗೆ ತಂದೆ–ತಾಯಿಗಳಾಗಲಿ, ಅಣ್ಣ ತಮ್ಮಂದಿರಾಗಲಿ ಯಾರೂ ಇಲ್ಲವೇ?

**ಆನಂದ –** ಇಲ್ಲ ರಾಯರೇ?

**ಶಿವರಾಯ –** ಮನೆಮಾರು, ಆಸ್ತಿ, ಪಾಸ್ತಿ ಏನೇನು ಇಲ್ಲವೇ?

**ಆನಂದ –** ಇದ್ದರೆ ನಾನು ಹೀಗೆ ನಿರ್ಗತಿಕನಾಗಿ ತಿರುಗುತ್ತಿದ್ದೆನೆ?

**ಶಿವರಾಯ –** ಇರಲಿ, ನನ್ನ ಮಾತಿಗೆ ಸರಿಯಾಗಿ ಉತ್ತರ ಕೊಡುವಿರಾ?

**ಆನಂದ –** ಏನೋ ತಿಳಿದಮಟ್ಟಿಗೆ ಉತ್ತರ ಕೊಡುವೆ ರಾಯರೇ?

**ಶಿವರಾಯ –** ಇನ್ನು ನೀನು ಮುಂದಾದರೂ ಕೂಲಿಯನ್ನು ಮಾಡಿ ಉಪ ಜೀವನ ಸಾಗಿಸುವೆಯಾ?

**ಆನಂದ –** ಕೂಲಿಯಕ್ಕಿಂತಲೂ ಹೆಚ್ಚಿನದೇನು ನನ್ನಿಂದ ಸಾಧ್ಯವಿದೆ. ಬಿನ್ ಬಂಡವಲ ಬಿಜಿನೆಸ್.

**ರತ್ನಾ –** ಮೋಜಿನ ಉತ್ತರ.

**ಶಿವರಾಯ –** ಹಾಗಾದರೆ ನಮ್ಮ ಮನೆಯಲ್ಲಿಯೇ ಹೇಳಿದ ಕೆಲಸ ಕೇಳಿಕೊಂಡು ಇರಬಾರದೇ?

**ಆನಂದ –** ಸ್ಥಳ ಕೊಡುವಿರೆಂದು ಕರೆದರೆ ಯಾರಾದರೂ ಒಲ್ಲೆನ್ನುವರೇ.

**ಶಿವರಾಯ –** ನಡೆ ಹಾಗಾದರೆ ಮನೆಗೆ ಹೋಗೋಣ.

**ಆನಂದ –** ನಡೆಯಿರಿ (ಶಿವರಾಯ ರತ್ನಾ ಹೋಗುವರು) (ಶಂಕರ ಶೋಭಾ ಹಾಡುತ್ತ ಬರುವರು) (ಆನಂದ ರೊಕ್ಕ ಕೊಡುವನು. ಶೋಭಾ ಶಂಕರ ಹೋಗುವರು) (ಶಿವರಾಯನ ಮನೆ. ಆನಂದ ಓದುತ್ತ ಕುಳಿತಿದ್ದಾನೆ ಸ್ವಲ್ಪ ವೇಳೆಯ ನಂತರ ರತ್ನಾ ಬರುವಳು)

ಆನಂದ – (ಆಶ್ಚರ್ಯಚಕಿತನಾಗಿ) ಓಹೋ ತಾವು!

ರತ್ನಾ – ಹೌದು ನಾವೆ!

ಆನಂದ – ಯಾವಾಗ್ಗೆ ಬಂದಿರಿ?

ರತ್ನಾ – ನೀವು ಹೆಮ್ಲೆಟ್ ನಾಟಕದ ರುದ್ರಮಯ ದೃಶ್ಯದಲ್ಲಿ ತನ್ಮಯರಾದಾಗ.

ಆನಂದ – ಇಲ್ಲಾ ನನಗೆ ಓದಲು ಬರುವದಿಲ್ಲ.

ರತ್ನಾ – ಪ್ರತ್ಯಕ್ಷ ಕಂಡಿದ್ದರೂ ಸುಳ್ಳನ್ನೇ ಸಾಧಿಸುವದರಿಂದ ಯಾವ ಪ್ರಯೋಜನವೂ ಇಲ್ಲ.

ಆನಂದ – ನನ್ನನ್ನು ಕ್ಷಮಿಸಿರಿ,

ರತ್ನಾ – ನಿಮ್ಮ ಮುಗ್ಧ ವ್ಯಕ್ತಿತ್ವಕ್ಕೆ ನಾನೊಂದೋ ಮಾರುಹೋಗಿರುವೆ

ಆನಂದ – ಅಷ್ಟು ಯೋಗ್ಯತೆ ನನಗಿದೆಯೆ.

ರತ್ನಾ – ಅದೀಗ ತಿಳಿದುಬಂದಿತಲ್ಲ. ಶೇಕ್ಸಪೀಯರ ನಾಟಕವನ್ನು ಓದಿ ತಿಳಿಯಬೇಕಾದರೆ, ನೀವು ನಿಜವಾದ ಗ್ರ್ಯಾಜುಯೆಟ್

ಆನಂದ – ಇಲ್ಲಾ, ಬಾಯಿಸಾಹೇಬ.

ರತ್ನಾ – ಇನ್ನೂ ಮೋಸಗಾರಿಕೆಯ ಗತ್ತು ಬಿಡುವದಿಲ್ಲವೇ ಹೇಳಿರಿ.

ಆನಂದ – ಅದರಿಂದ ಏನು ಪ್ರಯೋಜನ?

ರತ್ನಾ – ನನಗೇನು ಪ್ರಂಯೋಜನವಿರದಿದ್ದರೂ ನಿಮ್ಮ ವಿದ್ಯಾ ನಿರರ್ಥಕವಾಗಬಾರದೆಂದು.....

ಆನಂದ – ಅದನ್ನು ನಾನು ಎಂದೋ ಮರೆತಿದ್ದೇನೆ,

ರತ್ನಾ – ನೀವು ತೊರೆದಿರಬೇಕು, ಆದರೆ ಮತ್ತೆ ಅದಿಂದು ತಲೆಯೆತ್ತಬೇಕೆಂದು ನಾನಿಚ್ಛಿಸಿದ್ದೇನೆ, ಹೇಳಿರಿ ನಿಮ್ಮ ಜೀವನ ಕಥೆ.

ಆನಂದ – ಬೇಡಿ ಬಾಯಿಸಾಹೇಬ, ಅಂದರಿಂದೇನು ಪ್ರಯೋಜನವಿಲ್ಲ ಆದಷ್ಟು ಮರೆಯಲು ಪ್ರಯತ್ನಿಸುತ್ತಿರುವ ನನಗೆ ಪುನಃ ನೆನಪುಮಾಡಿಕೊಳ್ಳುವ ಪ್ರಸಂಗವನ್ನು ತರಬೇಡಿರಿ,

ರತ್ನಾ – ಇಲ್ಲಾ ಹೇಳಲೇಬೇಕು.

**ಆನಂದ –** ಕೋಮಲವಾದ ಅಂತಃಕರುಣ ಕಣ್ಣೀರಿನ ಕಡಲಾದೀತು.

**ರತ್ನಾ –** ಇಲ್ಲಾ ಅದನ್ನು ಹೇಳಲೇಬೇಕು.

**ಆನಂದ –** ಕೇಳಿ ಹಾಗಾದರೆ, ಆಗರ್ಭ ಶ್ರೀಮಂತ ರಾಜಶೇಖರನ ತಮ್ಮ ಆನಂದ, ಆನಂದ S.S.L.C ಪರೀಕ್ಷೆಯಲ್ಲಿ ಪಾಸಾದುದಕ್ಕಾಗಿ ತಂದೆಯಂತಿರುವ ಅಣ್ಣ ಶೇಖರನಿಗೂ, ತಾಯಿಯಂತಿರುವ ಮಹಾಸಾಧ್ವಿ ಶೋಭಾತಾಯಿಗೂ ಫೇಡೆ ಹಂಚಿ ಆನಂದದಲ್ಲಿರುವಾಗ, ಸುರೇಶನೆಂಬೊಬ್ಬ ಸ್ನೇಹಿತ ಅಣ್ಣನನ್ನು ಕರೆದೊಯ್ದು ಕೆಟ್ಟ ಚಟಗಳ ಕಲಿಸಿ, ನಮ್ಮ ಬಾಳಿನಲ್ಲಿ ವಿಷಬೆರಸಿದನು. ಸದ್ಗುಣಗಳ ಖಣಿಯಾಗಿದ್ದ ಶೇಖರನು ದುರ್ಗುಣಗಳ ಆಗರವಾಗಿ ತನ್ನ ವಿಲಾಸಕ್ಕೆ ಅಡ್ಡಿಯಾದ ತಮ್ಮನನ್ನು ವಿಷಹಾಕಿ ಕೊಲ್ಲಲು ಅಣಿಯಾದ. ಈ ವಿಷಯವನ್ನು ತಿಳಿದ ಅತ್ತಿಗೆ ಮಧ್ಯರಾತ್ರಿಯ ಸಮಯಕ್ಕೆ ನನ್ನನ್ನು ಎಬ್ಬಿಸಿ ಆನಂದಾ, ಬೆಳಗಾದರೆ ನಿನ್ನ ಹೆಣ ಬೀಳುವದಪ್ಪಾ. ನಿನ್ನನ್ನು ವಿಷ ಹಾಕಿ ಕೊಲ್ಲುವರು. ಅದಕ್ಕಾಗಿ ನೀನು ಮನೆಬಿಟ್ಟು ಹೋಗೆಂದು ಕಳುಹಿಸಿಕೊಟ್ಟಳು. ಆಗ ನಾನು ಬಿ.ಎಸ್.ಸಿ ಪಾಸಾಗಿದ್ದೆ. ಅಂದೇ ಬೆಂಗಳೂರಿಗೆ ಬಂದು, ನಿಮ್ಮ ಕೂಲಿಯವನಾದೆ

**ರತ್ನಾ –** ಬಹಳೇ ಚಿಂತಾಜನಕವಾಗಿದೆ, ಅಪ್ಪಾ, ಅಪ್ಪಾ

**ಶಿವರಾಯ –** ಏಕಮ್ಮಾ!

**ರತ್ನಾ –** ಬಾ ಅಪ್ಪಾ ಹೀಗೆ

**ಶಿವರಾಯ –** ಏಕಮ್ಮಾ ರತ್ನಾ

**ರತ್ನಾ –** ಇವರನ್ನು ನೀವು ಯಾರೆಂದು ತಿಳಿದಿರುವಿರಿ?

**ಶಿವರಾಯ –** ಅದು ಇಂದಿಗೂ ತೆರೆಯಮರೆಯಲ್ಲಿದೆ.

**ರತ್ನಾ –** ಈಗ ನನಗೆ ತಿಳಿದುಬಂದಿತು

**ಶಿವರಾಯ –** ಹೇಳಮ್ಮಾ ವಿಷಯವೇನು?

**ರತ್ನಾ –** ಇವರೊಬ್ಬ ಆಗರ್ಭ ಶ್ರೀಮಂತರ ಮಕ್ಕಳು, ಬಿ.ಎಸ್‌ಸಿ ಪರೀಕ್ಷೆ ಪಾಸಾಗಿದ್ದಾರೆ, ವಿಧಿವಿಲಾಸ ಇವರನ್ನು ಈ ರೀತಿ ಮಾಡಿದೆ.

**ಶಿವರಾಯ –** ಆನಂದಾ, ಇದುವರೆಗೆ ಏಕೆ ಮುಚ್ಚಿಟ್ಟಿ ಮಗು? ನಿನ್ನಂಥ

ಸುಶಿಕ್ಷಿತನನ್ನು ಸೇವಕನಂತೆ ಕಂಡ ನಮ್ಮನ್ನು ಕ್ಷಮಿಸು.

**ಆನಂದ** – ನೀವು ತಂದೆಗೆ ಸಮಾನ

**ರತ್ನಾ** – ಹೇಳಿ ಮುಂದೆ ಓದಬೇಕೆಂಬ ಆಸೆ ನಿಮಗಿದೆಯೇ?

**ಆನಂದ** – ಇಲ್ಲಾ, ನಾನು ಕಲಿತು ಮಾಡುವದಾದರೂ ಏನು?

**ಶಿವರಾಯ** – ಖರ್ಚಿಗಾಗಿ ಸಂಕೋಚಪಟ್ಟುಕೊಳ್ಳಬೇಡ, ಕಲಿಯುವ ಇಚ್ಛೆ ಇದ್ದರೆ....

**ಆನಂದ** – ಅದೇನಿಲ್ಲ ರಾಯರೇ

**ರತ್ನಾ** – ನೀವೇನು ಸಂಕೋಚ ಮಾಡಬೇಡಿರಿ, ಇನ್ನೂ ನೀವು ಕಲಿಯಬೇಕೆಂದೇ ನನ್ನ ಬಯಕೆ, ಯಾಕಂದರೆ ಈಗ ನಾನು ಬಿ.ಎ ನೀವು ನನಗಿಂತಲೂ ಹೆಚ್ಚಾಗಿ ಕಲಿತರೆ ಭೂಷಣ.

**ಶಿವರಾಯ** – ಹೇಳು ಆನಂದಾ ಸಂಕೋಚವೇಕೆ?

**ಆನಂದ** – ನಿಮ್ಮ ಇಚ್ಛೆಯಂತೆ ಆಗಲಿ

**ಶಿವರಾಯ** – ನಾಳಿಗೇನೆ ಪ್ರಾರಂಭವಾಗಲಿ, ನಿನ್ನ ವಿದ್ಯಾಭ್ಯಾಸ ರತ್ನಾ ಆನಂದನಿಗೆ ಬೇಕಾಗುವ ಎಲ್ಲ ವ್ಯವಸ್ಥೆ ಮಾಡಿಕೊಂಡು

**ರತ್ನಾ** – ನಾನೆಲ್ಲವನ್ನು ಚೆನ್ನಾಗಿ ನೋಡಿಕೊಳ್ಳುತೇನೆ

**ಶಿವರಾಯ** – ಬನ್ನಿ ಕಾಫಿ ಕುಡಿಯುವಾ.

ರಸ್ತಾ ತೆರೆಯ ಹಿಂದೆ

## ಹಿನ್ನೆಲೆ

**ಪದ**

ಅಳಬೇಡ । ಅಳಬೇಡ । ಅಳಕಿ ನಡಿಯಬೇಡಾ ನೀ ।
ಗಳಕೀ ಗಂಜಬೇಡ ।
ಸೋಲಿಗಂಜಬೇಡಾ । ಜಯಶಾಲಿ ನಿನೇನೋಡಾ ಆ ಆ ಆ ॥ ೧ ॥

ಸೋಲು ತಪ್ಪಲಿಲ್ಲ । ಆ ಕಾಲ ನಮಗೆ ನೋಡಾ !
ಕಾಳರಾತ್ರಿ ಕಳೆದ ಮೇಲೆ । ಬೆಳಕು ಕಾಂಬೆ ನೋಡಾ ।
ಅಳಬೇಡ । ಅಳಬೇಡ ಅಳಬೇಡ ॥ ೨ ॥

**ರಾಜಶೇಖರ –** (ಬಂದು) ಅನ್ನಾ, ಹಸಿವೆ. ಅನ್ನಾ

**ಶೋಭಾ –** ಶಂಕರಾ ಯಾರಪ್ಪಾ ಅವರು? ಅನ್ನಾ ಅನ್ನಾ ಅಂತಾ ಕೂಗುತ್ತಾರೆ,

**ಶಂಕರ –** ಯಾವನೋ ಒಬ್ಬ ಕುರುಡನಮ್ಮ ಅವನು.

**ರಾಜಶೇಖರ –** ಅನ್ನಾ ಅನ್ನಾ

**ಶೋಭಾ –** ಬಹಳ ಹಸಿದಂತೆ ಕಾಣುತ್ತದೆ

**ಶಂಕರ –** ಹೌದಮ್ಮಾ ಒಂದೇ ಸವನೆ ಚೀರುತ್ತಿದ್ದಾನೆ,

**ಶೋಭಾ –** ಏನಾದರೂ ಸ್ವಲ್ಪ ಇದ್ದರೆ ಅವನಿಗೆ ಕೊಟ್ಟು ಬಿಡಪ್ಪ

**ಶಂಕರ –** ಏನಯ್ಯ ಸ್ವಲ್ಪ ಕೂತುಕೋ

**ರಾಜಶೇಖರ –** ಇಲ್ಲಿಯೇ ಕುಳಿತುಕೊಳ್ಳಲ್ಯಾ

**ಶಂಕರ –** ಕೂಡು ಅನ್ನಾ ಕೊಡುತ್ತೇನೆ.

**ರಾಜಶೇಖರ –** ಅಯ್ಯೋ ಪುಣ್ಯಾತ್ಮಾ ನೀನೆಷ್ಟುದಯಾಳು ಅಪ್ಪಾ ಕೊಡು ಬೇಗ ಬಹಳ ಹಸಿವೆಯಾಗಿದೆ (ಶಂಕರ ಅನ್ನಾ ಕೊಟ್ಟು ನೀರು ಕುಡಿಸುವನು)

**ಶಂಕರ –** ತೃಪ್ತಿಯಾಯಿತೇ?

**ರಾಜಶೇಖರ –** ಆನಂದವಾಯಿತು. ಸಣ್ಣವನಾಗಿದ್ದರೂ ನಿನ್ನ ಮನಸ್ಸು

**ಶಂಕರ –** ನಾವೂ ನಿನ್ನಂತೆ ತಿರಿದು ತಿನ್ನುವವರು

**ರಾಜಶೇಖರ –** ತಿರಿದು ತಂದುದರಲ್ಲಿಯೇ ನನಗೂ ಕೊಟ್ಟಿಯಾ? ದೊಡ್ಡ ಮನಸ್ಸು ನಿನ್ನ ಹೆಸರೇನು?

**ಶಂಕರ –** ನನ್ನ ಹೆಸರು ಶಂಕರಾ

**ರಾಜಶೇಖರ –** (ಗಾಬರಿಯಿಂದ) ಏನಂದೀ, ಇನ್ನೊಮ್ಮೆ ಹೇಳಪ್ಪ

**ಶಂಕರ –** ಶಂಕರಾ, ಬಾ ಅಪ್ಪಾ ಹೋಗೋಣ (ಕರೆದುಕೊಂಡು ಹೋಗುವನು)

ರಾಜಶೇಖರ – ಶಂಕರಾ, ಶೋಭಾ ಆನಂದ ನೀವು ಎಲ್ಲಿ ಇರುವಿರಿ? ನನಗಾಗಿ ನಿಮಗೆಲ್ಲ ಯಾವ ಸುಖ ಕೊಟ್ಟೆ? ಶೇಖರಾ ನಿನ್ನ ಪ್ರಪಂಚಕ್ಕೆ ನೀನು ಸುಖ ಕೊಟ್ಟೆ, ಓ.ಸಿ ಕಂಪನಿ ಏಜಂಟರಿಗೆ ಆತ್ಮಕೊಟ್ಟೆ, ಕ್ರೂರ ಸುರೇಶನಿಗೆ ಸಕಲವನ್ನೇ ಸಮರ್ಪಿಸಿಬಿಟ್ಟೆ ನಿನ್ನದೆಂಬುದು ಏನೂ ಇಲ್ಲಾ, ಹೊರದು ನಾಯಿಯಾಗಿ

(ಆನಂದನು ಹಿಂದಿನಿಂದ ಶೇಖರನಿಗೆ ಒಂದುಬಿಲ್ಲೆ ಕೊಡುವಷ್ಟರಲ್ಲಿ ರತ್ನಾ ಹಿಂದೆ ಬರುವಳು)

**ರತ್ನಾ** – ಹಲೋ ಮಿಸ್ಟರ, ಆನಂದ !

**ಆನಂದ** – ಓಹೋ ರತ್ನಾ ಏನು ಕಾಲೇಜಿನಿಂದ ಬಂದಿರೇ ಬಾಯಿಸಾಹೇಬ

**ರತ್ನಾ** – ಹೌದು ನೀವೆತ್ತ ಸಾಗಿರುವಿರಿ?

**ಆನಂದ** – ಸ್ವಲ್ಪ ತಿರುಗಾಡಿ ಬರಬೇಕೆಂದು ಹೊರಟಿರುವೆ.

**ರತ್ನಾ** – ನಾನು ಬರಬಹುದಲ್ಲ?

**ಆನಂದ** – ತಮ್ಮ ಇಚ್ಛೆ

**ರತ್ನಾ** – ನಡೆಯಿರಿ ಹೋಗುವಾ (ಹೋಗುವಾಗ, ಶೋಭಾ ಶಂಕರ ಭಿಕ್ಷೆ ಬೇಡುವರು ಆನಂದ ಬಿಲ್ಲಿಕೊಟ್ಟು ಹೋಗುವನು)

(ಅರಣ್ಯ ರಸ್ತಾ ಜಂಗಲ್)

**ರತ್ನಾ** – ಇಲ್ಲೇ ಸ್ವಲ್ಪ ಕೂಡ್ರೂಣವೇ (ಕೂಡ್ರುವರು)

**ಆನಂದ** – ರತ್ನಾ ನೋಡಿದೆಯಾ, ಸೂರ್ಯಾಸ್ತ ಎಷ್ಟು ಸೊಗಸಾಗಿ ಕಾಣುತ್ತದೆ. ದಿನಮಣಿಯ ಕೆಂಪು ಕಿರಣಗಳು ಹಸಿರು ಹುಲ್ಲಿನ ಮೇಲೆ ಬಿದ್ದು, ಭೂದೇವಿಯೊಂದಿಗೆ ನಕ್ಕುನಲಿದಾಡುತ್ತಿವೆ.

**ರತ್ನಾ** – ಉಲ್ಲಾಸಯುಕ್ತ ಸೊಬಗನೀಯುತಿದೆ,

**ಆನಂದ** – ಚೇತನಾಮಯ ಸೃಷ್ಟಿ ನವಚೈತನ್ಯ ನೀಡುತಿದೆ ಆದರೆ ಕೊಂಚ ವೇಳೆಯಲ್ಲಿ ಕತ್ತಲಾವರಿಸಿ ಭೂಮಿತಾಯಿಯಯನ್ನು ಕುರುಡಿಯನ್ನಾಗಿ ಮಾಡುವದು.

ರತ್ನಾ — ನೇತ್ರಜ್ಞರಾದ ನೀವು, ನೇತ್ರದಾನ ಮಾಡಬಹುದಲ್ಲ ।

ಆನಂದ — ಎಂಥಾ ಹುಚ್ಚು ಕಲ್ಪನೆಯೇ ಸಾಧ್ಯವಿದೆಯೇ ರತ್ನಾ ಜಗದ ಚಕ್ಷುನೇಸರನಿಂದಲ್ಲದೆ. ಆ ಕಾರ್ಯ ಅನ್ಯರಿಂದ ಆಗಲಾರದು.

ರತ್ನಾ — ಉನ್ನತ ವಿಚಾರ, ಮೌನವೇಕೆ?

ಆನಂದ — ವಾಣಿಯು ಮೂಕವಾಯಿತು, ನಾವೀಗ ನಾಕದಲ್ಲಿಲ್ಲವಷ್ಟೇ

ರತ್ನಾ -- ಭಾವನಾಲೋಕದಲ್ಲಿರುವಿರಾ?

ಆನಂದ — ಕಲ್ಪನಾ ಲೋಕದಲ್ಲಿ

ರತ್ನಾ — ರಸಋಷಿಯೇ?

ಆನಂದ — ಕಾವ್ಯತರಂಗಿಣಿಯೇ.

ರತ್ನಾ — ಮನಗಳೆರಡು ಹೆರೆತ ಕಂಗಳ ಕಾಂತಿಯ ಮಿಲನ, ಹೃದಯದಲ್ಲಿ ವಿದ್ಯುತ್ತ ಸಂಚಾರ. ನಿವೆನ್ನ ಜೀವನಧಾರ.

ಆನಂದ — ಇಂತೇಕೆ ಹುಚ್ಚಳಂತೆ ಮಾತನಾಡುತ್ತಿರುವಿ

ರತ್ನಾ — ಹುಚ್ಚಳಂತಾಗಿ ಮನಸೋತಿರುವೆ ನಿಮ್ಮ ಗುಣ ಸಂಜೀವಿನಿಗೆ

ಆನಂದ — ನಿರ್ಗತಿಕ ನಾನು

ರತ್ನಾ — ಉದಾರ ಗುಣದ ಆಶ್ರಯವಿದೆ

ಆನಂದ — ರತ್ನಾ, ಶ್ರೀಮಂತ ತರುಣಿ ನೀನು. ದಟ್ಟದರಿದ್ರ ನಾನು ನಿನ್ನನ್ನೆ ಬಯಸುವದೆಂದರೆ?

ರತ್ನಾ — ಅಯೋಗ್ಯವೆಂದೆನಿಸುವದಿಲ್ಲ,

ಆನಂದ — ನಿನ್ನ ಹೆತ್ತಾತ ಒಪ್ಪಬಹುದೇ?

ರತ್ನಾ — ಲಗ್ನವಾಗುವವಳು ನಾನು ನನ್ನ ತಂದೆಯಲ್ಲ !

ಆನಂದ — ಇನ್ನೂ ವಿಚಾರಿಸು

ರತ್ನಾ — ಎಂದೋ ವಿಚಾರಿಸಿರುವೆ.

ಆನಂದ — ದಿಕ್ಕುದೆಸೆಯಿಲ್ಲದವನಿಗೆ ಮಗಳನ್ನು ಕೊಟ್ಟು, ಮನೆತನದ ಗೌರವವನ್ನು ಕಡಿಮೆಮಾಡಿಕೊಳ್ಳುವರೆ?

**ರತ್ನಾ** – ನಿಮ್ಮ ಘನವಾದ ವ್ಯಕ್ತಿತ್ವಕ್ಕೆ ನಮ್ಮ ಮನೆತನದ ಗೌರವ ಎಷ್ಟೋ ಪಾಲು ಕಡಿಮೆ, ನಮಪ್ಪನನ್ನು ಒಪ್ಪಿಸುವ ಭಾರವು ನನ್ನದು

**ಆನಂದ** – ಅದೋ ಕತ್ತಲೆ ಆವರಿಸಿತು.

**ರತ್ನಾ** – ಹೊರಡೋಣ ಬನ್ನಿರಿ [ಹೋಗುವರು, ಅರಣ್ಯರಸ್ತಾ ಏಳುವದು. ಶಿವರಾಯನ ಮನೆ ರತ್ನಾ, ಆನಂದ ಬರುವರು]

**ಶಿವರಾಯ** – ನೋಡು ಆನಂದಾ ಇಂದಿನ ಪೇಪರಿನಲ್ಲಿ ನಿನ್ನ ಫೋಟೋ ಬಂದಿದೆ ಫಸ್ಟಕ್ಲಾಸ ರಿಝಲ್ಟ [ರತ್ನಾ, ಆನಂದ, ಪೇಪರ ನೋಡುವರು] ನಿಮ್ಮಿಬ್ಬರ ವಿವಾಹ ಮಾಡಿ ನಾನು ನಿಶ್ಚಿಂತನಾಗುವೆ

**ಆನಂದ** – ನಾನೊಂದು ದೊಡ್ಡ ಕಾರ್ಯ ಮಾಡಬೇಕಾಗಿದೆ ಅದುವರೆಗೂ ಲಗ್ನವಾಗುವದಿಲ್ಲ

**ಶಿವರಾಯ** – ಏನದು?

**ಆನಂದ** – ನೇತ್ರದಾನ ಶಿಬಿರ ಪ್ರಾರಂಭಿಸುವೆ, ಬಡವರಿಗೆ ಪುಕ್ಕಟೆಯಾಗಿ ಔಷಧ ಉಪಚಾರವಾಗಬೇಕು

**ಶಿವರಾಯ** – ಇದೋ ಟ್ರೇಝುರಿ ಕೈ ನಿನಗೆ ಬೇಕಾದಷ್ಟು ಹಣ ತೆಗೆದುಕೊಂಡು ಹೋಗು

**ಆನಂದ** – ಹಣಕ್ಕಿಂತಲೂ ಭವ್ಯವಾದ ಕಟ್ಟಡದ ಅವಶ್ಯವಿದೆ. ಸಹಸ್ರಾರು ರೋಗಿಗಳಿಗೆ ವಾಸಿಸಲು ಸ್ಥಳಬೇಕಾಗುವದು

**ಶಿವರಾಯ** – ಹಾಗಾದರೆ ನಮ್ಮ ವಿಜಯ ಕಲಾಭವನದಲ್ಲಿ ಪ್ರಾರಂಭಮಾಡು.

**ಆನಂದ** – ಆಗಲಿ [ರಸ್ತಾ ಬೀಳುವದು ಶಂಕರ ಶೋಭಾ ಬರುವರು]

**ಶಂಕರ** – ಅವ್ವಾ ನೇತ್ರದಾನ ಯಜ್ಞವಂತೆ, ಬಡವರಿಗೆ ಪುಕ್ಕಟೆಯಾಗಿ ಔಷದೋಪಚಾರವಲ್ಲದೆ, ಊಟ ವಸತಿ ಸಹ ಇರುವದಂತೆ

**ಶೋಭಾ** – ಅಂತ ಪುಣ್ಯಾತ್ಮರು ಯಾರಪ್ಪ ಬಡವರಿಗೆ ಇಷ್ಟು ಉದಾರ ಬುದ್ಧಿಯುಳ್ಳವರು

**ಶಂಕರ** – ಡಾಕ್ಟರ ಆನಂದಬಾಬು ಎಂದು ಹೆಸರು

**ಶೋಭಾ** – ಆನಂದಬಾಬು ಇರಲಿಕ್ಕಿಲ್ಲ

**ಶಂಕರ** – ನಡೆ ಅವ್ವಾ ಹೋಗಿ ಅವರನ್ನು ಕಾಣುವಾ (ಹೊಗುವರು)

## ಐದನೇಯ ದೃಶ್ಯ

ರಸ್ತಾ (ಬಸವಂತ ಬಸವಂತಿಯನ್ನು ಬಡೆಯುತ್ತ ಬರುವನು)

**ಬಸವಂತ** – ಬ್ಯಾಡ ಅಂದ್ರ ನೀ ಎಲ್ಲಿ ಕೇಳತಿ ಆ ಲಮೂಟ ಸೂಳೀಮಗನ ಮಾತ ಕೇಳಿ ಮನಿ ಹಾಳು ಮಾಡಿಕುಂತಿ ಹೆಂಗಸಾಗಿ, ಲಜ್ಜೆಗೆಟ್ಟು ಓ.ಸಿ ಅಡಾಕ ತಿಳಿದುಲ್ಲಾ ಅಡ್ಡಾಡಿ,

**ಬಸವಂತಿ** – ನಾ ಎಲ್ಲಿ ಆಡೀನಿ, ಅಣ್ಣ್ಯಾ ಅಡಂದ, ಆಡೀನಿ

**ಬಸವಂತ** – ಮೊದಲ ಬ್ಯಾಡ ಅಂತ ಹೇಳಿದಿನೋ ಇಲ್ಲೋ

**ಬಸವಂತಿ** – ಹೌದು ಹೇಳಿದ್ವಿ.

**ಬಸವಂತ** – ಮದವಿ ಶೀರೆ ಒತ್ತಿ ಇಟ್ಟು, ಆಡುವಂಥ ಹೊತ್ತು ನಿನಗೇನು ಬಂದಿತ್ತು?

**ಬಸವಂತಿ** – ನಿಂದಲ್ಲಳದು, ನಮ್ಮಪ್ಪ ನಮ್ಮವ್ವ ಕೊಟ್ಟಿದ್ದು.

**ಬಸವಂತ** – ಯಾರರ ಕೊಡ್ಲಿ, ಯಾರರ ತರ್ಲಿ, ಒತ್ತಿ ಇಟ್ಟು ಓಸಿ ಆಡ ಅಂದಿದ್ದರೇನು.

**ಬಸವಂತಿ** – ಈಗೇನು ಮಾಡಂದೀ

**ಬಸವಂತ** – ಈಗೇನ ಮಾಡುವಂಗಿಲ್ಲಾ. ಮಟ್ಟುವಂಗಿಲ್ಲ, ಮನಿಗೆ ನಡೆ ಆಮೇಲೆ ಐತಿ ನಿನ್ನ ಶಾವಿ. [ಅಣ್ಣ್ಯಾ ಕಾಲು ಮುರಿದುಕೊಂಡು ಕುಂಟುತ್ತ ಬರುವನು]

**ಅಣ್ಣ್ಯಾ** – ಅಯ್ಯಯೋ ಮಾವಾ.

**ಬಸವಂತ** – ಏನಾತಲೇ ಅಣ್ಣ್ಯಾ.

**ಅಣ್ಣ್ಯಾ** – ಕಾಲಮುರಿತೋ ಯಪ್ಪ

**ಬಸವಂತಿ** – ಅಣ್ಣ್ಯಾ ಏನಾತ ಕಾಲಿಗೆ?

**ಅಣ್ಣ್ಯಾ** – ಎಕ್ಕಾ ಸಾಯತೀನಿ ನಾ ಉಳುದಿಲ್ಲಾ

**ಬಸವಂತ** – ಮಗನ ಕಾಲು ಮುರಿದ ಕೂಡಲೇ ಸಾಯ್ತಾರೇನು? ಬೇಕಾದೀತು, ಜೀವ ಕಾಲಾಗ ಇರತೈತೇನಲೆ

**ಅಣ್ಣ್ಯಾ** – ಅಯ್ಯಯ್ಯೋ, ಮಾವಾ,

**ಬಸವಂತ –** ಏನಾತು ಹೇಳಲೇ ಹೀಂಗ್ಯಾಕ ಚೀರತಿ

**ಅಣ್ಣ್ಯಾ –** ನಿನ್ನೆ ಕಳವು ಮಾಡಾಕ ಹೋದಾಗ ಕಾಲಮೇಲೆ ಗ್ವಾಡಿಬಿದ್ದು ಮುರಿತಪಾ ಮಾವಾ?

**ಬಸವಂತ –** ಬಾಳ ಚಲೋ ಆತನೋಡಲೆ, ನಿನ್ನ ಗುಣಕ್ಕೆ ತಕ್ಕಂಗಾತು. ಕೆಟ್ಟ ಹುಳಕ್ಕೆ ತಕ್ಕ ಶಿಕ್ಷ್ಯಾ ಕೊಟ್ಟಾ ದೇವರು. ಬಸವಂತಿ ಕೇಳಿದೇನ ಇವನ ಕತೀನ

**ಬಸವಂತ –** ಕೇಳೀನಿ ಬಿಡು ಎಲ್ಲಾ ಹಾಳಮಾಡಿಬಿಟ್ಟ ನನಗೆ ಹಿಂಬರಕೆ ದೆವ್ವ ಆಗಿ ಹೋಗಬಿದ್ದಿದ್ದ

**ಬಸವಂತಿ –** ಅಳತೆಗೆಟ್ಟು ಉರದರ ಇದಾS ಪ್ರಕಾರಾಗೂದು, ಮನಶ್ಯಾರಿಗೆ ಮಿಕ್ಕಿದ್ದು ಈ ಮಕ್ಕಳು ಬಣವಿಗೆ ಬೆಂಕಿ ಹಚ್ಚುದೇನು ಕಳುವು ಮಾಡುದೇನು; ಬರೇ ಕಲ್ಯಾಣ ಕೆಲಸಾನ ಮಾಡತಿದ್ದರು, ಹೋಗ ಮಗನ ತಂದೆ–ಶಿವಾ, ತಾಯಿ–ಶಿವಾ ಅನಕೋತ ಜಾತ್ರಿ ಜಾತ್ರಿಗೆ ಮತ್ಯಾಕ ನಿಂತಲೆ ಮಗನ

**ಅಣ್ಣ್ಯಾ –** ಅಯ್ಯಯ್ಯೋ ಮಾವಾ (ಹೋಗುವನು)

**ಬಸವಂತ –** ಬಸವಂತೀ ಇವತ್ತ ನಾನು ಬೆಂಗಳೂರಿಗೆ ಹೋಗಿ ಬರ್ತೇನಿ ಆನಂದಪ್ಪನವರು ಪತ್ರ ಹಾಕ್ಯಾರಾ,

**ಬಸವಂತಿ –** ಅಲ್ಲೇ ಅದಾರೇನು ಅವರು?

**ಬಸವಂತ –** ಹೂಂ ನಮ್ಮ ಮನಿ ಹಕೀಕತ್ತು ಏನಂತ ಕೇಳ್ಯಾರಾ, ಬೇಟ್ಟಿಯಾಗಿ ಎಲ್ಲಾ ಹೇಳಿ ಬರಬೇಕಂತ ಮಾಡೇನಿ ಮನೆ ಕಡೆ ಜ್ವಾಕಿ ಮತ್ತ ಅಣ್ಣ್ಯಾ ಬಂದಗಿಂದಾನು ಜರ ಬಂದ್ರ ನಮ್ಮ ನಾಯಿ ಛೂ ಬಿಡು ಬಲೆ ಹುಶ್ಯಾರಿ ಈಗರ ಬುದ್ಧಿ ಬಂತಲ್ಲ ನಿನಗೆ

**ಬಸವಂತಿ –** ಬರದೇನು ಮಾಡಿತು ಮತ್ತೊಬ್ಬರಿಗೆ ಬುದ್ಧಿ ಹೇಳುವಂಗ ಆಗೇನಿ

**ಬಸವಂತ –** ಹೇಳ ಹಂಗರ

**ಬಸವಂತ –** ಯವ್ವಾ ಕೈ ಮುಗಿದು ಕಾಲಬಿದ್ದು ಬೇಡಿಕೊಂತೀನಿ, ಹೆಣ್ಣ ಮಕ್ಕಳು ಓ.ಸಿ. ಆಡಬಾರದು. ನಮ್ಮ ಭಾಗ್ಯವಂತ ದೇಶದಾಗ ಹೆಂಗಸೂರ ಓ.ಸಿ. ಆಡತಾರಂದ್ರ, ದೇಶದ ಮರ್ಯಾದೆ ಕಡಿಮೆ. ಮುಂದ ನಮ್ಮ ಮಕ್ಕಳು ಮರಿ, ಹಿಂಗ ಕೆಟ್ಟ ಹಾದಿ ಹಿಡಿದರ ಗತಿ ಏನು?

ಲಗ್ನದಾಗ ಹಿರೇರೇ ಉಡಿತುಂಬಿ, ಉಡಿಯಕ್ಕಿ ಹಾಕಿದ ಲಗ್ನ ಶೀರಿ ಒತ್ತಿ ಇಟ್ಟು ಆಡಿಬಿಟ್ರೆ ಕಡೀಗೆ ನನ್ನ ಬಾಳೇ ಹಿಂಗಾತು ಯವ್ವಾ ಆಡಬ್ಯಾಡ್ರಿ, ನಮ್ಮವ್ವಗಳ್ರ್ಯಾ ಕಾಲಿಗೆ ಬೀಳತೀನಿ

ಬಸವಂತ – ಅಲ್ಲರೆಪಾ, ಹೆಂಗಸೂರಿಗೆ ಹೇಳ್ಯಾಳಂತ ಸಿಟ್ಟ ಆಗಬೆಡ್ರಿ ಮತ್ತ ನಾನು ಗಂಡಸೂರಿಗೆ ಹೇಳತೀನಿ ನೀವೂ ಆಡಬ್ಯಾಡ್ರಿ

**(ರಸ್ತಾ ಏಳುವದು ದವಾಖಾನೆ)**

(ಡಾಕ್ಟರ್, ನರ್ಸ, ಕಂಪೌಂಡರ ವಗೈರೆ)

**ಬಸವಂತ** – ಇಷ್ಟೆಲ್ಲ ಕತಿ ಆತ ನೋಡ್ರಿಯಪ್ಪ

**ಆನಂದ** – ನೀನು ಹೋಗಿ ನಮ್ಮಣ್ಣನವರನ್ನು ಹುಡುಕಿಕೊಂಡು ಬಾ

**ಬಸವಂತ** – ಆಗಲೀ ಪ್ರಯತ್ನ ಮಾಡತೀನಿ ದೈವದಾಗ ಇದ್ದಾಂಗ ಆಗಲಿ. (ಹೋಗುವನು)

(ರಸ್ತಾ ಬೀಳುವದು)

**ರಾಜಶೇಖರ** – ದಾನಮಾಡಿ ಸ್ವಾಮಿ ಕುರುಡಾ ಕೂಳಿಲ್ಲದೆ ಮೂರು ದಿನಗಳಾದವು. (ದುಡ್ಡಕೊಟ್ಟು ಬಸವಂತನು, ದಿಟ್ಟಿಸಿ ನೋಡುವನು)

**ಬಸವಂತ** – ಏನಪ್ಪಾ ನಿನ್ನ ಹೆಸರೇನು?

**ರಾಜಶೇಖರ** – ನನ್ನ ಹೆಸರು ತೆಗೆದುಕೊಂಡು ಏನ ಮಾಡಬೇಕಾಗಿದೆ ಸ್ವಾಮಿ ನಾನು ಕುರುಡ

**ಬಸವಂತ** – ಇಲ್ಲಾ ಎಲ್ಲೋ ನೋಡಿದಂಗ ಕಾಣತೈತಿ, ನೆಪ್ಪಿಗೆ ಬರತೈತಿ ನಿನ್ನ ಹೆಸರೇನು?

**ರಾಜಶೇಖರ** – ಹತಭಾಗ್ಯ ಶೇಖರ

**ಬಸವಂತ** – ಅಯ್ಯೋ ಶೇಖರಪ್ಪನಾರ

**ರಾಜಶೇಖರ** – ನೀನು ಯಾರು

**ಬಸವಂತ** – ನಾನು ಬಸವಂತನ್ರಿ ಸಾವಕಾರ,

**ರಾಜಶೇಖರ** – ಅಯ್ಯೋ ನಾನೇಕೆ ಇವನ ಕೈಗೆ ಸಿಕ್ಕೆ (ಹೋಗ ಹತ್ತುವನು)

**ಬಸವಂತ –** ಹೋಗಬ್ಯಾಡ ನಿಂದರ್‍ರಿ ಎಪ್ಪಾ ಆನಂದಪ್ಪನವರು ಇಲ್ಲೇ ಅದಾ ಡಾಕ್ಟರ್ ಆಗ್ಯಾರ್‍ರಿ,

**ರಾಜಶೇಖರ –** ಏನು? ನಮ್ಮ ತಮ್ಮ ಆನಂದಾ ಇಲ್ಲಿಯೇ ಇರುವನೇ? ಆನಂದಾ ತಮ್ಮ ಆನಂದಾ ನಡೆ ಬಸವಂತಪ್ಪ ನನ್ನನ್ನಲ್ಲಿಗೆ ಕರಕೊಂಡು ನಡೆ (ಕರೆದುಕೊಂಡು ಹೋಗುವನು)

### ರಸ್ತಾ ಏಳುವದು (ದವಾಖಾನೆ)

(ಆನಂದ, ರತ್ನಾ, ಕಂಪೌಂಡರ, ನರ್ಸ್ ಇರುವರು, ಶಂಕರ ಅಳುತ್ತ ಬರುವನು)

**ಆನಂದ –** ಏಕೆ ಮಗು. ನಿನ್ನ ತಾಯಿಯ ಕಣ್ಣುಗಳು ಈಗ ಸರಿಯಾಗಿ ಕಾಣುವವೇ?

**ಶಂಕರ –** ಕಾಣುವವು ಡಾಕ್ಟರ ಸಾಹೇಬ

**ಆನಂದ –** ಏಕೆ ಅಳುತ್ತಿರುವಿ !

**ಶಂಕರ –** ಯಾಕೂ ಇಲ್ಲ

**ಆನಂದ –** ನಿನ್ನ ತಾಯಿಗೇನಾದರೂ ತ್ರಾಸು ಆಗಿದೆಯೇ? ರತ್ನಾ ವಿಚಾರಿಸು

**ರತ್ನಾ –** ಏಕೆ ಮಗು ಅಳುತ್ತಿರುವಿ?

**ಆನಂದ –** ಹೇಳು, ಏಕೆ ಅಳುತ್ತಿರುವಿ?

**ರತ್ನಾ –** ಡಾಕ್ಟರರು ಎಷ್ಟು ವಿನಯದಿಂದ ಕೇಳುತ್ತಿರುವರು ಹೇಳಪ್ಪ

**ಆನಂದ –** ನನ್ನ ಮುಂದೆ ಹೇಳುವದಿಲ್ಲವೇ?

**ಶಂಕರ –** ನಮ್ಮ ಕಾಕಾಜಿಯವರು ನೆನಪಾಗಿ ಅವರ ಹೆಸರು........

**ಆನಂದ –** ಹೇಳು ಹೆದರಬೇಡ

**ಶಂಕರ –** ಆನಂದಬಾಬು

**ಆನಂದ –** ಅವರು ಈಗ ಎಲ್ಲಿ ಇದ್ದಾರೆ

**ಶಂಕರ –** ನಮಗೆ ದೊರೆಯಲಾರದ ಸ್ಥಳದಲ್ಲಿದ್ದಾರೆ.

**ರತ್ನಾ –** ಸತ್ತು ಹೋಗಿರುವರೇ?

**ಶಂಕರ –** ಇಲ್ಲಮ್ಮಾ ನಮ್ಮ ತಂದೆಗೆ ಹೆದರಿ, ಮನೆ ಬಿಟ್ಟು ಹೋಗಿದ್ದಾರೆ

ಆನಂದ — ಅಯ್ಯೋ ಪಾಪ ! ಹೋಗಲಿ, ನಿನ್ನ ಹೆಸರೇನು?

ಶಂಕರ — ನನ್ನ ಹೆಸರು ಶಂಕರ.

ಆನಂದ — (ಆಶ್ಚರ್ಯದಿಂದ) ಶಂಕರ

ಶಂಕರ — ಹೌದು ಶಂಕರಾ

ಆನಂದ — ನಿನ್ನ ತಾಯಿಯ ಹೆಸರೇನು?

ಶಂಕರ — ಶೋಭಾತಾಯಿ

ಆನಂದ — ಶೋಭಾತಾಯಿ

ಶಂಕರ — ಹೌದು ಡಾಕ್ಟರ್

ಆನಂದ — ನಿನ್ನ ತಂದೆಯ ಹೆಸರೇನು?

ಶಂಕರ — ರಾಜಶೇಖರಬಾಬು

ಆನಂದ — ಅದೇ ಹೆಸರು, ಅದೇ ರೂಪ ಶೋಭಾ ರಾಜಶೇಖರ, ಶಂಕರಾ ಹತ ಭಾಗ್ಯ ಆನಂದ ಶಂಕರಾ.... ಶಂಕರಾ.....

ಶಂಕರ — ಕಾಕಾ, ಕಾಕಾ (ಅಪ್ಪುವರು)

ಆನಂದ — ರತ್ನಾ ಶೋಭಾತಾಯಿಯನ್ನು ಕರೆದುಕೊಂಡು ಬಾ (ಶಂಕರನು ಓಡಿ ಹೋಗಿ ಅವ್ವಾ ಕಾಕಾ, ಎಂದು ಕೂಗುವನು, ಶೋಭಾ ಬರುವಳು)

ಶೋಭಾ — ಹೀಗೇಕೆ ಮಾಡುವಿ ಶಂಕರ

ಶಂಕರ — ಅವ್ವಾ ಕಾಕಾ..... ಕಾಕಾ.....

ಆನಂದ — ಅತ್ತಿಗೆ

ಶೋಭಾ — ಯಾರು?

ಆನಂದ — ನಾನು ನಿನ್ನ ಮೈದುನ ಆನಂದ (ನಮಸ್ಕರಿಸುವನು)

(ಶೋಕಿಸುವಳು)

ಶೋಭಾ — (ಆನಂದವನ್ನು ಎಬ್ಬಿಸಿ) ಏಳು ಆನಂದಾ, ಅಳಬೇಡಪ್ಪ ! ಕಂಪೌಂಡರ ಓಡಿ ಬಂದು)

**ಕಂಪೌಂಡರ** – ಡಾಕ್ಟರ, ಸೀರಿಯಸ್ ಕೇಸ (ಆನಂದ ಹೋಗುವನು)

(ಬಸವಂತನು ರಾಜಶೇಖರನನ್ನು ಕರೆತರುವನು)

**ರಾಜಶೇಖರ** – ಎಲ್ಲಿ ಬಸವಂತಪ್ಪ ನನ್ನ ತಮ್ಮನೆಲ್ಲಿ ನನ್ನ ಆನಂದನೆಲ್ಲಿ

**ಬಸವಂತ** – ಒಳಗ ಅದಾರ ತಡ್ರಿ ಶೇಖರಪ್ಪನಾರ್ನ. ಕರೆಕೊಂಡು ಬರತೀನಿ

**ಶೋಭಾ** – ಯಾರು? ನನ್ನ ದೊರೆ, ನನ್ನ ಸ್ವಾಮಿ.

**ಬಸವಂತ** – ಎಪ್ಪಾ ಶೋಭಾತಾಯಿ, ಇಲ್ಲೇ ಇರುವರು.

**ರಾಜಶೇಖರ** – ಎಲ್ಲಿ ಶೋಭಾ.... ಶೋಭಾ,

**ಶೋಭಾ** – ಸ್ವಾಮಿ. (ಅಪ್ಪಿಕೊಳ್ಳುವರು)

**ರಾಜಶೇಖರ** – ಮನ್ನಿಸು ಶೋಭಾ. ಸತೀಧರ್ಮದ ತಿರುಳೆನ್ನುವ ದೇವತೆ.

**ಶೋಭಾ** – (ಎಬ್ಬಿಸಿ) ಇದೇನು! ಕಣ್ಣುಗಳು ಕಳುದುಹೋಗಿರುವವೇ?

**ರಾಜಶೇಖರ** – ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ.

**ಶಂಕರ** – ಅಪ್ಪಾ

**ರಾಜಶೇಖರ** – ಶಂಕರಾ ! ಶಂಕರಾ !! ಶಂಕರಾ !!!

**ಶಂಕರ** – ಅಪ್ಪಾ (ಅಪ್ಪಿಕೊಳ್ಳುವರು.)

(ಬಸವಂತ ಒಳಗೆ ಹೋಗಿ ಡಾಕ್ಟರರನ್ನು ಕರೆತರುವನು)

**ಬಸವಂತ** – ಎಪ್ಪ ಇಲ್ಲೇ ಅದಾರ ನೋಡ್ರಿ, ನಿಮ್ಮ ಅಣ್ಣಾರು,

**ಆನಂದ** – ಅಣ್ಣಾ.

**ರಾಜಶೇಖರ** – ಆನಂದಾ

**ಆನಂದ** – ಅಣ್ಣಾ.

**ರಾಜಶೇಖರ** – ತಮ್ಮಾ (ಅಪ್ಪಿಕೊಳ್ಳುವರು)

**ಬಸವಂತ** – ಯಪ್ಪ, ದೊಡ್ಡ ಅಪ್ಪಾರ ಕಣ್ಣು ಕಾಣುದಿಲ್ಲ ನೋಡ್ರಿ

**ಆನಂದ** – ಬಾ ಹೀಗೆ ಅಣ್ಣಾ (ಕುರ್ಚಿಯಮೇಲೆ ಕೂಡ್ರಿಸಿ, ಕಣ್ಣು ಪರೀಕ್ಷಿಸುವನು) ನಡೆ ಅಣ್ಣಾ ಅಷ್ಟೇನು ಅಪಾಯವಾಗಿಲ್ಲ,

ಆಪ್ರೇಶನ್ನಿನಿಂದ ಗುಣ ಹೊಂದುತ್ತವೆ. ನಡೆ ಅಪ್ರೇಶನ್ ರೂಮಿಗೆ (ಹೋಗುವರು)

ರಸ್ತಾ ಸೀನ (ತೆರೆ ಬೀಳುವದು)

ಶಿವರಾಯನ ಮನೆ ಆನಂದ, (ರತ್ನಾ, ಶೋಭಾ, ರಾಜಶೇಖರ, ಶಂಕರ, ಶಿವರಾಯ, ಬಸವಂತ ಸಕಲ ಪರಿವಾರ)

**ಶಿವರಾಯ –** ವಿಧಿವಿಲಾಸದಿಂದ ಅಗಲಿಹೋದ ಕುಟುಂಬವಿಂದು ಪರಮೇಶನ ದಯದಿಂದ ಒಂದುಗೂಡಿತು.

**ರಾಜಶೇಖರ –** ಛಿನ್ನ ವಿಚ್ಛಿನ್ನವಾದ ನನ್ನ ಬಾಳು ಮತ್ತೆ ಮಿಲನವಾಯಿತು

**ಶಿವರಾಯ –** ನನ್ನ ಸಕಲ ಸಂಪತ್ತು ಹಾಗು ನನ್ನ ಮಗಳನ್ನು ಈ ಆನಂದ ಸಮಯದಲ್ಲಿ ಆನಂದನಿಗೆ ಸಮರ್ಪಿಸುವೆ.

**ಶೋಭಾ –** ಇದೆಂತಹ ಮಂಗಲಮಯ ಪ್ರಸಂಗ

**ಶಿವರಾಯ –** ಶೋಭಾ, ನಿನ್ನ ತಂಗಿಯ ಕಂಕಣಬಲ ನಿನಗಿದೆ ತಾಯಿ?

**ಶೋಭಾ –** ಬಾ ರತ್ನಾ.

**ರಾಜಶೇಖರ –** ಏಳು ಆನಂದಾ (ಕೈ ಹಿಡಿಸಿ ಮಾಲಿ ಹಾಕಿಸುವರು)

**ಶಿವರಾಯ –** ಇದೇ ಮಂಗಲಮಯ ಪ್ರಸಂಗದಲ್ಲಿ ದೇವ ದೇವನನ್ನು ಸ್ಮರಿಸುವಾ!

ವಂದೇ ಮಾತರಂ । ವಂದೇ ಮಾತರಂ !
ಸುಜಲಾಂ ಸುಫಲಾಂ । ಮಲಯಜ ಶೀತಲಾಂ ॥
ಸತ್ಯಶಾಮಲಾಂ । ಮಾತರಂ । ವಂದೇ ಮಾತರಂ

===***====***===

# ಶ್ರೀ ಗವಿಸಿದ್ಧೇಶ್ವರ ಮಹಾತ್ಮೆ

• ಶಿವರುದ್ರಪ್ಪ ನಿಟ್ಟಾಲಿ

# ಶ್ರೀ ಗವಿಸಿದ್ಧೇಶ್ವರ ಮಹಾತ್ಮೆ

## ಶಿವರುದ್ರಪ್ಪ ನಿಟ್ಟಾಲಿ

ಕೊಪ್ಪಳ ಜಿಲ್ಲೆಯ ಮತ್ತೊಂದು ಪ್ರತಿಭೆ ಶಿವರುದ್ರಪ್ಪ ನಿಟ್ಟಾಲಿ. ಇವರು ಕ್ರಿ.ಶ. ೧೯೨೪ರಲ್ಲಿ ಕೊಪ್ಪಳದಲ್ಲಿ ಜನಿಸಿದರು. ಕಿಡಿಯಪ್ಪ ನಿಟ್ಟಾಲಿ ಹಾಗೂ ಸಿದ್ದಮ್ಮ ಇವರ ತಂದೆ–ತಾಯಿಗಳು. ಮುಲ್ಕಿ ಶಿಕ್ಷಣ ಪಡೆದು ಉರ್ದು ಮಾಧ್ಯಮದಲ್ಲಿ ಓದಿ ಮ್ಯಾಟ್ರಿಕ್ ಅಭ್ಯಾಸ ಪೂರ್ಣಗೊಳಿಸದೆ, ಕೊಪ್ಪಳದ ದಲಾಲಿ ಅಂಗಡಿಯಲ್ಲಿ ಗುಮಾಸ್ತರಾಗಿ ಶಿವರುದ್ರಪ್ಪ ಕೆಲಸಕ್ಕೆ ಸೇರಿಕೊಂಡರು. ರಂಗಭೂಮಿಗೆ ಇವರು ಆಕಸ್ಮಿಕವಾಗಿ ಬಂದರು. ೧೯೪೪ರಲ್ಲಿ ಕೊಪ್ಪಳ ಮಹೇಶ್ವರ ಸೇವಾ ನಾಟಕ ಮಂಡಳಿ ಹೊಸ ನಾಟಕಕ್ಕಾಗಿ ಹುಡುಕಾಡುತ್ತಿದ್ದಾಗ, ನಾಟಕ ರಚನೆಯನ್ನು ಸವಾಲಾಗಿ ಸ್ವೀಕರಿಸಿದ ನಿಟ್ಟಾಲಿಯವರು "ಜೀವನ ಯಾತ್ರೆ" ನಾಟಕವನ್ನು ಬರೆದುಕೊಟ್ಟರು. ಈ ನಾಟಕವು ಕರ್ನಾಟಕದ ಎಲ್ಲೆಡೆ ನೂರಾರು ಪ್ರಯೋಗಗಳನ್ನು ಕಂಡಿತು. ಚಿತ್ತರಗಿ ಗಂಗಾಧರ ಶಾಸ್ತ್ರಿಗಳು ಈ ನಾಟಕವನ್ನು ಅನೇಕ ಸಲ ಪ್ರಯೋಗಿಸಿದರು. ಮುಂದೆ ನಿಟ್ಟಾಲಿಯವರಿಂದ ಅನೇಕ ನಾಟಕಗಳು ರಚನೆಯಾದವು. ಅವುಗಳಲ್ಲಿ ಶ್ರೀ ಗವಿಸಿದ್ಧೇಶ್ವರ ಮಹಾತ್ಮೆ, ಆಶಾದೀಪ, ಸಮಾಜಕ್ಕೆ ಸವಾಲು, ದೀಪೋತ್ಸವ, ಶಿವಯೋಗಿ ಸಿದ್ಧರಾಮ ಈ ಮುಂತಾದ ನಾಟಕಗಳನ್ನು ಹೆಸರಿಸಬಹುದಾಗಿದೆ. ಇವರ ಜೀವನ ಯಾತ್ರೆ ನಾಟಕ ೦೨–೧೨–೧೯೪೪ರಲ್ಲಿ ಕೊಪ್ಪಳದ ಸ್ಟಾರ್ ಟಾಕೀಜ್‌ದಲ್ಲಿ ಪ್ರಯೋಗವಾಯಿತು. ಗುಬ್ಬಿವೀರಣ್ಣ, ತ.ರಾಸು. ಅತಿಥಿಗಳಾಗಿ ಬಂದಿದ್ದರು.

೧೯೭೮ರಲ್ಲಿ "ಶ್ರೀ ಗವಿಸಿದ್ಧೇಶ್ವರ ಮಹಾತ್ಮೆ" ನಾಟಕ ರಚಿಸಿದ ನಿಟ್ಟಾಲಿಯವರು ಅದರಲ್ಲಿ ಭಟ್ಟನ ಪಾತ್ರವಹಿಸಿ ತಾವೊಬ್ಬ ಸಮರ್ಥ ನಟನೆಂಬುದನ್ನು ತೋರಿಸಿಕೊಟ್ಟರು. ಕ್ರಿ.ಶ. ೧೯೯೬ರಲ್ಲಿ ನಿಟ್ಟಾಲಿಯವರು ನಿಧನರಾದರು. ಅವರ ಮಹತ್ವದ ನಾಟಕ "ಶ್ರೀ ಗವಿಸಿದ್ಧೇಶ್ವರ ಮಹಾತ್ಮೆಯನ್ನು" ಇಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ.

## ಶ್ರೀ ಮಹೇಶ್ವರ ಸೇವಾ ನಾಟ್ಯಕಲಾ, ಬಳಗ

## ಪಾತ್ರ ಪರಿಚಯ

| ಪಾತ್ರಗಳು | ನಟರು |
|---|---|
| ಶ್ರೀ ಚನ್ನಬಸವಸ್ವಾಮಿಗಳು | ..... ಶ್ರೀ H.ಶಿವಾನಂದಸ್ವಾಮಿ |
| " ಗವಿಸಿದ್ಧೇಶ್ವರ | ....." ಸೂಡಿಶೆಟ್ರ ಮಾಂತಪ್ಪ |
| " ಬಾಲಗವಿಸಿದ್ಧೇಶ (ಗುಡ್ಡದೀಶ) | ....." M. ಲಚ್ಚಪ್ಪ |
| " ಶಿವ | ....." H. ನಿಜಗುಣೆಪ್ಪ |
| " ಮಹಾದೇವಯ್ಯ | ....." Y. ಸಿದ್ಧರಾಮಸ್ವಾಮಿ |
| " ಮಾಲಿಗೌಡ | ....." ಕನಕಗಿರಿ ದೇವಪ್ಪ |
| " ಪೋಲೀಸಗೌಡ | ....." ಪಂಚಯ್ಯಸ್ವಾಮಿ ಶಿರಸಿಮಠ |
| " ನವಾಬ ಮಿರಾಲಂ | ....." ಕಟ್ಟಿಮನಿ ವೆಂಕಟೇಶ |
| " ಬಾಳಪ್ಪ | ....." ಕನಕಗಿರಿ ಪರಸಪ್ಪ |
| " ತಿರುಕಂಭಟ್ಟ | ....." ನಿಟ್ಟಾಲಿ ಶಿವರುದ್ರಪ್ಪ |
| " ಹುರಳಿ ನಾಗಪ್ಪ | ....." ವೆಂಕಂಣ ಪೂಜಾರ |
| " ನಾಯಕ | ....." ನಬಿಸಾಬ ಹಂಚಿನಾಳ |
| " ಗೋವಿಂದ | ....." H.ಅಯ್ಯಪ್ಪ |

ಹಾಗೂ

B. ಹನುಮಂತಪ್ಪ, H. ಫಕೀರಪ್ಪ, H. ಹನುಮಂತಪ್ಪ,

ಬಸಪ್ಪ ಹೂಗಾರ ಹಾಗೂ ಶಂಕರ ಜಾಧವ.

**ಸ್ತ್ರೀ ಪಾತ್ರಗಳಲ್ಲಿ**

| | |
|---|---|
| ಪಾರ್ವತಿ | ..... ಶ್ರೀಮತಿ ಸುಭದ್ರಮ್ಮ ಮನ್ನೂರ. |
| ಗುರುಲಿಂಗಮ್ಮ | ..... " ವೆಂಕಮ್ಮ ಕಟ್ಟಿಮನಿ. |
| ಶಿಪ್ಪವ್ವ | ..... S. ವನಮಾಲ. |

| **ಹಾಡುಗಳ ರಚನೆ** | **ಸಂಭಾಷಣೆ** | **ಸಂಗೀತ ಸಂಯೋಜನೆ** |
|---|---|---|
| ವೆಂಕಟೇಶ ಕಟ್ಟಿಮನಿ, | ನಿಟ್ಟಾಲಿ ಶಿವರುದ್ರಪ್ಪ | ಕೆ. ವಾದಿರಾಜ |

ಹಿನ್ನೆಲೆ ಗಾಯನ : ಶ್ರೀಮತಿ ಸುಭದ್ರಮ್ಮ ಮನ್ನೂರ.

# ಕೊಪ್ಪಳ
# ಶ್ರೀ ಗವಿಸಿದ್ಧೇಶ್ವರ ಮಹಾತ್ಮೆ

ಭಕ್ತಿ ರಸ ಪ್ರಧಾನ ನಾಟಕ

: ಶ್ರೀ ಗಣೇಶಾಯ ನಮಃ :

ನಾಂದಿ ಗೀತೆ

**ಭೂಪ :**

ಮೂಡಿ ಬಾರಯ್ಯ ಮೂಡಣಂಬರದಿಂ ।
ಓಡಿಬಾರಯ್ಯ ಓಂಕಾರ ನಾದದಿಂ ।
ನುಡಿಸ ಬಾರಯ್ಯ ಶಿವಶಾಂತ ಭಾವದಿಂ ।
ಮಿಡಿಸಯ್ಯ ಹೃದ್‌ವೀಣೆ ಭಕ್ತಿ ರಸದಿಂ॥ ॥ ೧ ॥

**ಪಟದೀಪ :**

ಶ್ರೀ ಗವಿಸಿದ್ಧೇಶ ಮಹಾಕೊಪಣ ಪುರವಾಸ ।
ನಂದನದ ದುಂಬಿಯಂತೆ ಮನದುಂಬೀ ।
ಭಕ್ತರಾ ಕರಣದಲಿ ಝೇಂಕೃತಿಯ ತುಂಬಿ ।
ಪಾವನರನ್ನಾಗಿಸ್ಯೆ ನವನೀತದೆಂತೆಂಬೆ ॥ ॥ ೨ ॥

**ಭಾಗೇಶ್ರೀ :**

ಮಣಿದಿದೆಮ್ಮಯ ಮುಡಿ ಜೋಡಿಸಿದೆಮ್ಮಯ ಕರ ।
ಮಡಿಯಿಂದ ಬಾಳು ನುಡಿಯಿಂದ ಸವಿಜೇನು ।
ಲೋಹದಂತಿಹ ಲೋಕ ಬರಡು ಮಬ್ಬು ।
ನೀಪಿಡಿದೊಡಾಗ್ವದು ಅದು ತಾಂ ರಸಕಬ್ಬು ॥ ॥ ೩ ॥

**ಸೋಹನಿ :**

ಹರಿಸು ಬೆಳಗಿರಿ ಎಂದು ಕಲಾವಿದರೆಲ್ಲರುಂ ।
ಮುನ್ನಡೆಸು ಧರ್ಮದೀ ಕರ್ಮವಿದರೆಲ್ಲರುಂ ।
ಲಕ್ಷಿಸು ಜ್ಯೋತಿ ಇರ್ದೆಡೆ ತಾಪಸಿಗಳೆಲ್ಲರುಂ ।

ರಕ್ಷಿಸು ನೀತಿ ನೇಮದಲ್ಲಿಹ ಭಕ್ತರೆಲ್ಲರುಂ ॥ ॥ ೪ ॥

**ಮಧುಮಾ ಸಾರಂಗ :**

ಕೊಪ್ಪಳ ಗವಿಮಠ ಸ್ಥಾಪನಾಧೀಶ ।
ಆದಿ ಪೀಠಾಧೀಶ ರುದ್ರಮುನೀಶ ।
ಈ ದಿವ್ಯ ಕಥೆಯ ಬೆಳಗಿಸು ಪರಮೇಶ ।
ತಪೋನಿಧಿಯೇ ಶಿವಯೋಗೀಶ ॥ ॥ ೫ ॥

## ಪ್ರಥಮ ದೃಶ್ಯ

ಮಾಘ ಬಹುಳ ಚತುರ್ದಶಿಯಂದು ಶ್ರೀಮಠದಲ್ಲಿ ಪುರಪ್ರಮುಖ ಮಾಲಿಗೌಡ ಶೆಟ್ಟಿ ಸಾಹುಕಾರ ಶ್ರೀಮಂತ ಭಕ್ತ ವ್ಯೂಹದ ಮಧ್ಯದಲ್ಲಿ ಉನ್ನತಾಸನದ ಮೇಲೆ ಶ್ರೀ ಮ.ನಿ.ಜ. ಚನ್ನಬಸವಸ್ವಾಮಿಗಳು ಆಸೀನರಾಗಿ, ಪ್ರಥಮ ಪೀಠಸ್ಥರಾದ ಶ್ರೀ ರುದ್ರಮುನಿ ಸ್ವಾಮಿಗಳ ಆರಾಧನೆ ನಡೆದ ಶುಭ ಸಮಯದಲ್ಲಿ.

**ಮಾಲಿಗೌಡ**–(ಸ್ವಾಮಿಗಳಿಗೆ ನಮಸ್ಕರಿಸಿ) ಬುದ್ಧಿ ಈ ಮಠದ ಮೂಲ ಸಂಸ್ಥಾಪಕರಾದ, ಕಾಶೀರುದ್ರಮುನಿಸ್ವಾಮಿಗಳಿಂದ ಆರಂಭವಾಗಿ, ಅನೂಚಾನವಾಗಿ ನಡೆದು ಬಂದ ಆರಾಧನೆ, ಅನ್ನ, ಜ್ಞಾನ, ದಾಸೋಹಾದಿಗಳನ್ನು ಪರಂಪರಾದಿ ವೈಶಿಷ್ಟ್ಯಗಳನ್ನು ಯಾವ ಕುಂದು ಕೊರತೆಗಳಿಲ್ಲದೆ ನಡೆಯಿಸಿಕೊಂಡು ಬಂದ ತಮ್ಮ ಸಾಧನೆಗೆ ನಾವೆಲ್ಲರೂ ತಲೆಬಾಗುತ್ತೇವೆ. ತಮ್ಮ ಉಪಕಾರ ಅವಿಸ್ಮರಣೀಯ.

**ಚ.ಬ.ಸ್ವಾ**– ಇದರಲ್ಲಿ ನಮ್ಮದೆನ್ನುವದೇನಿಲ್ಲ. ನಿಮ್ಮೆಲ್ಲ ಭಕ್ತರ ಆದರಾಭಿಮಾನಗಳೇ ಮಠದ ಆಸ್ತಿ. ಪ್ರಣವ ಸ್ವರೂಪಿಗಳಾದ ಶ್ರೀ ರುದ್ರಮುನಿಸ್ವಾಮಿಗಳು ಪ್ರಥಮತಃ ಇಲ್ಲಿ ದಯಮಾಡಿಸಿದಾಗ ಮಾಲಿಗೌಡರ ಪ್ರೇಮಾದರದ ಕರೆಗೆ ಓಗೊಟ್ಟು, ಅವರಿತ್ತ ಗೋದಾನ ಸ್ವೀಕರಿಸಿ, ತಮ್ಮ ತಪೋನುಷ್ಠಾನಗಳಿಂದ ಬಂದ ಭಕ್ತರ ಮನವ ಗೆಲಿದು, ಕಾಲಕ್ರಮದಲ್ಲಿ ಹೊಳೆಯ ಹಂಪಯ್ಯನವರೆಂಬ ಸದ್ಭಕ್ತರ ಉದಾರ ಕೊಡುಗೆಯಿಂದ ಶಕೆ ೧೦೦೮ರಲ್ಲಿ ಅಸ್ತಿತ್ವಕ್ಕೆ ಬಂದ ಈ ಮಠ ನಿಮ್ಮಂತಹ ಭಕ್ತರ ಅಭಿಮಾನಗಳಿಂದ ಬೆಳೆದು ಬಂದಿದೆ. ಅಂತಹ ಮಹಾ ಪುರುಷರ ಆರಾಧನೆ ನಮ್ಮ ಕರ್ತವ್ಯವೆಂದು, ನಿಮ್ಮೆಲ್ಲರ ಸಹಕಾರಗಳಿಂದ ನಡೆಯಿಸಿಕೊಂಡು ಬಂದಿದ್ದೇವೆ.

(ಅಷ್ಟರಲ್ಲಿ ಮರಿಚೇಡಿನ ಹುರಳಿ ನಾಗಪ್ಪನು ಕಾಣಿಕಾದಿಗಳನ್ನು ತಂದು ಮುಂದಿಟ್ಟು ನಮಸ್ಕರಿಸಿ)

**ಹು.ನಾಗಪ್ಪ–** ದಯವಿಟ್ಟು ಸ್ವೀಕರಿಸಿ ಬುದ್ಧಿ.

**ಚ.ಬ.ಸ್ವಾಮಿ–** ಬನ್ನಿ ಕುಳಿತುಕೊಳ್ಳಿ, ಬಹಳ ದೂರದಿಂದ ಬಂದಂತೆ ಕಾಣುತ್ತದೆ. ಮೊದಲು ಪ್ರಸಾದ ತೆಗೆದುಕೊಳ್ಳಿ....ನಿಮ್ಮನ್ನೆಲ್ಲಿಯೋ ನೋಡಿದಂತೆ...?

**ಹು.ನಾಗಪ್ಪ–** ಅಹುದು ಬುದ್ಧೀ ಹಿಂದೊಮ್ಮೆ ತಾವು ಕಲ್ಯಾಣಕ್ಕೆ ದಯಮಾಡಿಸುತ್ತಿರುವ ಸಮಯದಲ್ಲಿ... ಒಪ್ಪತ್ತು ಕೂಳಿಗೂ ಗತಿಯಿಲ್ಲದೆ ಹೆರವರ ಹೊಲದಲ್ಲಿ ದುಡಿಯುತ್ತಿರುವಾಗ ಕರುಣೆ ಕಕ್ಕುಲತೆಯಿಂದ ಕರೆದು, ಹರಿಸಿ ಬಂದಿದ್ದೀರಿ. ಅಂದಿನಿಂದ ಉತ್ತರೋತ್ತರ ಅಭಿವೃದ್ಧಿ ಹೊಂದಿ ನಾನೀಗ ನನ್ನ ಗ್ರಾಮ ಮರಿಚೇಡಿಗೆ ಜಹಾಗೀರದಾರನಾಗಿದ್ದೇನೆ. ನನ್ನೀ ಉತ್ಕರ್ಷಗೆ ತಮ್ಮ ಪಾದದಂತಃಕರುಣ ಕೃಪಾದೃಷ್ಟಿಗಳೇ ಕಾರಣ.

**ಚ.ಬ.ಸ್ವಾಮಿ–** ಅದೆಲ್ಲ ಶಿವನಿಚ್ಛೆ, ನಾವು ಕಾರಣ ಮಾತ್ರ. ಕೊಡುವವನು ಶಿವನೇ ಕಾಯುವವನೂ ಶಿವನೇ. ಶರಣರ ಪ್ರಮಾಣ ವಚನಗಳೇ ಸಾಕ್ಷಿ.

**ಮಾ.ಗೌಡ–** ಜಹಾಗೀರದಾರರೇ ಶಿವನ ಪ್ರತಿರೂಪವೇ ಈ ನಮ್ಮ ಸ್ವಾಮಿಗಳೆಂದರೆ ತಪ್ಪಲ್ಲ... ನಿಗ್ರಹಾನುಗ್ರಹಶಕ್ತಿ ಸಂಪನ್ನರು, ವೈರಾಗ್ಯ ಚಕ್ರವರ್ತಿಗಳು, ಉಜ್ವಲ ತಪೋನಿಷ್ಠರೂ ಆದ ಈ ನಮ್ಮ ಸ್ವಾಮಿಗಳು ನಂಬಿ ನಡೆಯುವ ಭಕ್ತರ ಸಂಕಷ್ಟ ಸಂಕಲ್ಪ ಸಂವೇದನೆಗಳನ್ನು ತಮ್ಮ ಕೃಪಾದೃಷ್ಟಿಯಿಂದ ಅರಿತು, ಸೂಕ್ತ ಸಮಯ ಸಂದರ್ಭಗಳಲ್ಲಿ ದರುಶನ ಭಾಗ್ಯ ನೀಡಿ, ಉದ್ಧರಿಸ ಬಂದ ಶಕ್ತಿ ಸಮೂಹ ಸಂಚಯವೇ ಈ ನಮ್ಮ ಸ್ವಾಮಿಗಳೆಂದರೆ ತಪ್ಪಲ್ಲ.

**ಹು.ನಾಗಪ್ಪ –** ಇಂತಹ ಪರಮ ತೇಜೋಮೂರ್ತಿ, ಪರುಷಸ್ಪರ್ಶಿ ಪವಾಡ ಪುರುಷರ ಪಡಿನೆಳಲಿನಲ್ಲಿ ಅವಿರತ ದರ್ಶನ ಭಾಗ್ಯ ಪಡೆಯುತ್ತಿರುವ ನೀವೇ ಧನ್ಯರು.

(ಗೌಡರ ಆಳುಮಗ ಭರಮನು ಬಂದು ಗೌಡರನ್ನು ಸನ್ನೆಯಿಂದ ಒಂದೆಡೆ ಕರೆದು)

ಭರಮ– (ಅಳುತ್ತಾ) ಎಪ್ಪಾ, ಮಳಿ ಮಲ್ಲಪ್ಪನ ವಟ್ಟರದಾಗ ಮೇಯಾಕ ಹೋದಲ್ಲೆ ಏನಾತೋ ಏನಿಲ್ಲೋ ನಮ ಗೌರಿ ಧಡಗ್ಗನ ಬಿದ್ದು ಸತ್ತು ಹೋಗೇತಂತೆ.

**ಮಾ.ಗೌಡ–** (ಹೌಹಾರಿ) ಏನು ಗೌರಿಯೇ..... ನಮ್ಮ ಗೌರಿಯೇ....ಗೌರೀ....

**ಚ.ಬ.ಸ್ವಾಮಿ –** ಶಾಂತಿ....ಶಾಂತಿ... ಸಮಾಧಾನ ತಂದು ಕೊಳ್ಳಿರಿ... ಏನಾಯಿತಂತೆ.

**ಮಾ.ಗೌಡ–** ಬರಲಿರುವ ದಿನಗಳಲ್ಲಿ ನಮ್ಮ ವಂಶಕ್ಕೆ ಅದಾವ ವಿಪತ್ತು ಕಾದು ಕುಳಿತಿದೆಯೋ ಶಿವನೇ ಬಲ್ಲ. ಈ ಮಠದ ಮೂಲ ಕರ್ತೃಗಳಾದ ರುದ್ರಮುನಿ ಸ್ವಾಮಿಗಳವರು ಇಲ್ಲಿಗೆ ಆಗಮಿಸಿದಾಗ, ನಮ್ಮ ವಂಶದ ಹಿರಿಯರು ಅವರ ಆರೋಗಣೆಗೆಂದು ಅರ್ಪಿಸಿದ ಕೆಲವು ಆಕಳುಗಳಲ್ಲಿ ಕಾಲಕ್ರಮದಲ್ಲಿ ಅವರ ಪುಣ್ಯ ತಿಥಿಯಂದೇ ಜನಿಸಿದ ಕರುವೊಂದನ್ನು ಆಶೀರ್ವಾದ ಪೂರ್ವಕ ಪಡೆದುಕೊಂಡಿದ್ದೆವು. ಅದರ ಬರುವಿಕೆಯಿಂದ ನಮ್ಮ ಮನೆತನವು ಹಾಲುಕ್ಕಿದಂತೆ ಉಕ್ಕುತ್ತಾ ಒಂದಕ್ಕೆರಡಾಗಿ, ಅಭಿವೃದ್ಧಿ ಹೊಂದುತ್ತಾ ನಮ್ಮ ವಂಶ ಉತ್ಕರ್ಷೆಯ ಅತ್ಯುನ್ನತ ಶಿಖರದಲ್ಲಿ ಲೋಲಾಡುತ್ತಿತ್ತು. ಅಂತಹ ಪುಣ್ಯ ಪ್ರದಾಯಿನಿಯಾದ ಗೌರಿಯು ಇಂದಾವದೋ ಆಕಸ್ಮಿಕ ಘಟನೆಯಿಂದ ಅವರ ಪುಣ್ಯ ತಿಥಿಯಂದೇ ಅಸುನೀಗಿತಂತೆ, ಹೇಳು ಗುರುವೇ ಹೇಳು. ಭವಿತವ್ಯದಲ್ಲಿ ನಮಗಾವ ವಿಪತ್ತು ಕಾದುಕುಳಿತಿದೆ.

**ಚ.ಬ.ಸ್ವಾಮಿ –** ಶಾಂತರಾಗಿ, ಶಿವನಿಚ್ಛೆ ಎಂದು ಅರಿತು ಶಾಂತರಾಗಿ.

**ಮಾ.ಗೌಡ –** ಶಾಂತಿ.... ಸಮಾಧಾನ... ಬುದ್ಧೀ ಶಾಂತನಾಗಲೇ. ಸಮಸ್ತ ಭೋಗಭಾಗ್ಯಗಳ ಕೇಂದ್ರಬಿಂದುವಾಗಿದ್ದ ಗೌರಿಯನ್ನು ಕಳೆದುಕೊಂಡು ಶಾಂತನಾಗಲೇ...ಜೇಷ್ಠಾಲಕ್ಷ್ಮಿಯ ನಿವಾಸವಾಗಿದ್ದ ನನ್ನ ಮನೆಗೆ ಮಹಾಲಕ್ಷ್ಮಿಯಾಗಿ ಬಂದು ನಿರಂತರ ಸಿರಿ ಸಂಪದ, ಭೋಗ ಭಾಗ್ಯಗಳನ್ನು ಕರುಣಿಸಿ, ಕೀರ್ತಿ ಕಾಮನೆಗಳ ವಿಜಯ ಪತಾಕೆಯನ್ನು ಆಗಸದೆತ್ತರಕ್ಕೆ ಹಾರಿಸಿದ ಮಹಾಮಂಗಳ ಗೌರಿಯನ್ನು ಕಳೆದುಕೊಂಡು ಶಾಂತನಾಗಲೇ.

**ಚ.ಬ.ಸ್ವಾಮಿ –** ಅಹುದು, ನೀವು ಶಾಂತರಾಗಲೇಬೇಕೆಂದು ನಮ್ಮ ಇಚ್ಛೆ... ಗೌಡರೇ ಆ ನಿಮ್ಮ ಗೌರಿ ಸತ್ತಿಲ್ಲ... ಅವಳಿಗೆ... ಸಾವು ಬಹುದೂರ

ಮೃತ್ಯುಂಜಯನ ನಿತ್ಯ ನಿವಾಸವಾದ ಪುಣ್ಯ ಕ್ಷೇತ್ರದಲ್ಲಿ ಗೌರಿಯ ಮರಣವೇ, ಅದೊಂದು ನಿತ್ಯ ಜಾಗ್ರತ ಸ್ಥಾನ; ಸಿದ್ಧಪುರುಷರ ಉಗಮ ಸ್ಥಾನ, ಮಣಿ ಮಂತ್ರೌಷಧಿಗಳ ಸಾಧನೆಯ ಕೇಂದ್ರ ಸ್ಥಾನ, ಇಂತಹ ಪುಣ್ಯ ಭೂಮಿಯಲ್ಲಿ ಗೌರಿಯ ಮರಣವೇ?.... ಅದೆಂದಿಗೂ ಸಾಧ್ಯವಿಲ್ಲ.... ಗೌರಿಯ ಮರಣದ ಹಿಂದೆ ಯಾವದೋ ಹಿನ್ನೆಲೆ ಇರಲೇಬೇಕು. ಕಾಲ ಯಾರನ್ನೋ ನಿರೀಕ್ಷಿಸುವಂತಿದೆ, ಯಾವದೋ, ಮಹಾನ್ ಶಕ್ತಿಯು ಸಾಕಾರ ಸ್ವರೂಪ ಸಂಚರಿಸುವಂತಿದೆ. ಹೋಗಿ ಶಾಂತ ಮನಸ್ಸಿನಿಂದ ಮೈಯಲ್ಲ ಕಣ್ಣಾಗಿ ಕಾಯ್ದು ನೋಡಿ ಆ ಮೇಲೆ ನಿರ್ಧರಿಸಿ, ಹೋಗಿ ಬನ್ನಿ, ಶುಭವಾಗಲಿ.

ಮಾಲಿಗೌಡ–(ನಮಸ್ಕಾರ ಮಾಡಿ) ನಡೆ, ಭರಮಾ... (ಹೋಗುವರು)

ಚ.ಬ.ಸ್ವಾಮಿ– ಪ್ರಸಾದ ತೆಗೆದುಕೊಂಡು ಹೋಗಿ ಜಿಹಾಗೀರದಾರರೇ. ಸಿರಿ ಸಂಪದ, ಭೋಗ ಭಾಗ್ಯಗಳು; ಧರ್ಮ ನ್ಯಾಯ, ನೀತಿ ನಿಯಮಗಳ ನೆಲೆಗಟ್ಟಿನ ಮೇಲೆ ನಿಂತಿವೆ. ಧರ್ಮೋರಕ್ಷತಿ ರಕ್ಷತಃ ಧರ್ಮವನ್ನು ನೀವು ರಕ್ಷಿಸಿದಲ್ಲಿ ಧರ್ಮ ನಿಮ್ಮನ್ನು ರಕ್ಷಿಸಲು ಬರುತ್ತದೆ. ಅನ್ಯಾಯ, ಅಧರ್ಮ ಅನೀತಿಗಳಿಂದ ಸಂಚಿಸಿದ ಸಂಪತ್ತು ಸಹ್ಯಾದ್ರಿಯ ಗಾತ್ರದಲ್ಲಿದ್ದರೂ, ಬೆಂದುಸುರಿನ ತಾಪಕ್ಕೆ ಹಿಮದ ರಾಶಿಯಂತೆ ಕರಗಿ ಹೋಗುವದು, ಯಾವದಕ್ಕೂ ಹಿಗ್ಗದೇ ಕುಗ್ಗದೇ ಬಡವ ಬಲ್ಲಿದರೆಂದು ಭೇದವಿಡದೇ ಬೇಡಿ ಬಂದವರಿಗೆ, ಅನ್ನ ಅರಿವೆ ಆಶ್ರಯಗಳನ್ನಿತ್ತು ಕೀರ್ತಿಕಾಯರಾಗಿ ಬಾಳ ಬೆಳಗಿರಿ ಆ ಶಿವನ ಕೃಪಾ ಕಟಾಕ್ಷ ಎಂದೆಂದಿಗೂ ಬತ್ತದ ಬುಗ್ಗೆಯಾಗಿ ನಿಮ್ಮ ಮೇಲೆ ಅನವರತವೂ ಸಿಂಚಿಸುತ್ತಿರಲಿ ನಡೆಯಿರಿ. ಎಲ್ಲರೂ ಪ್ರಸಾದ ತೆಗೆದು ಕೊಳ್ಳಿ.

**ಪದ, ಶುದ್ಧಸಾರಂಗ**

ಶಮೆ, ದಮೆ, ಶಾಂತಿ ಕಾಂತಿ, ಕಾಮಿತರ ಕಲ್ಪತರುವಾಗಿ }
ದೀನ ಹೀನ ದುಃಖೀಜನಕೆ, ನೀನಮರಕಾಮಧೇನುವಾಗಿ ।
ಮೆರೆ, ನೀ ಭುವಿಯಲಿ, ಧರ್ಮ ಇರುವನಕ. ॥
ಹರ ಹರ ಮಹಾದೇವ ಎನ್ನುವ ಘೋಷದೊಂದಿಗೆ ಹೋಗುವದು.

===***===***===

# ದೃಶ್ಯ ೨

## ಜಂಗಲ್ ರಸ್ತಾ

(ಮಹಾದೇವಯ್ಯನು ಮಗನ ನಡವಳಿಕೆಯ ಬಗ್ಗೆ ಚಿಂತಿಸುತ್ತಾ ಬರುವನು)

**ಮಹಾದೇವಯ್ಯ** – ಮಲ್ಲೇಶ ಮಳಲ ಮಲ್ಲೇಶ ನನ್ನ ಜೀವನವನ್ನೇ ಸಮಸ್ಯೆಯನ್ನಾಗಿ ಮಾಡಿದೆಯಲ್ಲ ತಂದೆ, ಹೀಗೇಕೆ, ನಿನ್ನ ರಾಜ್ಯದಲ್ಲಿಯೂ ಪಕ್ಷಪಾತವೇ ಅಥವಾ ನನ್ನ ಭೋಗವೇ ಹೀಗೆಯೇ? ಮಕ್ಕಳಿಲ್ಲದ ಬಾಳು ಬರಡು ಎಂದು ನಿನ್ನ ಮೊರೆಹೊಕ್ಕು, ಅಪರೂಪಕ್ಕೆ ಪಡೆದ ಮಗನ ಮೋಹದಲ್ಲಿ ಕಣ್ಣಿದ್ದೂ ಕುರುಡಾದ ಹೆಂಡತಿಯೊಂದು ಕಡೆಗೆ, ಇನ್ನೊಂದು ಕಡೆಗೆ ಅವನೆಲ್ಲಿಯೋ ಅವನ ಚಿತ್ತವೆಲ್ಲಿಯೋ, ಭಾವ ಜೀವಿಯೋ ಅರೆಹುಚ್ಚನೋ ಮಂದ ಬುದ್ಧಿಯೋ, ಇಲ್ಲವೇ ಭೂತ ಪಿಶಾಚಿಗಳ ಕಾಟಕ್ಕೆ ಬಲಿಯಾದವನೋ ಯಾವದೂ ನಿರ್ಧರಿಸಲು ಬಾರದಾಗಿದೆ. ಅಯ್ಯೋ ದೈವ ಚಿತ್ರವೇ?

**ಬಾಳ್ಯಾ**– (ಬರುತ್ತಾ) ಸ್ವಾಮೇರ ಓ ಸ್ವಾಮೆರ. ನಿಮ್ಮ ದನಾ ನಿಮಕಿಂತ ಮುಂದ ಹರದಾವಲ್ರಿ ನೀವೇನ ಕೊಟ್ರ ವೈತೀರಿ. ಇಲ್ಲಿದಿದ್ರ ಹಂಗ ಹೊಕ್ಕೀರಿ. ನಿಮ್ಮ ದನಕ ಏನ ಹೇಳಬೇಕು. ಹೇಳ್ರಿ, ತುಡುಗ ಮೇಯಾಕ ಸುರುಮಾಡ್ಯವ, ಏನು ಮಾಡಬೇಕು ನೀವ ಹೇಳ್ರಿ ಯಾಕ ಸುಮ ಸುಮನ ಮಂದಿ ಜಲ್ಮಾ ತಿಂತೀರಿ.

**ಮಹಾದೇವಯ್ಯ** – ಹಾಗೇನು ಇಲ್ಲ ಬಾಳಪ್ಪ. ನಮ್ಮ ಗುಡ್ಡದಪ್ಪನೇ ದಿನಾಲು ಕಾಯ್ದುಕೊಂಡು ಬರುತ್ತಾನೆ.

**ಬಾಳ್ಯಾ**– ಕಾಯ್ತಾನಪಾ...ಕಾಯ್ತಾನ. ಅಪರೂಪಕ್ಕ ಮಗನ್ನ ಹಡೆದೀರಿ ಕಾಯ್ತಾನ. ಅಯ್ಯನಾರ...ಎಲ್ಲಾರು ಮಕ್ಕೊಂಡು ನಿದ್ದೀ ಮಾಡಿ ದರ ನಿನ ಮಗಾ ಕುಂತ ನಿದ್ದೀ ಮಾಡ್ತಾನ ಅವ ಏನ ಕಾದು ಹಾಳಾಗಿ ಹೋಕ್ಕನ. ಏನS ಊರ ಅಯ್ಯನಾರು ಅಂತ ಬಿಟ್ಟೀವಿ. ಹುಡುಗ್ಗ ಸರಿಯಾಗಿ ಹೇಳಿ ಕಳಿಸಿರಿ ವಂದು. ಇಲ್ಲಕ್ರ ಥಂಣಗ ಎಲ್ಲಾ ದನಾುವಾರಿಕೊಂಡು ಜೋಳಿಗಿ ತಿರುವಿಹಾಕೊಂಡು

ಅಡ್ಡಾಡಿರಿ. ಹಿಂಗ ಎಲ್ಲಾ ಮಂದಿ ಮನಿ ಯಾಕ ಹಾಳು ಮಾಡಿಕೊಂತಾ ತಿರಗತೀರಿ.

**ತಿರಕಂಭಟ್ಟ–** ಏನು ಬಾಳು ಅಯ್ಯನಾರ ಜೋಳಿಗ್ಗೆ ಗಂಟು ಬಿದ್ಹಾಂಗ ಆಗೇದ.

**ಬಾಳು –** ಬರ್ರೀ.... ಅವರದು ಹಾಸು ನಿಮದು ಹೊಚ್ಚು ಅವರದು ಜೋಳಿಗಿ, ವಂದ ಕುಲಾ ಇದ್ರ ನಿಮದು ಹಸಿಬಿ. ಎಲ್ಲಾ ಕುಲಾನು ಇರತಾವ ಯಾಕ್ರೀ ಭಟ್ಟರ. ಹೌದಲ್ರಿ ಸ್ವಾಮೇರ.

**ಮಹಾದೇವ –**ಅದೇನಪ್ಪಾ ಆ ಮಳಲ ಮಲ್ಲೇಶಗೇ ಗೊತ್ತು. (ಹೊರಟು ಹೋಗುವರು)

**ಬಾಳ್ಯಾ –** ನೋಡಿದ್ರಾ ಭಟ್ಟರ. ಹೆಂಗ ಐತಿ ಆಸಾಮಿ

**ತಿರುಕ –** ನೀ ಏನS ಹೇಳು. ಈ ಅಯ್ಯನಾರು ಕಸಬುಗಾರರಲ್ಲ.

**ಬಾಳ್ಯಾ –** ನಿಮ್ಮ ಕಸಬು ಅವರಿಗೆಲ್ಲಿ ಬರಬೇಕ್ರಿ. ಪಾಪ ಮೆತ್ತನ್ನ ಅಯ್ಯನಾರು ಸಿಟ್ಟು ಇಲ್ಲ, ಸೆಡವು ಇಲ್ಲ. ಎಲ್ಲಾರೂ ನಮ್ಮವರಂತ ದೊಡ್ಡಗುಣ ತಗೊಂಡು ಹೊಕ್ಕಾರ. ಆ ಗುಣ ನಿಮಗೆಲ್ಲಿ ಐತೆ? ಹೇಳಿ ಮಾಡಿಸಿದ ಕಸಬು ದಾರರಪಾ ನೀವು.

**ತಿರುಕ –** ಈ ನಮ್ಮ ಕಸಬಿನೊಳಗ ಸಿಟ್ಟು ಸೆಡವು ಮಾಡಿಕೊಂಡರ ಹೆಂಗ ನಡೀತದ. ಯಾರ್‍ಯರ ಇಚ್ಛಾ ಏನ ಇರತದ, ಅದನೆಲ್ಲ ಪೂರ್ತಿ ಮಾಡತೀವಿ ಮಂತ್ರಸ್ತೀವಿ, ಯಂತ್ರ ಕಟ್ಟತೀವಿ, ಜೋತಿಷ್ಯ ಹೇಳತೀವಿ ದೆವ್ವಾ, ಭೂತ, ಪಿಶಾಚಿ ಬಿಡಸ್ತೀವಿ, ಬರೇ ಇಷ್ಟೇ ಅಲ್ಲ ಇತ್ತಿತ್ತಲಾಗಿ ದೇವೀನೂ ಮೈಯಲ್ಲಿ ಬರಲಿಕ್ಕೆ ಹತ್ಯಾಳ, ಅವಾಗ ಹೇಳಿದ ಹೇಳಿಕಿ, ಹುಸಿ ಅಂಬೋ ಸುದ್ದೀನ ಇಲ್ಲ. ಶುಕ್ರವಾರ ಮಂಗಳವಾರ ಮನಿ ತುಂಬಿ ಹೋಗಿರ್ತದ. ನಿನಗೂ ಏನಾದ್ರು ಕೇಳೋದಿದ್ರ ಬಾ ಅಲ್ಲಾ.

**ಬಾಳ್ಯಾ –** ಇದೇನ್ರಿ ಸುದ್ದಿ ದೇವಿ, ನಿಮ್ಮ ಮೈಯಾಗ ಬರ್ತಾಳ?

**ತಿರುಕ –** ನನ್ನ ಮೈಯಲ್ಲಿ ಬಾರದ ಇನ್ನ ಯಾವ ಹೊಲ್ಯಾರ ಮೈಯಾಗ ಬರಬೇಕು. ಆ ತಾಯಿ ನಾ ಅಂದ್ರ ಏನ ತಿಳಕೊಂಡೀ.

**ಬಾಳ್ಯಾ –** ಹಂಗಾರ ಈ ವಾರ ಬರ್ತೀನ್ರಿ

**ತಿರುಕ –** ಬರ್ತೀನ್ರೀ ಅಂತ, ಬರೇ ಕೈಲೆ ಬಂದಿಯೋ ಧಡ್ಡ ಮುಂಡೇದ

ಬಾಳ್ಯಾ — ಏನೇನ ತರಬೇಕ್ರಿ

ತಿರುಕ — ಅಕ್ಕಿ, ಗೋದಿ, ಬ್ಯಾಳಿ, ಬೆಲ್ಲ, ತೆಂಗು, ಕೊಬ್ರಿಬಟ್ಟಲು ಅರಿಷಿಣ, ಕುಂಕುಮ, ಧೂಪ, ದೀಪ, ನೈವೇದ್ಯಕ್ಕೆ ಇಷ್ಟು ಹಂಣು ಆದ್ರ ಸಾಕೆಪ್ಪ ಹಾಂ, ದಕ್ಷಿಣೆ ಮರ್ತಿಯಾ ಮತ್ತೆ,

ಬಾಳ್ಯಾ — ಅಲ್ರಿ ಭಟ್ಟರ, ಗಂಡ ಹೆಂಡರ ಜಗಳ ಯಾವರ ಸುದ್ದ ಆಗೇವೇನು ನಿಮ್ಮ ಕೈಯಾಗ.

ತಿರುಕ — ಅದರೊಳಗಂತು ಎತ್ತಿದ ಕೈ ನಮದು. ಗಂಡ, ಹೆಂಡತೀ ಬಿಟ್ಟರಲಿ, ಹೆಂಡತಿ ಗಂಡನ ಬಿಟ್ಟರಲಿ, ಮೂರೇ ದಿವಸದೊಳಗ ಅವರ ಇಚ್ಛಾ ಪೂರ್ತಿ ಆಗ್ತದ. ನೀ ಕೇಳಿಲ್ಲ ಕಾಣಸ್ತದ ಇಲ್ಲೇ ಮಗ್ಗಲ ಹಳ್ಳಿಯೊಳಗ ಗಂಡ ಹೆಂಡತಿ ಹನ್ನೆರಡು ವರ್ಷ ವಬ್ಬರಿಗೊಬ್ಬರು ಮಾರೀನ ನೋಡಿದ್ದಿಲ್ಲ ಈಗ ಕೇಳು, ಹ್ಯಾಗಿದ್ದಾರಂಬೋದು.

ಬಾಳ್ಯಾ — ಯಾರು? ಆ ಫಕೀರನ ಮಗಳು ಮೂಳಿ ಹೌದಲ್ರೇ.

ತಿರುಕ — ಹಾಂ, ಹಾಂ, ಅವಳೇ ಆ ಮೂಳಿ. ಹ್ಯಾಗಿದ್ದಾಳ ಗೊತ್ತಾ,

ಬಾಳ್ಯಾ — ಗೊತ್ತಾತು ಬಿಡ್ರಿ ಭಟ್ಟರ, ಆ ಹುಡುಗಿ ಉರ್ಲ ಹಾಕ್ಕೊಂಡು ಸತ್ತು ಹೋತ್ರಿ ಭಟ್ಟರ. ... ಪಾಪ ಬಂಗಾರದಂತ ಹುಡಿಗಿರೀ ಭಟ್ಟರ.

ತಿರುಕ — ಅದರ ದೈವದೊಳಗ ಹಾಂಗ ಬರದದ. ಅದಕ ಯಾರೇನ ಮಾಡ್ಲಿಕ್ಕೆ ಆಗ್ತದ. ಆ ಮುಂಡೇದು. ಸಾಹೇಳಿದ್ದಂಗ ನಡಕೊಳ್ಳಲಿಲ್ಲ ಅದಕ ಹೀಂಗಾತು ಬಾಳಪ್ಪಾ. ನಾವು ಹಿಡಿದ ಕೆಲಸದದೊಳಗ ಹುಸಿ ಅಂಬೋ ಸುದ್ದೀನ ಇಲ್ಲ. ನಡಕೊಳ್ಳವರು ನೀವು ತಪ್ಪಿದರ ಯಾರೇನ ಮಾಡ್ಲಿಕ್ಕ ಆಗ್ತದ.

ಬಾಳ್ಯಾ — ಖರೇನ, ಈ ಮಾತು.

ತಿರುಕ — ಅದರೊಳಗ ಏನ ತಪ್ಪಆದ. ಕಂಡ ಕೇಳಲ್ಲ ಯಾಕ್ರೀ ಭಟ್ಟರ ಏನ ಆತು ಅಂತ, ನಿಂದೇನಾದ್ರು ಅದನ ಏನು ಮತ್ತ....

ಬಾಳ್ಯಾ — ಅದಕಂತನ ಕೇಳಿನ್ರೀ.....

ತಿರುಕ — ನಿಂದ... ಆಗದಿ ಮನಿಯಾಂವ ಇದ್ದಂಗ ಇದ್ದೀ. ನಿಂದ ಮಾಡದಿದ್ರ ಮತ್ಯಾವ ಹೊಲ್ಯಾರದು ಮಾಡೋದು ಅದ ಹೇಳಲ್ಲಾ ಹೇಳು.

**ಬಾಳ್ಯಾ** — ಇತ್ತಿತ್ತಲಾಗ ನಮ್ಮ ತಿಪ್ಪಿ ತೆಲಿ ಕೆಟ್ಟು ಹೋಗ್ಯೆತಿ. ನಿಟ್ಟ ಅಂದ್ರು ಸೇರವಲ್ಲದು. ಅದಕೇನು ಮಾಡಬೇಕಂದ್ರಿ.

**ತಿರುಕ** — ನೀ ಅದರ ಕಾಳಜೀನ ಬಿಡು. ಹ್ಯಾಗೂ ನಾಳೇ ಮಂಗಳವಾರ ಅಮವಾಸೆ, ಅದS ಹೇಳಿದೆನಲ್ಲಾ ಪೂಜಾಕಷ್ಟು ಸಾಮಾನು ತಂದು ಬಿಡು. ಛಲೋ ಯಂತ್ರ ಮಾಡಿ ಕೊಡ್ತೀನಿ. ನೀವಂದು ಕಟಗೊಂಡು ನೋಡು ಮಜಾನ, ಕಾಲ ಕಾಲ ಹಿಡದ್ರ ಆತಿಲ್ಲೋ. ಹೊಲದೊಳಗ ಏನಾದ್ರು ಕಾಯಿಪಲ್ಲೆ ಇದ್ರ ತಂದಿರು ಮತ್ತೆ ಮರೀಬ್ಯಾಡ.

**ತಿಪ್ಪವ್ವಾ** — (ಬರುತ್ತಾ) ಅಯ್ಯ. ಭಟ್ಟರ ಇಲ್ಲೇ ಅದೀರಲ್ರಿ.

**ಬಾಳ್ಯಾ** — ಯಾಕ, ಕಟಗಿ, ಕುಳ್ಳು, ಯಂಣಿ, ಕಳಿಸೇ ಬಂದಿದ್ದೇನು. ಲೇ ಮರಾವಾದಿಗೇಡಿ ಸಮ್ಮನೇ ಹೊಕ್ಕೀಯೋ ಬೇಕ.

**ತಿಪ್ಪವ್ವ** — ನೋಡಿದ್ರಾ ಭಟ್ಟರ ಹೇಂಗ ಹಾರ್‍ಯಾಡತ್ತಾ ಇದರ ಹೆಣಾ ಸೆಟೀಲಿ. ಬರಿಯೂದು ಬರೀತೀರಿ ಛಲೋತ್ನ್ಯಾಗ ನನ ಕಾಲ ಹಿಡಕೊಳ್ಳಾಹಾಂಗ ಅಂತ್ರಾ ಬರೀರಿ.

**ತಿರುಕ** — (ಪಿಸುಮಾತಿನಲ್ಲಿ) ನಿ ಸುಮ್ಮನೇ ಇರವ್ವಾ ನಾನೆಲ್ಲಿ ಬರೀತೀನಿ

**ಬಾಳ್ಯಾ** — ಭಟ್ಟರ, ಅವಳ ಹಂತ್ಯಾಗ ಏನ ಮಾತ, ಬರ್ರೀ ಇಲ್ಲಿ.

**ತಿರುಕ** — ಇಕಾ ಬಂದೇ, ಏನಂತೀ.

**ತಿಪ್ಪವ್ವ** — ಭಟ್ಟರ ಇಲ್ಲಿ ಬರ್‍ರೀ ಅವಗ್ಯಾಕ ಹೆದರ್ತೀರಿ

**ಭಟ್ಟ** — ಇಕಾ ಬಂದೆ

**ಬಾಳ್ಯಾ** — ಅವಳಿಗ್ಯಾಕ ಹೆದರತೀರಿ ಬರ್‍ರಿ ಹೋಗಾನ.

**ತಿಪ್ಪವ್ವ** — ಭಟ್ಟರ, ನಿಂದರ್‍ರಿ ಎಲ್ಲಿ ಹೊರಟರಿ. ನಿನ್ನ ಗಂಡ ಹೇಳಿದ್ಹಂಗ ಕೇಳು ಹಾಂಗ ಮಾಡತೀನಿ, ಹಾಂಗ ಮಾಡತೀನಿ ಹೀಂಗ ಮಾಡತೀನಿ ಅಂತ ಮಳ್ಳಬೂದಿ ಉಗ್ಗಿ ಹಸಿಬಿ ತುಂಬಿಕೆಂಡು ಈಗ ಅವನ ಹಿಂದ ಹೊರಟೀ ಅಂದ್ರ ನಾ ಕೇಳ ಮಗಳ ಅಲ್ಲ ಹುಂ. ಇಳಿಸ ಹಸಿಬೀನ, ಮರ್ಯಾದೆಲಿಂದ ಏನಂತೀ.

**ಬಾಳ್ಯಾ** — ಲೇ ತಿಪ್ಪಿ, ಖಬರದಾರ ಭಟ್ಟರಗ ಹಂಗ ಯಾಕ ಮಾತಾಡ್ತೀ.

**ತಿಪ್ಪವ್ವ** — ನೀ ಯಾಂವ ಕೇಳಾಕ ಪುಗಸೆಟ್ಟೀ ಅಲ್ಲ. ಹಸಿಬಿ, ತುಂಬಿ, ಕಳಿಸೀನಿ.

(ಗಂಡ ಹೆಂಡರ ಜಗಳದಲ್ಲಿ ಭಟ್ಟರು ಓಡಿ ಹೋಗಿ ಬಿಡುವರು)

**ಬಾಳ್ಯಾ** – ಏನು... ಹಸಿಬಿ ತುಂಬಿ ಕಳಿಸೀದ್ಯಾ ಯಾರಪ್ಪನ ಗಂಟು ಅಂತಾ ತುಂಬಿ ಕಳಿಸಿದೆಲೇ?

**ತಿಪ್ಪವ್ವ** – ಕಳಿಸ್ತೀನಿ.... ಕಳಿಸ್ತೀನಿ, ಮಾಡುದು ಮಾಡು ಹೋಗು.

**ಬಾಳ್ಯಾ** – ನೋಡ ಹಂಗಾರ.

**ತಿಪ್ಪವ್ವ** – ನೋಡೇ ನೋಡ್ತೀನಿ ಭಾಳ ದಿವ್ಸಾತು ನೋಡಾಕ

**ಬಾಳ್ಯಾ** – ಮನಿಗೊಂದ ಬಾರಲೇ

**ತಿಪ್ಪವ್ವ** – ಕೂಳಿಗೊಂದ ಬಾ.

===***===***===

## ದೃಶ್ಯ ೩

(ಮಳೆಯ ಮಲ್ಲೇಶನ ದೇವಸ್ಥಾನದಲ್ಲಿ ಗುಡ್ಡದೀಶನು (ಬಾಲಗವಿಸಿದ್ದ) ಭಾವಸಮಾಧಿಯಲ್ಲಿ ಕುಳಿತಿದ್ದಾನೆ, ಇನ್ನೊಂದಡೆ ಶಿವಲಿಂಗನೆಂಬ ದನಗಾಹಿ ಹುಡುಗನು ಹಾಡುತ್ತಾ ಬರುವನು)

**ಜಾನಪದ ಗೀತೆ**

ತೆರೆಯಲ್ಲಿ ಓಂ ನಮಃಶಿವಾಯ. ೩ಸಲ

ಮೂಡಣದಲ್ಲಿ ಗವಿಮಠ ।
ಪಡುವಣದಲ್ಲಿ ಮಳಿಮಲ್ಲನ ಬೆಟ್ಟ ।
ನಡುವೆ ಕೊಪ್ಪಳದ ಸಿರಿಪ್ಯಾಟಿ ನನ್ನಯ್ಯ ।
ಗುಡ್ಡದ ಮೇಲೆ ಕಿಲ್ಲೆ ಕೋಟಿ ।

ಓಂ. ನಮಃಶಿವಾಯ ೩ ಸಲ

ಗಡಗಡನೆ ಗುಡುಗಿತ್ತು ಚಟ ಚಟನೆ ಸಿಡಿದಿತ್ತು ।
ಮಳಿ ಮಲ್ಲನ ಗುಡ್ಡಕ್ಕೆ ಮಳೆ ಬಿತ್ತು ।
ಮಳೆ ಬಿದ್ದು ವನವೆಲ್ಲ ಚಿಗತಿತ್ತು ನನ್ನಯ್ಯನ ।
ಗೋಪುರವೆಲ್ಲ ತೊಳೆದಿತ್ತು ।

ಓಂ ನಮಃ ಶಿವಾಯ ೩ ಸಲ

ಮಲ್ಲಯ್ಯನ ಬೆಟದಾಗ ಮೇದಾವ ಎಂಟೆತ್ತು ।
ಕಾಡ್ಯಾವ ಮನಿಗೆ ಬರುವುದಕ ।
ಮಾಡ್ಯಾವ ಥಿರಕೀ ಹೊರಡುದಕ ನನ್ನಯ್ಯನ ।
ಗುಡ್ಡದ ಹಸಿರ ಹರಸ್ಯಾವ ।

ಓಂ ನಮಃ ಶಿವಾಯ ಓಂ ನಮಃ ಶಿವಾಯ ಓಂ ನಮಃ ಶಿವಾಯ

**ಶಿವಲಿಂಗ –** ಏನ ಮಾಡಬೇಕಪಾ ಈ ಮಾರಾಯಗ ಅಂತೀನಿ. ಏಳವಲ್ಲ, ಸಾಕು ಎದ್ದು ಬಾರೋ ಎಪ್ಪಾ... ಊಹುಂ. ಏಳವಲ್ಲ ದನಾನಾರ

ದುಂಡಗ ಮಾಡಾನ ಆವಾಗಾರ ಏಳತಾನೋ ನೋಡಾನ.
(ಹೋಗುವನು)

**ಮಾಲಿಗೌಡ** – (ದೇವರಿಗೆ ನಮಸ್ಕರಿಸಿ ಹುಡುಗನನ್ನು ನೋಡಿ) ಯಾರಾಗಿರಬಹುದು ಈ ಹುಡುಗ ಬಾಲ್ಯದಲ್ಲಿಯೇ ಯೋಗಿಯ ಲಕ್ಷಣ ಪಡೆದು ದೀರ್ಘ ಸಮಾಧಿಯಲ್ಲಿ ಮುಳುಗಿದ್ದಾನೆ.

**ಭರಮಾ** – (ವಳಗಿನಿಂದ) ಇಲ್ಲಿ ಬರ್ರಿಗೌಡರ ನಮ್ಮ ಗೌರಿ ಇಲ್ಲಿ ಬಿದ್ದೈತೆ.

**ಮಾಲಿಗೌಡ** – (ತೆರೆಯಲ್ಲಿ) ಏಳಮ್ಮ ಏಳುತಾಯಿ. ಮನೆಯವರೆಲ್ಲರೂ ನಿನಗಾಗಿ ಕಾಯುತ್ತಿದ್ದಾರೆ ಏಳುತಾಯಿ.

**ಭರಮಾ** – ಸುಳ್ಳಯಾಕ ಹಲಬತೀರಿ ಎಪ್ಪಾ ಸತ್ತ ಹೋಗೇತೆ ಆಕಾರಾನS ಹೇಳತ್ತ.

**ಮಾಲಿಗೌಡ** – ಇಲ್ಲ ಭರಮಾ. ಸ್ವಾಮಿಗಳ ಅಪ್ಪಣೆ ಸತ್ತಿಲ್ಲವೆಂದೇ ಆಗಿದೆ.

**ಭರಮಾ** – ಅವರೇನು ಹೇಳತಾರ ಬಿಡ್ರಿ ಅವರು ಅಲ್ಲಿ, ಆಕಳ ಇಲ್ಲಿ ಕಂಣರ ನೋಡತೀರೋ ಇಲ್ಲೊ ಬರೇ ಬಿಳೇ ಗುಡ್ಡೇ ತೇಲತಾವ.

**ಮಾಲಿಗೌಡ** – (ದುಃಖ ತಪ್ತನಾಗಿ) ಗೌರಿ ನಮ್ಮೆಲ್ಲರನ್ನೂ ಬಿಟ್ಟೀ ಹೊರಟು ಹೋದಿ ಏನಮ್ಮ. ಭಾಗ್ಯಲಕ್ಷ್ಮಿಯಾಗಿ ಮನೆಗೆ ಬಂದು ಮಂಗಳ ಗೌರಿಯಂತೆ ಪೂಜೆಗೊಂಡು ಹೆತ್ತಮ್ಮನಾಗಿ ನಮ್ಮೆಲ್ಲರನ್ನು ಪೋಷಿಸಿ ಕಾಮಧೇನುವಾಗಿ ಮನೋಕಾಮನೆಗಳೆಲ್ಲವನ್ನೂ ಪೂರೈಸಿ ಬಂದು ಕೆಲಸ ಮುಗಿಯಿತೆಂದು ಹೊರಟೇನಮ್ಮ ಗೌರಿ, ಗೌರಿ. (ರಂಗಕ್ಕೆ ಬಂದು ದೇವರ ಹತ್ತಿರ ನಿಂತು) ಮಲ್ಲೇಶಾ ತಂದೆ, ನಾವು ಮಾಡಿದ ಅಪರಾಧವಾದರೂ ಏನು? ನಮ್ಮನ್ನೇಕೆ, ಪರೀಕ್ಷಿಸುತ್ತಿರುವಿ ಸಕಲ ಭೋಗ ಭಾಗ್ಯಗಳಿಂದ ಕೂಡಿ ಅಮಿತಾನಂದೋತ್ಸಾಹಗಳಲ್ಲಿ ತುಂಬಿ ತುಳುಕುತ್ತಿರವ, ನನ್ನ ಮನೆತನದ. ಉತ್ಕರ್ಷೆಯನ್ನು ನೋಡಲಾಗದೆ. ಚಂಡಿ, ಹೆಂಡತಿ, ಕುರೂಪಿ ಮಕ್ಕಳು ಮನೆಯಿಲ್ಲದ ಸ್ಮಶಾನ ವಾಸಿಯಾದ ನಿನಗೇಕೆ ಹೊಟ್ಟೆಯುರಿ. ನಿರಂತರ ನಿನ್ನ ಪಾದಾರವಿಂದಗಳಲ್ಲಿ ಭಕ್ತಿ ವಿಶ್ವಾಸಗಳನ್ನಿಟ್ಟು ಶಿವನೇ ಸರ್ವಸ್ವವೆಂದೂ ಶಿವನ ಪ್ರತಿರೂಪವೇ ಸ್ವಾಮಿಯೆಂದು ನೆರೆನಂಬಿದ ನನ್ನ ಸೇವೆಯಲ್ಲಿ ಅದಾವ ದೋಷ ಕಂಡು ನನಗೀ ಉಗ್ರ ಶಿಕ್ಷೆ ವಿಧಿಸಿದೆ ಹೇಳು ವಿಧಾತಾ ಹೇಳು? ಗೌರಿ ಸತ್ತಿಲ್ಲ ಗೌರಿಗೆ ಸಾವು ಬಹುದೂರವಿದೆ.

ಮೃತ್ಯುಂಜಯನಿರುವಲ್ಲಿ ಮೃತ್ಯುವಿನ ಭಯವೇ ಎಂದು ಅಭಯ ನೀಡಿದ ಸ್ವಾಮಿಯವಾಣಿ ಸಟಿಯೇ ಹೇಳು ದೇವಾ ಹೇಳು.

**ಬಾ. ಗವಿಸಿದ್ದ** – (ಯೋಗ ಸಮಾಧಿಯಿಂದ ಬಹಿರ್ಮುಖನಾಗಿ) ಓಂ ನಮಃಶಿವಾಯ ಶಾಂತಿ, ಶಾಂತಿ, ಶಾಂತಿ, ಸಾಕ್ಷಾತ್ ಶಿವನ ಪ್ರತಿರೂಪವೇ ಸ್ವಾಮಿ ಎಂದು ನಂಬಿದ ಮಹಾಸ್ವಾಮಿಯ ಅಭಯ ವಾಣಿಯಲ್ಲಿ ವಿಶ್ವಾಸ ತಪ್ಪಿಹೊಯಿತೆ?

**ಮಾಲಿಗೌಡ** – ತಪ್ಪದಿನ್ನೇನು ಸ್ವಾಮಿ. ನೋಡಲ್ಲಿ ಹೇಗೆ ಬಿದ್ದಿಹಳು ಗೌರಿ, ಕಾಲ ಚಕ್ರದ ವಕ್ರಗತಿಯ ಸೆಳೆತಕ್ಕೆ ನನ್ನ ಸಂಸಾರವನ್ನೇ ನೂಕಿ ಹೇಗೆ ನಿಶ್ಚಿಂತೆಯಿಂದ ಮಲಗಿಹಳು ನೋಡಲ್ಲಿ, ಅವಳ ದೇಹದ ದಿವ್ಯ ಗೌರವರ್ಣ ಕಳೆಗುಂದಿ ಕಂಣಾಲೆಗಳು ಅರೆ ತೆರೆದು ನಾಲಿಗೆಯು ಹೊರಚಾಚಿ ಮುಖ ನೆಲೆಕಿಟ್ಟು ಹೇಗೆ ಮಲಗಿಹಳು ನೋಡಲ್ಲಿ. ಇನ್ನೂ ಅವಳ ದೇಹದಲ್ಲಿ ಚೈತನ್ಯವಿದೆ ಎಂದು ನಂಬಲೇ ಇಲ್ಲದ ಅಭಯ ವಾಣಿಗೆ ಬುದ್ಧಿ ಮನಗಳ ನೀಡಿ ಮೂರ್ಖನಾಗಲೆ.

**ಗುಡ್ಡದೀಶ** – ಹುಚ್ಚಪ್ಪಾ ನಿನ್ನ ಸಂಕೋಚ ಸಂಶಯದ ದೃಷ್ಟಿಗೆ ಕಂಡಷ್ಟು ಮಾತನಾಡಿದೆ. ಅದು ನಿನ್ನ ತಪ್ಪಲ್ಲ ನಿನ್ನ ನೋಟದ ತಪ್ಪು. ತಾಯಿ ಜಗನ್ಮಾತೆ ಪಾರ್ವತಿಯ ದಿವ್ಯಾತ್ಮದ ಕಿರಣದಂಶ ಗೌರಿಯ ಆತ್ಮದಲ್ಲಿ ಲೀನಗೊಂಡು ನಿನ್ನ ಮನೆಗೆ ಅತ್ಯುನ್ನತ ಸ್ಥಾನ ಕಲ್ಪಿಸಿಕೊಟ್ಟಂತೆ ನನಗೂ ಇಂದಾ ತಾಯಿ ಯೋಗೇಶ್ವರಿಯ ದಿವ್ಯಾತ್ಮಜ್ಯೋತಿಯು ದಾರಿದೀಪವಾಗಿ ಬಂದು ಯೋಗ ಮಾರ್ಗದರ್ಶನ ಮಾಡಿಸಿದೆ. ಆ ಜ್ಯೋತಿಯ ಹಿಂಬಾಲಿಸಿ ಹಂತ ಹಂತಗಳಲ್ಲಿ ಶಾಂತಿಯ ಸೋಪಾನಗಳನ್ನು ಹತ್ತಿ ಚಿದ್‌ಜೋತಿಯ ಬೆಳಕಿನಲ್ಲಿ ಆತ್ಮಾನಂದ ಮಹಾಸಾಗರದಲ್ಲಿ ಲೋಲಾಡಿದೆ, ಓಲಾಡಿದೆ, ಈಜಾಡಿದೆ. ಅದೇ ಬೆಳಗಿನಲ್ಲಿ ಸಾಗಿ ಈಗ ಹೊರಬಂದೆ, ಈಗವಳ ಆತ್ಮ ಜ್ಯೋತಿ ಅವಳ ದೇವಹನ್ನಾಶ್ರಯಿಸಿದೆ. ಹೋಗಿ ಕರೆಯಿರಿ ಮೈಗೂಡವಿ ಓಗೊಟ್ಟು ಬರುವಳು.

**ಮಾಲಿಗೌಡ** – ಇಲ್ಲ ಸ್ವಾಮಿ ಇಲ್ಲ. ಅವಳ ಆತ್ಮ ಅನಂತದಲ್ಲಿ ಲೀನವಾಗಿ ಹೋಗಿದೆ.

**ಗುಡ್ಡದೀಶ** – ಇನ್ನೂ ಸಂಶಯವೇ ನಡೆಯಿರಿ ನಾನೇ ಬರುವೆ.

(ತೆರೆಯಲ್ಲಿ)

ಏಳಮ್ಮ ಏಳು ತಾಯಿ ನೀನು ಸತ್ತೆ ಎಂದು ನಿನ್ನ ಮನೆಯವರು ಪರಿ

ತಪಿಸುತ್ತಿದ್ದಾರೆ. ಏಳು ತಾಯಿ ಹಟವೇ? ಅವರನ್ನೇಕೆ ಪರೀಕ್ಷಿಸುತ್ತಿರುವಿ. ನಿನ್ನ ಸಂತಪ್ತ ಸಂತತಿಯ ತನುಮನಗಳಿಗೆ ಅಭಯವರದಾನವೆಂದು ಬಲಗಾಲೂರಿ ಮೈದಡವಲೇಳು ತಾಯಿ.. ಹರ ಹರ ಮಹದೇವ.

ಸತ್ತ ಆಕಳಿಗೆ ಪುನರ್ಜನ್ಮವಾಗುವದು.

**ರಂಗಕ್ಕೆ ಬರುತ್ತಾ**

**ಮಾಲಿಗೌಡ –** ಮಹಾತ್ಮಾ ನಿನ್ನಿಂದಲೇ ನನ್ನ ಗೌರಿಯು ಪುನರ್ಜನ್ಮ ತಳೆದು ಬಂದಳು. ನಿನ್ನನ್ನು ಹೆತ್ತ ಮಾತಾಪಿತೃಗಳು ಎಷ್ಟು ಪುಣ್ಯಾತ್ಮರು. ಪುಣ್ಯಗರ್ಭದಿಂದ ಪುಟ್ಟಿದ ಸಾಕಾರ ಪುಣ್ಯ ಪುರುಷ ನೀನು. ನಿನ್ನಿಂದಲೇ ನನ್ನ ವಂಶದ ಕ್ಷೀಣಿತ ಪುಣ್ಯ ಪುನಃ ಪ್ರಜ್ವಲಿಸಿ ಎಂದೆಂದಿಗೂ ನಂದದ ನಂದಾ ದೀಪವಾಯಿತು. ಇನ್ನೂ ಆ ದೀಪಕ್ಕೆ ನೀನಿರುವಷ್ಟು ಕಾಲ ಯಾವ ಕಾಲ ಪುರುಷನ ಭಯವೂ ಇಲ್ಲ. ಎಲ್ಲಿ ಸ್ವಾಮಿ ಕೊಡು ನಿನ್ನ ಪಾದಾರವಿಂದಗಳನ್ನು ಮನದಣಿಯೇ ನಮಸ್ಕರಿಸುವೆ.

(ದೀರ್ಘದಂಡ ಪ್ರಣಾಮ ಮಾಡುವನು)

**ಶಿವಲಿಂಗ –** ಇನ್ನ ಆತಲ್ಲಪಾ ನಡಿ ಹೋಗಾನ ದನಾ ತಿರುವಿ ಭಾಳಾ ಹೊತ್ತಾತು. ಕತ್ತಲಾತಂತ ನಿಮ್ಮಪ್ಪಾ ನಿಮ್ಮವ್ವಾ ಹುಡುಕ್ಕೆಂತಾ ಬಂದಾರು.

**ಗುಡ್ಡದೀಶ –** ಎಲ್ಲರೂ ಹೊರಟು ಹೋದರೇ

**ಶಿವಲಿಂಗ –** ಹೌದಪ್ಪಾ ನೀಏನ ಗಟ್ಯಾಗ ಕಂಣು ಮುಚಿಗೆಂಡು ಕುಂತಿದ್ದಿ ನಿನ್ನ ಬಿಟ್ಟು ಹೋಗಲಾರದ ನಿಂತಿದ್ದೆ ನಡಿ ಹೋಗಾನ.

**ಮಾಲಿಗೌಡ –** ಯಾರು ಮಗು ಈ ಪುಣ್ಯಪುರುಷ.

(ತೆರೆಯಲ್ಲಿ ಗುಡ್ಡದೀಶ ಎಂದು ಕರೆಯು ಕೇಳಿಬರುವದು)

**ಶಿವಲಿಂಗ –** ಹುಡಿಕ್ಕೆಂತಾ ಬರಾಕಹತ್ಯಾರ ನೋಡ್ರಿ

**ಗುರುಲಿಂಗಮ್ಮ –** ಏಕೆ ಮಗೂ ಕತ್ತಲಾದರೂ ಮನೆಗೆ ಬರಬಾರದೇ ನೋಡು ಎಷ್ಟೊಂದು ಕತ್ತಲಾಗಿದೆ. ಇಲ್ಲಿ ಹುಲಿ, ಕರಡಿ, ಚಿರತೆಗಳು ವಾಸವಾಗಿವೇ ಕಗ್ಗತ್ತಲು...

**ಮಾಲಿಗೌಡ –** ತಾಯಿ ನಿನ್ನ ಮಗನಿಗೆ ಕತ್ತಲೆಯ ಭಯವೇ? ಕಾರಿರುಳ ಕಗ್ಗತ್ತಲೆಯ

ಗರ್ಭಸೀಳಿ ತನ್ನ ದಿವ್ಯ ಪ್ರಭೆಯ ಮುಂಬೆಳಗಿನಲ್ಲಿ ಬೆಂಬಲಿಗರನ್ನು ಭವಸಾಗರದಿಂದ ದಾಟಿಸಬಲ್ಲ ಅಂಬಿಕೆಯ ಪರಪುತ್ರ ಅಂಬಿಗ ಈ ನಿನ್ನ ಮಗ.

**ಮಹಾದೇವಯ್ಯ** – ನಿಮಗೆಲ್ಲಿಯೋ ತಪ್ಪು ತಿಳುವಳಿಕೆಯಾಗಿದೆ ಗೌಡರೆ ಈ ನನ್ನ ಮಗ ಹೇಳಿ ಕೇಳಿ ಅರೆಹುಚ್ಚ. ನಮ್ಮೂರ ಹುಡುಗರಿಂದ ಮೊದಲುಗೊಂಡು ಎಲ್ಲರ ಅವಹೇಳನಗೆ ಗುರಿಯಾದ ನತದೃಷ್ಟ. ಊಟ ಉಡಿಗೆ, ಆಟ, ಪಾಟ, ಓದು ಬರಹಗಳತ್ತ ಹೆಚ್ಚೇನು, ಪ್ರಪಂಚದ ಯಾವ ರುಚಿಯನ್ನು ಅರಿಯದ ಬೆಪ್ಪ. ತನ್ನ ಓರಿಗೆಯ ಹುಡುಗರೊಡನಾಟದಲ್ಲಿ ಅವರನ್ನಾದರೂ ಅನುಕರಿಸುವನೇನೋ ಎಂದು ದನಕಾಯಲು ಕಳಿಸಿದರೇ ಇಲ್ಲಿಯೂ ಅದೇ ಹಾಡು, ತಾನೆತ್ತಲೋ ದನಗಳೆತ್ತಲೋ?

**ಗುರುಲಿಂಗಮ್ಮ** – ಸಾಕು ಸುಮ್ಮನಾಗಿ, ಹೆತ್ತವರೇ ನೀವಿಷ್ಟು ತೆಗಳಿದರೇ ಇನ್ನುಳಿದವರು ಅದೆಷ್ಟು ತೆಗಳಬಹುದೆನ್ನುವದಾದರೂ ಕಲ್ಪನೆ ಇದೆಯೆ?

**ಮಾ.ಗೌಡ** – ತಾಯಿ ನಿಮ್ಮ ಮಗನ ಯೋಗ್ಯತೆ ಕಲ್ಪನೆಗೂ ಮೀರಿದೆ.

**ಮಹದೇವಯ್ಯ** –ನಿಜ ನಿಜ ಗೌಡರೇ, ನಿಮ್ಮ ಕಲ್ಪನೆಗೂ ಮೀರಿದ ಹುಚ್ಚ ಆಯಿತೋ ನಡೆ ಮಗು.

**ಗುರುಲಿಂಗಮ್ಮ**–ಮಕ್ಕಳೆಂತೇ ಇರಲಿ. ಗುಡ್ಡದೀಶ ನಮ್ಮ ಮಗು ಮಕ್ಕಳಿಲ್ಲದ ಬಾಳು ಬರಡೆಂದು ಗುಡ್ಡದೀಶನ ಮೊರೆಹೊಕ್ಕು ಆತನ ಕರುಣೆಯಿಂದ ಕಂಡ ಈ ಮಗನನ್ನು ವಂಶಜ್ಯೋತಿ ಎಂದೇ ನಂಬಿದ್ದೇವೆ.

**ಮಾ.ಗೌಡ** – ನಿಮ್ಮ ನಿಷ್ಠೆ, ಭಕ್ತಿ ತ್ಯಾಗ ಯೋಗಗಳ ಸಿದ್ಧಿಯ ಸಂಕೇತವೇ ನಿಮ್ಮ ಗುಡ್ಡದೀಶನ ರೂಪದಲ್ಲಿ ಮೈದಳೆದು ಬಂದಿದೆ. ತಾಯೀ, ನಿಜವಾಗಿಯೂ ನಿಮ್ಮ ಗುಡ್ಡದೀಶ ಮಹಿಮಾ ಪುರುಷ. ಬಾಲ್ಯದಲ್ಲಿಯೇ ಯೋಗದ ಗುಟ್ಟನ್ನರಿತ ದಿವ್ಯ ಆತ್ಮ. ದಿವ್ಯ ದೃಷ್ಟಿಗಳನ್ನು ಹೊಂದಿ, ಪ್ರಪಂಚದ ಬಹಿರ್ವ್ಯಾಪಾರವನ್ನು ತೊರೆದು, ಅಂತರಾತ್ಮದ ಸಾಕ್ಷಾತ್ಕಾರದಿಂದ ಸರ್ವಾಂತರ್ಯಾಮಿಯಾಗಿದ್ದಾನೆ. ನಿಮ್ಮ ದೃಷ್ಟಿಯಲ್ಲಿ ಆತ ಹುಚ್ಚ, ಬೆಪ್ಪ. ಈ ಹುಚ್ಚನೇ, ನನ್ನ ಗೌರಿಗೆ ಪ್ರಾಣದಾನ ಮಾಡಿ, ತನ್ನ ಅಲೌಕಿಕ ಪವಾಡದಿಂದ ನಿಮ್ಮ ಘನತೆ ಕೀರ್ತಿ ಗೌರವಗಳನ್ನು ದಿಗಂತದೆತ್ತರಕ್ಕೆ ಹಾರಿಸಿದ್ದಾನೆ.

**ಮಹದೇವಯ್ಯ** – ಗೌಡರೇ? ನಿಜವೇ? ನಂಬಲೇ? ನಮ್ಮ ಗುಡ್ಡದಯ್ಯನು ಮಹಿಮಾ ಪುರುಷನೇ? ನಾನೇನು ಸ್ವಪ್ನದಲ್ಲಿರುವೆನೇ? ಭ್ರಾಂತಿಯೇ?.... ಕೇಳಿದೆಯಾ ಗುರುದೇವಿ ನಮ್ಮ ಗುಡ್ಡದೀಶ ಮಹಾತ್ಮನಂತೆ. ಪವಾಡ ಪುರುಷನಂತೆ. ಗೌಡರ ಸತ್ತ ಆಕಳಿಗೆ ಪುನರ್ಜನ್ಮ ಕೊಟ್ಟ ಮಹಾತ್ಮನಂತೆ.

**ಗುರುಲಿಂಗಮ್ಮ** – ಈಗಲಾದರೂ ನಿನ್ನ ಆತ್ಮ ತೃಪ್ತಿಯಾಯಿತೆ? ನಮ್ಮ ಭಕ್ತಿ ಕ್ರಿಯಾ ಕರ್ಮನಿಷ್ಠೆಗಳಿಗೊಪ್ಪಿ ಮಲ್ಲೇಶನೇ ಮಗುವಾಗಿ ಬಂದಿರಬೇಕು. ಇದೀಗ ನಮ್ಮ ಜನ್ಮ ಸಾರ್ಥಕವಾಯಿತು. ನಡೆ ಮಗು ಕತ್ತಲಾಗಿದೆ ಹೋಗೋಣ.

**ಮಾ.ಗೌಡ** – ತಾಯಿ ನಿನ್ನ ಮಗನನ್ನು ನನ್ನೊಟ್ಟಿಗೆ ಕಳಿಸಿ ಕೊಡುವಿಯಾ ತಾಯಿ ನನ್ನ ಸತ್ತ ಗೌರಿಗೆ ಪ್ರಾಣದಾನ ಮಾಡಿದ ಪುಣ್ಯ ಪುರುಷನ ಪಾದಧೂಳಿಯು ನನ್ನ ಮನೆಯನ್ನು ಪವಿತ್ರವನ್ನಾಗಿ ಮಾಡಲಿ. ಆತನ ಪವಿತ್ರ ಪಾದಗಳನ್ನು ಮನಸೇಚ್ಛೇ ಪೂಜಿಸುವ ಆಸೆಯಾಗಿದೆ.

**ಮಹದೇವ** – ನಿಮಿಚ್ಛೆ ಗೌಡರೇ ಕರೆದುಕೊಂಡು ಹೋಗಿ ಒಂದೆರಡು ದಿನಗಳಲ್ಲಿ ನೀವೇ ಕಳಿಸಿಕೊಡಿ.

**ಮಾ.ಗೌಡ** – ಬಾ, ಭರಮಾ ಬಾ. ಸ್ವಾಮಿಗಳು ಒಪ್ಪಿದ್ದಾರೆ. ಒಳದಾರಿಯಲ್ಲೇ ಓಡುತ್ತಾ ಹೋಗು. ನಮ್ಮ ಸತ್ತ ಗೌರಿಗೆ ಪ್ರಾಣದಾನ ಮಾಡಿದ ಬಾಲ ಶಿವಯೋಗಿಯು ನಾವು ನೀಡಲಿರುವ ಸತ್ಕಾರ ಸ್ವೀಕರಿಸಲು ಬರುವರೆಂದು ತಿಳಿಸು... ಹಾಂ. ಇದೋ ಅವರನ್ನು ಎದುರುಗೊಳ್ಳಲು ಊರ ಅಗಸಿ ಬಾಗಿಲಿಗೆ ವಾದ್ಯ ವೈಭವ ಕಲಶ ಕನ್ನಡಿ ಸುಗಂಧ ದ್ರವ್ಯಗಳಿಂದ ಪೂರ್ಣ ಕುಂಭದೊಡನೆ ಸುಮಂಗಲೆಯರನ್ನು ಬರಹೇಳು. ಈ ಉತ್ಸವ ಅತೀ ವೈಭವದಿಂದ ನಡೆಯತಕ್ಕದ್ದೆಂದು ಯಾವ ಕುಂದು ಕೊರತೆಯೂ ಆಗದಂತೆ ನೋಡಿಕೊಳ್ಳಬೇಕೆಂದು ನಮ್ಮ ಪೋಲೀಸಗೌಡರಿಗೆ ತಿಳಿಸು. ಹೋಗು ತೀವ್ರ ಹೋಗು ಹಾಂ, ಮಹಾದೇವಯ್ಯನವರೇ ತಾವೂ ಬರಬಹುದಲ್ಲ.

**ಮಹಾದೇವ** – ಬೇಡ ಬೇಡ ನಿಮ್ಮ ಸ್ವಾಮಿಯನ್ನೇ ಕರೆದು ಕೊಂಡು ಹೋಗಿ ಒಂದೆರಡು ದಿನಗಳಲ್ಲಿ ಕಳಿಸಿಬಿಡಿ.

**ಮಾ.ಗೌಡ** – ಬಾ. ಸ್ವಾಮಿ ಬಾ. ನಿಮಗುಚಿತಾಸನವ ನೀಡಿ ಕರೆದುಕೊಂಡು

ಹೋಗಲು ಇಲ್ಲೇನಿಲ್ಲ. ನನ್ನೀ ತನುಮನವನ್ನೇ ನಿನ್ನಡಿಗಪರ್ಪಿಸಿರುವಾಗ ಬೇರೆ ಆಸನವೇಕೆ? ಏರು ಹೆಗಲೇರು. ನನ್ನ ಹೃದಯವೇ ನಿನ್ನ ಪಾದಗದ್ದುಗೆಯಾಗಿ ನನ್ನ ಹೆಗಲೇ ನಿನಗೆ ಊರ್ಜಿತಾಸನವಾಗಲಿ. ಬಾ ತಂದೆ ಏರು ಹೆಗಲೇರು.

(ಎಂದು ಹೆಗಲಮೇಲೆ ಕುಳ್ಳಿರಿಸಿಕೊಂಡು)

ಬಾಲಶಿವಯೋಗಿಗೆ ಜಯವಾಗಲಿ ಎಂದು ಹೇಳುತ್ತಾ ಹೊರಟುಹೋಗುವನು.

**ಮಹಾದೇವ** – ಕ್ಷಮಿಸು, ತಂದೆ ಮಲ್ಲೇಶ. ನೀನಿತ್ತ ವರಪ್ರಸಾದದ ಮಹತಿಯನ್ನರಿಯದೇ ಲೌಕಿಕ ವಿಷಯ ವ್ಯಾಮೋಹದ ಸುಳಿಯಲ್ಲಿ ಮತಿ ವಿಭ್ರಮಿಸಿ, ವಸ್ತುಸ್ಥಿತಿಯನ್ನರಿಯದೆ ಮಂಕನಂತೆ ಏನೇನೋ ಜರೆದಾಡಿದೆ, ಬೈದಾಡಿದೆ, ಸಾಲದೆ ದನಕಾಯಲು ಅಡವಿಗಟ್ಟಿದೆ. ಕ್ಷಮಿಸು ತಂದೆ ಕ್ಷಮಿಸು.

**ಪದ**

**ಗುರುಲಿಂಗಮ್ಮ :**

ಹರಿಸೋ ಅನವರತ ಮಲ್ಲೇಶಾ ಸುರಿಸಿ ಅಮೃತ ವರ್ಷಧಾರೆಯ ।
ಬಾಳ ಭಾವ ಕುಸುಮವರಳಿ । ಬದುಕೆಲ್ಲ ಜೇಂಗೊಡವಾಗಿ ।
ನಲುವಿನ ಜೀವನಕೆ । ಗೆಲುವಿನ ಚಿಲುಮೆಯು ತಾಂ ॥ ॥ ೧ ॥

ಬಂಜೆ ಭಾವದಿ ಜನನಿಂದೆಗಂಜಿ । ಬಂದೆ, ತವಪಾದಪಂಕಜವ ನಂಬಿ ।
ಸಿದ್ಧಸಾಧಕರ ಆದಿದೈವದೇವ । ಬದ್ಧಳಾಗಿ ಬೇಡುವೆ । ಮಲ್ಲೇಶ ॥ ೨ ॥

===**=====**===

## ದೃಶ್ಯ ೪

ಬೀದಿಯಲ್ಲಿ

(ತಿಪ್ಪವ್ವನು ಅಳುತ್ತ ಬರುತ್ತಿದ್ದಾಳೆ)

**ತಿಪ್ಪವ್ವ –** ನಾ, ಹ್ಯಾಂಗ ಮಾಡಲೇ ಎವ್ವಾ... ನನ್ನ ನಸೀಬ ಏನಾತ ಎವ್ವಾ... ನಾ ಎಲ್ಲಿ ಹೋಗಲೇ ಎವ್ವಾ...

**ಭಟ್ಟ –** ಯಾಕವಾ ತಿಪ್ಪವ್ವ ಏನ ಆಗೇದ... ನಿನ್ನ ಗಂಡ ಆರಾಮ ಇದ್ದಾನ ಹೌದಲ್ಲೋ.

**ತಿಪ್ಪವ್ವ –** ಅವಗೇನ ಧಾಡೀ ಭಟ್ಟರ

**ಭಟ್ಟ –** ಮತ್ತ ಯಾಕ ಅಳತೀಯವಾ

**ತಿಪ್ಪವ್ವ –** ಕುಡದು ಅಮಲಿನ್ಯಾಗ ವೈಮುಪ್ಪ ಮಾಡಿದ್ನ ಭಟ್ಟರ. ನಾ ಎಲ್ಲಿ ಹೋಗಲಿ ಭಟ್ಟರ....

**ಭಟ್ಟ –** ಅವನ್ನ ಕೇಳಬೇಕಿತ್ತು

**ತಿಪ್ಪವ್ವ –** ಸುಡುಗಾಡಿಗೆ ಹೋಗು ಅಂದ್ನ ಭಟ್ಟರ.

**ಭಟ್ಟ –** ಸುಮ್ಮ ಸುಮ್ಮನೇ ಜೀವಂತ ಇದ್ದು ಹ್ಯಾಂಗ ಹೋಗಲಿಕ್ಕೆ ಆಗ್ತದ. ತಿಪ್ಪವ್ವ

**ತಿಪ್ಪವ್ವ –** ಉರ್ಲು ಹಾಕ್ಕೊಂಡು, ಇಲ್ಲ ಭಾವಿ ಹಾರಿ ಸಾಯಿ ಅಂತಾನ ಭಟ್ಟರ.

**ಭಟ್ಟ –** ಅದಕ ನೀ ಏನು ಅಂದಿ.

**ತಿಪ್ಪವ್ವ –** ದುರಮರಣಕ ಸತ್ತರ ಹೆಣ ಕೋದು ಚೀಲದಾಗ ತುಂಬಿ ಹುಗೀತಾರಂತ ಭಟ್ಟರ. ಕಾಣಾಕಾಣಾ ಹ್ಯಾಂಗ ಉರ್ಲ ಹಕ್ಕೊಳ್ಳಿ ಭಟ್ಟರ ಭಾವಿನೋಡಿದ್ರ ಹೆದರಿಕಿ ಬರತೈತೆ ಭಟ್ಟರ. ನಾ ಹ್ಯಾಂಗ ಸಾಯಲೇ ಎವ್ವಾ

**ಭಟ್ಟ –** ಮತ್ತ ಹ್ಯಾಂಗ ಮಾಡ್ತೀಯವ್ವಾ.

**ತಿಪ್ಪವ್ವಾ –** ನಾ ಹ್ಯಾಂಗ ಮಾಡಲೀ ಭಟ್ಟರ ಲೇ ಹುಟ್ಟ ಬಂಜೆ ನಿನ್ನ ಮಾರಿ ನೋಡಬಾರದು ಅಂತ ಮಾತಿಗೊಮ್ಮೆ ಹಂಗಸ್ತಾನ ಭಟ್ಟರ. ಮೈಯಾನ ಎಲಬು ಪುಡಿ ಪುಡಿ ಆಗೋ ಹಾಂಗ ಬಡದ್ನ ಭಟ್ಟರ.

**ಭಟ್ಟ –** ಅಂತೂ ನಿನಗ ಮಕ್ಕಳಾಗಲಿಲ್ಲ ಅಂತ ಬಡದ್ನ ಆ ಮುಂಡೇ ಮಗ. ಅಲ್ಲಾ ತಿಪ್ಪವ್ವ ನೀ ಇಷ್ಟ ದಿವ್ಸ ಯಾಕ ಸುಮ್ನೆ ಇದ್ದಿ ನನ್ನೆದುರಿಗೆ ಯಾಕ ಹೇಳಲಿಲ್ಲ. ನಾ ಏನ ಸತ್ತು ಹೋಗಿದ್ನೇ ನಿನ ಪಾಲಿಗೆ.

**ತಿಪ್ಪವ್ವ –** ಅಂದ್ರ ನೀ ಏನ ಮಾಡವ ಇದ್ದೀ.

**ಭಟ್ಟ –** ನಿನಗ ಮಕ್ಕಳು ಯಾಕ ಆಗ್ತಿದ್ದಿಲ್ಲ ನಾ ನೋಡ್ತಿದ್ದೆ.

**ತಿಪ್ಪವ್ವ –** ನನಗ... ನೀನು.... ನೋಡತಿದ್ಯಾ

**ಭಟ್ಟ –** ನಿನಗಲ್ಲದ ಮತ್ಯಾ ಹೊಲ್ಯಾರಿಗೆ ನೋಡ್ಲೆ ತಿಪ್ಪವ್ವ

**ತಿಪ್ಪವ್ವ –** ಭಟ್ಟರ ಓಟು ಬುದ್ಧಿ, ಗ್ಯಾನಾ, ನಾಲಿಗಿ ಹಿಡಿತದಾಗ ಇಟಗೊಂಡು ಮಾತಾಡರಿ. ಯಾಕ ನಿಮ್ಮ ಪದದ ಧಾಟೀನ ಬ್ಯಾರೆ ಹೊಂಟಾವ. ಓಟು ಹುಶ್ಯಾರಿ.

**ಭಟ್ಟ –** ಏನ ಹುಚ್ಚ ಹೆಣಮಗಳು ಇದ್ದೀಯವಾ ನೀ ಏನಾರ ತಪ್ಪು ತಿಳಕೊಂಡೀ ಅಂದ್ರ ನಾ ಏನ ಮಾಡ್ಲಿ. ಅಲ್ಲಾ ನಿನಗೇನು ಗೊತ್ತಿಲ್ಲ ನಮ್ಮ ಹಸಬಿವೊಳಗ ಏನ ಇಲ್ಲ. ಯಂತ್ರಾ ಬರಿತೀವಿ ಔಷಧಿ ಕೊಡತೀವಿ ಹೊತಿಗಿ ಹೇಳತೀವಿ ಯಾವ ಪ್ರಕರಣ ಹ್ಯಾಗ ಮಾಡಬೇಕು ಹಾಗ ಮಾಡತೀವಿ. ಹೇಳು ಈಗೇನಾಗಬೇಕಾಗೇದ ನಿನಗ? ನಿನಗ ಮಕ್ಕಳು ಆಗಬೇಕು ಹೌದಲ್ಲೊ.

**ತಿಪ್ಪವ್ವ –** ಬರೇ ಅಷ್ಟ ಅಲ್ಲ ನನ ಗಂಡ ನಾ ಹೇಳಿದ್ಹಾಂಗ ಕೇಳಬೇಕು.

**ಭಟ್ಟ –** ಇಷ್ಟS ಹೌದಲ್ಲೋ ನಿನಗೇನು ಬಾಳಾ ಖರ್ಚು ಹೇಳೂದುಲ್ಲಾ. ಅತು ನಾಳೆ ಮಂಗಳವಾರ ಹುಣ್ಣಿವಿ ಅದ ಅವತ್ತಿನ ದಿವ್ಸ ನಾ ಹೇಳಿದಷ್ಟು ತಂದು ಬಿಡು ಎಲ್ಲಾ ಸರಿ ಹೋಗ್ತದ.

**ತಿಪ್ಪವ್ವ –** ತುಸುದರಾಗ ಇದ್ದರ ಸೈರಿ

**ಭಟ್ಟ –** ಭಾಳಾ ಏನಿಲ್ಲವಾ ಈಗ ನಿಮ್ಮ ಸಂಸಾರ ೩೬ ಅದನ, ಅದು ೬೩ ಆಗಬೇಕು ನೋಡು ಅದಕ ೬೩ ಪಾವು ಅಕ್ಕಿ ೬೩ ಪಾವು ಗೋದಿ ಬ್ಯಾಳಿ ಮತ್ತು ೬೩ ಪಾವಲಿ ತಂದುಬಿಡು ವರ್ಷ ತುಂಬುದರೊಳಗ ನಿನ ಮನಸಿನಂತೆ ಆತು ಅವಾಗ ಹೇಳು ಇಲ್ಲದಿದ್ರ ಕಂಡಕೇಳು.... ೬೩ ಪಾವಲಿ ಮರತೀ ಮತ್ತ.

**ತಿಪ್ಪವ್ವ –** ಹಂಗಾರ ನಾ ಬರಲ್ರಾ ಭಟ್ಟರ ಹೋಗಲ್ಯಾ

**ಭಟ್ಟ –** ಹೊಳ್ಳಿ ನೋಡದ್ಹಾಂಗ ಹೋಗು, ಮರೀಬ್ಯಾಡಾ ಮತ್ತ ಮರತೀ ಹುಣ್ವಿ ಆದ.

(ಭಟ್ಟರು ಹೊರಟು ಹೋದನಂತರ ಬರುವನು)

(ಬಾಳ್ಯಾನು ತಿಪ್ಪಿಯನ್ನ ಕೂಗುತ್ತಾ ಬರುವನು)

**ತಿಪ್ಪವ್ವ –** ಯಾಕ ಮತ್ಯಾಕ ಬಂದೀ. ನನ್ನ ಕೈಕಾಲು ಮುರೀಬೇಕಂತ ಬಂದೇನ ನಾ ಬರುದಿಲ್ಲ ಸಾಪ ಸಾಪ ಬರೂದುಲ್ಲ.

**ಬಾಳ್ಯಾ –** ಇಲ್ಲ ಬಾರ ಬಡಿಯಾದಿಲ್ಲ

**ತಿಪ್ಪವ್ವ –** ಉಹುಂ, ಸುದ್ದೀನ ಎತ್ತಬ್ಯಾಡ ನಾ ಭಾವೀ ಹಾರುದ ಗಟ್ಟಿ, ಉರ್ಲು ಹಾಕ್ಕಣದ ಗಟ್ಟಿ, ಸಾಯದ ಗಟ್ಟಿ ಗಟ್ಟಿಮಾತ ನಂದ. ನೀ ಹ್ಯಾಂಗಂದಿ,

**ಬಾಳ್ಯ –** ಗಟ್ಟಿ ಹೌದಲ್ಲೋ

**ತಿಪ್ಪವ್ವ –** ಮುಗಸೆಟ್ಟೆ ಅಲ್ಲ ಗಟ್ಟಿ ಮಾತು

**ಬಾಳ್ಯಾ –** ಹಂಗಾರ ಹಿಂದೇಗಡೆ ಸಾಯ್ವಂತೀ ಗೌಡ್ರು ಕರೇಕಳಿಸ್ಯಾರ ಯಾರ**S** ಹುಡುಗ ಸ್ವಾಮಿ ಬಂದಾನಂತ ಸತ್ತಾರಗೆ ಜನ್ಮಾಕೊಟ್ಟಾನಂತ ಮಂದಿ ಹೊಡದು ಹೊಡದು ಹೋಕ್ಯಾರ ಬಾ ಬಾ.

(ಎಂದು ಎಳೆದು ಕೊಂಡು ಹೋಗುವನು)

===***===***===

## ದೃಶ್ಯ ೫

### ಮಾಲಿಗೌಡನ ಮನೆ

(ಮಂಗಲವಾದ್ಯದೊಡನೆ ಸುಮಂಗಲೆಯರು ಬಾಲಸಿದ್ಧನನ್ನು ಕರೆತಂದು ಕುಳ್ಳಿರಿಸಿ ಗಂಡ ಹೆಂಡರು ವಟ್ಟಾಗಿ ಪಾದ ಪೂಜೆ ಮಾಡಿ)

**ಪಾರ್ವತಿ** – ನಡೆ. ನನ್ನಪ್ಪಾ ಹಸಿವಾಗಿದೆಯೋ ಏನೋ ಊಟ ಮಾಡು

**ಗುಡ್ಡ** – ನಾನೊಲ್ಲೆ ತಾಯಿ ಉಣ್ಣುವದಕ್ಕೆ ಬದುಕದೆ ಬದುಕುವಷ್ಟು ಉಣ್ಣಬೇಕಂತೆ.

**ಪಾರ್ವತಿ** – ಹಣ್ಣು ಹಾಲನ್ನಾದರೂ ತರಲೇ ನನ್ನಪ್ಪ

**ಗುಡ್ಡ** – ತಾಯಿ ನಿನ್ನ ಪ್ರೀತಿ ವಾತ್ಸಲ್ಯಕ್ಕೆ ಪ್ರತಿಯಾಡಲಾರೆ.

**ಮರಾಟಿಗ** – ಎಪ್ಪಾ ತಿಳೀದ ಏನೋನೋ ಮಾತಾಡಿದ್ವಿ ನಿನ್ನ ಪಾದಕ್ಕೆ ಬಿದ್ದೀನಿ ಮರತು ಬಿಡು ದೇವರ ಎಪ್ಪಾ ನೀನು ದೇವರು.

**ಗುಡ್ಡ** – ಜೀವಂತ ಹುಡುಗನನ್ನು ಸತ್ತಿದ್ದಾನೆ ಎಂದು ತಿಳಿದು. ಹುಗಿಯಲು ಹೊರಟಿದ್ದಿರಲ್ಲಾ ನಿಮಗೇನೆನ್ನಬೇಕು.

**ಮರಾಟಿಗ** – ಏನಾರ ಅನ್ನು ಎಪ್ಪಾ, ನಿನ್ನ ಪಾದದಿಂದ ಸತ್ತ ಹುಡುಗ ಬದುಕಿ ಬಂದ ತಂದೆತಾಯಿ ಕಳಕೊಂಡ ಪರದೇಸಿಗೆ ನೀನ**S** ದಿಕ್ಕಾಗಿ ಬಂದು ಜಲ್ಮಾ ಕೊಟ್ಟೀ.

**ಗುಡ್ಡ** – ಅವನ ಪ್ರಾರಬ್ಧ ಅವನ್ನ ಉಳಿಸಿಕೊಂಡಿದೆ. ಆದರೆ ನಿಮ್ಮ ಜೀವನದ ಬಗ್ಗೆ ಚಿಂತಿಸಿರುವಿರಾ ತಿಳಿದು ನೋಡಿ ಸಮಾಜದಲ್ಲಿ ಕಳ್ಳರಾಗಿ ಅದೆಷ್ಟು ದಿನ ಮುಖವೆತ್ತಿ ಬಾಳಬಲ್ಲಿರಿ. ಈಗೆಂಟುದಿನಗಳ ಹಿಂದೆ ಮದುವೆ ನಿಬ್ಬಣದವರನ್ನು ಸುಲಿಗೆ ಮಾಡಿ, ಸಾಲದೆ ಅವರ ಮಾನಮರ್ಯಾದೆಗಳನ್ನು ಸಹ ದೋಚಲು ಯತ್ನಿಸಿದ್ದಿರಲ್ಲಾ ಸಾಲದೇ ಆ ಪಾಪ. ಅಬ್ಬಾ! ನಿಮ್ಮ ಹೊಟ್ಟೆ ತುಂಬಿಕೊಳ್ಳಲು ಎಷ್ಟೊಂದು ಕೆಟ್ಟ ಕೆಲಸ ಮಾಡುವಿರಲ್ಲಾ. ಕಟ್ಟ ಕಡೆಗೆ ಶಿವನಲ್ಲಾದರೂ ಏನು ಹೇಳುವಿರಿ.

**ಮರಾಟಿಗ –** ತಪ್ಪಾತು ಎಪ್ಪಾ ತಪ್ಪಾತು, ಮನ್ನಿಸಿ ಬಿಡು. ಇನ್ನ ಮ್ಯಾಲೆ ನಾವು ಯಾರೂ ಇಂತಾ ಹೇಸಿ ಕೆಲಸಕ್ಕ ಕೈ ಹಾಕೋದಿಲ್ಲ. ನಮ್ಮನ್ನ ಉದ್ಧಾರ ಮಾಡು.

**ಗುಡ್ಡ –** ಆದದ್ದು ಆಗಿಹೋಯಿತು. ಹಿಂದೆ ಮಾಡಿದ್ದನ್ನು ಮುಂದೆ ಮಾಡದೇ ಜನರಲ್ಲಿ ವಳ್ಳೇಯವರಾಗಿ ಕಾಯಕಷ್ಟದಲ್ಲಿ ನಿರತರಾಗಿ ನಾಡಿಗೆ ಅನ್ನ ನೀಡುವ ಕೃಷಿಕರಾಗಿ ಬಾಳಿ ಬೆಳಗಿರಿ. ಆ ಮಲ್ಲೇಶ ನಿಮ್ಮನ್ನು ಎಂದೆಂದಿಗೂ ಕೈಬಿಡನು. ಹೋಗಿ ಬನ್ನಿ.... ಬನ್ನಿ ಪೋಲೀಸಗೌಡರೆ... ತಾಯಿ ಪಾರ್ವತೆಮ್ಮ ಹಂಣುಗಳನ್ನು ಇಲ್ಲಿಕೊಡು. ಹಿಡಿಯಿರಿ ಗೌಡರೇ, ಈ ನಮ್ಮ ನಾಡು ಸರ್ವಧರ್ಮ ಸಮನ್ವಯದ ಬೀಡು. ಅನೇಕಾನೇಕ ಋಷಿಮುನಿ ತೀರ್ಥಂಕರ ರಾಜ ಮಹಾರಾಜ ಚಕ್ರವರ್ತಿ ಸಾರ್ವಭೌಮರಿಗೆ ಆಶ್ರಯ ನೀಡಿದ ಪುಣ್ಯಭೂಮಿ. ನಿಮ್ಮ ನಿಮ್ಮ ಸ್ವಧರ್ಮಾಚರಣೆ ಶುದ್ಧ ಭಕ್ತಿ ಆತ್ಮ ವಿಶ್ವಾಸಗಳಿಂದ ಜೀವನ್ಮುಕ್ತರಾಗಿ ಬಾಳಿ ಬೆಳಗಿರಿ. (ಎಂದು ಉಡಿಯಲ್ಲಿಟ್ಟು ಕಳಿಸುವರು) ಎಲ್ಲಿತಾಯಿ ಹಾಲು ಕೊಡು ಕುಡಿದು ಮಲಗುವೆ ನನಗೆ ನಿದ್ದೆ ಬೇಕಾಗಿದೆ.

**ಪಾರ್ವತಿ –** ಹಿಡಿ, ನನ್ನಪ್ಪ..... ಇನ್ನಷ್ಟು ತರಲೇ?

**ಗುಡ್ಡ –** ಸಾಕು ತಾಯಿ. (ಎಂದು ಕೊಟ್ಟಿದ್ದನ್ನು ಕುಡಿದು ಮಲಗುವರು ಎಲ್ಲರೂ ಹೊರಟು ಹೋಗುವರು. ಹೋದ ನಂತರ ಸ್ವಪ್ನಾರಂಭವಾಗುವದು. ಸ್ವಪ್ನದಲ್ಲಿ ಶಿವನು ಕಾಣಿಸಿಕೊಂಡು ಆಶೀರ್ವಾದ ಮಾಡುವನು)

**ಗುಡ್ಡದೀಶ –** ತಂದೆ... ಶಿವನೇ... ಲೋಕನಾಥ... ಯೋಗಿ ರಾಜ ಮಹಾದೇವ. ನನಗೇಕೆ ಮತ್ತೆ ಭವ ಬಂಧನ. ಆವ ಜನ್ಮದ ಶಿಕ್ಷೆ ಯೆಂದು ಕಳುಹಿದೆ ಮರ್ತ್ಯಕ್ಕೆ. ಸತ್ಯ, ಮಿಥ್ಯ, ಕತ್ತಲೆ, ಕಂಣು ಮುಚ್ಚಾಲೆಯಾಟಕ್ಕೇಕೆ ನೂಕಿದೆ ತಂದೆ–ಪಶು, ಪ್ರಾಣಿ–ಪಕ್ಷಿಗಳ ಗಿಡ–ಮರ– ಕೆರೆಗಳನ್ನಾಗಿಸಿದ್ದರೆ ನಾನೆನಿತೂ ಚಿಂತಿಸುತ್ತಿರಲಿಲ್ಲ. ಮಾನವ ಜನುಮ ತಳೆದು ಜೀವನದುದ್ದಕ್ಕೂ ಪರಿತಪಿಸುವಂತೇಕೆ ಮಾಡಿದೆ. ಮಾನವ ಜನುಮದ ಹೊರತು ಮತ್ತೇನೂ ಇರಲಿಲ್ಲವೇ? ನಾನೊಲ್ಲೆ ತಂದೆ, ನಾನೊಲ್ಲೆ. ಈ ಭವ ಬಂಧನವ.

**ಶಿವ –** ವಲ್ಲೆನೆಂಬುದೇ ವಿರಾಗಿಯ ವೈರಾಗ್ಯದ ಲಕ್ಷಣವೆಂಬುದ

ನರಿಯಲೆಂದೇ ನೀನೀಗ ಬಂದಿರುವಿ. ನಾನೇ ನೀನೆಂಬ ಭಾವ ಸಂಗಮ ಐಕ್ಯತೆಯನರಿಯದೆ ಬಂದಿದ್ದೆ ಎನ್ನೆಡೆಗೆ ಈ ಪ್ರಪಂಚವೊಂದು ಪಾಠಶಾಲೆ ಎಲ್ಲವನ್ನೂ ಕಲಿತ ನರನು ಹರನಾಗಿ ಶಿವನಲ್ಲಿ ಸಮರಸವಾಗಬಲ್ಲನೆಂಬ ಮಹತಿಯ ನೀನರಿದು ಲೋಕಕ್ಕೆಲ್ಲ ತಿಳಿಸಲೆಂದೇ ನೀ ಬಂದಿರುವಿ ತಳಮಳಿಸದಿರು ಮಗೂ.

**ಗುಡ್ಡದೀಶ –** ಮೂಲೋಕ ಗುರು ಮುಕ್ಕಂಣನೇ ನಾನೊಂದು ಮೃತ್ತಿಕೆಯ ಮೂರ್ತಿ. ಪಂಚಭೂತಗಳ ಆವರಣದ ಹೊದಿಕೆ ನಿರ್ಮಿಸಿ, ಜೀವ ತುಂಬಿ ಬುದ್ಧಿಮನಗಳ ಸೂತ್ರಹಿಡಿದು ಆಡಿಸಿದಂತೆ ನಾನಾಡಿದೆ. ಅದಕೆಲ್ಲ ಕರ್ತ ನೀನು ಅಜ್ಞ ನಾನು, ಸರ್ವಜ್ಞ ನೀನು. ಪಶುನಾನು. ಪಶುಪತಿಯು ನೀನು. ವಿಷಯ ವ್ಯಾಮೋಹಗಳ ಹಸಿರನೆದುರಿಗೆಸೆದು, ಆಶೆಯಿಂದ ತಿನ ಬಂದಾಗ ನೋವ, ನೀಡಿ ನಗುವದೇಕೆ, ತಂದೆ.

**ಶಿವ –** ನೋವು ನಲಿವುಗಳ ಸಮ್ಮಿಶ್ರಣದ ತಾತ್ವಿಕ ಹಿನ್ನಲೆಯ ಪ್ರತಿರೂಪವೇ ಪ್ರಪಂಚ. ತ್ಯಾಗಯೋಗದ ಸಾತ್ವಿಕ ಭಾವದೆದುರು ಭೋಗಲಾಸೆಗಳ ತಾಮಸಾಮಿಷಗಳ ನಿರಂತರ ಸಂಘರ್ಷಣೆಯಲ್ಲಿ ಪ್ರಪಂಚವೇ ಬಂಡೇಳಲಿದೆ. ವಿಶ್ವವೇ ಪ್ರಳಯದಂಚಿನಲ್ಲಿ ನಿಂತು ಶೂನ್ಯದತ್ತ ದೃಷ್ಟಿ ಹಾಯಿಸಿದೆ, ಅದರ ಗತಿಯ ಬದಲಿಸಲು ಶಕ್ತನಾಗಬಲ್ಲ ವ್ಯಕ್ತಿ ನೀನಾಗಿ, ಮತ್ತೆ ನನ್ನತ್ತ ಬರಲೆಂಬುದೇ ನನ್ನಿಚ್ಛೆ.

**ಗುಡ್ಡ –** ಶಿವನೇ ನಿನ್ನಿಚ್ಛೆ ಅನುಸರಿಸಿ ನಡೆಯಲು ನಾನು ಸಮರ್ಥನೆ? ಮಾನವೀಯ ಸಹಜವಾದ ರಾಗದ್ವೇಷಗಳು ಹುಟ್ಟಿನೊಂದಿಗೆ ಅಂಟಿಕೊಂಡು ಬಂದಿವೆ. ಷಡ್ರಿಪುಗಳು ನಾ ಮುಂದು ತಾ ಮುಂದು ಎಂದು ಪರಸ್ಪರ ಸ್ಪರ್ಧೆಗಿಳಿದು ಜೀವನದ ನೈತಿಕ ಮೌಲ್ಯ ವಿಚ್ಛೇದನೆಗೆ ಆತ್ಮವನ್ನು ಹದಗೊಳಿಸುತ್ತಿವೆ. ಈ ಸಂಘರ್ಷಣೆಗಳ ಹೊಯ್ದಾಟದಲ್ಲಿ ನಾನೆಂತು ನಿನ್ನಿಚ್ಛೆ ಅನುಸರಿಸಿ ನಡೆಯಲಿ ತಂದೆ?

**ಶಿವ –** ನೀನಾವುದಕ್ಕೂ ಚಿಂತಿಸದಿರು ಮಗೂ, ಕೇವಲ ಕರ್ತವ್ಯ ನಿನ್ನದಾಗಲಿ ಸಂತಪ್ತ ಮಾನವಕೋಟಿಯ ಮಹದುಪಕಾರದ ಗುರಿ ನಿನ್ನೆದುರಿಗಿರಲಿ. ನ್ಯಾಯ, ನೀತಿ, ಧರ್ಮದ ಅಸ್ತಿಭಾರದ ಮೇಲೆ ವಿಶ್ವ ನಿಂತಿದೆ ಎಂಬುದನ್ನು ತಿಳಸಲೆಂದೇ ನಿನ್ನ ಆವಿರ್ಭಾವವಾಗಿದೆ. ವಿಷಯ, ವ್ಯಾಮೋಹ ಮಮಕಾರಗಳಿಗೆ ವಿಚಲಿತನಾಗದೆ ಮುನ್ನಡೆ. ಭವಿಷ್ಯ ನಿನ್ನಿಂದ ಬಹಳ ಬೇಡುತ್ತಿದೆ.

**ಗುಡ್ಡ–** ನಾನೊಲ್ಲೆ ತಂದೆ, ನಾನೊಲ್ಲೆ. ಈ ವಿಶ್ವದ ವಿಶಾಲದಷ್ಟೆ ಮಾನವನ ಮಹಾಕಾಂಕ್ಷೆಗಳು ಸ್ಪರ್ಧೆಗಿಳಿದು ದುರಾಚಾರ ದುರ್ವ್ಯವಹಾರ ಸ್ವೈರ ವೈರ ಮನೋಭಾವನೆಗಳು ಕೆರಳಿ, ಸ್ತುತಿ ನಿಂದೆಗಳ ತಿಕ್ಕಾಟದಲ್ಲಿ ಮತಿ ವಿಭ್ರಮಿಸಿ, ಮಾನವೀಯತೆ ಮಂಕಾಗುವದು. ಆಗ ಧರ್ಮ ಹೇಳ ಹೆಸರಿಲ್ಲದಂತಾಗುವದಲ್ಲವೆ?

**ಶಿವ–** ಅಹುದು ಧರ್ಮ ನಶಿಸಿ, ಅಧರ್ಮ ತಲೆದೋರಬಹುದಾದ ಸಮಯ ಸಂದರ್ಭಗಳಲ್ಲಿ ಭಗವದಂಶವು ಭೂಮಿಗಿಳಿದು ದಾರಿ ತೋರಲು ಬರುವದು. ಅದಕ್ಕೆಂದೇ ನಿನ್ನ ಅವತರಣಿಕೆ. ಎನ್ನಣುಗನಾದ ನೀನೀ ಕಾರ್ಯ ಮಾಡಲೆಂದೇ ನಿನಗೆ ಅತೀಂದ್ರಿಯ ಬಲದ ಸ್ವಯಂ ಸಾಕ್ಷಾತ್ಕಾರವಾಗಿದೆ.

**ಗುಡ್ಡ–** ತಂದೇ?...............

**ಶಿವ–** ಮುಂದೊಂದು ನುಡಿಯದಿರು ನೀನಾವುದಕ್ಕು ಅಂಜದೇ ಸ್ತುತಿನಿಂದೆಗಳಿಗೆ ಮನಗೊಡದೆ, ಅಚಲ ಮನೋ ನಿರ್ಧಾರದಿಂದ ಮುನ್ನಡೆ. ನಿನ್ನ ಕಾರ್ಯ ಕ್ಷೇತ್ರದಲ್ಲಿ ಬರಬಹುದಾದ ವಿಘ್ನ ಪರಂಪರೆಗಳ ನಿವಾರಣೆಗೆ ವಿಘ್ನ ಕರ್ತಾರ ವಿಘ್ನೇಶನೇ ನಿನ್ನ ಬೆಂಗಾವಲಾಗಿಹನು. ಕುಮಾರ ವೀರಭದ್ರನ ನಿಯಮನಿಷ್ಠೆ ವೃತಾನುಸಂಧಾನ ಧರ್ಮರಕ್ಷಣೆ ಅಧರ್ಮ ದಮನಗಳ ವೀರ ಪ್ರಜ್ಞೆ ನಿನ್ನ ದೇಹ ದಮನಿಗಳಲ್ಲಿ ಹರಿಯಲಿ. ಕುಮಾರ ಷಣ್ಮುಖನ ವೈರಾಗ್ಯ ತೇಜ ಪಾಂಡಿತ್ಯ ಪ್ರಭೆ, ವಾಗ್ ವೈಖರಿಗಳು ನಿನ್ನಂತ ರಾಳದಲ್ಲಿ ವಿಸ್ಫುರಿಸಲಿ. ಇವೆಲ್ಲಕ್ಕೂ ಪೂರಕವಾಗಿ ಶಿವೆಯ ಶಕ್ತಿ ಚೇತನಗಳ ಸಮ್ಮಿಳನದೊಂದಿಗೆ ಧರ್ಮದ ದಿಗ್ವಿಜಯಿಯಾಗಿ ಮತ್ತೆ ಸನ್ನಿಧಿಗೆ ಬಾ.

**ಗುಡ್ಡ –** ನಿನ್ನಿಂದ ದೂರವಿದ್ದು ಅದೆಂತು ಯಶಃ ಕಾಯನಾಗಿ ಬರಬಲ್ಲೆ ತಂದೆ.

**ಶಿವ –** ನನ್ನಿಂದ ನೀ ದೂರ ಅದೆಂತು ಮಗು, ಎಂದೆಂದಿಗೂ ನಾ ನಿನ್ನೊಂದಿಗಿರುವೆ ನಿನ್ನಿಷ್ಟಲಿಂಗದಲಿ, ಕರಸ್ಥಲಕೆ, ಕರೆದು ಧ್ಯಾನಿಸಿದಾಗ ಧ್ಯಾನದಲ್ಲಿ, ಚಿಂತಿಸಿದಾಗ ಮನದಲ್ಲಿ, ಹೆಚ್ಚೇನು ನಿನ್ನೆಲ್ಲಿ ಅನುಭಾವ ಭೋಗಗಳಲ್ಲಿ ನಾನಿರುವೆ, ಎನ್ನಂಶಸಂಭೂತನಾದ ಗುರುವು ಕೈಪಿಡಿದು ಕರೆದೊಯ್ಯಲು ಕಾತುರನಾಗಿಹನು ಆತನಿಂದ ಜಗ

ಮೆಚ್ಚುವಂತೆ, ಸಂಸ್ಕಾರ ಪಡೆದು ಗುರುಶಿಷ್ಯರೆಂಬಂತೆ ವಗೆತನವ ಮಾಡಿ, ಕೊನೆಗೆನ್ನ ಕೂಡು. (ಅಂತರ್ಧಾನನಾಗುವನು)

**ಗುಡ್ಡ** – ಕೂಡುವೆ ತಂದೆ ಕೂಡುವೆ ನೀ ಮೆಚ್ಚುವಂತೆ ವಗೆತನವ ಮಾಡಿ ಕೂಡುವೆ, (ಎಚ್ಚತ್ತು) ಇದೇನು ನಾನೀವರೆಗೆ ಮಾತನಾಡಿದ್ಯು ಶಿವನ ಕಂಡದ್ದು ಸ್ವಪ್ನವೇ? ಆಹಾಹಾ ಶಿವನೇ ನೀನೆನಗೆ ಸ್ವಪ್ನ ದರ್ಶನ ನೀಡಿ ಕರ್ತವ್ಯದ ಅರಿವು ಮೂಡಿಸಿ ಮರೆಯಾದೆಯಾ ತಂದೆ... ಶಿವನೇ ಆತ್ಮ ಸಂಗಾತಿಯಾಗಿ ನೀನಿರಲು ಕೈಹಿಡಿದು ಮುನ್ನಡೆಯಿಸಬಲ್ಲ ಗುರುವೆನಗೆ ದೊರೆಯಲು ನಾನೇಕೆ ಅಂಜಲಿ... ಮೋಹ ಮಮಕಾರಗಳ ಸುಟ್ಟು, ಗುರು ಕಾರುಣ್ಯ ಪಡೆದು ನಿನ್ನತ್ತ ಬರುವೆ, ತಂದೆ ನಿನ್ನತ್ತಬರುವೆ. (ತೆರೆಯಲ್ಲಿ ಗೌಡರು ಆಳುಗಳನೆಬ್ಬಿಸುತ್ತಿದ್ದಾರೆ.)

**ಮಾ.ಗೌಡ** – ಲಿಂಗ್ಯಾ ಸಂಗ್ಯಾ ಬಾಳ್ಯಾ ಭೀಮಾ ಬಸ್ಯಾ ಎಳ್ರಲೇ ಎಳ್ರೀ ಬೆಳ್ಳಿ ಮೂಡಿದೆ. (ರಂಗಕ್ಕೆ ಬಂದು ನಮಸ್ಕಾರ ಮಾಡಿ) ಸ್ವಾಮಿ ತಾವು ಇಷ್ಟು ಬೇಗ ಎದ್ದಿರಾ ಮಲಗಿಕೊಳ್ಳಿ ಇನ್ನೂ ಹೊತ್ತು ಬಹಳವಿದೆ.

**ಗುಡ್ಡ** – ಮತ್ತೆ ನೀವೇಕೆ ಎದ್ದಿರಿ.

**ಮಾ.ಗೌಡ**– ಸ್ವಾಮಿ ಹೊಲದಲ್ಲಿ ಎಂಟೆತ್ತಿನ ನೇಗಿಲು ಕಟ್ಟುವದಿದೆ. ಅದಕ್ಕಾಗಿ ಏಳಲೇಬೇಕಲ್ಲ ಬೇಸಾಯವೇ ನಮ್ಮ ಬದುಕಿನ ಬೆನ್ನೆಲಬು. ಕಾಲಕ್ಕೆ ಸರಿಯಾಗಿ ರಂಟೆ ಹೊಡೆದು ಭೂಮಿಯನ್ನು ಹದಗೊಳಿಸಿ. ಉತ್ತಿ ಬಿತ್ತಿದರೇನೇ ಪಡಿ ಪಾವು ಕಾಳು ಬೇಳೆಗಳು ದೊರೆತು. ವರ್ಷದುದ್ದಕ್ಕೂ ತಿನ್ನಲು ಅನ್ನ ದೊರೆಯುವದಲ್ಲವೇ.

**ಗುಡ್ಡದೀಶ**– ಈ ಬೆಳ್ಳಿ ಸಮಯ ಕೇವಲ ವಕ್ಕಲಿಗರಷ್ಟೇ ಮೀಸಲಲ್ಲಿ. ಪ್ರಪಂಚದ ಪ್ರತಿಯೊಂದು ಜೀವಿಗೂ ಅತಿ ಅವಶ್ಯ. ಕತ್ತಲು ಕಳೆದು ಬೆಳಕಿನ ಕಡೆಗೆ ನಡೆಯ ಹಚ್ಚುವ ಈ ಸಂಧಿ ಸಮಯ ಇಡೀ ಮಾನವ ಜನಾಂಗಕ್ಕೆ ಮಹತ್ವದ್ದು ಅದಕ್ಕಾಗಿಯೇ ನಿಮ್ಮೊಂದಿಗೆ ನಾನೂ ಬರಬೇಕೆಂದಿದ್ದೆ.

**ಮಾಲಿಗೌಡ**– ಛೆ, ಛೆ ಬೇಡ. ತಾವು ಬರುವದು ಬೇಡ. ಪಾರ್ವತೀ ಏ ಪಾರ್ವತೀ.

**ಪಾರ್ವತಿ**– (ಬರುತ್ತ) ಏಕೆ, ಸ್ವಾಮಿ ಕರೆದಿರೇನು.

**ಮಾ. ಗೌಡ**– ಹೌದು.... ಇದೋ ಪಾರ್ವತಿ ನಮ್ಮ ದಾರಿ ನೋಡಬೇಡ.

ಆಳುಗಳನ್ನು ಕೆಲಸಕ್ಕೆ ಅಣಿಗೊಳಿಸಿ ಬಂದು ಬಿಡುವೆ. ಸ್ವಾಮಿಯ ಸ್ನಾನ ಪೂಜೆ ಪ್ರಸಾದಗಳಲ್ಲಿ ಯಾವುದಕ್ಕೂ ಕೊರತೆ ಬಾರದಂತೆ ನೋಡಿಕೋ. ಇದೋ ವಕ್ಕಲ ಮಕ್ಕಳಿಗೆ ಬುತ್ತಿ ಕಳಿಸುವದನ್ನು ಮರೆಯಬೇಡ. ಸ್ವಾಮಿಯ ಸೇವೆಯಲ್ಲಿ ತಡವಾಗುವಂತಿದ್ದರೆ ಬರೇ ಹಾಲು, ಅಂಬಲಿಯನ್ನಾದರೂ ಕಳಿಸಿ ಬಿಡು.

**ಪಾರ್ವತಿ–** ಸ್ವಾಮಿ ಹಾಲು ಕರೆಯುವ ಯಾವ ಆಕಳೂ ಇಲ್ಲ ಎಲ್ಲವೂ ಬರಡಾಗಿವೆ. ತಾವು ಹೇಳಿದರೆ ಬೇರೆಯವರ ಮನೆಯಿಂದ ಹಾಲು ತರಿಸಿ ಕಳಿಸಲೇ.

**ಮಾ.ಗೌಡ–** ಹಾಗಿದ್ದರೆ ಬೇಡ ಅಂಬಲಿಯ ಜೊತೆಗೆ ಬೇರೆ ಏನನ್ನಾದರೂ ಮಾಡಿ ಕಳಿಸಿಬಿಡು ಆಗಬಹುದಲ್ಲವೇ.

**ಗುಡ್ಡದೀಶ–** ಗೌಡರೇ? ಮನೆಯಲ್ಲಿ ಕಾಮಧೇನು ಕಲ್ಪವೃಕ್ಷಗಳನ್ನಿಟ್ಟುಕೊಂಡು ಕಂಡ ಕಡೆಗೆ ಕೈಚಾಚುವದೇಕೆ, ತಾಯಿ ಶಿವನಪ್ಪಣೆಯಾಗಿದೆ ವಕ್ಕಲು ಮಕ್ಕಳ ಊಟಕ್ಕೆ ಹಾಲು ಕೊಡು ಎಂದು ಕೇಳು ತಾಯಿ ನಿರ್ಮಲ ಮನಸ್ಸಿನಿಂದ ತಮ್ಮಲ್ಲಿದ್ದಷ್ಟು ಹಾಲು ಕೊಟ್ಟಾವು. ಪಶುಗಳಲ್ಲಿದಷ್ಟು ತ್ಯಾಗ ಭಾವನೆ ಮನುಷ್ಯನಲ್ಲಿದ್ದಿದ್ದರೆ, ನರಕ ಎಂಬ ಹೆಸರೇ ಇರುತ್ತಿದ್ದಿಲ್ಲ ಹೋಗು ಕರುಗಳನ್ನು ಮೊಲೆಯುಣಿಸಿ ಹಾಲು ಕರೆ.

**ಮಾಲೀಗೌಡ–** ಕೇಳಿದೆಯೊ ಪಾರ್ವತಿ ಹೋಗು ಮಿಂದು ಮಡಿಯಾಗಿ ವರನಡಿಗೆ ಮುಡಿಯನೀಡಿ ಬೇಡಲ್ಲಿ ಶಿವನಪ್ಪಣಯಾಗಿದೆ. ಬಡರೈತರೊಡಲಿಗೆ ಹಾಲು ನೀಡೆಂದು.

**ಗುಡ್ಡದೀಶ–** ಬರಡೇ ಆಗಿರಲಿ ತಪ್ಪದೇ ನೀಡುವವು. ನಂಬಿ ನಡೆ ತಾಯಿ ವಿಶ್ವಾಸವಿಟ್ಟು ಹೋಗು.

ಪಾರ್ವತಿ– ಅವಿಶ್ವಾಸಕ್ಕೆ ಆಸ್ಪದವೆಲ್ಲಿ ಬಂತು ತಂದೆ. ನಮ್ಮಿಬ್ಬರ ತನುಮನಗಳೇ ನಿಮ್ಮಡಿಗರ್ಪಿತವಾಗಿವೆ. ಅಡಿಯಿಂದ ಮುಡಿಯರವರೆಗೆಲ್ಲಿ ಕೊಯ್ದರೂ ಚಿಮ್ಮಿದ ರಕ್ತ ಚಿಲುಮೆ, ನಿನ್ನ ನಾಮೋಚ್ಚರದಿಂದ ಚಿಮ್ಮುವದು. ಎದೆಹರಿದು ನೋಡಿದರೂ ಹನುಮನ ಹೃದಯದಲ್ಲಿ ರಾಮನ ಸ್ಥಿರ ಚಿತ್ರದಂತೆ ನಿನ್ನ ಚಿತ್ರವೇ ಕಂಡು ಬಂದೀತು, ಎಂದಾಗ ಅವಿಶ್ವಾಸವೇ! ಈಗಲೇ ಹೋಗಿ ಮಿಂದು ಮಡಿಯಾಗಿ ಬೇಡುವೆ, (ಹೋಗುವಳು)

**ಭರಮಾ** – ಎಪ್ಪಾ ಜ್ವಾಡ್ನಿ ಎಲ್ಲಾ ತಯಾರ ಅಗೇವ ದನಾ ಬಿಡತೀನಿ ಬರ್ರಿ.

**ಮಾಲಿಗೌಡ** – ಚಕ್ಕಡಿ ಕಟ್ಟು ನಾವು ಬರುತ್ತೇವೆ.

**ಗುಡ್ಡದೀಶ**– ಮತ್ತೆ ನಾವು ಬರಬೇಡವೇ.

**ಮಾಲಿಗೌಡ**– ಬೇಡ ಸ್ವಾಮಿ ಮತ್ತೆ ತಾವೇಕೆ, ಆಳುಗಳನ್ನೆಲ್ಲ ಅಣಿಗೊಳಿಸಿ ನಾನೇ ಬಂದು ಬಿಡುವೆ ನೀವು ಸ್ನಾನಮಾಡಿ.

**ಗುಡ್ಡದೀಶ** – ಆಮೇಲೆ ಮಾಡಿದರಾಯಿತು. ಬೆಳ್ಳಿ ಮೂಡುವ ಈ ಸಂಧ್ಯಾಕಾಲವನ್ನು ಏಕೆ ನಿರರ್ಥಕ ಮಾಡಿಕೊಳ್ಳಬೇಕು ನಾನೂ ಬರುವೆ.

**ಮಾಲಿಗೌಡ** – ತಮ್ಮ ಇಚ್ಛೆಗೆ ನಾನೆಂದೂ ಹೊರತಿಲ್ಲ. ಭರಮಾ ನಮ್ಮೊಂದಿಗೆ ಸ್ವಾಮಿಗಳೂ ಬರುವರಂತೆ ಅವರಿಗಾಗಿ ಬಂಡಿಯಲ್ಲಿ ವಂದೆರಡು ಮೆತ್ತೆಗಳನ್ನಿಡು ಹೋಗು... ಸ್ವಾಮಿ, ಮುಖ ತೊಳೆಯಲು ನೀರು ತರಲೇ.

**ಗುಡ್ಡದೀಶ** – ತನ್ನಿ... (ನೀರು ತಂದು ಕೊಟ್ಟನಂತರ ಮುಖ ತೊಳೆಯಲು ಹೋಗುವರು)

(ಮಾಲಿಗೌಡರು ದಾರಿಕಾಯುತ್ತ ನಿಲ್ಲುವರು ಅಷ್ಟರಲ್ಲಿ ಹಾಲಿನ ಪಾತ್ರೆ ಹಿಡಿದು ಪಾರ್ವತಿಯು ಬಂದು)

**ಪಾರ್ವತಿ**– ಸ್ವಾಮಿ ನಮ್ಮ ಮನೆಗೆ ಬಂದವರು ಗುಡ್ಡದೀಶ ಮಾತ್ರವಲ್ಲ ಸಾಕ್ಷಾತ್ ಮಳಲ ಮಲ್ಲೇಶನ ಅಖಂಡ ಜ್ಯೋತಿಯೇ ಗುಡ್ಡದೀಶನ ರೂಪ ತಳೆದು ಬಂದಿದೆ. ಅದೆಷ್ಟೋ ದಿನಗಳಿಂದ ಬರಡಾದ ಹಸುಗಳು ಗುಡ್ಡದೀಶನ ಅಪ್ಪಣೆಯನ್ನು ಕೇಳಿದೊಡನೆಯೇ ತೊರೆಸಲು ಅಣಿಯಾಗಿ ಸಾಕೆನ್ನುವವರೆಗೂ ಹಾಲು ಕರೆದಿವೆ. ನಮ್ಮ ಪೂರ್ವಜರಾರೋ ಮಾಡಿದ ಪುಣ್ಯದ ಫಲ ನೀಡಲೆಂದು ಬಂದ ಸಾಕ್ಷಾತ್ ಶಿವನೇ ನೀನು, ನಿನ್ನ ಪಾದಗಳಿಗೆ ನನ್ನ ಅನಂತ ವಂದನೆಗಳು.

**ಗುಡ್ಡದೀಶ**– ಹುಚ್ಚಿ ನನ್ನ ತಾಯಿ, ಎಲ್ಲವೂ ಆ ಮಳಲ ಮಲ್ಲೇಶನ ಇಚ್ಛೆ ನಡೆಯಿರಿ.

(ಹೋಗುವರು)

**ಪಾರ್ವತಿ–** ತಂದೆ ಗುಡ್ಡದೀಶ, ಎಂದೆಂದಿಗೂ ನೀನಮ್ಮೊಂದಿಗಿದ್ದು, ನಮ್ಮ ಕುಲಕೋಟಿಯನ್ನೇ ಪಾವನ ಮಾಡು ತಂದೆ.

॥ಪದ॥

ಅಭೋಗಿ–ಕಾನಡಾ

ನಿನ್ನಡಿಯು ಅಡಿಗಡಿಗೆ, ಬೆಳಕು ಬೀರುವುದಯ್ಯ ।
ನಿನ್ನಡಿಯು ಜಡಜಗದ ಕೊಳೆಯ ಕಳೆವುದಯ್ಯ ।
ನಿನ್ನಡಿಯು ಪ್ರೀಯೇ, ನಿನ್ನಡಿಯೇ ಶ್ರೀಯೇ ।
ನಿನ್ನಡಿಯೆ ಮಾಯೆ, ನಿನ್ನಡಿಯೇ ಛಾಯೆ ।
ನೀನಿಲ್ದ ಜಗವಿಲ್ಲ ಜಗತುಂಬಿ ನೀನೆಲ್ಲ ।
ಜಡಕೆ ಚೇತನವಯ್ಯ, ಚೇತನ ನೀನಯ್ಯ ॥

===***===***===

## ದೃಶ್ಯ ೬

-ಬೀದಿಯಲ್ಲಿ-

(ತಿರುಕಂಭಟ್ಟನು ಹೊರಟಿದ್ದಾನೆ ಹಿಂದಿನಿಂದ ತಿಪ್ಪವ್ವ ಕೂಗುತ್ತ ಬರುವಳು)

**ತಿಪ್ಪವ್ವ**– ಅಯ್ಯಯ್ಯ, ಯಾರರ ಬರ್ರೆ ಎವ್ವಾ ಉಳಿಸಿಗೇಳ್ರೇ ಎವ್ವಾ

**ತಿರುಕ** – ಯಾಕ ಯಾಕ, ತಿಪ್ಪವ್ವ ಏನಾಗೇದ, ಎಲ್ಲಿಗೆ ಓಡತಿ ನಿಲ್ಲು

**ತಿಪ್ಪವ್ವ** – ಅಯ್ಯಯ್ಯ ಉಳಿಸಿಗೆಳ್ರೀ ಭಟ್ಟರ

**ತಿರುಕ** – ಏನ ಏನ ಸಮಾಚಾರ ಏನವಾ

**ತಿಪ್ಪವ್ವ** – ನನಗಂಡ ಕಡದ ಹಾಕ್ತೀನೀ ಅಂತಾ ಕುಡುಗೋಲು ಮಸಗಂಡು ಬೆನ್ನ ಹತ್ಯಾನ ಭಟ್ಟರ. ನಾ ಸಾಯ್ತೀನಿ ಭಟ್ಟರ ನಾ ಸಾಯ್ತೀನಿ. ಹ್ಯಾಂಗಾರ ಮಾಡಿ ಹೊಟ್ಯಾಗ ಹಾಕ್ಕೆಳ್ರೀ.

**ತಿರುಕ** – ನೋಡವ್ವಾ ಅವತ್ತ ನಾ ಹೇಳಿದ್ಹಂಗ ನೀ ತರಲಿಲ್ಲ. ಈಗ ನೋಡು, ಹ್ಯಾಂಗದ.

**ತಿಪ್ಪವ್ವ** – ಅಯ್ಯಯ್ಯ ಕೈಬಿಡಬ್ಯಾಡ್ರೀ. ಎಲ್ಲಾ ತಂದು ಮುಟ್ಟಸ್ತೀನಿ ಉಳಿಸಿಕೊಳ್ರಿ,

**ತಿರುಕ** – ನೋಡ ಹಂಗಾರ ಮರತೀಯಾ ಮತ್ತೆ.

**ತಿಪ್ಪವ್ವ** – ಇಲ್ಲ ನೋಡ್ಯಾರ ನೋಡ್ರಿ, ಉಳಿಸಿಗೆಳ್ರೀ.

**ತಿರುಕ** – ಬರೇ ಉಳಿಸುವದಷ್ಟೇ ಅಲ್ಲ ನಿನ್ನ ಕಾಲ ಬೀಳೋ ಹಾಂಗ ಮಾಡ್ತೀನಿ.

**ತಿಪ್ಪವ್ವ** – ಅಷ್ಟ ಮಾಡಿದ್ರ ಎಲ್ಲಾ ಜೋಡಿಮ್ಯಾಲ ತಂದು ಕೊಡ್ತೀನಿ. ಅಯ್ಯ ಬಂದನರೀ.

**ತಿರುಕ** – ಹಂಗಾರ ಹೀಂಗ ಮಾಡು ನೋಡು ಅದರ ಮಜಾನ (ಎಂದು ಕಿವಿಯಲ್ಲಿ ಹೇಳುವನು)

ತಿಪ್ಪವ್ವ — (ದೆವ್ವ ಬಡಿದವರಂತೆ ನಟನೆ ಮಾಡುತ್ತ ನಿಲ್ಲುವಳು ಅಷ್ಟರಲ್ಲಿ ಕುಡುಗೋಲು ಹಿಡಿದು ಬಾಳ್ಯಾ ಬರುವನು)

ಬಾಳ್ಯಾ — ಲೇ ಎಲ್ಲಿ ಓಡಿ ಹೋಕ್ಕಿ... ಸಿಕ್ಕೆಲ್ಲಲೇ. ಸರ್ರಿ ಭಟ್ಟರ ಹೋಳಾಗ್ರೀ ಇವತ್ತು ಇವಳ್ನ ಮುಗಿಸಿ ಬಿಡತೀನಿ.

ತಿರುಕ — ಬಾಳು ಯಾರನ್ನ ಮುಗಸ್ತೀಯೋ ನೋಡಲ್ಲಿ ನಿನ್ನ ಹೆಣ್ತೀ ಅವಸ್ಥೀನ. ಮುಗಸ್ತಾನಂತೆ ಮುಗಸ್ತಾನ, ಏನೋ ನಿನ ಮುಗಸೋದು.

ಬಾಳ್ಯಾ — ಅಯ್ಯ ಭಟ್ಟರ ವಮ್ಮಿಂದೊಮ್ಯಾಕ ಏನ ಆತ್ರಿ ಇದು ಈಗ ಎಂತಾ ಪಾಡ ಇತ್ತು. ಅಯ್ಯ ಇದರ ದೆವ್ವ ತಿನ್ನಲಿ.

ತಿರುಕ — ಈಗೇನಂದೆಲ್ಲ ಅದ ಇದರ ಜಲ್ಮಾ ತಿನಲಿಕ್ಕೆ ಹತ್ತೇದ. ಅಲ್ಲಾ ಗಂಡಾ ಅನಿಸಿಗೊಂಡಾವ ನೀನು ಉಪಚಾರ ಮಾಡಸಬಾರದೇನೊ ಪಾಪ ಭಂಗಾರದಂತಾ ಹೆಣ್ಣು ಮಗಳು.

ಬಾಳ್ಯಾ — ಏ ತಿಪ್ಪಿ, ಏ ತಿಪ್ಪೀ...

ತಿರುಕ — ತಿಪ್ಪಿ ಇಲ್ಲ ಉಪ್ಪರಿಗೆ ಇಲ್ಲ, ಎಲ್ಲಾ ಹದಾನ ತಪ್ಪಿ ಹೋಗೇದ.

ಬಾಳ್ಯಾ — ಭಟ್ಟರ, ಏನ ಮಾಡಬೇಕಾತ ಇದಕೆ.

ತಿರುಕ — ಭೂತ ಚೇಷ್ಟಾನೋ, ದೆವ್ವ ಬಡದದ ಇದಕ ಬಿಡಸಬೇಕ

ಬಾಳ್ಯಾ — ಅಲ್ರೀ ಭಟ್ರ ಹ್ಯಾಂಗಾರೂ ನೀವು ದೆವ್ವ ಬಿಡಸತೀರಿ ಬಿಡಿಸಿ ಬಿಡ್ರಿ.

ತಿರುಕ — ಅಂದ್ರೇನು ನಮ್ಮ ವಿದ್ಯಾ ಬೀದಿಲೆ ಇಟ್ಟುಕೊಂಡು ಮಾರಲಿಕ್ಕೆ ಕೂತಾನಂತ ತಿಳದೀ ಏನು.

ಬಾಳ್ಯಾ — ಅಯ್ಯಯ್ಯ ಹಾಂಗ ಮಾಡಬ್ಯಾಡ್ರೀ ನಿಮ್ಮ ಕಾಲಿಗೆ ಬೀಳತೀನಿ. ಅಯ್ಯಯ್ಯ ಸಾಯಸಾಯಾರಂತೆ ಮಾಡತ್ತಲ್ರೀ ಪುಣ್ಯ ಕಟ್ಟಿ ಕೊಳ್ರೀ ಭಟ್ಟರ.

ತಿರುಕ — ನೀನು ನಮ್ಮವ ಇದ್ದಾಂಗ ಇದ್ದೀ ಅಂತ ನಿಂತ ಕಾಲ ಉಚ್ಚಾಟನೆ ಮಾಡತೀನಿ ಮತ್ತ ದಕ್ಷಿಣಿ.

ಬಾಳ್ಯಾ — ನೀವು ಕೇಳಿದ್ದು ಕೊಡತೀನಿ, ಹೇಳಿದಂತೆ ನಡಕೊಳ್ತೀನಿ.

ತಿರುಕ — ಓಂ, ಹಾಂ, ನುಂ, ಗಂ, ಫಟ್, ಸ್ವಾಹಾ ಓಂ ಶಾಕಿನಿ ಡಾಕಿನಿ,

ಕಾಮಿನಿ, ಓಂ ಫಟ್ (ಎಂದು ಮಂತ್ರಿಸಿ) ಹುಂ ಹೇಳು ಯಾರು ಯಾರು ನೀನು.

**ತಿಪ್ಪವ್ವ –** ನಾನು... ಯಮನವ್ವ... ನಾನು ನನ್ನ ಸೊಸಿ ಕರಕೊಂಡು ಹೊಕ್ಕೀನಿ. ನನ್ನ ಸೊಸಿಗೆ ಬಹಳಾ ಕಾಟಾ ಕೊಟ್ವಾನ ಕರಕೊಂಡು ಹೊಕ್ಕೀನಿ.

**ಬಾಳ್ಯಾ –** ಅಯ್ಯಯ್ಯ ನಮ್ಮವ್ವರೀ, ಭಟ್ಟರ, ಹಾಂಗಮಾಡ ಬ್ಯಾಡ ಎವ್ವಾ ಕೈಮುಗಿತೀನಿ.

**ತಿರುಕ –** ನೋಡೋ, ಹ್ಯಾಂಗ ಮಾಡತೀ ನಿಮ್ಮವ್ವ ನಿನ್ನ ಹೆಂಡತೀನ ಕರಕೊಂಡು ಹೋಕ್ಕಾಳಂತ ಹೋಗಲಿ ಬಿಡು.

**ಬಾಳ್ಯಾ –** ಬ್ಯಾಡ್ರೀ ಭಟ್ಟರ. ನನ್ನ ಬಂಗಾರದಂತ ಬಾಳೇವು ಮುರಾಬಟ್ಟೆ ಆದೀತು. ಆಕೀದೇನರ ಹರಿಕೀ ಇದ್ರ ಕೇಳಬಿಡ್ರಿ ಹರಿಕೀ ಪೂರ್ತಿ ಮಾಡತೀನಿ. ಆದರ ಕರಕೊಂಡು ಹೋಗೋದು ಬ್ಯಾಡ ಎವ್ವ ಭಟ್ಟರ, ಏನಾರ ಮಾಡ್ರಿ.

**ತಿರುಕ –** ಹಿಂಗ ಏನು, ಯಮನವ್ವಾ ನೀ ಯಾರೆದುರು ಏನು ಮಾತಾಡತೀ ಅಂಬೋದು ಖಬರ ಅದನ, ನಾವೇನು ಆಡು ಕಾಯೋರು ಅಂತ ತಿಳಿದೀ ಏನು ಏನಂತಿ. ವಳ್ಳೆ ರೀತಿಯಿಂದ ಹೊಗ್ತೀಯೋ ಏನಂತೀ ಹೂಂ ಫಟ್

**ತಿಪ್ಪವ್ವ –** (ಅಳುತ್ತಾ) ಅಯ್ಯಯ್ಯೋ ನನಗ ಇದ್ರೂ ಸೇರವಲ್ಲರು, ಸತ್ತರೂ ಸೇರವಲ್ರಲ್ಲೋ ನನ್ನ ಸೊಸಿ ಕರಕೊಂಡು ಹೋಕ್ಕೀನಿ.

**ತಿರಕಂಭಟ್ಟ –** ನೋಡವ್ವಾ ಮರ್ಯಾದಿಯಿಂದ ಹೋದಿ ಭಲೋ ಆತು. ಇಲ್ಲದಿದ್ರ... ನೋಡು ಮತ್ತ...

**ತಿಪ್ಪವ್ವ –** ನನ್ನ ಮಾತ ನಡೆಸಿದ್ರ ಹೋಗೂವಾಕಿ.

**ತಿರುಕ –** ಏನ ಆಗಬೇಕು ಹೇಳು.....

**ತಿಪ್ಪವ್ವಾ –** ನೀ ಯಾರ ಕೇಳಾವಾ. ನನ್ನ ಮಗಾ ನನಗ ಕೇಳಬೇಕ ನಡಕೊಂತೀನೀ ಅಂತ ಮಾತ ಕೊಡಬೇಕು. ಅದರಂತ ನಡಕೋಬೇಕು.

**ತಿರುಕ –** ಬಾಳ್ಯಾ ಹುಂ ಸಾಷ್ಟಾಂಗ ಹಾಕು ಕೇಳು ನಿಮ್ಮ ತಾಯೀನ

**ಬಾಳ್ಯಾ –** (ನಮಸ್ಕಾರ ಮಾಡಿ) ಏನಾಗಬೇಕು ಎವ್ವಾ ನೀ ಹೇಳದ್ಹಂಗ ನಿನ್ನ

ಮನಸಿನಾಂಗ ನಡಕೊಂತೀನಿ.

**ತಿಪ್ಪವ್ವ** — ಕೊಟ್ಟ ಮಾತಿಗೆ ತಪ್ಪಬಾರ್ದು ತಪ್ಪದS ನಡಕೋಬೇಕು.

**ಬಾಳ್ಯಾ** — ನಡಕೊಂತೀನವ್ವಾ ಹೇಳು.

**ತಿಪ್ಪವ್ವ** — ನನ್ನ ಸೊಸಿಗೆ ಕುಡದು ಬಡೀತೀಯಂತೆ

**ಬಾಳ್ಯಾ** — ಇನ್ನ ಮ್ಯಾಲ ಹಂಗ, ಬಡೀತೀನವ್ವಾ

**ತಿಪ್ಪವ್ವ** — ಏನಂದೀ....

**ಬಾಳ್ಯಾ** — ಮತ್ತೇನು ಮಾಡಂದೀ ಎವ್ವಾ

**ತಿಪ್ಪವ್ವ** — ಬಡೀ ಬಾರದು, ಚಂದಾಗಿ ನೋಡಕೋಬೇಕು, ಹುಡಗಿ ಮನಸು ನೋಯಿಸಬಾರದು. ನನಗ ಅಮಾಸಿಗೊಮ್ಮೆ ಹತ್ತು ತುಂಬಿದ ಹೋಳಿಗಿ ಎಡೀಬೇಕು. ಅವನ್ನ ಯಾರು ತಿನ್ನಬಾರ್ದು ನನ್ನ ಸೊಸೀನ ತಿನಬೇಕು. ವರ್ಷದೊಳಗ ಎರಡು ಸಾರೆ ಸೀರಿ ಏರಸಬೇಕು. ಅವನ್ನ ನನ್ನ ಸೊಸಿ ಉಡಬೇಕು.

**ಬಾಳ್ಯಾ** — ಹಂಗ ಆಗಲೆವ್ವಾ

**ತಿರುಕ** — ಬರೇ ಬಾಯಿಂದ ಹೇಳಿದ್ರ ಹ್ಯಾಂಗೋ ನೀ ಹೇಳಿದ್ಹಾಂಗ ನಡಕೊಂತೀನಿ ಅಂತಾ ನಮಸ್ಕಾರ ಹೇಳೋ ನನಗಲ್ಲೋ.... ನಿನ್ನ ತಾಯಿ ರೂಪದಲ್ಲಿರೋ ಅಲ್ಲಲ್ಲ... ನಿನ್ನ ಹೆಂಡತೀ ರೂಪದಲ್ಲಿರೋ ತಾಯಿಗೆ ನಮಸ್ಕಾರ ಮಾಡಿ ಹೇಳು.

**ಬಾಳ್ಯಾ** — ಎವ್ವಾ ನಮ್ಮವ್ವಾ ನೀಹೇಳಿದ್ಹಂಗ ತಪ್ಪದS ನಡಕೊಂತೀನಿ ನಮ್ಮವ್ವಾ ಕೈಬಿಡು.

**ತಿಪ್ಪವ್ವ** — ನೋಡ ಹಂಗಾರ ಕೊಟ್ಟ ಮಾತಿಗೆ ತಪ್ಪಿದರ ಗೋಣು ಮುರಿಯಾಕಿನ.

**ತಿರುಕ** — ಓಂ ಚೌಡಿ ಚಾಮುಂಡೀ ಭೈರವಿ ದುರ್ಗಿ. ಓಂ ಫಟ್ ಇನ್ನೇನ ಕೆಲಸ ಮುಗೀತು ಹೋಗು ಹೋಗು ಹೋಗು ಓಂ...

**ತಿಪ್ಪವ್ವ** — ಹೊಕ್ಕೀನಿ ಹೊಕ್ಕೀನಿ ಕೈಬಿಡ ಮಾರಾಯಾ.

**ತಿರುಕ** — ಹಂಗ ಹೊಕ್ಕೀನಿ ಅಂದ್ರ ನಾ ಎಲ್ಲ ಕೇಳಿತೀನಿ. ಗುರ್ತಾ ಕೊಟ್ಟು ಹೋಗು.

**ತಿಪ್ಪವ್ವ –** ಇನ್ನೊಮ್ಮೆ ಬರೋದಿಲ್ಲ ನೋಡ್ಯಾರ ನೋಡ್ರಿ (ಎಂದು ನಟನೆಯನ್ನು ಬಿಟ್ಟು) ಅಯ್ಯ ನಾಯಾಕ ಬಂದಿದ್ದೆ ಇಲ್ಲಿ ಯಾಕ್ರೀ ಭಟ್ಟರ ಎಷ್ಟಾಕೊಂದು ರಾವು ಆಗಿ ನಿಂತೀರಿ ಏನ ಆಗಿತ್ತು.

**ಗೋವಿಂದ –** (ಬರುತ್ತಾ) ಅಪಾ ಅಪಾ ಬಾರಪಾ ಬಾ ಅಂದ್ರ ಬರಬೇಕಪಾ.

**ತಿರುಕ –** ಆಕೋ ಏನ ಆಗೇದ.

**ಗೋವಿಂದ –** ಅನಾಹುತ ಅಗೇದಪಾ, ಮನೆವಳಗ ಹುಣ್ವೆ ಅಮವಾಸಿ ಕೂಡಿಬಿಟ್ಟಾವ.

**ತಿರುಕ –** ನಿನ್ನ ತಲಿ ಅವು ಹ್ಯಾಂಗ ಕೊಡತಾವೋ?

**ಗೋವಿಂದ –** ಕೂಡ್ಯಾವಪಾ ಮಾಡದೊಳಗ ನೀ ಇಟ್ಟದ್ದೆಲ್ಲ ಹುಣ್ವೆ ಸುಂಣದ ಹರಳು ಅಮವಾಸಿ ಕರೇ ಹರಳು. ಅಮ್ಮ ಮಾಡದೊಳಗಿನ ಕಸಾ ತಗೀಲಿಕ್ಕೆ ಹೋಗಿದ್ಲು ಮುಂಡೇಮಗಂದು ಚೇಳು ಎಲ್ಲಿತ್ತೋ ಎಲ್ಲಿಲ್ಲೋ ಕಚ್ಚಿದ್ದೊಂದೇ ತಡ ಕೈ ಹೀಂಗ ಜಾಡಿಸಿದಾಗ ಕೂಡಿ ಬಿಟ್ವಪ್ಪಾ.

**ತಿರುಕ –** ಆಕಿ ಕೂಡಿಸಲಿಲ್ಲೋ ಗೋವಿಂದ ಹಸಿಬಿ ತಳ ಕತ್ತರಿಸಿತು ಅನ್ನು ಗೋವಿಂದಾ ನಾರಾಯಣ ಶಂಭೋ ಮಹಾದೇವ.

(ಹೋಗುವರು)

===***====***===

# ದೃಶ್ಯ ೭

(ಜಂಗಲ್ ರಸ್ತಾದಲ್ಲಿ ಪೋಲಿಸಗೌಡರು ಭಾವಪರವಶತೆಯಲ್ಲಿ)

**ಪೋ. ಗೌಡರು** – (ಬರುತ್ತಾ) ಎಷ್ಟೊಂದು ವೈಚಿತ್ರವಿದೆ ವಿಶ್ವನಿಯಾಮಕನ ವಿಚಿತ್ರ ಕೊಡುಗೆಯಲ್ಲಿ ಹುತ್ತೇರಿ ಬೆತ್ತ ಬೆಳೆದ, ಚಿತ್ತಶುದ್ಧಿ ಜ್ಞಾನ, ಸಂಪತ್ತು ವೀರ ವೈರಾಗ್ಯಗಳ ಖಣಿಯಾದ ಯಾವ ತಾಪಸಿಗಳಿಗೂ ನಿಲುಕದ ಅಣಿಮಾಡಿ ಅಷ್ಟಸಿದ್ಧಿಗಳು ಪ್ರಪಂಚದ ಯಾವ ಸೋಂಕನು ಅರಿಯದ ಒಬ್ಬ ಹಸುಳೆಯ ಮುಗ್ಧ ಮನೋಭಾವದ ಹಸುಳೆಗೆ ಕೈವಶವೇ? ವಿರಾಟ ಪುರುಷನ ಸಮಸ್ತ ಕೊಡುಗೆಗಳೊಂದು ಗೂಡಿ ಮೂಡಿಬಂದ ದಿವ್ಯಶಕ್ತಿಯೇ, ಈ ಬಾಲಕನ ರೂಪ ತಳೆದು ಬಂದಿರ ಬಹುದೇ. ವಿಶ್ವಚೇತಕ ಪರ ಬ್ರಹ್ಮ ಸ್ವರೂಪಿಯೇ ನಿನಗೆ ಅನಂತ ನಮಸ್ಕಾರಗಳು. ನಿನ್ನ ಲೀಲೆ ಅನಂತ.

**ಮಾಲಿಗೌಡ** – ಏಕೆ, ಗೌಡರೆ, ಎಷ್ಟೊಂದು ಭಾವ ಪರವಶತೆಂಯಲ್ಲಿ ತಲ್ಲೀನರಾಗಿರುವಿರಿ, ಇದೇನು ಆಕಸ್ಮಿಕ ಭೆಟ್ಟಿ.

**ಪೋ. ಗೌಡ** –ಅದೇನಿಲ್ಲ ಆ ನಿಮ್ಮ ಬಾಲ ಸ್ವಾಮಿಯನ್ನು ನೋಡಬೇಕೆಂದು ನಿಮ್ಮ ಮನೆಗೆ ಹೊಂಟಿದ್ದೆ ಅವರು ನಿಮ್ಮೊಡನೆ ಹೊಲಕ್ಕೆ ಬಂದಿರುವರೆಂದು, ಕೇಳಿ ಇಲ್ಲಿಗೆ ಬಂದೆ, ಆ ನಿಮ್ಮ ಸ್ವಾಮಿಯಲ್ಲಿ ಅದಾವ. ಆಕರ್ಷಣ ಶಕ್ತಿ ಇದೆಯೋ ಭಗವಾನ್ ಜಿನೇಶ್ವರನಿಗೇ ಗೊತ್ತು.

**ಮಾಲಿಗೌಡ** – ಹೀಗೋ, ಅದೆಲ್ಲ ಶಿವನಾಟ.

**ಪಾರ್ವತಿ** – (ಬುತ್ತಿ ಹೆಡಿಗೆಯೊಂದಿಗೆ ಬರುತ್ತಾ) ಸ್ವಾಮಿ ನಾನೂ ಬರುವದು ತಡವಾಯಿತೇ, ಪಾಪ ಆಳುಮಕ್ಕಳು ಎಷ್ಟು ಹಸಿದಿರುವರೋ ಏನೋ.

**ಮಾಲಿಗೌಡ** – ಅದೇನಿಲ್ಲ ಪಾರ್ವತಿ ನೀನು ಬರುವ ಅವಶ್ಯಕತೆಯೇ ಉಳಿಯಲಿಲ್ಲ. ಗೌಡರೇ ದೈವ ನಮ್ಮನ್ನೆಷ್ಟು ಪರೀಕ್ಷಿಸುತ್ತಿದೆಯೋ. ಅರ್ಥವೇ ಆಗುತ್ತಿಲ್ಲ.

ಪಾರ್ವತಿ — ಏಕೆ. ಮತ್ತೇನಾಯಿತು?

ಮಾಲಿಗೌಡ — ಇನ್ನೇನಾಗಬೇಕು ಪಾರ್ವತೀ. ಹತ್ತೆಂಟುಜನ ಬಂಟರಿಗೂ ಪಂಟೆತ್ತು ಬಗ್ಗದಂತಹ ಎಂಟೆತ್ತುಗಳನ್ನು ಕಟ್ಟಿದ ನೇಗಿಲು ಮೆಟ್ಟು ಬಿಡದಷ್ಟು ಜಡವಾಗಿ ಕಟ್ಟಿದೆಂಟೆತ್ತುಗಳು ಮಲಗಿ ಮೆಲುಕು ಹಾಕುತ್ತಿವೆ, ಎಂದಾಗ ಇನ್ನೇನಾಗಬೇಕು.

ಪೋ. ಗೌಡರು — ಬಹಳ ವಿಚಿತ್ರ ಗೌಡರೇ? ನಿಮ್ಮೆತ್ತುಗಳನ್ನು ಸರಿಗಟ್ಟಬಲ್ಲ. ಯಾರ ಎತ್ತುಗಳೂ ನಮ್ಮೂರಲ್ಲಿಯೇ ಇಲ್ಲ. ಅಂತಹ ಆನೆ ಗಾತ್ರ ದೆತ್ತುಗಳು ಮಲಗಿಬಿಟ್ಟಿವೇ?

ಪಾರ್ವತಿ — ಹೋಗಲಿಬಿಡಿ. ಇಂದಲ್ಲ ನಾಳೇ ಕಟ್ಟಲು ಬಂದೀತು. ಆದರೆ ನೀವು ಬರುವಾಗ ಜೊತೆಗೆ ಕರೆತಂದ ಬಾಲ ಯೋಗಿಯ ಬಗ್ಗೆ ಎಳ್ಳು ಮೊನೇಯಷ್ಟಾದರೂ ಚಿಂತಿಸಿರುವಿರಾ? ಹೊತ್ತು ನೆತ್ತಿಗೇರುತ್ತಾ ಬಂದರೂ ಅವರ ಪೂಜೆ ಪ್ರಸಾದಗಳ ಅರಿವಿಲ್ಲದಾಯಿತೇ, ಎಲ್ಲಿ ಸ್ವಾಮಿ ಎಲ್ಲಿ.

ಮಾ.ಗೌಡ — ಹುಚ್ಚಿ ನಿನ್ನ ಸ್ತ್ರೀಸಹಜ ಸ್ವಭಾವಕ್ಕನುಗುಣವಾಗಿ ಮಾತನಾಡಿದೆ. ಅದೋ ಅಲ್ಲಿ ಆಲದ ಕಟ್ಟೆ ಇದೆಯಲ್ಲಾ ಅಲ್ಲಿ ವಿಶ್ರಮಿಸಿದ್ದಾರೆ.

ಭರಮಾ — (ಬರುತ್ತಾ) ಎಪ್ಪಾ ಎತ್ತುಗೋಳಂತು ಹರಿಗಾಲು ಚಾಚಿ ಮಲಗಿಬಿಟ್ಟ ಏನು ಮಾಡಂದರಿ.

ಮಾ.ಗೌಡ — ಮಾಡುವದೇನಿದೆ ಭರಮಾ ನೇಗಿಲು ನಾಳೆ ಕಟ್ಟಿದರಾಯಿತು. ನೀನು ಬಂಡಿ ಹೂಡು ನಾವು ಸ್ವಾಮಿಗಳನ್ನು ಕರೆದು ಕೊಂಡು ಬರುತ್ತೇವೆ.

ಪೋ.ಗೌಡ — ಗೌಡರೇ ಈ ವಿಷಯ ಸ್ವಾಮಿಗೆ ತಿಳಿಸಿದಿರೇನು?

ಮಾಲಿಗೌಡ — ಇದಾವ ಘನ ವಿಷಯವೆಂದು ತಿಳಿಸಲಿಲ್ಲ.

ಪಾರ್ವತಿ — ಅದೇನೆ ಇರಲಿ ಸ್ವಾಮಿಯನ್ನು ಕಂಡು ಮುಂದಿನ ಯತ್ನ ಮಾಡಿದರಾಯಿತು.

ಭರಮಾ — (ವಳಗಿನಿಂದ ಚೀರುತ್ತಾ ಬರುವನು) ಘಾತಾ ಆತೋ ಎಪಾ ಸ್ವಾಮಿಗೆ ದೆವ್ವನಂಥಾ ಸರ್ಪಾ ಸುತ್ತು ಹಾಕ್ಕೊಂಡು ಕುಂತ್ಯೆತಿ ಕಡದ್ಯೆತೋ ಏನೋ ಸ್ವಾಮಿ ಕಂಣು ಮುಚ್ಯಾನ. ಕಡೆದ್ಯೆತೋ

ಎನೋ ಹೊಲದಾನ ದೇವರಹಾವು ಎಪಾ ಅದು ಅನಾಯಾಸ ಕೈಗೆ ಸಿಕ್ಕೈತಿ. ಎಲ್ಲಾರನ ಕರದು ಬಡಿದು ಹಾಕ್ತೀನಿ ತಡಿ ಲೇ ನಿಂಗ್ಯ ಸಂಗ್ಯ ಬಾಳ್ಯಾ ಬಸ್ಯಾ ಬರ್‍ರಲೇ ಬರ್‍ರೀ (ಎಂದು ಕೂಗುವನು)

**ಮಾ.ಗೌಡ** – ಲೇ ಭರಮಾ ಹಾಗೇಕೆ ಕತ್ತೆಯಂತೆ ಕಿರುಚುರುತ್ತಿರುವಿ, ಸ್ವಾಮಿಗೆ ಸುತ್ತುವರೆದ ಸರ್ಪಕ್ಕೇನಾದರೂ ಅಪಾಯ ತಟ್ಟಿದರೆ ಸುಮ್ಮನೇ ಬಿಟ್ಟೀತೆ.

**ಪೋ.ಗೌಡರ** – ಅದೂ ನಿಜವೇ ನಡೆಯಿರಿ ನೋಡೋಣ ಮುಂದೇನಾದರೂ ಮಾಡಲು ಬಂದೀತು.

(ತೆರೆ ಸರಿದಾಗ ಆಲಗಿಡದ ಕಟ್ಟೆಯ ಮೇಲೆ ಸ್ವಾಮಿಯು ಭಾವಸಮಾಧಿಸ್ಥನಾಗಿ ಕುಳಿತಿದ್ದಾನೆ ಆತನಿಗೆ ಸರ್ಪ ಸುತ್ತು ಹಾಕಿ ತಲೆಯಮೇಲೆ ಹೆಡೆ ಎತ್ತಿ ನಿಂತಿದೆ)

**ಪಾರ್ವತಿ** – ನೋಡುತ್ತೇನು, ನಿಂತಿರುವಿರಿ ಸ್ವಾಮಿಗೆ ಸುತ್ತುವರಿದು ಸರ್ಪ ತಾನಾಗಿಯೇ ಹರಿದು ಹೋಗುವಂತೇನಾದರೂ ಉಪಾಯ ಮಾಡಿ.

**ಮಾ.ಗೌಡ** – ಮಾಡಬೇಕೇನೆಂಬುದೇ ತಿಳಿಯದಂತಾಗಿದೆ (ಆಲೋಚಿಸಿ) ಪಾರ್ವತಿ ಆಳುಮಕ್ಕಳಿಗೆಂದು ಅವರಪ್ಪಣೆಯಿಂದಲೇ ಬರಡು ಹಸುಗಳು ತೊರೆಸಿದ ಹಾಲು ತಂದಿರುವಿಯಲ್ಲವೇ ಅದನ್ನೇ ಸರ್ಪರಾಜನೆದುಗಿರಿಟ್ಟು ಬಿಡು, ಹಾಲಿನಾಶೆಯಿಂದ ಕೆಳಗಿಳಿದು ಬಂದು ಕುಡಿದು ಸಂಪ್ರೀತನಾಗಲಿ.

**ಪಾರ್ವತಿ** – ಆಹುದು ಸ್ವಾಮಿ. ಮರೆತಿದ್ದೆ (ಎಂದು ಹಾಲಿನ ಪಾತ್ರೆಯನ್ನು ಸರ್ಪದ ಮುಂದಿಟ್ಟು ನಮಸ್ಕಾರ ಮಾಡುವಳು.)

**ಪೋ.ಗೌಡ** – ಗೌಡರೇ ನಾನಿದನ್ನೇ ನೋಡುತ್ತಿರುವೆ... ನನಗೇನು ಸ್ವಪ್ನವೇ. ಅಲ್ಲಾ ಸತ್ಯ... ಸತ್ಯವನ್ನು ಕಾಣುತ್ತಿರುವೆ... ಸತ್ಯವನ್ನೇ ನೋಡುತ್ತಿರುವೆ. ನಾನು ನೋಡುತ್ತಿರುವ ಸತ್ಯಚಿತ್ರಣದ ಭಾವ ನಿರೂಪಿಸಲು ನಾಲಿಗೆಗೆ ಸತ್ವ ವಿಲ್ಲಿದಂತಾಗಿದೆ. ಕವಿಯ ಕಲ್ಪನೆಯಂತೆ ಅಲೆ ಅಲೆಯಾಗಿ ಬರುವ ತೇಲು ನೋಟ... ಆಹಾಹಾ. ಸರ್ಪದಿಂದ ಸುತ್ತುವರಿದು ಹೆಡೆಯನ್ನು ಪ್ರಭಾವಳಿಯಂತೆ ಕುಶಲ ಶಿಲ್ಪಿಯಿಂದ ಕೆತ್ತಿ ಚಿತ್ರಿಸಿದ ಭಗವಾನ್ ತೀರ್ಥಂಕರರ ಪ್ರತಿ ಮೂರ್ತಿಯನ್ನು... ಅಹುದು ವಂದರ ಹಿಂದೊಂದರಂತೆ ತೀರ್ಥಂಕರರ ಅನಂತ ಅನೇಕ ಅವತಾರಗಳನ್ನು... ನೆಪಮಾತ್ರಕ್ಕೆ ಮಣೀ ತಿಂದ ಬಾಯ ತೊಳೆಯಲು

ಹೋಗಿ ತಾಯಿ ಯಶೋದೆಯು ಬಾಲಕೃಷ್ಣನ ಬಾಯಲ್ಲಿ ವಿಶ್ವಾಸವನ್ನೇ ಕಂಡಂತೆ ನಾನಿಂದು ಈ ಸ್ವಾಮಿಯಲ್ಲಿ ನನ್ನ ಆರಾಧ್ಯ ಜೀವ ದೈವದ ಅನಂತ ರೂಪಗಳನ್ನು ಕಾಣುತ್ತಿರುವೆ, ಜಾತಿ, ವಿಜಾತಿಗಳ ಕೀಳು ಭಾವನೆಗಳಲ್ಲಿ ಕೊಳೆತು ನನ್ನ ಜಾತಿಯೇ ಶ್ರೇಷ್ಠ ಅನ್ಯ ಮತ ಧರ್ಮಗಳು ಕೀಳು ಎಂದು ನಿಂದಿಸುತ್ತಿದ್ದ ನನ್ನ ದೃಷ್ಟಿಗೆ. ದಿವ್ಯದೃಷ್ಟಿಯನ್ನಿತ್ತು ದೇವನೊಬ್ಬ ನಾಮಹಲವು ಎಂಬರಿವು ಮೂಡಿಸಿ ವಿಶ್ವಕರ್ತಾರನ ಅನಂತ ರೂಪಗಳನ್ನು ತೋರಿಸಿ, ನೀ ನನಗೆ ಅರಿವಾಗಿ, ಗುರುವಾಗಿ, ದಿವ್ಯಜೀವನದ ಗುರಿ ತೋರಿಸಿದ ನಿನ್ನ ಶ್ರೀಪಾದಕ್ಕೆ ನಮೋ ಎಂದೆ, ತಂದೆ.

ಪಾರ್ವತಿ – ನನ್ನಪ್ಪಾ ನೀನೆಷ್ಟು ಮಹಿಮಾಶಾಲಿ ಗಿಡದಿಂದ ತೂರಿ ಬರುವ ಪ್ರಖರ ಸೂರ್ಯಕಿರಣಗಳು ನಿನ್ನ ಮುಖದ ಮೇಲೆ ಬಿದ್ದು ಮುಖವೆಲ್ಲ ಬಾಡುವುದೋ ಎಂಬ ಭೀತಿಯಿಂದ ಫಣಿರಾಜನು ಬಿಸಿಲಿಗಡ್ಡವಾಗಿ ತನ್ನ ಹೆಡೆಯನ್ನು ಕೊಡೆಯಂತೆ, ಹಿಡಿದು ಧ್ಯಾನಾಸಕ್ತನಾದ ನಿನ್ನನ್ನು ಕಾಯಲು ನಿಂತಿರುವನೇನೋ ಎಂಬಂತಿದೆ ಬಾ ತಂದೆ. ನಾಗರಾಜ ಇಳಿದು ಬಾ ಸ್ವಾಮಿಯ ಅಪ್ಪಣೆಯಂತೆ ಬರಡು ಹಸುಗಳು ತೊರಸಿದ ಮೀಸಲು ಹಾಲಿದೆ ಬಾ ತಂದೆ, ಬಾ ಕುಡಿದು ಸಂಪ್ರೀತನಾಗಿ ನಿನ್ನಿರುವ ಸೇರು.

**॥ ಪದ ॥**

ಇಳಿದು ಬಾ, ಫಣಿರಾಜ, ನೀ ನಿಳಿದು ಬಾ, ಕೆಳಗಿಳಿದು ಬಾ,
ನಲಿನಲಿದು ಬಾ ।
ಗುಡ್ಡದಯ್ಯನಮುಡಿಯಿಂದಾ ಸಿದ್ಧ ಯೋಗಿಯ ಜಡೆಯಿಂದ ।
ಎಳೆಬಿಸಿಲಿಗೆ ನೆಳಲಾಗಿ ನಿಂತ ಮಳಲ ಮಲ್ಲನಾ ಮಹಂತ,
ಮಹಂತ ಮಹಂತ ।
ಉರಗ ಭೂಷಣನ ಕೊರಳಮಾಲೆ ಬಾ ಮುರಹರಿಯ ಶಯನ
ಶೇಷನೆ ಬಾ ।
ಜಗಭಾರ ಹಿಡಿದ ಆದಿಶೇಷನೆ ಬಾ, ಮಂಥನಕೆ ಅನುವಾದಕಾ
ಲೋರಗನೆ ಬಾ ಬಾಬಾ।

(ಮೆಲ್ಲನೆ ಇಳಿದು ಹಾಲು, ಕುಡಿದು ಹೊರಟು ಹೋದ ನಂತರ ಸ್ವಾಮಿ ಎಚ್ಚತ್ತು)

**ಗುಡ್ಡದೀಶ** – ಏಕೆ ತಾಯಮ್ಮ? ಗೌಡರೆ? ಹೀಗೇಕೆ ಗರಬಡೆದವರಂತೆ ನಿಂತಿರುವಿರಿ.

**ಪಾರ್ವತಿ –** ನನ್ನಪ್ಪ ಇದಕ್ಕಿಂತಲೂ ಹೆಚ್ಚಿನದಿನ್ನೇನು ಮಾಡಲಾದೀತು. ನೀನು ಧ್ಯಾನಾಸಕ್ತನಾದಾಗ ಭಯಂಕರ ಸರ್ಪವೊಂದು ಸುತ್ತು ಹಾಕಿಕೊಂಡು ಕುಳಿತಿತ್ತು. ನಿನ್ನನ್ನೇ ಕಚ್ಚಿದ್ದರೆ ಗತಿ ಏನಾಗುತ್ತಿತ್ತು.

**ಗುಡ್ಡದೀಶ –** ತಾಯಿ ಕಚ್ಚುವದು ಅದರ ಗುಣಧರ್ಮ. ಆದರೆ ಅದು ತನ್ನ ಪ್ರಾಣಕ್ಕೆ ಆಪತ್ತುವದಗಿ ಬಂದರೆ ಮಾತ್ರ ಕಚ್ಚುವದು. ಮನುಷ್ಯರಂತೆ ಅವು ದುರಪಯೋಗ ಮಾಡಿಕೊಳ್ಳುವದಿಲ್ಲ. ಅದಿರಲಿ ಗೌಡರೆ, ರಂಟೆ ಹೊಡೆಯುವದು ಮುಗಿಯಿತೇ.

**ಮಾಲಿಗೌಡ –** ಇಲ್ಲ ಗುರುವೇ, ನೇಗಿಲಿಗೆ ಕಟ್ಟಿದೆತ್ತುಗಳು ಹೆಜ್ಜೆ ಕಿತ್ತಿಡದೆ ಮಲಗಿ ಬಿಟ್ಟಿವೆ.

**ಗುಡ್ಡದೀಶ –** ಹೀಗೋ ಶಿವನ ಸಂಕಲ್ಪ ಬಲು ವಿಚಿತ್ರ, ಎಂಟೆತ್ತುಗಳಿಗೂ ಜಗ್ಗದ ನೇಗಿಲನ್ನು ಕುಂಟೆತ್ತೊಂದೇ ಜಗ್ಗುವದನ್ನು ನೋಡಬೇಕೆಂಬಾಸೆ. ಶಿವನಿಗಿದ್ದರೆ, ತಪ್ಪೇನು ಕುಂಟೆತ್ತೊಂದನ್ನೇ ಕಟ್ಟಿ ಹರಹರ ಮಹಾದೇವ ಎನ್ನವ ಜಯಘೋಷದೊಡನೆ ಸಾಗಿಸಿರಿ.

**ಗುಡ್ಡದೀಶ –** ಕೇಳಿದೆಯಾ ಭರಮಾ, ಸ್ವಾಮಿಯ ಅಪ್ಪಣೆ

**ಭರಮ –** ಕೇಳಿದೆ ಎಪ್ಪಾ. ಅವರು ಹೇಳಿದ್ದಂಗ ಕುಂಟೆತ್ತೊಂದ ಕಟ್ಟಿ ಹೊಡಿತೀವಿ.

**ಪಾರ್ವತಿ –** ನನ್ನಪ್ಪಾ ನೀನೆಷ್ಟು ಮಹಿಮಾಶಾಲಿ ನಮ್ಮ ಮನೆತನಕ್ಕೆ ನೀನು ಮಾಡುತ್ತಿರುವ ಉಪಕಾರಕ್ಕೆ ಪ್ರತಿಯಾಗಿ ನಾವಿಬ್ಬರೂ ನಿಮ್ಮೆಡಬಲದ ಪಾದುಕೆಗಳಾಗಿ. ಎಷ್ಟು ಜನ್ಮ ಸೇವೆ ಮಾಡಿದರೂ ಸಾಲದು ಸಾಕು ನಡೆ. ತಂದೆ ಮನೆಗೆ ಹೋಗೋಣ ಅನ್ಯರ ದೃಷ್ಟಿತಾಗಿ ನಿನ್ನ ಮಹಿಮಾತಿಶಯಗಳಿಗೆ ಕುಂದು ಬಂದೀತು. ಬೆಳಗಿನಿಂದ ಊಟವಿಲ್ಲದೆ, ಹಸಿವಾಗಿದ್ದೀತು.

**ಗುಡ್ಡದೀಶ –** ನಿನ್ನಿಚ್ಛೆ ನಡೆತಾಯಿ.....

(ಎಲ್ಲರೂ ಹರಹರ ಮಹಾದೇವ ಎನ್ನುವ ಜಯಘೋಷದೊಂದಿಗೆ ಹೋಗುವರು)

===***=====***===

## ದೃಶ್ಯ ೮

ಬೀದಿಯಲ್ಲಿ

**ತಿರುಕ –** (ಬರುತ್ತಾ) ಥೂ, ಇವನ ಮನೆ ಹಾಳಾಗಾ ಎಲ್ಲಿ ಹೋದರೂ ಹುಡುಗನ ಮಾತ ಮಾತS (ಬಾಳು ಬರುವನು) ಬಾಳು ನಮ್ಮೂರಿನ ಜನಕ ಬದ್ದೀನ ಇಲ್ಲ. ಯಾವದು ಹೌದು ಯಾವದು ಅಲ್ಲಾ ಅಂಬೋದು ತಿಳಿಕೊಳ್ಳದ ಮೂಕ ಕುರಿಗಳ ಹಾಂಗ ಸಾಯ್ತಾವ.

**ಬಾಳ್ಯಾ –** ಅದೇನು ಖರೇ ಒಂದು ಬ್ಯಾ ಅಂದ್ರ ಎಲ್ಲಾವು ಬ್ಯಾ ಅಂತಾವ.

**ತಿರುಕ –** ಅಂತೂ ನನ್ನ ದೃಷ್ಟಿಯೊಳಗ ನೀನ ಒಬ್ಬಾವ ಬುದ್ಧಿವಂತ ಕಾಣಸ್ತೀ ಏನಪಾ ಅಲ್ಲೋ ಬಾಳು ನೀ ವಂದುಕೆಲ್ಸ ಮಾಡಬೇಕಲ್ಲಾ.

**ಬಾಳ್ಯಾ –** ಏನ್ರಿ ಅದು ಮನಿ ಮುರುಕ ಕೆಲ್ಸಂದ್ರ ವಲ್ಲೆಪಾ

**ತಿರುಕ –** ಥೂ ನಾವು ಅಂಥಾದಕ್ಕೆಲ್ಲ ಸೇರವರ ಅಲ್ಲ ನಿನಗೇನ ಗೊತ್ತಿಲ್ಲ! ನನ್ನ ಭಕ್ತಿ ಶಕ್ತಿ ನೋಡಿ, ಸಾಕ್ಷಾತ್ ಆದಿಶಕ್ತೀನ ನನ್ನ ವಶ ಆಗಿಬಿಟ್ಟಾಳ. ನಾನು ಮನಸು ಮಾಡಿದ್ರ ಏನ ಬೇಕು, ಅದನ್ನ ಮಾಡಬಲ್ಲೆ ಆದರ ಜನ ತಿಳಕೊಂಡಿಲ್ಲ.

**ಬಾಳ್ಯಾ –** ನೀವು ಹೀಂಗ ಅಂತ ತಿಳಸವರು ಯಾರ ಅದಾರ್ರಿ

**ತಿರುಕ –** ಅಲ್ಲೋ ಆ ಕೆಲಸ ನೀನ ಯಾಕ ಮಾಡಬಾರದು? ನೀನು ಮನಿಯಂವ ಇದ್ದೀ ನಿನಗೆ ಯಾವಾಗಾದರೂ ಬೇಕಾದಾಗ ಹತ್ತಿಪ್ಪತ್ತು ರೂಪಾಯಿ ಇಸಗೋ. ಆದರ ನಮ್ಮ ಪರವಾಗಿ ಪ್ರಚಾರ ಮಾತ್ರ ಮಾಡ್ತಿರಬೇಕು.

**ಬಾಳ್ಯಾ –** ಏ ವಲ್ಲೆ ಬಿಡ್ರಿ.

**ತಿರುಕ –** ವಲ್ಲೇ ಅನಬಾರದೋ ಅಲ್ಲೋ ಆ ದಿವಸ ನಿನ್ನ ಹೆಂಡ್ತಿಗೆ ದೆವ್ವಾ ಬಡಕೊಂಡಾಗ ನಾನೂ ವಲ್ಲೇ ಅಂದಿದ್ದರ ಏನ ಆಗ್ತಿತ್ತೂ ನೋಡು

ವಬ್ಬರಿಗೊಬ್ಬರು ಅನುಕೂಲ ಆಗ್ತಾ ಹೋಗಬೇಕು. ನೋಡು ಹೆಚ್ಚಿಗೇನು ಹೇಳೋದದ ನನ್ನ ಮನಸಿನಂತೆ ನೀ ನಡಕೋ ನಿನ್ನ ಮನಸಿನಂತೆ ನಾ ನಡಕೊಂತೀನಿ ಏನಂತೀ.

**ಬಾಳ್ಯಾ** – ಆಗ್ಲಿ ಹೋಗ್ರಿ

**ತಿರುಕ** – ಮರಿ ಬ್ಯಾಡಾ ಮತ್ತ.

**ಬಾಳ್ಯಾ** – ನಾಯಾಕ ಮರತೇನ್ರೀ ಕಾಲಕೂಡಿ ಬರಲಿ (ಹೋಗುವನು)

**ತಿರುಕ** – ಓಹೋ ಹೋ ನಮಸ್ಕಾರ ಸ್ವಾಮಿ ಯಾರು ಗಂಡಾ ಹೆಂಡತೀ ಜೋಡೀನ ಹೊರಟೀರಿ. ಓಹೋ ಹೋ ಭಾಳಾ ದಿವಸಾತು ಗೌಡ್ರು ಮನಿವಳಗ ಜೀತದಾಳಾಗಿರೋ ಮಗನ್ನ ನೋಡಲಿಕ್ಕೆ. ಬಂದ್ಹಂಗ ಕಾಣಸ್ತದ ಅಲ್ಲ.

**ಮಹದೇವಯ್ಯ** –ಭಟ್ಟರೇ ಬಾಯಿ ಬಿಗಿ ಹಿಡಿದು ಮಾತನಾಡಿ.

**ತಿರುಕ** – ಅಲ್ಲಾ ನೀವು ಯಾಕೆ ಸಿಟ್ಟಿಗೆ ಬರಬೇಕು. ಊರ ಜನ ಮಾತಾಡೋ ಮಾತು ನಾನು ಮಾತಾಡಿದೆ, ಅವರಿಂದ ನಮಗೇನ ಆಗಬೇಕಾಗೇದ ನಾವು ಅಂದ್ರ ನಾವ್ವ ನಮ್ಮನ್ನು ಸರಿಗಟ್ಟೋ ಶಕ್ತೀನೆ ಇಲ್ಲ. ನಾವು ಮನಸು ಮನಸು ಮಾಡಿದ್ರ...

**ಗೋವಿಂದ** – ಅಪ್ಪಾ ಬಾರಪಾ ಲಗೂ ಬಾರಪಾ ಅಮ್ಮ ಕರೀತಾಳ....

**ತಿರುಕ** – ನಿಮ್ಮಮ್ಮನಿಗೆ ಬೇರೆ ಕೆಲ್ಸ ಏನೂ ಇಲ್ಲೇನೋ ಹೋಗ್ಹೋಗು ಆಮೇಲೆ ಬರ್ತಾನಂತ ಹೇಳು.

**ಗೋವಿಂದ** – ಅಮ್ಮ.......

**ತಿರುಕ** – ಹಾಗೆಲ್ಲ ಉವಾದ್ವಾಪತನ ಮಾಡಬಾರದು.....

**ಗೋವಿಂದ** – ಅಮ್ಮ ನೀನು ಬಾರಮ್ಮಾ

**ತಿರುಕ** – ಅಯ್ಯಯ್ಯೋ.... ನಡಿಯೋ (ಹೋಗುವರು)

**ಗುರುಲಿಂಗಮ್ಮ** – ಗೌಡರ ಮನೆಯ ಜೀತದಾಳೆ? ನಮ್ಮ ಗುಡ್ಡದೀಶ ನಿಜವೇ ಸ್ವಾಮಿ.

**ಮಹಾದೇವ** – ಹುಚ್ಚಿ ಅವನಾಡುವ ಭಾಷೆಯನ್ನು ಅರಿಯದಷ್ಟು ಮುಗ್ಧೆಯಾದೆಯಾ ನಮ್ಮ ಗುಡ್ಡದೀಶನ ಮಹಿಮಾತಿಶಯ ಬಾಲಲೀಲೆಗಳಿಂದ

ಅವನದೆಯಲ್ಲಿ ದ್ವೇಷ ಮಾತ್ಸರ್ಯಮನೋಭಾವಗಳು, ಹುಚ್ಚೆದ್ದು ಗರಿಗೆದರಿ ನಿಂತಿವೆ,

**ಪೋ. ಗೌಡ** – ನಮಸ್ಕಾರ ಸ್ವಾಮಿಗಳೇ ಅದೆಷ್ಟು ಜನ್ಮದ ತ್ಯಾಗ ಯೋಗ ತಪಸಿದ್ಧಿಯ ಸುಂಕೇತವಾಗಿ ಕಾರಣಿಕ ಮಹಾ ಪುರುಷನಿಗೆ ಜನ್ಮ ನೀಡಿರುವಿರೋ ದೇವನೇ ಬಲ್ಲ.

**ಮಹಾದೇವಯ್ಯ** – ಕೇಳಿದೆಯಾ ಗುರುದೇವಿ ಈಗಲಾದರೂ ನಿನ್ನ ಆತ್ಮ ಸಂತೋಷವೆ!

**ಪೋ. ಗೌಡ** – ತಾಯಿ ನಿಮ್ಮ ಗುಡ್ಡದೀಶನ ಮಹಿಮಾತಿಶಯ ಬಾಲ ಲೀಲೆಗಳು ಗವಿಮಠದ ಸ್ವಾಮಿಗಳ ಮನಸ್ಸನ್ನು ಆಕರ್ಷಿಸಿದೆ ಅಷ್ಟೇ ಅಲ್ಲ ಸನ್ನಿಧಿಯ ದರುಶನಕ್ಕೆ ಕರೆತರಲು ಸಹ ಅಪ್ಪಣೆಯಾಗಿದೆ ಹೇಗೂ ತಾವೂ ಬಂದಿದ್ದೀರಿ ಎಲ್ಲರೂ ಜೊತೆಯಾಗಿ ಸ್ವಾಮಿಗಳ ದರುಶನ ಮಾಡಿಕೊಂಡು ಬರೋಣ ನಡೆಯಿರಿ.

===***===***===

# ದೃಶ್ಯ ೯

(ಚನ್ನಬಸವಸ್ವಾಮಿಗಳು ವಿರಾಜಮಾನರಾಗಿದ್ದಾರೆ. ಮರಿಚೇಡಿನ ಹುರಳಿ ನಾಗಪ್ಪನು ರಾಜಠೀವಿಯಲ್ಲಿ ಬಂದು ನಮಸ್ಕರಿಸುವನು)

**ಚ.ಬ.ಸ್ವಾಮಿ** – ಯಾರು ಹುರಳಿ ನಾಗಪ್ಪನವರಲ್ಲವೇ

**ಹು.ನಾಗಪ್ಪ** – ಅಹುದು ಬುದ್ಧಿ ನಾನೇ.

**ಚ.ಬ.ಸ್ವಾಮಿ** – ರಾಜಠೀವಿಯಲ್ಲಿ ಬಂದ ನಿಮ್ಮನ್ನು ಗುರುತಿಸಲು ತಡವಾಯಿತು. ಎಲ್ಲಾ ಕುಶಲವೇ.

**ಹು.ನಾಗಪ್ಪ** – ಎಲ್ಲವೂ ತಮ್ಮ ಅನುಗ್ರಹ ಬುದ್ಧಿ ತಮ್ಮ ಆಶೀರ್ವಾದದ ಫಲದಿಂದ ನನ್ನ ಜೀವನದ ಅಂತಸ್ತು ಮತ್ತೂ ಮೇಲೇರಿದೆ. ನಮ್ಮ ನಾಡಿನ ಪ್ರಭುಗಳಾದ ಮೀರ ಅಲಂ ಬಹಾದ್ದೂರರವರು ನನ್ನನ್ನು ರಾಜಧಾನಿಗೆ ಕರೆಯಿಸಿಕೊಂಡು ಪ್ರಾಮಾಣಿಕತನದ ಪ್ರತಿಫಲವೆಂದು ಮರಿಚೇಡನ್ನಲ್ಲದೆ, ಮಂಡಲಗಿರಿ. ಪೋತನಾಳು, ಬೆಟಗೇರಿ ಬಹಾದ್ದುರ ಬಂಡಿ ಗ್ರಾಮಗಳನ್ನು ಉಂಬಳಿ ಹಾಕಿ ಕೊಟ್ಟು, ನಾಗನಾಥರಾಜಾ ಬಹಾದ್ದೂರ ಎಂಬ ಬಿರುದನ್ನಿತ್ತೂ ಗೌರವಿಸಿದ್ದಾರೆ.

**ಚ.ಬ.ಸ್ವಾಮಿ** – ಹೀಗೋ? ಬಹಳ ಸಂತೋಷ ಕುಳಿತುಕೊಳ್ಳಿ

**ಹು.ನಾಗಪ್ಪ** – ಬುದ್ಧಿ ಇಂದಿನ ಸವಿನೆನಪಿಗಾಗಿ ಚಿಕ್ಕ ಕಾಣಿಕೆಯೊಂದನ್ನು ಅರ್ಪಿಸಬೇಕೆಂದಿದ್ದೇನೆ. ತಾವು ಒಪ್ಪಿದರೆ ನಾಳಿನಿಂದಲೇ ಕೆಲಸ ಆರಂಭಿಸಬಹುದು.

**ಚ.ಬ.ಸ್ವಾಮಿ** – ಶಿವನ ಸಂಕಲ್ಪವೇ ನಿಮ್ಮನ್ನು ಪ್ರೇರೇಪಿಸುತ್ತಿದ್ದರೆ, ಯಾಕಾಗಬಾರದು. ಹೇಳಿ ಹೇಳಿ

**ಹು. ನಾಗಪ್ಪ** – ಬುದ್ಧಿ ಅಪಾರ ಭಕ್ತ ಸಮೂಹವನ್ನು ಹೊಂದಿದ ತಮ್ಮ ಸನ್ನಿಧಿಯಲ್ಲಿ ನಡೆಯುವ ಸಭೆ, ಸಮಾರಂಭ, ಕಾರ್ಯ ಕಲಾಪಗಳಿಗೆ ಯೋಗ್ಯ

ತಾಣದ ಅಭಾವ ಎದ್ದು ಕಾಣುತ್ತಿದೆ. ಅದನ್ನು ಅಲ್ಪನ ಅಳಿಲು ಸೇವೆಯೆಂದು ಅರ್ಪಿಸಬೇಕೆಂದಿದ್ದೇನೆ, ಅಪ್ಪಣೆಯಾಗಬೇಕು.

**ಚ.ಬ.ಸ್ವಾಮಿ** – ಶಿವನ ಸಂಕಲ್ಪವಿದ್ದಂತಾಗಲಿ, ನೀವು ಕಟ್ಟಿಸ ಬೇಕೆಂದಿರುವ ಕಟ್ಟಡ ಎಂದೆಂದಿಗೂ ನಾಗನಾಥ ಮಂಟಪವೆಂದು ಗುರುಪರಂಪರೆ ಶಿಷ್ಯಕೋಟಿ ಇರುವ ತನಕ ಚಿರಸ್ಥಾಯಿಯಾಗಿರಲಿ.

**ಹು.ನಾಗಪ್ಪ** – ಧನ್ಯನಾದೆ ಗುರುವೆ, ನಾಳೆಯಿಂದಲೇ ಕೆಲಸ ಪ್ರಾರಂಭಿಸುವೆ (ಅಷ್ಟರಲ್ಲಿ ಪೋ. ಗೌಡ ಮಾ.ಗೌಡ, ಪಾರ್ವತಿ, ಗುರುಲಿಂಗಮ್ಮ ಮಹಾದೇವಯ್ಯ ಮೊದಲಾದವರು ಗುಡ್ಡದೀಶನನ್ನು ಕರೆದುಕೊಂಡು ಬರುವರು, ಸ್ವಾಮಿಗಳು ಉತ್ಸುಕತೆಯಿಂದ ಎದ್ದು ನಿಂತು)

**ಚ.ಬ.ಸ್ವಾಮಿ** – ಬಂದೆಯಾ, ಬಾ ಮಗು, ಶಿವನ ಸಂಕಲ್ಪವೇ ಮೈವೆತ್ತು ಬಂದಂತೆ ಬಂದೆಯಾ ಬಾ, ಹಿಂದಿನವರ ತಪಃ ಸಿದ್ಧಿಯ ಸಂಕೇತವಾಗಿ ಇಂದಿನವರ ಹಾರೈಕೆಯ ಕುರುಹಾಗಿ ಮುಂದಿನವರ ಅರಿವು ಜಾಗ್ರತಗೊಳಿಸಬಲ್ಲ ಮಹಾ ಗುರುವಾಗಿ, ಎಂದೆಂದಿಗೂ ಮರೆಯಲಾಗದ ಮಹಂತನಾಗಿ ಮೆರೆಯ ಬಂದೆಯಾ. ಬಾ ಮಗು ಕುಳಿತುಕೋ, ನಿನ್ನ ಹೆಸರೇನು?

**ಮಹದೇವಯ್ಯ** –ಗುರುವೇ, ನವನಿಧಿಗಳಿಗೆ ಕಲ್ಪತರುವಂತಿರುವ ಗುಡ್ಡಕ್ಕೆ ಅಧಿಪತಿಯಾಗಿ, ಸಿದ್ಧ ಸಾಧಕರಿಗೆ ಅಧಿ ದೈವವಾಗಿ, ನಿಸರ್ಗ ಸೌಂದರ್ಯದ ಐಸಿರಿಯಾಗಿ ಮೆರೆವ ಮಳಲ ಮಲ್ಲೇಶನ ಸಾರ್ಥಕ ಸೇವೆಯಿಂದ ಪಡೆದ ಈ ಮಗುವಿಗೆ, ಗುಡ್ಡದೀಶನೆಂದೇ ಕರೆಯುತ್ತಿದ್ದೇವೆ.

**ಗುರುಲಿಂಗಮ್ಮ** –ತಂದೆ, ಲೋಕದ ಅನೇಕಾನೇಕ ತಾಯಂದಿರಂತಹ ನನ್ನ ಬಯಕೆ. ಹಂಬಲಗಳೆಂದೂ ಫಲಿಸದೆ, ಬಂಜೆ ಎನ್ನುವ ನಿರಂತರ ಸಾರ್ಥಕ ಹೆಸರಿನಿಂದ ಜನನಿಂದೆಗೆ ಗುರಿಯಾಗಿ, ಕೇಳಲಾಗದ ಅಪಶಬ್ದಗಳ ಮಾಲೆಗಳನ್ನೇ ಹೊತ್ತು, ಗೊತ್ತು ಗುರಿಯಿಲ್ಲದ ಹುಚ್ಚಿಯಂತೆ ತಡಬಡಿಸಿ, ಕೊನೆಗೆ ಜಗದಪ್ಪನ ಕರುಣೆಯಿಂದ ಕಂಡ ನನ್ನ ಕುವರನಿಗೆ ಆಶೀರ್ವದಿಸು ತಂದೆ, ನಮ್ಮ ವಂಶದ ಕುಡಿಯಾಗಿ, ಮಿಡಿಯಾಗಿ, ಕಾಯಾಗಿ, ಹಂಣಾಗಿ, ಮಾನವತಿ ಮಡದಿಯ ಪಡದು ಮಕ್ಕಳು ಮೊಮ್ಮಕ್ಕಳನ್ನು ಹೆತ್ತು, ಎತ್ತಿ ಆಡಿಸಿ, ನೂರು ಕಾಲ ಬಾಳಿ ಬೆಳಗೆಂದು ಆಶೀರ್ವದಿಸು ತಂದೆ.

ಚ.ಬ.ಸ್ವಾಮಿ – ತಾಯಿ, ನಿನ್ನ ಮಗನಿಗೆ, ಒಬ್ಬಿಬ್ಬರು ಮಕ್ಕಳಲ್ಲ ಹತ್ತಾರು ಜನ ಮೊಮ್ಮಕ್ಕಳಲ್ಲ ಇಡೀ ಪ್ರಪಂಚದ ಆಸ್ತಿಕ ವರ್ಗವೇ ಮಕ್ಕಳಾಗಿ ಅವರ ಸಂತಾನವೇ ಮೊಮ್ಮಕ್ಕಳಾಗಿ ನೂರು ಕಾಲವೇಕೆ ತಾಯಿ, ದೇವ ದೈವ ಭಾವವಿರುವ ವರೆಗೂ ಆತನ ಕಿರ್ತಿ ವೈಭವಗಳು ಬೆಳಗಲಿವೆ ತಾಯಿ, ಆತನು ಕೇವಲ ನಿಮ್ಮ ಮನೆತನಕ್ಕೆ ಮಾತ್ರ ಸೀಮಿತವಾಗಿಲ್ಲ. ಇಡೀ ವಿಶ್ವವೇಕೆ ಭೂಮಿ ಆಕಾಶಗಳ ಪ್ರಭುತ್ವ ಕೂಡ ಆತನ ಅಧಿಕಾರ ಕಕ್ಷೆಯಲ್ಲಿ ಬರಲಿದೆ, ತಾಯಿ.

**ಗುರುಲಿಂಗಮ್ಮ** –ಅಂದರೆ.... ನಿಮ್ಮ ಮಾತಿನ ಅರ್ಥವೇ ಆಗುತ್ತಿಲ್ಲ ತಂದೆ.

ಚ.ಬ.ಸ್ವಾಮಿ – ಅರ್ಥವಾಗದ ಭಾಷೆಯನ್ನೇನು ಬಳಿಸಿ ಮಾತನಾಡುತ್ತಿಲ್ಲ ತಾಯಿ, ನಿನ್ನ ಮಗನು ಕಾರಣಿಕ ಪುರುಷ, ಶಿವನ ಚಿತ್ಕಳೆಯೇ ಮೈವೆತ್ತು ಬಂದಂತೆ ಬಂದ, ಶಿವಕಲಾ ಪ್ರಪೂರ್ಣ ಶಿವಯೋಗಿ. ನಮ್ಮ ನಿಮ್ಮೆಲ್ಲರ ಮಾನದಂಡಕ್ಕೂ ಮೀರಿದ ಮಹಾ ಮಹಿಮನಾಗಿ ಮೆರೆಯಲಿದ್ದಾನೆ.

**ಗುರುಲಿಂಗಮ್ಮ** –ಅಂದರೆ, ಆತನೂ... ನಿಮ್ಮಂತೆ

ಚ.ಬ.ಸ್ವಾಮಿ– ಕಾವಿ ಲಾಂಛನ ಧಾರಿಯಾಗಿ, ವೀರ ವೈರಾಗ್ಯಗಳ ತುತ್ತ ತುದಿಯನೇರಿದ ವೈರಾಗ್ಯ ಚಕ್ರವರ್ತಿಯಾಗಿ ತಾನೂ ಬಾಳಿ ತನ್ನ ಆಶ್ರಿತರನ್ನೂ ಉದ್ಧರಿಸಬೇಕಾಗಿದೆ.

**ಗುರುಲಿಂಗಮ್ಮ** –ಹಾಗಾದರೆ, ಈತನೊಂದಿಗೆ ನಮ್ಮ ವಂಶ ಕೊನೆಯಾಗಬೇಕೆ?

ಚ.ಬ.ಸ್ವಾಮಿ– ತಾಯಮ್ಮ ನಿನ್ನ ವಂಶಕ್ಕೆ ಕೊನೆ ಎಂಬುದೇ ಇಲ್ಲ. ವಿಶ್ವವೇ ನಿನ್ನ ಮನೆಂಯಾಗಿ. ವಿಶ್ವದ ಆಸ್ತಿಕ ವರ್ಗವೇ ಮಕ್ಕಳು ಮೊಮ್ಮಕ್ಕಳಾಗುತ್ತಿರುವಾಗ ನಿನ್ನ ವಂಶಕ್ಕೆ ಕೊನೆ ಎಂತು ತಾಯಿ. ವಿಶ್ವದ ಹಾರೈಕೆಯನ್ನು ಅನುಲಕ್ಷಿಸಿ ನಾನಿಂದು ನಿಮ್ಮ ಬಳಿ ಪುತ್ರ ಭಿಕ್ಷೆ ಬೇಡುವೆ, ಸತಿಪತಿಗಳೊಮ್ಮನದಿಂದ ನಿಮ್ಮ ಪುತ್ರನನ್ನು ಭಿಕ್ಷೆ ನೀಡಿ, ಆತನಿಗೆ ವಿಧಿ ವಿದ್ಯುಕ್ತವಾಗಿ ಸಂಸ್ಕಾರ ನೀಡಿ, ಗೃಹಸ್ಥನಂತಲ್ಲ; ವೀರ ವೈರಾಗ್ಯಗಳ ತವನಿಧಿಯಂತೆ ಪೋಷಿಸಿ, ಈ ಸ್ಥಾನದ ಉತ್ತರಾಧಿಕಾರಿಯನ್ನಾಗಿ ಮಾಡಿ, ಸ್ಥಾನದ ಮಹತಿ ಘನತೆ, ಕೀರ್ತಿ ಗೌರವಗಳನ್ನು ಇನ್ನೂ ಹೆಚ್ಚಿಸಬೇಕಾಗಿದೆ, ನೀಡಿ ತಾಯಿ, ನೀವಿಬ್ಬರೂ ಆತ್ಮ ಸಂತೋಷದಿಂದ ನಿಮ್ಮ ಪುತ್ರನನ್ನು ನನಗೆ ಭಿಕ್ಷೆ ನೀಡಿ.

**ಗುರುಲಿಂಗಮ್ಮ**–ಭಿಕ್ಷೆ, ಪುತ್ರಭಿಕ್ಷೆ, ನೀಡಲೇ? ಗುರುವೇ, ನಿನ್ನ ಭಿಕ್ಷೆ ನನ್ನ ಯೋಗ್ಯತೆಯನ್ನೇ ಮೀರಿದೆ– ಬಂಜೆತನಕ್ಕಂಜಿ ಕಣ್ಮಂಜಾಗುವಂತೆ, ಎಲ್ಲ ತೀರ್ಥ ಕ್ಷೇತ್ರಗಳಲ್ಲಿ ಮೀರಿದೆ–ಬಂಜೆತನಕ್ಕಂಜಿ ಕಣ್ಮಂಜಾಗುವಂತೆ, ಎಲ್ಲ ತೀರ್ಥ ಕ್ಷೇತ್ರಗಳಲ್ಲಿ ಹರಕೆ ಹೊತ್ತು ಗಿಡ ಗುಂಡುಕಲ್ಲುಗಳುಳಿಯದಂತೆ, ಪೂಜೆ, ಪುನಸ್ಕಾರ, ವ್ರತ ನಿಯಮ ಉಪಾಸನೆಗಳಲ್ಲಿ ದೇಹ ಕ್ಷಯಿಸಿ, ಸೊರಗಿ, ಕೊರಗಿ, ಕೊನೆಗೆ ಗುಡ್ಡದಪ್ಪನ ಕರುಣೆಯಿಂದ ಕಂಡ ಕುಮಾರನನ್ನು ನಿನ್ನಡಿಗೆ ನೀಡಿ ಮತ್ತೆ ಬಂಜೆಯಾಗಲೇ? ಅಗಲಾರೆ ತಂದೆ ಅಗಲಾರೆ, ನನ್ನೊಡ ಕುಡಿಯನು ನಿನ್ನುಡಿಗೆ ನೀಡಿ ಬರಿ ಮಡಿಲ ಬಂಜೆಯಾಗಲಾರೆ.

**ಚ.ಬ.ಸ್ವಾಮಿ**– ನೀನೆಂತು ಬಂಜೆಯಮ್ಮ ಯೋಚಿಸಿ ನೋಡು ತಾಯಿ, ಭವಿಷ್ಯದ ಬಗೆಗಣ್ಣುಗಳಿಂದ ಕಾಲಗರ್ಭದ ವಳಹೊಕ್ಕು ಮುಂಬರುವ ಸಂತಾನದ ಭವಿತವ್ಯವನ್ನು ನೋಡು; ಕಾಲಪುರುಷನ ವಕ್ರದೃಷ್ಟಿಗೆ, ಸನಾತನ ಸಂತಾನವು ಕ್ಷೀಣಿಸಲಿದೆ. ಅಧರ್ಮ, ಅನ್ಯಾಯ, ಅತ್ಯಾಚಾರ, ಅತಿರೇಕದೆದುರು ನಿಂತು ಹೋರಾಡಿ, ಸಮರ್ಥ ಸಂತಾನ ನಿರ್ಮಿಸಬಲ್ಲ ನಿನ್ನ ಪುತ್ರನನ್ನು ನಮಗೆ ಭಿಕ್ಷೆ ನೀಡಲೇ ಬೇಕು ತಾಯಿ. ಕಾಲ ಆತನಿಗಾಗಿ ಕಾಯುತ್ತಿದೆ.

**ಗುರುಲಿಂಗಮ್ಮ**– ಗುರುವೇ, ಕಾಲದಂಜಿಕೆಯ ನೀಡಿ, ನೂತನ ಜಾಲ ಹೂಡಿ, ಒಲುಮೆಯಿಂದ ಮಡಿಲ ಕುಡಿಯ ಕೀಳುವ ನಿನ್ನಯತ್ನ ಬಲ್ಲೆ ತಂದೆ, ನೀಡಲಾರೆ, ಪುತ್ರಭಿಕ್ಷೆ ನೀಡಲಾರೆ.

**ಚ.ಬ.ಸ್ವಾಮಿ**– ನೀಡಲೇಬೇಕು ತಾಯಿ ನೀಡಲೇಬೇಕು, ನಿನ್ನ ಮಗನ ಮೇಲಿನ ಪ್ರೀತಿ–ವಾತ್ಸಲ್ಯಗಳೆಂತಿದ್ದರೂ ಅವೆಲ್ಲಕ್ಕೂ ತಿಲಾಂಜಲಿಯನ್ನಿತ್ತು ಪುತ್ರಭಿಕ್ಷೆ ನೀಡಲೇ ಬೇಕು ತಾಯಿ. ನಿಸರ್ಗ ಪ್ರಕೋಪದಿಂದ ಹುಟ್ಟಿದ ಹುಚ್ಚು ಹೊಳೆಗೆ ಅಡ್ಡವಾಗಿ ಮಳಲಗೋಡೆ ಕಟ್ಟಿದರೆ ನಿಂತೀತೆ, ತಾಯಿ ಯೋಚಿಸಿ ನೋಡು.

**ಗುರುಲಿಂಗಮ್ಮ**– ತಂದೆ ನಿನ್ನ ಯೋಚನಾಲೋಚನೆಗಳನ್ನರಿಯದಷ್ಟು ಮುಗ್ಧೆಯಲ್ಲ ನಡೆ ಮಗು ಮನೆಗೆ ಹೋಗೋಣ.

**ಗುಡ್ಡದೀಶ**– ತಾಯಿ, ಶಿವನ ಸಂಕಲ್ಪಕ್ಕೆ ಸರಿಯಾಗಿ ಗುರುವಿನ ಕರೆ ಬಂದಿದೆ ನೀನೆನಿತೂ ಚಿಂತಿಸದೆ, ನನ್ನ್ನವರಿಗೆ ವಪ್ಪಿಸಿ ಬಿಡು ತಾಯಿ.

**ಚ.ಬ.ಸ್ವಾಮಿ**– ಕೇಳಿದೆಯಾ ತಾಯಿ, ನಿನ್ನ ಮಗನಾಡಿದ ಮಾತುಗಳನ್ನು, ವೀರ

ವೈರಾಗ್ಯದತ್ತ ಎಳೆಯುವ ಮಾತು ಮನಗಳನ್ನು ತಡೆದು ನಿಲ್ಲಿಸುವ ಶಕ್ತಿ ಈವರೆಗೂ ಉದಿಸಿಲ್ಲ, ಉದಿಸಲೂ ಸಾಧ್ಯವಿಲ್ಲ. ತಾಯಿ ಬಾಲ್ಯದಿಂದಲೇ ವೈರಾಗ್ಯದತ್ತ ಮನವಾಲಿದ ಆದಿ ಶಂಕರಾಚಾರ್ಯರಿಗೆ ಸನ್ಯಾಸ ಸ್ವೀಕರಿಸಬೇಕೆಂಬ ಸಂಕಲ್ಪಕ್ಕೆ ಸರಿಯಾಗಿ ನಿನ್ನಂತೆ ಅವರ ತಾಯಿಯೂ ಅಡ್ಡಿಯಾಗಿದ್ದಳು. ತನ್ನ ತಾಯಿಯೊಂದಿಗೆ, ಒಂದು ದಿನ ಹೊಳೆಯಲ್ಲಿ ಸ್ನಾನ ಮಾಡುತ್ತಿದ್ದಾಗ ಮೊಸಳೆಯ ಹಿಡಿತಕ್ಕೆ ಸಿಕ್ಕು ಸಂಕಲ್ಪ ಸಾಧನೆಯ ಮೊದಲೇ ಸಾಯಬೇಕಾಯಿತಲ್ಲ ಎಂಬ ವ್ಯಥೆಯಿಂದ ಅಮ್ಮ ನಿನ್ನ ಆಕ್ಷೇಪಣೆಯಿಂದ ನನ್ನ ಆಶೆ ಆಕಾಂಕ್ಷೆಗಳು ನನ್ನ ದೇಹದೊಂದಿಗೆ ಪರಿಸಮಾಪ್ತಿಗೊಳ್ಳುತ್ತಿವೆ. ಈಗಲಾದರೂ ಅಪ್ಪಣೆ ಕೊಡು. ಸಾಯುವ ಮೊದಲು ನಿನ್ನಾಶೀರ್ವಾದದಿಂದ ಕೊನೆಯಾಸೆಯೊಂದನ್ನಾದರೂ ಸ್ಮರಿಸಿ ಸನ್ಯಾಸಿಯಾಗಿ ಸಾಯುವೆ ಎಂದು ಹಾತೊರೆದಾಗ ಬೇರೆ ವಿಧಿಯಿಲ್ಲದೆ, ಅಪ್ಪಣೆ ಕೊಟ್ಟಿದ್ದಳಂತೆ. ಅದರಂತೆ ನೀನಿಂದು ಸಮ್ಮತಿಸಿ ಆಶೀರ್ವದಿಸದಿದ್ದರೂ ಮುಂದೊಂದು ದಿನ ಆ ಕಾಲ ಬರಲಿದೆ, ಬಂದೇ ಬರಲಿದೆ.

**ಗುರುಲಿಂಗಮ್ಮ** – ಗುಡ್ಡದೀಶ... ಕೇಳಿದೆ ಏನಪ್ಪ ನಿನ್ನ ಗುರುವಾಣಿಯನ್ನು.

**ಗುಡ್ಡದೀಶ** – ಕೇಳುತ್ತಿದ್ದೇನೆ ತಾಯಿ ಗುರುವಿನಾಣತಿಯ ಮೀರಿ ಮುನ್ನಡೆಯದಿರುತಾಯಿ ಗುರುವಿನಡಿಯಲ್ಲಿ ವಿರಾಗಿಯಾಗಿ ಜೀವನ ಸವೆಯಿಸಬೇಕೆಂದಿದ್ದೇನೆ.

**ಗುರುಲಿಂಗಮ್ಮ** – ಅಂದರೆ ನಮ್ಮ ವಂಶದ ಗತಿ? ನಿನ್ನೊಂದಿಗೆ ನಮ್ಮ ವಂಶದ ಕೊನೆಯಾಗಬೇಕೆ? ನೀನು ಮದುವೆಯಾಗಿ ಮಕ್ಕಳನ್ನು ಹೆತ್ತು ಲಾಲನೆ ಪಾಲನೆ ಮಾಡುವದನ್ನು ಕಣ್ತುಂಬ ಕಾಣಬಾರದೇ.

**ಗುಡ್ಡದೀಶ** – ಅಮ್ಮ ನಿನ್ನ ಬಯಕೆಯಲ್ಲಿ ಹುರುಳಿಲ್ಲ. ನಾನು ಮದುವೆಯಾಗಿ ಸಂಸಾರದ ಕೊಳೆ ಕೂಪದಲ್ಲಿ ಬಿದ್ದು ವದ್ದಾಡುವದಕ್ಕಿಂತ ಸನ್ಯಾಸಿಯಾಗಿ ಶಿವನ ನಿಲುವಿಗೆ ಸಲ್ಲಬೇಕೆಂದಿದ್ದೇನೆ. ನನಗೆ ಮದುವೆ ಮಾಡುವ ನಿನ್ನ ಬಯಕೆ ವಡೆದ ಕನ್ನಡಿ ತಾಯಿ.

**ಗುರುಲಿಂಗಮ್ಮ**– ಹಡೆದ ತಂದೆ ತಾಯಿಗಳ ಅಭಿಲಾಷೆ ಆಶೆ ಆಕಾಂಕ್ಷೆಗಳ ಸಜೀವ ಸಮಾಧಿ ನಿರ್ಮಿಸಿ, ಅನಂತ ಆಶೋತ್ತರಗಳಿಂದ ಕೂಡಿದ ವಂಶ ಕುಡಿಯನ್ನೇ ವೈರಾಗ್ಯದಗ್ನಿಗೆ ಆಹುತಿ ನೀಡಿ ಪೂರ್ವಜರ

ಪರಂಪರೆಯನ್ನು ಮೀರಿ ಮನೆ ಮಠಗಳನ್ನು ನೆಲಸಮ ಮಾಡಲೆತ್ನಿಸುವದು ನಿನ್ನ ಧರ್ಮವೇ? ಯೋಚಿಸಿ ನೋಡು ಮಗು,

**ಗುಡ್ಡದೀಶ** – ಅಮ್ಮ ಮಕ್ಕಳ ಮನದಾಸೆಯನ್ನು ಗುರುತಿಸಿ ಪಾತ್ರಾ ಆಪಾತ್ರತೆಯನ್ನನುಸರಿಸಿ, ಚಿಗುರಿದ ಆಶೆಗೆ ನೆಲಜಲವಾಗಿ ನಿಂತು ಹರಿಸಿ ಬಿಡು ತಾಯಿ. ಗುರುವಿನಾಶೆಗೆ ಪ್ರತಿ ಹೇಳದೆ ಹೆತ್ತಮಗನನ್ನು ಬಲಿಗೊಟ್ಟು ತಲೆ ಕೊಯ್ದು ಪಾಕ ಮಾಡಿ ಉಣಬಡಿಸಿ ಗುರುಕರುಣೆಗಾಗಿ ಕಾಯ್ದು ನಿಂತ ಶಿರಿಯಾಳಿ ಚಂಗಳೆಯರಂತಹ ತಾಯಿ ತಂದೆಗಳಾಗಿ ನೀವಿಬ್ಬರೂ ನನ್ನನ್ನು ಗುರುವಿನುಡಿಗೆ ನೀಡಿ ಬಿಡಿ.

**ಗುರುಲಿಂಗಮ್ಮ** –(ಅಳುತ್ತಾ) ಗುಡ್ಡದೀಶ ಮಗು... ಗುಡ್ಡದೀಶ ನಮ್ಮ ನಿಮ್ಮ ಋಣಾನುಬಂಧದ ಕೊನೆಯಾಗಬೇಕಾಯಿತೇ, ಅಯ್ಯೋ ವಿಧಿಯೇ ಮಲ್ಲೇಶ ಮತ್ತೆ ಬಂಜೆಯನ್ನಾಗಿಸುವೆಯಾ.

**ಗುಡ್ಡದೀಶ** – ನೀನಿನ್ನು ಬಂಜೆಯಲ್ಲ ತಾಯಿ, ಮಾತ್ರವಾತ್ಸಲ್ಯದ ಬಂಧನವ ಕಳಚಿ ದೇವ ಮಾನವರ ಸೇವೆಗೆ ನನ್ನನ್ನು ನಿಯೋಜಿಸಿದ ಮಹಾತಾಯಿ. ನನ್ನಿಂದ ಸೇವೆ ಕೊಳ್ಳುವ ಇಡೀಮಾನವ ಜನಾಂಗಕ್ಕೇನೆ ಮಹಾತಾಯಿ. ನಂಬಿಯಕ್ಕ, ಚಂಗಳೆಯರ ಸಾಲಿಗೆ ನಿಂತು ನೋಡು ತಾಯಿ ನಿನ್ನ ಮಗನ ಸೇವೆಯನ್ನು– ಅಳಬೇಡಮ್ಮ ನಗುನಗುತ್ತಾ ನನ್ನನ್ನು ಬೀಳ್ಕೋಡು ತಾಯಿ... ಎಲ್ಲಿ ನಗು ತಾಯಿ ನಗು.

**ಗುರುಲಿಂಗಮ್ಮ**–ನಗಲೇ, ಗುಡ್ಡದೀಶ ನಗಲೇ, ಎಲ್ಲ ತಾಯಂದಿರಂತಹ ಆಶೋತ್ತರಗಳನ್ನು ಹತ್ತಿಕ್ಕಿ ಗುರುವಿನಾಣತಿಯಂತೆ ಸನ್ಯಾಸಿಯಾಗೆಂದು ಹರಸಿ ಬೀಳ್ಕೊಡಲೇ (ಅಳುತ್ತಾ) ಆಗಲಿ ಮಗು ಎಂತಾದರೂ ನೂರುಕಾಲ ಬಾಳಿ ಬೆಳಗು.

**ಗುಡ್ಡದೀಶ** – ಧನ್ಯ ತಾಯಿ ಧನ್ಯ ಇದೀಗ ನನ್ನ ಜನ್ಮ ಸಾರ್ಥಕವಾಯಿತು ದೇವ ಮಾನವರ ಸೇವೆಗೆ ಜೀವನವನ್ನೇ ಮೀಸಲಿಟ್ಟು ವೈಯ್ಯಕ್ತಿಕ ಆಶೆ ಅಭಿಲಾಷೆಗಳನ್ನು ಸುಟ್ಟು ತ್ಯಾಗ ವೈರಾಗ್ಯಗಳ ದೀಕ್ಷೆ ತೊಟ್ಟು ಸನ್ಯಾಸಿಯಾಗೆಂದು ತುಂಬಿದೆದೆಯಿಂದ ಹರಿಸಿದ ನೀನು ಮಹಾತಾಯಿಯಮ್ಮಾ (ಎಂದು ನಮಸ್ಕರಿಸುವನು)

**ಮಹದೇವ** – ಗುಡ್ಡದೀಶ ನೀನಿಂದು ಅರಿತೋ ಅರಿಯದೋ ವಿರಾಗಿಯಾಗ ಬಯಸಿರುವಿ ಈ ವೈರಾಗ್ಯ ಮುಳ್ಳಿನ ಹಾಸುಗೆ ತೂಕ ತಪ್ಪಿ ನಡೆದಲ್ಲಿ ಜೀವನ ಅಪಹಾಸ್ಯಕ್ಕೀಡಾದೀತು.

**ಗುಡ್ಡದೀಶ** – ತಂದೆ, ನಿಮ್ಮೆಲ್ಲರ ಮುಡಿಗೆ ಹುವು ತರುವೆನಲ್ಲದೆ ಹುಲ್ಲತಾರೆನು (ಎಂದು ತಂದೆಗೆ ನಮಸ್ಕರಿಸುವನು)

**ಮಹಾದೇವ** – ಗುರುವಿನ ಮಾರ್ಗದರ್ಶನದಲ್ಲಿ ನಡೆದು ಮುಂಬರುವ ಸಂತಾನದ ದಾರಿ ದೀಪವಾಗಿ ಚಿರಕಾಲ ಬಾಳು, ಏಳು ಮಗು ಗುರುವೇ ವಬ್ಬನೇ ಮಗನೆಂಬ ಮೋಹ ಮಮಕಾರಗಳಿಗೆ ವಶಳಾಗಿ ಹುಚ್ಚಿಯಂತೆ ಕನವರಿಸುತ್ತಿದ್ದಾಳೆ, ಕ್ಷಮಿಸಿ ಬಾ ಗುರುದೇವಿ, ಧೀರ ಸಂಕಲ್ಪ ಸ್ಥಿರ ಪ್ರಜ್ಞೆ ವಿರತಿ ಭಾವಗಳಿಂದ ಗುರುವಿನಡಿಗೆ ಗುಡ್ಡ ದೀಶನನ್ನು ನೀಡಿ ಬಿಡು.... ಸ್ವೀಕರಿಸು ಗುರುವೇ ನಿನ್ನಿಚ್ಛೆಯಂತೆ ನಾವಿಬ್ಬರೂ ಸತಿ–ಪತಿಗಳೊಮ್ಮನದಿಂದ ನಮ್ಮೊಡಲ ಕುಡಿ ನಿಮ್ಮುಡಿಗೆ ನೀಡಿಹೆವು. ಇಂದಿನಿಂದ ಇವನಿಗೆ, ನೀನೇ, ತಂದೆ, ತಾಯಿ, ಬಂಧು ಬಳಗ ಎಲ್ಲವೂ ನೀನಾಗಿ ಅವನ ಬಾಳಿಗೆ, ಬೆಳಕು ನಿಡು. (ಇಬ್ಬರೂ ಕೂಡಿ ಗುಡ್ಡದೀಶನ ಕೈಯನ್ನು ಗುರುವಿನ ಕೈಯಲ್ಲಿ ಕೊಟ್ಟು ನಮಸ್ಕಾರ ಮಾಡುವರು) ಗುರುದೇವಿ ಗುಡ್ಡದೀಶನಿಗೂ ನಮಸ್ಕರಿಸು, ತಾಯಿ ಮಗನೆಂಬ ವಾತ್ಸಲ್ಯ ಬದಿಗೊತ್ತಿ ನಮಸ್ಕರಿಸು ಆತನೀಗ ಗುರುಪುತ್ರ.

**ಗುರುಲಿಂಗಮ್ಮ** – ಗುಡ್ಡದೀಶ ಗುರುಪುತ್ರನಾದೆ ಏನಪ್ಪ ನಮ್ಮ ನಿಮ್ಮ ವಾತ್ಸಲ್ಯದ ಸೂತ್ರ ಕಳಚಿ ಹೋಯಿತೆ, (ಎಂದು ನಮಸ್ಕರಿಸುತ್ತಾ) ಆದರೊಂದ ಮಾತು ನೆನಪಿರಲಿ ನೀನೀಗ ವೈರಾಗ್ಯ ಶಿಖಾಮಣಿಯಾಗ ಹೊರಟಿರುವಿ. ಆ ದಾರಿಯಲ್ಲಿ ಅನಂತ ಅದಃಪತನದ ಅವಕಾಶವಿದೆ. ಎಚ್ಚತ್ತು ಮುನ್ನಡೆ ಹೆಣ್ತನವನ್ನು ಹೀಗಳೆಯದೇ ಸಮಸ್ತ ಸ್ತ್ರೀಕೋಟಿಯನ್ನಿ ಮಾತ್ರುಭಾವದಲ್ಲಿ ಕಂಡು ಕೈಮುಗಿದು ಮುನ್ನಡೆ (ಎಂದು ನಮಸ್ಕರಿಸುವಳು)

**ಗುಡ್ಡದೀಶ** – ಆಗಲಿ ತಾಯಿ ನಿನ್ನ ಸ್ವರೂಪದಲ್ಲಿ ಮಾತ್ರವಲ್ಲ ಜಗನ್ಮಾತೆ ತಾಯಿ ಪಾರ್ವತಿಯ ದಿವ್ಯ ಸ್ವರೂಪದಲ್ಲಿ ಕಾಣುವೆ, ತಾಯಿ ಚಿಂತಿಸದಿರು ನನ್ನ ನಿರ್ಧಾರ ಅಚಲ.

**ಪಾರ್ವತಿ** – (ನಮಸ್ಕಾರ ಮಾಡಿ) ಗುರುಪುತ್ರ ತಂದೆ ಗುಡ್ಡದೀಶ ನಾನೇನೆಂದು

ಶುಭಕೋರಲಿ ತಂದೆ ಹೃದಯ ಹುಚ್ಚೆದ್ದು ಬಾಯ ಚಪಲತೆ ಯಡಗಿ ಮಾತು ಮೂಕಾಗಿವೆ ತಂದೆ ನಾನೇನು ಬೇಡಲಿ.

**ಗುಡ್ಡದೀಶ** – ತಾಯಿ ನಿನ್ನ ಮಾತು ಮಿತಿಯಾಗಿ ಅಂತಃ ಕರುಣದ ಸೆಲೆ ಸೂಸಿ ತುಂಬಿದೆದೆಯಿಂದ ಹರಿದು ಬರುವ ಮೌನಾಶ್ರುಗಳೇ ನನ್ನ ಜೀವನದ ರಕ್ಷಾ ಕವಚ ತಾಯಿ. ಮಾತ್ರವಾತ್ಸಲ್ಯದಿಂದ ಸಂತೈಸಿ ಕೈತುತ್ತಿನಿಂದ ಉಣಿಸಿ ಪೋಷಿಸಿದ ಪ್ರತಿಫಲವೆಂದು ಕೊಡಲು ನನ್ನಲ್ಲೇನಿದೆ ತಾಯಿ? ಹಿಡಿತಾಯಿ ವುಡಿಯೊಡ್ಡು ಈ ದೇಹದೊಂದಿಗೆ ಬೆಳೆದ ಸಿಖಾ ಕೇಶಗಳನ್ನೇ ಕಿತ್ತು ನೀಡುವೆ ತಾಯಿ. ಈ ಕೇಶ ರಾಶಿಗಳು ನಿನ್ನ ವಂಶ ದೊಂದಿಗೆ ಉಳಿದಷ್ಟು ಕಾಲ ಯಾವ ಆಪತ್ತು ವಿಪತ್ತುಗಳು ಬರಲಾರವು. ಇವುಗಳನ್ನು ಭದ್ರವಾಗಿರಿಸು ತಾಯಿ.

**ಪಾರ್ವತಿ** – ಮಹಾಪ್ರಸಾದವನ್ನೇ ಕರುಣಿಸಿದಿ ತಂದೆ. ಶಿವನ ಜಡೆಯಲ್ಲಡಗಿದ ಗಂಗೆಯು ಮಹೀತಲದ ಮಾನವರ ಮಹಾಪಾಪ ತೊಳೆದು ಪುನೀತರನ್ನಾಗಿ ಮಾಡುವಂತೆ ನೀನಿಂದು ನಿನ್ನ ಜಡೆಯ ಕಿತ್ತು ನನ್ನುಡಿಗೆ ನೀಡಿ ಎಂದೆಂದಿಗೂ ನಶಿಸದ ನಿನ್ನ ಸ್ಮಾರಕವನ್ನು ನನ್ನ ಮನೆಯಲ್ಲಿರಿಸಿ ನನ್ನ ಕುಲ ಕೋಟಿಯನ್ನೇ ಉದ್ಧಿರಿಸಿದೆ ತಂದೆ.

**ಗುಡ್ಡದೀಶ** – ಹೊಗಳಿಕೆ ಅತಿಯಾಯಿತು ತಾಯಿ.

**ಪೋ. ಗೌಡ** –(ನಮಸ್ಕಾರ ಮಾಡುತ್ತಾ) ಗುರುವೇ ಮಾನವ ಸಹಜವಾದ ಮರೆವು ಕಳೆಯುತ್ತಾ ಅರಿವನೆಡೆಗೆ ನಿಮ್ಮನ್ನು ಅನವರತವು ಮುನ್ನಡೆಸು ತಂದೆ,

**ಗುಡ್ಡದೀಶ** – ಗೌಡರೆ, ತೆಂಗುಗಳ ಜೊತೆ ತಂದಿರುವಿರಲ್ಲವೇ ಕೊಡಿ ಅವುಗಳನ್ನು (ಎಂದು ಕೈಯಲ್ಲಿ ತೆಗೆದು ಕೊಂಡು ಉಡಿತುಂಬಿ) ಇವುಗಳನ್ನು ಭದ್ರವಾಗಿರಿಸಿ ಪೂಜಿಸಿರಿ ಕ್ರಮೇಣ ಸಸಿಯೊಡೆದು ಗರಿ ಮೂಡಿ ಮರಬಲಿತು ಫಲ ಪಕ್ವವಾಗುವಂತೆ ನಿಮ್ಮೊಂದಿಗೆ ನಿಂತು ಹೋದ ವಂಶವೃಕ್ಷ ಪುನಃ ಚಿಗಿತು ಚೇತರಿಸಲಿದೆ. ಗುರು ಕರುಣೆಯಿಂದ ಹುಟ್ಟಿದ ನಿಮ್ಮ ಮಗುವಿಗೆ ನಿಮ್ಮ ಕುಲದೈವ ಬ್ರಹ್ಮನ ಪ್ರತೀಕವೆಂದು ಭರಮಗೌಡನೆಂಬ ನಾಮಕರಣ ಮಾಡಿ,.

**ಪೋ. ಗೌಡ** – ಗುರುವೇ ಹೃದಯಾಂತರ್ಗತ. ವೇದನೆಯನ್ನು ಅರಿತು ಹರಿಸಿದ ನಿನ್ನನ್ನೆಷ್ಟು ಕೊಂಡಾಡಿದರೂ ಕಡಿಮೆಯೇ (ನಮಸ್ಕಾರ ಮಾಡುವನು)

**ಚ.ಬ.ಸ್ವಾಮಿ** – ಬಾ ಗುಡ್ಡದೀಶ ಬಾ ಇಂದಿನಿಂದ ನಿನ್ನ ಪೂರ್ವಾಶ್ರಮದ ಸಮಸ್ತ ಸಂಬಂಧಗಳನ್ನು ಕಿತ್ತು ಬಿಸುಟಿ ನಾಮಾಂಕಿತಗಳನ್ನು ಕಳಚಿ ಹೊಸ ಪರಿಸರಕ್ಕೆ ಹೊಸಹೆಸರಿನಿಂದ ಹೊರಬಾ. ಇಂದಿನಿಂದಲೇ ವೇದಾಗಮ ಉಪನಿಷತ್ತುಗಳ ಅಧ್ಯಯನ ಆರಂಭವಾಗಲಿ, ತರ್ಕ ಶಾಸ್ತ್ರ ಕಾವ್ಯ ಅಲಂಕಾರ ಮೀಮಾಂಸಾದಿಗಳಲ್ಲಿ ಅಪ್ರತಿಮ ಪಾಂಡಿತ್ಯ ಪ್ರಭೆ ಬೆಳಗಲಿ. ಎಲ್ಲ ಯೋಗಗಳಿಗೂ ಅತೀತವಾದ ಶಿವಯೋಗ ಸಿದ್ಧಿ ಸಾಧಿಸಲಿ. ಅಸತೋಮಾ ಸದ್ಗಮಯ ತಮಸೋಮಾ ಜ್ಯೋತಿರ್ಗಮಯ ಮೃತ್ಯೋಮಾ ಅಮೃತಂಗಮಯ ನಿನ್ನ ಜೀವನದ ಉಸಿರಾಗಲಿ.

**ಗುಡ್ಡದೀಶ** – ಗುರುವೇ ನಿನ್ನ ಆಶೆ ಅಭಿಲಾಷೆಗಳಿಗೆಂದೂ ಕುಂದು ಬಾರದಂತೆ ತ್ರಿಕರಣಶುದ್ಧಿಯಿಂದ ಜೀವನ ಸಾಗಿಸುವೆ ತಂದೆಯೂ ನೀನೇ ತಾಯಿಯೂ ನೀನೇ ಬಂಧುಬಳಗ ಎಲ್ಲವೂ ನೀನಾಗಿ ಮುನ್ನಡೆಸು ತಂದೆ, (ಎಂದು ನಮಸ್ಕಾರ ಮಾಡುವನು)

**ಚ.ಬ.ಸ್ವಾಮಿ** – ಸಮಸ್ತ ಸಿದ್ಧಿಗಳನ್ನು ಪಡೆದು ಸಿದ್ಧಿ ಸಾಧಕರಿಗೆ ಮಾರ್ಗದರ್ಶಿಯಾದ ಸಿದ್ಧೇಶ ಗವಿಯಸಿದ್ಧೇಶನೆಂಬ ಹೆಸರಿನಿಂದ ಬಾಳಿ ಬೆಳಗು. ತಾಯಿ ಗುರುಲಿಂಗಮ್ಮ. ಪುತ್ರಭಿಕ್ಷೆ ನೀಡಿ ಅಪುತ್ರವತಿಯಾದೆನೆಂದು ದುಮ್ಮನಿಸದಿರು. ಇನ್ನೊಂದು ವತ್ಸರದಲ್ಲಿ ಪುತ್ರವತಿಯಾಗುವ ಯೋಗವಿದೆ. ನಡೆಯಿರಿ ಪುತ್ರಭಿಕ್ಷೆ ನೀಡಿದ ಪ್ರತಿಫಲವೆಂದು ನಾವು ನೀಡುವ ಫಲ ಪುಷ್ಪ ಉಡುಗರೆ ಕಾಣಿಕೆಗಳನ್ನು ಸ್ವೀಕರಿಸಿರಿ. ತಾಯಿ ಪಾರ್ವತೆಮ್ಮ ಗೌಡರೆ ಎಲ್ಲರೂ ಇಲ್ಲಿಯೇ ಪ್ರಸಾದ ತೆಗೆದುಕೊಳ್ಳಿ. (ಹರ ಹರ ಮಹಾದೇವ ಎನ್ನುವ ಜಯಘೋಷದೊಂದಿಗೆ ಕಾರ್ಯಕ್ರಮ ಮುಕ್ತಾಯವಾಗುವದು.)

===***====***===

# ದೃಶ್ಯ ೧೦

ಬೀದಿಯಲ್ಲಿ ಡಂಗುರದವನು ಸಾರುತ್ತ ಬರುವನು

(ತೆರೆಯಲ್ಲಿ)

**ಭರಮಾ** — ಕೇಳ್ರಪೊ ಕೇಳ್ರಿ ಹೆಳ್ಲಿಲ್ಲಾ ಅಂದೀರಿ ಕೇಳ್ಲಿಲ್ಲಾ ಅಂದೀರಿ ನಮ್ಮೂರ ಸರದಾರ ಸುಭೇದಾರ ದೇಸಾಯಿ ದೇಶಪಾಂಡೇರು, ಶೆಟ್ರು, ಸಾವುಕಾರ್ರು ಕೂಡಿ ಕಟ್ಟಿಸಿದ ಸಭಾ ಮಂಟಪದ ಸದುರು ನಮ್ಮ ದೇಶದ ದೊರಿ ಏರಾವರ ಅದಾರ. ಇದ್ಯವಂತ್ರು ಬುದ್ಧಿವಂತರು ಪಂತ್ರು ಪಾತರದಾರು ಡೊಂಬರು ಡೋಲಿನಾರು ಮ್ಯಾಳಾ ಮಜಲಿನಾರು ಮಂತ್ರ ತಂತ್ರ ತಿಳಿದಾರು ಪಂಚಾಂಗ ಹೊತಿಗಿ ಹೇಳಾರು ಯಾರಿದ್ದರೂ ತಮ್ಮ ಇದ್ಯ ಬುದ್ಧಿ ತೋರಿಸಿ ಸದರ ಏರಿದ ದೊರಿ ಕೈಲೆ, ಇನಾಮು ಬಕ್ಷಿಸು ತಗೊಂಡ ಹೋಗಬೇಕು... (ಎಂದು ಬರುವನು.)

**ತಿರುಕ** — (ಬರುತ್ತಾ) ಲೇ ಅವಿವೇಕಿ ನಿಮ್ಮ ಗೌಡ್ರು ಇಷ್ಟ ಹೇಳ್ಯಾರೋ ಮತ್ತೇನಾದ್ರು ಹೇಳ್ಯಾರೋ.

**ತಿಪ್ಪವ್ವ** — (ಬರುತ್ತಾ) ಎಲ್ಲಾ ಹೇಳ್ಯಾನಲ್ಲ ಭಟ್ಟರ ಮತ್ತೇನು ಹೇಳಬೇಕು.

**ತಿರುಕ** — ಅಲ್ಲವ್ವ ನಿನಗ್ಯಾಕ ಬೇಕು ನಮ್ಮ ವಿಚಾರ ಬಂದ ದಾರಿ ಹಿಡದ ಹೋಗು ತಾಯಿ.

**ತಿಪ್ಪವ್ವ** — ಅಯ್ಯ ನೀವ್ಯಾಕ ಸಿಟ್ಟಿಗೆ ಬರತೀರಿ! ಹೇಳ ಎಪಾ ಇನ್ನೊಮ್ಮೆ ಅಂತ ಹೇಳು. ಅವರು ಹೊತಿಗಿ ಪತಿಗಿ ಹೇಳತಾರ ಏನಾರ ಇನಾಮು ಸಿಕ್ಕೀತಂತ ಕೇಳ್ತಾರ.

**ತಿರುಕ** — ಅಂದ್ರೇನು ನಮ್ಮಲ್ಲಿ ಇನಾಮು ತಗೊಳ್ಳೋ ಯೋಗ್ಯತಾ ಇಲ್ಲಾ ಅಂತಾ ತಿಳದೀ ಏನು?

**ತಿಪ್ಪವ್ವ** — ನನಗ ಗೊತ್ತೈತೇಳ್ರಿ ನಿಮ್ಮ ಹೇಳ್ಕಿ ನನಗಂಡ ಹೇಳಿದ್ದಾಂಗ

ಕೇಳೋಹಂಗ ಮಾಡ್ತೀನಿ ಅಂತ ನಿಮ್ಮ ಹಸಿಬಿ ತುಂಬಿಸಿಕೊಂಡು ಹೋದ್ರಿ, ಮಕ್ಕಳಾಗೋ ಯಂತ್ರ ಮಾಡಿಕೊಡ್ತೀನಿ ಅಂತ ಹಸಿಬಿ ತುಂಬಿಕೊಂಡು ಹಣ ಸುಲಕಂಡು ಹೋದ್ರಿ ಏನೂ ಆಗಲಿಲ್ಲ. ಅಷ್ಟ ಅಲ್ಲ ಅಗಸರ ಮುದಿಕಿ ಕತ್ತಿ ಕಳದ ಹೇಳ್ಕಿ ಹೇಳಬಾರದ ಹೇಳಿ ಬೆಳತನ ಅಗಳತ ಕಾದು ಕತ್ತಿ ಹುಡ್ಕಿ ಹಿತ್ತಲ ಬಾಗಲದಾಗ ಹೊಗ್ಸಿ ಬಂದ ಸುದ್ದಿ ನನಗೇನ ಗೊತ್ತಿಲ್ಲನಬ್ಯಾಡ್ರಿ

**ತಿರುಕ –** ಸುಮ್ಮನೆ ಹೋಗು ತಿಪ್ಪವ್ವ ನನ್ನ ಸಿಟ್ಟಿಗೆ ತರಸಬೇಡ. ಸಿಟ್ಟು ಬರಬಾರದ ಬಂದರ... ಹುಂ ನನ್ನ ಯೋಗ್ಯತಾ ಹೇಳಿ ಕೇಳಿ ಈ ಹಳ್ಳಿ ಹೆಂಣಿಗೇನು ಗೊತ್ತಾಗಬೇಕು. ನೋಡತಿರು ತಿಪ್ಪವ್ವ ನಾನು ಯಾರ ಏನು ಅನ್ನೋದು ಧೊರಿಗೆ ಗೊತ್ತಾದ ಕೂಡಲೇ ಮುಂಗೈಗೆ ಬಂಗಾರದ ಖಡೇ ಹಾಕಿ ಸನ್ಮಾನ ಮಾಡೋದನ್ನು ನೋಡ್ಲಿಕ್ಕ ಬರುವಿಯಂತೆ.

**ತಿಪ್ಪವ್ವ –** ಬರ್ತಿನೇಳ್ರೀ ಬರತೀನಿ ನಿಮ್ಮ ಮಕಕ ಮಂಗಳಾರತಿ ಮಾಡಾಕ ಜೋಡ ಕಳಸ ತರತೀನಿ ಭಟ್ಟರS ಯಾವಾಗ ಬರಲಿ ಎಷ್ಟೊತ್ತಿಗೆ ಬರಲಿ ಅದಾರ ಹೇಳಿಬಿಡ್ರಿ.

**ತಿರುಕ –** ಅದನ್ನ ಈ ಮುಂಡೇಮಗ ಹೇಳ್ಲಿಲ್ಲಾ

**ಭರಮಾ –** ಹೌದಲ್ರೀ ಅದನ್ನ ಬಿಟ್ಟು ಹೇಳಿದ್ದಂಗ ಆಗ್ತೈತೆ. ಕೇಳ್ರಿಪೋ ಕೇಳ್ರಿ ನಾಳೆ ಚೆಂಜಿಮುಂದ ಐದು ಘಂಟೇಕ (ಎಂದು ಮೊದಲಿನಂತೆ ಕೂಡಿಸಿ ಹೇಳಿ ಹೋಗುವನು.)

**ತಿರುಕ –** ತಿಪ್ಪವ್ವ ನಿನ್ನ ಗಂಡ ಮನೀವಳಗ ಇದ್ದನೇನು.

**ತಿಪ್ಪವ್ವ –** ಮಠಕ ಹೋಗ್ಯಾನರಿ ಗವಿಮಠಕ

**ತಿರುಕ –** ಯಾಕ ಅಲ್ಲೇನು ಕೆಲಸ ?

**ತಿಪ್ಪವ್ವ –** ನಿಮ್ಮ ಹಂತೇಲ ಐತೇನು ಕೆಲಸ. ಭಟ್ಟರS ಇನ್ನ ಕಾಲ ಮುಗೀತು. ನಿಮ್ಮ ಹೊತಿಗಿ ಗಂಟು ಹೊಳೀಗೆ ಹಾಕ್ರಿ. ಮಾರಾಯಾ, ದೇವ್ರು ಬಂದಾಂಗ ಬಂದಾನ ನಮ್ಮಪ್ಪ ಊರಿಗೆ. ಊರS ದರಶನಕ ಹೋಕೈತೆ ಯಾರ್ಯಾರ ಮನಸಿನಂತೆ ಆಕೈತೆ ನೀನು ಹೋಗು ಬೇಕಾದ್ರ ಏನಾರ ಕೇಳಿಕ್ಯಾ (ಎಂದು ಹೋಗುವಳು)

**ತಿರುಕ –** ಎಲ್ಲಿ ಹೋದ್ರುS ಅವನ ಮಾತS ಮಾತು ಬುದ್ಧಿ ಇಲ್ಲದ ಜನ ಬೆನ್ನ ಹತ್ಯಾವ ಹತ್ತಲಿ.

**ಬಾಳ್ಯಾ** – (ತೆರೆಯಲ್ಲಿ ಬಾಯಿ ಮಾಡುತ್ತ) ಲೇ ವಬ್ಬಬ್ಬಾವನ್ನ ನೋಡ್ತೀನಿ ಬರ್ರೆಲೆ, ಬೈಲಿಗೆ ಕಾಲ ಮ್ಯಾಲ ಕಾಲಿಇಟ್ಟು ಸೀಳಿ ವಗಿದಿದ್ರ ನಾನು ಜಾತಿ ಮಗನS ಅಲ್ಲ.

**ತಿರುಕ** – ಏನೋ ಬಾಳು. ಏನ ಅಗೇದ ಕೊಂಬುಕಿತ್ತ ಆಡು ಅರಸಿಧಾಂಗ ಅರಸ್ತಾ ಇದ್ದಿಯಲ್ಲೋ ಏನ ಆಗೇದ.

**ಬಾಳ್ಯಾ** – ನಮದ ನಮಗS ಆಗೈತೆ ಹೋಗ ಹೋಗರೀ ಭಟ್ಟರ. ವಂದುಕ್ಕೈ ನೋಡಿ ಭಿಟ್ಟೇನು.

**ತಿರುಕ** – ಆಗೇದೇನೋ

**ಬಾಳ್ಯಾ** – ಎಲ್ಲಾರೂ ಹರಿಚಂದ್ರನ ಮಕ್ಕಳ ಆಗಾಕ ಹೊರಟಾರರೀ ವಂದಕ್ಕೈ ನೋಡೇ ಬಿಡ್ತೀನಿ.

**ತಿರುಕ** – ಈಗೇನಾತು ಹೇಳೋ

**ಬಾಳ್ಯಾ** – ಹೋಗು ಹೋಗ್ರಿ ಆದರ ನಾಕು ವರುಷ ಜೇಲು ಅದೀತು. ಅಷ್ಟS ಅಲ್ಲ. ಹೇಳ್ಯಾರ ಹೇಳೋ.

**ಬಾಳ್ಯಾ** – ನೋಡ್ರೀ ಭಾಳಾ ದಿವ್ಸಲಿಂದನು ನಾನು ಸಂಣಾವ ಇದ್ದಾಗಲಿಂದಾನು ಮಠದ ಹೊಲ ಮಾಡಿಕೆಂತಾ ಬಂದಿದ್ವಿ

**ತಿರುಕ** – ಈಗೇನಾತು.

**ಬಾಳ್ಯಾ** – ವಕ್ಕಲಿ ಆತರೇ, ಆಗಿಂದೆ ಕೋರುಪಾಲಿಗೆ ಬಂದ್ವು ಅವರ ಪಾಲಿನವ್ರು ನಾಕುಚೇಲ ಜ್ವಾಳಾ ವೈದು ಹಚ್ಚಿದ್ವಿ, ಹೊಸಾ ಸ್ವಾಮಿಗೇ ಯಾರ್ಯಾರು ಏನೇನು, ಹೇಳ್ಯಾರೋ ಏನೊ ಸವಗೋರು ಕೊಟ್ಟೆಲ್ಲಾ ಇನ್ನೂ ಎಂಟು ಚೀಲ ಕೊಡು ಅಂತಾರ. ವಾಜಿಮಿ ಏನ್ರಿ ಇದು? ಅಲ್ಲಾ ಬಿತ್ತಿದಾರು ನಾವು, ಬೆಳದಾರು ನಾವು, ಇರ್ಲಿ ಅಂತ ವೈದು ಕೊಟ್ರ ನಮ್ಮಮ್ಯಾಲೀ ಕಳವು ಹೊರಸಬೇಕೇನ್ರೀ? ಹೊಲ ಇವರ ಅಜ್ಜ ಮುತ್ಯಾ ರೊಕ್ಕ ಕೊಟ್ಟು ಕೊಂಡಿದ್ರೇನ್ರಿ, ಏನಾರ ಆಗ್ಲೀ ನೋಡೇ ಬಿಡ್ತೀನಿ ವಂದಕ್ಕೈ.

**ತಿರುಕ** – ಇದಕೇನು ಮಾಡಬೇಕೂ ಅಂದಿ

**ಬಾಳ್ಯಾ** – ವಬ್ಬಬ್ಬವನ್ನ ಕರುಗಲ್ಲಿಗೆ ಏಡಿಮಾಡ್ತೀನಿ.

**ತಿರುಕ** – ಹುಂ ಅಷ್ಟಮಾಡು ಹೋಗುವಂತೀ ಕಂಬ ಇಲ್ಲಿದ ಮನೀ ಜಂತೀ

ಎಣಿಸಲಿಕ್ಕೆ. ಮಕ್ಕಳೂ ಮರೀ ಇಲ್ಲಿ ಹೆಂಡತೀ ಪರದೇಸಿ ಮಾಡಿ ತಿರಕೊಂಡು ತಿನ್ನಲಿಕ್ಕೆ ಹಚ್ಚೀಯಂತೆ,

**ಬಾಳ್ಯಾ —** ನೀವ ಹೇಳ್ರಿ ಮತ್ತೇನು ಮಾಡಂದ್ರಿ

**ತಿರುಕ —** ನೀನು ತಯಾರು ಇದ್ರ ಸಾಕೇನಪಾ.

**ಬಾಳ್ಯಾ —** ಎಲ್ಲಾದಕೂ ತಯಾರ ಆಗೇ ನಿಂತೀನಿ ಭಟ್ಟರ, ಪಾಪ ಸುಳ್ಳ ಅನಬಾರದು. ದೊಡ್ಡ ಸ್ವಾಮೇರು ಹೀಂಗ ಇದ್ದಿಲ್ಲಿರಿ ಏಟS ಕೊಡ್ಲೀ ಶಿವಾ ಅಂತಿದ್ರು. ಈ ಹೊಸ ಸ್ವಾಮಿ ಬಂದು ಏನೇನ ಮಾಡಾಕ ಹತ್ಯಾನ ಮಾಡ್ಲಿ. ಮಾಡ್ಲಿ ಎಲ್ಲೀತನಕಾ ಮಾಡತಾನೋ ನೋಡ್ತೀನಿ, ಅದೂ ನಾಕು ಮಂದಿ ಎದುರಿಗೇನ ಅಪಮಾನ ಅಗೇತೆ.

**ತಿರುಕ —** ಹಾಂಗಿದ್ರ ಅಡ್ಡಿ ಇಲ್ಲಪಾ

**ಬಾಳ್ಯಾ —** ಹೇಳ ಹೇಳ್ರೀ ನಮಗೆ ತಡೀವಲ್ಲದು.

**ತಿರುಕ —** ನೋಡೇನಪಾ ನಮ್ಮಲ್ಲಿ ಪಂಚ ಪಾಷಾಣದ ರಸದೊಳಗ ತಯಾರ ಮಾಡಿದ ಮಾತ್ರೆ ಅವ. ವಂದ ವಂದು ಮಾತ್ರೆ ಹೊಟ್ಟೆಯೊಳಗ ಹೋತು ಅಂದ್ರ ಸಿದಗಿ ಸಜ್ಜು ನೋಡೇನಪಾ ನಿನ್ನ ಮನಸ್ಸು ಹ್ಯಂಗ ಅದ.

**ಬಾಳ್ಯಾ —** ಅಯ್ಯ ಇದೇನು ದೊಡ್ಡಾ ಆಗಾಧ ಬಿಡ್ರಿ. ಮಠದಾಗ ಸ್ವಾಮೇರಿಗೆ ಅಡಗಿ ಮಾಡವನ ನನ್ನ ಕೈಯಾಗ ಅದಾನ. ಅವನ ಕಳವು ನನ್ನ ಕೈಗೆ ಜಗ್ಗ ಸಿಕ್ಕಾವ. ಕಾಳಿಗೆ, ಕಾಳ, ಹೊಟ್ಟು ಮೇವು ದನಾಕರ ಕಂಣಿಗೆ ಬಿದ್ದಿದ್ದು, ಕೈಗೆ ಸಿಕ್ಕಿದ್ದು ಬಿಟ್ಟಿಲ್ಲ ಅವನು ನನ್ನ ಕೈಯಾಗ ಅದಾನ.

**ತಿರುಕ —** ಹಾಗಿದ್ರ ನಿನ್ನ ಕೆಲಸ ಆತು ಅಂತ ತಿಳಿದು ಬಿಡು.

**ಬಾಳ್ಯಾ —** ಕೊಡರಿ ಮೊದಲ ಕೊಡ್ರಿ ಅವನ ಮುಗಿಸೇ ಮೈ ತೊಕ್ಕೊಂತೀನಿ.

**ತಿರುಕ —** ಅವೆಲ್ಲ ನಿಂತಕಾಲಮ್ಯೆಲೆ ಕೊಡೋ ವಸ್ತು ಅಲ್ಲ ಮನೀಗಿ ಹೋಗಾನ ಅಲ್ಲೆಲ್ಲ ಹೇಳಿ ಕೊಡ್ತೀನಿ ನಡಿ ಹೋಗೋಣ.

ಮಧ್ಯಂತರ

===***====***====

# ದೃಶ್ಯ ೧೧

ರಾಜದರ್ಬಾರು. ಹೈದ್ರಾಬಾದಿನ ಮೀರಾಲಂ ಬಹಾದ್ದೂರರು ಸಿಂಹಾಸನದ ಮೇಲೆ ಕುಳಿತಿದ್ದಾರೆ. ಊರಪ್ರಮುಖರು ಕುಳಿತಿದ್ದಾರೆ ತಿರುಕಂಭಟ್ಟರು ವಳ್ಳೇ ಗಾಂಭೀರ್ಯದಿಂದ ಬಂದು ಕುಳಿತ ನಂತರ ಮನರಂಜನೆಯ ಅಂಗವಾಗಿ ನೃತ್ಯ ಆರಂಭವಾಗುವದು.

**ನೃತ್ಯಗೀತೆ**

**ರಾಗ : ಕೇದಾರ**

ನಾಚರೇ ಮಯೂರ ನವನಾಟ್ಯ ಮಂದಿರಮೆ ॥ ನಾಚರೇ ॥
ನವರಾಗ ತಾಲಮೇ ನವರಸ ಭಾವಮೇ ನವಕಾವ್ಯ ಗಾನಮೇ ನವರಂಗ ಛಾಯಮೇ ।

ಛಮಕ, ಛಮಕ, ಛಲಕೇ ನಜರೇ । ಠುಮಕ ಠುಮಕ ಚಾಲಹೈ ತೇರೆ ।
ಅಂಗ ಅಂಗಮೇ ಮನಕೀ ಉಮಂಗ । ಸಂಗಸಂಗಮೇ ಭರೇ ಹೈ ರಂಗ । ॥ ನಾಚರೇ ॥

ಗುಂಗರಬಾಜೇ ಝುನನ ಝುನ್, ಮೃದಂಗ ಬಾಜೇ ತನನ ತನ್ ।
ಬಹಾರೊಂಸೆ ಫೂಲಬರಸೇ ಗೀತೆ ಗೊಂಜ ಉಠೇ ದಿಲಸೇ ॥ ನಾಚರೇ ॥

(ಬಹುಮಾನ ಪಡೆದು ನರ್ತಕಿಯು ಹೋದ ನಂತರ : ಮಾಲಿಗೌಡರು ಎದ್ದು ನಿಂತು ಪರಿಚಯ ಮಾಡಿ ಕೊಡುವರು)

**ಮಾಲಿಗೌಡ –** ಹುಜೂರು ಇವರು ಮರಿಚೇಡಿನ ಜಹಾಗೀರದಾರರು. ಇಲ್ಲಿಯ ಸಮೀಪದಲ್ಲಿಯು ಬೆಟಗೇರಿಯುನ್ನೇ ತಮ್ಮ ವಾಸಸ್ಥಾನ ಮಾಡಿಕೊಂಡಿದ್ದಾರೆ.

**ಹು.ನಾಗಪ್ಪ –** ಸ್ವೀಕರಿಸಬೇಕು. ಹುಜೂರು ಇದು ಬಡವನ ನಜರಾನಾ.

**ಮಾಲಿಗೌಡ –** ಹುಜೂರು ಇವರು.

**ಮೀರಾಲಂ –** ಹಮ್ ಜಾನತೇ ಹೈಂ ಷಾಯದ್ ಅಪಕೊ ಮಾಲುಮು ನಹಿ

ಹೋಗಾ ಕೆ ಅಪ ಕ್ಯಾಥೆ ಔರ ಕ್ಯಾಸೇ ಕ್ಯಾ ಬನೇ ಇನ್ ಸಾನ ಅಪನಿ ಸಚ್ಚಾಯಿ ಔರ್ ಈಮಾನ ದಾರೀಸೆ ಅಪನೇ ಸೋಯೀ ಹುಯಿ ಕಿಸ್ಮತ್‌ಕು ಜಗಾ ಸಕ್ತಾಹೈ ಆನೇವಾಲೀ ಹಂ ಮುಸೀಬತ್‌ಕಾ ಸಾಮನಾ ಕರನಾಪಡೇ ತೋಭಿ ಸಹಕರ ಮಂಜಿಲೇ ಮುಖಸೂದ ಪಹುಂಚತಾ ಹೈ. ಖುದ್ ಭೀ ಜೀಯೇಗಾ ಔರ ಹಮ್ ರಾಹಿ ಯೋಂಕು ಜೀನಾ ಸಿಖಾಯೇಗಾ ಉಸೀ ಖಿಸಮ್‌ಕಾ ಚಲಿತಾ ಫಿರತಾ ಸಬೂತ ಆಪ ಹೈಂ. ಆಪ ದರಬಾರಿಯೊಂಸೆ ಹಮ್ ದರಖಾಸ್ತ ಕರತೆ ಹೈಂ ಅಪಲೋಗ ಭೀ ನಾಗನಾಥ ರಾಜಾ ಬನನೇಕೀ ಜೋಶಿಸ್ ಕರೇ.

ಹು.ನಾಗಪ್ಪ – ಧನ್ಯನಾದೆ ಹುಜೂರ, ತಾವಿಟ್ಟ ವಿಶ್ವಾಸವನ್ನು ಕೊನೆಯವರೆಗೂ ಕಾಯ್ದುಕೊಂಡು ಬರುವೆ. ಪ್ರಭುಗಳ ಹಿತಚಿಂತನೆಯಲ್ಲಿ ಆಸಕ್ತಿ ವಹಿಸಿ, ಪ್ರಾಣವನ್ನು ಪಣಕ್ಕೆ ಹಚ್ಚಿ ಶಕ್ತಿ ಮೀರಿ ದೇಹದಲ್ಲಿ ಕೊನೆಯುಸಿರು ಇರುವ ವರೆಗೆ ಪ್ರಾಮಾಣಿಕ ಜೀವನವನ್ನು ನಡೆಯಿಸಿಕೊಂಡು ಬರುವೆನೆಂದು ಪ್ರಮಾಣ ಪೂರ್ವಕ ಭರವಸೆಯನ್ನು ನೀಡುತ್ತೇನೆ.

ಮೀರಾಲಂ – ಹಮ್ ಬಹುತ ಖುಷ್ ಹೈಂ.

ಮಾ.ಗೌಡ – ಹುಜೂರ, ಹುಜೂರ ಇವರು ನಮ್ಮೂರ ಪ್ರಮುಖ ಶ್ರೀಮಂತರು. ಇವರು ದೇಸಾಯಿಗಳು... ಇವರು ಪ್ರತಿಭಾನ್ವಿತ ಕವಿಗಳು.. ಇವರು ಶಿಲ್ಪ ಕಲಾಕುಶಲರು... ಇವರು ಸಂಗೀತ ವಿದ್ವಾಂಸರು... ಇವರು ನಮ್ಮ ಅಧಿ ದೈವವಾಗಿ ವೀರಶೈವ ತತ್ವ ಶಾಸ್ತ್ರ ಸಂಪ್ರದಾಯಗಳ ತವರು ಮನೆಯಾಗಿ... ಸುಮಾರು ಏಳುನೂರು ವರುಷಗಳ ಹಿಂದೆ ರುದ್ರಮುನಿ ಸ್ವಾಮಿಗಳ ಪ್ರಥಮ ಪಾದಾರ್ಪಣೆಯೊಂದಿಗೆ ಹೊಳೆಯ ಹಂಪಯ್ಯನವರೆಂಬ ಸದ್ಭಕ್ತರ ನೆರವಿನಿಂದ ಕಟ್ಟಲ್ಪಟ್ಟ ಶ್ರೀಮಠದ ಪಟ್ಟಾಧಿಕಾರಿಗಳಾದ ಗವಿಸಿದ್ಧೇಶ್ವರ ಮಹಾಸ್ವಾಮಿಗಳ ಪ್ರತಿನಿಧಿಗಳು.

ತಿರುಕ – (ಎದ್ದು ನಿಂತು) ಕ್ಷಮಾ ಹುಜೂರ ಗೌಡರೇ, ನಿಮಗೆ ಬೇಕಾದವರನ್ನು ಎತ್ತಿಕಟ್ಟಿ ಇಲ್ಲದ ಗೌರವ ಘನತೆಗಳನ್ನು ಕಲ್ಪಿಸಿ ಕಥೆ ಕಟ್ಟುತ್ತಾ ಬೇಡಾದವರ ಬಗ್ಗೆ ಅನಿವಾರ್ಯವೆಂದು ಅಲ್ಪ ಪರಿಚಯ ಮಾಡಿಕೊಡುವ ಈ ಹೊಸ ರಾಜಕಾರಣವನ್ನು ಅದೆಂದಿನಿಂದ ಕಲಿತುಕೊಂಡಿರಿ.

**ಮೀರಾಲಂ** — ಆಪಕಿ ತಾರೀಫ

**ಮಾ.ಗೌಡ** — ಇವರು ನಮ್ಮೂರಿನ...

**ತಿರುಕ** — ಹುಜೂರ, ನಾವು ನಿಷ್ಠಾವಂತ ಶಕ್ತಿ ಉಪಾಸಕರು. ರಮಲಶಾಸ್ತ್ರ ಜೋತಿಷ್ಯ. ಅಗದೀ ನಿಖರ ಪದ್ಧತಿಯಿಂದ ಹೇಳಬಲ್ಲೆವು. ಹುಟ್ಟಿದ ಕೂಸಿನ ನಾಮ ನಕ್ಷತ್ರಗಳ ಮೇಲಿಂದ ಇವರ ಇಡೀ ಜೀವನದ ಆಗು ಹೋಗುಗಳನ್ನೆಲ್ಲ ಹೇಳಬಲ್ಲೆವು. ವೈದ್ಯಕೀಯದಲ್ಲಿಯೂ ನಮ್ಮನ್ನು ಸರಿಗಟ್ಟುವವರು ಯಾರಾರೂ ಇಲ್ಲ. ಸಾವು ಸಮೀಪವಾಗಿದ್ದರೂ ಸಂಜೀವಿನಿ ಮಾತ್ರೆಯಿಂದ ಪುನಃ ಪ್ರಾಣದಾನ ಮಾಡಬಲ್ಲೆವು. ವೈದ್ಯವಾಚಸ್ಪತಿ ಹೋರಾರತ್ನ ಪಂಡಿತ ಶಕ್ತಿಮಾತೆಯ ಸಾಕ್ಷಾತ್ ವರಪುತ್ರ ಅಂದರೆ ನಾವೇ.

**ಮೀರಾಲಂ** — ಖೂಬ ಬಹುತ ಖೂಬ. ತೋ ಆಪಸೇ ಹಮ್ ಕುಛ ಪೂಛನಾ ಚಾಹತೇ ಹೈಂ. ಸೋಚ ಸಮಜಕರ ಜವಾಬ ದೇನಾ ಜೋತಿಷೀ.

**ತಿರಕಂ** — ಓಹೊ ಅವಶ್ಯ ಕೇಳಿ ಹುಜೂರ. ನಿಮ್ಮ ಜನ್ಮ ನಕ್ಷತ್ರ ಗೊತ್ತಿದ್ದರೆ ಹೇಳಿ ನಿಮ್ಮ ಇಡೀ ಜೀವನದ ಭವಿಷ್ಯ ಹೇಳಿ ಬಿಡ್ತೀನಿ.

**ಮೀರಾಲಂ** — ಗಲತ್, ಸಲತ್ ಜವಾಬ ಮಿಲಾತೋ... ಯಾದ ರಖೋ.

**ತಿರುಕ** — ಇದ್ದದ್ದು ಇದ್ದಂತೆ ಹೇಳುವದರಲ್ಲಿ ನಾವು ಎತ್ತಿದ ಕೈ ಕೇಳಿ ನೋಡಿ ವಂದೇಕೆ ಹತ್ತು ಪ್ರಶ್ನೆ ಕೇಳ್ರೀ.

**ಮೀರಾಲಂ** — ಯಾದ ರಖೋ ಕೆ, ತುಮ್ ತುಮ್ ನಹೀ ರಹೇಂಗೆ.

**ತಿರುಕ** — ಅವಶ್ಯ ಕೇಳ್ರೀ ಪಣಾ ಕಟ್ಟಿ ಹೇಳ್ತೀನಿ.

**ಮೀರಾಲಂ** — ದೇಖೋ ಗಲತ್ ಜವಾಬ ಮಿಲಾ ತೋ ಜೇಲ ಭೇಜನಾ ಪಡೇಗಾ ಯಾ ನಹೀ ಗರದನ್ ಭೀ ಉಢಾಯಾ ಜಾಯೆಗಾ.

**ತಿರುಕ** — ಅದಕ್ಕೇನು ಹುಜೂರ ಅದೂ ಆಗಲಿ, ಕೇಳ್ರಿ ಹತ್ತುಸಲ ಕೇಳ್ರಿ,

**ಮೀರಾಲಮ** — (ಸಿಟ್ಟಿನಿಂದ ಜೋರಾಗಿ) ಹೋಷ್‌ಹವಾಸಕೆ ಸಾಥ ಜವಾಬದೇನಾ ಹುಂ. ಬೋಲೋ ಕಲ ಕ್ಯಾದಿನ್ ಹೈ ಅವುರ ಸಿತಾರೊಂಕಾ ಚಾಲ ಕ್ಯಾ ಹೈ.

**ತಿರುಕ** — (ತಡವರಿಸುತ್ತಾ) ನಾ ನಾ ನಾ ನಾಳೇ ಉತ್ರಭಾದ್ರಪದ ನಕ್ಷತ್ರ ಅದ ಅಭಿಜಿತ್ ಯೋಗ ಅದ, ಸೂರ್ಯ ಆರುಮುಕ್ಕಾಲು ಘಂಟೆಗೆ

ಹುಟ್ತಾನ. ಏಳು ಘಂಟೆಗೆ ಮುಳಗತಾನ. ಮೇಲಾಗಿ ನಾಳೆ ತುಂಬಿದ ಹುಣ್ವಿ ಅದ ಏನಾದ್ರು ಹೊಸ ಕೆಲಸ...

**ಮೀರಾಲಂ –** ಬಂದ್ ಕರೋ ಬಕವಾಸ ಬೋಲೋ ಕಲ್ ಕ್ಯಾ ಹೈ

**ತಿರುಕ –** ನಾಳೆ ಹುಣ್ವಿ ಅದ ಪೂರ್ಣ ಚಂದ್ರಯೋಗ ಅದ

**ಮೀರಾಲಂ –** ಕ್ಯಾ ಬೋಲಾ ಕಲ್...

**ತಿರುಕ –** ಹುಣ್ವಿ ಅದ.

**ಮೀರಾಲಮ –** ಆಪಲೋಗ ಚುಪ್‌ರಹೇ ಕ್ಯಾ ಜೋತಿಷಿ ಕಲ್ ಪೂನಮ್ ಹೈನಾ,

**ತಿರುಕ –** ಹೌದು ಹುಜೂರು ನಾಳೆ ಹುಣ್ವಿ ಅದ.

**ಮೀರಾಲಂ –** ತೊ ಆಪ ಭರಿ ದರಬಾರಕೋ ಚಾಂಧ ದಿಖಾಯೇಂಗೆ

**ತಿರುಕ –** ಓಹೋ ಅದರಲ್ಲೇನು ಮಹಾ ಹುಜೂರು ಹೇಳಿ ಕೇಳಿ ಹುಣ್ವಿ ಅದ ಚಂದ್ರಕಾಣಿಸಲಿಕ್ಕಿಲ್ಲ ಓಹೋ ತೋರಸ್ತೀನಿ.

**ಮೀರಾಲಂ –** ಕೋನ ಹೈ ಲೇಜಾವ ಇಸ ಪಾಖಂಡಿಕು ನಜರ್ ಬಂದ ಮೆ ರಖೋ. ಅವುರ ದೂಸರಾ ಹುಕುಂಕಾ ಇಂತೆಜಾರ ಕರೋ ಐಸೇ ಬದ್ ಚಲನ್ ಬದ್ ತಮೀಜ ಅವುರ ಇನ್ಸಾನೀಷ ಕಲ್ ಕೆ ಸೈತಾನೊಂಕು ಜರೂರು ಸಜಾಮಿಲನಾ ಚಾಹಿಯೇ.

**ತಿ.ಭಟ್ಟ –** ನಿಜವಾಗಿಯ್ ಹುಣ್ವಿ ಅದ ಹುಜೂರು

**ಮೀರಾಲಂ –** ಲೇ ಜಾವ. (ಸಿಟ್ಟಿನಿಂದ ಎದ್ದು ಹೋಗುವನು) ಸಭೆಯ ಕೂಡಿದ ನಾಗರೀಕರು ಮಾತಾಡುತ್ತಾ ಬರುತ್ತಿದ್ದಾರೆ.

**ಮಾಲಿಗೌಲ –** ಗೌಡರೇ ನಮ್ಮ ಭಟ್ಟರಿಗೇನು ಗ್ರಹಚಾರ ಕೆಟ್ಟಿದೆಯೋ ತಲೆಕೆಟ್ಟಿದಿಯೋ ದೇವರೇಬಲ್ಲ ಬೀದಿಯಲ್ಲಿ ಆಡುವ ಮಕ್ಕಳನ್ನು ಕೇಳಿದರೂ ಅಮವಾಸ್ಯೆಯಂದೇ ಹೇಳುವರಲ್ಲದೆ ಹುಣ್ವಿ ಎಂದು ಎಂಥವರೂ ಹೇಳಲಿಕ್ಕಿಲ್ಲ.

**ಪೋ.ಗೌಡ –** ದೈವಲೀಲೆಯನ್ನು ಬಲ್ಲವರಾರು ಅಂತೂ ಭಟ್ಟರಿಗೆ ಶಿಕ್ಷೆ ಕಟ್ಟಿದ್ದ ಬುತ್ತಿಯಾದೀತೇ?

**ಮಾಲಿಗೌಡ –** ಶಿಕ್ಷೆಯಾದರೆ ಅವನ ಪುಣ್ಯ ವಂದೆರಡು ವರುಷ ಅನುಭೋಗಿಸಿ ಬರಬಹುದು. ಆದರೆ ಧೊರೆಯ ಚಿತ್ತ ಯಾವದನ್ನು ಹೇಳಲಿಕ್ಕಾಗದು

ಅದರಲ್ಲಿಯೂ ಚಂದ್ರನನ್ನು ಬೇರೆ ತೋರಿಸುತ್ತೇನೆಂದು ಎದೆತಟ್ಟಿ ಹೇಳಿದ್ದಾನೆ.

**ಪೋ.ಗೌಡ** – ಗೌಡರೇ ಅವರಲ್ಲಿ ಆ ಶಕ್ತಿ ಏನಾದರೂ ಇರಬಹುದೇ

**ಮಾಲಿಗೌಡ** – ಚಂದ್ರನನ್ನು ತೋರಿಸುವದೂತ್ತಟ್ಟಿಗಿರಲಿ ತಲೆ ಉಳಿಸಿಕೊಂಡರೆ ಸಾಕು. ಅಬ್ಬಾ ಏನು ಅಹಂಕಾರ ಏನು ದರ್ಪ ಅವನ ದೃಷ್ಟಿಯಲ್ಲಿ ಮಹಾಮಹಿಮ ಸಿದ್ಧೇಸ್ವರ ಸ್ವಾಮಿ ಕಃ ಪದಾರ್ಥ

**ಪೋ. ಗೌಡ** –ಹೀಗೊ ಅಂತಹ ದುರಭಿಮಾನಿಯೇ

**ಮಾಲಿಗೌಡ** – ಅಷ್ಟೇ ಅಲ್ಲ ತನ್ನಗತ್ತಿಗೆ. ಸರಿಯಾಗಿ ತಾಳ ಹಾಕಲು ಊರ ಛೀಮಾರಿ ಕಮತರ ಬಾಳ್ಯಾನನ್ನು ಬಲಿಗೆ ಹಾಕಿಕೊಂಡು ತಿರುಗುತ್ತಿದ್ದಾನೆ.

**ಪೋ. ಗೌಡ** – ಅಂತೂ ವಳ್ಳೇ ಜೊತೆ, ಗುರುವಿಗೆ ತಕ್ಕ ಶಿಷ್ಯ (ಅಷ್ಟರಲ್ಲಿ ಹಗ್ಗದಿಂದ ಕಟ್ಟಿದ ಭಟ್ಟರನ್ನು ಹಿಡಿದುಕೊಂಡು ಬರುವರು)

**ಮಾ.ಗೌಡ** – ಭಟ್ಟರೆ ನಾಳೆ ಅಮವಾಸ್ಯೆ ಎನ್ನುವದು. ಸಹ ಗೊತ್ತಾಗಲಿಲ್ಲವೇ.

**ತಿರುಕ** – ಸುಮ್ಮನೇ ಹೋಗ್ರಿ ನಮತಲಿ ಕೆಡಿಸಬ್ಯಾಡ್ರಿ

**ಮಾ.ಗೌಡ** – ತಿಪ್ಪವ್ವ ಬಾ ಇಲ್ಲಿ ನಾಳಿನ ದಿವ್ಸ ಏನು ಇದೆ. ಹುಣ್ವಿಯೋ ಅಮಾವಾಸ್ಯೆಯೋ ನೀನಾದರೂ

**ತಿಪ್ಪವ್ವ** – ಅಮಾಸಿ ಅಲ್ಲೇನ್ರಿ ಹೇಳಿ ಕೇಳಿ ಆದಿತ್ಯವಾರ ಅಮಾಸಿ ಬಂದೈತೆ ಅಂತ್ರಾ ಕಟ್ಟಿಸಿಗೋಬೇಕಾಂತ ಮಾಡೀನಿ.

**ಮಾ.ಗೌಡ** – ನೀನಾದರೂ ಹೇಳು ತಾಯಿ ನಡೆಯಿರಿ (ಹೊರಟು ಹೋಗುವರು)

**ತಿಪ್ಪವ** – ಅಯ್ಯ ಇದೇನ್ರಿ ಭಟ್ಟರ ನಿಮ್ಮ ಆಕಾರ ದ್ಯಾಮವ್ವನ ಜಾತ್ರ್ಯಾಗ ಕ್ವಾಣಾ ಕಡಿಯಾಕ ವೈದಾಂಗ ವೈಯ್ಯಾಕ ಹತ್ಯಾರಲ್ರಿ ಮತ್ತು ಅದಕ.... ಏನು ಇನಾಮ ತಗೊಂಭರತಾರ ಕಳಸ ತಂಬೇಕಂತಾ ಮಾಡಿದ್ನೆಲ್ಲರಿ ಭಟ್ಟರ ಎಲ್ಲೈತೆ ನಿಮ್ಮ ಇಮಾನ ಸಿದಿಗೆ.

**ತಿರುಕ** – ಬಾಯಿ ಬಿಗಿ ಹಿಡದ ಮಾತಾಡು ತಿಪ್ಪವ್ವ, ನನ್ನ ಏನು**S** ಅಂತ ತಿಳಕೊಂಡೀ ನಾಳೇ ಹುಣ್ವಿ ಅದ ಚಂದ್ರನ್ನ ತೋರ್ಸೇ ತೋರಸ್ತೀನಿ.

**ತಿಪ್ಪವ್ವ** – ಇಲ್ಲಿಕ್ರ ಈತೆಲೆ ಕಳಗೊಂತೀರಿ ಅಷ್ಟ ಅಲ್ಲ.

**ತಿರುಕ –** ನೋಡ್ತಿರು ತಿಪ್ಪವ್ವ ತಲಿ ಕಳಕೊಳ್ತೀವೋ ಏನು ಬೆಲೆ ಬಾಳೋ ಇನಾಮ ತಗೊಳ್ತೀವೊ ನೋಡ್ತಿರು.

**ತಿಪ್ಪವ್ವ –** ಇನ್ನು ಬಿಡವಲ್ರ್ಯಾ ಮೂಗು ಹೋದ್ರು ಸೊಳ್ಳಿ ಅದಾವ ಅನ್ನೋದು ತಡಿ ನಿನ್ನ ಮಗನ್ನ ಕೇಳು.

**ಗೋವಿಂದ –** ಅಪಾ ಅಪಾ ಎಷ್ಟು ಹುಡುಕ ಬೇಕಪಾ ನಿನ್ನ ಎಲ್ಲಿ ಕೂತಿದ್ದೀ ಏನ ಸಿಕ್ಕಿತಪಾ ಇನಾಮು ತೋರ್‍ಸಪಾ. ಎಂಥಾದದ ಅದೇನ ತಿಂಬೋದು ಅದನ ಏನ ಉಡೋದ ಇಡೋದ ಯಾವದದಪಾ

**ತಿಪ್ಪವ್ವ –** ಅಲ್ಲ ಎಪಾ ಮರಿಭಟ್ಟರ ನೀನಾರ ಹೇಳಪಾ ನಾಳೆ ಹುಣ್ವೆ ಐತೇ ಅಮಾಸಿ ಐತೇ?

**ಗೋವಿಂದ –** ಅಮಾಸಿ ಅಲ್ಲೇನು ತಿಪ್ಪವ್ವ ಅಪಾ ನೀನ ಹೇಳಿದ್ದೆಲ್ಲಪಾ ಬೆಳಗಾದರ ಆದಿತ್ಯವಾರ ಅಮಾಸಿ ಅದ ದೇವಿಗೆ ಕುಂಕುಮ ಪೂಜಾ ಮಾಡಿ ನೈವೇತ್ಯಕ್ಕೆ ಖೀರು, ಪುರಿ, ಬಾಸಂದಿ, ಕೊಡಬಳಿ, ಮಾಡಿಸಬೇಕು ನೂರು ರೂಪಾಯಿ ಖರ್ಚು ಆಗ್ತದ ಅಂತ ಹಳೇಮನಿ ಮರಿಯಪ್ಪನ ಹೆಣ್ತಿ ದುರಗವ್ವನ ಕಡಿಂದಾ ಇಸಗೊಂಡಿದ್ದೆಲಪಾ ಮರತ ಬಿಟ್ಟೇನು, ಅದಕಂತನ ನಾನು ನಿನ್ನಿಯಿಂದ ಉಪಾಸ ಇದ್ದೀನಪಾ.

**ತಿರುಕ –** ಕೆಟ್ಟೆ ಗೋವಿಂದ ಕೆಟ್ಟೆ... ನನ್ನ ತಪ್ಪುಗಳಿಗೀಗ ಅರ್ಥವಾಗುತ್ತಿವೆ, ದುರಹಂಕಾರದಾವೇಶದಲ್ಲಿ ಚಿತ್ತ ಸ್ವಾಸ್ಥ್ಯ ಕಳೆದುಕೊಂಡು ದುಡುಕಿ ಕೆಟ್ಟೆ, ಅನ್ಯರ ಅವಹೇಳನ ಮಾಡುವ ಭರದಲ್ಲಿ ಮನಬಂದಂತೆ ಮಾತನಾಡಿ ಸಾವಿಗಾಮಂತ್ರಣವ ಕೊಟ್ಟೆ, ಧೊರೆಯ ದುರದೃಷ್ಟಿಗೆ ಬಲಿಯಾಗಿ ನತದೃಷ್ಟನಾದೆ, ನನಗಿನ್ನು ಮರಣವೇ ಮೀಸಲು. ವಿಧಿಯ ಮಾರಣ ಹೋಮಕ್ಕೆ ಬಲಿಯಾಗಬೇಕಾದ ಬಲಿಪಶು, ನನಗಿನ್ನು ಉಳಿಗಾಲವಿಲ್ಲ ದೊರೆಯಲ್ಲಿ ಕ್ಷಮೆ ಬೇಡಲೇ ಇಲ್ಲವೇ ನನ್ನ ಆರಾಧ್ಯ ಮೂರ್ತಿ ಮಹಾಮಾತೆ, ವಾತ್ಸಲ್ಯಮಯಿ ತಾಯಿ ಭಕ್ತ ರಕ್ಷಣೆಯ ಭಾರ ಹೊತ್ತ ಭಾರತಿಗೆ ಶರಣು ಹೋಗಲೇ, ಅಹುದು ಅವಳಿಂದಲೇ ಗತಿ ಅವಳಿಂದಲೇ ವಿಮುಕ್ತಿ ತಾಯೇ ಶಾಂಭವಿ ಭವಾನಿ ಆದಿಶಕ್ತಿ ಜಗದಂಬೆ ಜಗಜ್ಜನನಿ.

(ಎಳೆದುಕೊಂಡು ಹೋಗುವರು)

===***====***===

## ದೃಶ್ಯ ೧೩

(ಅಡವಿಯಲ್ಲಿ)

ಕಳ್ಳರ ನಾಯಕನು ರೂಪ್ಲ್ಯಾನೊಂದಿಗೆ ನಿಂತಿದ್ದಾರೆ.

**ನಾಯಕ –** ಈವರೆಗೂ ಬರಲಿಲ್ಲವೇ ನಿಮ್ಮ ತಂಡದವರು.

**ರೂಪಲ್ಯಾ –** ಇಲ್ಲ ಹಿರಿಯಾ ಇನ್ನೂ ಬಂದಂಗಾಗಲಿಲ್ಲ ಇಷ್ಟೊತ್ತಿಗೆ ಬರಬೇಕಾಗಿತ್ತು.

**ನಾಯಕ –** ಥೂತ್ ನಿಮ್ಮ ಮುಖಕ್ಕೆ ಬೆಂಕಿಬೀಳಲಿ ನೀವೂ ನಿಮ ತಂಡದವರು ಸೀರೆಯುಟ್ಟು ಜೋಗಮ್ಮಗಳಾಗಿ ತಿರುಪೆಬೇಡಲು ಯೋಗ್ಯರು. ಈ ಕಸಬು ಜೋಡುಗುಂಡಿಗೆಯವರಿಗೆ ಸಾಧ್ಯ ನಿಮ್ಮಂತಹ ಹೆಂಬು ಗುಂಡಿಗೆಯವರು; ಗಂಡು ರೂಪಿಗಳಿಗಲ್ಲ.

**ರೂಪಲ್ಯಾ –** ಏನು ಮಾಡೋದು ಹೋಗ್ರಿ ಒಪ್ಪತ್ತು ಕೂಳಿಗೂ ಗತಿ ಇಲ್ಲದಂಗಾಗೈತೆ.

**ನಾಯಕ –** ಥೂ ಹೇಡಿಗಳೇ ಇಂತಹ ಸಮೃದ್ಧ ಪರಿಸರದಲ್ಲಿದ್ದುಕೊಂಡು ಒಪ್ಪತ್ತು ಕೂಳಿಗೂ ಗತಿಇಲ್ಲವೆಂದು ಹೇಳಿಕೊಳ್ಳಲು ನಾಚಿಕೆಯಾಗುವುದಿಲ್ಲವೇ ಒಂದೇ ಒಂದು ಮನೆ ಮುರಿದರೆ ಸಾಕು ಅರು ತಿಂಗಳ ಕುಳಿತು ತಿನ್ನಬಹುದು.

**ರೂಪಲ್ಯಾ –** ಮನಿಯಾಕ ಮುರಿತೀರಿ ಬರೆ ದಾರಿಕಾರರನ್ನು ಸುಲಿದರ ಸಾಕು ದಿನಾ ಹಬ್ಬ ಮಾಡೇವು, ಏನ ಮಡತೀರಿ ನಾಯಕರS ನಮ್ಮ ಹಿರಿಯಾ ಬ್ಯಾಂಬ್ರ ಹೊಟ್ಯಾಗ ಹುಟ್ಟಬೇಕಿತ್ತು. ದಯಾ ದರಮಾ ಅಂತ ಸಿಕ್ಕಬ್ಯಾಟಿ ಬಿಟ್ಟು ತಾನು ಉಪಾಸಾ ನಾವೂ ಉಪಾಸಾ ಸಾಯತೀವಿ.

**ನಾಯಕ –** ಬರಲಿ ಬರಲಿ ರೂಪಲ್ಯಾ ಬರಲಿ

**ರೂಪಲ್ಯಾ –** ಬರಾಕ ಹತ್ಯಾನ ನೀವ ಕೇಳ್ರಿ

**ನಾಯಕ —** (ವ್ಯಂಗವಾಗಿ) ಬರಬೇಕು... ಬರಬೇಕು.. ಏನೇನು ತಂದಿರಿ ಬನ್ನಿ ಕುಳಿತುಕೊಳ್ಳಿ.....

**ರೂಪಲ್ಯಾ —** ಇವೊತ್ತೊನು ಬ್ಯಾಟಿ ಬಿಟ್ಟ ಬಂದ್ರಿ ಹೌದಲ್ಲೋ

**ನಾಯಕ —** ನಿಜವೇ... ಹೇಳು ಹೀಗೇಕೆ ಹೆಣದಂತೆ ಮುಖ ಮಾಡಿಕೊಂಡು ನಿಂತಿರುವಿ. ಪ್ರವಾಸಿಗಳು ನಿನಗಿಂತಲೂ ಬಲಶಾಲಿಗಳಿದ್ದರೆ, ಇಲ್ಲವೇ ನಿನ್ನ ಹೆಣ್ತನ ಇಣಿಕಿತೇ ಹೇಳು...

**ರೂಪಲ್ಯಾ —** ಹೇಳು ಹೇಳಪಾ ಏಕಾದಶಿ ಶಿವರಾತ್ರಿ ಎರಡೂ ವಟ್ಟಿಗೇ, ಮಾಡ್ರಿ ಅಂತ ಗುಂಪಿಗೆ ಹೇಳು.

**ನಾಯಕ —** ಅಂದರೇನು ಕೈಗೆ ಸಿಕ್ಕ ಬೇಟೆಯನ್ನು ಬಿಟ್ಟು ಬಂದೆಯಾ ಹುಂ ಹೇಳೋ ಏನಾಯಿತು.

**ಸಿದ್ಧ —** ಬಿಟ್ಟಿದ್ದೇನೋ ನಿಜ ಆದರೆ ಪ್ರಸಂಗವೇ ಹಾಗೆ ಬಂದಿತ್ತು.

**ನಾಯಕ —** ಥೂ ನಿರ್ಲಜ್ಜಾ ಏನು ಹೇಗೆ ಅದಾವ ಪ್ರಸಂಗ ಬಂದಿತ್ತೋ ಹುಂ ಬೊಗಳು ನಾಲಿಗೆ ಇದೆಯಲ್ಲವೇ ನುಡಿಯಲು ಹುಂ ಬೊಗಳು ಏನಾಯಿತು.

**ಸಿದ್ಧ —** ಶ್ರೀಮಂತ ಕುಟುಂಬ ಏನೋ ನಿಜ ಆದರೆ...

**ನಾಯಕ —** ಆದರೆ... ಆದರೇನು..... ತೀವ್ರ ಹೇಳೂ.

**ಸಿದ್ಧ —** ಹೊಸದಾಗಿ ಮದುವೆಯಾದ ಮದುವಣಿಗರು ದೇವತಾ ದರ್ಶನಕ್ಕೆಂದು ಇಲ್ಲಿಯೇ ಸಮೀಪದ ಗವಿಮಠಕ್ಕೆ ಹೊರಟಿದ್ದರು ಅವರ ಗೋಳಾಟ ಕೇಳಿ ಕರುಣೆ ಉಕ್ಕಿಬಂದು ಬೇರೆ ವಿಧಿ ಇಲ್ಲದೆ ಬಿಟ್ಟು ಬರಬೇಕಾಯಿತು.

**ನಾಯಕ —** ಕರುಣೆಯೇ... ನಿನಗೂ ಕರುಣೆಯೇ... ಕಳ್ಳನಿಗೂ ಕರುಣೆಯೇ ಎಲವೋ ಕರುಣೆಯ ಕಾಸಾರದಲ್ಲಿ ಮಿಂದು ಬಂದ ಕೂಸೇ ಕರುಣೆ ಎಂದು ಕನವರಿಸಿ ಕೈಗೆ ಸಿಕ್ಕ ಬೇಟೆಯನ್ನು ಬಿಟ್ಟು ನಿನ್ನ ಕೈಕೆಳಗಿನವರ ಕುಟುಂಬಗಳ ಕಗ್ಗೊಲೆಗೆ ಕಾರಣನಾಗುತ್ತಿರುವಿ ಎಂಬುದನ್ನು ಕಾಣದಷ್ಟು ಕುರುಡನಾದೆಯೇ ಥೂತ್ ನಿನ್ನ ಮುಖಕ್ಕೆ ಬೆಂಕಿ ಬೀಳಲಿ, ಹೊರಡು ಇಲ್ಲಿಂದ ಹುಂ ಹೊರಡು ವೃತ್ತಿಗೌರವ ಹಾಳಾಗುವ ಮೊದಲು ಹೊರಬೀಳು ಇಲ್ಲಿಂದ.

ಸಿದ್ಧ – ಅಂದರೆ... ಕಳ್ಳ ಕರುಣೆಯಿಲ್ಲದ ಕಟುಕನೆ? ಕಳ್ಳ ಮನುಷ್ಯನಲ್ಲವೇ ಅವನಲ್ಲಿ ಮನುಷ್ಯತ್ವ ಬೇಡವೇ ಮನುಷ್ಯತ್ವವಿಲ್ಲದ ಬಾಳು ಅದೆಂತಹ ಬಾಳು,

ನಾಯಕ – ಬಾಳು... ಬಾಳು.. ಬೇಡವೆಂದವರಾರು ಕಳ್ಳನಂತೇಕೆ ಊಳಿಗದ ಜೀತದಾಳಾಗಿ ಬಾಳು ಹೆರವರ ಬಾಳನ್ನೇಕೆ ಹಾಳು ಮಾಡುತ್ತಿರುವಿ.

ಸಿದ್ಧ – ನಾನೇಕೆ ಅವರ ಬಾಳ ವೈರಿಯಾಗಲಿ ಅವರವರ ಧರ್ಮ ಕರ್ಮಗಳ ಮೇಲೆ ಅವರು ಬಾಳಿರುವಾಗ ಆ ಅಪವಾದ ನನ್ನ ಮೇಲೇಕೆ

ನಾಯಕ – ಧರ್ಮ ಕರ್ಮಗಳ ಪರಿಜ್ಞಾನ ನಿನಗೇಕೆ ನಿನ್ನ ಹೇಡಿತನದಿಂದ ಕೈಗೆ ಸಿಕ್ಕ ಬೇಟೆಯನ್ನು ಬಿಟ್ಟು ನಡೆದ ತಪ್ಪನ್ನು ಧರ್ಮದ ಮೇಲೆ ಹೂರಿಸುವೆಯಾ, ಏಲವೋ ನೀನು ಮನಸು ಮಾಡಿದ್ದರೆ ಸುಲಿದು ತರಲು ಆಗುತ್ತಿದ್ದಿಲ್ಲವೇ.

ಸಿದ್ಧ – ಮಾನವತೆಯ ಮರೆತು ದಾನವನಾಗಲು ಸಿದ್ಧನಾಗಬೇಕೇ?

ನಾಯಕ – ಮಾನವತೆ... ಮಾನವತೆ ಮಾನವತೆ... (ವಿಕಾರನಾಗಿ ನಿಂತು) ಕೇಳು ಕಿವಿಗೊಟ್ಟು ಕೇಳು ನಾನೀ ವೃತ್ತಿಗಿಳಿಯುವ ಮೊದಲು ನನಗೂ ಸಂಸಾರವಿತ್ತು ಮಡದಿ ಮಕ್ಕಳಿಂದೊಡಗೂಡಿದ ಮನೆ ಸಮೃದ್ಧಿಯಾಗಿತ್ತು ಆದರೆ ವಿಧಿಯ ವಕ್ರಗತಿಯ ಸೆಳೆತಕ್ಕೆ ಸಿಕ್ಕು ನುಚ್ಚು ನೂರಾಯಿತು. ವಾರಿಂಯು ಮನೆಹೊಕ್ಕು ದಿನ ಮೂರರೊಳಗಾಗಿ ಸ್ಮಶಾನವನ್ನೇ ಮನೆಯಲ್ಲಿ ತಂದಿಕ್ಕಿ ನಗ್ನ ತಾಂಡವ ಮಾಡುತ್ತಿತ್ತು. ನಿರ್ಗತಿಕ ನಿರ್ವಾರ್ಯ ನಿಃ ಸಹಾಯಕನಾಗಿ ನಿಂತು ಕಂಡ ಕಡೆಗೆ ಕೈಚಾಚಿದೆ, ಕಂಡವರಕಾಲು ಹಿಡಿದು ಗೋಗರೆದು ಕಾಡಿದೆ ಬೇಡಿದೆ ಆದರೆ ಸಿಕ್ಕದ್ದೇನು... ಸಿರಿವಂತ ಸಮಾಜದೆದುರು ನಿಂತು ಮಹಾ ಮಹಾ ಮುಖಂಡರಲ್ಲಿ ನನ್ನ ಕಷ್ಟ ಕಾರ್ಪಣ್ಯಗಳನ್ನು ತೋಡಿಕೊಂಡೆ. ಆಸರೆಯ ಬೇಡಿ ಕರುಳು ಕತ್ತರಿಸುವಂತೆ ಕೂಗಿಕೊಂಡೆ... ಆದರೆ ಸಿಕ್ಕಿದ್ದೇನು? ಉಪವಾಸ, ಅನ್ನ ಅರಿವೆ ಆಸರೆಗಳಿಗೆ ಪರೆದಾಟ, ನಿರ್ಭೀತ, ನಿರ್ದಾಕ್ಷಿಣ್ಯ, ನಿರ್ದಿಷ್ಟ, ನಿಶ್ಚಲ, ಮನೋವೃತ್ತಿಗೆ ಸಿಕ್ಕ ಪ್ರತಿಫಲವಾಗಿ ಸಾಮಾಜದ ಕ್ರೂರದೃಷ್ಟಿಗೆ ಬಲಿಯಾದೆ, ಅನ್ನನ್ನಗತಿಕನಾದೆ, ಹಸಿವೆಯಿಂದ ಹತ್ತೆಂಟು ದಿನಗಳನ್ನು ಕಳೆದೆ, ಕಂಗೆಟ್ಟು ಕಾಡು ಸೇರಿದೆ, ಕಂದ ಮೂಲ ಫಲ ಗಡ್ಡೆ ಗೆಣಸು ತಿಂದು ಕಾಲಕಳೆದೆ, ಆದರೆ ಎಲ್ಲಿಯವರೆಗೆ ಈ ಸೆಣಸಾಟ...

ಅನ್ನಕ್ಕಾಗಿ ಅನ್ಯಮಾರ್ಗ ಕಾಣದೆ ಅನ್ನ ಹುಡುಕುವ ಮಾರ್ಗದಲ್ಲಿ ಪಾಪ ಪುಣ್ಯ ಅದಾವುದೂ ಬೇಕಾಗಲಿಲ್ಲ ಈ ವೃತ್ತಿಗಿಳಿದೆ. ಹೇಳು ನಾಯಕ ಸುಮ್ಮಾನಾದೆ ಏಕೆ ಈ ದೇಹಕ್ಕೆ ಬದುಕಲಿಕ್ಕೆ ಬೇಕಾದದ್ದು ಅನ್ನವೋ ಮಾನವೀಯತೆಯೋ.

ಸಿದ್ಧ — ಆದರೂ ಪಾಪಕರ್ಮಕ್ಕೆ ಇತಿ ಮಿತಿ ಬೇಡವೇ

ನಾಯಕ — ನಮಗೆ ಅದಾವುದೂ ಬೇಕಿಲ್ಲ ನಾವು ಬದುಕಬೇಕು ಬದುಕಲು ಅನ್ನಬೇಕು ಬದುಕುವ ಮಾರ್ಗದಲ್ಲಿ ಹೋರಾಟ ಸಾವು ನೋವುಗಳು ಬಂದರೂ ಎದುರಿಸಬೇಕು, ರೂಪಲ್ಯಾ ನಾನಿಲ್ಲಿರುವವರೆಗೆ ನೀವಾರೂ ಭಯಪಡುವ ಕಾರಣವಿಲ್ಲ. ಹೇಳಿ ಮನೆ, ಮಠ, ಯಾವದಾದರೂ ಸರಿಯೇ ಇದ್ದರೆ ಹೇಳಿ ಇಂದೇ ಸುಲಿಗೆ ಮಾಡೋಣ.

ರೂಪಲ್ಯಾ — ಅಂತದೊಂದು ಐತೆ ನೀನು ಮನಸ ಮಾಡಾಕಾ ಎನಂತೀಯೋ ಏನೋ.

ನಾಯಕ — ಹೇಳು ತೀವ್ರ ಹೇಳು ಯಾರದದು...

ರೂಪಲ್ಯ — ಗವಿಮಠ...

ನಾಯಕ — ಏನು ಗವಿಮಠವೇ?

ರೂಪಲ್ಯಾ — ಹೌದು ಹಿರಿಯಾ ಗವಿಮಠ ಮೊನ್ನೆ ಸನೇದರಾಗ ಹೊಸ ಸ್ವಾಮೀನಾ ಗದ್ದಿಗ್ಗೆ ಕುಂದರಿಸಿದರು. ಮಂದಿ ಭಾಳ ದೂರ ದೂರಲಿದ್ದಾ ಬಂದು ಸಾಲಗಟ್ಟಿ ನಿಂತು ಕಾಣಿಕೆ ಕೊಟ್ಟಾರ ಅಬ್ಬಾ ಏನ ದುಡ್ಡಿನ ರಾಸಿ ಏನ ಬೆಳ್ಳಿ ಬಂಗಾರ ಏನ ಬಟ್ಟೆಬರೀ ಥೂ ಬ್ಯಾಡ ನೋಡಾಕ ಈ ಎಡ್ಡು ಕಂಣು ಸಾಲಲಿಲ್ಲ.

ನಾಯಕ — ಹಾಗಿದ್ದರೆ, ಅದನ್ನೇ ದೋಚಬೇಕು ರೂಪಲ್ಯಾ ಆ ಮಠದ ಸ್ವಾಮಿ ಸನ್ಯಾಸಿ ಅವರಿಗೇಕೆ ನಗ ನಾಣ್ಯ ಇಂದೇ ರಾತ್ರಿ ಅವೆಲ್ಲ ನಮ್ಮ ಕೈವಶವಾಗಲೇ ಬೇಕು.

ಸಿದ್ಧ — ಬೇಡ ಬೇಡ ಹಿರಿಯಾ ಆ ಮಠದ ಗೋಜಗೆ ಹೋಗಬೇಡಾ ಅದು ಅತ್ಯಂತ ಪವಿತ್ರ ಸ್ಥಾನ. ರೂಪಲ್ಯಾ ನೀನು ಮರೆತು ಬಿಟ್ಟೆಯಾ ಹಿಂದೊಂದುದಿನ ಹಸಿವೆ ಹಿಂಗಿಸಲು ಹಬ್ಬದೂಟವೆಂದು ಮಠದ ಎತ್ತೊಂದನ್ನು ದುರಾಸೆಯಿಂದ ಅಪಹರಿಸಿ ಕೊಯ್ದು ತಿಂದಾಗ

ಆದ ಅನಾಹುತ, ಪಶ್ಚಾತ್ತಾಪಗಳನ್ನು ಮರೆತು ಬಿಟ್ಟೆಯಾ ಬೇಡ ನಾಯಕ ಬೇಡ.

**ನಾಯಕ –** ಥೂ ಹೇಡಿ ನಿನ್ನಂತಹ ಅರೆಗಂಡನ್ನು ಗಂಡೆಂದು ಭಾವಿಸಿ ಈಜನ ಮೋಸಹೋಗಿದ್ದಾರೆ ಅವರಂತೆ ನಾನೂ ಮೋಸ ಹೋಗಲೇ?

ಸಿದ್ಧ – ಬೇಡ ಹಿರಿಯಾ ಬೇಡ ಈ ಸಾಹಸ ಮಡುವಿನಲ್ಲಿ ಸುಂಣ ಕಟ್ಟಿಕೊಂಡು ಹಾರಿದಂತೆ ಈ ದುಸ್ಸಾಹಸಕ್ಕೆ ಇಳಿಯ ಬೇಡ ನಿನ್ನ ಕಾಲು ಹಿಡಿದು ಬೇಡಿಕೊಳ್ಳುತ್ತೇನೆ.

ನಾಯಕ – ಥೂತ್ ನಿರ್ಲಜ್ಜ್ ಸರಿ ಹಿಂದಕ್ಕೆ ಎಲೋ ರೂಪಲ್ಯಾ ಇವನನ್ನು ಎಳೆದು ಹಾಕಿ ಸಾಧ್ಯವಾದರೆ ಕೊಂದು ಹಾಕಿ ಬಿಡಿ ಹೋಗಲಿ.

ಸಿದ್ಧ – ನಾಯಕಾ ನಾನೇ ನಿಮ್ಮ ತಂಡ ಬಿಟ್ಟು ಹೊರಟು ಹೋಗುವೆ (ಹೋಗುವನು)

ನಾಯಕ – ಹೋಗಲಿ ಬಿಡು ರೂಪಲ್ಯಾ ಎಲ್ಲಿಯಾದರೂ ನಾಯಿ ಬಾಳು ಸಾಗಿಸಿ ಸಾಯಲಿ ನಮಗೇನಂತೆ. ಈಗ ಹೇಳು ರೂಪಲ್ಯಾ ಮಠ ದೋಚಲು ತೊಂದರೆ ತಾಪತ್ರೇಯಗಳೇನಿವೆ ಎಲ್ಲೆಲ್ಲಿ ಏನೇನಿವೆ ಬಲ್ಲೆಯಾ?

ರೂಪಲ್ಯಾ – ನನಗೇನು ಗೊತ್ತು ಹಿರಿಯಾ.

ನಾಯಕ – ಗೊತ್ತಿರದಿದ್ದರೆ ಗೊತ್ತು ಮಾಡಿಕೊಳ್ಳಬೇಕು ಅದಕ್ಕಾಗಿ ನಿಮ್ಮಲ್ಲಿ ಯಾರು ಸಿದ್ಧ... ಏಕೆ ಸುಮ್ಮನಾದಿ ನೀವೂ ಸಹ ಈ ವರೆಗೆ ಹೇಡಿಯ ಹಿರಿತನದಲ್ಲಿ ಬಾಳಿದವರಲ್ಲವೇ ನಾನೇ ಹೋಗುವೆ ಯಾವಶಕ್ತಿ ನಮ್ಮನ್ನು ತಡೆಯುವದೋ ನೋಡುವೆ ರೂಪಲ್ಯಾ ಮಠವನ್ನು ದೋಚಲೇ ಬೇಕು ಕೊಳ್ಳೆ ಹೊಡೆಯಲೇ ಬೇಕು ಕೊಳ್ಳೆ ಹೊಡೆಯಲೇ ಬೇಕು.

(ಎಂದು ವಿಕಾರ ನಗೆ ನಗುತ್ತಾ ಹೋಗುವನು)

===**====**===

## ದೃಶ್ಯ ೧೪

ಬೀದಿಯಲ್ಲಿ

**ಪೋ. ಗೌಡ** – ಹಾಹಾಕಾರ ಎಲ್ಲೆಲ್ಲಿಯೂ ಹಾಹಾಕಾರ ಶಾಂತಿ ಸೌಜನ್ಯಗಳಿಂದ ಕೂಡಿದ ನಮ್ಮ ಗ್ರಾಮ ಅನಂತ ಯಾತನಿಗೆ, ಗುರಿಯಾಗಿದೆ. ಬದುಕು ದುರ್ಬರವಾಗಿದೆ, ವಂದೆಡೆ, ಕಳ್ಳಕಾಕರ ಸುಲಿಗೆ, ದರೋಡೆ, ಕೊಲೆ ಕಳವುಗಳು ಇನ್ನೊಂದೆಡೆ, ಪ್ಲೇಗು ಮಾರಿಕಾ ಮೊದಲಾದ ಭಯಂಕರ ವ್ಯಾಧಿ ರೋಗ ರುಜಿನಗಳು. ತಲೆ ಎತ್ತಿ ಊರಿಗೆ ಊರೇ ಸ್ಮಶಾನ ಸದೃಶವಾಗುತ್ತಲಿದೆ, ಅಷ್ಟೇ ಅಲ್ಲ ಅನಾವೃಷ್ಟಿಯಿಂದ ದೇಶಕ್ಕೆ ದೇಶವೇ ಬರಗಾಲದ, ಭಯಂಕರ ಭವಿತವ್ಯದೆಡೆಗೆ, ಸಾಗುತ್ತಿದೆ. ಇದಕ್ಕೆ ಪರಿಹಾರ.

**ಮಾಲಿಗೌಡ** – ಹುಡುಕುವ, ಯತ್ನಗಳೆಲ್ಲವೂ ನಿಷ್ಫಲವಾಗುತ್ತಿವೆ ಗೌಡ, ಕಳ್ಳಕಾಕರನ್ನು ಒಡಿದು ಹುಟ್ಟನ್ನಡಗಿಸಲು ಊರ ಓಲೇಕಾರ ತಳವಾರ ಗುಂಪು ಸದಾ ಜಾಗ್ರತವಾಗಿ ಗಸ್ತು ತಿರುಗುತ್ತಿದೆ. ರೋಗದ ಹಾವಳಿ ತಡೆಯಲು ನಮ್ಮೂರಿನ ವೈದ್ಯರ ತಂಡವೇ ಹೆಣಗುತ್ತಿದೆ, ಅನಾವೃಷ್ಟಿಗೇನು ಹೇಳುವಿರಿ. ದೈವಿ ಸಂಕಲ್ಪಕ್ಕೆ ಪ್ರತಿಯಾಗಿ ಬಾಳಲು ಯಾರಿಗಾದೀತು ಅದಕ್ಕೆಂದೇ ಬೇಸತ್ತ ಜನ ಗುಳೇ ಹೋಗುತ್ತಿದೆ.

**ಪೋ. ಗೌಡ**– ಗೌಡರೆ, ಬೆಳತನಕ ಗಸ್ತು ತಿರುಗಿ ಸುಸ್ತಾದರೂ ಕಳ್ಳಕಾಕರ ಹಾವಳಿ ಕಡಿಮೆಯಾಗಿಲ್ಲ ವೈದ್ಯರ ತಂಡ ಬೇಕಾದಷ್ಟು, ಶಕ್ತಿ ಮೀರಿ ಹೆಣಗಿದರೂ ಸಾವಿನ ಸಂಖೆಗಳು ಕಡಿಮೆ ಏನಿಲ್ಲ ಯಾರನ್ನು ದೂರಿ ಪ್ರಯೋಜನವಿಲ್ಲ. ಸರಕಾರವಾದರೂ ಏನು ಮಾಡಿತು. ಮಾಡುವಷ್ಟು ಪ್ರಯತ್ನ ಮಾಡೇ ಮಾಡುತ್ತಿದೆ, ದೈವೀ ಪ್ರಕೋಪಕ್ಕೆ ಯಾರನ್ನು ದೂರಬೇಕು.

**ಮಾ.ಗೌಡ** – ಬಗೆ ಹರಿಯದ ಸಮಸ್ಯೆ

**ಪೋ. ಗೌಡ** – ಸಮಸ್ಯೆ ಸಮಸ್ಯೆಯಾಗಿಯೇ ಉಳಿಯಬೇಕೆ.

**ಗೋವಿಂದ** – (ತಡುರಿಸುತ್ತಾ) ಗ. ಗ. ಗೌಡ್ರು ಬರ್‍ರಿ ಲಗು ಬರ್‍ರಿ

**ಪೋ. ಗೌಡ** –ಏನಾಗಿದೆ. ಭಟ್ಟರೆ....

**ಗೋವಿಂದ** – ಕಳ್ಳರು ಬುಟ್ಟಿಯಲ್ಲಿದ್ದ ಭಕ್ರೀ ನೆಲ್ಲ ಕಳವು ಮಾಡಿ ಕೊಂಡು ಹೋಗಿದ್ದಾರೆ, ಹೀಗೇನೆ ಊರು ಕಾಯೋದು ನಿಮ್ಮ ಕೈಲೆ ಆಗ್ಲಿಲಾ ಅಂದ್ರ ಊರ ಕಾಯೋ ಗುತ್ತಿಗಿ ಯಾಕ ಹಿಡಕೊಂಡೀರಿ. ನಮಗೆ ತಿಂಬೋದಕ್ಕೆ ಭಕ್ರೀ ಇಲ್ಲಲ್ಲ ಈಗೇನು ಮಾಡಂದ್ರಿ.

**ಪೋ. ಗೌಡ** –ಭಕ್ರಿ ಇರದಿದ್ದರೆ, ಏನು ಭಟ್ಟರೆ ಕಾಳು ಇರಬಹುದಲ್ಲ ಅವನ್ನೆ ಬೀಸಿ ಭಕ್ರಿ ಮಾಡಿಕೊಳ್ರಿ.

**ಗೋವಿಂದ** – ಕಾಳೂ ಇಲ್ಲ ಗೀಳೂ ಇಲ್ಲ ಮುಂಡೇಮಕ್ಕಳು ಎಲ್ಲಾ ವೈದು ಬಿಟ್ವಾರ.

**ಪೋ.ಗೌಡ** – ಹಣ ಇರಬಹುದಲ್ಲ.

**ಗೋವಿಂದ** – ಹಣದ ಪೆಟ್ಟಗೀನೂ ಹೊಡಕೊಂಡು ಹೋಗ್ಯಾರ

**ಪೋ. ಗೌಡ** –ಮತ್ತೇನಿದೆ ಮನೆಯಲ್ಲಿ

**ಗೋವಿಂದ** – ಏನೂ ಉಳಿದೇ ಇಲ್ಲ. ಅಮ್ಮ ಅಜಾರಿ ಏಳಲಿಕ್ಕೆ ಬರವಂತಿಲ್ಲ. ಕೂಡಲಿಕ್ಕೂ ಬರುವಂತಿಲ್ಲ, ಏನಮಾಡಂದ್ರಿ.

**ಮಾ.ಗೌಡ** – ಹಾಗಿದ್ದರೆ, ನಮ್ಮ ಮನೆಯಿಂದ ವಂದೆರಡು ದಿನ ಸಾಲುವಷ್ಟು ಸೀದಾ ವೈದು, ನಡೆಯಿಸಿರಿ

**ಗೋವಿಂದ** – ವಂದೆರಡು ದಿನ ತಿಂದು ಆ ಮೇಲೆ, ಏನು ಮಾಡಂದ್ರಿ. ಅಪ್ಪನೂ ಇಲ್ಲ ಇನಾಮು ತರಲಿಕ್ಕೆ ಅಂತ ಹೋಗಿದ್ದಾರೆ. ಅಪ್ಪ ಬರೋ ವರೆಗೆ ಅದ್ರು ಬೇಡವೇನ್ರೀ ಏನು ಹೇಳತೀರಿ. ಏ ಹೋಗ್ರೀ ಬರ್ರಿ ಬರ್ರೀ ನಮಗೆ ಕಾಳು ಬೇಳೆ ಕೊಡ್ಸಿರಿ.

**ಪೋ. ಗೌಡ** –ಅಂದರೇನು ಭಟ್ಟರೆ ಗೌಡರ ಮನೆ ಅಂದರೆ ಗವಿಮಠದ ದಾಸೋಹ ಅಂತಾ ತಿಳಿದಿರೇನು.

**ಗೋವಿಂದ** – ಅಂದ್ರ ನಾವು ಹೋಗಬೇಕು. ಅಂತೀರೇನು ಊರ ಗೌಡ್ರು ಅಂದ್ರೆ ತಂದೀ ತಾಯಿ ಅಂಬೋ ಮಾತು ಸುಳ್ಳೇನ್ರಿ ನಡೀರಿ. ಬೇಕಿದ್ದರ ಆ ಸ್ವಾಮಿಗಳನ್ನೆ ಕೇಳೋಣ.

**ಮಾಲಿಗೌಡ** – ಗೌಡರೇ ಈ ಇಂದಿನ ಈ ದುರ್ಭರ ದಿನಮಾನಗಳ ಬಗ್ಗೆ ಸ್ವಾಮಿಗಳಿಂದೇನಾದರೂ ಪರಿಹಾರ ಆಶಿಸಬಹುದೇ.

**ಪೋ. ಗೌಡ** –ಅದೂ ಆಗಿ ಹೋಗಲಿ ನಡೆಯಿರಿ.

**ಗೋವಿಂದ** – ಅಯ್ಯ ಗೌಡ್ರ ಹಾಗೆ, ಹೊರಟಿರಲ್ಲ... ನಮದು ನಮಗ ಹತ್ತೇದ ಏನ ಏನ.

**ಮಾಲಿಗೌಡ** – ಲೇ ಭರಮಾ... ಬಾರೋ ಇಲ್ಲಿ... ಇದೋ ಈ ನಿಮ್ಮ ಭಟ್ಟರ ಮನೆಗೆ, ವಂದೆರಡು ದಿನ ಸಾಲುವಷ್ಟು ಅಕ್ಕಿ ಬೇಳೆ ಬೆಲ್ಲ ಕಾಳು ಕೊಡಲಿಕ್ಕೆ ಮನೆಯಲ್ಲಿ ಹೇಳು (ಹೊರಟು ಹೋಗುವರು)

**ಗೋವಿಂದ** – ನಡೆಯೋ ಬೇಗ ನಡಿಯೋ.

===***====***===

## ದೃಶ್ಯ ೧೫

(ಗವಿಮಠದಲ್ಲಿ ಸಿದ್ಧೇಶ್ವರಸ್ವಾಮಿಗಳು ಗ್ರಂಥಾವಲೋಕನದಲ್ಲಿ ನಿರತರಾದಾಗ. ಮಾಲಿಗೌಡ ಪೋಲೀಸಗೌಡ ಬಂದು ನಮಸ್ಕರಿಸಿ, ಕುಳಿತುಕೊಳ್ಳುವರು)

**ಮಾಲಿಗೌಡ** – ನಮಸ್ಕಾರ ಬುದ್ಧಿ.

**ಸಿದ್ಧೇಶ್ವರ** – ಬನ್ನಿ ಕುಳಿತುಕೊಳ್ಳಿ, ಎಲ್ಲ ಕುಶಲವೇ.

**ಮಾಲಿಗೌಡ** – ಕುಶಲವೆಲ್ಲಿ ಗುರುವೆ, ಒಂದೆಡೆ ರೋಗ ರುಜಿನುಗಳ ಹಾವಳಿ, ಕಳ್ಳಕಾಕರ ಭಯ, ಸಾಲದೆ ಅನಾವೃಷ್ಟಿಯಿಂದ ಜನತೆ, ಕಂಗೆಟ್ಟು ಬರಗಾಲದ ಭವಣೆಗೆ ಭಯಬಿದ್ದು, ಸಿಕ್ಕತ್ತ ಜನ ಗುಳೇ ಹೋಗುತ್ತಿದೆ.

**ಸಿದ್ಧೇಶ್ವರ** – ನಿಸರ್ಗ ನಿಯಮ, ಪ್ರಕೃತಿಯ ಪ್ರಕೋಪ, ಈಶನಿಚ್ಛೆಗೆ ಯಾರೂ ಎಂಥವರೂ ಹೊರತಿಲ್ಲ. ಸಂಸಾರಿಯಾಗಲಿ, ಸನ್ಯಾಸಿಯಾಗಲಿ, ಎಲ್ಲರೂ ಆ ವಿಶ್ವನಿಯಾಮಕನ ಆಳಿಕೆಗೆ ಅಧೀನರಾಗಲೇಬೇಕು.

**ಪೋ. ಗೌಡ** –ಜನತೆ ಭೀಕರ ಬರಗಾಲದ ಭವಣೆಗೆ ತುತ್ತಾಗಲಿದೆ ಸ್ವಾಮಿಗಳೆ.

**ಸಿದ್ಧೇಶ್ವರ** – ಗೌಡರೆ, ಬರ ಮತ್ತು ಯುದ್ಧ ಇವೆರಡೂ ದೇಶಕ್ಕೆ ಮತ್ತು ಜನತೆಗೆ ಬೇಕಾದ ವಸ್ತುಗಳು. ಮಾನವನ ಸುಪ್ತಶಕ್ತಿಗಳನ್ನು ಜಾಗ್ರತಗೊಳಿಸಿ, ನವಚೇತನಕ್ಕೆ ನವಮಾರ್ಗ ನಿರ್ಮಿಸಿಕೊಡಬಲ್ಲ ಏಕೈಕ ಸಾಧನೆಗಳು. ರಾಜ ಮತ್ತು ಪ್ರಜೆಗಳ ಮನೋದೌರ್ಬಲ್ಯಗಳನ್ನು ಕಿತೊಗೆಯಬಲ್ಲ ಸಾಧನಗಳು. ತಾಮಸಿ ಹಾಗೂ ವಿಲಾಸಿ ಭಾವಗಳಲ್ಲಿ ಮೈಮರೆತು ಧರ್ಮ ಕರ್ಮಗಳನ್ನು ಕಡೆಗಣಿಸಿ, ಕರ್ತವ್ಯ ಚ್ಯುತರಾದ ಮಾನವರಿಗೆ, ಮಹದುಪಕಾರಿ ಈಶ ನಿರ್ಮಿತ ಯೋಜನೆಗಳು.

**ಮಾಲಿಗೌಡ** – ಇವುಗಳಿಗೆ ಪರಿಹಾರವಿಲ್ಲವೇ.

**ಸಿದ್ಧೇಶ್ವರ** – ಇದೇ ಎಲ್ಲದಕ್ಕೂ ಪರಿಹಾರ ಪರಿಸಮಾಪ್ತಿ ಕೊನೆ ಇದ್ದೇ ಇದೆ.

**ಪೋ. ಗೌಡ** – ಎಲ್ಲಿಯವರೆಗೆ ಈ ಭವಣೆ ಗುರುವೇ.

ಸಿದ್ಧೇಶ್ವರ – ನಿಮ್ಮಲ್ಲಿ ಧಾರ್ಮಿಕ ಶ್ರದ್ಧೆ ಪ್ರಜ್ಞೆಗಳು ಮೂಡಿ, ಪರಸ್ಪರ ಕ್ಷೇಮ ಚಿಂತನೆಯಲ್ಲಿ ಮನ ಪರಿಪಕ್ವವಾಗಿ, ಪ್ರತಿಯೊಂದು ಮನೆ ಮಠ, ಮಂದಿರ, ಮಸೀದೆಗಳಲ್ಲಿ ನಿಮ್ಮ ನಿಮ್ಮ ಭಾವಕ್ಕನುಗುಣವಾದ ಆರಾಧನೆಯಲ್ಲಿ ಮನಸು ಲೀನವಾದಾಗ, ಮಾತ್ರ ಸಾಧ್ಯ. ಆರಾಧನೆಯಿಂದ ಮನಸು, ಮನಸಿನಿಂದ ದೇಹ, ದೇಹ ಸಾಮೂಹಿಕ ಪ್ರಜ್ಞೆಗಳಿಂದ ಪರಿಸರ, ಪರಿಸರದಿಂದ ನಾಡು, ಪರಿಶುದ್ಧಿಯತ್ತ ಧಾವಿಸಿ ದೇಶಕ್ಕೆ ದೇಶವೇ ಉಜ್ವಲ ಇತಿಹಾಸದಿಂದ ಬೆಳಗ ಬಲ್ಲುದು.

**ಮಾ.ಗೌಡ** – ಗುರುವೇ ಜನತೆ ಮಾನಸಿಕ ದೌರ್ಬಲ್ಯಗಳಿಂದ ಧೈರ್ಯ, ಸ್ಥೈರ್ಯಗಳನ್ನು ಕಳೆದುಕೊಂಡು ನಿರಾಶೆಯಂಚಿನಲ್ಲಿ ನಿಂತಿದೆ. ನಿಮ್ಮಿಂದಲೇ ನಾವು ಹೋದ ದಿನ ಮಾನಗಳನ್ನು ಕಾಣಬೇಕಾಗಿದೆ.

**ಗವಿಸಿದ್ಧ** – ನಮ್ಮಲ್ಲೇನಿದೆ ಗೌಡರೆ, ನಾವು ಸನ್ಯಾಸಿಗಳು, ನಿಮ್ಮಂತಹ ಸಂಸಾರಿಗಳು ತಮ್ಮ ಭಕ್ತಿ ಶಕ್ತ್ಯನುಸಾರ ತಮ್ಮ ಉತ್ಪನ್ನದಲ್ಲಿಯ ಕೆಲ ಭಾಗವನ್ನು ಭಿಕ್ಷಾ ಎಂದು ಸನ್ಯಾಸಿಗೆ ಅರ್ಪಿಸಿದಲ್ಲಿ ಸನ್ಯಾಸಿ ಎಲ್ಲವನ್ನು ಶೇಖರಿಸಿ ಸರ್ವಾರ್ಪಣಭಾವದಿಂದ ಸಂತ್ರಸ್ತರಿಗೆ ಸಮಭಾವದಿಂದ ಸಮರ್ಪಿಸಿ ತನ್ನ ಕರ್ತವ್ಯ ನಿರ್ವಹಿಸುತ್ತಾನೆ. ಅದರಂತೆ, ನೀವು ನೀಡಿದ ಸಂಗ್ರಹ ತೀರುವವರೆಗೆ ನಮ್ಮ ಮಠದಲ್ಲಿ ಮುಕ್ತದ್ವಾರವಿದೆ. ಬೇಕಾದಷ್ಟು ಜನ ಬಂದು ತಿಂದುಂಡು ಹೋಗಬಹುದು.

**ಪೋ.ಗೌಡ** – ಅದೆಲ್ಲಿಯವರೆಗೆ ಆಗಬಹುದು.

**ಗವಿಸಿದ್ಧ** – ಸಂಗ್ರಹ ತೀರುವವರೆಗೆ

**ಮಾ.ಗೌಡ** – ಆಮೇಲೆ?

**ಗವಿಸಿದ್ಧ** – ಶಿವನಿಚ್ಛೆ

**ಮಾ.ಗೌಡ** – ಶಿವನಿಚ್ಛೆಯನ್ನು ಮಾನವ ಕಲ್ಯಾಣದತ್ತ ತಿರುಗಿಸಲು ತಾವು ಶಕ್ತರೆಂದು ನಂಬಿ ನಂದಿದ್ದೇವೆ. ಗುರುವೇ ಮಳೆಯಾದರೆ ಸಾಕು.

**ಗವಿಸಿದ್ಧ** – ಅದು ನಿಮ್ಮೆಲ್ಲರ ಭಕ್ತಿ ಶಕ್ತಿಯನ್ನವಲಂಬಿಸಿದೆ. ನಿಮ್ಮ ಅಂತರ್ಯದ ಕೂಗು ಶಿವನ ಕಿವಿಗೆ ಬಿದ್ದಾಗಲೇ ಸುವೃಷ್ಟಿಯಾದೀತು. ಅದಕ್ಕಾಗಿ ನಿಮ್ಮೆಲ್ಲರಲ್ಲಿ ಸುಪ್ತವಾಗಿದ್ದ ಧಾರ್ಮಿಕ ಪ್ರಜ್ಞೆ ಪುನಃ ಜಾಗ್ರತಗೊಳಿಸಿ ಕೊಂಡು ಜಾತಿ ಜಾತಿಗಳ ವೈರವನ್ನು ಕಡೆಗಣಿಸಿ ತಮ್ಮ ತಮ್ಮ

ಮನೋ ಧರ್ಮಕ್ಕನುಗುಣವಾಗಿ ಪೂಜೆ, ಪ್ರಾರ್ಥನೆಗಳು ನಡೆಯಲಿ ದಿನ ಮೂರು ಕಳೆಯುವದರೊಳಗಾಗಿ ತಡೆಯದೇ ಮಳೆಯು ಬೀಳುವದು. ನಡೆಯಿರಿ, ಎಲ್ಲರೂ ಪ್ರಸಾದ ತೆಗೆದುಕೊಳ್ಳಿ ಶಿವನಿಚ್ಛೆ ಏನಿದೆಯೋ ಬಲ್ಲವರಾರು.

(ಮಾಲಿಗೌಡ, ಪೊ. ಗೌಡ ನಮಸ್ಕಾರ ಮಾಡಿ ಹೋಗುವಷ್ಟರಲ್ಲಿ ತಿಪ್ಪವ್ವ ರೋಗಗ್ರಸ್ಥ ಗಂಡನನ್ನು ಕರೆದುಕೊಂಡು ಬರುವಳು)

**ಬಾಳ್ಯಾ –** ಉರಿತೈತೋ ಎವ್ವಾ ಮೈಯೆಲ್ಲಾ ದಗದಗಾಂತ ಉರಿತೈತೋ.

**ತಿಪ್ಪವ್ವ –** ಉರಿದೇನು ಮಾಡೀತು ಅಂತಾ ಚಲೋ ಕೆಲಸಾನ ಮಾಡೀದಿ ತೆಪ್ಪ ಆತು ಅಂತ ಕಾಲಬೀಳು ಮಾರಿ ಏನ ನೋಡತೀ ಬೀಳ ಕಾಲ.

**ಬಾಳ್ಯಾ –** ಎಪ್ಪಾ ಹೊಟ್ಯಾಗ ಹಾಲು ಹೊಯಕೊಂಡು ಈ ಪಾಪಿ ಮನಸಪಾ ಎಪಾ ನೀನS ಗತಿ ಎಪಾ ಮೈಯೆಲ್ಲಾ ಉರೀತೈತ

**ಗವಿಸಿದ್ಧ –** ನಿನಗೇಕೆ ಮೈ ಉರಿ ಬಾಳಪ್ಪಾ ಭಟ್ಟರ ಗುಳಿಗೆಯನ್ನು ನಾವು ಪ್ರಸಾದದಲ್ಲಿ ತೆಗೆದುಕೊಂಡಿದ್ದೇವೆ ನಮಗೆ ಮೈ ಉರಿಯಬೇಕು ನಿನಗೇಕೆ ಮೈ ಉರಿ.

**ಬಾಳ್ಯಾ –** ಅಯ್ಯಯ್ಯೋ ಎಂಥಾ ಕೇಡು ಆತಲ್ಲೋ ಎಪ್ಪಾ ಹೇಳಿಕಿ ಮಾತು ಕೇಳಿ ತೆಪ್ಪ ಮಾಡಿದೆ ಎಪಾ ತಪ್ಪಾಗೈತೆ. ತಪ್ಪಿಗೆ ತಕ್ಕ ಶಿಕ್ಷಾಕೊಡು ಆನಭೋಗಸ್ತೀನಿ ಅನಭೋಗಸ್ತೀನಿ. ನನ್ನ ಅನುಭೋಗ ನೋಡಿ ಇನ್ನೊಬ್ಬರು ಸಾಲೀನಾದ್ರು ಕಲೀಲಿ ತಪ್ಪಮಾಡೇನಿ ಎಪ್ಪಾ ತಪ್ಪಮಾಡೇನಿ

**ಗವಿಸಿದ್ಧ –** ನಿನ್ನಿಂದ ತಪ್ಪೇ ಬಾಳಪ್ಪಾ ಅಲ್ಲಲ್ಲ ನಮ್ಮಿಬ್ಬರ ಸತ್ವ ಪರೀಕ್ಷೆ ನೀನು ನಿನ್ನ ಆತ್ಮ ಸಂಯಮ ಕಳೆದುಕೊಂಡು ವಿಷಪ್ರಯೋಗದ ಮಹಾಸಾಹಸಕ್ಕಿಳಿದು ಅದಃಪತನದೆಡೆಗೆ ಸಾಗಿದೆ. ನಿನ್ನ ವಿಷಪ್ರಯೋಗ ನಮ್ಮ ಸಾಧನೆಯನ್ನೇ ಬಲಪಡಿಸಿದೆ ಜೀವನದ ದಿಶೆಯನ್ನೇ ಬದಲಿಸಿದೆಯಮ ನಿಯಮಾಸನಾದಿ ಅಷ್ಟಾಂಗ ಯೋಗಗಳ ಗುಟ್ಟನ್ನು ಗುರುವಿನಿಂದರಿದು ಚತುರ್ವಿಧ ಯೋಗಗಳಿಗೂ ಅತೀತವಾದ ಶಿವಯೋಗದ ಗುಟ್ಟನ್ನು ಗುರುವಿನಿಂದರಿದು ಸಾಧನೆಯ ಅತ್ಯುನ್ನತ ಶಿಖರದಲ್ಲಿ ನಿಂತಾಗ ಸತ್ವಪರೀಕ್ಷೆಗಾಗಿ ನಿನ್ನಿಂದ ವರ್ಷ ಪ್ರಯೋಗವಾಗಲೆಂದು ಗುರುವಿನ ಸಂಕಲ್ಪವಾಗಿರಬೇಕು. ಗುರುವಾನುಗ್ರಹದಿಂದ ಅದಿಂದು ಸಾಧಿಸಿ

ಗುರುವಿನ ಪೂರ್ಣಕೃಪೆಗೆ ಪಾತ್ರನಾಗಬಲ್ಲೆನೆಂಬ ಆತ್ಮವಿಶ್ವಾಸ ಮೂಡಿದೆ. ಬಾಳಪ್ಪಾ ನಿರಪೇಕ್ಷ ಭಾವಬಲಿತು ಧರ್ಮ ಕರ್ಮೇಂದ್ರಿಯಗಳ ಗತಿಗೆ ಮಿತಿ ಹೇರಿ ರುಚಿಯಿಳಿದ ಜೀವಿಗೆ ವಿಷವೇನು ಅಮೃತವೇನು ಎಲ್ಲವೂ ಒಂದೇ ಕಾಲಮಿಂಚಿಲ್ಲ ಇನ್ನಾದರೂ ಸತ್ಪಥದಲ್ಲಿ ನಡೆದು ಜೀವನ ಸಾರ್ಥಕ ಪಡಿಸಿಕೋ.

**ಬಾಳ್ಯಾ –** ಎಪಾ ಇವು ಯಾವೂ ನನಗ ಗೊತ್ತಿಲ್ಲ ನಾ ಏನ ಮಾಡ್ಲೀ

**ಗವಿಸಿದ್ಧ –** ಶಿವನ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಳ್ಳಬಲ್ಲ ಇನ್ನೊಂದು ಮಾರ್ಗವಿದೆ ಅದೇ ಭಕ್ತಿಮಾರ್ಗ. ಪ್ರಪಂಚದ ಎಲ್ಲ ಧರ್ಮದ ರೀತಿ ನೀತಿ ಗಳಿಗನುಗುಣವಾದ ರಾಜಮಾರ್ಗ. ಅದಕ್ಕೆ ಜಾತಿ ವಿಜಾತಿಗಳ ಸೋಂಕಿಲ್ಲ. ವರ್ಣಾಶ್ರಮಗಳ ಕಟ್ಟು ಪಾಡುಗಳಿಲ್ಲ, ಯೋಗಾಸನಗಳ ಅವಶ್ಯಕತೆಯಿಲ್ಲ. ಮಂತ್ರ ತಂತ್ರಗಳ ಪುರಶ್ಚರಣೆ ಬೇಕಿಲ್ಲ. ಅದೇ ಭಕ್ತಿಮಾರ್ಗ, ಭಕ್ತಿ ದೇವನ ದೈವತ್ವಕ್ಕೆ ಆಹ್ವಾನವಿದ್ದಂತೆ ನೀನಾವದೇ ಜಾತಿಯವನಾಗಿರು ಧಾರ್ಮಿಕ ಸುವ್ಯವಸ್ಥೆಗೆ ವಿರೋಧಿಯಾಗದೆ ನಿನ್ನೆಲ್ಲ ಅನುಭಾವ ಭೋಗಗಳಲ್ಲಿ ನಿನ್ನಾರಾಧ್ಯ ದೇವ ದೈವಗಳಲ್ಲಿ ಭಕ್ತಿ ಶ್ರದ್ಧೆ ಆತ್ಮವಿಶ್ವಾಸಗಳನ್ನಿಟ್ಟು ಮುನ್ನಡೆ, ಹೋಗು ತಾಯಿ ನಿನ್ನ ಗಂಡನನ್ನು ಕರೆದುಕೊಂಡು ಹೋಗು ದಾಸೋಹದಲ್ಲಿ ತೃಪ್ತಿಯಾಗುವಂತೆ ಊಟ ಮಾಡಿಸು.

**ತಿಪ್ಪವ್ವ –** ಆಗಲಿ ಎಪ್ಪಾ ನಡೀಯ ಹೋಗಾನ (ಎಂದು ಹಾಗೆ ನಿಲ್ಲುವಳು.)

**ಗವಿಸಿದ್ಧ –** ಏಕೆ ತಾಯಿ ನಿನಗಾವ ಮೂಕ ವೇದನೆ ಓಹೋ ನಿನ್ನ ಸಂತಾನದ ಕೊರಗೇ? ನೀನೂ ಪ್ರಸಾದ ತೆಗೆದುಕೋ ಇನ್ನೊಂದು ವರ್ಷದಲ್ಲಿ ಪುತ್ರ ಸಂತಾನವಾಗಲಿದೆ.

(ನಮಸ್ಕಾರ ಮಾಡಿ ಹೋಗುವರು)

(ಕಳ್ಳನಾಯಕನು ಭಕ್ತನಂತೆ ವೇಷ ಮಾಡಿಕೊಂಡು ಬರುವನು)

**ನಾಯಕ –** (ಕಳ್ಳನೋಟದಿಂದ ನಮಸ್ಕಾರ ಮಾಡುತ್ತ) ನಮಸ್ಕಾರ ಸ್ವಾಮಿಗಳೇ

**ಸಿದ್ದೇಶ –** ಓಹೋ... ನೀವೋ.... ಬನ್ನಿ ಕುಳಿತುಕೊಳ್ಳಿ (ನಗುತ್ತ) ಅಂತೂ ಯಾರಿಗೂ ತಲೆತಗ್ಗಿಸಬಾರದೆನ್ನುವ ನಿಮ್ಮ ಸಂಕಲ್ಪ ಮುಗಿದಂತಾಯಿತಲ್ಲವೇ.

ನಾಯಕ – (ಬೆಚ್ಚಿಬಿದ್ದು) ಹಾಂ ಏನೆಂದಿರಿ.

ಸಿದ್ಧೇಶ – ಏನೂ ಇಲ್ಲ... ಬಹಳ ದೂರದಿಂದ ಬಂದಿರಿ ಕುಳಿತುಕೊಳ್ಳಿ ಎಂದೆವು ಅಷ್ಟೆ.

ನಾಯಕ – (ಸ್ವ) ನಮ್ಮ ಉದ್ದೇಶ ಇವರಿಗೆ ಅರ್ಥವಾಗಿರಬಹುದೇ? (ಪ್ರ) ಪ್ರಶಾಂತ ವಾತಾವರಣದ ಪರಿಸರದಲ್ಲಿ ಪ್ರಭಾವ ಪೂರ್ಣ ಸ್ವಾಮಿಗಳಿದ್ದಾರೆಂದು ಕೇಳಿದ್ದೆ ನೋಡಬೇಕೆಂದು ಬಂದೆ, ಅಷ್ಟೇ.

ಸಿದ್ದೇಶ – ಕುಳಿತುಕೊಳ್ಳಿ ಅಂತರಾತ್ಮದ ಪರಿಶುದ್ಧಿಯ ಕಾಲ ಪರಿಪಕ್ವವಾದಾಗ ಉದ್ದೇಶವೇನೇ ಇದ್ದರೂ ಸದುದ್ದೇಶದಲ್ಲಿ ಪರಿವರ್ತನೆಯಾಗುವದು ಕಟ್ಟಿದ ವೇಷದಂತೆ ಹೃದಯ ಕೂಡ ಪರಿವರ್ತನೆಯಾಗಬಲ್ಲದು, ಒಳಗೆ ಹೋಗಿ ಎಲ್ಲವನ್ನೂ ನೋಡಿಕೊಂಡು ಬನ್ನಿ. ಇಲ್ಲಿ ಯಾರಿಂದಲೂ ಯಾವ ವಸ್ತುಗಳು ಮುಚ್ಚಿಡಲ್ಪಟ್ಟಿಲ್ಲ. ಬೀಗ ಮುದ್ರೆಗಳ ಅವಶ್ಯಕತೆಯಿಲ್ಲ ಕಳ್ಳಕಾಕರ ಭಯ ಮೊದಲೇ ಇಲ್ಲ ಹೋಗಿ ನೋಡಿಕೊಂಡು ಬನ್ನಿ.

ನಾಯಕ – ಹುಂ ಏನಂದರೇನಂತೆ. ನಮಗೇನು... (ವಳಗೆ ಹೋಗುವಷ್ಟರಲ್ಲಿ) ರಾಜಭಟರು ಭಟ್ಟರನ್ನು ಬಂಧಿಸಿ, ಕರೆತರುವರು (ಭಟ್ಟರು ಸ್ವಾಮಿಯ ಪಾದಗಳ ಮೇಲೆ ಬಿದ್ದು.)

ತಿರುಕ – (ಆರ್ತನಾದದಿಂದ) ರಕ್ಷಿಸು ತಂದೆ, ಸಿದ್ದೇಶ ರಕ್ಷಿಸು, ನನ್ನ ಜೀವನ ಅಳಿವು ಉಳಿವುಗಳ ತೂಗುಯ್ಯಾಲೆಯಲ್ಲಿ ತೂಗುತ್ತಿದೆ. ನಿನ್ನ ಅಭಯದ ವರದ ಹಸ್ತ ಶಿರದ ಮೇಲೆ ಬಾರದ ಹೊರತು ಗತಿ ಇಲ್ಲ.

ಸಿದ್ದೇಶ – ಅದೇನು ಭಟ್ಟರೆ. ಅದಾವ ವಿಪತ್ತಿನಲ್ಲಿ ಸಿಕ್ಕು ಬಂದಿರುವಿರಿ.

ತಿರುಕ – ಏನೆಂದು ಹೇಳಲಿ ಗುರುವೆ, ದೈವವೇ ನನ್ನನ್ನು ವಂಚಿಸಿದೆ. ತುಂಬಿದ ರಾಜಸಭೆಯಲ್ಲಿ ಗರ್ವದಿಂದ ಮೆರೆದು ಮಹಾ ಪಂಡಿತನೆಂದು, ನನ್ನನ್ನು ನಾನೇ ಹೊಗಳಿಕೊಂಡು ಇಂದಿನ ದಿನದ ಈ ಅಮವಾಸೆಗೆ ಪ್ರತಿಯಾಗಿ ಹುಣ್ಣಿಮೆ ಎಂದು ಹೇಳಿ, ಸಾವನ್ನೇ ಆಹ್ವಾನಿಸಿಕೊಂಡಿದ್ದೇನೆ. ಇಂದು ಚಂದ್ರನನ್ನು ತೋರಿಸಬೇಕು. ಇಲ್ಲವೇ ಸಾವನ್ನಪ್ಪಬೇಕು ಇದು ರಾಜಾಜ್ಞೆ,

ಸಿದ್ದೇಶ – ನಿಮಗಿದು ಅಸಾಧ್ಯವೇ. ಮಂತ್ರ–ತಂತ್ರ ವಿದ್ಯಾರಹಸ್ಯಗಳನ್ನು

ಬಲ್ಲವರು. ವನೌಷಧಿಗಳ ಪ್ರಯೋಗದಿಂದ ಏನೆಲ್ಲ ಮಾಡಬಲ್ಲ ಮೇಧಾವಿಗಳು. ಗ್ರಹ ನಕ್ಷತ್ರಗಳ ಗತಿಯನ್ನು ನಿಮ್ಮ ಆರಾಧ್ಯ ದೈವೀ ಶಕ್ತಿಯಿಂದ ಬದಲಿಸಬಲ್ಲ ಸಾಧಕರೂ ಆದ ನಿಮಗಿದು ಅಸಾಧ್ಯವೇ, ನಾವೋ ನಿಮ್ಮ ದೃಷ್ಟಿಯೊಳಗೊಂದಣುವು ಮಾತ್ರ ನಿಮ್ಮ ವಿಷ ಪ್ರಯೋಗಕ್ಕೊಳಗಾಗಿ ಸತ್ತು ಸಾಯದಂತಿದ್ದ ಜಂಗಮರು, ನಮ್ಮಲ್ಲೇನಿದೆ ನೀವೇ ಹೇಳಿ.

**ತಿರುಕ –** ಎಲ್ಲವನ್ನೂ ಮೈಗೂಡಿಸಿಕೊಂಡ ಮಹಾಯೋಗಿ. ನೀನು ಕ್ಷುಲ್ಲಕ ಮನೋಭಾವದಿಂದ ಹೆರವರನ್ನು ಪ್ರಚೋದಿಸಿ ಸಲ್ಲಿಸಿದ ವಿಷವನ್ನು ಯೋಘಗಳಲ್ಲಿ ಹಿರಿದಾದ ಹಠಯೋಗ ಸಾಧನೆಯಲ್ಲಿ ಅತ್ಯುನ್ನತ ಸಿದ್ಧಿಯನ್ನು ಪಡೆದು, ಅರಗಿಸಿಕೊಂಡ ನೀನು ಎಲ್ಲವನ್ನೂ ಬಲ್ಲೆ. ಅಣಿ ಮಾದಿ ಅಷ್ಟಸಿದ್ಧಿಗಳನ್ನೇ ಅಧೀನವಾಗಿರಿಸಿಕೊಂಡ ಸಿದ್ಧಿಪುರುಷ ಸಿದ್ದೇಶ ನೀನಿಚ್ಛಿಸಿದರೆ ನನಗೆ ಜೀವನ, ಇಲ್ಲವೇ ಮರಣ.

**ಸಿದ್ದೇಶ –** ಭಟ್ಟರೆ, ಇಲ್ಲದ ಶಕ್ತಿಯನ್ನು ನಮ್ಮಲ್ಲಿ ಕಲ್ಪಿಸಿ ನಮ್ಮನ್ನು ಹೊಗಳಿದ ಮಾತ್ರಕ್ಕೆ ನಿಮಗೆ ಸನ್ನಿಹಿತವಾದ ಮರಣವನ್ನು ತಪ್ಪಿಸಲು ನಾವು ಸಮರ್ಥರೆ?

**ತಿರುಕ –** ನನ್ನ ಆರಾಧ್ಯ ಮೂರ್ತಿ ಶಕ್ತಿಮಾತೆಯೇ ನಿನ್ನತ್ತ ಬರಲು ಪ್ರೇರೇಪಿಸಿದಳು. ತುಂಬಿದ ರಾಜಸಭೆಯಲ್ಲಿ ಹಿಂದು ಮುಂದಿನ ಪರಿವೆ ಇಲ್ಲದೆ ಧೂರ್ತತನದಿಂದ ಹೇಳಿದ ಹೇಳಿಕೆಗೆ, ಪ್ರತಿಫಲವಾಗಿ ಸಿಕ್ಕ ಕಾರಾಗ್ರಹವಾಸದಲ್ಲಿ ನಿರ್ವಿಣ್ಣ್ಯ ನಿಸ್ತೇಜವಾಗಿ ಬಿದ್ದು ಶಕ್ತಿಮಾತೆಯ ಸ್ತುತಿ ಸ್ತೋತ್ರ ನಾರಾಯಣದಲ್ಲಿ ನಿರತನಾದ ನನಗೆ ಕ್ಷಣಕಾಲ ಮಬ್ಬು ಆವರಿಸಿ ಅಬ್ಬರದ ಧ್ವನಿಯೊಂದು ನಿನ್ನಡಿಯ ಪಿಡಿಯಲು ಪ್ರೇರೇಪಿಸಿತು. ನೀನಿಚ್ಛಿಸಿದರೆ ಜೀವನ ಇಲ್ಲವೇ ಮರಣ ಕೈ ಬಿಡಬೇಡ ತಂದೆ.

**ಸಿದ್ದೇಶ –** ನಿಮ್ಮಂತೆ ನಾವೂ ಅಗ್ನಿ ಪರೀಕ್ಷೆಗೆ ಒಳಪಡಬೇಕಾಯಿತೇ? ಹೋಗಿ ಭಟ್ಟರೆ, ಧೈರ್ಯದಿಂದ ಹೋಗಿ. ಗುರುವಿನ ಅನುಗ್ರಹದಿಂದ ಕತ್ತಲೆಯಾವರಿಸಿದ ಆಗಸದಲ್ಲಿ ನಕ್ಷತ್ರ ರಾಶಿಗಳ ನಡುವೆ, ಪೂರ್ಣ ಪ್ರಭಾ ಪುಂಜ ಚಂದ್ರ ದರ್ಶನವಾಗಬಹುದು ಧೊರೆಯನ್ನಿಲ್ಲಿಗೆ ಕರೆತನ್ನಿ ಚಂದ್ರನನ್ನು ನೋಡಬೇಕೆಂಬಾಸೆಯಿದ್ದರೆ ಇಲ್ಲಿಗೆ ಬರಹೇಳಿ.

**ತಿರುಕ –** ಬದುಕಿದೆ, ಗುರುವೇ, ಪ್ರತ್ಯಕ್ಷ ಯಮನೇ ಬಂದೆದುರಿಗೆ ನಿಂತರೂ

ಸಾವಿನ ಭಯವಿಲ್ಲ ಕರೆತರುವೆ ಗುರುವೇ.

(ನಾಯಕನು ನೋಡಿಕೊಂಡು ಬರುವನು)

ಸಿದ್ದೇಶ — ಎಲ್ಲವನ್ನೂ ನೋಡಿಕೊಂಡು ಬಂದಿರಲ್ಲವೇ.

ನಾಯಕ — ಹುಂ. (ಎಂದು ತಲೆಯಲ್ಲಾಡಿಸುವನು)

ಸಿದ್ದೇಶ — ಇಲ್ಲಿರುವವೆಲ್ಲವೂ ನಿಮ್ಮದೇ. ನಮ್ಮದೆನ್ನುವವೇನೂ ಇಲ್ಲ. ಕುಳಿತುಕೋ ಯಾರಲ್ಲಿ ಇದೋ ನಮ್ಮಲ್ಲಿದ್ದ ಬೆಳ್ಳಿ, ಬಂಗಾರ, ವಸ್ತ್ರ ವಡೆವೆ, ನಗನಾಣ್ಯಗಳೇನಿದ್ದರೂ ಎಲ್ಲವನ್ನು ಕಟ್ಟಿತಾ. ಹಾಂ. ನಿನ್ನ ಹೆಸರೇನು?

ನಾಯಕ — ಯಾರಾದರೇನು ಸ್ವಾಮಿಗಳೇ ನಾನೂ ಒಬ್ಬ ಭಕ್ತ.

ಸಿದ್ದೇಶ — ಬಹಳ ಸಂತೋಷ ಭವಿಯೊಬ್ಬ ಭಕ್ತನಾಗಬಯಸಿದ್ದು ಪರಮ ಸಂತೋಷ. ಕಾಲಲೀಲೆ ಎಷ್ಟೊಂದು ವಿಚಿತ್ರವಿದೆ. ಕಟುಕ ಕರುಣೆಯ ಸಾಕಾರ ಮೂರ್ತಿ, ಎಲ್ಲವೂ ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ಎನ್ನುವ ಭ್ರಮ ನಿರಸನ ಹೊಂದಿದ ಪ್ರಚಂಡ ನಾಸ್ತಿಕವಾದಿ ದೇವರ ಆಸ್ತಿಕ್ಯಕ್ಕೆ ಶರಣಾಗತ. ತಾನು ತನ್ನವರೆಂಬ ಮಮಕಾರಕ್ಕೆ ಬಲಿಯಾಗಿ ಸ್ವಾರ್ಥದೊಡಲ ತುಂಬಲು ಕೊಲೆಗೂ ಹಿಂಜರಿಯದ ಕುಕರ್ಮಿ ಸತ್ಪುರುಷ ಎಲ್ಲವೂ ಶಿವನಾಟ. ನೀನೇಕೆ ಗರಬಡೆದವರಂತೆ ನಿಂತುಬಿಟ್ಟೆ

ನಾಯಕ — ಈ ಹಾಳು ಪುರಾಣ ಕಟ್ಟಿಕೊಂಡು ನಾವೇನು ಮಾಡಬೇಕಾಗಿದೆ ಬರುವೆ ಸ್ವಾಮಿಗಳೇ.

ಸಿದ್ದೇಶ — ನಿಲ್ಲು ನಾಯಕ. ಬರಿಗೈಯಿಂದೇಕೆ ಹೋಗುತ್ತಿರುವೆ ನಿಲ್ಲು. ಬೆಳ್ಳಿ, ಬಂಗಾರ, ನಗನಾಣ್ಯಗಳೆಲ್ಲವನ್ನು ಕಟ್ಟಿತಂದಿರುವಿಯಲ್ಲವೆ, ಅವೆಲ್ಲವುಗಳನ್ನು ಆತನಿಗೆ ಕೊಟ್ಟು ಬಿಡು ತೆಗೆದುಕೋ ನಾಯಕಾ ತೆಗೆದುಕೊ.

ನಾಯಕ — ಇದೇನು ಸ್ವಾಮಿಗಳೇ.

ಸಿದ್ದೇಶ — ತೆಗೆದುಕೋ ನಾಯಕ ತೆಗೆದುಕೊ. ಇವುಗಳನ್ನು ಪಡೆಯುವ ನಿನ್ನ ಮಾರ್ಗದಲ್ಲಿ ದುಡುಕು ದೌರ್ಜನ್ಯಗಳಿಂದ ಆಗಬಹುದಾದ ಅನಾಹುತಗಳನ್ನು ತಪ್ಪಿಸಲೆಂದೇ ನಮ್ಮ ಕೈಯಾರೆ ಕೊಡುತ್ತಿರುವೆವು.

ನಾಯಕ — ಸ್ವಾಮಿಗಳೇ ನೀವು ಕೊಡುತ್ತಿರುವ, ಈ ರೀತಿಯಲ್ಲಿ ತೆಗೆದುಕೊಳ್ಳಲು ಭಿಕ್ಷುಕನಂತೆ ಬಂದಿಲ್ಲ.

ಸಿದ್ದೇಶ — ರೀತಿ ಯಾವದಾದರೇನು? ನಿನಗೆ ಹಣ ಹೊನ್ನು ಬೇಕಲ್ಲವೆ?

ನಾಯಕ — ಇರಬಹುದು. ಆದರೆ, ಬೇಡಿ ತಿನ್ನುವಲ್ಲಿ, ಕಿತ್ತು ತಿನ್ನುವಲ್ಲಿ ವ್ಯತ್ಯಾಸವಿಲ್ಲವೆ, ಬೇಡುವಲ್ಲಿ ದೀನತೆ, ನಿಂದನೆ ಅಪಹಾಸ್ಯಗಳು ತುಂಬಿವೆ. ಅದೇ ಕಿತ್ತು ತಿನ್ನುವಲ್ಲಿ ಗಾಂಭೀರ್ಯವಿದೆ, ಧೈರ್ಯವಿದೆ.

ಸಿದ್ದೇಶ — ನಿನ್ನೀ ಕರಾಳ ಕೃತ್ಯಕ್ಕೆ ಧೈರ್ಯವೆನ್ನುವೆಯಾ ನೀನಾರು ನಿನ್ನಂತರಾಳಿದ ಗುಟ್ಟು ಮರ್ಮಭೇದಗಳನ್ನು ಚನ್ನಾಗಿ ಒಲ್ಲೆ ನಾಯಕಾ ನಿನ್ನೀ ಜೀವನವು ಜೀವನವೇ. ಹಗಲು ತಲೆಮರಸಿ, ರಾತ್ರಿಯಾಗುತ್ತಲೇ ಕತ್ತಲೆಯ ಕಪ್ಪು ಛಾಯೆಯಲ್ಲಿ ಕೈಗೆ ಸಿಕ್ಕವರ ಕಗ್ಗೊಲೆ ಮಾಡಿ ಸಿಕ್ಕದ್ದನ್ನು ದೋಚಿ ತಿನ್ನುವ ಈ ಜೀವನವು ಜೀವನವೇ ನಿಶಾಚರನಾಗಿ, ಮೀಸೆ ಹುರಿದಿರುವಿ. ಹಸುಗೂಸುಗಳನ್ನು ಲೆಕ್ಕಿಸದೆ, ಪಾಶವೀಕೃತಿಗಳನ್ನೆಸಗುತ್ತ ದೇಶ, ಧರ್ಮದ್ರೋಹಿಯಾಗಿ ಸಾಗಿಸುವ ಜೀವನವು ಜೀವನವೇ. ಗೂಬೆಯ ಜೀವನ.

ನಾಯಕ — ಜೀವನದ ಆಗುಹೋಗುಗಳ ಚಿಂತೆ ನಮಗೇಕೆ ಸ್ವಾಮಿ. ಕಿತ್ತು ತಿನ್ನುವ ನಿರ್ಧಾರಕ್ಕೆ ಬರುವ ಮೊದಲು ಅಳ್ಳೆದೆಯವನಾಗಿದ್ದೆ. ಪಾಪ ಪುಣ್ಯ, ದೇವರು, ಧರ್ಮ ಎನ್ನುವ ಹೆದರಿಕೆ ಇತ್ತು. ಸುಸಂಸ್ಕೃತ ಸುಸಂಪನ್ನನಾಗಿದ್ದೆ. ವಿಧಿಯ ವಿಕಟಾಟ್ಟಹಾಸಕ್ಕೆ ಬಲಿಯಾಗಿ, ನಿರ್ಗತಿಕನಾಗಿ, ಸಮಾಜದೆದುರು ಸಾಮಾನ್ಯನಾಗಿ ನಿಂತು ಬೇಡಿದೆ. ಆದರೆ ಸಿಕ್ಕದ್ದೇನು? ಹಸಿವು ದಾರಿದ್ರ್ಯ ಅಪಮಾನಗಳು. ಇಂದು ಕಿತ್ತು ತಿನ್ನುತ್ತಿರುವೆ ನಾನೂ ಸುಖಿ, ನನ್ನ ಅನುಯಾಯಿಗಳೂ ಸುಖಿಯಾಗಿದ್ದಾರೆ. ನಾನು ಇರುವಷ್ಟು ಕಾಲ ಸಿಂಹ ಜೀವನವನ್ನೇ ಬಯಸುವೆ.

ಸಿದ್ದೇಶ — ಕೊನೆಗೊಂದು ದಿನ ಸಾಯಲೇ ಬೇಕಲ್ಲವೇ?

ನಾಯಕ — ಅದು ಎಲ್ಲರಿಗೂ ಗೊತ್ತಿದೆ.

ಸಿದ್ದೇಶ — ಗೊತ್ತಿದೆ ಎಂದ ಮಾತ್ರಕ್ಕೆ ಭವಿತವ್ಯದ ಚಿಂತನ ಮಂಥನಗಳು ಬೇಡವೇ?

ನಾಯಕ — ಅವಾವವೂ ಬೇಕಿಲ್ಲ ಹಸಿವೆಗೆ, ಅನ್ನ ತೃಷೆಗೆ, ನೀರು ವಸನಕ್ಕೆ ಅರಿವೆ ಸಿಕ್ಕರೆ ಸಾಕು.

ಸಿದ್ದೇಶ — ಇವು ಮಾನವ ಬಯಕೆಗಳಲ್ಲ ಪಶು ಬಯಕೆ, ಆಹಾರ ನಿದ್ರಾ, ಭಯ, ಮೈಥುನಗಳೆಂಬ ಚತುರ್ವಿಧಿಗಳು ಕೇವಲ ಪಶುಗಳಿಗೆ ಮಾತ್ರ ಸೀಮಿತವಾಗಿವೆ. ಮಾನವನೆಂದೆಣಿಸಿಕೊಳ್ಳುವವನು ದೇವನಿಂದ ಜ್ಞಾನ ಪಡೆದು ಜ್ಞಾನ ಬಲದಿಂದ ಚತುರ್ವಿಧಿಗಳನ್ನು ಹಿಡಿತದಲ್ಲಿಟ್ಟುಕೊಂಡು ಸೂಕ್ತ ವಿನಿಯೋಗ ವಿನಿಮಯಗಳಿಂದ ದೇವನಾಗಬಲ್ಲ. ದುರ್ವಿನಿಯೋಗದಿಂದ ದಾನವನಾಗಬಲ್ಲ, ಯೋಚಿಸಿ ನೋಡು. ನಾಯಕ ನಿನ್ನ ಕರಾಳ ಕೃತ್ಯಕ್ಕೆಷ್ಟು ಸಂಸಾರಗಳು ಸೂರೆಯಾಗಿವೆ. ಸಾವು ನೋವುಗಳ ಸಂಖ್ಯೆ ಅಪರಿಮಿತ, ಕೊಲೆ ಸುಲಿಗೆಗಳ ಸಂಖೆಗೆ ಲೆಕ್ಕವಿಲ್ಲ. ನಿನ್ನಿಂದ ಬೇಸತ್ತ ತಪ್ತ ಆತ್ಮಗಳಿಗೇನು ಸಮಾಧಾನ ಕೊಡಬಲ್ಲೆ?

ನಾಯಕ — ಅಂದರೇನು. ನಿಮ್ಮ ದೃಷ್ಟಿಯಲ್ಲಿ

ಸಿದ್ದೇಶ — ಪಾಪಿ, ಮಹಾಪಾಪಿ ನಮ್ಮೊಬ್ಬರ ದೃಷ್ಟಿಯಲ್ಲಿ ಮಾತ್ರವಲ್ಲ ಇಡೀ ಪ್ರಪಂಚದ ದೃಷ್ಟಿಯಲ್ಲಿ ಪಾಪಿ. ನಿನ್ನಿಂದ... ನಿನ್ನ ಪಾಪಕೃತ್ಯದಿಂದ ಬೇಸತ್ತ ಮಾನವ ಕೋಟಿಯ ದೃಷ್ಟಿಯಲ್ಲಿ ನೀನು ಪಾಪಿ, ದ್ರೋಹಿ.

ನಾಯಕ — ನಾನು ಪಾಪಿಯೇ, ದ್ರೋಹಿಯೇ, ಅಲ್ಲಲ್ಲ ನಾನು ಪಾಪಿಯಲ್ಲ ಕೇವಲ ನನ್ನೊಬ್ಬನ ಸ್ವಾರ್ಥ ಹಿತಸಾಧನೆಗಾಗಿ ನಾನೇನೂ ಮಾಡುತ್ತಿಲ್ಲ. ಪ್ರಪಂಚದಲ್ಲಿ ನನ್ನಂತೆ ವಿಪನ್ನಾವಸ್ಥೆಗೆ ಗುರಿಯಾದ ಸಂತಪ್ತ ಕುಟುಂಬಗಳ ಪೋಷಣೆಯ ಹೊಣೆ ಹೊತ್ತ ನಾನು ಪಾಪಿಯೇ.

ಸಿದ್ದೇಶ — ಅಲ್ಲದಿನ್ನೇನು ನಾಯಕ. ನಿನ್ನ ಕೈಹಿಡಿದ ಮಡದಿ ಮಕ್ಕಳೇ ನಿನ್ನವರಾಗದಿರುವಾಗ ಹೆರವರು ನಿನ್ನವರೇ? ಮಡದಿ ಮಕ್ಕಳಲ್ಲಿ ದಿನಕ್ಕೊಬ್ಬರಂತೆ ಕಾಲನ ತುತ್ತಾಗಲಿದ್ದಾಗ ನೀನೇಕೆ ಅವರಿಗಾಸರೆಯಾಗಲಿಲ್ಲ? ನೀನು ಅರ್ಜಿಸಿದ ಪಾಪ–ಪುಣ್ಯಗಳನ್ನು ನಿನ್ನನ್ನನುಸರಿಸುವವರು ಭೋಗಿಸಬಲ್ಲರೇ? ನೀಕೊಂಬ ಊಟ ನೀಕೊಂಬ ಇಂದ್ರಿಯ ಸುಖೋಪಭೋಗಗಳನ್ನು ಹೆರವರು ಕೊಂಡರೆ ನಿನಗೆ ತೃಪ್ತಿಯಾದೀತೆ? ನಿನ್ನ ಪಾಪ ಕರ್ಮದಲ್ಲಿ ಬಂದ ಫಲಭೋಗಿಸುವಲ್ಲಿ ನೆರವಾಗಬಲ್ಲರೇ? ಹಿಂದಿನ ದಿನಮಾನಗಳಲ್ಲಿ ಮಡದಿ, ಮಕ್ಕಳಿಂದೊಡಗೂಡಿದ ನಿನ್ನ ಸಂಸಾರ ನಲಿವು–ತೆಲುವುಗಳ ಸಮ್ಮಿಲನದಲ್ಲಿ ರಸಮಯವಾಗಿತ್ತು. ಇಂದವೆಲ್ಲವುಗಳನ್ನು ಕಳೆದುಕೊಂಡು ನಿರಾಶನಾದ ನಿನಗೆ, ಏನಿದ್ದರೂ ಆತ್ಮಕ್ಕೆ ಶಾಂತಿಯಿಲ್ಲ

ಬುದ್ಧಿ ಸ್ಥಿಮಿತದಲ್ಲಿಲ್ಲ. ಜೀವನವು ರುದ್ರಮಯವಾಗಿದೆ, ಶಾಂತಿಗಾಗಿ ಆತ್ಮ ಹಾತೊರೆಯುತ್ತಿದೆ.

**ನಾಯಕ –** ಅಹುದು ಶಾಂತಿಗಾಗಿ ಆತ್ಮ ತತ್ತರಿಸುತ್ತಿದೆ. ನನಗೆ ಶಾಂತಿ ಇಲ್ಲ ನೆಮ್ಮದಿ ಇಲ್ಲ ಜೀವನದ ಗತಿಯ ಅರಿವಿಲ್ಲದ ನನ್ನ ಬಾಳು ನಿಜವಾಗಿಯೂ ರುದ್ರಮಯವಾಗಿದೆ, ಸ್ವಾಮೀ, ನನ್ನೀ ಕಟು ನುಡಿಗಳು ನನ್ನ ತಪ್ತ ಆತ್ಮವನ್ನು ಚುಚ್ಚಿ ಚುಚ್ಚಿ ಬಡಿದೆಬ್ಬಿಸುತ್ತವೆ. ತಪ್ತ ಆತ್ಮದ ಸೇಡಿಗಾಗಿ ಕ್ರೌರ್ಯದ ಮೊರೆಹೊಕ್ಕು ಮಾಡಬಾರದ ಹೇಯ ಕೃತ್ಯಗಳನ್ನು ಮಾಡಿದೆ, ನನ್ನ ಕರಾಳ ಕೃತ್ಯಕ್ಕೆ ಬಲಿಯಾದ ತಪ್ತ ಆತ್ಮಗಳು ಸುತ್ತುವರೆದು ನಿಂತು ಶಪಿಸುತ್ತಿವೆ. ಪಾಪಿ ಎಂದು. ಆಹುದು ನಾನು ಪಾಪಿ. ನಾನು ದ್ರೋಹಿ, ದೋಹಿ–ದ್ರೋಹಿ ಕ್ಷಮಿಸು ಗುರುವೇ ಕ್ಷಮಿಸು.

(ನಾಯಕನ ಅಂತರಾತ್ಮದ ಪ್ರತಿಧ್ವನಿ ವಿಕಾರನಗೆಯೊಂದಿಗೆ)

**ಅಂತರಾತ್ಮ –** ಥೂ ಪಾಪಿ ನಿನಗಿನ್ನು ಕ್ಷಮೆಯೇ? ಮಾಡಬಾರದ ಅನಂತ ಅಕ್ಷಮ್ಯ ಅಪರಾಧ ಅನಾಹುತಗಳನ್ನು ಮಾಡಿ ಕ್ಷಮೆಯಾಚನೆಯೇ ನಿನಗಿನ್ನು ಕ್ಷಮೆಯಿಲ್ಲ ಕ್ಷಮೆ ಬೇಡಲು ಅಯೋಗ್ಯ ನೀನು ಅಯೋಗ್ಯ. ಅಯೋಗ್ಯ.... ಅಯೋಗ್ಯ... (ವಿಕಾರನಗೆಯೊಂದಿಗೆ ಕೇಳಿ ಬರುವದು)

**ನಾಯಕ –** ಅಹುದು. ನಾನು ಅಯೋಗ್ಯ. ನನ್ನ ಕೃತಕೃತ್ಯದ ಫಲ ಪರಿಣಾಮಗಳು ಕಣ್ಣೆದುರು ನಿಂತು ಕೆಂಗಂಣುಗಳಿಂದ ಕಿಡಿಕಾರುತ್ತಾ ಕೈಮಾಡಿ ಕರೆಯುತ್ತಿವೆ ಕರ್ಮ ಫಲ ಭೋಗಿಸಲೆಂದು, ಧನಕನಕ ದಾಪಕ್ಕೆ ದಾಸನಾಗಿ ಹೇಸಿ ಹೃದಯದಿಂದ ಹಸುಗೂಸು ಹೆಂಘಳೆಯರನ್ನು ಲೆಕ್ಕಿಸದೆ. ಸೊಕ್ಕಿನಿಂದ ಎದೆಗೊದೆದು ನಿಷ್ಕರುಣೆಯಿಂದವರ ರುಂಡಗಳನೆ ಚಂಡಾಡಿ ರಕ್ತದೋಕಳಿಯನ್ನಾಡಿದ ನನ್ನೀಕೈಗಳು ನಿನ್ನ ಪಾದ ಮುಟ್ಟಿ ಕ್ಷಮೆ ಬೇಡಲು ಅಯೋಗ್ಯ ನಾನು ಅಯೋಗ್ಯ, ನನಗಿನ್ನು ಕ್ಷಮೆಯಿಲ್ಲ.

**ಸಿದ್ಧೇಶ –** ನಾಯಕ ಹೀಗೇಕೆ ಹುಚ್ಚನಂತೆ ಬಡ ಬಡಿಸುತ್ತಿರುವಿ. ನಿನ್ನ ತಪ್ತ ಆತ್ಮ ಪರ್ಶಚಾತ್ತಾಪದಗ್ಗಿಷ್ಟಿಕೆಯಲ್ಲಿ ಬೆಂದು ಪರಿಪಕ್ವವಾಗಿದೆ ಜೀವನ ಪರಿಶುದ್ಧಿಯತ್ತ ಧಾವಿಸುತ್ತಿದೆ. ಪಶ್ಚಾತ್ತಾಪವೇ ಪಾಪ ಕ್ಷಯದ ಮಾರ್ಗ ಹಿಂದಿನದನ್ನು ಮರೆತು ಜೀವನ ಶುದ್ಧಿಯ ಮುಂದಿನ ಮಾರ್ಗದಲ್ಲಿ ಸಾಗು.

**ನಾಯಕ** — ಅಂದರೆ ನಾನೀವರೆಗೆ ಸಂಚಿಸಿದ ಪಾಪದಿಂದ ನಿವೃತ್ತನಾಗ ಬಲ್ಲೆನೆ ಗುರುವೇ.

**ಸಿದ್ದೇಶ** — ನಿಃಸಂದೇಹವಾಗಿ

**ನಾಯಕ** — ನಾನೀವರೆಗೆ ಮಾಡಿದ ತಪ್ಪನ್ನು ಮನ್ನಿಸಿ ಸಮಾಜ ನನ್ನನ್ನಪ್ಪಿಕೊಳ್ಳಬಲ್ಲದೇ.

**ಸಿದ್ಧೇಶ** — ಶರಣಾಗತರಾದವರನ್ನು ಸಮಾಜವೊಂದೇ ಏಕೆ ಶಿವನೇ ವಪ್ಪಿ ಅಪ್ಪಿಕೊಳ್ಳಬಲ್ಲ. ಮಠ ಮಂದಿರ ಸ್ವಾಮಿ ಸನ್ಯಾಸಿಗಳಿರುವದೇತಕ್ಕೆ? ಜೀವನದಲ್ಲಿ ಜಿಗುಪ್ಸೆ ಹೊಂದಿ ಆತ್ಮ ಸಾಕ್ಷಾತ್ಕಾರಕ್ಕಾಗಿ ಹಾತೊರೆಯುವ ನೊಂದ ಜೀವಿಗಳಿಗೆ ಸಂಸ್ಕಾರ ನೀಡಿ ಶಿವನ ಸಾಮಿಪತ್ಯ ಕಲ್ಪಿಸಿ ಜೀವನೋದ್ಧಾರದ ದಾರಿ ತೋರಲೆಂದೇ ಮಠ ಮಂದಿರಗಳ ಆಸ್ತಿಕತೆ.

**ನಾಯಕ** — ಗುರುವೇನಾನಿಲ್ಲಿದ್ದುಕೊಂಡು ನಿಮ್ಮ ಮಾರ್ಗ ದರುಶನದಲ್ಲಿ ಕಳೆದುಕೊಂಡ ಮನಃಶಾಂತಿಯನ್ನು ಪುನಃ ಪಡೆಯಬಹುದೇ.

**ಸಿದ್ದೇಶ** — ನಿರಾತಂಕವಾಗಿ, ನೀನಿಲ್ಲಿರಬಹುದು.

**ನಾಯಕ** — ಗುರುದೇವಾ... (ಎಂದು ನಮಸ್ಕರಿಸುವನು)

**ಸಿದ್ದೇಶ** — ಯಾವದಾದರೊಂದು ಸತ್ಯ ಶುದ್ಧ ಕಾಯಕವಿಡಿದು ಬಾಳು

**ನಾಯಕ** — ಧನ್ಯ ಗುರುದೇವಾ ಧನ್ಯ, (ಎಂದು ನಮಸ್ಕರಿಸುವನು)

**ಸಿದ್ಧೇಶ** — ಹೋಗು ನಾಯಕ ಪ್ರಸಾದ ತೆಗೆದುಕೊ (ಅಷ್ಟರಲ್ಲಿ ಭಟ್ಟರು ನವಾಬನನ್ನು ಕರೆದುಕೊಂಡು ಬರುವರು)

**ಮೀರಾಲಂ** — (ಗರ್ವದಿಂದ) ಓಹ್ ಅಪಹೈಂ ಸ್ವಾಮೀಜಿ.... ಸ್ವಾಮೀಜಿ ಆಪ ಇಸ್ ಬಹುರೂಪಿಯಾ ಪಾಖಂಡೀಕಾ ಗುನಾಹೊಂಕು ಅಪನೆ ಜಿಮ್ಮೆ ಲೇಕರ್ ಕ್ಯೊಂ ಪಚತಾನಾ ಚಾಹತೇ ಹೈಂ ಐಸೆ ಬೇಹೋಷ ಬದ್‌ಚಲನ್, ನಾಪಾಕ ಖುದ ಗರಜಿ ಇನ್‌ಸಾನಿ ಷಕಲಿಕೆ ಷೈತಾನಕು ಸಜಾ ಜರೂರು ಮಿಲನಾ ಚಾಹಿಯೇ, ಅಪನಿ ರೋಜಗಾರೀ ಕೆ ಲಿಯೇ ಭೋಲೇ ಭಾಲೊಂಕು ಬಹಕಾತೇ ಹುಯೇ ಖುದಾಕಿ ಅಡಮೆ ಅಪನಿ ಕಾಲಿ ಕರತೂತೊಂಕು ಛುಪಾನೆ ವಾಲೆ ಐಶೆ ದಗಾ ಬಾಜೊಂಕು ಸಜಾ ಜುರೂರು ಮಿಲನಾ ಚಾಹಿಯೆ

ಅಪಜಾನತೇ ಹೈಂ ಆಜಹೀ ಅಭೀ ಇಸಕಾ ಜಿಂದಗಿ ಖತಮ್ ಹೋನೇವಾಲಾ ಹೈ.

ಸಿದ್ಧೇಶ — ಏತಕ್ಕಾಗಿ...

ಮೀರಾಲಂ — ಇಸ್‌ಲಿಯೇ ಕೆ ಅನಹೋನೀಕಾ ದಾವಾ ಕಿಯಾ ಹೈ ಬಲಕೆ ಸರಪೆ ಕಫನ್ ಬಾಂದಕೆ ಚಲಾ ಹೈ ಏಕಭೀ ಹೋಸಕ್ತಾ ಹೈ ಭರೀ ಅಮವಾಸಕೆ ದಿನ್ ಚಾಂದ ದಿಖಾಯಿ ದೇ.

ಸಿದ್ಧೇಶ — ಶಿವನ ಶರಣಾಗತರಾದವರಿಗೆ ಯಾವದೂ ಅಸಾಧ್ಯವಲ್ಲ ಅವರು ಇಚ್ಛಿಸಿದರೆ, ಚಂದ್ರ ದರ್ಶನವೇಕೆ ಸೂರ್ಯನ ಗತಿಯನ್ನೇ ತಡೆಯಬಲ್ಲರು ಹರಿಯುವ ನೀರಿನ ದಿಶೆಯನ್ನೇ ಬದಲಿಸಬಲ್ಲರು ವಾಯುವಿನ ಚಲನೆಯ ಮೇಲೆ ತಮ್ಮ ಪ್ರಭುತ್ವ ಸ್ಥಾಪಿಸಬಲ್ಲರು ಭೂಮಿ ಆಕಾಶಗಳ ಸ್ಥಿತ್ಯಂತರಗಳನ್ನೇ ತಲೆ ಕೆಳಗೆ ಮಾಡಬಲ್ಲರು.

ಮೀರಾಲಂ — ಆಪಕಾ ಭೀ ಎಹೀ ದಾವಾ ಹೈ? ಅಪ ಭಿ ಅಮವಾಸಕೆ ದಿನ ಚಾಂದ ದಿಖಾಯೇಂಗೆ.

ಸಿದ್ಧೇಶ — ಭಟ್ಟರ ಮೇಲಿನ ಆಪಾದನೆಗಳನ್ನು ಹಿಂತೆಗೆದುಕೊಂಡು ಅವರಿಗೆ ವಿಧಿಸಿದ್ದ ಮರಣದಂಡನೆಯನ್ನು ಮುಕ್ತಗೊಳಿಸಬಹುದಾದರೆ ಮಾತ್ರ

ಮೀರಾಲಂ — ಸೋಚ ಸಮಜಕರ್ ಜವಾಬ ದೀಜಿಯೇ. ಅಪ ಕಿಸ್‌ಕೆ ಸಾಮನೆ ಯಹ ಬಾತ ಕಹರಹೆ ಹೈ.

ಸಿದ್ಧೇಶ — ನಿನಗೆ ರಾಜನೆಂಬ ಅಭಿಮಾನವಿರಬಹುದು ಆದರೆ.

ಮೀರಾಲಂ — ಬಹುತ ಖೂಬ ಅಗರ ಆಪಕಿ ಎಹೀ ತಮನ್ನಾ ಹೈ ತೋ ಜರೂರ ಹಾರ ಮಾನೇಂಗೆ, ಅಗರ ನಹೀ ತೊ ಇಸ್ ಪಾಖಂಡೀಕೆ ಸಾಥ ಸಾಥ ಆಪಕೋ ಭಿ.... ಯಾದ ರಖನಾ ಸ್ವಾಮೀಜಿ.

ಸಿದ್ಧೇಶ — ನವಾಬ, ಶರಣರಿಗೆ ಮರಣದ ಭಯವೇ ಇಲ್ಲ. ಶರಣರ ಅಳಿವು ಉಳಿವು ಮಾನಾಪಮಾನಗಳ ಹೊಣೆ ಹೊತ್ತ ಶಿವನಿಗಿದು ಅಸಾಧ್ಯವೇ. ಆಗಸದತ್ತ ನೋಡುತ್ತಿರು ನಭೋಮಂಡಲದ ನಕ್ಷತ್ರರಾಶಿಗಳ ಮಧ್ಯೆ ಪೂರ್ಣ ಪ್ರಭಾ ಪುಂಜ ಚಂದ್ರ ಕಾಣಸಿಗುವ (ಕೊರಳೊಳಗಿನ ರುದ್ರಾಕ್ಷಮಾಲೆಯನ್ನು ತೆಗೆದುಕೊಳ್ಳುತ್ತಾ) ಶಿವನೇ? ಅಣು ರೇಣು, ತೃಣಕಾಷ್ಠಗಳ ಸತ್ವ ಚೇತನ ನೀನೇ ಎಂಬುದು

ನಿಜವಾಗಿದ್ದರೆ? ಶರಣಾಗತ ರಕ್ಷಕನೆಂಬ ಬಿರುದು ಹೊತ್ತ ನೀನಿರುವಿ ಎಂಬುದು ನಿಜವಾಗಿದ್ದರೆ? ನನ್ನೀಕಂಠಸ್ಥ ನಿನ್ನಕ್ಷ ಮಾಲೆಯನ್ನೇ ನಿನ್ನೆಡೆಗೆ ತೂರುವೆ ನೀನಿಚ್ಛಿಸಿದರೆ ಅದು ಪೂರ್ಣ ಚಂದ್ರಬಿಂಬದೊಡನೆ ಆಗಸದ ತುಂಬೆಲ್ಲ ಪಸರಿಸಲಿ, ಇಲ್ಲವೇ ನನ್ನ ದೇಹದೊಂದಿಗೆ ಸಮಾಧಿ ಹೊಂದಲಿ ಜೈ ಗುರುದೇವ (ಎಂದು ಅಗಸಕ್ಕೆ ತೂರಿದಾಗ ಚಂದ್ರ ಕಾಣುವದು.)

(ಎಲ್ಲರೂ ಜಯಘೋಷ ಮಾಡುವರು)

**ತಿರುಕ** — ಅಹಾ ಹಾ ಸಿದ್ಧೇಶ, ನೀನು ಮಾನವ ಮಾತ್ರನಲ್ಲ ಯಮನ ದವಡೆಗಳಿಂದ ನನ್ನನ್ನು ಕಿತ್ತಿತಂದ ಮೃತ್ಯುಂಜಯನೇ ನೀನು.

(ಎಂದು ನಮಸ್ಕಾರ ಮಾಡುವನು)

**ಸಿದ್ಧೇಶ** — ಏಳಿ ಭಟ್ಟರೆ, ಶಿವನು ನಮ್ಮ ನಿಮ್ಮಂತಲ್ಲ ಅವನು ಸರ್ವಾಂತರ್ಯಾಮಿ. ತನ್ನನ್ನು ನಂಬಿದವರನ್ನೆಂದೂ ಕೈಬಿಡತಕ್ಕವನಲ್ಲ ಏಕೆ ನವಾಬರೇ ಮೌನವೇಕೆ?

**ಮೀರಾಲಮ** — ಅಜೀಬ ಜಾದೂಕಾ ನಮೂನಾ ದಿಖಾಯೇ ಸ್ವಾಮೀಜಿ ಹಮ್ ಆಪಕೆ ದಾದ ದೇತೆ ಹೈಂ... ಖೈರ ಕುಛಭಿ ಹೋ ಅಪಕು ದಿಯೇ ಹುಯೇ ಜಬಾನಕಿ ಪಾಬಂದೀ ರಖತೇ ಹುಯೇ ಇಸ್ ಭಟಜಿಕೋ ದಿಯೇ ಹುಯೇ ಸಜಾಯೆ ಮೌತಕು ರಿಹಾಯಿಮೆ ಬದಲದೇತೆ ಹೈಂ. ಹಮನೇ ಆಜತಕ ಬಹುತಸೆ ವಲಿ ಮುರಷದೊಂಕು ದೇಖಾ ಹೈ. ಅಲ್ಲಾಹಕೆ ಬಂದೊಂಕು ದೇಖಾಹೈ. ಪಹುಂಚೆ ಹುಯೇ ಹಸ್ತಿಯೊಂಕು ದೇಖಾ ಹೈ. ಖೈರ ಕುಚ್ ಭೀ ಹೋ ಅಪನೆ ಜೋ ಭರಿ ಹುಯೀ ಮಜಲಿಸ್ ಮೆ ಜೋ ಜಾದೂಕಾ ನಮೂನಾ, ಖುದಾಕಿ ಖುದರತೀ ರಿಸ್ತ ವ ರಿವಾಜೊಂಕು ಜೋ ಮಸನವಿ ಢಂಗಸೆ ಜಾದೂಕಾ ನಮೂನಾ ದಿಖಾಯೆ. ಹಮ ಬಹುತ ಖುಷ ಹೈ. ಆಪ್‌ಭೀ ಅನೋಖಾ ಜಾದೂಗರ ಹೈ. ಮಾಂಗೋ ದಿಲಖೋಲಕೆ ಮಾಂಗೋ ಆಪಕಾ ಹರ ಮಾಂಗ ಪೂರಿ ಕರದಿಯಾ ಜಾಯೆಗಾ ಧನ್, ದೌಲತ್, ಇನಾಮ ಜಾಗೀರ ಯಾ ಅವುರ ಕುಚ್ ಮಾಂಗೋ.

**ಸಿದ್ಧೇಶ –** ನವಾಬ ನೀನೇನು ಕೊಡಬಲ್ಲೆಯೋ ಹೋಗು ಆ ಕಾಲ ಬಂದೇ ಬರಲಿದೆ. ಬರಲಿರುವ ಕಾಲಕ್ಕಾಗಿ ಕಾಯ್ದು ನಿಂತಿರು.

**ನವಾಬ –** ಅಜೀಬ ತಮ್ಮನ್ನಾ ಹ್ಯೆ.

(ಎಂದು ಹೋಗುವನು)

===***===***===

# ದೃಶ್ಯ ೧೬

ರೂಪಲ್ಯಾ ಕಾಲು ಕಳೆದುಕೊಂಡು ಭಿಕ್ಷೆ ಬೇಡುತ್ತಾ ಬರುವನು ಎದುರಿನಿಂದ ಸಿದ್ಧನು ಬಂದು ನೋಡಿ–

**ಸಿದ್ಯಾ** – ಯಾರು... ರೂಪಲ್ಯಾ ಇದೇನು ನಿನ್ನ ಅವಸ್ಥೆ.

**ರೂಪಲ್ಯಾ** – ಆಗಬೇಕಾದದ್ದು ಆಗೇತೆ ಸಿದ್ದಪ್ಪಾ ಮಾಡಿದ್ದುಂಣ್ಣೊ ಮಾರಾಯಾ

**ಸಿದ್ಯಾ** – ಮಾಡಿದ್ದಲ್ಲಪಾ ಇದು ಬೇಡಿದ್ದು.

**ರೂಪಲ್ಯಾ** – ಮಾಡಿದ್ದೊ ಬೇಡಿದ್ದೊ ಬಂದದ್ದು ಉಂಣಬೇಕಲ್ಲ ಎಪಾ

**ಸಿದ್ಯಾ** – ಏನಾಯಿತು... ರೂಪಲ್ಯಾ

**ರೂಪಲ್ಯಾ** – ಏನ ಹೇಳ್ಲಿ ಮಾರಾಯಾ ನೀನು ಹೋದಿ ನಮ್ಮ ನಾಯಕ ಆತನು ಕಳವು ಮಾಡಾಕಂತಾ ಮಠಕ ಹೋಗಿ ಆತಗೇನಾತೋ ಏನ ಇಲೋ ಆತನು ಅಲ್ಲೇ ಸೇರಿವಿ ಆದ.

**ಸಿದ್ಯಾ** – ಸರಿ ನಿನಗೇಕೆ ಈ ದುರವಸ್ಥೆ

**ರೂಪಲ್ಯಾ** – ಎಲ್ಲಾರೂ ಕೈ ಬಿಟ್ಟ ಹೋದರು ನಾನೂ ನಾಕು ಮಂದಿ ಕಟಿಗೊಂಡ ಗೌಡರಮನಿ ಕನ್ನಾ ಹಾಕಿದ್ವಿ ಏನ ಆತೋ ಏನು ಇಲ್ಲೊ ಗ್ವಾಡಿ ಕತ್ತರಿಸಿ ಗೊಂಡು ಬಿದ್ದು ಸಿಕ್ಕಹಾಕ್ಕೆಂಡು ಬಿದ್ದದ್ದು ನೋಡಿ ಎಲ್ಲಾರು ಓಡಿ ಹೋಗಿ ಬಿಟ್ಟಿದ್ದರು ಅಷ್ಟೊತ್ತಿಗೆ ಆಳಮಕ್ಕಳು ಬಂದು ನನ್ನ ಮುಗಸಾಕ ನಿಂತಿದ್ರು ನಮ್ಮ ಗೌಡಶಾನಿ ಸಿದ್ದಪ್ಪನ ಆಣಿ ಇಟ್ಟು ಕೈಬಿಡಸಿದ್ಲು.

**ತಿಪ್ಪವ್ವ** – (ಬಂದು ನೋಡಿ) ಏ ಹಿರಿಯಾ ಲಗೂ ಬಾರ ಲಗೂ ಬಾ

**ಬಾಳ್ಯಾ** – (ವಳಗಿನಿಂದಲೇ) ಯಾಕ ವದರತೀಯ ತಡಿ ಬಂದೆ,

**ತಿಪ್ಪವ್ವ** – ಲಗೂ ಬಾರ ಲಗೂ ಬಾ ಬರೋದು ಬರತೀ ಕೈಯಾಗ ಏನಾರ ತಗಂಡ ಬಾ.

**ಬಾಳ್ಯಾ** — ಯಾಕ ಏನಾಗೈತೆ.

**ತಿಪ್ಪವ್ವ** — ಇಲ್ಲಿ ಅದಾನ ನೋಡ ಇವನ ನೆಲಗಣಿಗೆ ಹರಿವಿದ ಸೀರಿ ಕದ್ದುಕೊಂಡು ಹೊಂಟಿದ್ದಾ.

**ಬಾಳ್ಯಾ** — ಹೌದೇನಲೆ ಪಿಕನಾಶಿ.

**ತಿಪ್ಪವ್ವ** — ಅಯ್ಯ ಕೇಳತೀಯಲ್ಲ ವದಿ ವಂದೆರಡು ನೀಹೋಳಾಗು ನಾನ ವದೀತೀನಿ ಏ ಕೊಮಾರಾಮಾ ಚೂರಿ ತೋರ್ಸಿ ಹೆದರಿಸಿದ್ದಿಯಲ್ಲ ಈಗ ತೋರ್ಸ ಕಂಬೀರ.

**ಬಾಳ್ಯಾ** — ಏನು ಚೂರಿ ತೋರ್ಸಿದ್ದನಾ.

**ತಿಪ್ಪವ್ವ** — ಅಯ್ಯ ಹೌದ ಥೂ ನಿನ ಮಾರಿಗೆ ಉರಿ ಹತ್ತಲಿ ನಿನ್ನ ಕೈಗೆ ಕರೇ ನಾಗರ ಕಡೀಲಿ.

**ಪಾರ್ವತಿ** — (ಬುತ್ತಿ ಹೆಡಿಗೆಹೊತ್ತು ಹೊಲಕ್ಕೆ ಹೊರಟಿದ್ದಾಳೆ) ತಡೆ ಬಾಳಪ್ಪಾ ಅವನನ್ನೇಕೆ ಹೊಡೆಯುವಿರಿ.

**ಬಾಳ್ಯಾ** — ಎವ್ವಾ ಇವನ್ನ ಹಂಗ ಬಿಡಬಾರದು ಗತಿ ಕಾಣಿಸಬೇಕ್ರಿ.

**ರೂಪಲ್ಯಾ** — ಎವ್ವಾ ನಿವಾರ ಉಳಿಸಿಕೊಳ್ರಿ ತಾಯಿ, ಇನ್ನ ಮೇಲೆ ಎಂದೂ ಕಳ್ಳತನಕ ಕೈ ಹಾಕೊದಿಲ್ಲ.

**ಪಾರ್ವತಿ** — ನೀನೊ ಹೋಗಲಿಬಿಡು ಬಾಳಪ್ಪಾ! ಈಗ ಅವನಿಗೆ ಆದದ್ದೇ ಸಾಕಾಗಿದೆ.

**ತಿಪ್ಪವ್ವ** — ಎವ್ವಾ ಎಲ್ಲಿ ಹೊಂಟಿರಿ.

**ಪಾರ್ವತಿ** — ಹೊಲಕ್ಕೆ ತಿಪವ್ವಾ ಹೊಲದಲ್ಲೇನೋ ಕೆಲಸವಂತೆ ಗೌಡರಿಗೆ ಬುತ್ತಿ ಓಯ್ಯುತ್ತಿದ್ದೇನೆ. ಹೋಗಲಿ ಅವನ ಪಾಲಿಗೆ ಅವನನ್ನು ಬಿಟ್ಟುಬಿಡಿ.

**ಬಾಳ್ಯಾ** — ಲೆ ತಿಪ್ಪಿ ಅವ್ವಾ ಅವರು ಬ್ಯಾಡಂತಾರ ನಡಿ ಹೋಗಾನ

**ತಿಪ್ಪವ್ವ** — ಹಂಗಾರ ಹೋಗಲಿ ಬಿಡು ಅಲ್ಲ ಬರೋದು ಯಾ ಅಮಾಸೆ.

**ಬಾಳ್ಯಾ** — ಅದನ್ನ ತಗೊಂಡು ಏನ ಮಾಡತೀ ಇರ್ಲಿ ನಡೀಬಾರದ ಯಾಕ ನಿನಗ ಅಮಾಸಿ ಹುಚ್ಚ ಬಿಟ್ಟಿಲ್ಲೇನು ಮತ್ತೇನರ ಅಂತ್ರ ಮಂತ್ರ ಮಾಡಿಸಗೋಬೇಕೆನು?

ತಿಪ್ಪವ್ವ — ಅಂತ್ರಾ ಭಟ್ಟರ ಹಿಂದೇನ ಕೈ ಬಿಟ್ಟೆನಲ್ಲ ಮಾರಾಯಾ ಯಾವಾದ ಅಮಾಸಿ.

ಬಾಳು — ಏನ ಸುದ್ದಿ ಯಾಕ?

ತಿಪ್ಪವ್ವ — ಇರ್ಲಿ ಹೇಳ

ಬಾಳು — ಆಶಾಡದ ಅಮಾಸಿ ಅಲ್ಲೇನು, ಅಲ್ಲ ತಿಪ್ಪಿ ಯಾಕ ಎಷ್ಟೊಂದು ಮರಮಾಸಿ ಕೇಳತಿಯಲ್ಲ ಸುದ್ದಿ ಏನ?

ತಿಪ್ಪವ್ವ — ಅಮಾಸಿಗೆ, ಅಮಾಸಿಗೆ... ಮೂರು ತುಂಬಿದವು

ಬಾಳು — (ಖುಷಿಯಾಗಿ) ಕೆ ಹೋ ಹೋ ಹೋ ಮೂರು ತುಂಬಿದ ವಂತಮೋ

ತಿಪ್ಪವ್ವ — ನಿನಗೇನಾಗೈತ ಅಬರಗೇಡಿ ಇರ್ಲಿನಡಿ (ಬಾಳು ತಿಪ್ಪಿ ಹೋಗುವರು)

ರೂಪಲ್ಯಾ — ಅಂಣಾ ಸಿದ್ದಪ್ಪಣ್ಣ ಈ ಹೇಸಿ ಜಲ್ಮಾ ಎಲ್ಲಿತನಕ ಹರೀಬೇಕಪಾ.

ಸಿದ್ದಪ್ಪ — ಅಕಾ ಅಲ್ಲಿ ನಿಮ್ಮ ನಾಯಕ ಬರತಾನ ಆತನ್ನ ಕೇಳು

ನಾಯಕ — ಏನಾಯಿತು ರೂಪಲ್ಯಾ ಇದೇನು ನಿನ್ನ ಅವತಾರ.

ರೂಪಲ್ಯಾ — ಆಗಬಾರದ್ದು ಆತು ನೀನಂತು ಕೈಬಿಟ್ಟು ಹೋದಿ ನನ್ನ ಕಾಲು ಹೋದವು ತಿರಕೊಂಡ ತಿನ್ನಕ ಹತ್ತೀನಿ.

ನಾಯಕ — ರೂಪಲ್ಯಾ ನೀವೆಲ್ಲರೂ ಸೇರಿ ನನಗೊಂದು ದೊಡ್ಡ ಉಪಕಾರವನ್ನೇ ಮಾಡಿದಿರಿ ಇಲ್ಲವಾಗಿದ್ದರೆ ಇನ್ನದೆಷ್ಟು ದಿನ ಪಾಪಕೂಪದಲ್ಲಿ ಕೊಳೆಯಬೇಕಾಗಿತ್ತೋ ಏನೋ

ರೂಪಲ್ಯಾ — ನಮಗೀಟು ದಾರಿಗೆ ಹಚ್ಚು ಹಿರಿಯಾ

ನಾಯಕ — ಎಲ್ಲರನ್ನು ದಾರಿಗೆ ಹಚ್ಚಬಲ್ಲ ಮಹಾತ್ಮರು ಈ ಕಡೆಗೇನೆ ಬರುವವರಿದ್ದಾರೆ ಅವರನ್ನೇ ಕೇಳು.

ರೂಪಲ್ಯಾ — ಕೈ ಮುಗಿತೀನಿ ನಮ್ಮನ್ನು ಆತನ ಪಾದಕ್ಕ ಕೆಡವು ಈಗ ಮಾಡಿದ ಪಾಪ ಕಳಕೊಂಡು ಮುಂದೆ ಹೊಸ ಮನಸ್ಯಾರಾಗಿ ಬಾಳೇವು ಮಾಡಿಕೊಂಡು ತಿಂತೀವಿ.

ನಾಯಕ — ಅದೋ ಅವರೇ ಬಂದರು.

ರೂಪಲ್ಯಾ — ಎಪಾ ನಿನ್ನ ಪಾದಕ್ಕ ಶರಣಾಗಿ ಬಂದೀನಿ ನಮ್ಮ ನಾಯಕನ ಉದ್ಧಾರ ಮಾಡಿದಂತೆ ನಮ್ಮನ್ನು ಉದ್ಧಾರ ಮಾಡ ಎಪಾ.

ಸಿದ್ಧೇಶ — ಯಾರು ನೀವು ಏನಾಗಿದೆ ನಮ್ಮಿಂದೇನಾಗಬೇಕು.

ನಾಯಕ — ಗುರುವೇ ಜೀವನ ಮಾರ್ಗಕ್ರಮದಲ್ಲಿ ನನ್ನಂತೆ ದಾರಿ ತಪ್ಪಿದ ನತದೃಷ್ಟ ಪಥಿಕರು.

ರೂಪಲ್ಯಾ — ಎಪಾ ಗುರುವೇ ದಾರಿತಪ್ಪಿ ಉಣಬಾರದ್ದ ಉಂಡು ಸಾವಿನ ದಾರಿಕಾಣೋಕೆ ಹತ್ತೀವಿ ಸಾಯಕೆ ಮುಂಚೆ ನಿಮ್ಮ ಸೇವಾ ಮಾಡಿ ಸಾಯ್ತೀವಿ ಪುಣ್ಯಕಟಗೊಂಡು ಏನಾರ ಸೇವಾ ಹಚ್ಚು ಎಪಾ ಎತ್ತಾಗಿ ತೊತ್ತಾಗಿ ತೊತ್ತಿನ ತೊತ್ತಾಗಿ ಮತ್ತೆ ನಿನಕಾಲ ಎಕ್ಕಾಡಾಗಿ ಸೇವಾ ಮಾಡ್ತೀವಿ.

ಸಿದ್ಧೇಶ — ನಿಮ್ಮಿಂದ ಸೇವೆಯೇ...

ರೂಪಲ್ಯಾ — ಹೌದ ಎಪಾ ಕಳ್ಳತನದ ಕಸಬಿಗೆ ಇಳಿಯೋಕೆ ಮೊದಲು ಕಟ್ಟುಡಿ ಕೆಲ್ಸ ಮಾಡ್ತಾ ಇದ್ವಿ ಏನೋ ವಿಷ ವ್ಯಾಳ್ಯಾ ಬಂದಿತ್ತು. ಈ ಕಸಬಿಗೆ ನಿಂತ್ವಿ ಸುಕಾ ಉಂಡ್ವಿ ಕೈಲಾಗದ ಕುಂಟ ಕುರುಡಂತ ಮೂರು ಮುರಿಬ್ಯಾಡಾ ನಿನ್ನ ಆಶೀರ್ವಾದ ಪಂದಿರಲಿ ಸಾವಿರ ವರುಷ ಆದರೂ ಅಚ್ಚಳಿದಂಗ ಕಟ್ಟಡ ಕೆಲಸ ಮಾಡತೀವಿ ನೋಡ್ಯರ ನೋಡು.

ಸಿದ್ಧ — ಎಪಾ ಗುರುವೇ ನಾನೂ ಇವನು ಜೊತೆಯಾಗಿಯೇ ಕೆಲಸ ಮಾಡೋದಕ್ಕೆ ಅಪ್ಪಣಿಕೊಡು ನಮಗ ಕೂಲಿನಾಲಿ ಏನೂ ಬ್ಯಾಡಾ ಬರೆ ಅಂಬಲಿ ಪ್ರಸಾದ ಸಿಕ್ಕರ ಸಾಕು.

ಸಿದ್ಧೇಶ — ಹೀಗೋ ನಾಯಕ ಬರಗಾಲದ ಪರಿಹಾರ ಕಾಮಗಿರಿಯಲ್ಲಿ ನಡೆದ ಶ್ರೀ ಮಠದ ಕಟ್ಟಡದಲ್ಲಿ ನೆರವಾಗುವಂತೆ ಅನುಕೂಲ ಮಾಡಿಕೊಡಿ ಮುಂದೆ ಗುರುಗಳ ಸಮಾಧಿ ಮಂಟಪ ನಿರ್ಮಿಸುವಲ್ಲಿ ಇವರ ಪಾತ್ರ ಹಿರಿದಾಗಲಿ ಇವರನ್ನು ಕರೆದುಕೊಂಡು ಹೋಗಿ. ನಾವು ಪ್ರಾರ್ಥಿಸಿಕೊಂಡೆವೆಂದು ಸನ್ನಿಧಿಯಲ್ಲಿ ಅರಿಕೆ ಮಾಡಿಕೋ, (ಒಮ್ಮೆಲೆ ಬೆಚ್ಚಿಬಿದ್ದು) ಬಂದೆ ತಾಯಿ ಬಂದೆ (ಎಂದು ಒಮ್ಮೆಲೆ ಹೊರಟು ಹೋಗುವರು)

===****===****===

# ದೃಶ್ಯ ೧೭

ಕಾಡಿನಲ್ಲಿಯ ಒಂದು ಬೀದಿ ತಲೆಯ ಮೇಲೆ ಬುತ್ತಿ ಹೆಡಿಗೆಯನ್ನು ಹೊತ್ತು ಪಾರ್ವತಿಯು ಹೊರಟಿದ್ದಾಳೆ ಸರ್ಪವು ಹೆಡೆ ಎತ್ತಿ ಕಚ್ಚಲು ಹೊಂಚು ಹಾಕಿದೆ.

**ಪಾರ್ವತಿ –** ಮುಂದಕ್ಕೆ ನುಸುಳದಿರು ಸರ್ಪರಾಜಾ ಕಚ್ಚುವದಿರಲಿ ಮುಂದಕ್ಕೆ ಸರಿದೆಯಾದರೆ ಸಿದ್ಧೇಶನಾಣೆಯಾಗಿದೆ. ಸರಿ ಹಿಂದಕ್ಕೆ ಅರಿಯದೆ ಮಾಡಿದ ಅಪರಾಧ ಅರಿತು ಕ್ಷಮೆ ಕೇಳಿದಲ್ಲಿ ಅದು ಮನ್ನಣೆಗೆ ಯೋಗ್ಯವಂತೆ ನಿನಗಿದು ಗೊತ್ತಿಲ್ಲವೆ.

**ಸಿದ್ಧೇಶ –** ನನ್ನನ್ನೇಕೆ ಕೂಗಿ ಕರೆದೆಯಮ್ಮ

**ಪಾರ್ವತಿ –** ತಂದೆ ಸಿದ್ಧೇಶಾ ಅಪದ್ಬಾಂಧವಾ ಅನಾಥರಕ್ಷಕ ನಿನ್ನ ಗುಣಗಾನ ಮಾಡುತ್ತ ಹಾಡುತ್ತ ಹೊಲದೆಡೆಗೆ ಹೊರಟಿದ್ದೆ ಭಾವಪರವಶತೆಯಲ್ಲಿ ಸರ್ಪರಾಜನ ಬಾಲ ತುಳಿದೆದ್ದೇನೆ ಸೇಡಿನ ಪ್ರತೀಕಾರ ಭಾವನೆಯಿಂದ ಕಚ್ಚಲು ಹಾತೊರೆಯುತ್ತಿದ್ದಾನೆ ನಿನ್ನಾಣೆ ಇಟ್ಟು ತಡೆದು ನಿಲ್ಲಿಸಿದ್ದೆ.

(ಸರ್ಪವು ಪಿಶಾಚಿಯಾಕೃತಿಯಾಗಿ ನಿಂತು)

**ಪಿಶಾಚಿ –** ಅಹುದು ತಂದೆ ನಾನೇ ಅನಂತ ಕಷ್ಟಕೋಟಲೆಗಳನ್ನು ಸಹಿಸಿ ಹೊಟ್ಟೆಗೂ ಪೂರಾತಿನ್ನದೇ ಅತಿ ಆಸೆಯಿಂದ ಸಂಚಿಸಿದ ಸಂಪತ್ತನ್ನು ಅನುಭೋಗಿಸಲಾರದೆ ಅಕಾಲ ಮರಣಕ್ಕೆ ತುತ್ತಾಗಿ ಸತ್ತ ನಾನು ಆಶಾಪಿಶಾಚಿಯಾಗಿ ಗಜೇಂದ್ರಗಡದ ಧೊರೆಯ ಮನೆಯಲ್ಲಿ ಹಾಯಾಗಿ ಇದ್ದೆ ಅವರಿಗೆ ನೀನಿತ್ತ ವಿಭೂತಿಯ ಘನತೆಗೆ ಅಲ್ಲಿಯೂ ನಿಲ್ಲಲಾಗದೆ ನನ್ನ ಆಶೆ ಆಕಾಂಕ್ಷೆಗಳ ನಂಜನ್ನು ಹಲ್ಲು ನಾಲಿಗೆಗಳಲ್ಲಿ ಹೊತ್ತು ತಿರುಗುತ್ತಿದ್ದ ನನ್ನ ಆತ್ಮಕ್ಕೆ ಶಾಂತಿ ಸಿಗದಾಗಲು ನನ್ನ ಆಶೋತ್ತರಗಳನ್ನು ಈ ತಾಯಿಯ ನಿಷ್ಕಲ್ಮಷ ದೇಹಕ್ಕೆ ನೀಡಿ ಮುಕ್ತನಾಗ ಬಯಸಿದೆ ಈಗ ಅದೂ ನಿರಾಶೆಯಾಯಿತು. ಇನ್ನು ಈ ಪೈಶಾಚಿಕ ಜೀವನ ಸಾಕು ಮುಕ್ತಿ ನೀಡು ತಂದೆ ಮುಕ್ತಿ ನೀಡು.

**ಸಿದ್ಧೇಶ —** ಎಂತಹ ಅಪರಾಧ ಮಾಡುತ್ತಿದ್ದೆ. ಮಾತೃವಾತ್ಸಲ್ಯದ ಸತ್ವ ಗುಣಗಳ ಪರಾಕಾಷ್ಠೆಯನ್ನು ಮುಟ್ಟಿದ ಈ ನನ್ನ ತಾಯಿಯನ್ನು ಕಚ್ಚಿ ನಿನ್ನ ತಾಮಸಾಷೆ ಅಭಿಲಾಷೆಗಳ ನಂಜನ್ನು ತುಂಬಿ ರಕ್ಕಸಿಯನ್ನಾಗಿ ಮಾಡಬಯಸಿದ್ದೆಯಾ, ಬೇಡ ನಿನ್ನ ನಂಜನ್ನೆಲ್ಲಿಯೂ ಬಿಡಬೇಡ ಬಾ. ನನ್ನ ಪಾದಾಂಗುಷ್ಠದಲ್ಲಿರಿಸಿ ಮುಕ್ತನಾಗು.

**ಪಿಶಾಚಿ —** ಧನ್ಯನಾದೆ ತಂದೆ.

**ಸಿದ್ಧೇಶ —** ಹೋಗು ಚಿರಶಾಂತಿಯ ಪ್ರತೀಕ ಮುಕ್ತಾಂಗನೆಯ ಮಡಿಲಲ್ಲಿ ಚಿರಶಾಂತಿ ಹೊಂದು ನಾನಿನ್ನು ಬರಲೇ ತಾಯಿ (ಎಂದು ಆಶೀರ್ವಾದ ಮಾಡಿ ಹೊರಟು ಹೋಗುವರು.)

**ಪಾರ್ವತಿ —** (ನಮಸ್ಕಾರ ಮಾಡಿ) ತಂದೆ ಸಿದ್ಧೇಶ ಬರೀ ಮಾನವರನ್ನಷ್ಟೇ ಅಲ್ಲ ಮಾನವತ್ವ ಕಳೆದುಕೊಂಡು ಹಲವಾರು ದುಷ್ಟ ಆಶೆ ಆಕಾಂಕ್ಷೆಗಳನ್ನು ಹೊತ್ತು ನಿರಾಶೆಯಿಂದ ಸತ್ತ ಮಾನವಾತ್ಮಗಳಿಗೂ ಮುಕ್ತಿ ನೀಡಿದ ಮಹಾಮಹಿಮ ಸಿದ್ಧ ಪುರುಷ ಸಿದ್ಧೇಶ ನಿನ್ನಡಿಗೆ ಶತಕೋಟಿ ಪ್ರಣಾಮಗಳು.

===***====***===

## ದೃಶ್ಯ ೧೮

ಪೋಲೀಸಗೌಡರು ಹಂಣುಕಾಯಿಯೊಂದಿಗೆ ಮಠಕ್ಕೆ ಹೊರಟಿದ್ದಾರೆ ಹಿಂದಿನಿಂದ ಮಾಲಿಗೌಡರು ಕೂಗುತ್ತಾ ಬರುವರು.

**ಪೋ.ಗೌಡ** – (ಹೊರಳಿ ನೋಡಿ) ಓಹೋ ಬಸನಗೌಡರೇನು ಬನ್ನಿ ಬನ್ನಿ ಗೌಡರೆ, ತಾವೆತ್ತ ಹೊರಟಿದ್ದಿರಿ.

**ಮಾ.ಗೌಡ** – ಶ್ರೀ ಮಠದ ಸ್ವಾಮಿಗಳ ದರುಶನಕ್ಕೆ ಹೋರಟಿದ್ದೆ ಬಹುಶಃ ತಾವೂ ಅಲ್ಲಿಗೇ ಹೊರಟಂತೆ ಕಾಣುತ್ತದೆ.

**ಪೋ. ಗೌಡ** – ಗೌಡರೆ ಅನೇಕಾನೇಕ ದಿನಗಳಿಂದ ತಲೆ ತಿನ್ನುತ್ತಿದ್ದ ಸಮಸ್ಯೆಯು ಆ ಸ್ವಾಮಿಗಳ ಆಶೀರ್ವಾದದಿಂದ ಇದೀಗ ಫಲಿಸಿದಂತಾಯಿತು ಮನೆಯಲ್ಲಿ ಪುತ್ರೋತ್ಸವವಾಯಿತು ಗೌಡರೆ ಪುತ್ರೋತ್ಸವ ಅದಕ್ಕೆಂದೇ ದರುಶನಕ್ಕೆ ಹೊರಟಿದ್ದೇನೆ.

**ಮಾಲಿಗೌಡ** – ಹೀಗೋ ಬಹಳ ಸಂತೋಷ, ಗೌಡರೆ ಆ ಮಹಾ ಮಹಿಮನನ್ನು ನಂಬಿ ನಡೆದವರಿಗೆ ಯಾವ ತೊಂದರೆ ತಾಪತ್ರಯಗಳೂ ಇಲ್ಲ ಬೇಡಿ ಬಂದವರ ಸಂಕಲ್ಪಗಳು ತಾವಾಗಿಯೋ ಸಿದ್ಧಿಸಿ ಬಿಡುತ್ತವೆ.

**ಪೋ. ಗೌಡ** –ಅದೇನೂ ನಿಜವೇ ಸಾಗರದಂತರಾಳದಲೆಗಳು ಧಡವನ್ನು ಹುಡುಕಿಕೊಂಡು ಬರುವಂತೆ ಭಕ್ತ ಸಮೂದಾಯ ಅಲೆ ಅಲೆಯಾಗಿ ಹರಿದು ಆ ಮಹಾತ್ಮನ ಸನ್ನಿಧಿಗೆ ಶರಣಾಗುತ್ತವೆ.

**ಮಾಲಿಗೌಡ** – ಇನ್ನೊಂದು ಬಹು ವಿಚಿತ್ರ ಘಟನೆ ನಡೆಯಿತು ಅದನ್ನೆಷ್ಟುಸಾರೆ ಎಷ್ಟು ಜನರೆದುರು ಹೇಳಿದರೂ ತೃಪ್ತಿಯಿಲ್ಲ.

**ಪೋ. ಗೌಡ** – ಅದೇನು ಅಷ್ಟೊಂದು ಮೋಜಿನ ಘಟನೆಯೇ? ಅದೇನು.

**ಮಾ.ಗೌಡ** – ಇಲ್ಲಿಯೇ ಸಮೀಪದ ಹುಣಸಿಹಾಳ ಗ್ರಾಮದ ಗೌಡರು ಸಂತಾನಾಪೇಕ್ಷಿಗಳಾಗಿ ಸನ್ನಿಧಿಗೆ ಬಂದಿದ್ದರು ಸಿದ್ಧೇಶ್ವರ ಸ್ವಾಮಿಗಳು

ಕೊಟ್ಟೂರಿಗೆ ದಯಮಾಡಿಸಿದ್ದರು. ನಿರಾಶರಾದ ಗೌಡರಿಗೆ ಹಿರಿಯಸ್ವಾಮಿಗಳು ಪುತ್ರರತ್ನದ ಭವಿಷ್ಯ ನುಡಿದು ಆಶೀರ್ವದಿಸಿದ್ದರು ಆದರೇ.

**ಮೋ. ಗೌಡ** – ಆದರೇನು, ಏನಾಯಿತು.

**ಮಾ.ಗೌಡ** – ಹುಟ್ಟಿದ ಕೂಸು ಗಂಡಾಗಿರದೆ ಹೆಣ್ಣಾಗಿತ್ತು. ಅದಕ್ಕಾಗಿ ಖಿನ್ನ ಮನಸ್ಕರಾಗಿ ಸನ್ನಿಧಿಗೆ ಅರಿಕೆ ಮಾಡಿಕೊಂಡಾಗ, ಸಿದ್ಧೇಶ್ವರಸ್ವಾಮಿಗಳು ಸಿಟ್ಟಿನಿಂದ ಗುರುಗಳ ವಾಣಿ ಎಂದಾದರೂ ಸಟಿಯೆ, ಹೋಗಿ ನೋಡಿ ನೀವು. ನೋಡುವಲ್ಲಿ ತಪ್ಪಿ, ಆ ತಪ್ಪನ್ನು ಗುರುಗಳಿಗೆ ಕಟ್ಟಲು ಹೊರಟಿರುವಿರಿ ಎಂದು ಛೀ ಮಾಡಿ ಕಳಿಸಿದರಂತೆ. ಆಗ ಅವರು ಪುನಃ ಹೋಗಿ ನೋಡಲು, ಹೆಂಣು ಗಂಡಾಗಿತ್ತಂತೆ.

**ಮೋ. ಗೌಡ** – ಬಹಳ ಸ್ವಾರಸ್ಯ ಘಟನೆ.

**ಮಾಲಿಗೌಡ** – ಇದಕ್ಕಿಂತಲೂ ನಮ್ಮ ನಾಡ ಧೊರೆ ಮೀರಾಲಮ ಬಹದ್ದೂರರ ಘಟನೆ, ಬಹಳ ಸ್ವಾರಸ್ಯಕರವಾಗಿ ನಡೆದಿದೆ. ಕಾಯ್ದುನೋಡಬೇಕು ಏನಾಗುವುದೋ.

**ಮೋ.ಗೌಡ** – ಇನ್ನೇನಾಗಬೇಕು ಗೌಡರೆ. ಸಿದ್ಧೇಶ್ವರಸ್ವಾಮಿಗಳು ಎಷ್ಟು ಭಕ್ತ ಪ್ರೀಯರೋ ಅಷ್ಟೇ ಹಠವಾದಿಗಳು. ಅಂದಿನ ಅಪಹಾಸ್ಯವೇ ಇಂದಿನ ಈ ದುರವಸ್ಥೆಗೆ ಕಾರಣವಾಗಿದೆ.

**ಮಾಲಿಗೌಡ** – ಅವರ ಪ್ರಜೆಗಳಾದ ನಮಗೆಷ್ಟು ಉಭಯ ಸಂಕಟ ಗೊತ್ತೋ.

**ಮೋ. ಗೌಡ** – ಇದರಲ್ಲಿ ನಾವು ಮಾಡಬೇಕಾದದ್ದೇನಿದೆ ಗೌಡರೆ,

**ಮಾಲಿಗೌಡ** – ಇದೇ ಗೌಡರೆ, ಧೊರೆಗಳ ಪರವಾಗಿ ನಾವಾದರೂ ಪ್ರಾರ್ಥಿಸಿಕೊಳ್ಳಬೇಕಾಗಿದೆ. ಅದಕ್ಕೆಂದೆ, ಧೈರ್ಯಮಾಡಿದ್ದೇನೆ. ಏನಾಗುವುದೋ ಕಾಯ್ದು ನೋಡಬೇಕು.

**ಮೋ.ಗೌಡ** – ಅದೂ ಸರಿಯೇ, ನಡೆಯಿರಿ ಪ್ರಯತ್ನ ಮಾಡೋಣ.

(ಹೋಗುವರು)

===**====**===

# ದೃಶ್ಯ ೧೯

ಗವಿಮಠದಲ್ಲಿ ಚನ್ನಬಸವ ಸ್ವಾಮಿಗಳು ಗೌಡರೊಂದಿಗೆ ಸಮಾಲೋಚನೆ ತಡೆಸಿದ್ದಾರೆ.

**ಚ.ಬ.ಸ್ವಾಮಿ** – ನೋಡಿದಿರೋ ಗೌಡರೆ ನಮ್ಮ ಆಶೆಯಂತೆ ಸಮಾಧಿ ಮಂಟಪದ ನಿರ್ಮಾಣ ಕಾರ್ಯ ಕಲ್ಪನೆಗೂ ಮೀರಿ ಎಷ್ಟೊಂದು ಸುಂದರವಾಗಿ ನಡೆದಿದೆ, ನಮ್ಮ ಸಿದ್ಧೇಶನ ಕಾರ್ಯ ಕುಶಲತೆಯನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ.

**ಮಾ.ಗೌಡ** – ನಿಜ ಬುದ್ಧಿ ತಮ್ಮ ಮಹಿಮಾತಿಶಯಗಳ ವರದ ಹಸ್ತ ಕುಶಲ ಕಲಾವಿದರ ಶುದ್ಧ ಶ್ರದ್ಧೆಗಳ ಸಮ್ಮಿಲನದಲ್ಲಿ ನಡೆದ ಈ ಕೆಲಸಕ್ಕೆ ಲೋಕವೇ ಅಚ್ಚರಿಗೊಳ್ಳುವದರಲ್ಲೇನು ಮಹಾ ಬುದ್ಧಿ.

**ಪೋ. ಗೌಡ** – ಬುದ್ಧಿ ತಮ್ಮ ತಪಃಶಕ್ತಿಯ ಧಾರಾಮೃತದಲ್ಲಿ ಮಿಂದ ಆ ಮಹಿಮನ ಘನತೆ ವೆಗ್ಗಳಿಕೆಗಳನ್ನು ಹೊಗಳಲು ಆದಿಶೇಷನಿಗೂ ಅಸಾಯ ಆತನ ಮಹಿಮಾತಿಶಯಗಳ ಆಶ್ರಯ ಬೇಡಿ ಬಂದವರೆಂದೂ ನಿರಾಶೆಯಾಗರು. ಅರಿಯದೆ ಅಪಹಾಸ್ಯ ನಿಂದೆ, ತಿರಸ್ಕಾರಗಳಿಂದ ಜರೆದಾಡಿದವ ತುರುಗಾಹಿಯಾದರೇನು ಸಿಂಹಾಸನಾರೋಹಿಯಾದರೇನು ನಾರಕೀ ಜೀವನ ಮೀಸಲೆಂಬುದಕ್ಕೆ ನಮ್ಮ ನಾಡ ಧೊರೆ ಮೀರಾಲಂ ಬಹಾದೂರರವರೇ ಜೀವಂತ ಉದಾಹರಣೆ,

**ಚ.ಬ.ಸ್ವಾಮಿ** – ಅದೇನು ಅವನಿಗೇನಾಗಿದೆ, ಧೊರೆಪಟ್ಟ ಭೋಗಿಸುವಲ್ಲಿಯೂ ನರಕ ಯಾತನೆಯೇ ಏನಂತೆ.

**ಮಾಲಿಗೌಡ** – ಬುದ್ಧಿ ಹಿಂದೊಂದು ದಿನ ನಮ್ಮ ಗ್ರಾಮದ ತಿರುಕಂ ಭಟ್ಟರು ದುಡುಕಿ ನಾವೇಶದಿಂದ ಅಮವಾಸೆಗೆ ಪ್ರತಿಯಾಗಿ ಹುಣ್ಣಿವೆ ಎಂದು ಜೋತಿಷ್ಯ ಹೇಳಿದ್ದಕ್ಕೆ ಸರಿಯಾಗಿ ಸಿದ್ಧೇಶ್ವರ ಸ್ವಾಮಿಗಳು ಚಂದ್ರ ದರ್ಶನ ಮಾಡಿಸಿದ್ದು ಧೊರೆಯ ದೃಷ್ಟಿಯಲ್ಲಿ ಇಂದ್ರ ಜಾಲವಾಗಿ ಅಪಹಾಸ್ಯಕ್ಕೀಡಾದ ಕಾರಣ ಪ್ರಬಲ ಕುಷ್ಠರೋಗದಿಂದ

ಪೀಡಿತನಾಗಿದ್ದಾನೆ. ರಾಜವೈದ್ಯರು ಸಾವಿರಾರು ಜನರಿದ್ದರೂ ಯಾರಿಂದಲೂ ವಾಸಿಯಾಗದೆ, ಪರಿಹಾರಕ್ಕಾಗಿ ಪರಿ ತಪಿಸುತ್ತಾ ಸ್ವಾಮಿಯ ಪಾದಾಶ್ರಯಬೇಡಿ ಪ್ರತಿ ದಿನವೂ ಮುಚ್ಚಿದ ಮಹಾದ್ವಾರಕ್ಕೆ ಪ್ರಣಾಮ ಸಲ್ಲಿಸುತ್ತಿದ್ದಾನೆ ಈದಿನ ಮಾತ್ರ ದರ್ಶನವಿಲ್ಲದೆ, ಹಿಂತಿರುಗಲಾರೆನೆಂದು ಪ್ರತಿಜ್ಞಾ ಬದ್ಧನಾಗಿ ನಿಂತಿದ್ದಾನಂತೆ, ಗುರುಚಿತ್ತ.

ಸಿದ್ಧೇಶ್ವರ — (ಬರುತ್ತ ಸಿಟ್ಟಿನಿಂದ) ಏನಂತೆ ಆ ಜಾತ್ಯಾಂಧ ಯವನನಿಗೆ ಇಷ್ಟು ಹಟವೇ ಅವನಿಗೆ ಮಠದಲ್ಲೇಕೆ ಮಠದ ಮಹಾದ್ವಾರದ ಹೊಸ್ತಿಲು ಮೆಟ್ಟಿಲು ಕೂಡಾ ಅಸಾಧ್ಯ.

ಚ.ಬ.ಸ್ವಾಮಿ — ಸಿದ್ಧೇಶ.... ಗವಿಸಿದ್ಧೇಶ, ಅಪಾರ ಕರುಣಾಂತಃ ಕರುಣದಿಂದ ಕೂಡಿದ ತಾಯಿಯ ಎದೆ ಹಾಲೇ ಮಕ್ಕಳ ಪಾಲಿಗೆ ವಿಷವಾಗುವಂತಿದ್ದರೆ ಕಾಯುವವರಾರು? ಕೋಪತಾಪಗಳನ್ನು ಸುಟ್ಟು ಕ್ಷಮೆಯಲ್ಲಿ ಭೂಮಿಯಂತಿರುವ ಶರಣ ಕುಪಿತನಾದರೆ ಉಳಿಗಾಲವಿನ್ನೆತ್ತ? ಬದುಕು ವ್ಯರ್ಥ.

ಸಿದ್ಧೇಶ್ವರ — ಕ್ಷಮಿಸು ಗುರುವೇ ದುಡುಕಿನಾಗ್ರಹದಿಂದ ಸಿಡಿದೆದ್ದ ಆತ್ಮ ತಮ್ಮ ಪ್ರಸಾದ ವಾಣಿಯಿಂದ ಪುನೀತವಾಯಿತು.

(ತೆರೆಯಲ್ಲಿ ನವಾಬನ ಆರ್ತನಾದ ಕೇಳಿ ಬರುವದು)

ಮೀರಾಲಂ — ಅಯೆ ಮಾಲಿಕ ಕ್ಯೊಂ ತಡಪಾರಹೆ ಹೋ ರಹಮಕರೋ ತಡ ಪರಹಾಹುಂ ಪರವರದಿ ಗಾರಕಿ ಮೆಹರಬಾನಿಯೊಂಕಿ ಪ್ಯಾಸಮೇ ಜಲರಹಾಹುಂ ತಾನೇದೇಕರ್ ಹಷ್ತಿಯೊಂಕಿ ತೋಹೀನ ಕಿ ಆಗಮೆ ಪಾಯಾ ಸಜಾ ನಜಾನೆವಾಲೆ ಬೀಮಾರಕಿ ಅಯೆ ಖುದಾಕೆ ಬಂದೆ ಕ್ಯಾ ಮುಜೇ ಆಜಮಾನಾ ಚಾಹತೇ ಹೋ ತೋ ಮೈಭಿ ತಯ್ಯಾರ ಹುಂ ಚಾಹೆ ಆಪಕಿ ದರಬಾರಕೆ ಬಂದ ದರ ವಾಜೆಕಿ ಢೇಲಿಜ ಪರಸರ ಪಟಕಕರ್ ಜಾನದೇನಾ ಪಡೇತೋಭಿ ಮೈತಯಾರ ಹುಂ ಲೇಕಿನ್ ಆಜಮೈ ಆಪಕಿ ಪಾಕದಾಮನ್ ಚೂಮುಕೇಹಿ ರಹೂಂಗಾ.

॥ ಪದ ॥

ದರಖೋಲದೋ ದರಖೋಲದೋ ತುಮ್ಹಾರೆ ಪ್ಯಾರಕಾದರಖೋಲದೋ
ಷಾಹಬನಕರ ಗಲತೀಕಿ ಮೈನೆ । ರಖವಾಲಾ ಮಾಫಕರದೋ ತೂನೆ ।
ಜೋಹಿಮಾಕತ್ ಕಿ ಮೈನೆ ತೆರೆದರಬಾರಮೆ । ಪಾಯಾಸಜಾ ನಜಾನೆ
ವಾಲೆ ಭೀಮಾರಮೆ ।
ಸುನ್ ಪುಕಾರ ಮೇರೆ ದರ್ದೆದಿಲಕೀ ಇನಾಯತ್ ಕರದೋ ಅಪನೀ ನಜರಕಿ ।
ಷರತ್ ಬಾಂದಕೆ ಆಯಾ ಹುಂ ದೂ ಖುಸೆ । ಉತೆಭೀ ಪರವಾನಹಿ
ಜನಾಜಾ ಯಂಹಾಸೇ ।
ಏ ಬಂದೇ ಹೊತುಮ್ ಖುದಾಕಿ । ಮೇರೆ ದರ್ದೆದಿಲ್ ಕಿ ಆರಜೂ ಸುನ್ ಲೇ ।
ಹುಂ ಪ್ಯಾಸಾದಿನರಾತ ತುಮ್ಹಾರೆ ದೀದಾರಕೆ । ದರಖೋಲ ದೋ
ತುಮ್ಹಾರೆ ಪ್ಯಾರಕೆ ॥

**ಸಿದ್ಧೇಶ –** ಹೋಗಿ ಹೋಗಿ ಗೌಡರೆ, ಕರೆ ತನ್ನಿ ಅವನ ಹೃದಯ ಪಶ್ಚಾತ್ತಾಪದಗ್ನಿಷ್ಟಿಕೆಯಲ್ಲಿ ಪುಟಗೊಂಡ ಪರಿಶುದ್ಧ ಚಿನ್ನವಾದಂತಿದೆ. ಅವನ ನಿರ್ಧಾರ ಅಚಲವೆನ್ನಿಸುತ್ತಿದೆ. ಹೋಗಿ ಕರೆ ತನ್ನಿ.

**ನವಾಬ –** (ಬಂದು ಪಾದಗಳ ಮೇಲೆ) ಏ ಅಖಾ ಮಾಫ ಕರೋ ಮಾಲಿಕ. ಮೈನೆ ಆಪನೆ ದಿಲ ವ ದಿಮಾಗ ಕೆ ಹೋಷ ಹವಾಸ ಖೋಕರ್ ಅಪಕೆ ಕರಿಷ್ಮೊಂಕು ತಾನೇ ದಿಯಾ ಹಸೀ ಉಢಾಯಾ, ಹಜಾರೋಂ ಗಲತಿ ಯಾಂ ಕೀ ಮೈನೆ ಅಪನಿ ಷಾಹೀ ಘಮಂಡಮೇ ಗುರೂರೀ ಬದ್ ಹವಾಸೀಮೆ. ಜಾನೆ ಅಂಜಾನೇ ಸಮಜಾಕೆ ಮೈ ಆಪಕು ಮಾಫಕರದಿಯಾ ಲೇಕಿನ ಆಜ ಮೈ ಏಕ ಅದನಾಭಿಕಾರಿ ಬನಕರ್ ಖುಲಿ ಆಂಖಿಸೆ ತಂದುರುಸ್ತೀಕಾ ತಮನ್ನಾ ಲೇಕರ ಭೀಕ ಮಾಂಗತಾ ಹುಂ. ಮೇರಿ ತಂದುರುಸ್ತೀ ವಾಪಸ್ ಕರಧೀಜಿಯೇ ವಾಪಸ ಕರದೀಜಿಯೆ.

**ಸಿದ್ಧೇಶ –** ಎಲವೋ ಧರ್ಮಾಂಧ ನವಾಬ, ವಿಶ್ವದಲ್ಲಿರುವದೊಂದೇ ಧರ್ಮ ಅದು ಮಾನವ ಧರ್ಮ. ಮಾನವ – ಮಾನವರಲ್ಲಿ ಅಡಕವಾಗಿದ್ದ ದೈವೀ ಭಾವಗಳಿಗೆ ತಲೆಬಾಗಿಸಬೇಕೇ ಹೊರತು ಜಾತಿ ವಿಜಾತಿಗಳ ಕೀಳು ಭಾವನೆಯ ಅಭಿರುಚಿಯಲ್ಲಿ ಬೆಳೆದ ವಿನಾಶಕಾರಿ ವೈರಭಾವದೊಂದಿಗಲ್ಲ ಮಹಾ ಪುರುಷರು ಎಲ್ಲಿ ಕಾಲಗಳಲ್ಲಿಯೂ ಎಲ್ಲ ಧರ್ಮಗಳಿಗೂ ವಂದನಾರ್ಹರು. ಸೃಷ್ಟಿಕರ್ತನೊಬ್ಬನೇ ಅವನಿಗೆ ನಾವು ಶಿವನೆಂತಲೂ ನೀವು ಅಲ್ಲಾಹನೆಂತಲೂ ಕರೆಯುತ್ತೇವೆ ಅಷ್ಟೆ ಹೋಗು ಹೋಗು ನೀನಿಲ್ಲಿರುವ ತನಕ ಪ್ರತಿ

ದಿನವೂ ಪ್ರಸಾದ ತೆಗೆದುಕೊಳ್ಳುತ್ತ ಹೋಗು ಈ ನಿನ್ನ ವ್ಯಥೆ ಹೇಳಹೆಸರಿಲ್ಲದಂತಾಗುವದು.

**ನವಾಬ –** ಏ ಮಾಲಿಕ ಆಖಿರ ಮೈ ತುಮ್ಹೆ ಜೀತ ಹೀ ಲಿಯಾ ಅಪನೇ ದರ್ದೆ ದಿಲಕಿ ಸಹಾರೆ ಲೇಕರ ಆಪಕಿ ಮಾಫಿಕೆ ಖಾಬಿಲ್ ಬನ್ ಗಯಾ ಅವುರ ಮೇರೆ ಖೋಯೀ ಹುಯಿ ತಂದುರುಸ್ತಿ ಮಿಲಗಯಿ.

**ಸಿದ್ಧೇಶ –** ಹೋಗು, ಹೋಗಿ ಪ್ರಸಾರ ತೆಗೆದುಕೊ.

**ಮಾಲಿಗೌಡ –** ಧನ್ಯ ಗುರುದೇವಾ. (ನಮಸ್ಕಾರ ಮಾಡುವರು)

===***====***===

# ದೃಶ್ಯ ೨೦

ಬೀದಿಯಲ್ಲಿ ತಿರುಕಂಭಟ್ಟನು ಬರುವನು

**ಗೋವಿಂದ** – ಅಪಾ ಅಪಾ ನಿಲ್ಲಪಾ ಎಲ್ಲಿಗೆ ಹೋಗ್ತೀ

**ಭಟ್ಟ** – (ಸಿಟ್ಟಿನಿಂದ) ಸುಡುಗಾಡಿಗೆ..... ಸುಡುಗಾಡಿಗೆ ಹೋಗ್ತೀನೋ

**ಗೋವಿಂದ** – ಅಲ್ಲಿಗೆ ಯಾಕಪಾ ಹಿಂದೆ ಹೆಣದ ಮ್ಯಾಲೆ ಕೂತು ಜಪಾ ಮಾಡಬೇಕೆಂದು ಹೋಗಿ ಹೆದರಿ ಬಂದಾಗ ಅಮ್ಮ ಹದಿನೈದು ದಿವ್ಸ ತನಕಾ ದಿವಸಕ್ಕೆ ಆರಾರು ಸಲ ಮೂಗು ಮುಚಿಗೊಂಡು ಧೋತ್ರಾ ಬಿಡಿಸತಿದ್ಲು ಮರೆತೆ ಏನು ಅದನ್ನ ಬ್ಯಾಡ ಬಾರಪಾ ಬ್ಯಾಡ ಬಾ.

**ಭಟ್ಟ** – ಸುಮ್ಮನೆ ಹೋಗು ಮಾರಾಯಾ ನನ್ನತಲಿ ಕೆಡಸಬ್ಯಾಡ

**ಗೋವಿಂದ** – ಹೇಳಪಾ ಎಲ್ಲಿಗೆ ಹೋಗ್ತಿ

**ಭಟ್ಟ** – ಹೊಲಿಗೇರಿಗೆ, ಈಗಾದ್ರು ಸಮಾಧಾನ ಆಯ್ತೆಯೋ

**ಗೋವಿಂದ** – ಅಯ್ಯೋ ಅಯ್ಯೋ ಅದಕಿಂತ್ಲು ಕೇಡು ಬ್ಯಾಡಬಾರಪಾ

**ಭಟ್ಟ** – ಸುಮ್ಮನೆ ಹೋಗಪಾ

**ಗೋವಿಂದ** – ನಾನೂ ಬರ್ತೀನ ಬಾ

**ಭಟ್ಟ** – ಅಲ್ಲೊ ಎಷ್ಟು ಸಲ ಹೇಳಬೇಕೋ ಹೋಗೋ ಮುಂದ ಎಲ್ಲಿಗೆ ಅಂತ ಕೇಳಬಾರದು ಅಂತ ಎಷ್ಟು ಸಲ ಹೇಳಬೇಕೋ.

**ಬಾಳ್ಯಾ** – (ಬರುತ್ತ) ಯಾಕ್ರೀ ಭಟ್ಟರ ಎಷ್ಟು ಹುಡಕಬೇಕ್ರಿ ನಿಮ್ಮನ್ನ.

**ಭಟ್ಟ** – ಯಾಕೋ ಅಂಥದೇನು

**ಬಾಳ್ಯಾ** – ಆವತ್ತ ಕೇಳಿದ್ರೆಲ್ಲ ಎಳೇವು....

**ಗೋವಿಂದ** – ಅದೇನಪಾ ಎಳೇದು.

ಭಟ್ಟ — ಏ ಅನಿಷ್ಟ ಮುಂಚೇದ, ಸುಮ್ಮನೇ ಇರೋ

ತಿಪ್ಪವ್ವ — (ಬರುತ್ತ) ಏನ ಅಂತೈತಲ್ರೀ ಭಟ್ಟರ ನಿಮ್ಮ ಮರಿ.

ಗೋವಿಂದ — ತಿಪ್ಪವ್ವ ನಮ್ಮಪ್ಪಗ ಎಳೇದೇನೋ ಬೇಕಂತ.

ತಿಪ್ಪವ್ವ — ಈ ಹಂಗಾಮದಾಗ, ಅಯ್ಯ ಭಟ್ಟರ.

ಗೋವಿಂದ — ಅಪಾ, ಅಪಾ ಬಾರಪಾ ಇಲ್ಲಿ ತಿಪ್ಪವ್ವಗ ಏನ ಆಗೇದ. ಹೊಟ್ಟಿ ಯಾಕ ಬಾತದ.

ಭಟ್ಟ — ಏ ಉಪದ್ವ್ಯಾಪಿ, ಸುಮ್ಮನೆ ಇರೋ ಆಕಿಗೇನಾಗೇದ. ಎಲ್ಲಾ ಆರಾಮ ಇದ್ದಾಳಲ್ಲ.

ಗೋವಿಂದ — ಹೋಗಪಾ, ಮೊದಲು ಹೀಂಗ ಇದ್ದಿಲ್ಲ ನಿನಗೆಲ್ಲೊ ವಯಸ್ಸಾಗಿ ಕಂಣು ಕಾಣಸ್ತಿರಲಿಕ್ಕಿಲ್ಲ. ನೀನಾದ್ರು ಹೇಳು ತಿಪ್ಪವ್ವ ನಾಚಿಗೋ ಬೇಡ.

ತಿಪ್ಪವ್ವ — ಭಟ್ಟರ ಏನಾಗೇತ್ರಿ ನಿಮ್ಮ ಮರೀಗೆ,

ಭಟ್ಟ — ತಿಪ್ಪವ್ವ ಅವನ ಅನುಭವಕ್ಕೆ ಇದು ಹೊಸದು ಬುದ್ಧೀನೂ ಇಲ್ಲ ನೀ ಏನೂ ತಪ್ಪು ತಿಳಕೋ ಬ್ಯಾಡ ಯಾಕಂದ್ರ ಇವಾ ಹುಟ್ಟಿಂದೆ ಇವನ ತಾಯಿ ಹೀಂಗ ಕದ್ದು ನೋಡೇ ಇಲ್ಲ ಪಾಪ.

ತಿಪ್ಪವ್ವ — ಹೋಗ್ಲಿ ಬಿಡ್ರಿ ಇತ್ತಿತ್ತಲಾಗಿ ಕಾಣ್ತಾನS ಇಲ್ಲಲ್ಲರಿ ಭಟ್ಟರ ಏನಾದ್ರು ಹೊಸ ಉದ್ಯೋಗ ಹುಡುಕೀರೇನು.

ಭಟ್ಟ — ಉದ್ಯೋಗ ಏನೂ ಇಲ್ಲಾ ನಿರುದ್ಯೋಗ.

ತಿಪ್ಪವ್ವ — ಅಂತ್ರಾ ಮಂತ್ರ ಹೇಳ್ಕಿ ಹೊತಿಗಿ ಪಂಚಾಂಗ.

ಭಟ್ಟ — ಎಲ್ಲಾ ಬಿಟ್ಟು ಬಿಟ್ಟಿದ್ದೇವೆ.

ತಿಪ್ಪವ್ವ — ಮತ್ತೇನರಿ ಕೆಲಸ

ಗೋವಿಂದ — ನಾ ಹೇಳಲ್ಯಾ ತಿಪ್ಪವ್ವ

ತಿಪ್ಪವ್ವ — ಹೇಳ ಎಪಾ ಹೇಳು

ಗೋವಿಂದ — ನೊಣ ಹೊಡಿಯೋದು ಎಣಿಸೋದು ಹೊಡಿಯೋದು ಎಣಿಸೋದು.

| | |
|---|---|
| **ಭಟ್ಟ –** | ಲೇ ಅವಿವೇಕಿ ಸಾಕು ಸುಮ್ಮನಿರೋ ಮಣ್ಯಾತ್ಮ ಆ ಗವಿಸಿದ್ದೇಶ ಎಂಥೆಂಥವರಿಗೆ ಏನೇನೋ ಕೊಡ್ತಾನಂತ ಈ ನನ ಮಗಗ ವಂದಿಷ್ಟು ಸದ್ಬುದ್ದಿ ಏನಾದ್ರು ಕೊಟ್ಟಾನೇನು. |
| **ಬಾಳ್ಯ –** | ಭಟ್ಟರ ನೀವು ಕೇಳಿಲ್ಲ ಆತ ಕೊಟ್ಟಿಲ್ಲ. |
| **ತಿಪ್ಪವ್ವ –** | ಕೇಳ್ಯಾರ ಕೇಳ ಬೇಕಿಲ್ರಿ |
| **ಬಾಳ್ಯ –** | ಭಟ್ಟರ ಎಲ್ಲಾರಿಗೂ ಕೇಳಿಂದೆ ಕೊಡ್ತಾನಂದ ಈಕೆಗೆ ಕೇಳೋದಕೂ ಮುಂಚೆ ಕೊಟ್ಟಾನ ನೋಡ್ರಿ |
| **ತಿಪ್ಪವ್ವ –** | (ನಾಚುತ್ತ) ಇರ್ಲಿಬಿಡ ಹೋಗಾನ ನಡೀ ಹೊತ್ತಾತು |
| **ಬಾಳ್ಯ –** | ನೀವು ಬರತೀರೇನು ಭಟ್ಟರ ಸಿದ್ದಪ್ಪಜ್ಜನ ದರುಶನಕ. |
| **ಭಟ್ಟ –** | ನಡೀ ಬಾಳಪ್ಪ ಹೋಗೋಣ ಈ ನನ್ನ ಮಗನಿಗೆ ಸ್ವಲ್ಪುವಳ್ಳೇ ಬುದ್ಧಿನಾದ್ರು ಕೊಡಲಿ. |

(ಹೋಗುವರು)

===***===***===

## ದೃಶ್ಯ ೨೧

– ಗವಿಮಠದಲ್ಲಿ –

ಸಿದ್ಧೇಶ್ವರ ಸ್ವಾಮಿಗಳ ಸನ್ನಿಧಿಯಲ್ಲಿ

**ಭಕ್ತ** – ಎಪಾ ವರಸಾ ನನ್ನ ಹೊಲದಾಗ ಹತ್ತು ಹೇರು ಕಾಳು ವಕ್ಕತಿದ್ವಿ ಈ ವರಸ ನಿನ್ನ ಬಾಯಿ ಹರಕೀಲೆ ಹುಲಿಸಿ, ಆರು ಹೇರು ಕಾಳು ಹೆಚ್ಚಿಗೆ ಉದರ್‍ಯಾವ ನಿನ್ನ ಹರಿಕಿ ಕಾಳು ನಿನಗ ಸಲ್ಲಲೀ ಅಂತಾ ಹೇರಿಕೊಂಡು ಬಂದೀವಿ.

**ಸಿದ್ಧೇಶ** – ಬಹಳ ಸಂತೋಷ ಇದೋ ಯಾರೇ ಬೆಳೆಯಲಿ ಬೆಳೆದ ಕಾಳಿನ ಮೇಲೆ ತಿನ್ನುವವನ ಹೆಸರಿದೆ. ಎನ್ನುವ ಗಾದೆ ಮಾತೊಂದನ್ನು ಕೇಳಿರಬೇಕಲ್ಲವೇ ಸ್ವಾರ್ಥ ಮನೋವೃತ್ತಿಯಿಂದ ವಿಕಾರಭಾವಗಳಿಗೆ ವಶರಾಗಿ, ಧರ್ಮ ದೃಷ್ಟಿಯಿಂದ ವಂಚಿತರಾಗಿ ಮಿತಿಗಿಂತಲೂ ಅತಿಯಾಗಿ ಬಂದ ಬೆಳೆಯನ್ನು ದುರಾಸೆಯಿಂದ ಸಂಗ್ರಹಿಸಿ ಭೋಗಿಸುವ ಮೊದಲೇ ವಿಧಿವಶರಾಗುವ ಪ್ರವೃತ್ತಿಯನ್ನು ತೊಡೆದು ಹಾಕುವ ನಿನ್ನೀ ಧರ್ಮಬುದ್ಧಿಯು ಎಲ್ಲ ಮಾನವರಲ್ಲಿ ಬೆಳೆದಲ್ಲಿ ಮಾನವ ಕೋಟಿಯೇ ಪರಾವಲಂಬಿಯಾಗುವದು ಅಕಾಲ ವೃಷ್ಟಿ ಕ್ಷಾಮ ಡಾಮರ ಕಾಲ ದುಷ್ಕಾಲಗಳೇನೂ ಮಾಡಲಾರವು ಅವುಗಳನ್ನು ದಾಸೋಹಕ್ಕೊಪ್ಪಿಸಿ ಬಿಡು.

**ಭಟ್ಟ** – ಆಗಲಿ ತಂದೆ (ಹೋಗುವನು)

(ತಿರುಕಂಭಟ್ಟ ಗೋವಿಂದ ಬಾಳಪ್ಪ ತಿಪ್ಪವ್ವ ಬರುವರು)

**ತಿಪ್ಪವ್ವ** – (ನಮಸ್ಕಾರ ಮಾಡಿ) ನಮಸ್ಕಾರ ಮಾಡೋ...

**ಗೋವಿಂದ** – ಏ ಹೋಗೂ ನಾ ಯಾಕ ಮಾಡ್ಲಿ ಬೇಕಾದ್ರ ನೀನ ಮಾಡಿಕೋ ಅಲ್ಲ ಸ್ವಾಮಿ ಅವರಿಗೆ ನಾವು ಯಾಕ ನಮಸ್ಕಾರ ಮಾಡಬೇಕು.

**ಭಟ್ಟ**– ಹಾಗೆಲ್ಲ ಹೇಳಬಾರದು. ಮಗು ಅವರು ಮಾನವ ಮಾತ್ರವಲ್ಲ ಮಹಾತ್ಮರು ನಾವು ನಮಸ್ಕಾರ ಮಾಡುವದು ಅವರ ಅಂತರಾತ್ಮದಲ್ಲಿ

ಅಡಗಿದ ದೈವೀ ಶಕ್ತಿಗೆ, ಅಗೋಚರವಾದ ದೈವೀಶಕ್ತಿಯನ್ನು ತಪೋನುಷ್ಠಾನಗಳಿಂದ ಸಾಕ್ಷಾತ್ಕರಿಸಿಕೊಂಡ ದಿವ್ಯಾತ್ಮಕ್ಕೆ ಜಾತಿ ವಿಜಾತಿಗಳಿಲ್ಲ ವರ್ಣಾಶ್ರಮಗಳ ಬಂಧನವಿಲ್ಲ ಹೆಂಣು ಗಂಡೆಂಬ ಭೇದ ಭಾವವಿಲ್ಲ. ಪರಿಶುದ್ಧ ಆತ್ಮವು ಜ್ಞಾನಬಲದಿಂದ ಜಪತಪಾನುಷ್ಠಾನಗಳ ಮೂಲಕ ಸತ್ವ ತಮ ರಜೋಗುಣಗಳ ಮೇರೆ ಮೀರಿ ಪರಮೋಚ್ಚಪದವಿಯ ಪರಾಕಾಷ್ಠೆಯನ್ನು ಮೆಟ್ಟಿನಿಂತ ಪರಮ ಆತ್ಮನಿಗೆ.

**ಸಿದ್ದೇಶ** — ಭಟ್ಟರೆ ನೀರಿಳಿಯದ ನಿಮ್ಮ ಮಗನ ಗಂಟಲಿಗೆ ಇಡಿಯಾದ ಕರಿಗಡಬನ್ನೇ ತುರುಕುವ ಸಾಹಸ ಮಾಡುತ್ತಿದ್ದೀರಲ್ಲಾ.

**ಬಟ್ಟ** — ಅಂತೆಯೇ ಸನ್ನಿಧಿಗೆ ಕರೆತಂದಿದ್ದೇನೆ. ಗುರುವೇ

**ಸಿದ್ದೇಶ** — ನಿನ್ನ ಹೆಸರೇನು?

**ಗೋವಿಂದ** — ಗೋವಿಂದ

**ಸಿದ್ದೇಶ** — ಗೋವಿಂದ... ಗೋವಿಂದ... ಆಹಾಹಾ ಎಂತಹ ಮುದ್ದಾದ ಹೆಸರು. ಗೋವಿಂದ... ಅನಂತ ಆಕಳುಗಳ ಪರಮ ಪ್ರಿಯ ಮಿತ್ರ ವಡೆಯ ಪಾಲಕ ಪಶುಪತಿಯೇ ಗೋವಿಂದ. ಗೋವುಗಳ ಕೆಚ್ಚಲು ಕಚ್ಚೆ ಗುದದ್ವಾರ ಆಸ್ತಿ ಚರ್ಮಗಳೆಲ್ಲವೂ ಮಾನವನಿಗೆ ಮಹೋಪಕಾರಿ ವಸ್ತುಗಳು ಕೆಚ್ಚಲಿನ ಕ್ಷೀರ ಕೆನೆಮೊಸರು ಬೆಣ್ಣೆ ತುಪ್ಪ ಅಮೃತೋಮಯ, ಮೂತ್ರ ಗಂಗಾಜಲದಂತೆ ಪವಿತ್ರ ಬೆರಣಿ, ಭಸ್ಮ ಇಷ್ಟೆಲ್ಲ ಮೈಗೂಡಿಸಿಕೊಂಡ ನೀನು ಹೀಗೇಕೆ ಬುದ್ಧಿ ಶೂನ್ಯನಂತೆ ವರ್ತಿಸುವೆ ಬಾ ಹಿಡಿ ತೆಗೆದುಕೋ ಈ ಕಲ್ಲು ಸಕ್ಕರೆಯು ನಿನ್ನ ಬುದ್ಧಿ ವಿಷಮತೆಯ ಕಹಿ ಜೀವನವನ್ನು ಕಳೆದು ಭವ್ಯ ಬಾಳು ನಿರ್ಮಿಸುವಲ್ಲಿ ಅನವರತವೂ ನಿನ್ನ ಜೀವನಕ್ಕೆ ಸಿಹಿ ರಸವನ್ನು ಸ್ರವಿಸುತ್ತಿರಲಿ ತೆಗೆದುಕೊ.

**ಗೋವಿಂದ** — (ತೆಗೆದು ಬಾಯಲ್ಲಿ ಹಾಕಿಕೊಂಡು) ಇದೇನದ್ಭುತ... ಇದಾವ ಹೊಸ ಬಗೆಯ ರೋಮಾಂಚನ ನರನಾಡಿ ನಾಲಿಗೆಯಲ್ಲಿ ದಿವ್ಯ ಶಕ್ತಿ ಸಂಚಲನೆ, ಅಂತಾರಾತ್ಮದಲ್ಲಿ ಅಡಗಿದ್ದ ಅನಂತ ಜಡತ್ವ ತಾಮಸ ಮೌಢ್ಯಗಳು ರೋಮ ರೋಮ ನಾಳಗಳಿಂದ ಹೊರಬಿದ್ದು ಹೊಸ ದೃಷ್ಟಿಯೊಂದಿಗೆ ಹೊಸ ಬಾಳು ಹೊಸ ಹಾದಿ ಹೊಚ್ಚ ಹೊಸ ಪರಿಸರದತ್ತ ಚೈತನ್ಯ ನನ್ನೊಂದಿಗೆ ಮುನ್ನಡೆದಂತೆ ಭಾಸವಾಗುತ್ತಿದೆ.

ಆಹಾಹಾ ಗುರುವೇ, ನಿನ್ನದು ಪರುಷ ಹಸ್ತ ಜನ್ಮ ಜನ್ಮಾಂತರದ ಸಂಚಿತ ಕರ್ಮಕಳೆದು ಸುಜ್ಞಾನ ಸುಧೆಯ ಮನದಣಿಯೇ ನೀಡಿದ ಮಹಾತ್ಮ ನೀನು. ಎಂದೆಂದಿಗೂ ಕುಂದದ ಧ್ವನಿಯೊಂದಿಗೆ ನಿನ್ನ ಕೀರ್ತಿಗೆ ಘನತೆಗಳನ್ನು ಅನುಗಾಲವೂ ಹಾಡುತ್ತಾ ಹಾರುತ್ತಿರುವ ಭ್ರಮರ ನೀನಾಗೆಂದು ಹರಿಸಿ ಮುನ್ನಡೆಸು ತಂದೆ. (ನಮಸ್ಕರಿಸುವನು)

**ಸಿದ್ದೇಶ** – ವಾಗ್ದೇವಿಯ ವರ ಪುತ್ರನಾಗಿ ಚಿರಕಾಲ ಬಾಳಿ ಬೆಳಗು

**ಬಾಳ್ಯ** – ಎ ಪ್ಪಾ ಇದಕುನು ಬುದ್ಧಿ ಹೇಳ್ರಿ ಗೋವಿ ಹಸಮಾಡಾಕ ಮನಿಮನಿ ಹುಡಕ್ಕೆಂತಾ ತಿರಗತ್ತಾ

**ಸಿದ್ದೇಶ** – ಹೌದೇ ತಾಯಿ

**ತಿಪ್ಪವ್ವ** – ಇಲ್ಲ ಬಿಡ ಎಪ್ಪಾ ಅದರ ಮಾತ ಏನ ಕೇಳೀರಿ

**ಬಾಳ್ಯ** – ನಾ ಏನ ಹಸ ಮಾಡಾಕ ಬ್ಯಾಡ ಅನ್ನೂದುಲ್ಲಾ ಅದ್ರ ಹಸಮಾಡೋ ನೆವ ಮಾಡಿ ಅದರನ ಎರೆಮಂಣು ತಿನ್ನಬ್ಯಾಡಾ

**ಸಿದ್ದೇಶ** – ತಾಯಿ ಕೀಳು ಅಭಿರುಚಿ ಹವ್ಯಾಸಗಳಿಗಿಳಿಯದೇ ಬಸುರೆಯರ ಬಯಕೆಗಳು ಉತ್ತಮೋತ್ತಮ ಅಭಿರುಚಿಯತ್ತ ಬೆಳೆದಲ್ಲಿ ಉತ್ತಮ ಸಂತಾನಗಳು ಸೃಷ್ಟಿಯಾದಾವು.

**ನವಾಬ** – (ಕೈಯಲ್ಲಿ ದಾನಪತ್ರ ಹಿಡಿದು) ಮಾಲಿಕ ತೂನೆ ಮೇರಾ ಹರ ಮುರಾದೇ ಮನ್ನತ್ತ ಪೂರೀಕರದಿಯಾ ಬಲಕೆ, ಮೇರಾಖೋಯೀ ಹುಯೀ ತಂದುರುಸ್ತೀ ವಾಪಸಕರದಿಯಾ ಬದಲೇಮೇ ಆಪಕಹೇತೋ ಮೇರಾ ಸಬ ಕುಚ್ ಅಪಕೆ ಖದಮೊಂಮೆ ನಿಚಾವರಕರದೂಂಗಾ ಹುಕುಂ ದಿಜಿಯೇ ಆಪಕೆ ಮೂಹ ಮಾಂಗಾ ಭರದೂಂ.

**ಸಿದ್ದೇಶ** – ಎಲೋ ನೀನೇನು ಕೊಡವಿ ಯೋ ಕೊಡಲು ನಿನ್ನಿಲ್ಲೇನಿದೆ ನಾನು ಕೊಡುವೆ ನಾನು ಮಾಡುವೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ. ಸೃಷ್ಟಿಕರ್ತ ಬ್ರಹ್ಮ ತಲೆ ಕಳೆದುಕೊಂಡ ಹರಿ ಚಿಗುರೆಯಾದ. ಶಿವ ಅತ್ರಿ ಆಶ್ರಮದಲ್ಲಿ ಹಸುಗೂಸಾದ ಅವರೆದುರು ನೀನಾವ ಗಿಡದ ತೊಪ್ಪಲು ನರನಾದರೇನು ನರಪತಿಯಾದರೇನು ಹೋಗು ಹೋಗು.

**ನವಾಬ –** ನಹಿ ಮಾಲಿಕ ಕುಚ್ ನ ಕುಚ್ ಥೋಡ ಜಾನಾಚಾಹತಾ ಹುಂ ಎಹ್ ಮೇರಾದೇನ್ ತಾರೀಖಿ ಯಾದದಾಷ್ತ ಹೋಗಾ ಮಾಂಗಿಯೇ ಕುಚನ ಕುಚ್ ಮಾಂಗಿಯೇ ಜೀ ಚಾಹತಾ ಹೈ ಇಸ್ ಗಾಂವಕೆ ಅಸ ಪಾಸಕೆ ಬತ್ತೀಸಗಾವೊಂಕು ಜಹಾಗೀರ ಲಿಖದಂ ಏಹ ವಸೀಹತ್ ಆಪಕಿ ಖಿದಮೊಂಮೆ ರಖತಾ ಹುಂ ಖಿಬೂಲ ಫರಮಾಯಿಯೇ.

**ಸಿದ್ದೇಶ –** ನವಾಬ್ ನಾವೂ ನಿನ್ನಂತೆ ಪಟ್ಟ ಕಟ್ಟಿಸಿಕೊಂಡು ರಾಜ್ಯ ಭಾರ ಹೊರಬಯಸುವದಿಲ್ಲ ತೆಗೆದುಕೋ ನಿನ್ನ ದಾನದತ್ತಿ ಪತ್ರವನ್ನು (ಎಂದು ಹರಿದು ಬಿಡುವರು)

**ನವಾಬ –** ಥುಕರಾಯಿಯೇಮತ್ ಸ್ವಾಮೀಜಿ ಜೋ ಚಿರಾಗ, ದಾನಾ ಖಾನಾ ಪಾನಿ ಯಹಾಂಸೆ ಗರೀಬ ತವಂಗರೊಂಕು ಬಾಟಾ ಜಾತಾ ಹೈ ಉಸಮೆ ಕುಚ್ ಮೇರಾ ಹಿಸ್ಸಾಸ ಮುಜಕರ್ ಖಿಬೂಲಕೀಜಿಯೇ.

**ಸಿದ್ದೇಶ –** ಬೇಡ ಬೇಡ ನಮ್ಮನ್ನೇ ನಾವು ಅರಿತುಕೊಳ್ಳಲು ಸಮಯದ ಅಭಾವವಿರುವಾಗ ಈ ಚಿಂತೆ ಅದೆಂತು ಸಾಧ್ಯ.

**ನವಾಬ –** ಮೇರಾ ಆರಜೂ ಅವುರ ತಮ್ನಾಹೊಂಕಾ ಖಾಕ ಮತ್ ಕೀಜಿಯೇ ಆಖಾ ಕಿಮ್‌ಸೇ ಕಮ್ ಏಕದೋ ಗಾಂವಕಾ ಜಿಹಾಗೀರಿ ವಸೀಹತ್ ತೋ ಖಿಬೂಲಕೀಜಿಯೇ.

**ತಿ. ಭಟ್ಟ –** ಗುರುವೇ ನವಾಬರ ಕೊಡುಗೆಯನ್ನು ತಿರಸ್ಕರಿಸಬಾರದೆಂದು ಬೇಡಿಕೊಳ್ಳುತ್ತೇವೆ. ಅವರ ಈ ಕೊಡುಗೆ ಶ್ರೀಮಠದ ಇತಿಹಾಸದಲ್ಲಿಯೇ ಅಪೂರ್ವ ಅಧ್ಯಾಯದಲ್ಲಿ ಪ್ರಮುಖ ಪುಟವಾಗಲೆಂದು ನವಾಬರ ಪರವಾಗಿ ನಮ್ಮೆಲ್ಲರ ವತ್ತಾಸೆಯ ಬೇಡಿಕೆ.

**ಚ.ಬ.ಸ್ವಾಮಿ –** ಸಿದ್ದೇಶ, ಗವಿಸಿದ್ದೇಶಾ, ಜನಾನುರಾಗದ ಅಭಿಪ್ರಾಯಕ್ಕೆ ಬದ್ಧರಾಗಬೇಕಾಗಿದ್ದು ನಮ್ಮ ಕರ್ತವ್ಯ.

**ಸಿದ್ದೇಶ –** ತಮ್ಮಿಚ್ಛೆ ಗುರುಗಳೇ, ಎಂದು (ಕೈಯಲ್ಲಿ ತೆಗೆದುಕೊಳ್ಳುವರು.)

**ನವಾಬ –** ಆಜ ಮೈ ಬಹುತ ಖುಷ ಹುಂ ಮುಜ ಜೈಸೆ ನಾಚೀಜಕಿ ದೇನ ಖಿಬೂಲ ಫರಮಾಕರ್ ಬಡ್ ಎಹಸಾನಕಿಯೇ ಆಪಕಿ ದುಆಯೇಂ ಹಮೇಷಾಕೆ ಲಿಯೆ ಸಾಯೇಕಿ ತರಹ ಆಬಾದ ರಹೇ ಆಪಕೆ

ದಾಮನೇ ಪಾಕ ಚೂಮತೆ ಹುಹೇ ಆಪಸೇ ಬಿದಾಯಿ ಚಾಹತಾಹುಂ
ಖುದಾ ಹಾ ಪಿಜ್

(ಹೋದನಂತರ)

ಚ.ಬ.ಸ್ವಾಮಿ – ಸಿದ್ದೇಶ ನಿನ್ನ ಕಾರ್ಯಕ್ರಮತೆಯಿಂದ ನಾವು ಪರಿಪೂರ್ಣ ತೃಪ್ತರಾಗಿದ್ದೇವೆ.

ಸಿದ್ದೇಶ – ಎಲ್ಲವೂ ತಮ್ಮ ಆಶೀರ್ವಾದ ಗುರುವೇ ತಪ್ಪಿದಲ್ಲೆಚ್ಚರಿಸಿ ಮುನ್ನೆಡಸು ಗುರುವೇ.

ಚ..ಬ.ಸ್ವಾಮಿ – ಕುರುಡ ಕುಂಟರಿಂದ ಸಕಲ ಕಲೆ ನೈಪುಣ್ಯದಿಂದ ಪೂರ್ತಿಗೊಂಡ ಸಮಾಧಿ ಮಂಟಪ ಸಿದ್ಧವಾಗಿದೆಯಲ್ಲವೇ.

ಸಿದ್ದೇಶ – (ಮೌನ ಮುದ್ರೆಯಿಂದ ಸುಮ್ಮನೆ ಇರುವರು)

ಚ.ಬ.ಸ್ವಾಮಿ – ಸಿದ್ದೇಶ, ಭವಿಷ್ಯ ಬಹು ಅಂಧಕಾರಮಯವಾಗಿದೆ. ನೀನು ಮಾತ್ರ ಯಾವದಕ್ಕೂ ವಿಚಲಿತನಾಗದೆ ಸ್ತುತಿ ನಿಂದೆಗಳಿಗೆ ಕಂಣು ಕಿವಿ ಮನಗೊಡದೆ ಕಷ್ಟನಷ್ಟಗಳಿಗೆ ಎದೆಗುಂದದೆ ಕಲ್ಲುಖಣಿಯಾಗಿ ಬೇಡಿ ಬಂದವರಿಗೆ ಬೆಲ್ಲದಚ್ಚಾಗಿ ಶಿವನ ನಿಲುವಿಗೆ ಸಲ್ಲುವ ಹೂವಾಗಿ ಚಿರಕಾಲಬಾಳಿ ಬೆಳಗು.

ಸಿದ್ದೇಶ – ಗುರುವೆ, ನಾನಿದಾವ ಹೊಸಬಗೆಯ ಆಶೀರ್ವಚನ ಪಡೆದು ಕೊಳ್ಳುತ್ತಿರುವೆ.

ಚ.ಬ.ಸ್ವಾಮಿ – ಅಹುದು ಸಿದ್ದೇಶ ಸಂಕಲ್ಪಕ್ಕೆ ಸರಿಯಾಗಿ ಸಮಾಧಿಯ ನಿರ್ಮಾಣ ಪರಿಪೂರ್ಣವಾಗಿದೆ. ನಾವಿನ್ನು ಮಾಡಬೇಕಾದದ್ದೇನೂ ಉಳಿದಿಲ್ಲ ಅದಕ್ಕೆಂದೇ ಶಿವನ ಕರೆ ಮನ್ನಿಸುವ ಅಪೇಕ್ಷೆಯಾಗಿದೆ

ಸಿದ್ದೇಶ – ಶಿವ ಶಿವಾ ಅಶುಭವಳಿಯಲಿ ಗುರುವೇ ತಾವಿನ್ನೂ ಹಲವಾರು ಕಾಲ ಬದುಕಿ ನನ್ನಂತೆ ಇತರರಿಗೂ ಮಾರ್ಗದರ್ಶನ ಮಾಡಬೇಕಾಗಿದೆ. ತಾಯ ಕಳೆದುಕೊಂಡ ತಬ್ಬಲಿ ಕರುವು ಗೋಗರೆವಂತೆನ್ನ ಮಾಡದಿರಿ. ಕೂಡದು ಗುರುವೇ ಕೂಡದು.

ಚ.ಬ.ಸ್ವಾಮಿ – (ಏನನ್ನೂ ಹೇಳದೆ ಹಾಗೆಯೇ ನಗುತ್ತಾ ಹೋಗಿ ಬಿಡುವರು.)

ಸಿದ್ದೇಶ – ತಂದೆ, ಶಿವನೆ, ನನಗಿದಾವ ಶಿಕ್ಷೆ ವಿಧಿಸುತ್ತಿರುವಿ ತಂದೆ, ಅಡಿಗಡಿಗೆದರು ತೊಡರುಗಳನೆದುರಿಸುವಲ್ಲಿ ನೆರವಾಗಬಲ್ಲ

ಮಹಾಗುರುವ ಕಳೆದು ಕೊಂಡೆನಿಸುವಿನ ಬದುಕಿದರೇನು ಗಂಡ ಸತ್ತ ಮುಂಡೆಯಂತಾಗೇಸು ದಿನ ಬದುಕಿದರೇನು. ಶೂಲನೇರುವವ ಹಾಲು ತುಪ್ಪ ಕುಡಿದು ಮೇಲೇಸು ದಿನ ಬದುಕಿದರೇನು. ಶಿವನೇ ಗುರುವಿನಡಿದಾವರೆಯ ಮರಿದುಂಬಿಯಾಗಿ ಬಾಳಿ ನೀ ಮೆಚ್ಚುವಂತೆ ವಗೆತನವ ಮಾಡಿದೆ ತಂದೆ, ಗುರುವನಳಿದು ನಾನೆಂತು ಬಾಳಲಿ. ಆಗದು ಅದಾಗದು ಗುರುವಿನ ಕರೆಗೆ ಪ್ರತಿಯಾಗಿ ನಾನೇ ಶಿವನ ಕರೆಗೆ ಶರಣು ಹೋಗುವೆ. ಬರುವೆ ಶಿವನೇ ನಾನೇ ಬರುವೆ ಎಂದಾದರೊಂದು ನಿನ್ನ ಕರೆಯ ನಾನೂ ಮನ್ನಿಸಬೇಕಲ್ಲವೇ ಗುರುವಿಗೆ ಪ್ರತಿಯಾಗಿ ನಾನೇ ನಿನ್ನ ಕರೆ ಮನ್ನಿಸುವೆ ನಿನ್ನತ್ತ ಬರುವೆ ನಿನ್ನತ್ತ ಬರುವೆ ನಿನ್ನತ್ತ ಬರುವೆ ತಂದೆ.

**ಅಂದಾನಪ್ಪ** – ಗುರುವೆ ತಮ್ಮ ಪೂಜೆಗೆ ಎಲ್ಲವೂ ಅಣಿಯಾಗಿದೆ.

**ಸಿದ್ದೇಶ** – ಸ್ತುತ್ಯವಾದದ್ದನ್ನೇ ಮಾಡಿದೆ ಅಂದಾನಪ್ಪ ನೀನಿನ್ನು ಮುಂದೆ ಕಪೋತಗಿರಿಯಲ್ಲಿಯ ನಂದಿವೇರಿ ಮಠದಲ್ಲಿ ನೆಲಿಸಿ ನಿನ್ನ ಆಧ್ಯಾತ್ಮ ಶಕ್ತಿಯನ್ನು ಜಾಗ್ರತಗೊಳಿಸಿಕೊಂಡು ಕಪೋತೇಶ್ವರ ಮಹಾದೇವನ ದರ್ಶನಾರ್ಥಿಗಳಾಗಿ ಬರುವ ಸದ್ಭಕ್ತರ ಸೇವೆಗೆಂದು ಶರಣ ಸಂಪ್ರದಾಯ ದೀಕ್ಷಾಬದ್ಧನಾಗಿ ಮಾರ್ಗದೀಪ್ತಿಯಾಗಿ ಬಹುಕಾಲ ಬಾಳಿ ಬೆಳಗು ನಿನ್ನೀ ಸೇವಾ ಫಲ ಪಕ್ವವಾಗಿ ಬೀಜ ಮೊಳೆತು ಸಸಿಯಾಗಿ ಹೆಮ್ಮರವಾಗಿ ಅನಂತ ಕಾಲವೂ ವರ್ಧಿಸಲಿ.

**ಅಂದಾನಪ್ಪ** – ಮಹಾ ಪ್ರಸಾದವಾಯ್ತು ತಮ್ಮ ಅಮರವಾಣಿಯು ನನ್ನ ಜೀವನದ ಮಾರ್ಗದರ್ಶಿಯಾಯ್ತು (ಎಂದು ನಮಸ್ಕಾರ ಮಾಡುವನು)

**ಸಿದ್ದೇಶ** – ನಡೆ ಅಂದಾನಪ್ಪ ನಡೆ ಶರಣು (ಹೋಗುವರು)

(ಎಂದು ಹೋಗಿ ಪೂಜೆಗೆ ಕುಳಿತುಕೊಂಡ ನಂತರ ನೆಳಲು ದೃಶ್ಯದಲ್ಲಿ ಪೂಜಾ ಮಗ್ನರಾಗಿ ಕುಳಿತ ಸಿದ್ಧೇಶ್ವರ ಸ್ವಾಮಿಗಳ ದೇಹದಿಂದ ದಿವ್ಯ ಜ್ಯೋತಿಯೊಂದು ಬೆಳಗಿ ಶಿವನಲ್ಲಿ ಸಮರಸವಾಗುವದು)

**ಭಾವಗೀತೆ**

ಬೆರೆಯಿತೆ... ಬೆರೆಯಿತೆ....ಬೆರೆಯಿತೆ ।
ಜೋತಿ ಜೋತಿಯಲಿ ಬೆರೆತ ಮರವಾಯಿತೆ
ಶರಧಿಯಲ್ಲಿ ನದಿ ಸೇರಿದಂತೆ ನೀರು ಮೇಘದಲೇರಿದಂತೆ

ಗುರುವಿನಲಿ ಅರಿವು ತಾ ಬೆರೆತಂತೆ
ಹರನಡಿಯ ಗುರಿಯರಿಸಿ ಬೆರೆಯಿತೇ ಬೆರೆಯಿತೆ ಬೆರೆಯಿತೇ ॥

(ಅದೇ ದೃಶ್ಯದಲ್ಲಿ ವಬ್ಬೊಬ್ಬರಾಗಿ ಎಲ್ಲರೂ ಬಂದು ಸೇರಿ ಕೊಳ್ಳುವರು)

**ಮಾ.ಗೌಡ** – ತಂದೆ ಗವಿಸಿದ್ದೇಶ ಬಾ ಪಾರ್ವತಿ ಬಂದೆಯಾ ನೋಡಲ್ಲಿ ನಮ್ಮ ನಾಡ ಬಾಂದಳದ ಧರ್ಮದ ಸ್ಥಿರ ನಕ್ಷತ್ರ ತನ್ನ ದಿವ್ಯ ಪ್ರಭೆಯ ನೀಡಿ ಮಿಂಚಿ ಮರೆಯಾಯಿತು. ಯಾವ ಶಕ್ತಿಯು ನಮ್ಮ ಬಾಳಸಿರಿಯ ಬೆಳೆಯಿಸಿ ನಮ್ಮ ಮನೆತನಕ್ಕೆ ಆಧಾರ ಸ್ತಂಭವಾಗಿದ್ದಿತೂ ಆಶಕ್ತಿ ಇನ್ನಿಲ್ಲವಾಯಿತೇ ಪಾರ್ವತಿ.

**ಪಾರ್ವತಿ** – ನನ್ನಪ್ಪ ಇನ್ನಿಲ್ಲವಾದನೆ ನಮ್ಮೆಲ್ಲರ ಮನೋಕಾಮನೆಗಳನ್ನು ಪೂರೈಸಬಲ್ಲ ಶಿವಯೋಗಿ ಇನ್ನಿಲ್ಲವಾದನೆ ನನ್ನಂತರಾಳದ ವಾತ್ಸಲ್ಯದ ಕುಡಿಯಾಗಿ ತಪ್ತ ಆತ್ಮಕ್ಕೆ ತಾಯಿಯಾಗಿ ಬೇಡಿ ಬಂದವರಿಗೆ ಬೇಡಿ ದಿಷ್ಟಾರ್ಥವ ನೀಡಬಲ್ಲ ಸುರ ಧೇನುವಾಗಿ ಮರೆತು ಮಾಡಿದ ಮಹಾಪರಾಧವ ಮನ್ನಿಸಿ ಸನ್ಮಾರ್ಗ ಸೂಚಿಸುವ ಮಹಾ ಗುರುವು ಇನ್ನಿಲ್ಲವಾದನೇ ಇಹನು ಅವನೆಂದೆಂದಿಗೂ ನಮ್ಮೊಂದಿಗಿಹನು ನೆನೆದವರ ಮನದಲ್ಲಿ ಗರಿಗೆದರಿ ನಿಂತಿಹನು ಆ ಮಹಾತ್ಮ ಆತನಿಗೆ ಮರಣವಿಲ್ಲ ಸಾವಿಲ್ಲ.... ಸಾವಿಲ್ಲ.... ಸಾವಿಲ್ಲದ ಚಿರಂಜೀವಿ, ಚಿರಂಜೀವಿ, ಸಿದ್ದೇಶ ಗವಿಸಿದ್ದೇಶ.

**ಚ.ಬ.ಸ್ವಾಮಿ** – ಶಾಂತಿ ತಾಯಿ ಶಾಂತಿ ಸಿದ್ದೇಶನ ಲೀಲಾವಿನೋದಗಳು ನಮ್ಮ ನಿಮ್ಮೆಲ್ಲರ ಮನೆ ಮನಗಳಲ್ಲಿ ಅಚ್ಚ ಹಸಿರಾಗಿಯೇ ಉಳಿದಿರುವಂತೆ ಎಂದೆಂದಿಗೂ ನಮ್ಮೊಂದಿಗಿರುವ, ಗುರು ಶಿಷ್ಯರ ಗುಟ್ಟನ್ನರಿದು ಸಾರ್ಥಕ ಜೀವನ ನಡೆಯಿಸಿ ಗುರುಕಾರುಣ್ಯ ಪಡೆದು ಗುರುವಿನಡಿಯಲ್ಲಿಯೇ ದೇಹ ನೀಡಿದ ಗುರುವಿನ ಮನ ಗೆದ್ದ ಮಹಂತನಾದ ನಮಗಾಗಿ ನಿರ್ಮಿತ ವೆಂದೆಣಿಸಿದ ಸಮಾಧಿ ಸ್ಥಾನ ತಾನೇ ಗೆದ್ದುಕೊಂಡ ನಮ್ಮನುಗ್ರಹ ತಪಃ ಶಕ್ತಿಯನ್ನು ಪಡೆದು ತನ್ನೊಂದಿಗಿಟ್ಟುಕೊಂಡು ಐಕ್ಯನಾದ, ಗುರುವಿನಲ್ಲಿ ಸಮರಸವಾದ ನಮಗಾಗಿ ಮೀಸಲಿರಿಸಿದ ಸ್ಥಾನ ಆತನಿಗಾಗಿಯೇ ಉಳಿಯಲಿ ಅದೇ ಸ್ಥಾನ ಜಾಗ್ರತವಾಗಲಿ ಆಸ್ಥಾನವೇ ಕರ್ತಗದ್ದುಗೆಯಾಗಿ ಮೆರೆಯಲಿ.

**ಮಾ.ಗೌಡ** – ಗೌಡರೆ, ಆ ಮಹಿಮನು ಕೇವಲ ನಮ್ಮ ನಿಮ್ಮನ್ನಷ್ಟೇ ಅಲ್ಲ ಇಡೀ

ಮಾನವ ಕುಲವನ್ನೇ ಉದ್ಧರಿಸಲು ಹೆಣಗಿದ ಪ್ರತಿಫಲವೆಂದು ಅರ್ಪಿಸುವ ಶ್ರದ್ಧಾಂಜಲಿ ಅಪೂರ್ವವಾಗಿರಲಿ ಇಂದಿನ ಈದಿನ ಶಕೆ ಸಾವಿರದೇಳು ನೂರ ಮುವ್ವತ್ತಾರನೆಯ ಪುಷ್ಯ ಬಹುಳ ಬಿದಗಿಯ ದಿನ ಅಪೂರ್ವವಾಗಿರಲಿ ನಾವೆಲ್ಲರೂ ಶ್ರೀ ಮಠದ ಆಶೀರ್ವಾದ ಪಡೆದು ಆತನ ಪುಣ್ಯ ತಿಥಿಯನ್ನು ಅತ್ಯಂತ ವೈಭವದಿಂದ ಆಚರಿಸಲು ಆತನ ಪಾದ ಮುಟ್ಟಿ ಪ್ರಮಾಣ ಬದ್ಧರಾಗೋಣ ಜಯ ಗವಿಸಿದ್ದೇಶ.

**ಚ.ಬ.ಸ್ವಾಮಿ** – ನಿಮ್ಮ ಈ ಪವಿತ್ರ ಭಾವನೆಯು ಎಂದೆಂದಿಗೂ ಕುಂದದಂತೆ ಅನೂಚಾನವಾಗಿ ನಡೆದು ಬರಲೆಂದು ಆ ಮಹಾತ್ಮನ ಪಾದಗಳಿಗೆ ಬಿನ್ನವಿಸಿಕೊಳ್ಳೋಣ.

**ಪಾರ್ವತಿ** – ತಂದೆ ಸಿದ್ದೇಶ ಗವಿಸಿದ್ದೇಶ

(ದುಃಖದಿಂದ)

ಮೂಡಿ ಬಾರಯ್ಯ ಮೂಡಣಂಬರದಿಂ
ಓಡಿ ಬಾರಯ್ಯ ಓಂಕಾರನಾದದಿಂ
ನುಡಿಸಬಾರಯ್ಯ ಶಿವಶಾಂತ ಭಾವದಿಂ
ಮಿಡಿಸಯ್ಯ ಹೃದ್‌ವೀಣೆ ಭಕ್ತಿರಸದಿಂ ॥

===***=====***===

# ಸಂಪತ್ತಿಗೆ ಸವಾಲು

• ಪಿ. ಬಿ. ಧುತ್ತರಗಿ

# ಪಿ.ಬಿ. ಧುತ್ತರಗಿ

"ಸಂಪತ್ತಿಗೆ ಸವಾಲ್" ಸಿನೆಮಾ ನೋಡಿದಾಗಲೆಲ್ಲ ಪಿ.ಬಿ.ಧುತ್ತರಗಿ ನೆನಪಾಗುತ್ತಾರೆ. ಡಾ. ರಾಜಕುಮಾರ ಅಭಿನಯದ ಈ ಚಿತ್ರ, ಚಿತ್ರರಂಗದಲ್ಲಿ ಆ ಸಂದರ್ಭದಲ್ಲಿ ಕ್ರಾಂತಿಯನ್ನೇ ಉಂಟುಮಾಡಿತು. ಅಂತಹ ಮಹತ್ವದ ಕೃತಿಯನ್ನು ನೀಡಿದವರು ಧುತ್ತರಗಿಯವರು. ಇವರು ೧೫.೦೬.೧೯೨೮ರಲ್ಲಿ ಹುನಗುಂದ ತಾಲೂಕಿನ ಸೂಳಿಬಾವಿಯಲ್ಲಿ ಜನಿಸಿದರು. ಬಸನಗೌಡ ಮತ್ತು ಸಂಗಮ್ಮ ಇವರ ತಂದೆ – ತಾಯಿಗಳು. ಇವರು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಹನುಮಸಾಗರದಲ್ಲಿ ಬಂದು ನೆಲೆನಿಂತರು. ಹೀಗಾಗಿ ಕೊಪ್ಪಳ ಜಿಲ್ಲೆ ಧುತ್ತರಗಿಯವರ ಕಾರ್ಯಕ್ಷೇತ್ರವಾಯಿತು. ಇವರ ಪತ್ನಿ ಸರೋಜಮ್ಮ ಪ್ರಸಿದ್ಧ ರಂಗ ಕಲಾವಿದೆ. ಅವರೀಗ ಹನುಮಸಾಗರದಲ್ಲಿಯೇ ವಾಸಿಸುತ್ತಿದ್ದಾರೆ.

ಹಂದಿಗನೂರ ಸಿದ್ರಾಮಪ್ಪನವರ ಕಂಪನಿಯಲ್ಲಿದ್ದ ನಾಟಕಕಾರ ಜಿ.ಜಿ. ಹೆಗಡೆಯವರ ಸಾಮಿಪ್ಯದಿಂದ ಧುತ್ತರಗಿ ರಂಗಭೂಮಿ ಪ್ರವೇಶಿಸಿದರು. ಕುವೆಂಪು, ಅ.ನ.ಕೃ, ಬೇಂದ್ರೆಯವರ ಕೃತಿಗಳನ್ನು ಓದಿಕೊಂಡ ಧುತ್ತರಗಿಯವರು ಅ.ನ.ಕೃ ಅವರ "ಕಣ್ಣೀರು" ಕಾದಂಬರಿ ಆಧರಿಸಿ "ನಂದಾದೀಪ" ನಾಟಕ ಬರೆದರು. ೧೯೫೯ರಲ್ಲಿ ಇವರ "ಕಲ್ಪನಾ ಪ್ರಪಂಚ" ಪ್ರಥಮ ನಾಟಕ ಪ್ರಕಟವಾಯಿತು. ನಂತರ ಅನೇಕ ನಾಟಕಗಳು ಪ್ರಕಟವಾದವು. ಅವುಗಳಲ್ಲಿ 'ಸಂಪತ್ತಿಗೆ ಸವಾಲ್', ಜನಮನ್ನಣೆಯನ್ನು ಗಳಿಸಿದ ನಾಟಕ. ಈ ನಾಟಕವನ್ನು ಗೋಕಾಕದ ಶಾರದಾ ನಾಟಕ ಮಂಡಳಿಗಾಗಿ ಧುತ್ತರಗಿಯವರು ಬರೆದು ಕೊಟ್ಟರು. ಮುಂದೆ ಅದು ನಾಡಿನಾದ್ಯಂತ ಅನೇಕ ಕಂಪನಿಗಳಲ್ಲಿ ಪ್ರಯೋಗಗೊಂಡಿತು. ಅದೇ ನಾಟಕವನ್ನು ಇಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಧುತ್ತರಗಿಯವರಿಗೆ ಅನೇಕ ಪ್ರಶಸ್ತಿಗಳು ಲಭಿಸಿವೆ. ಅವುಗಳಲ್ಲಿ ರಾಜ್ಯೋತ್ಸವ ಪ್ರಶಸ್ತಿ, ನಾಟಕ ಅಕಾಡೆಮಿ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿ ಮುಖ್ಯವಾದವುಗಳು. ೦೧– ೧೧–೨೦೦೬ರಲ್ಲಿ ಹನುಮಸಾಗರದಲ್ಲಿ ನಿಧನರಾದರು. ಇವರು ರಂಗಭೂಮಿಗೆ ಸಲ್ಲಿಸಿದ ಸೇವೆ ಅಪಾರವಾದುದಾಗಿದೆ.

# ಸಂಪತ್ತಿಗೆ ಸವಾಲು

– ಪಿ.ಬಿ. ಧುತ್ತರಗಿ

## ಪಾತ್ರ ಪರಿಚಯ

| | | |
|---|---|---|
| ವೆಂಕಪ್ಪ | – | ಕುಲಕರ್ಣಿ, ಊರಿನ ಮುಖ್ಯಸ್ಥ |
| ಮರಿಯಪ್ಪ | – | ಸಾವುಕಾರ, ಲಕ್ಷ್ಮಿಯ ತಂದೆ |
| ಲಕ್ಷ್ಮೀ | – | ಸಾವುಕಾರ ಮರಿಯಪ್ಪನ ಮಗಳು (ಒಬ್ಬಳೇ ಮಗಳು) |
| ಸಿದ್ಧ | – | ಮರಿಯಪ್ಪನ ಆಳು, ಸಂಗವ್ವನ ಮಗ |
| ಭದ್ರ | – | ಸಂಗವ್ವನ ೨ನೇ ಮಗ |
| ಪಾರ್ವತಿ | – | ಸಿದ್ಧನ ಹೆಂಡತಿ |
| ಸಂಗವ್ವ | – | ಸಿದ್ಧ, ಭದ್ರರ ತಾಯಿ |
| ಚನ್ನಿ | – | ತಳವಾರ ಹುಡುಗಿ |
| ಗುಂಡ | – | ಭದ್ರನ ಗೆಳೆಯ |
| ಕೆಂಚಪ್ಪ | – | ಊರಿನ ಮುಖ್ಯಸ್ಥ |
| ಭೈರ | – | ಕೊಲೆಗಡಕ |

ಫೌಜದಾರ ಪೋಲೀಸರು ಮತ್ತಿತರ ಪಾತ್ರಗಳು

## ದೃಶ್ಯ ೧

॥ ಶ್ರೀ ಗುರುಸಿದ್ಧಲಿಂಗ ಕಾಯಲಿ ॥
॥ ಶ್ರೀ ಗುರುಮುದ್ದುಸಂಗ ಕಾಯಲಿ ॥

**ನಾಂದಿ ಗೀತೆ**

ಮನೆ ಸೀನು

ಓಂಕಾರ ಮುಖ ಸಚ್ಚಿದಾನಂದ । ಋತುಚಿತ್ ಪ್ರಭಾ ಸ್ವರೂಪಿಣೀಂ ಶಿವೆ ಸರಸ್ವತಿ ಲಕ್ಷ್ಮೀಯರ ಮೊದಲೆ ॥ ನಿಶಂಷ ದೇವ ಗೋಷಿ ಸಮಷಿ ರೂಪಿಣಿ ॥ ಭವತಾರಿಣಿ । ಹೇ ಜಗಧಾರಿಣಿ । ಹೇ ಜಗಧಾರಿಣಿ ॥ ಸಮರ್ಪಿಸುವೆವು । ಸಮಾತ್ಮಾ ಸರ್ವಸ್ವಮಂ । ನಿನ್ನಪದ್ಮಸಮ ಪದತಲಕೇ ತಾಯೇ ತಾಯೇ ತಾಯೇ

ಜಗ ಚಾಲ ಪಾಲಂ ಜನ ಸ್ತುತ್ಯಂ ಶೀಲಂ
ಭವಾರಣ್ಯ ಪಾವಂ । ಶ್ರೀ ಸಿದ್ಧಲಿಂಗಂ ॥ ಪ ॥

ಅಗಹರ ತ್ರಿವಿಕ್ರಂ ನಗಧರ ಸ್ವರೂಪಂ ॥
ನಗೆಹೊಗೆ ನಿಪಾರಂ । ಶ್ರೀ ಸಿದ್ಧಲಿಂಗಂ । ॥ ಜಗ ॥ ॥ ೧ ॥

ಕಲಾ ಸತ್ಕಲಾಪಂ । ಕರ್ಪರ್ದಿ ಸ್ವರೂಪಂ ।
ಮುನಿವಾಕ್ಯ ಮಾನ್ಯಂ ॥ ಶ್ರೀ ಸಿದ್ಧಲಿಂಗಂ ॥ ೨ ॥

ಮಲಪ್ರಭಾ ತೀರಂ । ಕಮತಗಿ ನಗರಂ ॥
ನಿರುತಾ ನಿವಾಸಂ ॥ ಶ್ರೀ ಮುದ್ದುಸಂಗಂ ॥ ೩ ॥

(ಸಂಗಮವ್ವನ ಮನೆ, ಬಡತನ ಸ್ಥಿತಿಯಲ್ಲಿದೆ. ಸಿದ್ಧಪ್ಪಜ್ಜನ ಪೋಟೋ ತೂಗು ಹಾಕಿದೆ. ಪಾರ್ವತಿ ಹೊಸ ಮೊದಲಗಿತ್ತಿ ಮಂಚದ ಮೇಲೆ ಕುಳಿತಿದ್ದಾಳೆ ಮಹಾಲಕ್ಷ್ಮೀಯಂತೆ)

**ಹಿನ್ನೆಲೆ ಧ್ವನಿ** – ಪಾರ್ವತಿ ಇದು ಮೊದಲ ರಾತ್ರಿ. ನಿನ್ನ ಬಾಳಿನಲ್ಲಿ. ಈ ರಾತ್ರಿ ಬಲು ಮಹತ್ವದ್ದು. ಹುಟ್ಟಿದ ಮನೆ ಇನ್ನು ನಿನ್ನ ಪಾಲಿಗಿಲ್ಲ. ಕೈಹಿಡಿದ ಪತಿಯ ಈ ಮನೆ ನಿನ್ನ ಮನೆ. ಇಲ್ಲಿ ನೀನು ಬೆಳಗಬೇಕಿದ್ದರೆ ದೀಪವಾಗಿ ಉರಿಯಬೇಕು. ಸುವಾಸನೆ ತುಂಬಬೇಕಿದ್ದರೆ ಗಂಧದ ಕೊರಡಿನಂತೆ ನೀನು ಸವೆದು ಹೋಗಬೇಕು. ಅಂದರೆ ಮಾತ್ರ ನಿನ್ನ ಜೀವ ತಾವರೆಯ ಹೂವಾಗಿ ದೇವರ ಮುಡಿಗೇರುತ್ತದೆ. ಪತಿ ಸೇವಾ ತತ್ಪರಳಾಗು. ಅತ್ತೆಯನ್ನು ತಾಯಿಯಂತೆಯೂ, ಮೈದುನನ್ನು ಮಗನಂತೆಯೂ ತಿಳಿದು ತುಂಬು ವಾತ್ಸಲ್ಯದಿಂದ ಕಾಪಾಡು. ಸಿದ್ಧ ಪುರುಷರ ಸಿರಿಹರಕೆಯಿಂದ ಅಂತಹ ಸದ್‌ಗ್ರಹಿಣಿ ನೀನಾಗಿ ಬಾಳು

**ಪಾರ್ವತಿ** – (ಎದ್ದು ಸಿದ್ದಪ್ಪಜ್ಜನಿಗೆ ನಮಸ್ಕರಿಸಿ) ನನ್ನಪ್ಪ ಸಿದ್ದಪ್ಪಜ್ಜಾ ನಾನೀ ದಾರಿಲಿ ನಡಿಬೇಕು. ನಡೆದು ಒಳ್ಳೇ ಹೆಸರು ಪಡಿಬೇಕೂ ಅಂತಾ ಮಾಡೀನಿ. ಮನಸ್ಸಿನಲ್ಲಿ ಮೂಡಿಸಿಕೊಂಡಂತೆ ನಡಿಯೋದು ಬಹಳ ಕಷ್ಟಾಂತ ಹೇಳ್ತಾರೆ. ಅದೇನಿದ್ರು ನೀನೇ ನನ್ನ ಬೆನ್ನ ಹಿಂದೆ ಇದ್ದು ಒಳ್ಳೇ ದಾರೀಲಿ ನಡೆಸಪ್ಪಾ ಅಂತಾ ನಿನ್ನೊಬ್ಬನಲ್ಲೆ ಬೇಡತೀನಿ

**ಸಿದ್ದಪ್ಪಜ್ಜನ ಪದ**

ನಿತ್ಯ ಮುಕ್ತನ ಕಂಡು ಧನ್ಯಳಾದೆನು ಇಂದು । ಪುಣ್ಯತಮ ಕ್ಷೇತ್ರ ಸಿದ್ಧನಾ ಕೊಳ್ಳದಲ್ಲಿ ॥ ನಿತ್ಯ । ಸಪ್ತಮಾತ್ರಿಕೆ ಗಣವಾ । ಸಂತೃಪ್ತಿಗೊಳಿಸಿ ॥ ಮುರಿದು ಬಿದ್ದ ಮಾತೆಯನ್ನು ॥ ಎದ್ದು ನಿಲ್ಲಿಸಿ । ಸಂಕಲ್ಪ ಸಿದ್ದಿಗೆ ದುರ್ಗೆಯ ತಣಿಸಿ ॥ ಸಿದ್ಧನಾದರೂ ಇಲ್ಲಿ ॥ ಸಿದ್ಧನಾ ಕೊಳ್ಳದಲ್ಲಿ ನಿತ್ಯ ಮುಕ್ತನ ಕಂಡು ॥ ॥ ೧ ॥

ಜಾತಿಮತ ಪಂಥಗಳಾ ತಾನಂತೂ ಮೀರಿ ॥ ದೀನದಲಿತರಾ ಕಂಡು ಅನುಕಂಪ ಬೀರಿ ॥ ಅಂಧಕಾರವಾ ಹರಿಸಿ । ಬೆಳಕನೂ ಬೀರಿಸಿ ॥ ಧೃಡಮನದ ಯೋಗೀಂದ್ರ ಮೃಢನೆ ಆಗಿಹನಿಲ್ಲಿ ಸಿದ್ದಜ್ಜನ ಕೊಳ್ಳದಲಿ ॥ ॥ ೨ ॥

ಗುಪ್ತ ಗಂಗಮಾತೆ ಸಂತೃಪ್ತಿಯಿಂದ ॥ ಸಿದ್ಧಪುರುಷನಾ ಮುಂದೆ ।

ಹರಿಯುವಳೋ ಹರುಷದಿಂದ ॥ ಅವನ ಮಹಿಮೆಯ ಕೇಳಬೇಕು ॥ ಇವನ ಬಾಯಿಂದಾ ಮುಂದೆ ಕುಳಿತ । ಜನರೂ ಮೌನದಿಂದಾ ಸಿದ್ಧಕೊಳ್ಳದಲ್ಲೀ॥ ೩ ॥

ಸುತ್ತು ಹತ್ತು ಗಾವೂದವರಿಷಿ ॥ ನಿತ್ಯ ಬಂದಿಲ್ಲೀ ॥ ದರುಶನ ಪಡೆವರೂ ॥ ಹರುಷದಲೀ ॥ ಬನಸಿರಿಯ ಸೊಬಗಿನ ॥ ಚಲುವಿನಲ್ಲಿ ಪರಮಹಂಸನ ಕಂಡು ॥ ಪರಮಕಾಂತಿಯಲ್ಲಿ ॥ ಸಿದ್ಧನ ಕೊಳ್ಳದಲ್ಲೀ ॥ ನಿತ್ಯ ಮುಕ್ತನ ಕಂಡೂ ॥ ೪ ॥

ಸಿದ್ಧ – (ಪದ ಮುಗಿಸುವ ಹೊತ್ತಿಗೆ ಬಂದು) ಪಾರೂ –

ಪಾರ್ವತಿ – (ಕಾಲಿಗೆ ನಮಸ್ಕರಿಸಿ) ಸ್ವಾಮೀ

ಸಂಗವ್ವ – (ಒಳಗಿನಿಂದ) ಎಲೋ ಸಿದ್ಧಾ (ಕೂಗು ಕೇಳಿದ ಕೂಡಲೆ ಸಿದ್ಧ ಪಾರ್ವತಿ ದೂರವಾಗುವರು. ಸಂಗವ್ವ ಭದ್ರನ ಕಿವಿ ಹಿಡಿದು ತಂದು ) ನೋಡು ಪಾರವ್ವ ಈತ ನಿನ್ನ ಗಂಡ ಸಿದ್ಧಣ್ಣ, ಇವನು ನಿನ್ನ ಮೈದುನ ವೀರಭದ್ರ, ಪ್ರೀತಿಯಿಂದ ನಾವೆಲ್ಲ ಭದ್ರ ಅಂತಾನೆ ಕರೀತೀವಿ.

ಪಾರ್ವತಿ – ಹೊಸ್ತಾಗಿ ಹೇಳಿಕೊಡೋದೇನೈತಿ ಅತ್ತೆ ನನಗೆಲ್ಲ ಗೊತ್ತು

ಸಂಗವ್ವ – ಏ ನಮಸ್ಕಾರ ಮಾಡೋ (ಭದ್ರ ಪಾರ್ವತಿಗೆ ನಮಸ್ಕರಿಸುವನು)

ಪಾರ್ವತಿ – ಇರ್ಲಿ ಏಳಪ್ಪಾ ನಾನೂ ಕೂಡ ನಿನ್ನ ಭದ್ರ ಅಂತಾನೇ ಕರೀತೀನಿ

ಭದ್ರ – ಹೌದು ಅತ್ತಿಗೆಮ್ಮಾ, ನೀನು ಎಲ್ಲರ ಹಾಗೆ ನನ್ನ ಭದ್ರ ಅಂತಾನೆ ಕರಿಬೇಕೂ ಅಂತ ನನ್ನಿಷ್ಟ

ಪಾರ್ವತಿ – ಹೌದಪ್ಪ ನೀನು ಬಲು ಜಾಣ

ಸಿದ್ಧ – ಯಾರು ಇವನೇ?

ಪಾರ್ವತಿ – ಹೌದು

ಸಿದ್ಧ – ಮುಗದ ಹೋಯಿತು, ಇವನು ಜಾಣನಲ್ಲೆ.....ಶುದ್ಧ ಕೋಣ. ಹೊರಗೆ ಹೋದರೆ ಹೊರಗಿನ ಜನರ ಕೂಡ ಜಗಳ, ಮನೆಯಲ್ಲಿದ್ದರೆ ಸುಮ್ಮನೆ ನಮಗೆ ಗದ್ಲ, ಇವನಿಗೆ ಗೊತ್ತಿರೊದಂದ್ರೇ ನಾಲ್ಕು ಹೊಡಿಯೋದು, ಹೊಡಿಸಿಕೊಳ್ಳೋದು. ಇಲ್ಲ ಬಯ್ಯೋದು, ಬಯ್ಯಿಸಿಕೊಳ್ಳೋದು

ಭದ್ರ – ಹೌದು ಅತ್ತಿಗೆಮ್ಮಾ ನನಗೆ ಗೊತ್ತಿರೋದು ನಾಲ್ಕಾದರೆ ನಮ್ಮಣ್ಣನಿಗೆ

ಗೊತ್ತಿರೋವು ಎರಡೇ ಹೊಡಿಸಿಕೊಳ್ಳೊದು, ಇಲ್ಲ ಬಯ್ಯಿಸಿ ಕೊಳ್ಳೋದು

ಸಂಗವ್ವ – ಹೌದಪ್ಪಾ ಭದ್ರ ಬಡವರಾಗಿ ಒಮ್ಮೆ ಭೂಮಿ ಮ್ಯಾಲೆ ಹುಟ್ಟಿವಿ ಅಂದ ಬಳಿಕ ಹೊಡಿಸಿಕೊಳ್ಳೋದು ಬಡಿಸಿಕೊಳ್ಳೋದು ಏನು ಮಹಾ ಮಾತು. ನಾವು ಬಡವರಾಗಿ ಹುಟ್ಟೇವಿ

ಭದ್ರ – ಗೊತ್ತವ್ವ ನನಗೆ ಬಡವರಾಗಿ ಹುಟ್ಟೇವಿ ಅನ್ನೋದು, ಆದರೆ ಬಡವರಾಗಿಯೇ ಬದಕತೀವಿ ಅಂತಾ ಹುಟ್ಟುವಾಗ ಆಣೆ ಮಾಡ್ಡಿವೇನೂ?

ಸಿದ್ಧ – ಬಡವರಾಗಿ ಹುಟ್ಟಿದ ಬಳಿಕ ಬಡವರಾಗಿಯೇ ಬದುಕಬೇಕು. ಸಾವುಕಾರಿಕೆ ಅಂದ್ರೇನು ಹರದ ಬರಾಕ ಹಳ್ಳದ ನೀರಂತ ಮಾಡಿಯೇನು?

ಭದ್ರ – ಹರದ ಬರತ್ತೊ ಏನ ಸರದ ಬರತ್ತೊ ತಿಳಿತೈತಿ ತಡಿ. ಇಷ್ಟು ದಿವಸ ನಮ್ಮಹೊಲಾ ಉಂಡಾನಲ್ಲಾ ಆ ಮರಿಯಪ್ಪ ಉಣ್ಣಲಿ ಇನ್ನ ಮ್ಯಾಲೆ, ನಮ್ಮ ಹೊಲದ ಸಮೀಪ ಬಂದ್ರೆ ನಾನವನ ಮ್ಯಾಲೆ ಕೈಮಾಡೇ ತೀರುವೆನು

ಸಂಗವ್ವ – ಈ ವರಟತನ ಬ್ಯಾಡಲೋ ಭದ್ರ. ಶ್ರೀಮಂತರ ಕೂಡ ದ್ವೇಷಾ ಕಟ್ಟಿಕೊಂಡು ಊರಿಗೆ ದೂರಾದಿ. ಸಾಯೋಕ ಮುಂಚೆ ನಿಮ್ಮಪ್ಪ ಸಾಲಾ ಮಾಡಿ ಹೊಲಾ ಅಡವ ಹಾಕಿ ಸತ್ತಾನನ್ನೋದು ಗೊತ್ತಿಲ್ಲೇನು. ಸಾಲಾ ಮುಟ್ಟಲಾರದ ಮರಿಯಪ್ಪನವರು ಹೊಲಾ ಬಿಟ್ಟು ಕೊಡತಾರೇನು

ಭದ್ರ – ಬಿಡದಿದ್ರೆ ಅವನ ಕಣ್ಣ ಕೀಳತೀನಿ. ಸಾಲಾ ಸಾಲಾ ಎಲ್ಲಿಯವರೆಗೆವ್ವ ಬೆಳಿಯಾಕ ಅದೇನು ಹನುಮಂತನ ಬಾಲ, ಐದನೂರು ರೂಪಾಯಿ ಸಾಲ ಕೊಟ್ಟಂಗ ಮಾಡಿ ಪ್ರತಿ ವರುಷ ಐದು ಸಾವಿರ ರೂಪಾಯಿ ಉತ್ಪನ್ನ ನಮ್ಮ ಹೊಲದಿಂದಲೇ ತಿಂತಾಯಿಲ್ಲವೆ. ಇದು ಅಲ್ಲದೆ ನೀನು ಅಣ್ಣ ಅದೆ ಹೊಲದಲ್ಲಿ ದುಡಿದು ಸಣ್ಣಾದ್ರಿ. ಇಷ್ಟಾದರೂ ಸಾಲಾ ಅಂದರೆ ಯಾರ ಕೇಳತಾರವ್ವಾ

ಸಿದ್ಧ – ಸಾಲಾ ಮುಟ್ಟೋತನಕ ಬಂದ ಬೆಳಿನೆಲ್ಲ ಅವರ ಮನಿಗೆ ಹಚ್ಚತೀನಂತ ಅಪ್ಪ ಅವರಿಗೆ ಮಾತು ಕೊಟ್ಟು ಸತ್ತಾನಂತ

ಭದ್ರ – ಯಾರು ಅಪ್ಪಾ ಹೌದಲ್ಲ, ಮುಗಿದು ಹೋಯಿತು, ದೇವರು ಇಲ್ಲಿಯವರೆಗೆ ಅವನಿಗೆ ಆಯುಷ್ಯ ಹಾಕಿದ್ರೆ?

ಸಿದ್ಧ – ಏನಾಗುತ್ತಿತ್ತು?

ಭದ್ರ – ಏನಾಗುತ್ತಿತ್ತು ಸಾಯೋದಕ್ಕೆ ಮುಂಚೆ ಸರಾಯಿ ಕುಡಿಯೋ ಚಟಕ ಬಿದ್ದು ಹೊಲಾ ಮನಿ ಒತ್ತಿ ಹಾಕಿ ಸತ್ತ. ಅಪ್ಪಿತಪ್ಪಿ ಇಲ್ಲಿಯವರೆಗೆ ಉಳಿದುಬಿಟ್ಟಿದ್ರೆ ನಮ್ಮವ್ವನ್ನ ನಮ್ಮನ್ನ ಮಾರಿ ಕಲಿಯುಗದ ಹರಿಶ್ಚಂದ್ರ ಅನ್ನಿಸಿಕೊಂಡು ಸಾಯುತ್ತಿದ್ದ. ಮಾತು ಕೊಟ್ಟಾನಂತ ಮಾತು, ಇವರೂ ನಡಿಸ್ತಾರಂತೆ ಮಾತು, ಕೊಟ್ಟಿದ್ದರ ಅವನು ಕೊಟ್ಟಿದ್ದಾನು. ಇಷ್ಟು ಬಡ್ಡಿ ತೊಗೊಳ್ಳಬಾರದು ಅಂತಾ ಕಾಯಿದೆ ಮಾಡಿತಂತ ಸರಕಾರ. ನಾನು ಕೇಳಿಕೊಂಡೆ ಬಂದೀನಿ. ಹೇಳ್ಯಾರ ಕುಲಕರ್ಣಿ ವೆಂಕಪ್ಪನವರು. ಇನ್ನ ಮ್ಯಾಲೆ ಅವನು ನಮ್ಮ ಹೊಲಾ ಬಿಡದಿದ್ದರ ನಾನವನ ಮ್ಯಾಲೆ ಕೈಮಾಡೇ ತೀರುವೆನು

ಸಂಗವ್ವ – ಬ್ಯಾಡಲೋ ಭದ್ರ ಈ ಹಟ. ನನ್ನ ಮಾತ ಕೇಳು ಎಷ್ಟೆಂದ್ರೂ ಶ್ರೀಮಂತರು ಶ್ರೀಮಂತರೆ, ಬಡವರು ಬಡವರೆ. ಮ್ಯಾಲೆ ಹರಿಬೇಕಾದ ನೀರೂ ಮ್ಯಾಲೆ ಹರಿಬೇಕು. ಯಾಕೋ ಬದಕಬೇಕನ್ನು ಆಸೆ ಇಲ್ಲೇನು ನಿನಗೆ

ಭದ್ರ – ಛೇ ಇದು ಯಾತರ ಬದಕವ್ವ. ಈ ಪರಿ ಬದಕೋಕಿಂತ ಸಾಯೋದು ಸಾವಿರ ಪಾಲು ಮೇಲು. ಅವ್ವ ಚಿಕ್ಕಿಯಾಗಿ ಸಾವಿರ ವರುಷ ಬದುಕೋದಕ್ಕಿಂತ ಮಿಂಚಾಗಿ ಒಂದು ಕ್ಷಣ ಮಾಯವಾಗುವುದು ಮೇಲಲ್ಲವೇ?

ಸಿದ್ಧ – ಏ ಸಾಕ ಸುಮ್ಮನಿರೋ. ಶೂರ ಸರದಾರ ಸಂಗೊಳ್ಳಿ ರಾಯಣ್ಣ ಆಗ್ಯಾನ. ಯಾವಾಗ ನೋಡಿದರೂ ಮುಗಿಲ ಹರಿದು ಹಾಕ್ಕೊಳ್ಳೊ ವಿಚಾರನೇ. ಅವ್ವ ಮೊನ್ನೆ ಇವನು ಐಹೊಳ್ಳಿ ಜಾತ್ರೆಯಲ್ಲಿ ಏನ ಮಾಡಿದ ಗೊತ್ತೇನವ್ವ

ಪಾರ್ವತಿ – ಐಹೊಳ್ಳಿ ಜಾತ್ರಿಲಿ ಏನು ಮಾಡಿದ

ಸಿದ್ಧ – ಸಾವಕಾರ ಮರಿಯಪ್ಪನ ಮಗಳು ಲಕ್ಷ್ಮಿಬಾಯಿ ಜಡೆ ಹಿಡಿದು ಎಳದನಂತ

ಸಂಗವ್ವ – ಅಂ ಹೌದೇನೋ?

ಭದ್ರ – ಹೌದು ಅವಳೂ ನನಗೆ ಅಣಕಿಸಬೇಕೇನು ಮತ್ತೆ.

ಸಿದ್ಧ – ಏನಂತ?

ಭದ್ರ – ನಾವೇನೋ ಅವರ ಮನಿ ಜೀತದ ಆಳಂತ

ಸಿದ್ಧ – ಹೌದು ಅಲ್ಲವೇನು ಮತ್ತೆ?

ಪಾರ್ವತಿ – ಅಂದರೆ ಅಂತಾಳೆ. ಆ ಬಳಿಕ ತಾನೇ ಸುಮ್ಮನಾಗತಾಳೆ. ಅದೇನಿದ್ರೂ ನೆರೆಮನೆಯ ಹೆಣ್ಣುಮಕ್ಕಳ ಮೇಲೆ ಹಾಗೆಲ್ಲ ಕೈಮಾಡಬಾರದು ಭದ್ರ

ಭದ್ರ – ಆಗಲಿ ಅತ್ತಿಗೆಮ್ಮ. ಇನ್ನು ಅವಳು ನನ್ನ ಸುದ್ದಿಗೆ ಬರದಿದ್ದರೆ ನಾನು ಅವಳ ಸುದ್ದಿಗೆ ಹೋಗೋದಿಲ್ಲ

ಸಂಗವ್ವ – ನೋಡು ಪಾರು ಈಗ ನಿನ್ನೆದುರು ಒಪ್ಪತಾನೆ. ಮತ್ತ ತನ್ನ ಕಾಯಕವೇ ಪ್ರಾರಂಭ ಮಾಡತಾನೆ. ಒಟ್ಟಾರೆ ಇದು ಮಹಾ ಕಿಡಿಗೇಡಿ

ಸಿದ್ಧ – ಮಂಗ ಆಗಿ ಹುಟ್ಟಬೇಕಾಗಿತ್ತು ಎಲ್ಲೋ ತಪ್ಪಿ ಮನುಷ್ಯ ಆಗಿ ಹುಟ್ಟಿತು

ಪಾರ್ವತಿ – ಶ್ರೀ ಕೃಷ್ಣದೇವರೂ ಸಣ್ಣವನಿದ್ದಾಗ ತುಂಬಾ ಕಿಡಿಗೇಡಿತನ ಮಾಡಿದ್ದಾರೆ. ಅವರು ಮಾಡಿದ ಕೀಟಕತನಕ್ಕೆ ಅಲ್ಲವಾ ದೊಡ್ಡವರು ಕೃಷ್ಣಲೀಲೆ ಅಂತಾ ಕರೆಯೋದು

ಭದ್ರ – ಕೇಳ್ರಿ ಎಂಥಿಂಥವರೂ ಏನೇನೋ ಮಾಡಿದ್ದಾರೆ. ನಾವೂ ಅವರ ಪೈಕೀನೇ

ಸಿದ್ಧ – ಅಂದ್ರ ಅವನಂತೆ ಇವನು ಅವತಾರಿ ಪುರುಷ ಆಗತಾನೆ ಅಂತಿಯಾ?

ಪಾರ್ವತಿ – ಯಾಕಾಗಬಾರದು? ಅವತಾರಿ ಪುರುಷನಾಗದಿದ್ದರೂ, ಪುರುಷ ಸಿಂಹನಾಗಿ ಬಾಳತಾನೆ. ಸುತ್ತಲೂ ಹತ್ತು ಜನರ ಬಾಯಲ್ಲಿ ಉತ್ತಮನೆಂದು ಹೊಗಳಿಸಿಕೊಳ್ಳತಾನೆ

ಸಂಗವ್ವ – ಆಗಲವ್ವ ನಿನ್ನ ಬಾಯಿ ಹರಕೆಯಿಂದ ಅಷ್ಟಾದರೆ ಸಾಕು. ನೋಡ ಪಾರವ್ವ ನಿನ್ನ ಮೈದುನನ ಮಂಗತನ ನಿನಗರ್ಥವಾಯಿತಲ್ಲ. ಇದು ಆಡಿದರೆ ಅರಗಿಳಿ, ಕಾಡಿದರೆ ಘಟಸರ್ಪ. ಇಂಥದ್ದನ್ನು ಹ್ಯಾಂಗ

ಬಾಳಿಸಿಕೊಂಡು ಪಳಗಿಸಿಕೊಂಡು ಹೋಗತೀಯೋ ಏನೋ? ಇವನ ಹಡೆದ ನನ್ನ ವಡಲ ತಂಪು ಕಾಣಬೇಕಿದ್ರೆ ಈಗ ನೀನೊಂದು ಕೆಲಸ ಮಾಡಬೇಕು ಮಾಡತೀಯೇನವ್ವ

ಪಾರ್ವತಿ – ಅದೇನು ಹೇಳ್ರಿ ಅತ್ತೆ?

ಸಂಗವ್ವ – ನೋಡು ಈ ಹಾಲು ನಿನ್ನ ಗಂಡಗ ಕುಡಿಲಿಕ್ಕೆ ಅಂತಾ ಇಟ್ಟದ್ದು ಈಗ ಇದನ್ನು ನಿನ್ನ ಗಂಡನಿಗೆ ಬದಲು ಈ ನಿನ್ನ ಮೈದುನನಿಗೆ ನೀನೇ ನಿನ್ನ ಕೈಯಾರೆ ಕುಡಿಸಬೇಕು ಅಂತಾ ನನ್ನಿಷ್ಟ

ಪಾರ್ವತಿ – ಯಾಕತ್ತೆ?

ಸಂಗವ್ವ – ಹೇಳಲೇನವ್ವ ಗಾಬರಿಯಾಗಬೇಡ. ಮನೆ ನಡಿಸಬೇಕಾದ ಹೆಣ್ಣಿನ ಮನಸ್ಸು ಶಾಂತವಾಗಿದ್ದರೆ ಮಾತ್ರ ಆ ಮನೆ ಶಾಂತಿಯಿಂದ ಬೆಳಗುತ್ತದೆ. ನೀನೀಗ ಮನಗೆ ವಡತಿ. ಆದ್ದರಿಂದ ಕೇಳಕೊಳ್ಳತೀನವ್ವ (ಹಾಲಿನ ಪಾತ್ರೆ ಕೈಗಿತ್ತು) ತಗೊಳ್ಳವ್ವ ಇದನ್ನ. ಕೈಲಿರೊ ಈ ಹಾಲು ಹಸಿವಿನದಲ್ಲ, ನಿನ್ನ ಎದೆ ಹಾಲು ಅಂತಾ ತಿಳಿದು ಈ ನಿನ್ನ ಮೈದುನನಿಗೆ ನಿನ್ನ ಕೈಯಾರೆ ಕುಡಿಸಬೇಕು. ಅದಕ್ಕೆ ಮುಂಚೆ ನಿನ್ನ ಜೀವ ಇರುವವರೆಗೆ ಭದ್ರ ಮೈದುನ ಅಲ್ಲ ಮಗ ಅಂತ ತಿಳಿದು ಜೋಪಾನ ಮಾಡಿಕೊಂಡು ಹೋಗತೀನಿ ಅಂತ ಈ ಹಾಲಿನ ಮೇಲೆ ಆಣೆ ಇಟ್ಟು ನಿನ್ನ ಕೈಯಾರೆ ಕುಡಿಸು

ಪಾರ್ವತಿ – ಆಗಲತ್ತೆ ಕೈಲಿರೊ ಈ ಅಮೃತದ ಮೇಲೆ ಆಣೆ ಇಟ್ಟು ಹೇಳತೀನಿ ನನ್ನ ಜೀವ ಇರೋವರೆಗೂ ಭದ್ರ ನನ್ನ ಮೈದುನ ಅಲ್ಲ, ಮಗಾ ಅಂತಾ ತಿಳಿದು ಕಾಪಾಡಿಕೊಂಡು ಹೋಗತೀನಿ. ಕುಡಿಯಪ್ಪ ಇದನ್ನ

ಸಂಗವ್ವ – (ತಡೆದು) ಏ ತಡಿಯೋ ನೀನೂ ಇವಳನ್ನು ತಾಯಿಯಂತೆ ಭಾವಿಸಿಕೊಂಡು ಹೋಗತೀನಿ ಅಂತಾ ಅದರ ಮೇಲೆ ಆಣೆ ಇಟ್ಟು ಕುಡಿ

ಭದ್ರ – ಏ ಹೌದಲ್ಲ. ಈ ಅಮೃತದ ಮೇಲೆ ಆಣೆ ಇಟ್ಟು ಹೇಳತೀನಿ. ಇನ್ನು ಮೇಲೆ ಅತ್ತಿಗೆಮ್ಮಾನೆ ನನ್ನ ತಾಯಿ ಅಂತಾ ತಿಳಿತೀನಿ (ಕುಡಿಯುವನು)

ಸಂಗವ್ವ – ನೋಡು ಭದ್ರ ನಿನ್ನದು ಮೊದಲೆ ದುಡುಕು ಬುದ್ಧಿ ಆಣೆ ಇಟ್ಟಿದಿ....ಎಚ್ಚರ

ಪಾರ್ವತಿ – ನೀವ್ಯಾಕ ಚಿಂತಿಸ್ತೀರತ್ತಿಗೆ. ನಿಮ್ಮ ಪುಣ್ಯದಿಂದ ನಾವೆಲ್ಲ ಸುಖವಾಗೆ ಇರ್ತೀವಿ

ಸಂಗವ್ವ – ಅಷ್ಟಾದ್ರೆ ಸಾಕವ್ವ ಏ ನಡಿಯೋ ಇನ್ನ

ಭದ್ರ – ಏ ಹೌದು ನಾವಿಲ್ಲಿ ಇರಬಾರದಲ್ಲ, ಬರತೀನಿ ಅತ್ತಿಗೆಮ್ಮಾ ಬರತೀನಿ ಅಣ್ಣಯ್ಯ (ಹೋಗುವರು)

ಸಿದ್ಧ – ಲೇ ಪಾರು ನಿನ್ನ ಮಳ್ಳ ಹುಡುಗಿ ಅಂತ ಮಾಡಿದ್ದೆ. ರೀತಿ–ನೀತಿ ಕಲಿತುಕೊಂಡೆ ಬಂದಿಯಾ? ಅಂತೂ ನನ್ನ ಹೆಂಡತಿ ಜಾಣೆ

ಪಾರ್ವತಿ – ಹೂಂ ಅಲ್ಲವೇ ಎರಡು ಮಾತಾಡೋದಕ್ಕು ಕಲಿಬಾರದಾ ನಾನು

ಸಿದ್ಧ – ಕಲಿ.... ಕಲಿ... ನಾನ್ಯಾಕ ಬ್ಯಾಡ ಅನ್ನಲಿ. ಅಲ್ಲ ಪಾರು, ಆ ನನ್ನ ತಮ್ಮ ಭದ್ರ ಮಹಾ ಕಿಡಿಗೇಡಿ ಅಂಥಾದ್ದನ್ನು ಸರಿಯಾದ ದಾರಿಯಲ್ಲಿ ನಡಿಸಿಕೊಂಡು ಹೋಗತೀನಿ ಅಂತ ಅವ್ವನಿಗೆ ನೀನು ಮಾತು ಕೊಟ್ಟಿಯಲ್ಲ, ಇದು ನಿನ್ನಿಂದ ಸಾಧ್ಯವಾಗುತ್ತದೆಯೇ?

ಪಾರ್ವತಿ – ಗಂಡನ ಪ್ರೀತಿ ವಿಶ್ವಾಸಕ್ಕೆ ಪಾತ್ರಳಾಗಿ ಬಾಳೋ ನಾರಿಗೆ ಸ್ವರ್ಗದ ದಾರಿನೇ ಸಿಕ್ಕುತ್ತ ಅಂತ ಹೇಳ್ತಾರೆ. ನಾನು ಆ ದಾರಿಯಲ್ಲಿ ನಡೆದರೆ ನನ್ನೊಂದಿಗೆ ಭದ್ರನು ನಡಿತಾನೆ. ಒಳ್ಳೆ ಹೆಸರೂ ಪಡಿತಾನೆ ಆ ಧೈರ್ಯ ನನಗುಂಟು

ಸಿದ್ಧ – ನಿನಗಿರೋ ಆ ಧೈರ್ಯ ನನಗಿಲ್ಲ. ಅವ್ವ ಹೇಳಿದ ಹಾಗೆ ಅದು ಆಡಿದರೆ ಅರಗಿಳಿ, ಕಾಡಿದರೆ ಘಟಸರ್ಪ. ಅಂಥ ಕಿಡಿಗೇಡಿನೇ ಅದು

ಪಾರ್ವತಿ – ಗಂಡು ಹುಡುಗರು ಅಂದರೆ ಹಾಗೆ ಇರಬೇಕು. ನಿಮ್ಮ ಹಾಗೆ ಸಪ್ಪಸಪ್ಪಗೆ ಇದ್ದುಬಿಟ್ಟರೆ ಈ ಪ್ರಪಂಚ ತಲೆಯ ಮೇಲೆ ಕಲ್ಲು ಎತ್ತಿ ಹಾಕುತ್ತೆ

ಸಿದ್ಧ – ಎಲಾ ಹೆಣ್ಣೆ? ಆಡಾಡತಾ ನನಗೆ ಸಪ್ಪೆ ಅಂತಿಯಾ? ಎತ್ತಿನ ಬೆನ್ನ ಮೇಲೆ ನಿತ್ಯ ಆಡತಾ ಇರೋ ಆ ನನ್ನ ಬಾರಕೋಲು ಏನು ಹೇಳುತ್ತೆ ಗೊತ್ತಾ?

ಪಾರ್ವತಿ – ಗೊತ್ತು, ಅದು ಹೇಳುವದಿಷ್ಟೆ ಹೊರಗೆ ಹುಲಿರಾಯ ಹೆಂಡತಿ ಹತ್ತಿರ.......

– ಪದ –

ಸಾವಿರ ಜನರಾ ಆಳಿದರೇನು ॥
ಸತಿಗಾಗಿ ಬಳಲಿದ ತಾನ್ಯಾಕೆ ರಘುವೀರ ॥ ಪಲ್ಲ ॥
ಹೆಣ್ಣಿನ ಕುಡಿನೋಟ । ಕಣ್ಣಿಗೆ ಬಲುಮಾಟ ॥ ತಿಂದಷ್ಟು ತೀರದು ।
ಬಯಕೆಯ ಊಟ ॥ ಗತಿ ಇಲ್ಲದಿದ್ದರೂ ನಡೆದೀತು । ಸಂಸಾರ
ಸತಿ ಇಲ್ಲದವನ । ಬಾಳಿಲ್ಲ ಬೇಸರಾ । ಸಾವಿರ ॥

(ತೆರೆ ಬೀಳುವುದು)

===***====***===

## ದೃಶ್ಯ ೨

ಜಂಗಲ್‌ರಸ್ತಾ

**ವೆಂಕಪ್ಪ –** ಕಚೇರಿ ಕೆಲಸಕ್ಕೆ ಹೊರಟಾಗ ಹತ್ತಿರ ಒಂದ ಹತ್ತಿಪ್ಪತ್ತು ರೂಪಾಯಿ ಹೆಚ್ಚಿಗಿದ್ದರೇನೇ ಒಳ್ಳೇದು. ಯಾಕೆಂದರೆ ಎಲ್ಲರೂ ನಮ್ಮ ಹಾಗೆ ಕೈಯೊಡ್ಡೋರೆ. ಹಿಂದಿನ ಕಾಲದಲ್ಲೂ ಸರಕಾರಿ ಅಮಲ್ದಾರರು ಲಂಚಾ ತಿಂತಿಂದ್ರು. ತಿಂದ್ರೇನಾಯಿತು ಕೊಟ್ಟವರ ಕೆಲಸಾನು ಅಷ್ಟೇ ನಿಯತ್ತಿನಿಂದ ಮಾಡತಿದ್ರು. ಈ ಕಾಲದಲ್ಲಿ ಲಂಚಾ ತಿಂಬೋದು ಹೆಚ್ಚಾಯಿತು. ಕೊಟ್ಟವನ ಕೆಲಸ ಮಾಡಿಕೊಡೋದು ಮಾತ್ರ ಬಹಳ ಕಡಿಮೆಯಾಯಿತು. ಮೊದಲಿನ ಕಾಲದಲ್ಲಿ ಎಂಥೆಂಥ ದೊಡ್ಡ ದೊಡ್ಡ ಅಮಲ್ದಾರರೂ ಕೂಡ ಅಂಜಿ ಅಳುಕಿ ಕದ್ದು ಮುಚ್ಚಿ ಲಂಚಾ ಸ್ವೀಕಾರ ಮಾಡತಿದ್ರು. ಈಗ ಕಚೇರಿ ಪ್ಯೂನ ಕೂಡ ಕೋಟ ಹಿಡಿದು ಎಳದು ಕೇಳತಾನೆ. ಮೊದಲು ಕೊಟ್ಟು ಒಳಗೆ ಹೋಗೋ ನನ್ನ ಮಾಮೂಲು ಅಂತಾ. ಇಂತಿಂಥ ಕೆಲಸ ಆಗಬೇಕಿದ್ರೆ ಇಂತಿಂಥವರಿಗೆ ಇಷ್ಟಿಷ್ಟ ಲಂಚಾ ಕೊಡಬೇಕು ಅಂತಾ ರೂಲ್ಸೇ ಹೇಳಿಬಿಡುತ್ತಾರೆ. ಹೀಗಾದಲ್ಲೆ ಅಮಲ್ದಾರರನ್ನ ಕಂಡ್ರೆ ಜನರಿಗೆ ಅಂಜಿಕೆ ಅಂಬೋದೆ ಅಳುಕಿ ಹೋಯಿತು. ಮೊದಲು ಹೀಗಿತ್ತೇನು? ನನ್ನಂಥ ನಾನು ಕುಲಕರ್ಣಿ ಮಾಡತಾ ಇದ್ದಾಗ ತಾಲೂಕಾ ಧಣಿ ತಹಶೀಲದಾರರು ಹಳ್ಳಿಗೆ ಬರ್ತಾರೆ ಅಂದರೆ ಸಾಕು ಬಾಯಲ್ಲಿ ಗುಟುಕು ನೀರು ಹಾಕದೆ ವಾಲಿಕಾರನ್ನೆಲ್ಲ ಕಟಗೊಂಡು ಅವರ ದಾರೀನೇ ಕಾಯಿತಾ ನಿಲ್ಲುತಿದ್ದೆ. ಈಗ ಡೆಪ್ಯೂಟಿ ಕಮೀಷನರ್ರೇ ಬರತಾರೆ ಅಂದ್ರೂ ಜನ ಬಯಪಡೋದಿಲ್ಲ. ಒಳ್ಳೇ ಬೇನೆಯತ್ತಿನ ಕಾಲ ಬಂದೋಯಿತು ರಂಡೇ ಮಗಂದು

(ಬೀಡಿ ಬಾಯಿಗೆ ಹಚ್ಚುವನು. ಮರಿಯಪ್ಪ ಬರುವನು)

**ಮರಿಯಪ್ಪ –** ಇದೇನೋ ವೆಂಕಪ್ಪ

**ವೆಂಕಪ್ಪ –** ಬಾರಪಾ ಮರಿಯಪ್ಪ

ಮರಿಯಪ್ಪ – ಬರಬರತಾ ನೀ ಬೀಡಿ ಸೇದಕ ಹತ್ತಿದೆಲ್ಲೋ

ವೆಂಕಪ್ಪ – ಹೌದೋ ಈಗೀಗ ಸಿಗರೇಟು ನನಗೆ ಜರ ಹೀಟ್ ಆಗಲಿಕ್ಕತ್ತೇದ ನೋಡ ಮರಿಯಪ್ಪ

ಮರಿಯಪ್ಪ – ಹೂಂ, ಪ್ರಕೃತಿಗೆ ಒಗ್ಗುವಲ್ದೇನು? ಯಾಕ ನಿಂದು ವಯಸ್ಸಾಯಿತು ನೋಡು

ವೆಂಕಪ್ಪ – ವಯಸ್ಸಾಯಿತು? ಯಾರಿಗಾ ನೀ ಅಂಬೋದು ವಯಸ್ಸಾಯಿತು ಅಂತ

ಮರಿಯಪ್ಪ – ಮತ್ಯಾರಿಗೆ ನಿನಗ

ವೆಂಕಪ್ಪ – ನನಗೆ ವಯಸ್ಸಾಯಿತು, ಮತ್ತ ನಿನಗ? ನಿನಗೂ ವಯಸ್ಸಾಯಿತು.... ಅಲ್ಲಪಾ ನನಗ ಮುದುಕ ಅಂದರೆ ಬಿಡತೀನೇನು? ನಿನಗ ಮುದುಕ ಅನಲಾರದೆ. ಅಲ್ಲೋ ಮರಿಯಪ್ಪ ವಯಸ್ಸಾಯಿತು ಅನ್ನಲಿಕ್ಕೆ ನಮಗೇನ ಅಂತಾ ವಯಸ್ಸಾಗೇತೋ ಬಾಳ ಅಂದರೆ ಇಪ್ಪತ್ತೊಂದು

ಮರಿಯಪ್ಪ – ಇಪ್ಪತ್ತೊಂದಾ ನಿನಗಾ

ವೆಂಕಪ್ಪ – ನಾಲ್ವತ್ತರ ಮ್ಯಾಲೆ. ನೆನಪಿರಲಿ ಮರಿಯಪ್ಪಾ ವಯಸ್ಸಾಯಿತು ಅಂತಾ ನೀನು ನಾನು ಕಣ್ಣಿಗೆ ಚಾಲೀಸ ಹಾಕಿದ ದಿನಾನೆ ನಮ್ಮೂರಾಗ ಬಾಳ ಜನ ಹಾಲು ಕುಡಿತದೋ ಮ್ಯಾಲೆ ಸಕ್ರಿ ಹಾಕ್ಕೊಂಡು. ಯಾಕ ಅಂದ್ರೆ ಮುದಕರಾದುವು ಇವುದರ ಕಾಲ ಮುಗಿತೂ ಅಂತಾ

ಮರಿಯಪ್ಪ – ನನಗೊತ್ತಿಲ್ಲೇನೋ ವೆಂಕಪ್ಪಾ? ಕಣ್ಣ ಕಾಣದಂಗಾದರೂ ನಾನೇನು ಚಾಳೀಸ ಹಾಕೋದಿಲ್ಲ

ವೆಂಕಪ್ಪ – ಮತ್ತ ನಾ ಹಾಕತೀನೇನು? ಅಲ್ಲಪಾ ಸಿಗರೇಟು ಸೇದೂದು ಯಾಕ ಬಿಟ್ಟಿಯಂತ ಕೇಳಿದೆಲ್ಲ? ನೋಡಪಾ ಸಿಗರೇಟು ಸೇದಿ ದಕ್ಕಿಸಿಕೊಳ್ಳಬೇಕಿದ್ರೆ ಬೆಣ್ಣೆ ಬಾಳ ತಿನ್ನಬೇಕಾಗುತ್ತೊ. ಈಗ ನಮಗೆ ಊಟಕ್ಕ ಎಣ್ಣೆ ಸಿಗೋದೇ ಕಷ್ಟಾಗೇತೋ ಮರಿಯಪ್ಪ

ಮರಿಯಪ್ಪ – ಇದೇನೋ ಹನ್ನೆರಡು ಹಳ್ಳಿ ಕುಲಕರ್ಣಿ ಮಾಡಿದ ಮನುಷ್ಯ ನೀನೆ ಹೀಗಂದ್ರೆ ಹ್ಯಾಂಗ

ವೆಂಕಪ್ಪ – ಹೌದಪ್ಪಾ ಕುಲಕರ್ಣಿಕಿ ಇದ್ದಾಗ ಏನ ತಿನ್ನಲಿಲ್ಲ ನಾವು?

**ಮರಿಯಪ್ಪ –** ಹೌದಪ್ಪಾ ತಿನ್ನೋದು ತಿಂದಿ, ತಿನಬಾರದು ತಿಂದಿ

**ವೆಂಕಪ್ಪ –** ಇನ್ನು ನಿನಗ ಗೊತ್ತಿಲ್ಲಪಾ ನಾ ತಿಂದದ್ದು. ಯಾಕಂದ್ರೆ ಅವಾಗ ನನಗ ನಿನಗ ಪಾರ್ಟಿ ಇದ್ದಿಲ್ಲೇನು ಊರಾಗ

**ಮರಿಯಪ್ಪ –** ಹೌದಲ್ಲ ಆ ತಳವಾರ ಚೆನ್ನಿ ಸಲುವಾಗಿ

**ವೆಂಕಪ್ಪ –** ಏ.... ಹೆಸರು ಒಡಿಬಾರದು. ಅಲ್ಲದು ಗಂಟಲುದೊಳಗಿನ ವಿಷ ಗಂಟಲದೊಳಗಿದ್ರೇನೆ ಚಂದ. ಆ ವಿಷ ಗಂಟಲದಲ್ಲಿ ಹಿಡದಲ್ಲೆ ಶಿವ ನೀಲಕಂಠ ಅನ್ನಿಸಿಕೊಂಡ. ಮರಿಯಪ್ಪ ಲೇ... ಮರಿಯಾ ಹಿಂದಕ್ಕೆ ಆ ತಳವಾರ ಚೆನ್ನಿ ಕೈಲೀ ನಿನ್ನ ಮ್ಯಾಲೆ ಜಬರಿ ಕೇಸ ಹಾಕಸಿ ಸಬ್ ಇನ್‌ಸ್‌ಪೆಕ್ಟರನ್ನ ನಮ್ಮೂರಿಗೆ ಕರೆಯಿಸಿ ಚಾವಡಾಗ ನಿನ್ನ ಕಂಬಕ್ಕ ಬಿಗಿಸಿ ವದಸಾಕ ಹಚ್ಚಿದ್ನೆಲ್ಲ. ಒದಕಿಗೆ ಒಂದೊಂದು ಸಲ ವಾಯಿಂಕ ಮಾಡತಿದ್ದಿ ನೋಡು.... ಅವಾಗ ಇತ್ತ ನೋಡು ನಮ್ಮ ಉರಣಗಿ ಅಂದ್ರ

**ಮರಿಯಪ್ಪ –** ಹೌದಪ್ಪಾ ತುಪ್ಪ ತಿಂದ ತಲೆ ನಿಂದು. ಹ್ಯಾಂಗ ತಣ್ಣಗ ಐತಿ ನೋಡು

**ವೆಂಕಪ್ಪ –** ತಿಂದ ಬಾಯಪ್ಪಾ ಮರಿಯಪ್ಪ, ನಮ್ಮದು ತಿಂದ ಬಾಯಿ. ಕುಲಕರ್ಣಿ ಇದ್ದಾಗ ವಾರ ತೀರುವದರೊಳಗ ನಾಲ್ಕು ಧಡೆ ಬೆಣ್ಣಿ ತೀರತಿತ್ತು ನಮ್ಮ ಮನಿಯೊಳಗ. ಅದರಾಗ ಈ ಚಾತುರಮಾಸ ಪಕ್ಷ ಮಾಸ ಬಂದರಂತೂ ಮುಗಿದು ಹೋಯಿತು, ನಮ್ಮ ಹೋಳಗಿ ತುಪ್ಪದಾಗ ತೇಲತಿತ್ತು. ಏನ ಮಾಡೋದು ಈ ಕಾಂಗ್ರೆಸ್ ಸರಕಾರ ಬಂದು ನಮ್ಮ ಕುಲಕರ್ಣಿ ಕಳೆದ ತಲಾಟೀನ ತಂದು ಬಾಯಿ ಮ್ಯಾಲೆ ಬಂಡೆಗಲ್ಲು ಹೇರಿಬಿಟ್ಟಿತು. ಒಟ್ಟಿಗೇನು ಈಗ ನಾನು ಒಣರೊಟ್ಟಿ ಸುಬ್ಬಣ್ಣ ಅಗೀನಿ ನೋಡು, ರೊಟ್ಟಿ ಚಟ್ನಿ ತಿಂದ ಮ್ಯಾಲೆ ಉಳ್ಳಾಗಡ್ಡಿ ಕಡಿದು, ಸಿಗರೇಟ ಸೇದಲಿಕ್ಕೆ ಹೋದರೆ ನಿಮ್ಮಂಗದಕ್ಕೋದಿಲ್ಲಪಾ. ಎದಿ ಉರಿತದ.... ಅಂತಾ ಈಗ ಬೀಡಿ ಹಿಡಿದೀವಿ (ನೋಡಿ ಬೀಡಿ ಒಗೆದು) ಎಲೆ, ಇದ್ಯಾವದಪಾ ಹುಡುಗಿ ಹಳ್ಳದ ನೀರಿಗಿಂತ ಒಳ್ಳೇ ಭರಾಟಿಲಿ ಹೊರಟದ. ದುಂಡು ಮುಖದ ಹುಡುಗಿ ಮುಖದ ಮ್ಯಾಲೆ ಎಳೆ ಬಿಸಿಲು ಬಿದ್ದು ಬಿಟ್ಟದ. ಏ ಚಂದ ಕಾಣತದೋ ತಡಿ ಕೈಹಿಡಿದು ಮಾತಾಡಸ್ತೀನಿ

ಮರಿಯಪ್ಪ – ಹುಡಿಗಿ ಎಲೋ (ನೋಡಿ) ಏ ಇದು ನನ್ನ ಮಗಳು ಲಕ್ಷ್ಮೀಬಾಯಿ ಅಲ್ಲೇನೋ

ವೆಂಕಪ್ಪಾ – ಹಾಂ ಹೌದಾ ಹಿಂಗಕ್ಕಾವು ನೋಡ. ಕಣ್ಣ ಕಾಣೋದಿಲ್ಲಾಂತ ಚಾಳೀಸ ಹಾಕಿದರ ಊರ ಮಂದೆಲ್ಲ ಮುದುಕರು ಅಂತಾವು. ಇನ್ನು ಹಾಕೋದು ಬಿಟ್ಟಿಯ ಮೊದಲಿನಿಂದ ನೋಡಕೊಂಡ ನಿಂದ್ರೂ ಹೊಲಸ ಚಟ ನಮಗ. ಮಗಳ್ಯಾವದೋ ಮೊಮ್ಮಗಳ್ಯಾವದೋ ಗುರ್ತು ಹತ್ತಲಾರದೆ ಹಂಗ ನೋಡೋದೆ ನೋಡೋದು. ಎಂಥ ಹೊತ್ತು ಬಂತಲೇ ಮರಿಯಪ್ಪ ನಮಗ

ಲಕ್ಷ್ಮಿ – (ಕೈಯಲ್ಲಿ ಕೊಡ ಹಿಡಿದು ಚೀರುತ್ತ ಬರುವಳು) ಅಪ್ಪಾ ಆ ಭದ್ರ ಅದಾನಲ್ಲ ಭಂಡಾ

ಮರಿಯಪ್ಪ – ಏನ ಮಾಡಿದಾ?

ಲಕ್ಷ್ಮಿ – ನಮ್ಮ ಹೊಲದೊಳಗಿನ ಸವತೀಕಾಯಿ ಹರಕೊಂಡು ತಿಂತಿದ್ದ

ಮರಿಯಪ್ಪ – ಸವತಿಕಾಯಿ ಹರಕೊಂಡು ತಿಂತಿದ್ದಾ? ಮಾರಿ ಕೆತ್ತುವಂಗ ಬಡಿಬೇಕಿತ್ತು

ವೆಂಕಪ್ಪ – ಏ ಏನ ಅದು, ಮಾರಿ ಕೆತ್ತುವಂಗ ಒಡಿಬೇಕಿತ್ತು, ತಲೆ ಬಡಿವಂಗ ಹೊಡಿಬೇಕಿತ್ತು, ಎತ್ತಿ ಒಗಿಬೇಕಿತ್ತು ಅಂತಾ ಕಲಸ್ತೀಯಲ್ಲ ಇದು ಗಂಡಲ್ಲ ಹೆಣ್ಣು, ಸಲ್ಪು ನೋಡಿ ಕಲಿಸು

ಮರಿಯಪ್ಪ – ಹೌದೋ ಕುಲಕರ್ಣಿ ಹೊಲಮನಿ ಕೆಲಸದಾಗ ಕಟ್ಟು ನಿಟ್ಟು ಇದ್ದರೇನೇ ಬೆಳೆ ಕೈಗೆ ಹತ್ತೋದು. ಇರದಿದ್ದರೇನು ಮಂಗ್ಯಾಗಷ್ಟ ಮನುಷ್ಯರಿಗಷ್ಟ ಇಟ್ಟು ಬರಿಗೈಲಿ ಮನಿಗೆ ಬರಬೇಕಾಗತ್ತ. ಅಲ್ಲವ್ವಾ ನೀ ಬೆದರಿಸಿದಿಲ್ಲೋ ಮತ್ತ

ಲಕ್ಷ್ಮಿ – ಹೂಂ ನಮ ಹೊಲದನ್ನ ಸವತೀಕಾಯಿ ಯಾರನ್ನ ಕೇಳಿ ಹರಕೊಂಡು ತಿಂತಿಯೋ ಅಂತ ಕೇಳಿದರ ನನಗ ಗುರ್‍ರಂತ ಬಂದಾ ನಾನು ಬಿಡಲಿಲ್ಲ ಭಂಡಾ... ಭಂಡಾ ಅಂತ ಬೈದೆ

ಮರಿಯಪ್ಪ – ಒಳ್ಳೇದಾಯಿತು

ವೆಂಕಪ್ಪ – ಏನ ಒಳ್ಳೇದಾಗತದೋ, ಏನ ಹುಡುಗ ಹಸ್ತಿದ್ದೀತು ನಾಲ್ಕು ಸವತೀಕಾಯಿ ಹರಕೊಂಡು ತಿಂದಿದ್ದೀತು

**ಲಕ್ಷ್ಮಿ –** ಹಸ್ತರೇನಾಯಿತು ಕಾಕಾ ಹರಕೊಂಡ ತಿನ್ನಾಕ ನಮ್ಮ ಹೊಲದಾಗಿನ ಸೌವತಿಕಾಯಿನೇ ಬೇಕೇನು?

**ವೆಂಕಪ್ಪ –** ಹೂಂ, ಅದ ನೋಡವ ನಮಗೂ ಆಶ್ಚರ್ಯ ಆಗಿರೋದು. ನಿಮ್ಮ ಹೊಲದಾಗಿನ್ನು ಸವತಿಕಾಯೀನ ಯಾಕ ತಿನ್ನೋದು? ನಿಮ್ಮ ತೋಟಾನೆ ಯಾಕ ಹಾಳ ಮಾಡುದು? ನಿಮ್ಮ ಹುಡುಗೀ ಜಡೀನ ಯಾಕ ಹಿಡಿದು ಜಗ್ಗೋದು? ಯಾಕಪ್ಪ ಆ ಹುಡುಗನ ಸಿಟ್ಟು ನಿಮ್ಮ ಮ್ಯಾಲಿಷ್ಟು

**ಲಕ್ಷ್ಮಿ –** ಸಿಟ್ಟು ಯಾತರ ಸಿಟ್ಟು, ಕಾಕಾ ಬಡವನ ಸಿಟ್ಟು ದವಡೆಗೆ ಮೂಲಾಂತ ನನ್ನ ಜಡಿ ಹಿಡಿದು ಜಗ್ಗಿದ್ದ ದಿವಸನ ಎಡಿ ಹಿಡಿದು ಕಾಯಿ ಒಡಿತಿದ್ದ ನಮ್ಮಪ್ಪ. ಪಾಪ ಸಂಗವತ್ತಿ ಮುಖ ನೋಡಿ ಬಿಟ್ಟ

**ವೆಂಕಪ್ಪ –** ಮುದುಕಿ ಮುಖ ನೋಡು ಪೈಕಿ ಅಲ್ಲವಾ ನಿಮ್ಮಪ್ಪ. ಮತ್ತ್ಯಾವದರ ಸುಖ ಮೂಡಿಸಿಕೊಂಡಿರಬೇಕು, ಸಂಪನ್ನಂಗ ಕಾಣುವ ಈ ಭದ್ರಾಸ

**ಮರಿಯಪ್ಪ –** ಏ ಕುಲಕರ್ಣಿ.... ವಿಷಯ ಯಾವದು ನಡದ್ಯೆತಿ? ನೀನೇನ ತಗೀತಿದಿ? ಮಗಳೋ ಅದು

**ವೆಂಕಪ್ಪ –** ಮತ್ತ ನಾನೇನ ಮೊಮ್ಮಗಳು ಅಂತೀನೇನು? ನಾನು ಮಗಳ ಅಂತೀನಿ ನೋಡ ಮರಿಯಪ್ಪ. ನಾವು ಮಾಡಿದ ಪಾಪ ನಮ್ಮ ತಲೀಗೆ ಮುಗೀಲಿ ಅಂತಾ ನಾ ಬಯಸಿದರ, ಅದು ಮುಂದವರೀಲಿ ಅಂತಾ ನೀನ ಬಯಸ್ತೀದಿ, ನೀನು ದುಡುಕೋದರಿಂದ ನೀನಷ್ಟೇ ಹಾಳಾಗೋದಿಲ್ಲೋ ಮೂಳಾ, ಹುಡುಗಿನ್ನ ಹಾಳ ಮಾಡ್ತಿ....

**ಮರಿಯಪ್ಪ –** ಅಲ್ಲೋ ವೆಂಕಪ್ಪ ಆ ಹುಡುಗನ ಸುದ್ದಿ ನಿನಗೇನ ಗೊತ್ತು

**ವೆಂಕಪ್ಪ –** ನನಗೆಲ್ಲಾ ಗೊತ್ತಾಗೆದ. ಹುಡುಗ ಹಾದಿ ಬಿಟ್ಟಾನ, ಊರಿಗೆ ಹೊರ್ತಾಗಿ ನಿಂತಾನ, ಅಂಥಾ ಹುಡುಗನ ಜತಿ ಯಾಕಪ್ಪಾ ನಿನ್ನ ಮಗಳು ಜಗಳಾ ತಗಿಯೋದು

**ಲಕ್ಷ್ಮಿ –** ಅಂದ್ರೇನ ಕಾಕಾ ನಮ್ಮ ಹೊಲಾದಗ ನುಗ್ಗಿ ಸವತಿಕಾಯಿ ಹರಕೊಂಡು ತಿಂದರೂ ಸುಮ್ಮನಿರಬೇಕಾ ನಾವು

**ಮರಿಯಪ್ಪ –** ಸುಮ್ಮನೆ ಯಾಕಿರಬೇಕು ತಂಗಿ? ಇನ್ನೊಂದು ಸಲ ಕಂಡ್ರ ಕಲ್ಲು ತೊಗೊಂಡು ಹೇರು

**ವೆಂಕಪ್ಪ** – ಕಂಡ್ರೆ ಯಾಕ ಭದ್ರನೇ ಬಂದ ನೋಡು.... ಹೊಡಿತೀರೋ ಹೊಡಸಿಕೊಳ್ಳತೀರೋ.... ನೋಡತೀವಿ (ಭದ್ರ ಸವತೀಕಾಯಿ ತಿನ್ನುತ್ತ ಬರುವನು)

**ಲಕ್ಷ್ಮಿ** – ಅಲ್ಲಿ ನೋಡಪ್ಪಾ ಹ್ಯಾಂಗ ತಿನಕೋತಾ ಬರತ್ತ ಸನ್ಯಾಸಿ ಊರ ಸನ್ಯಾಸಿ

**ಮರಿಯಪ್ಪ** – ಲೇ ಭದ್ರ ಹರಕೊಂಡ ತಿನ್ನಾಕ ಸವತಿಕಾಯಿ ಯಾರ ಹೊಲದಾಗಿಂದು ಅಂತಾ ತಿಳಿದಿಯೋ

**ಭದ್ರ** – ಮತ್ಯಾರ ಹೊಲದಾಗಿಂದು ನಮ್ಮ ಹೊಲದಾಗಿಂದು

**ಲಕ್ಷ್ಮಿ** – (ಓಡಿಬಂದು) ನಿಮ್ಮ ಹೊಲಾ? ನಿಮ್ಮದೆಲ್ಲೈತೆ ಹೊಲಾ

**ಭದ್ರ** – ಯಾಕ ಊರ ಮುಂದ ಹಾದಿಗಿರೋ ಹೊಲಾ ನಮ್ಮದಲ್ಲೇನು?

**ಲಕ್ಷ್ಮಿ** – ಆ ಹೊಲ ನಿಮ್ಮಪ್ಪ ನಮಗ ಸಾಲದಾಗ ಹಾಕಿ ಸತ್ತಾನ

**ಭದ್ರ** – ಯಾವಾಗ ನಮ್ಮಪ್ಪ ಸತ್ತ ಅವನ ಕೂಡ ಆ ಮಾತು ಸತ್ತೈತಿ. ಕೇಳಿಲ್ಲೆ ಹೇಳ್ಯಾರ ಕುಲಕರ್ಣಿರು

**ವೆಂಕಪ್ಪ** – ನಾನು ಯಾವಾಗ ಹೇಳಿನೋ ತಮ್ಮ

**ಭದ್ರ** – ಯಾಕ್ರಿ ತಿರಿಗಿ ಬಿದ್ದು ಮಾತಾಡತೀರೆನ್ರಿ? ಈ ಭದ್ರನ ಮುಂದೆ ಇದೆಲ್ಲ ನಡೆಯಾಂಗಿಲ್ಲ. ನೀವಾಗಿ ನಮ್ಮ ಮನಿತನಕ ಬಂದು ನನ್ನೊಬ್ಬನ್ನ ಚಾವಡಿತನಕ ಕರಕೊಂಡ ಹೋಗಿ ಹೇಳಿದರಲ್ರಿ

**ವೆಂಕಪ್ಪ** – ಏನಂತ?

**ಭದ್ರ** – ಭದ್ರ ಇನ್ನ ಮೇಲೆ ಸಾವಕಾರ ಮಂದಿ ಬಡವರ ಹೊಲದ ಬಡ್ಡಿ ತಗೊಳ್ಳಲಾರದಂಗ ಸರಕಾರದವರು ಕಾಯಿದೆ ಮಾಡ್ಯಾರ. ನಿಮ್ಮ ಹೊಲಾ ನೀವು ಉಣ್ಣಿರಿ ಅಂತಾ ಹೇಳಿದರಲ್ರಿ

**ವೆಂಕಪ್ಪ** – ಅಲ್ಲ ಕಾಯಿದೆ ಹೇಳಿ ಕೊಟ್ಟಿನಪಾ. ಅದರ ಹೊಲದಾಗ ನುಗ್ಗಿ ಸವತಿಕಾಯಿ ಹರಕೊಂಡು ತಿನ್ನ ಅಂತಾ ಹೇಳಿದನೇನು?

**ಮರಿಯಪ್ಪ** – ಅಂತೂ ಅಷ್ಟರ ಹೇಳಿಯಲ್ಲ. ಯಾಕ್ರಿ ಕುಲಕರ್ಣ್ಯೇರ ನಿಮ್ಮ ಕತ್ರಿ ನಮ್ಮ ಕರಳಿನ್ಯಾಗ ಅಡಕ ಹತ್ತು. ಲೇ ಭದ್ರ ನಮ್ಮ ದುಡ್ಡು ನಮಗ ಕೊಡ್ರಿ, ನಿಮ್ಮ ಹೊಲಾ ನೀವು ಉಣ್ರಿ

| | |
|---|---|
| **ಲಕ್ಷ್ಮಿ –** | ಹೂ.... ಕುದರಿಯಿಲ್ಲದ ಜಬರಿ ಬೇಡಿದಂಗ ದುಡ್ಡುಯಿಲ್ಲದ ಧಿಮಾಕ ನಡಿಯಿತ್ತೇನು? ಕೊಟ್ಟವರದು ಕೊಡಬೇಕು ಆ ಮೇಲೆ ಎದಿ ಸೆಟಸಿ ನಡಿಬೇಕು. ಅದನ್ನು ಬಿಟ್ಟು ಯಾರದೋ ಮಾತು ಕೇಳಿ ಹೊಲದಾಗ ನುಗ್ಗಿ ಸವತಿಕಾಯಿ ಹರಕೊಂಡು ತಿನ್ನಾಕ ನೀರ ನೀ ಹಾಕಿ ಬೆಳಸಿದ್ದೇನಲೇ ಚಲವಾ.... ಸವತೀಬಳ್ಳೀನ |
| **ಭದ್ರ –** | ನೀರ ಹಾಕಿ ಬೆಳಸಿದವರ ತಿನಬೇಕು ಅಂತ ಇದರ ಮ್ಯಾಲೆ ಬರದೈತೇನೆ ಚಲವಿ.... ತಿನ್ನೋ ಬದುಕು ತಿಂತೀನಿ. ನೋಡ್ರಿ ಕುಲಕರ್ಣ್ಯೇರ ಹೊಟ್ಟಿ ಸಾಕಷ್ಟು ಹಸ್ತಿದ್ದರೂ ನಾನು ದಾರಿ ಹಿಡಿದು ಸುಮ್ಮನೆ ಹೊರಟಿದ್ದೆ |
| **ವೆಂಕಪ್ಪ –** | ಹೌದಪ್ಪಾ ನೀನು ಒಳ್ಳೇ ಹುಡುಗ ಅಂಬೋದು ನಮ್ಮೂರಾಗ ಯಾರಿಗೆ ಗೊತ್ತಿಲ್ಲ. ನಮಗಂತು ಗುರ್ತಾಗೇದ |
| **ಭದ್ರ –** | ಅವಾಗ ಇವಳು ಎಲೋ.... |
| **ವೆಂಕಪ್ಪ –** | ಯಾರಿಗಪಾ.... |
| **ಭದ್ರ –** | ನನಗರಿ |
| **ವೆಂಕಪ್ಪ –** | ನಿನಗಾ ಹೂಂ.... |
| **ಭದ್ರ –** | ಗಂಡಸಾದ್ರ ನಮ್ಮ ಹೊಲದಾಗೊಂದ ಕಾಲು ಇಡು ಅಂದಳು |
| **ವೆಂಕಪ್ಪ –** | ನಿನಗ ಹಿಂಗಂದಳಾ |
| **ಭದ್ರ –** | ಕೇಳರಿ |
| **ವೆಂಕಪ್ಪ –** | ಹಾ....ಹೌದೇನವ್ವ |
| **ಲಕ್ಷ್ಮಿ –** | ಹೂ ಅಂದೀನಿ |
| **ವೆಂಕಪ್ಪ –** | ಅಂದ ಮ್ಯಾಲೆ ಪಾಪ ನೀನ ಕಾಲಿಟ್ಟಿರಬೇಕು |
| **ಭದ್ರ –** | ಅಮ್ಯಾಲೆ ಸವತಿ ಬಳ್ಳಿ ಬಂದ ಮುಟ್ಟು ಅಂದಳು |
| **ವೆಂಕಪ್ಪ –** | ಮುಟ್ಟು ಅಂದಮ್ಯಾಲೆ ನೀನು ಮುಟ್ಟಿರಬೇಕು |
| **ಭದ್ರ –** | ಆಮೇಲೆ ಸವತೀಕಾಯಿ ಹರಕೋ ಅಂದಳು |
| **ವೆಂಕಪ್ಪ –** | ಹಿಂಗ ಅಂದಳಾ ಹೌದೇನವ್ವಾ |

ಲಕ್ಷ್ಮಿ – ಹೂ ಅಂದೀನಿ ಈಗ ಅಂತೀನಿ

ಭದ್ರ – ನಾನು ತಿಂದೀನಿ. ಈಗೂ ತಿಂತೀನಿ ತಪ್ಪೇನರಿ ಕುಲಕರ್ಣೀರ...

ವೆಂಕಪ್ಪ – ಛೀ ಛೀ ನೀನು ಮಾಡೋದಕ ತಪ್ಪು ಅಂದ್ರೆ ನಮ್ಮ ಬಾಳೆ ಬದುಕು ಆಗತಾವೇನಪಾ ಊರಾಗ

ಭದ್ರ – ಸಾವಕಾರ ಮಗಳೂ ಅಂದ್ರಾ ಸಿಂಹದಮರಿ ಅಂತಾ ತಿಳದಾಳ ಇವಳು

ವೆಂಕಪ್ಪ – ಅದು ಸಿಂಹದ ಮರಿ ಆದ್ರೆ ನೀನು ಸರ್ಕಸ್ಸಿನಲ್ಲಿರೋ ರಿಂಗಮಾಸ್ತರ. ಇನ್ನರ ಹೋಗತಿಯೇನಪಾ ಕೈಮುಗಿಲೋ ಇಲ್ಲಾ (ಭದ್ರ ಹೋಗುವಾಗ ಲಕ್ಷ್ಮಿ ಅಣಕಿಸಿ ಮೂಗು ಮುರಿಯುವಳು. ಭದ್ರ ಮೀಸೆ ತಿರಿಯುವನು)

ಲಕ್ಷ್ಮಿ – ಅಲ್ಲಿ ನೋಡಪ್ಪಾ ಮತ್ತೆ ಮೀಸಿ ತಿರುತಾನ

ಭದ್ರ – ಮತ್ತ ನನ್ನ ಕಂಡು ನೀನು ಮೂಗು ಮುರಿತಿಯೋ, ಏ ಲಕ್ಷ್ಮಿ ಈ ಭದ್ರ ಯಾರಿಗೂ ಅಂಜುವವನಲ್ಲ

**ಕಂದ ಪದ್ಯ**

ಮೋಡ ಮುಗಿಲಿನ ಕೂಡ । ಆಡುವ ಮೋಜು ನಡೆಸಿತ್ತು ।
ಸುಖದ ಗಾಳಿ ಬೀಸಿತ್ತ । ಹಳ್ಳಿಯ ಹೆಣ್ಣೊಂದು ।
ಹಳ್ಳದಾ ನೀರಿಗೆ ಒಂದೇ ಹೊರಟಿತ್ತು । ಕಂಡ ಗಂಡಸೀನ ।
ಕೆಣಕಿತ್ತ । ಕಮಲದಂಥ ಕಣ್ಣಿನ ಕೆಳಗೆ ಗಲ್ಲ ಗುಲಾಬಿ ।
ರಂಗ ಏರಿತ್ತ । ತುಲಸಿಯ ಮುತ್ತ ಬಯಸಿತ್ತ । (ಹೋಗುವನು)

ವೆಂಕಪ್ಪ – ನೋಡಿದೇನವ್ವ ಈ ಹುಡುಗನ್ನ. ಊರಾಗ ಯಾರೂ ಮತಾಡಿಸೋದಿಲ್ಲ ಇವನ್ನ. ಇಂಥವರ ಜತಿ ಏನವ್ವ ನಿನಗ ಮಾತು

ಲಕ್ಷ್ಮಿ – ಏ ಕಾಕಾ ಇವನಿಗೆಲ್ಲ ಹೆದರಿತೀನೇನ ನಾನು (ಹೋಗಹತ್ತುವಳು. ವೆಂಕಪ್ಪ ಗಲ್ಲ ಹಿಡಿದು ನಿಲ್ಲಿಸಿ)

ವೆಂಕಪ್ಪ – ಅಲ್ಲವ್ವಾ ಕಚೇರಿ ಕೆಲಸಕ್ಕೆ ಹೊರಟಿದ್ದೆ. ತುಂಬಿದ ಕೊಡಾ ಎದುರಿಗೆ ಬಂದಿದ್ದರೆ ಶುಭಾ ಅಂತ ತಿಳಿದಿದ್ದೆ.

ಲಕ್ಷ್ಮಿ – ಕಾಕಾ ಸದ್ಯ ತರತೀನಿ ತಡಿ .... (ಮೊದಲಿನಂತೆ ತಡೆದು)

**ವೆಂಕಪ್ಪ –** ಅಲ್ಲವ ಊರ ಜನ ಎಲ್ಲ ವರ್ತಿ ಹಿಡಿದು ಸರ್ತಿ ಮ್ಯಾಲೆ ನೀರ ತುಂಬಿ ತಿರತಾರ. ನೀನ್ಯಾವಾಗ ನೀರ ತರಬೇಕು? ನಾನ್ಯಾವಾಗ ಕಚೇರಿ ಕಾಣಬೇಕು. ಏನವ್ವ ಇದು

**ಲಕ್ಷ್ಮಿ –** ಸರ್ತಿ ಗಿರ್ತಿ ಸಾವಕಾರ ಮಗಳಿಗೂ ಇರತೈತೇನು? ವರ್ತಿ ಬಿಟ್ಟು ಸರೀದಿದ್ರ ಒಬ್ಬೊಬ್ಬಕೀನ್ನ ಒದಿತೀನಿ (ಹೋಗುವಳು)

**ಮರಿಯಪ್ಪ –** ಹೌದ ಮಗಳೆ ! ಹೌದಂದೆ.... ಹ್ಯಾಂಗೊ ವೆಂಕಪ್ಪ ಹುಡುಗಿ

**ವೆಂಕಪ್ಪ –** ಏ ಹುಡುಗ್ಗೆ ಒಳ್ಳೇ ಟ್ರೇನಿಂಗು ಕೊಟ್ಟಿಯಪ್ಪಾ. ಏ ಮಾನಗೇಡಿ ಒಂದೇ ಮಗಳೂ ಅಂತ ಹಂದಿಯಂಗ ಬೆಳೆಸಬ್ಯಾಡಲೇ.... ಸ್ವಲ್ಪ ಮಂದಿಯಂಗ ಬೆಳಸು. ನೀ ಒರಟ ಅಂದ್ರೆ ನಿನ್ನ ಮಗಳ ನಿನಕಿಂತ ಒರಟಿ

**ಮರಿಯಪ್ಪ –** ಯಾಕ ನಾ ಒರಟನೇನು .....

**ವೆಂಕಪ್ಪ –** ಅದನ್ನ ಈ ಬಾಯಾರ ಯಾಕ ಹೇಳಲಪ್ಪ. ಈ ನನ್ನ ಕುಂಟ ಕಾಲ ಹೇಳ್ತದ. ಮಳ್ಳ ವಯಸ್ಸಿನಲ್ಲಿ ಹೆಣ್ಣಿನ ಸಲುವಾಗಿ ಪಾರ್ಟಿ ಮಾಡಿ ಕೊಂಡಿವಿ. ಸಾವಕಾರ ಮಗಾ ನನ್ನ ಕಾಲ ಮುರಿಸಿ ದಕ್ಕಿಸಿಗೊಂಡಿ, ಏನ ಮಾಡೋದು

**ಮರಿಯಪ್ಪ –** ಮತ್ತ ನೀನು ಎಲ್ಲಿ ಬಿಟ್ಟಿ ಇಲ್ಲಿ ನೋಡು (ಕಿವಿ ತೋರಿಸಿ) ನಾನು ಕಾಲು ಮುರಿದು ತಿಂಗಳ ತುಂಬುದರೊಳಗ ನೀನು ನನ್ನ ಕಿವಿ ಕೊಯಿಸಿದಿ. ವೆಂಕಪ್ಪ ಪಾರ್ಟಿ ಕಟ್ಟಿದಾಗಲೂ ನಾವೇ ಈ ಊರ ಆಳತಿದ್ವಿ. ಈಗ ರಾಜಿ ಆದಮ್ಯಾಗೂ ನಾವೇ ಆಳತೀವೆಲ್ಲಾ ಇದು ಹ್ಯಾಂಗ?

**ವೆಂಕಪ್ಪ –** ಇದು ಹಂಗ, ಆಳಾಕಂತ ಹುಟ್ಟಿದವರು ನಾವು. ಆಳಾಕಂತ ಈ ಊರು ಹುಟ್ಟೈತಿ ಅದನ್ನ ಆಳಿಸಿಗೊಂತ ಹೋಗದಪಾ. ಅದಾಯಿತು..... ಆ ಸಂಗವ್ವನ ಮಗ ಸಿದ್ದನ ಮದುವೆಗೆ ಕಾಗದ ಸಹಿತ ಬರೆಸಿಕೊಳ್ಳದೆ ಐದುನೂರು ರೂಪಾಯಿ ಸಾಲ ಕೊಟ್ಟಿಯಲ್ಲ. ಯಾಕ ಅಂಬೋದೆ ತಿಳಿಯದಂಗಾಗ್ಯೆತಿ ನಮಗ

**ಮರಿಯಪ್ಪ –** ಅವ ಸಿದ್ದ ನಮ್ಮ ಮನ್ಯಾಗ ಜೀತ ಅದಾನ. ಸಂಬಳದ ಆಳಿಗೆ ಕೊಟ್ರ ಎಲ್ಲಿ ಹೋಗುತ್ತೋ ವೆಂಕಪ್ಪ

**ವೆಂಕಪ್ಪ –** ಬರೀ ಆಳಷ್ಟ ಬೇಕಿದ್ರೆ ಇಷ್ಟು ರೊಕ್ಕ ಹಾಳು ಮಾಡಿಕೊಳ್ಳೊ ಮಗನ ಅಲ್ಲ ನೀನು? ಇದರಾಗ ಏನೋ ಒಂದು ಹೊಲಸ ಆಸೆ ಇಟಗೊಂಡೆ ಸಾಲ ಕೊಟ್ಟೆ ಅಂತಾ ನನಗನಸ್ತದೆ

**ಮರಿಯಪ್ಪ –** ಇರಲಿ ಬಿಡೋ.... ಕಳ್ಳ ಮಾತೆಲ್ಲ ಬಲು ಹಳ್ಳ ಹಾಕಿ ಕೇಳವ ನೀನು

**ವೆಂಕಪ್ಪ –** ನೋಡ ಮತ್ತೆ ಆ ಹುಡುಗ ಸಿದ್ಧನ ಹೆಂಡತಿ ಚಂದದಳಂತ ಕಣ್ಣು ಹಾಕಿ ನೋಡಿದಿಲ್ಲೊ. ಭದ್ರ ಹ್ಯಾಂಗ ಅದಾನ ಹಿರಿದ ಕತ್ತಿ ಇದ್ದಂಗ. ಅವನ ಮತ್ತ ಇದೊಂದು ಕಿವಿ ಕೊಯ್ದು ಬಿಟ್ಟ ಅಂದ್ರ ಕಿವಿ ಕಿತ್ತಿಸಿಗೊಂಡ ರಾಮಲಿಂಗಾದಿ ಇನ್ನರ ತಿಳಕೊಳ್ಳೊ

**ಮರಿಯಪ್ಪ –** ಯಾವದನ್ನ

**ವೆಂಕಪ್ಪ –** ಅದೇ ಪರಮನಿ ಹೆಣ್ಣುಮಕ್ಕಳನ್ನ ಪಾಪ ದೃಷ್ಟಿಯಿಂದ ನೋಡಬಾರದು. ನನಗೆ ಕಚೇರಿಗೆ ಹೊತ್ತಾಗತ್ತ. ನೀನೇನು ಹೊಲಕ್ಕೆ ಹೊರಟೀ ಏನೋ ಹೋಗಿ ಸುಮ್ಮನೆ ಬಾರಲೆ, ಮೊದಲೆ ನೀನು ಬಾಳ ಸುಮಾರ ಪೈಕಿ (ವೆಂಕಪ್ಪ ಹೋಗುವನು. ನಂತರ ಮರಿಯಪ್ಪ ಹೋಗವನು)

**ಅದೇ ಜಂಗಲ್ ರಸ್ತಾ**

(ಪಾವರ್ತಿ, ಚೆನ್ನವ್ವ ನೀರಿನ ಕೊಡ ತೊಗೊಂಡು ಬರುವಾಗ)

**ಚೆನ್ನವ್ವ –** ಅಲ್ಲ ಪಾರಕ್ಕ ನನಗ ಕೇಳಿದ್ರ ನಾನು ಹಿಟ್ಟು ತಂದು ಕೊಡತಿದ್ದೆನಲ್ಲವ್ವ

**ಪಾರ್ವತಿ –** ಮನೆ ವಿಷಯಾನ ಹೀಗೆ ಅಂತಾ ಬಾಯಿ ಬಿಟ್ಟು ಬೇರೆಯವರಿಗೆ ಹೇಳಬಾರದವ್ವ

**ಚೆನ್ನವ್ವ –** ಆಂದ್ರೆ ನಾನೇನು ಹೊರಗಿನವಳೂ ಅಂತಾ ತಿಳಿಕೊಂಡಿಯಾ? ನಮ್ಮಿಬ್ಬರ ಮನೆ ಬೇರಾದ್ರು ಮನ ಒಂದು ಅಂತ ತಿಳಿಯವ್ವ

**ಪಾರ್ವತಿ –** ಹೌದವ್ವ ಯಾವಾಗಲಾದರೂ ಮಾತು ಬಂದಾಗ ನಮ್ಮತ್ತೆ ಹೇಳ್ತಾ ಇರ್ತಾರೆ, ಚನ್ನವ್ವ ಬಾಳ ಒಳ್ಳೇಯವಳೂ ಅಂತಾ

**ಚನ್ನವ್ವ –** ಅಂದಮ್ಯಾಲೆ ಯಾಕವ್ವ ಬಂದು ನೀ ಹಿಟ್ಟು ಕೇಳಲಿಲ್ಲ. ಹೇಳು ಕೇಳಿದ್ರ ಎರಡು ಕಾಲು ಪಾವು ಹಿಟ್ಟು ನಿನಗ ನಾ ಕಡಾ ಕೊಡತಿದ್ದಿಲ್ಲಾ. ಕೊಟ್ಟಿದ್ದರ ನಾ ಏನ ಕೆಟ್ಟ ಹೋಗತಿದ್ಯಾ. ನೀನೇನ ತಿರಗಿ ಕೊಡತಿರಲಿಲ್ಲ! ಇಷ್ಟಿದ್ದು ಯಾಕವ್ವ ನಿನ್ನೆ ನೀ ಮಲಗಿ ಹೊಟ್ಟೆ ಹೊಟ್ಟೆ ಸುಟ್ಟಕೋ ಬೇಕಿತ್ತು

**ಪಾರ್ವತಿ –** ನನ್ನ ಹೊಟ್ಟೆ ಸುಡೋದು ಯಾವ ದೊಡ್ಡ ಮಾತು ಬಿಡವ್ವ ಹಿರಿಯರು ಮೊದಲೆ ಹೇಳಿದ್ದಾರೆ. ಹೆಣ್ಣಾಗಿ ಹುಟ್ಟಿದ್ದು ಸುಣ್ಣದ

ಹರಳಾಗಿ ಸುಡಬೇಕು ಅಂತಾ. ಆದರೆ ನಿನ್ನೆ ನಮ್ಮ ಭದ್ರ ಉಪವಾಸನೆ ಮಲಗಿ ಬಿಟ್ನವ್ವ. ಅದನ್ನು ಕಂಡು ನನಗ ನೆತ್ತೀಲಿ ಜೀವಹೋದ ಹಾಗಾಯ್ತು. ಇಷ್ಟೊತ್ತಾದರೂ ನಮ್ಮ ಭದ್ರ ಊಟಾನೆ ಮಾಡಿಲ್ಲವ್ವ

**ಚೆನ್ನವ್ವ –** ಇರಲಿ ಬಿಡವ, ಗೊತ್ತೈತಿ. ನಿಮ್ಮ ಭದ್ರನ ಸುದ್ದಿ. ಅವನ ಸಲುವಾಗಿ ನೀನ್ಯಾಕ ಅಷ್ಟ ಅಳತಿ. ಹಸಿದ ಹೊಟ್ಟೇಲಿ ಅವನೆಂಗಿರಬೇಕು ಈಗಾಗಲೇ ಯಾರದರ ತೋಟದಲ್ಲಿ ನುಗ್ಗಿ ಗಜ್ರಿನೋ ಗೆಣಸೋ ಇಲ್ಲ ಸವತಿಕಾಯಿನೋ ಹರಕೊಂಡ ತಿಂದು ಹಳ್ಳದ ನೀರು ಹೊಟ್ಟಿ ತುಂಬ ಕುಡಿದು ಎಲ್ಲಿಯಾದರೂ ಮೀನ ಹಿಡೀತಾ ಕುಳಿತಿರಬೇಕು.

**ಪಾರ್ವತಿ –** ಹಿಂಗ್ಯಾಕ ಮಾತಾಡುತಿ ಚೆನ್ನವ್ವ ನೀನು. ತೋಟದಲ್ಲಿ ನುಗ್ಗಿ ಕದ್ದು ತಿಂತಾನೆ ಅಂತಿಯಾ ನನ್ನ ಮೈದುನ

**ಚೆನ್ನವ್ವ –** ನೀನ್ಯಾಕ ಅಷ್ಟು ಸಿಟ್ಟಿನಿಂದ ಕೇಳ್ತಿಯವ್ವ ಕದ್ದು ತಿಂತಾನೆ ನನ್ನ ಮೈದುನಾಂತ. ಆ ನಿನ್ನ ಮುದ್ದು ಮೈದುನ ಕದ್ದು ಯಾಕವ್ವ ತಿಂದಾನು. ತೋಟ ಕಾಯಿತಿರೋ ಕೂಲಿಕಾರ ಜನರನ್ನು ಹೆದರಿಸಿ ತಿಂತಾನೆ, ಒಂದು ವೇಳೆ ಅವರು ಹೆದರಲಿಲ್ಲಾ ಹೊಡೆದು, ಹೊಡೆದು ತಿಂತಾನೆ, ಇಷ್ಟಕ್ಕೂ ಬಗ್ಗದಿದ್ದರೆ ತನ್ನ ಗೆಳೆಕಾರ್ನ ಕಟಕೊಂಡು ಅವರ ತೋಟಾನೆ ಹಾಳು ಮಾಡಿಸಿ ಬಿಡತಾನೆ. ನಿಮ್ಮ ಭದ್ರಗೆ ಆ ಗುಂಡನೇ ಮಂತ್ರಿ. ನಿಮ್ಮ ಭದ್ರ ಮಾಡುವ ಕೀಚಕತನಾ ನಮ್ಮೂರಿಗೆ ಅಷ್ಟೇ ಅಲ್ಲ ಸುತ್ತಲೂ ಹತ್ತು ಹಳ್ಳಿ ಜನರಿಗೆಲ್ಲ ಗೊತ್ತು. ಅಂತಾನೆ ಊರ ಜನರೆಲ್ಲ ಅಂತಾರವ್ವ

**ಪಾರ್ವತಿ –** ಏನಂತಾರವ್ವ

**ಚೆನ್ನವ್ವ –** ಸಂಗವ್ವ ಹಡೆದದ್ದು ಮಗನ್ನಲ್ಲ, ಹಾವಿನ ಮರಿ ಅಂತಾ. ತಡವಿದರ ಬೆನ್ನು ಹಿಡಿದು ಕಚ್ಚಿಕೊಳ್ಳುವ ಕಾಳ ಸರ್ಪ ಅಂತಾರವ್ವ ನಿನ್ನ ಮೈದುನಗ (ಲಕ್ಷ್ಮಿ ನೀರಿನ ಕೊಡ ಹೊತ್ತುಕೊಂಡು ಬರುವಳು) ನೀರು ಸಾಕೇನ ಲಕ್ಷ್ಮಿ?

**ಲಕ್ಷ್ಮಿ –** ನನಗ ಸಾಕಾದರೇನು ಬೇಕಾದರೇನು ಅದನ್ನು ತೊಗೊಂಡು ನೀ ಏನ ಮಾಡತಿಯಲೇ ಚೆನ್ನೀ

**ಚೆನ್ನವ್ವ –** ಇದೇನೇ ನಮ್ಮವ್ವ ನೀರು ಸಾಕೇನವ್ವ ಅಂತ ಕೇಳಿದರೆ ಒಮ್ಮೆಲೆ ಜಗಳಕ್ಕೆ ಬರುತೀಯಲ್ಲವ್ವ

ಲಕ್ಷ್ಮಿ – ಹೂಂ.... ಅವ್ವ ಅನ್ನೋ ಶಬ್ದ ಈಗ ಬಂತೇನ ನಿನ್ನ ಬಾಯಲ್ಲಿ. ಏನೇ ಅಂತ ಕರೀಲಿಕ್ಕೆ ನನ್ನನ್ನೇನು ಬಡವರ ಮನಿ ಹುಡುಗಿ ಮಾಡಿ ಏನು? ಅಷ್ಟಕ್ಕ ಬಾಯಿ ಮುಚ್ಚು, ಇರದಿದ್ದರ ನಮ್ಮಪ್ಪನ ಮುಂದ ಹೇಳಿ ನಿನ್ನ ಒದಿಸೇನು, ಬಿದ್ದಾಡಿ ಹಳೇಬಿದ್ದಾಡಿ (ಹೋಗುವಳು)

ಚೆನ್ನವ್ವ – ನೋಡಿದೇನವ್ವ ಹ್ಯಾಂಗ ಐತಿ ಈ ಹೆಣ್ಣು ಹುಲಿ? ನೋಡು ಪಾರಕ್ಕ ಗಂಡಸರಲ್ಲಿ ಕಿಡಿಗೇಡಿ ಅಂದ್ರ ನಿನ್ನ ಮೈದುನ, ಹೆಂಗಸರಲ್ಲಿ ಜಗಳಗಂಟಿ ಅಂದ್ರೆ ಈ ಲಕ್ಷ್ಮಿ. ಎಷ್ಟು ಜನರನ್ನು ಹೆದರಿಸಿಕೊಂಡರೇನು ಆ ನಿಮ್ಮ ಭದ್ರ..... ಈ ಲಕ್ಷ್ಮಿನ್ನ ಹೆದರಿಸಿಕೊಳ್ಳಲಿ ಹೌದೂ ಅಂತೀನಿ

ಪಾರ್ವತಿ – ಯಾಕವ್ವ ಇವಳನ್ಯಾಕ ಹೆದರಿಸಿಕೊಳ್ಳಬೇಕು ಅವನು

ಚೆನ್ನವ್ವ – ನಿಮಗೇನು ಗೊತ್ತವ್ವ ಇವರಿಬ್ಬರ ಸಮಾಚಾರ? ನಿಮ್ಮ ಭದ್ರಗೂ ಇವಳಿಗೂ ಅಂದ್ರ ಹಾವಿಗೆ ಮುಂಗಲಿಗೆ ಇದ್ದ ಹಾಗೆ. ಒಬ್ಬಳೇ ಮಗಳು ಅಂತ ಮರಿಯಪ್ಪ ಸಾವುಕಾರ ಮದ್ದು ಮಾಡಿ ಬೆಳೆಸಿದ ಈಗ ಹದ್ದು ಮೀರಿದ ಹೆಣ್ಣಾಗಿದ್ದಾಳೆ. ನಿಮ್ಮ ಭಧ್ರ ದಾರಿಯಲ್ಲಿ ಸುಮ್ಮನೆ ನಿಂತಿದ್ರು ಅಣಕಿಸಿ ಹೋಗುತಾಳೆ. ಇಲ್ಲಾ ಮೂಗು ಮುರಿತಾಳೆ. ಇಲ್ಲ ಯಾರದರ ಮ್ಯಾಲರ ಹಾಯಿಸಿ ಬೈತಾಳೆ. ನೋಡಿ ನೋಡಿ ಅವನು ಒಂದು ದಿನ ಹಿಂಗ ಮಾಡಿದಾ....

ಪಾರ್ವತಿ – ಯಾರು ನಮ್ಮ ಭದ್ರನಾ.... ಏನ ಮಾಡಿದಾ....

ಚೆನ್ನವ್ವ – ಮೊನ್ನೆ ಐಹೊಳ್ಳಿ ಜಾತ್ರ್ಯಾಗ ಇವಳ ಜಡೆ ಹಿಡಿದು ಜಗ್ಗಿದ್ದಾ. ಈ ರಂಡಿ ಹಾದಿರಂಪ.... ಬೀದಿರಂಪ.... ಮಾಡಿದ್ಲು. ಇದ ತಿಳಿದು ಭದ್ರ ಮೈ ಹೆಣ ಆಗುವಂಗ ನಿನ್ನ ಗಂಡ ಹೊಡಿದಿದ್ದಾ. ನಾನು ಹೋಗಿ ಬಿಡಿಸಿಕೊಂಡಿದ್ದೆ. ಹೋಗಲಿ ಬಿಡವ್ವ ಇಂಥ ತಂಪು ಹೊತ್ತಿನ್ಯಾಗ ಅವಳ ಸುದ್ದಿ ಯಾಕೆ? ಆ ಹೊಯಮಾಲಿ ತಿರಗಿ ಬರೋ ಹೊತ್ತು ಬೇರೆ ಆಯ್ತು. ಹಳ್ಳಕ್ಕೆ ಬಂದು ವರ್ತಿ ಹಿಡಿದು ಕುಂತ್ರ ಮತ್ತೊಬ್ಬರಿಗೆ ವರ್ತಿನೇ ಬಿಟ್ಟು ಕೊಡೋದಿಲ್ಲ, ಆ ಸಾವಕಾರ ಹೆಣ್ಣು. ನಡಿಯವ್ವ ಅವಸರ ಮಾಡಿ ನೀರು ತುಂಬಿಕೊಂಡು ಮನಿಗಿ ಹೋಗೂನು. (ಇಬ್ಬರೂ ಹೋಗುವರು)

===**=====**===

## ದೃಶ್ಯ ೩

ಹಳ್ಳದ ದಂಡೆ

**ಪಾರ್ವತಿ –** (ಸುತ್ತೆಲ್ಲ ನೋಡಿ) ಗಿಡದ ಬುಡಕ್ಕೆ ಸರ್ಪ ಸುತ್ತುವರೆದಂತೆ, ಊರಿನ ಸುತ್ತ ಹಳ್ಳ ಹರಿದು, ದುಡಿದು ತಿನ್ನುವ ಬಡವರ ಒಡಲಿಗೆ ನಿತ್ಯ ಅನ್ನ ಒದಗಿಸುವ ಪುಣ್ಯ ಪಡೆದಿದೆ. ಹಳ್ಳದಾ ದಂಡೆ ಗುಂಟ ಹಬ್ಬಿ ಹಾಸಿದ ಹಸಿರು.... ಹಸಿದ ದನಕರುಗಳಿಗೆ ಆಹಾರ ಒದಗಿಸಿ ಹಾಲು ಹೈನದ ಕಂಗಾಲ ನೀಗಿಸಿದೆ. ನೀರಿನ ಜಂಗಿನಲ್ಲಿ ಬೆಳೆದ ಗಿಡಬಳ್ಳಿಗಳು ಊರಿನವರಿಗೆಲ್ಲ ಉರುವಲು ಕಟ್ಟಿಗೆ ಕೊರತೆ ಕಳಿದಿವೆ. ಹಳ್ಳದಾ ದಂಡೆಗಿರುವ ಹೊಲಗದ್ದೆಗಳು ನಿತ್ಯ ಹಸಿರಿನಿಂದ ಕಂಗೊಳಿಸಿ ಕಣ್ಣಿಗಾನಂದ ತರುತಿವೆ. ಜಲನೆಲಗಳ ಅಸರಯಿಲ್ಲದಿದ್ದರೆ ಮಾನವ ಜೀವಿಗೆ ಬಾಳು ಕಡು ಬೇಸರ.

॥ ಪದ ॥

ಚಲುವಿನ್ನೈಸಿರಿ ಶಿವನ ಧರಣಿ । ಮನುಜ ಕುಲದಾ ಪಾವ ಸ್ಮರಣಿ ॥ ಚಲು ॥
ಸತಿಪತಿಗಳ ಶುಭಗತಿಗಳ । ಹರುಷ ಚೇತನ ॥
ಇಂದ್ರ ಧನುರ್ಯನದಾ ॥ ಸೊಬಗಿನಾ ಸಾಗರ ॥ ೧ ॥
ಮಳೆಹೊಳೆಗಳ । ಜಲನೆಲಗಳ ಹರುಷ ಚೇತನಾ । ತುಂಬಿ ಸಂತ ॥
ಭುವನವೀ ॥
ತುಳಕದಾ ॥ ವಿನೂತನಾ ॥ ಚಲು ॥

**ಮರಿಯಪ್ಪ –** (ಪದ ಕೇಳುತ್ತ ಬಂದು) ಹಾಡು ಪಾರ್ವತಿ ಹಾಡು. ನಿನ್ನೊಂದಿಗೆ ಜಲ–ನೆಲ–ಮುಗಿಲು ಎಲ್ಲ ಹಾಡಿದ ಹಾಗಾಯಿತು. ರೋಣಿಯ ಮಳೆಯು ಭೂಮಿಗೆರಗುವ ಮುನ್ನ ಗಿರಿಯ ನವಿಲು ಗರಿಗೆದರಿ ಕುಣಿದಂತೆ ಭಾಸವಾಯಿತು ನಿನ್ನ ರೂಪ. ನಿನ್ನ ವಯಸ್ಸು ಈ ಕಾಡಿಗೇ ಒಂದು ಬಗೆಯ ಬೆಡಗು ನೀಡಿ ಹಳ್ಳದಾ ದಡದಿ ನಿಂತ ನನ್ನನ್ನು ಎಳತಂದು ನೋಡ ಹಚ್ಚಿತು

**ಪಾರ್ವತಿ –** ಒಬ್ಬಳೆ ಅದೀನಿ ಅಂತಾ ಏನೇನು ಹಾಡಿಕೊಂಡೆ. ಉದ್ಧಟತನ ಅಂತಾ ಕಂಡ್ರೆ ಕ್ಷಮಿಸಿಬಿಡ್ರಿ, ನಾನು ಹೋಗತೀನಿ

**ಮರಿಯಪ್ಪ –** ನಿನಗೆ ನಾ ಕಾಣದಿದ್ದರೂ, ನನಗೆ ನೀ ಕಂಡು ಹಸಿದ ನನ್ನ ಕಣ್ಣಿನ ಬರ ಹಿಂಗಿಸಿದೆ ಪಾರು. ಶಾಸ್ತ್ರಕ್ಕೆ ಸಿದ್ಧ ನಿನ್ನ ಕೈಹಿಡಿದ ಗಂಡನೆನಿಸಿದ್ದರೂ, ನಿಜದಲ್ಲಿ ನಾನೇ ನಿನ್ನ ಯಜಮಾನ

**ಪಾರ್ವತಿ –** ಅಂದರೆ

**ಮರಿಯಪ್ಪ –** ನಿನ್ನತ್ತೆಯೊಂದಿಗೆ ಸಿದ್ಧನಿಗೆ ಎಂದು ನಿನ್ನನ್ನು ಗೊತ್ತು ಪಡಿಸಲು ಅಂದು ನಾನು ಬಂದಿದ್ದೆನೋ ಆಗಲೇ ಈ ರೂಪರಾಶಿ ನಮ್ಮೂರಿನದಾಗಲಿ ಎಂದು ಹಾರೈಸಿ ಮದುವೆಯ ಖರ್ಚನ್ನೆಲ್ಲ ವಹಿಸಿಕೊಂಡೆ. ಪಾರು ನಿನ್ನ ತವರಿಗೆ ಕೊಟ್ಟ ತೆರವೂ ಸ್ವಂತ ನನ್ನ ಮನೆಯ ಬಂಗಾರ.

**ಪಾರ್ವತಿ –** ಇರಬಹುದು, ಕೊಟ್ಟ ನಿನ್ನ ಸಾಲವನ್ನು ಮರಳಿ ಮುಟ್ಟಿಸದ ಅಸಮರ್ಥರಲ್ಲ ನನ್ನ ಕೈ ಹಿಡಿದವರು

**ಮರಿಯಪ್ಪ –** ತಂದೆ ಮಾಡಿದ ಸಾಲ ಮುಟ್ಟಿಸಿ ಮರಳಿ ಪಡೆಯವದಾಗಲಿಲ್ಲ ನಿನ್ನ ಗಂಡನಿಗೆ. ನನ್ನ ಬಳಿ ಸಾಲದಲ್ಲಿ ಬಿದ್ದ ಹೊಲವನ್ನು ಪ್ರತಿ ವರ್ಷಕ್ಕೊಮ್ಮೆ ತಂದು ಒಪ್ಪಿಸುತ್ತಾನೆ ಬಡ್ಡಿಯಲ್ಲಿ ಬೆಳೆದ ಪೀಕನ್ನು. ಇದರ ಮೇಲೆ ಸಾಲ ಮಾಡಿ ತಂದ ನಿನ್ನನ್ನು ನಾನೊಪ್ಪಿಸಿಕೊಳ್ಳಲು ಕೇಳಬೇಕಾಗಿಲ್ಲ ನಿನ್ನ ಗಂಡನ ಒಪ್ಪಿಗೆಯನ್ನು. ಪಾರೂ.... ಈ ಊರಿಗೇ ನಾನು ಸಾವುಕಾರ, ಇಲ್ಲಿ ನನ್ನದೇ ಅಧಿಕಾರ

**ಪಾರ್ವತಿ –** ಸಾವುಕಾರರೇ ಈ ರೀತಿ ಮುಂದುವರೆದು ನನ್ನ ಮಾನ ತೆಗೆಯುವದಾದರೆ ಕೂಗಿ ಕರೆದು ಕೂಡಿಸಬೇಕಾದೀತು ಜನರನ್ನು

**ಮರಿಯಪ್ಪ –** ಹಸಿದ ಹೆಬ್ಬುಲಿಯ ಬಿಲದಲ್ಲಿ ಬಿದ್ದ ಹಸುವನ್ನು ಬಿಡಿಸಿಕೊಳ್ಳಲು ಎಂಥ ಎದೆಗಾರರನಿಗೂ ಕಸುವು ಸಾಲದಂತೆ. ಈ ಸಾವುಕಾರ ಕಣ್ಣಿಟ್ಟ ಹೆಣ್ಣಿನ ಮಾನ ಕಾಯುವ ಶಕ್ತಿ ಮೂರು ಕಣ್ಣುಳ್ಳವನಿಗೂ ಆಗದ ಮಾತು. ಪಾರು ನೀನೀಗಲೇ ನನ್ನವಳಾಗು

**ಪಾರ್ವತಿ –** ಚಾಂಡಾಲ..... ಮಾನಗೆಟ್ಟವನೆ.... ಸರಿದೂರ

**ಮರಿಯಪ್ಪ –** ಚಾಂಡಾಲ.... ಭಂಡ ಬೈಗಳಿಂದ ಬೈದು ನನ್ನ ಎದೆ ಗುಂಡಿನ ಮೇಲೆ ಬರೆ ಎಳೆದೆ. ಒಡಲು ತೆರೆದು ಹಡೆದ ನನ್ನ ತಾಯಿ

ಕೂಡ ಈ ರೀತಿ ಬೈಯುವ ಧೈರ್ಯ ಮಾಡಿರಲಿಲ್ಲ. ಎಲೆ ಪಾರು (ಮೈಮೇಲೆ ಏರಿ ಹೋಗುವನು)

**ಪಾರ್ವತಿ –** ಅಯ್ಯೋ.... ಯಾರಾದರೂ ಬರ್‍ರಿ. ಈ ದುರುಳನ ಕೈಯಿಂದ ನನ್ನ ಮಾನ ಪ್ರಾಣ ಉಳಿಸಿರಿ.... ಭದ್ರ... ಭದ್ರ....

**ಭದ್ರ –** (ಬಂದು) ಅತ್ತಿಗೆ (ನೋಡಿ) ಯಾರು ಸಾವುಕಾರ ಮರಿಯಪ್ಪ ನನ್ನ ಅತ್ತಿಗೆಯ ಮೇಲೆ ಏರಿಹೋಗುವಷ್ಟು ಧೈರ್ಯ ಬಂತೇನೋ ನಿನಗೆ? ಈ ಬಡ ಕುಟುಂಬದಲ್ಲಿ ಭದ್ರಿಯೊಬ್ಬ ಬದುಕಿದ್ದ ನೆನಪು ತಾಗಲಿಲ್ಲವೇ ಆ ನಿನ್ನ ಮನಕ್ಕೆ. ನಿನ್ನ ಸಂಪತ್ತಿನ ಸೊಕ್ಕನ್ನು ನನ್ನ ಮೆಟ್ಟಿನ ಕೆಳಗೆ ಮೆಟ್ಟಿ ಮೆರೆಯಬೇಕೆಂದು ಹಟತೊಟ್ಟ ಈ ಭದ್ರಿಯು ಬಾಯಲ್ಲಿ ತುತ್ತಿಟ್ಟು ಬೆಳೆಸಿದ ನನ್ನತ್ತಿಗೆಯ ಶೀಲಕ್ಕೆ ಕೈಹಚ್ಚಿ ಬದುಕುವೆಯಾ ಮಗನೆ ಬದುಕು (ಹೊಡೆಯುವನು)

**ಪಾರ್ವತಿ –** ಬಿಡಪ್ಪ ಭದ್ರಿ ಸಾಕ ಬಿಡಪ್ಪಾ (ಬಿಡಿಸಿಕೊಳ್ಳುವಳು)

**ಮರಿಯಪ್ಪ –** ಎಲೆ ಭದ್ಮಾಸ ನನ ಮಗನೆ ಎಂಥಾ ಏಟು ಕೊಟ್ಟಿಯೋ? ಮುಖಕ್ಕೆ ಬಡಿದು ಮುಂದಿನ ಮೂರು ಹಲ್ಲು ಸಡಿಲಾಗಿ ಬಾಯಲ್ಲಿ ನೆತ್ತರು ಹರಿಯುತ್ತಲ್ಲೋ. ಲೇ ಭದ್ರಿ ನಾನು ದುಡ್ಡುಳ್ಳವನೋ. ದೊಡ್ಡವರ ಪರಿಚಯ ಬೆಳೆಸಿಕೊಂಡವನೋ. ಎಂ.ಎಲ್.ಎ ನನಗೆ ಗೊತ್ತು. ಇಂಥಾ ನನ್ನ ಎದುರು ಹಾಕೊಂಡು ಬದಕತ್ಯಾ ಮಗನೇ

**ಭದ್ರ –** ಸತ್ಯದಲ್ಲಿ ನಡೆಯುವ ನಾನು ದೇವರನ್ನು ಕೂಡ ಎದುರು ಹಾಕಿಕೊಂಡು ಬದುಕಬಲ್ಲೆ. ಮರಿಯಪ್ಪ ನಿನ್ನ ಸುಳ್ಳು ಸಾಲದಲ್ಲಿ ಬಡ್ಡಿ ಭಾರಕ್ಕೆ ಬೆನ್ನು ಬಾಗಿ, ಮೊದಲೆ ಬಡವರಾದ ನಾವು ಮತ್ತಷ್ಟು ಬಡತನದ ಕಡು ತಾಪದಲ್ಲಿ ಒಡಲಿಗನ್ನ ಸಿಗದೇ ಹಸುವಿನ ತಾಪ ಅವರಿಸಿ ನಿಂತಿದೆ. ಸಿರಿ ಬಡತನಗಳ ನಡುವೆ ಹೊತ್ತಿದ ವೈರದ ಉರಿ ಧಗಧಗಿಸತೊಡಗಿದೆ. ನಿನಗೆ ನಾ ಕೊಡುವ ಕಟ್ಟ ಕಡೆಯ ಭಾಷೆ ಇದು. ನಮ್ಮಂಥ ಬಡವರನ್ನು ಬೆದರಿಸಿ ದನದಂತೆ ದುಡಿಸಿ ಗಳಿಸಿದ ನಿನ್ನ ಸಂಪತ್ತಿಗೆ ಸವಾಲು ಹಾಕಲಿರುವ ನನ್ನಿಂದ ಸಿಡಿದ ರೋಷದ ಸಿಡಿಲು ನಿನ್ನ ಮುಖಕ್ಕೆ ಬಡಿದು ಮುಂದಿನ ಮೂರು ಹಲ್ಲು ನಡುಗಿಸಿತು. ಆದರೂ ಈ ಸಿಡಿಲು ಇನ್ನೂ ಮೊಗ್ಗಿನಲ್ಲಿದೆ. ಮುಂದೆ ಹೂವಾಗಿ ಅರಳಿ ಕಾಯಾಗಿ ಬೆಳೆದು, ಹಣ್ಣಾಗಿ ಕಳಿತಾಗ ತಿಳಿಯುವದು ಅದರ ರುಚಿ. ಬಡವರನ್ನು

ಮರುಗಿಸಿದ ಪಾಪ ಹತ್ತದೆ ಬಿಡದು ನಿನಗೆ. (ಭದ್ರಿ ಏರಿ ಹೋಗುವನು. ಮರಿಯಪ್ಪ ಅಂಜಿ ಓಡಿ ಹೋಗುವನು)

**ಪಾರ್ವತಿ –** ಭದ್ರಿ ಹಾಲಿಟ್ಟು ಸಲುಹಿದ ನನ್ನ ಶೀಲ ಕಾಪಾಡಿದ ನೀನು ನನಗೆ ಮೈದನ ಅಲ್ಲ ಮಗಾ... ಭದ್ರ ನಾನು ಆಶಿಸಿದ ಕನಸು ನನಸಾಯಿತು. ಧೈರ್ಯ ಸಾಹಸಗಳ ಹೆಬ್ಬಟ್ಟದಂತಿದ್ದ ನಿನ್ನ ಹೆತ್ತ ಹೊಟ್ಟೆ ನನ್ನದಾಗಲಿಲ್ಲ ನನ್ನಪ್ಪಾ

**ಭದ್ರ –** ಹೆತ್ತ ಒಡಲು ನಿನ್ನದಾಗದಿದ್ದರೂ, ಹಾಲುಣಿಸಿದ ಕೈ ನಿನ್ನದು. ಅತ್ತಿಗೆಮ್ಮಾ ನೀನೀನ್ನು ನಿರ್ಭಯವಾಗಿ ಮನೆಗು ಹೋಗು. ಇನ್ನು ಮೇಲೆ ಈ ಭದ್ರ ಆ ಮರಿಯನ ಪಾಲಿಗೆ ಸಿಂಹಸ್ವಪ್ನ

**ಪಾರ್ವತಿ –** ಭದ್ರ ನಾವು ಬಡವರು, ಅವರು ಹಣವಂತರು, ಸಂಪತ್ತಿನ ಸಹಾಯದಿಂದ ನಾಳೆ ನಿನಗೇನಾದರೂ ಕೇಡು ಮಾಡಲು ಬಂದರೆ ಆ ಸಂಕಟ ಸಮಯದಲ್ಲಿ ನಿನ್ನ ಉಳಿಸುವವರು ಯಾರಪ್ಪಾ.....

**ಭದ್ರ –** ದೇವರು.... ಅತ್ತಿಗೆಮ್ಮಾ ಧರ್ಮಿಷ್ಟರಾದ ಪಾಂಡವರಿಗೆ ಬಡತನದಲ್ಲಿ ಅಕ್ಷಯ ಪಾತ್ರೆಯನ್ನಿಟ್ಟು ಕಾಪಾಡಿದ ಶಕ್ತಿ ಯಾವದು? ಬಡವನಾದರೂ ಭಕ್ತನಾದ ಸುಧಾಮನಿಗೆ ಶ್ರೀ ಕೃಷ್ಣನ ಸ್ನೇಹ ದೊರಕಿಸಿಕೊಟ್ಟ ಆ ಶಕ್ತಿ ಯಾವುದು? ಅದೇ ದೈವೀಶಕ್ತಿ ನನ್ನನ್ನು ಕಾಯಿತು. ಒಂದು ವೇಳೆ ದೈವೀ ಬಲವೂ ಸಂಪತ್ತಿನೆಡೆಗೆ ಒಲಿದರೆ? ಅತ್ತಿಗೆಮ್ಮಾ ನನಗೆ ನನ್ನ ತೋಳ ಬಲವಿದೆ. ಮನದಲ್ಲಿ ಸೇಡು ತೀರಿಸಿಕೊಳ್ಳುವ ಅಖಂಡ ಛಲವಿದೆ. ಸಂಪತ್ತುಳ್ಳ ಇಂಥವರ ಸೊಕ್ಕು ಮುರಿಯಬೇಕಿದ್ದರೆ ಬರೀ ಬಾಯಿ ಬೆದರಿಕೆಯಿಂದಲ್ಲ ಹೊಡೆತ ಬಡಿತಗಳ ಹೆದರಿಕೆಯೂ ಬೇಕು. ನೀನಿನ್ನು ನಿರ್ಭಯವಾಗಿ ಮನೆಗೆ ಹೋಗು (ಪಾರ್ವತಿ ಹೋಗುವಳು) ಭದ್ರ ಮೀನು ಹಿಡಿಯಲೆಂದು ಕೂಡುವನು. ಲಕ್ಷ್ಮಿ ನೀರಿಗೆ ಬರುವಳು)

**ಲಕ್ಷ್ಮಿ –** (ಬಂದು ನೀರನ್ನು ಪರೀಕ್ಷಿಸಿ) ನೀರೆಲ್ಲ ಹೊಲಸ ಮಾಡ್ಯಾವು ಹೊಲಸಗೂಳು, ಹಳ್ಳೆಲ್ಲ ಇವಂದ ಆಗ್ಯೆತಿ, ಭಾಡಕಾವು ಹಳೆ ಭಾಡಕಾವು

**ಭದ್ರ –** (ಸಿಟ್ಟಿನಿಂದ) ಏ.... ಮೀನ ಹಿಡಿಯಲೆಂದು ಗಾಳಾ ಹಾಕಿ ನಾನಿಲ್ಲಿ ಗುಡ್ಡದಂತೆ ಕುಳಿತದ್ದು ಕಾಣಲಿಲ್ಲವೇನೇ ಆ ನಿನ್ನ ದೊಡ್ಡ ಕಣ್ಣಿಗೆ

ಲಕ್ಷ್ಮಿ – ಮೀನ ಹಿಡಿಬೇಕು ಅನ್ನು ಚಲುವ ಮಡುವು ಇದ್ದ ನೀರಿಗೆ ಹೋಗಬೇಕು.... ಗಾಳಾ ಹಾಕಿ ಮೀನು ಹಿಡೀಬೇಕು. ಅದನ್ನೆಲ್ಲ ಬಿಟ್ಟು ಮೀನ ಹಿಡಿಯುವ ನೆಪ ಮಾಡಿ ನೀರಿಗೆ ಬರೋ ಹೆಂಗಸರ ಮಾರೀನೇ ನೋಡ್ತಾ ಕುಂತಿಯಲ್ಲ ಪಿಕನಾಶಿ ಹಳೇ ಪಿಕನಾಶಿ

ಭದ್ರ – ಏನೇ.... ಹರಾಮಿ... ಬಲ್ಲಂಗ ಮಾತಾಡಿತಿಯಾ ನಾನು ಯಾರಂತ ತಿಳಿದಿ

ಲಕ್ಷ್ಮಿ – ನೀನು ಯಾರಾದರೆ ನನಗೇನು? ನೀನು ಅಂದ್ರೆ ನಿಮ್ಮಪ್ಪ ಅನ್ನುವಾಕಿ ನಾನು

ಭದ್ರ – ನಮ್ಮಪ್ಪನ ಹೆಸರೆತ್ತಿದರೆ ಮೀನಕ ಹಾಕಿರುವ ಗಾಳಾ ತೆಗೆದು ನಿನ್ನ ಗಂಟ್ಲಕ ಹಾಕೇನು? ಈ ಹಳ್ಳ ಅಂದ್ರೆ ನಿಮ್ಮಪ್ಪನ ಜಾಗೀರು ಅಂತ ಮಾಡೀಯ? ನೀನೇನು ಹೆಣ್ಣೋ ಕಾಮ ಕಣ್ಣಿಗೇರಿದ ಕೀವು ತುಂಬಿದ ಹುಣ್ಣೋ

ಲಕ್ಷ್ಮಿ – ಏ ಭಂಡಾ ಹಲ್ಲ ಬಿಗಿದ ಹಿಡಿದ ಮಾತಾಡು. ಕಂಡ ಹೆಂಗಸರಿಗೆ ಭಂಡ ಮಾತಾಡಕ ಈ ಹಳ್ಳ ನಿಮ್ಮಪ್ಪ ಗಳಿಸಿಟ್ಟ ಜಾಗೀರು ಅಂತಾ ಮಾಡೀಯ? ಈ ನಿನ್ನ ಗಂಡತನ–ಭಂಡತನ ನನ್ನೆದುರು ತೋರಿಸಬ್ಯಾಡ ನಿನ್ನ ಗುಂಡಗೀನ ಸೀಳಿಸಿ ಬಿಟ್ಟೇನು? ಗಂಟಲಿಗೆ ಗಾಣಾ ಹಾಕತಾನಂತೆ, ಗಾಣಾ.... ನಾನ್ಯಾರು ಗೊತ್ತೇನೋ? ಸಾವುಕಾರ ಮರಿಯಪ್ಪನ ಮಗಳೂ....

ಭದ್ರ – ಸಾವುಕಾರ ಮಗಳಾದರೆ ನನಗೇನು ಹೇಳ್ತಿಯೇ ನಿಮ್ಮಪ್ಪನ ಸಾವುಕಾರಕಿ ತಂದು ಹಾಕ ನನ್ನ ಕಾಲ ಕೆಳಗ

ಲಕ್ಷ್ಮಿ – ಏನೋ ನಮ್ಮಪ್ಪನತನಕ ಹೋಗ್ತೀಯೇನೋ ನಾಲಗಿ ಉದ್ದಾಯಿತೇನೋ ಮೊದಲು ಹಳ್ಳ ಬಿಟ್ಟು ಬದಿಗಿ ನಿಂತು ಮಾತಾಡು (ಭದ್ರಿ ಸಮೀಪ ಬರುವನು) ನಾಚಿಕೆ ಬಿಟ್ಟವನೇ

ಭದ್ರ – ನಾಚಿಗೆ ಬಿಟ್ಟವನು ನಾನಲ್ಲ, ನೀನು ನಿಮ್ಮಪ್ಪ. ನಾಲಿಗೆ ಸಡಿಲು ಬಿಟ್ಟು ಮಾತಾಡದಿ ಅಂದ್ರೆ ಹಳ್ಳದ ಕಳ್ಳ ಉಸಗಿನ್ಯಾಗ ಹಾಕಿ ನಿನ್ನ ತುಳಿದು ಬಿಟ್ಟೇನು ನಾನ್ಯಾರು ಗೊತ್ತಾ

ಲಕ್ಷ್ಮಿ – ಭದ್ರಾ.....

ಭದ್ರ – ಬರೀ ಭದ್ರನಲ್ಲ ವೀರಭದ್ರ. ಧೈರ್ಯದ ಸಮುದ್ರ. ನಿಮ್ಮ ಕುಲದ ಕಾಲರುದ್ರ

**ಲಕ್ಷ್ಮಿ** – ಏ ಹೇಗೋ ಜೋಭದ್ರ. ನಿನ್ನಂಥ ರುದ್ರಗೋಳು ಭದ್ರಗೋಳು ನಮ್ಮ ಮನ್ಯಾಗ ಜೀತ ಅದಾರ. ನಮ್ಮ ಹೊಲದಾಗಿನ ಕಸಾ ಕೀಳತಾರ. ರಾತ್ರಿ ಬಂದು ನಮ್ಮಪ್ಪನ ಕಾಲು ಒತ್ತತಾರ

**ಭದ್ರ** – ಏನೇ ಹರಾಮಿ ಕಂಡಂಗ ಮಾತಾಡತೀಯಾ ತಡಿ ನಿನ್ನ (ನಡುವಿನಲ್ಲಿದ್ದ ಚಾಕು ತೆಗೆದು)

**ಲಕ್ಷ್ಮಿ** – ಏ ಅದನ್ಯಾಕ ತಗದಿಯೋ? ಅದೆಲ್ಲಿತ್ತೊ ಅಲ್ಲೆ ಇಡೋ

**ಭದ್ರ** – ತಡಿ ನಿನ್ನ ಮುಂದಲೆ ಕೂದ್ಲಾ ಕೊಯ್ದು ಕರಿ ತಗೊಂಡ ಕಳಸ್ತೀನಿ

**ಲಕ್ಷ್ಮಿ** – ಅಯ್ಯಯ್ಯೋ ಬ್ಯಾಡಬಿಡಲೋ. ಇನ್ನ ಮೇಲೆ ನಿನಗೇನು ಅನ್ನೋದಿಲ್ಲ. ನಿನ್ನ ಸುದ್ದಿಗೆ ಬರೋದಿಲ್ಲ. ನನ್ನ ಕೂದಲಾ ಕತ್ತರಿಸಬ್ಯಾಡಲೊ (ಕೂದಲ ಕತ್ತರಿಸುವನು) ಸನ್ಯಾಸಿ, ಧಿಕ್ಕೇಡಿ, ಪರದೇಶಿ ನನ್ನ ತಲ್ಯಾಗಿನ ಕೂದಲಾ ಕತ್ತರಿಸಿತು. ಹೋಗ್ತೀನೋ ನಮ್ಮಪ್ಪನ ಕರಕೊಂಡು ಬರ್ತೀನಿ

**ಭದ್ರ** – ನಿಮ್ಮಪ್ಪನ್ನಾದರೂ, ನಿಮ್ಮಜ್ಜನ್ನಾದರೂ ಕರಕೊಂಡು ಬಾ. ನಿನ್ನ ಮೇಲಗಟ್ಟಿ ಅವನ್ಯಾರ ಬರ್ತಾನೋ ಬರಲಿ. ಬಂದವನ ಗೋಣ ಮುರಿದು ನೇಣು ಹಾಕಿ ಬಿಡತೀನಿ. ಲಕ್ಷ್ಮಿ ನೋಡಿಲ್ಲಿ ಕಣ್ಣಿಟ್ಟ ಹೆಣ್ಣಿನ ಕರಿ ತೆಗೊಳ್ಳದೆ ಬಿಟ್ಟರೆ ನಮ್ಮಪ್ಪನ ಮಗನೇ ನಾನಲ್ಲ

**ಲಕ್ಷ್ಮಿ** – (ಅಳುತ್ತ) ನಿಮ್ಮ ಮನಿ ಮಸೂತಿ ಆಗಲಿ. ನಿನ್ನ ಮೈ ಉರಿದು ಹೋಗಲಿ. ನಿನ್ನ ಕಣ್ಣಾಗ ಕೀವು ತುಂಬಲಿ. ನಿನ್ನ ವಂಶ ನಿರ್ವಂಶ ಆಗಲಿ. ಹೋಗತೀನಿ ನಮ್ಮಪ್ಪನ ಕರಕೊಂಡು ಬರತೀನಿ. ನಿನ್ನ ಹೆಣಾನ ಹದ್ದು–ಕಾಗಿ ಹರಕೊಂಡು ತಿನ್ನುವಂಗ ಮಾಡದಿದ್ದರ..... ನನ್ನ ಹೆಸರು ಲಕ್ಷ್ಮೀನS ಅಲ್ಲ.

(ಲಕ್ಷ್ಮೀ ಕೊಡ ತಗೊಂಡು ಹೋಗುವಳು)

ತೆರೆ ಬೀಳುವುದು)

===****===****===

## ದೃಶ್ಯ ೪

### ಜಂಗಲ್ ರಸ್ತಾ

**ವೆಂಕಪ್ಪ –** ಅಂತು ಸಾವುಕಾರ ಮರಿಯಪ್ಪ ಸಂಗವ್ವನ ಸೊಸಿ ಮ್ಯಾಲೆ ಕಣ್ಣಿಟ್ಟು ಒದಿಸಿಗೊಂಡಾಂತ ಸುದ್ದಿ ಬಂತ ನಮಗ. ಅಲ್ಲ ತನ್ನ ವಯಸ್ಸೇನು ಆ ಹುಡುಗೀ ವಯಸ್ಸೇನು? ಹುಡುಗಿ ರೂಪಾ ಕಣ್ಣಿಗೆ ನಟ್ಟಿಲ್ಲೆ ಮದುವೆಗೆ ಸಾಲ ಕೊಟ್ಟೀನೋ ವೆಂಕಪ್ಪಾ ಅಂತಾ ನನ್ನ ಮುಂದ ಹೇಳಿದ್ದು ತಡಾನೆ ಇಲ್ಲ, ಒಡಿಸಿಕೊಂಡಾ ಬಂದಾ. ಇಂಥವರನ್ನ ಕಂಡೆ ಹಾಡಿರಬೇಕು ನಮ್ಮ ಪುರಂದರದಾಸರು

ನಗೆಯು ಬರುತಿದೆ । ಎನಗೆ ನಗೆಯು ಬರುತಿದೆ ॥
ಜಗದೊಳಿರುವ । ಮನಜರೆಲ್ಲ ॥ ಹಗರಣ ಮಾಡುವದನು ಕಂಡು ॥ ೧ ॥
ಪರರ ವನಿತೆ ವಲುಮೆಗೊಲಿದು ॥ ಹರುಷದಿಂದ ಅವಳ
ಬೆರೆದು ॥ ಹರಿಯುವ ನೀರಿನೊಳಗೆ ಮುಳಗಿ । ಬೆರಳು ಎಣಿಸು
ವರ ಕಂಡು ॥ ನಗೆಯು ॥ ಕಾಮಕ್ರೋಧ ಮನದೊಳಿಟ್ಟು ॥ ತಾನೆ
ವಿಷಯ ಪುಂಜನಾಗಿ ॥ ಸ್ವಾಮಿ ಪುರಂದರ ವಿಠಲನ ನಾಮ
ನೆನಯುವವರ ಕಂಡು ॥ ನಗೆಯು ॥

**ಮರಿಯಪ್ಪ –** (ಓಡಿ ಬರುತ್ತ) ವೆಂಕಪ್ಪಾ..... ಘಾತಾಯಿತೋ ವೆಂಕಪ್ಪಾ ಘಾತಾಯಿತೋ

**ವೆಂಕಪ್ಪ –** ಯಾಕೋ ಮರಿಯಪ್ಪ ಏನಾಯಿತೋ

**ಮರಿಯಪ್ಪ –** ಆ ಭದ್ಮಾಸ ನನ್ನ ಮಗಾ ಭದ್ರ ಬಡಿದು ಬಿಟ್ಟನಪಾ. ಎಷ್ಟು ಸೊಕ್ಕು ಬಂದೈತಿ ಆ ಬಡವ ನನ ಮಗ್ಗ. ಹಿರೇರು ಕಿರೇರು ಅನ್ನುವ ಹೆದರಿಕೇನೆ ಇಲ್ಲ

**ವೆಂಕಪ್ಪ –** ನೀನು ದೊಡ್ಡ ಮನುಷ್ಯ ಆಗಿ ಏನರ ಸಣ್ಣತನ ಮಾಡಿರಬೇಕು. ಅದಕ ಹೊಡೆದಾನ ಹೌದಲ್ಲೊ

**ಮರಿಯಪ್ಪ –** ಏ ಇಲ್ಲಪಾ ಸುಮ್ಮಸುಮ್ಮನೆ ಹೊಡದದ

**ವೆಂಕಪ್ಪ** – ಸುಮ್ಮಸುಮ್ಮನೆ ಯಾಕ ಬಡೀತಾನ? ಸುಮ್ಮನೆ ಇದ್ದವರನ್ನ ಬಡೀಲಿಕ್ಕೆ ಅವನಿಗೆ ನೆತ್ತಿ ಮ್ಯಾಲೆ ಕೋಡು ಮೂಡ್ಯಾವೇನು? ನೀನೇನಾದ್ರೂ ಅವನ ಅಣ್ಣನ ಹೆಂಡತಿಯು ಮೇಲೆ ಏರಿಹೋಗಿರಬೇಕು. ಅದಕ ಈ ಕಡಬಿನ ಕಾಳಗ ನಡೆದಿರಬೇಕು. ಅಲ್ಲ ಬಾಳ ಬಡದನೇನು?

**ಮರಿಯಪ್ಪ** – ಬಡತಾ ಅಂದ್ರೆ ಅಂಥಿಂಥಾ ಬಡತ ಅಲ್ಲಪಾ.... ಅವನು ಮಾರಿಗೆ ಬಡದಂಗ ಮುಂದಿನ ಮೂರು ಹಲ್ಲು ಅದ್ರ ಆಗ್ಯಾವು. ಆ ಹೊಡತಕ ನನಗ ಚಕ್ರ ಬಂದಂಗಾಯಿತು. ನಿಂತ್ರ ಮತ್ತ ಬಡದಾನೂ ಅಂತ ಓಡಿಬಂದೆ ನೋಡು. ಇದಕ್ಕ ಹ್ಯಾಂಗ ಮಾಡೋದು.

**ವೆಂಕಪ್ಪ** – ಹ್ಯಾಂಗೇನು ಮಾಡೋದು ಈ ಕೆಲಸ ಮಡೋವವರಿಗೆ... ಊರೊಳಗ ದೊಡ್ಡ ಮನುಷ್ಯರು ಅನ್ನಿಸಿಕೊಂಡು ಪರಮನಿ ಹೆಣ್ಣಮಕ್ಕಳ ಪಾಪದೃಷ್ಟಿಯಿಂದ ನೋಡತೀರಪ್ಪಾ... ಅಂದ ಮ್ಯಾಲೆ ಯಾಕ ಬಿಟ್ಟಾರೂ....

**ಮರಿಯಪ್ಪ** – ಯಾರ ಬಿಟ್ಟಾರೋ ಎಲ್ಲರೂ ನೋಡೆ ನೋಡ್ತಾರಲ್ಲ. ಭೂಮಿ ಮ್ಯಾಲಿನ್ಯ ಮನುಷ್ಯರ ಮಾತಿರಲಿ ದೇವರಂಥ ದೇವರೆನಿಸಿಕೊಂಡ ಮುಗಿಲ ಮೇಲಿನ ಚಂದ್ರ, ಸ್ವರ್ಗದ ಇಂದ್ರ ಇವರ ಬಿಟ್ಟಿಲ್ಲಲ್ಲೊ ಪರಸ್ತ್ರೀನ?

**ವೆಂಕಪ್ಪ** – ಅವರ ಬಿಟ್ಟಿಲ್ಲಾಂತ ಅವರ ಪಾಡೇನಾಗೇತಿ ಗೊತ್ತಾ

**ಮರಿಯಪ್ಪ** – ಏನಾಗೈತಿ ಬಾಳ ಅಂದ್ರ ಮೈಮ್ಯಾಲೆ ಒಂದೆರಡು ಕಲಿ ಬಿದ್ದಾವು

**ವೆಂಕಪ್ಪ** – ಅದೇ ಅವರ ಮೈಮೇಲೆ ಒಂದೆರಡು ಕಲಿ ಬಿದ್ದಾವು. ನಿನ ಬಾಯನ್ನ ನಾಲ್ಕ ಹಲ್ಲ ಅದ್ದ್ರ ಆಗ್ಯಾವು. ನಿಂದೊಂದು ಕಿವಿ ಹೋಯಿತು ಇವು ಹಿಂಗS.....

**ಮರಿಯಪ್ಪ** – ಅದೇನೆ ಇರಲಿ ವೆಂಕಪ್ಪ, ನನ್ನ ಬಡಿದು ಅವಮಾನಗೊಳಿಸಿದ ಆ ಭದ್ರನ ಮೈಚರ್ಮ ಸುಲಿಸುವಂತೆ ಹೊಡಿಸಬೇಕು. ಅವನೆಂದೂ ನಮ್ಮ ಹೆಸರೆತ್ತದಂತೆ ಮಾಡಬೇಕು. ವೆಂಕಪ್ಪಾ ತುಪ್ಪ ತಿಂದ ನಿನ್ನ ತಲೆ ಸ್ವಲ್ಪ ಗರಂ ಆದರೆ ಸಾಕು ಆ ಭದ್ರ ನರಂ ಆಗೇ ತೀರತಾನ

**ಲಕ್ಷ್ಮಿ** – (ಒಳಗಿನಿಂದ) ಅಪ್ಪಾ (ಬಂದು) ಅಪ್ಪಾ ಆ ಭದ್ರ (ಮರಿಯಪ್ಪ, ವೆಂಕಪ್ಪ ಹೆದರಿ ಓಡುವರು)

ಮರಿಯಪ್ಪ – ಎಲ್ಲಿ

ಲಕ್ಷ್ಮಿ – ಅಲ್ಲೇ

ಮರಿಯಪ್ಪ – ಯಾಕ ಹೆದರಿ ಓಡಿ ಹೋಗ್ತಿಯೋ

ವೆಂಕಪ್ಪ – ಆ ಕಿಡಿಗೇಡಿ ಹುಡುಗನ ಹೆಸರು ತಗದರೆ ಸಾಕು. ಹೆದರಿ ಬೀಳುವಂಗ ಆಗತದ ಏನ ಮಾಡದ್ನವ್ವ ಭದ್ರ

ಲಕ್ಷ್ಮಿ – ನಾನು.... ನಾನು... ಹಳ್ಳಕ್ಕ ಹೋಗಿ ಕೊಡ ತುಂಬುತಿದ್ದೆ. ಆಗ ನನ್ನ ಹತ್ರ ಬಂದು... ನನ್ನ ಕೈಹಿಡಿದು ಜಗ್ಗೀ.... ನನ್ನ ನೆಲಕ್ಕೆ ಕೆಡವಿ....

ಮರಿಯಪ್ಪ – ಏನ ಮಾಡಿದನವ್ವ

ವೆಂಕಪ್ಪ – ಏ ಮಗಳಿಗೆ ಹಾಗೆಲ್ಲ ಕೇಳತಾರೇನೊ, ನಿನಗ ಕೇಳಾಕ ಬರುದಿಲ್ಲ. ನೀನು ಸುಮ್ಮನಿರು. ಅಂಥಾದ್ದು ಆ ಹುಡುಗಿ ಹೆಂಗ ಹೇಳತದ. ಭದ್ರ ನನ್ನ ಹತ್ತಿರ ಬಂದೂ ನನ್ನ ಕೈಹಿಡದ ಜಗ್ಗೀ ನನ್ನ ನೆಲಕ್ಕ ಕೆಡವಿ ಏನ ಮಾಡಿದ್ದು ಅಂತಾ ಕೇಳ್ತಾನಿವನು. ಏನವ್ವ ಇದು (ಲಕ್ಷ್ಮಿ ಮಣ್ಣ ಜಾಡಿಸುವಳು) ಏನವ್ವ ಇದು

ಲಕ್ಷ್ಮಿ – ಮಣ್ಣೂ.....

ವೆಂಕಪ್ಪ – ಜಾಡಸ್ತಿಯೇನು ಏನಾಯಿತು?

ಲಕ್ಷ್ಮಿ – ನಾ ಹಳ್ಳಕ್ಕ ಹೋಗಿ ಕೊಡಾ ತುಂಬತಿದ್ದೆ

ವೆಂಕಪ್ಪ – ಅಲ್ಲವ್ವ ನಿಮ್ಮಪ್ಪ ಊರಿಗೇ ಶ್ರೀಮಂತ. ದುಡಿಯಾಕ ಹತ್ತಿಪ್ಪತ್ತು ಆಳುಗಳದಾರ. ನೀರ ತರಕಾಂತ ಇಬ್ಬರದಾರ. ಅವರ ತಂದು ಹಾಕತಾರ. ಇಷ್ಟಿದ್ದು ಅದೊಂದು ಕೊಡ ಬಗಲಾಗ ಇಟಗೊಂಡು ಟಣ ಟಣ ಜಿಕ್ಕೊಂತ ಯಾಕ ಹೋಗ್ತೀಯವ್ವ

ಲಕ್ಷ್ಮಿ – ನಾನು ಚಂದಕ ಹೋಗ್ತೀನಿ

ವೆಂಕಪ್ಪ – ಚಂದಕ ಹೋಗಿ ಈ ರೀತಿ ಜಗಳ ತಗೊಂಡು ಬರ್ತೀದಿ

ಲಕ್ಷ್ಮಿ – ನಾನು ಕೊಡಾ ತುಂಬತಿದ್ದೆ

ವೆಂಕಪ್ಪ – ಕೊಡಾ ತುಂಬತಿದ್ಯೋ, ಏನ ಕೊಡದಾಗ ನೀರ ತುಂಬತಿದ್ಯೋ

ಲಕ್ಷ್ಮಿ – ನೀರು ತುಂಬತಿದ್ದೆ

**ವೆಂಕಪ್ಪ –** ಏನಾಯಿತು?

**ಲಕ್ಷ್ಮಿ –** ಆ ಭದ್ರ ನನ್ನ ಹತ್ತಿರ ಬಂದು ನನ್ನ ಕೈಹಿಡಿದು ಜಗ್ಗಿ ನನ್ನ ನೆಲಕ್ಕೆ ಕೆಡವಿ ಹೂಂ ( ಕೂದಲ ತೋರಿಸಿ) ನನ್ನ ಮುಂದಲೆ ಕೂದಲಾ ಕತ್ತರಿಸಿದ

**ವೆಂಕಪ್ಪ –** ಇಷ್ಟ ಹೌದಲ್ಲ.... ಎಲೆ ಹುಡುಗ ಎಂಥ ಪಾಪ ಕೆಲಸಕ ಕೈಇಟ್ಟಿಯೋ? ಮದುವೆಗೆ ನಿಂತ ಹುಡುಗಿಯ ಮುಂದಲೆ ಕೂದ್ಲಾ ಕತ್ತರಿಸಿದಿ. ಮರಿಯಪ್ಪನ ಮುಖಕ್ಕೆ ಬಡಿದು ನಾಲ್ಕು ಹಲ್ಲ ಅದ್ರ ಮಾಡದಿ. ಛೇ ಅಲ್ಲಪಾ ಇದು

**ಲಕ್ಷ್ಮಿ –** ಅಪ್ಪಾ ನಿನಗೂ ಹೊಡದನಾ ಅವಾ

**ಮರಿಯಪ್ಪ –** ಏ ಇಲ್ಲವಾ ಇಲ್ಲ

**ವೆಂಕಪ್ಪ –** ಇದು ಹಿಂಗS ಹೇಳತ್ತ. ಅದ ಹಂಗS ಹೇಳತ್ತ. ಇವು ಎರಡೂ ಹಿಂಗS ಅದಾವ.

**ಮರಿಯಪ್ಪ –** ಲೇ ಭದ್ರ ನಿಮಗ ಸಾಲಾ ಕೊಟ್ಟವನೋ ನಾನು. ನಿಮ್ಮ ಹೊಲಾ ಮನಿ ಬರಿಸಿಗೊಂಡವನೋ ನಾನು. ನಿಮ್ಮೆಲ್ಲ ಆಗುಹೋಗುಗಳು ನನ್ನ ಕೈಯಲ್ಲಿರುವಾಗ ನನ್ನ ಮೇಲೆ ಕೈ ಮಾಡಿದೆಯಾ? ಲೇ ಹುಡುಗಾ ಹಾವು ತಿಂದು ಬದುಕುವ ಹವ್ಯಾಸಕ್ಕೆ ಬಿದ್ದಿಯಾ? ನೋಡುತ್ತಿರು, ವೆಂಕಪ್ಪ ಬೇಕಾದಷ್ಟು ದುಡ್ಡು ಖರ್ಚಾಗಲಿ ಆ ಭದ್ರ ಕೊಲೆ ಮಾಡಸೇ ತೀರತಿನಿ

**ಲಕ್ಷ್ಮಿ –** ಹೌದಪ್ಪಾ ಬೇಕಾದಷ್ಟು ರೊಕ್ಕಾ ಖರ್ಚಾಗಲಿ. ಆ ಭದ್ರ ಕೊಲೆ ಮಾಡಸೇ ತೀರುವದು

**ಮರಿಯಪ್ಪ –** ಈಗೀಂದೀಗ ರೆಡಿ ಮಾಡ್ತೀನಿ ಕೊಲೆ ಮಾಡಸಾಕ ಕೈಯಾಗ ಹುಡುಗರದಾರ, ಹೊತ್ತು ಹುಟ್ಟುದರೊಳಗೆ ಅವನ ಕೊಲೆ ಮಾಡಿಸೇ ತೀರತೀನಿ

**ಲಕ್ಷ್ಮಿ –** ನಡಿಯಪ್ಪಾ (ಹೋಗಹತ್ತುವಳು. ವೆಂಕಪ್ಪ ತಡೆದು)

**ವೆಂಕಪ್ಪ –** ಏ ತಡಿ ಕೊಲೆ ಮಾಡಿಸೋದು ಅಂದ್ರ ಅದೇನು ತಗಣಿಯಲ್ಲ. ಹುಡುಗರ ಮಾತಿಗೆ ಹಟಕ್ಕ ಬಿದ್ದು ದುಡುಕಿ ಊರಿಗೆ ಕಂಟಕ ತಂದುಕೋ ಬ್ಯಾಡ. ಭದ್ರ ಮನಿಯವರೆಲ್ಲ ನಿನ್ನ ಕೈಯ್ಯಾಗ ದುಡಿತಾರ.

ನೀ ಹೇಳಿದಂಗ ಕೇಳ್ತಾರ. ಹೀಗಿದ್ದು ಯಾಕಪ್ಪ ದುಡುಕೋದು? ಈಗಿದ್ದ ಸ್ಥಿತಿಯಲ್ಲಿ ಅವರ ಮನೆಗೆ ಹೋಗೋದು ಹೇಳೋದು. ಸಂಗವ್ವ ನಿನ್ನ ಮಗನಿಗೆ ಬುದ್ಧಿಹೇಳು ಇರದಿದ್ದರ ಪರಿಸ್ಥಿತಿ ಕೆಡತದ, ಸಿದ್ದ ನಿನ್ನ ತಮ್ಮಗ ಬುದ್ಧಿ ಹೇಳು, ಅಂತಾ ಹೇಳೋದು, ಸಾಮೋಪಾಯಕ್ಕ ಬಗ್ಗಿದರS ಸರಿ ಹೋಯಿತು, ಇರದಿದ್ದರ ದಂಡೋಪಾಯ. ಹಿಂಗ ಬಜಾರದಾಗ ಹಾಸಿಹೋಗೋ ಊರ ಜನರೆಲ್ಲ ನಿಮ್ಮನ್ನ ನೋಡತಾರ.

**ಲಕ್ಷ್ಮಿ –** ನೋಡಬೇಕು

**ವೆಂಕಪ್ಪ –** ನೋಡಿದವರೆಲ್ಲ ಉಗಳಲಿ

**ಲಕ್ಷ್ಮಿ –** ಉಗಳಲಿ

**ಮರಿಯಪ್ಪ –** ಯಾರಿಗೆ

**ವೆಂಕಪ್ಪ –** ಯಾರ ತಪ್ಪಾಗಿರತ್ತೋ ಅವರಿಗೆ (ಹೋಗುವರು)

===*****====*****====

# ದೃಶ್ಯ ೫

ಸಂಗವ್ವನ ಮನೆ

(ಸಿದ್ದಣ್ಣ ಜ್ವರದ ತಾಪದಿಂದ ಕುಳಿತಿದ್ದಾನೆ. ಪಾರ್ವತಿ ನೀರಿನ ಕೊಡ ಹೊತ್ತುಕೊಂಡು ಬಂದು ಒಳಗೆ ಹೋಗಿ ಇಳಿಸಿ ಬರುವಳು)

**ಪಾರ್ವತಿ** – (ಗಂಜಿ ತಂದು) ಗಂಜಿ ಕಾಸಿದೀನಿ, ಸ್ವಲ್ಪ ಕುಡಿತೀರಾ?

**ಸಿದ್ದಣ್ಣ** – ನಾನೊಲ್ಲೆ ಪಾರೂ, ಬಾಯಿ ರುಚಿ ಇಲ್ಲ

**ಪಾರ್ವತಿ** – ಜ್ವರದ ತಾಪಕ್ಕೆ ಹಾಗೆಲ್ಲ ಆಗುತ್ತೆ. ಬೆವರು ಬಂದಾಗ ಒರಿಸಿಕೊಳ್ಳತಾ ಇರ್ರಿ ಅಂತಾ ಎಷ್ಟು ಸಲ ಹೇಳಬೇಕು? ನಿಮಗೆ (ಸೆರಗಿನಿಂದ ಬೆವರು ಒರಿಸಿ) ಹೂ ಕುಡಿರಿ ಇದನ್ನ

**ಸಿದ್ಧ** – ಬುಲು ಹಟಮಾರಿ ನೋಡ ಪಾರು ನೀನು. ಒಂದು ಮಾತಿಗೆ ಬಿಡುವವಳೇ ಅಲ್ಲ?

**ಪಾರ್ವತಿ** – ಹ್ಯಾಂಗ ಬಿಡಬೇಕು. ಬಾಯಿ ರುಚಿ ಇಲ್ಲ ಅಂತ ಈ ಎರಡು ದಿವ್ಸದಿಂದ ನೀವು ಊಟಾನೆ ಮಾಡಿಲ್ಲ. ಈಗ ಸ್ವಲ್ಪ ಗಂಜಿ ಕುಡಿಲಿಕ್ಕೆ ಬೇಸರ ಮಾಡಿಕೊಂಡರೆ ಹೇಗೆ? ಕುಡಿರಿ ಇದನ್ನ (ಕುಡಿಸುವಳು)

**ಸಿದ್ಧ** – (ಗಂಜಿ ಕುಡಿದು) ಭದ್ರ ಬಂದ್ರೆ ಅವನಿಗಷ್ಟ ಐತಾ ಗಂಜಿ. ಪಾಪ ನಿನ್ನೆ ಊಟವಿಲ್ಲದೆ ಉಪವಾಸ ಮಲಗಿಬಿಟ್ಟ. ಹಾಳಾದ್ದು ನನಗೀ ಜ್ವರ ಬಂದು ವಾರದ ಕೂಲೀನೆ ಕಟ್ಟು ಮಾಡಿ ನಿಮ್ಮನ್ನೆಲ್ಲ ಉಪವಾಸ ಕೆಡವಿತು.

**ಪಾರ್ವತಿ** – ಇದಕ್ಕೆಲ್ಲ ದುಃಖ ಪಡಬಾರದು. ಪ್ರಪಂಚದಲ್ಲಿ ಬಡತನ ನಮ್ಮೊಬ್ಬರಿಗೆ ಇದೇ ಏನು? ನಮ್ಮಂತೆ ಸಾವಿರಾರು ಜನ ಉಪವಾಸ ವನವಾಸ ಅನುಭವಿಸ್ತಾ ಇಲ್ಲವೇನು? ಅನ್ನ ಇರದಿದ್ರೇನಾಯಿತು. ನೀರಿದೆಯಲ್ಲ ಕುಡಿದು ಮಲಗಲಿಕ್ಕೆ.

**ಸಂಗವ್ವ –** (ಸಂಗವ್ವ ಉಡಿಯಲ್ಲಿ ಜೋಳ ತರುವಳು) ಹೂಂ ಅಣಕದ ಮಾತು ನನಗೆ ಗೊತ್ತಿಲ್ಲೆನೂ? ಸಂಗವ್ವ ಸಾಲ ಮಾಡ್ಯಾಳ ಅಂತಾರ ಎಲ್ಲರೂ. ಸಂಗವ್ವ ಸಾಲ ಮಾಡ್ಯಾಳ ಹೌದು ನಾನೊಬ್ಬಕಿನೇ ಸಾಲ ಮಾಡಿನೇನು? ಮತ್ಯಾರು ಸಾಲಾನೆ ಮಾಡಾಕಿಲ್ಲೇನು? ಸಾಲಾ ಮಾಡಿದರ ನಾನೇನೂ ಹೊಟ್ಟಿಗ ತಿಂದಿಲ್ಲ ಮಗನ ಮದುವೆ ಮಾಡೀನಿ. ಸಂಗವ್ವ ಮಾಡಿದ ಸಾಲಾನ ಸಂಗವ್ವನ ಮಕ್ಕಳು ತೀರಿಸಲಾರದಷ್ಟು ಕೈಲಾಗದವರೇನು? ಹೂ ಹೇಳಾಕ ಬಂದಾರಿವರು?

**ಸಿದ್ಧ –** ಏನವ್ವ ಅದು ಯಾಕ ಕೂಗತಿಯಾ ಏನಾಯಿತು?

**ಸಂಗವ್ವ –** ನೋಡಿದ್ಯಾ.... ಊರಾಗ ಮಂದೆಲ್ಲ ಅಣಕದ ಮಾತಾಡತಾರೆ. ಊರಾಗ ಯಾರೂ ಸಾಲಾ ಮಾಡಿ ಮದುವಿನೇ ಮಾಡಿಲ್ಲೇನು. ಸಂಗವ್ವ ಸಾಲಾ ಮಾಡಿ ಬಂಗಾರದಂಥ ಸೊಸಿನ್ನ ತಂದಾಳಲ್ಲಾ ಅಂತ ಇವರಿಗೆಲ್ಲಾ ಹೊಟ್ಟೆ ಕಿಚ್ಚು. ನನಗ ಗೊತ್ತಿಲ್ಲೇನು, ಈ ಊರಾಗಿನ ಹಕಿಕತ್, ಬಾರವ್ವ ತಗೋ ಜೋಳಾ, ಗಂಜಿ ಬೇಸು

**ಸಿದ್ಧ –** ಏನವ್ವ ಇದು ಹೊರಗ ಹೋದರ ಸಾಕು, ನ್ಯಾಯದ ಹೊರಿನೆ ತಗೊಂಡು ಬರತೀಯಲ್ಲ?

**ಸಂಗವ್ವ –** ಹೋಗ್ಲಿ ಬಿಡಪಾ, ಹೆಂಗಸರ ಮಾತು ನಿನ್ಯಾಕೆ ತಲಿಗೆ ಹಚ್ಚಗೊಂತಿಯಾ? ಜ್ವರ ಬಿಟ್ಟಿತ ಹೌದಲ್ಲೊ? ಗಂಜಿ ಕುಡಿದಿಯಾ? ಬೆವರ ಒರಿಸಿಗೊ... ಮೈಯ್ಯಾಗ ಹಿಂಗ ಇರಬಾರದು (ಸೆರಗಿನಿಂದ ವರಸುವಳು)

**ಗುಂಡ –** (ಗಾಬರಿಯಿಂದ ಓಡಿಬಂದು) ಸಂಗವ್ವತ್ತಿ ಸಂಗವ್ವತ್ತಿ ಸಾವಕಾರ ಮರಿಯಪ್ಪನವರೂ, ಅವರ ಮಗಳೂ, ಕುಲಕರ್ಣಿ ವೆಂಕಪ್ಪ, ತಳವಾರ ಕೆಂಚಪ್ಪ ನಿಮ್ಮ ಮನಿಗೇ ಬರತಾರವ್ವ

**ಸಂಗವ್ವ –** ಅದೇ ನೀನೂ ಗಟ್ಟಿಯಾಗಿ ಮಲಗಿಯಾ? ಅಂತ ಮಾತಾಡಿಸಿ ಹೋಗಬೇಕು ಅಂತ ಬರತಿರಬೇಕು. ಯಾಕಪ್ಪಾ ಗುಂಡ

**ಸಿದ್ಧ –** ಬಡವರ ಕಷ್ಟಸುಖಾ ವಿಚಾರ ಮಾಡಲಿಕ್ಕೆ ಶ್ರೀಮಂತರೇನಾದರೂ ಬರತಾರೇನವ್ವ? ಅದೆಲ್ಲ ನಿನಗೇನು ಗೊತ್ತು. ನೀನು ಸುಮ್ಮನಿರು, ಯಾರೊ ಗುಂಡ ಇಷ್ಟ ಜನಾ ಈಗ್ಯಾಕ ನಮ್ಮನಿಗೆ ಬರ್ತಾರಂತೆ

**ಗುಂಡ–** ನಿಮ್ಮ ಭದ್ರಿ ಇವತ್ತು ಹಳ್ಳದಾಗ ಆ ಮರಿಯಪ್ಪನ ಮಗಳಿಗೆ ಏನೋ ಮಾಡಿದನಂತಪ್ಪ

**ಸಿದ್ದ –** ಅಂ ಹೌದೇನೋ.... ಕೇಳಿದೇನವ್ವ ಮತ್ತೇನೋ ಮಾಡಿದಾನಲ್ಲ ಇವನು. ಆ ಸಾವಕಾರ ಮಗಳಿಗೇನಾದ್ರು ಮಾಡೋದು ಅವರ ಮನೆಯಲ್ಲಿ ದುಡಿಯೋ ನನ್ನ ಪ್ರಾಣಕ್ಕೆ ತಂದಿಡೋದು. ಲೇ ಗುಂಡಾ ಭದ್ರಿ ಎಲ್ಲಿದಾನ ಗೊತ್ತೇನೋ ನಿನಗೆ?

**ಗುಂಡ –** ಇಷ್ಟೊತ್ತನಾ ಹಳ್ಳದಾಗ ಮೀನಾ ಹಿಡಿತಿದ್ದ. ನಾನು ಮನಿಗೆ ಹೋಗೋನು ಬಾ ಅಂದ್ರೆ ಬರಲಿಲ್ಲ

**ಸಂಗವ್ವ –** ನೀನು ಕರೆದರೂ ಯಾಕ ಬರಲಿಲ್ಲವಾ ಗುಂಡಾ

**ಗುಂಡ –** ಈಗ ಬಂದ್ರೆ, ನಮ್ಮವ್ವ, ನಮ್ಮಣ್ಣ ಬಡಿತಾರ. ನಾ ಬರಾಕವಲ್ಲೆ. ಅಂತಾ ಹೇಳಿ ಮತ್ತೆ ಎತ್ತಗೋ ಹೋದ್ನಪ

**ಸಿದ್ಧ –** ಹೋದ್ನಾ.... ಹೋಗಿದ್ದಾನು, ಅವನ್ಯಾಕ ಬಂದಾನು? ಮಾಡೊ ಕೆಲಸಾನೆಲ್ಲ ಮಾಡೆ ಹೋಗಿದ್ದಾನೆ. ಲೇ ಗುಂಡಾ? ಅವನು ಎಲ್ಲಿದ್ರು ಹುಡುಕಿ ನಿಮ್ಮಣ್ಣ ಕರಿತಾನೆ ಬಾ ಅನ್ನು. ಬರಿಲಿಲ್ಲಾ, ಎಳಕೊಂಡು ಬಾ

**ಸಂಗವ್ವ –** ಹೌದಪ್ಪಾ ಗುಂಡ, ಅಷ್ಟ ಮಾಡತಿಯಾ

**ಗುಂಡ –** ಹೊಡಿಯಾಕ ಬರ್ತಾನತ್ತೆ ಅವನು

**ಸಿದ್ಧಣ್ಣ –** ಹೊಡಿಯೊದಕ್ಕೆ ಬಂದ್ರೆ ನಿಮ್ಮಣ್ಣನ ಮುಂದೇ ಹೇಳ್ತೀನಿ ಅಂತ ಹೇಳೊ ಅಂದ್ರೆ ತಾನೆ ಬರ್ತಾನೆ, ಹೋಗೊ ಕರಕೊಂಡು ಬಾ ಅವನ್ನ. ಹೋಗು ಗುಂಡಾ (ಗುಂಡ ಹೋಗುವನು)

**ಲಕ್ಷ್ಮಿ –** (ಬರುತ್ತ) ಅಪ್ಪ ವೆಂಕಪ್ಪ, ಕಾಕಾ ಕೆಂಚಪ್ಪಜ್ಜ ಎಲ್ಲರೂ ಬರ್ರಿ ನಾನೇ ಮುಂದ ಹೋಗತೀನಿ (ಬರುವರು)

**ಮರಿಯಪ್ಪ –** ಸಂಗವ್ವ ನಿನ್ನ ಮಗನಿಗೆ ಬುದ್ಧಿ ಹೇಳಿ ಬಂದೋ ಬಸ್ತಿನ್ಯಾಗ ಇಡತೀಯೊ ಏನ ಚರ್ಮ ಸುಲಿಸಿ ಮಿಣಿ ಮಾಡನಂತಿಯಾ?

**ಕೆಂಚಪ್ಪ –** ಸಂಗವ್ವ ಆ ಭದ್ರಿಗೆ ಇನ್ನಾದರೂ ಕೀಟಲೆತನಾ ಬಿಟ್ಟು ಮಂದಿ ಮಕ್ಕಳಂಗ ಸುಮ್ಮನಿರಲಿಕ್ಕೆ ಹೇಳತಿಯೋ? ಏನ ಗೌಡರ ಗೂಳಿಯಂಗ ತಿರಗಂತಿಯೋ?

**ಸಂಗವ್ವ** – ಈಗೇನಂಥಾದ್ದು ಮಾಡಿದಾನಪ್ಪಾ ನಮ್ಮ ಭದ್ರ

**ಮರಿಯಪ್ಪ** – ಇನ್ನೇಂಥಾದ್ದು ಮಾಡಬೇಕು ಆ ನಿನ್ನ ಮಗಾ. ಮಾಡಿದ ಕೆಟ್ಟತನಾ ಹೇಳೊದಕ್ಕೆ ನಮಗಿಷ್ಟವಿಲ್ಲ. ಯಾವ ಬಾಯಿಂದ ಹೇಳಬೇಕು ಆ ಹೊಲಸತನಾನ

**ವೆಂಕಪ್ಪ** – ಅವನ ಬಾಯಿ ಅನ್ನೋದು ಬ್ಯಾನಿ ಆಗಿಬಿಟ್ಟಿತ್ತು. ಅದೀಗ ಹೇಳಾದ ಸಹಿತ ಬರೋದಿಲ್ಲ

**ಸಂಗವ್ವ** – ಅಂಥಾದ್ದೇನೂ ಮಾಡಿದಾನಪ್ಪ ನಮ್ಮ ಭದ್ರ

**ವೆಂಕಪ್ಪ** – ನೋಡ ಸಂಗವ್ವ, ನಿನ್ನ ಮಗಾ ಮಾಡಿದ ಕೆಲಸ ಪರಮ ನೀಚತನದ್ದು. ನೀನು ಹಡೆದದ್ದು ಮಗನ್ನಲ್ಲ ಸಂಗವ್ವ, ಹಾವಿನ ಮರಿಯವ್ವ, ಹಾವಿನ ಮರಿ. ಈ ಹುಡುಗಿ ಶೀಲ ಕೆಡಿಸಲಿಕ್ಕೆ ಹೋಗಿದ್ದ

**ಲಕ್ಷ್ಮಿ** – ಆಂ... ಹೂಂ.... ಹೌದು

**ಸಂಗವ್ವ** – ಶೀಲ ಕೆಡಿಸಲಿಕ್ಕೆ??? ನನ್ನ ಮಗನೆ? ... ಅಯ್ಯೋ ಪಾಪಿಷ್ಟ, ಎಂಥಾ ಕೆಲಸಕ್ಕೆ ಕೈ ಇಟ್ಟಪ್ಪಾ ಇವನು

**ವೆಂಕಪ್ಪ** – ಈ ಹುಡುಗಿ ಶೀಲ ಕೆಡಿಸಲಿಕ್ಕೆ ಹೋಗಿದ್ದ, ಹುಡುಗಿ ಒಪ್ಪಲಿಲ್ಲ ಹಿಡಿದು ಮುಂದಲೆ ಕೂದಲಾ ಕೊಯಿದು ಕಳಿಸ್ಯಾನ

**ಸಂಗವ್ವ** – ಅಯ್ಯೋ ಶಿವ ಶಿವ... ಎಂಥಾ ದುರ್ಬುದ್ಧಿ. ಮದುವೆಗೆ ನಿಂತ ಹುಡುಗಿಯ ಮುಂದಲೆ ಕೂದಲಾ ಕೊಯ್ದು ಮುಂದೆ ಯಾವ ನರಕಕ್ಕೆ ಹೋಗಬೇಕು ಅಂತಿದ್ದಾನು ಈ ಹಂದಿಯಂಥವನು

**ವೆಂಕಪ್ಪ** – ಮುಂದಿನ ತಿಂಗಳಲ್ಲಿ ಸಾವುಕಾರ ತನ್ನ ಮಗಳ ಮದುವೆ ಮಾಡುವ ವಿಚಾರ ಇಟ್ಟುಕೊಂಡಿದ್ದು, ಹಿಂಗ ಮಾಡಿದರೆ ಹ್ಯಾಂಗ ಈ ಹುಡಿಗ್ಗೆ... ಕೂದಲ ಯಾವಾಗ ಬರಬೇಕು.... ಇದರ ಮದುವೆ ಎಂದಾಗಬೇಕು.... ಮುಹೂರ್ತ ಸಿಗತಾವೇನು? ಒಂದು ನಮೂನಿ ಕಟಿಂಗ ಮಾಡಿ ಕಟಿಂಗ ಮಾಡಿ ಕೈ ಬಿಟ್ಟಾನ.... ಇನ್ನೇನು ಕ್ರಾಫ್ ಬಾಚಿಕೊಂಡು ಆಡ್ಯಾಡಬೇಕಾ?

**ಸಂಗವ್ವ** – ಸಾಕಾಯಿತಪ್ಪ ನನಗ ಸಾಕಾಯಿತು. ಎಲೋ ಸಿದ್ದ ನೀನS ಹೋಗಿ ಅವನು ಎಲ್ಲಿದ್ರೆ ಎಳಕೊಂಡ ಬಾ. ಇವತ್ತ ಅವನ ಜೀವ

ತಗದ ಮ್ಯಾಲೆ, ನಾನ ಜಳಕಾ ಮಾಡ್ತೀನಿ (ಸಂಗವ್ವ ಕುಡುಗೋಲು ತೆಗೆದುಕೊಳ್ಳುವಳು. ಪಾರ್ವತಿ ಕಸಿದುಕೊಳ್ಳುವಳು)

ಪಾರ್ವತಿ – ಅತ್ತೆ ಇವರ ಮಾತ ನಂಬಿ ದಯವಿಟ್ಟು ನೀವೂ ಭದ್ರಗೆ ಏನೂ ಅನ್ನಬೇಡಿ. ಹೆತ್ತ ಮಗನಿಗೆ ತಾಯಿ ಕರುಣೆಯಿಂದ ಕೊಟ್ಟಿದ್ದು ವರವಂತೆ, ಕೋಪದಲ್ಲಿ ಕೊಟ್ಟಿದ್ದು ಶಾಪವಂತೆ. ಮೊದಲು ಇವರೇನಾದರೂ ಅಪಮಾನ ಮಾಡಿರಬೇಕು. ಸಹನೆ ಇಲ್ಲದ ನಮ್ಮ ಭದ್ರ ಇವಳ ಕೂದಲಾ ಕತ್ತರಿಸಿರಬೇಕು. ಇವರ್ಯಾವ ಮಹಾ ಸಂಪನ್ನರೆಂದು ಇವರ ಮಾತ ನಂಬಿ ಮಗನ ಮೇಲೆ ಈ ರೀತಿ ಬೆಂಕಿ ಕಾರತೀರಿ?

ಲಕ್ಷ್ಮಿ – ಸಾಕ ಸುಮ್ಮನಿರೆ, ನೀನೂ ಮಹಾ ಸಂಪನ್ನಿ. ನಿನ್ನ ಮೈದುನ ಸುದ್ದಿಗೆ ಹೋಗಲಿಕ್ಕೆ ನಮಗೇನೂ ತರುಬಿ ನಿಂತಿತ್ತು

ಪಾರ್ವತಿ – ಹಾಗಿದ್ರೆ ನಿನ್ನ ಮುಂದಲೆ ಕೂದಲಾ ಕತ್ತರಿಸಲಿಕೆ ಅವನಿಗೇನು ತರುಬಿ ನಿಂತಿತ್ತು. ಸಾವಕಾರ ಮಕ್ಕಳು ಏನ ಮಾಡಿದರೂ ನಡಿತ್ತೈತಿ? ಯಾಕ ಸಾವಕಾರ್ರು ಕಳಕೊಂಡ ಮಾನಾನ ದುಡ್ಡಿನಿಂದ ಉಳಿಸಿಕೊಳ್ಳುವ ಶಕ್ತಿ ಕೊಟ್ಟಿದಾನಲ್ಲ ಆ ಚಂಡಾಲ ದೇವರೂ ಅಲ್ಲಾ

ಲಕ್ಷ್ಮಿ – ಹೂಂ....

ಮರಿಯಪ್ಪ – ಲೇ ಸಿದ್ದ ನಿನ್ನ ಹೆಂಡತಿ ಹದ್ದುಮೀರಿ ಮಾತಾಡತಾಳೆ. ನಾನು ಎಂಥವನು ಅನ್ನೋದು ಗೊತ್ತಿಲ್ಲ ಅವಳಿಗೆ

ವೆಂಕಪ್ಪ – ನೀನು ಎಂಥವನು? ನಿನ್ನ ಮಗಳೂ ಎಂಥಾ ಸಿಟ್ಟಿಂದು... ಅಂತಾ ಎಲ್ಲರಿಗೆ ತೋರಿಸಕೊಂಡು ಬಂದಿಯಲ್ಲಪ್ಪಾ. ನೀನು ಸುಮ್ಮನಿರು

ಸಂಗವ್ವ – ಕೈ ಮುಗಿತೀನಪ್ಪ. ಮನಿಗೆ ಬಂದ ಮೇಲೆ ನಾನೆಲ್ಲ ಅವನಿಗೆ ಬುದ್ಧಿ ಕಲಸ್ತೀನಿ. ತಂಗೀ ನೀನೂ ವಯಸ್ಸಿನಲ್ಲಿ ಸಣ್ಣವಳು. ನನ್ನ ಮಗಾ ಮಾಡಿದ್ದು ಅಪರಾಧ ಬಲು ದೊಡ್ಡದು, ನನ್ನ ಮುಖಾ ನೋಡಿ ಇದೊಂದು ಸಲ ನನ್ನ ಮಗನ್ನ ಕ್ಷಮಿಸಿ ಬಿಡವ್ವ (ಪಾದಕ್ಕೆ ಬೀಳುವಳು)

ವೆಂಕಪ್ಪ – ಛೇ ಛೇ ಇದೇನು ಮಾತು ಅಂತ ಆಡತೀ ಸಂಗವ್ವ, ವಯಸ್ಸಿನಲ್ಲಿ ದೊಡ್ಡವಳಾಗಿ ನೀನು ಆ ಹುಡುಗಿ ಕಾಲ ಹಿಡಿಯುವದೇ? ಏಳು

ಸಂಗವ್ವ ಆಗಿದ್ದು ಆಗಿ ಹೋಯಿತು. ಕೆಂಚಪ್ಪ ಯಾವಾಗ ಯಜಮಾನ ಮನುಷ್ಯಳು ಸಣ್ಣ ಹುಡುಗಿ ಕಾಲ ಹಿಡಿದು ವಿನಯದಿಂದ ಕೇಳತಾಳ ಅಂದ ಮ್ಯಾಲೆ ನ್ಯಾಯ ಉಳೀತೇನು – ನಿಕ್ಕಾಲಿ ನಡೀರಿ

**ಮರಿಯಪ್ಪ** –ಏನೋ ನ್ಯಾಯ ಮುಗೀತು ಅಂತ ಕೇಳಾಕ ಕರಕೊಂಡ ಬಂದಿಯೇನೋ

**ವೆಂಕಪ್ಪ** – ಊರ ಜನಾ ಎಲ್ಲಾ ನಿಮ್ಮನ್ನು ನೋಡ್ಲಿ ಅಂತ ಕರಕೊಂಡ ಬಂದೀನಿ, ತೋರಸ್ತೀನಿ ಆಯಿತು. ನಮ್ಮೂರಾಗ ನಾನು ಹೇಳ್ತೀನಿ ಅಂದರೆ ಕೈಕೋರ್ಟಿನ ತೀರ್ಪು ಇದ್ದಂಗ ನಡಿರಿ !

**ಮರಿಯಪ್ಪ** – ನೋಡ ಸಂಗವ್ವ.... ನಿನ್ನ ಮುಖಾ, ನಿನ್ನ ಹಿರೇಮಗ ಸಿದ್ದನ ಮುಖ, ನೋಡಿ ಬಿಟ್ಟು ಹೋಗತಿನಿ ಯಾಕ?

**ವೆಂಕಪ್ಪ** – ಹುಡುಗಿ ಸಣ್ಣದು

**ಮರಿಯಪ್ಪ** – ಸುಮ್ಮನಿದ್ದರೆ ನನ್ನ ಊರಿಗೆ ಮಸಿ ಹತ್ತತ್ತ

**ವೆಂಕಪ್ಪ** – ನಿನ್ನ ಊರಿಗೆ ಮಸಿ ಅಷ್ಟ ಯಾಕ ಡಾಂಬರ ಹತ್ತತ್ತು ಅನ್ನು. ನಿನ್ನ ಮಗ ಮನಿಗೆ ಬಂದ ಕೂಡಲೆ ಏನಂತ ಹೇಳ್ತಿದಿ. ಹುಡಿಗೆ ಸಣ್ಣದು ಅಂತ ಹೇಳು.... ನಡಿರಿ

**ಲಕ್ಷ್ಮಿ** – ಹೂಂ.... ಹೂಂ.... ನಾ ಬರಾಕವಲ್ಲೆ, ಹೂಂ ಹೂಂ ನಾನೊಲ್ಲೆ ಕೆಂಚಪ್ಪಜ್ಜ. ವೆಂಕಪ್ಪ ಕಾಕಾ, ಅಪ್ಪಾ ನಾವಿವರಿಗೆ ಸಾಲಾ ಕೊಟ್ಟಿವಲ್ಲಾ ... ಒಂದು ನಯಾಪೈಸಾ ಬಿಡೋದಿಲ್ಲ. ಹೂಂ ಮನಿ ಬಿಡಸ್ತೀನಿ ಹೊರಗ ಹಾಕತೀನಿ

**ವೆಂಕಪ್ಪ** – ಮನಿ ಹ್ಯಾಂಗ ಬಿಡಸಾಕಬರತ್ತ. ಸಿದ್ದ ನಿಮ್ಮಲ್ಲೇ ದುಡಿತಾನ. ನೀನೂ ಹೇಳಿದಕ್ಕೆ ಹೂಂ ಅನ್ನೋನೇನೂ ನಾವೂ

**ಲಕ್ಷ್ಮಿ** – ಹೂಂ ನಾನೊಲ್ಲೆ ಅಪ್ಪಾ ಹೂಂ (ವೆಂಕಪ್ಪನ ತಲೆಗೆ ಬಡಿಯುವಳು)

**ವೆಂಕಪ್ಪ** – ಮರಿಯಪ್ಪ ಒಂದೊಂದು ಊರ ಬಿಡಿಸಿದವರೂ ನಾವು... ಒಂದೊಂದು ಊರ ಸುಡಿಸಿದವರೂ ನಾವು.... ಮಂದ್ಯಾಗ ನಿನ್ನ ಮಗಳೂ ನನ್ನ ಬಡದಳು.... ಇದಕ್ಕೆ ಒಳ್ಳೆ ನ್ಯಾಯಾ ತಂದೆ ನಾನೂ

**ಲಕ್ಷ್ಮಿ** – ಆಕಿ ಜಿಗ ಜಿಗದೇ ಮಾತಾಡತಾಳೆ... ಆಕಿ ಜಿಗಜಿಗದೆ ಮಾತಾಡತಾಳೆ (ಕಾಲಿಗೆ ಬೀಳಿಸುವಂತೆ ತೋರಿಸುವಳು)

**ವೆಂಕಪ್ಪ** – ನಿಮಗ್ಯಾರಿಗೂ ತಿಳಿಲಿಲ್ಲಾ ಹೌದಲ್ಲ. ಸಂಗವ್ವನ ಸೊಸಿ ಸಿದ್ದನ ಹೆಣ್ತಿ ನಿನಗ ನಿನ್ನ ಮಗಳಿಗೆ ತಿರತಿರಗಿ ಮಾತಾಡಿದಳು. ಅದಕೆ ಆಕೆ ಕೈಲಿ ಕಾಲುಹಿಡಿಸೊ ಅಂತಾಳ ಲಕ್ಷ್ಮಿ ... ಯಾಕವ್ವ

**ಲಕ್ಷ್ಮಿ** – ಹೂಂ.....

**ವೆಂಕಪ್ಪ** – ಏನ ಸಂಗವ್ವ ನಿಮಗ ಸ್ವಲ್ಪರ ತಿಳಿತದೋ ಇಲ್ಲೊ.... ಅವರ ಮನ್ಯಾಗ ದುಡಿತೀರಿ ಅಂದ್ರೇನೂ... ಅವರ ಮಗಳಿಗೆ ನಿನ್ನ ಮಗಾ ಈ ರೀತಿ ಮಾಡಿ ಕಳಿಸ್ಯಾನಂದ್ರೇನೂ. ಊರ ಜನಾ ಎಲ್ಲಾ ನೋಡ್ಲಿ ಅಂತ ನಾವೂ ಕರಕೊಂಡು ಬಂದೀವಂದನೂ, ಮತ್ತೆ ನಿನ್ನ ಸೊಸಿ ಜಿಗಜಿಗದ ಮಾತಾಡತಾಳಂದ್ರೇನು. ಇವರೆಲ್ಲಾ ನಿಮ್ಮ ಮನಿ ಸುಡತೀವಂತ ಬಂದಿದ್ರು ನಾನಿದ್ದೇ ಅಂತ ನ್ಯಾಯ ಮುಗಿತು. ತಪ್ಪಾಗತದ ಕಾಲ ಹಿಡಿಸು (ಪಾರ್ವತಿ ಕಾಲಿಗೆ ಬೀಳುವಳು)

**ಲಕ್ಷ್ಮಿ** – ಏ ಚೂರಬ್ಯಾಡೇ

**ವೆಂಕಪ್ಪ** – ನಡೀರಿನ್ನ (ಎಲ್ಲರೂ ಹೋಗುವರು. ವೆಂಕಪ್ಪ ತಿರಿಗಿಬಂದು) ಏನ ಸಂಗವ್ವ ನಿಮಗ ಸ್ವಲ್ಪರ ತಿಳಿತದೊ ಇಲ್ಲೊ? ಊರಾಗ ನಮ್ಮಂಥ ಹಿರಿಯರೂ ಮುಖ ಎತ್ತಿ ತಿರಗಲಾರದಂಗಾಯಿತಲ್ಲ. ನಿನ್ನ ಮಗಾ ಮನಿಗೆ ಬಂದ ತಕ್ಷಣ ಬಯಿದು ಬಡಿದು ಬುದ್ಧಿ ಹೇಳು. ಸ್ವತಾ ಕುಲಕರ್ಣಿಯವರೂ ಮನಿ ತನಕ ಬಂದು ಇನ್ನೊಮ್ಮೆ ಈ ಹುಡುಗಿಗೆ ಈ ರೀತಿ ಮಾಡತಕ್ಕದಲ್ಲಾಂತ ಹೇಳ್ಯಾರ ಅಂತ ಹೇಳ್ರಿ. ಹೂಂ ಮಾಡೋದಿದ್ರೆ ಮತ್ತೇನಾದರೂ ಮಾಡು ಅಂತ ಹೇಳ್ಯಾರಂತ ಹೇಳ್ರಿ (ಹೋಗುವನು)

**ಸಿದ್ದ** – ನೋಡಿದೇನವ್ವ ನಿನ್ನ ಸಣ್ಣ ಮಗ ಮಾಡಿದ ಶೂರತನ. ದುಡಿಸಿಕೊಂಡು ಅನ್ನ ಹಾಕೋ ಧಣಿ ಮ್ಯಾಗ ಅವನು ಈ ರೀತಿ ಏರಿಹೋದರೆ ನಾವು ಹ್ಯಾಂಗವ್ವ ಈ ಊರಲ್ಲಿ ಬಾಳೋದು

**ಸಂಗವ್ವ** – ಮುಖ್ಯ ನಾನು ಸಾಯಬೇಕಾಗಿತ್ತ. ಅಂದ್ರೆ ಈ ಪಾಪನೆಲ್ಲಾ ನೋಡೋ ಶಾಪ ತಪ್ಪುತ್ತಿತ್ತು. ಆದರೇನೊ ಮಾಡೋದು.... ಶಿವ ಬರದಾನಲ್ಲಾ ಈ ನನ್ನ ಹಣಿಯಾಗ. ಸಾಯೋವರೆಗೂ ನಿನಗ ಸುಖಾನೆ ಇಲ್ಲಂತ

**ಪಾರ್ವತಿ** – ಇರಲಿ ಬಿಡ್ರಿ ಅತ್ತೆ, ನೀವ್ಯಾಕ ಅಷ್ಟು ನೊಂದಕೋತೀರಿ, ಅವರು ಹೇಳಿದ್ದನೆಲ್ಲ ನಿಜ ಅಂತ ನಾವ್ಯಾಕ ನಂಬಬೇಕು. ನಮ್ಮ ಭದ್ರ ಇಂಥ ಕೆಲಸಕ್ಕೆ ಮನಸು ಮಾಡವನಲ್ಲ

**ಸಿದ್ದ** – ಇವನು ಮಾಡದಿದ್ರೆ ಲಕ್ಷ್ಮೀನೇ ಮನಸ್ಸು ಮಾಡಿ ತನ್ನ ಕೂದ್ಲಾ ತಾನ ಕತ್ತರಿಸಿಕೊಂಡು ಇವನ ಮೇಲೆ ಅಪವಾದ ಹೊರಸಿದಳು ಅಂತೀಯಾ

**ಪಾರ್ವತಿ** – ಇದ್ದರೂ ಇರಬಹುದು. ಇದೇನೂ ಆಗಲಾರದ ಮಾತೇನು?

**ಸಿದ್ದ** – ಅಷ್ಟಕ ಬಾಯಿಮುಚ್ಚು.... ನನಗ ಎದುರು ವಾದಿಸಲಿಕ್ಕೆ ಬರಬೇಡಾ

**ಗುಂಡ** – (ಭದ್ರಿಯೊಂದಿಗೆ ಬಂದು) ಬಂದ ನೋಡಪ್ಪಾ ನಿಮ್ಮ ಭದ್ರ... ಅಕಾ ಹ್ಯಾಂಗ ನೋಡತಾನಪ್ಪಾ ಹಾವಿಗೆ ಎರಗೋ ಹದ್ದಿನಂಗ

**ಸಿದ್ದ** – ಲೇ ಬಾರೋ ಇಲ್ಲಿ. ಗುಂಡಾ ನೀ ನಿಮ್ಮ ಮನಿಗೆ ಹೋಗು (ಗುಂಡ ಹೋಗುವನು) ಲೇ ಪಾರು ನೀನೂ ಆ ಬಾಕಲಾ ಹಾಕು. ಹೂಂ ಹಾಕತೀಯಾ ತಗೊಳ್ಳೊ ಬಾರಕೋಲು....

**ಭದ್ರ** – ಅಣ್ಣ ಅತ್ತಿಗೆಯ ಮೇಲೆ ಯಾಕೆ ಕೋಪಿಸಿಕೊಳ್ಳತಿಯಾ? ಬೇಕಿದ್ದರೆ ಹೇಳು ನಾನ ಹಾಕತೀನಿ

**ಸಿದ್** – ನೀನು ಹಾಕೋದು ಬಿಡೋದು ಎಲ್ಲಾ ಮುಗಿಸಿ ಬಿಟ್ಟಿದ್ದಿಯಲ್ಲೋ. ಇಷ್ಟೊಂದು ಸಟೆದು ನಿಂತು ಮಾತಾಡಿಸಲಿಕ್ಕೆ ನಾಚಿಕೆಯಾದ್ರೂ ಆಗತ್ತಿಲ್ಲೋ ನಿನ್ನ ಮನಸ್ಸಿಗೆ

**ಭದ್ರ** – ನಾಚಿಕೆಯಾಗಲಿಕ್ಕೆ ನಾನೇನೂ ಅಂಥಾದ್ದು ಮಾಡೀನೀ ಮಾಡಬಾರದ್ದು

**ಸಿದ್ದ** – ಮತ್ತೆ ಎದುರು ನಿಂತ ಮಾತಾಡತೀ ಏನೋ (ಹೊಡೆಯುವನು)

**ಸಂಗವ್ವ** – ಇರ್ಲಿ ಬಿಡಲೋ ಸಿದ್ದಾ. ಸಿಟ್ಟಿನಿಂದ ಹೊಡೆದು ಕೊಲ್ಲಬೇಡಾ ಸಾವಕಾಶ ರಮ್ಮಿಸಿ ಹೇಳೊ

**ಸಿದ್ದ** – ನೀನು ಸುಮ್ನ ಇರವ್ವ. ಇಷ್ಟೋತ್ತನಕ ಯಾವ ಸುಡಗಾಡಕ್ಕೆ ಹೋಗಿದ್ದೀಯೋ ಸಾಯಲಿಕ್ಕೆ

**ಭದ್ರ** – ಹಳ್ಳಕ್ಕ ಹೋಗಿದ್ದೆ ಮೀನ ಹಿಡಿಯಲಿಕ್ಕೆ

ಸಿದ್ದ – ಹಳ್ಳ ಒಂದು ನಿನ್ನ ಕಳ್ಳತನಕ್ಕೆ ಅನುಕೂಲ ಕಲ್ಪಿಸಿಕೊಡುವ ಜಾಗ ಆಗಿಬಿಟ್ಟಿದೆ ಅಲ್ಲವೆ? ಹಳ್ಳದಲ್ಲಿ ಕುಳಿತು ಮಾನುಳ್ಳ ಹೆಂಗಸರ ಮಾನ ಕಳಿತಿಯಾ ಪಾಪಿ! (ಹೊಡೆಯುವನು)

ಸಂಗವ್ವ – ಸಾಕ ಬಿಡಲೋ ಸಿದ್ದ, ನಿನ್ನ ಗಂಡನ್ನ ಹಿಡಿಕೊಳ್ಳೇ ಪಾರು. ಇರದಿದ್ರ ಅವನ ಕೊಂದಗಿಂದಾನು

ಪಾರ್ವತಿ – (ಪಾರ್ವತಿ ಬಾರಕೋಲು ಕಸಿದುಕೊಂಡು ಗಂಡನನ್ನು ಅಡ್ಡೈಸಿ) ಅಯ್ಯೋ ಬಿಡ್ರಿ ಏನಿದು? ನಿಮ್ಮ ಅವತಾರ. ಸಿಟ್ಟಿಗೆ ಏಳೋದಕ್ಕೆ ಒಂದು ಸೀಮೆ ಇಲ್ಲವಾ

ಸಿದ್ದ – ಲೇ ಪಾರೂ ನೀವ್ಯಾರು ನನ್ನ ತಡಿಬ್ಯಾಡ್ರಿ. ಅವನ್ನ ಮುಗಿಸಿ ಮಣ್ಣು ಕೊಟ್ಟಮೇಲೆ ಮುಂದಿನ ಕೆಲಸ

ಪಾರ್ವತಿ – ಇಲ್ಲ ನಿಮ್ಮ ಸಿಟ್ಟಿದ್ರೆ ನನ್ನ ಕೊಲ್ಲಿರಿ. ಅವನ ಮೇಲೆ ಕೈ ಎತ್ತಿದರೆ ನನ್ನಾಣೆಯಾಗಿದೆ

ಸಿದ್ದ – ಅದೇನಿದ್ರೂ ಸರಿ. ಈಗ ನಾನವನನ್ನು ಉಳಿಸೋದೆ ಇಲ್ಲ ಸರಿ.....

ಪಾರ್ವತಿ – ಇಲ್ಲಾ..... ನಾನು ಸರಿಯೋದಿಲ್ಲ

ಸಿದ್ದ – ನನಗೆ ಎದುರು ವಾದಿಸ್ತಿಯಾ? ತಡಿ ಮೊದಲ ನಿನ್ನ ಮುಗಸ್ತೀನಿ

ಭದ್ರ – ನಿನ್ನ ಸಿಟ್ಟಿದ್ರೆ ನನ್ನ ಬಡಿದು ತೀರಿಸಕೊ, ಅತ್ತಿಗೆಯ ಮ್ಯಾಲೆ ಕೈ ಎತ್ತಬೇಡ

ಸಿದ್ದ – ಅದಕ್ಕಿಂತ ಸಿದ್ಧನಾಗಿದ್ದೇನೆ. ನಿನ್ನ ಮುಗಿಸಿ ಮಣ್ಣ ಕೊಟ್ಟ ಮೇಲೆ ಮುಂದಿನ ಮಾತು (ಹೊಡೆಯುವನು)

ಸಂಗವ್ವ – ಸಾಕ ಬಿಡಲೋ ಸಿದ್ದ (ನೂಕಿ) ನಾನಿನ್ನ ಸತ್ತಿಲ್ಲ. ನನ್ ಕಣ್ಣೆದುರು ಇಷ್ಟೆಲ್ಲ ಉರಿಬ್ಯಾಡ್ರಿ

ಸಿದ್ದ – ನೀನು ಸತ್ತರೇನು ಬಿಟ್ಟರೇನು? ನಿನ್ನಿಂದ ಇನ್ನೇನಾಗಬೇಕಾಗೇತಿ

ಸಂಗವ್ವ – ಹೌದಪ್ಪ ನನ್ನಿಂದಾ ನಿಮಗೇನಾಗಬೇಕಾಗೇತಿ. ಆಗಬೇಕಾದುದ್ದೆಲ್ಲ ಮುಗದೈತಿ. ಎಂದು ನಿಮ್ಮಪ್ಪನ ಕೈಹಿಡಿದು ಈ ಮನೆಯಲ್ಲಿ ಕಾಲಿಟ್ಟೆನೊ ಅಂದಿನಿಂದ ಈ ಕಷ್ಟಾ ಅನುಭವಿಸ್ತಾ ಇದ್ದೀನಿ. ನಿಮ್ಮಪ್ಪ ಒಂದೊಂದು ರೀತಿ ನನ್ನ ಹೊಟ್ಟೆ ಉರಿಸಿದನಾ? ಹೊರಗೆ ಹೋಗಿ ಕುಡಿಯೋದು ಮನಿಗೆ ಬಂದು ನನ್ನ ಬಡಿಯೋದು. ಬಡಿಸಿಕೊಂಡು

ಹೊಡಿಸಿಕೊಂಡು ಈ ನನ್ನ ಮೈ ಅನ್ನೋದು ಮೂಲಿಗುಂಪಾಯಿತು. ಗಂಡನ ಮಾತು ಹೋಗಲಿ, ಈಗ ಮಕ್ಕಳಾದರೂ ಸುಖವಾಗಿ ಇಟ್ಟರ? ದಿನಕ್ಕೊಂದು ರೀತಿ ದುಃಖಾನೆ ಕೊಡತೀರಿ. ಮುಖ್ಯ ನನ್ನ ಕರ್ಮ.... ಯಾರಿಗಂದ್ರೇನೂ ಮಾಡೋದು. ಹಾವಿನಂಥ ಗಂಡನ ಕೂಡಾ ಸಂಸಾರ ಮಾಡಿ ಹೂವಿನಂತ ಮಕ್ಕಳ ಬೇಡಿದ್ರೆ ಆ ಶಿವನಾದ್ರು ಎಲ್ಲಿಂದ ಕೊಟ್ಟಾನು? ಯಾಕ ನನ್ನ ಹೊಟ್ಟೆ ಉರಸ್ತಿಯಲ್ಲೊ ಭದ್ರ. ಸಂಗವ್ವನ ಮಗಾ ಹೂವಿನಂಥದ್ದಲ್ಲಾ ಹಾವಿನಂಥದ್ದು ಅಂತಾರಲ್ಲೊ ಊರಾಗ ಮಂದಿ. ಅಣ್ಣಾ–ತಮ್ಮಾ ಕೂಡಿ ನನ್ನ ಕತ್ತಾದ್ರೂ ಹಿಚಿಕಿ ಬಿಡ್ರಿ, ಅಂದ್ರೆ ಮುಗಿದು ಹೋಗತ್ತ ನನ್ನ ಕಥಿ

**ಸಿದ್ದ** – (ಅಳುತ್ತ) ಅವ್ವ ಸಿಟ್ಟಿನ ಕೈಗೆ ಬುದ್ದಿ ಕೊಟ್ಟು ನಿನಗೇನೇನೊ ಅಂದುಬಿಟ್ಟೆ ನಂದು ತಪ್ಪಾಯಿತವ್ವ ತಪ್ಪಾಯಿತು

**ಪಾರ್ವತಿ** – ತಾಳ್ಮೆ ಕಳಕೊಂಡು ತಮ್ಮನ ಬಡಿದಾಯಿತು. ಕಣ್ಣಲ್ಲಿ ನೀರು ಹರಿಸಿ ಅದೇನೂ ಭಾಗ್ಯ ಸುರುಕೊಂಡ್ರಿ ನೀವೀಗ? ಎಲ್ಲರ ಮನಸ್ಸಿಗೆ ಇಷ್ಟು ನೋವು ಪಡಿಸಿದರ ಅದೇನು ಬಂದ ಹಾಗಾಯಿತು ನಿಮಗೆ

**ಸಿದ್ದ** – ನಾನಾದರೂ ಎಷ್ಟಂತ ಸಹಿಸಿಕೊಳ್ಳಲಿ ಪಾರೂ? ದುಡಿಸಿಕೊಳ್ಳೊ ಸಾವಕಾರ ಮೇಲಾಗಿ ಸಾಲಾ ಕೊಟ್ಟವರು.... ಅವರ ಮಗಳಿಗೆ ಹೀಗ ಮಾಡಿದರೆ ಅವರ ನನ್ನ ಯಾವ ದೃಷ್ಟೀಲಿ ಕಂಡಾರು? ಉಣ್ಣುವ ಸ್ಥಳದಲ್ಲಿ ಉಗಳತಾ ಹೋದರೆ ನಾಳೆ ನಾಲ್ಕು ತುತ್ತು ಅನ್ನವಾದರೂ ಎಲ್ಲಿಂದ ಹುಟ್ಟೀತು?

**ಭದ್ರ** – ಉಣ್ಣೋ ಸ್ಥಳದಲ್ಲಿ ಉಗಳೋ ಕೆಲಸಾನ ಅಣ್ಣಾ ನಾನ್ಯಾವ ಕಾಲಕ್ಕೂ ಮಾಡಿಲ್ಲವಪ್ಪಾ ಮಾಡಿಲ್ಲ

**ಸಿದ್ದ** – ಮರಿಯಪ್ಪನವರ ಮಗಳ ಶೀಲ ಕೆಡಿಸಲಿಕ್ಕೆ ಹೋಗಿದ್ದಿ. ಅಂದ ಬಳಿಕ ಇದು ಉಣ್ಣೋ ಸ್ಥಳದಲ್ಲಿ ಉಗಳಿದಂತೆ ಅಲ್ಲವೇನೋ?

**ಭದ್ರ** – ಅವರ ಮಗಳ ಶೀಲಗೆಡಿಸಲಿಕ್ಕೆ ಹೋಗಿದ್ದೆ! ಯಾರು ಹೇಳಿದರಣ್ಣಾ ನಿನ್ನೆದುರು ಈ ಕೆಟ್ಟ ಮಾತು!

**ಸಿದ್ದ** – ಇನ್ಯಾರು ಲಕ್ಷ್ಮೀಬಾಯೀನೇ ಹೇಳಿದರು

**ಭದ್ರ** – ಅವಳು ಹೀಗೆ ಹೇಳಿದಳೆ?

ಸಂಗವ್ವ – ಅವರಪ್ಪನೂ ಹೇಳಿದರು

ಭದ್ರ – ಸುಳ್ಳು, ಅವರೆಲ್ಲಾ ಸುಳ್ಳು ಹೇಳಿದ್ದಾರೆ.

ಸಿದ್ದ – ಹೂಂ ಅವರೆಲ್ಲಾ ಸುಳ್ಳು ಹೇಳಿದಾರೆ ಅಂದರೆ, ನೀನೊಬ್ಬನೆ ಸತ್ಯ ಹರಿಶ್ಚಂದ್ರ ಅಂತ ತಿಳಕೋಬೇಕೇನೋ

ಭದ್ರ – ಅಣ್ಣಾ ನಂಬಿದರೆ ನಂಬು, ಬಿಟ್ಟರೆ ಬಿಡು. ಇಂಥ ಪಾಪದ ಕೆಲಸಕ್ಕೆ ಇದುವರೆಗೆ ನಿನ್ನ ಮಗ ಮನಸು ಮಾಡಿಲ್ಲವ್ವ ಮಾಡಿಲ್ಲ (ಅಳುತ್ತ) ನೋಡಣ್ಣಾ ಅವರು ಶ್ರೀಮಂತರು. ಕಾರಣಾ ನಮಗೆ ಸಾಲಾ ಕೊಟ್ಟವರು. ಅವರಿಗೆ ಮಣಿದು ಬದುಕಬೇಕೆಂದು ಹಾಗೆ ನೀನೂ ಹೇಳತಿಯಾ?

ಸಿದ್ದ – ..... ಹೌದು ಈ ರೀತಿ ನಡೆಯದಿದ್ದರೆ ನಾವಿಲ್ಲಿ ಜೀವಿಸಲು ಸಾಧ್ಯವಿಲ್ಲ

ಭದ್ರ – ಅದೇಕೆ ಸಾಧ್ಯವಿಲ್ಲಣ್ಣಾ? ಅವರು ಅಪ್ಪನಿಗೆ ಕೊಟ್ಟ ಸಾಲವಾದರೂ ಎಷ್ಟು? ಕೇವಲ ಐದುನೂರು ರೂಪಾಯಿ. ಅಷ್ಟರಲ್ಲಿ ಪ್ರತಿ ವರ್ಷ ಐದು ಸಾವಿರ ರೂಪಾಯಿ ಉತ್ಪನ್ನ ನಮ್ಮ ಹೊಲದಿಂದಲೇ ತಿನ್ನುತ್ತಾ ಇಲ್ಲವೆ? ಅಲ್ಲದೆ ಅದೇ ಹೊಲದಲ್ಲಿ ಅಪ್ಪನಿಂದ ಹಿಡಿದು ನಾವೆಲ್ಲ ದುಡಿದರೂ ದುಡಿಮೆಗೆ ಆ ಮರಿಯಪ್ಪ ಒಡಲಿಗಾಗುವಷ್ಟ ಅನ್ನ ಒಂದು ಸಲವಾದರೂ ಕೊಟ್ಟನೇನಣ್ಣಾ? ಇಷ್ಟಿದ್ದರೂ ನೀನವರಲ್ಲಿ ಭಕ್ತಿ ಇಡಬೇಕೆಂದು ಹೇಳುತ್ತಿಯಾ? ಭಕ್ತಿಗೆ ಒಲಿಯುವ ಜಾತಿಯಲ್ಲಣ್ಣಾ. ಬಡಿತಕ್ಕೆ ಮಣಿಯುವ ಜಾತಿ ನೋಡಣ್ಣಾ? ನಾನೀಗ ಕೊನೆಯ ಮಾತನ್ನೇ ಹೇಳಿಬಿಡುತ್ತೇನೆ. ಇನ್ನು ಮೇಲೆ ಆ ಮರಿಯಪ್ಪ ನಮ್ಮಪ್ಪ ಮಾಡಿದ ಸಾಲ ಮುಟ್ಟಿತೆಂದು ಹೊಲ ಮನೆಗಳನ್ನು ಬಿಟ್ಟು ಕೊಡಬೇಕು. ನನ್ನ ಮೇಲೆ ಹೊರಿಸಿದ ಬಲತ್ಕಾರದ ಅಪವಾದ ಸುಳ್ಳೆಂದು ಒಪ್ಪಿಕೊಳ್ಳಬೇಕು. ನಂತರ ನಮ್ಮ ಮೇಲೆ ಮಾಡಿದ ದೌರ್ಜನ್ಯ ತಪ್ಪೆಂದು ಆ ತಂದೆ ಮಗಳು ನಮ್ಮವ್ವನ ಕಾಲು ಹಿಡಿದು ಕ್ಷಮೆ ಕೇಳಬೇಕು. ಇದಕ್ಕೆ ಒಪ್ಪದಿದ್ದರೆ ಅಣ್ಣಾ ನನಗೆ ಜೇಲಾದರೂ ಸರಿ, ಗಲ್ಲಾದರೂ ಸರಿ ಆ ಮರಿಯನ ಕೊಲೆ ಮಾಡದೆ ಬಿಡಲಾರೆ?

ಸಿದ್ದ – ಸಾಕು ಸಾಕು ಭದ್ರ ಈ ಕೆಟ್ಟಮಾತು! ಅವರ ಕಿವಿಗೆ ಬಿದ್ದರೆ ನಮ್ಮನ್ನೆಲ್ಲ ಜೀವಂತ ಸುಡಿಸಿ ಬಿಟ್ಟಾರು? ಕೇಳಿದೇನವ್ವ ಈವರೆಗೂ ನಮ್ಮ ವಂಶದಲ್ಲಿ ಇಂಥ ಕೆಲಸ ಮಾಡೋರೂ ಹುಟ್ಟಿದ್ದರೇನವ್ವ

**ಸಂಗವ್ವ** – ಇಂಥ ಕೊಲೆಕಡುಕ ಮಗನ್ನ ಹಡೆದು ಇವನ ತಾಯಿ ಅನ್ನಿಸಿಕೊಳ್ಳೋದಕ್ಕಿಂತ ನೇಣು ಬಿಗ್ದುಕೊಂಡು ಪ್ರಾಣ ಕಳೆದುಕೊಳ್ಳೋದು ಮೇಲು. ಆ ದೇವರೂ ಅನ್ನೋ ಚಂಡಾಲ ಇವನಿಗಾದರೂ ಸಾವ ತರಲ್ಲ, ನನ್ನ ಕಣ್ಣಾರ ಮುಚ್ಚುವಲ್ಲ (ಅಳುತ್ತ) ಸಿದ್ಧಪಜ್ಜ ನಾನೇನು ಪಾಪ ಮಾಡೀನಿ ಅಂತ ನೋಡಬಾರದ್ದನ್ನೆಲ್ಲ ನೋಡಾಕ ಹಚ್ಚಿದ್ದಿಯಪ್ಪಾ

**ಭದ್ರ** – (ಒಳಗೆ ಹೋಗುವಾಗ) ಅವ್ವಾ.... ಅವ್ವಾ....

**ಸಂಗವ್ವ** – ಸಾಕ ಸರಿಯಲೋ, ನೀ ನನಗ ಮುಖಾ ತೋರಿಸಬೇಡಾ (ನೂಕಿ ಹೋಗುವಳು)

**ಭದ್ರ** – ಅವ್ವಾ.... ಅವ್ವಾ....

**ಸಿದ್ದ** – ಲೇ ಸರಿಯೋ ಆಚೆ, ನೋಡು ತಪ್ಪಾಯಿತೆಂದು ಆ ತಂದೆ ಮಗಳ ಕಾಲು ಹಿಡಿದು ಕ್ಷಮೇ ಕೇಳುವದಾದರೆ ನೀನೀ ಮನೆಯಲ್ಲಿರಬೇಕು

**ಭದ್ರ** – ಇಲ್ಲದಿದ್ದರೆ?

**ಸಿದ್ದ** – ನಮ್ಮೆಲ್ಲರ ಬಾಂಧವ್ಯ ಕಡಿದುಕೊಂಡು ಈ ಮನೆಯಿಂದ ದೂರಾಗಬೇಕು ಹೂಂ. ಹೇಳು

**ಭದ್ರ** – ಸಾಧ್ಯವಿಲ್ಲಣ್ಣ, ಅವರಿಗೆ ಮಣಿದು ನಾ ಬದುಕಲಾರೆ

**ಸಿದ್ದ** – ಹಾಗಿದ್ದರೆ ಇಂದಿನಿಂದ ಈ ಮನೆ ನಿನ್ನ ಪಾಲಿಗಿಲ್ಲ. ಪಾರೂ ನೀನೂ ಇವನಿಗೆ ಅನ್ನ ಹಾಕಕೂಡದು.... ಭದ್ರ ನನ್ನಾಜ್ಞೆಯನ್ನು ಉಲ್ಲಂಘಿಸಿ ಮನೆಯಲ್ಲಿ ಕಾಲಿಟ್ಟಿಯಾದರೆ, ನಿನಗೆ ಅವ್ವನ ಆಣೆಯಾಗಿದೆ (ಸಿದ್ದ ಒಳಗೆ ಹೋಗುವನು)

**ಭದ್ರ** – ಅತ್ತಿಗೆಮ್ಮಾ..... ನಾನಿನ್ನು ಬರ್ತೀನಿ (ನಮಸ್ಕರಿಸುವನು)

**ಪಾರ್ವತಿ** – ನನ್ನ ಬಿಟ್ಟು ಹೋಗ್ತೀಯಾ ಭದ್ರ

**ಭದ್ರ** – ನನ್ನಿಂದ ಯಾರಿಗೂ ಸುಖವಿಲ್ಲ ಅತ್ತಿಗೆಮ್ಮಾ..... ಅವರೂ ಹಾಯಾಗಿ ಇರೋದಾದರೆ, ನಾನ್ಯಾಕ ಹಾಳಾಗಿ ಹೋಗಬಾರದು ನನ್ನ ಸಲುವಾಗಿ. ನೀನ್ಯಾಕ ಅಳತೀಯಾ ಅತ್ತಿಗೆಮ್ಮಾ

**ಪಾರ್ವತಿ –** ಅಳೋದೊಂದು ಬಿಟ್ರ ಇನ್ನೇನು ಉಳಿತಪ್ಪಾ ಈ ನಿನ ಅತ್ತಿಗೆಯ ಬಾಳಿನಲ್ಲಿ

**ಭದ್ರ –** ಅತ್ತಿಗೆಮ್ಮಾ.... ನಗನಗತಾ ನೀನೊಂದು ಸಲ ಆಶೀರ್ವಾದ ಮಾಡಿ ಬಿಡು ಅತ್ತಿಗೆಮ್ಮಾ, ನಿನ್ನ ಆಶೀರ್ವಾದ ಒಂದಿದ್ದರೆ ನನಗಿನ್ಯಾತರ ಭಯಾನೂ ಇಲ್ಲ. ಮನಸ್ಸಿನಲ್ಲಿ ಕಟ್ಟಿದ ನನ್ನ ಗುರಿಯನ್ನು ನಾ ಮುಟ್ಟೇತೀರುವೆನು

**ಪಾರ್ವತಿ –** ನೋಡ ಭದ್ರ ಅವರು ಹಣವಂತರು. ಹಣ ಇದ್ದವರ ಹೆಣಕ್ಕೂ ಬೆಲೆ ಇದೆ. ಬಡವರ ಯಾವ ಇಷ್ಟವನ್ನೂ ದೈವ ಈ ಪ್ರಪಂಚದಲ್ಲಿ ನಡೆಯಗೊಟ್ಟಿಲ್ಲ ಭದ್ರ

**ಭದ್ರ –** ಅತ್ತಿಗೆ ಅವರಲ್ಲಿ ಹಣದ ಬಲವಿದ್ದರೆ ನನ್ನ ತೋಳಿನಲ್ಲಿ ಬಲವಿವೆ. ಮನದಲ್ಲಿ ಸೇಡು ತೀರಿಸುವ ಅಖಂಡ ಛಲವಿದೆ. ಅತ್ತಿಗೆ ಇನ್ನು ಮೇಲೆ ಆ ಮರಿಯಪ್ಪನ ಮಗಳು ಲಕ್ಷ್ಮಿ ಕೇವಲ ನನ್ನ ಹೆಣ್ಣು

**ಪಾರ್ವತಿ –** ಹಾ.... ಏನೂ?

**ಭದ್ರ –** ಹೌದು ಅತ್ತಿಗೆಮ್ಮಾ ಈ ಹಟದಲ್ಲಿ ನನ್ನ ಘಟ ಬಿದ್ದು ಹೋದರೂ ಸರಿ ನಾನವಳನ್ನು ಪಡೆಯದೇ ಬಿಡಲಾರೆ

**ಪಾರ್ವತಿ –** ಅಂದರೆ ನೀನು ಅವಳನ್ನು....

**ಭದ್ರ –** ಹೌದು, ಸುಳ್ಳು ಅಪವಾದ ಹೊರಿಸಿ ಅಪರಾಧಿಯನ್ನಾಗಿಸಿದ ಅವಳು ನನ್ನ ಪಾದಕ್ಕೆ ಕಣ್ಣು ಹಚ್ಚಿ ತನ್ನ ಹೆಣ್ತನವನ್ನು ನನಗರ್ಪಿಸಬೇಕು. ಅವರಪ್ಪನ ಸಂಪತ್ತನ್ನೆಲ್ಲ ಸುಲಿದು ನಾನು ಬಡವರಿಗೆ ಹಂಚಬೇಕು. ಅತ್ತಿಗೆ ಈ ಭದ್ರಗೆ ಹಾಲು ಕುಡಿಸಿ ತಾಯಿತನ ಪಡೆದ ನಿನ್ನ ಮೇಲೆ ಪಾಪದೃಷ್ಟಿ ಹರಿಸಿದ ಆ ಮರಿಯನ ಸಂಪತ್ತಿಗೆ ಇದೇ ಭದ್ರ ಹಾಕುವ ಸವಾಲು (ಕೊಡ್ಲಿ ತೆಗೆದುಕೊಂಡು) ಅತ್ತಿಗೇ ಇಂದಿನಿಂದ ನಮ್ಮೂರಲ್ಲಿ ಮರಣದ ಮಹಾ ನವಮಿಯೇ ಪ್ರಾರಂಭ. ಸವಾಲು! ಸವಾಲು! ಸಂಪತ್ತಿಗೆ ಸವಾಲು (ಹೋಗುವನು)

===**====**===

## ದೃಶ್ಯ – ೬

ಜಂಗಲ್ ರಸ್ತಾ

(ಮರಿಯಪ್ಪ, ಲಕ್ಷ್ಮಿ ಹೊಸಬಟ್ಟೆ ಖರೀದಿ ಮಾಡಕೊಂಡು ಬರುವರು. ಎದುರಿಗೆ ಕೆಂಚಪ್ಪ ಬರುವನು.)

**ಕೆಂಚಪ್ಪ –** ನಮಸ್ಕಾರ್ರಿ ಸಾವಕಾರ್ರೆ, ಹಬ್ಬದ ಬಟ್ಟೆ ಖರೀದಿಗೆ ಹೋಗಿದ್ರೇನು?

**ಮರಿಯಪ್ಪ –** ಹೌದೋ ಕೆಂಚ... ಮಗಳ ಬೇಡಿಂದ ಇಲ್ಲ ಅನ್ನಾಕ ಬರತ್ತ ಮುನ್ನೂರ ಅರವತ್ತು ರೂಪಾಯಿ ಬಟ್ಟೆ ಖರೀದಿ ಮಾಡಿಕೊಂಡು ಬಂದೆ ಕೆಂಚಪ್ಪ. ಲಕ್ಷ್ಮವ್ವನ ಬಿಟ್ರ ನನಗ ಯಾರದರಾ? ಮಗಳು ಅಂದ್ರ ಇಕೀನ

**ಲಕ್ಷ್ಮಿ –** ಮಗಾ ಅಂದ್ರ ನಾನಾ

**ಮರಿಯಪ್ಪ –** ಅಂದವಮ್ಯಾಲೆ ಇಂದ್ರನ ಐರಾವತ ಬೇಡಿದರೂ ತಂದು ನಿಲ್ಲಿಸಬೇಕಾಗುತದ...

**ಕೆಂಚಪ್ಪ –** ಏ... ಲಕ್ಷ್ಮವ್ವನವರ ಪುಣ್ಯ ಬಾಳ ದೊಡ್ಡದೈತ್ರಿಯಪ್ಪಾ. ಅವ್ವಾವರಿಗೆ ವರ ನೋಡಿದ್ರಾ... ಇಲ್ರಿ

**ಮರಿಯಪ್ಪ –** ಹುಡುಕೀನಲ್ಲ... ಹುಬ್ಬಳ್ಳ್ಯಾಗ ಬಂಗ್ಲೇದ ಬಸವರಾಜಪ್ಪನ ಮಗನಿಗೆ ಕೊಡಬೇಕು ಅಂತ ಮಾಡೀನಿ. ಎರಡ ಅಡತಿ ಅಂಗಡಿ ಅದಾವು. ಅಲ್ಲದೆ ಸಿನಿಮಾ ಥೇಟರ ಕಟ್ಟಿಸ್ಯಾರ. ಈ ವರ್ಷ ಬೆಳಿ ತೊಗೊಂಡು ಮಗಳ ಮದುವೆ ಮಾಡಿಬಿಡತೀನಿ

**ಕೆಂಚಪ್ಪ –** ಮಾಡ್ರಿ. ನೋಡವ್ವ, ನಿನ್ನ ಮದುವ್ಯಾಗ ತುಪ್ಪ ಉಂಡ್ರ ಮೂರ ದಿವಸ ಕೈ ನಾರತಿರಬೇಕು.

**ಲಕ್ಷ್ಮಿ –** ಮದುವ್ಯಾಗ ತುಪ್ಪಾನೆ ಹಾಕುದಿಲ್ಲ ಬರೇ ಉಪ್ಪಷ್ಟೇ ಹಾಕತೀವಿ

ಕೆಂಚಪ್ಪ – ನೀ ಹಾಕಲೀಕ್ರ ನಿನ್ನ ಗಂಡ ಹಾಕತಾನೇಳ್ವ, ನಾವೂ ಉಂಡಾ ಉಣತೀವಿ. ಸಾವಕಾರ ಒಂದು ಬೀಡಿ ಇದ್ರ ಕೊಡ್ರಿ

ಮರಿಯಪ್ಪ – ಬೀಡಿ ಇಲ್ಲಲ್ಲೊ ಸಿಗರೇಟ ಸೇದು. (ಕೊಡುವನು)

ಕೆಂಚಪ್ಪ – ಯಪ್ಪಾ ಇದಕ್ಕೆ ಎರಡು ಕಡಿ ಬಾಯಿ ಐತಿ! ಯಾವ ಕಡೆ ಹಚ್ಚಬೇಕ್ರಿ!

ಲಕ್ಷ್ಮಿ – ಯಪ್ಪಾ ಎರಡೂ ಕಡಿ ಹಚ್ಚಿ, ಅವನ ಬಾಯಾಗ ಇಡು

ಮರಿಯಪ್ಪ – ಕೆಂಚಾ ಊರಾಗ ಒಂದು ಮರ್ಡರ ಮಾಡಿಸಬೇಕಾಗಿದೆ. ಹುಡುಗರನ್ನು ತಯಾರಿಸು

ಕೆಂಚಪ್ಪ – ಹುಡುಗ್ರು ತಯಾರಿ ಅದಾವರಿ. ನಿಮ್ಮ ಕಡಿ ನಂದು ಸ್ವಲ್ಪ ಕೆಲಸ ಇತ್ರಿ

ಮರಿಯಪ್ಪ – ನನ್ನ ಕಡೆ ಏನಬೇಕ ಹೇಳು?

ಕೆಂಚಪ್ಪ – ನನಗಾ ಎರಡು ಸಾವಿರ ರೂಪಾಯಿಗಳು ಬೇಕಾಗ್ಯವಾವರಿ. ನನ್ನ ಮಗನ ಮದುವೆ ಮಾಡತೀನ್ರಿ

ಮರಿಯಪ್ಪ – ಕೆಂಚಾ ನಿನ್ನ ಎರಿ ಹೊಲಾ ಇತ್ತಲ್ಲ

ಕೆಂಚ – ಐತ್ರಲ್ರಿ

ಲಕ್ಷ್ಮಿ – ಇದ್ರ ನಮ್ಮಪ್ಪನ ಹೆಸರಿಲಿ ಹಚ್ಚು

ಮರಿಯಪ್ಪ – ಅಷ್ಟು ಮಾಡು, ಎರಡು ಸಾವಿರ ಕೊಡಿತೀನಿ

ಕೆಂಚಪ್ಪ – ಆಗಲ್ರಿ.... ನಾ ಹೇಳಿದ್ದು ಮರಿಬ್ಯಾಡ್ರಿ (ಹೋಗುವನು)

ಲಕ್ಷ್ಮಿ – ಅಪ್ಪಾ ಅಲ್ಲಿ ಬಟ್ಟಿ ಅಂಗಡಿ ಹತ್ರ ಒಬ್ಬಾಕಿ ಹೆಣಮಗಳ ಬಂದಿದ್ದಿಲ್ಲ

ಮರಿಯಪ್ಪ – ಆ ಕೆಂಪನಕಿ

ಲಕ್ಷ್ಮಿ – ಉದ್ದನಕಿ

ಮರಿಯಪ್ಪ – ಜಡಿ ಹಾಕ್ಕೊಂಡಕಿ

ಲಕ್ಷ್ಮಿ – ಹೂ ಮುಡಕೊಂಡಾಕಿ

ಮರಿಯಪ್ಪ – ಹೌದೇಳ ಏನಾಯಿತು?

ಲಕ್ಷ್ಮಿ – ಯಪ್ಪಾ ಅಕಿ ಹೆಣಮಗಳಲ್ಲ ಜೋಗಮ್ಮಾ

ಮರಿಯಪ್ಪ – ಹೂ. ಹೌದಾ ನಾವೂ ಬಲು ನೋಡಿದ್ದೀವಿ

ಲಕ್ಷ್ಮಿ – ಯಾಪಾ ಅಕಿ ಕೊಳ್ಳಾಗ ಒಂದು ಸರಾ ಇದ್ದಿಲ್ಲ ಅಂತ ನೆಕಲೀಸ್ ನನಗೊಂದು ಮಾಡಿಸು

ಮರಿಯಪ್ಪ – ಮಾಡಿಸ್ತೀನಿ, ನಡಿಯವ್ವ

ಲಕ್ಷ್ಮಿ – ಯಪ್ಪಾ ನನಗೊಂದು ಬೋರಮಳ ಸರಾ ಮಾಡಿಸೋ

ಮರಿಯಪ್ಪ – ನಿಮ್ಮವ್ವ ಹಾಕ್ಕೊಳೊ ವಸ್ತ್ರಾ ವಡಿವೆ ರಗಡ ಅದಾವು ಅವನ್ನ ಹಾಕ್ಕೊಳ್ಳವ್ವ

ಲಕ್ಷ್ಮಿ – ಅವೆಲ್ಲ ಹಳೆ ಮಾದರಿವು. ನಾ ವಲ್ಲೆ ಹೋಗು. ಬರೇ ಗೆಜ್ಜೀಟೀಕ್ಕಿ ಗುಂಡಿನಸರ ಎಲ್ಲವ್ವನ ಸರ ... ನಾ ವಲ್ಲೆ ಹೋಗು (ಅಳುವಳು)

ಮರಿಯಪ್ಪ – ಸಾಕಾತವ್ವ ನನಗ ಮಾಡಿಸ್ತಿನೇಳು

ಲಕ್ಷ್ಮಿ – ಏನೇನು ಮಾಡಸ್ತಿ? ಬೋರಮಳಸರ, ಬೇವಿನಕಾಯಿಸರ, ಚಪ್ಪಲಹಾರ ಇವೆಲ್ಲ ಮಾಡಸ್ತಿಯಿಲ್ಲೊ

ಮರಿಯಪ್ಪ – ಯಲ್ಲಾ ಮಾಡಿಸ್ತೀನಿ ನಡಿ ಮನಿಗೆ

ಲಕ್ಷ್ಮಿ – ಮನಿಗೆ ನಾನೊಲ್ಲೆ ಹೋಗು. ಯಪ್ಪಾ ಹೂಂ....

ಮರಿಯಪ್ಪ – ಮತ್ತೇನು ಮಠಕ್ಕೆ ಹೋಗೋನಾ?

ಲಕ್ಷ್ಮಿ – ಮದಲ ಪತ್ತಾರರ ಮನಿಗೆ ಹೋಗೋನು. ಯಪ್ಪಾ ಐ ಭದ್ರ!

ಮರಿಯಪ್ಪ – ಭದ್ರ ಕೈಯಾಗ ಕೊಡ್ಲಿ ಬ್ಯಾರೆ ಹಿಡಿದಾನವ

ಲಕ್ಷ್ಮಿ – ಏ ಬಾರಪ್ಪ ಅವ ಏನ ಮಾಡ್ತಾನ (ಭದ್ರ ಕೊಡ್ಲಿ ಹಿಡಕೊಂಡ ರುದ್ರ ವೇಷದಲಿ ಬರುವನು)

ಭದ್ರ – (ಕೊಡ್ಲಿಯನ್ನು ಲಕ್ಷ್ಮೀಯ ಕತ್ತಿಗೆ ಹಚ್ಚಿ) ಲಕ್ಷ್ಮಿ ನಿಲ್ಲು ಅಂದು ನಿನ್ನನ್ನು ನಾನು ಬಲತ್ಕರಿಸಲು ಬಂದಿದ್ದೆನೆ? ಅಂದು ನಿನ್ನನ್ನು ಬಲತ್ಕರಿಸಿದೆನೆ? ಮಾತಿನ ಬರದಲ್ಲಿ ರೋಷ ಉಕ್ಕಿ ನಿನ್ನ ಕೂದಲು ಕತ್ತರಿಸಿದೆನೆ ವಿನಹ ನಿನ್ನ ಹೆಣ್ತನವನ್ನು ಕಾಮದ ಕಣ್ಣಿನಿಂದ ಕಂಡೆನೆ? ಹೂ ಹೇಳು

ಲಕ್ಷ್ಮಿ – ಇಲ್ಲ

ಭದ್ರ – ಹಾಗಿದ್ದರೆ ಮತ್ತೇಕೆ ಸುಳ್ಳು ಬೊಗಳಿದೆ? ಶೀಲಗೆಡಿಸಲಿಕ್ಕೆ ಬಂದಿದ್ದನೆಂದು. ನನ್ನ ತಾಯಿಯ ಮುಂದೆ ಹೇಳಿ ಯಾವ ಕಾರಣಕ್ಕಾಗಿ ತಾಯಿ ಮಕ್ಕಳ ಮಧ್ಯೆ ಕಲಹದ ಬೆಂಕಿ ಹುಟ್ಟಿಸಿದಿ? ಯಾವ ಉದ್ದೇಶದಿಂದ ನನ್ನನ್ನು ಮನೆಯವರಿಂದ ಬೇರ್ಪಡಿಸಿ ಪರದೇಶಿಯನ್ನಾಗಿ ಮಾಡಿದಿ? ಲಕ್ಷ್ಮಿ ನನ್ನ ತಾಯಿಯ ಮೇಲೆ ಆಣೆಯಿಟ್ಟು ಹೇಳುತ್ತೇನೆ. ಈ ಕ್ಷಣದವರೆಗೆ ನಾನು ನಿನ್ನನ್ನು ಪಾಪದ ಕಣ್ಣಿನಿಂದ ಕಂಡಿಲ್ಲ. ಶೀಲಭಂಗಕ್ಕೆ ಯತ್ನಿಸಿಲ್ಲ. ನೀನು ಶ್ರೀಮಂತರ ಮಗಳು, ಸುಂದರಿಯೂ ಹೌದು. ನಿನ್ನ ತಂದೆಯನ್ನು ಸರಿ ತೂಗಬಲ್ಲ ಶ್ರೀಮಂತ ಹುಡುಗನ ಕೈಹಿಡಿದು ಹೋಗಬೇಕಾದ ನೀನು ಇನ್ನು ಕೇವಲ ನನ್ನ ಹೆಣ್ಣು. ಮರಿಯಪ್ಪ ಇಂದಿಲ್ಲ ನಾಳೆ ನಿನ್ನ ಮಗಳಿಗೆ ತಾಳಿ ಕಟ್ಟಿ ಗಂಡನಾಗುವೆನೆಂದು ನಿನ್ನೆದುರು ಇವಳ ಕೆನ್ನೆ ಮುಟ್ಟಿ ಹೇಳುತ್ತೇನೆ. ಲಕ್ಷ್ಮೀ ಜಿದ್ದು ಹಾಕಿದವರ ಮನೆಯ ಹಣ್ಣನ್ನು ಗೆದ್ದೊಯ್ಯದಿದ್ದರೆ ನಮ್ಮಪ್ಪನ ಮಗನೇ ನಾನಲ್ಲ (ಹೋಗುವನು)

ಮರಿಯಪ್ಪ – ಕೈಯಾಗ ಕೊಡ್ಲಿ ಹಿಡಿದಿದ್ದ ಅಂತಾ ಬದುಕಿದಿ, ಮಗನೆ. ಇರದಿದ್ರ ಹೆಡಗಿ ತುಂಬತಿದ್ದೆ. ಇರಲಿ ಬಿಡವ್ವ... ನೀನೇನು ಮನಸ್ಸಿಗೆ ಹಚ್ಚಿಕೋಬೇಡ. ಇವತ್ತೇ ಮಾದರಕೇರಿ ಹುಡುಗರಿಗೆ ಹೇಳಿ ಆ ಕಿಡಿಗೇಡಿನ ಹಿಡತ್ತರಿಸಿ ಜೀವಂತ ಸುಡಿಸಿ ಬಿಡತೀನಿ. ಮಗಳ ಮಾನಕ್ಕೆ ಕೈಚಾಚಿದ ಆ ಮನೆಹಾಳನ ರುಂಡ ತಗಸದಿದ್ದರೆ ನನ್ನ ಹೆಸರು ಮರಿಯಪ್ಪನೇ ಅಲ್ಲ. ಈ ಒಂದು ಕೆಲಸಕ್ಕೆ ನನ್ನ ಸಂಪತ್ತೆಲ್ಲ ಹಾಳಾದರೂ ಚಿಂತೆಯಿಲ್ಲ

ಲಕ್ಷ್ಮಿ – ಅಪ್ಪಾ ಅದೇನಿದ್ರೂ ಆ ಭದ್ರಿಯ ವಿಷಯದಲ್ಲಿ ವಿಷಕಾರುವ ವಿಚಾರ ಇಷ್ಟಕ್ಕೆ ಸಾಕು! ಅವನ ಸಮಾಚಾರ ಅದೇನಿದ್ರೂ, ನನಗಿರಲಿ. ನೀನು ಮುಂದುವರಿಯೋದೇ ಬೇಡ

ಮರಿಯಪ್ಪ – ಹಾಗೆಂದ್ರೇ ಹೇಗಮ್ಮಾ? ಅವನಿಗೆ ಹೆದರಿ ಹೀಗಂತಿಯಾ? ಒಂದು ದಿನಾ ಸರಾಯಿ ಕುಡಿಸಿದರೆ ಸಾಕು. ಇವನ್ನು ಸೀಳಿ ಹಾಕುವವರು ಸಾವಿರ ಜನ ಸಿಗತಾರೆ

ಲಕ್ಷ್ಮಿ – ಅಪ್ಪಾ ಅವನ ಮೇಲೆ ಕೈ ಮಾಡುವ ಮಾತು ಬಿಟ್ಟು ಮತ್ತೇನಾದರೂ ಆಡು. ನೀನು ಯಾರಿಗೂ ಹೇಳೋದು ಬೇಡ, ಭದ್ರನ್ನ ಸೀಳೋದು

ಬೇಡ. ನನ್ನ ಈ ಮಾತ ಮೀರಿ ನೀನೇನಾದರೂ ಅವನಿಗೆ ಕೇಡು ಬಗೆದಿಯಾದರೆ ನಾನು ನನ್ನ ಜೀವನಾ ಇಡುವದಿಲ್ಲ (ಹೋಗುವಳು)

ಮರಿಯಪ್ಪ – ಮಗೂ ಲಕ್ಷ್ಮೀ ಲಕ್ಷ್ಮೀ ಇದೊಳ್ಳೆ ವಿಚಿತ್ರ. ಹುಲಿಯಂತಹ ನನ್ನ ಮಗಳು ಭದ್ರ ಕೆನ್ನೆ ಮುಟ್ಟಿದ ತಕ್ಷಣ ಇಲಿಯಂತೆ ಮಾಡಹತ್ತಿದಳಲ್ಲ. ಅವನ ಧೈರ್ಯ ಸಾಹಸಗಳಿಗೇನಾದರೂ ಇವಳ ಮನಸ್ಸು ಮಾರು ಹೋಗಿರಬಹುದೆ? ಹಾಗಾದರೆ ಮುಂದೆ ನನ್ನ ಗತಿ? ನನ್ನ ದಾರಿ ಯಾವದು? ಭದ್ರಗೆ ಮಗಳನ್ನು ಒಪ್ಪಿಸಿ ಮದುವೆ ಮಾಡುವದೆ? ಥೇ ಊರಿಗೇ ಶ್ರೀಮಂತನಾದ ನನ್ನ ಯೋಗ್ಯತೆ ಎಲ್ಲಿ? ನನ್ನ ಮನೆಯ ಎಂಜಲು ತಿಂದು ಬದುಕಿದ ಭದ್ರ ಎಲ್ಲಿ? ಭದ್ರ ಮುಳುಗದೇ ನನ್ನ ಸ್ಥಾನ ಮಾನ ಉಳಿಯದು ಊರಲ್ಲಿ. ಅವನ ಕೊಲೆ ಮಾಡಿಸಲೇಬೇಕು (ಕೊಲೆಗಡುಕ ಭೈರ ಬರುವನು)

ಭೈರ – ನಮಸ್ಕಾರ ಧಣಿ

ಮರಿಯಪ್ಪ – ಯಾರು ಭೈರ

ಭೈರ – ಹೌದು ಧಣಿ

ಮರಿಯಪ್ಪ – ಇಷ್ಟು ದಿವಸ ಎಲ್ಲಿಗೋ ಹೋಗಿದ್ದ್ಯೋ ಮಗನೆ

ಭೈರ – ತಂಗೀನ್ನ ನೋಡಾಕಂತ ಮುಂಬೈಗೆ ಹೋಗಿದ್ದೆ ಧಣಿ

ಮರಿಯಪ್ಪ – ಮೂರು ತಿಂಗಳ ದಿವ್ಸ ಮುಂದ ಕೂಡಿಸಿಕೊಂಡು ಮುಖಾ ನೋಡತಿದ್ದೇನೋ ಆ ನಿನ್ನ ತಂಗೀದು? ನಿನ್ನ ಧಣಿಯ ತಂದೆಯ ಮೇಲೆ ಮೆಣಸು ಅರಿಯುವ ಚಾಂಡಲರು ಹುಟ್ಟಿದ್ದಾರೆ ಊರಲ್ಲಿ

ಭೈರ – ಈ ಕೊಲೆಗಡುಕ ಭೈರನಿಗೆ ಅನ್ನಹಾಕಿ ಸಲುಹೂ ಧಣಿಯ ಮೇಲೆ ಮೆಣಸು ಅರಿಯುವ ಚಾಂಡಾಲ ಹುಟ್ಟಿದನೆ? ಅವನ್ಯಾರು ಹೇಳೋ ಧಣೀ

ಮರಿಯಪ್ಪ – ಅವನೇ ಆ ಭದ್ರಾ!

ಭೈರ – ಯಾರು ಆ ಸಂಗವ್ವನ ಮಗಾ ಭದ್ರಾನೇ? ಹೇಳು ಧಣಿ ಯಾವಾಗ ತಗೀಬೇಕು ಅವನ ಪರಾಣಾನ

ಮರಿಯಪ್ಪ – ಭದ್ರ ಹಗುರಲ್ಲ, ಒಳ್ಳೆ ಧೈರ್ಯಶಾಲಿ

ಭೈರ – ಏ ತಗೀ ಧಣೀ ಆ ಚೋಟುದ್ದ ಹುಡುಗನಿಗೆ ಎಷ್ಟು ಹೆದರತೀರಿ? ಆ ಕುಲಕರ್ಣಿ ವೆಂಕಪ್ಪನ ಕಾಲು ಮುರಿದು ಆ ತಳವಾರ ಚೆನ್ನವ್ವನ ತಂದು ನಿಮ್ಮ ಪಾದಕ್ಕೆ ಒಪ್ಪಿಸಿದ ಈ ಹುಲಿಯಂತಹ ಬಹಾದ್ದೂರ ಭೈರನಿಗೆ ಚೋಟುದ್ದ ಹುಡುಗ ಈಡೇನ್ರಿ? ನೀವು ಹೇಳೊದೊಂದೆ ತಡ ಏಕೆ ಮಾರ್ ದೋ ತುಕಡಾ

ಮರಿಯಪ್ಪ – ನಾನ ಹೇಳಿದಾಗ ಈ ಕೆಲಸ ಮಾಡಬೇಕು

ಭೈರ – ಆಗಲಿ ಧಣಿ... ಬರ್ತೀನಿ ಧಣಿ ... ನಮಸ್ಕಾರ ಧಣಿ (ಹೋಗುವನು)

ಮರಿಯಪ್ಪ – ಹೌದು ಭದ್ರನ ಕೊಲೆ ಮಾಡಿಸಲೇಬೇಕು. ಭದ್ರನ ಕೊಲೆಯಾಗಲೇಬೇಕು (ವೆಂಕಪ್ಪ ಬರುವನು)

ವೆಂಕಪ್ಪ – ಏನು ಸಾವುಕಾರು ಊರಿಂದ ಯಾವಾಗ ಬಂದದ್ದು?

ಮರಿಯಪ್ಪ – ಸಾವುಕಾರನ ಸಂಪತ್ತಿಗೆ ಬೆಂಕಿ ಬಿತ್ತು. ಆ ಭದ್ರ....

ವೆಂಕಪ್ಪ – ಮತ್ತೇನು ಮಾಡಿದನಪ್ಪಾ?

ಮರಿಯಪ್ಪ – ನನ್ನ ಕಣ್ಣೆದುರೆ ನನ್ನ ಮಗಳ ಕೆನ್ನೆ ಮುಟ್ಟಿ ಹೋದಾ.

ವೆಂಕಪ್ಪ – ಹಾಂ ಹೌದಾ. ನಾನು ನಿಮಗೆ ಮೊದಲೆ ಹೇಳಿದೆ. ನೀನೆಲ್ಲಿ ಕೇಳಿದಿ. ರೊಕ್ಕದ ಸೊಕ್ಕಿನಿಂದ ದಕ್ಕದ ಹೆಣ್ಣಿಗೆ ಕಣ್ಣುಹಾಕಿ ಊರಿಗೆ ಮಿಕ್ಕಿನಿಂತ ಹುಡುಗನ್ನ ಎದುರು ಹಾಕೊಂಡಿ? ಹೆದರಿ ನಡಿಯದಾ ಹುಡುಗನ ಸಿಟ್ಟು ಹಾವಿನ ಜಾತಿಯದು. ಭಯದ ಹದ್ದರಿಯದೇ ತಾಯಿಯ ಮುದ್ದಿನಲ್ಲಿ ಬೆಳೆದ ಭದ್ರಾ ಪ್ರಸಂಗ ಬಿದ್ದರೆ ಕಾಲ ರುದ್ರಾ ! ಪುಣ್ಯಕ್ಕೆ ನಿನ್ನ ಮಗಳ ಕೆನ್ನೆ ಮುಟ್ಟಿ ನಿನ್ನ ಮಾನ ಉಳಿಸಿದ್ದಾನೆ. ಹಿಡಿದು ನಿನ್ನ ಮಗಳ ಮುಖಕ್ಕೆ ಮುದ್ದು ಕೊಟ್ಟಿದ್ದರೆ ನೀನೇನು ಮಾಡತಿದ್ದಿ

ಮರಿಯಪ್ಪ – ಏನು ಮಾಡತಿದ್ದಿ? ನೋಡುತ್ತಿರು ವೆಂಕಪ್ಪ. ಈ ಮರಿಯಪ್ಪ ಕೈಲಾಗದ ಹೇಡಿಯಲ್ಲ. ನನ್ನ ಸಂಪತ್ತೆಲ್ಲ ಹಾಳಾಗಿ ಹೋದರೂ ಚಿಂತೆಯಿಲ್ಲ. ಆ ಭದ್ರನ ಕಥೆ ನಮ್ಮ ಕೈಯಲ್ಲಿ ಮುಗಿಯಲೇಬೇಕು

ವೆಂಕಪ್ಪ – ಅಂದ್ರೆ ಖತಮ್ ಮಾಡಸೂನು ಅಂತಿಯಾ?

ಮರಿಯಪ್ಪ – ಹೌದು

ವೆಂಕಪ್ಪ – ಬೇಡ

ಮರಿಯಪ್ಪ – ಯಾಕೋ

ವೆಂಕಪ್ಪ – ಕೊಲೆ ಮಾಡಿಸಿ ನಮ್ಮ ತಲೆ ನಾವು ಉಳಿಸಿಕೊಳ್ಳಬೇಕಿದ್ರೆ ದುಡ್ಡು ಎಷ್ಟು ಖರ್ಚಾಗುತ್ತೆ ವಿಚಾರಮಾಡು. ಏನು ಮಾಡಿದರೂ ಬುದ್ಧಿ ಓಡಿಸಬೇಕು, ಕೆಲಸ ಮುಗಿಸಬೇಕು.

ಮರಿಯಪ್ಪ – ಓಡಿಸು ಬುದ್ಧೀನ

ವೆಂಕಪ್ಪ – ನನ್ನ ಬುದ್ಧೀನ ಓಡಿಸಲ್ಯಾ? ತಾ ಒಂದು ಸಿಗರೇಟು. ಮರಿಯಪ್ಪ ನಿನ್ನೆ ಕೆಂಜೋಳ ಕೊಯಿಸಿ ಗೂಡು ಹಾಕಿಸಿರಬೇಕಲ್ಲ

ಮರಿಯಪ್ಪ – ಕೊಯಿಸಿನಲ್ಲ.... ಕರಿ ಹೊಲದಾಗ ಹದಿನೈದು ಅಕ್ಕಡಿವೂ ಹನ್ನೆರಡು ಗೂಡು ಬಿದ್ದಾವು

ವೆಂಕಪ್ಪ – ಹೌದಾ ಮರಿಯಪ್ಪ ಬುದ್ಧಿ ಓಡಿತು. ನಾನು ಹೇಳಿದ ಹಾಗೆ ಯಾರಿಗೂ ತಿಳಿಯದಂತೆ ಆ ನಿನ್ನ ಎಲ್ಲಾ ಗೂಡುಗಳಿಗೂ ನೀನೆ ಬೆಂಕಿ ಹಚ್ಚಿಸಿ ಬಿಡು

ಮರಿಯಪ್ಪ – ಏನೋ ವೆಂಕಪ್ಪ ಗೂಡಿಗ ಬೆಂಕಿ ಹಚ್ಚೋದೆ? ಅದು ಅನ್ನ. ಅನ್ನ ಹ್ಯಾಂಗೋ ಸುಡೋದು

ವೆಂಕಪ್ಪ – ಯಜ್ಞಕ್ಕೆ ಮೊದಲು ಬಲಿಯಿಕ್ಕುವದೇ ಅನ್ನ--ತುಪ್ಪ. ಇದು ರಣಯಜ್ಞ. ಈ ಯಜ್ಞ ಒಮ್ಮೆ ಸಾಂಗವಾಗಿ ನೆರವೇರಿದರೆ ಭದ್ರ ಅದರಲ್ಲಿ ಬಿದ್ದು ದಗ್ಧನಾಗುತ್ತಾನೆ. ಗೂಡು ಸುಟ್ಟ ಅಪರಾಧವನ್ನು ಭದ್ರನ ತಲೆಗೆ ಹೊರಿಸಿ ಭದ್ರವಾದ ನಾಲ್ಕು ಸಾಕ್ಷಿಗಳನ್ನು ಒದಗಿಸಿದರೆ, ಹುಡುಗ ನಾಶವಾಗಿ ಹೋಗುತ್ತಾನೆ. ಆದರೆ ಸಾಕ್ಷಿ ಹೇಳೋದು ಸಿಗೋದೆ ಕಷ್ಟ. ಮೊದಲೆ ಇದು ಸುಳ್ಳು ಸಾಕ್ಷಿ ಹೇಳಿದವರ ಗತಿ ಕಷ್ಟ

ಮರಿಯಪ್ಪ – ಸಾಕ್ಷಿಗೇನು ಕೊರತೆಯಿಲ್ಲ ವೆಂಕಪ್ಪ, ಸಾಕಷ್ಟು ಜನಾ ಸಿಗತಾರೆ. ನನ್ನ ಸಾಲದಲ್ಲಿ ಸಿಕ್ಕವರೆಲ್ಲ ನಾವು ಕರೆದಾಗ ಬಂದು ನಾವು ಹೇಳಿ ಕೊಟ್ಟಂತೆ ಹೇಳಿ ಹೋಗ್ತಾರೆ

ವೆಂಕಪ್ಪ – ಹಾಗಿದ್ದರೆ ನಾನು ಹೇಳಿದಂತೆ ಆ ನಿನ್ನ ಎಲ್ಲಾ ಗೂಡುಗಳಿಗೆ ಬೆಂಕಿ ಹಚ್ಚಿಸಿ ಬಿಡು. ಯಾಕೆ ಅನುಮಾನವೇನು?

ಮರಿಯಪ್ಪ – ಅನುಮಾನವೇನಿಲ್ಲ ವೆಂಕಪ್ಪ. ನೂರಾರು ಚೀಲ ಜೋಳ ಸುಮ್ಮನೆ

ಸುಟ್ಟು ಹೋಗ್ತಾವಲ್ಲಾಂತ. ಈಗಿದ್ದ ಜೋಳದ ಬೆಲೆಯನ್ನು ನೀನಿನ್ನು ಕೇಳಿಲ್ಲ

ವೆಂಕಪ್ಪ – ಹುಚ್ಚಾ ಜೋಳದ ಬೆಲೆಗೆ ಹೋಗುವೆಯಲ್ಲೊ? ನೋಡು ಗೂಡು ಸುಟ್ಟ ಅಪರಾಧವನ್ನು ಭದ್ರಿಯ ತಲೆಗೆ ಕಟ್ಟೋದು. ವಾರೆಂಟ ಹುಟ್ಟಿಸೋದು ಪೋಲೀಸರ ವಶಕ್ಕೆ ಒಪ್ಪಿಸೋದು ಲಾಕಪಿಗೆ ಹಾಕಿಸೋದು. ಒದಿಸೋದು. ಆ ಮೇಲೆ ಜೇಲಿಗೆ ಅಟ್ಟಿಬಿಡೋದು. ಹೇಗಿದೆ ನನ್ನ ಐಡಿಯಾ ಗುಡ್ ಐಡಿಯೋನಾ ನಂದು. ದುಡ್ಡು ಕೇಳಿದ್ರೆ ಕೊಡುವಂಥ ಐಡಿಯಾ ಬರಿ ಸಿಗರೇಟಗೆ ಒದರಿಬಿಟ್ಟೆ ನಾನು

ಮರಿಯಪ್ಪ – ಏ ಹೌದಪ್ಪ

ವೆಂಕಪ್ಪ – ನೆನಪಿರಲಿ ಮರಿಯಪ್ಪ. ಆ ಭದ್ರನ ಸೊಕ್ಕು ಮುರಿಯದ ವಿನಹ ನಿನಗೆ ಊರಲ್ಲಿ ಉಳಿಗಾಲವಿಲ್ಲ. ಅವನ ಬದುಕು ನಿನ್ನ ಸಾವು! ನೀನು ಬದುಕಬೇಕಿದ್ದರೆ ಆ ಹುಡುಗ ಸಾಯದಿದ್ದರೆ ಬಿಡಲಿ, ಅವನ ಸೊಕ್ಕಾದರೂ ನಿನ್ನ ಕೈಯಲ್ಲಿ ಮುರಿಯಲೇ ಬೇಕು. ಇಷ್ಟೆಲ್ಲ ಆಗಬೇಕಾದರೆ ಮೊದಲು ನಿನ್ನ ಗೂಡಿಗೆ ನೀನೆ ಬೆಂಕಿ ಹಚ್ಚಬೇಕು. ಅದನ್ನ ನಾನು ನಿಂತು ನೋಡಬೇಕು.

ಮರಿಯಪ್ಪ – ಆಗಲಿ ನೀನು ಹೇಳಿದಂತೆ ನನ್ನ ಎಲ್ಲ ಗೂಡಗಳಿಗೆ ನಾನೇ ಬೆಂಕಿ ಹಚ್ಚಿ ಬಿಡತೀನಿ. ಏನಾಗೋದೊಮ್ಮೆ ಆಗಿ ಹೋಗಲಿ

ವೆಂಕಪ್ಪ – ತಗೊ ಕಡ್ಡಿ ಹಚ್ಚ ಬೆಂಕಿ (ಮರಿಯಪ್ಪ ಹೋಗುವನು) ಹೋಗಲೇ ಕಿವಿ ಹರಕ ಹೋಗು! ಈ ಕುಲಕರ್ಣಿ ವೆಂಕಪ್ಪನ ಕಾಲು ಮುರಿಸಿದ ಧೀರ ಅಂತ ಕುಣಿತಿದ್ದೆಲ್ಲ ಅದು ಆ ತಳವಾರ ಚೆನ್ನಿ ಎದುರಿಗೆ. ಈಗ ಕುಣಿದಾಡೋ ಬೆಂಕಿಯಲ್ಲಿ ಬಿದ್ದ ಹುಳದಂತಾಯಿತು ನಿನ್ನ ಪಾಡು. ಗೂಡು ಸುಟ್ಟ ಅಪರಾಧದಲ್ಲಿ ಸಿಕ್ಕು ಬೀಳಲಿರುವ ಭದ್ರ ಬರೀ ಭದ್ರನಾಗಿ ಉಳಿಯುವುದಿಲ್ಲ. ಸತಿಯ ಸಾವಿನಿಂದ ಕೆರಳಿದ ಕಾಲರುದ್ರನ ಕೋಪವೇ ದಕ್ಷಯಜ್ಞ ಕುಂಡದಿಂದ ಸಿಡಿದೆದ್ದು ಬಂದ ವೀರಭದ್ರ ಮುಂದೆ ಅವನೇ ಬುದ್ಧಿವಂತಿಕೆಯಿಂದ ನಿನ್ನ ಕೊಲೆ ಗೈಯ್ಯುವನು. ವಜ್ರಾಯುದ ತಲೆ ಇದ್ದವನಿಗೆ ಯಾವ ಕಾಲದಲ್ಲೂ ಬೆಲೆ ಇದೆ. ಈ ಕಾಂಗ್ರೆಸ್ ಸರಕಾರ ನಮ್ಮ ಕುಲಕರ್ಣಿ ಹುದ್ದೆ ಕಸಗೊಂಡಿರಬಹುದು. ಆದರೆ ದೇವರು ತಲೆಯಲ್ಲಿ ಹಾಕಿದ

ಬುದ್ಧೀನS ಕಸಗೊಳ್ಳತಾನೇನು? ನಮ್ಮ ಹೊಳ್ಗೀನ ತುಪ್ಪದಲ್ಲೇ ತೇಲಿಸಿ ತಿನ್ನು ಅಂತಾ ಬ್ರಹ್ಮದೇವರು ನಮ್ಮ ಹಣೆಯಲ್ಲಿ ಬರೆದು ಭೂಮಿಗೆ ಕಳಿಸಿದ್ದಾನೆ. ಅಂದ ಬಳಿಕ ಅದನ್ನೇನಾದರೂ ಆ ಕಾಂಗ್ರೆಸ್ಸಿನವರು ತಿದ್ದತಾರಂದ್ರೇನು? ಎಲ್ಲರ ತಲೆ ಮೇಲೆ ಬಂದಿರುವ ಹಾಗೆ ನಮ್ಮ ತಲೆಯ ಮೇಲೂ ಈ ಗಾಂಧಿ ಟೊಪ್ಪಿಗೆ ಬಂದಿದೆ. ಆದರೆ ನಮ್ಮ ಬುದ್ಧಿ ಇದರ ಮೇಲೆ ಹರದಾಡತಾ ಇದೆ. ಏನಂದ್ರೂ ನಮ್ಮಂಥವರದೇ ಈ ಕಾಲ

॥ ಪದ ॥

ಸತ್ಯವಂತರಿಗೆ ಇಲ್ಲಾ ಈ ಕಾಲ ॥ ದುಷ್ಟ ಜನರಿಗಿದು ಸುಭಿಕ್ಷ ಕಾಲ ॥
ಸತಿಸುತರಾ ನಂಬಲರಿಯದ ಕಾಲ ॥ ಸವಿಯಲ್ಲವಿದೂ ವಿಪರೀತ ಕಾಲ ॥
ನಿರ್ಮಲಾತ್ಮಕ ಶ್ರೀ ॥ ಪುರಂದರ ವಿಠಲ ಮರ್ಮದೊಳು ॥
ಭಜಿಸಲರಿಯದ ಕಾಲ ॥ ಸತ್ಯ ॥

===***====***===

# ದೃಶ್ಯ ೭

ಗವಿ ಸೀನು

(ಗುಂಡ ಗವಿ ಸುತ್ತ ತಿರುಗುತ್ತ ಇದ್ದಾನೆ. ಲಕ್ಷ್ಮಿ ಮುಸುಕು ಹಾಕಿಕೊಂಡು ಬರುವಳು. ಗುಂಡ ಹೆದರಿಸುವನು)

**ಲಕ್ಷ್ಮಿ** – ಗುಂಡಣ್ಣ

**ಗುಂಡ** – ಯಾರು ಲಕ್ಷ್ಮಿಬಾಯಿ ಇದೇನಮ್ಮ ನೀವ್ಯಾಕ ಇಲ್ಲಿ

**ಲಕ್ಷ್ಮಿ** – ನಿನ್ನ ಹತ್ರ ಒಂದು ಕೆಲಸ ಐತಿ ಗುಂಡಣ್ಣ

**ಗುಂಡ** – ಹಾಗಂತ ಹೇಳಿ ಕಳಿಸಿದರೆ ನಾನೇ ನಿಮ್ಮ ಮನಿತನಕ ಬರತಿದ್ದೆನಲ್ಲ. ಕಲ್ಲು ಮುಳ್ಳು ತುಳೀತಾ ಈ ಕಾಡಿನಲ್ಲಿ ನೀವ್ಯಾಕ ಬರಬೇಕಾಗಿತ್ತು. ಒಬ್ಬರೇ ಬಂದಿರೋ ಮತ್ಯಾರನ್ನಾದರೂ ಕರೆಕೊಂಡು ಬಂದಿರೋ?

**ಲಕ್ಷ್ಮಿ** – ಇಲ್ಲ ಗುಂಡಣ್ಣ ನಾನೊಬ್ಬಳೇ ಬಂದೀನಿ

**ಗುಂಡ** – ಅದು ಯಾಕ್ರೆಮ್ಮ? ಇಷ್ಟು ಕಷ್ಟಾಪಟ್ಟು ಯಾಕ ಇಲ್ಲಿ ತನಕ ಬಂದಿರಿ?

**ಲಕ್ಷ್ಮಿ** – ಕೆಲಸಾನ ಅಷ್ಟು ಮಹತ್ವದ್ದು ಐತಿ ಗುಂಡಣ್ಣ. ಆದ್ದರಿಂದಲೇ ಎಲ್ಲರ ಕಣ್ಣು ತಪ್ಪಿಸಿ ಇಲ್ಲಿ ತನಕ ಬಂದೀನಿ. ನಡಿಸೀ ಕೊಡತೀಯಾ ಗುಂಡಣ್ಣಾ?

**ಗುಂಡ** – ನನ್ನಿಂದ ನಡೆಸಿಕೊಡೋದು ಆದರೆ ಖಂಡಿತ ನಡೆಸಿ ಕೊಡತೀನಿ ಹೇಳ್ರೆಮ್ಮಾ ಅದೇನು

**ಲಕ್ಷ್ಮಿ** – ಸದ್ಯ ನಿನ್ನ ಗೆಳೆಯನನ್ನು ಭೆಟ್ಟಿ ಮಾಡಿಸು

**ಗುಂಡ** – ಯಾರು ಭದ್ರಿನ್ನ

**ಲಕ್ಷ್ಮಿ** – ಹೌದು

**ಗುಂಡ** – ಯಾಕಮ್ಮ ಅವನ್ಯಾಕ ಭೆಟ್ಟಿ ಮಾಡಿಸಬೇಕು. ಇಷ್ಟು ದಿವಸ ಅವನಿಗೆ

ಮಾಡಿದ್ದು ಸಾಲದು ಅಂತಾ ಮತ್ತೇನು ಮಾಡಬೇಕು ಅಂತ ಈ ಕತ್ತಲು ಮುಸುಕು ಹೊತ್ತಿನಲ್ಲಿ ಬಂದೀರಿ

**ಲಕ್ಷ್ಮಿ –** ಅಯ್ಯಯ್ಯೋ ಅದನ್ನೆಲ್ಲ ಈಗ ಮಾತಾಡೋದಕ್ಕೆ ಸಮಯ ಇಲ್ಲ ಗುಂಡಣ್ಣ. ಇವತ್ತ ರಾತ್ರಿ ಭದ್ರಿನ್ನ ಮುಗಿಸಬೇಕಂತ ನಮ್ಮಪ್ಪ ಕುತಂತ್ರ ಮಾಡ್ಯಾನ. ಕುಲಕರ್ಣಿ ವೆಂಕಪ್ಪನೂ ಇವರ ಜತೆ ಸೇರಿಕೊಂಡಾನ. ಅಂದ ಮೇಲೆ ಕೇಳೂದೇನು?

**ಗುಂಡ –** ಅಯ್ಯೋ ಈ ಮಾತು ನಮಗೆಂದೋ ತಿಳಿದಬಿಟ್ಟೈತಿ. ಅದಕೆಲ್ಲ ಹೆದರೋದಿಲ್ಲ. ಸಿದ್ಧರಾಗೇ ಇದ್ದೀವಿ ಎಂದು ಮನೆಯಿಂದ ಹೊರಗ ಹಾಕಿಸಿ ತಾಯಿ ಮುಖಾ ಮಗನಿಗೆ, ಮಗನ ಮುಖಾ ತಾಯಿಗೆ ಕಾಣದ ಹಾಗೆ ಮಾಡಿದಿರೋ ಅಂದೇ...

**ಲಕ್ಷ್ಮಿ –** ಏನಂತ

**ಭದ್ರ –** (ಹೊರಗೆ ಬಂದು) ಇನ್ನೇನಂತ? ಈ ಊರಲ್ಲಿ ಮರಿಯಪ್ಪ ಹಾಗೂ ವೆಂಕಪ್ಪನ ಮುಗಿಸಿ ನಿನ್ನ ಕೈ ಹಿಡಿಬೇಕು ಒಂದು, ಇಲ್ಲ ಅವರ ಕೈಯಲ್ಲಿ ನಾ ಸತ್ತು ಸ್ವರ್ಗ ಸೇರಬೇಕು ಒಂದು. ಲಕ್ಷ್ಮೀ ಈ ಭದ್ರ ಸಾವಿರ ಮಾತಿನವನೂ ಅಲ್ಲ, ಸಾವಿರ ವರುಷ ಬದುಕಬೇಕೂ ಅಂತ ಬಯಸಿದವನೂ ಅಲ್ಲ

**ಲಕ್ಷ್ಮಿ –** ನಿನ್ನ ಬದುಕು ನಿನಗೆ ಬೇಡವಾದರೆ ಅದು ನನಗೆ ಬೇಕು. ಅದರಲ್ಲಿಯೇ ನನ್ನ ಜೀವನದ ಬಳ್ಳಿ ಹೂ ಬಿಡಬೇಕು. ನಿನ್ನ ಸಾವಿನ ಸುದ್ದಿ ಇನ್ನೊಂದು ಸಲ ನನ್ನ ಮುಂದೆ ಎತ್ತಬೇಡ. ಅದನ್ನು ತಪ್ಪಿಸಲೆಂದೇ ನಾನಿಲ್ಲಿಯವರೆಗೆ ಬಂದಿರೋದು. ನಮ್ಮಪ್ಪ ಇವತ್ತು ನಿನ್ನ ಕೊಲ್ಲಿಸುವ ಸನ್ನಾಹದಲ್ಲಿದ್ದಾನೆ

**ಭದ್ರ –** ನಿಮ್ಮಪ್ಪ ಈ ಸುದ್ದಿ ಹಬ್ಬಿಸಿ ಬಹಳ ದಿನ ಕಳೆಯಿತು. ಅದಕ್ಕೆಲ್ಲ ನಾವು ಭಯ ಪಡೋದಿಲ್ಲ

**ಲಕ್ಷ್ಮಿ –** ಇಷ್ಟು ದಿವಸದ ಮಾತೆ ಬೇರೆ, ಇವತ್ತಿನ ಮಾತೇ ಬೇರೆ. ಗುಂಡಣ್ಣ ಇಲ್ಲಿಗೆ ಕಟ್ಟಿಗೆ ತರಲಿಕ್ಕೆ ಬಂದ ಮಾದರ ಮರಿಯ ಗವಿಯಲ್ಲಿದ್ದ ಸುದ್ದಿ ತಂದಿದ್ದಾನೆ. ಇದನ್ನ ತಿಳಿದೇ ನಮ್ಮಪ್ಪ ಕುಲಕರ್ಣಿ ವೆಂಕಪ್ಪ ಕಾಕಾ ಇವತ್ತ ರಾತ್ರಿ ಇವನ್ನ ಕೊಲೆ ಮಾಡಿಸಬೇಕೆಂದು ಹಂಚಿಕೆ ಹಾಕಿದ್ದಾರೆ. ನಮ್ಮಪ್ಪನ ಮಾತು ಅಂದ್ರೆ ಆ ಮಂದಿಗೆಲ್ಲ ಸಿದ್ದಪ್ಪಜ್ಜನ ನುಡಿ ಇದ್ದಷ್ಟು ಪವಿತ್ರ

ಭದ್ರ – ಆ ಕೇರಿ ಮಂದಿ ನನ್ನ ಮುಗಿಸ್ತಾರೊ?

ಲಕ್ಷ್ಮಿ – ಹೌದು ಭದ್ರ ನಮ್ಮೂರ ಮಾದರ ಕೇರ್‍ಯಾಗ ಕೆಲವರು ಕೊಲಗಡುಕರು ಅದಾರ. ನಮ್ಮಪ್ಪನ ಕ್ರೂರತನಕ್ಕೆ ಕುಲಕರ್ಣಿ ವೆಂಕಪ್ಪನ ಕಪಟತನ ಬೇರೆ ಬೆರೆತುಕೊಂಡಿದೆ. ಅಂದ ಮೇಲೆ ಸಾಕಷ್ಟು ಹಣ ಚೆಲ್ಲಿಯಾದರೂ ಇವತ್ತ ನಿನ್ನ ಮುಗಿಸೋ ನಿರ್ಧಾರ ಮಾಡ್ಯಾರ

ಭದ್ರ – ನನ್ನ ಮುಗಿಸೋಕೆ ಮುಂಚೆ ಆ ನಿಮ್ಮಪ್ಪನ್ನ ನಾನೇ ಮುಗಿಸಿ ಬಿಡಿತೀನಿ. ಕುಲಕರ್ಣಿ ವೆಂಕಪ್ಪನ ಜುಟ್ಟಾ ಕೀಳತೀನಿ. ನನ್ನ ಕೊಲೆ ಮಾಡಬೇಕು ಅಂದವ್ರನ್ನೆಲ್ಲಾ ಇಲ್ಲಾ ಅನ್ನಿಸಿಬಿಡತೀನಿ. ನಡಿ ಗುಂಡ ಎಂದೋ ಒಂದು ದಿನ ಮುಗಿಸಬೇಕಾದ ಹಟ ಇಂದೇ ಈ ಕ್ಷಣದಲ್ಲಿಯೇ ಮುಗಿದು ಹೋಗಲಿ

ಲಕ್ಷ್ಮಿ – ಭದ್ರಿ ..... ..... ದುಡುಕಿ ಕೆಡಕ ಆಗಬಾರದೆಂದು ಎಲ್ಲರ ಕಣ್ಣು ತಪ್ಪಿಸಿ ನಾನಿಲ್ಲಿಯವರೆಗೆ ಬಂದಿರೋದು

ಗುಂಡ – ಹೌದು ಭದ್ರಿ ಮೊದಲೇ ಕುಡುಕರ ಸಹವಾಸ

ಲಕ್ಷ್ಮಿ – ಅದನ್ನೇ ನಾನು ಹೇಳುವುದು. ಆನಿಯಾಗಿ ಕಬ್ಬು ತಿನ್ನೋದಕ್ಕಿಂತ ಇರುವೆ ಆಗಿ ಸಕ್ಕರೆ ತಿನ್ನಬೇಕು. ಶಕ್ತಿ ಉಪಯೋಗ ಆಗಲಾರದ ಈ ಘಳಿಗೆಯಲ್ಲಿ ಯುಕ್ತಿ ಹುಡಕಬೇಕು. ಗುಂಡಣ್ಣ ಈಗ ನೀನೊಂದು ಕೆಲಸ ಮಾಡು. ಈ ಗವಿ ಸುತ್ತ ಒಂದು ಸಲಾ ತಿರಗ್ಯಾಡಿ ಯಾರ ಸುಳಿವೂ ಕಂಡು ಬರದಿದ್ರೆ ಊರತನಕ ಹೋಗಿ ಅವರೇನೂ ಮಾಡ್ತಾರೋ ನೋಡಿಕೊಂಡು ಬಾ. ನಾನಿಲ್ಲಿದ್ದು ಇವನ ನೋಡಕೋತೀನಿ

ಭದ್ರ – ಹೌದು ಗುಂಡ ನೀನು ಹೋಗಿ ಅವರೇನು ಮಾಡ್ತಾರೇ ನೋಡಿಕೊಂಡು ಬಾ

ಗುಂಡ – ಆಗಲಿ ನೋಡಕೊಂಡು ಬರತೀನಿ (ಹೋಗುವನು)

ಭದ್ರ – ಲಕ್ಷ್ಮಿ ..... ನನ್ನ ಪ್ರಾಣಾ ಉಳಿಸಬೇಕು ಅಂತ ನಿಮ್ಮಪ್ಪನ ಕಣ್ಣು ತಪ್ಪಿಸಿ ಇಲ್ಲಿಯವರೆಗೆ ಬಂದಿಯಾ?

ಲಕ್ಷ್ಮಿ – ಬರೀ ನಿನ್ನ ಪ್ರಾಣ ಉಳಿಸಬೇಕಿದ್ರೆ ಈ ಸುದ್ದೀನ ಇನ್ನಾರ ಕೈಲಾದ್ರೂ ಹೇಳಿ ಕಳಿಸಿ ಥಣ್ಣಗೆ ಮನಿಯಲ್ಲಿ ಉಳಿದುಬಿಡುತಿದ್ದೆ... ಭದ್ರ.... ನನ್ನ ಕ್ಷಮಿಸ್ತಿಯಾ? (ಕಾಲಿಗೆ ಬೀಳುವಳು)

ಭದ್ರ — ನಿನ್ನ ಕ್ಷಮಿಸೋದೆ? ಯಾಕೆ ನೀನೇನೂ ಮಾಡಿದೀಯಾ?

ಲಕ್ಷ್ಮಿ — ಇನ್ನೆಂಥಾ ಅಪರಾಧ ಮಾಡಬೇಕು. ಆ ವೆಂಕಪ್ಪ ಕಾಕಾನ ಮಾತಕೇಳಿ ನನ್ನ ಶೀಲ ಕೆಡಿಸಲು ಬಂದಿದ್ದಾ ಅಂತ ನಿಮ್ಮವ್ವನ ಮುಂದೆ ಹೇಳಿ ನಿನ್ನ ಮನೆಯಿಂದ ಹೊರಗೆ ಹಾಕಿಸಿದೆನಲ್ಲ

ಭದ್ರ — ಏನೋ ಸಿಟ್ಟಿನ ಭರದಲ್ಲಿ ಆಗಬಾರದ್ದೆಲ್ಲ ಆಗಿಹೋಯಿತು. ನಾನೇನು ಸಣ್ಣ ಅಪರಾಧ ಮಾಡಿದೆನೆ? ನಿನ್ನ ಮುಂದೆಲೆ ಕೂದ್ಲಾ ಕತ್ತರಿಸಿದೆ. ನಿಮ್ಮಪ್ಪನ ಎದುರೆ ನಿನ್ನ ಕೆನ್ನೆ ಮುಟ್ಟಿದೆ. ಗಂಡಸಾದವನು ಎಂಥಾ ಸಿಟ್ಟು ಬಂದರೂ ಹೆಣ್ಣಿಗೆ ಆ ರೀತಿ ಅವಮಾನ ಮಾಡಬಾರದು. ಇದು ಪೌರುಷ ಮೆಚ್ಚುವ ಮಾತಲ್ಲ. ಅವತ್ತು, ಅವಮಾನ ಪಡಿಸಿದ್ದು ನಿನ್ನನಲ್ಲ, ಲೋಕದ ಹೆಣ್ತನವನ್ನು ಅನ್ನೋದು ನನಗೆ ಈಗ ಅರ್ಥವಾಯಿತು. ಇದೋ ಆ ಅಪರಾಧಕ್ಕಾಗಿ ನನ್ನ ಕೆನ್ನೆಗೆ ಬಡಿದು ಸೇಡು ತೀರಿಸಿಕೊ ಲಕ್ಷ್ಮಿ. ಆದರೆ ಶೀಲ ಕೆಡಿಸಲಿಕ್ಕೆ ಬಂದದ್ದು ಸುಳ್ಳು ಅಂತ ನನ್ನ ತಾಯಿಯ ಎದುರಿಗೆ ನೀನೊಂದು ಸಲ ಹೇಳ್ತೀಯ? ಅಂದ್ರೆ ನಮ್ಮವ್ವ ನನ್ನ ಕ್ಷಮಿಸ್ತಾಳೆ. ಲಕ್ಷ್ಮೀ ನೋಡು ಈ ಭದ್ರ ಯಾರಿಗೂ ಯಾವದಕ್ಕೂ ಕೈ ಒಡ್ಡಿದವನಲ್ಲ. ತಲೆ ತಗ್ಗಿಸಿ ಬೇಡಿದವನೂ ಅಲ್ಲ. ಅದರಿಂದ ನಿನ್ನೆದುರು ತಲೆ ತಗ್ಗಿ ಕೈ ಒಡ್ಡಿ, ಕಾಲಿಗೆ ಬಿದ್ದು ಬೇಡುತ್ತೇನೆ. ಶೀಲ ಕೆಡಿಸಲಿಕ್ಕೆ ಬಂದದ್ದು ಸುಳ್ಳು ಅಂತ ನಮ್ಮವ್ವನ ಮುಂದೆ ಹೇಳ್ತೀಯಾ ಲಕ್ಷ್ಮಿ?

ಲಕ್ಷ್ಮಿ — ಛೀ ಇದೇನೂ ಮಾತು ಅಂತ ಆಡ್ತಿಯಾ? ಬಿಡ್ತು ಅನ್ನು. ನಿನ್ನ ಮೇಲೆ ಸುಳ್ಳು ಅಪವಾದ ಹೊರಿಸಿದ ನಾನು ಅಪರಾಧಿನಿ

ಭದ್ರ — ಆದರೂ ನಾನು ಗಂಡಸು. ಯಾವ ಅಪರಾಧ ಮಾಡಿದರೂ ಕಟ್ಟಳೆಯ ಮಹತ್ವ ನಿನ್ನಷ್ಟಿಲ್ಲ. ಹತ್ತು ಹೆಣ್ಣಿನ ಮೇಲೆ ಹಲ್ಲೆ ನಡೆಸಿದರೂ ನನ್ನ ಮಾನಕ್ಕೆ ಚ್ಯುತಿಯಿಲ್ಲ. ಆದರೆ ಹೆಣ್ಣಿನ ಬದುಕು ಹಾಗಲ್ಲ. ಮುಟ್ಟಿದವನಿಗೆ ಮೀಸಲಾಗಿ ಉಳಿಯಬೇಕಾದ ಸೂಕ್ಷ್ಮ ಸೃಷ್ಟಿಯಾದ ನಿನ್ನ ಕೆನ್ನೆ ಮುಟ್ಟಿ ಮಾಡಿದ ಆ ದೋಷ ಕ್ಷಮಿಸಿಬಿಡು ಲಕ್ಷ್ಮಿ

ಲಕ್ಷ್ಮಿ — ಹಾಗಿದ್ದರೆ ಇನ್ನೆಂದು ನನ್ನ ಕೆನ್ನೆ ಮುಟ್ಟುವದಿಲ್ಲವೆ?

ಭದ್ರ — ಹೂಂ.... ಹೂಂ.... ಇಲ್ಲ

ಲಕ್ಷ್ಮಿ — ಏಕೆ?

ಭದ್ರ – ಯಾಕೆಂದರೆ ನಿಮ್ಮಪ್ಪ ನನ್ನ ಶತ್ರು. ನನ್ನ ಈ ದುರ್ಗತಿಗೆ ತಂದ ನಿಮ್ಮಪ್ಪನ ಮೇಲೆ ನನ್ನ ದ್ವೇಷವಿದೆ. ಮನೆಯವರಿಂದ ಅಗಲಿಸಿದ ರೋಷವಿದೆ

ಲಕ್ಷ್ಮಿ – ನಮ್ಮಪ್ಪನ ಎದುರು ನನ್ನ ಕೆನ್ನೆ ಮುಟ್ಟಿ ಲಕ್ಷ್ಮೀನೇ ಮದುವೆ ಆಗತೀನಿ ಅಂತ ಹೇಳಿದೆಲ್ಲ. ಆಗ ಇರಲಿಲ್ಲವೇನೋ ಈ ರೋಷ

ಭದ್ರ – ಇತ್ತು ನಿಮ್ಮಪ್ಪನ ಮೇಲೆ ಅಷ್ಟೇ ಅಲ್ಲ, ನಿನ್ನ ಮೇಲೆ ಕೂಡ ನನ್ನ ದ್ವೇಷ ಇತ್ತು

ಲಕ್ಷ್ಮಿ – ಈಗ ನಾನು ಸೋತವಳಾಗಿ ಬಂದು ಎರಡು ಪ್ರೀತಿ ಮಾತು ಆಡಿದ ತಕ್ಷಣ ನಿನ್ನ ರೋಷ ಸುಟ್ಟು ಹೋಯಿತೆ ಹುಚ್ಚ! ನಿನ್ನಂಥ ದುಡುಕು ಸ್ವಭಾವದ ಸಿಟ್ಟಿನ ಗಂಡಸಿನ ಕತ್ತಿಗೆ ಕೊಯ್ಯಲಿಕ್ಕೆ ನನ್ನಂಥ ಹೆಣ್ಣಿಗೆ ಕುಡಗೋಲು ಯಾಕೆ? ಕೂದ್ಲ ಎಳೀನೇ ಸಾಕು. ಭದ್ರ ಸಿಟ್ಟು ಹೋಯಿತು ಅಂದ್ರೆ ನಮ್ಮಪ್ಪನ ಮೇಲೆ ಇಟ್ಟ ಆಣೆಯೂ ಹೋಯಿತು. ಹೋಗಲಿ ಹಿಂದೆ ಆದದ್ದನ್ನು ಮರೆತು ಬಿಡು ಒಳ್ಳೆ ರೀತಿಯಿಂದ ಬಾಳು ಅಂತ ನಾನು ನಮ್ಮಪ್ಪನಿಗೆ ಹೇಳ್ತೀನಿ ತಿಳಿತಾ

ಭದ್ರ – ಇದಕ್ಕೆಲ್ಲ ನಿಮ್ಮಪ್ಪ ಒಪ್ಪುತ್ತಾನೆಯೇ? ಸಾಲ ಮುಟ್ಟಿತೆಂದು ನಮ್ಮ ಹೊಲ ಮನೆಗಳನ್ನು ನಮಗೆ ಬಿಟ್ಟು ಕೊಡುತ್ತಾನೆಯೇ?

ಲಕ್ಷ್ಮಿ – ಭದ್ರ ನಮ್ಮಪ್ಪನಿಗೆ ಇರುವವಳು ನಾನೊಬ್ಬಳೆ ಮಗಳು ಇಂದು ನಾನೇ ನಿನ್ನವಳು. ಅಂದ ಬಳಿಕ ಈ ಮಾತಿನಲ್ಲಿ ಇನ್ನೇನೂ ಉಳಿಯಿತು?

ಭದ್ರ – ಲಕ್ಷ್ಮಿ ನೀನೆಷ್ಟು ಒಳ್ಳೆಯವಳು!

ಲಕ್ಷ್ಮಿ – ಆದರೂ ನಾನು ನಿನಗೆ ಸೋತು ಬಂದವಳು. ಭದ್ರ ನೀನು ನನ್ನ ಪ್ರೀತಿಸ್ತಿಯಾ?

ಭದ್ರ – ಹೂಂ, ಮತ್ತೆ ನೀನು .....

ಲಕ್ಷ್ಮಿ – ನಾನು ಪ್ರೀತಿಸುವುದು ಮದುವೆಯಾಗೋದು ನಿನ್ನನ್ನೇ (ಭದ್ರ ಲಕ್ಷ್ಮೀನ್ನ ಎತ್ತಿ ಕೇಕೇ ಹಾಕುವನು) ಎಂದು ನೀ ನನ್ನ ತಂದೆಯ ಎದುರಿಗೆ ದಿಟ್ಟತನದಿಂದ ನನ್ನ ಕೆನ್ನೆ ಮುಟ್ಟಿ ಮದುವೆಯಾಗುವೆನೆಂದು ಹೇಳಿದಿಯೋ ಆ ಕ್ಷಣದಲ್ಲಿಯೇ ನಿನ್ನ ಮದುವೆಯಾಗ ಬಯಸಿ ಮನಸ್ಸು ಒಪ್ಪಿಸಿದೆ.

ಭದ್ರ – ಹಾಗಿದ್ದರೆ ಆ ಕ್ಷಣವೇ ಯಾಕೆ ಹೇಳಲಿಲ್ಲ... ನಾನು ಭದ್ರನ್ನೇ ಮದುವೆಯಾಗತೀನಿ ಅಂತ

ಲಕ್ಷ್ಮಿ – ಅಷ್ಟೊಂದು ನಿರ್ಭಯವಾಗಿ ಹಡೆದ ತಂದೆಯ ಎದುರಿಗೆ ಈ ಮಾತು ಹೇಳಿದರೆ ಕೇಳಿದ ಜನ ನಾಚಿಕೆ ಬಿಟ್ಟವಳು ಎಂದಾರು

ಭದ್ರ – ಶ್ರೀಮಂತರ ಮಗಳಿಗೂ ನಾಚಿಕೆ ಇರುತ್ತೇನು?

ಲಕ್ಷ್ಮಿ – ಶ್ರೀಮಂತರ ಮನೆಯಲ್ಲಿ ಹುಟ್ಟಿದರೂ ನಾಚಿಕೆ ಎಂಬುದು ಹೆಣ್ಣಿಗೆ ಹುಟ್ಟುಗುಣ. ಎಲ್ಲಾ ವಿಷಯದಲ್ಲಿ ದಿಟ್ಟತನಾ ಕೊಟ್ಟೀತನ ತೋರಿಸಲಿಕ್ಕೆ ನಾನೇನೂ ಗಂಡ್ಸಲ್ಲ ಹೇಳಿ ಕೇಳಿ ಹೆಣ್ಣು

ಭದ್ರ – ಓಹೋ ಯಾವಾಗ ಅರ್ಥ ಮಾಡಿಕೊಂಡಿಯೋ ನೀನು ಹೆಣ್ಣು ಅನ್ನೋದನ್ನ

ಲಕ್ಷ್ಮಿ – ನಿನ್ನ ಕೈ ನನ್ನ ಕೆನ್ನೆಗೆ ಮುಟ್ಟಿದಾಗ, ಉಕ್ಕಿನಂತಿದ್ದ ನನ್ನ ಮೈ ಮೇಣದಂತೆ ಕರಗಿದಾಗ, ಬೇರೊಂದು ಕೆನ್ನೆ ನಿನ್ನ ಕರಸ್ಪರ್ಶಕ್ಕೆ ಕಾತರಿಸಿ ಮತ್ತೆ ಮತ್ತೆ

ಭದ್ರ – ಹೇಳು ಹೇಳು

ಲಕ್ಷ್ಮಿ – ಮತ್ತೆ..... ಮತ್ತೆ.....

॥ ಪದ ॥

ಏನು ಹೇಳಲಿ ಹೇಗೆ ಹೇಳಲಿ ॥ ನಿನಗೊಲಿದು ಬಂದೆ ನಾನಿಲ್ಲಿ ॥
ಐದು ತಿಂಗಳ ಹಿಂದೆ । ಐಹೊಳಿಯ ಜಾತ್ರೆಯಲ್ಲಿ ॥
ಜಡೆ ಹಿಡಿದು ಎಳದಿ । ನದಿಯಾ ಬಳಿಯಲ್ಲಿ ॥
ನಿನಗಂಜಿ ನಾ ಸೇರಿದೆ ಜನರಲಿ
ಎಂಥ ಎದೆಗಾರ ನೀ ಗಂಭೀರ
ನಿನ ಕಂಡ ಮರುಳಾದೆನಾ ಪೂರಾ॥
ಯಾವ ದೇವರ ಬೇಡಿ ಒಲಿಸೀ । ಹಡದಾಳೋ ನಲ್ಲ ನಿನ್ನ ತಾಯಿ ॥
ಹಡದಾಳೋ ನಲ್ಲ ನಿನ್ನ ತಾಯಿ....

ಲಕ್ಷ್ಮಿ – ಭದ್ರ ಉಂಡಿ ತಂದೀನಿ ತಿನ್ನು ಬಾ

ಭದ್ರ – ಆಂ ಉಂಡಿ ತಂದೀಯಾ ನಡಿ (ಇಬ್ಬರೂ ಉಂಡಿ ತಿನ್ನುವಾಗ

ಭೈರ ಬರುವನು. (ಇಬ್ಬರಿಗೂ ಹೊಡೆದಾಟ, ಭೈರ ಓಡಿ ಹೋಗುವನು) ಲಕ್ಷ್ಮಿ ದ್ವೇಷದಿಂದ ಉರಿತಾ ಇದ್ದ ನನ್ನ ಹೃದಯಾನ ಒಂದು ಕ್ಷಣದಲ್ಲಿ ಶಾಂತಿ ಮಾಡಿ ಬಿಟ್ಟೆ. ಬಾಳಿನ ಆಸೆ ಬಿಟ್ಟು ನಾಳಿನ ಕಲ್ಪನೆಯ ತೆರೆದು ಕೇವಲ ಸೇಡಿಗಾಗಿ ಸಾವಿನತ್ತ ಧಾವಿಸುತ್ತಿದ್ದ ನನ್ನ ದಾರಿಯನ್ನೇ ಬದಲು ಮಾಡಿಬಿಟ್ಟೆ. ಲಕ್ಷ್ಮಿ ನೀನು ಕಾಲಿಟ್ಟ ನೆಲ ನಂದನ ವನಾ

**ಗುಂಡ –** (ಓಡಿಬಂದು) ಘಾತವಾಯಿತೋ ಭದ್ರ ಘಾತವಾಯಿತೊ! ಮರಿಯಪ್ಪನವರು ಗೂಡುಗಳಿಗೆಲ್ಲ ಬೆಂಕಿ ಇಟ್ಟು ಸುಟ್ಟುಬಿಟ್ಟರು. ಈಗ ನೀನೆ ಸುಟ್ಟವನು ಅಂತ ಊರ ಜನರೆಲ್ಲ ನಿನ್ನ ಹೊಡೆಯುವದಕ್ಕೆ ಹುಡುಕುತಿದ್ದಾರೆ. ಈಗೇನೋ ಮಾಡೋದು?

**ಲಕ್ಷ್ಮಿ –** ಮೊದಲು ಈ ಸ್ಥಳಾ ಬಿಡೋದು. ಸಿಕ್ಕರೆ ಬೆಂಕಿಯಲ್ಲಿ ಹಾಕಿ ನಿನ್ನ ಸುಡಬೇಕಂತ ನಮ್ಮಪ್ಪ ಮಾಡಿದ ಕುತಂತ್ರ ಇದು. ಬಾ ಭದ್ರ ಯಾರಿಗೂ ಕಾಣದಂತೆ ನಮ್ಮ ಮನೆಯಲ್ಲಿಟ್ಟು ನಿನ್ನನ್ನ ರಕ್ಷಿಸುತ್ತೇನೆ. ನಿನ್ನ ಪ್ರಾಣರಕ್ಷಣೆಯ ಭಾರ ನನಗಿರಲಿ ಬಾ ಭದ್ರಿ (ಹೋಗುವರು)

===***====***===

# ದೃಶ್ಯ ೮

ರಸ್ತಾ

(ಮರಿಯಪ್ಪ, ವೆಂಕಪ್ಪ, ಕೆಂಚಪ್ಪ ಬರುವರು)

**ಮರಿಯಪ್ಪ** – ಅವನ ತಾಯಿ ಹೊಟ್ಟೆ ತಣ್ಣಗಿತ್ತು ಅಂತ ಬದುಕಿದಾ. ನಮ್ಮ ಗೂಡು ಸುಟ್ಟ ಆ ಭದ್ಮಾಸ್ ಭದ್ರ ನಿನ್ನೆ ರಾತ್ರಿ ನಮ್ಮ ಕೈಗೇನಾದ್ರೊ ಸಿಕ್ಕಿದ್ರೇ ಅದೇ ಬೆಂಕಿಯಲ್ಲಿ ಹಾಕಿ ಸುಟ್ಟ ಅವನ ಬೂದಿನ ಹಣೆಗಿಟ್ಟುಕೊಳ್ಳುತ್ತಿದ್ದೆ

**ವೆಂಕಪ್ಪ** – ನೀನ್ಯಾಕ ಸುಡೋದೊ ಮರಿಯಪ್ಪ, ಸಿಕ್ಕಿದ್ರೆ ಊರ ಜನಾನೆ ಅವನ್ನ ಸುಟ್ಟು ಬಿಡತಿದ್ರು. ಆದರೆ ಗೂಡಿಗೆ ಬೆಂಕಿ ಇಟ್ಟ ಚಂಡಾಲಾ ಯಾವ ಸ್ಥಳದಲ್ಲಿ ಅಡಿಗಿಬಿಟ್ಟನೊ ರಂಡೇ ಮಗ. ಬೆಳ್ಳ ಬೆಳತನಕ ಹುಡುಕಿದ್ರು ಅವನ ಸುಳಿವೆ ಹತ್ತಲಿಲ್ಲ ಕೆಂಚಪ್ಪ ಇಂಥ ಕೆಲಸ ನಮ್ಮೂರಾಗ ಈವರೆಗೆ ಯಾರಾದ್ರೂ ಮಾಡಿದ್ರಾ?

**ಕೆಂಚಪ್ಪ** – ಎಲ್ಲಿ ಬರಬೇಕ್ರಿ ಧಣಿ.... ಗೂಡಿಗೆ ಬೆಂಕಿ ಇಟ್ಟು ಮನಸ್ಯಾರ ಹೊಟ್ಟಿ ಮ್ಯಾಲೆ ಬರೆ ಎಳೆಯುವಂತ ಕೆಲಸ. ಸಂಗವ್ವ ಯಾವ ದೇವರಿಗೆ ನಡುಕೊಂಡು ಎಷ್ಟು ದಿವಸ ಹರಕೆ ಹೊತ್ತು ಪಡಿದಿದ್ಲೋ ಈ ಚಂಡಾಲನ್ನ. ಇನ್ನೆಲ್ಲಿ ಅಂತ ಹುಡುಕಬೇಕ್ರಿ ಕುಲಕರ್ಣೇರ ಅವನ್ನ

**ವೆಂಕಪ್ಪ** – ಅಂದ್ರ.... ಇನ್ನು ನಾವೇ ಹುಡುಕೋನ ಅಂತೀಯೇನ ಕೆಂಚಪ್ಪ. ನೀನೂ ಬೆಳ್ಳಬೆಳತನಕ ಹುಡಿಕಿದಿ, ನಮ್ಮ ಕೆಲಸ ಮುಗಿತು. ಹಗಲಿ ಹುಡಕವರೇನು ನಾವು, ರಾತ್ರಿ ಅಷ್ಟೇ ಹುಡುಕುವವರು. ಒಂದರ ಮನಿ ಬಿಟ್ಟಿವೇನು? ಪ್ರತಿಯೊಂದು ಮನಿಗಿ ಕದಾ ತಗಿಸೋದು ಒಳಗ ಹೋಗೋದು ಹೊರಗ ಬರೋದು. ಇದನ್ನ ತಿಳಿದೆ ವಾಲೀಕಾರ ತಿಪ್ಪನ ಕೈಲಿ ಚೀಟಿ ಕೊಟ್ಟ ಕಳಸೀನಿ. ಪೋಲೀಸ ಪಾರ್ಟಿ ಬರತದ ಪಾತಾಳದಾಗ ಇದ್ರೂ ಹೊರಗ ಎಳಿತದ

**ಮರಿಯಪ್ಪ –** ವೆಂಕಪ್ಪ ಪೋಲೀಸ್ ಸ್ಟೇಶನ್ ತನಕ ನಾವೇ ಹೋಗಿದ್ರೆ ಒಳ್ಳೇದಿತ್ತೇನೂ ಅಂತ

**ವೆಂಕಪ್ಪ –** ಯಾಕಂತ?

**ಮರಿಯಪ್ಪ –** ಬರೀ ನಿನ್ನ ಚೀಟಿ ಮೇಲೆ ಪೌಜದಾರ ಸಾಹೇಬರು ಬರತಾರೋ ಇಲ್ಲೊ.

**ವೆಂಕಪ್ಪ –** ಅಂದ್ರೇನು... ಈ ಕುಲಕರ್ಣಿ ಚೀಟಿ ಅಂದ್ರೆ ಅದೇನೂ ಖಾದಿ ಕೇಂದ್ರದೊಳಗ ನೂಲೋ ರಾಟಿಯಂತಾ ಮಾಡಿ ಏನೋ? ಚೀಟಿ ಕೊಟ್ಟು ಪ್ರಸಂಗ ಬಂದ್ರೆ ಪಾರ್ಲಿಮೆಂಟ ಆಳುವ ಪ್ರೆಸಡೆಂಟರನ್ನ ಇಲ್ಲಿಗೆ ಕರೆಸುವರು ನಾವು. (ಚೆನ್ನಿ ಬರುವಳು) ಬಾ ಚೆನ್ನಿ

**ಚೆನ್ನವ್ವ –** ಯಾಕ್ರಿ ಕುಲಕರ್ಣಿರ ಕರಿಯಾಕ ಕಳಿಸಿದ್ರಿ

**ವೆಂಕಪ್ಪ –** ಹೌದು ನೋಡ ಚೆನ್ನಿ. ಸಿಸ್ತಾಗಿ ಮಸಾಲಿ ಸಾಮಾನು ಕೊಡಸ್ತೀನಿ ಫಸ್ಟಕ್ಲಾಸ್ ಅಡಗಿ ಮಾಡಬೇಕು. ಯಾಕಂದ್ರ ನಮ್ಮೂರಿಗೆ ಪೋಲೀಸ್ ಪಾರ್ಟಿ ಬರ್ತದ

**ಚೆನ್ನಿ –** ನಾ ವಲ್ರಿ ನನ್ನ ಕೈಲಿ ಆಗೋದಿಲ್ಲ

**ಮರಿಯಪ್ಪ –** ಯಾಕ ನಿನಗೇನು ಬಂತು ಗುನುಗು

**ಚೆನ್ನಿ –** ಹೂಂ ನಿನಗೇನು ಬಂತು ಗುನುಗು ಅಂತಿ ಐದು ಮಂದಿಗೆ ಆಗುವಷ್ಟು ಕೊಡಿಸಿತೀದಿ. ಹತ್ತು ಮಂದಿನ್ನ ಕರಕೊಂಡು ಬಂದು ತಿನಸ್ತೀದಿ

**ವೆಂಕಪ್ಪ –** ಮರಿಯಪ್ಪ ಈ ಸಾರಿ ನಾವು ಕೊಡಿಸೋದು ಬ್ಯಾಡ.... ನಿಮಗೇನೇನು ಬೇಕೋ ನೀವೇ ತಗೊಳ್ರಿ. ಕೊಡೊ ಒಂದ ನೂರು ರೂಪಾಯಿ

**ಮರಿಯಪ್ಪ –** ನೂರೋ ಮುನ್ನೂರೊ

**ಚನ್ನಿ –** ಮತ್ತೆ ಮೂರೂ ಕೊಡಬೇಕಂತ ಮಾಡಿ ಏನು? ಕೇಳಿದಿಲ್ಲ ಕೋಳಿ ಧಾರಣಿನ ಹದಿನೈದು ರೂಪಾಯಿಕ್ಕೆ ಒಂದು

**ಕೆಂಚಪ್ಪ –** ಅವೂ ಫಾರಮ್ ಕೋಳಿ

**ವೆಂಕಪ್ಪ –** ತತ್ತಿ ಹಾಕಿದರೆ ಮರಿಸಹಿತ ಆಗೋದಿಲ್ಲ. ಕೆಂಚಪ್ಪ ಅವನ್ನೇನೂ ಕೇಳ್ತಿರಿ ಶೆಟ್ಟರ ಅಂಗಡಿಗೆ ಹೋಗು ನಿಮಗೇನು ಬೇಕು ಎಲ್ಲಾ

ತಗೊಳ್ರಿ ಇವನು ಹೆಸರು ಹಚ್ಚರಿ. ಸರಳ ಕೊಟ್ಟಾ ಸರಿ ಇಲ್ಲಾಂದ್ರ (ಚೆನ್ನಿ. ಕೆಂಚಪ್ಪ ಹೋಗುವರು ಫೌಜದಾರ ಸಾಹೇಬರು ಬರುವರು) ನಮಸ್ಕಾರಿ ಸಾಹೇಬರೆ

ಫೌಜದಾರ – ಮತ್ತೇನು ಕುಲಕರ್ಣಿಯವರೆ ಅರ್ಜಂಟ ಬರಬೇಕಂತ ಚೀಟಿ ಕೊಟ್ಟು ಕಳಿಸಿದ್ರೀ

ವೆಂಕಪ್ಪ – ಹೇಳ್ತಿನಿ

ಫೌಜದಾರ – ಆ ಇವರೂ.....

ವೆಂಕಪ್ಪ – ಇವರೂ ನಮ್ಮೂರ ಸಾವುಕಾರ್‍ರು .... ನಮಸ್ಕಾರ ಮಾಡೊ (ಮರಿಯಪ್ಪ ನಮಸ್ಕರಿಸುವನು)

ಫೌಜದಾರ – ನಿನ್ನೆ ರಾತ್ರಿ ಸುಟ್ಟ ಗೂಡುಗಳು ನಿನ್ನವೇನೋ

ಮರಿಯಪ್ಪ – ಹೌದ್ರಿ ಸಾಹೇಬರೆ ! ಮೂರು ಸಾವಿರ ಬೆಲೆ ಬಾಳುವ ಗೂಡು ಸುಟ್ಟು ಹೋದುವರಿ. ಬಡವ ಇದ್ದೀನಿ ಉಳಿಸಬೇಕ್ರಿ ಸಾಹೇಬರೆ

ಫೌಜದಾರ – ವೆಂಕಪ್ಪ ಬಾಯಿಲ್ಲಿ.... ಮೂರು ಸಾವಿರ ಮಾಲು ಸುಟ್ಟು ಹೋಗಿವೆ ಅಂತಾನ. ಮೇಲೆ ಬಡವಾ ಅಂತಾನಲ್ಲೊ?

ವೆಂಕಪ್ಪ – ಅಂವಾ ಮೊದಲು ಬಡವನೆ ಇದ್ರಿ, ಈಗ ಸ್ವಲ್ಪ ಶ್ರೀಮಂತ ಆಗೇನ್ರಿ, ನಿಮಗೆ ಗೊತ್ತಾಯಿತೇನ್ರಿ (ಮರಿಯಪ್ಪನ ಕಡೆ ಹೋಗುವನು) ಮರಿಯಪ್ಪ

ಮರಿಯಪ್ಪ – ಏನಂತಾ?

ವೆಂಕಪ್ಪ – ಮರಿಯಪ್ಪ ನಮ್ಮ ಸಾಹೇಬರು ನಿನ್ನ ಒಂದು ಸಲ ತಮ್ಮ ಬೆನ್ನಿಗೆ ಹಾಕೊಂಡ್ರು ಅಂದ್ರ ಮುಗಿದು ಹೋಯಿತು ನೀನೇನೂ ಭಯಪಡಬೇಡ. ಆದರೆ ಬ್ರಹ್ಮ ದೇವರು ಮೊದಲು ಬರಬೇಕು. ಭಯ ಆ ಮೇಲೆ ಇಲ್ಲಿ ತಾಯಿಲ್ಲಿ (ರೂಪಾಯಿ ತಂದು ಸಾಹೇಬರ ಜೇಬಿನಲ್ಲಿ ಇಡುವನು)

ಫೌಜದಾರ – ಏ ಏನಿದು.... ವೆಂಕಪ್ಪ

ವೆಂಕಪ್ಪಾ – ಏನಿಲ್ಲೇಳ್ರಿ ಸಾಹೇಬರೆ. ಮರಿಯಪ್ಪ ನಮ್ಮ ಸಾಹೇಬರೂ ಇಂಥ ಕೆಲಸದಲ್ಲಿ ಸರ್ದಾರ ಮನುಷ್ಯರು. ಸಾಹೇಬರೆ ಮೇಜವಾನಿ ವ್ಯವಸ್ಥೆ ಮಾಡಿಸಿನ್ರಿ. ಕೂಕೂ ಕೂ.....

**ಫೌಜದಾರ** – ಮರಿಯಪ್ಪ ನಿನಗೆ ಈ ಊರಲ್ಲಿ ಯಾರ ಮೇಲೆ ಸಂಶಯವಿದೆಯೋ ಅವರೆಲ್ಲರ ಹೆಸರು ಬರೆದು ನನ್ನ ಕಡೆ ಒಂದು ಕಂಪ್ಲೆಂಟು ಕೊಡು. ಮುಂದಿನ ವಿಚಾರ ನನಗಿರಲಿ (ಭೈರ ಓಡಿಬರುವನು)

**ಭೈರ** – ಕುಲಕರ್ಣಿರ ಭದ್ರಿಯಿರುವ ಜಾಗ ಪತ್ತೆ ಆಯಿತು

**ವೆಂಕಪ್ಪ** – ಎಲ್ಲೊ?

**ಭೈರ** – ನಮ್ಮ ಸಾವಕಾರ ನೆಲಮನಿಯಲ್ಲಿದ್ದ. ನಾವು ಹಿಡಿಲಿಕ್ಕೆ ಹೋಗದ್ವಿ ಸಿಗದೆ ತಮ್ಮ ಮನಿ ಕಡೆ ಓಡಿಹೋದ

**ಮರಿಯಪ್ಪ** – ನಡಿರಿ ಸಾಹೇಬರೆ ಬ್ಯಾಟಿ ಸಿಕ್ಕಿತು. (ಎಲ್ಲರೂ ಹೋಗವರು)

===***====***===

## ದೃಶ್ಯ ೯

(ಸಂಗವ್ವನ ಮನೆ)

(ಭದ್ರ ಓಡಿ ಬರುವನು. ಒಳಗೆ ಸಿದ್ದ ಕೆಮ್ಮುವನು. ಅದನ್ನು ಕೇಳಿ ಭದ್ರ ಮರೆಯಾಗಿ ನಿಲ್ಲುವನು. ಸಿದ್ದಣ್ಣ ಹೊಲಕ್ಕೆ ಹೋಗುವ ತಯಾರಿ)

**ಸಿದ್ದ –** ಪಾರೂ..... ನೀನತ್ತರೂ ಸರಿ, ಅವ್ವ ಸತ್ತರೂ ಸರಿ. ಭದ್ರಿ ಮನೆಯಲ್ಲಿ ಕಾಲಿಟ್ಟರೆ ನಾ ಕೇಳೋದಿಲ್ಲ. ಗೂಡು ಸುಟ್ಟ ಬಗ್ಗೆ ಅವನ ಮೇಲೆ ವಾರಂಟ ಹುಟ್ಟಿದೆ. ನಾವು ಹೊಲಕ್ಕೆ ಹೋದಾಗ ಅಕಸ್ಮಾತ ಭದ್ರ ಮನಿಗೆ ಬಂದರೆ ಮನೆಯಲ್ಲಿ ಬರಗೋಡಬೇಡ.... ಬಾರವ್ವ ಹೊತ್ತಾಯಿತು

**ಸಂಗವ್ವ –** (ಬಂದು) ಹೌದವ್ವ ಭದ್ರ ಬಂದರೆ ಮನೆಯಲ್ಲಿ ಬರಗೊಡಬೇಡ ನಡಿಯಪ್ಪಾ.... (ಹೋಗುವರು)

**ಪಾರ್ವತಿ –** ಮುಖ್ಯ ನನ್ನ ಕಾಲ್ಗುಣವೇ ಕೆಟ್ಟದು (ಒಳಗೆ ಹೋಗುವಾಗ ಭದ್ರ ಬಂದು)

**ಭದ್ರ –** ಅತ್ತಿಗೇ

**ಪಾರ್ವತಿ –** ಭದ್ರ.... ಒಳಗೆ ಬಾ ಭದ್ರ

**ಭದ್ರ –** ನಾನು ಒಳಗೆ ಬರಕೂಡದೆಂದು ಆಜ್ಞೆ ಮಾಡಲಿಲ್ಲವೆ ಅಣ್ಣಾ

**ಪಾರ್ವತಿ –** ಈಗ ನಾನು ಅಪ್ಪಣೆ ಮಾಡ್ತೀನಲ್ಲ, ಬಾ ಒಳಗೆ

(ಭದ್ರ ಒಳಗೆ ಹೋಗುವಾಗ)

**ಹಿನ್ನೆಲೆ : ಸಿದ್ಧ –** ಭದ್ರ ನನ್ನಾಜ್ಞೆಯನ್ನು ಉಲ್ಲಂಘಿಸಿ ಮನೆಯಲ್ಲಿ ಕಾಲಿಟ್ಟಿಯಾದರೆ ನಿನಗೆ ಅವ್ವನ ಆಜ್ಞೆಯಾಗಿದೆ

**ಭದ್ರ –** ನಾನೊಲ್ಲೆ.... ಬರ್ತೀನಿ ಅತ್ತಿಗೆಮ್ಮಾ

**ಪಾರ್ವತಿ –** ಹಾಗಿದ್ದರೆ ಇಲ್ಲಿಯವರೆಗೆ ಏಕೆ ಬಂದಿ?

ಭದ್ರ – (ಅಳುತ್ತ) ನಿನ್ನ ನೋಡಬೇಕೆನ್ನಿಸಿತು. ಬಂದೆ. ಈಗ ಬರ್ತೀನಿ ಅತ್ತಿಗೆಮ್ಮಾ

ಪಾರ್ವತಿ – ಭದ್ರ ನೀನೀಗ ಮನೆಯಲ್ಲಿ ಬರದೆ ಹೋದರೆ ನಿನಗೆ ನನ್ನಾಣೆಯಾಗಿದೆ

ಭದ್ರ – ಒಳಿತೆನ್ನು ಅತ್ತಿಗೆ (ಕಾಲಿಗೆ ಬೀಳುವನು) ಯಾಕ ಅಳ್ತೀಯಾ ಅತ್ತಿಗೆಮ್ಮಾ

ಪಾರ್ವತಿ – ಅಳುವದೊಂದು ಬಿಟ್ಟರೆ ಇನ್ನೇನು ಮಾಡಲಿ ಭದ್ರ? ನೀನೆಷ್ಟು ಪರಿಯಲ್ಲಿ ಒಳ್ಳೆಯವನಾಗಿ ಬದುಕಬೇಕೆಂದು ಪ್ರಯತ್ನ ಮಾಡಿದರೂ ಊರ ಜನಾ ನಿನ್ನ ಮೇಲೆ ಬೆಂಕಿ ಕಾರುವುದನ್ನು ಬಿಡಲಿಲ್ಲ. ಪ್ರತಿದಿನ ಒಂದಿಲ್ಲ ಒಂದು ದುರಂತ ನಿನ್ನ ಜೀವನ ಸುತ್ತ ಬಂದು ನಿಲ್ಲುತ್ತವೆ. ಈ ರೀತಿ ನಿನ್ನ ನೆತ್ತಿಯ ಮೇಲೆ ದುರಂತದ ಕತ್ತಿ ನೇತಾಡುವಂತೆ ಮಾಡಿದವಳೇ ನಾನು. ನನ್ನಿಂದಲೇ ಈ ರುದ್ರ ನಾಟಕ ಮೊದಲಾಯಿತು. ನಾನು ಕಾಲಿಟ್ಟಾಗಿನಿಂದ ಈ ಮನೆ ಕಷ್ಟಕ್ಕೆ ಗುರಿಯಾಯಿತು. ನನ್ನ ಕಾಲ್ಗುಣವೇ ಕೆಟ್ಟದು. ನಾನು ಕಾಲಿಟ್ಟ ಕಡೆ ನೆಲ್ಲು ಬೆಳೆಯುದಿಲ್ಲ, ಹುಲ್ಲು ಕೂಡಾ ಹುಟ್ಟಲಾರದು ಭದ್ರ

ಭದ್ರ – ನಿನ್ನ ಕಾಲ್ಗುಣ ಕೆಟ್ಟದಲ್ಲ ಅತ್ತಿಗೆಮ್ಮಾ. ನನ್ನ ಕೆಟ್ಟತನದಿಂದಲೇ ಈ ಅವಸ್ಥೆ ಉಂಟಾಯಿತು

ಪಾರ್ವತಿ – ಏನಾದರೇನು ಭದ್ರ? ಊರ ಜನಾ ನಿನ್ನ ದೂರ ಮಾಡಿದರೆಂದು ಹೆತ್ತವರ ಕರಳಿಗೆ ಹತ್ತಿದವರೂ ಮನೆಯಿಂದ ನಿನ್ನ ಹೊರದೂಡಿ ಪರದೇಶಿಯನ್ನಾಗಿ ಮಾಡಿದರು. ಹೀಗಾದ ಬಳಿಕ ಮುಂದೆ ನೀನು ಬದುಕುವದು ಹೇಗಪ್ಪಾ?

ಭದ್ರ – ನನ್ನ ವಿಷಯಕ್ಕೆ ನೀನು ಎಳ್ಳಿನಷ್ಟು ಚಿಂತಿಸಬೇಡ. ತುಂಬು ವಾತ್ಸಲ್ಯದಿಂದ ನೀನೊಂದು ಸಲ ಹಾಲು ಕುಡಿಸಿ ಅಮರನನ್ನಾಗಿ ಮಾಡಿರುವಿ. ಈಗ ಪ್ರಪಂಚ ನನಗೆ ಹಾಲಾಹಲ ಕುಡಿಸಿದರೂ ನನಗೆ ಸಾವಿನ ಭಯವಿಲ್ಲ. ನನ್ನ ಮಾತಿರಲಿ ಅತ್ತಿಗೆಮ್ಮಾ ನಿನ್ನೆ ನಿನ್ನ ಅವ್ವ ಅಪ್ಪ ಬಂದಿದ್ದರಂತೆ ಹೌದಾ?

ಪಾರ್ವತಿ – ಹೌದಪ್ಪಾ ರೊಟ್ಟಿ ಬುತ್ತಿ ತಂದಿದ್ದಾರೆ. ತಾಳು ತಂದು ಕೊಡತೀನಿ ತಿಂದು ಹೋಗುವಿಯಂತೆ

ಭದ್ರ – ರೊಟ್ಟಿ ಬುತ್ತಿ ಮಾತಿರಲಿ ಅತ್ತಿಗೆಮ್ಮಾ ಇಷ್ಟು ದಿವಸ ಕಳೆದರೂ ಈ ಸುದ್ದಿ ನೀನು ನನಗೇಕೆ ತಿಳಸಲಿಲ್ಲ

**ಪಾರ್ವತಿ** – ಯಾವದನ್ನ?

**ಭದ್ರ** – ನೀನು ಗರ್ಭವತಿ ಅನ್ನೋದನ್ನ

**ಪಾರ್ವತಿ** – ಭದ್ರ ನಿಜ ಹೇಳುವದಾದರೆ ಹಗಲಿರುಳೂ ನಿನ್ನ ಚಿಂತೆಯೇ ನನ್ನ ಬೆನ್ನು ಹತ್ತಿದೆ. ಹೀಗಿದ್ದು ಯಾವ ಸಂತೋಷಕ್ಕೆಂದು ಹೇಳಲಪ್ಪಾ ನಾನು ಗರ್ಭವತಿಯಂದು

**ಭದ್ರ** – ಕಷ್ಟ ಬರಲಿ, ಸುಖ ಬರಲಿ ಅದು ದೇವ ಪ್ರಸಾದ ಅತ್ತಿಗೆಮ್ಮಾ

**ಪಾರ್ವತಿ** – ಈ ವೇದಾಂತದ ಮಾತಿರಲಿ, ಬಾ ಯಿಲ್ಲಿ ಕುಳಿತುಕೋ ಊಟ ಮಾಡಿ ಹೋಗುವಿಯಂತೆ

**ಭದ್ರ** – (ಪಾರ್ವತಿ ಒಳಗೆ ಹೋದ ಮೇಲೆ) ಸಿದ್ದಪ್ಪಜ್ಜ ಕೊಡುವದಿದ್ದರೆ ನೂರು ಕಷ್ಟಗಳನ್ನು ನನಗೆ ಕೊಡು. ಆದರೆ ನನ್ನ ತಾಯಿ, ಅಣ್ಣ, ಅತ್ತಿಗೆಯರಿಗೆ ಸುಖವಾಗಿಡು (ಪಾರ್ವತಿ ರೊಟ್ಟಿ ತಿನಿಸುವಾಗ ಗುಂಡ ಗಾಬರಿಯಿಂದ ಬರವನು)

**ಗುಂಡ** – ಭದ್ರ... ನಿನ್ನ ಹಿಡಿಕೊಂಡು ಹೋಗಾಕ ಪೋಲೀಸ ಪಾರ್ಟಿನೆ ಬರಾಕ ಹತ್ತೇತಿ. ಇಲ್ಲಿಗೇ ಬಂದ್ರು. ಎಲ್ಲಿಯಾದರೂ ಅಡಗಿಕೊ

**ಭದ್ರ** – ಬರಲಿಬಿಡೊ, ಬಂದ ಮೇಲೆ ನೋಡಿದರಾಯಿತು

**ಪಾರ್ವತಿ** – ಬೇಡ ಭದ್ರ.. ಪೋಲೀಸ್ ವಾಸ ಒಳ್ಳೇದಲ್ಲ. ಹಿತ್ತಲದಲ್ಲಿದ್ದ ಹೊಟ್ಟಿನ ಬಣವಿಯಲ್ಲಿ ನಿನ್ನ ಮುಚ್ಚಿಟ್ಟು ಬಿಡತೀನಿ ಬಾ ಏಳು

**ಭದ್ರ** – ಅಂದ್ರೇನು ಅತ್ತಿಗೆಮ್ಮಾ, ಅವರಿಗೆ ಹೆದರಿ ನಾನು ಅಡಗಿಕೊಳ್ಳಲೀ?

**ಪಾರ್ವತಿ** – ಅದೇನೆ ಇರಲಿ ಈಗ ನಾನು ಹೇಳಿದಷ್ಟು ಕೇಳು. ಬೇಗನೆ ನಡಿ ಭದ್ರಿ (ಒಳಗೆ ಹೋದ ಮೇಲೆ ಪೋಲೀಸರು, ವೆಂಕಪ್ಪ, ಮರಿಯಪ್ಪ, ಕೆಂಚಪ್ಪ, ಭೈರ ಬರುವರು)

**ಫೌಜದಾರ** – ಇದೆ ಏನೊ ಆ ಭದ್ರನ ಮನೆ

**ಭೈರ** – ಹೂನ್ರಿ ಸಾಹೇಬರೇ, ಯಾರದಿರವ್ವ ಒಳಗ (ಪಾರ್ವತಿ ಬರುವಳು)

**ಮರಿಯಪ್ಪ** – ಸಾಹೇಬರೇ ಇವಳೇ ಆ ಭದ್ರ ಅಣ್ಣನ ಹೆಂಡತಿ. ಇವಳು ನೋಡುವದಕ್ಕೆ ಹೂವಿನಂತಿದ್ದರೂ ಗುಣಾ ಹಾವಿನಂತಹದ್ದು

**ವೆಂಕಪ್ಪ** – ಹೌದ್ರಿ ಸಾಹೇಬರೇ ಸಾವುಕಾರ್ರು ಒಮ್ಮೆ ಕಡಿಸಿಕೊಂಡಿದ್ರು

**ಮರಿಯಪ್ಪ** – ಕಡಿಸಿಕೊಂಡಾರಾ

**ವೆಂಕಪ್ಪ –** ಗೂಡು ಸುಡಿಸಿಕೊಂಡ ಮೇಲೆ ಹಾವು ಕಡಿಸಿಕೊಂಡಂತೆ ಅಲ್ಲವೇನು?

**ಫೌಜದಾರ –** ಏ ಏ .... ಮರಿಯಪ್ಪನ ಗೂಡು ಸುಟ್ಟ ಆ ಭದ್ಮಾಸ್ ಭದ್ರಿ ಮನೆಯಲ್ಲಿ ಇದ್ದಾನೇನೋ

**ಪಾರ್ವತಿ –** ಭದ್ರಿ ಮನೆಯಲ್ಲಿ ಇಲ್ಲ ಸಾಹೇಬರೆ. ಅಲ್ಲದೆ ಅವನು ಗೂಡು ಸುಟ್ಟಿಲ್ಲ

**ಫೌಜದಾರ –** ಮನೆಯಲ್ಲಿ ಇರದಿದ್ದರೆ ಇಲ್ಲಾಂತ ಅಷ್ಟೇ ಹೇಳು. ಗೂಡು ಸುಟ್ಟಿಲ್ಲವೆಂದು ಹೇಳುವ ಉದ್ದಟತನ ನಿನಗೇಕೆ? ಮನೆಯಲ್ಲಿ ಇರದಿದ್ದರೆ ಮತ್ತೆಲ್ಲಿಗೆ ಕತ್ತಿ ಕಾಯಲಿಕ್ಕೆ ಹೋದಾ

**ಪಾರ್ವತಿ –** ಎಲ್ಲಿರುವನೋ ಏನೋ? ಅವನನ್ನು ಮನೆಯಿಂದ ಹೊರದೂಡಿ ಇಂದಿಗೆ ಆರು ದಿನಗಳಾದವು ಸಾಹೇಬರೇ

**ಫೌಜದಾರ –** ಏ ಅವಳನ್ನೇನು ನೋಡುವಿರೋ. ಒಳಗೆ ಹೋಗಿ ಶೋಧನೆ ಮಾಡ್ರಿ (ಪೋಲೀಸರು ಒಳಗೆ ಹೋಗಿ ಬಂದು)

**ಪೋಲೀಸ್ –**ಭದ್ರ ಮನೆಯಲ್ಲಿ ಇಲ್ರಿ ಸಾಹೇಬರೆ

**ಫೌಜದಾರ –** ಹಾಗಿದ್ದರೆ ಮತ್ತೆಲ್ಲಿಗೆ ಹೋದ? (ಸಂಗವ್ವ – ಸಿದ್ಧ ಬರುವರು)

**ಸಂಗವ್ವ –** ಯಪ್ಪಾ ಪೋಲೀಸರೆ... ನನ್ನ ಮಗಾ ತಪ್ಪಿ ನಡೆಯುವವನಲ್ಲ. ನನ್ನ ಮಾತು ಹೊಟ್ಯಾಗ ಹಾಕ್ಕೊಂದು ನನ್ನ ಮಗನ್ನ ಬಿಟ್ಟು ಹೋಗ್ರಿಯಪ್ಪಾ....

**ಫೌಜದಾರ –** ಏ.... ಸರಿಯಾಚೆ ಮಗನಿಗೆ ಬುದ್ಧಿವಾದ ಹೇಳುವುದನ್ನು ಬಿಟ್ಟು ಕಾಲು ಹಿಡಿಯಲು ಬಂದಿದ್ದಾಳೆ. ಏ ನೀನೇ ಎನ ಆ ಭದ್ರಿ ಅಣ್ಣ, ಬೊಗಳೊ ಎಲ್ಲಿದ್ದಾನೆ?

**ಸಿದ್ಧ –** ಅವನನ್ನು ಮನೆಯಿಂದ ಹೊರದಬ್ಬಿ ಆರು ದಿನಗಳಾದವು ಸಾಹೇಬರೆ

**ಮರಿಯಪ್ಪ –** ಭದ್ರ ಮನೆಯಲ್ಲೆ ಇದ್ದನೆಂದು ಊರ ಜನಾ ಎಲ್ಲಾ ಹೇಳ್ತಾರೆ ಹೇಳೊ ಎಲ್ಲಿದ್ದಾನೆ?

**ಸಿದ್ದ –** ಅಂವಾ ಮನೆಯಲ್ಲಿ ಇಲ್ಲ ಸಾವಕಾರ್ರೆ

**ಫೌಜದಾರ –** ಒಳ್ಳೆ ಮಾತಿನಿಂದ ನೀವೆಲ್ಲಿ ಹೇಳ್ತಿರಿ (ಹೊಡೆಯಹತ್ತುವನು. ವೆಂಕಪ್ಪ ಬಿಡಿಸಿಕೊಳ್ಳುತ್ತ)

**ವೆಂಕಪ್ಪ –** ಸಾಹೇಬರ ನಾ ಹೇಳಸ್ತಿನಿ. ತಮ್ಮ ಸಿದ್ದಣ್ಣ ನೀನು ಒಳ್ಳೆ ಹುಡುಗ ಸುಳ್ಳು ಹೇಳೋನಲ್ಲ. ನಿನ್ನ ತಮ್ಮ ಎಲ್ಲಿ ಅದಾನೋ ಅಷ್ಟು ಹೇಳು. ನಿನಗ ಹೊಡಿಲಾರಂದಂಗ ಸಾಹೇಬರಿಗೆ ನಾ ಹೇಳಿಕೊಂತಿನಿ

**ಸಿದ್ದ –** ನಿಜವಾಗಿಯೂ ಅವ ಮನೆಯಲ್ಲಿ ಇಲ್ರಿ ಕುಲಕರ್ಣಿರೆ ನಾನ್ಯಾಕೆ ಸುಳ್ಳ ಹೇಳ್ಲಿ

**ವೆಂಕಪ್ಪ –** ಹಾಗಿದ್ದರೆ ನೀನು ಹೊಲಕ ಹೋದಾಗ ಅವಾ ಮನಿಗೆ ಬಂದಿರಬೇಕು. ಇಲ್ಲೆ ಕೂತು ಊಟಾ ಮಾಡತಿದ್ದ ಅಂತ ಊರ ಜನರೆಲ್ಲರೂ ಹೇಳ್ತಾರ. ಭೈರ ನಾ ನೋಡೀನಿ ಅಂತಾನ

**ಭೈರ –** ನನ್ನಂಥ ನಾನS ನೋಡಿನಲ್ರಿ, ಇನ್ನೇನು ಉಳಿಯಿತು ನಿಕಾಲಿ

**ಮರಿಯಪ್ಪ –** ಸಾಹೇಬರೆ ನಿಜಾ ಹೇಳೋದಾದರೆ ಈ ತಾಯಿ ಮಗನಿಗೆ ಅವನ ಸುದ್ದೀನೆ ಗೊತ್ತಿಲ್ಲ. ಏನಿರದೂ ಗತ್ತುಗಾರಿಕೆ ಆ ಹುಡಿಗಿಯಲ್ಲೆ? ಸಾಹೇಬರೆ ಬಣ್ಣ ನೋಡಿ ಈ ಹೆಣ್ಣಿನ ಗುಣಾ ಅಳಿಬ್ಯಾಡ್ರಿ. ಕಣ್ಣು ನೋಡಿ ಅರ್ಥ ಮಾಡಿಕೊಳ್ರಿ ಮಾತಿಗೆ ಉದುರುವ ಮಾವಿನಕಾಯಿ ಅಲ್ರಿ ಸಾಹೇಬರೆ? ಬಡತಾ ಬೇಕ್ರಿ

**ಫೌಜದಾರ –** ಇಂಥ ಸಾವಿರ ಹೆಣ್ಣುಗಳ ಗುಟ್ಟು ಬಯಲಿಗೆಳೆದ ವ್ಯಕ್ತಿ ನಾನು. ಇಂಥವಳ ಪಾಡೇನು.... ಹೂಂ.... ಹೇಳು....

**ಪಾರ್ವತಿ –** ಇಲ್ಲ ನನಗೆ ಗೊತ್ತಿಲ್ಲ

**ಫೌಜದಾರ –** ನಿನಗೆ ಗೊತ್ತಿಲ್ಲ (ಚಾಟಿಯಿಂದ ಹೊಡೆಯುವನು) ಹೂಂ.... ಹೇಳು

**ಪಾರ್ವತಿ –** ಇಲ್ಲ ಸತ್ತರೂ ಹೇಳುವದಿಲ್ಲ

**ಫೌಜದಾರ –** ಸತ್ತರೂ ಹೇಳುವದಿಲ್ಲ (ಹೊಡೆಯುವನು) ನೋಡು ನಿನ್ನ ಮೈಚರ್ಮ ಸುಲಿತೀನಿ

**ಪಾರ್ವತಿ –** ಯಾರು ಬೇಡೆನ್ನುವರು? ಸುಲಿಯುವ ಚರ್ಮದೊಂದಿಗೆ ನಮ್ಮ ಕರ್ಮವಾದರೂ ಕಳೇದೀತು. ಆಗಲಾರದೂ ನಮ್ಮನ್ನು ಹುಟ್ಟಿಸಿದ ದೇವರಿಗೆ ಕರುಣೆ ಬಂದೀತು

**ಮರಿಯಪ್ಪ –** ಈ ಪುರಾಣ ಕೇಳಲಿಕ್ಕಲ್ಲ ಅವರು ನಿನ್ನ ಹೊಡಿತಾ ಇರೋದು

**ವೆಂಕಪ್ಪ –** ಭದ್ರ ಎಲ್ಲಿ ಅದಾನೊ ಅದು ಮುಖ್ಯ

**ಪಾರ್ವತಿ** – ಗೊತ್ತು ಸಾವುಕಾರರೆ ಹೊಡೆಯುವದಷ್ಟೆ ಏಕೆ ಸುತ್ತಿಗೆ ಇಟ್ಟು ನನ್ನ ಮಸ್ತಕ ಸೀಳಿದರೂ ಭದ್ರ ಇರುವ ಸ್ಥಳ ನಾನು ತಿಳಿಸುವದಿಲ್ಲ

**ಮರಿಯಪ್ಪ** – ಹಾಂ ನೋಡ್ರಿ ಸಾಹೇಬರೆ ಗೊತ್ತಿದ್ದು ಹೇಳೋದಿಲ್ಲಾ ಅಂತಾಳ

**ವೆಂಕಪ್ಪ** – ಅದೂ ನಿಮ್ಮೆದುರಿಗೆ ! ಇನ್ನ ಹ್ಯಾಂಗ ಹೇಳಿಸ್ತೀರಿ

**ಫೌಜದಾರ** –ಹೇಳಸ್ತೀನಿ ತಡ್ರಿ. ಮರದ ಮುಖದಿಂದ ಮಾತಾಡಿಸಿದ ವ್ಯಕ್ತಿ ನಾನು. ಏ ನೋಡುವಿರೇನೋ ಒಂದು ಭಾರವಾದ ಕಲ್ಲು ತಂದು ಇವಳ ತಲೆಯ ಮೇಲೆ ಹೊರಿಸಿರಿ. ಹೇಳುವವರೆಗೆ ಹೊತ್ತು ಕೊಂಡು ನಿಲ್ಲಲಿ

**ಸಂಗವ್ವ** – ಅಯ್ಯೋ ಪಾರೂ ನಿನ್ನ ತಲೆಯ ಮೇಲೆ ಕಲ್ಲು ಹೊರಸ್ತಾರಲ್ಲೊ? (ತಲೆಯ ಮೇಲೆ ಕಲ್ಲು ಹೊರಸುವರು)

**ಪಾರ್ವತಿ** – ಹೊರಸಲಿ ಬಿಡಿ ಅತ್ತಿ ನೀವ್ಯಾಕ ಅಳತೀರಿ

**ಸಿದ್ಧ** – ಹೌದು ಹೇಳಿ ಬಿಡು ಪಾರು. ನಿನಗಂಥ ಕಷ್ಟವಾದರೆ ಹೊಟ್ಟೆಯಲ್ಲಿರೋ ಕೂಸಾದರೂ ಹ್ಯಾಂಗ ಉಳದೀತು. ಆ ಉಡಾಳನ ಸಲುವಾಗಿ ನೀನ್ಯಾಕ ಪ್ರಾಣಾ ಕಳಕೋಳತೀಯಾ

**ಸಂಗವ್ವ** – ಹೌದು ಹೇಳಿ ಬಿಡು ಪಾರೂ

**ಪಾರ್ವತಿ** – ಅತ್ತೆ ಕಲ್ಲಿನ ಭಾರಕ್ಕೆ ನಾ ಕತ್ತರಿಸಿ ಬೀಳಲೀ... ಕಣ್ಣಲ್ಲಿ ನೆತ್ತರು ಹರಿದು ಹೊರಸೂಸಲಿ. ಹೊಟ್ಟೆಯೊಳಗಿನ ಕೂಸು ಹೊಟ್ಟೆಯಲ್ಲಿ ಸತ್ತು ಸ್ವರ್ಗ ಸೇರಲಿ. ಆದರೆ ಭದ್ರ ಇರುವ ಸ್ಥಳ ತಿಳಿಸಿ ಈ ದ್ರೋಹಿಗಳಿಗೆ ಒಪ್ಪಿಸಿ ನನ್ನ ಮೈದುನನಿಗೆ ದ್ರೋಹ ಬಗೆಯಲಾರೆ ಅತ್ತೆ

**ಸಂಗವ್ವ** – ಪಾರೂ ಈ ನಿನ್ನ ಸಂಕಟ ಅದು ಹೇಗೆ ನೋಡೋದು? ನೋಡು ಸಿದ್ದ ನಿನ್ನ ಹೆಂಡತಿಯ ಕಣ್ಣಲ್ಲಿ ನೆತ್ತರ ಬಂತಲ್ಲೊ ಪಾರೂ ನಿನಗೆ ಕೈ ಮುಗಿತೀನಿ. ಹೇಳು ಆ ಚಾಂಡಾಲನ ಸಂಕಟ ನಾ ಸಹಿಸೇನೂ? ಆದರೆ ಗರ್ಭಿಣಿಯಾದ ನಿನ್ನ ಸಂಕಟ ನಾನು ನೋಡಲಾರೆ. ಹೇಳು ಯಾಕ ನೀನಗೀ ಹಟ

**ಪಾರ್ವತಿ** – ಇದು ಹಟ ಅಲ್ಲ ಅತ್ತೇ ಧರ್ಮ ಸಂಕಟ. ಹಿಂದೊಮ್ಮೆ ಮೈದುನನಾದ ಅವನಿಗೆ ನನ್ನ ಕೈಯಿಂದ ಹಾಲು ಕುಡಿಸಿ

ಮಾತೆಯನ್ನಾಗಿ ಮಾಡಿದ್ದೀರಿ. ಇಂದು ಕುತ್ತಿಗೆ ಕೊಯ್ಯುವ ಈ ಕಟುಕರ ಕೈಗೊಪ್ಪಿಸಿ ಮೃತ್ಯುವಾಗೆಂದು ಬೋಧಿಸುತ್ತೀರಿ. ಹೀಗೆ ಹೇಳುವದು ನಿಮಗೆ ನ್ಯಾಯವೇನತ್ತೆ? ಧರ್ಮವೇನತ್ತೆ? ನಿಮ್ಮಿಂದ ಈ ದುರಂತ ನೋಡುವದಾಗದಿದ್ದಲ್ಲಿ ಇಲ್ಲಿಂದ ಹೋರಟು ಹೋಗಿ

**ಸಂಗವ್ವ** – ಅಯ್ಯಯ್ಯೋ ಎಂಥ ಸಂಕಟ ತಂದು ನಿಲ್ಲಿಸಿದೆಯಪ್ಪಾ.... ನೀನೆಷ್ಟು ಬಡತನ ಕೊಟ್ಟಿದ್ದರೂ ನಾನೂ ಬಾಯಿಬಿಟ್ಟಿರಲಿಲ್ಲಾ... ಉಪವಾಸವಿಟ್ಟಿದ್ದರೂ ನಿನ್ನ ಹೆಸರು ನೆನಸಿ ಉಸಿರೂ ಹಾಕಿರಲಿಲ್ಲಾ.... ಹಸಿದ ನನ್ನ ಮಕ್ಕಳಿಗೆ ಅನ್ನವಿಲ್ಲದಾಗಿ ಹಸಿರು ತಪ್ಪಲು ತಿನ್ನಿಸಿದರೂ ನಿನಗೆ ಕೊಸರಿ ನುಡಿದಿರಲಿಲ್ಲಾ.... ಇಷ್ಟೆಂದರೂ ಈ ಬಡವಿಯ ಬಗ್ಗೆ ನಿನಗೆ ದಯ ಮೂಡಲಿಲ್ಲವೇನಪ್ಪಾ... ಎಲೋ ಭದ್ರ ಎಲ್ಲಿರಿವಿಯೋ ಇಲ್ಲಿ ನಿನ್ನ ಅತ್ತಿಗೆಯ ತಲೆಯ ಮೇಲೆ ಕಲ್ಲು ಹೊರಿಸಿ ಕಣ್ಣಲ್ಲಿ ನೆತ್ತರು ಹರಿಸಿ ಕೊಲ್ಲತೊಡಗಿದ್ದಾರೆ. ಬಾರಲೋ ಭದ್ರ

**ಭದ್ರ** – (ಒಳಗೆ) ಅವ್ವಾ... (ಚೀರಿದ ಕೂಡಲೇ ಎಲ್ಲರೂ ಓಡಿ ಹೋಗುವರು ಭದ್ರ ಹೊರಗೆ ಬಂದು) ಯಾರವರು ನನ್ನತ್ತಿಗೆಯ ತಲೆಯ ಮೇಲೆ ಕಲ್ಲು ಹೊರಸಿದವರು (ಕಲ್ಲು ಕೆಡವಿ ಫೌಜದಾರನಿಗೆ) ಚಂಡಾಲಾ ನನ್ನತ್ತಿಗೆಯ ಮೇಲೆ ಕಲ್ಲು ಹೊರಸಿ ಕಣ್ಣಲ್ಲಿ ನೆತ್ತರು ಹರಿಸಿದ ನಿನ್ನ ಮಸ್ತಕವನ್ನೇ ಸೀಳಿ ಬಿಡುತ್ತೇನ (ಫೌಜದಾರನಿಗೆ ಹೊಡೆಯಲು ಹೋಗುವಾಗ ಸಂಗವ್ವ, ಸಿದ್ದ ಹಿಡಿದುಕೊಳ್ಳವರು. ಪಾರ್ವತಿ ಚೀರಿ ನೆಲಕ್ಕೆ ಬೀಳುವಳು)

**ಫೌಜದಾರ** – ನೋಡುವಿರೇನೋ ಬಂಧಿಸಿರಿ ಇವನನ್ನು. ಓಡಿ ಹೋಗ್ತಾರೆ ಪುಕ್ಕಲು ನನ್ನ ಮಕ್ಕಳು ಹಗ್ಗದಿಂದ ಬಿಗಿಯಾಗಿ ಕಟ್ಟಿರಿ

**ವೆಂಕಪ್ಪ** – ಸಾಹೇಬರೆ ಸರ್ಪರಿ ಅದು ಸರ್ಪ!

**ಮರಿಯಪ್ಪ** – ಸರ್ಪವಾದರೇನಾಯಿತೂ ಮುರಿತಲ್ಲ ಇದರ ದರ್ಪ! ಇನ್ನೇನೂ ಹೇಡೀ ಹೊಡಿಯೋದು, ಕೊಲ್ಲೋದು (ಭದ್ರ ಮರಿಯಪ್ಪನ ಮೇಲೆ ಏರಿ ಹೋಗುವನು. ಫೌಜುದಾರನೂ ಭದ್ರನ್ನ ಹೊಡೆಯ ಹತ್ತುವನು. ಪಾರ್ವತಿ ಎದುರು ಬಂದು ಬಿಡಿಸಿಕೊಳ್ಳುವಳು, ಅಳುವಳು)

**ಭದ್ರ** – (ಸಿಟ್ಟು, ದುಃಖದಿಂದ) ಅಳಬೇಡ ಅತ್ತಿಗೆ ಹೊಡೆಯಲಿ, ಬಡಿಯಲಿ, ನನಗೆ ಜೇಲಾಗಲಿ, ಕೊನೆಗೆ ಗಲ್ಲಿಗೇರಿಸಲಿ. ನೀನು ಮಾತ್ರ ಕೇವಲ

ನನಗೋಸ್ಕರ ಅಳಬೇಡ. ಅಳುವದಿದ್ರೇ ಬಡತನದ ಕೈಯಿಂದ ಬಡತನವನ್ನೂ ಕೊಲ್ಲಿಸುವ ಈ ಸಂಪತ್ತಿನ ಒಡೆತನವನ್ನು ಕಂಡು ಅಳು. ನಮ್ಮಂತೆ ಬಡವರಾದ ಇವರೂ ಸಂಪತ್ತಿನ ಒಡೆತನಕ್ಕೆ ತಲೆಬಾಗಿ ಸುಳ್ಳು ಸಾಕ್ಷಿ ನುಡಿಯುವದನ್ನು ಕಂಡು ಅಳು.... ಸರ್ಕಾರದ ಸಂಬಳ ಸಾಕಷ್ಟು ತಿಂದರೂ ಸಾಕಾಗದೇ ಶ್ರೀಮಂತರ ಹಣಕ್ಕೆ ಕೈಚಾಚಿ ಬಡವರನ್ನು ಪೀಡಿಸುವ ಇಂಥ ಷಾಷಂಡಿ ಪೋಲೀಸರನ್ನು ಕಂಡು ಅಳು.... .... ಮರಿಯ ಈ ಕುತ್ತಿನಿಂದ ನಾನು ಉಳಿದು ಬಂದರೆ ಮುಂದೆ ನೀನು ಉಳಿಯುವುದು ಕಷ್ಟ. ಮುಗಿದಿಲ್ಲ ಭದ್ರನ ರುದ್ರ ನಾಟಕ. ಇಲ್ಲಿಗೆ ಮಧ್ಯಂತರ. ಮುಂದಿಹುದು ದುರಂತ ದೃಶ್ಯಗಳ ಮಹಾಪೂರ (ಭದ್ರನ್ನ ಎಳೆದುಕೊಂಡು ಹೋಗುವರು)

**ಪಾರ್ವತಿ –** ಭದ್ರ.... .... (ಅಳುತ್ತ ಒಳಗೆ ಹೋಗುವಳು) ಅತ್ತೇ ???

**ಸಂಗವ್ವ –** (ಒಳಗೆ ಹೋಗಿ ಬಂದು) ಸಿದ್ದಾ ನಿನ್ನ ಹೆಂಡತಿಯು ಗರ್ಭಪಾತವಾಯಿತಲ್ಲೋ ಸಿದ್ಧ .... (ತೇಕುತ್ತ) ನನ್ನ ಮನಿ ಹಾಳಾಯಿತು. ನನ್ನ ವಂಶ ನಿರ್ವಂಶವಾಯಿತು ಶಿವಾ ನನ್ನ ಹಡಗ ಮುಳಿಗಿ ಹೋಯಿತು.... ಸಿದ್ದ... ಪಾರೂ... ಭದ್ರ.... (ಸಾಯುವಳು)

**ಸಿದ್ಧ –** ಅವ್ವಾ... ಅವ್ವಾ.... (ಸಿಟ್ಟಿನಿಂದ ಎದ್ದು) ಈಗಲಾದರೂ ಮನಸ್ಸಿಗೆ ಸಮಾಧಾನ ವಾಯಿತೇನ್ರಪ್ಪ, ನಿಮ್ಮೆಲ್ಲರ ಆತ್ಮಕ್ಕೆ. ನನ್ನ ತಮ್ಮನ್ನ ಜೇಲಿಗೆ ಕಳಿಸಿ ನನ್ನ ಹೆಂಡತಿಗೆ ಗರ್ಭಪಾತ ಮಾಡಿಸಿ ನಮ್ಮವ್ವನ ನುಂಗಿ ನೀರು ಕುಡಿದಿರಲ್ಲ ಈಗಲಾದರೂ ಸಮಾಧಾನವಾಯಿತೆ ನಿಮ್ಮೆಲ್ಲರ ಮನಸ್ಸಿಗೆ ಕೆಂಚಪ್ಪಜ್ಜಾ

**ಕೆಂಚಪ್ಪ –** (ಅಕ್ಕರೆಯಿಂದ ಕೆಂಚಪ್ಪ, ಭೈರ, ಗುಂಡ ಎಲ್ಲರೂ ಒಂದಾಗುವರು) ಸಿದ್ದಾ ಸಿದ್ದಾ ತಿಳಿಯಲಾರದೆ ನಾವೆಲ್ಲ ಈ ಮರಿಯನ ಮಾತ ಕೇಳಿ ನಿನಗೆ ಮಾಡಬಾರದ ಅನ್ಯಾಯ ಮಾಡಿದೀವಿ. ಇನ್ನ ಮೇಲೆ ಅವನ ಮಾತು ಯಾರೂ ಕೇಳೋದಿಲ್ಲ. ಇನ್ನು ಇವನಂತೆ ಕೋರ್ಟಿನ್ಯಾಗ ಯಾರು ಸಾಕ್ಷಿ ಹೇಳೋದು ಬ್ಯಾಡ. ಒಳ್ಳೆ ಮಾತಿನಿಂದ ಭದ್ರನ್ನ ಬಿಡಿಸಿಕೊಂಡು ಬಂದರೆ ಸರಿ. ಇಲ್ಲದಿದ್ದರೆ ಈ ಸಾವಕಾರ ಮರಿಯನ ಮನಿಗೆ, ಈ ಕುಂಟ ಕುಲಕರ್ಣಿ ಎಂಕ್ಯಾನ ಮನಿಗೆ ಬೆಂಕಿ ಇಟ್ಟು ಸುಟ್ಟು ಬಿಡೋನು (ಎಲ್ಲರೂ ಹೋಗುವರು)

===**=====**===

# ದೃಶ್ಯ ೧೦

ರಸ್ತಾ

**ವೆಂಕಪ್ಪ –** (ಮಸುಕು ಹಾಕಿಕೊಂಡು ಓಡಿ ಬಂದು) ಅಂತೂ ಪೌಜದಾರ ಸಾಹೇಬರು ಇನ್ನೂ ಚ್ಯಾವಡ್ಯಾಗ ಇದ್ರು ಅಂತ ಪಾಡಾಯಿತು. ಇರದಿದ್ರೆ ಊರಮಂದಿ ಎಲ್ಲಾ ಒಂದಾಗಿ ನಮ್ಮ ಮನಿ ಸುಡತೀವಿ ಅಂತ ಕೊಡ್ಲಿ, ಬಡಿಗಿ ಹಿಡಕೊಂಡು ಬಂದಿದ್ದರು. ಆ ಹುಡಗನ್ನ ಬಿಡಿಸಿಕೊಂಡು ಬರದಿದ್ರೆ ನಮ್ಮ ಮನಿ ಅಷ್ಟೇ ಅಲ್ಲ, ನಮ್ಮನ್ನ ಅದರಾಗ ಹಾಕಿ ಸುಟ್ಟು ಬಿಡತಿದ್ರು. ಇನ್ನೊಮ್ಮೆ ಬುದ್ಧಿ ಓಡಸಾಕ ಹೋಗಬಾರದು (ಚೆನ್ನಿ ಬರುವಳು) ಏ ನಿಲ್ಲು ಸ್ವಲ್ಪ ನೀರಿಗೆ ಹೊರಟೀಯಂತ ಕಾಣತ್ತ ದಾರ್ಯಾಗ ಯಾರೂ ಇದ್ದಂಗಿಲ್ಲ. ಸ್ವಲ್ಪ ಬದಿಗೆ ನಿಂತು ಮಾತಾಡೋನು. ಬಾ ಇಲ್ಲಿ ನಿನ್ನ ಮನಿ ಹಾರಿ ಬೀಳೋದು ಅಷ್ಟರಾಗ ಐತಿ

**ಚೆನ್ನಿ –** ನಿಂತರ ನಡೀಬೇಕಲ್ರಿ ಕುಲಕರ್ಣೆರ. ನಿಮ್ಮಂಗ ನಮಗೇನೂ ದುಡಿಲಾರದೆ ಬರುತ್ತೇನು?

**ವೆಂಕಪ್ಪಾ –** ಬರತದ.... ನಿನಗೂ ಯಾವದೋ ಒಂದು ರೀತಿಯಿಂದ ದುಡಿಲಾರದ ಬರತದ

**ಚೆನ್ನಿ –** ದುಡಿಲಾರದ ಅದು ಹ್ಯಾಂಗ ಬರತದ?

**ವೆಂಕಪ್ಪಾ –** ಹ್ಯಾಂಗ ಬರತದ ಅಂದ್ರ ಮರಿಯಪ್ಪನ ಮನಿಯೊಳಗಿಂದ ಹರದ ಬರತದ

**ಚೆನ್ನಿ –** ಹರದೇನೂ ಬರತ್ತ. ಆದರೆ ಬಂದಿದ್ದೆಲ್ಲ ಮತ್ತ ಹಳ್ಳಕೂಡಿ ಹರದ ಹೋಗುತ್ತ. ನೀನೊಬ್ಬ ಅದಿಯಲ್ಲ, ಊರಾಗ ಹರಕೊಂಡು ತಿನ್ನೊ ಹದ್ದು. ಯಾವಾಗ ಕುಕ್ಕೇನೂ ಅಂತ ಹನ್ನೆರಡು ತಾಸು ನೆತ್ತಿ ಮ್ಯಾಲೆ ಹಾರ್ಯಾಡತೀಯಲ್ಲ ಏ ಕುಲಕರ್ಣೆ

ವೆಂಕಪ್ಪಾ – ಎಲಾ ರಂಡೆ, ನನಗೆ ಏ ಕುಲಕರ್ಣಿ ಅಂತೀಯಾ? ಗುರತಿಲ್ಲೇನೂ ಊರ ಜನರೆಲ್ಲ ನಗರೀ ಹಾಕತಾರ ನೀನೂ ಹಾಕಬೇಕಾಗತದ. ಹಾಕೂ. ಯಾಕ್ರಿ ಕುಲಕರ್ಣಿರ ದಾರ‍್ಯಾಗ ಒಬ್ಬರೆ ನಿಂತುಕೊಂಡಿರಾ? ನಿಮಗೇನಾದರೂ ಬೇಕಾಗಿತ್ತ? ನಿಮ್ಮ ಮನಸ್ಸಿನೊಳಗೆ ಏನಾದರೂ ಆಸೆ ಅಭಿಲಾಷೆ ಆಕಾಂಕ್ಷೆಗಳು ಉಂಟಾ.... ಹಿಂಗ ಕೇಳು

ಚೆನ್ನಿ – ಕತ್ತಿ ಬೆನ್ನೂ ಕತ್ತೀನೂ ನೆಕ್ಕುತ್ತ. ಆದರೆ ಯಾಕ ನೆಕ್ಕತ್ತ?

ವೆಂಕಪ್ಪ – ಅಂದ್ರೇನೇ ಊರು ಕತ್ತಿ. ನನಗ ಕತ್ತಿ ಅಂತಿಯಾ?

ಚೆನ್ನಿ – ಅದರಕ್ಕಿಂತ ಅತ್ತತ್ತ ಅನ್ನು. ಕತ್ತಿ ಕರಕಿ ತಿಂದರೂ ಕಂಡವರ ಚಾಕರಿ ಮಾಡುತ್ತ. ನಿನ್ನ ಅದಕ ಹೋಲಿಸಿದರ ಹ್ಯಾಂಗಾದೀತು? ನೀನು  ನೀನು ಕಟುಕ ಇದ್ದಂಗ, ಊರು ಕುರಿ ಇದ್ದಂಗ

ವೆಂಕಪ್ಪ – ಕಟುಕ ಇದ್ದಂಗ ನಾನು

ಚೆನ್ನಿ – ಮತ್ತೆ ಅಲ್ಲೇನು? ಕಟಕ ಕುರಿ ಕತ್ತೀಲೆ ಕೊಯಿದರ, ನೀನು ಮನುಷ್ಯರ ಕುತ್ತಿಗೆ ಕೂದಲೆಳೆಯಿಂದ ಕೊಯ್ತೀದಿ

ವೆಂಕಪ್ಪ – ಯಲಾ ಇವಳ ಈಗ ನಾನ್ಯಾರ ಕುತ್ತಿಗೆ ಕೊಯ್ತೀನೆ? ಏನು ಹಾಗಂದರ

ಚೆನ್ನಿ – ಕೊಯ್ದಿಯಲ್ಲ ಸಾವಕಾರ ಮರಿಯಂದು

ವೆಂಕಪ್ಪ – ಮರಿಯಂದ.... ನೋಡ ಚೆನ್ನಿ ಕೊಯ್ಯಪ್ಪಾ ಅಂತ ಕೊರಳಲ್ಲಿ ಬೇವಿನ ಸರ ಹಾಕ್ಕೊಂಡು ನನ್ನ ಮನೆ ಬಾಗಲಿಗೆ ಬಂದ ನಿಂತ್ರ ನಾನ್ಯಾಕೆ ಬಿಡ್ಲಿ. ನೋಡ ಚೆನ್ನಿ ಕೊಂದ್ರ ಪಾಪಂತ ತಿಂದ್ರ ಪರಿಹಾರ ಆಯಿತಂತ. ನಾನೂ ಎರಡೂ ಮಾಡತೀನಿ

ಚೆನ್ನಿ – ಸಂಗವ್ವನ ಮನಿಗೆ ಸೊಸಿ ಬಂದ್ರ ನೀನು ಯಾಕ ಮಂಗ್ಯಾನಂಗ ಮಾಡಬೇಕು

ವೆಂಕಪ್ಪ – ಭದ್ರನ ಕೈಯಿಂದ ಹೊಡಿಸಿಕೊಂಡು ಹಲ್ಲು ಮುರಿಸಿಕೊಳ್ಳಾಕ. ಮತ್ತೆ ನಾನು ನಿನ್ನ ಸಲುವಾಗಿಯೇ ಅಲ್ಲವೇನೆ ರಂಡೆ ಈ ಕಾಲು ಮುರಿಸಿಕೊಂಡಿದ್ದು

ಚೆನ್ನಿ – ಅಂತೂ ಗುರ್‍ತು ಉಳಿತಲ್ಲ (ಹೋಗಹತ್ತುವಳು)

ವೆಂಕಪ್ಪ – ನಿಲ್ಲು

॥ ಪದ ॥

ಮೆಲ್ಲ ಮೆಲ್ಲನೆ ಬಂದೀನೆ । ನಿನ್ನಲ್ಲಿನಲ್ಲಿ ಮೆಲ್ಲಮೆಲ್ಲನೇ ಬಂದೆನೇ ॥
ಮೆಲ್ಲಮೆಲ್ಲನೆ ಬಂದು ಗಲ್ಲಕ್ಕೆ । ಮುದ್ದುಕೊಟ್ಟು ನಿಲ್ಲಗೊಡುವೆನೀಗ ॥
ಒಲ್ಲದ ಮನಸ್ಯಾಕೆ ॥ ಮೆಲ್ಲ ॥ ಎಳೆಹರೆಯದಲಿ ಮೊದಲು ॥
ಮುರಿಸೀದಿ ಬಲಗಾಲು । ಬಯಸೀ ಕರೆಯುವೆ ಬಾಲೆ ಆಗೂ ನೀ
ಅನುಕೂಲೆ ॥ ಮೆಲ್ಲ ॥

(ಚೆನ್ನವ್ವನ ಮೇಲೆ ಏರಿ ಹೋಗುವನು. ಚೆನ್ನಿ ದೂಡುವಳು) ನಮ್ಮ ಕಾಲು ಕುಂಟೈತಿ ಅಂಬೋದು ಗೊತ್ತಿದ್ದು ಈ ರೀತಿ ದೂಡತಾರೇನ್ರಿ

**ಚೆನ್ನಿ** — ಮತ್ತ ದಾರ‍್ಯಾಗ ಹೀಂಗ ಮಂಗ್ಯಾನಂಗ ಮಾಡ್ತರೇನ್ರಿ

**ವೆಂಕಪ್ಪ** — ಏನೋ ಒಂದ ನಮೂನಿ ಕಾವ ಮಾಡಿದೆ

**ಚೆನ್ನಿ** — ಇನ್ನರೆ ಮ್ಯಾಕ ಏಳು....

**ವೆಂಕಪ್ಪ** — ನೀನು ಸ್ವಲ್ಪ ಕೈಹಿಡಿದು ಎತ್ತಿ ಬಿಡು ಸಿಗಲಾರದೆ ಓಡಿ ಹೋಗತೀನಿ (ಚೆನ್ನವ್ವ ಕೈಹಿಡಿದು ಎತ್ತುವಾಗ ಕೈ ಹಿಚುಕುವನು ಚೆನ್ನಿ ಬಡಿಯುವಳು) ಹೊಡಿ ಬ್ಯಾಡೆ ಹೊಡಿಬ್ಯಾಡೆ ಊರಾಗ ನಾನು ಬಹಳ ದೊಡ್ಡ ಮನುಷ್ಯ

**ಚೆನ್ನಿ** — ಮತ್ತೆ ದೊಡ್ಡ ಮನುಷ್ಯರ ಹತ್ತರಾನ ಇಂಥವು ಇರೋದು

**ವೆಂಕಪ್ಪ** — ಅವು ಇರತಾವಂತ ನಾವು ದೊಡ್ಡ ಮನುಷ್ಯರು ಅನ್ನಿಸಿಕೊಳ್ಳತೀವಿ

**ಚೆನ್ನಿ** — ಸರಿ ಇನ್ನರ ದಾರಿ ಬಿಡು. ಯಾರರ ಕಂಡ್ರ ಛೀ ಹಾಕಿ ಚಿಪ್ಪು ಕಟ್ಯಾರು ಕೊಳ್ಳಾಗ

**ವೆಂಕಪ್ಪ** — ಚಿಪ್ಪು ಯಾಕ ಕಟ್ಟತಾರ?

**ಚೆನ್ನಿ** — ನಿನಗೇನೂ ಗಂಡಸು... ಏನು ಮಾಡಿದರೂ ನಡಿತೈತಿ. ಆದರೆ ಹೆಣ್ಣಿಂದು ಹಾಂಗಲ್ಲ ನೋಡು. ನಿಮ್ಮಿಬ್ಬರ ಸಲುವಾಗಿ ಅಲ್ಲೇನು ನಾನು ಗಂಡನ್ನ ಕಳಕೊಂಡು ಬಾಳ್ವೆ ಮೂರಾಬಟ್ಟೆ ಮಾಡಿಕೊಂಡು ಮೂಲಿ ಹಿಡಿದು ಕುಂತಿದ್ದು

**ವೆಂಕಪ್ಪ** — ಮೂಲಿ ನೀ ಏನ ಹಿಡಿದಿ? ಕಾಲು ಮುರಿಸಿ ನನ್ನ ಮೂಲಿ ಹಿಡಿಸಿದಿ. ಕಿವಿ ಕೊಯಿಸಿ ಮರಿಯನ ಮೂಲಿ ಹಿಡಿಸಿದಿ. ಈಗ ಮತ್ತ ಎಲ್ಲಾ ಮಾಡಿಸಿ ಆ ಮರಿಯನ್ನ ಮಳ್ಳ ಮಾಡಿ ದೊಡ್ಡ

ಗಿಡದ ನೆರಳ ಹಿಡಿದು ಕುಂತಿದಿ. ಏನು ಮಾಡತಿ ನನ್ನಂಗ ಬಿಸಲಿಗೆ ನಿಂತಿದ್ರ ಬೆವರ ಹರದ ತಿರಗತಿತ್ತು ನಿನ್ನ ಬಣ್ಣ

**ಚೆನ್ನಿ –** ಆದರೇನಾಯಿತು? ಇದೇನು ಚಂದೇನು ಗಂಡನ ಮನ್ಯಾಗ ಇದ್ರ ಗೌರವ್ವನಂಗ ಇರತಿದ್ದೆ

**ವೆಂಕಪ್ಪ –** ಈಗೇನು ಕಡಿಮೆ ಅದಿಯೇ. ಸಾವಕಾರ್‍ನ ಕೂಡಿಕೊಂಡಲ್ಲೆ ನಮ್ಮೂರ ದುರ್ಗವ್ವ ಆಗೀದಿ

**ಚೆನ್ನಿ –** ಆಂ....

**ವೆಂಕಪ್ಪ –** ಅಲ್ಲಾ ಗ್ರಾಮದೇವತೆ ಅಂತ ಕೈಮುಗಿತೀನಿ. ಬೇಕಿದ್ರೆ ಹೇಳು ಬೆನ್ನಿಗೆ ಬಡಿಸಿ ಬಣ್ಣ ಕೊಡಿಸಲೇನು ವೈಟಪೇಂಟ್

**ಚೆನ್ನಿ –** ಕೊಡಸು ಕೊಡಸು ಊರಾ ಕೆಡಸಾಕ ನಿಂತೀದಿ. ಒಲ್ಲೆ ಅಂದ್ರೆ ಬಿಡತೀಯಾ ಅಲ್ಲ ಇಷ್ಟೆಲ್ಲ ಹಾರ್‍ಯಾಡವ ರಾಜಿಯಾಗಿ ಆ ಭದ್ರಿನ್ನ ಯಾಕ ಬಿಡಿಸಿಕೊಂಡು ಬಂದ್ರಿ ಹೇಳು

**ವೆಂಕಪ್ಪ –** ನೋಡಿದಿಲ್ಲೊ ಊರ ಮಂದೆಲ್ಲಾ ಎದುರಾಗಿ ನಮ್ಮ ಮನಿ ಸುಡತೀವಿ ಅಂತ ಬಂದಿದ್ರು

**ಚೆನ್ನಿ –** ಅದಕ ಹೆದರಿ ಬಿಡಿಸಿಕೊಂಡು ಬಂದಿರೇನು? ಯಾಕ ಫೌಜದಾರ ನಿಮ್ಮಂತೆ ಇದ್ದನಲ್ಲ? ಭದ್ರಿನಂತು ಬಿಡಿಸಿಕೊಂಡು ಬಂದ್ರಿ ಮುಂದ ಹ್ಯಾಂಗ ನಿಮ್ಮಿಬ್ಬರ ಗತಿ

**ವೆಂಕಪ್ಪ –** ಇಬ್ಬರದೂ ಕೇಳಬ್ಯಾಡ? ಅವನೊಬ್ಬನದೆ ಹೇಳು. ಏ ನ್ಯಾಯ ಹಚ್ಚಕ ಕಲ್ತೀನಿ ಅಂದಮ್ಯಾಲೆ ಅದನ್ನು ಮುಗಸಾಕ ಕಲ್ತಿಲ್ಲೇನು ಸಾಲ ಮುಟ್ಟಿತು ಅಂತ ಮರಿಯಪ್ಪನ ಕೈಯಿಂದ ಕಾಗದದ ಸಹಿ ಹಾಕಸ್ತೀನಿ. ಅವರ ಹೊಲಾಮನಿ ಅವರಿಗೆ ಬಿಡಿಸಿಕೊಡಸ್ತೀನಿ ನಮ್ಮ ಮನ್ಯಾಗ ನಾ ತಣ್ಣಗ ಕೂಡತೀನಿ. ಏನೋ ನೀನಾಗಿ ಬರ್ತೀನಿ ಅಂದ್ರ ಬಾ ಅಂತೀನಿ

**ಚೆನ್ನಿ –** ನಾನಾಗಿ ಬರ್ತೀನಿ ಅಂದ್ರ ಬಾ ಅಂತಿಯಾ? ಅದೊಂದು ಕಾಲು ತಿರಿವಿಟ್ಟೇನು

**ವೆಂಕಪ್ಪ –** ಅಗಾ ಬಂದ ನೋಡು ನಿನ್ನ ಸಾವಕಾರ (ಮರಿಯಪ್ಪ ಬರುವನು)

**ಮರಿಯಪ್ಪ –** ಏನಂತಾಳ ಚೆನ್ನಿ?

**ವೆಂಕಪ್ಪ –** ಕೇಳು ಎದುರಿಗೆ ನಿಂತಾಳ. ಭದ್ರಿಗೆ ಹೆದರಿ ರಾಜಿಯಾಗಿ ಬಿಡಿಸಿಕೊಂಡು ಬಂದ್ರಿ ಅಂತಾ ಹೋಯಿಕೊಂತಾಳ.

**ಮರಿಯಪ್ಪ –** ಹೌದಾ?

**ಚೆನ್ನಿ –** ಹೌದು ಅಂತೀನಿ

**ಮರಿಯಪ್ಪ –** ಅನ್ನು ಅನ್ನು ಅನ್ನುವಂಗ ಆಗೇತಿ ಅಂತೀದಿ

**ವೆಂಕಪ್ಪ –** ಹೋಗ್ಲಿ ಬಿಡಪ.... ಇದೆ ಈಗ ನಾನೊಬ್ಬ ಅಂಚ ಅನ್ನಿಸಿಕೊಂಡು ಚಂದಗೇಡಿ ಆಗಿ ನಿಂತೀನಿ. ನೀನೊಬ್ಬ ಮುಖಕ್ಕೆ ಉಗಳಿಸಿಕೊಂಡು ಮಂಗ್ಯಾ ಆಗುವಂತಿದ್ರ ಆಗು. ಆದಷ್ಟು ಬೇಗ ಕಾಗದ ಪತ್ರದ ಕೆಲಸ ಮುಗಿಸಿ ಅವರ ಹೊಲಮನಿ ಅವರಿಗೆ ಬಿಟ್ಟುಕೊಡು. ಇಲ್ಲಾಂದ್ರ ಊರ ಜನಾ ಸುಮ್ಮನಿರೋದಿಲ್ಲ. ಆ ಹುಡುಗ ಸಿಟ್ಟಿಗೆದ್ದು ಮತ್ತೊಮ್ಮೆ ಕೈಯ್ಯಾಗ ಕೊಡ್ಲಿ ತಗೊಂಡಾ ಅಂದ್ರ

**ಚೆನ್ನಿ --** ನಿಮ್ಮಿಬ್ಬರ ರುಂಡಾ ತಗೀತಾನ

**ವೆಂಕಪ್ಪ –** ಬರಿ ದಿಂಬಷ್ಟೆ ಊರಾಗ ಅಡ್ಯಾಡಬೇಕಾಗತದ

**ಮರಿಯಪ್ಪ –** ದುಡ್ಡು ಕೊಡದ ಅವರ ಆಸ್ತಿ ಅವರಿಗೆ ಬಿಟ್ಟುಕೊಡು ಅಂತಿಯಾ?

**ಚೆನ್ನಿ –** ಕೊಡದಿದ್ರ ಭದ್ರಿ ಎಲ್ಲಿ ಬಿಡ್ತಾನ? ನಿಮ್ಮಿಬ್ಬರ ಕುತ್ತಿಗೆ ಮ್ಯಾಲೆ ಇಡತಾನ ಕೊಡ್ಲಿ. ಸಂಗವ್ವನ ಗಂಡನ ಸೆರೆ ಕುಡಿಯಾಕ ಕಲಿಸಿ ಸಾಲ ಮಾಡಿಸಿ ನಿಶೆದಾಗ ಅವನ ಕಡೆಯಿಂದ ಹೊಲಮನಿ ಬರಿಸಿಕೊಂಡ್ರಿ, ಪಾಪ ಹೆಣ್ಣು ಸಂಗವ್ವ ಯಾರು ದಿಕ್ಕಿಲ್ಲದವಳು ಅಂತ ತಿಳಿದು ಇಷ್ಟು ದಿವಸ ಹೊಲಾ ಉಣಕೊಂಡ ಬಂದ್ರಿ. ಈಗ ಅದನ್ನ ಕಾರೊ ಹೊತ್ತು ಬಂದೈತಿ ಕಾರು?

**ಮರಿಯಪ್ಪ –** ನಿನಗೆ ಬುದ್ಧಿ ಹೇಳಾದ ಕರೆಕಳಿಸಿಲ್ಲ ಸುಮ್ಮನೆ ನಿಲ್ಲು. ಏನ ಹಚ್ಚಿಯೋ ನಿನ್ನ ಪಂಟ

**ಚೆನ್ನಿ –** ಹೊಲಸ ಕೆಲಸಾ ನೀವು ಮಾಡಿರಿ. ನಿಮ್ಮಿಬ್ಬರ ಕುತ್ತಿಗೆ ಹಗ್ಗ ಬೀಳತ್ತ ಬಲು ಜೋಕೆ ಅಂದೆ (ಹೋಗುವಳು)

**ಮರಿಯಪ್ಪ –** ವೆಂಕಪ್ಪ ಇಟಗೊಂಡ ಹೆಂಗಸಿನ ನಾಲಿಗೇನೆ ಹರಿತ ಆಯಿತಲ್ಲೋ?

**ವೆಂಕಪ್ಪ –** ಹೌದಪ್ಪಾ ಕಾಲಾನೆ ಅಷ್ಟು ಸುಮಾರ ಬಂದಾವು. ಯಾರೇನು

ಮಾಡ್ತೋದು ಕಾಲಾಯ ತಸ್ಮೈ ನಮಃ ಅಂತ ನಾನು ಮರದ ಕಾಲಿಗೆ ನಮಸ್ಕಾರ ಮಾಡತೀನಿ

**ಮರಿಯಪ್ಪ –** ಕಾಲ ಇರ್ಲಿ ವೆಂಕಪ್ಪ, ಅವರಪ್ಪ ಮಾಡಿದ ಸಾಲ ಕೊಡದಿದ್ರೆ ಬಿಡ್ಲಿ. ಅವರ ಹೊಲಾಮನಿ ಅವರಿಗೆ ಬಿಟ್ಟಕೊಡತೀನಿ. ಆದರ ಸಿದ್ದನ ಮದುವೆಗೆ ಕೊಟ್ಟ ದುಡ್ಡರ ದುಡಿದು ಮಟ್ಟಿಸಲಿಕ್ಕೆ ಹೇಳಲ್ಲ ಅವರಿಗೆ

**ವೆಂಕಪ್ಪ –** ಹೇಳಬಹುದು ಹೂಂ ಅಂದ್ರ ಚಂದ. ಮತ್ತ ಸಾಲಾ ಕೇಳ್ತಿರಾ ಅಂತ ಕೊಡ್ಲಿ ತಗೊಂಡರ ಹ್ಯಾಂಗ?

**ಮರಿಯಪ್ಪ –** ಒಳ್ಳೇ ಎದುರು ಹಾಕ್ಕೊಂಡೀವಿ. ನೀ ಏನೇ ಅನ್ನು ವೆಂಕಪ್ಪ ಭೂಮಿಗೆ ಎದುರಾದ ಮುಳ್ಳ ಇದ್ದಂಗ ಆ ಹುಡುಗ

**ವೆಂಕಪ್ಪ –** ಯಾರು ಭದ್ರಿ ಹೌದಲ್ಲ. ನಾನು ನಿನಗೆ ಮೊದಲೆ ಹೇಳಿದೆ. ನನ್ನ ಮಾತು ನೀನೆಲ್ಲಿ ಕೇಳ್ದಿ. ಮೀಸಿ ಹುರಿ ಮಾಡಿ ಹುಯ್ ಅತ ಹೋದಿ ಹೇಗಾಯಿತು ಮರಿಯಪ್ಪ. ದೇವರಾಣೆ ಮಾಡಿ ಹೇಳ್ತೀನಿ. ನಿಂದೊಂದೆ ಮನಿ ಸುಡತೀನಿ ಅಂದ್ರ ನಾ ಸುಮ್ಮನಿರತಿದ್ದೆ. ಆದರೆ ನಮ್ಮ ಮನಿಗೆ ಬೆಂಕಿ ಹಚ್ಚತೀವಿ ಅಂತಾರಲ್ಲ ಇದು ಯಾರ ಹೇಳಿದ್ದು

**ಮರಿಯಪ್ಪ –** ಏನರ ಮಾಡಿ ಈ ನ್ಯಾಯ ಮುಗಿಸಿಬಿಡಪ್ಪ?

**ವೆಂಕಪ್ಪ –** ಮುಗಿಸಿ ಬಿಡಂತಿಯ? ಹ್ಯಾಂಗ ಹ್ಯಾಂಗ ಮುಗಿಸಲೆಪ್ಪ ಈ ನ್ಯಾಯ

**ಮರಿಯಪ್ಪ –** ಹಂಗ ಯಾಕೋ ಸಾವುಕಾರರೂ ನಿಮ್ಮ ಹೊಲಾಮನಿ ಕೊಡ್ತರಂತ ಹೇಳಲ್ಲ

**ವೆಂಕಪ್ಪ –** ಅವರ ಹೊಲಾಮನಿ ಬಿಟ್ಟು ಕೊಟ್ರ ಅದು ಅವರಿಗಾಯಿತು. ನ್ಯಾಯ ತೀರಿಸಿದ ನನಗೇನು ಬಂತು?

**ಮರಿಯಪ್ಪ –** ನಿನಗೇನೊ?

**ವೆಂಕಪ್ಪ –** ಮತ್ತೆ ಅವತ್ತ ನ್ಯಾಯ ಹಚ್ಚುವಾಗ ನಿನ್ನಿಂದ ದುಡ್ಡು ತಿಂದ ಹಚ್ಚೀನಿ. ಇವತ್ತ ದುಡ್ಡ ತಿಂದ ಅದನ್ನ ಮುಗಸಾಂವಾ

**ಮರಿಯಪ್ಪ –** ನಿನಗ ನಾ ಕೊಟ್ಟಿನಲ್ಲೋ?

**ವೆಂಕಪ್ಪ –** ಕೊಟ್ರ ನೀ ಏನೂ ಪುಣ್ಯಕ್ಕೆ ಕೊಟ್ಟಿ ಏನು? ಅಂಥಾದ್ದು ಮಾಡತೀದಿ ಕೊಡ್ತಿ. ನೀ ಕೋಡೋದು ದಂಡಕ್ಕೆ, ನಾ ಮಾಡೋದು ಪಿಂಡಕ್ಕೆ.

ನಮ್ಮಲ್ಲಿಯಾದರೂ ಏನ ಉಳಿದದ, ಬಾಳ ಬ್ಯಾಡ ಇಷ್ಟ (ಐದು ಬೆರಳು ತೋರಿಸುವನು) ಕೊಟ್ಟು ಬಿಡು ಮುಗಿಸಿಬಿಡ್ತೀನಿ

**ಮರಿಯಪ್ಪ –** ಇಷ್ಟಂದ್ರ ಅದೇನು ಐದೋ ಐವತ್ತೊ

**ವೆಂಕಪ್ಪ –** ಐದು ಐವತ್ತಕ್ಕೆ ಬಾಯಿ ತಗೀತಿನೇನು ನಾನು. ಈ ಕುಲಕರ್ಣಿ ವೆಂಕಪ್ಪನ ಒಂದು ಬೆರಳು ಅಂದ್ರೆ ಒಂದು ನೂರೂ..... ಸಧ್ಯ ಆದರೆ. ಮತ್ತ ತಡದ ಒಂದು ನ್ಯಾಯ ಮುಗಿಸು ಅಂದ್ರ ಇದು ಸಾವಿರಕ್ಕೆ ಹೋಗುತ್ತ. ಇದು ಹಿಂಗ ಹೋಗೋದ ಹೋಗೋದು ಪಂಚವಾರ್ಷಿಕ ಯೋಜನೆ ಇದ್ದಂಗ

**ಮರಿಯಪ್ಪ –** (ಎರಡೂ ಬೆರಳು ತೋರಿಸಿ) ಇಷ್ಟ ಕೊಡತೀನಿ ಮುಗಿಸಿ ಬಿಡು

**ವೆಂಕಪ್ಪ –** ಇವೆರಡು ಮುರದಬಿಡು ಹೊಯಕೊಂತಾ ಹೋಗ್ತಿನಿ. ನಿನ್ನ ಕಡೆಯಿಂದ ಹ್ಯಾಂಗ ತೆಗೋಬೇಕು ಅನ್ನೋದು ನನಗೊತ್ತಿಲ್ಲೇನೊ. ನೆಟ್ಟಗ ಹೋಗ್ತಿದಿ (ಮರಿಯಪ್ಪ ದುಡ್ಡು ಕೊಡಲಿಕ್ಕೆ ಒಪ್ಪನು) ಸಿದ್ದ ಬಂದ ತಡಿ ವಿಚಾರ ಮಾಡ್ತೀನಿ (ಸಿದ್ದ ಬರುವನು) ನಮಸ್ಕಾರಪಾ ಸಿದ್ದಣ್ಣ ಏನಂತಾನಪ್ಪ ನಿಮ್ಮ ತಮ್ಮ ಭದ್ರಣ್ಣ

**ಸಿದ್ದ –** ಅವ್ವ ಸತ್ತ ದುಃಖ ತಡಿಲಾರೆ ಒಂದೇ ಸವನೆ ಅಳತಾನೆ

**ವೆಂಕಪ್ಪ –** ಅವ್ವ ಸತ್ತೆ ಯಾರಿಗೆ ದುಃಖ ಆಗೋದಿಲ್ಲಪ್ಪ. ನಮ್ಮವ್ವ ಸತ್ತಾಗ ನಾನೂ ಒಂದು ನಮೂನಿ ದುಃಖ ಆಗಿ ಅಳತಿದ್ದೆ

**ಸಿದ್ದ –** ನಮ್ಮವ್ವನ ಸಾಯ ಹೊಡೆದವರನ್ನ ಕಡದ ಚಲ್ಲದೆ ಬಿಡೋದಿಲ್ಲಾಂತ ಮತ್ತೆ ಕೊಡ್ಲಿ ತಗೊಂಡಿದ್ದ

**ವೆಂಕಪ್ಪ –** ಮತ್ತೆ ಕೊಡ್ಲಿ ತಗೊಂಡಿದ್ದ (ಮೂರು ಬೆರಳು ತೋರಿಸುವನು)

**ಸಿದ್ದ –** ಇನ್ನು ಈ ಕೊಡ್ಲಿ ಸಹವಾಸ ಸಾಕು ಅಂತಾ ನಾನು ನನ್ನ ಹೆಂಡತಿ ಬೈದು ಬಿಡಿಸಿದ್ದವಿ. ನೋಡ್ರಿ ಕುಲಕರ್ಣೇರೆ ನೀವು ನಮ್ಮ ಹೊಲಾ ಬಿಟ್ಟು ಕೊಡದಿದ್ರೆ ಹೊಸ ಗಾಯ ಮಾಡದೆ ಅವನು ಬಿಡೋದಿಲ್ಲ

**ವೆಂಕಪ್ಪ –** ಹೊಸಾ ಗಾಯ ಅಂತಾನಾ (ಐದು ಬೆರಳೂ ತೋರಿಸುವನು)

**ಮರಿಯಪ್ಪ –** ಮತ್ತೆ ಅದನ್ನು ತಿಳಿದೆ ಅಲ್ಲೇನು

**ವೆಂಕಪ್ಪ –** ಮೊದಲ ಇದನ್ನು ತಿಳಿಕೊ

**ಮರಿಯಪ್ಪ –** ನೋಡ ಸಿದ್ದಪ್ಪ ನಿಮ್ಮಪ್ಪ ಮಾಡಿದ ಸಾಲಾ ಮುಟ್ಟಿತು ಅಂತ ಬಿತ್ತಿದ ಪೈರೂ ಬಿತ್ತಿದಂಗ ಹೊಲ ಬಿಟ್ಟು ಕೊಡ್ತೀನಿ. ನಿನ್ನ ಮದುವೆಗೆ ಕೊಟ್ಟ ಸಾಲಾ ದುಡಿದು ಮುಟ್ಟಿಸ್ತಿಯೊ?

**ವೆಂಕಪ್ಪ –** ಇಲ್ಲ ಅದನ್ನು ಮುಟ್ಟಿತು ಅಂತಿರೊ

**ಸಿದ್ದ –** ಅದನ್ನ ದುಡಿದು ಮುಟ್ಟಿಸಲಿಕ್ಕೆ ಸಿದ್ದನಿರುವೆ ಸಾವುಕಾರ್ರೆ

**ಮರಿಯಪ್ಪ –** ದುಡ್ಡು ಮುಟ್ಟುವರೆಗೆ ನೀನೆ ದುಡಿತಿ ಹೌದಲ್ಲ

**ಸಿದ್ದ–** ಸಾವುಕಾರರೆ ತಪ್ಪು ತಿಳಿದುಕೊಳ್ಳಬಾರದು. ನಾನೇ ದುಡಿತಿದ್ದೆ ಆದರೆ ನಮ್ಮವ್ವ ಸತ್ತು ನನ್ನ ಕೈಮುರಿದಂತಾಗಿದೆ. ಅದಕ್ಕಂತಲೇ ನನ್ನ ತಮ್ಮನ್ನ ಜೀತಾ ಇಡತೀನಿ. ನಿಮ್ಮ ಸಾಲಾ ಮುಟ್ಟುವವರೆಗೂ ದುಡಿಸಿಕೊಳ್ರಿ

**ಮರಿಯಪ್ಪ –** ಯಾರು ಭದ್ರನ್ನ

**ವೆಂಕಪ್ಪ –** ಹೌದು ಯಾಕೆ ಏನಾಯ್ತು? ನೀನೆಷ್ಟು ಹೆದರಿ ಬೀಳತೀ ಹಾವು ತುಳದವರಂಗ

**ಮರಿಯಪ್ಪ –** ಬ್ಯಾಡ ವೆಂಕಪ್ಪ. ಆ ಹುಡುಗ ಏನು ಮೈ ಮುರಿದು ದುಡಿತಾನೇನು? ಹೊಲಮನಿ ಕೆಲಸ ಆದೀತೇನು? ನಮಗ ಸಿದ್ದನೆ ಇರಲಿ ಆ ಹಾವಿನ ಸಹವಾಸವೇ ಬ್ಯಾಡ

**ಸಿದ್ದ –** ನೀವು ಹಿಂಗಂದ್ರ ಹ್ಯಾಂಗರಿ ಸಾವುಕಾರರೆ.... ನಮ್ಮನ್ನ ಹಾದಿಗೆ ಹಚ್ಚುವರಾದರೂ ಯಾರು? ಇನ್ನು ಮೇಲೆ ಅವನು ನಿಮಗೇನಾದ್ರು ಎದುರು ವಾದಿಸಿದರೆ ಹೇಳಿ ಅವನ ಎದಿ ಸೀಳತೀನಿ

**ಮರಿಯಪ್ಪ –** ಏನಂದ್ರು ಹೆದರಿ ನಡಿಯೋ ಹುಡುಗ ಅಲ್ಲೊ ಸಿದ್ದ ಅವನು. ಮಹಾ ಹಟಮಾರಿ. ಅಂಥವನ್ನ ಹ್ಯಾಂಗ ದುಡಿಸಿಕೊಳ್ಳೋದು? ಯಾಕೋ ವೆಂಕಪ್ಪ

**ವೆಂಕಪ್ಪ –** ಮರಿಯಪ್ಪ ನಿನ್ನ ಮಾತು ನಿನಗರ ಚಂದ ಕಾಣತಾವೇನು? ಆ ಹುಡುಗ ವಿನಯದಿಂದ ಕೇಳಿಕೊಳ್ತಾನೆ. ಏನ್ರಿ ಸಾವುಕಾರ್ರೆ ನಮ್ಮನ್ನ ಹಾದಿಗೆ ಹಚ್ಚುವರಾದರೂ ಯಾರು ಅಂತ? ಅವನ ಮಾತು ನಿಜಾನೆ. ನಮ್ಮೂರಾಗ ಇದುವರೆಗೆ ಯಾರನ್ನಾದರೂ ಹಾದಿಗೆ ಹಚ್ಚಬೇಕಾದರೆ ನಾವಿಬ್ಬರೂ ಕೂಡೆ ಹಚ್ಚೀವಿ. ಈಗ ಇವರನ್ನ

ಹಾದಿಗೆ ಹಚ್ಚೋಣ. ಇಲ್ಲ ಇವರ ಕೈಯಾಗ ನಾವರ ಹಾದಿಗೆ ಹತ್ತಿಹೋಗೋಣ. ನೀನು ಸುಮ್ಮನಿರು. ನೋಡ ತಮ್ಮಾ ಸಿದ್ದಣ್ಣ ನೀವು ಬಾಳ ಸುಮಾರ ಪೈಕಿ! ಏನಾದರೂ ಸಿಟ್ಟು ಬಂದ್ರೆ ಕೈಯ್ಯಾಗ ಕೊಡ್ಲಿ ತಗೊಂಡು ಹುಯ್ಯ ಅಂತ ಬರ್ತೀರಲ್ಲ ಅದಕ ಹೆದರತೀನಿ. ನಾಳೆ ನಿನ್ನ ತಮ್ಮ ಇವನಿಗೆ ಏನಾದರೂ ಅಂದ್ರೆ ಹಿಡಿದು ಅವನ ಎದಿ ಸೀಳತೀನಿ ಅಂತ ಇವನ ಕೈಮೇಲೆ ಕೈಹಾಕಿ ವಚನ ಕೊಡು. ನಾನು ಒಪ್ಪಸ್ತೀನಿ ಯಾಕಪ್ಪಾ

**ಮರಿಯಪ್ಪ –** ಹೌದು.... ಹೌದು.... ಅಷ್ಟಾದರೆ ಧೈರ್ಯದಿಂದ ಭದ್ರನ್ನ ಜೀತಾ ಇಟ್ಟಗೊಳ್ಳತೀನಿ

**ಸಿದ್ದ –** ಸಾವುಕಾರರೆ ನಾವು ಬಡವರು. ಮಾತು ಕಳೆದುಕೊಂಡು ಬದುಕಿದವರಲ್ಲ. ನಮ್ಮವ್ವ ನಮ್ಮಪ್ಪ ನಮಗೇನು ಕೊಡದಿದ್ರೂ ಮಾತಾಡಿದ ಪ್ರಕಾರ ನಾಲಗಿ ಕಾಯ್ದುಕೊಳ್ಳುವ ಶಕ್ತಿ ಕೊಟ್ಟು ಸತ್ತಾರ. ನೋಡ್ರಿ ಇವತ್ತ ನಿಮ್ಮ ಕೈಮೇಲೆ ಕೈಯಿಟ್ಟು ಹೇಳ್ತೀನಿ. ಇನ್ನಮ್ಯಾಲೆ ನನ್ನ ತಮ್ಮ ನಿಮಗೇನಾದ್ರು ಎದುರು ನಿಂತರೆ ಅವನ ತಲಿ ತೆಗೆದ ನಿಮ್ಮ ಕಾಲಿಗೆ ಒಪ್ಪಸ್ತೀನಿ. ವಚನಕ್ಕೆ ತಪ್ಪಿದರೆ ನನ್ನ ತಲಿನೆ ಬಲಿ ಕೊಡತೀನಿ... ನಡ್ರಿ ನಮ್ಮ ಮನಿಗೆ ಹೋಗೋಣ

**ಮರಿಯಪ್ಪ –** ಅವ ಮನಿಗೆ ಅಂತಾನ

**ವೆಂಕಪ್ಪ –** ಅದು ತಮ್ಮ ಮನಿಗೆ ಅಂತಾನ.... ಸಿದ್ದಣ್ಣ ನೀನು ನಡಿಯಪ್ಪ ನಾವೆಲ್ಲ ಬರತೀವಿ. ಸಿದ್ದಣ್ಣ ನಾವು ಬಂದಾಗ ನೀನೂ ಮನೆಯಾಗೆ ಇರಪ್ಪ, ನಡಿ (ಸಿದ್ದ ಹೋಗುವನು) ಮರಿಯಪ್ಪ ಆಗ ನಾವೂ ಅಷ್ಟ ಮಾಡಿವಿ ಅಂತ ಈಗ ಈ ಹುಡುಗರು ಇಷ್ಟು ಮುದ್ದಿ ಆಗ್ಯಾವು. ನನ್ನ ಪ್ಲ್ಯಾನು ಅಂದ್ರ ಸಣ್ಣ ಪ್ಲ್ಯಾನು ಅಲ್ಲ. ಶರಾವತಿ ಡ್ಯಾಮು ಕಟ್ಟಿ ಮುಗಿದಂಗ. ನೀನೇನು ಅಂಜಬ್ಯಾಡೋ ನಾನಿರತೀನಿ. ಆದ್ರ ನೀನೀಗ ಮುಂದ ನಡಿಯಪ್ಪ ಯಾಕಂದ್ರ ಅವರ ಮನಿಗೆ ಹೋಗಬೇಕು

**ಮರಿಯಪ್ಪ –** ನೀನಿರತೀದಿ.... ಎಲ್ಲಾ ಮುಗಿದ ಮ್ಯಾಲೆ ನೋಡಿ ನಗಾಕ ಇರತೀದಿ

– ತೆರೆ –

===****====****====

# ದೃಶ್ಯ ೧೧

ಮನೆ ದೃಶ್ಯ

(ತಾಯಿಯ ತಿಂಗಳ ತಿಥಿ ನಡೆದಿದೆ. ತಾಯಿಗೆ ಸೀರೆ ಖಣ ಎರಿಸಿ ದೀಪ ಹಚ್ಚಿದ್ದಾರೆ. ಭದ್ರ, ಪಾರ್ವತಿ ಅಳುತ್ತ ಕುಳಿತಿದ್ದಾರೆ)

**ಹಿನ್ನಲೆ ಹಾಡು**

ತಾಯಿಯ ತ್ಯಾಗಕೆ ಸೀಮೆಯೇ ಇಲ್ಲ ॥ ನನಗದು ಮೊದಲೆ ತಿಳದಿರಲಿಲ್ಲ ॥
ಹಗಲು ಇರುಳು ಕಷ್ಟದ ಬಾಳು ॥

**ಪಾರ್ವತಿ –** ಭದ್ರ ಇನ್ನಾದರೂ ತಾಯಿಯನ್ನು ನೆನೆದು ಹಳಹಳಿಸಿ ಅಳುವದನ್ನು ಕಡಿಮೆ ಮಾಡಪ್ಪ

**ಭದ್ರ –** ಹೇಗೆ ಕಡಿಮೆ ಮಾಡಲಿ ಅತ್ತಿಗೆಮ್ಮಾ. ನಾನೆಷ್ಟು ಮರೆಯಲೆತ್ನಿಸಿದರೂ ಅವ್ವನ ಅಕ್ಕರೆಯ ನೆನಪು ನನ್ನೆದೆಯ ಹುತ್ತದಲ್ಲಿ ಹೊಕ್ಕು ಕೆಣಕುತ್ತಿದೆ

**ಪಾರ್ವತಿ –** ಹೀಗೆಯೇ ನೀನು ಎಷ್ಟ ದಿನ ಅತ್ತರೇನಪ್ಪಾ? ಸತ್ತು ಹೋದ ಅತ್ತೆಯನ್ನು ಆ ನಿನ್ನ ಕಣ್ಣೀರು ಮತ್ತೆ ಕರೆದು ತರುತ್ತವೇನಪ್ಪಾ

**ಭದ್ರ –** ಅತ್ತಿಗೆ ಎಲ್ಲರಂತೆ ಆಯುಷ್ಯ ಮುಗಿದು ನಮ್ಮವ್ವ ಸತ್ತು ಹೋದರೆ ನಾನೀ ರೀತಿ ಕಣ್ಣೀರು ಹಾಕುತ್ತಿರಲಿಲ್ಲ. ಹುಟ್ಟು ಮೊದಲಗೊಂಡು ಸಾಯುವ ಪರಿಯಂತರ ಅವಳು ಬರೆ ಕಷ್ಟಗಳನ್ನೇ ಅನುಭವಿಸುತ್ತ ಕೊನೆಗೆ ದುರ್ಮರಣ ಬಂದಿತಲ್ಲ ಎಂದು ಕಣ್ಣೀರುಟ್ಟು ಅಳುತ್ತಿರುವೆ. ಅತ್ತಿಗೆಮ್ಮಾ ನನ್ನ ದುಡುಕುತನದಿಂದಲ್ಲವೇನು ಅವ್ವನಿಗೆ ದುರ್ಮರಣ. ನಿನ್ನ ಗರ್ಭ ಪತನ ಘಟಿಸಿದ್ದು. ನಾನು ಪಾಪಿ ಅತ್ತಿಗೆಮ್ಮ ಪಾಪಿ

**ಪಾರ್ವತಿ –** ಅಲ್ಲ ಭದ್ರ ನೀನು ಪಾಪಿಯಲ್ಲ. ಈ ಊರಿನ ಪುಣ್ಯದ ದೀಪ. ಬಡವರಿಗೆಲ್ಲ ಒಂದಿಲ್ಲ ಒಂದು ಬಗೆ ತಾಪ ಕೊಡುತ್ತಿದ್ದ ಕಟುಕರನ್ನು ಎದುರಿಸಿದ ಧರ್ಮದ ಪ್ರತಿರೂಪ. ಅಂದ ಬಳಿಕ ನೀನು

ಪಾಪಿಯಾಗುತ್ತೀಯಾ? ಭದ್ರ ತಾಯಿ ಸತ್ತಳೆಂದು ಅಳಬೇಡ. ಅವಳ ಸಾವಿನಲ್ಲಿ ನಮ್ಮ ನೋವು ನೀಗಿ ಇಂದಿಲ್ಲ ನಾಳೆ ಹೊಸರೂಪ ತಳೆದು ಈ ಮನೆಯಲ್ಲಿ ಅರಳೀತು. ನೋವಿನಲ್ಲಿ ನಗುವೂ ಜನಿಸಿ ಸಾವಿನ ನಂತರ ಜೀವ ಅರಳುತ್ತದಪ್ಪ

**ಭದ್ರ** – ಆದರೆ ಜೀವ ಅರಳುವ ಭಾಗ್ಯ ಕಾಣುವ ಪುಣ್ಯ ನಮ್ಮವ್ವನ ಬಾಳಿನಲ್ಲಿ ಒಂದು ಸಲವೂ ಒದಗಿ ಬರಲಿಲ್ಲ ಅತ್ತಿಗೆಮ್ಮಾ. ನಮ್ಮ ವಂಶದ ರಸ ಹೀರಿ ನಿಮ್ಮ ಅಮೃತ ಗರ್ಭದಿಂದ ಹುಟ್ಟಿ ಬರಲಿದ್ದ ತನ್ನ ಕರುಳಿನ ಕುಡಿಯನ್ನು ಕಾಣಬೇಕೆಂಬ ಒಂದೇ ಒಂದು ಹಂಬಲ ನಮ್ಮವ್ವನ ಮನದಲ್ಲಿ ಬೇರೂರಿ ನಿಂತಿತ್ತು. ನಿಷ್ಕರುಣೆಯಾದ ವಿಧಿ ಅದನ್ನು ಕಾಣಗೊಡಲಿಲ್ಲ. ಆ ವಿಧಿಯ ಬೆರಳಾಗಿ ಕೆಲಸ ಮಾಡಿ ನಮ್ಮವ್ವನ ಸಾವಿಗೆ ಕಾರಣರಾದ ಕಟುಕರನ್ನು ಜೀವಂತ ಸೀಳಿದಾಗಲೆ ನನ್ನ ಆತ್ಮಕ್ಕೆ ಶಾಂತಿ (ಕೊಡ್ಲಿ ತೆಗೆದು ಕೊಳ್ಳುವನು)

**ಪಾರ್ವತಿ** – ಭದ್ರ ಏನಿದು ನಿನ್ನ ಅಪದ್ಧ ವರ್ತನೆ? ಅವರನ್ನು ಸೀಳಿದ ಮಾತ್ರಕ್ಕೆ ಸತ್ತು ಹೋದ ಆ ನಿನ್ನ ತಾಯಿ ಬರುವಳೆ? ನೋಡು ಮತ್ತೆ ಹಟ ಮಾಡುತ್ತ ಹೋದಿಯಾದರೆ ನಾನೆ ನಿನನ್ನು ಸೀಳಿ ಬಿಡುತ್ತೇನೆ

**ಭದ್ರ** – ಇಲ್ಲ ಅತ್ತಿಗೆಮ್ಮಾ ನನ್ನದು ತಪ್ಪಾಯಿತು. ಅವ್ವನ ನೆನಪು ನನ್ನ ಮನಕ್ಕೆ ತಾಕಿದರೆ ಹುಚ್ಚು ಹಿಡಿದ ಹಾಗಾಗುತ್ತದೆ. ನಿಜ ಹೇಳು ಅತ್ತಿಗೆಮ್ಮಾ ನಿನ್ನ ಮಗುವನ್ನು ಕಂಡಿದ್ದರ ಅವ್ವ ಎಷ್ಟು ಆನಂದ ಪಡುತ್ತಿದ್ದಳು

**ಪಾರ್ವತಿ** – ಏನು ಮಾಡುವದಪ್ಪ ಎಲ್ಲಾ ದೈವ ನಡಿಸಿದಂತೆ ನಡೆದು ಹೋಗುತ್ತದೆ. ಮನುಷ್ಯರಾದ ನಮ್ಮ ಕೈಯಲ್ಲೇನಿದೆ ಹೇಳು. ಅದೋ ನಿಮ್ಮಣ್ಣನವರೆ ಬಂದರು. ಅದೇನು ಸುದ್ದಿ ತಂದಿದ್ದಾರೋ ಕೇಳು

**ಸಿದ್ದ** – (ತಾಯಿಗೆ ನಮಸ್ಕರಿಸಿ) ಒಳ್ಳೆ ಸುದ್ದೀನೆ ತಂದಿದ್ದೇನೆ ಭದ್ರ. ಮರಿಯಪ್ಪನವರು ನಮ್ಮ ಹೊಲಮನೆಗಳನ್ನು ನಮಗೆ ಬಿಟ್ಟುಕೊಡತಾರಂತೆ

**ಭದ್ರ** – ಬಿಟ್ಟು ಕೊಡ್ತಾರಂತೆಯೇ? ಯಾರು ಹೇಳಿದರಣ್ಣ ನಿನಗೀ ಮಾತನ್ನ

ಸಿದ್ದ – ಇದೀಗ ಅವರೇ ಹೇಳಿದರು ಭದ್ರ. ನೀನು, ನಿನ್ನತ್ತಿಗೆ ತಿಳಿದು ಕೊಂಡಷ್ಟು ಆ ಮನುಷ್ಯ ಅಷ್ಟು ದುಷ್ಟನಲ್ಲ. ಬಡವರ ಬಗ್ಗೆ ಕನಿಕರ ಉಳ್ಳವರು. ಪ್ರೀತಿಯಿಂದ ದುಡಿದರೆ ಜೀತದಾಳನ್ನು ಮನೆಯ ಮಗನಂತೆ ಕಾಣಬಲ್ಲ ಒಳ್ಳೆ ಗುಣ ಅವರದು

ಭದ್ರ – ಬೆಂಕಿ ಇಟ್ಟಿತು ಅವರ ಒಳ್ಳೆ ಗುಣಕ್ಕೆ. ಅಷ್ಟಕ್ಕೆ ಸಾಕು ಸುಮ್ಮನಿರಣ್ಣ

ಸಿದ್ದ – ಮತ್ತು ಅದೇ ಮಾತು. ನಮ್ಮ ಮನೆತನಕ್ಕೆ ಕೆಡಕು ತಂದಿದ್ದೆ ನಿನ್ನ ದುಡುಕುತನ? ಅವನು ಗುಣವಂತನಲ್ಲದಿದ್ದರೆ ಸಾಲದ ಹಣ ಸಂದಾಯವಾಗದೆ ನಮ್ಮ ಹೊಲ ಮನೆಗಳನ್ನು ನಮಗೆ ಬಿಟ್ಟಕೊಡಲು ಒಪ್ಪುತ್ತಿದ್ದನೆ? ನೋಡು ನನ್ನ ಒಳ್ಳೆಯ ನಡತೆಯಿಂದಲೆ ಇಂದು ನಮ್ಮ ಆಸ್ತಿ ನಮ್ಮದಾಯಿತು

ಪಾರ್ವತಿ – ನಿಮ್ಮ ಆಸ್ತಿ ನಿಮಗಿಂದು ದೊರೆತರೆ ಅದು ನಿಮ್ಮ ಒಳ್ಳೆತನದಿಂದಲ್ಲ. ಭದ್ರನ ದಿಟ್ಟತನದಿಂದ. ಪ್ರಾಣವನ್ನೇ ಪಣಕ್ಕಿಟ್ಟು ಬಡಿದಾಡಿದ ಅವನ ಸಹಾಸದಿಂದ

ಸಿದ್ದ – ಹೌದು ಇವನ ಸಾಹಸದಿಂದ! ಇವನು ಅವರೊಂದಿಗೆ ನಡೆಸಿದ ದ್ವೇಷದಿಂದಲೇ ಅಲ್ಲವೇನು ಇಷ್ಟೆಲ್ಲ ದುರಂತ ನಡೆದುಹೋಗಿದ್ದು. ಇಷ್ಟಿದ್ದು ಸಾವುಕಾರರ ಒಳ್ಳೇತನವನ್ನು ಹಳಿದು ಆಡಲಿಕ್ಕೆ ನಿನಗೆ ನಾಚಿಕೆ ಬರ ಬೇಕಾಗಿತ್ತು

ಪಾರ್ವತಿ – ನೀವೇನೆ ಹೇಳಿದರೂ ಸರಿ ಒಳ್ಳೆಯದಕ್ಕೆ ಒಪ್ಪುವ ಜಾತಿ ಅಲ್ಲ ಆ ನಿಮ್ಮ ಸಾವುಕಾರನದು

ಭದ್ರ – ಇರಲಿಬಿಡು ಅತ್ತಿಗೆ, ಅಣ್ಣನೊಂದಿಗೆ ನೀನೇಕೆ ವಾದಿಸೋದು? ಯಾರಿಂದಲೇ ಆಗಲಿ ನಮ್ಮ ಆಸ್ತಿ ನಮ್ಮದಾಯಿತಲ್ಲ ಅಷ್ಟು ಸಾಕು

ಸಿದ್ದ – ಆಸ್ತಿಯೇನೋ ನಮ್ಮದಾಯಿತು. ಆದರೆ ಮದುವೆಗೆಂದು ಕೊಟ್ಟ ಸಾಲ ಉಳಿಯಿತಲ್ಲ. ಮಾತು ಕೊಟ್ಟಂತೆ ಅವರ ಮನೆಯಲ್ಲಿ ನಾನು ದುಡಿದು ಆ ಸಾಲಾ ಮುಟ್ಟಿಸಬೇಕು. ನಾನಲ್ಲಿ ದುಡಿಯಲು ನಿಂತರೆ ಇಲ್ಲಿ ಹೊಲಮನೆ ಕೆಲಸ ನಿನ್ನಿಂದ ತೂಗಲಾರದು

ಭದ್ರ – ಅಂದರೆ ನಿನಗೆ ಬದಲಾಗಿ ನಾನವರ ಮನೆಯಲ್ಲಿ ದುಡಿಯಬೇಕೇನು?

ಸಿದ್ದ – ಹೌದು ಅದನ್ನು ಬಿಟ್ಟರೆ ಬೇರೆ ದಾರಿಯೇ ಇಲ್ಲ. ನೋಡು ತಮ್ಮಾ

ಈ ಒಂದು ಸಾಲ ಮುಟ್ಟಿದರೆ ಮುಂದೆ ನಮಗೆ ಯಾರ ಹಂಗು ಇಲ್ಲ. ಅಲ್ಲದೇ ನಿನ್ನನ್ನು ಅವರಲ್ಲಿ ದುಡಿಯಲು ಇಡುವದಾಗಿ ನಾನವರಿಗೆ ಮಾತು ಕೊಟ್ಟು ಬಂದಿದ್ದೇನೆ. ನನ್ನ ಆ ಮಾತನ್ನು ನೀನೀಗ ಉಳಿಸಿ ಕೊಡಬೇಕು

ಭದ್ರ – ಅಣ್ಣಾ ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡ. ಬೇಕಿದ್ದರೆ ನನ್ನ ಪ್ರಾಣವನ್ನೇ ಕೇಳು ಕೂಡಲೇ ನಿನ್ನ ಪಾದಕ್ಕೆ ಅರ್ಪಿಸುತ್ತೇನೆ. ಅಣ್ಣಾ ಇಷ್ಟೆಲ್ಲ ದುರಂತ ಘಟನೆಗಳು ನಡೆದ ನಂತರವೂ ಎಂತಣ್ಣಾ ನಾನವರ ಆಳಾಗಿ ಬಾಳಲಿ

ಸಿದ್ದ – ಅಂದರೇನಪ್ಪ ಇಷ್ಟು ದಿನ ಅವ್ವ ಇದ್ದಳು. ಮನೆಯ ಭಾರವನ್ನೆಲ್ಲಾ ತನ್ನ ತಲೆಯ ಮೇಲೆ ಹೊತ್ತಿದ್ದಳು. ಕಾರಣ ಈ ವಿಷಯ ನಾನು ಯೋಚಿಸಬೇಕಾಗಿರಲಿಲ್ಲ. ಇಷ್ಟು ದಿನ ಉಡಾಳತನ ಮಾಡುತ್ತ ಅಲಿದಾಡಿದಂತೆ ಮುಂದೆಯೂ ಮಾಡುತ್ತ ಹೋದಿಯಾದರೆ ಯಾರಾದರೂ ನಿನಗೆ ಹೆಣ್ಣು ಕೊಡುತ್ತಾರೇನೋ? ಹೆಣ್ಣು ಹುಡುಕಿ ನಿನ್ನ ಮದುವೆ ಮಾಡದಿದ್ದರೆ ಅಣ್ಣನಾದ ನನ್ನ ತಲೆಗೆ ಅಪವಾದ ಬರುತ್ತದೆ

ಪಾರ್ವತಿ – ಹೌದಪ್ಪಾ ಭದ್ರ, ಅಪವಾದ ಅವರೊಬ್ಬರಿಗೇ ಅಲ್ಲ ನನಗೂ ಬರುತ್ತದೆ. ಲೋಕದಲ್ಲಿ ನಾವು ಬದುಕಬೇಕಿದ್ದರೆ ಅವರಂದಂತೆ ಜನರೊಂದಿಗೆ ಹೊಂದಿಕೊಂಡು ಬದುಕಬೇಕು. ದೇವರ ದಯದಿಂದ ಇಷ್ಟು ದಿನ ಪ್ರತಿಕೂಲವಿದ್ದ ಪರಿಸ್ಥಿತಿ ಈಗ ಅನುಕೂಲವಾಯಿತಲ್ಲ. ಮರಿಯಪ್ಪನವರಲ್ಲಿ ಒಂದು ವರ್ಷ ದುಡುದುಬಿಡು. ಅವರ ಪಾಪ ಪುಣ್ಯ ಅವರಿಗಿರಲಿ

ಸಿದ್ದ – ಪಾಪ ಪುಣ್ಯದ ಮಾತೇ ಇಲ್ಲ. ಎಷ್ಟಂದರೂ ಮರಿಯಪ್ಪ ನಮ್ಮ ಕಷ್ಟದಲ್ಲಿ ಆದವರು

ಭದ್ರ – ಕಷ್ಟದಲ್ಲಿ ಅದವರಲ್ಲಣ್ಣಾ... ಅವರು ಕೂದಲೆಳೆಯಿಂದ ಕುತ್ತಿಗೆ ಕೊಯ್ದವರು

ಪಾರ್ವತಿ – ಅದೇನೆ ಇರಲಿ ನೀನು ಒಪ್ಪಿಕೊಂಡು ಬಿಡು ಭದ್ರ

ಭದ್ರ – ನಾನೊಲ್ಲೆ ಅತ್ತಿಗೆಮ್ಮಾ ನಾನೊಲ್ಲೆ

ಸಿದ್ದ – ಯಾವಾಗಲೂ ನಿನ್ನ ಮಾತೇ ಮುಖ್ಯ. ಮೊದಲೇ ನೀನು

ಹಟಮಾರಿಯಾದ ಘಟಸರ್ಪ. ಪಾರೂ ಇವನನ್ನು ಮಗನಂತೆ ಕಾಣುವುದಾಗಿ ಅಂದೆ ನಮ್ಮವ್ವನಿಗೆ ಮಾತು ಕೊಟ್ಟಿದ್ದಿಯಾ. ಆ ಮಾತು ಉಳಿಸಿಕೊಳ್ಳುವ ಇಷ್ಟ ನಿನಗಿದ್ದರೆ ಮರಿಯಪ್ಪನವರ ಮನೆಯಲ್ಲಿ ಇವನನ್ನು ದುಡಿಯಲು ಒಪ್ಪಿಸು. ಇಲ್ಲದಿದ್ದರೆ ನಾನೇ ಈ ಮನೆ ಬಿಟ್ಟು ಹೋಗುತ್ತೇನೆ. ನೀನುಂಟು ನಿನ್ನ ಮೈದುನನುಂಟು

**ಪಾರ್ವತಿ –** ತಡೆಯಿರಿ ಎಷ್ಟೆಂದ್ರೂ ಅವನು ಸಣ್ಣವನು

**ಸಿದ್ದ –** ಸಣ್ಣವನಾದ ಮಾತ್ರಕ್ಕೆ ಮಣ್ಣು ಕೊಟ್ಟರೆ ತಿನ್ನುತ್ತಾನೇನು? ಪಾರು ಎಂದಿದ್ದರೂ ಇದು ನನ್ನ ಪ್ರಾರಬ್ಧಕ್ಕೆ ಗಂಟುಬಿದ್ದ ವೈರಿ. ಅಣ್ಣನಾದ ನಾನು ಅಧಿಕಾರದಿಂದ ಆಜ್ಞೆ ಮಾಡಿದ್ದೇನೆ. ಎಷ್ಟು ವಿನಯದಿಂದ ಕೇಳಿಕೊಂಡರೂ ತನ್ನ ಹಟವನ್ನೇ ಸಾಧಿಸಿಕೊಳ್ಳಬಯಸುವ ಈ ಹಾವಿನ ಗುಣದವನಿಗೆ ಅಣ್ಣನಾಗಿ ಹೇಳುವುದಕ್ಕಿಂತ ಎಲ್ಲಿಯಾದರೂ ಕಣ್ಮರೆಯಾಗಿ ಹೋಗುವದೇ ಮೇಲು (ಹೋಗಹತ್ತುವನು)

**ಪಾರ್ವತಿ –** ಅಯ್ಯೋ ತಡಿರಿ. ಸಿಟ್ಟಿನ ಕೈಯಲ್ಲಿ ಬುದ್ಧಿ ಇತ್ತು ನೀವು ಮನೆಬಿಟ್ಟು ಹೋದರೆ ನನ್ನಾಣೆಯಾಗಿದೆ

**ಸಿದ್ದ –** ಹಾಗಿದ್ದರೆ ಮರಿಯಪ್ಪನವರಲ್ಲಿ ದುಡಿಯಲು ಅವನನ್ನು ಒಪ್ಪಿಸು

**ಪಾರ್ವತಿ –** ಒಪ್ಪಸ್ತೀನಿ

**ಭದ್ರ –** ಅವ್ವಾ (ತಾಯಿಯ ಪ್ರತಿಮೆಯ ಹತ್ತಿರ ಅಳುವನು)

**ಪಾರ್ವತಿ –** ಭದ್ರ (ಅಳುವಳು)

**ಭದ್ರ –** ಅತ್ತಿಗೆ ಒಂದು ವೇಳೆ ಈಗ ನಮ್ಮವ್ವ ಇದ್ದಿದ್ದರೆ ನನ್ನನ್ನು ಅವರ ಮನೆಯಲ್ಲಿ ದುಡಯಲು ಎಂದೂ ಇಡುತ್ತಿರಲಿಲ್ಲ

**ಪಾರ್ವತಿ –** ಹೌದಪ್ಪಾ ಇಡುತ್ತಿರಲಿಲ್ಲ. ಆದರೆ ಮದುವೆಗೆ ಮಾಡಿದ ಸಾಲ ಮುಟ್ಟಿಸದೇ ಬಿಡುತ್ತಿರಲಿಲ್ಲ. ಅತ್ತೆ ತಾನು ಸತ್ತು ಮನೆಯ ಭಾರ ನನ್ನ ಕತ್ತಿಗೆ ಕಟ್ಟಿದಳು. ನಿನ್ನನ್ನು ಮಗನಂತೆ ಕಾಪಾಡಿಕೊಂಡು ಹೋಗು ಎಂದು ಹಾಲು ಮುಟ್ಟಿಸಿ ನನ್ನಿಂದ ಆಣೆ ಮಾಡಿಸಿದಳು. ಈಗ ನೋಡಿದರೆ ಅಣ್ಣನ ಇಷ್ಟ ತಮ್ಮನಿಗಿಲ್ಲ, ತಮ್ಮನ ಕಷ್ಟ ಅಣ್ಣನಿಗೆ ಅರ್ಥವಾಗಿಲ್ಲ. ಎಂದು ಇಲ್ಲಿ ನಾನು ಕಾಲಿಟ್ಟೆನೋ ಅಂದಿನಿಂದ ಈ ಮನೆಯ ಅನಿಷ್ಟ ತಪ್ಪಲಿಲ್ಲ. ನೂರು ಮಾತಿನಿಂದೇನಪ್ಪಾ ಭದ್ರಿ ಈಗ ನಿಮ್ಮವ್ವ ಇದ್ದರೆ ಏನು ಮಾಡುತ್ತಿದ್ದಳು ಗೊತ್ತಾ.. ಒಲ್ಲೆನೆಂದು

ಹಟ ಮಾಡಿದ ನಿನಗೆ ದುಡಿಯಲು ಹೇಳುತ್ತಿರಲಿಲ್ಲ. ನಿಮ್ಮಣ್ಣನಿಗೆ ಒತ್ತಾಯ ಮಾಡುತ್ತಿರಲಿಲ್ಲ. ತಾನೇ ದುಡಿದು ಅವರ ಸಾಲ ಮುಟ್ಟಿಸಿ ಬರುತ್ತಿದ್ದಳು ಕಾರಣ ಇಂಥವಳ ಸ್ಥಾನದಲ್ಲಿದ್ದ ನಾನೇ ಮರಿಯಪ್ಪನವರಲ್ಲಿ ದುಡಿದು ಅವರ ಸಾಲು ಮುಟ್ಟಿಸಿ ಬರುತ್ತೇನೆ. ನೀವಿಬ್ಬರೂ ಸುಖವಾಗಿ ಇದ್ದು ಬಿಡ್ರಿ

**ಭದ್ರ –** ಅತ್ತಿಗೆ.... ನೀವು ಇದನ್ನೇನು ಹೇಳುತ್ತಿರಾ?

**ಪಾರ್ವತಿ –** ಹಾದು ನೀನು ಅಣ್ಣನಂತೆ ನಡೆಯದಿದ್ದರೆ ನಾನೇ ಅವರ ಮನೆಯಲ್ಲಿ ದುಡಿದು ಸಾಲಾ ಮುಟ್ಟಿಸುತ್ತೇನೆ

**ಭದ್ರ –** ಅಗಲಣ್ಣ ನಿನ್ನಿಷ್ಟದಂತೆ ನಾನವರ ಮನೆಯಲ್ಲಿ ದುಡಿಯುತ್ತೇನೆ (ಪಾರ್ವತಿ ಅಳುತ್ತ ಒಳಗೆ ಹೋಗುವಳು)

**ಸಿದ್ದ –** ಆಗಲಿ ಭದ್ರ, ಇನ್ನೊಂದು ವಿಷಯ ನೆನಪಿರಲಿ. ನೀನೀಗ ಅವರ ಮನೆಗೆ ಹೋಗುವದು ಆಳಾಗಿ ದುಡಿಯಲಿಕ್ಕೆ, ಅರಸನಾಗಿ ಮೆರೆಯಲಿಕ್ಕಲ್ಲ. ಅವರು ಒಂದು ಸಮಯ ಕಾಲಿನಿಂದ ತೋರಿಸಿದರೂ ನೀನದನ್ನು ಕೈಯಿಂದ ಮಾಡಬೇಕು

**ಭದ್ರ –** ಅಣ್ಣಾ ನಾನವರ ಮನೆಯಲ್ಲಿ ಆಳಾಗಿ ದುಡಿಯುತ್ತೇನೆಂದು ನಿನಗೂ ಅತ್ತಿಗೆಗೂ ವಚನ ಕೊಟ್ಟ ಬಳಿಕ ಮುಗಿಯಿತು. ಮತ್ತೆ ಆ ಮಾತನ್ನು ಮುಂದುವರಿಸುವದೇ ಬೇಡ. ದುಡಿಯುವಾಗ ನನ್ನ ಅವರು ಕತ್ತೆಗಿಂತ ಕಡಿಯಾಗಿ ಕಂಡರೂ ಸರಿ ತೊತ್ತಾಗಿ ದುಡಿದು ಅವರ ಸಾಲ ಮುಟ್ಟಿಸಿ ಬರುತ್ತೇನೆ (ಒಳಗೆ ಹೋಗುವನು)

**ವೆಂಕಪ್ಪ --** (ಒಳಗಿನಿಂದ) ಸಿದ್ದಣ್ಣಾ ಮನ್ಯಾಗ ಅದಿ ಎನೋ ತಮ್ಮಾ

**ಸಿದ್ದ –** ಅದೀನಿ ಬರ್ರಿ ಕುಲಕರ್ಣ್ಯೆರೆ

**ವೆಂಕಪ್ಪ --** (ಒಳಗಿನಿಂದ) ಆ ಹುಡುಗ ಸಿದ್ದಣ್ಣ ಮನ್ಯಾಗ ಅದಾನಂತ ನಡಿರೋ ಕೆಂಚಪ್ಪ ಮರಿಯಪ್ಪ ನೀವು ಮುಂದ ನಡಿರೋ ನಾನು ಬರ್ತೀನಿ

**ಮರಿಯಪ್ಪ –** (ಒಳಗಿನಿಂದ) ನೀನು ಮುಂದ ನಡಿಯೋ.... ಹಿರಿಯಾ ಆಗತೀದಿ

**ವೆಂಕಪ್ಪ --** (ಒಳಗಿನಿಂದ) ಮೂವರು ಕೂಡೇ ಹೋದರೆ ಮೂರಾಬಟ್ಟೆ ಆಗತ್ತಂತ. ನೀವು ನಡಿರಿ (ಮರಿಯಪ್ಪ, ಕೆಂಚಪ್ಪ ಮುಂದೆ ಬರುವರು. ಹಿಂದೆ ವೆಂಕಪ್ಪ ಬರುವನು)

| | |
|---|---|
| ಸಿದ್ದ – | .... ಬನ್ನಿರಿ ಸಾವುಕಾರರೆ ಕುಳಿತುಕೊಳ್ಳಿ |
| ವೆಂಕಪ್ಪ – | (ಮೆಲ್ಲಗೆ ಬಂದು) ನಮಸ್ಕಾರಪಾ ಸಿದ್ದಣ್ಣಾ. ಇದೇನ ತಮ್ಮಾ ಸೀರಿ, ಕುಬಸಾ |
| ಸಿದ್ದ – | ನಮ್ಮವ್ವ ಸತ್ತು ತಿಂಗಳಾಯಿತ್ರಿ |
| ವೆಂಕಪ್ಪ – | ಬಳಗದಾಗ ಹಾಕೊಂಡಿರೇನೋ ಅಲ್ಲ. ಕೆಂಚಪ್ಪ ಇದು ಎಂಥಾ ಒಳ್ಳೇ ಟಾಯಮು ಅಂತೀನಿ. ಈಗ ಮರಿಯಪ್ಪನ್ನ ಇವರ ಮನಿಗೆ ಯಾಕ್ ಕರಕೊಂಡು ಬಂದೀವಂದ್ರ |
| ಕೆಂಚಪ್ಪ – | ಇವರ ಹೊಲ ಮನಿ ಇವರಿಗೆ ಬಿಡಿಸಿ ಕೊಡಾಕ |
| ವೆಂಕಪ್ಪ – | ಅಂದ ಮ್ಯಾಲೆ ಇವತ್ತ ಎಲ್ಲಾ ಕೆಲಸಾನು ಯಜಮಾನ ಮನುಷ್ಯಳ ಎದುರಿಗೆ ಮುಗಿಸಿದಂತಾಯಿತು. ಇದಕ್ ನಾನು ಟಯಮು ಅಂತೀನಿ ನೀನೇನ ಅಂತಿಯಾ? |
| ಕೆಂಚಪ್ಪ – | ಇದಕ್ಕ ನಾನು ವ್ಯಾಳೇವು ಅಂತೀನ್ರಿ |
| ವೆಂಕಪ್ಪ – | ನಿನ್ನ ತಮ್ಮ ಭದ್ರಣ್ಣಾ ಮನ್ಯಾಗ ಇಲ್ಲೇನೋ ತಮ್ಮಾ |
| ಸಿದ್ದ – | .... ಮನ್ಯಾಗ ಅದಾನ್ರಿ |
| ವೆಂಕಪ್ಪ – | ಅದಾನ! ಏನ ಮಾಡ್ತಾನಪ್ಪಾ? |
| ಸಿದ್ದ – | ಊಟಕ್ಕ ಕುಂತಾನ್ರಿ |
| ವೆಂಕಪ್ಪ – | ಊಟಕ್ಕೆ ಕುಂತ್ರ ಯಾಕ ಎಬ್ಬಸ್ತಿಯಪ್ಪ. ಐದು ಗೋವು ಕೊಂದಷ್ಟು ಪಾಪ ಬರತ್ತಂತ ಶಾಸ್ತ್ರ ಹೇಳುತ್ತ |
| ಸಿದ್ದ – .... | ಇಲ್ಲ ಕರಕೊಂಡು ಬರ್ತೀನ್ರಿ |
| ವೆಂಕಪ್ಪ – | (ಒಳಗೆ ನೋಡುತ್ತ) ಕೆಂಚಪ್ಪ ಸಿದ್ದಣ್ಣ ಬಾಳ ಒಳ್ಳೆ ಹುಡುಗ. ಮತ್ತೆ ಇವನ ತಮ್ಮ ಭದ್ರಣ್ಣ ಇವನಿಗಿಂತ ಒಳ್ಳೆಯವನು. ಮತ್ತ ಈ ಹುಡುಗನ ತಂದೆ ಇವರಿಬ್ಬರಿಗಿಂತ ಒಳ್ಳೆಯವನು. ಈ ಜನ ಇಷ್ಟೆಲ್ಲ ಒಳ್ಳೆಯವರಂತ ಇವರ ಹೊಲ ಇಪ್ಪತ್ತವರ್ಷ ಉಂಡಾನಿವ (ಸಿದ್ದ, ಪಾರ್ವತಿ ಭದ್ರನ ಕರೆದುಕೊಂಡು ಬರುವರು) |
| ಸಿದ್ದ – | ನೋಡ್ರೀ ಯಜಮಾನ್ರೆ ನಾವು ಬಡವರು. ಎಂದಿದ್ದರೂ ನಿಮ್ಮ ಕೈಯಲ್ಲಿ ದುಡಿದು ಒಡಲು ತುಂಬಿಕೊಳ್ಳಬೇಕಾದವರು. ಇಂದಿನಿಂದ |

ನಿಮ್ಮ ಮನೆಯಲ್ಲಿ ನನ್ನ ತಮ್ಮನ್ನ ಜೀತಾ ಇಡತೀನಿ. ಇವನ್ನ ದುಡಿಸಿಕೊಂಡು ಸಾಲಾ ಮುಟ್ಟಿಸಿಕೊಳ್ರಿ

**ಪಾರ್ವತಿ** – ಹೌದು ಸಾಹುಕಾರರೆ ಇಲ್ಲಿಯವರೆಗೆ ಅವನಿಂದ ತಮಗೆ ಏನೆ ಅಪರಾಧವಾಗಿದ್ದರೂ ಹಿರಿಯರಾದ ತಾವು ಅದನ್ನು ಹೊಟ್ಟೆಯಲ್ಲಿ ಹಾಕ್ಕೊಂಡು ತಮ್ಮ ಮಗನಂತೆ ಕಾಪಾಡಿಕೊಂಡು ಹೋಗಬೇಕು (ಮರಿಯಪ್ಪ ಮೀಸೆಯ ಮೇಲೆ ಕೈ ಹಾಕಿ ಕೆಮ್ಮುವನು. ಬೆದರಿಸುವನು. ಸಿದ್ಧ ಎಲ್ಲರಿಗೂ ನಮಸ್ಕಾರ ಮಾಡುವಂತೆ ಹೇಳುವನು)

**ಮರಿಯಪ್ಪ** – ಇರಲಿ ಇರಲಿ ನೋಡು ತಮ್ಮ ತಪ್ಪು ನಮ್ಮಿಂದಲೂ ಆಗ್ಯಾವ. ನಿಮ್ಮಿಂದಲೂ ಆಗ್ಯಾವು. ಅವು ಆಗೋವೆ ಯಾಕ

**ವೆಂಕಪ್ಪ** – ಮನುಷ್ಯರಾಗಿ ಹುಟ್ಟಿದ್ದಕ ತಪ್ಪು ಮನುಷ್ಯರ ಕೈಯಿಂದ ಆಗದಿದ್ದರೆ ಮತ್ತೇನು ಮರದ ಕೈಯಿಂದ ಆಗತಾವೇನು. ತಮ್ಮಾ ಹಿಂದಾದದ್ದೆಲ್ಲ ಮರೆತು ಇನ್ನ ಮುಂದ ನೀವು ನಮ್ಮಂಗ ಒಳ್ಳೆ ಜನಾ ಆಗಿ ಬಾಳರಿ. ನೀವು ನಮ್ಮಂಗ ಬುದ್ಧಿವಂತರಾಗರಿ. ವಿದ್ಯಾವಂತರಾಗರಿ. ಈ ಗೂಡು ಸುಡೋದು ಬಣವಿಗೆ ಬೆಂಕಿ ಹಚ್ಚೋದು ಇಂಥ ಹೀನ ಕಾರ್ಯ ಇನ್ನ ಮುಂದೆ ಮಾಡಬ್ಯಾಡ್ರಿ, ನೀವೆಲ್ಲರೂ ಒಂದಾಗಿ ಬಾಳರಿ ಅಂತಾ ಇವತ್ತ ನಾನು ಬಯಸ್ತೀನಿ. ಅಂದ ಮ್ಯಾಲೆ ಕೆಂಚಪ್ಪ ಇನ್ನ ನಮ್ಮೂರಾಗ ಗೂಡು ಸುಡತಾವೇನೋ?

**ಕೆಂಚಪ್ಪ** – ನೀವು ಹೇಳಿದರ ಸುಡತಾವರ್ರಿ

**ಮರಿಯಪ್ಪ** – ಹೌದು ಕೆಟ್ಟ ಘಳಿಗೆಯಲ್ಲಿ ಏನಾಗೋದೆಲ್ಲ ಆಗಿ ಹೋಯಿತು. ಅದನ್ನ ಎಷ್ಟು ದಿನ ಮನಸ್ಸಿನ್ಯಾಗ ಹಿಡ್ಯೋದು ಅದನ್ನ ಮರೆತ ಬಿಡ್ರಿ

**ವೆಂಕಪ್ಪ** – ಆ ಕಾಗದಾ ಕೊಡು ಅಂದ್ರ ಮರಿತಾರ

**ಮರಿಯಪ್ಪ** –ಕಾಗದಾ ಕೊಡತೀನೋ ಕೊಡದಿದ್ರೆ ಹ್ಯಾಂಗ (ಕಾಗದ ತೆಗೆದುಕೊಡುವನು)

**ವೆಂಕಪ್ಪ** – ಏ ನಿನಗ ಓದಾಕ ಬರತ್ತೇನೋ ತಾಯಿಲ್ಲಿ ಓದಿಕೊಡತೀನಿ (ಓದಿದಂತೆ ತಲೆ ಅಲ್ಲಾಡಿಸುವನು) ನೋಡ ತಮ್ಮ ನಿಮ್ಮಪ್ಪ ಮಾಡಿದ ಸಾಲ ಮೊದಲ ಮಾಡಿ ಮುಟ್ಟಿತು ಅಂತ ಕಾಗದ ಬರಸಿ ಮರಿಯಪ್ಪನ

ಸಹಿ ಹಾಕಿಸಿ ನಾನು ಕೆಂಚಪ್ಪ ಸಾಕ್ಷಿ ಹಾಕೀವಿ (ಕಾಗದ ಸಿದ್ದನ ಕೈಯಲ್ಲಿ ಕೊಡುವನು)

**ಮರಿಯಪ್ಪ –** ನಿಮ್ಮ ಹೊಲಮನಿ ನಿಮಗ ಮುಟ್ಟಿತು. ಕಾಗದಾನು ಕೊಟ್ಟಿತು. ಇನ್ನೇನಪಾ ಅಂದ್ರ ನಿಮ್ಮಪ್ಪ ಮಾಡಿದ ಸಾಲ ಮುಟ್ಟಿತು. ಇನ್ನು ನಿನ್ನ ಮದುವೆಗೆ ಕೊಟ್ಟ ಸಾಲಾನಾದರೂ ದುಡಿದು ಮುಟ್ಟಿಸ್ತಿರೋ?

**ವೆಂಕಪ್ಪ –** ಇಲ್ಲಾ ಅದೂ ಮುಟ್ಟಿತು ಅಂತಾ ಇನ್ನೊಂದು ಕಾಗದಾ ಬರಕೊಟ್ಟೇ ಹೋಗು ಅಂತೀರೋ

**ಭದ್ರ –** ಮರಿಯಪ್ಪನವರೆ ನಮ್ಮಣ್ಣನ ಮದುವೆಗೆ ಕೊಟ್ಟ ಸಾಲ ನಿಮ್ಮ ಮನೆಯಲ್ಲಿ ನಾನು ದುಡಿದು ಮುಟ್ಟಿಸ್ತೀನಿ

**ಮರಿಯಪ್ಪ –** ನಿಮ್ಮಣ್ಣ ದುಡಿದರಷ್ಟೇ, ನೀನು ದುಡಿದರೂ ಅಷ್ಟೇ

**ವೆಂಕಪ್ಪ –** ಆದರೂ ನೀನು ದುಡೀಲಿ ಅಂತಾ ಬಯಸ್ತಾನಿವನು

**ಮರಿಯಪ್ಪ –** ಒಟ್ಟಿಗೆ ನಮ್ಮ ಸಾಲ ಮುಟ್ಟಿದರೆ ಸಾಕು. ಆದರಿಷ್ಟೇ....

**ವೆಂಕಪ್ಪ –** ಹಿಂದಿನಂಗ ಕೊಡ್ಲಿ ಮಾತ್ರ ತೋರಿಸಬ್ಯಾಂಡಾಂತ

**ಮರಿಯಪ್ಪ –** ಹೂ ಯಾಕಂದ್ರ ಸಿಟ್ಟಿಗೆದ್ರೆ ನೀನು ಮನುಷ್ಯ ಅಲ್ಲ. ವಿಚಾರ ಮಾಡಿ ಮಾತಾಡು

**ವೆಂಕಪ್ಪ –** ಸಿಟ್ಟಿಗೆದ್ರೆ ಯಾಕಪ್ಪಾ ಯಾವಾಗಲೂ ನೀನು ಮನುಷ್ಯ ಅಲ್ಲ, ಪ್ರತ್ಯಕ್ಷ **ದೇವರು**

**ಮರಿಯಪ್ಪ –** ನೋಡ ಸಿದ್ದಾ ಕಾಲ ಸುಮಾರು ಬಂದಾವು. ವೆಂಕಪ್ಪ ಮೊನ್ನೆ ಮಾಮಲೆದಾರರು ಅದೇನೋ ಕೊಡು ಅಂತಾ ಕೇಳಿದರಲ್ಲೋ

**ವೆಂಕಪ್ಪ –** ಅದೇ ರಾಷ್ಟ್ರೀಯ ರಕ್ಷಣಾ ನಿಧಿ

**ಮರಿಯಪ್ಪ –** ಹೂಂ ಅದನ್ನ ಕೊಡಬೇಕಂತ ನಾವು. ಹೇಳಿ ಕೇಳಿ ಸರಕಾರದವರು ಕೊಡದಿದ್ದರೆ ಕೇಳ್ತಾರೇನು? ನಮ್ಮ ಸಂಕಟ ನಮಗೆ ಗೊತ್ತು. ಬಾಳ ಹೊಲ ಅದಾವು ದೊಡ್ಡಮನಿ ಐತಿ. ಸಾಕಷ್ಟು ದುಡ್ಡು ಆಳು ಕಾಳು ಎಲ್ಲಾ ಅದಾವು. ಸಾವಕಾರರೂ ಸುಖದಿಂದ ಅದರಂತ ನೀವು ತಿಳಿತೀರಿ

ವೆಂಕಪ್ಪ – ಇಷ್ಟು ಐತಿ ಅಂತಾನೆ ರಾತ್ರಿ ಇವನಿಗೆ ನಿದ್ರೇನೆ ಬರೋದಿಲ್ಲ ಯಾಕಂತೀರಾ?

ಮರಿಯಪ್ಪ – ಕಳ್ಳಕಾರರ ಭಯ. ದುಡಿಯೋ ಜನ ಎಲ್ಲಿ ಜಗಳಾ ತಗೀತಾರೋ ಅನ್ನೋ ಅಂಜಕಿ. ಯಾವ ಹೊತ್ತಿಗೆ ಬಂದು ಸರಕಾರದವರು ಏನು ಕೇಳಿದರೂ ಕೊಡಬೇಕು. ಲೆಕ್ಕಾ ತೋರಿಸಬೇಕು. ತಪ್ಪಿತಂದ್ರ ಜೇಲ ಸೇರಬೇಕು. ಒಂದಾ ಎರಡಾ ನಮಗಿರೋ ಚಿಂತೆ

ವೆಂಕಪ್ಪ – ನೋಡ ತಮ್ಮಾ.... ಒಂದು ಮಾತಿನಾಗ ಹೇಳಿ ಮುಗಿಸಿಬಿಡತೀನಿ. ಇನ್ನ ಮ್ಯಾಲೆ ಇವನ ಸಾವಕಾರಕಿ ನಿಮ್ಮದು ಅಂತಾ ತಿಳಿದು ನೀನ್ಹ ನನ್ನ ತಮ್ಮ ತಿಳಕೊಂಡು ನಡೀರಿ ಆಯಿತ (ಭದ್ರನ್ನ ನೋಡಿ) ಸಿದ್ದಣ್ಣ ನಿಮ್ಮ ತಮ್ಮ ಭದ್ರಣ್ಣ ಈಗ್ಯಾಕ ಒಳಗೆ ಹೋದ ತಮ್ಮ

ಸಿದ್ದ – ಅಂಗಿ ಹಾಕ್ಕೊಂಡು ಬರಲಿಕ್ಕೆ

ಮರಿಯಪ್ಪ – ನಾನು ಹುಬ್ಬಳ್ಳಿಗೆ ಹೋಗಬೇಕು ನಡೀರೋ (ಮರಿಯಪ್ಪ, ವೆಂಕಪ್ಪ, ಕೆಂಚಪ್ಪ ಹೋಗುವರು) ನಿಮ್ಮ ತಮ್ಮನಿಗೆ ಸರಿಯಾಗಿ ಬುದ್ಧಿ ಹೇಳಿ ಕಳಿಸು

ಭದ್ರ – ಹೋಗಿ ಬರ್ತೇನೆ ಅತ್ತಿಗೆ

ಪಾರ್ವತಿ – ಹೋಗಿ ಬಾರಪ್ಪಾ. ದೇವರು ನಿನಗೆ ಒಳ್ಳೇದು ಮಾಡಲಪ್ಪ

ಸಿದ್ದ – ಒಳ್ಳೇ ಮಾತಿನಿಂದ ದುಡಿದು ಅವರ ಸಾಲ ಮುಟ್ಟಿಸಿ ಒಳ್ಳೆಯವನೆನಿಸಿಕೊಂಡು ಮನಿಗೆ ಬಾ

– ತೆರೆ –

===**====**===

# ದೃಶ್ಯ ೧೨

ರಸ್ತಾ

**ಗುಂಡ** – ನಿಂದ್ರೋ ಭದ್ರಿ ನಿನ್ನ ಹತ್ರ ಒಂದು ಕೆಲಸ ಐತಿ ನಿಲ್ಲೋ

**ಭದ್ರ** – ಅದೇನು ಕೆಲಸಾನೋ ಬೇಗ ಹೇಳು ನಾನು ಹೊಲಕ ಹೋಗಬೇಕು

**ಗುಂಡ** – ಹೊಲ ಏನು ಓಡಿ ಹೋಗೋದಿಲ್ಲ. ಸ್ವಲ್ಪ ನಿಲ್ಲೋ, ಸಾವಕಾರ ಮನಿ ಅನ್ನ ಎಷ್ಟು ಬೇಗ ಸೊಕ್ಕು ತರಿಸಿತೊ? ಸ್ನೇಹಿತರನ್ನೇ ಮರೆಸಿಬಿಟ್ಟಿತು. ಎದುರಿಗೆ ಬಂದರೆ ಮಾತಾಡಿಸೋದಿರಲಿ ಮುಖ ಸಹಿತ ನೋಡದಂಗ ಮಾಡಿತಲ್ಲ. ಇದೇನು ಅನ್ನದ ಪ್ರಭಾವವೋ ಇಲ್ಲ ಸಾವಕಾರಮನಿ ಹೆಣ್ಣಿನ ಪ್ರಭಾವವೋ

**ಭದ್ರ** – ಯಾಕೋ ಗುಂಡ ಹೆಣ್ಣು ಪಣ್ಣು ಅಂತ ಬಾಳ ಮಾತಾಡತೀದಿ

**ಗುಂಡ** – ಕಣ್ಣುಮುಚ್ಚಿ ಹಾಲು ಕುಡಿದರೆ ಮಂದಿಗೆ ಕಾಣೋದಿಲ್ಲಾಂತ ಮಾಡಿಯೇನು? ಏನು ಏನಂತಾಳೆ ಆ ನಿನ್ನ ಲಕ್ಷ್ಮಿ. ಸ್ನೇಹಿತನ್ನ ಮಾತಾಡಿಸಬ್ಯಾಡಾಂತ ಬಿಡಿಸಿಬಿಟ್ಟಳೇನ ಮತ್ತ?

**ಭದ್ರ** – ಲೇ ಗುಂಡ ಒಳ್ಳೆ ಮಾತಿನಿಂದ ಅವಳ ಸುದ್ದಿ ಆಡೋದನ್ನ ಬಿಟ್ಟುಬಿಡು, ಇರದಿದ್ದರೆ ನಿನ್ನ ಹಲ್ಲು ತೆಗೆದೇನು

**ಗುಂಡ** – ಹೋಗಲಿ ಬಿಡಪ್ಪಾ... ಇನ್ನ ಅವಳ ಸುದ್ದಿ ಎತ್ತದೆ ಬಿಟ್ಟು ಬಿಡತೀನಿ

**ಭದ್ರ** – ಈಗ ಇದನ್ನೇ ಆಡಲಿಕ್ಕೆ ನಿಲ್ಲಿಸಿದ್ದೇನೋ ನನ್ನ

**ಗುಂಡ** – ಏ ಇದಲ್ಲೊ ನಾವೆಲ್ಲ ಇವತ್ತ ಐಹೊಳ್ಳಿ ಜಾತ್ರೆಗೆ ಹೊರಟೇವಿ. ನಿನ್ನ ಕರಕೊಂಡು ಹೋಗೋನಂತ ಬಂದೆ

**ಭದ್ರ** – ಐಹೊಳ್ಳಿ ಜಾತ್ರೆ ಇವತ್ತೇ ಏನೋ? ಯಾರ್ಯಾರು ಹೊರಟಿರೋ?

**ಗುಂಡ** – ಫಳಾರದ ಶಿವ್ಯಾ, ಪಟ್ಟದಕಲ್ ಸಿದ್ಧ, ಬಳ್ಯಾ, ಕಾಳ್ಯಾ, ಹೊಸಮನಿ ವಾಸ್ಯಾ, ಶಾಪೂರ ರಾಮು, ರೊಡ್ಡಗ್ಯೆ ಬಸ್ಯಾ, ಮಿಣಜಗಿ ತುಕ್ಯಾ,

ಮಿಣಜಗಿ ಈರ್‍ಯಾ ಒಟ್ಟಿಗೆ ನಮ್ಮ ಗ್ಯಾಂಗಿನ ಹುಡುಗರೆಲ್ಲ ಹೊರಟೀವಿ. ನಿನ್ನ ಕರಕೊಂಡ ಬರತೀನಿ ಅಂತ ಹೇಳಿ ಅವರನ್ನೆಲ್ಲ ಸಿದ್ದಪ್ಪಜ್ಜನ ಮಠದ ಹತ್ತಿರ ನಿಲ್ಲಿಸಿ ಬಂದೀನಿ. ಬಾರೋ ಹೋಗೋಣ.

**ಭದ್ರ** – ಬರಬೇಕು ಅನ್ನುವ ಮನಸ್ಸು ಬಲವಾಗಿ ಐತಿ ಗುಂಡ. ಆದರೆ ಬರಾಕ ನನಗೆ ದಾರಿ ಇಲ್ಲ. ಸಾಲ ಮುಟ್ಟೋತನಕ ಸಾವಕಾರ ಮನೆಯಲ್ಲಿ ಆಳಾಗಿ ದುಡೀತೀನಿ ಅಂತ ಅಣ್ಣ-ಅತ್ತಿಗೆಯವರಿಗೆ ಮಾತು ಕೊಟ್ಟೀನಿ. ಈಗ ನಾನೇನಾದರೂ ಬಂದುಬಿಟ್ಟರೆ ಅಣ್ಣ ಸಿಟ್ಟಿಗೇಳತಾನೆ. ನಮ್ಮತ್ತಿಗೆ ನೊಂದುಕೊಳ್ಳುತ್ತಾಳೆ. ಒಂದುವೇಳೆ ಸಾವಕಾರ್‍ರಿಗೆ ಹೇಳಿಬರಬೇಕು ಅಂದ್ರ ಅವರೂ ಊರಲ್ಲಿ ಇಲ್ಲ. ಹುಬ್ಬಳ್ಳಿಗೆ ಹೋಗ್ಯಾರಂತ

**ಗುಂಡ** – ಹೌದಲ್ಲ ಮರಿಯಾ ಹುಬ್ಬಳ್ಳಿಗೆ ಈಗ್ಯಾಕ ಹೋಗ್ಯಾನ ಗೊತ್ತೇನೋ ನಿನಗ

**ಭದ್ರ** – ಏನೋ ಅಪ್ಪ ಅದೆಲ್ಲ ನನಗೇನು ಗೊತ್ತು

**ಗುಂಡ** – ಸಾಕ ಮಾಡೋ ನಿನ್ನ ಗತ್ತಾ! ನನ್ನೆದುರು ತೋರಿಸಬ್ಯಾಡ. ಹೇಳು ಮರಿಯಪ್ಪ ಹುಬ್ಬಳ್ಳಿಗೆ ಯಾಕ ಹೋಗ್ಯಾರ?

**ಭದ್ರ** – ಇಲ್ಲ ಗುಂಡ ನಿಜವಾಗಿಯೂ ನನಗೆ ಗೊತ್ತಿಲ್ಲ

**ಗುಂಡ** – ಅಂದ್ರೇನೋ ಊರಿಗೇ ಗೊತ್ತಾದ ಮಾತು ನಿನಗೆ ತಿಳಿದಿಲ್ಲ ಅಂದ್ರೆ ನಾನ್ಯಾಂಗ ನಂಬಲಿ? ಕೇಳಿಲ್ಲಿ ಮರಿಯಪ್ಪ ತನ್ನ ಮಗಳಿಗೆ ವರ ನೋಡಲಿಕ್ಕೆ ಹೊಗ್ಯಾನಂತ ಹುಬ್ಬಳ್ಳಿಗೆ. ಇದೇ ವರ್ಷ ಮಗಳ ಮದುವೆ ಮಾಡ್ತಾನಂತೆ. ವರನ ತಂದೆ ಭಾರಿ ಶ್ರೀಮಂತನಂತೆ. ಅಡತೀ ಅಂಗಡಿ ಇಟ್ಟಾರಂತೆ. ಸಿನಿಮಾ ಥೇಟರ ಕಟ್ಟಿಸ್ಯಾರಂತೆ. ಹುಚ್ಚಾ ಆ ಹುಡುಗಿನ್ನ ನಂಬಿ ನೀನು ತಲೆ ಕೆಡಿಸಿಕೋಬೇಡ. ಮೊದಲು ನಂಬಿಸಿ ಆ ಬಳಿಕ ವಂಚಿಸಿ ಕುತ್ತಿಗೆ ಕೊಯ್ಯುವ ಜಾತಿ ಆ ಹೆಣ್ಣಿನದು (ಹೋಗುವನು)

**ಭದ್ರ** – ಮೊದಲು ನಂಬಿಸಿ ಆ ಬಳಿಕ ವಂಚಿಸಿ ಕುತ್ತಿಗೆ ಕೊಯ್ಯುವ ಜಾತಿಯೇ ನನ್ನ ಲಕ್ಷ್ಮಿಯದು?

**ಲಕ್ಷ್ಮಿ** – (ಹಿನ್ನೆಲೆ) ಭದ್ರಿ ನಾನು ಪ್ರೀತಿಸೋದು ಮದುವೆಯಾಗೋದು

ನಿನ್ನನ್ನೇ.... ಎಂದಿದ್ದರೂ ನನ್ನ ಕತ್ತಲೆಯ ಬಾಳಿಗೆ ನೀವೇ ಪೂರ್ಣ ಚಂದಿರ

**ಭದ್ರ –** ಅಂದು ರಾತ್ರಿ ಗವಿಗೆ ಬಂದು ಅಷ್ಟೆಲ್ಲ ಮಾತನಾಡಿದ ಲಕ್ಷ್ಮಿ ಇಂದು ನನ್ನ ಕೈ ಬಿಡುವಳೆ? ಬೇರೊಬ್ಬನ ಕೈ ಹಿಡಿದು ನನ್ನ ಕುತ್ತಿಗೆ ಕೊಯ್ಯುವಳೇ? ನನ್ನ ಲಕ್ಷ್ಮಿ ನನ್ನ ವಂಚಿಸುವಳೆ?

**ಗುಂಡ –** (ಹಿನ್ನೆಲೆ) ಆ ಹುಡುಗಿನ ನಂಬಿ ತಲೆ ಕೆಡಿಸಿಕೋಬ್ಯಾಡ ಮೊದಲು ನಂಬಿಸಿ ಆ ಬಳಿಕ ವಂಚಿಸಿ ಕುತ್ತಿಗೆ ಕೊಯ್ಯುವ ಜಾತಿ ಆ ಹೆಣ್ಣಿನದು

**ಭದ್ರ –** ಹೌದು ಮೊದಲು ನಂಬಿಸಿ ಕುತ್ತಿಗೆ ಕೊಯ್ಯುವ ಜಾತಿ ಆ ಹೆಣ್ಣಿಂದು. ಇಲ್ಲದಿದ್ದರೆ ಶ್ರೀಮಂತಿಕೆಗೆ ಬೆದರದ ಸಾಲಕ್ಕೆ ಹೆದರದ ನನ್ನ ಪ್ರೀತಿಸುವನೆಂದು ನಟನೆ ಮಾಡಿ ಬಗ್ಗಿಸಿರಬಹುದೆ? ಇಲ್ಲದಿದ್ದರೆ ಹಳ್ಳದ ದಡದಲ್ಲಿ ನಾನವಳ ಕೂದಲು ಕತ್ತಿರುಸುವ ಮುನ್ನ ಶ್ರೀಮಂತಿಕೆಯ ಸೊಕ್ಕಿನಿಂದ ಅವಳಂದ ಮಾತು

**ಲಕ್ಷ್ಮಿ –** (ಹಿನ್ನಲೆ) – ಏ ಹೋಗೋ ಜೋಬದ್ರ ನಿನ್ನಂಥ ರುದ್ರಗೋಳು ಭದ್ರಗೂಳು ನಮ್ಮ ಮನ್ಯಾಗ ಜೀತ ಅದಾರ. ನಮ್ಮ ಹೊಲದಾಗಿನ ಕಸ ಕೀಳತಾರ ರಾತ್ರಿ ಬಂದು ನಮ್ಮಪ್ಪನ ಕಾಲು ಒತ್ತತಾರ

**ಭದ್ರ –** ಹೌದು ಅವಳಂದ ಹಾಗೆಯೇ ನಡೆದ ಹೋಯಿತಲ್ಲ. ಕೊನೆಗೂ ನಾನವರ ಜೀತದಾಳಾದೆನೇ? ನನ್ನ ಸಿಟ್ಟು, ನನ್ನ ಹಟ, ನನ್ನ ಪೌರುಷ ಎಲ್ಲವೂ ಇಂದು ಸಂಪತ್ ಲಕ್ಷ್ಮಿಯ ಕಾಲುತುಳಿತಕ್ಕೆ ಸಿಕ್ಕು ಕಸವಾಗಿ ಹೋಯಿತೆ? ಇಲ್ಲ ಇಲ್ಲ ಅವಳನ್ನೀಗಲೇ

**ಪಾರ್ವತಿ –** (ಹಿನ್ನೆಲೆ) ಭದ್ರ ನಿಮ್ಮಣ್ಣನವರ ಮಾತಿನಂತೆ ನಡೆಯದಿದ್ದರೆ ನಾನೇ ಅವರ ಮನೆಯಲ್ಲಿ ದುಡಿದು ಸಾಲ ಮುಟ್ಟಿಸಿ ಬರುತ್ತೇನೆ

**ಭದ್ರ –** ಅತ್ತಿಗೆಮ್ಮಾ.... ಏನಿದ್ದರೂ ಅತ್ತಿಗೆಗೆ ಕೊಟ್ಟಮಾತು ನಡೆಯಲೇಬೇಕು. ಸಾಲ ಮುಟ್ಟುವವರೆಗೆ ನಾನವರ ಮನೆಯ ಜೀತದ ಆಳು (ಹೋಗ ಹತ್ತುವನು. ಲಕ್ಷ್ಮಿ ಬರುವಳು)

**ಲಕ್ಷ್ಮಿ –** ಅಯ್ಯ ದಾರ್‍ಯಾಗ ನಿಂತ್ಯೆತಲ ಈ ಆಳು. ಏ ಏನಿದು ನಿನ್ನ ಕೆಲಸ ಆಳಾಗಿ ನಮ್ಮಲ್ಲಿ ದುಡೀಲಿಕ್ಕೆ ಬಂದಿಯೋ ಅರಸನಂತೆ ಬೀದಿಯಲ್ಲಿ ಮೆರಿಬೇಕು ಅಂತಿಯೋ

**ಭದ್ರ** – ಬರೀ ಅಳಾಗಿ ದುಡಿಯುವದೊಂದೇ ಗುರಿ ಇಟ್ಟುಕೊಂಡು ಬಂದವನಲ್ಲ ನಿನ್ನ ಕೊರಳಿಗೆ ತಾಳಿಕಟ್ಟಿ ಆಳಬೇಕು ಅನ್ನುವನು

**ಲಕ್ಷ್ಮಿ** – ಓಹೋ ಹೀಗೇನು ಸಮಾಚಾರ? ಸರಿ ನನ್ನ ಕೊರಳಿಗೆ ತಾಳಿ ಬಿಗಿದು ಆಳ ಬಂದ ವೀರ, ಜೀತಾ ಇದ್ದವರಿಗೂ ಹೆಣ್ಣಿನ ಪ್ರೀತಿ ದೊರೆಯುತ್ತೇನು

**ಭದ್ರ** – ಜೀತವಾಗಲಿ, ಹೆಣ್ಣಿನ ಪ್ರೀತಿಯಾಗಲಿ ನೀತಿಗಿಂತ ದೊಡ್ಡದೇನು? ಮಾಡಿದ ಸಾಲ ದುಡಿದು ಮುಟ್ಟಿಸಲೇಬೇಕಲ್ಲ. ಜೀತ ಹೊರತು ಅನ್ಯದಾರಿ ಕಾಣದಿದ್ದಾಗ ಮಾಡಬೇಕೇನು? ಹೇಳಿ ಕೇಳಿ ನಾವು ಬಡವರು

**ಲಕ್ಷ್ಮಿ** – ಕೊಟ್ಟಿದ್ದನ್ನು ಮರಳಿ ಮುಟ್ಟಿಸಬೇಕೆಂಬ ನಿಷ್ಠೆ ಜೀತವಿದ್ದು ಸಾಲ ಮುಟ್ಟಿಸಬೇಕು ಅನ್ನುವ ನೀತಿ ಯಾವಾಗ ಬಂತೋ ಈ ಬಡವನಲ್ಲಿ

**ಭದ್ರ** – ಅಂದ್ರೆ ಕೊಟ್ಟ ಸಾಲ ಮರಳಿ ಮುಟ್ಟಿಸದ ಪಾಷಂಡಿಯೆಂದು ತಿಳಿದಿದ್ದಿಯಾ ನಮ್ಮನ್ನು

**ಲಕ್ಷ್ಮಿ** – ತಿಳಿಯೋದೇನು ಬಂತು ಹೊಡೀತೀನಿ ಅಂತ ಹೆದರಿಸಿ ಹೊಲ ಮನಿ ಕಸಕೊಂಡ್ರಿ ನಮ್ಮಪ್ಪನಿಂದ. ಈಗ ಹೇಳು ಸಂಪತ್ತಿಗೆ ಹೆದರಿದೆಯಾ? ಸರಕಾರಕ್ಕೆ ಹೆದರಿದೆಯಾ? ಇಲ್ಲಾ ಸಮಾಜಕ್ಕಾದರೂ ಹೆದರಿದೆಯಾ? ಎಲ್ಲದಕ್ಕೂ ಸವಾಲು ಹಾಕಿ ಕೊನೆಗೆ ನಿನ್ನ ಹಟವನ್ನೇ ಸಾಧಿಸಿಕೊಂಡಿ. ಈಗ ಹೇಳು ಕೊಟ್ರೇನು ನಿಮ್ಮಪ್ಪ ಮಾಡಿದ ಸಾಲಾನ. ಬರೀ ಹೆದರಿಕೆ ಹಾಕಿ ಮುಟ್ಟಿಸಿದಿರಿ

**ಭದ್ರ** – ಹೆದರಿಸುವವರು ನಾವಲ್ಲ, ನೀವು ಶ್ರೀಮಂತರು. ನಮ್ಮಪ್ಪ ಮಾಡಿದ ಸಾಲ ಮುಟ್ಟಿಸಲೆಂದು ಇಲ್ಲಿಯವರೆಗೆ ಹೊಲದ ಪೀಕನ್ನು ಪ್ರತಿ ವರುಷ ತಂದೊಪ್ಪಿಸಿದರೂ ಮುಟ್ಟಲಿಲ್ಲ. ಈ ಶ್ರೀಮಂತರ ನೀತಿ ಎಂದರೆ ಸರಿದರೆ ಒತ್ತೋದು, ಒತ್ತಿದರೆ ಸರಿಯೋದು

**ಲಕ್ಷ್ಮಿ** – ಓ ಹೊ ನಮ್ಮಲ್ಲಿ ಜೀತವಿದ್ದವರಿಗೆ ಮಾತನಾಡುವ ಜಾಣ್ಮೆ ಇದೆ. ಒಳ್ಳೆ ಗಂಡ್ಸ. ಇಷ್ಟೆಲ್ಲ ಮಾತು ನಮ್ಮ ಮನಿಗೆ ಬಂದಾಗ ನಮ್ಮಪ್ಪನ ಎದುರಿಗೆ ಆಡಬೇಕಾಗಿತ್ತು

**ಭದ್ರ** – ಆಡಬೇಕಾದ್ದನ್ನು ನಿಮ್ಮಪ್ಪನೆದುರು ಎಂದೋ ಆಡಿದ್ದೇನೆ. ಕದ್ದು ಮುಚ್ಚಿ ಪ್ರೀತಿ ಮಾಡುವ ಜಾತಿ ನನ್ನದಲ್ಲ. ಆದರಿಷ್ಟೆ, ಅಣ್ಣ ಅತ್ತಿಗೆಯರ

ಅಪ್ಪಣೆಯಂತೆ ಸಾಲ ಮುಟ್ಟುವವರೆಗೆ ನಾನು ನಿಮ್ಮ ಮನೆಯಲ್ಲಿ ಆಳಾಗಿ ದುಡಿಯುತ್ತೇನೆ

**ಲಕ್ಷ್ಮಿ –** ಅಂತೂ ಈ ಆಳು ನಮ್ಮ ಮನೆ ಹಾಳ ಮಾಡಲೆಂದೆ ಬಂದದ್ದು

**ಭದ್ರ –** ಹೌದು

**ಲಕ್ಷ್ಮಿ –** ಈ ಆಳಿನ ಮುಖ ನೋಡಿದರೆ ಮಾತನಾಡಿಸಲಿಕ್ಕೆ ಹೆದರಿಕೆ. ಇನ್ನು ದುಡಿಸಿಕೊಳ್ಳುವುದು ಹೇಗಪ್ಪ ಅಂತ

**ಭದ್ರ –** ಹೌದು ಶ್ರೀಮಂತರ ಮಗಳಿಗೆ ಈಗ ನನ್ನಂಥ ಬಡವ ಕಣ್ಣಲ್ಲಿ ಕಾಣ್ತಾನೇನು ಮಾತಾಡಿಸಲಿಕ್ಕೆ

**ಲಕ್ಷ್ಮಿ –** ಶ್ರೀಮಂತರ ಮಗಳಿಗೆ ಒಂದು ರೀತಿ ಸಂಪತ್ತಿನ ಅಮಲೆ ಬಂದಿರುತ್ತೆ. ಅವಳು ಮಾತಾಡಿಸದಿದ್ದರೆ ಬಿಡಲಿ ಬಡವನಿಗೇನು ಬಾಯಲ್ಲಿ ಬೆಲ್ಲ ಇಟ್ಟಿರತಾರೇನು ಮನಿಗೆ ಬಂದಾಗಲೆಲ್ಲ ಮಾತಾಡಿಸದೇ ಹೋಗಲಿಕ್ಕೆ

**ಭದ್ರ – .** ...ಬಾಯಲ್ಲಿ ಬೆಲ್ಲ ಇಟ್ಟಿರತಾರೋ ಏನು ಗವಿಗೆ ಬಂದು ಒಂದೊಂದು ಉಂಡಿ ಇಟ್ಟಿರತಾರೋ ಯಾರು ಬಲ್ಲರು? ಮದಲೇನೋ ನನ್ನನ್ನೇ ಮದುವೆಯಾಗುವದಾಗಿ ಮಾತು ಕೊಟ್ಟು ಈಗ ಅದಾರೋ ಹುಬ್ಬಳ್ಳಿಯವರು ಬಂದು ನಿನ್ನ ಕೈ ಹಿಡಿತಾರೆ ಅಂದ ತಕ್ಷಣ ಬಡವ ನಾ ನಿನ್ನ ಕಣ್ಣಲ್ಲಿ ಕಸವಾಗಿ ಬಿಟ್ಟೆ, ನಿನ್ನ ಮೇಲಿನ ಪ್ರೀತಿಯೇ ಈಗ ನನ್ನ ಜೀತದಾಳಾಗಿ ನಿಲ್ಲಿಸಿದ್ದು ಲಕ್ಷ್ಮಿ. ಜಿದ್ದು ಹಾಕಿದವರ ಮನೆಯ ಹೆಣ್ಣನ್ನು ಗೆದ್ದೊಯ್ಯದಿದ್ದರೆ ನಮ್ಮಪ್ಪನ ಮಗನೇ ನಾನಲ್ಲ. ಹುಬ್ಬಳ್ಳಿಯವರು ಬರ್ತಾರಂತೆ ಇವಳು ಮಾಡಿಕೊಂಡ ಹೋಗತಾಳಂತೆ, ಹುಬ್ಬಳಿಯವರಂತೆ ಹುಬ್ಬಳಿಯವರು

**॥ ಪದ ॥**

ನಾರಿ ನಿನ್ನ ನೋಡಲಾಕ ದೂರದಿಂದ ಬರತಾರಂತ ॥
ದೂರದಿಂದ ಬರತಾರಂತ ಹುಬ್ಬಳ್ಳಾಗ ಇರತಾರಂತ ॥ ನಾರೀ ॥
ಊರಿಗೆ ಭಾರಿ ಸಾವಕಾರಂತ । ಬಂಗಾರದೊಡವೆ ಮಾಡಿಸ್ಯಾರಂತ ॥
ದುಂಡುಮುಖದ ಹುಡುಗಿ ನಿನ್ನ ಕಂಡು ಮಳ್ಳ ಆಗ್ಯಾರಂತ ನಾರೀ ॥

ಅಡತಿ ಬಜಾರದಂಗಡಿಯಂತ ॥ ಸಿನೆಮಾ ಥೇಟರ ಕಟ್ಟಸ್ಯಾರಂತ ॥
॥ ನಾರಿ ॥ ಗವಿಗೆ ಬಂದ ರಾತ್ರಿ ಹೊತ್ತ ಅದಿದ್ದೆಲ್ಲ ಮದುವೆ ಮಾತ ॥
ಕೇಳತೀನಿ ಎದುರಿಗೆ ನಿಂತ ॥ ಇಷ್ಟು ಬೇಗ ಮರ್ತಾಂಗ ಹೋತ ॥
॥ ನಾರಿ ॥ (ಪದ ಮುಗಿದ ಮೇಲೆ ಹೋಗುವನು)

**ಲಕ್ಷ್ಮಿ –** ಭದ್ರ.

**ಭದ್ರ –** ಇನ್ನೆಲ್ಲಿ ಭದ್ರಿ ಬಡವನನ್ನು ಮರೆತು ಶ್ರೀಮಂತನ ಕೈ ಹಿಡಿದು ಹೋಗಬೇಕಾದ ನೀನು ಮೊದಲೆ ನನ್ನೊಂದಿಗೆ ಮಾತು ಬಿಟ್ಟಿದ್ದು ಒಂದು ದೃಷ್ಟಿಯಿಂದ ಒಳ್ಳೆಯದೇ

**ಲಕ್ಷ್ಮಿ –** ಭದ್ರ ಮೊದಲು ಹೇಳು. ನಿನಗಾರು ಹೇಳಿದರು ಇದನ್ನ

**ಭದ್ರ –** ಯಾವದನ್ನ?

**ಲಕ್ಷ್ಮಿ –** ನಮ್ಮಪ್ಪ ನನಗೆ ವರ ನೋಡಲಿಕ್ಕೆ ಹುಬ್ಬಳ್ಳಿಗೆ ಹೋದ ವಿಷಯ

**ಭದ್ರ –** ಯಾರ‍್ಯಾಕೆ ಹೇಳಬೇಕು. ಈ ನಿನ್ನ ಮುಖ ಹೇಳುತ್ತದೆ. ಊರಿಗೆ ತಿಳಿದ ಮಾತು ನನಗೆ ತಿಳಿಯಲಾರದೇನು?

**ಲಕ್ಷ್ಮಿ –** ನಮ್ಮಪ್ಪ ನನಗೊಂದು ವರ ನೋಡಲಿಕ್ಕೆ ಹುಬ್ಬಳ್ಳಿಗೆ ಹೋದದ್ದೇನೋ ನಿಜ. ಆದರೆ ನನ್ನ ಒಪ್ಪಿಗೆಯಿಂದಲ್ಲ ಭದ್ರ. ನಿನ್ನ ವಿಷಯದಲ್ಲಿ ನಾನೆಂದು ಮನಸ್ಸು ಬದಲಿಸಲಿಲ್ಲ

**ಭದ್ರ –** ಹೌದು ಬದಲಿಸಲಿಲ್ಲ. ಆದ್ದರಿಂದಲೇ ಈವರೆಗೆ ನನ್ನ ಮಾತಾಡಿಸೋದಿರಲಿ ಮುಖ ನೋಡಲಿಕ್ಕೂ ನಿನ್ನ ಮನಸ್ಸು ಒಪ್ಪಲಿಲ್ಲ ಅಲ್ಲವೆ?

**ಲಕ್ಷ್ಮಿ –** ತಪ್ಪು ನನ್ನದಲ್ಲ ಭದ್ರ. ನನ್ನ ತಂದೆ ಯಾವದಕ್ಕೂ ಅವಕಾಶ ನೀಡಲಿಲ್ಲ. ಸತ್ಯ ಹೇಳುವದಾದರೆ ಬಲಿಯಲ್ಲಿ ಬಿದ್ದ ಹುಲಿಯಂತಾಗಿದೆ ನನ್ನ ಪಾಡು

**ಭದ್ರ –** ನಮ್ಮಿಬ್ಬರ ಮದುವೆಗೆ ನಿನ್ನ ತಂದೆಯನ್ನು ಒಪ್ಪಿಸುವದಾಗಿ ಮಾತು ಕೊಟ್ಟಿರಲಿಲ್ಲವೆ ನೀನು ನನಗೆ

**ಲಕ್ಷ್ಮಿ –** ಹೌದು ಕೊಟ್ಟಿದ್ದೆ. ಎಷ್ಟು ಪರಿಯಲ್ಲಿ ಹೇಳಿದರೂ ಒಪ್ಪಲಿಲ್ಲ. ಅತ್ತು ಹೇಳಿದೆ ಕಾಡಿ ಹೇಳಿದೆ. ಕೊನೆಗೆ ಆತ್ಮಹತ್ಯ ಮಾಡಿಕೊಳ್ಳುವೆನೆಂದು ಹೆದರಿಸಿದೆ. ಯಾವುದಕ್ಕೂ ನನ್ನ ತಂದೆ ಒಪ್ಪಲಿಲ್ಲ. ನಮ್ಮಿಬ್ಬರ

ಮದುವೆಗೆ ಸಮ್ಮತಿಸಲಿಲ್ಲ. ಭದ್ರ....ನಿನ್ನ ಕೂಡ ಮಾತನಾಡುವದಿರಲಿ, ಮನೆಗೆ ಬಂದಾಗ ನಿನ್ನ ಮುಖ ಕೂಡಾ ನೋಡಬಾರದೆಂದು ಕಟ್ಟಪ್ಪಣೆ ಮಾಡಿದ್ದಾರೆ. ನಾನು ಮನೆಯಿಂದ ಹೊರ ಬೀಳದಂತೆ ಬಂದೊಬಸ್ತಿನಲ್ಲಿಟ್ಟು ಹಗಲು ರಾತ್ರಿ ನನ್ನ ಕಾಯ್ತಾರೆ. ಎಂದು ಪೋಲೀಸರು ನಿನ್ನ ಬಂಧಿಸಿ ಒಯ್ದರೊ ಅಂದೇ ಮನೆಯಲ್ಲಿ ನನ್ನ ಬಂಧಿಸಿಟ್ಟರು ಭದ್ರ

**ಭದ್ರ** – ಈ ವಿಷಯ ಇಷ್ಟು ದಿವಸ ಕಳೆದರೂ ನೀನು ನನಗೇಕೇ ತಿಳಿಸಲಿಲ್ಲ?

**ಲಕ್ಷ್ಮಿ** – ಯಾವಾಗ ಹೇಳಲಿ? ಹೇಗೆ ಹೇಳ್ಲಿ? ಈಗ ನಮ್ಮಪ್ಪ ಊರಿನಲ್ಲಿಲ್ಲವೆಂದೆ ನಾನಿಲ್ಲಿಗೆ ಬಂದದ್ದು. ಅದು ನನ್ನ ಕಾವಲಿಗಿದ್ದ ತಳವಾರ ಚೆನ್ನವ್ವನಿಗೆ ಹತ್ತು ರೂಪಾಯಿ ಲಂಚಾ ಕೊಟ್ಟು ಬರಬೇಕಾಯಿತು. ಭದ್ರ ಎಂದೋ ನಿನಗೆ ಮನಸ್ಸನ್ನು ಒಪ್ಪಿಸಿದ್ದೇನೆ. ನಿನ್ನ ಮೇಲೆ ನನ್ನ ಪ್ರೀತಿ ಇರದಿದ್ದರೆ ಅಂದು ಹೊಲದಲ್ಲಿ ನಮ್ಮ ಗೂಡು ಸುಟ್ಟ ದಿನ ನಿನ್ನ ಜೀವಕ್ಕೆ ಅಪಾಯ ತಟ್ಟಬಾರದೆಂದು ಯಾರಿಗೂ ತಿಳಿಯದಂತೆ ನಮ್ಮ ನೆಲಮನೆಯಲ್ಲಿಟ್ಟು ನಿನ್ನ ರಕ್ಷಿಸುತ್ತಿದ್ದೆನೆ? ಹೀಗಿದ್ದು ನೀನು ಬೇರೆ ಭಾವಿಸಬೇಕೆ? ಮಾತಾಡು ಭದ್ರ. ಇಷ್ಟು ದಿನ ಬಂಧಿಸಿಟ್ಟ ನಮ್ಮಪ್ಪ ನನ್ನ ಹೊಟ್ಟೆ ಉರಿಸಿದರೆ, ಈಗ ನೀನು ಸುಮ್ಮನೆ ನಿಂತು ನನ್ನ ಹೊಟ್ಟೆ ಉರಿಸಬೇಡ ಮಾತಾಡು ಭದ್ರ ನನ್ನ ಕೈಬಿಡಬೇಡ

**ಭದ್ರ** – ಲಕ್ಷ್ಮೀ ಹಿಡಿದ ನಿನ್ನ ಕೈಬಿಡುವ ಮಾತು ಈ ಜನ್ಮದಲ್ಲಿಯೇ ಸಾಧ್ಯವಿಲ್ಲ. ನನ್ನ ಬಾಳಿನ ಕಣ್ಣಾದ ಹೆಣ್ಣು ನೀನು. ಒಲಿದು ಬಂದು ನನ್ನ ಕೈಯಲ್ಲಿ ಬಿದ್ದ ಈ ಹಣ್ಣನ್ನು ಕಸಿದು ತಿನ್ನುವ ಧೈರ್ಯ ಮಾಡಿದವನ ದೇಹವನ್ನೇ ಸೀಳಿ ಬಿಡುತ್ತೇನೆ. ಪ್ರಪಂಚ ಅಡ್ಡ ನಿಂತರೂ ತುಳಿದುಬಿಡುತ್ತೇನೆ. ಈ ಹೋರಾಟದಲ್ಲಿ ನನಗೆ ಸಾವು ಬಂದರೂ ಸರಿ

**ಲಕ್ಷ್ಮಿ** – ಛಿ ಬಿಟ್ಟಿತು ಅನ್ನು. ಆ ಸಾವಿನ ಮಾತು ನಿನ್ನ ಬಾಯಲ್ಲಿ ಬಂದರೆ ನಾನು ಸಹಿಸೋದಿಲ್ಲ. ಬರುವದಿದ್ದರೆ ಆ ಸಾವು ಅದೃಷ್ಟ ಹೀನೆಯಾದ ನನಗೆ ಬರಲಿ. ಈ ಒಂದು ಹೆಣ್ಣಿಗಾಗಿ ಊರಿನ ಕಣ್ಣಿನಂತಿದ್ದ ನೀನು ಸಾಯಬಾರದು ಹಾಗೇನಾದರೂ ಈ ದುರಂತದಲ್ಲಿ ನಾ ಸತ್ತು ಹೋದರೆ ನನಗಾಗಿ ನೀ ಕಣ್ಣೀರು ಹಾಕಬಾರದು. ದೇಶ ಸೇವೆಗೆ

ನಿನ್ನ ದೇಹ ಮೀಸಲಾಗಬೇಕು. ಭದ್ರ ವೀರ ಸೈನಿಕನಾಗಿ ವೈರಿ ವಿನಾಶಕ್ಕೆ ಈ ನಿನ್ನ ಪೌರುಷದಾನವಾಗಬೇಕು ದುರ್ದೈವದಿಂದ ಹಾಗೇನಾದರೂ ಅದಲ್ಲಿ ಸಾವಿನಲ್ಲಿಯಾದರೂ ಸಮಾಧಾನ ತಂದುಕೊಂಡೇನೆ ವಿನಹ ಬೇರೆಯವನಿಗೆ ದೇಹ ಒಪ್ಪಿಸಿ ಆತ್ಮಕ್ಕೆ ಆ ಜನ್ಮ ನೋವು ತಂದುಕೊಳ್ಳಲಾರೆ

**ಭದ್ರ –** ಲಕ್ಷ್ಮೀ ನಾನೇ ನಿಮ್ಮಪ್ಪನಿಗೆ ಇನ್ನೊಂದು ಸಲ ತಿಳಿಸಿಬಿಡುತ್ತೇನೆ. ಒಪ್ಪಿದರೆ ಒಳ್ಳೆಯದಾಯಿತು. ಒಂದು ವೇಳೆ ನನ್ನ ಮಾತು ಮೀರಿ ನಿನ್ನನ್ನು ಬೇರೆಯವನಿಗೆ ಮದುವೆ ಮಾಡುವುದಾದರೆ ಮದುವೆಯ ಹಂದರಕ್ಕೆ ಬೆಂಕಿ ಇಟ್ಟು ಎದುರಿಗೆ ಬಂದವರನ್ನೆಲ್ಲ ಸುಟ್ಟು ಬಿಡ್ತೀನಿ

**ಲಕ್ಷ್ಮಿ –** ಈ ಧೀರ ನಿರ್ಧಾರ ಕಂಡೆ ನಾನು ನಿನಗೆ ಮರುಳಾಗಿ ಮನಸ್ಸು ಒಪ್ಪಿಸಿದ್ದು. ಭದ್ರಿ ಒಲಿದ ಹೆಣ್ಣನ್ನು ವರಸುವುದಾಗಿ ಏನೋ ಹೇಳಿದಿ. ಆದರೆ ಆ ಹೆಣ್ಣಿನ ಮನಸ್ಸು ಮೆಚ್ಚುವಂತೆ ಮಾತ್ರ ಹೇಳಲಿಲ್ಲ. ರಸಿಕ ಹೇಳುವ ರೀತಿಯಲ್ಲಿ ಆ ಮಾತು ನಿನ್ನ ಮುಖದಿಂದ ಬರಲಿಲ್ಲ

**ಭದ್ರ –** ಅದು ಹೇಗೆ ಹೇಳಬೇಕು ನೀನೇ ಹೇಳಿಕೊಡು

**ಲಕ್ಷ್ಮಿ –** ಅಂದು ನನ್ನ ತಂದೆ ಎದುರು ಹೇಳಿದಿಯಲ್ಲ (ಕೆನ್ನೆಗೆ ಹೊಡೆದು) ಛೀ ಕಳ್ಳ

**ಭದ್ರ –** ಲಕ್ಷ್ಮಿ ನೀನು ಬಲು ಘಾಟಿ ಹೆಣ್ಣು

**ಲಕ್ಷ್ಮಿ –** ಈ ಹೆಣ್ಣನ್ನು ಗೆದ್ದ ನೀನು

॥ ಪದ ॥

ಜೀವನ ಒಂದು ಕ್ಷಣವಂತೆ ॥ ಮಲ್ಲಿಗೆ ಹೂವಿನ ಹಾಗಂತೆ ॥ ಒಂದೇ ದಿನದಲ್ಲಿ ಬಾಡುವದಂತೆ ॥ ಜೀವ ॥ ಹೂವಿನ ಹೃದಯ ಮೃದುವಂತೆ, ಪ್ರೇಮಿಗಳೊಲಿಮೆಯ ಹಾಗಂತೆ ॥ ಇದನ್ನೆ ಕವಿಗಳು ಬರೆದಿಹರಂತೆ ॥ ಸಾವಿಗ ಹೆದರದ ಪ್ರೀತಿಯು ಜಗದಲಿ ದೇವರು ಮುಡಿಯುವ ಹೂವಂತ ॥ ಆದರೆ ಇದರಲ್ಲಿ ನಾವಂತೆ ॥ ಜೀವ ॥

(ಪದ ಮುಗಿಯುವಾಗ ವೆಂಕಪ್ಪ ಬಂದು ನಿಲ್ಲುವನು)

ಲಕ್ಷ್ಮಿ – ಮತ್ತೆ ಭೆಟ್ಟಿ

ಭದ್ರ – ಯಾವಾಗ

ಲಕ್ಷ್ಮಿ – ಅಪ್ಪ ಊರಿಗೆ ಬರುವವರೆಗೆ ನಿತ್ಯ ನಾನೇ ಬರತೀನಿ. ಆದರೆ ಒಂದು ಮಾತು.

ಭದ್ರ – ಏನು

ಲಕ್ಷ್ಮಿ – ನೀನು ದಪ್ಪು ಭಾರಿಸುತ್ತ ಲಾವಣಿ ಹಾಡಬೇಕು

ಭದ್ರ – ನನ್ನ ಹಾಡಿಗೆ ಸರಿಯಾಗಿ ನೀನು ಕುಣಿಯಬೇಕು (ಲಕ್ಷ್ಮಿ ವೆಂಕಪ್ಪನನ್ನು ನೋಡಿ ಹೆದರಿ ಓಡಿ ಹೋಗುವಳು. ಅವಳನ್ನೇ ನೋಡುತ್ತ ಭದ್ರಿ ನಿಲ್ಲುವನು)

ವೆಂಕಪ್ಪ – ಕೇಳಬಾರದ್ದು ಕೇಳೀರಿ ಕಾಣಬಾರದ್ದು ಕಂಡೀರಿ ಅಂತಾ ಸಾರೋ ಐನೋರು ಹೇಳುವ ಮಾತೇನು ಸುಳ್ಳಾಗಲಿಲ್ಲ. ಊರಿಗೇ ಭಾರಿ ಶ್ರೀಮಂತನ ಮಂಗಳಂದ್ರೇನು ಈ ಬಡ ರಂಡೇ ಮಗನ್ನ ಪ್ರೀತಿ ಮಾಡತ್ತಂದ್ರೇನು? ನನ್ನ ಕಣ್ಣಿಗೆ ಕಂಡ ಹಾಗೆ ಮರಿಯಪ್ಪನ ಕಣ್ಣಿಗೇನಾದರೂ ಕಂಡಿದ್ದರೆ ಇವನ್ನ ಕೊಂದ ಹಾಕತಿದ್ದ. ಕಾಲಜ್ಞಾನದೊಳಗೆ ಬರದಿಟ್ಟಂಗ ನಡೆದು ಹೋಯಿತು. ॥ ಹಲ್ಲು ಕಲ್ಲಿಗೆ ಜಗಳಬಿತ್ತಣ್ಣ ಶುಲ್ಲೆದ್ದು ಬಡಿದರೆ ಕಲ್ಲು ಪುಡಿ ಪುಡಿಯಾಯ್ತು ನೋಡಣ್ಣಾ ॥ ನಮಸ್ಕಾರಪಾ ಭದ್ರಣ್ಣಾ ಇದೀಗ ಚಿಲಕ್ ಪಲಕ್ ಅಂತಾ ಓಡಿ ಹೋಯಿತಲ್ಲ ಆ ಹುಡುಗಿ ಯಾವದಂತೀದಿ?

ಭದ್ರ – ಅವಳ್ಯಾರಾದರ ನಿನಗೇನು?

ವೆಂಕಪ್ಪ – ನನಗ ಕಣ್ಣು ಸ್ವಲ್ಪ ಮಂದ. ಅದಕ ಕೇಳಿದೆ ಮರಿಯಪ್ಪನ ಮಗಳು ಲಕ್ಷ್ಮಿ ಬಾಯಿ ಅಲ್ಲ ತಮ್ಮ

ಭದ್ರ – ಮರಿಯಪ್ಪನ ಮಗಳು ಲಕ್ಷ್ಮಿ ಹೌದು. ನೋಡಿದ ಮ್ಯಾಲೆ ಕೇಳಿ ಮಾಡ್ತಿ ಏನು?

ವೆಂಕಪ್ಪ – ನಾನೇನು ಮಾಡ್ಲೆಪ್ಪಾ? ಅವರಪ್ಪ ಅವಳಿಗೆ ವರ ನೋಡಲಿಕ್ಕೆ ಹುಬ್ಬಳ್ಳಿಗೆ ಹೋದ ವಿಷಯ ಗೊತ್ತಿದ್ದ ನೀನು ಆ ಹುಡಿಗೀ ಕದ್ದು ಮುಚ್ಚಿ ಚಕ್ಕಂದ ಅಡೋದು ಧರ್ಮ ಅಲ್ಲಪ್ಪಾ

ಭದ್ರ – ಕದ್ದು ಮುಚ್ಚಿ ಯಾಕೆ ಕುಲಕರ್ಣೆರೆ? ಅವರಪ್ಪನ ಎದುರು

ಮುಗಿಸಿದ್ದೇನೆ ಅವಳ ಕಥೀನ. ಎಂದಿದ್ದರೂ ಲಕ್ಷ್ಮಿ ನನಗೊಲಿದ ಹೆಣ್ಣು. ಯಾರಾದರೂ ಈಗ ಆಗಲಿಸಲು ಬಯಸಿದರೆ ಅವನ ಕಣ್ಣೇ ಕಿತ್ತಿ ಬಿಡತೀನಿ

**ವೆಂಕಪ್ಪ –** ಇದು ಧರ್ಮ ಅಲ್ಲಪ್ಪ. ಇನ್ನಾದರೂ ಲೋಕ ಒಪ್ಪುವ ರೀತಿಯಲ್ಲಿ ಬಾಳೋದು ಕಲಿ. ನೆಲವಿಗೆ ಹಾರತೀನಿ ಅಂತಾ ಬೆಕ್ಕು ಅಕಾಶಕ್ಕೆ ಹಾರಲಿಕ್ಕೆ ಹೋಗೆ ಕಾಲು ಮುರುಕೊಂಡು ಬಿದ್ದದ್ದು. ಮರಿಯಪ್ಪನ ಅಂತಸ್ತೇನು ನಿನ್ನ ಅಂತಸ್ತೇನು?

**ಭದ್ರ –** ಅಂತಸ್ತು ಗಿಂತಸ್ತು ನನಗೀಗ ಬೇಕಾಗಿಲ್ಲ. ಎಂದಿದ್ದರೂ ಲಕ್ಷ್ಮಿ ನನೊಗೊಲಿದ ಹೆಣ್ಣು. ಯಾರು ಯಾವ ರೀತಿ ಅಡ್ಡ ಬಂದರೂ ಜೀವಂತ ಉಳಿಯಲಾರರು. ಇಂದಿಲ್ಲ ನಾಳೆ ಲಕ್ಷ್ಮಿ ನನ್ನ ಹೆಂಡತಿಯಾಗುತ್ತಾಳೆ. ಕುಲಕರ್ಣಿರೆ ಇಂದು ನಿಮಗ ಕೊನೆಯ ಮಾತನ್ನೇ ಹೇಳುತ್ತೇನೆ. ಲಕ್ಷ್ಮಿಗೆ ವರ ನೋಡುವ ವಿಚಾರ ಬಿಟ್ಟು ಬಿಡು ಅಂತಾ ಹೇಳ್ರಿ. ಒಂದು ವೇಳೆ ನನ್ನ ಮಾತು ಮೀರಿ ನೀವೆಲ್ಲಾ ಮದುವೆಯ ವಿಚಾರದಲ್ಲಿ ಮುಂದುವರಿದಿದ್ದಾದರೆ ಮದುವೆಯ ಹಂದರಕ್ಕೆ ಬೆಂಕಿ ಇಟ್ಟು ಎದುರಿಗೆ ಬಂದವರೆನ್ನೆಲ್ಲ ಕರುಳು ತೆಗೆದು ತೋರಣ ಕಟ್ಟುತ್ತೇನೆ, ಹುಷಾರ್ (ಹೋಗುವನು)

**ವೆಂಕಪ್ಪ –** ಅಂತೂ ನಮ್ಮೂರ ವಾತಾವರಣ ಮತ್ತೆ ಹದಗೆಟ್ಟಿತು. ನಾನೇನು ಊರಿಗೆ ಒಳ್ಳೆದಾಗಲಿ ಎಂದು ನೀರು ತಿಳಿಮಾಡೋದ ಅಷ್ಟೇ ತಡ ಈ ಹುಡುಗ ಎಮ್ಮಿ ತಂದು ಅದರಾಗ ಮಲಗಿಸಿ ಗೊಡಗೆಬ್ಬಿಸಿ ಕೈ ಬಿಡತಾನ. ಈ ಬಡತನ ಸಾವಕಾರಕಿ ಒಮ್ಮೆ ನಮ್ಮ ದೇಶದೊಳಗಿಂದ ತೀರಿ ಹೋಗುವ ತನಕ ಇವು ಇರೋವೆ. ಆ ದೇವರು ಅವತಾರ ಎತ್ತಿ ಭೂಮಿಗೆ ಬರಬೇಕು. ಇದಕ ಪರಿಹಾರ ನೀಡಬೇಕು.

**॥ ಪದ ॥**

ದಾನವ ಕಂಸನ ಮಧುರೆಯ ಮೇಲೆ । ಘನ ಘೋರಾಂಧತೆ ಕವಿದಂತೆ ॥
ಗ್ರಾಮದ ಜೀವನ ಕಲುಷಿತವಾಯ್ತು ॥ ವೈರದ ದೆಶೆಯಿಂದ ॥
ಪೀತಾಂಬರಗಳೂ ಉಡುತಿಹರು ॥ ಸ್ವಾರ್ಥದೀ ಸಿರಿಯುತರು ।
ಹರಕು ಚಿಂದಿಗೂ ಗತಿ ಇರದಾಗಿ । ಬಳಲುತಿಹರು ಬಡ ಜನರು ।
ಬರಲಿ ದೇವರ ಅವತಾರ ॥ ದೇಶದ ಬಾಳಿಗೆ ಉದ್ಧಾರ ॥ ದಾನವ ॥

ಅಂತು ಮರಿಯಪ್ಪನ ಮಗಳು ಲಕ್ಷ್ಮೀಬಾಯಿ ಭದ್ರನ್ನೇ ಮದುವೆಯಾಗತೀನಿ ಅಂತ ಹಟ ಹಿಡಿದರೆ ಮರಿಯಪ್ಪನ ಪುರಾಣಕ್ಕೆ ಮಂಗಳಾರತಿಯಾಗುತ್ತ ಖಂಡಿತ ಲಕ್ಷ್ಮಿಯ ಮನ ಒಲಿಸಿಕೊಂಡ ಭದ್ರ ಕೂಸಿನ ಕೊರಳಿಗೆ ಸುತ್ತಿದ್ದ ಹಾವಿನಂತಾದ. ಹಾವಿಗೆ ಗುರಿ ಇಡುವ ಬರ್ಚಿ ಕೂಸಿಗೇನಾದರೂ ಬಿದ್ದರೆ ತುಂಬಾ ಅಪಾಯ. ಅಂತು ಕೊನೆಯ ಸನ್ನಿವೇಶದಲ್ಲಿ ನಾಟಕ ಮತ್ತಿಷ್ಟು ರುದ್ರವಾಯಿತು. ಗೆಲುವು ಭದ್ರನದೋ ಮರಿಯಪ್ಪನದೋ ನಿರ್ಣಯಿಸಬೇಕು

– ತೆರೆ –

===**=====**===

# ದೃಶ್ಯ ೧೩

## ಹೊಲದ ದೃಶ್ಯ

(ಭದ್ರಿ, ಲಕ್ಷ್ಮಿ ಸಂತೋಷದ ಭಾವದಲ್ಲಿ )

॥ ಪದ ॥

ಬಿಜಾಪುರಾ ಬಿಜಾಪೂರಾ ಆ...ಆ...ಆ...
ನಾಡಿನೊಳು ಹೆಸರಾಂತ ಬಿಜಾಪೂರ ॥ ಇತಿಹಾಸ
ಹೆಸರಾಂತ ಬಿಜಾಪೂರ ॥ ದೇಶದ ರಕ್ಷಣೆಗಾಗಿ । ರಾಶಿ
ಬಂಗಾರವ । ದಾನವ ಮಾಡಿದ ಜಿಲ್ಹೆ ಬಿಜಾಪೂರ ॥ ೧ ॥

ಚಾಲುಕ್ಯ ಅರಸರ ರಾಜಧಾನಿಯು ನಮ್ಮ ॥ ಬಾದಾಮಿ
ಇಹ ಜಿಲ್ಹೆ ಬಿಜಾಪೂರ ॥ ಮಾ ॥
ಐಹೊಳ್ಳಿ ಪಟ್ಟದಕಲ್ಲು ॥ ಕೋಟಿಲಿಂಗದಾ ಕ್ಷೇತ್ರ ಮಹಾ
ಕೂಟ । ಏಕಶಿಲೆ ನಟರಾಜ । ತಾಯಿ ಬನಶಂಕರಿ ।
ತಾಯಿ ಬನಶಂಕರೀ ॥ ೨ ॥

ಆದಿಲ್‌ಶಾಹಿಯ ಅಚ್ಚರಿಯ ಕಟ್ಟಡವೂ ।
ಸಪ್ತ ಪ್ರತಿಧ್ವನಿಯ ಗೋಳಗುಮ್ಮಟವೂ
ಗಗನ ಆಸರ ಮಹಾಲು ಜುಮ್ಮಾ ಮಸೀದಿ ।
ಶತೃ ಭೀಕರ ಕೋಟೆ ಉಪ್ಪಲಿಯ ಬುರುಜು
ಕೋಟೆಯಾ ನರಸಿಂಹ ಇಬ್ರಾಹಿಮ್ ರೋಜ ॥
ಕಣ್ಮನವ ಸೆಳೆವಂಥ ಬಿಜಾಪೂರಾ ಜಿಲ್ಹೆ ಬಿಜಾಪೂರಾ ॥ ೩ ॥

ಇಂಗಳೇಶ್ವರ ಧನ್ಯ ಬಾಗೇವಾಡಿಯು ಗ್ರಾಮ
ಅಣ್ಣ ಬಸವಣ್ಣನ ಜನ್ಮಸ್ಥಳ
ಕೂಡಲ ಸಂಗಮ ಯಾತ್ರಾ ಸ್ಥಳ ॥
ಅಲ್ಲಮ ಮಹಾಪ್ರಭುದೇವ ತಪಗೈದ ತಾಣಾ
ಬಿಜಾಪೂರ ಜಿಲ್ಲೆ ತೇರದಾಳ ॥
ನೀಲ ಗಂಗಾಂಬಿಕೆಯು ಐಕ್ಯಸ್ಥಳ
ತಂಗಡಗಿ ಇಹ ಜಿಲ್ಲೆ ಬಿಜಾಪೂರ ॥ ೪ ॥

ಸಿದ್ಧಪುರುಷನ ವಾಸ ಶ್ರೀ ಕೊಳ್ಳ ಕೈಲಾಸ ॥
ಮುದ್ದು ಸಂಗನವಾಸ ಶ್ರೀಶೈಲನಿವಾಸ ಶ್ರೀಶೈಲನಿವಾಸ ॥ ಬಿಜಾಪೂರ ॥ ೫ ॥

ಶ್ರೀ ವಿಜಯಾ ಮಹಾಂತೇಶ ಮುರ್ತುಜಾಖಾದರಿ
ಎರಡು ಮತಗಳ ಭಾವಸಂಗಮದ ಘನಸಿರಿ ॥
ವಿಶ್ವದಾ ಮನಸೆಳೆದಾ ಸೀರೆಯ ಕಲೆಗಾರ ॥
ನೇಯುವಾ ನೇಕಾರ ತಾನಿರುವ ಇಲಕಲ್ಲು । ನಾಗರಿಕರ ॥
ತಾಯಿ ಮಲಪ್ರಭೆ ॥ ತಾಯಿ ಘಟಪ್ರಭೆ, ಕೃಷ್ಣೆ, ಭೀಮೆ, ದ್ರೋಣ
ಪಂಚ ನದಿಗಳು ಹರಿಯುವ ಪುಣ್ಯ ತಾಣ ಭೂಲೋಕ
ಸ್ವರ್ಗವಿದು ॥ ಬಿಜಾಪೂರ ॥

(ಪದ ಮುಗಿಯುವ ಹೊತ್ತಿಗೆ ಮರಿಯಪ್ಪ ಬರುವನು)

**ಮರಿಯಪ್ಪ** – ಲಕ್ಷ್ಮಿ ಏನಿದು ನಿನ್ನ ಅಸಂಬದ್ಧ ವರ್ತನೆ

**ಲಕ್ಷ್ಮಿ** – ಏನಾಯಿತಪ್ಪ?

**ಮರಿಯಪ್ಪ** – ಈ ವಿಷಸರ್ಪದ ಸಹವಾಸದಲ್ಲಿ ನಲಿದಾಡುವ ದೃಶ್ಯ ಕಣ್ಣಿಗೆ ಕಂಡರೂ ಮತ್ತೆ ಏನಾಯಿತಪ್ಪಾ ಎಂದು ಕೇಳುವಿಯಾ? ಹಾವಿನ ಚೆಲುವು ಕಣ್ಣಿಗೆ ಕಂಡಿತೆಂದು ಅದರ ಮುಖಕ್ಕೆ ಮುದ್ದಿಕ್ಕಬೇಡ. ಮನುಷ್ಯನೇ ಇವನು? ವಿಷಪೂರಿತ ಘಟಸರ್ಪ

**ಲಕ್ಷ್ಮಿ** – ವಿಷಸರ್ಪವಲ್ಲ. ನನ್ನ ಮನಸೆಳೆದ ಮನದನ್ನ

**ಮರಿಯಪ್ಪ** – ಮುಚ್ಚುಬಾಯಿ ! ಅಂತಸ್ತಿನ ಅಂತರ ಮರೆತು ಆಡದಿರು. ನವಿಲು ತನ್ನ ಅಂತಸ್ತಿನ ಅಂತರ ಮರೆತು ಹದ್ದಿನ ಮುಖಕ್ಕೆ ಮುದ್ದಿಕ್ಕಬಹುದೇ? ಕೊಲೆ ಮಾಡಲು ಹೇಸದ ಇವನ ಸಹವಾಸ

ಬಯಸಲು ನಿನಗೆ ನಾಚಿಕೆಯಾಗಬೇಕಿತ್ತು! ಆ ಬಙವನ ಕೈಹಿಡಿದು ಯಾವ ಭವಣೆಗೀಡಾಗಬೇಕನ್ನುವಿ

**ಲಕ್ಷ್ಮಿ** – ಮನ ಒಪ್ಪಿದವನು ಎಂಥವನಿದ್ದರೂ, ಏನಿದ್ದರೂ ಏನಪ್ಪಾ? ಅಂತರ ತರಬಹುದೆ ನಿನ್ನ ಮನೆಯ ಸಂಪತ್ತು. ನಾಚಿಕೆ ಪಡಲಿಕ್ಕೆ ನಿನ್ನ ಮಗಳೇನು ನೀತಿ ತಪ್ಪಿ ನಡೆದಿಲ್ಲ

**ಮರಿಯಪ್ಪ** – ಇದೆಂಥಾ ನೀತಿ? ಇದೆಂಥಾ ಧರ್ಮ?

**ಲಕ್ಷ್ಮಿ** – ಹಿಂದಿನಿಂದಲೂ ಗೃಹಿಣಿಯಾಗಿ ಬಾಳಿದ ಹೆಣ್ಣುಮಕ್ಕಳು ಅನುಸರಿಸಿದ ನೀತಿ. ಅವರು ಪಾಲಿಸಿದ ಧರ್ಮ

**ಮರಿಯಪ್ಪ** – ಹಡೆದವರ ಮನಸ್ಸಿನ ವಿರುದ್ಧ ತನ್ನ ಮನ ಮೆಚ್ಚಿದವನ ಕೈಹಿಡಿದು ಹಿಂದಿನ ಯಾವ ಗೃಹಿಣಿಯೂ ತವರುಮನೆ ತೊರೆದು ಓಡಿ ಹೋಗಿಲ್ಲ

**ಲಕ್ಷ್ಮಿ** – ಅದೇಕೆ ಓಡಿ ಹೋಗಿಲ್ಲ. ಬಲರಾಮನ ತಂಗಿ ಸುಭದ್ರೆ ಸಂಭ್ರಮದಿಂದ ಅಣ್ಣನ ಅನುಮತಿಯಂತೆ ಮದುವೆಯಾದಳೋ, ತನ್ನ ಮನಗೆದ್ದ ಅರ್ಜುನನ ಬೆನ್ನು ಹತ್ತಿ ಓಡಿಹೋದಳೋ

**ಮರಿಯಪ್ಪ** – ಮುಚ್ಚುಬಾಯಿ. ನಿನ್ನಿಂದ ಪಾಠ ಕಲಿಯಬೇಕಿಲ್ಲ. ನಾನಿಂದು ನಿಶ್ಚಯಿಸಿದ ವರನೊಂದಿಗೆ ನಿನ್ನ ಮದುವೆ ನಡೆದುಹೋಗಲೇಬೇಕು, ಇದು ನನ್ನ ನಿರ್ಧಾರ

**ಭದ್ರ** – ಮರಿಯಪ್ಪ, ಈ ನಿನ್ನ ನಿರ್ಧಾರ ಕನಸಿನಲ್ಲಿ ಕೂಡಾ ಕೈಗೂಡದು. ಈ ಲಕ್ಷ್ಮಿ ನಿನ್ನ ಮಗಳಲ್ಲ. ನನ್ನ ಮಡದಿ. ಯಾರು ಯಾವ ರೀತಿ ಅಡ್ಡಾದರೂ ಅವರು ಜೀವಂತ ಉಳಿಯಲಾರರು

**ಮರಿಯಪ್ಪ** – ಥೂ ಚಾಂಡಾಲ! ಎಂದೋ ಮುಗಿದು ಹೋಗಲಿದ್ದ ನಿನ್ನ ಕಥೆ ಮುಂದುವರೆದು ನನ್ನ ಬಾಳಿಗೆ ಬಂಡೆಗಲ್ಲಾದಿ. ನನ್ನ ಮಗಳಿಗೆ ಅದೇನು ಮಾಡಿ ಮರುಳು ಮಾಡಿದಿಯೋ ನಾ ಕಾಣೆ. ಲಕ್ಷ್ಮಿ ತಂದೆ ಬೇಕಿದ್ದರೆ ಈ ಹಂದಿಯನ್ನು ತೊರೆದುಬಿಡು. ಇಲ್ಲದಿದ್ದರೆ ಇಲ್ಲಿಗೆ ಮುಗಿದುಹೋಯಿತು ಮಗಳ ಋಣಾನುಬಂಧ

**ಲಕ್ಷ್ಮಿ** – ಅಪ್ಪಾ ಮಗಳು ಬದುಕಲೆಂದು ನಿನ್ನ ಮನಸ್ಸಿದ್ದರೆ ಇವನಿಗೆ ಕೊಟ್ಟು ನನ್ನ ಮದುವೆ ಮಾಡು. ಇಲ್ಲದಿದ್ದರೆ ಸತ್ತಳೆಂದು ತರ್ಪಣ ಕೊಟ್ಟು ಬಿಡು

**ಮರಿಯಪ್ಪ** – ಆಗಲಿ.... ಲೇ ಭದ್ರ ನನ್ನ ಮಗಳ ತಲೆ ಕೆಡಿಸಿ ನಾನಿಟ್ಟ ಅನ್ನದ ಅಗುಳಿಗೆ ದ್ರೋಹ ಬಗೆದಿಯಾ? ನನ್ನ ಮಾನ ಮಣ್ಣಿನಲ್ಲಿ ಬರೆಸಿದೆಯಾ? ಆಗಲಿ ನಿನ್ನ ಸಾವಿನ ಸಮಾಧಿಯ ಮೇಲೆ ನನ್ನ ಮಗಳ ಬಾಳಮಂದಿರ ಕಟ್ಟದಿದ್ದರೆ ನನ್ನ ಹೆಸರೇ ಅಲ್ಲ (ಹೋಗುವಾಗ)

**ಲಕ್ಷ್ಮಿ** – ಅಪ್ಪಾ....

**ಮರಿಯಪ್ಪ** – ಅಪ್ಪಾ ಥೂ ಅವಿವೇಕಿ (ದೂಡಿ ಹೋಗುವನು)

**ಭದ್ರ** – ಲಕ್ಷ್ಮಿ ನಿನಗಿಂದು ನಿನ್ನ ತಂದೆಯ ಮನೆ ಎರವಾಯಿತು !

**ಲಕ್ಷ್ಮಿ** – ತವರಿನ ಆಸೆಯನ್ನು ನಾನೆಂದೋ ಕಡೆದುಕೊಂಡಿದ್ದೇನೆ

**ಭದ್ರ** – ಹಾಗಿದ್ದರೆ ನಡೆ ನಮ್ಮ ಮನಿಗೆ

**ಲಕ್ಷ್ಮಿ** – ನಿಮ್ಮ ಮನೆಗೆ ಕರೆದೊಯ್ದರೆ ನಿಮ್ಮಣ್ಣ ಸುಮ್ಮನಿರುವರೇ?

**ಭದ್ರ** – ಅಣ್ಣ ಸಿಟ್ಟು ಮಾಡುವನೆಂದು ನಿನ್ನ ಬಿಟ್ಟು ಹೋಗಲೆ ಲಕ್ಷ್ಮಿ ನನ್ನತ್ತಿಗೆ ಕ್ಷಮಿಸಿದರೆ ಸಾಕು, ಅಣ್ಣನ ಹೆದರಿಕೆಯೇ ನನಗಿಲ್ಲ ನಡೆ

**ಲಕ್ಷ್ಮಿ** – ಎಲ್ಲಿಗೆ?

ಭದ್ರ – ಸಿದ್ದನ ಕೊಳ್ಳಕ್ಕ ಹೋಗಿ ಮದುವೆಯಾಗಿ ಮನೆಗೆ ಹೋಗೋಣ ನಡೆ (ಹೋಗುವರು)

===****=====****====

# ದೃಶ್ಯ ೧೪

ಜಂಗಲ್ ರಸ್ತಾ

**ಮರಿಯಪ್ಪ –** ಸಿದ್ದ .... ನಿಲ್ಲು ಸಿದ್ಧಾ....

**ಸಿದ್ದ –** ಯಾಕೆ ಸಾವುಕಾರರೆ ಎಷ್ಟು ಗಾಬರಿಯಿಂದ ಕೂಗ್ತಾ ಓಡಿ ಬಂದಿರಲ್ಲ.... ಏನಾಯಿತು ಹೇಳ್ರಿ....

**ಮರಿಯಪ್ಪ –** ಏನು ಹೇಳಲಿ ಸಿದ್ಧಾ ಹೇಗೆ ಹೇಳಲಿ? ನನ್ನ ಮನೆ ಮುಳುಗಿ ಹೋಯಿತಪ್ಪಾ.... ಮುಳುಗಿ ಹೋಯಿತು ನಿಮ್ಮ ಭದ್ರ ಕೊನೆಗೂ ನನ್ನ ಮಗಳ ತಲೆ ಕೆಡಿಸಿ ನನ್ನ ಮಾನ ಕಳೆದಾ

**ಸಿದ್ದ –** ಆ .... ಏನಂದಿರಿ ನಮ್ಮ ಭದ್ರಿ ಹೀಗೆ ಮಾಡಿದನೆ?

**ಮರಿಯಪ್ಪ –** ಹೌದು ಸಿದ್ದ ಹೌದು. ಈಗ ನನ್ನ ಮಗಳು ಭದ್ರನನ್ನೇ ಮದುವೆಯಾಗತ್ತೇನೆಂದು ಹಟ ಹಿಡಿದಿದ್ದಾಳೆ. ಈಗವಳಿಗೆ ವರ ಗೊತ್ತು ಪಡಿಸಿಕೊಂಡು ಬಂದಿದ್ದೇನೆ. ಮದುವೆಯನ್ನು ನಿಶ್ಚಯಿಸಿದ್ದೇನೆ. ನನ್ನ ಮನೆಯ ಅನ್ನ ಉಂಡ ರಕ್ತ ನಿನ್ನ ಮೈಯಲ್ಲಿ ಹರಿದಾಡುತ್ತಿದ್ದರೆ, ಹಿಂದೊಮ್ಮೆ ಭದ್ರನಿಂದ ನಮಗೇನು ಕೇಡಾಗದಂತೆ ಕಾಯುವದಾಗಿ ನನಗೆ ಕೊಟ್ಟ ನಿನ್ನ ವಚನ ಕಾಯ್ದುಕೋ. ಭದ್ರನ ಹಿಡಿತದಲ್ಲಿ ಸಿಕ್ಕ ನನ್ನ ಮಗಳನ್ನು ಬಿಡಿಸಿ ನನ್ನ ಮಾನ ಉಳಿಸು, ಸಿದ್ಧಾ ನಿನ್ನ ಕಾಲಿಗೆ ಬೀಳುತ್ತೇನೆ

**ಸಿದ್ದ –** ಮರಿಯಪ್ಪನವರೆ ಇದನ್ನೇನು ಮಾಡಿದಿರಿ? ನೀವು ಹಿರಿಯರು, ನಮ್ಮ ಬಾಯಲ್ಲಿ ಅನ್ನವಿಟ್ಟ ಪುಣ್ಯವಂತರು. ಹೀಗಿದ್ದು ನೀವು ನನ್ನ ಕಾಲು ಹಿಡಿಯುವದು ನನಗೆ ಶ್ರೇಯಸ್ಸಲ್ಲ. ನಿಮಗಿಂದು ಮಾತುಕೊಟ್ಟಂತೆ ನಮ್ಮಪ್ಪನ ಮಗನೇ ನಾನಾಗಿದ್ದರೆ ನನ್ನ ಪ್ರಾಣ ಕೊಟ್ಟಾದರೂ ನಿಮ್ಮ ಮಾನ ಉಳಿಸುತ್ತೇನೆ. ನೀವು ಸಮಾಧಾನದಿಂದಿರಿ

**ಮರಿಯಪ್ಪ –** ಆಯಿತು ಸಮಾಧಾನವಾಯಿತು. ಸಿದ್ದ ನನ್ನ ಮಗಳ ಮದುವೆ ಸುಸೂತ್ರ ನಡಿಸಿಕೊಟ್ರೆ ನಿನ್ನ ಮದುವೆಗೆ ಕೊಟ್ಟ ಸಾಲ ಮುಟ್ಟಿತೆಂದು ಆವತ್ತೆ ಕಾಗದ ಬರೆದುಕೊಟ್ಟು ಬಿಡತೀನಿ ಅಷ್ಟು ಉಪಕಾರ ಮಾಡತಿಯಾ ಸಿದ್ದ

**ಸಿದ್ದ –** ಉಪಕಾರದ ಮಾತೇಕೆ ಶ್ರೀಮಂತರೆ? ನಿಮ್ಮ ಮಗಳಿಗೆ ಹುಚ್ಚು ಹಿಡಿಸಿದ ನಿಮ್ಮ ಮಾನಹರಣಕ್ಕೆ ಸಿದ್ಧನಾದ ನನ್ನ ತಮ್ಮನ ಮರಣವೇ ಇಂದು ನಿಶ್ಚಿತ. ಅವನ ಕೊಂದು ನಿಮ್ಮ ಮಗಳನ್ನು ನಿಮಗೊಪ್ಪಿಸುತ್ತೇನೆ (ಹೋಗ ಹತ್ತುವನು)

**ಮರಿಯಪ್ಪ –** ತಡಿ ಸಿದ್ದ (ಕೋಟಿನ ಜೇಬಿನಿಂದ ಪಿಸ್ತೂಲ ತೆಗೆದು) ತೆಗೆದುಕೊ ಈ ವಸ್ತು ನಿನ್ನ ಬಳಿ ಇರಲಿ. ಭದ್ರ ಯಾವ ಘಳಿಗೆಯಲ್ಲಿ ಏನು ಮಾಡಲಿಕ್ಕೂ ಹೇಸಲಾರ. ಪ್ರಸಂಗ ಬಿದ್ದರೆ ನಿನ್ನ ಪ್ರಾಣರಕ್ಷಣಗೆ ಈ ವಸ್ತು ನಿನ್ನ ಬಳಿಯಿರಲಿ

**ಸಿದ್ದ –** ಈಗ ಭದ್ರಿ ಎಲ್ಲಿದ್ದಾನೆ ಸಾವುಕಾರರೆ?

**ಮರಿಯಪ್ಪ –** ಮತ್ತೆಲ್ಲಿ ನಿಮ್ಮ ಮನೆಯಲ್ಲಿ. ಹಾಡಹಗಲೆ ನನ್ನ ಮಗಳ ಕೈಹಿಡಿದು ನಿಮ್ಮ ಮನೆಗೆ ಕರೆದೊಯಿದ !

**ಸಿದ್ದ –** ಆಗಲಿ ಯಜಮಾನರೆ ನೀವಿನ್ನು ನಿಶ್ಚಿಂತೆಯಿಂದಿರಿ (ಹೋಗುವನು)

**ಮರಿಯಪ್ಪ –** (ನಗೆಯೊಂದಿಗೆ) ನಿಶ್ಚಿಂತ.... ನಾನಿಂದು ನಿಶ್ಚಿಂತ.... ಅಣ್ಣನಿಂದ ತಮ್ಮನ ಕೊಲೆಯಾಗುವುದು ಖಂಡಿತ. ಭದ್ರಿಯ ಕೊಲೆಯಾದ ನಂತರ ಈ ಸಿದ್ದ ಕಾರಾಗೃಹವಾಸಿ. ಅವನ ಪತ್ನಿ ಪಾರ್ವತಿ ನನ್ನ ಪ್ರೇಯಸಿ (ನಗೆ) ಕಣ್ಣಿಟ್ಟ ಹೆಣ್ಣಿನ ಮೈಯ ಸುಖದ ಪುಣ್ಯ ಉಣ್ಣದೆ ಬಿಟ್ಟರೆ ನಾನು ಮರಿಯಪ್ಪನೇ ಅಲ್ಲ (ನಗುವಾಗ ವೆಂಕಪ್ಪ ಬರುವನು)

**ವೆಂಕಪ್ಪ –** ಏ ಮರಿಯಪ್ಪ ಏನಿದು ನಿನ್ನ ನಗೆ? ಈ ನಿನ್ನ ನಗೆಯೇ ನಾಳೆ ನಂಜಿನ ಹೊಗೆಯಾಗಿ ಹರಡೀತು

**ಮರಿಯಪ್ಪ –** ವೆಂಕಪ್ಪ ಮನಸ್ಸಿನಲ್ಲಿ ಮಾಡಿಕೊಂಡ ಕೆಲಸ ಮನಸಿನಂತೆ ನಡೆದುಹೋಯಿತು. ಬಾಯಿಲ್ಲಿ ಹೇಳ್ತೀನಿ (ಕಿವಿಯಲ್ಲಿ ಹೇಳುವನು) ಹೀಗಿದೆ ನನ್ನ ವಿಚಾರ?

**ವೆಂಕಪ್ಪ –** ಮರಿಯಪ್ಪ, ಈ ದುಷ್ಟ ವಿಚಾರ ಇಷ್ಟು ದೂರ ಓಡಿಸಬಾರದಿತ್ತು. ಇಂಥ ನೀಚ ವಿಚಾರಕ್ಕೆ ಮನಸ್ಸು ಮಾಡಿದ ನಿನ್ನ ಪೂರ್ವಜನ್ಮದ

ಪುಣ್ಯದ ಬುತ್ತಿ ಇಲ್ಲಿಗೆ ಮುಗಿತು ಅಂತಾ ತಿಳಿ. ಇಂಥ ಕೆಟ್ಟ ಕೆಲಸ ಇನ್ನು ನಮ್ಮೂರಾಗ ಆಗೋದ ಬ್ಯಾಡ ತಡಿ. ನಡಿಯೋ ನನ್ನ ಕಾಲು ಸ್ವಲ್ಪ ಕುಂಟ ಐತಿ (ಇಬ್ಬರೂ ಹೋಗುವರು)

===***====***===

# ದೃಶ್ಯ ೧೫

ಸಿದ್ದನ ಮನೆ

(ಭದ್ರ, ಲಕ್ಷ್ಮಿಯನ್ನು ಮದುವೆಯ ವೇಷದಲ್ಲಿ ಕರೆತಂದು)

**ಭದ್ರ –** ಅತ್ತಿಗೆ.....

**ಪಾರ್ವತಿ –** (ಒಳಗಿನಿಂದ) ಯಾರದು (ನೋಡಿ ಗಾಬರಿಯಿಂದ) ಅರೆ.... ಇದೇನಪ್ಪಾ ನೀವಿಬ್ಬರೂ....

**ಭದ್ರ –** .... ಹೌದು ಅತ್ತಿಗೆ ನಾವಿಬ್ಬರೂ ಸಿದ್ದನ ಕೊಳಕ್ಕೆ ಹೋಗಿ ಮದುವೆ ಆಗಿ ಮನಿಗೆ ಬಂದಿದ್ದೇವೆ. ಅತ್ತಿಗೆ ಈ ನಮ್ಮ ಮದುವೆಗೆ ಹಂದರವಿಲ್ಲ. ಹಾಲು ಗಂಬವಿಲ್ಲ. ಮದುಮಕ್ಕಳಾದ ನಮಗೆ ಹೊಸ ಬಟ್ಟೆಗಳಿಲ್ಲ. ಮದುಮಗಳ ಕೈಗೆ ಹಸಿರು ಬಳೆಗಳಿಲ್ಲ. ಅರಿಷಿಣ ಕುಂಕುಮ ಅಕ್ಷತೆಗಳೊಂದೂ ಇಲ್ಲ. ಆದರೂ ಅತ್ತಿಗೆ ಈ ಭದ್ರಿಗೆ ಹಾಲಿಟ್ಟು ಸಲುಹಿದ ನಿನ್ನ ಪುಣ್ಯಮಯ ಹಸ್ತದಲ್ಲಿ ಅವೆಲ್ಲ ಉಂಟೆಂದು ನಂಬಿ ಬಂದಿದ್ದೇವೆ. ಆಶೀರ್ವದಿಸು ನನ್ನವ್ವ.

**ಲಕ್ಷ್ಮಿ –** ಅಹುದಕ್ಕ ಆಶೀರ್ವದಿಸು (ಪಾರ್ವತಿಯ ಕಾಲಿಗೆ ಬೀಳುವರು. ಸಿದ್ದ ಸಿಟ್ಟಿನಿಂದ ಬರುವನು)

**ಸಿದ್ದ –** (ಭದ್ರನ ಹಾರ ಹರಿದು) ಭದ್ರ.... ಏನಿದು

**ಭದ್ರ –** ಇದು ಮದುವೆ!

**ಸಿದ್ದ –** ಇದು ಮದುವೆಯಲ್ಲ... ನಿನ್ನ ಮನೆಮುರುಕತನ! ಅರಿಯದ ಹುಡುಗಿಯನ್ನು ಅಪಹರಿಸಿ ಅವಳ ತಲೆ ಕೆಡಿಸಿ ಅನ್ನ ಬಿಟ್ಟವರ ಬಾಯಿಯಲ್ಲಿ ಮಣ್ಣಿಕ್ಕಿ ನಲಿಯುವ ಹೇಯತನ!

**ಲಕ್ಷ್ಮಿ –** ತಲೆ ಕೆಡಿಸಿ ಕೈ ಹಿಡಿದವನಲ್ಲ ಮಾವ. ನನ್ನ ಮನವಲಿಸಿ ಪಡೆದವನು. ಜಿದ್ದು ಹಾಕಿ ಹೆಣ್ಣನ್ನು ಗೆದ್ದು ಮದುವೆಯಾದವನು.

ಸಿದ್ದ -- ನಿನ್ನ ಮಾತಿನ ಮತಿತಾರ್ಥ ನನಗೆ ಬೇಕಿಲ್ಲ ಭದ್ರ. ನಿನಗೀಗಲೇ ಹೇಳುತ್ತೇನೆ ಲಕ್ಷ್ಮಿಯ ಕೈಬಿಟ್ಟು ಕೊಟ್ಟು....

ಭದ್ರ -- ಪಡೆದ ಲಕ್ಷ್ಮಿಯ ಕೈಬಿಟ್ಟು ಕೊಡಲಿಕ್ಕೆ ನಾನೇನು ಹೇಡಿಯಾಗಿ ಹುಟ್ಟಿಲ್ಲ

ಸಿದ್ದ -- ಬಿಡದಿದ್ದರೆ ಮನೆಯಲ್ಲಿ ಮಾರಮ್ಮನ ಹಬ್ಬ ನಡೆಯುತ್ತದೆ. ಅದಕ್ಕೆ ಬಲಿಯ ನೈವೇದ್ಯವೆಂದು ಇಲ್ಲಿ ನಿನ್ನ ಹೆಣ ಉರುಳುತ್ತದೆ. ಇಂಥ ಹೇಸಿ ಕೆಲಸಕ್ಕೆ ಕೈಯಿಟ್ಟ ನೀನೂ ನಮ್ಮವ್ವನ ಮಗನೆ ಅಲ್ಲ

ಭದ್ರ -- .... ಅಣ್ಣಾ ಹುಟ್ಟಿನ ವಿಷಯಕ್ಕೆ ಮಾತನಾಡಿ ಅವ್ವನ ಶೀಲಕ್ಕೆ ನೀರೆತ್ತಬೇಡಣ್ಣ. ನೀನಲ್ಲದೆ ಬೇರೆಯವರೆಂದಿದ್ದರೆ ಅಂತವರ ಹೆಣ ನೆಲದ ಹೂಳಿನಲ್ಲಿ ಉರುಳುತ್ತಿತು. ದೇವರೆ ಅಡ್ಡ ನಿಂತರೂ, ಹಿಡಿದ ಲಕ್ಷ್ಮಿಯ ಕೈ ಯಾವ ಕಾಲಕ್ಕೂ ಬಿಡಲಾರೆ.

ಸಿದ್ದ – ನೀನೀಗ ಹಿಡಿದದ್ದು ಲಕ್ಷ್ಮಿಯ ಕೈಯನ್ನಲ್ಲ. ಹಾವಿನ ಮೈಯನ್ನು ಥೂ ನಾಚಿಗೇಡಿ!

ಭದ್ರ – ನಾಚಿಗೆ ಪಡೆಯಲಿಕ್ಕೆ ನಾನೇನು ನೀತಿ ತಪ್ಪಿ ನಡೆದಿಲ್ಲ. ಹೇಡಿಯಾಗಿ ಬಾಳಿಲ್ಲ. ಒಲಿದು ಬಂದ ಹೆಣ್ಣಿನ ಹಿಂದಿರುಗಿ ಹೋಗೆಂದು ಹೇಳುವ ಹೇಡಿ ನಾನಲ್ಲ

ಸಿದ್ದ – .... ಅವರಪ್ಪ ಒಪ್ಪದಿದ್ದರೂ ಅಪಹರಿಸಿ ತಂದು ಮದುವೆಯಾದರೆ ನಾಳೆ ಜನ ಏನಂದಾರು?

ಭದ್ರ – ಜನರ ಮನಸ್ಸಿನ ಸಮಾಧಾನಕಲ್ಲಣ್ಣಾ ನಾನಿವಳ ಮದುವೆಯಾದದ್ದು. ಒಲಿದು ಬಂದದ್ದಕ್ಕೆ, ನಮ್ಮಿಬ್ಬರ ಹಿತಕ್ಕಾಗಿ. ಮರಿಯಪ್ಪನವರಿಗೆ ಎಂದೋ ತಿಳಿಸಿ ಬಿಟ್ಟಿದ್ದೇನೆ ಎಂದಿದ್ದರೂ ನಿನ್ನ ಮಗಳ ಗಂಡ ನಾನೇ ಎಂದು

ಸಿದ್ದ – ಕಂಡ ಕಂಡವರಿಗೆಲ್ಲ ಗಂಡನೆಂದು ಬೊಗಳಲಿಕ್ಕೆ ನೀನೇನೂ ಅರ್ಜುನನಲ್ಲ, ತಲೆದಂಡ ಒಪ್ಪಿಸಬೇಕಾದೀತು. ನಿಮ್ಮ ಮಗಳನ್ನು ತಂದೊಪ್ಪಿಸುವೆನೆಂದು ಮರಿಯಪ್ಪನವರಿಗೆ ನಾನು ಮಾತು ಕೊಟ್ಟು ಬಂದಿದ್ದೇನೆ. ಮೊದಲು ಅವಳನ್ನು ಕಳಿಸಿಕೊಡು ಮನೆಗೆ

ಭದ್ರ – ನನ್ನ ದೇಹದಲ್ಲಿ ಜೀವ ಇರುವರೆಗೆ ಅವರಿವರೇಕೆ ಸಾಕ್ಷಾತಾ ಹರಿ ಹರ ಬ್ರಹ್ಮಾದಿಗಳು ಬಂದರೂ ನಮ್ಮಿಬ್ಬರನ್ನು ಅಗಲಿಸಲು ಸಾಧ್ಯವಿಲ್ಲ

ಸಿದ್ದ – .... ಬೇಡ ಭದ್ರ ಸುಮ್ಮನೆ ನನ್ನ ಸಿಟ್ಟಿಗೆಬ್ಬಿಸಬೇಡಾ! ಹಟದಲ್ಲಿ ಮುಂದವರೆದೆಯಾದರೆ ಇಲ್ಲಿ ನಿನ್ನ ಘಟ ಉಳಿಯಲಾರದು. ನಿನ್ನ ಕೊಂದಾದರೂ ಮರಿಯಪ್ಪನವರಿಗೆ ಕೊಟ್ಟ ನನ್ನ ಮಾತನ್ನು ನಾನುಳಿಸಿಕೊಳ್ಳುವೆ

ಭದ್ರ – ಅಣ್ಣಾ ನಿನ್ನ ಮಾತನ್ನ ನೀನುಳಿಸಿಕೊಳ್ಳುವಂತೆ ನನ್ನ ಮಾತನ್ನು ನಾನುಳಿಸಿಕೊಳ್ಳುವೆ. ಎಂದಿದ್ದರೂ ಲಕ್ಷ್ಮಿ ನನ್ನ ಹೆಂಡತಿ

ಸಿದ್ದ – (ತಡೆಯಲಾರದ ಸಿಟ್ಟಿನಿಂದ ಪಿಸ್ತೂಲು ತೆಗೆದು) ಲಕ್ಷ್ಮಿ ನಿನ್ನ ಹೆಂಡತಿ (ಪಿಸ್ತೂಲ್ ಹಾರಿಸುವನು. ಅಡ್ಡಬಂದ ಲಕ್ಷ್ಮಿಗೆ ಗುಂಡು ಬಡಿಯುವದು) ಲಕ್ಷ್ಮಿ

ಭದ್ರ – ಲಕ್ಷ್ಮಿ (ಎಂದು ಚೀರಿ ಕೊಡ್ಲಿ ತೆಗೆದುಕೊಂಡು ಅಣ್ಣ ಮೇಲೆ ಏರಿ ಹೋಗುವನು ಪಾರ್ವತಿ ಅಡ್ಡ ಬರುವಳು) ಚಾಂಡಾಲಾ ಅಣ್ಣನೆಂದು ಸುಮ್ಮನಿದ್ದರೆ ನನ್ನ ಪ್ರೀತಿಯ ಹೆಣ್ಣನ್ನು ಗುಂಡಿನಿಂದ ಸುಟ್ಟು, ನನ್ನ ಹೊಟ್ಟೆ ಉರಿಸಿದಿಯಾ (ಸಿದ್ದನ ಮೇಲೆ ಏರಿ ಹೋಗುವನು. ಪಾರ್ವತಿ ತಡೆಯುವಳು)

ಪಾರ್ವತಿ – .... ಭದ್ರ.... ಅವರನ್ನು ಕೊಲ್ಲುವುದಕ್ಕಿಂತ ಮೊದಲು ನನ್ನನ್ನು ಕೊಂದು ಬಿಡು. ಅಮಂಗಲೆಯಾಗಿ ಬದುಕುವದಕ್ಕಿಂತ ಸುಮಂಗಲೆಯಾಗಿ ಸಾಯುವುದು ಮೇಲು

ಭದ್ರ – ಅತ್ತಿಗೆ (ಹಿಂದೆ ಸರಿದು 'ಲಕ್ಷ್ಮಿ' ಎಂದು ಚೀರಿ ಅವಳ ಬಳಿ ಹೋಗುವನು)

ಲಕ್ಷ್ಮಿ – .... (ಮೆಲ್ಲಗೆ ಎದ್ದು ಅವನ ಅಂಗಿ ಹಿಡಿದು ತತ್ತರಿಸುತ್ತ) ಭದ್ರ ಒಂದು ಹೆಣ್ಣಿಗಾಗಿ ಅಣ್ಣನ ಕೊಲೆ ಮಾಡುವಿಯೊ ಥೀ (ಕೆನ್ನೆಗೆ ಹೊಡೆದು) ಅಣ್ಣನನ್ನು ಕೊಂದು ಹಾಲು ಕುಡಿಸಿದ ನಿನ್ನತ್ತಿಗೆಯ ಬಾಯಲ್ಲಿ ಹಾಲಾಹಲ ಹಾಕಿ ಅವಳ ಕುಂಕುಮ ಅಳುಕಿಸಿ ಬಳೆ ಒಡಿಸಿ ದಂಡೆಯ ದಾರ ಹರಿದರೆ ಗುಂಡು ಬಡಿದ ನಿನ್ನ ಹೆಂಡತಿ ಬದುಕುವಳೆ? ನೀ ಬಯಸಿದರೆ ನನ್ನಂಥ ನೂರು ಹೆಣ್ಣು ಬಂದು ನಿನ್ನ ಕಣ್ಣು ತುಂಬುವುದು. ಆದರೆ ಅಣ್ಣ ಸಿಗುವನೆ?

ಭದ್ರ – ಸಾಧ್ಯವಿಲ್ಲ ಲಕ್ಷ್ಮಿ ನಿನ್ನ ಸಾಯಗೊಡಲಾರೆ

ಲಕ್ಷ್ಮಿ – ಏನು ಮಾಡಿದರೂ ನನ್ನ ಸಾವನ್ನು ಮಾತ್ರ ನೀನು ತಡೆಯಲಾರೆ (ಮರಿಯಪ್ಪ ಬರುವನು)

**ಮರಿಯಪ್ಪ –** ಮಗು ಲಕ್ಷ್ಮಿ ಏನಾಯಿತಮ್ಮಾ ನಿನ್ನ ಅವಸ್ಥೆ?

**ಲಕ್ಷ್ಮೀ –** ನೋಡಪ್ಪಾ ಇದು ನಿನ್ನ ಸಂಪತ್ತಿನ ದಾಹದಿಂದ ನನಗೊದಗಿದ ವಿಪತ್ತು. ಯಾರು ನಿನ್ನ ಅಳಿಯನಾಗಲೆಂದು ನಾನು ಬಯಸಿದೆನೋ ಅವರಣ್ಣನ ಕೈಗೆ ಪಿಸ್ತೂಲ ಕೊಟ್ಟು ಕೊಲ್ಲೆಂದು ಕಳಿಸಿದಿ. ಆದರೆ ಅದರೊಡಲು ನನ್ನನ್ನೇ ಸುಟ್ಟಿತು. ರಕ್ತ ಕುಡಿಯಲೆಂದು ಹುಟ್ಟಿದ ಗುಂಡಿಗೆ ಯಾರ ರಕ್ತವಾದರೆ ಏನು? ಹೇಳಪ್ಪ. ನೋಡು ಈ ಆಯುಷ್ಯದ ಅಂಚಿನಲ್ಲಿ ನಿಂತು ನಿನಗೊಂದು ಮಾತು ಹೇಳುತ್ತೇನೆ. ಈ ಸಾವಿಗೆ ಯಾರೂ ಕಾರಣರಲ್ಲ. ನಮ್ಮ ದುರ್ದೈವ. ಬಡವರನ್ನು ಮರುಗಿಸಿ ಕೂಡಿಸಿದ ನಿನ್ನ ಸಂಪತ್ತಿನ ಪ್ರಭಾವ. ಅಪ್ಪ ನನ್ನ ಅಂತಿಮ ಆಸೆಯೊಂದಿದೆ, ಅದನ್ನು ನಡೆಸಿಕೊಡುವಿಯೇನಪ್ಪಾ?

**ಮರಿಯಪ್ಪ –** ಅದೇನಿದ್ದರೂ ಹೇಳಮ್ಮಾ ಮನ ಮುಟ್ಟಿ ಎದೆ ತಟ್ಟಿ ಪಾಲಿಸುತ್ತೇನೆ

**ಲಕ್ಷ್ಮಿ –** .... ಅಪ್ಪಾ ನಾನು ಸತ್ತೆನೆಂದು ಶೋಕಿಸದೆ ಪಾರ್ವತಕ್ಕನೇ ನಿನ್ನ ಮಗಳು ಲಕ್ಷ್ಮಿ ಎಂದು ಭಾವಿಸಿ ನಡಿ

**ಮರಿಯಪ್ಪ –** ಆಗಲಮ್ಮಾ ನಿನ್ನಾಣೆ ನನ್ನಾಣೆ ಈ ಮಾತು ನಡೆಸುತ್ತೇನೆ. ಇನ್ನು ಮೇಲೆ ಮಗಳೆಂದರೂ ಅವಳೇ... ತಾಯಿ ಎಂದರೂ ಅವಳೆ...

**ಭದ್ರ –** ಲಕ್ಷ್ಮಿ ನಾನು ನಿನ್ನ ಜೊತೆ ಬರುತ್ತೇನೆ (ಕೆಳಗೆ ಬಿದ್ದ ಪಿಸ್ತೂಲ ತೆಗೆದುಕೊಂಡು ತನ್ನೆದೆಗೆ ಗುರಿ ಇಟ್ಟು ಕೊಲ್ಲುವನು. ಎಲ್ಲರೂ ಬಿಡಿಸಿಕೊಳ್ಳುವರು)

**ಲಕ್ಷ್ಮಿ –** (ಕೊಸರಿಕೊಂಡು) ಛೀ ಹೇಡಿಯಂತೆ ಹೀಗೆ ಮಾಡಬಾರದು. ನಾನು ಸತ್ತರೂ ನೀನು ಬದುಕಿರಬೇಕು. ವೀರನಾಗಿ ಮೆರೆಯಬೇಕು

**ಭದ್ರ –** ಹೌದು ವೀರನಾಗಿ ಮೆರೆಯಬೇಕು. ಆ ಧೈರ್ಯ ಆ ಸಾಹಸ ಯಾರಿಗಾಗಿ ಏತಕ್ಕಾಗಿ?

**ಲಕ್ಷ್ಮಿ –** ದೇಶಕ್ಕಾಗಿ ನಿನಗೆ ಜನ್ಮ ಕೊಟ್ಟ ನೆಲಕ್ಕಾಗಿ

**ಭದ್ರ –** ಅದೆಲ್ಲ ನನಗೆ ಬೇಡ. ನೀ ಸತ್ತ ಮೇಲೆ ನನ್ನ ಸಾಹಸ ಕಂಡು ಸಂತಸ ಪಡುವವರು ಯಾರು?

**ಲಕ್ಷ್ಮಿ –** ನಾ ಸತ್ತರೂ ನಿನ್ನ ಎದೆ ಹುತ್ತದಲ್ಲಿ ಸದಾ ವಾಸವಾಗಿರುತ್ತೇನೆ. ನಿನ್ನ ದಿಗ್ವಿಜಯ ಕಂಡು ಸಂತಸ ಪಡುತ್ತೇನೆ.

**ಭದ್ರ –** ಇಲ್ಲ ಲಕ್ಷ್ಮಿ ನೀನಿಲ್ಲದ ಬಾಳು ಕಾಡಿನಲ್ಲಿ ಬಿದ್ದ ಬೆಳದಿಂಗಳು

**ಲಕ್ಷ್ಮಿ –** ಅದರಲ್ಲಿಯೇ ನಿನ್ನ ಪ್ರೇಮ ವಿಲಾಸಿನಿ ಸದಾ ಸಂಚರಿಸುತ್ತಾಳೆ. ಭದ್ರ ಕೇವಲ ಒಂದು ಹೆಣ್ಣಿನ ಆಗಲುವಿಕೆಗೋಸ್ಕರ ನಿನ್ನ ಪೌರುಷ್ಯದ ಸೆಲೆ ಬತ್ತಬಾರದು. ಇಲ್ಲಿಯವರೆಗೆ ಸುತ್ತಲಿನ ಹತ್ತು ಜನರ ಬಾಯಲ್ಲಿ ಪುರುಷ ಸಿಂಹ ಎಂದು ಹೊಗಳಿಸಿಕೊಂಡ ನೀನು ಇನ್ನು ಮುಂದೆ ದೇಶದ, ಜನರ ಮುಖದಿಂದ ಹೊಗಳಿಸಿ ಕೊಳ್ಳಬೇಕು. ವೈರಿ ವಿನ್ಯಾಸಕ್ಕೆ ಹಾತೊರೆಯುವ ಭರತ ವರುಷದ ಸೇನಾ ಸಾಗರಕ್ಕೆ ದಿಕ್ ಸೂಚಿ ದ್ರುವತಾರೆ ನೀನಾಗಬೇಕು. ತ್ರಿವರ್ಣ ಧ್ವಜ ಹಿಡಿದು ನಿಂತ ರಣಚಂಡಿ ಚಾಮುಂಡಿ ಆ ಹಿಮಗಿರಿಯ ಗೌರಿ ನಿನ್ನನ್ನು ಆಹ್ವಾನಿಸುತ್ತಾಳೆ ಹೋಗು ಮುಂದಾಗು. ಭರತ ಸೈನ್ಯದಲ್ಲಿ ಸೇರಿ ನಮ್ಮೂರಿನ ರಾಷ್ಟ್ರ ರಕ್ಷಣೆಯ ಮಹಾನಿಧಿಯಾಗು ಸಾಗು ಮುಂದಾಗು

**ಭದ್ರ –** ಆಗುತ್ತೇನೆ ಲಕ್ಷ್ಮಿ ನೀನಂದಂತೆ ನಾನು ಭಾರತ ಸೈನಿಕ. ನನ್ನತ್ತಿಗೆಯ ಪಾದ ತಟ್ಟಿ ಪ್ರಮಾಣ ಮಾಡುತ್ತೇನೆ

**ಲಕ್ಷ್ಮಿ –** ಆಶೀರ್ವದಿಸಕ್ಕ

**ಪಾರ್ವತಿ –** ಏನೆಂದು ಆಶೀರ್ವದಿಸಲಿ? (ತಲೆಯ ಮೇಲೆ ಕೈಯಿಟ್ಟು) ಭದ್ರ ನನ್ನಪ್ಪಾ ಗೌರಿಯ ವಜ್ರ ಕವಚ ಕದನ ಮುಖದಲ್ಲಿ ನಿನ್ನ ರಕ್ಷಿಸಲಿ. ಕಂದಾ ನಿನ್ನಿಂದ ನಲಿಯಲಿ ಆ ವಿಶ್ವ ಭಾರತೀಯ ಅಂತರಂಗ

**ಲಕ್ಷ್ಮಿ –** ಆಹಾ ಹಾ ಎಂಥ ಮಾತು ನಿನ್ನಿಂದ. ನಲಿಯಲಿ ವಿಶ್ವ ಭಾರತೀಯ ಅಂತರಂಗ

(ಲಕ್ಷ್ಮಿ ಸಾಯುವಳು. ಪರದೆ ಬೀಳುವದು)

===**=======**===

# ಅಣ್ಣ – ತಂಗಿ

• ಮೋಹನಚಂದ ಕಿರಣಗಿ

# ಮೋಹನಚಂದ ಕಿರಣಗಿ

ಮೋಹನ ಚಂದ ಕಿರಣಗಿಯವರು ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಮಳ್ಳಿ ಗ್ರಾಮದಲ್ಲಿ ೦೨-೦೨-೧೯೩೪ರಂದು ಜನಿಸಿದರು. ಇವರಿಗೆ ಮೋಹನ ಕುಮಾರ ಎಂದೂ ಕರೆಯುತ್ತಿದ್ದರು. ಕಿರಣಗಿಯವರು ಕೊಪ್ಪಳ ಜಿಲ್ಲೆಯಲ್ಲಿ ಶಿಕ್ಷಣ ವೃತ್ತಿ ಪ್ರಾರಂಭಿಸಿದರು. ಅತ್ಯುತ್ತಮ ಶಿಕ್ಷಕನೆಂದು ಕರೆಯಿಸಿಕೊಂಡು ರಾಜ್ಯಶಿಕ್ಷಕ ಪ್ರಶಸ್ತಿ, ರಾಷ್ಟ್ರಶಿಕ್ಷಕ ಪ್ರಶಸ್ತಿ ಪಡೆದರು.

ಆದರ್ಶಪ್ರೇಮ, ಅಣ್ಣ-ತಂಗಿ, ಹೆಣ್ಣು ಬಾಳಿನ ಕಣ್ಣು, ಈ ಮೊದಲಾದ ನಾಟಕಗಳನ್ನು ರಚಿಸಿದರು. ಇವರ "ಅಣ್ಣತಂಗಿ" ನಾಟಕ ಜನಪ್ರಿಯತೆಯನ್ನು ಗಳಿಸಿತು. ಅದೇ ನಾಟಕವನ್ನು ಇಲ್ಲಿ ಆಯ್ಕೆಮಾಡಲಾಗಿದೆ. ಹಳ್ಳಿಗಳಲ್ಲಿ ಇವರ ನಾಟಕಗಳು ಹೆಚ್ಚು ಪ್ರಯೋಗಗೊಂಡವು. ಇವರು ಕವಿತೆಗಳನ್ನೂ ಬರೆದಿದ್ದಾರೆ.

ಪ್ರಮುಖ ನಾಟಕಾರರಾದ ಶ್ರೀರಂಗ, ಧುತ್ತರಗಿ, ಮಾಂಡ್ರೆ ಮುಂತಾದವರ ವಿಚಾರಸಂಕಿರಣಗಳಲ್ಲಿ ಭಾಗವಹಿಸಿದ ಕಿರಣಗಿಯವರು ಒಳ್ಳೆಯ ಭಾಷಣಕಾರರೂ ಆಗಿದ್ದರು. ಜೇವರ್ಗಿ ತಾಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಇವರಿಗೆ ೧೯೯೭ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಪ್ರಶಸ್ತಿ ಲಭಿಸಿತು. ಶಿಕ್ಷಕರಾಗಿದ್ದುಕೊಂಡೇ ನಾಟಕಕಾರರಾಗಿ ಹೆಸರು ಮಾಡಿದ ಕಿರಣಗಿಯವರ ರಂಗಸೇವೆ ಗಮನಾರ್ಹವಾದುದಾಗಿದೆ.

## ಪಾತ್ರ ಪರಿಚಯ

### ಪುರುಷ ಪಾತ್ರ

**ಹೇಮಂತ** – ವಸಂತ, ಗಂಗಾ – ಅವರ ತಂದೆ ಬಡವ

**ವಸಂತ** – ಹೇಮಂತನ ಮಗ ಪದವೀಧರ

**ಅಶೋಕ** – ವಸಂತನ ಗಳೆಯ ಗಂಗಾಳ ಪತಿ

**ಶರತ್** – ಅಶೋಕನ ಮಿತ್ರ (ಕಾಮುಕ ಖಳನಾಯಕ)

**ಗೌರೀಶ** – ಅಶೋಕನ ಮನೆಯಾಳು (ವಿಧುರ)

**ಧನರಾಜ** – ಶ್ರೀಮಂತ ಕೋಕಿಲೆಯ ತಂದೆ

**ಖಾಸೀಮ** – ಬಳಿಗಾರ

ಕೆಂಪೇಗೌಡ, ಅಂಚೆಯವ, ಸಬ್‌ಇನಸ್ಪೆಕ್ಟರ ಮತ್ತು ಪೋಲಿಸರು ಇತ್ಯಾದಿ.

### ಸ್ತ್ರೀ ಪಾತ್ರ

**ಗಂಗಾ** – ಹೇಮಂತನ ಮಗಳು (ಅಶೋಕನ ಸತಿ ಮಹಾಗರತಿ)

**ಲಲಿತಾ** – ಅಶೋಕನ ತಂಗಿ (ಬಾಲವಿಧವೆ)

**ಕೋಕಿಲಾ** – ಧನರಾಜರ ಮಗಳು

**ಗೌರಿ** – ಅಶೋಕನ ಮನೆಗೆಲಸದವಳು (ವಿಧವೆ)

**ಸೂಚನೆ** – ಕೆಂಪೇಗೌಡನ ಪಾತ್ರದವರಿಗೆ ಕಪ್ಪು ಬಣ್ಣ ಹಚ್ಚಬೇಕು.

# ಅಣ್ಣ ತಂಗಿ

## (ಕೌಟುಂಬಿಕ ನಾಟಕ)

### ನಾಂದಿ

ಉದಯರವಿ ಪಸರಿಸಿದೆ । ಉಷೆಯ ಮುಖದಲ್ಲಿ ಕಾಂತಿ ।
ಉದಯವಾಗಿದೆ ಜಗದಿ । ಜನಮನದಿ ನಿಜಶಾಂತಿ ॥ ಪಲ್ಲ ॥

ಕವಿದ ಕತ್ತಲೆ ಓಡಿ । ರವಿಕಿರಣಗಳು ಮೂಡಿ ।
ನವಿಲುಗಿರಿ ಶಿಖರದಲಿ । ನಲಿದು ನರ್ತನಮಾಡಿ
ನಳಿನ ಮೊಗವನು ನೋಡಿ । ಅಳಿಯ ಗಾನವಮಾಡಿ ।
ಬೆಳಗುತಿದೆ ಭುವನದಲ್ಲಿ ಸುಪ್ರಭಾತದ ಜ್ಯೋತಿ ॥ ೧ ॥

ಜ್ಞಾನನಿಧಿ ಏಳಯ್ಯ । ದೀನ ಜನಪಾಲನೆಗೆ ।
ಕ್ಷೋಣಿಯೊಳು ಕ್ಷಯವಾದ ಧರ್ಮಸಂಸ್ಥಾಪನೆಗೆ ।
ಹೀನಮತ ಪಂಥಗಳ । ನ್ಯೂನತೆಯ ಕಳೆದಿಳೆಗೆ ।
ಮಾನ್ಯತೆಯ ನೀಡು ಜನ ಕನ್ನಡದ ನಲು ನುಡಿಗೆ ॥ ೨ ॥

ಕರುನಾಡಿನಲಿ ನಮ್ಮ । ಕನ್ನಡದ ಮುನ್ನಡೆಗೆ ।
ರನ್ನ ಪಂಪರ ಕಾವ್ಯ । ಮುನ್ನುಡಿಗೆ ಚಿನ್ನುಡಿಗೆ ।
ಮಾನ್ಯ ಕನ್ನಡನಾಟ್ಯ । ರಂಗರಾಣಿಯ ಅಡಿಗೆ ।
ನನ್ನಿಯಲಿ ನಮಿಸುವೆವು । ಸಂಗೀತ ಸವಿನುಡಿಗೆ ॥ ೩ ॥

# ಪ್ರಥಮಾಂಕ

## ಪ್ರವೇಶ –೧

### ಮಧ್ಯಮ ವರ್ಗದ ಮನೆ

ಹೇಮಂತನ ಮಗಳು ಗಂಗಾ ಶಿವಪೂಜೆ ಮಾಡುತ್ತಿರುವಳು.

**ರಾಗ–** **ಪದ –** **ತಾಳ– ತ್ರಿತಾಲ**

ಭವತಾರತಕ । ಶಿವನಿನ್ನ ಪೂಜೆ ।
ನಾಗೈಯ್ಯುವೆ । ಮದುಪೊಂದುವೆ । ॥ ಪಲ್ಲ ॥
ಭವನಂಬರ । ಪರಮೇಶ್ವರ
ಶಿವಶಂಕರ ಪೊರೆಯೋ ಹರ ।

**ಗಂಗಾ :** ದೇವಾ ಮಾನಿನಿಯರ ಮಾನರಕ್ಷಕ ನೀನಲ್ಲವೇ? ಇಂತಿದ್ದು ಹದಿನೆಂಟು ವರುಷ ತುಂಬಿದರೂ ಮನದಿನಿಯನೊಡಗೂಡಿ ಬಾಳುವ ಭಾಗ್ಯವನ್ನು ಕರುಣಿಸಲಿಲ್ಲ. "ನೀನೆನಗೆ ಮನೆಯಲ್ಲಿದ್ದು ಇಲ್ಲದದು ಜೋಗಿಗೇನು ಗೊತ್ತು" ಎನ್ನುವಂತೆ ಇಂದಿನ ಪದವೀಧರರನೇಕರು ದೀನದಲಿತರ ಬಾಳನ್ನರಿಯದೆ ನೀರ ಹನಿಗಾಗಿ ಬಾಯ್ದೆರೆದು ಕುಳಿತ ಜಾತಕ ಪಕ್ಷಿಯಂತೆ 'ವರದಕ್ಷಿಣೆ' ಎಂಬ ಐದಕ್ಷರಗಳನ್ನೇ ಪಠಿಸುತ್ತ ಪದವೀಧರರೆಂಬ ಪಲ್ಲಂಗದ ಮೇಲೆ ಪವಡಿಸಿದ್ದಾರೆ. ಜನ್ಮಾಂಧನಿಗೆ ಕಣ್ಣುಗಳನ್ನು ನಿಪುತ್ರಕರಿಗೆ ಪುತ್ರ ಸಂತಾನವನ್ನು ಕೊಟ್ಟು ರಕ್ಷಿಸುವ ನೀನು ವಿರಹದುರಿಯಿಂದ ಬಾಡಿ ಹೋಗುತ್ತಿರುವ ನನ್ನ ಜೀವಲತೆಗೆ ವರನೆಂಬ ಆಶ್ರಯದ ಮರವನ್ನು ದೊರಕಿಸಿಕೊಟ್ಟು ಹರಕೆಯ ಸಲೀಲವನ್ನು ಸರಿಸಿ, ಬಾಳ ಬಳ್ಳಿಯು ದಾಂಗುಡಿ ಇಡುವಂತೆ ಮಾಡು ತಂದೆ (ನಮಸ್ಕರಿಸಿ ಹೋಗುವಳು).

**ಅಂಚೆಯಾಳು :** (ಬಂದು) ಪೋಸ್ಟ ಸರ್.....! (ಲಕೋಟೆ ಕೊಟ್ಟು ಹೋಗುವನು)

**ಹೇಮಂತ :** (ತೆಗೆದುಕೊಂಡು ಓದಿ) ಹೇ, ವಿಧಾತಾ ಎಷ್ಟೊಂದು ನಿಷ್ಠುರನು ನೀನು. (ನಿಟ್ಟುಸಿರು ಹಾಕಿ) ಬಡತನ, ಅಪಮಾನಗಳಿಗಿಂತ ಸಾವೇ

ಸಾವಿರಪಾಲು ಮೇಲು. ಬಡವರ ಬಾಳೆಂದರೆ, ಹುರಿಯೊಡೆದ ಹಗ್ಗದಂತೆ ಬುಡವಿಲ್ಲದ ಕೊಡದಂತೆ ನಿಸ್ಸತ್ವ ಮತ್ತು ನಿರಾಧಾರವಾಗಿದೆ. ಗಂಗಾನ ದುಃಖ ಕಂಡಾಗಲೆಲ್ಲ ನನ್ನೆದೆಯು ಗಾಣಕ್ಕೆ ಸಿಕ್ಕ ಕಬ್ಬಿನಂತಾಗುವದು ಮಾಡಬೇಕೇನು? ವರಾನ್ವೇಷಣೆಗಾಗಿ ಊರಿಂದೂರಿಗೆ ಅಲೆದಲೆದು ಹಕ್ಕಿಯಂತಾದರೂ ಪ್ರತಿಯೊಬ್ಬರೂ ವರದಕ್ಷಿಣೆಯ ಪ್ರಶ್ನೆಯನ್ನೇ ಪ್ರಸ್ತಾಪಿಸುವರು (ಪತ್ರ ಮತ್ತೊಮ್ಮೆ ನೋಡಿ) ಬಿ.ಎ ಓದಿರುವವನಂತೆ ಪರದೇಶದ ಅಭ್ಯಾಸಕ್ಕಾಗಿ ಐದು ಸಾವಿರ ಹಣ ಕೊಟ್ಟರೆ ಗಂಗಾನನ್ನು ವರಿಸುವವನಂತೆ "ಹೊಳೆದಾಟಿದ ಮೇಲೆ ಅಂಬಿಗರ ಮಿಂಡನೆನ್ನುವ ಹಾಗೆ ಹಣ ಪಡೆದುಕೊಂಡು ಹೋಗಿ ಪರದೇಶದಿಂದ ಪರನಾರಿಯನ್ನು ಪಡೆದುಕೊಂಡು ಬಂದರೆ ತೀರಿತು. ಹಣಕ್ಕೆ ಹಣವೂ ಹಾಳು ತಲೆಯೂ ಬೋಳು.

**ವಸಂತ :** (ಹೊರಗಿನಿಂದ ಬರುತ್ತ) ಅಪ್ಪಾ ಯಾರಿಂದ ಬಂದಿದೆ ಪತ್ರ?

**ಹೇಮಂತ :** ಯಮನಿಂದ !

**ವಸಂತ :** ಇಂತೇಕೆ ತಾಳ್ಮೆಯ ತುಂತುರ ಹರಿದಂತೆ ಮಾತಾಡುವಿರಿ. ವಿಷಯವಾದರೂ ಏನು?

**ಹೇಮಂತ :** ವಸಂತ ನಿನ್ನ ಸೋದರಿಗೆ ಮಾಂಗಲ್ಯದ ಭಾಗ್ಯ ಎಂದಿದೆಯೋ ತಿಳಿಯದಾಗಿದೆ. ಪರದೇಶದ ಅಭ್ಯಾಸಕ್ಕಾಗಿ ಐದು ಸಾವಿರ ಹಣ ಕೊಟ್ಟಲ್ಲಿ ಗಂಗಾನ ಕೈಹಿಡಿಯುವೆನೆಂದು ಅಮರಾವತಿಯ ಅಮರ ನಾಥನು ಪತ್ರ ಬರೆದಿರುವನು.

**ವಸಂತ :** ಐದು ಸಾವಿರ....! ಐದುನೂರು ರೂಪಾಯಿಗಳನ್ನು ಕಾಣದಿದ್ದ ಕಂಗಳು ಐದು ಸಾವಿರ ಹಣವನ್ನೆಲ್ಲಿಂದ ತೆತ್ತಬೇಕು ಅಪ್ಪಾ !!

**ಹೇಮಂತ :** ಸಿರಿವಂತಿಕೆಯ ಸುರಾಪಾನದಿಂದುಂಟಾದ ಪಿತ್ತವು ನೆತ್ತಿಗೇರಿ ಧನವೇ ಘನವೆಂದು ತಿಳಿದು ಸದಾ ಮಾಸಿದ ಮೈಲಿಗೆಯನ್ನು ಹೊತ್ತು ತಿರುಗುವ ಕತ್ತೆಯಂತೆ ಕೆಲ ಶಿರಿವಂತರಿಗೆ ಎತ್ತ ಗೊತ್ತಾಗಬಲ್ಲದು ಬಡತನದಲ್ಲಿದ್ದ ಶಾಂತಿಮಣಿಯ ಪ್ರಖರ ತೇಜಸ್ಸಿನ ಬೆಲೆಯು?

**ವಸಂತ :** ನಿಜ ಅಪ್ಪಾ ಸತ್ಯವಾಗಿಯೂ ಇದು ಸಿರಿವಂತರ ಕಾಲ, ಮದುವೆಯೆಂಬುದು ಬಡವರಿಗೆ ಸಾವಿರ ಶೂಲ. ಇಂಥ ಸಿರಿವಂತರ

ಕಾಲದಲ್ಲಿ ನಮ್ಮಂತಹ ಬಡವರನ್ನು ಹುಟ್ಟಿಸಿ ಈ ಪರಿಯಿಂದ ಪರಿತಪಿಸುವದಕ್ಕಿಂತ ಪರಮಾತ್ಮನು ತನ್ನುರಿಗಣ್ಣು ತೆರೆದು ಭುವನದಲ್ಲಿರುವ ಬಡವರನ್ನು ಭಸ್ಮ ಮಾಡಿದರೆ ಒಳಿತು.

**ಹೇಮಂತ :** ಸಾವು ಬಂದರೆ ನಮ್ಮಂಥ ಪುಣ್ಯವಂತರೇ ಇಲ್ಲ. ಆದರೆ ಯಮರಾಯನ ಅನುಗ್ರಹವಾಗಬೇಕಲ್ಲ? ಕಾಲಚಕ್ರದ ವಕ್ರಗತಿಯಲ್ಲಿ ಸಿಲುಕಿ ಅದೆಷ್ಟೋ ಬಡ ಕುಟುಂಬಗಳು ನಮ್ಮಂತೆ ನುಚ್ಚು ನೂರಾಗುತ್ತಿರುವವೋ!

**ವಸಂತ :** ಉರುಳು ಕಾಲಚಕ್ರ.... ಯಾರ ಮೊರೆಗೂ ಕಿವಿಗೊಟ್ಟು ಕರಗದೇ ಕಲ್ಲು ಹೃದಯವಾಗಿಯೇ ಉರುಳು. ಆ ಕಣ್ಣೀರಿನ ಪ್ರವಾಹದಲ್ಲಿಯೇ ನನ್ನ ತಂಗಿಯ ತನುತ್ಯಾಗವಿದ್ದರೆ ನಾವಾದರೂ ಮಾಡುವದೇನು ನೀನಾದರೂ ಮಾಡೀ ಏನು!

**ಹೇಮಂತ :** ದುಃಖದ ದುಮ್ಮಾನದಲ್ಲಿ ದುರ್ಬಲನಾಗದಿರುವ ಮಗು ಪ್ರಳಯ ವೃಷ್ಟಿಯಂತೆ ನೀನು ಕಣ್ಣೀರು ಸುರಿಸಿದರೂ..... ಕಷ್ಟ ಕಾರ್ಪಣ್ಯದ ಕುಲುಮೆಯಲ್ಲಿ ಬೆಂದು ಬೇಗುದಿಗೊಳ್ಳುವ ಬಡವರ ವಿಷಯದಲ್ಲಿ ಭಗವಂತನು ಕಣ್ತೆರೆಯಲಾರನು.

**ವಸಂತ :** ಅಪ್ಪಾ..... ಉದ್ವಿಗ್ನನಾಗದಿರು....! ಉದ್ವಿಗ್ನತೆಯಿಂದ ಉಮೇಶನನ್ನು ಶಪಿಸದಿರು. ಸಮಾಜಕ್ಕೆ ವರದಕ್ಷಿಣೆಯ ಉರಿ ಹತ್ತಿ ತನ್ನ ಕರಾಳ ಕೋರೆದಾಡಿಗಳ ಕೆನ್ನಾಲಿಗೆಗಳಿಂದ ನಮ್ಮಂಥ ಬಡವರ ಬಲಿ ತೆಗೆದುಕೊಳ್ಳುತ್ತಿದೆ ವಿನಃ ಪರಶಿವನಲ್ಲಿ ತಿಲಮಾತ್ರ ತಪ್ಪಿಲ್ಲ.

**ಹೇಮಂತ :** ಎಲ್ಲಿಹನು ಪರಶಿವನು? (ಗಂಗಾ ಬಂದು ಒಳಬಾಗಿಲಿಲ್ಲ ನಿಲ್ಲುವಳು)

**ವಸಂತ :** ಭಕ್ತರ ಹೃದಯವೆ ಪರಶಿವ ನಿಲಯ,

**ಹೇಮಂತ :** (ವ್ಯಂಗವಾಗಿ) ಭಕ್ತರ ಹೃದಯವೇ ಪರಶಿವ ನಿಲಯ! ಭಕ್ತರ ಹೃದಯ ಪರಶಿವ ನಿಲಯವಾಗಿದ್ದರೆ ಅಂದು ಅವನನ್ನೇ ನಂಬಿದ ಏಸು ಕ್ರಿಸ್ತ ಶಿಲುಬೆಗೇಕೆ ಏರಿದನು? ಮಹಾತ್ಮಾಜಿ ಗುಂಡಿಗೇಕೆ ಆಹುತಿಯಾದ? ಮಿಥ್ಯವನ್ನು ಸಂಹರಿಸಿ, ಸತ್ಯವನ್ನು ಸಲಹುವದಾಗಲಿಲ್ಲವೇ ನಿನ್ನ ಶಿವನಿಗೆ?

**ವಸಂತ :** ಮಿಥ್ಯದ ವರೆಗಲ್ಲಿಗೆ ತಿಕ್ಕಿದಾಗಲೇ ತಿಳಿಯುವದು ಸತ್ಯ ಸುವರ್ಣದ ಬೆಲೆಯು. ಅದರಂತೆ ಬಡತನವೆಂಬುವುದು ಆತ್ಮವನ್ನು ಪುಟಕ್ಕಿಟ್ಟು ಪರಿಶುದ್ಧಗೊಳಿಸುವ ಅಗ್ನಿ ಕುಂಡ.

**ಹೇಮಂತ** : ದಿನ ಬೆಳಗಾದರೂ ದುಃಖದ ದಾವಾಗ್ನಿಯ ಹೊರತು ಅರೆಕ್ಷಣವಾದರೂ ಬಡವರ ಬಾಳಿನಲ್ಲಿ ಭಾಗ್ಯೋದಯದ ಭಾಸ್ಕರನು ಉದಯಿಸಬೇಡವೆ?

**ವಸಂತ** : ಉದ್ಗಾರದ ಉಸಿರನ್ನೆಳೆಯದಿರು ಅಪ್ಪಾ.... ಬಡತನದ ಬಾಳು ಸಿರಿತನದ ತಳದಲ್ಲಿ ಸಿಕ್ಕು ಕಂದಿ ಕುಂದಿ, ನೊಂದು ಬೇಗುದಿಗೊಂಡು, ಶರಧಿಯ ತಳದಲ್ಲಿರುವ ವಡಲಾಗ್ನಿಯಂತೆ ಛಟಛಟನೆ ಸಿಡಿದೆದ್ದು ಕಾರ್ಮೋಡದಲ್ಲಿ ಕೂಡಿಕೊಂಡು ಭೋರ್ಗರೆಯುತ್ತ ಸಿಡಿಲಿನಂತೆ ಬಂದು ಮೇಲಕ್ಕೇರಿ ಬೆಳೆದು ನಿಂತಿರುವ ಸಿರಿವಂತರ ಮನೋ ಮಂದಿರಗಳನ್ನು ನಾಶ ಮಾಡಲು ಸಿದ್ಧವಾಗಿ ಎಂದು ನಿಲ್ಲುವದೋ ಅಂದಿಗೇನೇ ಬಡವರ ಭಾಗ್ಯೋದಯ ಚಿಂತಿಸದಿರು ಅಪ್ಪಾ.... ತಂಗಿಯ ಮದುವೆಯ ಭಾರ ನನಗಿರಲಿ ನೀವಿಷ್ಟು ವಿರಾಮ ಪಡೆಯಿರಿ. (ಹೇಮಂತ ಮನೆಯೊಳಗೆ ಹೋಗುವನು ಗಂಗಾ ವಸಂತನತ್ತ ಬರುವಳು?

**ಗಂಗಾ** : ಅಣ್ಣಾ ! ಇಂದೇಕೆ ನಿಮ್ಮೀರ್ವರ ಮುಖಗಳು ಮೌನಗೊಂಡಿವೆ? ಮತ್ತಾವ ಚಿಂತೆ ಮನೆ ಮಾಡಿತು ನಿಮ್ಮ ಹೃದಯದಲ್ಲಿ?

**ವಸಂತ** : ಚಿಂತೆ ! ಚಿಂತೆ ಯಾರಿಗೆ ಬಿಟ್ಟಿದೆ ತಂಗಿ? ಬ್ರಹ್ಮನಿಗೆ ಶಿರಭಂಗವಾದ ಚಿಂತೆ, ಕಪಾಲಧರನಿಗೆ ಬಿಕ್ಕೆ ಬೇಡುವ ಚಿಂತೆ, ಇಂತಿರಲು ನಮ್ಮಂಥ ಪಾಮರರಿಗೆ.....

**ಗಂಗಾ** : ಚಿಂತಿಸದಿರು ಅಣ್ಣಾ.... ಮನದಲ್ಲಿ ಚಿಂತೆಗೆ ಆಸ್ಪದ ಕೊಡುವದೆಂದರೆ ಕಾಳಸರ್ಪಕ್ಕೆ ಮುದ್ದಿಡುವಂತೆ. ಅದಕ್ಕಾಗಿ ಯಾವ ತರದ ಚಿಂತೆ ಮಾಡದೆ, ಇದ್ದ ವಿಷಯವನ್ನು ನಿನ್ನ ಸೋದರಿಗೆ ಹೇಳಣ್ಣ, ಹೇಳುವದಿಲ್ಲವೇ? ಒಡಹುಟ್ಟಿದ ತಂಗಿಗೆ ಹೇಳದಂತಹ ಗೌಪ್ಯ ವಿಷಯವಾದರೂ ಯಾವುದು?

**ವಸಂತ** : ಇದೋ ನೋಡಮ್ಮ ಧನ ಮದದಿಂದ ದರಿದ್ರರ ದುಃಖವನು ಲೆಕ್ಕಿಸದೆ ತಿರುಗುವ ಧನವಂತರಾದ ಗಂಡು ಹಡೆದವರ ಪತ್ರ!

**ಗಂಗಾ** : (ನೋಡಿ) ಅಣ್ಣಾ ಸಂತೋಷದ ಸುಖದ ಸುಪ್ಪತ್ತಿಗೆಯ ಮೇಲೆ ಸಿರಿತನದ ಅಮಲಿನಿಂದ ರೆಪ್ಪೆ ತೆಗೆಯದೇ ಕಪ್ಪೆಯಂತೆ ಮಲಗಿರುವ ಧನವಂತರಿಗೆ ಎಂತು ಗೊತ್ತಾಗುವದು ದೀನರ ಬಾಳು! ಅಣ್ಣಾ.... ನನಗಾಗಿ ಯಾರೂ ಚಿಂತಿಸುವದು ಬೇಡ. ನಮ್ಮನ್ನು ಹೊತ್ತು ಹೆತ್ತು

ಸಾಕಿ ಸಲುಹಿ ಮೃತಳಾದ ಮಾತೆಗಿಂತ ಮಿಗಿಲಾದ ಮಮತೆಯಿಂದ ನೋಡಿದ ನಿನ್ನನ್ನು ಮತ್ತು ತಂದೆಯನ್ನು ಅಗಲಲು ನನ್ನಿಂದಾಗದಣ್ಣ.

**ವಸಂತ :** ತಂಗಿ ಎಂಥ ಮುಗ್ಧ ಮಾತುಗಳನ್ನಾಡುವೆ! ಹುಟ್ಟಿಬಂದ ಹೆಣ್ಣು ಕಾಕ ಗೂಡಿನಲ್ಲಿ ಬೆಳೆದ ಪರಪುಟ್ಟ ಕೋಗಿಲೆಯಂತೆ, ಒಂದಿಲ್ಲ ಒಂದು ದಿನ ಮನೆ ಬಿಟ್ಟು ಹೋಗಿ ಸ್ತ್ರೀರತ್ನಗಳಾದ ಸೀತಾ ಸಾವಿತ್ರಿಯರಂತೆ ಹುಟ್ಟಿದ ಮನೆಗೂ, ಕೊಟ್ಟ ಮನೆಗೂ ಕೀರ್ತಿ ತರಬೇಕಮ್ಮ.

**ಗಂಗಾ :** ವಧುವಿಗಿಂತಲೂ ವರದಕ್ಷಿಣೆಗೆ ಪ್ರಾಶಸ್ತ್ಯ ಕೊಡುವ ಇಂದಿನ ಹೃದಯಹೀನ ಸಮಾಜದಲ್ಲಿ ಆಯುಷ್ಯದ ಅವಧಿಯನ್ನು ಅಕ್ಕಮಹಾದೇವಿಯಂತೆಯೇ ಕಳೆಯಬೇಕೆಂದಿರುವೆನು.

**ವಸಂತ :** ಭವದ ಬಣ್ಣವನು ನೀನರಿಯೇ ತಂಗಿ. ಅಕ್ಕಮಹಾದೇವಿಯಂತೆ ಬದುಕ ಬಯಸಿದರೂ ಚೊಕ್ಕಾಗಿರುವ ನಿನ್ನ ಸೌಂದರ್ಯವನ್ನು ಕುಕ್ಕಿ ಕೆಡಿಸುವ ಕೌಶಿಕನಂಥ ರಣಹದ್ದುಗಳಿಗೇನೂ ಕಡಿಮೆ ಇಲ್ಲವಮ್ಮ ಈ ಕಲಿಯುಗದಲ್ಲಿ.

**ಗಂಗಾ :** ಆಗಲಣ್ಣಾ.... ಹಿರಿಯರಾದ ನಿಮ್ಮಿಚ್ಛೆಯನ್ನೇಕೆ ತುಚ್ಛೀಕರಿಸಲಿ ಸಧ್ಯ.... ಊ....ಟ....ಮಾ....ಡ....ಲು!

**ವಸಂತ :** ನಡೆಯಮ್ಮಾ..... (ಒಳಗೆ ಹೋಗುತ್ತಿರುವಾಗ ಅಂಚೆಯವನ ಪ್ರವೇಶ)

**ಅಂಚೆಯಾಳು :** (ಬಂದು) ನಿಮ್ಮದೊಂದು ತಾರು ಬಂದಿದೆ ಸರ್.... (ವಸಂತ ಸಹಿಮಾಡಿ ತೆಗೆದುಕೊಂಡು ಓದುವಾಗ)

**ಗಂಗಾ :** ಏನಿದೆ ಅಣ್ಣಾ?

**ವಸಂತ :** ನಾಳೆ ಸಾಯಂಕಾಲ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ರಾಜ್ಯಪಾಲರ ಪದವೀಧರ ಸಮಾರಂಭ ನಡೆಯಲಿದೆಯಂತೆ. ಅದಕ್ಕಾಗಿ ನನ್ನ ಸಹಪಾಠಿಯೂ, ಆತ್ಮೀಯ ಸ್ನೇಹಿತನೂ ಆದ ಅಶೋಕನು ಇಂದೇ ನನಗೆ ಧಾರವಾಡಕ್ಕೆ ಬರಲು ತಿಳಿಸಿರುವನು.

**ಗಂಗಾ :** (ಮುಗುಳ್ನಗೆಯಿಂದ) ಇನ್ನೇನು ಅಣ್ಣ. ಪದವೀಧರ ಅಣ್ಣನ ಮದುವೆಯಾಗಿ ಮನೆ ತುಂಬುವ ಅತ್ತಿಗೆಯೂ ಪದವೀಧರಳು ಅಂದಾಗ ಇನ್ನು ಮೇಲೆ ನನ್ನನಾರು ಮಾತಾಡಿಸಬೇಕು.

**ವಸಂತ :** ನನ್ನ ಮದುವೆ.... ಅದಕ್ಕೆ ಇನ್ನೂ ಬಹು ದಿವಸ ಬೇಕಮ್ಮ ನಿನ್ನ ಮದುವೆಯಾಗಿ ಪತಿಗೃಹಕ್ಕೆ ಹೋಗಿ ಸತಿಪತಿಯರ ಸಂಸಾರ ಸರೋವರದಲ್ಲಿ ಕನ್ಯಾಕಮಲ ಅರಳಿದಾಗಲ್ಲವೆ ನನ್ನ ಮದುವೆ?

**ಗಂಗಾ :** ಆಗಲಿ ನಡೆಯಣ್ಣ....ಧಾರವಾಡಕ್ಕೆ ಹೋಗುವ ವಿಷಯವನ್ನು ತಂದೆಗೆ ತಿಳಿಸುವಾ.... (ಒಳಗೆ ಹೋಗುವರು)

## ಪ್ರವೇಶ – ೨

### ರಸ್ತಾ

**ಗೌರೀಶ :** ಹೆಂಡತಿಯಿಲ್ಲದವನ ಬಾಳ್ವೆ ಅಂದರೆ ಮುಂಜಾವಿನಿಂದ ಸಂಜಿ ತನಕಾ ದುಡಿದು ದುಡಿದು ಹಾಳಗ್ವಾಡಿ ಚಾಟಿಗೆ ಬಿದ್ದು ಸತ್ತು ಹೋಗೂ ಕತ್ತೆಗಿಂತ ಕಡೀ. ನಾರಿ ಇಲ್ಲದ ಮನಿ ನೀರಿಲ್ಲದ ಊರು ಏನು ಕೊಟ್ಟರೂ ಬ್ಯಾಡ ಅನ್ನೂ ಮಾತು ಸುಳ್ಳಲ್ಲ. ಬಡವರ ಸಂಸಾರ ಸುದ್ದಾಗಿ ನಡೆಯೋದು ನೋಡಿ, ನೆರೆಮನೆಯವರಿಗಷ್ಟೇ ಯಾಕ ಮಾದೇವಗು ಸುದ್ದಾ ಹೊಟ್ಟೆ ಕಿಚ್ಚು ಹುಟ್ಟತೈತಿ ಅನ್ನೂದಕ ನನ್ನ ಬಾಳೇನ ಸಾಕ್ಷಿ. ಮನಸ್ಸಿಗೆ ಬಂದಾಕಿನ ಮದುವಿ ಮಾಡಿಕೊಂಡು ಮೂರು ತಿಂಗಳು ಸುದ್ದಾ ಪೂರಾ ಆಗಿದ್ದಿಲ್ಲ ಹೇಣತಿ ಸತ್ತು ಹುಣ್ಣಿನ ಮ್ಯಾಲೆ ಹುಳಿ ಹೋದಂಗಾತು. ಏನೇ ಆಗಲಿ ಇದು ಸೆಕೆಂಡ ಹ್ಯಾಂಡಿನ ಕಾಲಾ, ಹಳಸಿದ ಅನ್ನ, ಹಸಿದ ನಾಯಿ ಒಂದು ಕಡೆ ಇದ್ದಂಗ ನಮ್ಮ ಸಾವಕಾರ ಮನ್ಯಾಗ ಗಂಡಸತ್ತ ರಂಡಮುಂಡಿ ಒಬ್ಬಾಕಿ ನನ್ನ ಕೂಡ ಕೆಲಸ ಮಾಡತಾಳ, ಆಕಿ ಹೆಸರು ಗೌರಿ. ಕಣ್ಣು ಮೂಗಿಲೆ ಚಕೋರಿ ಇವತ್ತ ಏನ ಆಗಲಿ ಗಟ್ಟಿ ಮನಸ ಮಾಡಿ ಉಡಿಕಿ ಸಂಬಂಧ ಕೇಳೇ ಬಿಡತೀನಿ (ಅವಸರದಿಂದ ಹೋಗುವಾಗ ಎದುರಿಗೆ ಬರುತ್ತಿರುವಾಗ ಗೌರಿಗೆ ಹಾದು, ಪರಸ್ಪರ ತಾವು ಹೋಗುತ್ತಿರುವ ದಿಕ್ಕಿಗೇನೇ ಮುಖ ಮಾಡಿ ನಿಂತು).

**ಗೌರಿ :** (ಎದಿಗೆ ಕೈ ಹಚ್ಚಿಕೊಂಡು) ಎವ್ ನನ್ನ ಬಾಳೇವ, ಯೇನೋ ಮುಲ್ಲಾ ಕಾಣುದಿಲ್ಲೇನು ಮುಸ್ತಿಪಾಲ್ಟಿ ಕಂಬಾಗೀದಿ....

**ಗೌರೀಶ :** ಏ ಏ, ಮುಸ್ರಿಪಾಲ್ಟಿ ಅಲ್ಲ, ಮುಸ್ರಿಪಾಲ್ಟಿ ಅನ್ನು ಸುದ್ದಾಗಿ ಕನ್ನಡ ಮಾತಾಡಾಕ ಬರೂದಿಲ್ಲ ನಿನಗ್ಯಾಕ ಈ ಇಂಗಜೀರಗಿ? ನೀರು

ಹೋಗದ ಗಂಟಲದಾಗ ಕಡಬು ತುರುಕಬೇಕನ್ನೂ ತಿಳಗೇಡಿ ಅಂದ್ರ ನೀನs ನೋಡು.

**ಗೌರಿ :** ಯಾಕ ತಲಿ ಕೆಟ್ಟೈತೇನ ನಿಂದು ಬಾಯಿಗೆ ಬಂದಂಗ ಮಾತಾಡತಿ.

**ಗೌರೀಶ :** ನೀನು ಓಟ ನಾಲಿಗಿ ಬಿಗಿ ಹಿಡಿದು ಮಾತಾಡು, ಗಂಡಸರಿಗೆ ಕಂಡಾಂಗ ಮಾತಾಡದೀ ಅಂದರS ಬಾಯಿ ಮಲಕಾಡಸಾಕ ಬರಾಕಿಲ್ಲ.

**ಗೌರಿ :** ಅಯ್ಯನನ ಚಂದ್ರಾಮs..... ಅಮ್ಮನ ಮುಂದ ಮೊಮ್ಮಗಳು ಕೆಮ್ಮಿದಾಂಗ ನನಗ ಬುದ್ಧಿ ಹೇಳಾಕ ಬಂದೀ ಏನು? ಹರೇದ ಮಬ್ಬಿನಾಗ ಹಾದಿ ಬಿಟ್ಟ ಮಾತಾಡಿದೀ ಅಂದರ ಕಣ್ಣುಗುಡ್ಡಿ ಕೈಗೆ ಬಂಙಾವು ಜ್ವಾಕಿ.

**ಗೌರೀಶ :** ಬೇಸ್ಯಾತಲ್ಲ.... ಆಟಮಾಡಿಬಿಡು ಅಂದರ ಇಬ್ಬರೂ ಕೂಡೇ ಊರಾಗ ಬಿಕ್ಕಿ ಬೇಡಾಕ ಹೋಗಿ ಬಿಡೂನು ನೀ ಮುಂದ, ನಾ ಹಿಂದ ಓಂ ಶಿವನೇ.... ಅನ್ನು, ಧರುಮಾನೆ ತಾಯಿ ತಂದೆಮ್ಮ.

**ಗೌರಿ :** (ಅವನ ಕಡೆ ಹೋಗುತ್ತ) ಯಾವ್ನ ನೀನು ಬಲೆ ಶಾಣೇ ರಂಗ ಮಾತಾಡತಿ (ಅವನ ಮುಖ ನನ್ನ ಕಡೆಗೆ ತಿರಿವಿ) ಓಟು ಮಾರಿ ತಿರುವು ನೋಡತೀನಿ ಅಯ್ಯ.....ನೀನ.....s

**ಗೌರೀಶ :** ಹೌದು ನಾನು.... ಗೌರಿ ನಾನೆಷ್ಟ ಹೆದರಿದ್ನೆ ಮತ್ಯಾರಿಗೋ ಹಾದೆ ಅಂತ.

**ಗೌರಿ :** ಸಾಕ ಹೋಗ ಸನ್ನೇಸಿ.....

**ಗೌರೀಶ :** ಹಾ ಇದೇನಂದೆಲ್ಲ ಗಂಡನಾಡಿ ಮಾತು ನಯಾಪೈಸಾದ್ದಲ್ಲ.

**ಗೌರಿ :** ಯಾಕ?

**ಗೌರೀಶ :** ಯಾಕಂದರೆ ನಾ ಈಗ ಸನ್ನೇನಿ ಆಗೀನಿ, ಹಿಂದಿಲ್ಲ ಮುಂದಿಲ್ಲ ಒಳಗಿಲ್ಲ ಹೊರಗಿಲ್ಲ. ಜೋಡಿಲ್ಲ ಜತ್ತಿಲ್ಲ ಏನು ಮಾಡಬೇಕು ಮನುಷ್ಯಾ ಆಗಿ ಹುಟ್ಟಿದ ಮ್ಯಾಲೆ ಜೋಡಬೇಕನ್ನು.

**ಗೌರಿ :** ಜೋಡು ತೊಗೊಂಡು ಏನ ಮಾಡತಿ? ಜೋಡು ಇದ್ದೋರು ಗುಡಿ ಗುಂಡಾರದಾಗ ಕಾಲ ಮುರಿದು ಕೈಯಾಗ ಕೊಡುತಾರು.

**ಗೌರೀಶ :** ಕಾಲಿಗೆ ಜೋಡಿಲ್ಲ ಗೌರಿ ಮೈಗೆ ಜೋಡು.

**ಗೌರಿ :** ಮೈಗೆ ಜೋಡ.... ಹಕ್ಕಿ ಪಕ್ಕಿ ಜೋಡ ಆಗತಾವಂತ, ದೇವರು

ನಿನಗೂ ಜೋಡು ಮಾಡತಾನ ತಡಿ ಓಟು, ಜೋಕಾಲಿ ಆಡಿಯಂತೆ ಇಕಾ ನನ್ನ ತೌರಮನ್ಯಾಗ ನೀರಗಣ್ಣಿನ ನಿಂಗವ್ವನ ಮಗಳು ಅಂದಾನವ್ವಂತ ಅದಾಳು. ಕಣ್ಣು ಮೂಗಿಲೆ.

**ಗೌರೀಶ :** ಸೂರ್ಪನಖಿ ಅಂದೇs.....

**ಗೌರಿ :** ಏ ಹಸನಗೇಡಿ ನೀ ಏನ ಮಾತಾಡತಿ, ಆಕಿ ಚಿತ್ರದನ್ನ ಗೊಂಬಿ ಆಗ್ಯಾಳ, ಕೇಳಂದ್ರ ಕೇಳಿ ಬಿಡತೀನಿ. ಹೂ ಅಂದರ ಹೋಳಿಗಿ ಹೊಡೆದು ಕಟ್ಟಿ ಬಿಡು.

**ಗೌರೀಶ :** ಎನ್ನ?

**ಗೌರಿ :** ಗುಳದಾಳೀನ.

**ಗೌರೀಶ :** (ಉಸುರ ಹಾಕಿ) ಗೌರೀ.... ಹಿಹಿ ಹಿಹಿ (ಕೈ ಒಡಮುರಿದು ದಿಟ್ಟಿಸಿ ನೋಡುವನು)

**ಗೌರಿ :** ಯಾಕ? ನನ್ಯಾಕ ನೋಡತಿ ಕಣ್ಣ ಪಿಳಕಸದಂಗ.

**ಗೌರೀಶ :** ಯಾಕ ನೋಡತೀನಿ ಅನ್ನೂದಕ ಒಂದು ಅನುಭವದ ಪದಾ ಹೇಳತೀನಿ ಕೇಳು.

ಸುಡುಕಂಡ್ಯಾ ಪರನಾರಿಯಂ ನೋಡದಾ ನರರಾಕ್ಷಸನ ಕಣ್ಗಳಂ ।
ಸುಡುಕಂಡ್ಯಾ ಉಡುಪಿಯ ದೋಸಿ ಬಿಸಿ ಉಪ್ಪಿಟ್ಟಿಲ್ಲದ ಊಗ್ಗಳಂ ।
ಸುಡು ಸುಡುಗಾಡಕ್ಕೆ ಗಂಡನನು ಕಳಿಸಿದಾ ನಿರ್ಭಾಗ್ಯದ ಹೆಣ್ಗಳಂ ।
ಸುಡಬೇಕೈ ಸತಿ ಇಲ್ಲದವನ ಬಾಳಂ ಓ ಗೌರಿ.... ಗೌರೀಶ್ವರಾ..........॥

(ಉಗುಳ ನುಂಗುವನು)

**ಗೌರಿ :** ಉಗುಳ್ಯಾಕ ನುಂಗುತೀಯ ಏನರ ಇದ್ದರ ಹೇಳು, ನಾನು ನನ್ನ ಕೈಲಾದಷ್ಟು ಸಾಯಾ ಮಾಡತೀನಿ,

**ಗೌರೀಶ :** ಕರೇನ......?

**ಗೌರಿ :** ಕರೇವು.

**ಗೌರೀಶ :** ಸುಳ್ಳೇನ ಅಲ್ಲಲ್ಲ........?

**ಗೌರಿ :** ಯಾಕ ನನ್ನ ಮ್ಯಾಲ ಬರಾಸ ಇಲ್ಲೇನು ನಿನಗ?

ಗೌರೀಶ : ಕಾಲಾನ ಅಂಥಾವು, ಬಲಗೈ ಬರಾಸ ಎಡಗೈಗಿಲ್ಲ, ಎಡಗೈ ಬರಾಸ ಬಲಗೈಗಿಲ್ಲ.

ಗೌರಿ : (ಕೈಯಲ್ಲಿ ಉಗುಳಿಕೊಂಡು) ನಿನ್ನ ತಲಿ ಬಡದ ಹೇಳತೀನಿ ಸುಳ್ಳಲ್ಲ

ಗೌರೀಶ : ನಡಿಸಿ ಕೊಡತೀಯಾ ನನ್ನ ಮಾತು?

ಗೌರಿ : ನಡಿಸಿ ಕೊಡತೀನಂತ ಒದ್ದೀ ಮ್ಯಲೆ ಗುಡ್ಯಾಗ ನಿಂತು ಹೇಳಬೇಕೇನು?

ಗೌರೀಶ : ಕೈ ಮ್ಯಾಗ ಕೈ ಹಾಕಿ ಬಿಡು.

ಗೌರಿ : (ಕೈ ಹಾಕಿ) ಇಕಾ.....

ಗೌರೀಶ : (ಕೈ ಬಿಗಿ ಹಿಡಿದು) ಗೌರಿ.... ಆದರ ಆಗಬೇಕು ನಿನ್ನ....

ಗೌರಿ : ಏನ್ನ?

ಗೌರೀಶ : ಉಡಕೀನ.

ಗೌರಿ : ನೀನು.....ನನ್ನ ಉಡಿಕಿ ಮಾಡಿಕೋಬೇಕಂತಿಯ?

ಗೌರೀಶ : ಯಾಕ ಬಾಳಾ ಮಾತಾಡತಿ. ಏನಂತೈತಿ ಸಿರಿವಂತಿಕೆ! ಮುಂಜಾನೆ ಸತ್ತರ ಮಣ್ಣಿಗಿಲ್ಲ.... ಸಂಜಿಗೆ ಸತ್ತರ ಯಣ್ಣಿಗಿಲ್ಲದ ನಿನ್ನ ಉಡಕಿ ಮಾಡಿಕೊಂಡರ ರೊಟ್ಟಿ ಜಾರಿ ಚಿಮಣಿ ಯಣ್ಯಾಗ ಬಿತ್ತ ಅನ್ನೋದು

ಗೌರಿ..... ವ್ಯಾಳೇ ಕೂಡಿ ಬಂದೈತಿ, ಕೈ ಬಿಟ್ಟೀ ಅಂದರೆ ಆಮ್ಯಾಗ ಕಣ್ಣಾಗ ನೀರತಂದೀ. ಸಿರಿತನ ಬಡತನ ಯಾರಿಗೆ ಸ್ಥಿರಾ ಐತಿ ಸುಮ್ನ ಮಾಡಿಕೊಂಡು ಆಳಾಗಿ ದುಡಿದು ಅರಸಾಗಿ ಉಣ್ಣೂನೂ.

ಗೌರಿ : ಬ್ಯಾನಿ ಮೂಳಗ ಆಂಬರದ ಹಳವಂಥ ಹತ್ತಿದಂಗ ತಿರಗಾ ಮುರಗಾ ನನ್ನ ಚಿಂತಿ ನಿನಗ

ಗೌರೀಶ : ಹೌದು ಗೌರಿ, ನನ್ನ ಮನಸ್ಸಿಗೆ ಬಂದ ಹೆಣ್ಣು ಅಂದರ ನೀನ ನೋಡು

ಗೌರಿ : ನಾನೇನ ನಿನ್ನ ಮನಸಿಗೆ ಬಂದಿನಿ ಕರೇವು. ಆದರ.....

ಗೌರೀಶ : ಅಂದರೇನು?

ಗೌರಿ : ಲಿಂಗಾಯತ ಕುಲದ ಹೆಣ್ಣಿಗೆ, ಉಡಕಿ ಆಗಾಕ ಬರೂದಿಲ್ಲ.

ಗೌರೀಶ : ಗೌರಿ, ಇಲ್ಲೇ ತಪ್ಪಿದಿ ನೋಡು. ಅಜ್ಜ ಹಿಡಿದ ಬಡಗಿನ ಹಿಡಿಯಾಕ

ಹೋಗಬ್ಯಾಡ. ಆಗಿನ ಕಾಲ, ಆಗಿನ ಜನಾ ಈಗಿಲ್ಲ ಕೇಳಿಯs ಇಲ್ಲ ಕಿತನಾ "ಬದಲಗಯಾ ಇನ್ಸಾನ" ಪದಾ? ಉಚ್ಚ ನೀಚ ಕುಲದಾಗ ಬೀಗತನಾ ನಡದಾಗ ಒಂದೇ ಕುಲದವರಾದ ನಾವು ಉಡಕಿ ಆಗೂದರಾಗ ತಪ್ಪೇನೈತಿ?

**ಗೌರಿ :** ಒಪ್ಪಿದೆ ಬಿಡು ನಿನ್ನ ಮಾತಿಗೆ....... ಆದರೆ.....

**ಗೌರೀಶ :** ಮತ್ತೇನದು?

**ಗೌರಿ :** ನಿಂದೇನಾಗೇತಿ ಅಂತ?

**ಗೌರೀಶ :** ನಂದs...... ತೊಟ್ಲ, ಕಾರಣ; ಜವುಳಾ, ಅಯ್ಯಾಚಾರ ಅನಾಚಾರ ಎಲ್ಲಾ ಆಗೇತಿ ಮದುವಿನೂ ಆಗಿತ್ತು. ಆದ ಮೂರು ದಿನದಾಗ ಹೇಣತಿ ಮಣ್ಣು ಕಂಡ್ಲು.

**ಗೌರಿ :** ಏ ನಿನ ಗೂಗಿಮಾರಿಯವನ, ನಾನು ಕೇಳಿದ್ದು ಏನರs ಓದೀ ಏನೂ ಅಂತ.

**ಗೌರೀಶ :** ಇಲ್ಲ ಬಿಡು ನಾ ಹೊಸದಾಗಿ ಕಲ್ತಿದ್ದಂದರ ಸೈ ಮಾಡಾಕ, ಮೋಟಾರ ನಂಬರ ಓದಾಕ. ಇದು ಅಲ್ಲದ ತಬಲಾ ಪೆಟಗಿ ಬಾರಸಾಕ ಇತ್ತಿತ್ತಲಾಗಿ ಕಲತೀನಿ.

**ಗೌರಿ :** ತಬಲಾ ಪೆಟಗಿ ಬಾರಸ್ತೀಯಾ?

**ಗೌರೀಶ :** ಹೂಂನ ನನ್ನ ಹುಣಸಿ ಹುಳಿ.....

**ಗೌರಿ :** ಹಂಗರ ಓಟು ತಬಲಾ ಬಾರಿಸು ನೋಡತೀನಿ

**ಗೌರೀಶ :** ಇಲ್ಲೆಲ್ಲೈತಿ ತಬಲಾ ಹೊಟ್ಟಿ ಬಾರಸಂದೇನ.....?

**ಗೌರಿ :** ಹಂಗ ಬಾಯಿಲೆ ಬಾರಿಸಲ್ಲ ಗತ್ತ ಬರೂದಿಲ್ಲೇನು?

**ಗೌರೀಶ :** ಬರದೇನು ಮಾಡೇವು.....

**ಗೌರಿ :** ಬಾರಿಸು ಹಂಗರ,

**ಗೌರೀಶ :** ತಾ.....ತಾ....

**ಗೌರಿ :** ಏನ ಕೊಂಡದಿ?

**ಗೌರೀಶ :** ಕೊಡೂದಲ್ಲ, ಇದಕ್ಕೆ ತಬಲಾದ ಸಪಾಟ ಅಂತಾರ.

**ಗೌರಿ :** ಹೀಂಗS.....

ಗೌರೀಶ : ಹಂಗS ಕೇಳು, ತಾತಾ ಕಿಡಿಕಿಡಿತಾ, ಇಕಡಿತಾ ಚಿಕ್ಲಿತಾ ಚ್ಯಾಚಾ..... ಪುರಿತಾ.... ಭಜಿತಾ.... ತಿಂತಿನತಾ ದಿನ ದಿನತಾ.... ತಿನಕಿನತಾ.... ದಿನದಿದ.... ತಿನ್ನಕಿನ್ನ... ಇಕಡಿತಾ ಹಿಡಿ ಕಿಡಿತಾ... ತಗಿನ.... ತಗಿನ್....

ಗೌರಿ : ತಗಿನ ನಿನ ತೆಲಿ ಇಲ್ಲದವನ.....

ಗೌರೀಶ : ನನ್ನ ತೆಲಿ ಹೊಳಿಸಾಲ ಕುಂಬಳಕಾಯಿ ಆಗೇತಿ, ಕಾಣವಲ್ಲದೇನು?

ಗೌರಿ : ಅಂದರ ತಾಳ ಯಾವುದು?

ಗೌರೀಶ : ಎದ್ದೋಡಿ

ಗೌರಿ : ಬಾರಸಾಂವ

ಗೌರೀಶ : ಬಿದ್ದಾಡಿ, ಕೇಳಾಕಿ ಬುದ್ಧಿಗೇಡಿ.

ಗೌರಿ : ಸಾಕುಮಾಡ ಚಂದಗೇಡಿ.

ಗೌರೀಶ : ಗೌರಿ.... ನನಕ್ಕಿಂತ ಚಂದಗೇಡಿ ಯಾರ ಅದಾರ ಈ ಊರಾಗ, ರೂಪದಾಗ ಕಾಮ, ನೋಡಾಕ ಚಂದ್ರಾಮ, ಮೈಕೈಲೆ ಭೀಮ, ದಿನಾ ತಗಿತೆನಿ ಸಾಮ. ನಾ ಪ್ಯಾಟ್ಯಾಗ ಹೊಂಟೀನಿS ಅಂದ....ರ

ಗೌರಿ : ಹಳೆ ನಾಯಿ ಬೆನ್ನು ಹತ್ತಾವು ಅಂದೇನ......

ಗೌರೀಶ : ಏ ಗೌರಿ ಸುಮ್ನು ಹೊಟ್ಟಿ ಕಿಚ್ಚಿಗೆ ಮಾತಾಡಬ್ಯಾಡ. ನನ್ನ ಮಾಡಾಕ ಭರಮ ದೇವರ ಬುದ್ದೆಲ್ಲಾ ಖರ್ಚು ಆಗೇತಿ.

ಗೌರಿ : ಅಯ್ಯ ನನ್ನ ಚೆಲುವ ಅಡಿಗಿ ಮನೇನ ನೆಲವ! ಏನ ಕಳಾನ ಮಾರಿಮ್ಯಾಗ, ಕುಣ್ಯಾಗ ಕುಂತ ಹೆಣಾ ಆಗ್ಯಾನ ನಡಿಬಾರದ ಮನಿಗೆS..... ಕತ್ತಿ ಹೊರುವಷ್ಟು ಬಟ್ಟಿ ಬಿದ್ದಾವು !

ಗೌರೀಶ : ಅಂತೂ ಪೇಸಗಿ ಮುಂದಕ ಬಿತ್ತನಬಾರದS

ಗೌರಿ : ಏ ಪೇಸಗಿ ಮಾರಿಯವ್ವ ದೌಡನಡಿ ಲಲಿತವ್ವನ ಗುಣಾ ನೋಡಿಯ ಇಲ್ಲ....?

ಗೌರೀಶ : ಆಗಲಿ ನಡಿ। ನಮ್ಮ ಹಣೇಬರಾ, ಶೆಟವಿ ಬೀಸೂಕಲ್ಲು ಗೂಟದಿಂದ ಬರದಾಳ ಯಾರಿಗೇನನ್ನೂದ..... (ಹೋಗುವರು).

===***=====***===

## ಪ್ರವೇಶ – ೩

(ಸೂರ್ಯೋದಯ ಶುಕಪಿಕಗಳ ಮಧುರ ಧ್ವನಿ, ವಿಹಾರಾರ್ಥವಾಗಿ ವಸಂತ ಮತ್ತು ಅಶೋಕ ಒಂದು ದಿಬ್ಬದ ಮೇಲೆ ಕುಳಿತಿದ್ದಾರೆ..... ಎದುರಿಗೆ 'ಜುಳು ಜುಳು' ಹರಿಯುವ ಹಳ್ಳ)

**ಅಶೋಕ :** ಅರುಣೋದಯದ ಸೊಬಗನ್ನು ನೋಡು ಮಿತ್ರಾ.....ಜಗದ ಜೀವಿಗಳಿಗೆಲ್ಲ ಪ್ರತಿನಿತ್ಯ ಕೆಲಕಾಲ ವಿಶ್ರಾಂತಿಯನ್ನಿತ್ತು, ತಾನು ಅವಿಶ್ರಾಂತವಾಗಿ ದುಡಿಯಲು ಮೂಡಿಬರುತಿಹನು ಲೋಕಮಿತ್ರ ! ಮಂದ ಮಾರುತನು ಹೊತ್ತೈತರುವ ಕುಸುಮ ಕಂಪನು ಮೂಸಿಸುವಂತೆ ಶುಕಪಿಕಗಳ ರಸದಿಂಪನ್ನು ಆಲಿಸುತೆ ಬಾನಂಗಳದಿ ಅಡಿ ಇಡುತ ನಡೆದಿಹನು ವಿಶ್ವನೇತ್ರ. ಇದರಿಂದಾಗಿ ಎಂತು ಕ್ರಾಂತಿಗೊಂಡಿದೆ ನೊಡು ನಿಸರ್ಗದೇವಿಯ ಚಿತ್ರ.

**ವಸಂತ :** ಆದರೇನು ದೀನ ದಲಿತರ ದೃಷ್ಟಿಯಲ್ಲಿ ಇದೊಂದು ದುಶ್ಚಿತ್ರ. ಸಿರಿವಂತರಿಗೆ ಸಂತೋಷವನ್ನುಂಟು ಮಾಡುವ ಈ ಸುಪ್ರಭಾತ ಬಡವನ ಬಾಳಿಗೊಂದು ಆಘಾತ! ಮುಂದಿನ ಯಾವದೋ ರೀತಿಯ ಬಾಳಿನ ಭೀಕರ ಸನ್ನಿವೇಶದ ಅರಿವಿಲ್ಲದೆ ಮಲಗಿರುವ ಬಡವರಿಗೆ ಅರುಣೋದಯದಿಂದ ಮತ್ತೆ ಪ್ರಾರಂಭವಾಗುವನು. ಅಸನ–ವಸನಗಳ ವ್ಯಸನ ಒಪ್ಪುತ್ತು ಉಂಡು ನಿಪ್ಪತ್ತಾಗಿರುವ ಹೆಣ್ಣು ಹೆತ್ತ ಬಡ ಕುಟುಂಬಗಳ ಪ್ರದರ್ಶನ ಅಂಗವಿಕಲರ ನಿದರ್ಶನ ! ಒಂದೇ ಎರಡಕ್ಕೆ ನೂರಾರು ಸಹಸ್ರಾರು.

**ಅಶೋಕ :** ಮಿತ್ರಾ ನೀನಾಡುವ ಮಾತೊಂದು ಅಸಂಬದ್ಧ ಅತಿರೇಕ.

**ವಸಂತ :** ಅಸಂಬದ್ಧದ ಅತಿರೇಕವಲ್ಲ ಸತ್ಯದ ಪ್ರತೀಕ ! ಆ ಅಂತ್ಯದಲ್ಲಿ ನಿಂತು ನೋಡಿದರೆ ಕಾಣುತಿದೆ ಬಡವರ ಜೀವನದ ಕಷ್ಟ ಕಾತುರ! ಉದಾಹರಣೆಗಾಗಿ ನನ್ನ ಜೀವನವನ್ನೇ ನೋಡುತ್ತಿರುವಿಯಲ್ಲ, ಬಾಳುವೆಯ ಬೆಟ್ಟದಲ್ಲಿ ಅದೆಷ್ಟೋ ಕಷ್ಟ ಕಾರ್ಪಣ್ಯಗಳ ಕಂಟಿಗಳನ್ನು ಕಡಿಯುತ್ತ ನಡೆದರೂ ಸುಖದ ಸೀಮೆ ಸಿಗದಾಗಿದೆ.

**ಅಶೋಕ :** ವಸಂತ ಆ ಹಳ್ಳದ ದಡದಲ್ಲಿ ಹುಲುಸಾಗಿ ನಿಂತ ಕರಕಿಯನ್ನು ನೋಡು, ತೆರೆಪಿಲ್ಲದೆ ಬರುವ ತೆರೆಗಳಿಗೆ ತಲೆಬಾಗಿ ಮತ್ತೆ ತಲೆಯೆತ್ತಿ

ಚಿರಕಾಲ ಬಾಳುವದಿಲ್ಲವೆ ಅದು ! ಅದರಂತೆ ನಾವೂ ಕಷ್ಟವನು ಸಹಿಸಲೇಬೇಕು. ಕಷ್ಟ ಕಡಲು ಮಥನದಿಂದಲೇ ಸುಖದ ನವನೀತ ದೊರಕುವದು.

**ವಸಂತ :** ಸುಖ.... ವಿಧಿಯ ವಿಸ್ತ್ರತ ವಿರಾಟ ವೈತರಣಿಯ ತೆರೆಗಳಿಗೆ ಸಿಕ್ಕು ಬಾಳ ನೌಕೆ ಹೊಯ್ದಾಡುತ್ತಿರುವಾಗ, ಸುಖದ ದಡ ದೊರೆಯುವದಾದರೂ ಎಂತು?

**ಅಶೋಕ :** ಬಾಳ ಕಡಲಲಿ ಬರುವ ಸುಖ–ದುಃಖಗಳ ಪೆರ್ದೆರೆಗಳಿಗೆ ಹಿಗ್ಗದಲೆ ಕುಗ್ಗದಲೆ ನೌಕೆಯನ್ನು ಸಾಗಿಸಿಕೊಂಡು ಹೋಗುವದು ನಾವಿಕನ ಮುಖ್ಯ ಕರ್ತವ್ಯವಲ್ಲವೆ?

**ವಸಂತ :** ಕರ್ತವ್ಯ ಕೈಗೂಡಲು ಪರಿಸ್ಥಿತಿಯ ಅನುಕೂಲ ಬೇಡವೇ? ಕಾಲನ ಕೋಣದುಸುರಿನಂತೆ ಬಾಳನೌಕೆಗೆ ಎಡೆಬಿಡದೆ ಬೀಸುತಿದೆ ಪ್ರತಿಕೂಲದ ಬಿರುಗಾಳಿ ! ಇದಕಂಡು ಪೆರ್ದೆರೆಯುಂತೆ ಸ್ಥಿತಿವಂತರು ನಗೆ ನೆಗೆದು ಹಾಕುತಿಹರು ಕೈಚಪ್ಪಾಳೆ ! ಈ ಹೇಸಿ ಬಾಳಿನಲ್ಲಿ ಈಸಿ ಈಸಿ ಸಾಕಾಗಿ ಸಾಕಾಗಿ ಹಚ್ಚಿರುವೆವು ಪಾಳಿ !

**ಅಶೋಕ :** ನಿರಾಶೆಯ ಸರಧಿಯಲ್ಲಿ ಮುಳಗದಿರು ವಸಂತ. ಜೀವನದಲ್ಲಿ ಇಷ್ಟೊಂದು ಅಧೀರತೆ ತರವಲ್ಲ ತರುಣರಿಗೆ. ಮತ್ತೇನು ಊರಲ್ಲಿ ಎಲ್ಲರೂ ಕ್ಷೇಮವಷ್ಟೆ?

**ವಸಂತ :** ಎಲ್ಲರೂ ಕ್ಷೇಮ. ಆದರೆ ತಂಗಿಯ ಮದುವೆಯ ಸಮಸ್ಯೆಯು ಒಂದು ಬಗೆಹರಿಯದ ಬೆಟ್ಟವಾಗಿ ಪರಿಣಮಿಸಿದೆ.

**ಅಶೋಕ :** ಎಲ್ಲಿಯಾದರೂ ವರ ನೋಡಿ, ತೀವ್ರ ಮದುವೆ ಮಾಡಿ ಬಿಡುವದೊಳಿತು.

**ವಸಂತ :** ನೀನನ್ನುವದು ನಿಜ, ಆದರೆ ವರದಕ್ಷಿಣೆಯ ಕಿಚ್ಚು ಹೃದಯದೊಳಗಿನ ರಕ್ತವನು ಕತಕತನೆ ಕುದಿಸಿ, ಮನಿಗೆ ಮಸಿಲೇಪಿಸಿ ಗತಿ ಕಾಣದ ಪಥಿಕನನ್ನಾಗಿ ಮಾಡುತ್ತಿರುವದು.

**ಅಶೋಕ :** ನಿಜ, ನಿಜ ಎಲ್ಲಿಯವರೆಗೆ ಜನಾಂಗವು ವರದಕ್ಷಿಣೆಯ ಭೂತದಿಂದ ಬಿಡುಗಡೆ ಹೊಂದುವದಿಲ್ಲವೋ ಅಲ್ಲಿಯವರೆಗೆ ಅವಿವಾಹಿತ ತರುಣಿಯರಿಗೆ ಅನರ್ಥ ತಪ್ಪಿದ್ದಲ್ಲ, ದೇಶದ ಉನ್ನತಿಯೋ ಅವನತಿಯೋ, ಎತ್ತ ನೋಡಿದರತ್ತ ಸಮಾಜದ ಗಿರಿಯಿಂದ ಧರೆಯ

ಮೇಲೆ ಧುಮುಕಿ ಧಾವಿಸುತ್ತಲಿದೆ ವರದಕ್ಷಿಣೆಯು ವೈತರಣಿ. ಆ ವೈತರಣಿಯ ದಡವ ಸೇರಲು ಶಕ್ತಿ ಸಾಲದೇ ಮುಳುಗುತಿವೆ ಅದೆಷ್ಟೋ ಬಡ ಬಾಂಧವರ ಬಾಳ ನೌಕೆಗಳು. ಕದನವನ್ನುಂಡು ಕಾಲಕಳೆಯುವ ಕಡುಬಡವರು, ಕಲಿತವರಿಗೆ ಸಾಕಷ್ಟು ವರದಕ್ಷಿಣೆ ಕೊಡಲಾಗದೇ ಕಾಲನರಮನೆ ಸೇರಲು ಸಿದ್ಧನಾದ ವಯೋವೃದ್ಧನಿಗೆ ವಧುವನ್ನು ಕೊಟ್ಟು ಮದುವೆ ಮಾಡಿದ ಕೆಲ ದಿನಗಳಲ್ಲಿಯೇ ಮುದುಕ ಪತಿ ತೀರಿ ಅವಳು ಆಜನ್ಮ ಪರಿಯಂತ ವಿಧವೆ.

**ವಸಂತ :** ಅಶೋಕ, ರೂಪಗುಣಗಳನ್ನು ಅಂತಸ್ತು ಸಂಪತ್ತುಗಳ ಪಾತ್ರಗಳಲ್ಲಿ ಅಳೆದು ನೋಡುವ ಪ್ರಪಂಚದ ಅಂಗಡಿಯಲ್ಲಿಟ್ಟು ವರವೆಂಬ ವಸ್ತುಗಳಲ್ಲಿ ನೀನೂ ಒಬ್ಬ, ಇಂದು ಸುಂದರ ಶಬ್ದಗಳಿಂದ ಆದರ್ಶದ ಬಗ್ಗೆ ಉದ್ದುದ್ದ ವಾಕ್ಯಗಳಿಂದ ಮಾತನಾಡುವ ನೀನೇ ನಾಳೆ ವರದಕ್ಷಿಣೆ ಇಲ್ಲದೆ ವಧುವಿನ ಕೊರಳಿಗೆ ತಾಳಿ ಕಟ್ಟುವಿಯಾ?

**ಅಶೋಕ :** ನುಡಿದಂತೆ ನಡೆಯದ ಮೂರ್ಖ ನಾನಲ್ಲ ವಸಂತ, ಹೆಣ್ಣು ಹೆತ್ತ ತಂದೆ ತಾಯಿಗಳ ಕಷ್ಟದ ಕಣ್ಣೀರಿನಲ್ಲಿ ಮಿಂದು ಬರುವ ಆ ಹೇಸಿ ವರದಕ್ಷಿಣೆಯ ಆಸೆ ನನಗೆ ತಿಲಮಾತ್ರವಿಲ್ಲ. ನೀನು ಅನ್ಯಥಾ ಭಾವಿಸದಿದ್ದರೆ ನಿನ್ನ ತಂಗಿಯ ಕೈಹಿಡಿದು ನನ್ನ ನಿಮ್ಮ ಸಂಬಂಧ ಬೆಳೆಸಲು ಸಿದ್ಧನಿರುವೆ.

**ವಸಂತ :** ಕಲ್ಪನೆಯ ಕುಸುಮಗಳಿಂದ ಕಟ್ಟಿದ ಮಾತಿಗೆ ಮಾಲೆಯಲ್ಲವಷ್ಟೇ ನಿನ್ನ ಈ ಮಾತು?

**ಅಶೋಕ :** ವಸಂತ ವ್ಯರ್ಥವಾಗದ ತರ್ಕದ ತೊಟ್ಟಿಲಲ್ಲಿ ಮನವೆಂಬ ಮಗುವಿಟ್ಟು ತೂಗದೆ ಒಪ್ಪಿಕೋ ಈ ಸಂಬಂಧಕ್ಕೆ !

**ವಸಂತ :** ಆಗಲಿ, ಕುಂತ ಹರನು ಕಣ್ತೆರೆದು ವರವಕೊಡಲು ಸಿದ್ಧನಾದಾಗ ಭಕ್ತನಾದವನು ಕಣ್ಮುಚ್ಚಿ ಕುಳಿತರೆ ಹಾಲಕೆಚ್ಚಲ ಬಳಿಯಿದ್ದ ನೊರೆ ಹಾಲು ಕುಡಿಯದ ತಿಳಗೇಡಿ ತೊನೆಸಿ ಎಂದಾರು ತಿಳಿಯದ ಬಾಲಕರು ಕೂಡ.

**ಅಶೋಕ :** (ಕೈ ಗಡಿಯಾರ ನೋಡಿ) ನಡೆ, ಈಗಾಗಲೇ ಹತ್ತುಗಂಟೆಯಾಯಿತು. ಊಟ ತೀರಿಸಿಕೊಂಡು ಸಮಾರಂಭಕ್ಕೆ ಹೋಗುವಾ.......

**ವಸಂತ :** (ಕುಳಿತವನು ಏಳುತ್ತ) ನಾನು ಇಂದು ರಾತ್ರಿಗೇನೆ ಮೇಲ್‌ನಿಂದ

ಊರಿಗ ಹೋಗುವೆ. ನೀನು ಯಾವುದಕ್ಕೂ ಹೋದೊಡನೆಯೇ ಕಾಗದ ಬರೆ.

**ಅಶೋಕ :** ಆಗಲಿ..... (ಹೋಗುವರು)

## ಪ್ರವೇಶ – ೪

### ರಸ್ತಾ

(ಬಳೆಗಳ ಸರವನ್ನು ಬಗಲಿಗೆ ಹಾಕಿಕೊಂಡು, ಬಂದು ಕೈಯಲ್ಲಿ ಬಳೆಗಳ ಮುಷ್ಟಿಗಳನ್ನು ಹಿಡಿದ ಖಾಸೀಮನ ಪ್ರವೇಶ)

**ಖಾಸೀಮ :** ಹತ್ತೇರೀ ಬಳೀದು ವ್ಯಾಪಾರ ಮೇ ಮಟ್ಟೀ.... ಸಂಃಜಿತಕ್ ಗಲಿಗಲಿ ತಿರುಗಿದರೂ ನಹಿ ಮಿಲತಾ ಖಾನೇಕೊ ರೋಟಿ. ಬನಮೆ ಗಂಟಾಭಿ ನಹಿ ಹೈ ಮುಝೆ ಧಂದೆಮೆ ಚುಟ್ಟಿ.... ಲೇಕಿನ್ ಹೋತಾ ಹೈ ಭೇ ಪೂಟಕೆ ಉದಾರಕಾ ಪಟ್ಟಿ. ಆಬ್ ಹೋಗಯಾ ಹೈ ಪೇಠ ಕುಂಬಳಕಾಯಿದು ಸೊಟ್ಟಿ.... ಕ್ಯಾ ಕರನಾ? ನಹಿಹ್ಯೆ ಮೇರಾ ನಶೀಬಮೆ ಶಕ್ಕರಕಿ ಘಟ್ಟಿ ಯಾ ಅಲ್ಲಾ ಯಾ ಖುದಾ.... ಇಸ್ ಗಾಂವಕೂ ಬಂದಾಗಿನಿಂದ ಹಿಡಿದ ನಮಗ ಸಾಡೇಸಾತೀಚ ಬೆನ್ನ ಹತ್ತ್ಯೆತಿ ಮೇರಾ ಹೋಲಸೇಲ ಬಳೀರ್ ದುಕಾನ ಬರಬಾದ್ ಹೋಗಯಾ. ಔರ ಸಾತ ಬೀಬಿ ಭೀ ಮರಕರ್ ಖಾನೆ ಕೂ ತರಾಸ್ ಸೋನೇಕು ತರಾಸ್..... ಇಸ್ ಗಲೀಮೆ ಗೋರಿ ಅಂತ ಏಕ ಪೋರಿ ಹೈ. ಮೇರಾ ದಿಲ್ ಅಕೀದು ಮ್ಯಾಲ ಕುಂತ್ಯೆತಿ. (ಗಡ್ಡ ತೀಡಿ ಕೊಳ್ಳುತ್ತ)ಯಾ ಅಲ್ಲಾ ಇದಕೆ ಬಂದೆ ಯಹ ಪ್ರಾರ್ಥನಾ ಮಾಡತ್ಯೆತಿ ಓ ಗೋರಿಗೂ ನಮ್ಮದು ಬೀಬಿ ಮಾಡಿಬಿಡಿ ! (ಉಸಿರು ಹಾಕಿ) ವಖ್ತುತೊ ಹೋಗಯೆ..... ಇನ್ನೊಂದು ದೋನ್ ಗಲೀ ತಿರಿಗಿ ಮನಿಗೆ ಜಾಯೆಂಗ......

**ಗೌರಿ :** (ಬಂದು) ಏ, ಏ, ಬಳಿಗಾರಾ ಬ್ಯಾನಿ ಬಂದ ಬೆಕ್ಕಿನಂಗ ಹಂಗs ಹೊಂಟೀಯಲ್ಲ ಒದುರಿಕೊಂತ ನಿಂದರ ಓಟು.

**ಖಾಸೀಮ :** ಮಾಫ್ ಕರ್ನಾ ಗೋರಿದು ಬಾಯಿ (ಗಂಟು ಇಳಿಸಿ ಮೇಲೆ ಮುಖ ಮಾಡಿ) ಯಾ ಅಲ್ಲಾ ತೇರಿನಾಮ ಲೇಖರ ಬೈಟತಾ ಹು..... (ಕೂಡುವನು)

ಗೌರಿ : (ಕೊಡುತ್ತ) ಚಂದಾ ಚಂದನ ಬಳಿ ತಗಿ.....

ಖಾಸೀಮ : (ಬಳಿ ಮುಷ್ಟಿಗಳನ್ನು ಝಾಡಿಸುತ್ತ) ಇದು ಜಗನ್ಮೋಹಿನಿಯ ಬಳಿ, ಇದು ಹೈ ಅನಾರಕಲಿ.... ಔರ ಹೈ ಪ್ಯಾರಜೀತ.... ನಿಮದೂಗೆ ಯಾವದೂ ಇಡ ಅಂದೀ.....?

ಗೌರಿ : ಯಾವುದನ್ನಾಕೇನು.... ಇಡು ಕೈಲೆ ಓಟು ಚೆಂದನು ನೋಡಿ ಇಡು ರೊಕ್ಕದ ಮಾರಿ ನೋಡಬ್ಯಾಡಾ.

ಖಾಸೀಮ : ಕ್ಯಾ ಬಾತ ಆಡತಿ ಹೈ ಗೋರಿದ ಬಾಯಿ..... ನಾನ ರೊಕ್ಕಾದು ಮಾರಿ ಕಭಿ ನಹಿ ದೇಖತಾ..... ನಿಮಗೆ ಮಾರಿದೇಖಕರ್ ಇಡತಾ ಹು..... ನಿಮ್ಮಂಥವರ ಮೇಲೆ ಇದ್ರೆ ಎಲ್ಲಿಗೆ ಹೋಗ್ತೈತಿ.

ಗೌರಿ : ನೀನನ್ನೂದ ಖರೆ.... ಆದರ ಇವತ್ನಾಳೆ ನಿನ್ನಂಗ ಕೆಲಸಾ ಮಾಡೋರ ಯಾರು ಅದಾರ?

ಖಾಸೀಮ : (ಬಳಿಗಳನ್ನು ತೆಗೆಯುತ್ತಾ) ಗೋರಿದುಬಾಯಿ, ಈ ಖಾಸೀಮ ಅಂದರೆ ದೇವರಂತಾ ಆದಮಿ (ಉಸಿರು ಹಾಕಿ) ಕ್ಯಾಕರನಾ ನಶಿಬ ಬುರಾ ಹೈ.

ಗೌರಿ : ಏನದ?

ಖಾಸೀಮ : ಧಂದೆಕಾ ಮಾತು ! ದಿನಾ ದಿನಾ ಗಲೀ ಗಲೀ ತಿರಗಿದರೂ ಇಸ ಧಂದೆಸೆ ಹಾಥಮೆ ಒಂದು ರೂಪಿಯಾ ನಹಿ ಹೈ, ಇಸ್ ತರಹ ಬೇಪರ್ ಆದರೆ ರೂಪಿಯಾ ಕೈಸಾ ಜಮಾ ಹೋನಾ ಔರ ಮೇರಾ ಮದವಿ ಕಬ್ ಹೋನಾ?

ಗೌರಿ : ಇನ್ನಾ ನಿನ್ನಿಂದ ಆಗಿಲ್ಲs......?

ಖಾಸೀಮ : ಆಗಿತ್ತು....ಅದರ..... ಏಕ ವರ್ಷಮೆ ಕಾಲರಾ ಬ್ಯಾನಿ ಬಂದು ಮರ್‌ಗಯಿ.

ಗೌರಿ : ಅಂದರs?

ಖಾಸೀಮ : ಸತ್ತು ಹೋಯಿತು?

ಗೌರಿ : ಅಯ್ಯs ಪಾಪ! ಇನ್ನೊಂದು ಹೆಣ್ಣರ ನೋಡಿ ಮದವಿ ಮಾಡಿಕೋಬೇಕು?

ಖಾಸೀಮ : ಹಮಾರೆ ಹಾಥಮೆ ಏನೈತಿ ಗೋರಿಬಾಯಿ ಎಲ್ಲಾನು ಖುದಾಗ ಅಂದರೆ ದೇವರಿಗೆ ಸೇರಿದೆ?

ಗೌರಿ : ಅದಕ್ಯಾಕ ಇಷ್ಟ ಚಿಂತಿ ಮಾಡತಿ? ಹೆಣ್ಣು ಅಂದರ ಇವತ್ನಾಳೆ ಪ್ಯಾಟ್ಯಾಗ ಸಿಗೂ ಹಣ್ಣಾಗ್ಯಾವ, ದುಡಿದು ಹಾಕಾಕ ನೀನೊಂದು ಗಟ್ಟಿ ಇದ್ದರ ಆತು.

ಖಾಸೀಮ : ಕೈ ಕೊಡು ಬಾಯಿ... (ಕೈಯನ್ನು ಹಿಚುಕುತ್ತ ಕಣ್ಣು ಮುಚ್ಚಿ) ಯಾ ಖುದಾ ಐಸಿ ಖೂಬ ಸೂರತ್‌ಕಿ ಸ್ತ್ರೀ ಬನಾಯಿ ಹುಯಿ ತೇರೆಹಾಥ ಚೂಮನಾ ಪರಿವರ್ದಿಗಾರ..... (ಗೌರಿಯ ಕೈಯನ್ನು ಬಾಯಿಯವರೆಗೆ ಒಯ್ಯುವನು)

ಗೌರಿ : (ಕೈ ಕೊಸರಿ) ಕೈ ಕಡಿತಿ ಏನಲಾ ಸಾಬಾ......

ಖಾಸೀಮ : ಕುಚ್ ಫಿಕರ್ ಮಾಡಬ್ಯಾಡ ಬಾಯಿ..... ಸುಭೋಸೆ ಬೋಣಿಗಿ ನಹಿಥಾ ಅದಕ್ಕೆ ಅಲ್ಲಾಕೋ ನಮಸ್ಕಾರ ಕರಕೆ ಬೆಪಾರ ಸುರಕರ್ತಾ ಹು....!

ಗೌರಿ : (ಮತ್ತೆ ಕೈ ಕೊಡುತ್ತ) ಹೀಂಗಂದ್ಯಾ..... ಇಡ ಹಗರ....!

ಖಾಸೀಮ : (ಮತ್ತೆ ಕೈ ಹಿಚುಕುತ್ತ ಭುಜದವರೆಗೆ ಕೈಯಾಡಿಸುವನು) ಹರೇ ಕೈ ಬಾಳಾ ದಿಗ್ ಹೈ ನಾಡಿ ಸೈಲಮಾಡಬೇಕಾಗತೈತಿ.

ಗೌರಿ : ಏನಲಾ ಮೂಳಾ, ಮ್ಯಾಲ ಕೈಯಾಡಸ್ತೀಯಾ, ಕಣ್ಣಿಗಿಣ್ಣ ಆದಾವ ಇಲ್ಲ. ಹಂಗ್ಯಾಕ ಮಾಡತಿ ಕಣ್ಣಿಲ್ಲದವ ಗ್ವಾಡಿ ಸವರಿದಾಗ.

ಖಾಸೀಮ : ಗೋರಿಬಾಯಿ, ನಿಮ್ಮ ಕೈ ಬಿರಸ್ ಹೈ.

ಗೌರಿ : ಏಳS ಮೂಳಾ ಏಳ, ಸುಣ್ಣಾ ಹಚ್ಚೋರಂಗ ಮೈಯಲ್ಲಾ ಸವರಿದರ ಕೈ ಮೆತ್ತಗಾಗತಾವೇನು ! ಅಂದರೆ ಹೆಣ್ಣಮಕ್ಕಳ ಮೈ ಕೈ ನೋಡಿಯs ಇಲ್ಲ ಮುಂಗೈಯಾಗ ಇಡತಿಯೋ, ಮೊಳಕೈಯಾಗ ಇಡತಿಯೋ ಬಳೀನ.

ಖಾಸೀಮ : ಹಿಂಗ್ಯಾಕ ಬಾಯಿ ಬಿಡತಿ ಬಾಯೀ.....ಬಾಯಿ ಐತೆ ಏನ ಮುಸುರಿದು ಗಡಗಿ ಐತೆ?

ಗೌರಿ : ಇನ್ನೊಂದಿಬ್ಬರಿಗೆ ಹಿಂಗ ಆಡಸು ಬಾಯಿ, ಮುಸರಿ ಗಡಿಗ್ಯಾಕ, ಕೈಯಾಗ ಬರತಾವ ಗುದ್ದಲಿ ಹಿಡಕಿ

ಖಾಸೀಮ : (ಕೈ ವಡಮುರಿಯುತ್ತ) ಯಾ ಅಲ್ಲಾ.....

ಗೌರಿ : ಏ ಮುದಗಲ್ ಮುಲ್ಲಾ, ಸುಮ್ನ ಹೋಗ್ತೀಯೋ ಏನ ಸರಸಲೆ ಗದ್ದಿಗಲ್ಲ.....

ಖಾಸೀಮ : ಅರೇ ಗೋರಿ..... ಚಾಂದಕಿ ಜೈಸೆ ತುಮಾರೆ ಮಾರಿ..... ತುಮ್ ಹೋ ಮೇರಿ ಪ್ಯಾರಿ !!

ಗೌರಿ : ತೆಲಿ ಕೆಟ್ಟೈತೇನಲಾ ಸಾಬಾ.... ಇಷ್ಟೋತ್ತನಾ ಬಾಯಿ ಬಾಯಿ ಅಂದೀ, ಈಗ ಪೋರಿ ಪ್ಯಾರಿ ಅಂತ ಸುರು ಮಾಡಿದೇನ, ಈ ಪೋರಿ ಕೊಡಬಾರದ ಒಂದು ಕೈ ಕೊಟ್ಟರs ತಿಂಗಳದಿನಾ ರಗತಾಕಾರಿ.

ಖಾಸೀಮ : ಗುಸ್ಸಾ ನಕೋ ಪ್ಯಾರಿ..... ತುಮ್ ಆವೋ ಬನಕರ್ ಮೇರೆ ಘರಕಿನಾರೀ......

ಗೌರಿ : ಇದೇನ ಹಚಗೊಂಡ ಕುಂತ್ಯೆತ ತಾಯಿ ನ್ಯಾರಿ, ನಾಷ್ಟಾ ಅಂತ ! ಏ ಸಾಬ ಒಳ್ಳೇ ಮಾತಿಲೆ ದಾರಿ ಬಿಡತೀಯ ಏನ ಗಡ್ಡಾ ಕಿತ್ತ ನೀರ ಒಲಿಗೆಹಾಕ ಅಂದೆ......!

(ಗೌರೀಶ ಬಂದು ಮರೆಯಾಗಿ ನಿಲ್ಲುವನು)

ಖಾಸೀಮ : ನೀನು ಏನು ಮಾಡಿದರೂ ಮಂಜೂರ ಹೈ ಪ್ಯಾರಿ (ಮೈ ಮೇಲೆ ಹೋಗುವನು)

ಗೌರಿ : ಅಯ್ಯs ಇದರ ಸೊಕ್ಕ ಸೂರ‍್ಯಾಡಲಿ ಮೈಮ್ಯಾಗ ಎಚ್ಚರೈತಿ ಸರಿಯಲಾ ಸುದಾಮಾ..... (ಎದಿಗೆ ಮೊಳಕೈಯಿಂದ ತಿವಿದು ಹೋಗುವಳು)

ಖಾಸೀಮ : ಅಹಹಾ ಗೋರಿ ಕ್ಯಾ ಮಾರ್‌ದಿಯಾ ಎದಿಕಾ ಎಲವು ತೋಡ್‌ದಿಯಾ (ಎದಿಗೆ ಕೈ ಹಚ್ಚಿಕೊಂಡು ನರಳುತ್ತ ಬಳೆಯ ಸರವನ್ನು ಹೆಗಲಿಗೆ ಹಾಕಿಕೊಂಡು ಹೋಗುವನು)

ಗೌರೀಶ : ಯಾಕ್ರಿ ಸಿರ್‌ಕೂಬ ಖಾಸೀಮಸಾಬ ನತ್ತ ಬೇಡೇತೇನ್ರಿ ಜೀವ?

ಖಾಸೀಮ : (ತಿರುಗಿ ನೋಡಿ) ಅರೆ ಗೋರೇಶಪ್ಪ ಬಹುತ್ ಮುಂದೆ ಹೋಗಬ್ಯಾಡ್.....

ಗೌರೀಶ : ನಾ ಎಲ್ಲಿ ಹೋಗೇನಿ ಇದ್ದಲ್ಲೇ ಅದೀನಿ

ಖಾಸೀಮ : ಬಹುತ್ ಚಾಷ್ಟಿ ಅಚ್ಚಾ ನಹಿ.......!

ಗೌರೀಶ : ಏ ಸುಮ್ನS ಹೋಗಲೆ ಅಚ್ಚಾದಮಾರಿ ಲುಚ್ಚಾಸಾಬ..... ಹಿಂದುಗಡೆ ಆದಿ ತೋಬಾ ತೋಬಾ.

ಖಾಸೀಮ : ಅಬ್ ಹೋಗ್ತಾಹು.... ಆಗೇ ದೇಖತಾ ಹೂ ಏಕಹಾಥ್ (ಹಾದು ಹೋಗುವನು).

ಗೌರೀಶ : ಇವನ ಕಣ್ಣು ಗೌರಿ ಮ್ಯಾಲೆ ಇದ್ದಾಂಗ ಕಾಣಸ್ತೈತಿ. ಮ್ಯಾಗ ಒಂದು ಹೂವಿಗೆ ಎರಡು ಗುಂಗೀಹುಳಾ ಗಂಟಬಿದ್ದಾಂಗಾತು. ಆಗಲಿ ಇವತ್ತಂತು ಅಶೋಕಪ್ನೋರ ಮಗುವಿಗೆ ಹೋಗಬೇಕಾಗೈತಿ. ಬಂದ ಮ್ಯಾಲ, ಈ ಸಿರ್ ಕರಾಬಿ ಖಾಸೀಮಸಾಬ, ಸೀರಿ ಕಂಡ್ರ ಓಡೋಹಾಂಗ ಮಾಡಿ ಗೌರೀನ ಗಂಟ ಹಾಕ್ಕೊಳ್ಳಿಲ್ಲಾಂದರ ನನ್ನ ಹೆಸರು ಗೌರೀಶನS ಅಲ್ಲ!

ಗೌರಿ : (ಬರುತ್ತ) ಅಯ್ಯS ನೀ ಇನ್ನಾ ಇಲ್ಲೇ ಅದಿಯೇನು? ಎಲ್ಲಾರೂ ಮೋಟಾರ ಹತ್ತಿ ನಿನ್ನ ದಾರೀ ನೋಡಾಕ ಹತ್ಯಾರು, ಡಾಗದಾರ ಶರತ್‌ಪ್ಪಗ ದೌಡ ಬರಾಕ ಹೇಳಿದೇ ಇಲ್ಲ?

ಗೌರೀಶ : ಅವರು ನಾಳೆ ಅಕೀಕಾಳ ಹೊತ್ತಿಗೆ ಕಾರು ತಗೊಂಡು ಬರ್ತಾರಂತ

ಗೌರಿ : ಮತ್ತ ಬಾಜಿಯವರು.....?

ಗೌರೀಶ : ಅವರು ಕಂಟಾಬ್ಲೆರ ಕೇರ್‍ಯಾಗ ಹಾದು ಮನಿಕಡೆ ಹ್ವಾದರಂತ ನಡಿ.

ಗೌರಿ : ನಡಿ ಹಂಗರ..... (ಹೋಗುವರು).

## ಪ್ರವೇಶ–೫

## ಹೇಮಂತನ ಮನೆ

(ಮದುವೆಯ ದೃಶ್ಯ ಮಂಗಲವಾದ್ಯದ ನಿನಾದ ತೂರಿತೂರಿ ಕೇಳಿ ಬರುತ್ತಿದೆ ಆಚಾರ್ಯರು ಮಂತ್ರಪಠಣ ಮಾಡುತ್ತಿರುವ ಅಶೋಕನು ಗಂಗಾನ ಕೊರಳಿಗೆ ಮಾಂಗಲ್ಯ ಕಟ್ಟುತ್ತಲಿರುವನು. ಅಶೋಕನ ತಂಗಿ ಲಲಿತಾ ಮದುಮಗಳ ಹಿಂಬದಿಯಲ್ಲಿಯೇ ನಿಂತಿದ್ದಾಳೆ)

ಆಚಾರ್ಯ : ವಸಂತ ಎಲ್ಲರಿಗೂ ಅಕ್ಕೀಕಾಳು ಮುಟ್ಟಿದುವೇನ್ರಿ?

ವಸಂತ : ಕೊಡುವದು ನಡದೈತ್ರಿ..... (ಕೂಡಿದ ಜನರಿಗೆ ಅಕ್ಕಿಕಾಳು ಕೊಡುತ್ತಿರಬೇಕು).

**ಗೌರೀಶ :** (ಕೂಡಿದ ಜನರಿಗೆ) ದೈವಕ್ಕೆಲ್ಲಾ ಅಕ್ಕಿಕಾಳು ಮುಟ್ಟಿದವೇನ್ರಿ? ಹೂ ಆಚ್ಯಾರ ಮಂತ್ರಾ ಸುರು ಮಾಡ್ರಿ.

**ಆಚಾರ್ಯ :** ಆಗಲಿ.... ತದೇವ ಲಗ್ನಂ ಸುದಿನಂತೂ ದೇವಾ
ತಾರಾ ಬಲಂ ಚಂದ್ರಂ ಬಲಂತೂ ದೇವಾ
ವಿದ್ಯಾ ಬಲಂ ದೈವ ಬಲಂತೂ ದೇವಾ
ಕಾರ್ಯಾರ್ತ ಸದಾ ಮಂಗಲಂ

(ಎಲ್ಲರೂ ಅಕ್ಷತೆ ಹಾಕುತ್ತಿರುವಾಗ, ಕಾರಿನ ಹಾರ್ನ ಶಬ್ದ ಕೇಳಿ ಬರುವದು ಆಧುನಿಕ ಉಡುಪಿನಲ್ಲಿ ಶರತ್‌ನ ಪ್ರವೇಶ)

**ವಸಂತ :** ಬನ್ನಿ ಬನ್ನಿ ಆಚಾರ್‍ರ ಅಶೋಕನ ಸ್ನೇಹಿತರು ಬಂದಾರ ಅಕ್ಷತಾ ಕೊಡಿರಿ.

**ಗೌರೀಶ :** (ಸ್ವಗತ) ಹಲಗಿಗೂಡ ಬಾ ಅಂದರ ಹಜಾಮನಗೂಡ ಬರ್ತಿನಂದಂಗ ನಿಬ್ಬಣ ಕೂಡ ಬರದಾ ತಾನೊಬ್ಬನS ಬಂದ್ನೋಡು.

**ಶರತ್ :** (ವಕ್ರ ದೃಷ್ಟಿಯಿಂದ ನೋಡುತ್ತ ನಿಲ್ಲುವನು. ಅಶೋಕ ಗಂಗಾ ಹಿರಿಯರೆಲ್ಲರಿಗೂ ನಮಸ್ಕರಿಸುತ್ತ, ಶರತ್‌ನೆಡೆಗೆ ಬಂದು, ಮಿತ್ರರೀರ್ವರೂ ಕೈ ಕುಲುಕುತ್ತ) ದಿವ್ಯ ದಾಂಪತ್ಯದಾನಂದದಲಿ ಅಡಿ ಇಟ್ಟಿರುವ ಆತ್ಮೀಯ ಸ್ನೇಹಿತಾ, ನಿನ್ನ ಭವಿಷ್ಯ ಬಂಗಾರವಾಗಲಿ ದಾಂಪತ್ಯ ಸುಖದ ತೌರಾಗಲಿ (ಜೇಬಿನಿಂದ ಕಾಗದದ ಒಂದು ಪೊಟ್ಟಣವನ್ನು ನೂರಾ ಒಂದು ರೂಪಾಯಿಗಳನ್ನು ತೆಗೆದು ಇದೋ ಮಿತ್ರಾ ಈ ಸಂದರ್ಭದ ಸವಿನೆನಪಿಗಾಗಿ ತೆಗೆದುಕೊ ನೂರಾ ಒಂದು ರೂಪಾಯಿಗಳ ಕಾಣಿಕೆಯನ್ನು ! (ಅಶೋಕನು ಕಾಗದದ ಪೊಟ್ಟಣವನ್ನು ಬಿಚ್ಚುತ್ತ ಹೋಗುವನು ಎಂಟ್ಹತ್ತು ಹಾಳೆಗಳಿಂದ ಸುತ್ತಿದ್ದ ಮಗುವಿನ ಹಾಲು ಹಾಕುವ ಕಾಜಿನ ಮೊಲೆಯನ್ನು ನೋಡಿ ಎಲ್ಲರೂ ನಗುವರು).

**ಕೆಂಪೇಗೌಡ :** (ಇದ್ದಲ್ಲಿ ಬಣ್ಣದವ) ನವದಂಪತಿಗಳ ಬಾಳಿನಾಕಾಶದಲ್ಲಿ ತೀವ್ರವೇ ಶಿಶುಚಂದ್ರಮನು ಉದಯಿಸುವದನ್ನು ಸೂಚಿಸುವ ಸಂಕೇತವನ್ನೇ ತಂದಿದ್ದಾರೆ ಕಾಣಿಕೆಯಾಗಿ..........

(ಗಂಗಾ ಅಶೋಕ ಒಳಗೆ ಹೋಗುವರು)

**ಹೇಮಂತ :** ವಸಂತ, ಫರಾಳದ ವ್ಯವಸ್ಥೆ ಮಾಡುನಡೆ ಕುರ್ಚಿಯ ಮೇಲೆ ಕುಳಿತು

(ಶರತ್‌ನನ್ನು ಕುರಿತು) ತಮ್ಮ ಪೂರ್ತಿ ಪರಿಚಯವಾಗಲಿಲ್ಲ.

**ಶರತ್ :** ನಾನು ಅಶೋಕನ ಆತ್ಮೀಯ ಮಿತ್ರರಲ್ಲೊಬ್ಬ ವೃತ್ತಿಯಲ್ಲಿ ಡಾಕ್ಟರ ಅಶೋಕನ ಸಹಕಾರದಿಂದ ವಿದ್ಯಾನಗರದಲ್ಲಿಯೇ ಪ್ರ್ಯಾಕ್ಟೀಸ್ ನಡಿಸಿರುವೆ ಹೆಸರು ಶರತ್ ಎಮ್.ಡಿ.

**ಗೌರೀಶ :** (ಸ್ವಗತ) ಹೌದಲೇ ಹರಕದಮಸಡಿ ಅವನS ಮುಡಿ ನೀರಾಗ ಹಾಕಿ ಕೊಂಡು ಕೂಡಿ ಕೌದ್ಯಾಗ ಹಾಕ್ಲಿಕೊಂಡು ನಡಿ, (ಅಶೋಕನು ಬಾಸಿಂಗ ಹಾರ ಮುಂತಾದವುಗಳನ್ನು ತೆಗೆದಿಟ್ಟು ಬಂದು ಕೂಡುವನು).

**ಶರತ್ :** (ಕೆಂಪೇಗೌಡನನ್ನು ಕುರಿತು) ಇವರ ಪರಿಚಯ.....

**ಹೇಮಂತ :** ಇವರ ಹೆಸರು ಕೆಂಪೇಗೌಡ ವೃತ್ತಿಯಿಂದ......

**ಗೌರೀಶ :** (ಸ್ವಗತ) ಡಾಂಬರಿನ ಏಜಂಟ.

**ಹೇಮಂತ :** ವ್ಯಾಪಾರಸ್ಥರು.

**ವಸಂತ :** (ಟ್ರೇದಲ್ಲಿ ಕಾಫಿ ಕಪ್ಪುಗಳನ್ನಿಟ್ಟುಕೊಂಡು ಬಂದಳು.) ತೆಗೆದುಕೊಳ್ಳಿ ಶರತ್.... (ಎಲ್ಲರೂ ಕಾಫಿ ಕುಡಿಯುತ್ತಿರುವಾಗ)

**ಶರತ್ :** (ಸಿಗರೇಟ ಸೇದಿ) ಸುರಿಯುತ್ತಿರುವದೆನ್ನ ಸರ್ವಾಂಗದ ಮೇಲೆ ಪಂಚಬಾಣದ ಪುಷ್ಪ ಸೃಷ್ಟಿ । ತಲೆದೂಗುತ್ತಿದೆ. ಕಂಡು ಸರಸಿ ಜೋದ್ಭವನ ಸುಂದರ ಸೃಷ್ಟಿ ॥ ಎಷ್ಟು ಯತ್ನಿಸಿದರೂ ಕೇಳದೆ ಮನವೆಂಬ ಮರ್ಕಟ ಹಾಕುತಿದೆ ಗಂಗಾನ ಮೇಲೆ ಕಾಮದೃಷ್ಟಿ !!! ಎಂಥ ದವಳ ಸೌಂದರ್ಯ, ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಲೆಳೆಸುತಿದೆ ಅಂತರ್ಯ !!! ಅಂಬರದ ಅಪ್ಸರೆ ಅಲ್ಲವೀ ಅಬಲೆಯರು (ಸಿಗರೇಟ ನೆಲಕ್ಕೆ ಹಾಕಿ, ಬೂಟಿನಿಂದ ಒರೆಸಿ) ಅಶೋಕನ ಸೋದರಿ ಪತಿ ತೀರಿದರೂ ಕಂಡವರ ಕೈ ಹಿಡಿದು ತಿರುಗುವ ಹಾದರೆ, ಅಶೋಕನಂತೂ ಒಡನಾಡಿ ತಿಳಿಯದೆ ತಿರುಗುವ ತಿಳಿಗೇಡಿ ಅವಕಾಶ ನೋಡಿ ಹಾಕುವೆ ಇವರೆಲ್ಲರಿಗೂ ಮೋಡಿ (ಹೋಗುವನು).

## ಪ್ರವೇಶ–೬

### ಹೇಮಂತನ ಮನೆ

**ಹೇಮಂತ :** (ಹೊರಗಿನಿಂದ ಬರುತ್ತ) ಗಂಗಾ ಏನು ಮಾಡುತ್ತಿರುವಿಯಮ್ಮ?

**ಗಂಗಾ :** (ಬಂದು) ಕರೆದಿ ಏನಪ್ಪ?

**ಹೇಮಂತ :** ಹೌದು ಮಗು ನೀನೆಲ್ಲ ಸಾಮಾನುಗಳನ್ನು ತೆಗೆದಿಟ್ಟುಕೋ, ಗಾಡಿಯ ವೇಳೆ ಸಮೀಪಿಸಿತು, ವಸಂತನಿಲ್ಲವೆ?

**ಗಂಗಾ :** ಅಣ್ಣ ಮತ್ತು ಅವರು ಕೂಡಿಯೇ ಹೊರಗೆ ಹೋಗಿರುವರು ಇಷ್ಟರಲ್ಲೇ ಬರಬಹುದು.

**ಹೇಮಂತ :** ಗಂಗಾ ದುಃಖಿಯಾದ ಈ ದರಿದ್ರ ತಂದೆಯ ಮನೆಯಲ್ಲಿ ದುಡಿದು ದಣಿಯಬೇಕಾಯಿತು ಅಲ್ಲವೇನಮ್ಮ?

**ಗಂಗಾ :** ಅನ್ಯಥಾ ಭಾವಿಸಬೇಡ ಅಪ್ಪಾ ನಾನೇನು ಹೊರಗಿನವಳೇ? ಬೊಟ್ಟಾಗಿದ್ದ ನನ್ನನ್ನು ಬೆಟ್ಟವಾಗಿ ಮಾಡಿದ ತಮ್ಮನ್ನು ಬಿಟ್ಟು ಹೋಗುತ್ತಿರುವ ಕೆಟ್ಟ ಕಟುಕಿ ನಾನು.

**ಹೇಮಂತ :** ಹಾಗೆಂದರೆ ಹೇಗಮ್ಮಾ..... ನಿನ್ನ ಮುಂದಿನ ಬಾಳಬಾಂಧನದಲ್ಲಿ ಭಾಗ್ಯ ಭಾಸ್ಕರನು ಭವ್ಯ ಕಿರಣಗಳಿಂದ ನಿನ್ನ ಜೀವನ ಬೆಳಗಬೇಕು. (ದುಃಖ) ನೀನೈದು ತಿಂಗಳ ಮಗುವಿರುವಾಗಲೇ ಸ್ವರ್ಗದ ಸದನ ಸೇರಿದಳು ನಿನ್ನ ತಾಯಿ, ಆ ನಿನ್ನ ಹಡೆದವ್ವ ಈಗ ಇದ್ದಿದ್ದರೆ ನಿನ್ನ ಅವಿಶ್ರಾಂತ ದುಡಿಮೆ ಕಂಡು ಎಷ್ಟು ಕನಿಕರ ಪಡುತ್ತಿದ್ದಳೋ ಕಾಣೆ ಅದೆಷ್ಟು ಆನಂದ ಪಡುತ್ತಿದ್ದಳೋ ಕಾಣೆನಮ್ಮ.

**ಗಂಗಾ :** ಅಪ್ಪಾ ಅಂದಿನಿಂದ ಇಂದಿನವರೆಗೆ ಚಂದಾಗಿ ನೋಡಿಲ್ಲವೆ ನೀವು? ತಾವೀಗ ಹಗಲಿರುಳು ಊಟದ ಪರಿವೆ ಇಲ್ಲದೆ ನನ್ನ ಚಿಂತೆಯಲ್ಲಿಯೇ ಕುಳಿತರೆ ಮೊದಲೇ ಬೆಂದುಬೆಂಡಾದ ದೇಹಕ್ಕೆ ಅಕಾಲವೃದ್ಧಾಪ್ಯತಂದುಕೊಳ್ಳಬೇಡಿ ಹೆಚ್ಚಿಗೆ ಹೇಳಲು ನಾನಿನ್ನೂ ಚಿಕ್ಕವಳು.

**ಹೇಮಂತ :** ಜ್ಯೋತಿ ಮುಟ್ಟಿದ ಬತ್ತಿಯು ಜ್ಯೋತಿಯಾಗಿಯೇ ಬೆಳಕು ನೀಡುವಂತೆ, ನಿನ್ನ ಹೆತ್ತ ತಾಯಿಯ ಮುತ್ತಿನಂಥ ಸದ್ಗುಣಗಳೆಲ್ಲವೂ ನಿನ್ನಲ್ಲಿ ಒಡಮೂಡಿವೆ.

**ಗಂಗಾ :** ಅಪ್ಪಾ, ನಿಮ್ಮ ಮಾತೊಂದು ಅಮೃತ ಬಿಂದು ನಾ ನಿಮ್ಮ ಕೈಗೂಸಲ್ಲವೇ?

**ಹೇಮಂತ :** ಹೌದಮ್ಮ ಇಲ್ಲಿಯವರೆಗೆ ನೀನೆನ್ನ ಕರುಳಿನ ಕೈಗೂಸಾಗಿದ್ದಿ ಆದರೆ ನೀನಿಂದು ಹೊರಟು ನಿಂತಿರುವಿ ಗೃಹಿಣಿಯಾಗಿ ಗಂಡನ ಮನೆ ಸೇರಲು.

**ಗಂಗಾ :** ಅಪ್ಪಾ ನನ್ನ ಬಗ್ಗೆ ನೀವೇನು ಚಿಂತಿಸಬೇಡಿ ಅಗಣಿತ ಐಶ್ವರ್ಯವಿದ್ದರೂ ಅಹಂಕಾರ ಅಣುಮಾತ್ರ ವಿರದು. ನನ್ನ ಪತಿದೇವರಿಂದ ನನಗಾವ ತೊಂದರೆಗಳು ಬರಲಿಕ್ಕಿಲ್ಲವೆಂದು ಭಾವಿಸಿರುವೆ.

**ಹೇಮಂತ :** ಮಗು ದೊಡ್ಡಸ್ತಿಕೆಗೆ ಮೆರಗು ತರುವದು ಮಣಿ ಹೇಮಾದಿಗಳು. ಸದ್ಗುಣಗಳು ಹುಟ್ಟಿ ಬೆಳೆದ ಬಿಟ್ಟು ಹೋಗುವ ನಿನಗಿನ್ನು ಅವರೇ ತಂದೆ ತಾಯಿಗಳು, ಐಶ್ವರ್ಯವಿದ್ದ ಕಾಲದಲ್ಲಿ ಈ ರೀತಿ ಬಡವರ ಮೇಲೆ ದಯ ತೋರುವಂತಹ ಜನರು ಜಗತ್ತಿನಲ್ಲಿ ದೊರೆಯುವದು ದುರ್ಲಭ. ಈ ನಿನ್ನ ಪತಿದೇವರ ಮನೆಯಲ್ಲಿ ಸೌಭಾಗ್ಯಗಳು ಸ್ಥಿರವಾಗಿರಲಮ್ಮ (ವಸಂತ ಅಶೋಕ ಬರುವರು).

**ಅಶೋಕ :** (ಕೂಗುತ್ತ) ವಸಂತ, ಗಾಡಿಯ ವೇಳೆಯಾದಂತಾಗಿದೆ.

**ಗಂಗಾ :** (ತಂದೆಯನ್ನು ಅಪ್ಪಿ) ಅಪ್ಪಾ.....

**ಹೇಮಂತ :** (ದುಃಖ) ಗಂಗಾ ಹೆಣ್ಣಾಗಿ ಹುಟ್ಟಿದ ನೀನು, ತಂದೆಯ ಮನೆ ತ್ಯಾಜ್ಯ ಮಾಡಿ, ಸಾಯುಜ್ಯ ಸ್ವರೂಪವಾದ ಪತಿಗೃಹಕ್ಕೆ ಹೋಗುತ್ತಿರುವಿ. ಪತಿ ಗೃಹವೇ ಸ್ತ್ರೀಯರ ವ್ಯಕ್ತಿತ್ವ, ಆಚಾರ ವಿಚಾರಗಳನ್ನು ಕಂಡು ಹಿಡಿಯುವದರ ಪರೀಕ್ಷಾಭವನ. ಅಲ್ಲಿ ನೀನು ಎಲ್ಲ ವಿಷಯಗಳಲ್ಲಿಯೂ ಉತ್ತೀರ್ಣಳಾಗಿ ನಿನ್ನ ಯಾವದೇ ಆಚರಣೆಯಲ್ಲಿ ಅನ್ಯರು ಬೆರಳಿಟ್ಟು ತೋರಿಸದಂತೆ ನಡೆದು, ಹಡೆದ ಮನೆಗೂ ಕೀರ್ತಿ ತರುವದು ನಿನ್ನ ಆದ್ಯ ಕರ್ತವ್ಯಮ್ಮಾ

**ಗಂಗಾ :** ಅಪ್ಪಾ, ಪತಿಯ ಮನೆಯಲ್ಲಿ ಹೊತ್ತಿಸಿದರೆ ಊದು ಬತ್ತಿಯಾಗಿ ತೇದರೆ ಗಂಧದ ಕೊರಡಾಗಿ, ಬಾಳಿನುದ್ದಕ್ಕೂ ಉತ್ತಮಾಂಗನೆಯಾಗಿ ಬಿತ್ತರಿಸುವೆ ನಿಮ್ಮ ಉದಾತ್ತ ತನವನ್ನು. (ವಸಂತನ ಕಡೆಗೆ ಹೋಗಿ) ಅಣ್ಣಾ ಇನ್ನು ಮುಂದೆ ಅಪ್ಪನನ್ನು ಜೋಪಾನ ಮಾಡುವ ಭಾರ ನಿನ್ನದಣ್ಣ. ಮೇಲಿಂದ ಮೇಲೆ ನಿಮ್ಮೀರ್ವರ ಯೋಗ ಕ್ಷೇಮದ ಬಗ್ಗೆ ಕಾಗದ ಬರೆಯುತ್ತಿರು ನಾನಿನ್ನು ಬರಲೆ?

**ವಸಂತ :** ಹೋಗಿ ಬಾ ತಂಗಿ..... ಗಂಡ ಹೆಂಡರೆಂಬ ಹುಟ್ಟುಗಳಿಂದ ಬಾಳ ಕಡಲಿನ ಆಳ ಅರಿತು..... ನಲುಮೆ ನಂಬಿಗೆಯಿಂದ ಸಾಗಿ ನಿಜ್ಜ ಜೀವನ ನೌಕೆಯನ್ನು ನಿನ್ನ ಬಾಳ ನೌಕೆಗೆ ಅಪಕೀರ್ತಿಯ ಹಾವಸು ಹತ್ತದಿರಲಿ, ಎಷ್ಟೇ ಕಷ್ಟ ಕಾರ್ಪಣ್ಯಗಳ ತೆರೆಗಳು ಬಂದು ಮುತ್ತಿದರೂ ಸಹನೆ ಸಹಕಾರದ ಸೂತ್ರದಿಂದ ಸಾಗಿಸು ನಿನ್ನ ಸಂಸಾರ ನೌಕೆಯನ್ನು ಗಂಗಾ.... ತಂಗೀ..... ಸಂಸಾರದಲ್ಲಿ ಮೋಸದ ಮೊಸಳೆಗಳ ವಿಷಕಾರುವ ದುಷ್ಟ ಸರ್ಪಗಳು ಮತ್ಸರದ ಮೀನುಗಳು ಏಳಿಗೆ ಕಂಡು ಸಹಿಸದ ಏಡಿಗಳು ಅಡಿಗಡಿಗೂ ತುಂಬಿರುವವು ಅವೆಲ್ಲವುಗಳಿಂದ ಪಾರಾಗಿ ಬಾಳ್ಗಡಲು ದಡಮುಟ್ಟಿ ಹಾರಿಸು ನಿನ್ನ ಪಾತಿವೃತ್ಯದ ಪ್ರಭಾವ ಪತಾಕೆಯನ್ನು.

**ಗಂಗಾ :** ಅಣ್ಣಾ....

**ವಸಂತ :** ತಂಗೀ.... ನಡೆಯಮ್ಮ ಸೌಭಾಗ್ಯ ಸೂಚಕವಾದ ನಿನ್ನ ಮಾಂಗಲ್ಯಕ್ಕೆ ಮಹದಾಯುಷ್ಯ ವಿರಲಿ. ಪಂಚಪತಿವೃತೆಯರ ಆಶಿರ್ವಾದ ನಿನಗೆ ರಕ್ಷಾ ಕವಚವಾಗಿರಲಿ.

**ಟಾಂಗಾವಾಲಾ :** ಸಾಬ.... ಟೈಮ್.... ಹೋಗಯಾ.....

**ವಸಂತ :** ಅಲ್ಲಿಂದ ಟ್ರಂಕನ್ನು ತೋರಿಸಿ ಆ ಪೆಟ್ಟಿಗೆಯನ್ನು ಒಯ್ದಿಡು

**ಗಂಗಾ :** (ತಂದೆಗೆ ನಮಸ್ಕರಿಸಿ) ಹೋಗಿ ಬರುವೆ ಅಪ್ಪಾ....

**ಹೇಮಂತ :** ಮಗು ನನ್ನಲ್ಲಿ ಆಶೀರ್ವಾದದ ಹೊರತು ಕೊಡಲು ಬೇರೆನೂ ಇಲ್ಲಮ್ಮ.

**ಗಂಗಾ :** ನಿಮ್ಮ ಆಶೀರ್ವಾದವೇ ನನಗೆ ಅಮೋಘ ಆಸ್ತಿಯಪ್ಪ..... ಹೋಗಿ ಬರುವೆನಣ್ಣ.....

(ಹೋಗುತ್ತಿರುವಾಗ)

**ಹಿನ್ನಲೆ :**

ಹುಲ್ಲಾಗು ಬೆಟ್ಟದಡಿ । ಮನೆಗೆ ಮಲ್ಲಿಗೆಯಾಗು ।
ಕಲ್ಲಾಗು ಕಷ್ಟಗಳ ಮಳೆಯ ವಿಧಿಸುರಿಯೆ ।
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ ।
ಎಲ್ಲರೊಳಗೊಂದಾಗು......... ಮಂಕುತಿಮ್ಮ ಡಿ.ವಿ.ಜಿ.

## ಪ್ರವೇಶ–೭

### ರಸ್ತಾ

(ಲಲಿತಾ ಶರತ್ ಟೆನಿಸ್ ಬ್ಯಾಟ ಹಿಡಿದು)

**ಲಲಿತ :** ಶರತ್ ಎಂತಹ ಮನೋಹರವಾದ ಬೆಳದಿಂಗಳು.... ಬೆಳದಿಂಗಳನ್ನು ಪಡೆದ ಭೂದೇವಿ ರಾಗರಂಜಿತವಾದ ಕನ್ಯೆಯಂತೆ ಎಂತು ಬೆಡಗು ಗೊಂಡಿಹಳು ನೋಡಿ! ಎತ್ತ ನೋಡಿದರತ್ತ ತುಂಬಿ ತುಳುಕಿ ಹರಿಯುತ್ತಿದೆ ಸಂತೋಷದ ಕೋಡಿ..... ಆದರೆ.......

**ಶರತ್ :** ಸಂತೋಷದ ಹೊಳೆಗೆ ಆದರೆ ಎಂಬ ಆತಂಕದ ಆಣೇಕಟ್ಟೇನ್ನೇಕೆ ಕಟ್ಟಿದೆ ಲಲಿತಾ..... ಸಿಡಿದು ಬರಲಿ ನಿನ್ನ ಒಡಲ್ನುಡಿ....

**ಲಲಿತ :** ತುಂಬು ಯವ್ವನ ರತಿದೇವಿಗೆ ಸಿರಹೋಲುವ ರೂಪ ವಿದ್ಯೆ ಬುದ್ಧಿಗಳಿದ್ದರೂ ಬಾಲ ವಿಧವೆಯಾದ ಈ ಲಲಿತೆಯ ಬಾಳು ಪ್ರೀತಿಯಿಂದ ಸಾಕಿದ ಶ್ವಾನಕ್ಕಿಂತ ಕೀಳು.

**ಶರತ್ :** ನಿಮ್ಮ ತಂದೆ ಹಣದಾಸೆಗೆ ಎಂಬತ್ತು ವರ್ಷದ ಕಾಮೇಶರಾಯರಿಗೆ ನಿನ್ನ ಕೊಟ್ಟು ಮದುವೆ ಮಾಡದಿದ್ದರೆ ನೀನಿಷ್ಟು ತೀವ್ರ ವಿಧವೆಯಾಗುತ್ತಿರಲಿಲ್ಲ. ತಂದೆ ಮಾಡಿದ ಸಾಲಕ್ಕೆ ಮಗನನ್ನು ತಿಪ್ಪೆಗೆ ಎಳದಂತೆ ನಿನ್ನ ತಂದೆ ತಾಯಿ ಮಾಡಿದ ಪಾಪಕೃತ್ಯಕ್ಕೆ ನೀ ತಾಪ ಪಡಬೇಕಾಗಿದೆ ಲಲಿತಾ. ನೀನೆಷ್ಟು ಅತ್ತು ಅತ್ತು ಬತ್ತಿಯಾದರೂ ಸತ್ತ ಪತಿ ಜೀವವೆತ್ತಿ ಬರಲಾರನು. ಮೇಲಾಗಿ ಮನೆತುಂಬಿದ ಮಡದಿಯ ಸರಸ ಸಲ್ಲಾಪದ ನೆಲ ಕಾಣದ ನಿನ್ನಣ್ಣನು ತಂದೆ–ತಾಯಿಗಳನ್ನು ಕಳೆದುಕೊಂಡು ಪರದೇಶಿಯಾದ ನಿನ್ನ ಪಾಡನ್ನು ನೋಡನು.

**ಲಲಿತ :** ಸ್ತ್ರೀಯರ ಲಿಖಿತವೇ ಇಷ್ಟು, ಪತಿ ಸತ್ತರೆ ಸತಿಯು ಅತ್ತು ಅತ್ತು ಸತ್ತು ಸ್ಮಶಾನ ಸೇರಿದಾಗಲೇ ಅವಳ ಜೀವಕ್ಕೆ ಶಾಂತಿ. ಆದರೆ ಸತಿಯು ಸತ್ತರೆ ಶವ ಸಂಸ್ಕಾರ ಮುಗಿದ ಮರುವಾರದಲ್ಲಿಯೇ ಪತಿಗೆ ಮರು ಮದುವೆ.

**ಶರತ್ :** ಇದಕ್ಕೆನ್ನುವರು ಸ್ವಾರ್ಥದ ಸಮಾಜವೆಂದು. ನಮ್ಮಂತೆ ವಿಧವೆಯರಿಗೆ

ಉಡುಗೆ ತೊಡಿಗೆಗಳಾಸೆ ಉಣಿಸುತಿಸುಗಳಾಸೆ ಪತಿ ತೀರಿದರೆ ರಾಗರತಿಗಳಿಲ್ಲದ ನಿರ್ಜೀವ ನಿಷ್ಪಂದದ ಪುಲಕಳು ಅವಳು?

**ಲಲಿತ :** ಇಷ್ಟು ತಿಳಿಯುವ ಶ್ರೇಷ್ಠ ಸಮಾಜವಿದ್ದಿದ್ದಾದರೆ ಇಂದು ಎಡೆ ಬಿಡದೆ ನಡೆದಿರುವ ಭ್ರೂಣಹತ್ಯಾ, ಬಾಲ ಹತ್ಯಾದಿಗಳಿಗೆ ಎಡೆಯೇ ಇರುತ್ತಿರಲಿಲ್ಲ.

**ಶರತ್ :** ಲಲಿತ..... ಪತಿಯು ತೀರಿದರೆ, ಸನ್ಯಾಸಿಯಾದರೆ ನಪುಂಸಕನಾದರೆ ಧಾರ್ಮಿಕ ನೈತಿಕ ದೃಷ್ಟಿಯಿಂದ ಪತಿತನಾದರೆ ಸ್ತ್ರೀಯ ಬೇರೆಯುವ ನನ್ನ ಮದುವೆ ಮಾಡಿಕೊಳ್ಳಬಹುದೆಂಬ ಸ್ಮೃತಿ ವಚನ ಪ್ರಕಾರ ನೀನು ಮರು ಮದುವೆ ಮಾಡಿಕೊಂಡರೆ ಮನುಷ್ಯ ಜೀವ ಸಾರ್ಥಕ.

**ಲಲಿತ :** ನೀನನ್ನುವ ನುಡಿ ಸತ್ಯ..... ಆದರೆ ಕಂತುವಿನ ಕಾಟದಿಂದ ಕಡೆಗಾಣಿಸಿ ವಿಧವಾ ವಿವಾಹ ಮಾಡಿ ದುಃಖಕ್ಕೀಡಾದ ಅಬಲೆಯರನ್ನು ಸಬಲೆಯರನ್ನಾಗಿ ಮಾಡಿ ಸಂತೋಷದಿಂದಿರುಸುವ ಸಮಾಜವಂತೂ ಇಲ್ಲವೇ ಇಲ್ಲ ಅಂದಾಗ.

**ಶರತ್ :** (ಸ್ವ) ಅಂತೂ ಹಕ್ಕಿಯು ಬಲೆಯಲ್ಲಿ ಬೀಳುವಂತೆ ತೋರುತ್ತದೆ. (ಪ್ರ) ಲಲಿತಾ ಅರಿತೆ ನಾನಿಂದು ನಿನ್ನಂತರಾಳದ ಒಳದನಿಯ ನಿನ್ನ ಒಪ್ಪಿಗೆ ಇದ್ದರೆ ಒಂದು ಮಾತನ್ನು......

**ಲಲಿತ :** ಶರತ್ ನನ್ನ ಎಷ್ಟೋ ಜನ ಸ್ನೇಹಿತರಲ್ಲಿ ತಾವೇ ನನ್ನ ಅಚ್ಚು ಮೆಚ್ಚಿನ.....

**ಶರತ್ :** ನೆಚ್ಚಿನ ಸ್ನೇಹಿತನೆಂದಿಯಾ? ಲಲಿತಾ ನೀನು ಮನಸ್ಸು ಮಾಡಿದರೆ ಮಂಗಳ ಲೋಕದ ಅಂಗಳದಲ್ಲಿ ಮಲ್ಲಿಗೆ ನಡುವೆ ಈ ಶರತ್‌ನು ನಿನಗಾಗಿ ತನ್ನ ಹೃದಯದ ಗದ್ದುಗೆಯಲ್ಲಿ ಸ್ಥಳಕೊಡಲು ಸಿದ್ಧನಾಗಿರುವನು.

**ಲಲಿತ :** ನಿಮ್ಮಂಥ ಗಣ್ಯ ಪುರುಷರ ಪ್ರೇಮ ಪಡೆಯುವ ಪುಣ್ಯ ನನಗಿದೆಯೇ?

**ಶರತ್ :** ಲಲಿತಾ..... ನಿನೇನ್ನ ಬಾಳಿಗೆ ಬೆಳಕು ನೀಡುವ ರತ್ನ ದೀಪವೆಂದರಿತು ನಿನ್ನ ರೂಪವನ್ನು ಶೇಖರಿಸಿಕೊಂಡಿರುವೆ ಜೀವನ ನೌಕೆಗೆ ತಕ್ಕ ಸಂಗಾತಿಯೆಂದು.

**ಲಲಿತ :** ಕಾಮ ಕಾವೇರಿದಾಗ ಅವರ ಶಾಂತಿಗಾಗಿ ಬೆಲ್ಲದಂತಹ ಮಾತಾಡಿ, ಆಮೇಲೆ ಅಬಲೆಯರನ್ನು ಕೈ ಕಲ್ಲುಮಾಡಿ ಎಸೆಯುವದು ಪುರುಷರ ಸ್ವಭಾವ.....

**ಶರತ್ :** ಕಾಣುವ ಕನಸುಗಳನ್ನೆಲ್ಲ ಆಘ್ರಾಣಿಸಿ ಬೀಸಿ ಬೀದಿಗಳೆಯುವ ಹೇಸಿ ಕಾಮುಕ ನಾನಲ್ಲ. ಇದೋ ಈ ಅಷ್ಟದಿಕ್ಕುಗಳ ಪಂಚ ಮಹಾಭೂತಗಳ, ನಭವೇರಿ ಸಾಗಿರುವ ಶೀತಲ ಚಂದ್ರಮನ ಸಾಕ್ಷಿಯಾಗಿ ನಿನ್ನನ್ನು ವೈಧವ್ಯತನದಿಂದ ಮುಕ್ತ ಮಾಡಿ ಪುನಃ ಪ್ರಾಣಿ ಗ್ರಹಣ ಮಾಡಿಕೊಳ್ಳುವೆನೆಂದು ವಚನ ಕೊಡುವೆ.

**ಲಲಿತ :** ಡಾಕ್ಟರ.....ನನ್ನ ಸುಖಜೀವನದ ಸದನದ ಅಡಿಗಲ್ಲಿನ "ಶಂಕು ಸ್ಥಾಪನೆ" ಇಂದು ನಿಮ್ಮಿಂದಲೇ ಆಯಿತು.

**ಶರತ್ :** ಇಷ್ಟಕ್ಕೆ ಸಂತೋಷ ಪಟ್ಟರೆ ಆಗದು ನಮ್ಮ ಮುಂದಿನ ಬಾಳು ನಂದನವಾಗಿರಬೇಕಾದರೆ, ನಮ್ಮ ಸಂತೋಷ ಸದನ ಸಂಪತ್ ಸೌಭಾಗ್ಯಗಳಿಂದ ಶಿರಯೆತ್ತಿನಿಲ್ಲಬೇಕಾದರೆ, ಇಂದಿನ ತಳಹದಿ ಗಟ್ಟಿಯಾಗಿ, ಬಾಳ ಹಾದಿ ಹಸನಾಗಬೇಕು.

**ಲಲಿತ :** ನೀನನ್ನುವ ಮಾತು ನಿಜ ಆದರೆ ನಮ್ಮ ಪ್ರಣಯ ಪಟ್ಟಣದ ಹಾದಿಯಲ್ಲಿ ಬೆಳೆದು ನಿಂತಿರುವವು ಅಣ್ಣ ಅತ್ತಿಗೆಯರೆಂಬ ಮುಳ್ಳು ಕಂಟಿಗಳು.

**ಶರತ್ :** ಅಂಜದಿರು ಅಂಬುಜಮುಖಿ ನೀನೆನಗೆ ಸಹಕಾರಿಯಾದರೆ ಕ್ಷಿಪ್ರದಲ್ಲಿಯೇ ನಿನ್ನ ಅಣ್ಣ ಅತ್ತಿಗೆಯರ ಆನಂದ ಅಗಸದಲ್ಲಿ ಕಾರಸ್ಥಾನದ ಕಾರ್ಮೋಡ ಗಳನ್ನು ಗುಡುಗಾಡಿಸಿ ಸವಿಗನಸಿನ ಸುಖ ಮಂದಿರದ ಶಿಖರದ ಸಂಚರಿಸುವ ಆವರೀರ್ವರನ್ನು ಅಲ್ಲಿಂದಲೇ ಕಣ್ಣೀರಿನ ಕಡಲಲ್ಲಿ ಕೆಡಹುವೆ.

**ಲಲಿತ :** ಇದು ನಿಶ್ಚಯವೇ.........

**ಶರತ್ :** ಮರೆತು ಚಲಿಸಬಹುದು ಹಿಮಾಚಲ. ಆದರೆ ನನ್ನ ಕಾರಸ್ಥಾನ ನಾಟಕದ ಪ್ರಥಮ ದೃಶ್ಯ.

**ಲಲಿತ :** ಆ ದೃಶ್ಯಕ್ಕೆ ಯಾವ ತಂತ್ರ ಜೋಡಿಸಿರುವಿರಿ?

**ಶರತ್ :** ಲಲಿತಾ, ನಾನು ಡಾಕ್ಟರ, ಸ್ವರ್ಗದಲ್ಲಿ ಸ್ಥಳ ಸಿಗದೆ ಹಿಂದಿರುಗಿದ ತ್ರಿಶಂಕುವಿಗೆ ಪ್ರತಿ ಸ್ವರ್ಗವನ್ನೆ ನಿರ್ಮಿಸಿ ಪ್ರತಿ ಸೃಷ್ಟಿಕರ್ತನೆನಿಸಿಕೊಂಡ ವಿಶ್ವಾಮಿತ್ರ. ಅವರಂತೆ ಮೃತ್ಯುವಿನ ಮುಷ್ಟಿಯೊಳಗಿಂದ ನುಸುಳಿ ಬಂದವನಿಗೆ ಕೂಡ ಆ ಕ್ಷಣದಲ್ಲಿಯೇ ಪ್ರತಿ ಮರಣ ತರುಣ ಪ್ರತಿಕೃತಾಂತನೆಂದರೆ ಈ ಡಾಕ್ಟರನೆಂದು ತಿಳಿ.

**ಲಲಿತ :** ಪ್ರಾರಂಭಿಸಿ ಇಂದೇ ನಿಮ್ಮ ಕಾರ್ಯಕ್ರಮ.

**ಶರತ್ :** ಲಲಿತ ಇಂದಿನಿಂದ ನಾವು ಪ್ರೇಮ ಸಾಮ್ರಾಜ್ಯದ ಸಂತೋಷದ ಸಾಗರದಲ್ಲಿ ಬಂಗಾರದ ಡೋಣಿಯಲ್ಲಿ ಕುಳಿತು ಅಪರಂಜಿ ಹುಟ್ಟಿನಿಂದ ಡೋಣಿಯನ್ನು ಚಲಾಯಿಸುತ್ತ ನಮ್ಮ ಜೀವನ ಬೆಳಗಿಸೋಣ.

**ಪದ**

**ಲಲಿತ ರಾಗ : ಮಾಲಕಂಸ ತಾ:ಕವಾಲಿ**

ಮಧುಕರ ಬಾ । ಮಧುಕರ ಬಾ.........
ಮಧುವನು ಸವಿಯಲು ಮುದದಲಿ ಬಾ ॥ ಪ ॥
ವಿಧವೆಯ ಬಾಳಿನ । ಸುಧೆಯನು ಸುರಿಯುತೆ ।
ಸದಮಲನೇ ನೀ ವಿಧವಿಧದಲಿ ಬಾ
ಸತಿಪತಿಗಳಾಗಿ ಬಾಳೋಣ ಬಾ ॥ (ಹೋಗುವರು)

## ಪ್ರವೇಶ–೮

## ಅಶೋಕನ ಮನೆ

(ಗಂಗಾ ಈಶ್ವರನ ಫೋಟೋದ ಮೇಲೆ ಪುಷ್ಪಗಳನ್ನು ಹಾಕಿ ಮಂಡೆಯೂರಿ ಕುಳಿತು)

**ಗಂಗಾ :** ಜಗದೀಶ್ವರಾ, ಪತಿಯೇ ಪರದೈವವೆಂದು ನಂಬಿ ವಿಶ್ವದ ವಿಶಾಲ ಸಾಗರದಲ್ಲಿ ತೇಲಿಬಿಟ್ಟಿರುವ ನನ್ನ ಬಾಳ ನೌಕೆಯ ಪಥ ಭ್ರಷ್ಟವಾಗದಂತೆ ನೋಡಿಕೋ ತಂದೆ..... (ಬಾಗಿ ನಮಿಸುವಾಗ ಅಶೋಕನು ಹೊರಗಿನಿಂದ ಬಂದು ಅವಳ ಮುಂದೆ ನಿಂತು)

**ಅಶೋಕ :** ಭಕ್ತೆ ನಿನ್ನ ಮನೋಭೀಷ್ಟವನ್ನು ಪೂರ್ಣ ಮಾಡಿರುವೆ ಏಳು.

**ಗಂಗಾ :** (ಮುಗುಳ್ನಗೆಯಿಂದ ಏಳುತ್ತ) ಸಾಕು ಬಿಡಿ ಪರಿಹಾಸ್ಯ.

**ಅಶೋಕ :** ಪರಿಹಾಸ್ಯವಲ್ಲ ಗಂಗಾ. ನನ್ನ ಮನಸ್ಸಿಗೆ ಉಲ್ಲಾಸ.

**ಗಂಗಾ :** ಏತಕ್ಕಾಗಿ ಸ್ವಾಮಿ?

**ಅಶೋಕ :** ಯಾರಿಗಾಗಿ ಇಷ್ಟೊಂದು ಭಕ್ತಿ ಪರವಶ.....

**ಗಂಗಾ :** ಪರಮಾತ್ಮ ಸ್ವರೂಪಿಯಾದ ತಮಗಾಗಿ.

**ಅಶೋಕ :** ಏನೆಂದು?

**ಗಂಗಾ :** ನಿಮ್ಮ ಪಾದ ಧೂಲಿ ಸದಾ ನನ್ನ ಹಣೆಯ ಕುಂಕುಮ ತಿಲಕವಾಗಿರಲೆಂದು.

**ಅಶೋಕ :** ನಿನ್ನ ಹೃದಯವೆಷ್ಟು ಪಾವನ । ನೀತಿಯ ನೀರಿನೊಳು ಸ್ನಾನ ಮಾಡಿ ನಿನ್ನ ಹೃದಯವೊಂದು ಸ್ವಚ್ಛೀಲ ಅಚ್ಛೋದ ಸರೋವರ, ಒಟ್ಟಿನಲ್ಲಿ ನಿನೇನ್ನ ಪುಣ್ಯರಾಶಿ

**ಗಂಗಾ :** ಪುಣ್ಯಂ ಶಿವನಾನಲ್ಲ. ನಿಮ್ಮ ಆಶೀರ್ವಾದ ಪಡೆದು ಸತಿಧರ್ಮದಿಂದ ನಡೆದು ಹಡೆದವರ ಪಡೆದವರ ಕೀರ್ತಿ ತರಲು ಹೆಣಗುವ ದರಿದ್ರ ದಾಸಿ.

**ಅಶೋಕ :** ನಿನ್ನಷ್ಟಕ್ಕೆ ನೀನು ದರಿದ್ರಳೆಂದರೆ ತೀರೀತೆ? ಕೋಟಿ ಜನ ಸಿರಿವಂತರ ಸಂಪತ್ತಿನ ಸಮುದಾಯ ಕೂಡಾ ನಿನಗೆ ಸಾಟಿಯಾಗಲಾರದು. ಅದೆಷ್ಟೋ ಸಿರಿವಂತರ ಸ್ತ್ರೀಯು ತಂದೆಯ ಸಿರಿ ಸಂಪತ್ತಿನ ಸೌದಾಗರದಲ್ಲಿ ಕಣ್ಮುಚ್ಚಿ ಕುಳಿತು, ಕೈಹಿಡಿದ ಪತಿಯನ್ನೂ ಕಸಕ್ಕಿಂತಲೂ ಕೀಳಾಗಿ ಕಾಣುತ್ತಿರುವರು. ಆದರೆ ದೀನ ದಲಿತರ ಕನ್ಯೆಯರಿಗೆ ಕಷ್ಟವೇ ಅವರ ಇಷ್ಟ ಒಡವೆಯಾಗಿ ದುಃಖದಳ್ಳುರಿಯಲ್ಲಿ ಅನುದಿನ ಬೆಂದು ಪುಟಕ್ಕಿಟ್ಟ ಚಿನ್ನದಂತೆ ಪರಿಶುದ್ಧವಾಗಿ ಬೆಳಗುತ್ತಿದೆ ಅವರಾತ್ಮ.

**ಗಂಗಾ :** ನಿಮ್ಮ ಹೃದಯವೇ ಹಿರಿದು ದೊರೆ, ನೀವು ದೊಡ್ಡವರು.

**ಅಶೋಕ :** ಹೇಗೆ ಹೇಳುವಿ?

**ಗಂಗಾ :** ನಾಲ್ಕೈದು ಸಾವಿರ ವರದಕ್ಷಿಣೆ ಕೊಟ್ಟು ಮನೆಯ ಮುಂದೆ ಮದುವೆ ಮಾಡಿಕೊಡುವರೆಷ್ಟೋ ಜನ ಇರುವಾಗ ಒಂದು ಕಾಸು ವರದಕ್ಷಿಣೆ ಇಲ್ಲದೆ ನನ್ನಂಥ ಬಡವಳ ಕೈ ಹಿಡಿದು ಉದ್ಧರಿಸಿದ್ದು ನಿಮ್ಮ ಹೃದಯದ ಸಿರಿವಂತಿಕೆಯಲ್ಲದೆ ಮತ್ತೇನು ಸ್ವಾಮಿ?

**ಅಶೋಕ :** ಗಂಗಾ, ಸಂಸಾರ ಸಾಗರದಲ್ಲಿ ನಿನ್ನಂಥ ರೂಪ ಗುಣ ಶೀಲಗಳಿಂದ ಕೂಡಿದ ಸತಿಯರಿದ್ದರೆ ಎಂತಹ ವಿಪತ್ತಿನಲ್ಲಿಯೂ ಸಂಸಾರ ಸದ್ಗತಿವೆನಿಸುವದು.

**ಗಂಗಾ :** ಸ್ವಾಮಿ, ಸತಿಯು ಪತಿಯ ನೆರಳಾಗಿರುವದು ಸತಿಧರ್ಮ ಅಂತೆಯೇ

ಪತಿ ಭಕ್ತಿತಳಾದ ಸತಿ ಸಾವಿತ್ರಿಯ ಪತಿಸೇವಾ ತತ್ಪರಳಾಗಿ ಕಾಲಯಮನನ್ನು ಕೂಡ ಜಯಸಿದಳು. ಪತಿಸದನವೆ ಸತಿಗೆ ಸ್ವರ್ಗೀಯ ಶಾಂತಿನಿಕೇತನ.

**ಅಶೋಕ :** ಮಂದಸ್ಮಿತೆ, ನೀನೆನ್ನ ಸುಖ ಸಂಸಾರದ ಸವಿಗಬ್ಬಿನ ಮೇಲಿರುವ ಸವಿಜೇನು ಇಂದೆನ್ನ ಸಂಸಾರ ಅಮೃತದ ಸಾಕಾರ.

**ಗಂಗಾ :** ಪತಿದೇವಾ ಸಂತೋಷದ ಸುದಿನದಲ್ಲಿ ಸವಿಮಾತಿನಿಂದ ಸತಿಯರ ಮುರುಳುಮಾಡಿ ಪ್ರೇಮ ಪುಷ್ಪದ ಸೌರಭವನ್ನು ಹೀರಿ ನಂತರ ಮತ್ತೊಂದು ಪುಷ್ಪವನ್ನು ಬಯಸುವದು ಪುರುಷರ ಸಹಜ ಸ್ವಭಾವ.

**ಅಶೋಕ :** ಗಂಗಾ ಕಾಲಲ್ಲಿಯ ಮಾವಿನ ಮರವನ್ನು ಬಿಟ್ಟು ಆಕಾಶದ ಬೇವಿನ ಮರಕ್ಕೆ ಕೈಯೊಡ್ಡುವ ಮತಿಹೀನ ಮಾನವ ನಾನಲ್ಲ ಆದರೂ ನೀನಂದಂತೆ ಮನುಷ್ಯತ್ವವನ್ನು ಮರೆತು ದುಷ್ಟ ಕಾರ್ಯದಿ ಬೆರೆತು ಅಹಂಕಾರ ಮತ್ತರಾಗಿ ವರ್ತಿಸಿ, ಜೀವನವನ್ನು ನರಕ ಕೂಪವನ್ನಾಗಿ ಮಾಡಿಕೊಳ್ಳುವ ಅಜ್ಞಾನಿಗಳಿಗೇನೂ ಅಭಾವವಿಲ್ಲ ಈ ಭುವನದಲ್ಲಿ.

**ಗಂಗಾ :** ಮಾನವನು ಎಷ್ಟೇ ವಿಚಾರ ಶೀಲಗಳೆಂಬ ಹುಟ್ಟುಗಳಿಂದ ಬಾಳ ನೌಕೆಯನ್ನು ಸಂಸಾರ ಸಾಗರದಲ್ಲಿ ತಲಿಬಿಟ್ಟರೂ, ಒಮ್ಮೊಮ್ಮೆ ಮನುಷ್ಯತ್ವ ಮರೆತು ಭ್ರಮೆಂಯ ತಿರಗುಣಿಯಲ್ಲಿ ಸಿಕ್ಕು ಬಾಳನೌಕೆ ಬುಡಮೇಲಾಗುವದುಂಟು.

**ಅಶೋಕ :** ಅಂಥ ತೊಡಕುಗಳೇನಾದರೂ ಬಂದಲ್ಲಿ ಹಲಸಿನಹಣ್ಣು ಕೊಯ್ದಾಗ ಅಂಟು ಕೈಗುಂಟ ಕೂಡದೆಂದು ಎಣ್ಣೆಯನ್ನು ಹಚ್ಚಿಕೊಳ್ಳುವಂತೆ, ಜ್ಞಾನವೆಂಬ ತೈಲದಿಂದ ಜೀವನದಲ್ಲಿ ಬಂದೊದಗುವ ಎರಡು ತೊಡರುಗಳೆಂಬ ಅಂಟನ್ನು ಬಿಡಿಸಬೇಕು. ಜ್ಞಾನವೇ ಮಾನವನ ಬಾಳಿಗೆ ನಂದಾದೀಪವಲ್ಲವೇ?

**ಗಂಗಾ :** ಶೃಂಗಾರ ಸದನ.....

**ಅಶೋಕ :**

ಬಾಡದಿರಲಿ ನಿನ್ನ ಪೂರ್ಣೇಂದುವದನ ।
ಬಾರೆ ಎನ್ನ ಭಾಗ್ಯಸದನೆ । ನೀನೆ ಪೂರ್ಣ ಚಂದ್ರಮನೆ
ನಾರಿರನ್ನೆ ಭುವನ ಮಾನ್ಯ । ನೀನೆ ಎನ್ನ ಕಣ್ಣ ಚಿನ್ನ
ಆವಪೂರ್ವ ಪುಣ್ಯದಿಂದ । ಪಾವನಾರಿಗಿ ಸತಿಯಳಾದ ।
ಜೀವನ ಸಾರ್ಥಕವ ಗೈದೆ । ದೇವಿ ನೀನೆ ಸುಗಣೆಪೂರ್ಣೆ ॥

**ಗಂಗಾ :** ಪತಿದೇವಾ

**ಅಶೋಕ :** ಏನು......?

**ಗಂಗಾ :** ಜೀವವು ಸಂತೋಷ ಸಾಗರದಲ್ಲಿ ಮುಳು ಮುಳುಗಿ ಎದ್ದರೂ.....

**ಅಶೋಕ :** ಮಾತು ನಿರಾಶೆಯಲ್ಲಿ ಮುಗಿಯಿತಲ್ಲ..... (ಮುಖ ನೋಡಿ)

**ಗಂಗಾ :** ಆನಂದದ ಆಗರದಲ್ಲಿ ಅಳುವಿನ ಅಮಂಗಲವೇಕೆ?

**ಗಂಗಾ :** ವಿಚಾರ ಪಾಂಡಿತ್ಯ ಪೂರ್ಣರಾದ ಪತಿಯೊಂದಿಗೆ ಸಂಸಾರದಲ್ಲಿ ಸದ್ಭಾವನೆ ಕಂಡರೂ ದಿಗ್ಗನೆದ್ದು ನಿಲ್ಲುತಿವೆ ಬಡತನ ಬೇಗೆಯಲ್ಲಿ ಬೆಂದು ಬೇಗುದಿಗೊಳ್ಳುವ ಅಣ್ಣನಿಗೆ ದುಃಖದ ದುಮ್ಮಾನ, ತಂಗಿಗೆ ಸುಖದ ಸೋಪಾನ

**ಅಶೋಕ :** ನೋಡು ಗಂಗಾ ಅದು ಅವರವರ ಅದೃಷ್ಟ ಒಂದೇ ತೋಟದಲ್ಲಿ ಬೆಳೆದ ಕೆಲವೊಂದು ಹೂವುಗಳು ಶಿವನ ಶಿರವೇರುತ್ತವೆ. ಇನ್ನು ಕೆಲವು ಸ್ಮಶಾನಕ್ಕೆ ಸಾಗಿರುವ ಶವವನ್ನಲಂಕರಿಸಿ ಸುಟ್ಟು ಸೀಕರಿಯಾಗುತ್ತವೆ ಅಗಣಿತ ಐಶ್ವರ್ಯವಿದ್ದರೂ ಮದುವೆಯಾದ ಮರು ಪಕ್ಷದಲ್ಲಿಯೇ ವಿಧವೆಯಾಗಿ ಕುಳಿತಿಲ್ಲವೇ ನನ್ನ ತಂಗಿ..... ವಿಚಾರಶೀಲೆಯಾದ ನಿನಗೆ ನಾನೇನು ಹೇಳಬೇಕು.

**ಗಂಗಾ :** ದೊರೆ ನಾನೊಂದು ಮಾತು ಕೇಳಲೆ?

**ಅಶೋಕ :** ಅನುಮಾನಕ್ಕೆ ಆಸ್ಪದ ಬೇಡ.

**ಗಂಗಾ :** ಬಾಲವಿಧವೆಯಾದ ಲಲಿತಳನ್ನು ಮನೆಯಯಲ್ಲಿಟ್ಟುಕೊಂಡು ಮರುಗಿಸುವದಕ್ಕಿಂತ ಮರುಮದುವೆ ಮಾಡುವದು ಒಳಿತಲ್ಲವೇ?

**ಅಶೋಕ :** ನಾನೂ ಅದೇ ವಿಚಾರದಲ್ಲಿರುವೆನು..... ಆಂ ನಾನಿಷ್ಟು ಹೊರಗೆ ಹೋಗಿ ಬರಲೆ?

**ಗಂಗಾ :** ನಿಲ್ಲಿ ಕಾಫಿ ತರುತ್ತೇನೆ..... (ಒಳಗೆ ಹೋಗುವಳು)

**ಅಶೋಕ :** (ಖುರ್ಚಿಯ ಮೇಲೆ ಕುಳಿತಾಗ ಗಂಗಾ ಕಾಫಿ ತಂದು ಕೊಡುವಳು) ಗಂಗಾ ಕಾಫಿಯ ಕಪ್ಪು ಕೈಯಲ್ಲಿ ಬಂದಾಗ ನಿನ್ನ ಹಾಡು ಕೇಳಬೇಕೆಂಬ ಆಶೆಯಾಗುತ್ತದೆ.

**ಗಂಗಾ :** ನಾನು ನಿಮ್ಮ ಪಾಲಿಗೆ ಕೋಗಿಲೆಯೆ?

**ಅಶೋಕ :** ಹೌದು ಗಂಗಾ ಸುಸ್ವರವೆಂದು ಕವಿಗಳಿಂದ ಹೊಗಳಲ್ಪಟ್ಟ ವಸಂತ

ಮಾಸದ ಕೋಗಿಲೆಗಿಂತ ನಿನ್ನ ಸ್ವರವು ಮಧುರವಾದುದು, ನಿನ್ನ ಸುರಕಂಠದಿಂದ ಹೊರಟ ಧ್ವನಿಯ ಆಲಾಪಗಳಿಗೆ ಮಳೆ ಕಂಡ ಮಯೂರದಂತೆ ವರ್ತಿಸುವದೆನ್ನ ಮನ.

**ಗಂಗಾ :** ಹೇಳಲೇ ಕವನ?

**ಅಶೋಕ :** ಹೂ ಎನ್ನುತಿದೆ ಮನ.

**ಪದ**

**ಗಂಗಾ :** ಮರೆತಿಯುತಿದೆ । ಈ ಮಧುವನ । ಹರಿಯುತಿದೆ ಎನ್ನ ಮನ ॥ಪ॥
ಫಲಿತ ಮಾಮರ ಕಂಡ । ಉಲಿಯದಿಹುದೆ ಪಕ್ಷಿಕುಲ । ನಲಿಯದಿಹುದೇ
ಮುಗಿಲ ನೋಡಿ । ನವಿಲಿನಾಟ ಮೋಹಮಾಟ ॥

**ಅಶೋಕ :** ಅಹಹಾ ಹಾಲು ಸಕ್ಕರೆ ಯುಕ್ತವಾದ ಕಾಫಿಗಿಂತಲೂ ನಿನ್ನ ಹಾಡು ಸಾವಿರಪಾಲು ಸಿಹಿಯಾಗಿತ್ತು

(ಕೆನ್ನೆಗೆ ಚಿಟಿಕೆ ಹೊಡೆದು ಹೋಗುವಾಗ)

**ಅಂಚೆಯಾಳು :** (ಬಂದ.) ಸರ್ ತಮ್ಮದೊಂದು ರಿಪ್ಲಾಯ್

ಟೆಲಿಗ್ರಾಮ ಬಂದಿದೆ.

(ಅಶೋಕ ಸಹಿ ಮಾಡಿ ತೆಗೆದುಕೊಂಡು ಓದುವಾಗ)

**ಗಂಗಾ :** ಏನು ವಿಷಯ?

**ಅಶೋಕ :** ಗಂಗಾ ಸುಖದುಃಖಗಳ ಮಾನವನ ಬಾಳಿಗೆ ವರೆಗಲ್ಲುಗಳೇ ಸರಿ; ಇದೀಗ ಸಂತೋಷದಿಂದ ನಕ್ಕು ನಲಿದಾಡಿದ ನಮಗೆ......

**ಗಂಗಾ :** ಅದುದಾರೂ ಏನು.....?

**ಅಶೋಕ :** ಮಾವನವರಿಗೆ ಸೀಕ ಹೆಚ್ಚಾಗಿದೆಯಂತೆ,

**ಗಂಗಾ :** ಹಾಂ?

**ಅಶೋಕ :** ಆಗಲಿ ಇಂದು ಸಂಜಿಗೇನೆ ಇಲ್ಲಿಂದ ಹೊರಡುವದಾಗಿ ಟೆಲಿಗ್ರಾಮ್ ಕೊಟ್ಟು ಬರುವೆ ನೀನು ಎಲ್ಲ ವ್ಯವಸ್ಥೆ ಮಾಡಿಕೋ.... ಗೌರೀಶಾ

**ಗೌರೀಶ :** (ಒಳಗಿನಿಂದ) ಬಂದಿನ್ರಿ ಮೇವಿಗೆ ದನಹಾಕಿ.... (ಬರುವನು)

**ಅಶೋಕ :** ಸಂಜೆಯಗಾಡಿಗೆ ಅನಂತಪುರಕ್ಕೆ ಹೋಗಬೇಕಾಗಿದೆ ನಾನು ಪೋಸ್ಟಿಗೆ

ಹೋಗಿ ಬರುವದರೊಳಗಾಗಿ ನನ್ನ ಬೆಡ್ಡಿಂಗ ಸಿದ್ಧಗೊಳಿಸುವ ಲಲಿತಾ, ಎಲ್ಲಿದ್ದಾಳೆ ನೋಡು.

**ಗೌರೀಶ :** ಆಗಲ್ರಿ...... (ಹೋಗುವರು).

===****=====***===

# ದ್ವಿತಿಯಾಂಕ

## ಪ್ರವೇಶ–೧

### ರಸ್ತಾ

**ಗೌರೀಶ :** (ಪೇಪರ ಓದುವವನಂತೆ ಅಭಿನಯಿಸುತ್ತ) ವಿಜಾಪೂರ ಹೊಲಗಳನ್ನು ಹಾಳುಮಾಡಿದ ಮಿಡಿಚಿಗಳ ದಂಡಿನಲ್ಲಿ ಸುಮಾರು ಐದು ನೂರು ಮಿಡಿಚಿಗಳ ಹಲ್ಲನ್ನು ಕಿತ್ತಿ ಹಾಕಿಸಲಾಯಿತು. ವರಬೇಕು– ನಲವತ್ತು ವಯಸ್ಸಿನ ವಿದ್ಯಾವಂತ ತರುಣಿಗೆ ಯೋಗ್ಯ ವಿದ್ಯಾವಂತ ವರಬೇಕು. ಹುಬ್ಬಳ್ಳಿ – ಜಾತ್ರೆಯು ಗದ್ದಲದಲ್ಲಿ ಎಂಬತ್ತು ವರ್ಷದ ಮುದುಕಿಯರಿಬ್ಬರು ಒಬ್ಬರಿಗೊಬ್ಬರು ಹಾದು ಬಾಯೊಳಗಿನ ಹಲ್ಲನ್ನು ಕಳೆದುಕೊಂಡರು, ಕೂಡಲೆ ಅವರಿಬ್ಬರನ್ನು ಹಲ್ಕಟ್ಟ ಡಾಕ್ಟರರ ಕಡೆಗೆ ಕಳಿಸಲಾಯಿತು.

**ಗೌರಿ :** (ಬರುತ್ತ) ಯಾಕS ಹಾದಿಗುಂಟ ಹೋಗುವಾಕಿಗೆ ಹಲಕಟ್ಟ ಅಂತೀ.....

**ಗೌರೀಶ :** ತೆಲಿಕೆಟ್ಟೈತಿ ನಿಂದು. ನಾನು ಪೇಪರ ನೋಡಕೊಂತ ನಿಂತರೆ ನೀಏನS ತಿಳಕೊಂಡಿ 'ಕಾಗಿ ಕಾ ಅಂದರ ಲಾಳ್ದ ಎತ್ತು ಹಾರಿಬಿತ್ತಂತ'

**ಗೌರಿ :** ನೀನೂ ಒಣ ದಿಮಾಕಿನವ್ನS ಅದಿಏಳ ನೆಟ್ಟಗS ಕಾಗದ ಪತ್ರದ ಮ್ಯಾಲ ಹೆಬ್ಬಟ್ಟು ಒತ್ತಾಕ ಬರೂದಿಲ್ಲ ನಿನಗ್ಯಾಕ ಈ ವರ್ತಮಾನ ಪತ್ರ! ತಿನ್ನಾಕ ಅನ್ನ ಇಲ್ಲದ ಮೂಳ ಮೀಸ್ಯಾಗ ಅಕ್ಕಿ ಕಾಳು ಇಟಗೊಂಡು ತಿರಗತಿತ್ತಂತ, ನಿನ್ನಂಥದ ನೋಡ ಅದು.

**ಗೌರೀಶ :** ಗೌರಿ ಬಾಯಿ ಬಾಳ ಬಿಡಬ್ಯಾಡ ಅದು ಹೆಣ್ಣು ಮಕ್ಕಳಿಗೆ ಪಾಡನೂ ಅಲ್ಲ, ನಾನೇನರ ಓದಾಕ ಕುತಗೊಂಡಿನೇನ ಪೇಪರ.

ಗೌರಿ : ಮತ್ತ ಯಾತಕ ಹಿಡದಿ ಕೈಯಾಗ?

ಗೌರೀಶ : ನೋಡಿಲ್ಲಿ ಕಣ್ಣು ತೆರೆದು.....

ಗೌರಿ : (ನೋಡಿ) ಅವ್ವಽ ಅಶೋಕಪ್ಪನ್ರದು ಗಂಗವ್ವೋರದು ಚಿತ್ರ ಇದರಾಗ ಕೊಟ್ಯಾರ

ಗೌರೀಶ : ಮದವಿ ಮೂರ್ತ ಸಮೀಪ ಇದ್ದದ್ದಕ ಬಂಧು ಬಳಗಕ್ಕೆಲ್ಲ ಲಗ್ನ ಪತ್ರ ದೌಡ ಮುಟ್ಟಾಕಿಲ್ಲಂದು, ಈ ಪೇಪರದಾಗ ತಮ್ಮ ಚಿತ್ರಾ ಕೊಟ್ಟು ಎಲ್ಲರಿಗೂ ಬರಾಕ ತಿಳಿಶ್ಯಾರು.

ಗೌರಿ : ಮದುವಿಗಿಂತ ಮುಂಚಿನದೇನ ಈ ವರ್ತಮಾನ.....?

ಗೌರೀಶ : ಹೌದು ಗಂಜೀಬಟ್ಟಿ ಇಡೂ ಕಪಾಟದಾಗ ಇತ್ತು

ಗೌರಿ : ಮದುವೆ ಬಾಳ ಬರ್ಝರಿ ಆತಂತೇಳು!

ಗೌರೀಶ : ಅದನ್ನೇನ ಹೇಳೂದು ಮದುವಿ ಅನಬೇಕು ಅಂಥಕ ನೋಡು.

ಗೌರಿ : ನಾನೂ ಬರಬೇಕಂದರ ಮನಿ ಕಾಯಾಕ ಹಚ್ಚಿಹೋದರು. ಕಣ್ಣು ಕಾಣದಿದ್ದರೂ ಕಿವಿಲೆರ ಕೇಳಿ ತಿಳಕೋಬೇಕಂದರೆ ಕೆಲಸದಾಗ ವ್ಯಾಳೇನ ಕೂಡಲಿಲ್ಲ. ಇವತ್ತಂತೂ ಅಪ್ಪಾರು ಅನಂತಪುರಕ್ಕೆ ಹೋಗ್ಯಾರು.

ಗೌರೀಶ : ಎಲ್ಲಾರು ಹೋದರೂ ಇದ್ದಾಳಲ್ಲ ಕಾಗಿದುರಗವ್ವನಂತಾ ಲಲಿತವ್ವ

ಗೌರಿ : ಆಕಿ ಸುದ್ದಿ ದೊಡ್ಡದೈತಿ ಸುಮ್ನಽ ಹೇಳು

ಗೌರೀಶ : ಏನ ಹೇಳೂದು ಗೌರಿ, ಅಂಥಾ ಮದುವಿನ ಹಿಂದೂ ನೋಡಿಲ್ಲ ಇನ್ನು ಮುಂದೂ ನೋಡುವಂಗಿಲ್ಲ. ಏನ ಬ್ಯಾಂಡು ಏನ ಭಜಂತ್ರಿ ಎಂಥಾ ಊಟ ತುಪ್ಪ ಹಳ್ಳಹರದಂಗಾತು. ಉಣ್ಣಾಕ ಬಂದ ಮಂದ್ಯಾಗ ಎಷ್ಟೋ ಮಂದಿಗೆ ಉಡದಾರ ಕೊಡಿಸೋ ಹೊತ್ತು ಬಂದಿತ್ತು.

ಗೌರಿ : ಯಾಕದು?

ಗೌರೀಶ : ನಂದಲ್ಲ ನಮ್ಮ ಅಪ್ಪಂದಲ್ಲಂತ ತಿಂದದ್ದಕ್ಕ ಒಬ್ಬೊಬ್ಬರಽ ಉಡದಾರ ಥೇ ಥೇ ಅದನ್ನೇನ ಹೇಳೂದು. ಅಳ್ಳು ಹುರಿದಾಂಗ 'ಛಟ್.... ಫಟ್' ಅಂತ ಹರದ ಹಾರಿಬಿದ್ದವು.

ಗೌರಿ : ಹೂಂ.....

ಗೌರೀಶ : ಆ ಮ್ಯಾಗ ರಾತ್ರಿ ಮೋಟಾರು ಕಾರ ಜೀಪನ್ಯಾಗ ಲೈಟೀನ ಬೆಳಕಿನಾಗ

ಹೂವಿನ ಹಾರದ ಮಾಲೆ ಹಾಕಿಕೊಂಡು ಮೆರೂಣಗಿ..... ಆದರಾಗ ಮತ್ತ ಊಟಾದ ಬಳಿಕ ಲಾವಣೀ.....

**ಗೌರಿ :** ಲಮಾಣಿ......

**ಗೌರೀಶ :** ಲಮಾಣಿ ಅಲ್ಲ ಚಿಗರಿಕಾರು....

**ಗೌರಿ :** ನೀನ ಅಂದೆಲ್ಲs ಪಿಕನಾಶಿ

**ಗೌರೀಶ :** ಏ ಅಂಬಾಳ ನಾಸಿ; ಲಮಾಣಿ ಅಲ್ಲ ಲಾವಣಿ.....

**ಗೌರಿ :** ಪದ ಹಾಡಿದವರೇನ..... ಯಾವ ಪದಾ ಅನ್ನು ಓಟು

**ಗೌರೀಶ :** ಡಪ್ ಇಲ್ಲದS ಹ್ಯಾಗದ ಅನ್ನೂದು?

**ಗೌರಿ :** ಇಕಾ; ನಾ, ನಾದ ಹಿಡೀತೀನಿ..... (ಬೆರಳಿನಿಂದ ಮುಗು ಬಾರಿಸಿಕೊಳ್ಳುವಳು) ಅನ್ನು....

**ಗೌರೀಶ :** ಕೇಳ ಹಗಾರ....

**॥ ಪದ ॥**

ಅಹಹಾ ನಾನೆಂತು ಬಣ್ಣಿಸಲಿ । ಮದುವೆಯ ಪಕ್ವಾನ್ನದ ರುಚಿಯಾ ॥
ಸರಾಮೃತ ರಸದೂಟದಿಂದ । ಆನಂದ ಪಡೆದ ನಮ್ಮಯ ಸ್ಥಿತಿಯ ॥ ಪ ॥

ಕಣ್ಸೆಳೆವ ಬುಂದೆ ಬಾಸುಂದೆ । ನೀಡಿದರು ಬೇಡಿದನು ತಂದೆ ।
ಹೊಟ್ಟೆ ಹಿಡಿಸದಂತೆ ನಾತಿಂದೆ । ತೇಗಿದೆವು ಆಗ ನಲಿವಿಂದೆ ।
ಬೀಗರು ಬಿಜ್ಜರು ಬಂದೋರಿಗೆಲ್ಲ । ಆದುದು ಆನಂದವು ಒಂದೇ ॥ ೧ ॥

ಹಾಲಿನ ಹೊಳೆಯ ಹರಿಸಿದರು । ತುಪ್ಪದ ಮಳೆಯ ಕರಿಸಿದರು ।
ಹಪ್ಪಳ ಸೆಂಡಿಗೆ ನೀಡಿದರು । ಉಪ್ಪಿನಕಾಯಿ ಬಡಿಸಿದರು.......
ಸಂತೋಷದ ಈ ಮದುವೆಯೊಳೆಲ್ಲರು । ಆನಂದದಿಂದ ನಲಿದಾಡಿದರು॥ ೨ ॥

**ಗೌರಿ :** ಅಂತೂ ಭರ್ಜರಿ ಆಗೇತಿ ಬಿಡು ಮದುವೆ?

**ಗೌರೀಶ :** ನೀ ಏನ ಮಂದೀ ಮದುವಿ ಸುದ್ದೀನ ಕೇಳತೀಯೋ ನನ್ನೇನರ ಓಟು ಮಾತಾಡಸ್ತಿಯೋ......?

**ಗೌರಿ :** ಇಷ್ಟೊತ್ತನಾ ಮಾತಾಡಿದ್ದು ಯಾರ ಕೂಡ?

**ಗೌರೀಶ :** ಊಟ ಆತಂತ ಕೇಳಿದರ ಹೊಟ್ಟಿ ತುಂಬತೈತೇನ?

**ಗೌರಿ :** ಬಿಚ್ಚಿ ಮಾತಾಡು ಚುಚ್ಚಿ ಯಾಕ ಮಾತಾಡತಿ?

**ಗೌರೀಶ :** ಅಂದಮ್ಯಾಗ 'ಉಡಕಿ' ಮಾಡಿಕೊಂಡು ಬಿಡಲ್ಲ.

**ಗೌರಿ :** ದುಡುಕು ಕೆಡಕು ಅಂತ ಗಂಡಾ ಹೆಂಡರಂದ್ರ ಗಿಡದಾಗ ಕುಂತು ಹಾರಿ ಹೋಗೂ ಹಕ್ಕಿ ಅಲ್ಲ ಸಾವುತನಕ ಗಂಟು.

**ಗೌರೀಶ :** ಬಿಡಬ್ಯಾಡ ಪಂಟ. ನಿನ್ನ ಮನಸಿನ್ಯಾಗ ಏನೈತಿ ಅನ್ನೂದು ನನಗ ಗೊತ್ತೈತಿ ಸುಮ್ನs ಮುರುಕಾ ಮಾಡಿ ಮುಂದಕ ಹಾಕಬ್ಯಾಡ......

**ಗೌರಿ :** ನೀನಂತೂ ತೀರಾ ನಾಚಿಗಿ ಬಿಟ್ಟನಿಂತಿ ನೋಡ....

**ಗೌರೀಶ :** ಮತ್ತೇನು ಮಾಡ್ಲಿ..... ನಾಚಗೊಂಡರ ಯಾವ ಕೆಲಸಾನೂ ನನ್ನ ಆಚೆ ಈಚೆಗೆ ಸುಳೀದಿಲ್ಲನ್ನೂದು ಗೊತ್ತಾಗಿ ಮೂರಕ್ಷರ ಮರೆತ ನಿಂತ ಬಿಟ್ಟೇನಿ

**ಗೌರಿ :** ತಗಿಯS ಹೇಣತಿ ಕಾಣದವರಾಂಗ ಹಿಂಗ್ಯಾಕ ಮಾತಾಡತಿ?

**ಗೌರೀಶ :** ಹೌದು ಗೌರಿ, ಹೇಣತಿ ಇಲ್ಲದS ಬಾಳ ದಿವಸ ಆಗೇತಿ, ಹುಳಿ ಉಂಡ ಜನ್ಮ ಅದಕ ಲಗೂ ಹೊಂದಿಕಿ ಆಗಿ ಬಿಡ್ಲಿ ಅಂತ.....

**ಗೌರಿ :** ಯಾತರ ಹೊಂದಿಕೇ ನಿನ್ನ, ನನ್ನ ಮೈಯಾಗ ನೆಟ್ಟಗಿಲ್ಲ....

**ಗೌರೀಶ :** ಗೌರಿ, ನಾ ಹೇಳಿದಂಗ ಕೇಳಿದರ, ನಾಲ್ಕು ದಿವಸದಾಗ ನೆಟ್ಟಗ ಆಗತ್ತ ನೋಡು ಜಡ್ಡು.

**ಗೌರಿ :** ಹೇಳ ಹಂಗಾರ ಏನ ಮಾಡಬೇಕು?

**ಗೌರೀಶ :** ದಿನಾ ಮಲಗೂಮುಂದ ನಾ ಹೇಳಿದವರ ಹೆಸರು ನೆನಸಿ ಮಲಗಿದರ, ಮೈಯಾಗಿನ ಜಡ್ಡು ಹೇಳ ಹೆಸರಿಲ್ಲದ ಹೋಗತ್ತ........

**ಗೌರಿ :** ಯಾರವರು?

**ಗೌರೀಶ :** ಅದಾರ ಐದ ಮಂದಿ.....

**ಗೌರಿ :** ಹೆಸರು ಹೇಳಲ್ಲ.....

**ಗೌರೀಶ :** ಅವರು ನರ್ಗಿಸ್ಸು ಸುರಯ್ಯಾ ಮೀನಾಕ್ಷಿ ಮಧುಬಾಲಾಂಜಲಿ ॥
ತಥಾ ಪಂಚಕನ್ಯಾ ಸ್ಮರೇನಿತ್ಯಂ । ಸರ್ವರೋಗೋಪ ಶಾಂತಯೇ ॥
ಹೀಗೆಂದು ಗೌರೀಶ ಸ್ಮೃತಿಯಲ್ಲಿ ಹೇಳಿದೆ

ಗೌರಿ : ಅವ್ವಽ ನನ್ನ ರೋಗ ಕಳಿಯವಽ, ನಾ ಏನ ಹೇಳ್ತಾನಂತ ನೊಣಾ ಹೊಗಿ ಬರುವಹಾಂಗ ಬಾಯಿ ತೆರಕೊಂಡು ನಿಂತೀನಿ.

ಗೌರೀಶ : ಗೌರಿ ಈ ಕಲಿಕಾಲದ ಮಹಿಮಾ ಮಹಿಳೆಯರಂದ್ರ ಇವರಽ ಎಳೆ ಹುಡುಗ ಹುಡಿಗಯರಿಂದ ಹಿಡಿದು ಹಳೆ ಮುದುಕ ಮುದುಕಿಯರ ನಾಲಗಿ ಮ್ಯಾಲ ಮುಂಜಾವಿನಿಂದ ಮಲಗೋ ಮಟಾ ಇವರ ಹೆಸರ ಕುಣಿತಾವು.... ಇದಕ್ಕೆ ಹೆದರಿ ಶಿವಾ ಸುಡುಗಾಡ ಕಂಡಾ, ಹರಿ ಹಳ್ಳಕ ಬಿದ್ದ.

ಗೌರಿ : ಸಾಕ ಬಿಡು ನನಬ್ಯಾನಿ ಅಂದರ ನಿನಗ ಹುಡುಗಾಟ ಆಗೇತಿ.

ಗೌರೀಶ : ಯಾವ ಬ್ಯಾನಿ ಅದು?

ಗೌರಿ : ಒಳಬ್ಯಾನಿ ನಿನಗೇನು ಗೊತ್ತು ಹೆಣಮಕ್ಕಳ ಬ್ಯಾನಿ.

ಗೌರೀಶ : ಆಗಲಿ ಬ್ಯಾನಿ ಗುಣಾ ಆದ ಬಳಿಕ ಉಡಿಕಿ ಆಗೂದ ಕರೇನ?

ಗೌರಿ : ಈಗ ನಾ ಯಾವದೂ ಹೇಳೊದಿಲ್ಲ. ಇದು ಬಾಳೇದ ಮಾತೈತಿ ಓಟ ವಿಚಾರ ಮಾಡಿ ತಿಳಸ್ತೀನಿ.

ಗೌರೀಶ : ವಿಚಾರ ಮಾಡೋಣ ಗಮನಿಸೋಣ ಅಂತ ಮಂತ್ರಿಗಳ ಮಾತು ಹೇಳಬ್ಯಾಡ ಯಾವ ಕೆಲಸಾನು ಆಗಾಕಿಲ್ಲ.

ಗೌರಿ : ಅದೇನರ ಇರಲಿ ನಾ ಆಡಿದ ಮಾತು ಅಂದ್ರ ಹಸೀ ಗ್ವಾಡಿಗೆ ಹಳ್ಳ ಇಟ್ಟಂಗ!

ಗೌರೀಶ : ಹೆಂಗಸೂರ ಮನಸ್ಸು ಯಾರಿಗೂ ತಿಳಿಯೋದಿಲ್ಲ ಬಿಡು, ತಾಸಿಗೊಮ್ಮೆ ಪಾತರದೋರ ಸೀರಿ ಬದಲಾದಂಗ ಆಗೂದು.

ಗೌರಿ : ನಿನ್ನ ಮಾತು ನಿಜ ಐತಿ. ಈಗ ಭೂಮಿಮ್ಯಾಗ ಬಣ್ಣದ ಮಾತು ಕೇಳಿ ಬೆನ್ನು ಹತ್ತಿ ಹೋಗೋ ಹೆಂಗಸೂರು ಬಾಳ ಆಧಾರ ನಾ ಏನ ಹಾಂಗಲ್ಲ ನೋಡು.

ಗೌರೀಶ : ಗೌರಿ ಮಾತಿನ ಭರದಾಗ ಹೊತ್ತಽ ಮುಗಿತಲ್ಲಽ ಮೊದಲ ಮನೀಗ ಹೋಗಿ ಕಂದೀಲ ಚಿಮಣಿ ಒರಿಸಿ ಯಣ್ಣೀ ಹಾಕಿಡೂನು ನಡಿ.

ಗೌರಿ : ನಿನಂತೂ ಮಾತು ಸಿಕ್ಕರಾತು ಕಟ್ಟಿನ ಆಮ್ರಾ ಸಿಕ್ಕಂಗಾಗತ್ತ ನಡಿನಡಿ. (ಹೋಗುವರು)

## ಪ್ರವೇಶ–೨

(ಹಾಸಿಗೆಯ ಮೇಲೆ ಹೇಮಂತನು ನರಳುತ್ತ ಮಲಗಿರುವನು ಹತ್ತಿರದಲ್ಲಿಯೇ ಎತ್ತರವಾದ ಸ್ಥಳದ ಮೇಲೆ ಔಷಧ ಬಾಟ್ಲಿಯನ್ನಿಡಲಾಗಿದೆ)

**ವಸಂತ :** (ಒಳಗಿಂದ ಕಾಫಿ ತಂದು) ಅಪ್ಪಾ ಕಾಫಿ ತೆಗೆದುಕೋ

**ಹೇಮಂತ :** (ತೆಗೆದುಕೊಳ್ಳುತ್ತ) ಮಗು..... ಉಚ್ಚ ಶಿಕ್ಷಣ ಹೊಂದಿದ ನಿನಗೆ ಒಲೆಯೂದಲು ಹಚ್ಚಿದ ಈ ಕಡುಪಾಪಿಗೆ ಮಗನಾಗಿ ಏಕೆ ಹುಟ್ಟಿ ಬಂದೆ?

**ವಸಂತ :** ಅಪ್ಪಾ ನೂರೊಂದು ಜನ ಕೌರವರನ್ನು ಕುಟ್ಟಿ ಕೆಡಹಿದ ಜಗಜಟ್ಟಿ ಭೀಮನಂಥವನಿಗೆ ವಿಧಿಯು ಅಡಿಗೆಯ ಹುಟ್ಟು ಹಿಡಿಸಿತು ಅಂದಾಗ ನಮ್ಮಂಥವರ ಪಾಡೇನು?

**ಹೇಮಂತ :** ಪದವೀಧರನಾದರೂ ನೌಕರಿ ದೊರೆಯಲಿಲ್ಲ. ದರಿದ್ರ ನೀನೆಂದು ನೌಕರಿ, ಬಲ್ಲಿದರ ಬಾಗಿಲಿಗೆ ಬರುತಿವೆ ಧನಿಕರಿರುವರೆಂದು, ಕಾಲದ ಮಹಿಮೆ ವಿಚಿತ್ರವಾಗಿದೆ.

**ವಸಂತ :** ಕಾಫಿ ಆರುತಿದೆಯಪ್ಪ.

**ಹೇಮಂತ :** (ಕೆಮ್ಮು) ಕುಡಿಯುವೆ ಮಗು.... ಆದರೆ.... ಕಾಲನ ಬಿರುಗಾಳಿಗೆ ನನ್ನ ಜೀವಜ್ಯೋತಿ ನಂದಿದರೆ ನಿನ್ನ....

**ವಸಂತ :** (ತಂದೆಯ ಬಾಯಿಗೆ ಕೈ ಇಟ್ಟು । ಅಪ್ಪಾ ನುಡಿಯದಿರು ಕರುಳು ಕೊರೆಯುವ ಅಶುಭ ಶಬ್ದವನು.

**ಹೇಮಂತ :** ಒಂದೆಡೆಗೆ ಬಡತನವೆಂಬ ಕಾಳ್ಗಿಚ್ಚಿನ ಬೇಗೆ, ಇನ್ನೊಂದೆಡೆಗೆ ನನ್ನ ಉಪಚಾರಕ್ಕಾಗಿ ಒಲೆಯ ಉರಿಗೆ ಬೇಯುತ್ತಿರುವ ಬೇಗೆ. ತಾಯಿ ಸತ್ತು ತಂಗಿ ಗಂಡನ ಮನೆ ಸೇರಿದಂದಿನಿಂದ ಈ ಎರಡು ಬೇಗೆಯಲ್ಲಿ ಬೆಂದು ಬೇಗುದಿಗೊಂಡ ನಿನ್ನ ದೇಹ ಸೀದು ಸೀಕರಿಯಾಗಿದೆ.

**ವಸಂತ :** ಏಕಿಂತು ಮಾತಾಡುವಿಯಪ್ಪ, ಹೊತ್ತು ಹೆತ್ತು ಹಾಕಿದ ತಾಯಿ ಸತ್ತು ಹೋದಂದಿನಿಂದಲೂ ಸರ್ವಸ್ವವೇ ನೀವೆಂದರಿತು ದುಃಖವನ್ನು ಮರೆತಿರುವೆ. ಮತ್ತೇಕೆ ಗತ ಜೀವನದ ಸಂಪುಟಗಳನ್ನು ಬಿಚ್ಚಿ ಕಷ್ಟದ ಕಿಚ್ಚನ್ನು ಹೊತ್ತಿಸುವಿ?

**ಹೇಮಂತ :** (ಕೆಮ್ಮು ಹೆಚ್ಚಾಗುವದು) ವಸಂತ.... ಹೃದಯದಲ್ಲಿ ಕಿಚ್ಚು ಇಟ್ಟಂತಾಗಿ

ಬಾಯಿ ಒಣಗಹತ್ತಿದೆ (ಕೆಮ್ಮು) ಗಂಗಾ.... ಅಶೋಕರಂತೂ ಬರಲಿಲ್ಲ (ನರಳುವನು).

**ವಸಂತ :** (ಔಷಧ ಬಾಟ್ಲಿ) ತೆಗೆದುಕೊಳ್ಳುತ್ತ) ಇಂದು ಬರುವದಾಗಿ ತಾರು ಮಾಡಿರುವರು.... (ಔಷಧ ಹಾಕಿ ಕುಡಿಯಲು ಕೊಟ್ಟು) ಇದಿಷ್ಟು ಔಷಧ ಕುಡಿದು ವಿಶ್ರಮಿಸಿ.... !

**ಹೇಮಂತ :** ಎಲ್ಲಿಯ ವಿಶ್ರಾಂತಿಯಪ್ಪ ಸಂಕಟ ಹೆಚ್ಚಾಗುತ್ತಲಿದೆ.

(ಟಾಂಗಾದ ಸಪ್ಪಳ)

**ವಸಂತ :** ಅಪ್ಪಾ.... ಬಂದರೆಂದು ತೋರುತ್ತದೆ (ಅಶೋಕ ಗಂಗಾ ಬರುವರು) ಬನ್ನಿ ಮಾಮಾ.

**ಗಂಗಾ :** ಅಪ್ಪಾ ಅಪ್ಪಾ.... (ತಂದೆಯ ಹತ್ತಿರ ಹೋಗುವಳು)

**ಹೇಮಂತ :** ಗಂಗಾ ಬಂದೆ ಎನಮ್ಮಾ.... ಅಮ್ಮಾ.... ಅಪ್ಪ – (ನರಳುತ್ತ) ಅಶೋಕನು ಬರಲಿಲ್ಲವೇ?

**ಅಶೋಕ :** (ಹೇಮಂತನತ್ತ ಹೋಗುತ್ತ) ಬಂದಿರುವೆ ಮಾಮಾ.... ಈಗ ಹೇಗಿದೆ?

**ಹೇಮಂತ :** ಕ್ಷಣಕ್ಷಣಕ್ಕೂ ಸಂಕಟ ಹೆಚ್ಚಾಗಿ ಬಾಯಿ ಒಣಗುತ್ತಿದೆ.

**ಅಶೋಕ :** ವಸಂತ, ಡಾಕ್ಟರರನ್ನು ಕರೆತಂದಿದ್ದೆಯಾ?

**ವಸಂತ :** ಡಾಕ್ಟರ.....! ಒಂದು ವೇಳೆ ದೇವಲೋಕದ ಧನ್ವಂತರೂ ಧರಣಿಗಿಳಿದು ಬಂದು ದರಿದ್ರರ ದುಃಖವನ್ನು ಲೆಕ್ಕಿಸಬಹುದು. ಆದರೆ ತಪ್ಪಿಬರಲಾರರು ಬಡವರ ಮನೆಗೆ ಭೂಲೋಕದ ಡಾಕ್ಟರರು. ಒಂದು ಸಲ.... ಹೊತ್ತು ಗೊತ್ತೆನ್ನದೆ ಹತ್ತು ಸಲ ಡಾಕ್ಟರರ ಮನೆಯ ಬಾಗಿಲಿಗೆ ಹೋದರೂ ಆಗ ಬರುವೆ ಈಗ ಬರುವೆ, ಶಿರಿವಂತರ ಮನೆಗೆ ಹೋಗಿ ಬರುವೆನೆಂದು ಹೇಳಿದರೇ ವಿನಃ ಒಮ್ಮೆಯಾದರೂ ಕರುಣೆಯಿಂದ ಅವರು, ಕಾಲು ಇತ್ತ ಇಡಲಿಲ್ಲ. ಬೇನೆಗೆ ಬಡವ ಬಲ್ಲಿದನೆಂಬ ಭೇದವಿರದಿದ್ದರೂ ಬೇನೆ ನಿವಾರಿಸುವ ವೈದ್ಯಕೀಯ ಕ್ಷೇತ್ರದಲ್ಲಿ ತುಂಬಿ ಹರಿಯುತಿವೆ ವೈಷಮ್ಯದ ವೈತರಣಿ.

**ಅಶೋಕ :** ಎಷ್ಟು ಉದ್ವಿಗ್ನನಾಗಿರುವಿ ವಸಂತ......

**ವಸಂತ :** ದಾರಿದ್ರ್ಯದ ದಾವಾಗ್ನಿಯಿಂದ ಶಾಂತಿಯ ರಸವು ಕುದಿದು ಕಪ್ಪಾಗಿ ಉರುಳುತಿದೆ ಉದ್ವಿಗ್ನತೆಯ ಉಗಿಯನ್ನು.... ಮಾಮಾ ಇಂದು ಬಡವರ

ಬಗ್ಗೆ ಕರುಣೆ ತೋರುವ ಡಾಕ್ಟರರೇ ಕಡಿಮೆ ಕಡು ಬಡವರ ಮನೆಯಲ್ಲಿ ಯಮದೂತರ ಕೂಟ ಅಂತೆಯೇ ಇಂದು ಕಾಣಬೇಕಾಗಿದೆ ತಂದೆಯವರ ಈ ಅಂತಿಮ ವ್ಯವಸ್ಥೆಯ ನೋಟ !

**ಹೇಮಂತ :** (ಕೆಮ್ಮು ಜೋರಾಗಿ ನರಳುವಿಕೆ ಹೆಚ್ಚಾಗುವದು)

ಗಂಗಾ, ಅಶೋಕ..... ಸಂಕಟ ಹೆಚ್ಚಾಗುತ್ತಲಿದೆ ಕಣ್ಣಿಗೆ ಕತ್ತಲೆ ಕವಿಯ ತೊಡಗಿದೆ....

**ಗಂಗಾ :** ಅಪ್ಪಾ.....

**ಹೇಮಂತ :** ಎಲ್ಲಿರುವೆಯಮ್ಮ.... ಗಂಗಾ.... ನನಗೆ ಯಾರೂ ಕಾಣುವದಿಲ್ಲವಲ್ಲ?

**ಅಶೋಕ :** ಹೀಗೇಕೆ ಮಾತಾಡುವಿರಿ.....ಎಲ್ಲರೂ ನಿಮ್ಮ ಮುಂದೆಯೇ ನಿಂತಿದ್ದೇವೆ.

**ಹೇಮಂತ :** ಅಶೋಕ ನಾನಿನ್ನು ಉಳಿಯಲಾರೆ.... ಹೆಚ್ಚಿಗೆ ಮಾತಾಡಬೇಕೆಂದರೆ ದೇಹದಲ್ಲಿ ನಡುಗು ಹುಟ್ಟಿ.... ನಾಲಿಗೆ ಸೆಳೆಯುತ್ತಿಲಿದೆ... ವಸಂತನ ಭಾರ.... ನಿನ್ನ..... (ಮರಣ ಹೊಂದುವನು)

**ಗಂಗಾ :**
**ವಸಂತ :** } ಅಪ್ಪಾ.... (ಮೇಲೆ ಬಿದ್ದು ದುಃಖಿಸುವರು)

**ಹಿನ್ನೆಲೆ**

ಅಸತೋಮಾ ಸದ್ಗಮಯ ।
ತಮಸೋಮಾ ಜ್ಯೋತಿರ್ಗಮಯ ।
ಮೃತ್ಯೋಮಾ ಅಮೃತಂಗಮಯ ।

**ಗಂಗಾ :** ಅಪ್ಪಾ..... ಕೊನೆಗೂ ನಮ್ಮ ಕೈ ಬಿಟ್ಟಿಯಾ ಉರುಳಿತೆ ನನ್ನ ತೌರೂರಿನ ಆಶ್ರಯದ ಮರವು..... ಆದೆನೆ ನಾನಿಂದು ಹಸುವಿಲ್ಲದ ಕರುವು.

**ಅಶೋಕ :** (ವಸಂತನನ್ನು ಎಬ್ಬಿಸುತ್ತ) ಏಳು ವಸಂತ ಅಧೀರನಾಗದಿರು

**ವಸಂತ :** (ದುಃಖಿಸುತ್ತ) ಪರಮಾತ್ಮ ಇಂದಿಗಾದರೂ ಮುಗಿಯಿತೆ ನಿನ್ನ ವೃತ್ತ?..... ಹಡೆದಪ್ಪಾ.... ಹದವೀಧರ ಮಗನಾಗಿ ಒಂದು ದಿನವಾದರೂ ಹೊಟ್ಟಿ ತುಂಬ ಅನ್ನ.... ಮೈತುಂಬ ಬಟ್ಟೆ ತಂದು ಸಲುಹಲಿಲ್ಲವೆಂದು ಮುನಿಸ್ಸಿನಿಂದ ಮಲಗಿರುವಿಯೇನಪ್ಪ? ಕಣ್ಣೆವೆಗಳು ಕಣ್ಣುಗಳನ್ನು ಕಾಪಾಡುವಂತೆ ನಿಮ್ಮ ಪ್ರಾಣ ಪದಕಗಳೆಂದೇ ನಮ್ಮೀರ್ವರನು

ಸಲುಹಿದಿರಿ, ಸತ್ತ ತಾಯಿಯ ಸ್ಮರಣೆಯಾಗದಂತೆ. ಇಂಥ ಕರುಣೆಯ ಕಡಲಾದ ನಿಮ್ಮನ್ನು ಮಣ್ಣಲ್ಲಿ ಮುಚ್ಚಿಟ್ಟು ಮಗನಾದ ನಾನು ಋಣ ತೀರಿಸುತ್ತಿರುವೆನ್ನಪ್ಪ.

**ಅಶೋಕ :** ಮೃತ ಶರೀರ ಮನೆಯಲ್ಲಿಟ್ಟುಕೊಂಡು ಪ್ರಲಾಪಿಸುವದರಲ್ಲಿ ಏನರ್ಥವಿದೆ? ನೀನೆ ಹೀಗೇ ಅಧೈರ್ಯ ತಾಳಿದರೆ ಹೆಣ್ಣಾದ ನಿನ್ನ ತಂಗಿಯ ಗತಿಯೇನು? ನಡೆ ಮೊದಲು ಶವಸಂಸ್ಕಾರದ ವ್ಯವಸ್ಥೆ ಮಾಡೋಣ..........

ತೆರೆ (ಸ್ಯಾಡೋಸಿನ್ ಶವಸಂಸ್ಕಾರದ ವ್ಯವಸ್ಥೆ)

**ಭಾವಗೀತೆ**

ಜಗವೊಂದು ನಾಟಕ ರಂಗ ।
ನಾವೆಲ್ಲ ರಂಗದಾ ನಟರು ।
ವಿಧಿಯಾಣತಿಯಾ ಭಟರು ॥

(ಗೀತೆಯ ಮುಕ್ತಾಯದೊಡನೆ ಶವಕ್ಕೆ ಚಿತೆಯನ್ನಿಡಲಾಗುವದು)

## ಪ್ರವೇಶ–೩

**ರಸ್ತಾ**

**ಗೌರೀಶ :** ತನಗಿಲ್ಲದ ವಸ್ತ ಎಲ್ಲಿದ್ದರೇನು?

ನನ್ನ ಉಡುಕಿಯಾಗದ ಹೆಣ್ಣು ಎಷ್ಟಿದ್ದರೇನು?

ಸತಿಯಿಲ್ಲದಾ ಮನುಜಾ ಬದುಕಿದ್ದರೇನು?

ಶ್ವಾನ ಸೂಕರಿಗಿಂತ ಅವನು ಕಡೆಯಲ್ಲವೇನು?

ಗೌರಿ ಕವಣಿಕಲ್ಲ ಹೊಂಟಂಗ ಹಂಗ ಹೊಂಟಿಯಲ್ಲ ಬುಸ್‌ಗೊಡಕೊಂಡು

**ಗೌರಿ :** ಯಾಕ ಏನ ಕೆಲಸಿತ್ತು? ಒಳ್ಳೆ ಮಾತಾಡಸ್ತಿ ಹಾದಿಬೀದ್ಯಾಗ

**ಗೌರೀಶ :** ಗೌರಿ, ಇನ್ನಮ್ಯಾಲೆ ನಿನಗ ಮಾತಾಡಸದೇ ಏನು ಬ್ಯಾಡಂದೆ ಕುಲ್ಲಾ ಹೇಳಿಬಿಡು.

**ಗೌರಿ :** ಯಾಕೆ?

ಗೌರೀಶ : ಮತ್ತೆನs ಸುಡಹಂಚಿನ ಮ್ಯಾಲ ದ್ವಾಸಿ ಹೊಯ್ದಾಂಗ ಸರಕ್ಕಂದರ ಚುರಕ್ಕಂತ ಮೈಮ್ಯಾಗ ಬರತಿ. ಒಂದು ದಿವಸರಾ ಕೂಡಿ ಕೆಲಸಾ ಮಾಡೋರಂತ ಮನಸಗೊಟ್ಟು ಮಾತಾಡಿದ್ದು ಈ ಕಿವಿ ಕೇಳಲಿಲ್ಲ.

ಗೌರಿ : ಮನಗೊಟ್ಟು ಮಾತಾಡಾಕ ನಾನೇನು ನಿನ್ನ ಮಾಡಿಕೊಂಡ ಮಡಿದಿ ಅಲ್ಲ.

ಗೌರೀಶ : ಮಡದಿನ ಮಾಡಿಕೊಬೇಕಂತs ನಿನಗಿಷ್ಟು ಹಡದಿ ಹಾಸತಿರೋಡ ಹಗಲೂ ರಾತ್ರಿ ನಿನ್ನ ವ್ಯಸನ ಮಾಡಿS ಮಾಡಿ ಒಳಗೆS ಸಣ್ಣಾಗಾಕ ಹತ್ತೀನಿ.

ಗೌರಿ : ಅದಕಂತ ತುಪ್ಪದ ಕಂತಿ ಲಿಂಗದಂಗ ಮಿಂಚೂ ಮಾರಿಮ್ಯಾಗ ತೌಡ ಹಾರಾಕ ಹತ್ತೈತಿ.

ಗೌರೀಶ : ಬರ್‍ತಾ ಬರ್‍ತಾ ಹಳಸಿದ ಸಪ್ಪನ್ನ ಬ್ಯಾಳಿ ಗಡಗಿ ಆಗತದು

ಗೌರಿ : ಯಾಕ ಆಗತ್ತ?

ಗೌರೀಶ : ನಿನ್ನ ಕೂಡಾ ಕೆಲಸಾ ಮಾಡಾಕ ಹತ್ತಿದಂದಿನಿಂದ ಮೈಯಾಗ ಒಂದು ರೀತಿ ಆಗೇತಿ.

ಗೌರಿ : ಏನಾಗೇತಿ?

ಗೌರೀಶ : ಜರಾ ಇದು ಆಗೇತಿ....

ಗೌರಿ : ಏನದು ಇದು–?

ಗೌರೀಶ : ಸಿಡಿ ಸಿಡಿ....

ಗೌರಿ : ಅಂದರ....?

ಗೌರೀಶ : ಸಿಡಿ ಸಿಡಿ ಅಂದರ ಅರ್ಥಾತ್ ಕಣಕಣಿ....

ಗೌರಿ : ಕಣಕಣಿ ಅಂದರ.....?

ಗೌರೀಶ : ಸುಸ್ತು?

ಗೌರಿ : ಸುಸ್ತು ಅಂದರೆ..............?

ಗೌರೀಶ : (ಅಣಕಿಸುವಂತೆ) ಸುಸ್ತು ಅಂದರೆ...... ಕೇಳತಾಳ ಹಲ್ಲಕಿಸ್ತ ಯಾದಗಿರಿ ಮಂಗ್ಯಾನಂಗ ಎಲ್ಲಿತನ ಅದು ಹೇಳೂದು! ಅದಕS ಅಂತಾರ

ಕೇಳೋರ ಮುಂದೆ ಹೇಳೊರ ದಡ್ಡರಂತ

**ಗೌರಿ :** ಯಾರಿಗೆ ಗೊತ್ತು ಮಾರಾಯ ಹುಟ್ಟಿ ಇಷ್ಟ ದೊಡ್ಡಾಕಿ ಆದರೂ ಸಣ್ಣಸಣ್ಣ ಜಡ್ಡ ಅಂದರ ವಮ್ಮಿ ಬಂದಿಲ್ಲ.

**ಗೌರೀಶ :** ನಿನಗ ಬರು ಜಡ್ದು ಅಂದರ ನಾಲ್ಕು ಮಂದಿ ಹೊತ್ತು ಹೊಯ್ಯುಕೊಳ್ಳುವಂಥಾದ್ದು.

**ಗೌರಿ :** ಏ ಅಡ್ನಾಡಿ ನಾ ಹೇಳೂ ಮಾತೇನ ಸುಳ್ಳ ಅಲ್ಲ; ಇಲ್ಲಿ ತನಕಾ ನನ್ನ ಮೂಗು ನೆಗಡಿ ಕಂಡಿಲ್ಲ, ಗಂಟಲು ಕೆಮ್ಮು ಕಂಡಿಲ್ಲ.

**ಗೌರೀಶ :** ಈಗ ಕಾಲಿಗೆ ಕುರಾ ಆಗಿ ನಡೀತಿಯಲ್ಲ (ನಡದು) ಮೂಲವ್ಯಾದಿ ಬ್ಯಾನಿ ಇದ್ದೋರಂಗ ।

**ಗೌರಿ :** ಹೌದು ಗೌರೀಶ ಹತ್ತು ದಿನಾ ಆತು ಈ ಕುರುವಿನ ಹೊಡತಕ್ಕ ಹಗಲೂ ರಾತ್ರಿ ಕಣ್ಣಿಗೆ ಕಣ್ಣು ಹಚ್ಚಿಲ್ಲ ನಿದ್ದಿ ಮಾಡಿಲ್ಲ

**ಗೌರೀಶ :** ನೀನು ಒಂದು ಕುರುವಿಗೆ ಹೀಗಂತಿ ಆ ದುರ್ಯೋಧನಗ ಎಷ್ಟಾಗಿರಬ್ಯಾಡ.

**ಗೌರಿ :** ಅವನಿಗೂ ಕುರು ಆಗಿದ್ದುವೇನು?

**ಗೌರೀಶ :** ಆಗಿದ್ದವೆನು ಅನ್ನಾಕೇನ ಆಗಿರಲೇಬೇಕು. ಕೋಟ್ಯಾನಗಟ್ಟಲೆ ಕುರು ಆಗಿದ್ದರಿಂದನS ಅವನಿಗೆ ಕುರುಪತಿ ಕುರು ರಾಜಾ ಅಂತ ಹೆಸರು ಬಂದಿರೋದ. ಇನ್ವ ಸ್ವಲ್ಪ ದಿವಸ ತಡಿ ನಿನಗೂ ಕರಿತಾರ......

**ಗೌರಿ :** ಏನಂತ?

**ಗೌರೀಶ :** ಗೌರಾಬಾಯಿ ಕುರುವಿನ, ಅಂತ

**ಗೌರಿ :** ಹಲಕಟ್ಟರ ಸಭಾದಾಗ ಹಲ್ಲು ಕಿಸಿಯವನS ಅದಿS ಏಳ ನಡಿ ದವಾಖಾನಿ ಕಡಿಗೆ ಹೋಗೂನು.

**ಗೌರೀಶ :** ಗೌರಿ, ನಿನ್ನ ದೈವ ನೆಟ್ಟಗದ ಡಾಗದಾರ ಶರತಪ್ಪ ಇತ್ತಾಗ ಬರಾಕ ಹತ್ಯಾನ....

**ಗೌರಿ :** ರಸ್ತಾದಾಗ ನಿಂತ ಕೇಳಿದರೆ ಸಿಟ್ಟಿಗೆ ಬರಾಕಿಲ್ಲ?

**ಗೌರೀಶ :** ನಮ್ಮ ಸಾವಕಾರ ಗೆಳೆಯಾ ಅದಾನೇಳ ಅವಾ....

(ಶರತ್ ಬರುವನು)

ಗೌರೀಶ : ನಮಸ್ಕಾರಿ ಎಪ್ಪಾ ಡಾಗದಾರಿ....

ಶರತ್: ನಮಸ್ಕಾರ ನಮಸ್ಕಾರ ಮತ್ತೇನ ವಿಶೇಷ..... !

ಗೌರೀಶ : ವಿಶೇಷವೇನೂ ಇಲ್ಲ ಗೌರಿ, ಹೇಳ ಸಾಬರ ಮುಂದ

ಗೌರಿ : ನಮಗೇನೂ ಉಣ್ಣಾಕ ತಿನ್ನಾಕ ಕಡಿಮೆ ಇಲ್ರಿಯಪ್ಪಾ ಆದರS......

ಶರತ್ : ಆದರೇನು?

ಗೌರೀಶ : ದೌಡ ಹೇಳಬಾರದs ಸುಮ್ನ ಇದು ಆತು ಅದು ಆತ ಅಂತ ಹೀಗೆ ಯಲ್ಲಮ್ಮನ ಗುಡ್ಡ ಸುತ್ತು ಹಾಕತಿ

ಗೌರಿ : ಈಗ ಎಂಟತ್ತ ದಿವಸಾತ್ರಿ ಕುರಾ ಆಗಿ ಬಾಳ ತರಾಸ ಆಗೇತ್ರಿ.....

ಶರತ್ : ಹೌದವ್ಮಾ ಕುರುವಿನ ಹೊಡೆತಕ್ಕೆ ಕೋಣನಂತವರೂ ಮೇಣದಂತಾಗುವರು, ಪಾಪ ಎಷ್ಟು ಸೊರಗಿರುವಿ.

ಗೌರೀಶ : ಈಗ ಐದಾರು ದಿವಸಾತ್ರಿ ಊಟಾ ನೀರು ಬಿಟ್ಟು ಬರೇ ಚಹ ಪುರೇದ ಮ್ಯಾಲೆ ಆದಾಳ್ನೋಡ್ರಿ.

ಶರತ್ : ಎಲ್ಲಿ ಸ್ವಲ್ಪ ಬಾಯಿ ತೆರಯಮ್ಮ (ಗೌರಿ ಡಾಕ್ಟರರ ಬಾಯಿ ತೆರೆಯಲ ಹೋಗುವಳು)

ಗೌರೀಶ : ಏ ಕತ್ತಿಗರುವಿನಂಥದ, ನಿನ್ನ ಬಾಯಿ ತೆರಿ (ಗೌರಿ ಬಾಯಿ ತೆರೆಯುವಳು ಡಾಕ್ಟರರು ಕಣ್ಣು, ನಾಲಿಗೆ ನೋಡಿದ ನಂತರ ನಡ ಎದೆ ಮುಟ್ಟಿ ಮುಟ್ಟಿ ನೋಡುವರು) ಎಪ್ಪಾ ನಾ ಕಣ್ಣ ಮುಚಗೋ ತೇನ್ರಿ ಇದ್ಯಾವ ಪರೀಕ್ಷಾರಿ ಮರ್ಯಾದಿ ಪರೀಕ್ಷಾ.........

ಶರತ್ : ರೋಗ ತಿಳಿಬೇಕಾದ್ರ ಎಲ್ಲಾನು ಪರೀಕ್ಷಾ ಮಾಡಬೇಕಾಗುತ್ತ........

ಗೌರೀಶ : ನೀವು ಏನರ ಅನ್ರಿಯಪ್ಪಾ.... ಹೆಣ್ಮಕ್ಕಳಿಗೆ ಬರೇ ಕೆಮ್ಮು ಬಂದರ ಕೂಡಾ ಡಾಗದಾರವರು ಮೈ ಮುಟ್ಟಿ ಕೈ ಮುಟ್ಟಿ ಪರೀಕ್ಷಾ ಮಾಡ್ತಾರ. ಅದs ಗಂಡಸರು ಜಡ್ಡಿಲೇ ಸಾಯಾಕ ಆದರೂ ಸಹಿತ ಪರೀಕ್ಷಾ ಮಾಡೋದೊತ್ತಟ್ಟಿಗಿರಲಿ ಯಾವ ಜಡ್ಡಾಗ್ಯಾದ ಅಂತ ಕೇಳದೇನ ಸಿದ್ದ ಮಾಡಿಕೊಂಡು ಬರತಾರಿ.

ಶರತ್ : ನನ್ನ ಮೇಲೆ ವಿಶ್ವಾಸವಿಲ್ವೇನೋ.........?

ಗೌರೀಶ : ವಿಶ್ವಾಸ ಐತೆಂತ ಹಾದ್ಯಾಗ ನಿಂದರಿಸಿ ಕೇಳಾಕ ಹತ್ತೀವಿ.

ಶರತ್ : ಸರಿ ರಕ್ತ ದೋಷದಿಂದ ಈ ಕುರುಗಳು ಆಗುತ್ತಿರುವದು. ಮನೆ ಕಡೆಗೆ ಬಾ ಔಷಧ ಬರೆದು ಕೊಡುತ್ತೇನೆ.

ಗೌರೀಶ : ನನ್ನ ಇಷ್ಟು ನೋಡತೀರೇನು.

ಶರತ್ : ನೀನಗೇನಾಗಿರುವದೋ...... ಮೇಣಬಸ್ತಿ ಕಂಬ ಆಗಿರುವಿ.

ಗೌರೀಶ : ಇಂದು ಮುಂಜಾವಿನಿಂದ ಯಶಸ್ವಿ ಏಳು ಪ್ರಯೋಗ ಮುಗಿದ ಎಂಟನೆದರ ತಯಾರಿ ನಡದದರಿ.

ಶರತ್ : ಏನದು?

ಗೌರೀಶ : ಬೈಲಕಡಿಗಿರಿ.

ಶರತ್ : ಗೌರೀಶ ಬಹಳ ರಸಿಕ ನೀನು ಆಗಲಿ ಇಬ್ಬರಿಗೂ ಔಷಧ ಕೊಡುವೆ (ಹೋಗುವನು).

ಗೌರಿ : ನಡಿ ಅವರ ಮನಿಗೆ ಹೋಗಿ ಅಗಸಿದ್ಯಾ ತರಿಯಂತ.

ಗೌರೀಶ : ಗೌರಿ ಡಾಗದರ ಅಗಸಿದ್ಯಾದಿಂದ ನಿನ್ನ ಕುರುವು ನೆಟ್ಟಗಾದರೂ ನನ್ನ ಸುಸ್ತು ನೆಟ್ಟಗಾಗೋದು ಬಾಳ ಕಠಿಣೈತ.

ಗೌರಿ : ಅಂದರ ನಿನ್ನ ಅಗಿಸಿದ್ಯಾ ಎಲ್ಲಿ ಸಿಗುತ್ತ?

ಗೌರೀಶ : ಇಲ್ಲೇ ಅದ.

ಗೌರಿ : ಎಲ್ಲಿ?

ಗೌರೀಶ : ಇಲ್ಲೇ..... (ಬೆರಳಿನಿಂದ ಗೌರಿಯನ್ನು ತೋರಿಸುವನು)

ಗೌರಿ : ಇಲ್ಲೇನ ಕ್ವಾಟೀನ (ಸ್ವಾಟೀನ ತಿವಿಯುವಳು)

ಗೌರೀಶ : ಹಾಂ...ಹಾಂ....ಹರಿಬಾಡ ಸ್ವಾಟೀನ....ನಿನೆS ನನ್ನ ಸುಸ್ತಿನ ಅಗಸಿದ್ಯಾ ನೀ ಒಪ್ಪಿದರೆ ನಾನು ಗೆದ್ದೆ.....ಇಲ್ಲದಿದ್ದರ ಕಂದಕದಾಗ ಬಿದ್ದೆ....

ಗೌರಿ : ಆಗಲೇಳ ವಿಚಾರ ಮಾಡೂನು.

ಗೌರೀಶ : ಎಲ್ಲಿ ತನಕ ವಿಚಾರ ಮಾಡೂದು?

ಗೌರಿ : ಗಂಡ ಹೆಂಡರು ಆಗೂದು ಅಂದರ ಗೊಂಬಿ ಆಟ ಅಂತ ತಿಳಿದಿ ಏನ?

**ಗೌರೀಶ :** ಗೌರಿ, ಈ ಹಿಡಿದು ಬಿಟ್ಟ ಕೆಲಸ ಪಾಡಲ್ಲ. ಇನ್ನೂ ಎಷ್ಟ ದಿವಸ ಬೇಕು ಒಮ್ಮೆ ಹೇಳಿ ಬಿಡು, ಅಲ್ಲಿ ತನಕಾ ಮನಸ್ಸ ಕಲ್ಲು ಮಾಡಿಕೊಂಡು ಕಾಲಾ ಕಳೀತಿನಿ.

**ಗೌರಿ :** ಏ ಇರ್ಲಿನಡಿಯಽ....... (ಹೋಗುವರು)

**ವಸಂತ :** (ಪ್ರವೇಶಿಸಿ) ಕಾಲಚಕ್ರ, ಏನು ನಿನ್ನ ವಿಚಿತ್ರ ಲೀಲೆ, ಸಮುದ್ರದಲ್ಲಿ ಮುಳುಗುವವನಿಗೆ ಕಡ್ಡಿಯಾಸರವಾಗದಂತೆ ಇದ್ದ ತಂದೆಯನ್ನು ನುಂಗಿ ಕಣ್ಣು ಕಟ್ಟಿ ಬಿಟ್ಟಿಯಾ ನನ್ನನ್ನು ಈ ಬಾಳ ಬೆಂಗಾಡಿನಲ್ಲಿ....ದೇವಾ.... ಬಡತನದ ಕಾರ್ಗತ್ತಲೆಯಲ್ಲಿ ಕಷ್ಟ ಕಾರ್ಪಣ್ಯದ ಕಡಲಲಿ ಸಾಗಿರುವ ಈ ದೀನನ ಬಾಳನೌಕೆಯು ದಡವ ಸೇರುವಂತೆ ಮಾಡುವ ಹೊಣೆ ನಿನ್ನ ಮೇಲೆಯೇ ಇದೆ.

**ಪದ**

ದೀನ ಶರಣ । ತೋರು ಕರುಣ । ನೀನೆ ಜಗದಿ ಜೀವನ ॥ಪ॥
ಹೇ ವಿಧಾತ, ಭಾಗ್ಯದಾತ ।
ಕಾಯೋಲೋಕಪಾವನ ॥
ಬಾಳಕಡಲಲ್ಲಿ ಮುಳುಗಿ । ತೇಲುತಿರವ ಬಡವರನ್ನು
ಮೇಲೆ ಎತ್ತಿ ಕಾವುದಯ್ಯ । ಹರಿದು ಬಾಳಬಂಧನ । (ಹೋಗುವನು)

**ಗೌರೀಶ :** ಕೈಯಲ್ಲಿ ಔಷಧದ ಬಾಟ್ಲಿ ಹಿಡಿದು ಗೌರಿಯೊಂದಿಗೆ ಬರುವನು.

**ಗೌರಿ :** ಏನು ಹೇಳಿದರು ಡಾಗಾದಾರು–

**ಗೌರೀಶ :** ಈ ಔಷಧ ದಿವಸಾ ಮೂರು ಹೊತ್ತು ಮೂರು ದಿವಸ ಕುಡದು, ನಾಲ್ಕನೆ ದಿವಸ ಉಳಿದರಽ ಮತ್ತ ಬರಬೇಕಂತ

**ಗೌರಿ :** ಉಳಿದರಽ.....

**ಗೌರೀಶ :** ಕುರಾ ಉಳದರ......

**ಗೌರಿ :** ನಡಿ ಹಂಗರ....... (ಹೋಗುವರು)

## ಪ್ರವೇಶ–೪

### ಗಾಂಧಿ ಪಾರ್ಕ

**ವಸಂತ :** (ಬರೆದುದನ್ನು ಓದುತ್ತ) ಎಂಥ ಸುವರವಾದ ಸಂಧ್ಯಾ ಸಮಯ. ದಣಿದವರನ್ನು ದಣಿಸಿ. ತಣಿಸದವರನ್ನು ತಣಿಸಿ ದಣೀವ ದಿನಮಣಿಯು ಪಶ್ಚಿಮ ದಿಕ್ಕಾಂತೆಯ ಮುಡಿಯಲ್ಲಿಯ ಪದ್ಮದಂತೆ ಕಂಗೊಳಿಸತಿಹನು. ಶಕ ಸಾರಿಕೆಗಳು ಹಾಡಿ ಹಾರಾಡಿ ಶಿಸ್ತಿನ ಸೈನಿಕರಂತೆ ಸಾಲಾಗಿ ಸಾಗಿವೆ ತಮ್ಮ ಗೂಡು ಸೇರಲು. ಕೋಗಿಲೆಯ ಪಂಚಮದಿಂಚರವು ಯುವಕ ಯುವತಿಯರನ್ನು ಪ್ರಣಯ ಮಂಚಕೆ ಕರೆದು ತರುತಿವೆ ಪ್ರಿಯ ಪ್ರೇಯಸಿಯರಿಗೆ ವನಕ್ರೀಡೆಯಾಡಲು

**ಕೋಕಿಲಾ :** (ಬಳ್ಳಿಯ ಮರೆಯಿಂದ ಹೊರಗೆ ಬರುತ್ತ) ತಕ್ಕ ಸಮಯ (ನಗುವಳು.

**ವಸಂತ :** ಆಂ.... ಯಾರು ಕೋಕಿಲಾದೇವಿ ನಮಸ್ತೆ ಬನ್ನಿ.

**ಕೋಕಿಲಾ :** ಆಲೋಚನೆಯ ಅಂಬುಧಿಯಲ್ಲಿ ಮುಳುಗಿದಾಗಲೇ ಅಲ್ಲವೇ ಸಾಹಿತ್ಯದ ಮತ್ತುಗಳು ಸಿಗುವದು.

**ಕೋಕಿಲಾ :** ಸರಿ ಇದೋ ಅಂದು ಓದಲು ಕೊಟ್ಟಿದ್ದ ನಿಮ್ಮ ಸಾಮಾಜಿಕ ನಾಟಕ.

**ವಸಂತ :** (ತೆಗೆದುಕೊಳ್ಳುತ್ತ) ಹೇಗಿದೆ ಸಾಹಿತ್ಯ?

**ಕೋಕಿಲಾ :** ನಿಸ್ವಾರ್ಥ ತಕ್ಕಡಿಯಲ್ಲಿ ತೂಗಿ ನೋಡಿದರೆ ನಿಜವಾಗಿಯೂ ನಿಮ್ಮ ನಾಟಕ ಅನರ್ಘ್ಯರತ್ನ. ನಿಮ್ಮಂಥ ಸಾಹಿತಿಗಳನ್ನು ಪಡೆದ ಶಾರದಾಂಬೆ ಧನ್ಯಳು.

**ವಸಂತ :** ಸಾಹಿತ್ಯದ ಸಾಗರದಲ್ಲಿ ಅ.ನ.ಕೃ. ಕಟ್ಟಿಮನಿ. ಕುವೆಂಪು ಕಾರಂತರಂಥ ಅಮೂಲ್ಯ ಮುತ್ತುಗಳಿರುವಾಗ, ಸ್ವಾತೀಹನಿಗಾಗಿ ಸಾಹಿತ್ಯದ ಬಾಯ್ತೆರೆದು ಬಿದ್ದಿರುವ ಈ ಬಡ ಚಿಪ್ಪಿಗೆ ಸಾಹಿತಿಯೆಂಬ ಅನ್ವರ್ಥಕ ನಾಮವೇಕೆ?

**ಕೋಕಿಲಾ :** ತುಂಬಿದ ಕೊಡ ತುಳಕದು. ನವರಸ ಯುಕ್ತವಾದ ನಿಮ್ಮ ನವೀನ ಕಲಾಕೃತಿಯು ಮಾನವನಲ್ಲಿ ನೆಚ್ಚಿರಲಿ ಕಿಚ್ಚಿರಲಿ, ತುಚ್ಛತೆಯ ಕಡೆಗೆ ಲಕ್ಷವಿರಲಿ ಎಂಬ ಬೋಧನೆಯನ್ನು ಬೀರುವದಲ್ಲದೆ, ಸಂದರ್ಭೋಚಿತವಾಗಿ ಅಣ್ಣನವರ ವಚನಗಳನ್ನು ನುಣ್ಣಾಗಿ ಅಳವಡಿಸಿ ಕೊಂಡು ಸಂಭಾವನೆ ಸಿಗುವ ಸುಯೋಗವಿದ್ದಂತಿದೆ.

**ವಸಂತ :** ಸಂಭಾವನೆ ! ನಾಟ್ಯ ಸಾಹಿತ್ಯದಾಕಾಶದಲ್ಲಿ ಸೂರ್ಯ ಚಂದ್ರನಾಗಿ ಬೆಳಗುತ್ತಿರುವ ಪ್ರತಿಭಾ ಸಂಪನ್ನ ನಾಟಕಕಾರರಿಗೇನೇ ಸಂಭಾವನೆ ಸಿಗದೇ ಸಂಜೆ ಮುಂಜಾನೆಯ ಅಂಬಲಿಯ ಅಂಜಿಕೆ ತಪ್ಪಿಲ್ಲ ಅವರಿಗೆ. ಅಂದಾಗ ಇದೀಗ ಶಾರದೆಯ ಸೇವೆಗಾಗಿ ನಡೆಸಲಿರುವ ಮಗುವಿಗೆ ಯಾರು ತಾನೆ ಮಾತಾಡಿಸಬೇಕು.

**ಕೋಕಿಲಾ :** ನಿಜ, ಕಲ್ಲೆದೆಯ ಸಮಾಜ ಕಣ್ತೆರದು ನೋಡಲಾರದು ಶಾರದೆಯ ಭಕ್ತರನ್ನು.

**ವಸಂತ :** ಇಂದಿನ ಸಮಾಜ ಸ್ವಾರ್ಥಮಯವಾಗಿದೆ. ಭಕ್ತ ಶಿರಿಯಾಳರ ಪುಣ್ಯ ಭೂಮಿ. ಬುದ್ಧ, ಬಸವ, ವಿದ್ಯಾರಣ್ಯರ ಧರ್ಮಭೂಮಿ. ಗಾಂಧಿ ಹುತಾತ್ಮರ ಸಮತಾಭೂಮಿ ಇಂದು ನಿರ್ದಯ ನಿಷ್ಠುರದ ಸ್ಮಶಾನವಾಗ ತೊಡಗಿದೆ. ಎತ್ತ ನೋಡಿದರತ್ತ ಜಾತಿಯತೆಯ ಜ್ವಾಲಾಮುಖಿಯು ತನ್ನ ಕರಾಳ ಕನ್ನಾಲಿಗೆಗಳನ್ನು ಚಾಚಿ ಉಗುಳುತ್ತಿದೆ ಅನೈಕ್ಯ ಅತ್ಯಾಚಾರದ ಕಿಡಿಗಳನ್ನು.

**ಕೋಕಿಲಾ :** ನಿಜವಾಗಿ ನಿಸ್ವಾರ್ಥತೆಯಿಂದ ದುಡಿಯುವ ಮುಖಂಡರು ಕೇವಲ ಕೈ ಬೆರಳಿನ ಮೇಲೆಣಿಸುವಷ್ಟು ಇದ್ದು, ಭಾರತದ ಅವನತಿಯೆ ತಮ್ಮ ಪರಮ ಗುರುಯೆಂದು ಸಾಗಿರುವ ಕುತ್ಸಿತ ಭಾವನೆಯ ಕುಟಿಲರ ಕೂಟಗಳೇ ಸಾಕಷ್ಟಿವೆ ಭಾರತದಲ್ಲಿ.

**ವಸಂತ :** ಅಂತೆಯೇ ವಂಗದೇಶದ ಬಂಕಿಮಚಂದ್ರರಿಗೆ ಸಸ್ಯ ಶ್ಯಾಮಲೆಯಾಗಿ ಕಂಡ ಭಾರತ, ಸುಜಲಾಂ ಸುಫಲಾಂ ಎಂದು ಹೊಗಳಿಸಿ ಕೊಂಡ ದೇಶ ಇಂದು ರೋಗ ರುಜಿನುಗಳ ತೌರುಮನೆಯಾಗಿ ತಿನ್ನುವ ಅನ್ನಕಾಗಿ ಅನ್ಯದೇಶಕ್ಕೆ ಯಾಚಿಸುವಂತಾಗಿದೆ.

**ಕೋಕಿಲಾ :** (ಸ್ವ) ಏನಿವರ ಭಾವ ಗರ್ಭಿತ ಭಾವನೆಗಳು ಇಂಥ ಗುಣ ರತ್ನ ನನ್ನ ಬಾಳ ಸಂಗಾತಿಯಾದರೆ ನನ್ನ ಭಾಗ್ಯಕ್ಕೆ ಎಣೆಯೇ.......?

**ವಸಂತ :** ಕೋಕಿಲಾ ಹೊತ್ತಾಯಿತು ನಡೆ ನಿನ್ನೆಯ ಲೆಕ್ಕ ಪತ್ರ ಹಾಗೆ ಉಳಿದಿವೆ ನೋಡಿದರೆ ನಿಮ್ಮ ತಂದೆಯರು ಕೋಪಿಸಬಹುದು.

**ಕೋಕಿಲಾ :** ವಸಂತ.......

**ವಸಂತ :** ಏನು?

**ಕೋಕಿಲಾ :** ಇದುವರೆಗೂ ಎನ್ನಾತ್ಮದಲ್ಲಿ ಸುಪ್ತವಾಗಿದ್ದ ಆಶೆಯೊಂದನ್ನು ಮನಬಿಚ್ಚಿ ಕೇಳಲು ಆಶಿಸುತಿದೆ ಮನ

**ವಸಂತ :** ಅದೇನು?

**ಕೋಕಿಲಾ :** ಕಮಲಪುಷ್ಪದ ವಿರಹ, ಹೊಳೆಯದಿರುವದೇ ರವಿಯ ಹೃದಯಕೆ?

**ವಸಂತ :** ನಿಮ್ಮ ಮಾತಿನ ಮತಿತಾರ್ಥವಾಗಲಿ....

**ಕೋಕಿಲಾ :** ವಸಂತ: ನಿಮ್ಮ ಹೃದಯದ ಪ್ರೇಮೋದ್ಯಾನದರಲ್ಲಿ ಕುಳಿತು ಕೊಳ್ಳಲು ಬಯಸುತಿದೆ ಎನ್ನಮನದ ಕೋಕಿಲೆ.....

**ವಸಂತ :** ಕೋಕಿಲಾ; ಸುಷುಪ್ತಿಯಿರುವಿಯಾ?

**ಕೋಕಿಲಾ :** ಜಾಗ್ರತೆಯಲ್ಲಿಯೇ ಇರುವೆ. ನಾ ನಿಮ್ಮ ಮದುವೆಯಾಗಿ ಎಚ್ಚರಿಸುವ ಬಡವ ಬಲ್ಲಿದರೆಂಬ ಭೇದವೆಣಿಸುವ ಭಾಂಡ್ವಾಲಶಾಹಿಗಳೆಂಬ ಭೂತಗಳಿಗೆ.

**ವಸಂತ :** ತಾರುಣ್ಯದ ಸೆಳವಿನಲ್ಲಿ ಸಿಲುಕಿ, ಮುಂದ್ವರಿದು ಮುಳಗಿರುವ ಸಮಾಜ ಶರತ್ತಿನ ಸ್ವಾರ್ಥದ ಸುಳಿಯಲಿ ನನ್ನ ಕರಪಿಡಿದು ನೀನಾವ ಸುಖ ಸಂಪತ್ತು ಕಾಣುವಿ....?

**ಕೋಕಿಲಾ :** ಸುಖ ಸಂಪತ್ತಿನ ಹೇಸಿ ಆಸೆ ನನಗಿಲ್ಲ. ಸಕಲ ಸಂಪತ್ತಿಗೂ ಒರೆದೊರೆಯಾಗಿ ಮೆರಗುವ ನಿಮ್ಮ ಸುವರ್ಣದಂತಹ ಸದ್ಗುಣಗಳಿಗೆ ಮೆಚ್ಚಿ ಬಂದಿರುವೆ.

**ವಸಂತ :** ಸಿರಿರಾಣಿಯಾಗಿ ಸಿರಿಯ ಸಿಂಹಾಸನದ ಮೇಲೊರಗುವ ಕುಬೇರರಿಗೆ ಬಡಕುಟುಂಬದಿ ಜನಿಸಿದ ಸುದಾಮನು ಸರಿಯಾಗಿ ಬಲ್ಲನೇ?

**ಕೋಕಿಲಾ :** ಜನ್ಮಸ್ಥಳದ ಮೇಲಿಂದ ವಸ್ತುವಿನ ಬೆಲೆ ಕಟ್ಟುವದಾದರೆ ಕೆಸರಿನಲ್ಲಿ ಹುಟ್ಟಿದ ಕಮಲ, ಸೃಷ್ಟಿಕರ್ತನಿಗೆ ಜನ್ಮಸ್ಥಾನವೇಕಾಯಿತು. ಖಣಿಯಲ್ಲಿಯ ಕೋಹಿನೂರ ವಜ್ರ ಅರಸನ ಕಿರೀಟವನ್ನೇಕೆ ಏರಿತು?

**ವಸಂತ :** ಇದೇನು ಹುಚ್ಚುತನ? ನಾ ನಿಮ್ಮ ಮನೆಯ ನೌಕರ, ಮೇಲಾಗಿ ತಂದೆ ತಾಯಿಗಳನ್ನು ಕಳೆದುಕೊಂಡ ಪರದೇಶಿ, ಪರಸ್ಪರರ ಪ್ರೇಮದ ಕಾರಂಜಿಯ ಪೂತ್ಕಾರದ ಹನಿಗಳು ನಿಮ್ಮ ತಂದೆಯ ಕಿವಿಗಳಿಗೆ ಸಿಡಿದರೆ.....

**ಕೋಕಿಲಾ :** ನನ್ನ ಪ್ರೀತಿ ಅಚಲವಾಗಿರುವಾಗ ಯಾವ ತಂದೆ ಅದನ್ನು ಅಲುಗಾಡಿಸಲು ಸಾಧ್ಯ ಒಂದು ವೇಳೆ ಆತಂಕಗೈದರೆ ಈ ಮಹಾತ್ಮಾಜಿಯವರ ಸಾಕ್ಷಿಯಾಗಿ ಹೇಳುವೆ, ಸಿರಿಯಿಂದ ಮತ್ತನಾದ ನನ್ನ ತಂದೆಯ ಸೊತ್ತಿಗೆ ಲತ್ತೆ ಹೊಡೆದು ತೊತ್ತಾಗಿ ಬಾಳುವೆ ನಿಮ್ಮ ಧರ್ಮ ಪತ್ನಿಯಾಗಿ.

**ವಸಂತ :** ಧನ್ಯತಾಯಿ, ಭಾರತಾಂಬೆ ಇಂಥ ಆದರ್ಶ ಮಹಿಳೆಯರನು ಪಡೆದ ನೀನೇ ಧನ್ಯಳು. ಕೋಕಿಲಾ ದೇಶದ ಸರ್ವಾಂಗೀಣ ಏಳ್ಗೆಗಾಗಿ ಹಗಲಿರಳು ಹೆಣಗಾಡುವ ನಿನ್ನಂಥ ನಾಡಪ್ರೇಮಿಯ ಬೆಂಬಲ ನನಗಿರಲು ನಾನೇಕೆ ಅನುಮಾನಿಸಲಿ?

**ಕೋಕಿಲಾ :** ಇಡೀ ವಿಶ್ವದಲ್ಲಿಯೇ ನನಗೆ ನಿಮ್ಮಂಥ ಪಾವನ ಮೂರ್ತಿ ಸಮರಸ ಹೃದಯ ಸಿಗುವದು ಅಸಂಭವ ನೀವೆನಗೆ ಆದರ್ಶ ಪುರುಷ.

**ವಸಂತ :** ಕೋಕಿಲಾ ಇಂದಿಗೆ ಬಡವ ಭಾಗ್ಯಶಾಲಿಯಾದ ಭಾರತದ ಪ್ರತಿಯೊಬ್ಬ ಸ್ತ್ರೀ ಪುರುಷರಲ್ಲಿ ನಿನ್ನಂಥ ಪವಿತ್ರಭಾವನೆ ಒಡಮೂಡಿದಲ್ಲಿ ಮಹಾತ್ಮಾಜಿಯವರು ಕಟ್ಟಿಬಯಸಿದ ಕನಸಿನ ರಾಮರಾಜ್ಯ ತೀವ್ರದಲ್ಲಿಯೇ ನನಸಾಗಿ ತೋರುವದು.

## ಪ್ರವೇಶ–೫

### ರಸ್ತಾ

(ಅರುಣೋದಯ, ವಾಯು ವಿಹಾರಕ್ಕಾಗಿ ಅಶೋಕ ಗಂಗಾ ಹೊರಟಿರುವರು)

**ಅಶೋಕ :** ಗಂಗಾ, ನೋಡಲ್ಲಿ ಮೂಡಲೊಳು ರವಿಯು ಮೂಡಿ ಬರುವ ಸುರ ಸಂಭ್ರಮದ ದೃಶ್ಯವನ್ನು ! ರವಿಯು ಬರುವದನರಿತು, ಮುದದಿ ಮಂದಾನಿಲಯ ಧರೆಯ ಜೀವಿಗಳನ್ನು ಎಚ್ಚರಿಸುತ್ತ ಸೂರ್ಯನೆ ಸುಳಿಯುಂತೆ ಸಾಗಿರುವನು ಧರೆಗೆ ಸಮ್ಮದವ ನೀಡುತ್ತ.

**ಗಂಗಾ :** ಎಂತಹ ಆನಂದದ ಸಮಯ. ಮನ ಮುಳುಗಿ ತೇಲುತಿದೆ ಸಂತೋಷ ಸಾಗರದಲ್ಲಿ ಅದೋ ನೋಡಿ, ವನರಾಣಿಯ ಪಾಣಿ ಗ್ರಹಣ ಮಾಡಲು ಹೊರಟಿರುವನೋ ಎಂಬಂತೆ ವಿನೋದ ವಿಲಾಸ ಪ್ರಿಯ, ಮಾಧವಿ ಕಾಂತನಾದ ವಸಂತನು ಹಸುರಿನ ಕುಸುರು ಕೆಲಸದ

ನಿಸರ್ಗ ಸೃಷ್ಟಿಯ ತೊಡುಗೆಯನ್ನು ತೊಟ್ಟು ತಾನೇ ತಾನಾಗಿ ಹೇಗೆ ಶೋಭಿಸುತ್ತಿರುವನು !

**ಅಶೋಕ :** ಘಮಘಮಿಸುವ ಪುಷ್ಪಗಳ ಕಂಪು, ಮುಗಿಲಿಗೆ ಮುದ್ದು ಕೊಡುವ ಸ್ಪರ್ಧೆಯನ್ನಿಟ್ಟು ಬೆಳೆದ ಮರಗಳ ಸಂಪು, ಅದೇ ಮರವನ್ನಾಶ್ರಯಿಸಿದ ಬಳ್ಳಿ ಸತಿಪತಿಗಳ ಪ್ರೇಮಾಲಿಂಗನದ ಸವಿನೆನಪನು ತಂದು ಕೊಡುವ ಸೊಂಪು.

**(ಕೋಗಿಲೆ ಕೂಗುವದು)**

**ಗಂಗಾ :** ಅದೋ ಕೇಳಿ ಸುರಕಂಠದ ಕೋಗಿಲೆಯ ಕುಹುರವ, ದೆಸೆ ದೆಸೆಗಳಿಂದ ಒಸೆಒಸೆದು ಕಣ್ಣಿಗೆ ಸುಗ್ಗಿಯನ್ನುಂಟು ಮಾಡುತಿದೆ ಸೃಷ್ಟಿ ಸೌಂದರ್ಯ !

**ಅಶೋಕ :** ಎಷ್ಟು ನೋಡಿದರೂ ಸಾಕೆನ್ನಲೊಲ್ಲದು ಅಂತರ್ಯ.

**ಗಂಗಾ :** ಸ್ವಾಮಿ

**ಅಶೋಕ :** ಏನು?

**ಗಂಗಾ :** ನಿರಂತರವಾಗಿ ಒಂದೇ ಒಂದಾದ ಜೀವನ ಸಾಧಿಸುವ ನೀರಸ ಬಾಳಿಗಿಂತ ಕ್ಷಣಕ್ಷಣಕ್ಕೂ ಬದಲಾಗುವ ಭೂಲೋಕದ ಬಾಳು ನಿಜವಾಗಿಯೂ ಬಂಗಾರ.

**ಅಶೋಕ :** ಅರಿತು ನಡೆದರೆ ಬಂಗಾರ.....

**ಗಂಗಾ :** ಮರೆತು ನಡೆದರೆ ಅಂಗಾರ.....

**ಪದಾ**

**ಅಶೋಕ :** ಈ ಲೋಕದ ಬಾಳು ಬಂಗಾರ ।
ಪ್ರೀತಿಯ ಸತಿಪತಿ ಸಂಸಾರ ।

**ಗಂಗಾ :** ಬಳ್ಳಿಗೆ ಮರವೇ ಆಧಾರ ।
ಹೆಂಡತಿ ಗಂಡಗೆ ಶೃಗಾರ ।

**ಅಶೋಕ :** ಚೆಲುವಿನ ಹೆಂಡತಿಗೊಲಿದ ಗಂಡನೆ ।
ಹಲಸು ಮಾವಿನ ಹಣ್ಣು ರುಚಿ ಪೂರಾ ।

**ಗಂಗಾ :** ಸತಿಯ ಸೌಭಾಗ್ಯದ ಮಂದಿರ ।
ಪತಿಯು ಕೊರಳ ಮಲ್ಲಿಗೆ ಹಾರ ।

**ಅಶೋಕ :** ಪತಿದೇವಾ ಸೃಷ್ಟಿ ಸೌಂದರ್ಯದ ಸುಧೆಯನ್ನುಂಡು ನಮಗೆ ಸಂತೋಷ ಸಲಿಲದಿಂದ ಬಾಯ್ತೊಳೆದ ಇನ್ನೊಂದು.....

**ಅಶೋಕಾ :** ಮಾತು ಪೂರ್ಣವಾಗಲಿಲ್ಲ.

**ಗಂಗಾ :** ನಮ್ಮ ಬಾಳಿನ ವಸಂತದ ನಿರ್ಮಲಾಕಾಶದಲ್ಲಿ ಭಾಗ್ಯದ ಶಿಶುಚಂದ್ರಮನು ಉದಯಿಸುವ ಕಾಲ

**ಅಶೋಕ :** ಸನ್ನಿಹಿತವಾಗಿದೆಯಲ್ಲವೇ ಸಂತೋಷ.

**ಗಂಗಾ :** (ಕೈ ಹಿಡಿದು) ಶೃಂಗಾರ ಸಾಗರಿ,

**ಅಶೋಕ :** ಅಮೃತದ ಓಗರ

**ಗಂಗಾ :** ಆಯಿತೆಮ್ಮ ಬದುಕು ಬಂಗಾರ

**ಅಶೋಕ :** ನಡೆಯಿನ್ನು.... (ಹೋಗುವರು)

## ಪ್ರವೇಶ–೬

(ಅಶೋಕನ ಮನೆ ಗೌರೀಶನು ನಿನ್ನನ್ನು ನೆನೆಯುತ ರಾತ್ರಿಯ ಕಳೆದೆ ಎಂಬ ಪದವನ್ನು ಗುನುಗುನು ಅನ್ನುತ್ತ ಕುರ್ಚಿ, ಟೇಬಲ್ಲುಗಳನ್ನು ಸ್ವಚ್ಛಗೊಳಿಸಿ ಓರಣವಾಗಿಡುತಿರುವನು)

**ಅಶೋಕ :** (ಒಳಗಿನಿಂದ ಬರುತ್ತ) ಗೌರೀಶಾ.....

**ಗೌರೀಶ :** ಯಾಕ್ರಿಯಪ್ಪಾ.....

**ಅಶೋಕ :** ಪೇಪರ ಬಂದಿಲ್ಲವೇನೋ?

**ಗೌರೀಶ :** ಬಂದಾವರಿ, ದನದ ಕೋಟಿಗ್ಯಾಗ ಅದಾವು

**ಅಶೋಕ :** ಅಲ್ಲೇಕೆ ಒಯ್ದಿಯೋ?

**ಗೌರೀಶ :** ಹೆಣ್ಣುಗೊಂಬಿ ಚಿತ್ತಾರ ಬಾಳ ಇದ್ದುವ್ರ್ಯಾ ನೀವು ಗಾಳಿ ತಿನ್ನಾಕ ಹೋಗಿದ್ರಿ.... ಓಟ ನೋಡಿಕೊಂತ ಕುಂತಿದ್ದಿನ್ರಿ.

**ಅಶೋಕ :** ಸರಿ ತೆಗೆದುಕೊಂಡು ಬಾ..... ಪೇಪರ ತಂದೊಡನೆ ಇದೋ ಇಂದು

ಹನ್ನೊಂದು ಗಂಟೆಯ ಮೇಲಿಗೆ ನಾನು ದೆಹಲಿಗೆ ಹೋಗಬೇಕಾಗಿದೆ.

**ಗೌರೀಶ :** ಯಾಕ್ರಿ ಎಪ್ಪ ಬಹಳದೂರ ಹೊಂಟ್ರಿ?

**ಅಶೋಕ :** ದೆಹಲಿಯಲ್ಲಿ ನಡೆಯಲಿರುವ ರೈತರ ಪರಿಷತ್ತಿಗೆ ನಮ್ಮ ಜಿಲ್ಲೆಯಿಂದ ನನ್ನನ್ನು ಪ್ರತಿನಿಧಿಯಾಗಿ ಆರಿಸಿದ್ದಾರೆ.

**ಗೌರೀಶ :** ಏನು ಪರಿಷತ್ತೋ ಏನ ಗರದಿಗಮ್ಮತ್ತೋ..... ನಮಗೇನ ತಿಳಿಬೇಕರಿ ಈಗ ನನ್ನ ಕೆಲಸೇನ ಹೇಳಿಬಿಡ್ರಿ

**ಅಶೋಕ :** ನನ್ನ ಬೆಡ್ಡಿಂಗ ಸಜ್ಜುಗೊಳಿಸು....

**ಗೌರೀಶ :** ಆಗಲ್ರೀ, (ಒಳಗೆ ಹೋಗುವನು)

**ಲಲಿತ :** (ಟೆನಿಸ್ ಬ್ಯಾಟ ಹಿಡಿದು ಬರುವಳು)

**ಅಶೋಕ :** ಎಲ್ಲಿಗೆ ಹೋಗಿದ್ದೆ ತಂಗಿ?

**ಲಲಿತ :** ಛೀ.... ಛೀ..... ಹೊರಗಿನಿಂದ ಬಂದು ಹೊಸ್ತಿಲ ದಾಟುತ್ತಿರುವಾಗಲೇ ಪ್ರಾರಂಭವಾಯಿತು ಎಲ್ಲಿಗೆ ಹೋಗಿದ್ದಿ? ಏಕೆ ಹೋಗಿದ್ದಿ? ಎಂಬ ಪಲ್ಲವಿ.

**ಅಶೋಕ :** ತಂಗಿ, ಕಂಡಕಂಡಲ್ಲೆಲ್ಲ ಉಂಡಲೆಯಲು ನೀನಲ್ಲ ಚಿಕ್ಕವಳು, ತಾರುಣ್ಯದ ಹೊಸ್ತಿಲಲ್ಲಿ ಕಾಲಿಟ್ಟ ಬಾಲ ವಿಧವೆಯಾದ ನೀನು, ಮನ ಬಂದ ಮಾರ್ಗ ತುಳಿದರೆ ಜನರೇನಂದಾರು?

**ಲಲಿತ :** ಜನರಾಡುವಂತಹ ಮಹಾಪರಾಧವೇನೂ ನಾ ಮಾಡಿಲ್ಲ.

**ಅಶೋಕ :** ನಿನ್ನ ಮನಕ್ಕೆ ಅಪರಾಧವಾಗಿ ಕಾಣದಿದ್ದರೂ ಜನಕ್ಕೆ ಅಪರಾಧವೆನಿಸುವದು. ಪತಿ ತೀರಿದ ಬಾಲ ವಿಧವೆಯನ್ನು ಮನೆಯಲ್ಲಿಟ್ಟುಕೊಂಡು ಸ್ವೇಚ್ಛೆಯಾಗಿ ತಿರುಗಲು ಬಿಟ್ಟಿರುವೆನೆಂದು ಜನರಾಡುವ ನುಡಿಗಳು ನನ್ನೆದೆಯನಿರಿಯುತವೆ, ಕೂರಿಸಿಗಳಾಗಿ. ಲಲಿತಾ ನೀನು ಶ್ರೇಷ್ಠ ವಂಶಜಳು ಮೇಲಾಗಿ ಮಾನಮರ್ಯಾದಸ್ತ ಅಣ್ಣನ ತಂಗಿ ನೀನು ಪುನರ್ವಿವಾಹ ಬಯಸಿದರೆ ಅನುರೂಪನೊಡನೆ ಮರುಮದುವೆ ಮಾಡುವೆ.

**ಲಲಿತ :** ಸರಿ, ನಿಮ್ಮ ಉಪದೇಶ ಕೇಳಲು ನನಗೆ ಸಾಕಷ್ಟು ಸಮಯವಿಲ್ಲ (ಒಳಗೆ ಹೋಗುವಳು)

**ಅಶೋಕ :** ಸಮಯವಿಲ್ಲ.....! ಎಂಥ ಅವಿಧೇಯತೆ ಸ್ವೇಚ್ಛಾಚಾರದ ಇವಳ ವರ್ತನೆಯಿಂದ ನನ್ನ ಮರ್ಯಾದೆಯ ಮಹಲಿಗೆಲ್ಲಿ ಮಸಿ ತಗಲುವದೋ?

(ಪ್ರಪಂಚ ಪ್ರತಿಕೆ ಹಿಡಿದು ಓದುತ್ತಿರುವಾಗ)

**ಗಂಗಾ :** (ಕಾಫಿ ತಂದು) ತಗೆದುಕೊಳ್ಳಿ, (ಅಶೋಕನು ಪತ್ರಿಕೆಯಲ್ಲಿಯೆ ಮಗ್ನನಾಗಿರುವ) ಕಾಫಿ ತೆಗೆದುಕೊಳ್ರೀ, (ನೋಡಿದಾಗ) ಓದಲು ಕುಳಿತಿರೆ ತೀರಿತು ಪ್ರಪಂಚದ ಪರಿವೆಯೇ ಇರುವದಿಲ್ಲ.

**ಅಶೋಕ :** (ಪ್ರಪಂಚದ ಪತ್ರಿಕೆ ತೋರಿಸುತ್ತ) ಇಲ್ಲಿಯೇ ಇದೆಯಲ್ಲ ಪ್ರಪಂಚ.

**ಗಂಗಾ :** ಪುಟ್ಟಪ್ಪನವರ ಪ್ರಪಂಚವಲ್ಲ, ನಾನು ಕೇಳಿದ್ದು ಪರಮಾತ್ಮನ ಪ್ರಪಂಚ.

**ಅಶೋಕ :** ಸರಿ ನಾನು ಬರಲು ಆರು ವಾರಗಳು ಬೇಕು, ಎಲ್ಲರನ್ನು ಸಂಬಾಳಿಸಿಕೊಂಡು ಹೋಗು (ಗಂಗಾನ ಮುಖ ನೋಡಿ) ಗಂಗಾ ದುಃಖಿಸುವಿಯಾ?

**ಗಂಗಾ :** (ಕಣ್ಣೀರು ಒರಸಿಕೊಳ್ಳುತ್ತ) ಏನಿಲ್ಲ ಸ್ವಾಮಿ.

**ಅಶೋಕ :** ಮತ್ತೇಕೆ ಕಣ್ಣೀರು?

**ಗಂಗಾ :** ದೇವರ ಮುಂದೆ ದೀಪ ಹಚ್ಚಿ ನಿಮ್ಮ ಪ್ರವಾಸ ಸುಖಕರವಾಗಲೆಂದು ಪ್ರಾರ್ಥಿಸುವಾಗ ಜ್ಯೋತಿ ನಂದಿಹೋಯಿತು ಅದಕ್ಕಾಗಿ.

**ಅಶೋಕ :** ಹುಚ್ಚಿ, ಆಕಸ್ಮಿಕವಾಗಿ ಬೀಸಿದ ಗಾಳಿಗೆ ದೀಪ ನಂದಿದರೆ ಇಷ್ಟೊಂದು ವಿಕಲ್ಪನೆಗೆ ಆಸ್ಪದಕೊಡಬೇಕೇ ಮನದಲ್ಲಿ?

**ಗೌರೀಶ :** (ಬೆಡ್ಡಿಂಗ ಹೊತ್ತುಕೊಂಡು ಬಂದು) ಎವ್ವಾ ಒಟರಬ್ಯಾಗ ಕೊಡಿ.

**ಅಶೋಕ :** ಒಟಾರಬ್ಯಾಗ ಅಲ್ಲೋ.... ವಾಟರಬ್ಯಾಗ

**ಗೌರೀಶ :** ಅದನ್ನ ಕೊಡ್ರಿ.

**ಗಂಗಾ :** ತರುವೆ ತಡೆ (ಒಳಗೆ ಹೋಗುವಳು)

(ಅಂಚೆಯವನು ಪತ್ರ ಕೊಟ್ಟು ಹೋಗುವನು, ಅಶೋಕ ಓದುತ್ತಿರುವಾಗ)

**ಗಂಗಾ :** (ಬಂದು) ಎಲ್ಲಿಂದ ಬಂದಿದೆ?

**ಅಶೋಕ :** ಅನಂತಪುರದಿಂದ ನಿನ್ನ ಅಣ್ಣನಿಂದ.

**ಗಂಗಾ :** ಏನೆಂದು ಬರೆದಿರುವನು?

**ಅಶೋಕ :** (ಪತ್ರ ಓದಲು ತೊಡಗಲು).

ಆತ್ಮೀಯ ಅಶೋಕ ಮಾವನವರ ಅಡಿಗಳಿಗೆ ಅನಂತ ಅಭಿನಂದನೆ– ಕ್ಷೇಮ. ಈಪರದೇಶಿಯನ್ನು ಮರೇಯದೇ ತಮ್ಮ ಹಾಗೂ ತಂಗಿಯ ಯೋಗ ಕ್ಷೇಮ ಕುರಿತು ಆಗಾಗ ಕಾಗದ ಬರೆಯುತ್ತಲಿರಬೇಕು. ತಾವು ತಿರುಗಿ ಹೋದ ಮರುವಾರದಲ್ಲಿಯೇ ಅತಿವೃಷ್ಟಿಯಿಂದ ನಮ್ಮ ಮನೆ ಪೂರ್ಣ ಬಿದ್ದು ಹೋಗಿದೆ. ಅಂದಿನಿಂದ ಸಾಹುಕಾರ ಧನರಾಜರಲ್ಲಿ ಆಶ್ರಯ ಹೊಂದಿ ಅವರ ಮಿಲ್ಲಿನಲ್ಲಿಯೇ ಕ್ಲಾರ್ಕನಾಗಿ ಸೇವೆ ಸಲ್ಲಿಸುತ್ತಲಿದ್ದೇನೆ. ಇದಕ್ಕೆಲ್ಲ ತಮ್ಮ ಆಶೀರ್ವಾದ ಬಲವೆಂದು ಬೇರೆ ಬರೆಯಬೇಕಿಲ್ಲ ಆಗಾಗ ತಂದೆಯ ಸ್ಮರಣೆಯಾಗಿ ದುಃಖ ಮರುಕಳಿಸುತಿದೆ ಆದರೇನು ಬಾಳಿನ ಹಾದಿಯಲ್ಲಿ ವಿಧಿ ಕಟ್ಟಿ ಕಳಿಸಿದ ಬುತ್ತಿಯನ್ನು ಉಣ್ಣಲೇಬೇಕು. ತಂಗಿ, ಗೌರೀಶ, ಹಾಗೂ ಶರತ್‌ರಿಗೆ ವಂದನೆಗಳು.

ಇಂತಿ ತಮ್ಮ

ವಸಂತ

**ಗಂಗಾ :** ತಾವು ದೆಹಲಿಗೆ ಹೊರಟಿರುವ ಸಮಾಚಾರ ತಿಳಿಸಿ ಉತ್ತರ ಬರೆಯಿರಿ.

**ಅಶೋಕ :** ಅಲ್ಲೇ ನಿಲ್ದಾಣದಲ್ಲಿ ಬರೆದು ಹಾಕಿ ಹೋಗುವೆ.

**ಗೌರೀಶ :** ಎಪ್ಪಾ ಬೀರ್ಡಿಂಗ ಒಯ್ದು ಷಟಿಂಗರ ರೂಮಿನಾಗ ಇಡತೀನ್ರಿ (ಅಶೋಕ ಗಂಗಾ ನಗುವರು) ಯಾಕ್ರಿ ನಗತೀರಲ್ಲ?

**ಅಶೋಕ :** ಯಾಕೂ ಇಲ್ಲ ನಡೆ, ನಾನಿನ್ನು ಬರುವೆ ಗಂಗಾ.

**ಗಂಗಾ :** (ನಮಸ್ಕರಿಸಿ) ಹೋಗಿ ಬನ್ನಿ ಪ್ರವಾಸದಲ್ಲಿ ಜೋಕೆ.

**ಅಶೋಕ :** ಲಲಿತಾ..... (ಒಳಗಿನಿಂದ ಬರುವಳು) ಹೋಗಿ ಬರುವೆ ಲಲಿತಾ ಸೊನ್ನೆಯಿಂದ ಸೂಚಿಸುವಳು.

**ಶರತ್ :** ಹಲೋ.... ಅಶೋಕ...

**ಅಶೋಕ :** ಹಲೋ ಹಲೋ.... ಶರತ್ ನಾನು ಬರುವವರೆಗೂ ಮನೆಯ ಕಡೆಗೆ ಬರುತ್ತ ಹೋಗುತ್ತಲಿರು

**ಶರತ್ :** ತುಸುವಾದರೂ ಚಿಂತಿಸದಿರು ಮನೆಯ ಕುರಿತು; ಆರು ವಾರಗಳೇಕೆ ಆರು ವರ್ಷಗಳವರೆಗೆ ಹೋದರೂ ನೀನು ಮಾಡುವ ಎಲ್ಲ ಕೆಲಸಗಳನ್ನು ಸುವ್ಯವಸ್ಥಿತವಾಗಿ ಸಾಗಿಸುವೆ ನಡೆ, ಟ್ರೇನಿನ ವೇಳೆಯಾಯಿತು. (ಹೋಗುವರು).

**ಗಂಗಾ :** ಇಂದೇಕೋ ಹೃದಯದಲ್ಲಿ ಒಂದು ರೀತಿಯ ಸಂಕಟವಾಗುತ್ತಿದೆ ದೀಪ ನಂದಿದ ದೃಶ್ಯ ಕ್ಷಣ ಕ್ಷಣಕ್ಕೂ ನನ್ನ ನಯನಗಳ ಮುಂದೆ ನರ್ತಿಸಿ ಅಧೀರಳನ್ನಾಗಿ ಮಾಡುತಿದೆ. ಏನೇ ಆಗಲಿ ಇಂದು ಶನಿವಾರ ಮಾರುತಿಯ ಮಂದಿರಕೆ ಹೋಗಿ ಬೇಡಿಕೊಳ್ಳುವೆ, ಯಾವ ರೀತಿ ಕೇಡು ನನ್ನ ಮನೆಗಾಗದಿರಲೆಂದು (ಒಳಗೆ ಹೋಗಿ ಫಲ ಪುಷ್ಪಗಳ ತಾಟಿನೊಂದಿಗೆ ಹೊರಗೆ ಬಂದು ರೇಡಿಯೋ ಹಚ್ಚುತ್ತಿರುವ ಲಲಿತೆಯ ಕುರಿತು ಲಲಿತೆ ನಾನಿಷ್ಟು ಮಾರುತಿಯ ಮಂದಿರಕ್ಕೆ ಹೋಗಿ ಬರುವೆ (ಮೌನದಿಂದಲೇ ಸೂಚಿಸುವಳು ಗಂಗಾ ಹೋಗುವಳು)

**ಶರತ್ :** (ಬರುತ್ತ) ಗುಡ್ ಮಾರ್ನಿಂಗ ಲಲಿತ....

**ಲಲಿತ :** ನಿಮ್ಮ ನಿರೀಕ್ಷಣೆಯಲ್ಲಿಯೇ ಇರುವೆ ಬನ್ನಿ.

**ಶರತ್ :** ನಿರೀಕ್ಷಣೆ ನಿರರ್ಥಕವಾಗಲಿಲ್ಲ.

**ಲಲಿತ :** ಇಷ್ಟೇಕೆ ವಿಳಂಬ?

**ಶರತ್ :** ಟ್ರೇನ ಲೇಟಿತ್ತು (ಸುತ್ತಲೂ ನೋಡಿ) ನಿಮ್ಮ ಅತ್ತಿಗೆ ಕಾಣಿಸುವದಿಲ್ಲ.

**ಲಲಿತ :** ನಮ್ಮ ತೋಟದ ಮಾರುತಿಯ ಮಂದಿರಕ್ಕೆ ಹೋಗಿರುವಳು.

**ಶರತ್ :** ಬಯಸಿದ ಹಣ್ಣು ಬಾಯಿಗೆ ಬೀಳಲು ಇದು ಒಳ್ಳೆಯ ಸಮಯ

**ಲಲಿತ :** ಅದಕ್ಕಾಗಿ ಹೃದಯ ಹಾತೊರೆಯುತಿದೆ, ನಿಮ್ಮ ಮಿಲನ ಹೊಂದಲು.

**ಶರತ್ :** ಕಡಲೊಡಲನ್ನು ಎಡವಾಗ್ನಿ ಸುಡುತ್ತಿರುವಂತೆ ನನ್ನ ಹೃದಯ ದೊಡಲನ್ನು ವಿರಹಾಗ್ನಿ ಸುಡುತಲಿದೆ ನಿನ್ನ ಚುಂಬನದ ಮಧುರ ರಸಸ್ವಾದನದಿಂದ ವಿರಹದಾಹವನ್ನು ತಣಿಸು ಬಾ ಹೃದಯೇಶ್ವರಿ

**ಲಲಿತ :** ತನ್ನ ಬಾಳಬಾನಿನಲ್ಲಿ ಅವಸರದ ವಿಧವೆತನವೆಂಬ ಕಾರ್ಗತ್ತಲೆಯನ್ನು ತೊಡೆದು ಸೌಭಾಗ್ಯದ ಸುಪ್ರಭಾತ ತಂದುಕೊಡುವ ಭಾಗ್ಯದ ಭಾಸ್ಕರಾ ನಾನಿಲ್ಲ ಪ್ರತಿಕೂಲ?

**ಶರತ್ :** ಮಂಚಾಚು ಕೈ (ಲಲಿತಳ ಕೈ ಹಿಡಿದು ಚುಂಬಿಸಿ)

**ಲಲಿತ :** ಪುನಃಪ್ರಾಣಿ ಗ್ರಹಣವೆಂದು?

**ಶರತ್ :** ಪ್ರಣಯಿನಿ ಬಹಿರಂಗವಾಗಿ ನಮ್ಮೀರ್ವರ ಮದುವೆ ಆಗದಿದ್ದರೂ ಹೃದಯ ಮಂದಿರದಿ ಎಂದೋ ಆಗಿ ಹೋಗಿದೆ ಹೀಗಿದ್ದು ಸಂಕೋಚಕ್ಕೆ ಆಸ್ಪದವೇಕೆ?

**ಲಲಿತ :** ಭಯದ ತೆರೆಯಲ್ಲಿಯೇ ಅದೆಷ್ಟು ದಿನವಿರಬೇಕು ನಮ್ಮೀ ಪ್ರೇಮಬಂಧ ನಾಟಕ?

**ಶರತ್ :** ನಿನ್ನ ಅಣ್ಣ ಅತ್ತಿಗೆ ಅಸು ಹಿಡಿದಿರುವ ತನಕ.

**ಲಲಿತ :** ಇದಕ್ಕೆ ಪರಿಹಾರ ಮಾರ್ಗ?

**ಶರತ್ :** ಹೇಳುವೆ ಕೇಳು..... ಇದೊ (ತನ್ನ ಭಾವಚಿತ್ರ ಕೊಡತ್ತ) ನಿನ್ನಣ್ಣ ಇಲ್ಲಿಗೆ ಬರುವ ದಿನದಂದು ಸಮಯ ಸಾಧಿಸಿ ನಿನ್ನ ಮುತ್ತಿನ ಹಾರದೊಂದಿಗೆ ಈ ಭಾವಚಿತ್ರವನ್ನು ನಿನ್ನ ಅತ್ತಿಗೆಯ ಪೆಟ್ಟಿಗೆಯಲ್ಲಿಟ್ಟು, ಹಾರ ಕಳೆದಂತೆ ನಟನೆ ಮಾಡು. ಮುಂದಿನ ಕಾರ್ಯ ನಾ ಮಡುವದನ್ನು ನೋಡು.....

**ಲಲಿತ :** ಒಳ್ಳೇ ಸಂಚುಗಾರರು.

**ಶರತ್ :** ಈ ಸಂಚಿನಿಂದ ನಿನ್ನಣ್ಣ ಅತ್ತಿಗೆಯವರಿಗೆ ಹಂಚಿನ ಮೇಲಿನ ಅನ್ನ ಸಿಗದಂತೆ ಮಾಡುವೆ ಕೊಂಚ ದಿನಗಳಲ್ಲಿ.

**ಲಲಿತ :** ಶೃಂಗಾರ ಸದನಾ

**ಶರತ್ :** ನುಡಿಸೊಂದು ಗಾನ.

### ಡೈಲಾಂಗ

**ಲಲಿತ :** ನೀ ಮನೋಹರ ತರುಣ
ನೀನೆನ್ನ ಪ್ರೀತಿಕಿರಣ ।

**ಶರತ್ :** ನೀ ಮನೋಲ್ಲಾಸ ಮಧುರ ।
ನೀ ಮೋಹರಾಣಿ ಚದುರೆ ।

**ಲಲಿತ :** ಬನಪರಿಮಳ ಮೋಹನ ಮಧುಕರ ಬಾ
ಮನಸೆಳೆಯುವ ಮನ್ಮಥ ಸುಂದರ ಬಾ ।

ಶರತ್ : ಮನದನ್ನೇ । ಚನ್ನಾ ರಮಣೀ
ನೀನೆನ್ನ ಚಿತ್ರ ಹರಣಿ ।

ಹಾಡು ಮುಗಿದು ಪರಸ್ಪರರು ಅಪ್ಪಿ ನಿಂತಾಗ ಮಂದಿರಕ್ಕೆ ಹೋಗಿದ್ದ ಗಂಗಾ ಬಂದು ನೋಡಿ ಕೈಕಂಪಿಸಿ ತಾಟು ಭೂಮಿಗೆ ಬಿದ್ದಾಗ ಶರತ್ ಲಲಿತೆಯರು ದೂರ ಸರಿದು ನಿಲ್ಲುವರು. (ಗಂಗಾ ಒಳಗೆ ಹೋಗುವಳು)

ಲಲಿತ : ಎಂಥ ಪ್ರಮಾಣದ ಸಮಯ.

ಶರತ್ : ಇನ್ನೂ ಅವಳ ಸುದೈವ, ಸ್ವಲ್ಪ ತಡೆದು ಬಂದಿದ್ದರೆ ಆಕೆಯ ಕಣ್ಣುಗಳು ಮತ್ತಾವ ಅನರ್ಥದ ದೃಶ್ಯವನ್ನು ಕಾಣುತ್ತಿದ್ದವೋ? (ಗಡಿಯಾರ ನೋಡಿ) ನಾನಿನ್ನು ಬರುವೆ (ಹೋಗುವನು)

ಗಂಗಾ : (ಬಂದು) ಲಲಿತ....

ಲಲಿತ : ಆಂ.....

ಗಂಗಾ : ಮನೆಯಲ್ಲಿ ಗಂಡಸರಿಲ್ಲದಾಗ ಈ ರೀತಿ ಪರಪುರುಷರೊಡನೆ ನಕ್ಕು ನಲಿಯುವದು ಒಳಿತಲ್ಲ.

ಲಲಿತ : ನಮ್ಮ ಮನೆಯಲ್ಲಿ ನಕ್ಕು ನಲಿದರೆ ಆಗುವದೇನು?

ಗಂಗಾ : ಲಲಿತಾ ನಿನಗೆ ಹುಚ್ಚು ಹಿಡಿದಿಲ್ಲವಷ್ಟೇ?

ಲಲಿತ : ಯಾರಿಗೆ ಹುಚ್ಚು ಹಿಡಿದಿರುವದು ನನಗೊ, ನಿನಗೊ? ಅಣ್ಣನ ಆಪ್ತ ಸ್ನೇಹಿತರಾದವರನ್ನು ಆದರದಿಂದ ಆದರಿಸುವದು ಅನುಚಿತವೇS

ಗಂಗಾ : ನೀನು ಮಾತಾಡುತ್ತಿರುವದು ಅನುಚಿತ ಅತಿರೇಕ

ಲಲಿತ : ಬಾಯಿಗೆ ಬಂದಂತೆ ಅರಚದಿರು ಅತ್ತಿಗೆ.

ಗಂಗಾ : ನಾನೇಕೆ ಅರಚಲಿ ನಿನ್ನೊಡನೆ ಬಾಯ್ಮಾಡಿದರೆ ನಾನು ತಿಳಿಯಬಹುದೆ?

ಲಲಿತ : ಕೆಣಕವನ್ನಾಡಿ ಕೆಣಕದಿರು ಕೋಪವನು ನಾನು ಮನಸು ಮಾಡಿದರೆ ಆರೆಕ್ಷಣದಲ್ಲಿ ಮನೆಯಿಂದ ಹೊರದೂಡಿಸುವೆನು. ಸುಮ್ಮನೆ ಬಾಯ್ಮುಚ್ಚಿಕೊಂಡು ಬಿದ್ದಿರುವದನು ಬಿಟ್ಟು ತನ್ನ ಅಧಿಕಾರ ನಡೆಸಲು ಬರುತ್ತಾರೆ, ಬರಲಿ ಅಣ್ಣನು.

**ಗಂಗಾ :** ಬರಲೆಮ್ಮ ಸತ್ಯಕ್ಕಂತೂ ಗೆಲವು ಇದ್ದೇ ಇದೆ.

**ಲಲಿತ :** ಅಹಹಹಾ.... ಹರಿಶ್ಚಂದ್ರನ ತುಣುಕು, ಹೋಗುವಿಯಂತೆ ತಡೆ ಸತ್ಯ ಪರಿಪಾಲಿಸಲು ಸಶ್ಮಾನ ಕಾಯುವದಕ್ಕಾಗಿ.

**ಗಂಗಾ :** ಲಲಿತಾ ಕಡಿವಾಣವಿರಲಿ ನಾಲಿಗೆಗೆ.

**ಲಲಿತ :** (ಕಪಾಳಕ್ಕೆ ಹೊಡೆದ) ಸೆಟಪ್

**ಗಂಗಾ :** ಅಮ್ಮಾ.......

## ಪ್ರವೇಶ–೭

### ರಸ್ತಾ

(ಗೌರಿ ಹೋಗುತ್ತಿರುವಾಗ)

**ಖಾಸೀಮ :** (ಒಳಗಿನಿಂದ) ಹರೇ ಗೋರಿ ಜರಾ ನಿಂದ.

**ಗೌರಿ :** ಬಂತಲ್ಲ ಬಳಿಗಾರ ಎಷ್ಟು ಛೀ ಹಾಕಿ ಚಿತ್ತಾರ ಬರದರೂ ಮತ್ತ ಹಲಕಟ್ಟ ಚಾಳೀನ ಬಿಡವಲ್ಲ.... ಆಗಲಿ ಮದವಿ ಆಗತೀನಿ ಅಂತಾ ಮುರುಕಾ ಮಾಡಿ ಇವನ್ನ ಮುರಕ ಹೊರಸಿಗೆ ಒಗಿದ ಕಳಸ್ತೀನಿ ಯುವನೂರು ಪೀರಾನ ಉರುಸಿಗೆ.

**ಖಾಸೀಮ :** (ಬಂದು) ಕಿತನಾ ಜಲ್ದ ಜಲ್ದ ಹೋಗಾಕ ಹತ್ತಿ

**ಗೌರಿ :** ಯಾಕ ಏನ ಅಡಗಣಸಿತ್ತು?

**ಖಾಸೀಮ :** ಜರಾ ಕಾಮ ಇತ್ತ

**ಗೌರಿ :** ಏ ಹೋತಿನ ಮಾರಿಯವ್ನS ನೀ ಹುಟ್ಟಲಿಲ್ಲಂದ್ರ ಹಗಲು ರಾತ್ರಿ ಅಗತಿದ್ದಿಲ್ಲೇನ?

**ಖಾಸೀಮ :** ಆರೆ ಗೋರಿ ಬಾಯಿ.... (ಗುಳು ನುಂಗುವನು)

**ಗೌರಿ :** ಹಿಂಗ್ಯಾಕ ಮಾಡತೀಯ ಸಾಬಾ ಬಾಯಿ ಒಣಗಿದ ಬಾವುಗನಂಗ?

**ಖಾಸೀಮ :** ಗೋರಿ ಏಕ ಬಾತ

**ಗೌರಿ :** ಏನ ಅದು?

ಖಾಸೀಮ : ನೀ ನಮದ ಬೀಬಿ.

ಗೌರಿ : ಏ ಸಾಂಬರಕಾಗಿ. ಸಾಕಾಗಿಲ್ಲೇನ ಎದಿಯಾನ ಯಲುವು ಮುರುವಾಂಗ ತಿವಿದಿದ್ದು.

ಖಾಸೀಮ : ಗೋರಿ, ಸಿಕ್ಕಿದ್ದು ಅನ್ನಾ ಕಾಲನೇ ಒದಿಬ್ಯಾಡ ನಿಮಗೆ ಎಂಥಾ ಸಾಡಿಬೇಕು ಅಂಥಾ ಸಾಡಿ ಲಾತಾಹು.

ಗೌರಿ : ನಿನ್ನ ಚೊಣ್ಣದ ಲಾಡಿಗೆ ಗಡಿ ಇಲ್ಲ ನನಗ ಸಾಡಿ ತರತೀಯಾ?

ಖಾಸೀಮ : ಜರಾ ಪೂರಾತು ಕೇಳು.... ಔರ ಖಾನೇಕು ಬಾಲೂಷಾ, ಜಿಲೇಬಿ, ಜಹಂಗೇರ, ಔರಂಗಜೇಬ ಲಾಡು.

ಗೌರಿ : ಮತ್ತ..........?

ಖಾಸೀಮ : ಮತ್ತ ಕ್ಯಾಬೋಲಲನಾ..... ಒಟ್ಟಿನ ಮ್ಯಾಲ ನಾನು ಬಹುತ್ ಒಳ್ಳೇ ಮನಿಷಾ ಹೈ

ಗೌರಿ : ಹೌದು ನಿನ್ನ ಮೈ ವಾಸನಿನ ಹೇಳತೈತಿ ಒಳ್ಳೇ ಮನಿಷಾ ಅನ್ನೊದು.

ಖಾಸೀಮ : ಹಾ ಐಸಾ ಬಾತಕರೋ.... ಬೇಕಾದರೆ ನಾನು ಅಚ್ಛಾ ಮನಿಷಾ ಹೈಯಾ ನಹಿ ಅನ್ನೂದು ಮೇರಾ 'ಬೇಬಿ' ಆಗಿ ದೇಖೋ.

ಗೌರಿ : ಏ ಸಾಬಾ, ಹಗಲು ರಾತ್ರಿ 'ಬೀಬಿ ಅಂತ ಕೂಗಿ ಕೂಗಿ ಯಾಕ ಕಂಗಾಲಾಗತಿ? ನನ್ನನೆದರಿನಾ ಒಂದು ಹೆಣ್ಣೈತಿ ನೀ ಮನಸ ಮಾಡಿದರೆ ಆಕೀನ ಒಪ್ಪಿಸೋ ಭಾರ ನನ್ನದು.

ಖಾಸೀಮ : ಆಪೀಚ ಆಗಿದ್ದರೆ ಅಚ್ಛಾಥಾ.

ಗೌರಿ : ನೀನನ್ನೂದು ಕರೇವು; ಅಂದರ ನನ್ನ ನಿನ್ನ ಕುಲ ಕುಡೋದಿಲ್ಲ

ಖಾಸೀಮ : ಕುಲದಾಗೇನಐತಿ ಮಿಯಾ ಬೇಬಿ ರಾಜಿ ಹೈತೊ ಕ್ಯಾ ಕರೇಗಾ ಖಾಜೀ? ತುಮ್ ಹಮ್ ಒಂದಿದ್ರ ದೂಸರೆ ಲೋಗ ಏನ ಮಾಡತೈತಿ?

ಗೌರಿ : ಏನ ಮಾಡತೈತಿ ಅಂದರ ನಮ್ಮ ಕುಲದೋರ ಕೈಯಿಂದ ನನ್ನ ಹೆಣಾ ಕುಣ್ಯಾಗ ಕುಂದರತೈತಿ?

ಖಾಸೀಮ : ಜಾನೇದೊ ಹೋಗಲಿ.... ಬಿಡು ಓ ಪೋರಿ ಕೈಸಾ ಹೈ?

ಗೌರಿ : ನನ್ನ ಹಂಗ ಅದಾಳು.

ಖಾಸೀಮ : ವ್ಹಾ ವ್ಹಾ.... ಅಲ್ಲಾ.... ಅಚ್ಛಾ ಅದು ಎಲ್ಲಿ ಇರತ್ತೈತಿ.

ಗೌರಿ : ಯಾವದು?

ಖಾಸೀಮ : ಅದು ಹುಡುಗಿ....

ಗೌರಿ : ಯಾವದು?

ಖಾಸೀಮ : ಅದು ಹುಡುಗಿ.....

ಗೌರಿ : ಇಲ್ಲೆ ಅದಾಳು....

ಖಾಸೀಮ : ಇಲ್ಲೀ.... ಯಂಹಾ... (ಸುತ್ತಲೂ ನೋಡಿ) ಎಲ್ಲೈತೆ?

ಗೌರಿ : ನಾನs

ಖಾಸೀಮ : ತುಮ್... ನೀನು (ನಾಲಿಗೆ ಚೀಪುತ್ತ)

ಗೌರಿ : ಹಾಂ ನಾನs

ಖಾಸೀಮ : ಅಲ್ಲಾ ಮೈ ಕ್ಯಾ ಸುನ್ ರಹಾ ಹು........

ಪದ

ಖಾಸೀಮ : ಉಟ್ಟೇದಿ ಸಾಡಿ ಇಲಕಲ್ ।
ತೊಟ್ಟೇದಿ ಜೋಲಿ ಮಲ್ ಮಲ್ ।
ಹಂಸ್ತಿ ಹೈ ಆಪ್ ಕುಲ ಕುಲ್ ।
ಚಾಯಿಂಗೆ ಘರಿಕ ಚಲ್ ಚಲ್

ಗೌರಿ : ಮಾಡಬ್ಯಾಡ ನೀನು ಗುಲ್ ಗುಲ್ ।
ನಾ ನಿನ್ನ ಸತಿಯ ಬಿಲ್‌ಕುಲ್ ।
ಆಗೋಣ ನಾವು ಜೋಡಿ ।
ಪರಮಾತ್ಮನಲ್ಲಿ ಬೇಡಿ ।

ಖಾಸೀಮ : ಆವ್ ಆವ್ ಮೇರಾ ಮುದ್ದುಗುಳಿ

(ತೆಕ್ಕೆ ಬೀಳಲು ಹೋಗುವವನು)

ಗೌರಿ : (ಹಿಂದೆ ಸರಿಯುತ್ತ) ಹಾಂ ಹಾ.... ಮದುವಿಗಿಂತ ಮೊದಲು ಮುಟ್ಟಾಕ ಬರಬ್ಯಾಡ. ಗಂಡ ಸತ್ತಮ್ಯಾಗ ನನಗೂ ದುಡಿದು ದುಡಿದು ಸಾಕಾಗೇತಿ ಇಷ್ಟಾದರೂ ಮೈತುಂಬ ಬಟ್ಟೆ ಹೊಟ್ಟೆ ತುಂಬ ಅನ್ನ ಇಲ್ಲ.

ಖಾಸೀಮ : ನನಗೆ ಮಾಡಿಕೊಂಡರೆ ನಿನಗೆ ಕ್ಯಾ ಕಡಮೀ ಹೈ ಗೋದಿಯ ಚಪಾತಿ ಬೆಣ್ಣಿದೂ ಘೀ.

ಗೌರಿ : ಆತು ಬಿಡು ನನಗೂ ಆಟS ಬೇಕಾಗೇತಿ ಮತ್ತ ಭೆಟ್ಟಿ ಆಕ್ಕೀನಿ.

ಖಾಸೀಮ : ಗೋರಿಬಾಯಿ ಆಜ್ ನಾವು ಬಾಳ ಖುಷಿ ಆಗಿದಾವ್ ನಾಟಕ ದೇಖನೆಕು ಜಾಯಿಂಗೆ ನಡಿ.

ಗೌರಿ : ಯಾವದೈತಿ ನಾಟಕ?

ಖಾಸೀಮ : ಹೇಮರಾಡಿ ಮುಲಾಮು

ಗೌರಿ : ಗಜಕರ್ಣ ಮಲಾಮು ಅಲ್ಲೇನು?

ಖಾಸೀಮ : ಶಾಪ್ಷೀ ಕರೋಮತ್ ಗೋರಿ

ಗೌರಿ : ಹೇಮರಾಡಿ ಮುಲಾಮು ಅಲ್ರಿ ಹೇಮರೆಡ್ಡಿ ಮಲ್ಲಮ್ಮ.

ಖಾಸೀಮ : ಹಾ ದೇಖೆಂಗೆ

ಗೌರಿ : ನಂದು ತುಸು ಪಾಟ್ಯಾಗ ಕೆಲಸೈತ್ರಿ ನೀವ ಹೋಗಿ ಬರ್ರಿ !

ಖಾಸೀಮ : ಪ್ಯಾಟ್ಯಾಗ ಹೋಗ್ತಿ......

ಗೌರಿ : ಹೌದರಿ.

ಖಾಸೀಮ : ಜರಾ ನಿಂದರ (ಐದು ರೂಪಾಯಿ ನೋಟು ಕೊಡುತ್ತ) ಏ ರೂಪಾಯಾ ಲೇವ ನಿನ್ನೆ ಹಗ್ಗಾ ಮುರುದು ಕೊಡ ಬಾಯಾಗ ಬಿದ್ದಾಗ ಒಂದು ಹಗ್ಗಾ ಲೇಕರ ಆವ್.....

ಗೌರಿ : ಹಗ್ಗಾ ಮುರದು ಕೊಡಾ ಬಾಯಾಗ ಬಿದ್ದಾನ್ರ್ಯಾ ಆಗಲ್ರಿ ತರತೀನ (ನೋಟು ಖಾಸೀಮನ ಮುಂದೆ ಹಿಡಿದ) ಸಾಬರ ಬಿಚ್ಚು

ಖಾಸೀಮ : (ಗಾಬರಿಯಿಂದ ಜಿಗಿದು) ಅರೇ ಅಲ್ಲಾ ಎಲ್ಲೈತಿ ಬಿಚ್ಚು ಕರೀ ಬಿಚ್ಚು ಕ್ಯಾ ಕೆಂಪು ಬಿಚ್ಚು......

ಗೌರಿ : (ಸ್ವ) ಅಯ್ಯಾ ಇದರ ಸುಡಗಾಡಕೋದು ಸುಟ್ಟಿಬರಲಿ, ಬಿಚ್ಚು ಅಂದರ ಚೋಳಂತೆ ತಿಳಿದಾನ ಈ ಸಾಬ (ಪ್ರ) ಚೋಳ ಆಲ್ರಿ ಸಾಬರS.... ಚಿಲ್ಲರ ಕೊಡ್ರಿ ಅಂದೆ.

ಖಾಸೀಮ : ಅರೇ ಮೊದಲೇ ಹೇಳಬಾರದೇನ ಸುಮ್ಕ ನಾಪ್ ಪುರೇ ಸಾನ

ಹೋಗಯಾ ಚಿಲ್ಲರಿಲ್ಲಹೋಗ.....

**ಗೌರಿ :** ಹಂಗಾರಾ ನಾಹೊಕ್ಕೀನ್ರಿ?

**ಖಾಸೀಮ :** ಕಾಮ ಜರಾ ಜಲ್ದಿ ಕರನಾ.

**ಗೌರಿ :** ನೀವದರ ಚಿಂತೀನ ಮಾಡಬೇಡ್ರಿ ನಾನೆಲ್ಲಾ ತರತೀನಿ ಬರತೀನಿ.... ಬರತ್ತೇನ್ರಿ ನಾನು (ಹೋಗುವಳು)

**ಖಾಸೀಮ :** ಗೋರಿ, ತುಮ್ ಜಾಗಯಿ..... ಕ್ಯಾ ಖೂಬ ಸೂರತ ಲಡಕಿ ಹೈ ತುಮ್ ಅಲ್ಲಾ ಆಜ್‌ಸೆ ಮೇರಾ ನಸೀಬ ಖುಲ್ಲಾ :

(ಹೋಗುವನು)

## ಪ್ರವೇಶ–೮

### ಅರಣ್ಯ ರಸ್ತಾ

(ಕೋಕಿಲಾ–ಧನರಾಜ ವಾಯು ವಿಹಾರಕ್ಕಾಗಿ ಹೊರಟಿರುವರು)

**ಧನರಾಜ :** ಕೋಕಿಲಾ, ಯಾವ ಆಲೋಚನೆಯಲ್ಲಿ ಮಗ್ನಳಾಗಿರುವಿ?

**ಕೋಕಿಲಾ :** ಯಾವ ಆಲೋಚನೆಯೂ ಇಲ್ಲವಪ್ಪಾ

**ಧನರಾಜ :** ತಾವರೆಯಂತಿದ್ದ ನಿನ್ನ ಮುಖವು ಕಂದಿ ಕಪ್ಪಾಗಿರುವುದೇಕೆ? ಸ್ವಾಸ್ಥ್ಯ ಸರಿಯಾಗಿಲ್ಲವೇ?

**ಕೋಕಿಲಾ :** ಸರಿಯಾಗಿಯೇ ಇದೆ; ಆದರೆ.....

**ಧನರಾಜ :** ಆದರೇನು ನಿನ್ನ ಹಟವನ್ನೇ ಸಾಧಿಸಬೇಕೆಂದಿರುವೆಯಾ?

ಕುಬೇರನು ನಮ್ಮ ಅಂತಸ್ತಿಗೆ ತಕ್ಕವನಿರುವನಲ್ಲದೆ, ನಿನಗೆ ಯೋಗ್ಯವರನು ಆಗಿದ್ದಾನೆ.

**ಕೋಕಿಲಾ :** ಅಪ್ಪಾ

**ಧನರಾಜ :** ಏನು?

**ಕೋಕಿಲಾ :** ಆ ವಿಷಯನನ್ನೆತ್ತಿ ನನ್ನ ಹೃದಯ ಸಾಗರವನ್ನು ಕದಡಬೇಡ.

**ಧನರಾಜ :** ಕೋಕಿಲಾ ನೀನು ಮದುವೆಯಾಗಿ ಸೌಖ್ಯದಿಂದಿರುವದನ್ನು ನಾ

ನೋಡ ಬೇಡವೆ? ನಿನ್ನ ಭಾವೀ ಪತಿಯು ಅಗಣಿತ ಐಶ್ವರ್ಯದ ವಿದ್ಯಾವಂತ. ವಿದ್ಯಾವಂತನಿರಲಿ, ಅರಿತೆ ನಿನ್ನ ಮನದಿಂಗಿತವ, ತುತ್ತು ಅನ್ನಕ್ಕೂ ಗತಿ ಇಲ್ಲದ ಆ ತೊತ್ತು ನಿನಗೆ ಬೇಕಾದನೆ?

**ಕೋಕಿಲಾ :** ಅಪ್ಪಾ, ಅನ್ನಕ್ಕೆ ಅಭಾವಿವಿದ್ದರೂ ಅವರಲ್ಲಿ ಆತ್ಮ ಗೌರವಕ್ಕೆ ಅಭಾವವಿಲ್ಲ.

**ಧನರಾಜ :** ಕೋಕಿಲಾ ತಾಯಿ ಸತ್ತದಿನದಿಂದ ನೀನೆ ನನ್ನ. ಸಕಲ ಸೊತ್ತೆಂದು ನನ್ನ ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಯಿಂದ ಸಾಕಿ ಸಲುಹಿದ್ದಕ್ಕೆ ಈ ಉಪಕಾರವೇ?

**ಕೋಕಿಲಾ :** ಉಪಕಾರವೇತರದು ಅಪ್ಪಾ, ಯಾರಾದರೂ ತಮ್ಮ ಮಕ್ಕಳನ್ನು ಹೊರಗೆ ಬಿಸಾಡುವರೇ? ಮರ್ಕಟ ಕೂಡಾ ತನ್ನ ಮಗುವನ್ನು ಎದೆಗ್ಗಚ್ಚಿಕೊಂಡು ತಿರುಗುವಾಗ.... ನೀವು ನನ್ನನ್ನು ಸಲುಹಿದರಲ್ಲಿ ಆಶ್ಚರ್ಯವೇನು? (ನಗುವಳು)

**ಧನರಾಜ :** (ಸ್ವ) ಎಂಥ ವಾಚಾಳಿ ಇವಳು. ಮಾತಿಗೆ ಮಾತು ಸಿದ್ಧಮಾಡಿಟ್ಟಿರುವಳು (ಪ್ರ) ಕೋಕಿಲಾ ಮಗು ನಾಲ್ಕು ದಿನ ಅವಧಿ ಕೊಟ್ಟಿರುವೆ ಆಲೋಚಿಸಿ ನೋಡು.

**ಕೋಕಿಲಾ :** ದಿನೇಶ ದಿಕ್ಕು ಬದಲಾಯಿಸಬಹುದು. ಆದರೆ ಆರ್ಯ ನಾರಿಯು ಒಮ್ಮೆ ನುಡಿದರೆ ಬದಲಾಗದು.

**ಧನರಾಜ :** (ಖಿನ್ನವದನನಾಗಿ) ಕೋಕಿಲಾ ನಿನ್ನ ಲಗ್ನದ ಸಿದ್ಧತೆಗಳೆಲ್ಲವೂ ನಡೆದಿರುವಾಗ ನೀನು ಇಲ್ಲದ ವಿಘ್ನಗಳನ್ನು ತಂದೊಡ್ಡಿದರೆ ನನ್ನ ಮರ್ಯಾದೆಯ ಮಹಲು ಮಣ್ಣು ಪಾಲಾಗುವದು. ತಾನಾಗಿ ದೊರೆತ ಸಿರಿ ಸುಧೆಯ ಕಂಬಕ್ಕೆ ಕಲ್ಲನ್ನೆಸೆದು ಆಶಿಸಬೇಡ ತಾಪತ್ರಯ ತಟ್ಟದಿರದು.

**ಕೋಕಿಲಾ :** ಅಪ್ಪಾ ! ಯಾವ ಸಿರಿವಂತಿಕೆ ನೋಡಿ, ಸಾವಿತ್ರಿಯು ಸತ್ಯವಾನನ ಕೈ ಹಿಡಿದಳು?

**ಧನರಾಜ :** ಥೂ ! ಕುಲಕುಠಾರಿಣಿ.... ಹಿರಿಯರ ಅನುಮತಿ ಇಲ್ಲದೆ ಮನ ಬಂದವನೊಡನೆ ಮದುವೆಯಾಗಲು ನಾಚಿಕೆಯಾಗುವದಿಲ್ಲವೆ?

**ಕೋಕಿಲಾ :** ನಾಚಿಕೆ ಏತರದು ಅಪ್ಪಾ....ಪೂರ್ವಕಾಲದಲ್ಲಿ ಸೀತಾ, ಧಮಯಂತಿ ಮುಂತಾದ ಮಹಾ ಪತಿವ್ರತೆಯರು ತಮಗಿಷ್ಟ ಬಂದವರನ್ನು ವರಿಸಲಿಲ್ಲವೇ?

**ಧನರಾಜ :** ಏನಾದರೂ ಸುಖದ ಶಿಖರದ ಮೇಲೆ ವಿರಾಜಿಸುವ ನೀನು ದಾರಿದ್ರ್ಯದ ದಾರಿಯಲ್ಲಿ ಬಿದ್ದು ಒದ್ದಾಡುವ ವಸಂತವನ್ನು ವರಿಸಲು ಮನಸ್ಸು ಮಾಡಿದರೆ ಅದಕ್ಕೆ ತಿಲಮಾತ್ರ ನನ್ನ ಸಮ್ಮತಿ ಇಲ್ಲ....

**ಕೋಕಿಲಾ :** ತನ್ನ ಬಾಳು ಭವ್ಯವಾಗಿ, ಚಾರಿತ್ರ್ಯ ಬಿದಿಗೆಯ ಚಂದಿರನಂತೆ ನಿರ್ಮಲವಾಗಬೇಕಾದರೆ ಬಡವರ ಬಲ್ಲಿದನೆಂದನೆಣಿಸದೆ ಬಡವನಿದ್ದರೂ ಸದ್ಗುಣದ ಖಣಿಯಾಗಿದ್ದರೆ ಆತನನ್ನು ವರಿಸಲು ಯಾರ ಸಮ್ಮತಿಯೂ ಬೇಡ.....

**ಧನರಾಜ :** ಇದಕ್ಕೆ ಅಡ್ಡೈಸಿದರೆ?

**ಕೋಕಿಲಾ :** ಸಂಯುಕ್ತೆಯು ಅಡ್ಡೈಸಿ ಜಯಚಂದ್ರ ಹೊಂದಿದ ಗತಿ ತಮ್ಮಸ್ಥಿತಿ.

**ಧನರಾಜ :** ನಿರ್ಲಜ್ಜಳೇ ನೀನು ಹೇಳಿದಂತೆ ಕೇಳಲು ಹಿರಿಯನಾದ ನಾನು ಸೂತ್ರದ ಗೊಂಬೆಯಲ್ಲ, ನಡೆ ಮನೆಗೆ (ಹೋಗುವರು)

## ಪ್ರವೇಶ–೯

### ಅಶೋಕನ ಮನೆ

(ಗಂಗಾ ಒಳಮನೆಯಲ್ಲಿ ಮಲಗಿಹಳು, ಲಲಿತಾ ಇನ್ನೊಂದು ಕೋಣೆಯಿಂದ ಬರುವಳು)

**ಲಲಿತ :** ಉಂಡು ಮಲಗಿರುವಳು ಗಂಗೆ. ಅಂದು ಆ ಶರತ್‌ನೊಡನೆ ಸರಸ ಸಲ್ಲಾಪವಾಡುವ ನೋಟವನ್ನು ನೋಡಿದ ಇವಳು ಅಣ್ಣ ಬಂದೊಡನೆ ಎಲ್ಲವನ್ನು ಹೇಳಬಹುದು, ಆಗಲಿ ಅಷ್ಟರೊಳಗಾಗಿ ಗರತಿಯೆಂದು ಹೇಳಿಕೊಳ್ಳುವ ಇವಳ ಮೇಲೆ ಹೊದಿಸುವೆ ಹಾದರದ ಹೊದಿಕೆಯನ್ನು (ಹೊರಗೆ ಹೋಗುವಷ್ಟರಲ್ಲಿ ಶರತ್)

**ಶರತ್ :** ಹಲೋ ಲಲಿತ!

**ಲಲಿತ :** ಉಸ್ ಮೆಲುದನಿಯಲ್ಲಿ ಮಾತನಾಡಿ ! ನಮ್ಮ ಪ್ರೇಮದ ಹಾದಿಯಲ್ಲಿ ಮುಳ್ಳುಕಂಟಿಯಾಗಿರುವ ಅತ್ತಿಗೆ ಮಲಗಿರುವಳು. ನೋಡಿ, ಗರತಿಯೆಂದು ಹೇಳಿಕೊಳ್ಳುವ ಅವಳ ಶೀಲದೊರತಿಯಲಿ ಕಾಮದ ಕಲ್ಲನ್ನೆಸೆದು, ಎಬ್ಬಿಸಿರಿ ವ್ಯಭಿಚಾರದ ವಂಡನ್ನು.

**ಶರತ್ :** ನೀ ನಡೆ ಮುಂದಿನ ಕಾರ್ಯ ನನಗಿದೆ. (ಲಲಿತಾ ಹೊರಗೆ ಹೋಗುವಳು) ಇನ್ನು ಸಿಗಲಾರದಿವಳ ತಾರುಣ್ಯದಿಂದ ತುಳುಕುವ

ಅಂಗ ಕಾಂತಿಯ ಸುಧೆ (ಒಳಗೆ ಹೋಗುತ್ತಿರುವಾಗ)

೧ನೇ ಧ್ವನಿ : ಅಡಿಯ ಮುಂದಿಡದಿರು ಶರತ್, ಗೆಳೆಯನ ಮಡದಿ ಹೆತ್ತಾಯಿಗಿಂತ ಹೆಚ್ಚು ತನು ಮನ ಧನ ತ್ಯಾಗ ಮಾಡಿ ನಿರುದ್ಯೋಗದಿಂದ ಉಂಡಲೆಯುವ ನಿನ್ನನ್ನು ಒಬ್ಬ ಪ್ರತಿಷ್ಠಿತ ವ್ಯಕ್ತಿಯನ್ನಾಗಿ ಮಾಡಿದ ಮಮತೆಯ ಮಿತ್ರನಿಗೆ ದ್ರೋಹ ಬಗೆಯದಿರು.

೨ನೇ ಧ್ವನಿ : ಅಂಜಿ ಆಡಿಯ ಹಿಂದಿಡದಿರು.... ಇಂದು ದೊರಕಿದೆ ಈ ದಿನದಲ್ಲಿ ಕ್ಷಣವೊಂದು ಅಮೂಲ್ಯ. ಚಿತ್ತ ಚಾಂಚಲ್ಯಕ್ಕೆ ಆಸ್ಪದ ಕೊಡದೆ ಸುಂದರ ಪ್ರೇಮ ಸೌಗಂಧ ಸವಿಯಲು ಸಾಗು.... ಹೂಂ.... ಸಾಗು..... (ಒಳಗೆ ಹೋಗುವನು)

ಗಂಗಾ : (ಒಳಗಿನಿಂದ) ಯಾರು ನೀವು ಕೈಬಿಡಿ.... (ಹೊರಗೆ ಬಂದು) ಯಾರು ಡಾಕ್ಟರ್ ! ಸೋದರಿಯ ಸಮಾನಳಾದ ನನ್ನ ಮೇಲೆ, ಅಣ್ಣಾ!

ಶರತ್ : ಗಂಗಾ ನನ್ನೊಮ್ಮೆ ಕರೆಯದಿರು ಅಣ್ಣನೆಂಬುವ ಅಮಂಗಲ.

ಗಂಗಾ : ಮುಚ್ಚು ಬಾಯಿ ನರರಾಕ್ಷಾ. ನಾಕ ನರಕಗಳಿಗೆ ನೆಲೆಯಾದ ನಾಲಿಗೆಗೆ ಬೀಗವಿರಲಿ ನಿನ್ನ ಬಿಂಕದ ಮಾತಿಗೆ ಅಂಕಿತಳಾಗಲು ಮಂಕು ಮಹಿಳೆ ನಾನಲ್ಲ ! ವ್ಯರ್ಥವಾಗಿ ಗೆಳೆಯನ ಮಡದಿಯನ್ನಾಶಿಸಿ ಮಾನವತೆಯ ಮಾರ್ಗದಿಂದ ಕಳಚಿ ಬೀಳದಿರು, ಕೇಡಿನ ಕಂದಕದಿ.

ಶರತ್ : (ವಿಕಟವಾಗಿ ನಕ್ಕು) ಹರೆಯದ ಮಬ್ಬಿನಲ್ಲಿ ಉಬ್ಬಿ ಅಬ್ಬರದಿ ಮಾತಾಡದೇ ಕಾಮನ ಹಬ್ಬದೂಟವ ಮಾಡಲು ಬಾ ಎನ್ನ ಬದಿಗೆ, ಇಲ್ಲದಿದ್ದರೆ, ಸಿದ್ಧವಾಗುವದು ಇಗಲೇ ನಿನ್ನ ಸಿದಿಗೆ.

ಗಂಗಾ : ಥೂ, ಶ್ವಾನಾ..... ಅಕ್ಕ ತಂಗಿಯರೆಂಬ ಅರಿವಿಲ್ಲದೆ ಹೀನ ಕಾಮ ತೃಷ್ಣೆಯ ತೃಪ್ತಿಗಾಗಿ ಹಾತೋರೆಯುವ ನಿನ್ನ ಹೃದಯವೊಂದು ವಿಷಯದ ಹೊಂಡು.

ಶರತ್ : ವಿಲಂಬವಾದಲ್ಲಿ ನೀ ಸೇರುವಿ ಮೃತ್ಯುವಿನ ಕುಂಡ

ಗಂಗಾ : ಪಾಪಾತ್ಮಾ ಪರಸ್ತ್ರೀಯರ ಮೇಲೆ ನೀ ಮಾಡುವ ಬಲಾತ್ಕಾರದ ಬೆಂಕಿಯಲ್ಲಿ ಸೀದು ಸೀಕರಿಯಾಗುವದು ನಿನ್ನ ವಂಶಲತೆ. ನವಗ್ರಹಗಳ ನಡುವಿನ ಮೇಲೆ ನಲಿದಾಡುವ ದಶಕಂಠನ ದರ್ಪದಂಡ ಸುಟ್ಟುರಿಯಿತು, ಪತಿವ್ರತೆಯ ಪ್ರಜ್ವಲವಾದ ಅಗ್ನಿ ಕುಂಡದಲ್ಲಿ.

**ಶರತ್ :** ದಸಕಂಠನ ನಿದರ್ಶನ ಕೊಡುವ ಬಾಲೇ, ಶಿವನ ಶಿರವೇರಿದ ಶಶಾಂಕನು ಗುರುಪತ್ನಿಯನ್ನೇಕೆ ಆಶಿಸಿದ, ಮತ್ತೇಕೆ ಬಯಸಿದನು ಆ ಮಹಿಕರ್ತ ಮುರಹರನ ಮಡದಿಯನು? ಪ್ರತ್ಯಕ್ಷ ದೇವತೆಗಳೇ ಪರಮಾನಿನಿಯರ ಮೋಹದಲ್ಲಿ ಮುಳುಗಿದಾಗ....

**ಗಂಗಾ :** ಮಾದರಿಯ ಮಾತು ಹೇಳುವ ಮತಿಹೀನಾ ಅವರ ಪರಿಣಾಮವೇನಾಯಿತು ಬಲ್ಲೆಯಾ? ಗುರುಪತ್ನಿಯನ್ನಾಶ್ರಿಸಿದ ಚಂದ್ರನು ನರಳುತ್ತಿರುವನು ಕ್ಷಯರೋಗದಲ್ಲಿ; ಮತ್ತೆ ಮಹೇಶನ ಮಡದಿಯನ್ನಾಶಿಸಿದ ಆ ಮಹಿಕರ್ತ ತನ್ನದೊಂದು ಶಿರತೆತ್ತ.

**ಶರತ್ :** ಮಾತಿಗೆ ಮಾತೆತ್ತಿ ಕುದಿಸದಿರು ನನ್ನ ಕಾಮದ ಪಿತ್ತವ, ಕಮಲದ ಬಳಿಯಿದ್ದು ಪರಿಮಳದ ಸೊಬಗಿನ ಸೌರಭವನ್ನು ಪಡೆಯದೇ ಕೂಡುವ ಕೂಪ ಮಂಡೂಕ ನಾನಲ್ಲ! ಹೂ.... ಪುಟಿಯಲಿ ನಿನ್ನ ಹೃದಯ ಕಾರಂಜಿಯಿಂದ ಪ್ರೇಮರಸ.

**ಗಂಗಾ :** ನನ್ನ ಪ್ರೇಮ ರಸ ನಿನಗದು ತಪ್ತತವರಿನ ರಸ !

**ಶರತ್ :** ಅರ್ಥವಿಲ್ಲದ ವ್ಯರ್ಥ ಮಾತುಗಳನ್ನಾಡದೆ ಅರ್ಪಿಸೆನಗೆ ಪ್ರೇಮ ಪುಷ್ಪಾಂಜಲಿ. ಇಲ್ಲದೊಡೆ ನಿನ್ನ ಪತಿ ನಿನಗಾಗಿ ಅರ್ಪಿಸಬೇಕಾದೀತು ಪುಷ್ಪಾಂಜಲಿ.

**ಗಂಗಾ :** ಏನಾದರೂ ಕೊನೆ ಮುಟ್ಟದು ನಿನ್ನ ಹಂಬಲ.

**ಶರತ್ :** ಬಿಟ್ಟ ಬಿಡು ನಿನ್ನ ಛಲ, ಒಳ್ಳೆಯ ಮಾತಿನಿಂದ ಪೂರ್ಣ ಮಾಡಿಕೊಳ್ಳುವೆ.... ಹೂಂ.... ಎನ್ನನ್ನು.... (ಕೈ ಹಿಡಿಯ ಹೋಗುವನು)

**ಗಂಗಾ :** (ಕೈ ಕೊಸರಿ) ಛೀ ದ್ರೋಹಿ.....

**ಶರತ್ :** ಆಗದಿರು ತ್ರಾಹಿ (ಮೈಮೇಲೆ ಏರಿ ಹೋಗಿ ಗಂಗಾನ ಕೈಹಿಡಿಯುತ್ತಿರುವಾಗ)

**ಗಂಗಾ :** ಅಪ್ಪಾ..... ಲಲಿತಾ......

**ಗೌರೀಶ :** (ಹೊರಗಿನಿಂದ ಬಂದು) ಎಲಾ ಎಲಾ; ಇವ್ಯಾವನಲೆ– ಎಳೆ ಸಿಕ್ಕರೆ ಹಚ್ಚಿಡಾ ನುಂಗುವವಾ (ಗಂಗೆಯನ್ನು ಶರತ್‌ನ ಕೈಯಿಂದ ಬಿಡಿಸುತ್ತ) ಸರಿಯಲೇ ಹೆಬ್ಬಾವಿನಂತವನ.....

**ಶರತ್ :** (ಗೌರೀಶನಿಗೆ ನೂಕಿ) ಸರಿಯುತ್ತ ಮಂಕೆ ಇಂದು ಬಿದ್ದಿತು ನನ್ನ

ಬಲೆಯಲ್ಲಿ ಜಿಂಕೆ. ಸಮಯಸಿಕ್ಕಾಗ ಮುಗಿಸುವೆ ನಿನ್ನ ಆಯುಷ್ಯದ ಅಂಕೆ (ಹೋಗುವನು).

**ಗೌರೀಶ :** ಸುಮ್ನೆ ಹೋಗೋ.... ಹೊಳ್ಳಿ ನೋಡಿದರ ಮೂಗಿನ ಹೊಳ್ಳೀನ ಹರದೇನು ಎಪ್ಪಾ ಏಳಿ.....

**ಗಂಗಾ :** ಗೌರೀಶಾ ಸಂದಿಗ್ಧ ಸಮಯದಲ್ಲಿ ಬಂದು ಮಾನಪ್ರಾಣಗಳೆರಡನ್ನೂ ಉಳಿಸಿದ ನೀನು ನನ್ನ ಪಾಲಿಗೆ ದೇವರು.

**ಗೌರೀಶ :** ಎಪ್ಪಾ ! ಸಪ್ಕಾರು ಎಂಥವನ ಗೆಳೆತನ ಮಾಡ್ಯಾರ್ರಿ, ಇವನ ಜೀವಂತೋದು ಸುಟ್ಟು ಬಂದ್ರೂ, ಸಿಟ್ಟು ಕಡಿಮೆ ಆಗೂದಿಲ್ಲ ನೋಡ್ರಿ

**ಗಂಗಾ :** ಈ ನೀಚನ ನಡತೆಯಲ್ಲಿ ಮೊದಲಿನಿಂದ ನನಗೆ ಸಂಶಯವಿತ್ತು.....

**ಗೌರೀಶ :** ಏನರs ಅನ್ರಿ ! ಅಪ್ಪಾ.... ಬಾಯಿ ಬಿಗಿ ಇಲ್ಲದ ವಕೀಲನ್ನ ಕಚ್ಚಿ ಬಿಗಿ ಇಲ್ಲದ ಡಾಗದರನs ಏಳೇಳು ಜನ್ಮಕ್ಕೂ ನಂಬಬಾರದು ನೋಡ್ರಿ

**ಗಂಗಾ :** ಗೌರೀಶ ನನಗೀಗ ಯಾವುದೂ ಹೊಳೆಯದಾಗಿದೆ. ಅವರಿಗೆ ತೀವ್ರ ಬರಲು ಕಾಗದ ಬರೆಯಬೇಕೆಂದರೆ ಅವಸರದಲ್ಲಿ ತಮ್ಮ ವಿಳಾಸ ತಿಳಿಸದೆ ಹೋಗಿರುವರು, ಈ ಮನೆಯಲ್ಲಿ ನಿಲ್ಲಲು ಒಂದು ಕ್ಷಣವೂ ಧೈರ್ಯ ಬಾರದಂತಾಗಿದೆ ಮಾಡಬೇಕೇನು?

**ಗೌರೀಶ :** ಮಾಡಿದೇನ್ರಿ ಎಪ್ಪಾ ಅಪಾವ್ರು ಬರೋವರಿಗೂ ವಸಂತಪ್ಪ ನೋರಗೆ ಇಲ್ಲಿ ಬಂದು ಇರಾಕ ಒಂದು ಕಾರ್ಡರ ಬರೆದು ಕೊಡ್ರಿ ಹಾಕಿ ಬರತೇನೆ ಪೋಷ್ಟನ್ಯಾಗ.....

**ಗಂಗಾ :** ಆಗಲಿ ನೀನು ಮಾತ್ರ ಮನೆಬಿಟ್ಟು ಹೋಗದಿರು ನನಗೆಕೋ ಧೈರ್ಯ ಸಾಲದಾಗಿದೆ.

**ಗೌರೀಶ :** ಆಗಲಿ ದೌಡ ಕಾಗದ ಬರದ ಕೊಡ್ರಿ

**ಗಂಗಾ :** ತಡೆ ಬರೆದು ತರುವೆ (ಒಳಗೆ ಹೋಗುವಳು)

===****===****===

# ತೃತಿಯಾಂಕ

## ಪ್ರವೇಶ–೧

### ರಸ್ತಾ

**ಖಾಸೀಮ :** ಪ್ಯಾರಕಿಯಾಕೊ ಡರನಾ ಕ್ಯಾ ॥ಜ॥ ಪ್ಯಾರಕಿಯಾಕೋ ಡರನಾ ಕ್ಯಾ ॥
ಹಾಡುತ್ತ ಹೋಗುತ್ತಿವಾಗ

**ಗೌರಿ :** (ಬರುತ್ತಾ) ಸಾಬರ ಜರಾ ನಿಂದ್ರರಿ....

**ಖಾಸೀಮ :** (ತಿರುಗಿ ನೋಡಿ) ಏ.... ಆವ್..... ಆವ್..... ಆವ್.... ಮೈಬಿ ನಿಮದು ಮನೆಗೆ ಹೊಂಟಿದ್ದೆ.

**ಗೌರಿ :** ಸುಮ್ನ ನೀವ್ಯಾಕ ತರಾಸು ತಗೋತೀರಿ?

**ಖಾಸೀಮ :** ಕ್ಯಾ ಕರನಾ ಗೋರಿ, ನಿಮದು ನೋಡಿದಾಗಿನಿಂದ ನಮದು ಶೀರ ಖರಾಬ ಆಗೇತಿ ಬೇಪಾರ ಬೀಟ, ಖಾನಾಬೀಟ ದಿನ್‌ರಾತ್ ನಿಮದೂಕೆ ವ್ಯಸಣದಾಗ ಐತೆ ಮಣಸು

**ಗೌರಿ :** ನನಗೂ ನಿಮ್ಮನ್ನ ನೋಡಿದಾಗಿನಿಂದ ಹ್ಯಾಂಗೆಂಗೋ ಆಗೈತಿ ಆದರ......

**ಖಾಸೀಮ :** ಆದರ......?

**ಗೌರಿ :** ನೀವು ನನ್ನ ಮದವಿ ಆಗೂದು ಕರೇನೋ ಸುಳ್ಳೋ ಅಂತಾ ಸಂಶಾ ಬರಾಕ ಹತ್ತೇತಿ.

**ಖಾಸೀಮ :** ಅರೇ ಹುಂ ! ಸಚ್ಚ್ ಮೈಹು ಮುಸಲ್ಮಾನ ಜನಮದಾಗ ಝೂಟ ನಹಿ ಬೋಲೇಗಾ.....

**ಗೌರಿ :** ಅಂದರ ನಾಳೆ ನಮ್ಮ ಮನಿಕಡೇ ಬಂದಿರ್ರಿ.

**ಖಾಸೀಮ :** ನಿಂದು ಮಣಿ ಎಲ್ಲೈತ?

**ಗೌರಿ :** ನನಗೆಲ್ಲಿಂದ ಬರಬೇಕ್ರಿ ಮನಿ, ಸಾವಕಾರ ತ್ವಾಟದಾಗ ಒಂದು ಗುಡಸಲಾ ಹಾಕ್ಕೊಂಡು ಅದೀನಿ.

ಖಾಸೀಮ : ಅಚ್ಛಾ ಅಚ್ಛಾ ಬಹುತ ಅಚ್ಛಾ ಹುವಾ.... ಅಬ್ ನಾನು ಹೋಗಲಿ?

ಗೌರಿ : ಹೋಗರಿ ನಾಳೆ ತ್ವಾಟದಕಡೆ ಬರೂದು ಮಾತ್ರ ಮರಿಬ್ಯಾಡಿ.....

ಖಾಸೀಮ : ಅರೇ ಆತೇ, ಕೈಸಾ ಮರಿತಾಹು ಕೈಸಾ ಮರಿತಾವು.... ಅಚ್ಛಾ ಹೋತ ಆತು ನಾನು ಹೋಗತೀನ ( ಹೋಗುವನು) (ಗಡ್ಡ, ಮೀಸೆ ಧರಿಸಿ ಜ್ಯೋತಿಷ್ಯ ಹೇಳುವವರ ವೇಷ ಹಾಕಿಕೊಂಡು ಗೌರೀಶನು ಬರುವನು).

ಗೌರೀಶ : ಅದ್ಭುತಪವಾಡ ತೋರಿಸ್ತೀನಿ ನೋಡ್ರಿ ಹಿಂದಿನ ಮುಂದಿನ ಭವಿಷ್ಯ ವಧುವರಗಳ ಜಾತಕ, ಉಡಿಕಿ, ಮದುವೆಗಳ ಪ್ರಶ್ನಾ.

ಗೌರಿ : ಏ ಯಾವನS ನೀನು. ಮೈಗೆ ತಿಕ್ಕಿಕೊಂತ ಬರತೀಯಲ್ಲ ನಿನ್ನ ಸುಡಗಾಡ ಬೂದೀನ....

ಗೌರೀಶ : ಹಾಗೆಲ್ಲ ಅನಬಾರದವಾ ದೊಡ್ಡ ಮನುಷ್ಯರಿಗೆ....

ಗೌರಿ : ದೊಡ್ಡ ಮನಿಷಾ ಅಂದ್ರ ಗುಡ್ಡಾಗಿಡ್ಡಾ ಹೊರತಿಯೇನ?

ಗೌರೀಶ : ಗುಡ್ಡಾ ಹೊರುದಿಲ್ಲವಾ, ಆದರ ಗುಡ್ಡದಾಗ ತಪಸ್ಸು ಮಾಡಿ ಯಂತ್ರ, ಮಂತ್ರ, ಜಂತ್ರ, ಸಿದ್ಧಿ ಮಾಡಿಕೊಂಡು ಜ್ಯೋತಿಷ್ಯ ಶಾಸ್ತ್ರ ಅನ್ನೊದನ್ನ ಅರಕೊಂಡು ಕುಡಿದೇವಿ ಏನವಾ..... ನೀನು ಏನ ತೋರಿಸ್ತೀಯೋ ಅದರ ಲಕ್ಷಣದ ಮ್ಯಾಲಿಂದ ನಿನಗ ಇಂಥಾದ ರೋಗ ಐತೆಂತ ಹೇಳತೀವಿ ಏನವಾ.....

ಗೌರಿ : ಅಂದರ ಓಟ ಕುಂದ್ರು (ಕುಳಿತ ಬಳಿಕ) ಕೈನೋಡಿ ಹೇಳಾಕ ಏನ ತಗೊಂತಿ?

ಗೌರೀಶ : ಐದು ಪಾವಲಿ.

ಗೌರಿ : (ರೊಕ್ಕ ತೆಗೆಯುತ್ತ) ಕರೆ ಬರುವಾಂಗ ಹೇಳಬೇಕು ನೋಡು, ನೀ ಹೇಳಿದ್ದು ಗ್ಯಾರಂಟೀ ಆತೂ ಅಂದ್ರ, ನಾ ಹಡದ ಕೂಸಿಗೆ ನಿನ್ನ ಹೆಸರs ಇಡತೀನಿ.

ಗೌರೀಶ : ನನ್ನ ಕೆಲಸಾ ನೋಡಿಕೊಂಡು ಮುಂದ ಮಾತಾಡೇನವಾ, ನಾನು ಮಾಡೋ ಕೆಲಸದಿಂದ ಇಬ್ಬರಿಗೂ ಸುಖಾ ಆಗಿರಬೇಕು ಕೈ ತಾರವಾ.....

ಗೌರಿ : ಹ್ಯಾಂಗ ಕೊಡಬೇಕ್ರಿ ಕೈನ?

ಗೌರೀಶ : ಬಳಿಗಾರಿಗೆ ಜ್ಯೋತಿಷ್ಯ ಹೇಳೋರಿಗೆ ಕೈಕೊಟ್ರ ಏನು ದೋಷ ಇಲ್ಲೇನವಾ.

ಗೌರಿ : (ಕೈ ಕೊಟ್ಟು) ಚಲೋತ್ನ್ಯಾಗ ಹೇಳಿರಿ.

ಗೌರೀಶ : ನಿನ್ನ ಹೆಸರು?

ಗೌರಿ : ಗೌರವ್ವ

ಗೌರೀಶ : ಸಣ್ಣಗಗಾಗಿಗೀ ಗುಗೂ ಗೆಗೇಗ್ಯೆ (ಸ್ವ) ಬಹಳ ಮೆತ್ತನಕ್ಕೆ (ಪ್ರ) ಗೌರವ್ವ ನಿನಗೀಗ ೨ನೇ ಶನಿ ಎದರು ಗುರು ಅದಾನು.... ವಯಸ್ಸು?

ಗೌರಿ : ಸಜ್ಜೀ ಬರದಾಗ ನಮ್ಮ ಅಮ್ಮನ ಮದುವಿ ಆಗ್ಯೆತಂತ್ರ ನೋಡ್ರಿ.

ಗೌರೀಶ : ಹಾಂಗಂದರ ಹ್ಯಾಂಗ.... ಅಜಮಾಸ ಹೇಳೇನವಾ.

ಗೌರಿ : ಅಜಮಾಸ ಈಗ ಇಪ್ಪತ್ತು ವರ್ಷದ ಹಿಂದ ನಾ ಕುಲಾಯಿ ಕಟಿಗೊಂಡು ತಿರಗಾಡತಿದ್ನೆಂತ ನೋಡ್ರಿ.

ಗೌರೀಶ : ಈಗ ೨೪ ಬ್ಯಾಡ ೨೫ ವರ್ಷ ಇದ್ದಾವು ಆದರ.... ಗುರುವಿನ ಮಾರ್ದಶಾ ಮೂಡ್ಯೆತಿ, ಇನ್ನೊಂದು ತಾಜಾ ದಿನದಾಗ ಹಚ್ಚೋ ಹೊತ್ತು ಕೂಡಿ ಬರತ್ಯೆತಿ ಅಂತ ಹೇಳತದ ಏನವ....

ಗೌರಿ : ಜರಾ ಬಿಡಿಸಿ ಹೇಳಿರಿ

ಗೌರೀಶ : ಬಿಡಿಸಿ ಹೇಳಾಕೇನು ಮೊದಲನೆ ಗಂಡ ಸುತ್ತಾನು.... ಈಗ ಮತ್ತ ಉಡಕಿ ವಿಚಾರ ನಡದ್ಯೆತಿ

ಗೌರೀಶ : ಈ ವರ್ಷದಾಗೇನರ ಆದೀತೇನ್ರಿ?

ಗೌರೀಶ : ವರ ಏನರ ನೋಡೀ ಏನವಾ....

ಗೌರಿ : ನಾನು ಕೆಲಸಾ ಮಾಡೂ ಮನೆಯಾಗ ಐತರಿ....

ಗೌರೀಶ : ಅವನ ಹೆಸರು?

ಗೌರಿ : ಗೌರೀಶ

ಗೌರೀಶ : ಗೌರೀಶ.... ಗೆ ಗೇ ಗ್ಯೆ ಗೊ ಗೋ ಗೌ.... ಅಂದರ ಗಂ, ಗಃ ಮುಂದುಳುದವು. 'ಗಂ' ಅಂದರ ಗಂಡಾಂತರ 'ಗಃ' ಅಂದರ ಘಾತಕ ಎರಡು ಇಲ್ಲದಾಂಗಾತು. ಗೌರವ್ವ ನಿನ್ನ ನಶೀಬ ದೊಡ್ಡ

ದೈತೇನವಾವರಾ ಭಾಳ ಹೀರಾ ಆದ ಆ ವರಾ. ಬಿಟ್ಟೇ ಅಂದರ ನೀ ಕೆಟ್ಟ ಹೋಗತಿ ಏನವಾ. ಇದರ ಮ್ಯಾಲ ನೀ ತಿಳಕೋಬೇಕು. ನಾ ಉಳಕೋಬೇಕು.

**ಗೌರಿ :** ನೋಡು ಕೈನ ಓಟು, ಮಕ್ಕಳ ಅದಾವಾ ಇಲ್ಲ ನೋಡ್ರಿ.

**ಗೌರೀಶ :** ಮಕ್ಕಳೇನವಾ.... ಮಂದಿಗಿ ಆಗುವವು ಎರಡು ಅದಾವು.

**ಗೌರಿ :** ಏನಲಾ ತಲಿಕೆಟ್ಟೈತೇನನಿಂದು....ಬಾಯಿಗೆ ಬಂದಗ ಬೊಗಳತಿ.

**ಗೌರೀಶ :** ಬೊಗಳಾಕ ನನ್ನ ಏನರ ನಾಯಂತ ತಿಳಿದೀ ಏನವಾ. (ಎದ್ದುನಿಂತು) ಈಗ ಮಂತ್ರಿಸಿ ಬಿಟ್ಟ್ಯಾ ಅಂದ್ರ, ಜಂತರಲಗಾ ಒಗದೀ ಡಂ ದಢಂ ಗುಡ್ಡಾ ಸಡಲತದಾ.... (ತಲೆ ಅಲುಗಾಡಿಸುವಾಗ ಅಡ್ಡ ಮೀಸಿ ಕೀಳುವವು)

**ಗೌರಿ :** ಅವ್ವ, ಅವ್ವ ನನಗ್ಯಾರಂಟಿ ಗಡೇದ ಕರದಂಟ.... (ಕಿವಿ ಹಿಡಿದು ಎಳೆಯುವಳು)

**ಗೌರೀಶ :** ಏ, ಏ ಕಿವಿ ನನ್ನವು

**ಗೌರಿ :** ಅಲ್ಲಿ ಮನೀ ಅನ್ನೂದ ತಿಪ್ಪಿ ಆಗೇತಿ. ಇಲ್ಲಿ ಜೋತಿಷ್ಯ ಹೇಳಾಕ ಕುಂತೀಯಾ ಜೋತಿಷ್ಯ....?

**ಗೌರೀಶ :** ಜೋತಿಷ್ಯ ಅನ್ನೂದು ನಿನ್ನ ಮನೆಸಿನೊಳಗಿಂದು ತಿಳಿಯಾಕೆ ಹಾಕಿದ್ಯಾ, ಈ ವೇಷ.... ಗೌರೀ ನಾನು ಬರೂದಕ್ಕಿಂತ ಮೊದಲು ಹೋದನಲ್ಲ ಯಾರ ಆತ?

**ಗೌರಿ :** ಜೋತಿಷ್ಯ ಹೇಳತೀದಿ. ತಿಳಿಯೂದಿಲ್ಲೇನ?

**ಗೌರೀಶ :** ಸಾಕ ಹುಡಗಾಟ, ದೌಡ ಹೇಳು

**ಗೌರಿ :** ಯಾರೋ ಏನೋ ನನಗೆ ಗೊತ್ತಿಲ್ಲ

**ಗೌರೀಶ :** ಗೊತ್ತಿಲ್ಲಂತ ಗತ್ತ ಹಚ್ಚಿದೀ ಅಂದರ ನಿನ್ನ ಪಿತ್ತನ ಇಳಸ್ತೀನಿ.

**ಗೌರಿ :** ಅವ್ರs ಆವ್ರು

**ಗೌರೀಶ :** ನೀನು ಹಗಲಚಿಪ್ಪ ಮುಗಿಲನ ನಿಚ್ಚಣಿಕೀ ಆದಿ ಏಳ ಬಯಲಿಗೆ ಬಿತ್ತ ಇವತ್ತ ನಿನ್ನ ಬಣ್ಣ

ಗೌರಿ : ಕಣ್ಮಟ್ಟ ನೋಡದ ಕಂಡಂಗ ಅಂದೀ ಅಂದರ ನಿನ್ನ ಮೈಯಾಗಿನ ಹುಳೀನ ಬಿಡಸೀನ ನೋಡು.

ಗೌರೀಶ : ತಿನಸಬ್ಯಾಡ ಚಳ್ಳ ಹಣ್ಣು. ಅವಾ ಯಾರ ಅನ್ನೂದು ನನಗ ಗುರುತಾಗೇತಿ.

ಗೌರಿ : ಗುರುತಾದರ ಸುಮ್ನ ಇದ್ದ ಬಿಡು.

ಗೌರೀಶ : ಅವನ ಹತ್ತರ ಏನ ಕೆಲಸ ಇತ್ತು?

ಗೌರಿ : ಕೆಲಸ ಯಾತರದು.... ಸುಮ್ನ ತಮಾಷಾ ಮಾಡಿಕೊಂತ ನಿಂತಿದ್ಯಾ.

ಗೌರೀಶ : ತಮಾಶಾ ಮಾಡಿದ್ಯೋ.... ಏನ ನೀ ಜಮಾಸಿಗೊಂಡೀದೊ ಯಾಕಂದರ ಇದು 'ಒನ್' ಬೈಟೂ, ದ ಕಾಲ.

ಗೌರಿ : ಏನ ಅರವಿಲ್ಲದ ಮನಿಷ್ಯಾನs ನೀನು. ಹಣೇ ಬರಾ ನೋಡ ಹನ್ಮಪ್ಪ ಅಂದರ ಧೂಪಾರ್ತಿ ತೊಗೊಂಡು ಬೆನ್ನ ಹತ್ತಿದಂಗ ನೀ ಸುತ್ತಿ ಸುತ್ತಿ ನನ್ನ ಕಡಿಗೆ ಬರತಿ

ಗೌರೀಶ : ಸುತ್ತಿ ಸುತ್ತಿ ನಾ ಬರೋದರ ಜತೀಗೆ ಆ ಸಾಬ ಬರಾಕ ಹತ್ತಾನಲ್ಲ?

ಗೌರಿ : ಅವನದು ದೊಡ್ಡ ಕತಿ ಐತೇಳ.

ಗೌರಿ : ಏನದು?

ಗೌರಿ : ಆ ಅಗಳಿಮಾರಿ ಸಾಬಗ ಶಾದಿ ಆಗಬೇಕಂತ ಅದಕ ಜಿಗಳಿ ಬೆನ್ನು ಹತ್ತಿದಂಗ ನನಗ ಬೆನ್ನು ಹತ್ಯಾನು ನಾಳೆ ಸಂಜಿ ಮುಂದತ್ವಾಟದ ಕಡೇ ಬರಾಕ ಹೇಳೇನಿ, ಮಂಗ್ಯಾನ ಮಸಡಿ ಸಾಬಗ ಇನ್ನೊಮ್ಮೆ ಮದವಿ ಸುದ್ದಿ ಎತ್ತದಂಗ ಮೈ ಮೆತ್ತುಗ ಮಾಡಕ ಓಟು ಹಂಚಿಕೆ ಹುಡುಕು.

ಗೌರೀಶ : ಗೌರೀ.... ನಿನ್ನ ಸೀರಿ ಕೊಡು; ಅದನ್ನ ಉಟಗೊಂಡು ಭೀಮಸೇನ ಕೀಚಕನ್ನ ನಾದಿದಂಗ ಆ ಸಾಬಗ ನಾದಿ, ನಿನ್ನ ನೆರಳು ಕಂಡರ ಹೊಳ್ಳಿ ನೋಡದಂಗ ಮಾಡತೀನಿ.

ಗೌರಿ : ತೆಲಿ ಅನಬೇಕು ನಿಂದನೋಡು ಈ ನಿನ್ನ ತೆಲಿ ನೋಡಿದರ ಕನಿಷ್ಟ ಸಾಲಿ ಮಾಸ್ತರರ ಕೆಲಸಾರS ನಿನಗ ಸಿಗಬೇಕಾಗಿತ್ತು.

ಗೌರೀಶ : ಇದ್ದ ಸಾಲಿ ಮಾಸ್ತರಿಗೆ ತಿಂಗಳ ಪಗಾರ ತಿಂಗಳಿಗೆ ಸಾಲದ ಹೆಂಡರ

ಮಕ್ಕಳನ್ನ ತೌರಮನಿಗೆ ಕಳಿಸಿಕೂಡಾಕ ಹತ್ತಿದಾಗ ನಾನೊಬ್ಬಾತ ಮೂಲಾಗಲೇನಿ ಅವ್ರಿಗೆ

**ಗೌರಿ :** ಯಾಕ ಮಾಸ್ತರ ಜನ್ರಿಗೆ ಏನ ಕಡಮಿ ಮಾಡ್ಯಾರ ಸರಕಾರದೋರು ಆ ಮಾಸ್ತರಗೆ ಇರಾಕ ನಮ್ಮೂರಾಗ ಮನಿ ಕಟ್ಟಿಸಿಕೊಟ್ಟಿಲ್ಲಾ?

**ಗೌರೀಶ :** ಅದೆಲ್ಲಾ ಮಾಸ್ತರತೇರಿಗೆ  ಅದ, ಮಾಸ್ತರ ಸತ್ತರ ಗೋರಿ ಕಟ್ಟಿಸೋರಿಲ್ಲ.

**ಗೌರಿ :** ನಿನೆಲ್ಲಾರಽ ಕೆದರಿ ಕೇರು ಹಾಕಿಕೊಂಡು ಎದರ ಗಾಳೀಗೆ ನಿಂದರಾವ

**ಗೌರೀಶ :** ಯಾಕ?

**ಗೌರಿ :** ಸರಕಾರಕ್ಕ ಹಿಂಗೆಲ್ಲಾ ದರಕಾರ ಇಲ್ಲದ ಮಾತಾಡಿದರ ಸಂಜ್ಯಾ ಗೂದರಾಗ ಸೇರಸ್ತಾರ ಸೆರಮನ್ಯಾಗ

**ಗೌರೀಶ :** ಇದೆಲ್ಲ ಯಾರ ಮುಂದರ ಹೇಳ, ನಾ ಒಳ್ಳೆದಕ ಮನಿಷ್ಯಾ

**ಗೌರಿ :** ಉಳಿದಿದ್ದಕ "ಕತ್ತೆ" ಏನು?

**ಗೌರೀಶ :** ಏ ಸತ್ತ ಮಾರಿಯವಳ ಎತ್ತ ಬೇಕಾದತ್ತ ಮಾತಾಡದೀ ಅಂದರೆ ಮೈ ಮೆತ್ತಗಾಗಿ ರಕ್ತ ಬಾಬಾ ಬೇಡಿತು.

**ಗೌರಿ :** ಅವ್ವ ಅವ್ವ ಸರದಾರ, ಮನೀ ಹೇಣತಿಗೆ ಪಿಂಜಾರ, ನಡಿ ಮನಿಗೆ

## ಪ್ರವೇಶ–೨

### ಗಾಂಧಿ ಪಾರ್ಕ್

**ಕೋಕಿಲಾ :** (ಹೂಮಾಲೆ ಹಿಡಿದು) ಪದ.....

ಬಾರೋ ಮೋಹನಾ ॥ ಕಾಮನಾ ॥ ಪೂರ್ಣ ಮಾಡೋ ॥
ಮನೋಹರನೆ ನೋಡೋ । ಸದಾನಂದ ನೀಡೋ ॥ಪ॥
ಬಾರೋ ಬಾ ಚಕೋರಾ ॥ ನೀ ಪ್ರೇಮಸಾರಾ ॥
ಕಾಮನೆಯ ಪೂರ್ಣಮಾಡೋ ಹರುಷದಿ ಕೂಡೊ ॥
ಹೃದಯ ತೆರೆದು ಬಾ ಮಧು ಮಿಲನಕೆ ಬಾ ॥

(ಹಾಡು ಮುಗಿಯುವ ಹೊತ್ತಿಗೆ ವಸಂತನು ಬಂದು ಕಣ್ಣು ಮುಚ್ಚುವನು)

**ಕೋಕಿಲಾ :** (ಕೈ ಬಿಡಿಸುತ್ತ ವಸಂತ, ವಸಂತ)

**ವಸಂತ :** (ಕೈಗಳನ್ನು ಬಿಟ್ಟು) ಕೋಕಿಲಾ, ವಸಂತಮಾಸ ಬರುವ ಪೂರ್ವದಲ್ಲಿಯೇ ಕೋಗಿಲೆ ಕೂಗುತಿದೆಯಲ್ಲ?

**ಕೋಕಿಲಾ :** ಹೌದು ಕೋಗಿಲೆಯ ಕುಹೂಂವ ಜಾಡನ್ನು ಹಿಡಿದೇ ವಸಂತನ ಬರುವಿಕೆಯಲ್ಲವೇ? (ಹಾರ ತೋರಿಸುತ್ತ ಹೇಗಾಗಿದೆ ಪುಷ್ಪಹಾರ?

**ವಸಂತ :** ಭಾವಗರ್ಭಿತವಾಗಿದೆ.

**ಕೋಕಿಲಾ :** ಅರ್ಥವಾಗಲಿಲ್ಲ.

**ವಸಂತ :** ನೋಡು ಕೋಕಿಲಾ (ಹಾರ ಕೈಗೆ ತೆಗೆದುಕೊಂಡು) ಜಾಜಿ, ಮಲ್ಲಿಗೆ, ಗುಲಾಬಿಗಳ ಆಕಾರ ವರ್ಣ ಬೇರೆ ಬೇರೆಯಾಗಿದ್ದರೂ ವರ್ಣಭೇದವಿಲ್ಲದ ನಾವು ಸಮಾಗಮಗೊಂಡು ಒಂದೆಡೆ ಸೇರಿ ವಿಶಿಷ್ಟ ಸೌರಭವನ್ನು ಸೂಸುವ ಮಾಲೆಯಂತೆ. ಬಡವ, ಬಲ್ಲಿದ ಮೇಲು ಕೀಳುಗಳೆಂಬ ಮಾನವ ಪುಷ್ಪಗಳು ಒಂದೇ ಮಾಲೆಯಲ್ಲಿ ಸೇರಿ ಭಾರತ ಮಾತೆಯ ಕಂಠಾಭಾರಣವಾದಾಗಲೇ ಹೆತ್ತಾಯಿಯ ಕೀರ್ತಿ ಸೌಗಂಧವು ದಶದಿಶೆಗಳಲ್ಲಿ ಪಸರಿಸುವದು.

**ಕೋಕಿಲಾ :** ಅದಕ್ಕಾಗಿ ಬಡವ ಬಲ್ಲಿದ ಎಂಬೆರಡು ಒಲಿದ ಹೃದಯಗಳನ್ನು ಒಂದಾಗಿಸಲು ಸಿದ್ಧವಾಗಿದೆ ಈ ಪುಷ್ಪಹಾರ.

**ವಸಂತ :** ಕೋಕಿಲಾ ನನ್ನ ಮೇಲೇಕಿಷ್ಟು ಅಭಿಮಾನ, ನನ್ನ ನೀ ವರಿಸಿದರೆ ನಿನಗಿಹುದು ದುಃಕ ದುಮ್ಮಾನ

**ಕೋಕಿಲಾ :** ದುಃಖ ದುಮ್ಮಾನದ ಕೊನೆಯೇ ಸುಖದ ಸೋಪಾನ.

**ವಸಂತ :** ನಿನ್ನ ಅಮೃತೋಕ್ತಿಗಳು ಬೆಲೆಬಾಳುವ ಮೌಕ್ತಿಗಳು.

**ಕೋಕಿಲಾ :** ಇಂದಿನಿಂದ ನಾವೀರ್ವರೂ ಸುಖ ದುಃಖಗಳಲ್ಲಿ ಸುಮಭಾಗಿಗಳಾಗಿ ಶುಭಕಾಲ ನೋಡಿ....

**ವಸಂತ :** ಇದೋ ಕೋಕಿಲಾ ಮುಗಿಲಿಗೆ ಮುದ್ದುಕೊಡಲು ಎದ್ದು ನಿಂತಿರುವ ಹಾಗೂ ಇಲ್ಲಿರುವ ಮರಗಳೇ ಮಂಟಪಗಳು (ಕೋಗಿಲೆಯ ಕೂಗು) ಅದೋ ಕೋಗಿಲೆಗಳು ತಮ್ಮ ಸುಸ್ವರ ಕಂಠದಿಂದ ವಾದ್ಯ ನುಡಿಸುತಿವೆ ಪಕ್ಷಿ ಸಂಕಲದೇವ ಮಂತ್ರವನ್ನುಚ್ಚರಿಸುತ್ತಿವೆ ಇದಕ್ಕಿಂತ ಮಿಗಿಲಾದ ಶುಭಕಾಲಬೇರಿಲ್ಲ.

ಕೋಕಿಲಾ : ಸತ್ಯವಾಗಿಯೂ ಇದು ನಿಮ್ಮ ಹೃದಯ ನಿರ್ಧಾರವೋ?

(ಹೂಮಾಲೆ ತೆಗೆದುಕೊಳ್ಳುವಳು)

ವಸಂತ : ಸತ್ಯವಾಗಿಯೂ ಇಂದಿನಿಂದ ನೀನೆನ್ನ ಹೃದಯ ದೇವತೆ ಅದೋ ಆಕಾಶದಂಗಳದಿ ಹೊಂಬಿಸಿಲು ಬೀರುತ್ತ ಕತ್ತಲೆಯ ರಾಕ್ಷಸನ ಬೇಟೆಯಾಡಿ ಓಡುತ್ತಿರುವ ಬಾಲಸೂರ್ಯನ ಸಾಕ್ಷಿಯಾಗಿ ನಾನಿನ್ನ ಕೈ ಹಿಡಿಯುವೆ.

ಕೋಕಿಲಾ : ಹಾಕಲೆ ಪುಷ್ಪಮಾಲೆಯ?

ವಸಂತ : ಅನುಮಾನವೆ?

ಕೋಕಿಲಾ : ನಾನೊಲ್ಲೆ ನಿಮ್ಮಂಥ ಅಪರಾಧಿಯನ್ನು ವರಿಸಲಾರೆ.

ವಸಂತ : ಹಾಂ !

ಕೋಕಿಲಾ : ಹಾಂ, ನೀವು ನನ್ನ ವಸ್ತುವೊಂದು ಅಪಹರಿಸಿದ ಅಪರಾಧಿಗಳು.

ವಸಂತ : ನಿಜವೇ?

ಕೋಕಿಲಾ : ಅನುರಕ್ತ ಹೃದಯವನ್ನು ಅಪಹರಿಸಿದ ನೀವು ಅಪರಾಧಿಗಳಲ್ಲವೇ?

ವಸಂತ : ಮುಗ್ಧ ಹುಡುಗಿ (ಬೆರಳಿನಿಂದ ಗಲ್ಲಕ್ಕೆ ಮುಟ್ಟುವನು)

ಕೋಕಿಲಾ : ಇದೋ ಪ್ರೇಮ ಪರಸ್ಪರವಾಗಿ ಪುಷ್ಪಹಾರ

ಧನರಾಜ : (ಪ್ರವೇಶ) ನಿಲ್ಲಿಸಿರಿ ನಿಮ್ಮ ಆವ್ಯವಹಾರ (ಪುಷ್ಪಹಾರ ಕಸಿದು) ನೀವು ಗೈದಿರುವ ಕೃತಿಗಾಗಿ ಇದೋ ನಿಮ್ಮ ಪುಷ್ಪಹಾರವನ್ನು ಹರಿದು (ಹರಿಯುವಷ್ಟರಲ್ಲಿ ಕೋಕಿಲಾ ಕೈ ಹಿಡಿದು)

ಕೋಕಿಲಾ : ಅಪ್ಪಾ ಹಾರವನ್ನು ಹರಿಯದಿರು, ಹರಿದು ಃುಳಿಯ ಹಿಂಡದಿರು ಎನ್ನೊಡಲ ಭಾವನೆಯ ಕ್ಷೀರದಲಿ

ಧನರಾಜ : ಕೋಕಿಲೆ ನಮ್ಮ ಮನೆತನದ ಮರ್ಯಾದೆಯನ್ನು ಅರಿಯದಷ್ಟು ಅವಿವೇಕಿಯಾದೆಯಾ? ಇದುವರೆಗೆ ಎಷ್ಟೋ ಸಿರಿವಂತರ ಸಿರಿಯೊಡನೆ ನಿನ್ನನ್ನು ವರಿಸಲು ಬಂದರೂ ಧಿಕ್ಕರಿಸಿ ಇಂದು ನಮ್ಮ ಮನೆಯ ತೊತ್ತಿಗೂ ಕಡೆಯಾದ ದರಿದ್ರನು ನಿನ್ನ ಅಂತಸ್ತಿಗೆ ಸರಿಯಾದವನೆ?

ವಸಂತ : ಧನರಾಜರೇ, ಹಣದಿಂದ ದರಿದ್ರ ನಾನಾದರೂ ಗುಣದಿಂದ ಮಾತ್ರವಲ್ಲ.

**ಧನರಾಜ :** ಮುಚ್ಚುಬಾಯಿ ಹುಚ್ಚುನಾಯಿ, ಹೆಚ್ಚಿಗುತ್ತರಿಸಿದರೆ ಹುಚ್ಚರಾಸ್ಪತ್ರೆ ಸೇರಿಸಬೇಕಾದೀತು, ನಿನಗಿರಲಿಕ್ಕೆ ನಾ ಕೊಟ್ಟ ತಾಣ ನೀನಾದೆ ನನಗಿಂದು ಗಂಟಲಗಾಣ.

(ಹೊಡೆಯಲು ಹೋಗುವನು)

**ಕೋಕಿಲಾ :** (ತಡೆದು) ನಿರ್ದಯನಾಗದಿರು ಅಪ್ಪಾ.

**ಧನರಾಜ :** ಸರಿ ಕಿರಾತಕಿ, ಕುಬೇರನ ಕೈಹಿಡಿಸಿ ಸಿರಿಯ ಸಿಂಹಾಸನದ ಮೇಲೆ ಕೂಡ್ರಿಸಬೇಕೆಂದಿದ್ದೆ. ಆದರೆ !

**ಕೋಕಿಲಾ :** ಅಪ್ಪಾ ಕರ್ಮಾನು ಸಾರಿಣಿ. ಡಾಕ್ಟರ ಪರೀಕ್ಷೆಗಾಗಿ ಪರ ದೇಶಕ್ಕೆ ಹೋದ ಸುಭಾಸರ ತಂಗಿ ಆಝಾದ ಹಿಂದ್ ಸೈನ್ಯದಲ್ಲಿ ಸೇರಲಿಲ್ಲವೇ ಕ್ಯಾಪ್ಟನ್‌ಳಾಗಿ? ಅದಕ್ಕಾಗಿ ಅರಿತವರು ಆಡುವರು ತಾನೊಂದು ಬಗೆದರೆ ದೈವವೊಂದು ಬಗೆಯಿತೆಂದು–

**ಧನರಾಜ :** ಎಲೆ ಜಾರಿಣಿ ನಿಲ್ಲಿಸು ನಿನ್ನ ಅರ್ಥಶೂನ್ಯ ನಿನಾದವನು

**ವಸಂತ :** ಜಾರಿಣಿ ಇವಳಲ್ಲ. ಜಾತಿ ವಿಜಾತಿಯ ಜಂಜಾಟ ಹರಿದು ಜಾತ್ಯಾತೀತ ರಾಷ್ಟ್ರ ನಿರ್ಮಿಸಲು ಹಗಲಿರುಳು ಹೆಣಗುವ ಜಾಣೆ. ನಿಮ್ಮಂಥ ಹೊನ್ನೇ ಹುಳುಗಳಿಂದ ಭಾರತದ ಹಣತೆಯ ಜಾತ್ಯಾತೀತ ಜ್ಯೋತಿ ಬೆಳಗಬಹುದೆ? ಕೋಕಿಲೆ..... ನನ್ನ ಮರ್ಯಾದೆಯ ಮಂದಿರದ ಮೇಲೆ ಕಲಂಕದ ಕಲಶವನ್ನೇರಿಸಿದೆಯಾ ಈ ಹೃದಯ ಹೀನನೊಡಗೂಡಿ?

ನಾನು ಹೀನನೇ ಧನರಾಜರೇ, ಬಹಿರಂಗದಲ್ಲಿ ಅಹಿಂಸಾಪರಮೋ ಧರ್ಮವೆಂದು ನುಡಿದು ಅಂತರಂಗದಲ್ಲಿ ಬಡ್ಡಿಯಾಶೆಯಿಂದ ಹೆರವರ ಕುತ್ತಿಗೆ ಕೊಯ್ಯಲು ಹಿಂದು ಮುಂದು ನೋಡದ ಪುಣ್ಯಾತ್ಮರೆಷ್ಟು ಜನರಿಲ್ಲ ಉಚ್ಚಧರ್ಮದಲ್ಲಿ. ಭಗವಂತನನ್ನು ಕಾಣಲು ಬಡವ ಹೋಗಿ ದಕ್ಷಿಣೆ ಇಲ್ಲದೆ ನಿಂತಾಗ, ದಾಕ್ಷಿಣ್ಯವಿಲ್ಲದೆ ದೈತ್ಯರಾಗಿ ಅವನನ್ನು ಪಾದಧೂಳಿಯಂತೆ ದೂಡುವ ಅರ್ಚಕರೆಷ್ಟು ಜನರಿಲ್ಲ ಪುಣ್ಯಕ್ಷೇತ್ರಗಳಲ್ಲಿ? ಅವರು ಹುಟ್ಟುವರು ಪವಿತ್ರ ಧರ್ಮದಲ್ಲಾದರೂ ಅವರ ಕೃತಿ ಅಧರ್ಮದ ಅತಿರೇಕವಲ್ಲವೇ? ಬ್ರಹ್ಮ ಬರಹದಿಂದ ಬಡವನಾಗಿ ಹುಟ್ಟಿದ ಮಾತ್ರಕ್ಕೆ ನನ್ನ ಹೃದಯ ಹೀನವಾಯಿತೇ?

**ಧನರಾಜ :** ಎಲೋ ಮನೆಮುರುಕಾ । ನನ್ನ ಮನೆತನದ ಘನತೆಯ ಹಾಲಿನಲ್ಲಿ ಹುಳಿಬೆರೆಸಿ ಮತ್ತೆ ನನಗೆ ಬುದ್ಧಿ ಹೇಳಿ ತಿದ್ದಲು ಬರುವೆಯಾ?

ಇದೋ ನಿನ್ನ ಕೃತಿಗಾಗಿ ಕಾಣಿಕೆ (ಪಿಸ್ತೂಲ ಹಾರಿಸಲು ಸಿದ್ಧನಾಗುವನು)

**ಕೋಕಿಲಾ :** (ವಸಂತನಿಗೆ ಅಡ್ಡಾಗಿ ನಿಂತು) ಹೂ ! ಹಾರಿಸು ಅಪ್ಪಾ ಗುಂಡನ್ನು.....

**ಧನರಾಜ :** ಸರಿ ಕೋಕಿಲಾ..... ಈ ಕಾಮಾಂಧನ....

**ಕೋಕಿಲಾ :** ಕಾಮಾಂಧನಲ್ಲ, ಜಾತಿ ಗರ್ವಾಂಧರಿಗೆ ಮುರಮರ್ದನ ಮುಕುಂದ.....

**ಧನರಾಜ :** ಮಾತಿಗೆ ಮಾತು ಮಸಿದರೆ ಕೇಡು ತಪ್ಪಿದ್ದಲ್ಲ, ಸುಮ್ಮನೆ ಸರಿಯುತ್ತ.

**ಕೋಕಿಲಾ :** ಅಪ್ಪಾ ಅಳಿಸಬೇಡ ನಿನ್ನ ಕೈಯಿಂದಲೇ ಮಗಳ ಹಣೆ ಸೌಭಾಗ್ಯದ ಸಿಂಧೂರ. (ಕಾಲು ಹಿಡಿದು) ಕಾಲ್ಹಿಡಿದು ಬೇಡುವೆ ಪತಿ ಭಿಕ್ಷೆಯ ನೀಡೆಂದು.... ವಸಂತನೇ ನನ್ನ ಬಾಳಿನ ನೇಸರ.

**ಧನರಾಜ :** (ಕೋಕಿಲೆಯ ನೂಕಿ) ಆದರೆ ನಾ ನಿನಗೆ ಬಾಣಾಸುರ..... ಎಲೋ ಭಿಕಾರಿ ಇದೋ ಅರ್ಪಿಸು ನಿನ್ನಾತ್ಮವನು.

(ಗುಂಡು ಹಾರಿಸುವನು ಕೋಕಿಲೆ ಅಡ್ಡ ಬಂದು ತನ್ನ ಕೈ ನೀಡುವಳು. ಗುಂಡು ಕೋಕಿಲೆಯ ಕೈಗೆ ತಾಕುವದು)

**ಕೋಕಿಲಾ :** ವಸಂತ..... (ಬೀಳುವಳು)

**ವಸಂತ :** ಕೋಕಿಲಾ.....

## ಪ್ರವೇಶ–೩

### ರಸ್ತಾ

**ಗೌರೀಶ :** ಏನ ಕಾಲರಿ ಕಲಿಕಾಲ ಒಂದs ಮನ್ಯಾಗ ಒಂದs ಹೊಟ್ಯಾಗ ಹುಟ್ಟಿದವರಾಗ ಒಂದು ಬಂಗಾರ ಇನ್ನೊಂದು ಅಂಗಾರ ಅಶೋಕಪ್ನೋರ ಮನಿಯಾಗ ದುಡಿಮಿಗಿ ನಿಂತು ಎರಡು ಮೂರು ವರ್ಷಾತು ಒಂದು ದಿನಾನಾದರೂ ಆ ನನ್ನ ತಂದಿ ಬೇದು ಬೆದರಿಸಿದ್ದು ಕನಸಿನ್ಯಾಗ ಕಾಣಲಿಲ್ಲ. ಹಾಲಿಗೆ ಸಕ್ಕರೆ ಸೇರಿಸಿದಾಂಗ, ಅವರ ಹೆಂಡತಿ ಹೆಸರಿಗೆ ತಕ್ಕಂಗ ಗಂಗಮ್ಮನಂತಾಕಿ ಮುಂಜಾನೆದ್ದು ಗಂಡನಪಾದಕ್ಕ ಹಣಿಹಚ್ಚದs ಹನಿ ನೀರು ಬಾಯಿಗೆ ಹಾಕೂದಿಲ್ಲ.

ಅದರ, ಅದs ಲಲಿತವ್ವ ಅದಾಳ್ನೋಡ್ರಿ ಗಂಡ ಸತ್ತಾಕಿದ್ರೂ ಟೀಪಣಿ ತಕ್ಕೊಳ್ಳುದರಾಗ ಪಾತರದೋರಗಿಂತ ಪಾವಲಿ ಮುಂದ, ಅದೇನೊ ಬೆಡ್ ಟೀ ಅಂತ ಕುರಿಗೋಡ ಬಸವಣ್ಣನ ಕ್ವಾರಿ ಮೀಸಿಹಾಂಗ ಕಟಬಾಯಿ ಜೊಲ್ಲ, ಕಪಾಳದ ಮ್ಯಾಲೆ ಹರಿದಿದ್ದರೂ ಹಾಸಗಿ ಮ್ಯಾಲೆ ಕುಂತಗೊಂಡs ಹರಿವಾಣದ ತುಂಬಾ ಚಾ ಕುಡಿತಾಳ. ಆಕೀದ ವನಪು ಒಯ್ಯಾರ ಕಂಡರ ಸೊಂಟಾನರ ಮುರಿಲೇನಪಾ ಅನ್ನುವಟ್ಟು ಸಿಟ್ಟು, ಬರತೈತಿ. (ಒಳಗೆ ನೋಡಿ) ಅಬಬಾ ಇನ್ನು ಎಷ್ಟು ದೂರದಾಳಪಾ ಈಕಿ ಹ್ಯಾಂಗ ಬರತಾಳ್ನೊಡ್ರಿ ಹೆಂಡಾ ಹೊತ್ತ ಒಂಟಿ ಬಂದಾಂಗ (ಗೌರಿ ಹಾಗೆ ಮುಂದೆ ಹೋಗುವಾಗ) ಹಿಂಗ್ಯಾಕ ಹೊಂಟೀಯ ಕಣ್ಣಾಗ ಕಾರಪುಡಿ ಬಿದ್ದವರಂಗ.

**ಗೌರಿ :** ಏನ ಮಾಡ್ಲೆ ನಿನ...... ದಾರಿಮ್ಯಾಗ ಮಾರಿಗೊಬ್ಬರು ಮೊಳಕೊಬ್ಬರು. ಪೋಲಿಸರು ನಿಂತುಗೊಂಡು ಕಾಲಹಾದಿ ಬಿಟ್ಟ ರಸ್ತಾಕ ಬರೋರಿಗೆ ಬಾಯಿಗೆ ಬಂದಂಗ ಬೈಂಯ್ಯಾಕ ಹತ್ತ್ಯಾರು ಊರಾಗೇ ನಾರಗದ್ದಲಾಗೇತೇನ?

**ಗೌರೀಶ :** ಗದ್ದಲ ಯಾತರದು? ಮಂತ್ರಿ ಗಿಂತ್ರಿ ಬರತಿರಬೇಕು.

**ಗೌರಿ :** ಅವರದೇನ ಕೆಲಸೈತಿ ನಮ್ಮೂರಾಗ?

**ಗೌರೀಶ :** ಕಲ್ಲ ಹಾಕೋದು

**ಗೌರಿ :** ಯಾರ ಮ್ಯಾಲ?

**ಗೌರೀಶ :** ಮಂದಿ ಮ್ಯಾಲಲ್ಲ ಯಾವದರS ಬಂಗಲೇವ ಕಟ್ಟಿಸಬೇಕಾದರ ಮಂತ್ರಿಗೋಳ ಕೈಯಿಂದ ಅಡಿಗಲ್ಲಂತ ಇಡಸ್ತಾರು.

**ಗೌರಿ :** ಅಷ್ಟ ಕೆಲಸಾ ಇಲ್ಲಿ ಯಾರ ಕಡಿಂದೂ ಆಗಾಕಿಲ್ಲೇನು?

**ಗೌರೀಶ :** ಅಷ್ಟ್ಯಾಕ...... ಅದಕ್ಕಿಂತ ದೊಡ್ಡ ಕೆಲಸ ಮಾಡೋರ ಆದಾರ. ಆದರ ದೊಡ್ಡೋರಂತ ಮರ್ಯಾದಿ ಕೊಡಬೇಕಾಗತದ

**ಗೌರಿ :** ಹೀಂಗೇನು ನಾಬ್ಯಾರೆ ತಿಳಕೊಂಡಿದ್ಯಾ?

**ಗೌರೀಶ :** ನೀ ಏನ ತಿಳಕೊಂಡಿದ್ದಿ?

**ಗೌರಿ :** ಮಂತ್ರಿ ಆದೋರ ಕೈಯಾಗ ಅಮರೂತ ಇದ್ದು ಇಲ್ಲೀ ಮಂದಿ ಕೈಯಾಗ ಹುಣ್ಣು ಗಿಣ್ಣು ಒಡದಿರತಾವೇನಂತ.

ಗೌರೀಶ : ಹುಲ್ಲೂರು ಹುಚ್ಚಿ ಅಂದ್ರ ನೀನs ನೋಡು, ಇವತ್ನಾಳೆ ಮೈ ಕೈಲೆ ಮುಟ್ಸುದ್ದಾಗಿದ್ದು ಓಟು ಇಂಗು ಜೀರಗಿ ಕಲತರ ಆಗಿಹೋತ ಮಂತ್ರಿ ಆದನಂತ ತಿಳಿಬೇಕು.

ಗೌರಿ : ನೀ ಆಗಬೇಕು ಕಂಪ್ಲಿ ಕ್ವಾಣ ಆಗೀದಿ.

ಗೌರೀಶ : "ಮಹಾ ಮಹಾ ಮುನಿಗೋಳು ಮುಚ್ಚುಳುದಾಗ ಉಣ್ಣೂ ಮುಂದ ಗುಂಗಾಡ ಬಂದು ಗಂಗಾಳ ಗಂಗಾಳ ಅಂದಂಗ" ನನಗಾರು ಕೇಳಬೇಕು.

ಗೌರಿ : ಅದೇನರ ಇರ್ಲಿ, ಮನ್ಯಾಗಿನ ಸುದ್ದಿ ಕೇಳಿಯ ಇಲ್ಲ?

ಗೌರೀಶ : ಕೇಳೋದೇನು ಕಣ್ಮುಚ್ಚಿ ನೋಡಿನಿ. ಲಲಿತವ್ವ ಡಾಗಬಾರಸಾಬರೂ ಕೂಡಿ ಅಶೋಕಪ್ನೋರು ಬಂದಮ್ಯಾಲ ಇಲ್ಲಿಲ್ಲದ್ದು ಹೇಳಿ ಅವರ ತಲೆ ಕೆಡಿಸಿ ಗಂಡಾ ಹೆಂಡರನ್ನು ಅಗಲಸೋ ಹಂಚಿಕ್ಯಾಗ ಅದಾರು.

ಗೌರಿ : ಶಿವಾ ಶಿವಾ ನೋಡಾಕ ಹ್ಯಾಂಗ ಕಾಣತಾರಲ್ಲ ।

ಗೌರೀಶ : ದೂರಿನ ಗುಡ್ಡ ಕಣ್ಣಿಗೆ ನುಣ್ಣಗ. ಹಂತೀಲೇ ಹ್ವಾದರ ಏನೈತಿ ಬರೇ ಕಲ್ಲು ಮುಳ್ಳು

ಗೌರಿ : ಕತ್ತಲದಾಗ ನಿಂತು ಕಲ್ಲು ತೂರಿ ಬಾಳೆ ಕೆಡಿಸೋ ಅಂಥಾ ಮಂದೀ ಕೂಡ ಗಂಗಮ್ಮ ಕಾಲಹರಣ ಮಾಡೋದು ಬಾಳ ಕಠಿಣೈತಿ,

ಗೌರೀಶ : ಹಣೇಬರಾಕ ಹೊಣೀ ಯಾರು ಸುಖಾನ ಇರ್ಲಿ ದುಖಾನ ಇರ್ಲಿ ಹಣಿಯಾಗ ಬರದದ್ದು ಉಣ್ಣಾಕಬೇಕಲ್ಲ.

ಗೌರಿ : ಆಗಲಿ ನೀನು ಉಳುವಿಗೆ ಹೋಗಾಕ ಎಲ್ಲಾ, ತಯಾರಿ ಮಾಡಿಯs ಇಲ್ಲ?

ಗೌರೀಶ : ಆಗಲಿ ನಡಿ ಯಾರ ನಶೀಬ ಯಾರ ನೋಡಿ ಬಂದಾರ

ಗೌರಿ : ಅಪ್ಪಾರು ಬರೋಮಟಾ ಎಲ್ಲೂ ಹೋಗಬಾಡಂತ ಗಂಗಮ್ನೋರ ಹೇಳ್ಯಾರ ಅಂದೆಲ್ಲs

ಗೌರೀಶ : ಮಾಡಬೇಕೇನು, ನಾಳಿನ ಮೂರ್ತಾನ ಕಡೇದು. ಅಪ್ಪಾವ್ರು ನಾಳೆ ಮಧ್ಯಾಹ್ನದ ಗಾಡಿಗೆ ಬರತೀನಂತ ಕಾರ್ಡ ಬರದಾರು. ಪತ್ರ ಓದಿದ ಮ್ಯಾಗ ಅಪ್ಪಾವ್ರು ನಮಗ ನಸಗಿನ ಗಾಡಿಗೆ ಹೋಗಾಕ ಅಪ್ಪಣೆ ಕೊಟ್ಟಾರ.

**ಗೌರಿ :** ನಡಿ ಹಂಗಾರ ಇಂದು ಸಂಜಿಮುಂದ ಆ ಸಾಬಗ ಓಟ ಮೆತ್ತಗ ಮಾಡಿ, ನಸುಕಿನ ಗಾಡಿಗೆ ಉಳುವಿಗೆ ಹೋಗಿ ಉಡಕಿ ಮಾಡಿಕೊಂಡು ಬರಾಣ.

**ಗೌರೀಶ :** ನಾನು ತ್ವಾಟದ ಕಡೀಗೆ ಹೋಗತೀನಿ. (ಹೋಗುವರು)

**ವಸಂತ :** ದೇವದಾನವರ ಅಬ್ಧಿ ಮಥನದಿಂದೊದಗಿದ ಕಾಲಕೂಟ ವಿಷಕ್ಕಿಂತಲೂ ಪ್ರಕಾರವಾಗಿದೆ ದರಣಿಯಲ್ಲಿ ದರಿದ್ರತನ, ಅದುವೆ ರವರವ ನರಕದ ನಿದರ್ಶನ, ಒಂದೆಡೆಗೆ ಹಣತೆಗೆ ಎಣ್ಣೆ ಇಲ್ಲದೆ ಬಡತನದ ಘೋರಾಂಧಃ ಕಾರದಲ್ಲಿ ಕಣ್ಮುಚ್ಚಿ ಕಟ್ಟಿ ಕುಳಿತಿವೆ. ಅದೆಷ್ಟೋ ಬಡಕುಟುಂಬಗಳು. ಇನ್ನೊಂದೆಡೆಗೆ ಸಿರಿವಂತರು ಕಡು ಬಡವರ ಕರುಳೆಂಬ ಬತ್ತಿಗಳಿಗೆ, ದೀನರ ರಕ್ತವನ್ನೇ ಎಣ್ಣೆಯಾಗಿ ಸುರಿಸಿ, ಹೊತ್ತಿಸಬಹುದು ದೀಪವನು, ಅತ್ಯಾಚಾರವೆಂಬ ಅನಿಲದಿಂದ ! ದೇವಾ ಧರಣಿಯಲ್ಲಿಯ ದರಿದ್ರರು ಬಾಳಲು ಸಾಧ್ಯವಿಲ್ಲವೆಂಬುದೇ ನೀ ಜಗವನಾಳುವ ರೀತಿಯೇ?

**ಪೋಸ್ಟಮನ್ :** ಪೋಸ್ಟ ಸರ್ (ಕೊಟ್ಟು ಹೋಗುವನು).

**ವಸಂತ :** (ಓದುವನು) ಆತ್ಮೀಯ ಅಣ್ಣನಿಗೆ ಕ್ಷೇಮ ನಿಮ್ಮ ಮಾವನವರು ರೈತ ಪರಿಷತ್ತಿಗಾಗಿ ದೇಹಲಿಗೆ ಹೋಗಿರುವರು. ಅವರು ಬರುವವರೆಗೂ ನೀನು ನನ್ನ ಜೊತೆಯಲ್ಲಿ ಇದ್ದಂತಾಗುವದು ಕಾರಣ ತೀವ್ರವೇ ಹೊರಟು ಬರಬೇಕು.

ಇಂತಿ ನಿನ್ನ ತಂಗಿ
ಗಂಗಾ

ಬರುವೆನಮ್ಮಾ, ಗರ್ಭಿಣಿಯಾದ ನಿನ್ನನ್ನು ನನ್ನ ಮನೆಗೆ ಕರೆತರಲಿಲ್ಲ. ಹೊಸ ಸೀರೆ ಕುಪ್ಪಸ ತೊಡಿಸಿ ಹೂ ಮುಡಿಸಲಿಲ್ಲ. ತಂಗಿ ಸೋದರತ್ವದ ಕರ್ತವ್ಯ ಕೈಗೂಡಿಸದ ಈ ಹೇಡಿ ಅಣ್ಣನನ್ನು ಉದಾರ ಹೃದಯದಿಂದ ಕ್ಷಮಿಸುವಿಯೆಂದು ನಾ ಬರುವೆ ನಿನ್ನ ಮನೆಯ ಬಾಗಿಲಿಗೆ. (ಹೋಗುವನು)

## ಪ್ರವೇಶ–೪

### ಅರಣ್ಯ ರಸ್ತಾ

ಖಾಸೀಮ : (ಒಳಗಿನಿಂದಲೆ) ಹರೆ ಗೋರಿಶಪ್ಪಾ ನಿಮದು ಪಾಂಪ ಪಡತಾಂವ ಬೀಟಬೀಡ, ಅಮ್ಮಾಗೆ.... ಅಲ್ಲಾ......

(ಸೀರೆಯನ್ನುಟ್ಟು ಗೌರೀಶನೂ ಗೌರಿಯೂ ಖಾಸೀಮನನ್ನು ಹೊಡೆಯುತ್ತ ರಂಗಭೂಮಿಗೆ ತರುವರು)

ಗೌರಿ : ಆಲಿಂಗಣಾ ಬೇಡುತಿದ್ದೆಲ್ಲ. ಹಲಕಟ್ಟಸಾಬ ತಗೋ ಆಲಿಂಗಣಾ (ಉಗುಳುವಳು)

ಗೌರೀಶ : (ಹೊಡೆದು) ಹಿಂಗ್ಯಾಕ ಕುಣೀತಿಯಲೇ ಸಾಬ ಕೆಂಜಗಾ ಕಡದವರಂಗ

ಖಾಸೀಮ : ಗೌರೀಶಪ್ಪ ಪಾಂವ ಪಡತಾವ ಬಡಿಬ್ಯಾಡ.

ಗೌರೀಶ : ಗೌರೀ, ಬಾಳಬೇಡಕೋತಾನು ಬಡಿಯೂದ ಬಿಟ್ಟು ಮದವಿ ಓಟು ಮಾಡಿಬಿಡೂನು (ಮೀಸಿ ಹಿಡಿದು ಬೈಟಕ ಮಾಡಿಸುತ್ತ) ಹ್ಯಾಂಗದಲೆ ಮದವಿ? ಗೌರೀ ಯಾಕS ಅಳಿಯಾ ಮಾತಾಡವಲ್ನಲ್ಲ?

ಗೌರಿ : ಮುಯ್ಯದ ಸಲುವಾಗಿ ಮುನಸಕೊಂಡಂಗ ಕಾಣತ್ತೈತಿ.

ಗೌರೀಶ : ಆದೀಟ ಕೆಲಸಾ ಮುಗಿಸೇ ಬಿಡೂನು ತಗೊಂಡು ಬಾ.

ಗೌರಿ : ಮುಗಿಸಿಕೊಂಡು ಓಡಿಗೀಡಿ ಹ್ವಾದಾನು ಬಿಗಿಹಿಡಿ ಓಟು (ಹೋಗುವಳು)

ಗೌರೀಶ : ಎಲ್ಲಿಗೆ ಹೋಗತಾನ, (ಮಿಸಿ ಹಿಡಿದ ಜಗ್ಗಿ) ಮುಗದಾಣ ಹಿಡಿದೀನ, (ಅಳುಕಿ ಖಾಸೀಮನು ಕುಣಿದಾಡುವನು) ಹಿಂಗ್ಯಾಕ ಕುಣಿತೀರೆ ಕರಡಿ ಕುಣೀದಂಗ.......?

ಖಾಸೀಮ : ಗೌರೀಶಪ್ಪ ನಾವ್ ನಿಮದು ಮೊಗಾಹಾಗಿ ಇರತಾವ್ ಬೀಟಬೀಡ.

ಗೌರಿ : (ಉಳ್ಳಾಗಡ್ಡಿ ಬೇವಿನ ಕೊಲ್ಲೆಗಳಿಂದ ಮಾಡಿದ ಸರವನ್ನು ಕಸ ಬರಗೆಯನ್ನು ತೆಗೆದುಕೊಂಡು ಬರುವಳು) ಮುಯ್ಯಾ ಮಾಡದಹ್ಯಾಂಗ ಕಳಸೂದರಿ ನೀವ್ ಒಲ್ಲೆಂದರ ನಮಗರ ಮರ್ಯಾದಿ ಬ್ಯಾಡೇನ್ರಿ?

ಗೌರೀಶ : ಹಾಕು ಕೊಳ್ಳಾಗ, (ಹಾಕಿದ ನಂತರ) ಗೌರಿ ಹ್ಯಾಂಗ ಕಾಣತಾನ?

ಗೌರಿ : ಪುಟ್ಯಾಗ ಕುಂತ ಜೋಕಮಾರ್ನ್ಂಗ.

ಗೌರೀಶ : ಹಾಡಹಂಗಾರ ಪದಾನ. (ಗೌರಿ ಕಸಬರಿಗೆಯಿಂದ ಗಾಳಿ ಹಾಕುವಳು)

**ಗೌರಿ – ಗೌರೀಶ**

ಅಡ್ಡಡ್ಡ ಮಳಿಬಂದ ದೊಡ್ಡ ದೊಡ್ಡ ಕೆರಿತುಂಬಿ ॥
ಗೊಡ್ಡು ಗೊಳೆಲ್ಲ ಹೈನಾಗೆ ಜೋಕಮಾರಾ ॥
ಜೋಕಮಾರೆಂಬವ ಸಿರಿಗೇಡಿ ಚಂದಗೇಡಿ ॥
ಖಾಸೀಮಸಾಬನು ಬುದ್ದಿಗೇಡಿ ಜೋಕಮಾರ ॥
(ಒದ್ದು ನೂಕುವರು)

## ಪ್ರವೇಶ–೫

### ಅಶೋಕನ ಮನೆ

(ಲಲಿತಾ ಮುತ್ತಿನ ಹಾರ ಹುಡುಕುತ್ತಿರುವಂತೆ ನಟಿಸುತ್ತ)

**ಲಲಿತ :** ಅತ್ತಿಗೆ..... ಅತ್ತಿಗೆ.....

**ಗಂಗಾ :** (ಒಳಗಿನಿಂದ ಬಂದು) ಯಾಕಮ್ಮ !

**ಲಲಿತ :** ಅಹಹಹಾ ! ಯಾಕಮ್ಮ ಅತಿ ವಿನಯವೇ ಧೂರ್ತ ಲಕ್ಷಣ । ಎನ್ನುವ ಮಾತು ನಿನಗೆ ಹೊರತಾಗಿಲ್ಲ. ಮೊದಲು ನನ್ನ ಮುತ್ತಿನ ಹಾರವನ್ನು ಕೊಟ್ಟು ನಂತರ ಮತ್ತೊಂದು ಮೂರು ತಾಸು ಪೂಜಿಸುತ್ತ ಕೂಡು.

**ಗಂಗಾ :** ನಿನ್ನ ಮುತ್ತಿನಹಾರ ನಾನು ನೋಡಿಲ್ಲ ಲಲಿತಾ, ಎಡಗೈಯಿಂದ ಎಲ್ಲಿಯಾದರೂ ಇಟ್ಟಿರಬಹುದು ನೋಡು.

**ಲಲಿತ :** ಎಡಗೈಯಿಂದ ತೆಗೆದಿಟ್ಟು ಹೋಗಿಲ್ಲ. ಅದು ಬಲಗೈಯಿಂದ ಹಾರಿ ಹೋಗಿದೆ.

**ಗಂಗಾ :** ಲಲಿತಾ ಪೂರ್ಣವಿಚಾರ ಮಾಡದೇ ಹೀಗಲ್ಲ ಮಾತನಾಡುವದು ಒಳಿತಲ್ಲ. ಇದ್ದ ಇಬ್ಬರಲ್ಲಿ ಕದ್ದವರು ಯಾರು? ಇನ್ನೊಮ್ಮೆ ಹುಡುಕಿ ನೋಡು

**ಲಲಿತ :** ತೆಗೆದಿಟ್ಟ ಹಾರ ಎಷ್ಟು ಹುಡುಕಿದರೆ ತಾನೇ ಸಿಕ್ಕೀತು.

ಗಂಗಾ : ಬಿಚ್ಚಿ ಹೇಳು ಲಲಿತಾ, ಚುಚ್ಚಿ ಮಾತಾಡುವದರಲ್ಲಿ ಯಾವ ಅರ್ಥವಿಲ್ಲ.

ಲಲಿತ : ಆ ಹಾರ ಎಲ್ಲಿದೆ ಎನ್ನುವದು ನನಗೆ ಗೊತ್ತಿದೆ.

ಗಂಗಾ : ಗೊತ್ತಿದ್ದರೆ ತೆಗೆದುಕೊಂಡು ಬಿಡು.

ಲಲಿತ : ಮುಂಜಾನೆ ಸ್ನಾನ ಮಾಡುವಾಗ ಬಚ್ಚಲಕಟ್ಟೆಯ ಮೇಲಿಟ್ಟವಳು ಮರೆತು ಹಾಗೇ ಹೊರಗೆ ಬಂದೆ, ನನ್ನ ಹಿಂದೆಯೇ ನೀನು ಸ್ನಾನದ ಮನೆಗೆ ಹೋಗಲಿಲ್ಲವೇ?

ಗಂಗಾ : ಹಾಗಾದರೆ ನಾನೇ ಕಳ್ಳಿಯೆಂದು ನಿನ್ನ ಅಭಿಪ್ರಾಯವೇ? ಅವರು ಮನೆಯಲ್ಲಿಲ್ಲದಾಗ ವ್ಯರ್ಥವಾಗಿ ಅಪವಾದ ಹೊರಸದಿರು ಲಲಿತಾ ನಾನು ನಿರಪರಾಧಿ.

ಅಶೋಕ : (ಊರಿನಿಂದ ಬರುವನು) ಯಾವ ಹಾರ, ಏನು ಸುದ್ದಿ.

ಗಂಗಾ : ನಾನು ಮುತ್ತಿನಹಾರವನ್ನು ಕದ್ದಿರುವೆನಂತೆ.

ಅಶೋಕ : ಯಾರು ಹೇಳುವರು?

ಗಂಗಾ : ಲಲಿತಾ

ಅಶೋಕ : ತಂಗೀ ಇವಳೇ ನಿನ್ನ ಹಾರ ಕದ್ದಿರುವಳೆಂದು ಹೇಗೆ ತಿಳಿಯಿತು?

ಲಲಿತ : ಕೈಯೊಳಗಿನ ಹುಣ್ಣಿಗೆ ಕನ್ನಡಿಯೇಕೆ ಬೇಕಣ್ಣಾ?

ಅಶೋಕ : ನನ್ನ ಪ್ರಶ್ನೆಗೆ ತಕ್ಕ ಉತ್ತರವಿದ್ದಲ್ಲ.

ಲಲಿತ : ಅಂದರೆ ನನ್ನ ಹಾರ ಕಳೆದಿಲ್ಲವೆಂದೇ ನಿಮ್ಮ ಅಭಿಪ್ರಾಯವೇ?

ಅಶೋಕ : ಕಳೆದಿರಬಹುದು ! ಆದರೆ ಕಳವು ಮಾಡಿದವಳು ಗಂಗಾ ಅಲ್ಲವೆಂದು ಮಾತ್ರ ಹೇಳಬಲ್ಲೆ.

ಲಲಿತ : ಬಾಯಿ ತೊಳೆದುಕೊಂಡು ಮಾತಾಡು ಅಣ್ಣಾ. ಎಲ್ಲದಕ್ಕೂ ಹೆಂಡತಿಯ ಮೆಲುಗಟ್ಟಿ ಮಾತಾಡಬೇಡ ಇವಳ ಸ್ವಭಾವ ನೀ ಅರಿತಿಲ್ಲ. ಮುತ್ತಿನ ಹಾರವನ್ನು ಕದ್ದು ತನ್ನ ಪೆಟ್ಟಿಗೆಯಲ್ಲಿ ಇಟ್ಟಿದ್ದನ್ನು ಕಣ್ಣಾರೆ ಕಂಡಿದ್ದೇನೆ.

ಗಂಗಾ : ಸ್ವಾಮಿ ! ಇದು ಶುದ್ಧ ಸುಳ್ಳು ಬೇಕಾದರೆ ನನ್ನ ಪೆಟ್ಟಿಗೆಯನ್ನು ತಮ್ಮ ಮುಂದೆ ತಂದಿರಸುವೆ ನೀವೇ ಪರೀಕ್ಷಿಸಿ (ಪೆಟ್ಟಿಗೆ ತರುವಳು

ಒಂದೊಂದು ಸಾಮಾನು ತೆಗೆದು ಹಾಕುವಾಗ ಮುತ್ತಿನ ಹಾರ ಸಿಗುವದು.) ಹಾಂ ಸ್ವಾಮಿ ಮೋಸ, ನಾನು ನಿಜಕ್ಕೂ ನಿರಪರಾಧಿ.

**ಅಶೋಕ :** ಥೂ ! ನಿರ್ಲಜ್ಜಳೇ ಸತ್ಯವನ್ನು ಬೊಗಳು.

**ಗಂಗಾ :** ಸ್ವಾಮಿ ನಿಮ್ಮ ಸಮ್ಮುಖದಲ್ಲಿ ಅಸತ್ಯವನ್ನಾಡಿ ಯಾವ ನರಕಕ್ಕೆ ಹೋಗಲಿ.

**ಲಲಿತ :** ಅಣ್ಣಾ ಇವಳು ಗೊಮುಖವ್ಯಾಘ್ರಿಣಿ ಸಾಧ್ವಿಯ ಸೋಗು ಹಾಕಿ ಸ್ವೇಚ್ಛೆಯಾಗಿ ತಿರುಗುತ್ತಿರುವಳು.

**ಶರತ್ :** (ಪ್ರವೇಶ) ಏನು ಅಶೋಕ ಹರಿಶ್ಚಂದ್ರನನ್ನು ಪರೀಕ್ಷಿಸಲು ವಶಿಷ್ಠ ವಿಶ್ವಾಮಿತ್ರರು ಕದನ ರಂಗಕ್ಕಿಳಿದಂತೆ ಅಣ್ಣ ತಂಗಿಯರೀರ್ವರೂ.....

**ಅಶೋಕ :** ಶರತ್ ನೀರ ಮೇಲಿನ ಮೀನಿನ ಹೆಜ್ಜೆ ಕಾಣಬಹುದು ಆದರೆ ಹೆಣ್ಣಿನ ನಲೆ ಮಾತ್ರ ಶಿವನಿಗೂ ಸಿಗಲಾರದು.

**ಶರತ್ :** ಹೆಣ್ಣಿನ ಗುಣ ಕಣ್ಣಿಗೆ ಕಾಣಲಾರದು ಸುಣ್ಣದ ಕಲ್ಲಿನೊಳು ಅಡಗಿ ಮೇಲೆ ತಣ್ಣಗೆ ತೋರುವ ಸುಡಚ್ಚಿನಂತೆ ಸ್ತ್ರೀಯ ಸ್ವಭಾವ.

**ಗಂಗಾ :** ವಿಧಿಯೇ ಮತ್ತಾವ ವಿಷಮ ಸಮಯ ತಂದೊಡ್ಡಿದೆ?

**ಲಲಿತ :** ವಿಧಿಯಂತೆ ವಿಧಿ. ಡಾಕ್ಟರ ಆ ಸಮಾಚಾರವನ್ನಷ್ಟು ಹೇಳಿಬಿಡಿ.

**ಶರತ್ :** ಮತ್ತೇಕೆ ಬಿಡು ಲಲಿತಾ ಅದನ್ನು ಕೇಳಿದ ನಿಮ್ಮ ಅಣ್ಣ ಆತ್ಮಹತ್ಯೆ ಮಾಡಿಕೊಳ್ಳಬಹುದು.

**ಅಶೋಕ :** ಆತ್ಮಹತ್ಯೆ ಮಾಡಿಕೊಳ್ಳುವಂತಹ ಪ್ರಮಾಣ ಮಾಡಿರುವಳೇ ಇವಳು? ಹೇಳುಮಿತ್ರ.

**ಶರತ್ :** ನೆಚ್ಚಿನ ಗೆಳೆಯನೊಡನೆ ಬಚ್ಚಿಡುವ ವಿಷಯವೇನಿಲ್ಲ ಅಚ್ಚೊತ್ತಿವೆ ಅಜ್ಞಾನದ ಅಕ್ಷರಗಳು ನಿನ್ನ ಅರ್ಧಾಂಗಿಯ ಹೃದಯದ ಪರದೆಯ ಮೇಲೆ, ಪ್ರತಿದಿನ ತೋಟದ ಮಠಕ್ಕೆ ಹೋಗುವ ನಿನ್ನ ಪತ್ನಿಯು ಆಸ್ಪತ್ರೆಯ ಮುಂದೆ ಬಂದು ಮಂದಹಾಸದಿಂದ ನಿಂತು ನಕ್ಕು ಹೋಗುವಳು. ಮೊನ್ನೆ ನಾ ನಿಮ್ಮ ಮನಿಗೆ ಬಂದಾಗ ಸ್ವಾಸ್ಥ ಸರಿಯಾಗಿಲ್ಲವೆಂದು ತಿಳಿಸಿದಳು. ನಾನವಳ ಪರೀಕ್ಷಿಸುವಾಗ ಕೂಡಲೇ ನನ್ನ ಕೈ ಹಿಡಿದು ತನ್ನೊಡನೆ ಮಿಲನವಾಗಲು ಕೇಳಿದಳು. ಮಿತ್ರತ್ವದಲ್ಲಿ ಹೀಗೆಲ್ಲ ಮಾಡುವದು ಕೃತಘ್ನತನವೆಂದು ತಿಳಿಸಿದರೂ ಕೇಳದೇ ಒತ್ತಾಯದಿಂದ ನನ್ನ ಭಾವ ಚಿತ್ರವನ್ನು ತೆಗೆದುಕೊಂಡಳು.

ಗಂಗಾ : ಪಾಪೀ! ಅನ್ನ ಉಣ್ಣುವ ಬಾಯಿಂದ ಎಂಥ ಪಾಪದ ನುಡಿಯನ್ನಾಡುವಿ?

ಅಶೋಕ : ಸೆಟಪ್ ಕ್ರೂರಸರ್ಪಿಣಿ

ಶರತ್ : ಅಶೋಕ ಬೇಕಾದರೆ ಗೌರೀಶನನ್ನು ಕರಸಿ ಕೇಳು ಇದೆಲ್ಲವನ್ನು ಅವನು ಕಣ್ಣಾರೆ ಕಂಡು ಕಿವಿಯಾರೆ ಕೇಳಿದ್ದಾನೆ.

ಲಲಿತ : ತನ್ನ ಹೊಲಸ ಹೂರಣ ಹೊರಬೀಳುವದೆಂದು ಇಂದು ಬೆಳಗಿನ ಗಾಡಿಗೇನೇ ಗೌರೀಶ ಮತ್ತು ಗೌರಿಯನ್ನು ಊಳುವಿಗೆ ಕಳಿಸಿಕೊಟ್ಟಿದ್ದಾಳೆ.

ಅಶೋಕ : ನಿಲ್ಲು ಪತಿಘಾತಕಿ (ಪೆಟ್ಟಿಗೆಯನ್ನು ಹುಡುಕುವಾಗ ಶರತ್‌ನ ಭಾವಚಿತ್ರ ಸಿಗುವದು).

ಗಂಗಾ : ಪರಮಾತ್ಮ ನಾನಿದನ್ನೇನು ನೋಡುತ್ತಿರುವೆ? ಸ್ವಾಮಿ ಚಂದ್ರಕಾಂತ ಶಿಲೆಯಿಂದ ಅಗ್ನಿ ಹೊರಬೀಳಬಹುದೆ? ನಿಮ್ಮ ಹೊರತು ಅನ್ಯಪುರುಷರನ್ನು ಕನಸಿನಲ್ಲಿಯೂ ಕಂಡಿಲ್ಲ, ಅದಕ್ಕೆ ತಪ್ಪಿ ನಡೆದಲ್ಲಿ ನರಕ ಕುಂಡದಲ್ಲಿ ಬೀಳಲೆನ್ನ ದೇಹಭಾಂಡಾರ (ಕಾಲು ಹಿಡಿದು) ವರೆಗ್ಗಚ್ಚಿ ನೋಡಿರಿ ಚೊಕ್ಕ ಚಿನ್ನವನ್ನು.

ಅಶೋಕ : (ಒದ್ದು) ಸರಿ ಜಾರಿಣಿ, ಆಡುವದು ಅನಸೂಯೆಯಂತೆ, ಮಾಡುವದು ಮಾಯಾಂಗಿನೆಯಂತೆ. ಬಂಗಾರ ಲೇಪ ಮಾಡಿದ ಹಿತ್ತಾಳೆಯ ವರ್ಗೆಗಚ್ಚಿ ನೋಡಿ ಹುಚ್ಚನಾದೆ.

ವಸಂತ : (ಪ್ರವೇಶಿಸಿ) ಏನು ಸಮಾಚಾರ ಮಾಮಾ?

ಅಶೋಕ : ಓ ಒಳ್ಳೇ ಸಮಯಕ್ಕೆ ಬಂದೆ..... ಮಿತ್ರದ್ರೋಹಿ ಈ ರೀತಿ ಎಷ್ಟು ಜನರಿಗೆ ಮೋಸಮಾಡಿರುವಿ?

ಅಶೋಕ : ವರದಕ್ಷಿಣೆ ಕೊಡಲಾಗದ್ದಕ್ಕೆ ತಂಗಿಯ ಮದುವೆಯಾಗಿಲ್ಲವೆಂದು ಉದ್ದದ್ದ ಮಾತಾಡಿ ಹಾಳು ಮನೆಗಳಲ್ಲಿ ಬಿದ್ದೆದ್ದ ವ್ಯಭಿಚಾರಿ ತಂಗಿಯನ್ನು ನನ್ನ ಮನೆತುಂಬಿ ಮಲಿನತೆಯ ಮಾಲೆಯನ್ನು ಹಾಕಿದೆಯಾ ನನ್ನ ಕೊರಳಲ್ಲಿ?

ವಸಂತ : ನಿರಪರಾಧಿಯನ್ನು ನಿಷ್ಕಾರಣವಾಗಿ ನಿಂದಿಸದಿರು ಅಶೋಕ. ಹಿಮಾಲಯದಲ್ಲಿ ಹುಟ್ಟಿದ ಪಾವನತ್ವದ ಭಾಗೀರಥಿಯೇ ನನ್ನ ತಂಗಿ. ಅವಳು ಸಮುದ್ರ ರಾಜನಲ್ಲದೆ ಕ್ಷುದ್ರ ಜಲಾಶಯವನ್ನು ಸೇರಬಹುದೆ

**ಲಲಿತ :** ಕಲ್ಲಗಡಿಗೆಗೆ ಉಕ್ಕು ಬಡವರಿಗೆ ಸೊಕ್ಕು ಹೆಚ್ಚೆಂಬುದೇನೂ ಸುಳ್ಳಲ್ಲ ತಿರಿದುತಿನ್ನುವ ತಿರಕರಂತೆ ತಾವಿದ್ದರೂ ತಮ್ಮ ಅಹಂಕಾರ ಮಾತ್ರ ಬಿಟ್ಟಿಲ್ಲ,

**ಅಶೋಕ :** ತಂಗೀ ನಾಯಿಯ ಕೊರಳಿಗೆ ಲಿಂಗಕಟ್ಟಿದರೆ ಅದು ಎಲುವು ಕಡಿಯುವದು ಬಿಡದು. ಹೂ ಗಂಗೆ, ನೀನಿನ್ನು ಗರ್ಭದೊಂದಿಗೆ ದೂರಾಗು ನನ್ನ ಮನೆಯಿಂದ ನಿನ್ನಣ್ಣನೊಡನೆ ಹೋಗು.

**ವಸಂತ :** ದುಡುಕದಿರು ಅಶೋಕ ದುಡಿಕಿ ಕೆಡಕು ಮಾಡದಿರು ಈ ಪಾವನತ್ವದ ಪುಷ್ಪಕೆ.

**ಅಶೋಕ :** ಪಾವನತ್ವದ ಪುಷ್ಪ. ಅಲ್ಲಲ್ಲ ಮೂಸಿ ನೋಡಿದ ಹೇಸಿ ಪುಷ್ಪ. ಶ್ವೈನ ಮುಟ್ಟಿದ ಹೀನ ಮಡಕೆ (ಶರತ್ ಭಾವಚಿತ್ರ ವಸಂತನತ್ತ ಎಸೆದು) ತೆಗೆದುಕೋ ನಿನ್ನ ತಂಗಿ ಬಯಸಿದ ಪ್ರೇಮಿಯ ಭಾವ ಚಿತ್ರವನ್ನು.

**ಗಂಗಾ :** ಸ್ವಾಮಿ ಅವಾಚ್ಯ ಮಾತಗಳನ್ನಾಡಬೇಡಿರಿ. ಸೀತಾ ದೇವಿಯನ್ನು ಶ್ರೀ ರಾಮನಿಂದ ಅಗಲಿಸಲು ರಾವಣನ ಚಿತ್ರವನ್ನು ಹಾಸಿಗೆಯ ಅಡಿಯಲ್ಲಿಟ್ಟಂತೆ, ನಮ್ಮೀರ್ವರ ವಿಯೋಗವಾಗಬೇಕೆಂದು ಲಲಿತ ಮತ್ತು ಡಾಕ್ಟರರು ರಚಿಸಿರುವರೀ ಕಾರಸ್ಥಾನ. ನಿಮ್ಮ ಪಾದ ಸಾಕ್ಷಿಯಾಗಿ ನಾನು ನಿರಪರಾಧಿನಿ. ಒಂದು ವೇಳೆ ಅಪರಾಧಿಯಾಗಿ ನಿಮಗೆ ತೋರಿದರೆ ನನ್ನ ಪ್ರಾಣತೆಗೆದು ಬಿಡಿರಿ. ತಮ್ಮ ಪಾದ ಸನ್ನಿಧಿಯಲ್ಲಿ ಸಂತೋಷದಿಂದ ತನು ತ್ಯಾಗ ಮಾಡುವೆ.

**ಅಶೋಕ :** ಎಲೆ ಜಾರತ್ವದ ಶ್ವಾನಾ ಸಾಕುಮಾಡು ನಿನ್ನ ಆತ್ಮಾಭಿಮಾನ

**ವಸಂತ :** ಅಶೋಕ ಇದು ಕೇಡಾಳಿಗಳ ಕೈಚಳಕವೇ ಹೊರತು ಕಾಲತ್ರಯದಲ್ಲಿಯೂ ನನ್ನ ತಂಗಿ ಇಂಥ ಕೃತಿಗೆ ಮನಸು ಮಾಡಳು.

**ಅಶೋಕ :** ಮುದ್ದೆ ಮಾಲು ಸಹಿತ ಸಿಕ್ಕಾಗ ಅಪರಾಧವನ್ನು ಅಲ್ಲಗಳೆಯುವದು ಅಜ್ಞಾನದ ಪ್ರದರ್ಶನ, ಮತ್ತೇಕೆ ಬೇಕು ಬೇರೊಂದು ನಿದರ್ಶನ? ಸುಮ್ಮನೆ ಬಾಯಲ್ಲಿ ನಾಲಿಗೆ ಇಟ್ಟುಕೊಂಡು ನನ್ನ ಮನೆಯಿಂದ ಹೊರಬೀಳು.

**ಗಂಗಾ :** ತಮ್ಮನ್ನಗಲಿ ನಾನೆಲ್ಲಿಗೆ ಹೋಗಲಿ?

**ಅಶೋಕ :** ಕಾಶಿ ಯಾತ್ರೆಗೆ ಹೋಗು

**ಗಂಗಾ :** ಸ್ವಾಮಿ ನಿಮ್ಮ ಚರಣಗಳೇ ನನಗೆ ಕಾಶಿಕ್ಷೇತ್ರ

**ಅಶೋಕ :** ಅಹಹ..... ಕಲಿಯುಗದ ಸಾವಿತ್ರಿ.

**ಗಂಗಾ :** ನಡೆ ತಂಗಿ ಅವಮಾನವಾದ ಆಗರದಲ್ಲಿ ಅರೆಕ್ಷಣ ಕೂಡಾ ಇರುವದು ಬೇಡ, ಇಂದಿಗೆ ಈ ಮನೆಯ ಋಣ ತೀರಿತು. ತಮ್ಮ ಕಾರ್ಯ ಸಾಧನೆಗಾಗಿ ರಚಿಸಿಕೊಂಡಿರುವ ಕಪಟ ಕಾರಸ್ಥಾನದ ಕೋಟಿ ಇಂದಿಲ್ಲ ನಾಳೆ ಸತ್ಯದ ಸಿಡಿಮದ್ದಿಗೆ ಸುಟ್ಟು ಬೀಳುವದು, ಆಗ ಉರಿಯುವದು ಸ್ತ್ರೀ ರತ್ನದ ಬೆಲೆಯು.

**ಗಂಗಾ :** ಪತಿದೇವಾ.... (ಕಾಲ್ಹಿಡಿಯುವಳು)

**ಅಶೋಕ :** (ಒದ್ದು) ಕಾಲುಬಿಡು ರಕ್ಕಸಿ

(ಹಿನ್ನೆಲೆಗೀತ ರಾಗ-ಚಾಂದ)

ವಿಧಿ ನಿನ್ನ ಆಟ । ಸಾಗಿದ ಓಟ ॥<br>
ಅಚ್ಚರಿಗೊಂಡಿದೆ ನಿನ್ನಯ ಮಾಟ ।<br>
ಬಡವರೊಡನೆಯೇ ನಿನ್ನಯ ಕೂಟ ।<br>
ವಿಧಿಯೇ...... ವಿಧಿಯೇ...... ॥

(ವಸಂತ ಗಂಗಾ ಮನೆಯಿಂದ ಹೊರಡುವರು)

## ಪ್ರವೇಶ-೬

### ರಸ್ತಾ

**ವಸಂತ :** ಬಲವಿಲ್ಲದ ಕಾಲಕ್ಕೆ ನೆಲವೆದ್ದು ಬಡಿದಂತೆ ಬೇಗೆಯಲ್ಲಿ ಬೆಂದು ಬೇಸತ್ತು ತಂಗಿಯ ಮನೆಯಲ್ಲಾದರೂ ನಾಲ್ಕು ದಿನ ಆನಂದದಿಂದಿದ್ದು ಹೋಗಬೇಕೆಂದರೆ ಈ ದುರ್ದೆಶೆಯೊದಗಿತೆ? ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲವೆಂಬ ನೀತಿಯ ನುಡಿಯು ತಿರುವು ಮುರುವಾಗಿ ಕುಲನಾರಿಯ ಬಾಳು ಕಣ್ಣೀರಿನ ಕಡಲಾಯಿತು ; ನಾರಿಯ ಬಾಳು ದುಃಖದ ಆಗರವಾಯಿತು.

**ಗಂಗಾ :** ಹಣೇ ಬರಹಕ್ಕೆ ಹೊಣೆ ಯಾರು ಅಣ್ಣಾ ! ಇಂದಿಲ್ಲ ನಾಳೆ ಪತಿ ದೇವನ ಹೃದಯದಲ್ಲಿ ಆವರಿಸಿದ ಸಂಸಯದ ಕತ್ತಲೆಹರಿದು ಸತ್ಯದ ಸುಪ್ರಕಾಶ ಮೂಡುವದು, ಅಲ್ಲಿಯವರೆಗೆ ಅಹೋರಾತ್ರಿ ಶಿಲೆಯಾಗಿ ಬಿದ್ದ ಅಹಲ್ಯೆಯಂತೆ ಪತಿಯಾಜ್ಞೆಯನ್ನು ಪಾಲಿಸಲು ಪರಿತಾಪ ಪಡಲೇಬೇಕು.

ವಸಂತ : ಪರಿತಾಪಕ್ಕೆ ಪರಿಮಿತಿ ಇಲ್ಲವೇ?

ಗಂಗಾ : ಇದೆ ! ಕರುಣಾಳು ಶಿವ ಕಣ್ತೆರೆದಾಗ.....

ವಸಂತ : ತಂಗಿ ಇದೇನು (ಆಕಾಶ ನೋಡುತ್ತ) ಒಮ್ಮಿಂದೊಮ್ಮೆಲೆ ಪ್ರಭಾಕರನ ಪ್ರಖರತೆ ಕಡಿಮೆಯಾಗಿ ಆವರಿಸುತ್ತಿದೆ ಆಕಾಶದ ತುಂಬ ಕಾರ್ಮೋಡ

ಗಂಗಾ : ಅಣ್ಣಾ !

ವಸಂತ : ಯಾಕಮ್ಮ

ಗಂಗಾ : ಹೊಟ್ಟೆ ನೋವಾಗುತ್ತಿದೆಯಣ್ಣ.

ವಸಂತ : ಹಾಂ..... ತೀವ್ರ ನಡೆ ತಂಗಿ ಯಾವದಾದರೊಂದು ಮರದ ಆಶ್ರಯ ಪಡೆಯೋಣ.

(ಸ್ಯಾಡೋ ಸೀನ್ ಅರಣ್ಯ)

(ಬಿರುಗಾಳಿ ಬೀಸುತಿದೆ. ಮೋಡದ ಘರ್ಜನ, ಮಿಂಚಿನ ಸೆಳಕು; ಗಂಗಾ ಪ್ರಸವ ವೇದನೆಯಿಂದ ನರಳುವಿಕೆ) ಕೂಸಿನ ಅಳುವು.

ಒಬ್ಬ : ಇವತ್ ಕರೆಟ್ ಟಾಯ್ಮಿಗೆ ಬಂತ್ನೋಡು ಗಾಡಿ

ಇನ್ನೊಬ್ಬ : ಒಂದು ಮಿನಿಟ ತಡಾ ಆಗಿದ್ದರೆ ಗಾಡಿ ಸಿಗತಿದ್ದಿಲ್ಲ ಸಾವ್ಕಾರಿಗೆ.

ಒಬ್ಬ : ಏನರ ಅನ್ನು ಗಾಡಿಯ ವೇಳೆಯೇ ತಿಳಿಯದಂತಾಗಿದೆ.

ಅಶೋಕ : (ಬ್ಯಾಗ ಹಿಡಿದು) ಬೆಂಗಳೂರಿನ ಗಾಡಿ ಹೊಯ್ತೇನ್ರಿ.......?

ಒಬ್ಬ : ಇನ್ನು ಈಗ ಹೋತ್ರಿ.... (ಅವರಿಬ್ಬರೊಂದಿಗೆ ಅಶೋಕನು ಹಿಂತಿರುಗುವನು)

## ಪ್ರವೇಶ–೭

### ಅಶೋಕನ ಮನೆ

(ಲಲಿತ ಪೇಪರ ಓದುತ್ತ ಕುಳಿತಿರುವಾಗ ಮೋಟಾರಿನ ಹಾರ್ನ ಕೇಳಿ ಬರುವದು ತೆರೆಯುತ್ತ ನೋಡುವಾಗ)

ಶರತ್ : ಗುಡ್ ಮಾರ್ನಿಂಗ ಲಲಿತ

ಲಲಿತ : ಗುಡ್ ಮಾರ್ನಿಂಗ ಬನ್ನಿ

ಶರತ್ : (ಕೂಡುತ್ತ) ಬೇಸರವೇ.

ಲಲಿತ : ಸೂರ್ಯ ಉದಯಿಸಿದೊಡನೆ ಬೇಸರದ ಕತ್ತಲೆ ಕಳೆದು ಕಮಲಿನಿಯ ಮುಖ ಅರಳಿದೆ.

ಶರತ್ : ಪ್ರಣಯಿನಿ

ಲಲಿತ : ಪ್ರಮೋದನಾ.

ಶರತ್ : ನೀ ಸ್ವರ್ಗಲೋಕದ ಮಂದಾರ.

ಲಲಿತ : ನೀವೆನ್ನ ಚಲುವಿನ ನಂದನವನ

ಶರತ್ : ಅನವರತ ಅರಳಿರಲಿ ನಿನ್ನ ಅರವಿಂದ ವದನ

ಲಲಿತ : ಹೃದಯ ವೀನೆಯಲ್ಲಿ ಎದ್ದಿದೆ ರತಿಯ ತಾನ.

ಶರತ್ : ಹೋ ಬಿಳಲಿ ಸುರಕಂಠದಿಂದ ಒಂದು ಗಾನ.

..... ಡೈ ಲಾಗ.....

ಲಲಿತ : ಸುಂದರ ಬಾ ಮನ ಮಂದಿರ ಬಾ ।
ಮುದ್ದು ಚಂದಿರ ಬಾ । ಮುದ್ದು ಚಂದಿರ ಬಾ ।

ಶರತ್ : ಬಾನಲಿ ನೀ ಸುಗುಣಿ ಕರುಣಿ ।
ನೀ ನಲಿ ನಲಿದು ।

ಲಲಿತ : ಹೃದಯಗೀತೆ । ಸದಾ ಸವಿಪ್ರೀತೆ ನಾ ರಾಗರತಿ
ತನುತೂಗಿಸಿ ಮನವರಳಿಸಿ
ಸದಾ ಸುಖ ಸುಧೆಯನು ನೀಡೋ ಸಖಾ

ಶರತ್ : ಹರುಷದಿ ಬಾರ ಎ। ನೀ ಸರಸವ ತೋರೆ । ಸದಾ ರಮಣಿ
ನೀ ಕುಣಿಕುಣಿದಾಡಿ । ನೀ ನಲಿ ನಲಿದಾಡಿ ।
ಸದಾ ಸುಖಶಾಂತಿಯ ತೋರೆ ಸಖಿ ॥

ಶರತ್ : (ಆರಾಮಾಸನದ ಮೇಲೆ ಕುಳಿತು) ಅಶೋಕನಿಲ್ಲವೆ ಊರಲ್ಲಿ?

ಲಲಿತ : ಇನ್ನೂ ಈಗ ಬೆಂಗಳೂರಿಗೆ ಹೋದನು.

ಶರತ್ : ಲಲಿತಾ ಕೂಡು ಬಾ ಎನ್ನ ತೊಡೆಯ ಮೇಲೆ

ಲಲಿತ : (ಕೂತು ಕೊರಳಿಗೆ ಕೈ ಹಾಕಿ) ನಿಮ್ಮ ತೊಡೆಯ ಗದ್ದಿಗೆಗೆ ಸಾಟಿಯಾಗದು ನೋಡಿ ಆ ಮಯೂರ ಸಿಂಹಾಸನ.

(ಅಶೋಕನು ಬ್ಯಾಗ ಹಿಡಿದು ಬಂದು ನೋಡಿ ಅಚ್ಚರಿಗೊಂಡು ಮರೆಯಾಗಿ ನಿಲ್ಲುವನು)

ಶರತ್ : ನಿನ್ನ ಅತ್ತಿಗೆಯಂತೂ ಅಡವಿಪಾಲಾದಳು

ಲಲಿತ : ಪರಸ್ಪರ ಪ್ರೇಮ ಪ್ರವಾಹಕ್ಕೆ ಅತ್ತಿಗೆಯ ಆತಂಕ ತಪ್ಪಿತು.

ಶರತ್ : ನಿಜವಾಗಿ ಗಂಗಾ ಮಹಾಗರತಿ ಅದೆಷ್ಟೋ ಸಲ ಅವಳ ಮೇಲೆ ಬಲತ್ಕಾರ ಮಾಡಲು ಹೋಗಿ ನಿರಾಶನಾದೆ, ಪಾಪ ಏನರಿಯದ ನಿನ್ನ ಅಣ್ಣನು ಅವಳಿಗೆ ಹಾದುರದ ಹೊದಿಕೆ ಹೊದಿಸಿ ಹೊರದೂಡಿದನು.

ಲಲಿತ : ನಿಮ್ಮ ಕಾರಸ್ಥಾನವೇನು ಕಡಿಮೆಯೇ?

ಶರತ್ : ನನ್ನ ಕಾರಸ್ಥಾನಕ್ಕೆ ಕಳೆಕಟ್ಟಿದೆ ನಿನ್ನ ಸಮಯೋಚಿತ ನಟನೆ

ಲಲಿತ : ಅತ್ತಿಗೆಯ ಪೆಟ್ಟಿಗೆಯಲ್ಲಿ ಮುತ್ತಿನ ಹಾರವನ್ನೂ, ನಿಮ್ಮ ಭಾವ ಚಿತ್ರವನ್ನು ಅವಳಿಗರಿಯದಂತೆ ನಾನಿಟ್ಟು ನಟನೆ ಮಾಡದಿದ್ದರೆ ಅಣ್ಣನು ನಮ್ಮ ಮಾತನ್ನು ನಂಬುತ್ತಿರಲಿಲ್ಲ ಅತ್ತಿಗೆಯ ಆತಂಕ ತಪ್ಪುತ್ತಿರಲಿಲ್ಲ.

ಶರತ್ : ಪಾಪ ಅವಳ ಗತಿ?

ಲಲಿತ : ಭಿಕ್ಷೆ ಬೇಡುತ್ತ ಅಲೆಯಲಿ ಅವಳ ಚಿಂತೆ ನಮಗೇಕೆ?

ಶರತ್ : ಸರಿ ! ಸಿಗರೇಟು ಹಚ್ಚಿ ಇನ್ನುಳಿದ ನಮ್ಮ ಕಾರ್ಯ?

ಲಲಿತ : ಅಣ್ಣನಿಗೆ ವಿಷ ಹಾಕುವದು.

ಶರತ್ : ಆ ಮೇಲೆ?

ಲಲಿತ : ನಾನೇ ಶಚಿ, ನೀವೇ.....

ಶರತ್ : ಇಂದ್ರ.... (ಇಬ್ಬರು ನಗುವರು)

ಅಶೋಕ : (ಮುಂದೆ ಬಂದು) ಮುಚ್ಚಿರಿ ಬಾಯಿ ಶ್ವಾನಗಳೇ ! (ಇಬ್ಬರೂ ಎದ್ದು ನಿಲ್ಲುವರು) ನಿಮ್ಮ ಕಪಟ ಕಾರಸ್ಥಾನ್ನವರಿಯದೆ ನಿಮ್ಮ ಮಾತನ್ನೇ ನಂಬಿ ಮಹಾಪತಿವ್ರತೆಯಾದ ಪತ್ನಿಯನ್ನು ಮನೆಯಿಂದ ಹೊರದೂಡಿ

ಪ್ರಾಮಾಣಿಕ ಪುತ್ಥಳಿಯಾದ ವಸಂತನಿಗೆ ಮನಬಂದಂತೆ ಮಾತಾಡಿ ನರಕಕ್ಕಿಂಬಾದೆನು. ನ್ಯಾಯ ನೀತಿಗಳಿಗೆ ನೆಲೆಯಾಗಿ ನಡೆದ ನನಗೆ ಊರಲ್ಲಿ ಮುಖವೆತ್ತಿ ತಿರುಗದಂತೆ ಮಾಡಿದಿರಾ, ಚಾಂಡಾಲರೇ

**ಲಲಿತ :** ಅವಾಚ್ಯ ಶಬ್ದಗಳನ್ನಾಡದಿರು ಅಣ್ಣ.

**ಅಶೋಕ :** ಅಣ್ಣ.....! ಅಣ್ಣನ ಬಾಳಬಳ್ಳಿಯ ಬೇರಿಗೆ ವಿಷದ ನೀರು ಹೊಯ್ದ ನೀನು ತಂಗಿಯೇ? ಇನ್ನೊಮ್ಮೆ ನುಡಿಸದಿರು ನಿನ್ನ ನೀಚ ನಾಲಿಗೆಯಿಂದ ಅಣ್ಣನೆಂಬ ಪವಿತ್ರ ಶಬ್ದವನು.

**ಶರತ್ :** ಲಲಿತಾ? ಮಂತ್ರಕ್ಕೆ ಮಾವಿನ ಕಾಯಿ ಉದರಲಾರವು (ರಿವಾಲ್ವರ ತೆಗೆದು)

**ಅಶೋಕ :** **ಥೂ..... ಚಾಂಡಾಲಾ**

**ಶರತ್ :** ನಾನು ಚಾಂಡಾಲನೇ?

**ಅಶೋಕ :** ಹೌದು, ನಿನಗೆ ಚಾಂಡಾಲನೆಂದು ಘೋಷಿಸಲು ಇಂದಿನ ಪ್ರತ್ಯಕ್ಷ ಪ್ರಕರರ್ಣವೇ ಜೀವಂತಸಾಕ್ಷಿ. ದ್ರೋಹಿ ನಾ ಗೈದ ಉಪಕಾರದ ಪಟ್ಟಿಯನ್ನೋದು ಒಮ್ಮೆ ತೆರೆದು ನಿನ್ನ ಹೃದಯಾಕ್ಷಿ. ಮಿತ್ರನೆಂಬ ಮಮತೆಯಲಿ ಕರುಣೆಯಿಂದ ಕರೆತಂದು ತುತ್ತುಣಿಸಿ ಸಲುಹದಿದ್ದರೆ ಇಂದಿನವರೆಗೆ ಉಳಿಯುತ್ತಿತ್ತೆ ನಿನ್ನ ಪ್ರಾಣ ಪಕ್ಷಿ? ಪಾಪಿ ಇದಾವದನ್ನರಿಯದೆ ತೆರೆದೆಯಾ ನನ್ನ ಮಧುರ ಸಂಸಾರದ ಮೇಲೆ ನಿನ್ನ ವಿಷ ಅಕ್ಷಿ.

**ಶರತ್ :** ಬಾಯ್ಮುಚ್ಚು ಬಕಪಕ್ಷಿ ನೀನಾವ ಪುಣ್ಯದ ಕೆಲಸಗಳನ್ನು ಮಾಡಿರುವಿಯೆಂದು ನನಗೆ ಪಾಪಿಯೆಂದು ಸಂಭೋಧಿಸುವಿ?

**ಅಶೋಕ :** ವಿನಯದ ಮಿತ್ರನಿಗೆ ಕೃತಘ್ನದ ಕೂರಂಬು ಬಿಡುವ ವೇಷಧಾರಿ ನೀನೆಂದರಿಯದೆ ಬೆಳ್ಳಗಿರುವದೆಲ್ಲ ಹಾಲೆಂದು, ನಿನ್ನ ಮಾತನ್ನೇ ನಂಬಿ ನಾಗೈದೆ ಕೈಹಿಡಿದ ಸತಿಗೆ ಮಹಾಪರಾಧವ.

**ಶರತ್ :** (ನಕ್ಕು) ಬೆಳ್ಳಗಿರುವದೆಲ್ಲ ಹಾಲೆಂದು ನಂಬಿ ನಡೆದನಂತೆ (ಜೋರಾಗಿ ನಕ್ಕು) ಲಲಿತಾ ! ಕೇಳಿದೆಯಾ ನಿನ್ನಣ್ಣನ ನುಡಿಗಳನ್ನು ಕೌರವರ ದೋಷ ಕಂಡರೂ ಅವರ ರಕ್ಷಣೆಗೆ ನಿಂತ ಮಹಾರಥಿ ಭೀಷ್ಮನಂತೆ ಇವನೊಬ್ಬ ಕಲಿಯುಗದ ಭೀಷ್ಮ.

**ಅಶೋಕ :** ಎಲೋ ಮಿತ್ರದ್ರೋಹಿ, ನಿನ್ನ ವ್ಯಂಗೋಕ್ತಿಯಿಂದ ನನಗೇನಾಗ ಬೇಕಾಗಿದೆ? ಆದರೆ..... ಅನ್ನವಿಕ್ಕಿದ ಒಡೆಯನ ಋಣ ತೀರಿಸಲು ಕರ್ಣನು ರಕ್ತ ತರ್ಪಣಗೈದನು. ರಣದೇವತೆಗೆ ಉಪ್ಪಿಟ್ಟವನಿಗಾಗಿ ದೇಹ ಮುಡಿಪಿಟ್ಟು ಮಲಗಿದನು. ಶರ ಶಯ್ಯೆಯಲ್ಲ ಆ ಮಹಾರಥಿ ಭೀಷ್ಮ ಅಷ್ಟೇ ಏಕೆ ಹಳಸಿದ ಅನ್ನತಿಂದು ಉಳಿಸುವದಿಲ್ಲವೇ ತನ್ನೊಡಯನ ಮನೆಯನ್ನು ಸ್ವಾಮಿನಿಷ್ಠ ಶ್ವಾನ.... ಅದಕ್ಕಿಂತ ಕಡೆಯಾದ ನೀನೊಬ್ಬ ಹೃದಯಹೀನ

**ಶರತ್ :** ಓ ! ಮತಿಹೀನ ಇದು ಇಪ್ಪತ್ತನೆ ಶತಮಾನ ಅಂದಿನ ಗೆಳೆಯ ಎಂಬ ಶಬ್ದವು, ಕಾಲಕ್ರಮೇಣ ಇಂದು 'ಗೆಣೆಯ'ನೆಂದು ಪರಿವರ್ತನೆ ಗೊಂಡಿದೆ. ಮಾದರಿಯ ಮಿತ್ರತ್ವವು ಹೊತ್ತಿಗೆಗಳ ಸೊತ್ತಾಗಿ ಮಿತ್ರನ ಮಡದಿ, ಇಲ್ಲವೆ ಅವನ ಅಕ್ಕ ತಂಗಿಯರ ಸೌಂದರ್ಯ ಸೌರಭವ ಮೂಸಿಸುವ ಹೇಸಿ ಆಶೆ ಇಟ್ಟುಕೊಂಡೇ ಕಟ್ಟಿಕೊಳ್ಳುವ ಗೆಳೆತನ ಇಂದು ಹೆಚ್ಚಾಗಿದೆ.

**ಅಶೋಕ :** ಥೂ ಹಿತಶತ್ರು ಸ್ವರ್ಗ ಸಮಾನವಾಗಿದ್ದ ಸದನವನ್ನು ಸ್ಮಶಾನವನ್ನಾಗಿ ಮಾಡಿದ ಶ್ವಾನಾ, ನಿಲ್ಲಿಸು ನಿನ್ನ ನಿರರ್ಥಕ ನಿನಾದವನ್ನು

**ಲಲಿತ :** (ಬದಿಯಲ್ಲಿರುವ ಟೆನಿಸ್ ಬ್ಯಾಟಿನಿಂದ ಅಶೋಕನ ತಲೆಗೆ ಹೊಡೆದು) ಶೆಟಪ್, ತುಟಿಬಿಚ್ಚಿ ನನ್ನಿಚ್ಛೆಗೆ ತುಚ್ಛೀಕರಿಸಿದರೆ ನುಚ್ಚಾಗುವದು ನಿನ್ನ ದೇಹ. ನಿನಗೀ ಮನೆ ಬೇಡಾಗಿದ್ದರೆ ಬಿಟ್ಟು ಹೋಗು ಮರು ಮಾತನಾಡದೆ.....

**ಅಶೋಕ :** (ತಲೆಗೆ ಕೈಹಿಡಿದುಕೊಂಡು) ಹೋಗುವೆ, ಹೋಗುವ ಮುನ್ನ ನಿನಗೊಂದು ಮಾತು ಹೇಳಿ ಹೋಗುವೆ. ನಿನ್ನ ದುರಿಚ್ಛೆಗಾಗಿ ನನ್ನ ಧರ್ಮಪತ್ನಿಯ ಮೇಲೆ ದುರಾರೋಪ ಹೊರಸಿ ಸರಸ ದಂಪತಿಗಳ ದಾಂಪತ್ಯದ ಕ್ಷೀರ ಕುಂಭದಲ್ಲಿ ಕಾರಸ್ಥಾನದ ಹುಳಿ ಹಿಂಡಿ ಹದಗೆಡಿಸಿದ ನಿನ್ನ ಜೀವನ ಅಗಸನ ನಾಯಿಯಂತಾಗಿ ಕೊನೆಗೆ ನೀ ಸೇರುವಿ ನರಕ ಕುಂಡವನು. ಸಾಕಿನ್ನು ನಿನ್ನ ಮುಖಾವಲೋಕನ ಗಂಗಾ ! ಸಾಧ್ವಿ ! ಗಂಗಾ.... ನಿರಪರಾಧಿಯಾದ ನಿನಗೆ ಹೊರನೂಕಿ ಅದೆಷ್ಟು ಕಷ್ಟತಂದು ಕೊಂಡೆನಲ್ಲ, ಎಲ್ಲಿಂಯಾದರೂ ಯಾವ ರೀತಿಯಿಂದಾದರೂ ಜೀವದಿಂದಿರು. ಗಂಗಾ ! ನಾ ಬರುವೆ ನಿನ್ನೆಡೆಗೆ ಮನ್ನಿಸೆನ್ನ ಅಪರಾಧವನು. (ಹೋಗುವನು)

ಶರತ್ : (ನಕ್ಕು) ಲಲಿತಾ ನಮ್ಮ ಸುಖ ವಿಲಾಸಗಳಿಗೆ ಅಡ್ಡಿಯಾಗಿದ್ದ ಅಶೋಕನೂ ಅಡವಿ ಸೇರಿದನು.

ಲಲಿತ : ಇಂದಿಗೆ ಹರಿಯಿತು ಭಯದ ತೆರೆ, ಇನ್ನೆಂದು ಪಾಣಿಗ್ರಹಣ?

ಶರತ್ : ಕೆಲವು ದಿವಸ ಕಳೆಯಲಿ, ಸಧ್ಯ ಸ್ವಲ್ಪ ಹಣದ ಅಡಚಣೆ ಇದೆ.

ಲಲಿತ : ಶರತ್ ಈ ಮನೆ ಇಲ್ಲಿರುವ ಸರ್ವಸಂಪತ್ತಲ್ಲದೆ, ವಿಧವೆಯಾದ ನನ್ನ ಉಪಜೀವನಕ್ಕಾಗಿ ನಮ್ಮ ತಂದೆಯವರು ನನ್ನ ಹೆಸರಿನಿಂದ ಬ್ಯಾಂಕಿನಲ್ಲಿಟ್ಟಿರುವ ಹತ್ತುಸಾವಿರ ರೂಪಾಯಿ ನಿಮ್ಮದೇ ಆಗಿರುವಾಗ ಹಣಕ್ಕೇಕೆ ಅಂಜಿ ಹಿಂಜರಿಯುವಿರಿ?

ಶರತ್ : ನಿನ್ನ ಅಣ್ಣನೇನು ಮಣ್ಣುಸೇರಿಲ್ಲ ಲಲಿತಾ ! ನಾಳೆ ತನ್ನ ಸತಿಯೊಡಗೂಡಿ ಬಂದು ಮುಯ್ಯಿಗೆ ಮುಯ್ಯಿ ತೀರಿಸಲು ನಿನ್ನನ್ನು ಹೊರನೂಕದೇ ಇರನು ಅದಕ್ಕಾಗಿ....

ಲಲಿತ : ತಮ್ಮ ವಿಚಾರವನ್ನು..........?

ಶರತ್ : ನನ್ನ ಮೇಲೆ ನಂಬಿಗೆಯಿದ್ದರ ಮಾತ್ರ ಸಮಯೋಚಿತ ಸೂಚನೆ ಕೊಡುವೆ.

ಲಲಿತ : ನನ್ನ ನಂಬಿಗೆಯ ನೇಸರನಾದ ನಿಮ್ಮಲ್ಲಿ ಸಂಶಯವೇ?

ಶರತ್ : ಹಾಗಾದರೆ ಇಲ್ಲಿರುವ ಸರ್ವ ಸಂಪತ್ತಿನೊಂದಿಗೆ ಇಂದೇ ಈ ಊರು ಬಿಟ್ಟು ಮತ್ತೆ ಯಾವದಾದರೊಂದು ಪಟ್ಟಣ ಸೇರಿ ಸುಖವಾಗಿ ಬದುಕೋಣ.

ಲಲಿತ : ಅಷ್ಟೇ ಆಗಲಿ ಇದೋ ಬ್ಯಾಂಕಿನಲ್ಲಿರುವ ಹಣಕ್ಕಾಗಿ ಚೆಕ್ಕು ಬರೆದುಕೊಡುವೆ. (ಬರೆದು ಕೊಟ್ಟು) ನೀವು ಹೋಗಿ ಹಣ ತರುವುದರೊಳಗಾಗಿ.....

ಶರತ್ : ನಿನ್ನ ಸಿದಗಿ ಸಿದ್ದ ಮಾಡಿಕೊಂಡಿರು.

ಲಲಿತ : ಹೀಗೇಕೆ ಮಾತಾಡುವಿ ಶರತ್?

ಶರತ್ : ಸಮಯಕ್ಕೆ ಸರಿಯಾಗಿಯೇ ಮಾತನಾಡುತ್ತಿರುವೆ, ಇಲ್ಲಿಯವರೆಗೆ ನೀನಿಟ್ಟುಕೊಂಡ ಹಂಬಲ ಬರೀ ಮೃಗಜಲ.

ಲಲಿತ : ನನ್ನ ಮೇಲೆ ನಿಮ್ಮ ಪ್ರೇಮವಿಲ್ಲವೇ?

ಶರತ್ : ಇತ್ತು ಹಣ ಸಿಗುವವರೆಗೆ ಮಾತ್ರ

ಲಲಿತ : ಪಾಪಿ ಮನದಲ್ಲಿ ಇಂಥ ಕಾಲಕೂಟ ವಿಷವನ್ನು ತುಂಬಿಕೊಂಡು ನಿನ್ನ ಕಾಮವಾಸನೆ ತೃಪ್ತಿಗಾಗಿ ಮುಖದಿಂದ ಸುಧೆಯ ಸುರಿಸಿ ನನ್ನ ಕುತ್ತಿಗೆಯನ್ನು ಕೊಯ್ದಿಯಾ?

ಶರತ್ : ನಾಲಿಗೆ ಬಿಗಿ ಹಿಡಿ. ವಿಧವೆಯಾದ ನಿನ್ನನ್ನು ಮದುವೆ ಯಾಗಲಿಕ್ಕೆ ನನಗೇನು ಹೆಣ್ಣುಸಿಗುವದಿಲ್ಲವೇ? ಇಂದಿನ ಯುಗದಲ್ಲಿ ಬೇಕೆಂದರೆ ಬಾಗಿಲ ಮುಂದೆ ಸಾಲಾಗಿ ನಿಲ್ಲುವರು ಸುರಲೋಕದ ಸುರಸುಂದರಿಯಂಥ ಸ್ತ್ರೀಯರು.

ಲಲಿತ : ಪಂಚ ಮಹಾಭೂತಗಳ ಸಾಕ್ಷಿಯಾಗಿ ನೀನು ನನ್ನ ಪುನರ್ವಿವಾಹವಾಗುವೆನೆಂದು ವಚನವಿತ್ತಿಲ್ಲವೇ? ಕೊಟ್ಟ ವಚನಕ್ಕಾಗಿ ಕರ್ಣ ಸೋದರರನನ್ನುಳಿಸಿ ತೆತ್ತನು ತನ್ನ ಪ್ರಾಣ.

ಶರತ್ : ಪ್ರೇಮ ಗುಂಜಾರವ ಗೈದ ಭ್ರಮರವೇ ನಿಲ್ಲಿಸು ನಿನ್ನ ಅರ್ಥವಿಲ್ಲದ ವ್ಯರ್ಥ ಮಾತಃಗಳನ್ನು. ಅಗ್ನಿ ಸಾಕ್ಷಿಯಾಗಿ ಕೈಹಿಡಿದ ಸೀತೆಯನ್ನೇಕೆ ವನವಾಸಕಟ್ಟಿದನು ಆ ರಾಮಚಂದ್ರ. ಸೂರ್ಯರ ಸಾಕ್ಷಿಯಾಗಿ ಗಾಂಧರ್ವ ಮದುವೆಯಾದ ದುಷ್ಯಂತ, ತುಂಬಿದ ಸಭೆಯಲ್ಲಿ ಅಪಮಾನಗೊಳಿಸಿ ಹೊರದೂಡಿದನೇಕೆ ಶಕಂತಲೆಯನ್ನು?

ಲಲಿತ : (ದುಃಖ) ಶರತ್ ಕಳೆದ ವರ್ಷ ಕಳೆದುಕೊಂಡೆ ತಂದೆ ತಾಯಿಗಳನ್ನು ಪತಿ ತೀರಿದ ಮೇಲೆ ನೀವೇ ಪತಿಯೆಂದು ಭಾವಿಸಿ ನಡೆದು ನಿಮಗಾಗಿ ಅಣ್ಣ ಅತ್ತಿಗೆಯರನ್ನು ಅಡವಿಗೆ ಸೇರಿಸಿದೆನು. ನಾನೀಗ ಅನಾಥೆ ನೀವಿಂದು ತೊರೆದರೆ ನನಗೆ ಸ್ಥಳವೆಲ್ಲಿ?

ಶರತ್ : ಮೈ ಮಾರಿಕೊಳ್ಳುವ ವೈಶ್ಯಯರ ಗಲ್ಲಿ!

ಲಲಿತ : (ಕಾಲಿಡಿದು) ಶರತ್ ! ಅಂದಿನ ಮುಖದೊಳಗಿನ ಮಂದಸ್ಮಿತ ಮಾತಿನೊಳಗಿನ ಸವಿಭಾವದೊಳಗಿನ ಮಮತೆ ಮರೆಯಾದವೇ ಇಂದು?

ಶರತ್ : ಸರಿಯುತ್ತ (ಒದ್ದು) ನೀನೆಷ್ಟು ಬೇಡಿಕೊಂಡರೂ ಬಂಡಿಯ ಮೇಲೆ ಬಿತ್ತಿದ್ದ ಬೀಜದಂತೆಯೇ ಸರಿ ನನ್ನ ಕಾಲಮೇಲೆ ಬಿದ್ದು ಬೇಡಿಕೊಳ್ಳುವದಕ್ಕಿಂತ ಮುಂಡನೆ ಮಾಡಿಸಿ ಕುಂಕುಮ ಕಂಕಣವನ್ನು ಬಿಡಿಸಿದ ಮಾತ್ರಕ್ಕೆ ರಾಗರತಿಗಳ ದಮನ ಸಾಧ್ಯವಾಗುವದೆಂದು ತಿಳಿ

ಸಮಾಜದೆದುರು ಹೋಗಿ ಬೇಡಿಕೋ.

ಲಲಿತ : ಹೀನ ಗರ್ಭ ಹೊತ್ತ ನನ್ನ ಮಾತಿಗೆ ಸಮಾಜ ಕಿವಿಗೊಡುವುದೇ?

ಶರತ್ : ಹಾಗಾದರೆ ಮೂಕ ಪ್ರಾಣಿಗಳನ್ನು ಜಗನ್ಮಾತೆಗೆ ಬಲಿ ಕೊಟ್ಟು ಮಾಂಸ ಭಕ್ಷಿಸುವ ಭಕ್ತರೆದುರು ಹೋಗಿ "ಹೇ ಭಕ್ತರೆ ನಿಷ್ಪಾಪಮಯವಾದ ಪ್ರಾಣಿಗಳನ್ನು ನಿಮ್ಮ ಇಷ್ಟ ದೇವತೆಗೆ ಬಲಿಕೊಡುವದಕ್ಕಿಂತಲೂ ಬಹು ಸಂಖ್ಯೆಯಲ್ಲಿ ಬೆಳೆದಿರುವ ವಿಧವೆಯರನ್ನು ಬಲಿ ಕೊಟ್ಟರೆ ಆ ಮೂಕ ಪ್ರಾಣಿಗಳ ಬಲಿದಾನಕ್ಕಿಂತ ಶ್ರೇಯಸ್ಸು ನಿಮಗೆ ಸಲ್ಲುವದೆಂದು ಬುದ್ಧಿ ಹೇಳಿ ಬೇಡಿಕೋ ಆ ಭಕ್ತರಲ್ಲಿ.

ಲಲಿತ : ಪಾಷಾಣ ಹೃದಯಿಯಾಗದಿರುವ ಶರತ್...... ನಾನಾಗಿ ನುಡೆಯುವೆ ನಿಮ್ಮ ಹೃದಯ ಪಂಜರದ ಗಿಣಿ

ಶರತ್ : ಆದರೆ ನಾನಾಗಲಾರೆ ಜಾರಣಿಯ ಧಣಿ.

ಲಲಿತ : ಥೂ ಪಾಪಿ !

ಶರತ್ : ಹೌದು ಪಾಪಿ ! ಒಂದೇ ಉದರದಿಂದ ಜನಿಸಿದ ಅಣ್ಣನನ್ನು ಅರಗಿಳಿಯಂಥ ಅತ್ತಿಗೆಯನ್ನು ಅಡವಿಗಟ್ಟಿದ ನೀನ? ಪುಣ್ಯಾತ್ಮಳು. ವಿಧವೆಯಾದರೂ ಕ್ಷಣ ಭಂಗುರವಾದ ಪ್ರೇಮಕ್ಕೆ ಮನಸೋತು ಸ್ವೇಚ್ಛಾಚಾರಿಣಿಯಾಗಿ ತಿರುಗುವ ನಿನ್ನಂಥ ಸ್ತ್ರೀಯರು ಹೆಚ್ಚಾಗಿರುವದರಿಂದಲೇ ಅದೆಷ್ಟೋ ಅನಾಥ ಆಶ್ರಮಗಳು ವ್ಯಭಿಚಾರಿ ಜಂತುಗಳ ಸಂತೆಯಾಗಿವೆ. ತಿಪ್ಪೆಯಲ್ಲಿ ಬಿದ್ದು ಮೈ ತುಂಬಿ ಹೊಲಸು ಹೊತ್ತುನಿಂತ ಕತ್ತೆ ಸ್ವಚ್ಛತೆಯ ಮೇಲೆ ಉಪನ್ಯಾಸವಿತ್ತಂತೆ ನೀ ನುಡಿಯುತ್ತಿರುವಿ.

ಲಲಿತ : ಕೊನೆಗೂ ಅಬಲೆಯಾದ ನನ್ನ ಜೀವನ ಹಾಳು ಮಾಡಿದೆಯಾ ಗೋಮುಖವ್ಯಾಘ್ರ.

ಶರತ್ : ಲಲಿತಾ ನಾನೊರ್ವನೆ ಗೋಮುಖವ್ಯಾಘ್ರಲ್ಲ..... ! ಅಧಿಕಾರ ಲಾಲಸೆಯಿಂದ ನಿಜವಾದ ನಿಸ್ಪೃಹ ರಾಜಕಾರಣಿಗಳಿಗೆ ಅವಿಶ್ವಾಸ ತಂದು ರಾಜ್ಯದಲ್ಲಿ ವ್ಯಾಜ್ಯ ಹುಟ್ಟಿಸುವ ಗೋಮುಖವ್ಯಾಘ್ರಗಳು ಅದೆಷ್ಟೋ ತುಂಬಿವೆ ರಾಜಕೀಯ ರಂಗದಲ್ಲಿ. ಅಬಲೆಯಾದ ನಿನ್ನೊರ್ವಳ ಜೀವನ ಹಾಳು ಮಾಡಿದಕ್ಕೆ ನನಗೆ ಗೋಮುಖ ವ್ಯಾಘ್ರನೆಂದು ನೀನಾಡಿದರೆ, ಇಡೀ ದೇಶವೇ ಹಾಳಾದರೂ ತಮ್ಮ

ಕೋಶ ತುಂಬಿದರೆ ಸಾಕೆನ್ನುವ ಮಾಯಾಮೃಗ ಮಾರೀಚರಂಥ ಸೋಗಿನ ಸುಧಾರಕರಿಗೇನನ್ನುವೆ?

**ಲಲಿತ :** ನೀಚಾ ! ನಾ ಹೊತ್ತ ಗರ್ಭದ ಗತಿಯೇನು?

**ಶರತ್ :** ನಿನ್ನ ಗರ್ಭದ ಗತಿ ! ಇದೋ ಈ ಹೇಸಿ ಭೂಟಿನ ಕಾಲೇ ಗತಿ.

(ಅವಳ ಕೈಹಿಡಿದು ಕೆಡವಿ ಬೂಟಿನ ಕಾಲಿನಿಂದ ಗರ್ಭವನ್ನು ತುಳಿಯುವನು ಲಲಿತ ಅಮ್ಮಾ, ಅಣ್ಣಾ, ಅತ್ತಿಗೆ ಎಂದು ಚೀರುವಳು)

ಅರುಚು...... ಆತ್ಮ ತೃಪ್ತಿಯಾಗುವವರೆಗೂ ಅರಚು.

(ನಗುತ್ತ ಹೋಗುವನು)

**ಲಲಿತ :** (ಎದ್ದು ಹೊಟ್ಟೆ ಹಿಡಿದುಕೊಂಡು) ಅಮ್ಮಾ....ಸಂಕಟಾ....ಹೃದಯದಲ್ಲಿ ಇದ್ದ ಧಗೆಯನ್ನೆಂತು ಸಹಿಸಲಿ..... ಅತ್ತಿಗೆ..... ಅಣ್ಣಾ ನೀರು ಅಣ್ಣಾ..... (ಬಿದ್ದು ಸಾಯುವಳು).

## ಪ್ರವೇಶ–೮

### ಪಟ್ಟಣದ ಬೀದಿ

(ಕೋಕಿಲಾ ಪದ ಹಾಡುತ್ತ)

ಯಾರಿಲ್ಲ ಜಗದಿ । ಸಂಸಾರ ಬರಿದೆ
ಸಕಲ ಸೌಭಾಗ್ಯಕ್ಕೆ ಕಣ್ಮರೆಯಾ॥ ಪ ॥
ಸುಖ ಶಾಂತಿಗಳನ್ನೊಂದು ನಾ ಕಾಣದಾದೆ ॥
ಮುಖ ನೋಡದೆ ಪ್ರಿಯನ ಹಿತಕರವಾದೆ ॥

**ಕೋಕಿಲಾ :** ವಿಧಿಯೇ.....ನಮ್ಮೀರ್ವರ ಶ್ರೇಷ್ಠವಾದ ಪ್ರೇಮವನ್ನು ನಿನ್ನ ನ್ಯಾಯ ತಕ್ಕಡಿಯಿಂದ ತೂಗಿ ನೋಡದೆ ಒಲಿದ ಹೃದಯಿಗಳನ್ನು ಒಂದುಗೂಡಿಸದಾದೆಯಾ? ಬಾಳ ಕಡಲಲ್ಲಿ ನಾಲ್ಕು ದಿನ ಮನದಿನಿಯನೊಡಗೂಡಿ ಜೀವನ ನೌಕೆಯನ್ನು ಸಾಗಿಸಬೇಕೆಂದರೆ ನೀನು ಅದರ ಬದಲಾಗಿ ಅಧೋಗತಿಯ ದುಃಖದ ದಾರಿಯಲ್ಲಿ ದೂಡಿದಿಯಾ..... ನನ್ನ ಪ್ರಾಣಪಕ್ಷಿಯಾದ ವಸಂತ ನೀನಾವ ಮರೆದಲ್ಲಿ ಅಡಗಿ ಕುಳಿತಿರುವಿ? ನಿನಗಾಗಿ ಸಾಕಿ ಸಲುಹಿದ ಅಪ್ಪನಿಗೆ ಹೇಳದೆ

ಆಸ್ಪತ್ರೆಯಿಂದ ಹೊರಟು ಬಂದಿರುವೆ ನಿನ್ನ ಸ್ಥಾನವನ್ನು ತಿಳಿಸು ವಸಂತ..... ! ನೀನೆಲ್ಲಿ ಇದ್ದರೂ ನಾ ಬರುವೆ ನಿನ್ನೆಡೆಗೆ (ಹೋಗುವಳು)

**ಅಶೋಕ :** (ಭ್ರಮೆಯಿಂದ) ಅಹಹಹಾ ಅಣ್ಣನಿಗೆ ತಂಗಿ ಅಹಿತ ಬಗೆಯಲಾರಳೆಂದು ನಾ ನಂಬಿದ್ದೆ ನೀಚ ಲಲಿತ, ನನ್ನ ವಂಶವೃಕ್ಷವನ್ನು ನಿರ್ದಯದಿಂದ ಕಡಿದೊಗೆವ ಕಠಾರಳಾದೆಯಾ ನೀನಿಂದು ! ಅಣ್ಣನ ಸಂಸಾರವನ್ನು ಮಣ್ಣು ಗೂಡಿಸಿ ಅದರ ಮೇಲ್ ನಿನ್ನ ವಿಲಾಶ ವೈಭವದ ವ್ಯಭಿಚಾರಿ ಗ್ರಹವನ್ನು ನಿರ್ಮಿಸಬೇಕೆಂದಿರುವ ನರರಾಕ್ಷಸಿ ಮಾನವ ಲೋಕದಿಂದ ಪಾರಾಗಿ ಹೋದರೂ ದೇವಲೋಕದ ಕೋರ್ಟಿನಲ್ಲಿ ಏನೆಂದು ಬೊಗಳುವಿ ನಿನ್ನ ನೀಚ ನಾಲಿಗೆಯಿಂದ? ಬಾಲವಿಧವೆಯಾದ ನಿನ್ನನ್ನು ಮಲ್ಲಿಗೆ ದಂಡಿಯಂತೆ ಸಲುಹಿದೆನು, ಆದರೆ ನೀನಾದಿ ನನ್ನ ಮರ್ಯಾದೆಯ ಮಹಲನ್ನು ಸುಡುವ ಕೆಂಡದಂತೆ ! ನೀಚ.....ಶರತ್.....! ನೀನು ನಂಬಿಗೆಯ ಮಿತ್ರನೇ.... ಅಲ್ಲಲಲ್ಲಿ, ದೇಹಗಳೆರಡಾದರೂ ಹೃದಯ ಒಂದು ಎಂದು ಬಗೆದ ಮಿತ್ರನ ಬಾಳಬಳ್ಳಿಯನು ಕಿತ್ತೆಸೆದ..... ಕಟುಕ.... ಮನೆಮುರಕ.... ನಿನ್ನಂಥವನ ಸ್ನೇಹ ಮಾಡಿದ ನಾನೇ ತಲೆಕಿರುಕ ಕಪಟಿಗಳಾದ ನಿಮ್ಮ ಕಾರಸ್ಥಾನವನ್ನರಿಯದೆ ಕಾಲ್ಹಿಡಿದು ಬೇಡಿಕೊಂಡರೂ ಕರುಣೆ ಬರದೆ ಒದ್ದು ಹೊರನೂಕಿದೆನಲ್ಲ ನನ್ನ ಭಾಗೀರಥಿಯನ್ನು. ಬಂದೆ ತಡೆ ಕೃತಘ್ನ ನಿನ್ನ ನೆತ್ತರದ ಓಕಳಿಯನ್ನಾಡಲು (ಓಡುವನು).

**ಶರತ್ :** ಎನ್ನ ರಸವತ್ತಾದ ಜೀವನಕೆ ಅನುಕೂಲವಾಗಿಯೇ ಉರುಳುತಿದೆ ಕಾಲಚಕ್ರ. ಲಲಿತೆಯನ್ನು ಮೋಹಜಾಲಕ್ಕೆಳೆದು ಅವಳ ಅಣ್ಣ ಅತ್ತಿಗೆಯರನ್ನು ಅಡವಿಗಟ್ಟಿ ಸರ್ವ ಸಂಪತ್ತನ್ನು ಸೆಳೆದು, ಕೊನೆಗೆ ನೂಕಿದೆ ಅವಳನ್ನು ಮೃತ್ಯುವಿನ ಮಡಲಿಗೆ. ಶರತ್‌ನ ಕಾರಸ್ಥಾನದ ಕಾರ್ಮೋಡಗಳ ತಾಕಲಾಟದಿಂದ ಕಿಚ್ಚಿನಲ್ಲಿ ಯಾರು ತಾನೆ ಬದುಕಿ ಬಾಳ ಬಲ್ಲರು. ಸಾಧಿಸಬೇಕಾದ ಪ್ರಯತ್ನಗಳೆಲ್ಲವೂ ಫಲ ಕೊಟ್ಟಿವೆ ಇನ್ನು ತೃಪ್ತಿರಸದಿಂದ ತುಂಬಿಕೊಳ್ಳುವೆ ಗಂಗೆಯ ಸಂಗದಿಂವ ಕಾಮಪಿಪಾಸೆ ಇದೊಂದೇ ನನ್ನ ಕೊನೆಯಾಸೆ!! ಇಂದೇ ಈ ಹಳ್ಳಿಯಿಂದ ಅಣ್ಣ ಮತ್ತು ಮಗುವಿನೊಂದಿಗೆ ಮುಂದಿನೂರಿಗೆ ಹೊರಟಿರುವಳಂತೆ ಹೋಗಲಿ, ತಾಸಿಗೆ ಎಂಬತ್ತು ಮೈಲು ವೇಗದಿಂದುರುಳುವ ನನ್ನ ಕಾರಿನ ಓಟದ ಗಾಲಿಗಳಿಗೆ ಸಿಗಲಾರಳೆ ಆ ಗಂಗೆ. (ನಗುತ್ತ ಹೋಗುವನು ಹಾರ್ನ್‌ದೊಂದಿಗೆ ಮೋಟಾರ ಶಬ್ದ !

## ಪ್ರವೇಶ–೯

### ಕಟ್ ಜಂಗಲ್

(ಮಗುವನ್ನೆತ್ತಿಕೊಂಡು ಗಂಗಾ ಮತ್ತು ವಸಂತ ಪ್ರವೇಶ)

**ಗಂಗಾ :** ನೀರಡಿಕೆ ಅತಿಯಾಗಿದೆಯಣ್ಣ

**ವಸಂತ :** ನೀನು ಈ ಮರದ ನೆರಳಿನಲ್ಲಿ ಕೂಡು ಇಲ್ಲಿ ಎಲ್ಲಾದರೂ ನೀರು ಇವೆಯೇನೋ ನೋಡಿ ಬರುವೆ (ತಂಬಿಗೆ ಹಿಡಿದು ಹೋಗುವನು ಗಂಗಾ ಮರದ ಬುಡದಲ್ಲಿ ಕೂಡುವಳು) (ಕೂಸು ಅಳುತ್ತಿರುವದು)

**ಶರತ್ :** (ವಿಕಟವಾಗಿ ನಗುತ್ತ ಪ್ರವೇಶ) ಸಿಕ್ಕಿತು ನನ್ನ ಮನ ಇಚ್ಛಿಸಿದ ಮಯೂರ.

**ಗಂಗಾ :** ಹಾ.....! ನೀನಿಲ್ಲಿ.....? (ಎದ್ದು ನಿಲ್ಲುವಳು)

**ಶರತ್ :** ಬೇಟೆ ಇರುವ ಸ್ಥಳವನ್ನು ಹುಡುಕಿಕೊಂಡು ಹೋಗುವದು ಬೇಟೆಗಾರನ ಕೆಲಸ ಅಬಲೆಯಾಗಿ ನೀನಿಂದು ಅಡವಿಯಲ್ಲಿ ಅಲೆಯುತ್ತಿರುವಿ ಎಂಬುದನ್ನರಿತು ಬಂದೆ ಆದರಿಸಿ ಆಶ್ರಯ ನೀಡಬೇಕೆಂದು.

**ಗಂಗಾ :** ಭುವನದೊಲ್ಲಭನಾದ ಭಗವಂತನಾಶ್ರಯವೇ ತಪ್ಪಿದ ನಮಗಿನ್ನು ಬೇರಾರ ಆಶ್ರಯವು ಬೇಡ (ಹೋಗಹತ್ತುವಳು)

**ಶರತ್ :** (ತಡೆದು) ಎಲ್ಲಿಗೆ ಹೋಗುವಿ ಹಗರಣದ ಹೆಣ್ಣೆ, ನಿನ್ನ ನಿಂಬೆಹಣ್ಣಿನಂತಹ ಮೈ ಬಣ್ಣದ ಕೆಂಪಿಗೆ ಬೆರಗಾಗಿ ಬೆನ್ನು ಹತ್ತಿ ಬಂದಿರುವೆ.

**ಗಂಗಾ :** ಪಾಪಿ ! ನನ್ನ ಮೈ ಬಣ್ಣವ ಕೆಂಪು ನಿನಗದುವೆ ಕಾಯ್ದ ಕಬ್ಬಿಣದ ಕೆಂಪು.

**ಶರತ್ :** ಬಾಯ್ಬಿಡಬೇಡ ಬಾಯ್ಬಡಕ ಬಾಲೆ ಪ್ರಳಯಾಗ್ನಿಯನ್ನೇ ನಂದಿಸುವ ಮೇಘವೇ ನಾನಿಂದು ಯಕಶ್ಚಿತ ಕಾಯ್ದ ಕಬ್ಬಿಣದ ಕೆಂಪಿಗೆ ಅಲುಗಾಡದು ನನ್ನ ಮನ ಹಿಂದು ಮುಂದು ತುಟಿ ಬಿಚ್ಚದೆ ನನ್ನ ಮನಾನುಕೂಲಿನಿಯಾಗು ನೀನಿಂದು.

**ಗಂಗಾ :** ನೀಚಾ ನಿನಗಾವ ಸುಖವಿದೆ ಈ ರೀತಿಯ ಕಾರಸ್ಥಾನದಿಂದ?

**ಶರತ್ :** ಇದೆ, ಸ್ವರ್ಗ ಸುಖವನ್ನು ಧಿಕ್ಕರಿಸುವ ನಿನ್ನ ಸಹವಾಸದ ಸುಧೆಯ

ಸವಿಸುಖ ನಿನ್ನ ಗುಲಾಬಿ ಗಲ್ಲದ ಹೊಳಪಿಗೆ ನಾಚಿ ತಲೆಬಾಗಿಸುವವು ಕೊಳದ ಕೆಂದಾವರೆಗಳು ತಿದ್ದಿತೀಡಿದ ನಿನ್ನ ಹುಬ್ಬುಗಳನ್ನು ಕಂಡು ಕಳಚಿ ಬೀಳುವದು ಕಂತುವಿನ ಕೈ ಅಂಬು ! ಹಟ ಹಿಡಿಯದೇ ನಿನ್ನ ಹೃತ್ಕಟೀರದಲ್ಲಿ ಕೊಡು ಎನಗೆ ಇಂಬು, ಸರ್ವ ಸಂಪತ್ತೆಲ್ಲವನ್ನೂ ನಿನ್ನಡಿಯಲ್ಲಿಡುವೆ ನೀ ನಂಬು.

**ಗಂಗಾ :** ಸಂಪತ್ತಿನ ಸವಿಮಾತಿಗೆ ಸಾಕ್ಷಿ ಬರಲು ನಾನೋರ್ವ ಹೇಸಿ ಸೂಳೆಯೆಂದೆಯಾ? ಒಂದು ವೇಳೆ ಮರೆತು ಚಲಿಸಬಹುದು ಹಿಮಾಚಲದ ಶ್ರೇಣಿ, ಆದರೆ ಬದಲಾಗದು ಗರತಿಯ ವಾಣಿ

**ಶರತ್ :** ಆ ಚದಿರು ಅತಿಯಾಗಿ ನೀನೀಗ ನನ್ನ ಬಲೆಯಲ್ಲಿ ಬಿದ್ದ ಹೊಸಬೇಟಿ.

**ಗಂಗಾ :** ಆದರೆ ತತ್ತರಿಸಲಾಗದ ಪಾತೀವ್ರತದ ಕೊಟೆ.

**ಶರತ್ :** (ಚಪ್ಪಾಳೆ ತಟ್ಟಿ) ಯಾರಲ್ಲಿ (ಇಬ್ಬರು ಬರುವರು) ಕೂಸಿನ ಕಸಿದು ಅಸು ಸಹಿತ ಬಿಗಿಯಿರಿವಳನ್ನು ಆ ಮರಕ್ಕೆ (ಬಿಗಿದ ನಂತರ) ನಡೆಯಿರಿ ನೀವಿನ್ನು, ಗಂಗಾ ಇನ್ನಾದರೂ ಬಿಡು ನಿನ್ನ ಹದಿಬದೆಯ ಹುಚ್ಚು.

**ಗಂಗಾ :** ಹುಚ್ಚಲ್ಲ ! ಪುರುಷ ಪಶುವನು ಪ್ರತಿಭಟಿಸುವ ಕುಲನಾರಿಯ ಕೆಚ್ಚು.

**ಶರತ್ :** ಸಾಕಿನ್ನು ಬಾಯ್ಮುಚ್ಚು ! ಈ ಶರತ್‌ನು ಒಲಿದರೆ ಅಮೃತ ಹೊಂಡ, ಮುನಿದರೆ ಕೋಲ್ಮಿಂಚಿನ ತೊಂಡ.

**ಗಂಗಾ :** ಏನಾದರೇನು ಚುಂಬಕವನ್ನು ಎಷ್ಟು ತುಣುಕುಗಳನ್ನಾಗಿ ಮಾಡಿದರೂ ಅದು ತನ್ನ ಹುಟ್ಟುಗುಣ ಬಿಡದೆ ಮತ್ತೆ ತೋರಿಸುವದು ಉತ್ತರ ದಕ್ಷಿಣ ದಿಕ್ಕುಗಳನ್ನು ಅದರಂತೆ ಬಡಿದರೂ ಹೊಡಿದರೂ ಕಡಿದರೂ ಪ್ರತಿ ತುಣುಕಿನಲ್ಲಿ ಕಾಣುವದು ಗರತಿಯ ನಿಷ್ಠೆ !

(ಕೂಸು ಅಳುವದು)

**ಶರತ್ :** ಗಂಗಾ । ನೀ ಮಾಡದಿರುವ ಏನೊಂದು ಆಲೋಚನೆ (ಜಂಬೆ ತೆಗೆದು) ಕಂಠ ಕೊಯ್ಯಲು ಈ ಜಂಬೆ ತೆಗೆದುಕೊಳ್ಳುವದು ನಿನ್ನ ಮಗುವಿನ ಕಂಠ ಲಿಂಗನ

**ಗಂಗಾ :** ಹಾಂ ! ಶರತ್ ನೀನೆನ್ನ ಸೋದರನಾಗಿ ನನ್ನ ಮಾನ

**ಶರತ್ :** (ನಕ್ಕು) ನನ್ನ ಧನ್ಯತೆ ಇದೆ. ನೀನೊಲಿದರೆ ನವರಸ ಲೀಲೆಯಲ್ಲಿ ಮಿಂದು ಧನ್ಯನಾಗುವೆ, ಒಲಿಯದಿದ್ದರೆ ನಿನ್ನ ರಕ್ತದಲ್ಲಿ ಮಿಂದು

ಧನ್ಯನಾಗುವೆನು ಹೂಂ..... (ಮುಟ್ಟಲು ಹೋಗುವನು)

**ಗಂಗಾ :** ಮುಟ್ಟದಿರು ಕಾಮುಕಾ ! ಮುಟ್ಟಿ ಏರದಿರು ಕಾಲನರಮನೆಯ ಕಟ್ಟೆ.

**ಶರತ್ :** ಹಾಗಾದರೆ ಇರಿದು ಹರಿಯುವೆ ನಿನ್ನ ಮಗುವಿನ ಹೊಟ್ಟೆ.

**ಗಂಗಾ :** ಆಗಲಿ ! ಮಾತೆಯ ಮಾನ ರಕ್ಷಣೆಗಾಗಿ ಪ್ರಾಣ ನೀಗಿದ ಕಡ್ಲಿ ಮಟ್ಟಿ ಕಾಶೀಬಾಯಿಯ ಮಗನಂತೆ ನನ್ನ ಮಗನ ಹೆಸರು ಕೂಡ ಅಚಂದ್ರಾರ್ಕವಾಗಿ ಉಳಿಯುವದು.

**ಶರತ್ :** ಎಲ್ಲಿಯವರೆಗೆ ನಿನ್ನ ಮಗುವಿನ ಹೊಟ್ಟೆ.

**ಗಂಗಾ :** ಇರುವ ಪರ್ಯಂತ ದೇಹ ಘಟ

**ಶರತ್ :** ಹಾಗಾದರೆ ಉಳಿಯದು ನಿನ್ನ ಮಗುವಿನ ತನು ಘಟ (ಜಂಬೆಯಿಂದ ಇರಿದು ಜಂಬೆ ಕಿತ್ತು ನಗುವನು ಕೂಸು ಚೀರಿ ಪ್ರಾಣ ಬಿಡುವದು)

**ಗಂಗಾ :** ಅಯ್ಯೋ ಪಾಪಿ ಕರುಣೆಯ ಲತೆಗೆ ಕೊಡಲಿಯ ಪೆಟ್ಟು ಹಾಕಿದೆಯಾ ಮಗೂ..... (ಕಟ್ಟನ್ನು ಬಿಚ್ಚಿಕೊಳ್ಳಲು ಯತ್ನಿಸುವಳು) ದೇವಾ ! ಈಗ ನನ್ನ ಸಹಾಯಕ್ಕೆ ಯಾರು ಇಲ್ಲದಂತಾಯಿತೆ.....ಅಣ್ಣಾ..... ಕೂಗುವಳು.

**ಶರತ್ :** ಕೂಗದಿರು ಕಾಗೆಯಂತೆ ! ಈ ನಿನ್ನ ಸಹಾಯಕ್ಕೆ ನಿನ್ನ ದುರ್ದೈವವುಂಟು ಹೂ, ಇನ್ನಾದರೂ ಅಪ್ಪಿಕೊ ಇಲ್ಲದಿದ್ದರೆ?

**ಗಂಗಾ :** (ಸ್ವಗತ) ಮಗುವಿನ ಕೊಲೆ ಮಾಡಿದ ಈಗಿನ ರಾಕ್ಷಸನು ನನ್ನ ಕೊಲೆ ಮಾಡಲು ಹಿಂದೆ ಸರಿಯನು. ನೀಚಕೀಚಕನಿಂದ ಪಾಂಚಾಲಿಯು ತನ್ನ ಪಾತಿವೃತ್ಯ ಕಾಯ್ದುಕೊಂಡಂತೆ ಯಾವುದಾದರೊಂದು ಯುಕ್ತಿಯಿಂದ ಮುಕ್ತಳಾಗಲೇಬೇಕು. (ಮುಗುಳ್ನಗೆ ಬೀರುತ್ತ) ಶರತ್ ಇಂದಿನಿಂದ ನಾ ನಿನ್ನವಳಾಗುವೆ, ಇಲ್ಲಿಯವರೆಗೆ ನನ್ನ ಅವಿಚಾರದ ವರ್ತನೆಯಿಂದ ಸಾಕಷ್ಟು ಕಹಿಫಲ ತಿಂದೆನು. ಇನ್ನು ಮೇಲೆ ನೀವೆನ್ನನ್ನು ಅಪೇಕ್ಷಿಸುವಿರೋ ಪೂರ್ತಿಗೊಳಿಸಲು ಸಿದ್ಧಳಾಗಿರುವೆ.

**ಶರತ್ :** (ನಕ್ಕು) ಸ್ವಾಭಿಮಾನದ ಖಣಿಯೇ ದಮನವಾಯಿತೇ ನಿನ್ನ ದರ್ಪ.

**ಗಂಗಾ :** ವಜ್ರದಂಥ ಹೃದಯ ಕರಗಿ ಮೃದುವಾಗಿದೆ ಮಲ್ಲಿಗೆಗಿಂತ.

**ಶರತ್ :** ಮೇಘಗರ್ಭಿತ ಮಿಂಚಿನಂತೆ ಬೂದಿ ಮುಚ್ಚಿದ ಕೆಂಡದಂತೆ ಅಲ್ಲವಷ್ಟೇ ನಿನ್ನ ನುಡಿ?

ಗಂಗಾ : ಹೃದಯ ಹರಿದು ಹೊರಗೆಡುಹಲೇ ಅನುರಾಗದ ಅಲೆಗಳನ್ನು

ಶರತ್ : (ಬಿಚ್ಚುತ್ತ) ಹೃದಯವನ್ನೇಕೆ ಹರಿದುಕೊಳ್ಳುವಿ ಹರಿಣಾಕ್ಷಿ, ಎನ್ನೆದೆಯ ಶಿಲೆಯಲ್ಲಿ ಕೊರೆಯುತಿವೆ ನಯನ ಉಳಿಗಳು ನಿನ್ನ ರೂಪರಾಸಿಯ ನಕ್ಷಿ ಇದಕ್ಕೆ.......

ಗಂಗಾ : ಪರಸ್ಪರ ಆತ್ಮಲಿಂಗಗಳೇ ಸಾಕ್ಷಿ ಹತ್ತಿರ ಹೋಗುತ್ತ ಇಲ್ಲಿಯವರೆಗೆ ಪ್ರತಿಕೂಲಳಾಗದುದಕ್ಕೆ ಕೋಪವೇ?

ಶರತ್ : ನೀರೆಂದು ಭಾವಿಸಿ ಬಿಡದೆ ಓಡುವ ಜಿಂಕೆಗೆ ಮೃಗಜಲವು ಜಾನ್ಹವೀ ರೀತಿಯಾದರೆ ಮತ್ತೇಕೆ ಉಳಿಯುವದು ತೃಷೆಯ ತಾಪ? ಅದರಂತೆ ಇಂದಿಗೆ ಅಳಿಯಿತು ನನ್ನ ನಿರಾಶೆಯ ಕೋಪ.

ಗಂಗಾ : (ಎದೆಗುಂಡಿಗಳನ್ನು ಬಿಚ್ಚಿ ಹಾಕುತ್ತಿರುವಂತೆ ನಟಿಸುತ್ತ ಅವನ ಪ್ಯಾಂಟಿನ ಜೇಬಿನಿಂದ ಪಿಸ್ತೂಲ ಹಿಡಿದುಕೊಂಡು) ಸರಿ ಚಾಂಡಾಲ । (ಶರತ್ ಭಯದಿಂದ ಹಿಂದೆ ಸರಿಯುತ್ತ ನಿನ್ನ ಪ್ರಾಣಪಕ್ಷಿ ಗಗನ ಗೂಡಿಗೆ ! ಎಳೆ ಮಗುವನು ಕತ್ತರಿಸಲು ಕರುಣೆ ಬರಲಿಲ್ಲವೇ ನಿನಗೆ? ಹಿಂಡಿರೊಟ್ಟಿಯೋ ಆಗಲಿ ಹಿಗ್ಗಿನಿಂದ ತಿಂದು ಬಾಳುವ ದಂಪತಿಗಳನ್ನಗಲಿಸಿ, ಬಾಗಿಲಿಗೆ ಬೇಲಿಯನ್ನು ಬಡಿಯುವ ಕಟುಕಾ, ನನ್ನಂತೆ ಎಷ್ಟು ಜನ ಸ್ತ್ರೀಯರ ಮೇಲೇರಿ ಹೋಗಿ ಕಷ್ಟಕ್ಕೀಡು ಮಾಡಿರುವಿ? ಒಂದು ವೇಳೆ ಸೂಜಿಯ ಮೊನೆಯಿಂದ ಆನೆ ಹಾಯ್ದು ಹೋಗಬಹುದು, ಆದರೆ ಸ್ವರ್ಗದ ಬಾಗಿಲಿನಿಂದಾ ನಿನ್ನಂಥ ನೀಚನು ಎಂದಿಗೂ ಕಡೆಗಾಗಲಾರನು. ನಿನ್ನ ಕಾಮದ ಕಪಿಮುಷ್ಟಿಯಲಿ ಅದೆಷ್ಟು ಜನ ಸ್ತ್ರೀಯರು ಮಾನಭಂಗ ಹೊಂದಿ ಸಮಾಜಕ್ಕೆ ಹೆದರಿ ಹೊಳೆ ಹಾರಿದರೋ ಮತ್ತೆಷ್ಟು ಜನ ನೇಣು ಹಾಕಿಕೊಂಡರೋ ಭಗವಂತನೇ ಬಲ್ಲ ಅವರೆಲ್ಲರ ಪರವಾಗಿ ಈ ನನ್ನ ಮಗುವಿನ ಪರವಾಗಿ ಇದೋ ನಾನು ನಿನಗೆ ಸಲ್ಲಿಸುತ್ತಿರುವೆ ಸಂಭಾವನೆ ! (ಗುಂಡು ಹಾರಿಸುವಳು ಶರತ್ ಬಿದ್ದು ಸಾಯುವನು) ಕಂದಾ ! (ಮಗುವಿನತ್ತ ಹೋಗಿ) ಪಾಪಿ ಶರತ್ ! ಬರಿದು ಮಾಡಿದೆಯಾ ನನ್ನ ಉಡಿಯನು ! ಮಾತಾಡು ಕಂದಾ ! ಹೆತ್ತತಾಯಿಯ ಮೇಲೆ ನನ್ನ ಮತ್ಸರವೇ ಮಗುವೇ? ಪಾಪಿ ಪರಮಾತ್ಮಾ ಕಮರಿಸಿದೆಯಾ ನನ್ನ ಕರುಳಿನ ಬಳ್ಳಿಯನ್ನು ! ಇದುವೇ ನಿನ್ನ ಜಗದ ನ್ಯಾಯವೇ? ನಿನಗೇಕೆ ದಯಾಸಾಗರನೆಂಬ ಬಿರುದು, ಮತ್ತೇಕೆ ದೀನ ರಕ್ಷಕನೆಂಬ ಹೆಸರು

ಇವೆಲ್ಲವು ಸಾವಿರ ಪಾಲು ಸುಳ್ಳೆಂದು ಸಾರಿ (ಬಿದ್ದ ಪಿಸ್ತೂಲ ತೆಗೆದುಕೊಂಡು) ಮೃತ್ಯುವನ್ನಪ್ಪುವೆ ಆತ್ಮಹತ್ಯ ಮಾಡಿಕೊಂಡು..........

**ವಸಂತ :** (ಓಡಿ ಬಂದು ಪಿಸ್ತೂಲ ಕಸಿದು) ತಂಗಿ ! ಇದಾವ ದೃಶ್ಯವನು ನೋಡುತ್ತಿರುವೆ ನಾನು?

**ಗಂಗಾ :** ವಿಧಿ ರಚಿಸಿದ ದುರಂತ ನಾಟಕದ ದೃಶ್ಯ.

**ವಸಂತ :** ಹಾಯ ವಿಧಿಯೇ ಇನ್ನೂ ತೀರಲಿಲ್ಲವೇ ನಿನ್ನ ವ್ರತ ತಂಗಿ ಸಂಕಟ ಕಾಲದಲ್ಲಿ ಮುಖ ತಪ್ಪಿಸಿ ತಿರುಗಿದ ಇವನೆಂಥ ಅಣ್ಣನೆಂದು ಮನದಲ್ಲಿ ಶಪಿಸದಿರಮ್ಮಾ । ದೂರಿನ ಹಳ್ಳದಿಂದ ನೀರನ್ನು ತುಂಬಿ ತರುವಾಗ ಮಾರ್ಗ ತಪ್ಪಿ ವಿಲಂಬವಾಯಿತೇ ವಿನಃ........

**ಗಂಗಾ :** ಆಡದಿರು ಅಣ್ಣ ಅನುಚಿತವ, ಒಡಹುಟ್ಟಿದ ತಂಗಿಗೆ ಅಣ್ಣನ ಗುಣಾವಗುಣಗಳು ಅರಿಯಲಾರವೇ? (ಪೋಲಿಸ ಇನಸ್ಪೆಕ್ಟರ ಮತ್ತು ಪೋಲೀಸರು ಬರುವರು)

**ಪೋ.ಇ :** ಹಾಂ ! ಇದೀಗ ಒಂದು ಕೇಸಿನ ಪಂಚನಾಮ ಮುಗಿಸಿಕೊಂಡು ಬರುವಷ್ಟರಲ್ಲಿ ಮತ್ತೆ ಕೊಲೆಗಡುಕರ ಭೇಟಿ ನಂ. ೪೨೦ ಅಪರಾಧಿಯನ್ನು ಬಂಧಿಸಿ ಶವದ ಪಂಚನಾಮೆ ಮಾಡಿರಿ.

**ಗಂಗಾ :** ಸ್ವಾಮಿ ! ಕೊಲೆಗಡಕಳು ನಾನು ನನ್ನನ್ನು ಬಂಧಿಸಿರಿ.

**ವಸಂತ :** ಅಲ್ಲ ಸರ್, ಇವಳು ಅಪರಾಧಿ, ನಿಜವಾದ ಅಪರಾಧಿ ನಾನು ಕೊಲೆಗೈದ ಪಿಸ್ತೂಲ್ ಇನ್ನೂ ನನ್ನ ಕೈಯಲ್ಲಿಯೇ ಇದೆ.

**ಗಂಗಾ :** ಇದು ಸರ್ವಥಾ ಸುಳ್ಳು, ಇವನು ಯಾರೋ ನಾನರಿಯೇ ಪಾಪ ಅನಾಥನ ಮೇಲೆ ಅಪರಾಧವೇಕೆ ಹೊರಸಲಿ ! ನಾನೇ ಅಪರಾದಿ.

**ಪೋ.ಇ :** ಏನೇ ಇರಲಿ । ಕಾಯ್ದೆ ಪ್ರಕಾರ ಖೂನಿಯಾದ ಸ್ಥಳದಲ್ಲಿ ಶಸ್ತ್ರ ಹಿಡಿದು ನಿಂತಿರುವ ಇವನೇ ಅಪರಾಧಿಯೆನಿಸುವನು ಹೂ, ಅರೆಷ್ಟ್ ಮಾಡಿರಿ (ಪೋಲಿಸರು ವಸಂತನನ್ನು ಬಂಧಿಸುವರು).

**ಗಂಗಾ :** ಹಾಯ್ ವಿಧಿಯೇ.....!

**ವಸಂತ :** ಚಿಂತಿಸದಿರು ತಂಗೀ ! ವಿಧಿಲಿಪಿಯನ್ನು ಅಳುಕಿಸುವವರಾರು? ಆಗಲಿ ಜಾತಿ ವಿಜಾತಿಯೆಂಬ ಜ್ವಾಲಾಮುಖಿಯಲ್ಲಿ ಸುಟ್ಟು

ಸೀಕರಿಯಾಗುವದಕ್ಕಿಂತ ಜಾತ್ಯಾತೀತ ಭವನವಾದ ಕಾರಾಗ್ರಹ ವಾಸವೇ ಮೇಲು ಬರುವೆ ತಂಗೀ.

**ಗಂಗಾ :** ಅಣ್ಣಾ !

**ವಸಂತ :** ತಂಗೀ ! (ಕರೆದೊಯ್ಯುಮ)

**ಗಂಗಾ :** ಅಣ್ಣಾ ! (ಬೀಳುವಳು)

===***====***===

# ಚತುರ್ಥಾಂಕ

## ಪ್ರವೇಶ – ೧

### ರಸ್ತಾ

**ಗೌರೀಶ :** ಉಳುವಿಗೆ ಹೋಗಿ ಉಡಿಕಿ ಮಾಡಿಕೊಂಡ ಕಡಕೀಲೆ ಬರೂದರಾಗ ಸಾವಕಾರ ಮನಿ ಅನ್ನೂದು ಸತ್ತಕಣಾ ಸುಡು ಸ್ಮಶಾನ ಆಗೇತಿ.

**ಗೌರಿ :** ಕಳ್ಳ ಹೊಕ್ಕ ಮನಿ ಉಳದೀತು, ಕೊಳ್ಳಿ ಹೊಕ್ಕಮನಿ ಉಳಿಯೋದಿಲ್ಲ ಅಂದಾಗ ಮಾಡಿಬಿಟ್ಟ ಸುದ್ದನ ಸಂಸಾರನ.

**ಗೌರೀಶ :** ಈಗ ಎರಡು ಊರು ಹುಡುಕಿದರೂ ಸ್ವಲ್ಪ ಸುಳು ಹತ್ತದಂಗಾತು ಆಗಲಿ ಮುಂದಿನೂರಿಗೆ ಹೋಗಿ ವಿಚಾರ ಮಾಡಿ ಇವತ್ತ ಅಲ್ಲೇವಸ್ತೀ ಮಾಡೂನ ನಡಿ.

**ಗೌರಿ :** ಮುಂದಿನೂರು ನನ್ನ ತವರೂರು. ಅಲ್ಲಿ ನನ್ನ ಬಳಗದ ಜನಾ ಸಾಕಷ್ಟದಾರು ನಡಿ.

**ಗೌರೀಶ :** ಹೋಗುನು ಹಂಗಾರ

**ಗೌರಿ :** ಅಲ್ಲs ದಣೇರು ಎಲ್ಲಿ ಅದಾರಂತ ಹುಡುಕೂದು, ಇಂಥಾ ಜಗಾ ಅಂತ ಸುಳು ಹತ್ತಿರದ ಪಾಡ್ನೋಡು.

**ಗೌರೀಶ :** ಉಪ್ಪು ಹಾಕಿದ ಮನಿ ತಿಪ್ಪಿ ಆಗಿರೋದು ಕಂಡು ತೆಪ್ಪಗ ಕುಂದರೋದು ನನಗೊಪ್ಪುದಿಲ್ಲ ಎಷ್ಟs ತರಾಸ ಬರಲಿ, ಅಪ್ಪಾವರನ ಅವ್ವಾವರನ ಹುಡುಕಿ ಕೂಡಿಸೋದು ನಮ್ಮ ಕೆಲಸ

**ಗೌರಿ :** ರೊಕ್ಕ ಐತಿಲ್ಲ ಹಂಗ ಹೋಗಿ ಬಿಕ್ಕೂ ಹೊತ್ತು ಬಂದೀತು.

**ಗೌರೀಶ :** ಅದಕೇನು ಕಡಿಮಿ, ಬುತ್ತಿ ನೋಡು.

**ಗೌರಿ :** ಬುತ್ತಿಗೇನು ಧಾಡಿ. ಕತ್ತಿ ಹೊರೋಟು ಅದೆ.

**ಗೌರೀಶ :** ಬಾ ಹಂಗಾರ, ಇಲ್ಲಿ ಕಾಣೋ ತ್ವಾಟದಾಗ...... (ದಿಟ್ಟಿಸಿ ನೋಡಿ)

ಗೌರಿ : ಅಲ್ಲಿ ಬರೋರು.... ಗಂಗವ್ವೋರ ಅಂದೇನು ! ತಗಿಯ ನಿನ ಅವರ್‍ಯಾಕಾದಾರು.

ಗೌರೀಶ : ಏ ಪ್ಯಾಲಿ ಕಣ್ಣ ಅದಾವ ಏನ ಟೆಂಗಿನ ಪರಟಿ ತೂತು ಅದಾವ ಕಾಣದಿಲ್ಲೇನ ಅವರು ಗಂಗಮ್ಮೋರS

ಗೌರಿ : ಒಬ್ಬರಂತೂ ಸಿಕ್ಕರು. (ಗಂಗಾ ಬರುವಳು) ಎವ್ವಾ ಕಾಲಿಗಿ ಬೀಳತೇನ್ರಿ

ಗಂಗಾ : ಯಾರು ಗೌರೀಶಪ್ಪ ! ನಿವೆಲ್ಲಿಗೆ ಹೊರಟಿರುವಿರಿ?

ಗೌರಿ : ಎಲ್ಲಿಗೆ ಹೋಗೂದರ ಉಡಿಕಿ ಮಾಡಿಕೊಂಡು ಉಳವಿಯಿಂದ ಬರೂದರಾಗ ಮನಿ ಅನ್ನೂದು ಮಠಾ ಆಗಿಬಿಟ್ಟೈತ್ರಿ

ಗೌರಿ : ಮನಿ ನೋಡಿದ ಕೂಡ್ಲೆ ಹೊಟ್ಟ್ಯಾಗ ನೆಲ್ಲು ಮಸರು ಕಲಿಸಿದಂಗ ಆಗಿ ಮನಸಿಗಿ ಎತ್ತೆತ್ತರ ಆಗಿ ಧಣೇರನ ಮತ್ತ ನಿಮ್ಮನ್ನ ಹುಡಿಕ್ಕೊಂತ ಹೊಂಟೇವಿ.

ಗೌರೀಶ : ಏನು ಪತಿದೇವರು ಮನೆಯಲ್ಲಿಲ್ಲವೇ?

ಗೌರೀಶ : ನಿಮಗೂ ಗೊತ್ತಿಲ್ರ್ಯಾ?

ಗಂಗಾ : (ದುಃಖ) ಇಲ್ಲ ಗೌರೀಶಪ್ಪ ! ನೀವು ಉಳವಿಗೆ ಹೋದ ದಿನವೇ ನಾನು ಮನೆಯಿಂದ ಹೊರಗಾಗಿರುವೆ.

ಗೌರೀಶ : ಏನ ಹೇಳೋದರಿಯವ್ವಾ ಆ ಡಾಗದಾರ ಲಲಿತವ್ವ ಕೂಡಿ ಅಪ್ಪಾವರಿಗೂ ಮನೆಯಿಂದ ಹೊರಗೆ ಹಾಕಿದರಂತರಿ.

ಗೌರೀಶ : ಈ ಸುದ್ದಿ ನಿನಗಾರು ಹೇಳಿದರು?

ಗೌರಿ : ನೆರಮನಿ ಹಾಲಪ್ಪನ ಹೆಂಡತಿ ಸ್ವಾರೆವ್ವ ಹೇಳಿದಳ್ರಿ

ಗಂಗಾ : ಗೌರೀಶಾ ! ಮರುಭೂಮಿಯಲ್ಲಿ ಒಂಟೆ ನೀರು ಕಂಡಂತಾಯಿತು ನಿಮ್ಮೀರ್ವರ ದರ್ಶನದಿಂದ ನಡೆಯಿರಿ, ಯಾವ ಊರಿನಲ್ಲಿಯಾದರೂ ಒಬ್ಬರ ಮನೆಯಲ್ಲಿ ಸೇವೆಗೆ ನಿಂತು ಪತಿದೇವನಿರುವ ಸ್ಥಳ ತಿಳಿದುಕೊಳ್ಳೋಣ.

ಗೌರೀಶ : ಏನಮಾತಾಡತೀರಿ ಯವ್ವಾ ! ಭೀಮ ಹಿಡಂಬಿಯಂತಾ ಸೇವ ಸೇವಕರಿದ್ದು ನಿಮ್ಮನ್ನು ದುಡಮಿಗಿ ನಿಲ್ಲಿಸಿದರು ಯಾರರ ಏನರ ತಿಂದು ಉಗಳಾಕಿಲ್ರ್ಯಾ ನಮ್ಮಿಬ್ಬರಿಗೂ ಮಾರಿ ತೊಯ್ಯು ಹಾಂಗ

**ಗೌರಿ :** ಅಲ್ಲಿ ಕಾಣು ಊರು ನನ್ನ ತೌರೂರ್‍ರಿ ! ಇರಾಕ ಮನೀನೂ ಐತರಿ ಮೊದಲ ಅಲ್ಲಿಗೆ ಹೋಗಿ ಧ್ವಜಾ ಹಾಕಿ ಮುಂದಿನ ಕೆಲಸ ಪ್ರಾರಂಭ ಮಾಡೂನ್ರಿ

**ಗೌರೀಶ :** ಏ ಎಂಥಾ ತೊಡಕಿನ ಮಾತು ಯಾಕ ಆಡಾಕ ಹೋಗತಿ ! ಪ್ರಾರಂಭ ಅಂತ ಹಂಗಂದರೇನ್ ಕಡ್ಲೀ ತಿಂದು ಕುದರಿ ಹೊಂಸ ಬಿಟ್ಟಂಗ.

**ಗಂಗಾ :** ಆಗಲಿ ನಡೆಯಿರಿ ನಾಳೆ ನಾನು ಕೋರ್ಟಿಗೆ ಹಾಜರಾಗಬೇಕಾಗಿದೆ.

**ಗೌರಿ :** ಕೊಟ್ರಿಗಿರ್ರ್ಯಾ.

**ಗೌರೀಶ :** ಕೊಟ್ರಿಗಿ ಅಲ್ಲ ಅಡಿಗಿ ಮನೀಗೆ ! ಮಾತು ಗೊತ್ತಿಲ್ಲ ಕತಿ ಗೊತ್ತಿಲ್ಲ. ಸುಮ್ನ ಹಿಲಾಲದಂಗ ದರವಂದರಾಗೂ ಮುಂದ್ ಬರತೀದಿ ! ಕೋರ್ಟಿಗಿ ಯಾಕ ಹೋಗಬೇಕರಿಯವ್ವಾ?

**ಗಂಗಾ :** ಆ ಕರ್ಮ ಕಥೆ ದೊಡ್ಡದಿದೆ ಗೌರೀಶಪ್ಪ ! ಮೊದಲು ಮನೆಗೆ ಹೋಗುವಾ ನಡೆಯಿರಿ ಹೋಗುವರು.

## ಪ್ರವೇಶ ೨

### ಕಟ್ಟ ಜಂಗಲ್ ಸೇತುವೆ ದೃಶ್ಯ

**ಅಶೋಕ :** (ಕ್ಷೌರ ಬೆಳೆದ ಮುಖ ಹಾಗೂ ಹರಕು ಉಡಿಗೆಯೊಂದಿಗೆ) ಇಳಿದು
ಬಾ ಗಂಗಾ........! ಹ ಹ ಹಾ ಹಾ. ಇಳಿದು ಬಾ ಗಂಗಾ !
ಹರನ ಜಡೆಯಿಂದ ! ಹರಿಯ ತೊಡೆಯಿಂದ
ಇಳಿದು ಬಾ ಗಂಗಾ..... ಇಳಿದು ಬಾ !

ಬಾ ಗಂಗಾ ಮೋಡದಂತೆ ತೇಲಿಬಾ ಗಾಳಿಯಂತೆ ಓಡಿ ಬಾ, ತೆರಳಿ ಬಾ ಹ್ಹ ಹಹ್ಹಾ! ಮರಳಿ ಬಾ ಮುದ್ದು ಮಣಿ ಒಲಿದು ಬಾ ನಲಿದು ಉಳಿದು ಬಾ ಪ್ರೇಮಖಣಿ ! ಎಷ್ಟು ಕರೆದರೂ ಬರಲಾರೆಯಾ? ಓಹೋ ನಿನಗೆ ಇರಲಿಕ್ಕೆ ಮನೆಯಿಲ್ಲವೆಂದು ನನ್ನ ಮೇಲೆ ಸಿಟ್ಟಾಗಿರುವಿಯಲ್ಲವೇ? ಹೌದು ಆ ನೀಚ ತಂಗಿ ಇರುವ ಮನೆ ನಮಗೆ ಬೇಡ. ನಿನಗಾಗಿ ಒಂದು ಉತ್ತಮವಾದ ಮನೆಯನ್ನು ಕಟ್ಟಿಸಿ ಕೊಡುವೆ ಹೊಸ ಮನೆಯಲ್ಲಿ ನಾರ್ವಿರ್ವರೂ ಹುಟ್ಟಿ ಬರುವ ಮಗುವಿನೊಂದಿಗೆ ನಲಿದಾಡೋಣ? ಏನು? ನಾನೇ ಬಂದು ಕೈ

ಹಿಡಿದು ಕರೆಯಬೇಕೆ? ನಿಲ್ಲು ಬಂದ ಹೋಗದಿರು ಗಂಗಾ ! ಬಂದೆ (ತೆರೆಯಲ್ಲಿ ಹೋಗಿ ರಕ್ತದಿಂದ ಕೂಡಿದ ಹಣೆಯೊಂದಿಗೆ ಬಂದು) ಬಲ್ಲ ಅಲ್ಲ ! ಗಂಗಾ ಅಲ್ಲ ! ಅವಳೆತ್ತರದ ಕಾಡು ಕಲ್ಲನ್ನು ಗಂಗೆಯೆಂದೆ ಭಾವಿಸಿ, ಅಪ್ಪಿ ಬೆಪ್ಪನಾ (ಹಣೆ ಮುಟ್ಟಿ) ಇದೇನು ಇಳಿದು ಬರುತ್ತಿರುವದು ಹಾ...... ರಕ್ತ ಅಲ್ಲ ! ರಕ್ತ...... ರಕ್ತ.....!!! ಮದಮತ್ಸರಾದಿಗಳನ್ನು ಗೆದ್ದು ನಾನಾಗುವೆನಿಂದು ವಿರಕ್ತ.

(ಸೇತುವೆಯ ಮೇಲೆ ಕಣ್ಮುಚ್ಚಿ ತಪ್ಪಸ್ಸ ಮಾಡುವವನಂತೆ ಕೂಡ್ರುವನು)

**ಕೋಕಿಲಾ :** (ಪ್ರವೇಶ) ಅಕಟಕಟಾ ! ವಸಂತನ ಅಗಲುವಿಕೆಯ ಚಿಂತೆಯೇ ಹಿರಿದಾಗಿರುವಾಗ ತಂದೆಯು ಹೃದಯ ವಿಕಾರದಿಂದ ಮರಣಹೊಂದಿದ ಸುದ್ದಿಯನ್ನು ಹೊತ್ತು ತಂದಿದೆ ವರ್ತಮಾನಪತ್ರ ಒಟ್ಟಿನಲ್ಲಿ ಬಿರುಗಾಳಿಗೆ ಶರಧಿಯಲ್ಲಿ ಸಿಕ್ಕು ತರಗೆಲೆಯಂತೆ ಗುರಿಯಿಲ್ಲದೆ ಸಾಗಿದೆ ನನ್ನ ಜೀವನನೌಕೆ ! ವಸಂತ ಎಂದಿಗೆ ನಿನ್ನಾಗಮನ, ಕೋಕಿಲೆಗೆ ಕಷ್ಟತರವಾದ ಶರತ್ಕಾಲವನು ಕಳೆದು ಮಧುಮಾಸದ ಸುದಿನ ತಂದು ಕೊಡಲಾರೆಯಾ! (ಅಶೋಕನ ಕಡೆ ನೋಡಿ) ಇಲ್ಲಿ ಯಾರೋ ಕುಳಿತಿರುವರು, ಇವರಿಗಾದರೂ ವಸಂತನ ತಂಗಿಯ ಊರಿನ ಮಾರ್ಗ ಗುರುತಿದೆಯೇನೊ ವಿಚಾರಿಸುವೆ. (ಹತ್ತಿರ ಹೋಗಿ) ಅಪ್ಪಾ !

**ಅಶೋಕ :** (ಒಮ್ಮಿಂದೊಮ್ಮೆಲೆ ಕಣ್ತೆರೆದು) ಹಾಂ ! ಯಾರು? ಲಲಿತ ನೀಚಳೇ ಈಗಿಂದೀಗಲೇ ನಿನಗೆ ಶಾಪಕೊಟ್ಟು ಸುಟ್ಟು ಭಸ್ಮಮಾಡಿ ಊದಿ ಬಿಡುವೆ (ದಿಟ್ಟಿಸಿ ನೋಡಿ) ಲಲಿತೆಯಲ್ಲ ಯಾರು ನೀನು?

**ಕೋಕಿಲಾ :** ನಾನ್ನೋರ್ವ ಅನಾಥೆ

**ಅಶೋಕ :** ಅನಾಥೆಯೋ, ಸನಾಥೆಯೊ ಅಥವಾ ಭಿಕ್ಷಾರ್ಥೆಯೋ ಹೇಳು ನಿನಗೇನು ಬೇಕಿತ್ತು? ಅಹಂ ಬಹ್ಮಾಸಿ ಸೋಹಂ ಅವನೇ ನಾನು

**ಕೋಕಿಲಾ :** ನನಗೇನೂ ಬೇಕಾಗಿಲ್ಲ ವಿದ್ಯಾನಗರದ ದಾರಿಯನ್ನಷ್ಟು ತಿಳಿಸಿದರೆ ಸಾಕು.

**ಅಶೋಕ :** ವಿದ್ಯಾನಗರದ ದಾರಿ ! (ನಕ್ಕು) ನನಗೆ ಗೊತ್ತಿರುವದು ಯಮನಗರದ ದಾರಿ. ಅಲ್ಲಿಗೆ ಹೋಗುವೆಯಾ?

**ಕೋಕಿಲಾ :** ಹುಡಗಾಟಿಕೆ ಮಾಡದಿರಪ್ಪ. ಹಸಿವೆಯಿಂದ ಹೃದಯ ಬಳಲುತ್ತಿದೆ.

**ಅಶೋಕ :** ಹಸಿವೆ ! ತಡೆ, ಹಸಿವೆ ನೀರಡಿಕೆಯಿಲ್ಲದ ಊರೊಂದಿದೆ ಕಳಿಸುತ್ತೇನೆ. ನಿಲ್ಲು.

**ಕೋಕಿಲಾ :** ಅಯ್ಯೋ ಇವನಾವನೋ (ಹುಚ್ಚಪ್ಪಾ) (ಓಡುವಳು)

**ಅಶೋಕ :** ಹಾಂ ! ಓಡಿ ಹೋಗುವೆಯಾ (ಬೆನ್ನಟ್ಟುವನು)

## ಪ್ರವೇಶ ೩

### ರಸ್ತಾ

**(ವಸಂತ ಗೌರೀಶ)**

**ವಸಂತ :** ಆದರೂ ಅಶೋಕ ವ್ಯಭಿಚಾರಿ ಸೋದರಿಯು ಸವಿಮಾತಿಗೆ ಮನಸೋತು ಮಹಾಸಾಧ್ವಿಗೆ ಈ ರೀತಿ ಕಷ್ಟಕೊಡಬಾರದಾಗಿತ್ತು.

**ಗೌರೀಶ :** ಪಾಪ ! ಗಂಗಮ್ಮನ ಹಣಿಯಾಗ ಭರಮದೇವರು ಸುಖಾನ ಬರದಂಗ ಕಾಣೂದಿಲ್ರಿ ತೌರಮನಿಯಿಂದ ಬಂದಾಳು ಕಣ್ಣೀರಾಗ ಕೈ ತೊಳಿಯಾಕ ಹತ್ತ್ಯಾಳು

**ವಸಂತ :** ನಿಮ್ಮ ಒಡೆಯರು ಮಾಡಿದ ದುಷ್ಟ ಸ್ನೇಹಿತರ ಸಹವಾಸ ದುಷ್ಫಲದಿಂದ ಇಷ್ಟೆಲ್ಲ ಅನರ್ಥವಾಯಿತು.

**ಗೌರೀಶ :** ಕರೇವೈತಿ ಬಿಡ್ರಿ ನಿಮ್ಮ ಮಾತು ! ಇವತ್ನಾಳೆ ಬೆಲ್ಲಾ ತೋರಿಸಿ ಶಗಣಿ ಕೈಯಾಗ ಇಡೂ ಮಂದೀನ ಬಾಳೈತ್ರಿ ಭೂಮಿಮ್ಯಾಗ

**ವಸಂತ :** ಆಗಲಿ ಮೊದಲು ತಂಗಿಯನ್ನು ಕಂಡು ನಂತರ ಅಶೋಕನ ಶೋಧನೆಯಲ್ಲಿ ತೊಡಗೋಣ. ಇನ್ನೂ ನಿನ್ನ ಹೆಂಡತಿ ಬರಲಿಲ್ಲವಲ್ಲ?

**ಗೌರೀಶ :** ಆಕೇನ್ರಿ (ಒಳಗೆ ನೋಡಿ) ಅಲ್ಲಿ ಬರತಾಳ ನೋಡ್ರಿ ಮೈಸೂರ ದಸರಾದ ಆನಿ ಬಂದಾಂಗ ! ಏನಽ ಅನ್ರಿಯಪ್ಪಾ ಮೊದಲಿನ ಹೆಣ್ಣ ಮಕ್ಕಳಽ ಗಟ್ಟಿ ಬಿಡ್ರಿ. ಹತ್ತಹನ್ನೆರಡು ಹಡದರೂ ಮೂವತ್ತು, ನಾಲ್ವತ್ತ ಮಂದಿಗೆ ಅಡಿಗಿ ಮಾಡಿ ಹಾಕುವಷ್ಟು ತ್ರಾಣ ಅವರಲ್ಲಿರುತ್ತಿತ್ತು. ಆದರ ಈಗಿನ ಹೆಣ್ಣುಮಕ್ಕಳು ಒಂದು ಹಡದ್ರೂಽ ಅಂದ್ರ ನೂರು ಹಡದ ಗಾಂಧಾರಿಯಾಂಗ ಆಗಿ, ಸ್ಟೋ ಹಚ್ಚಿ ಒಂದು ಕಪ್ಪು ಚ್ಯಾ ಮಾಡೂದರಾಗ ದಮ್ಮನೆ ದಣಿದು "ಟಾನಿಕ್ಕಿಗೆ" ಬಂದು ನಿಂದರ ತಾರು. ಏ ಏ ದೌಡ ದೌಡ ಬಾರ

ಗೌರಿ : ಬಂದೆ ತಡೀಯ ಹೀಂಗ್ಯಾಕ ಚೀರತಿ ಮಿಲ್ಲಿನ ಬುಂಗಾದಂಗ

ಗೌರಿ : ಬಂದಳ ನಡೀರಪ್ಪಾ (ಹೋಗುವರು)

## ಪ್ರವೇಶ–೪

### ಸಾಧಾರಣ ತರಗತಿಯ ಗೌರಿ ಮನೆ

......ಪದ.....

ರಾಗ : ತಾಳ :

ದಯತೋರೆ ಜಗನ್ಮಾತೆ । ಕರಮುಗಿದು ಬೇಡುವೆ ಅನಾಥ ॥ ಪ ॥
ಒಡೆಯ ಹೋದ ಮನೆತನ । ಬಿಡದೆ ನೀ । ಒಂಬಾಗಿಸೆಯೊ ।
ನಡೆ ನಡೆದು ಸಾಕಾಯ್ತಮ್ಮ । ಈ ಕಷ್ಟದ ಹಾದಿಯನು ।
ದೊರಕಿದೆಯಾ ನೀ ತಾಯೇ । ಸುಖದ ಸೀಮೆಯ ನನಗೆ ।

ವಸಂತ : (ಆತುರದಿಂದ ಬರುತ್ತ) ತಂಗೀ

ಗಂಗಾ : ಅಣ್ಣಾ.... (ಅಪ್ಪಿಕೊಳ್ಳುವರು)

ವಸಂತ : ತಂಗೀ, ನಿನ್ನ ಸಾಕ್ಷಿಯಿಂದಲೂ, ಶರತ್ ಜೇಬಿನಲ್ಲಿದ್ದ ಅವರ ದಿನಚರಿಯ ಪುಸ್ತಕದಿಂದಲೂ ನಾನು ನಿರಪರಾಧಿಯೆಂದು ನಿರ್ಣಾಯಗೊಂಡು ಬಂದೆನಮ್ಮ. ಅಸತ್ಯವು ಸತ್ಯವನ್ನೆಂದಿಗೂ ಸೋಲಿಸಲಾರದು. (ತೆರೆಯ ಕಡೆಗೆ) ನೋಡಿ ಹಾಂ ! ಇದಾವ ಚಿತ್ರವನ್ನು ನೋಡುತ್ತಿರುವೆ?

ಗಂಗಾ : ಏನಣ್ಣ?

ವಸಂತ : (ತೆರೆಯುತ್ತ ತೋರಿಸಿ) ತಂಗಿ ನೋಡು ಕರಳು ಕತ್ತರಿಸುವಂಥ ದುರಂತ ದೃಶ್ಯವನು !

ಗಂಗಾ : ಹಾಂ ! ಯಾರವನು? ಓರ್ವ ಸ್ತ್ರೀಯಳನ್ನು ಬೆನ್ನಟ್ಟಿಕೊಂಡು ಇತ್ತಲೆ ಬರುತ್ತಿರುವನು.

ವಸಂತ : ಗುರುತು ಹತ್ತಲೊಲ್ಲದೇನಮ್ಮಾ? ಅವರೇ ನಿನ್ನ ಪತಿದೇವರು.

ಗಂಗಾ : ನನ್ನ ಆರಾಧ್ಯ ಮೂರ್ತಿಗೆ ಹುಚ್ಚ ಹಿಡಿದಿದೆಯೇ?

**ಕೋಕಿಲಾ :** (ಒಳಗಿನಿಂದಲೇ) ಹುಚ್ಚಾ, ಬೆನ್ನಟ್ಟಿಕೊಂಡು ಬರುತಿರುವನು ಉಳಿಸಿರಿ ನನ್ನನ್ನು (ಓಡಿ ಬರುವಳು) ಹಾಂ ! ಯಾರು ವಸಂತ !

**ವಸಂತ :** ಕೋಕಿಲಾ (ಅಪ್ಪಿಕೊಂಡು) ಇದೇನು ನಿನ್ನ ಸ್ಥಿತಿ.

**ಅಶೋಕ :** (ಬಂದು) ಎಲ್ಲಿ ಹೋಯಿತು ಆ ಹುಚ್ಚು ಹುಡುಗಿ ! ಪಾತಾಳದಲ್ಲಿ ಅಡಗಿ ಕುಳಿತರೂ ಯಾತಳದಿಂದ ಮೇಲೆ ತರುವೆ.

**ಗಂಗಾ :** ಸ್ವಾಮಿ !

**ಅಶೋಕ :** ಏ ಯಾರೇ ಸ್ವಾಮಿಯೆಂದು ಸಂಬೋಧಿಸಲು ನಾನೇನು ಸನ್ಯಾಸಿಯೇ?

**ಗಂಗಾ :** ಹಾಯ್ ವಿಧಾತಾ ನನ್ನ ಕಾರ್ಗತ್ತಲೆಯ ಬಾಳಿಗೆ ಬೆಳಕು ನೀಡುವ ಶಾಂತ ಮುದ್ರೆಯ ಶಶಿಗೆ ರಾಹು ತೊಡಕಿಸಿ ಭವಿಷ್ಯದ ಬಾಳನ್ನು ಬರಡಾಗಿರಿಸಿದೆಯಾ?

**ವಸಂತ :** ಪ್ರಲಾಪಿಸುವದರಿಂದ ಪ್ರಯೋಜನವೇನು ಗಂಗಾ !

**ಅಶೋಕ :** ಗಂಗಾ ! ಈ ಹೆಸರನ್ನು ಎಲ್ಲಿಯೋ ಕೇಳಿದ ಹಾಗಿದೆ ವಿಚಾರಿಸು ನನ್ನ ಗಂಗಾ ಸತ್ತು ಹೋಗಿದ್ದಾಳೆ !

**ವಸಂತ :** ಇಲ್ಲ ಅಶೋಕ ! ಪತಿಯಿಂದ ದೂರಾಗಿ ಪತಿತಳೆಂದು ಕಂಡರೂ ಸತತ ಪ್ರಯತ್ನ ಹಾಗೂ ಶುದ್ಧಸಾತ್ವಿಕ ಜೀವನದಿಂದ ನಿನ್ನನ್ನೇ ನಂಬಿ ತನ್ನ ಸತೀತ್ವವನ್ನು ಕಾಯ್ದುಕೊಂಡು ಬಂದ ನಿನ್ನ ಸತಿ ಗಂಗಾದೇವಿಯೇ ಇವಳು.

**ಅಶೋಕ :** ಇಲ್ಲ ಇಲ್ಲ, ನನ್ನ ಗಂಗಾ ಅಸನವ್ಯಸನಗಳಿಲ್ಲದೇ ಅಸುನೀಗಿದ್ದಾಳೆ ಅಡವಿಯಲ್ಲಿ.

**ಗಂಗಾ :** ಇಲ್ಲ ಸ್ವಾಮಿ ! (ಕಾಲ್ಹಿಡಿದು) ತಮ್ಮ ಸತಿಯು ಸತ್ತಿಲ್ಲ ತನ್ನ ಪ್ರಾಣೇಶ್ವರನಿಗಾಗಿ ಗುಣಶೀಲಗಳನ್ನು ಕಾಯ್ದುಕೊಂಡು ಆಶ್ರುಬಿಂದುಗಳ ಅಭಿಷೇಕ ಮಾಡುತಿಹಳು ತಮ್ಮ ಪಾದಾರವಿಂದಗಳಿಗೆ

**ಅಶೋಕ :** ಉಗುಳುವೆಯೇನೇ, ನನ್ನ ಕಾಲ ಹೊಲಸ ಮಾಡಿದರೆ ರಾಕೆಟ್‌ದಲ್ಲಿ ಕುಳ್ಳಿರಿಸಿ ಕಸಹುಡುಗಲು ಕಳಿಸುವೆನು ಮಂಗಳ ಲೋಕದ ಅಂಗಳಕ್ಕೆ (ಒದ್ದು) ಬಿಡು ನನ್ನ ಪಾದಗಳನ್ನು

**ವಸಂತ :** ಇದೇನು ಭ್ರಮೆ ಅಶೋಕ ! ಭ್ರಂಶವಾಯಿತೇ ಬುದ್ಧಿ ! ಕಷ್ಟದ ಕಣ್ಣೀರಿನಲ್ಲಿ ಕೈ ತೊಳೆಯುವ ನನ್ನ ತಂಗಿ ಕಾಣದಾದಳೇ ನಿನ್ನ ನಯನಗಳಿಗೆ?

**ಅಶೋಕ :** ಹಾಗಾದರೆ ಸತ್ತಿಲ್ಲವೇ ನನ್ನ ಸತಿ ! (ತಲೆ ತುರಿಸಿಕೊಂಡು) ಹೌದು ಸತ್ತಿಲ್ಲ ಅಂದು..... ಶರತ್‌ನೊಡಗೂಡಿ ಓಡಿ ಹೋಗಿರುವಳು

**ವಸಂತ :** (ಕಪಾಳಕ್ಕೆ ಹೊಡೆದು) ಮುಚ್ಚಬಾಯಿ ಒಳಗಣ್ಣು ತೆರೆದು ನೋಡು ಆರಾಧ್ಯ ಮೂರ್ತಿಯನು.

**ಅಶೋಕ :** (ಕಪಾಳದ ಮೇಲೆ ಕೈ ಇಟ್ಟುಕೊಂಡು) ಒಳಗಣ್ಣು ಹೊರಗಣ್ಣು ಎರಡೂ ಇಂಗಿದವೇ? ಹಾಂ ! ಏನಿದು (ಕಣ್ಣು ತಿಕ್ಕಿಕೊಂಡು ಯಾವದೂ ಸರಿಯಾಗಿ ಕಾಣುವದಿಲ್ಲ (ಸುತ್ತಲು ನೋಡಿ) ನಾನೆಲ್ಲಿರುವೆ ನೀವೆಲ್ಲರೂ ಯಾರು?

**ಗಂಗಾ :** ಸ್ವಾಮಿ ! ನಿಮ್ಮ ಮನೆಯ ಕೆಲಸದವಳಾಗಿದ್ದ ಗೌರಿಯ ಮನೆ. ಈಗ ನೀವಿರುವದು ಪ್ರಕಾಶ ಪುರದಲ್ಲಿ.

**ಅಶೋಕ :** ಇದು ಸುಷಪ್ತಾವಸ್ಥೆಯ ಕನಸೇ?

**ವಸಂತ :** ಸುಷುಪ್ತಾವಸ್ಥೆಯ ಕನಸಲ್ಲ ಅಶೋಕ, ಜಾಗೃತಾವಸ್ಥೆಯಲ್ಲಿ ಕಾಣುತ್ತಿರುವ ಭಾಗ್ಯೋದಯದ ನನಸು. ಇದೋ ನೋಡು ನಿದ್ರೆ ಆಹಾರದ ಪರಿವೆ ಇಲ್ಲದೆ ಹಗಲಿರುಳು ನಿನ್ನ ಹಿತಚಿಂತನೆಯಲ್ಲಿಯೇ ಕಾಲ ಕಳೆಯುತ್ತಿರುವ ಸತಿಸಾಧ್ವಿ ಗಂಗಾದೇವಿಯನ್ನು.

**ಗಂಗಾ :** ಸ್ವಾಮಿ !

**ಅಶೋಕ :** ಹೌದು ಹೌದು ! ಅದೇ ರೂಪ ! ಧ್ವನಿ ಗಂಗಾ (ಅಪ್ಪಿ) ನನ್ನ ಪಾವನತ್ವದ ಗಂಗಾ.

**ಗಂಗಾ :** ಸ್ವಾಮಿ ! ಕಾರ್ಗತ್ತಲೆ ಮುಸುಕಿದ ನನ್ನ ಬಾಳಬಾನಿಗೆ ಇಂದು ಭಾಗ್ಯೋದಯವಾಯಿತು ನಿಮ್ಮ ಸಂದರ್ಶನದಿಂದ (ಕಾಲ್ಹಿಡಿಯುವಳು)

**ಅಶೋಕ :** (ಎಬ್ಬಿಸುತ್ತ) ಏಳು ಎನ್ನರಸಿ ಅಂದು ದುಷ್ಯಂತರನನ್ನು ಮನ್ನಿಸಿದ ಶಕುಂತಲೆಯಂತೆ ಇಂದು ನೀ ಮನ್ನಿಸೆನನ್ನಪರಾಧವನು. ನನ್ನ ವಿಯೋಗಕ್ಕಾಗಿ ಶರತ್– ಲಲಿತೆಯರು ರಚಿಸಿದ ಕಾರಸ್ಥಾನವನ್ನರಿಯದೆ, ಅವರೀರ್ವರೆ ಸೋಗಿನ ಮಾತಿನ ಬಲೆಗೆ ಸಿಕ್ಕು. ಮರ್ಯಾದೆಯಿಂದ

ಮೆರೆದುಬಂದ ನನ್ನ ಮನೆಯ ಮೇಲೆ ನಾನೇ ಕಲಂಕದ ಕುಂಬಿಯನ್ನು ಕಟ್ಟಿದೆನು.

**ಗಂಗಾ :** ಮುಂದೆ ಹೇಳದಿರಿ ಸ್ವಾಮಿ ! ಆತ್ಮ ವಂಚನೆಯನರಿಯದ ಅಣ್ಣನಿಗೆ ಮೋಸ ಮಾಡಿ ಅನ್ಯರೊಡನೆ ಓಡಿ ಹೋಗುವ ಇಂಥ ತಂಗಿಯರಿದ್ದರೆ ಅದಾವ ಕುಟುಂಬಗಳು ವಿಸ್ತರಿಸಿ ನಿಲ್ಲಬಹುದು?

**ವಸಂತ :** ಎಲ್ಲವೂ ದೈವೇಚ್ಛೆ ಸುಖದುಖಗಳೆಂಬ ಸಕ್ಕರೆಯ ದಡಗಳ ಮಧ್ಯದಲ್ಲಿ ಹರಿಯುತಿದೆ ಜೀವನ. ಗಂಗಾ, ಅದು, ತನ್ನ ಗುರಿ ಮುಟ್ಟಲು ಮುಂದುವರಿಯುವಾಗ ಎರಡೂ ದಡಗಳಿಗೆ ಬಳಸಿಹೋಗುವದು ಸಹಜ ! ರಸ–ಸರಸಗಳ ಸಮ್ಮಿಲನವೇ ಸಮವಿರಸ ಜೀವನ

**ಅಶೋಕ :** ವಸಂತ ನೀನು ಕೇವಲ ಮಾನವನಲ್ಲ ! ನನ್ನ ಮತ್ತು ನಿನ್ನ ಸೋದರಿಯ ರಕ್ಷಣೆಗಾಗಿ ದೇಹವನ್ನೇ ಸವೆಸಿಕೊಂಡ ದೇವಮಾನವ ನೀನು ! ತನ್ನ ದೇಹವನ್ನು ಕರಗಿಸಿಕೊಂಡು ಪರರಿಗೆ ಪ್ರಕಾಶ ನೀಡುವ ಕ್ರಮೇಣ ಬತ್ತಿಯಂತೆ ನಿನ್ನ ಜೀವನ! ನಿಜವಾದ ಅಣ್ಣ ತಂಗಿಯರೆಂದರೆ ನೀವು ನಿಮೀರ್ವರ ಹೃದಯದಿಂದ ಸೋದರತ್ವ ತುಂಬಿ ಹೊರಸೂಸುತಿದೆ (ಕೋಕಿಲೆಯನ್ನು ಕುರಿತು) ಗಂಗಾ! ಇವರಾರು?

**ಗಂಗಾ:** ಇವಳನ್ನೇ ತಾವು ಬೆನ್ನಟ್ಟಿಕೊಂಡು ಬಂದದ್ದು ನಮ್ಮೂರಿನ ಸಿರಿವಂತ ಧನರಾಜರ ಏಕೈಕ ಪುತ್ರಿ ಇವರ ಹೆಸರು ಕೋಕಿಲಾ

**ವಸಂತ:** ಭಾರತ ದೇಶದ ಭೂಮಿಯಲ್ಲಿ ಭರದಿಂದ ಬೆಳೆಯುತ್ತಿರುವ ಭೇದ ಭಾವದ ಬೆಳೆಯನ್ನು ಬೇಳೆಸಬೇಕೆಂಬ ಪ್ರಗತಿಶೀಲ ವಿಚಾರದವಳು. ಆ ವಿಚಾರವನ್ನು ಕೃತಿರೂಪದಲ್ಲಿ ತರಲು ನನ್ನ ಕೈ ಹಿಡಿಯಲು ಮುಂದಾಗಿ ಬಂದಿಹಳು ಅನೇಕ ಕಷ್ಟನಷ್ಟಗಳನ್ನು ಅನುಭವಿಸಿ.

**ಅಶೋಕ:** ಸರಿ ಸರಿ ! ಒಳ್ಳೆ ಫಜೀತಿಯಾದರೂ ನನ್ನ ಕೈಗೆ ಸಿಕ್ಕರು. (ಕೋಕಿಲೆಗೆ) ಕ್ಷಮಿಸಿ ಕೋಕಿಲಾದೇವಿ.

**ಕೋಕಿಲಾ:** ಅರಿಯದೇ ಆದ ಅಪರಾಧಕ್ಕೆ ಕ್ಷಮೆಯ ಮಾತೆ!

**ಗಂಗಾ:** ಸ್ವಾಮಿ ಒಡೆದು ಹೋದ ಸಂಸಾರ ಒಂದು ಗೂಡಿದ ಸಂತೋಷದಲ್ಲಿಯೇ ಅಣ್ಣ ಮತ್ತು ಕೋಕಿಲೆಯರ......

**ಗೌರೀಶ:**
**ಗೌರಿ:** } (ಪ್ರತಿಯೊಬ್ಬರು ಒಂದೊಂದು ಹಾರಹಿಡಿದು) ಮದವಿ ಆಗ ಹೋಗಲಿ!

**ಗೌರೀಶ:** ತಗೋಳ್ರಿಯಪ್ಪ ಹಾರ (ವಸಂತನಿಗೆ ಕೊಡುವನು)

**ಗೌರಿ:** ಎವ್ವ ತಗೋಳ್ರಿ ಮಾಲೀನ (ಕೋಕಿಲೆಗೆ ಕೊಡುವಳು)

**ಅಶೋಕ:** ವಸಂತ, ಕೋಕಿಲಾ ಪರಸ್ಪರರು ಮಾಲೆ ಹಾಕಿ ( ಮಾಲೆ ಹಾಕಿದ ನಂತರ) ಬನ್ನಿರಿ ನಮ್ಮೆಲ್ಲರಿಗೂ ಸುವರ್ಣದಂತಹ ಸಮಯ ತಂದುಕೊಟ್ಟ ಶುಭದಿನ ಕುರಿತು ಪ್ರಾರ್ಥಿಸುವಾ

**ಮಂಗಲಂ**

===****====****===

# ಅನುಬಂಧ –೧

## ನಾಟಕಕಾರರ ಸಂಬಂಧಿಕರ ವಿಳಾಸ

| ಕ್ರ.ಸಂ. ನಾಟಕಕಾರರ ಹೆಸರು | ಸಂಬಂಧಿಕರ ವಿಳಾಸ |
|---|---|
| ೦೧ ಗರುಡ ಸದಾಶಿವರಾಯ | ಶ್ರೀ ಪ್ರಕಾಶ ಗರುಡ<br>ನಂ. ೯. ಸುವಿದಾ ಅಪಾರ್ಟ್‌ಮೆಂಟ್,<br>ಕಬ್ಬೂರ ರೋಡ್ ಮಾಳಮಡ್ಡಿ<br>ಧಾರವಾಡ ೫೮೦೦೦ ೫೮೦೦೦೭ |
| ೦೨ ಶಂಕ್ರಪ್ಪ ಮಾಸ್ತರ ಕಲ್ಮಲಾ | ಶ್ರೀ ಕೆ. ಗಿರಿಜಾಶಂಕರ<br>C/o ಡಾ. ಬಸವಪ್ರಭು ಬೆಟ್ಟದೂರ<br>ಕಲ್ಯಾಣ ವೈದ್ಯಾಲಯ, ಮಾನ್ವಿ, ಜಿಲ್ಲಾ ರಾಯಚೂರ |
| ೦೩. ಶಿವಲಿಂಗಪ್ಪಯ್ಯ ಹಿರೇಮಠ | ಶ್ರೀ ಮಲ್ಲಿಕಾರ್ಜುನ ಹಿರೇಮಠ<br>ಅಂಚೆ ಮುಕ್ಕಾಂ: ಗೊಂಡಬಾಳ<br>ತಾ&ಜಿ: ಕೊಪ್ಪಳ |
| ೦೪ ಮಾರುತೇಶ ಮಾಂಡ್ರೆ | ಶ್ರೀ ತುಳಜಾರಾಮ ಮಾಂಡ್ರೆ<br>ಅಂಚೆ ಮುಕ್ಕಾಂ: ಅಳವಂಡಿ<br>ಹುಡ್ಕೊ ಕಾಲನಿ<br>ತಾ&ಜಿ: ಕೊಪ್ಪಳ |

| | |
|---|---|
| ೦೫ ಶಿವರುದ್ರಪ್ಪ ನಿಟ್ಟಾಲಿ | ಶ್ರೀ ಬಸವರಾಜ ಶಿವರುದ್ರಪ್ಪ ನಿಟ್ಟಾಲಿ<br>ಗವಿಮಠ ರೋಡ, ಶಾಂತವೀರ ನಗರ<br>ಕೊಪ್ಪಳ –೫೮೩೨೩೧ ಜಿ॥ ಕೊಪ್ಪಳ |
| ೦೬ ಪಿ.ಬಿ.ಧುತ್ತರಗಿ | ಶ್ರೀಮತಿ ಸರೋಜಮ್ಮ ಧುತ್ತರಗಿ<br>ಅಂಚೆ ಮುಕ್ಕಾಂ: ಹನುಮಸಾಗರ<br>ತಾ: ಕುಷ್ಟಗಿ ಜಿ: ಕೊಪ್ಪಳ |
| ೦೭ ಮೋಹನಕುಮಾರ ಕಿರಣಗಿ | ಶ್ರೀ ಬಸವರಾಜ ಕಿರಣಗಿ, ಚಂದ್ರಪ್ರಭು ನಿಲಯ, ಶಾಂತೇಶ ನಗರ<br>ಜಗದಂಬಾಶಾಲೆ ಹತ್ತಿರ, ಇಂಡಿ<br>ತಾ: ಇಂಡಿ ಜಿ: ಬಿಜಾಪೂರ |

# ಅನುಬಂಧ ೨

## ಹೈದ್ರಾಬಾದ ಕರ್ನಾಟಕ ರಂಗಭೂಮಿ ಯೋಜನೆ

### ಪ್ರಧಾನ ಸಂಪಾದಕರು : ಡಾ ಬಸವರಾಜ ಸಬರದ

### ಪ್ರಾತಿನಿಧಿಕ ನಾಟಕಗಳ ಸಂಪುಟಗಳ ವಿವರ

| ಕ್ರಸಂ. | ಸಂಪುಟದ ಹೆಸರು | ಸಂಪಾದಕರ ಹೆಸರು | ಪ್ರಕಟನೆ ವರ್ಷ |
|---|---|---|---|
| ೦೧ | ವೃತ್ತಿರಂಗಭೂಮಿ ನಾಟಕಗಳು: | –ಡಾ ವಿಜಯಶ್ರೀ ಸಬರದ | ೨೦೧೨ |
| ೦೨ | ಗ್ರಾಮೀಣ ರಂಗಭೂಮಿ ನಾಟಕಗಳು | –ಡಾ. ವಿಜಯಶ್ರೀ ಸಬರದ | ೨೦೧೨ |
| ೦೩ | ಹವ್ಯಾಸಿ ರಂಗಭೂಮಿ ನಾಟಕಗಳು | –ಡಾ. ವಿಜಯಶ್ರೀ ಸಬರದ | ೨೦೧೨ |
| ೦೪ | ಗೀತ ನಾಟಕ – ಬೀದಿ ನಾಟಕ ಮತ್ತು ಏಕಾಂತ ನಾಟಕಗಳು | –ಡಾ. ವಿಜಯಶ್ರೀ ಸಬರದ | ೨೦೧೨ |
| ೦೫ | ಜನಪದ ರಂಗಭೂಮಿ–ದೊಡ್ಡಾಟಗಳು | –ಡಾ. ವೀರಣ್ಣ ದಂಡೆ | ೨೦೧೨ |
| ೦೬ | ಜನಪದ ರಂಗಭೂಮಿ–ಸಣ್ಣಾಟಗಳು | –ಡಾ.ಬಿ.ಎಸ್.ಪೋಲಿಸ್‌ಪಾಟೀಲ | ೨೦೧೨ |

ಹೈದ್ರಾಬಾದ ಕರ್ನಾಟಕ ರಂಗಭೂಮಿ

ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಕರ್ನಾಟಕ ಸರಕಾರವು ನೀಡಿದ ಕನ್ನಡ ಭಾಷಾಭಿವೃದ್ಧಿ ಯೋಜನೆಗಳಡಿಯಲ್ಲಿ ಈ ಸಂಪುಟಗಳು ಪ್ರಕಟವಾಗುತ್ತಲಿವೆ. ಮೂರು ವರ್ಷಗಳಿಂದ ಪ್ರಾರಂಭವಾದ ಈ ಯೋಜನೆ ಪೂರ್ಣಗೊಂಡಿದೆ. ಆ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾಗಿದ್ದ ಡಾ. ಬಸವರಾಜ ಸಬರದ ಅವರು ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರನ್ನೊಳಗೊಂಡು ಮಹತ್ವದ ಯೋಜನೆಗಳನ್ನು ರೂಪಿಸಿದರು. ಅವುಗಳಲ್ಲಿ "ಹೈದ್ರಾಬಾದ ಕರ್ನಾಟಕ ರಂಗಭೂಮಿ" ಯೋಜನೆಯೂ ಕೂಡ ಮಹತ್ವದ್ದಾಗಿದೆ. ಈ ಯೋಜನೆಯಲ್ಲಿ ಈಗ ಸಧ್ಯಕ್ಕೆ ನಾಲ್ಕು ಸಂಪುಟಗಳು ಪ್ರಕಟವಾಗಲಿವೆ. ಹೈದ್ರಾಬಾದ ಕರ್ನಾಟಕ ಪ್ರದೇಶದ ವೃತ್ತಿ ರಂಗಭೂಮಿ, ಗ್ರಾಮೀಣರಂಗಭೂಮಿ, ಹವ್ಯಾಸಿರಂಗಭೂಮಿಗೆ ಸಂಬಂಧಿಸಿದ ಮೌಲಿಕವಾದ ನಾಟಕಗಳನ್ನಾಯ್ದುಕೊಂಡು ಈ ಸಂಪುಟಗಳನ್ನು ಸಿದ್ಧಪಡಿಸಲಾಗಿದೆ. ಈ ಯೋಜನೆಯ ಪ್ರಧಾನ ಸಂಪಾದಕರಾಗಿರುವ ಡಾ. ಬಸವರಾಜ ಸಬರದ ಹಾಗೂ ಸಂಪಾದಕರಾಗಿರುವ ಡಾ. ವಿಜಯಶ್ರೀ ಸಬರದ ಅವರು ಅಭಿನಂದನಾರ್ಹರಾಗಿದ್ದಾರೆ.

ಈ ಪ್ರದೇಶದ ಅಮೂಲ್ಯ ರಂಗಕೃತಿಗಳನ್ನೊಳಗೊಂಡಿರುವ ಈ ಸಂಪುಟಗಳು ಇಲ್ಲಿಯ ರಂಗ ಶ್ರೀಮಂತಿಕೆಯನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿವೆ. ಮಹತ್ವದ ಒಳನೋಟಗಳು, ಸೂಕ್ತವಾದ ಪ್ರಸ್ತಾವನೆಗಳು, ಅಗತ್ಯವಾದ ಅನುಬಂಧಗಳು ಈ ಸಂಪುಟಗಳ ಮೌಲಿಕತೆಯನ್ನು ಹೆಚ್ಚಿಸಿವೆ. ಇಂತಹ ಕೃತಿಗಳನ್ನು ನೋಡಿ ಈ ಪ್ರದೇಶ ಹೆಮ್ಮೆ ಪಡುವಂತಾಗಿದೆ. ಓದುಗರು, ರಂಗಾಸಕ್ತರು, ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಾರೆಂದು ನಂಬಿದ್ದೇನೆ.

**ಪ್ರೊ. ಈ. ಟಿ. ಪುಟ್ಟಯ್ಯ**

ಕುಲಪತಿಗಳು

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ - ೫೮೫ ೧೦೬